ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು

(ದ್ವಿಮಾನ ಹಾಗೂ ತ್ರಿಮಾನದ ಹಿನ್ನೆಲೆಯಲ್ಲಿ-ವಿಶೇಷವಾಗಿ ಬಾದಾಮಿ ಪರಿಸರವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್.ಡಿ ಮಹಾಪ್ರಬಂಧ



ಸಂಶೋಧಕರು
ಮಹಾಂತೇಶ ಪಲದಿನ್ನಿ

ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೨

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು

(ದ್ವಿಮಾನ ಹಾಗೂ ತ್ರಿಮಾನದ ಹಿನ್ನೆಲೆಯಲ್ಲಿ – ವಿಶೇಷವಾಗಿ ಬಾದಾಮಿ ಪರಿಸರವನ್ನು ಅನುಲಕ್ಷಿಸಿ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಮಹಾಂತೇಶ ಪಲದಿನ್ನಿ

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೧೨

ಪ್ರಮಾಣ ಪತ್ರ

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು ***(ದ್ವಿಮಾನ ಹಾಗೂ ತ್ರಿಮಾನದ ಹಿನ್ನೆಲೆಯಲ್ಲಿ – ವಿಶೇಷವಾಗಿ ಬಾದಾಮಿ ಪರಿಸರವನ್ನು ಅನುಲಕ್ಷಿಸಿ)*** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ದೃಶ್ಯಕಲಾ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ **ಡಾ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಂಪಿ, ವಿದ್ಯಾರಣ್ಯ

ದಿನಾಂಕ : 24/11/2012

M.M. Paladinni

(ಮಹಾಂತೇಶ ಪಲದಿನ್ನಿ)

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ದೃಢೀಕರಣ ಪತ್ರ

ಮಹಾಂತೇಶ ಪಲದಿನ್ನಿ ಇವರು ನನ್ನ ಮಾರ್ಗದರ್ಶನದಲ್ಲಿ **ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು** ***(ದ್ವಿಮಾನ ಹಾಗೂ ತ್ರಿಮಾನದ ಹಿನ್ನೆಲೆಯಲ್ಲಿ – ವಿಶೇಷವಾಗಿ ಬಾದಾಮಿ ಪರಿಸರವನ್ನು ಅನುಲಕ್ಷಿಸಿ)*** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ ಮತ್ತು ದೃಶ್ಯಕಲಾ ವಿಭಾಗದ ಮೂಲಕ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ.

ಸ್ಥಳ : ಹಂಪಿ, ವಿದ್ಯಾರಣ್ಯ
ದಿನಾಂಕ : 26-11-2012

(ಡಾ. ಎಸ್. ಸಿ. ಪಾಟೀಲ)
ಮಾರ್ಗದರ್ಶಕರು
ಡೀನ್, ಲಲಿತಕಲಾ ನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ / ೦೧-೨೪

ಅಧ್ಯಾಯ : ಎರಡು

ಬಾದಾಮಿ ಚಾಲುಕ್ಯರ ಕಾಲದ ಸಾಂಸ್ಕೃತಿಕ ಪರಿಸರ ಮತ್ತು ಶಿಲ್ಪಗಳ ವರ್ಗೀಕರಣ / ೨೫-೬೬

ಅಧ್ಯಾಯ : ಮೂರು

ಬಾದಾಮಿ ಚಾಲುಕ್ಯರ ಕಾಲದ ಶೈವ ಶಿಲ್ಪಗಳು / ೬೭-೧೩೭

ಅಧ್ಯಾಯ : ನಾಲ್ಕು

ಬಾದಾಮಿ ಚಾಲುಕ್ಯರ ಕಾಲದ ವೈಷ್ಣವ ಶಿಲ್ಪಗಳು / ೧೩೮-೨೦೨

ಅಧ್ಯಾಯ : ಐದು

ಬಾದಾಮಿ ಚಾಲುಕ್ಯರ ಕಾಲದ ಜೈನ ಮತ್ತು ಬೌದ್ಧ ಶಿಲ್ಪಗಳು / ೨೦೩-೨೨೯

ಅಧ್ಯಾಯ : ಆರು

ಬಾದಾಮಿ ಚಾಲುಕ್ಯರ ಕಾಲದ ಸಂಕೀರ್ಣ ಶಿಲ್ಪಗಳು / ೨೩೦-೩೫೨

ಅಧ್ಯಾಯ : ಏಳು

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳ ಲಕ್ಷಣಗಳು, ಪ್ರಭಾವ, ಪ್ರೇರಣೆ ಮತ್ತು ಶೈಲಿ / ೩೫೩-೩೮೯

ಅಧ್ಯಾಯ : ಎಂಟು

ಸಮಾರೋಪ / ೩೯೦-೪೦೦

ಅನುಬಂಧಗಳು

ಸಂಕ್ಷೇಪಗಳು

ಗ್ರಂಥಋಣ

ನಕ್ಷೆಗಳು



ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಶಿಲ್ಪ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಮೊದಲಾದ ಕಲೆಗಳನ್ನು ನಾವು ಲಲಿತಕಲೆಗಳೆಂದು ಕರೆಯುತ್ತೇವೆ. ಅವು ಯಾವುದೇ ಜನರ, ಆಯಾ ಕಾಲದ, ಆಯಾ ದೇಶದ ಕಲಾವಿದರ ಮೂಲಕ ಅಭಿವ್ಯಕ್ತಗೊಳ್ಳುತ್ತವೆ. ಹೀಗೆ ಹೊರಹೊಮ್ಮುವ ಲಲಿತಕಲೆಗಳಲ್ಲಿ ಶಿಲ್ಪಕಲೆ ತನ್ನದೆಯಾದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಮನುಷ್ಯನ ಬದುಕಿನ ಜೊತೆಗೆ ಹಂತ ಹಂತವಾಗಿ ಬೆಳೆದುಬಂದ ಈ ಶಿಲ್ಪಕಲಾಪ್ರಕಾರವು ಅವನ ಬದುಕಿನ ಕಾಲಘಟ್ಟಗಳನ್ನೂ ಅದು ಒಂದು ರೀತಿಯಲ್ಲಿ ಸಾಂಕೇತಿಸುತ್ತದೆ. 'ಶಿಲ್ಪಂ ಕರ್ಮ ಕಲಾದಿಕಂ' ಎನ್ನುವುದು 'ಅಮರಕೋಶ'ದೊಳಗಿನ ಅಮರಸಿಂಹನ ಉಕ್ತಿ. ಇಲ್ಲಿ ಕರ್ಮ ಎನ್ನುವುದು ಕಲಾವಿದನ ಕ್ರಿಯೆಗೆ ಸಂಬಂಧಿಸಿದೆ. ಮೋನಿಯರ್ ವಿಲಿಯಮ್ಸ್ ತನ್ನ ಸಂಸ್ಕೃತ ಶಬ್ದಕೋಶದಲ್ಲಿ 'ಶಿಲ್ಪ' ಪದದ ವ್ಯುತ್ಪತ್ತಿಯನ್ನು ಪ್ರಶ್ನಾರ್ಥಕವಾಗಿ ಬಳಸಿದ್ದಾನೆ. ಕಲೆಯ ವಿಷಯದಲ್ಲೂ ಅಷ್ಟೇ. ಕಾರಂತರೂ ಶಿಲ್ಪವೆನ್ನುವ ಪದವನ್ನು ತ್ರಿಮಾನಗಳುಳ್ಳ ಘನರೂಪದ ನಿರ್ಮಾಣಕ್ಕೆ ಸಮಾನವಾಗಿ ಗುರುತಿಸಿದ್ದಾರೆ.[೧]

ಶಿಲ್ಪವೆಂಬ ಮಾತಿಗೆ ಬೆರಗನ್ನುಂಟು ಮಾಡುವ ಕೈಕೆಲಸ (ಆಶ್ಚರ್ಯಕರಂ ಕರ್ಮ 'ಕರ್ಮೇತಿ ಹಸ್ತಯೋ') ಎಂದರ್ಥ. ಸಂಸ್ಕೃತದ ಶಿಲ್ಪವೆಂಬ ಶಬ್ದ 'ಶೀಲ ಸಮಾಧೌ' ಎನ್ನುವ ಧಾತುವಿನಿಂದ ಒದಗಿಬಂದುದೆಂದೂ, ಮನಸ್ಸಿನ ಏಕಾಗ್ರತೆ ಏಕತಾನಗಳಿಂದ ಹೊರಬಂದುದೇ ಶಿಲ್ಪವೆಂದೂ ಒಂದು ನಿರ್ವಚನವಿದೆ. 'ಶಿಲ್ಪೋಪನಿಷತ್ತೆಂಬ' ಗ್ರಂಥವು ಜಗತ್ತನ್ನೆಲ್ಲ ಸೃಷ್ಟಿಮಾಡಿ ಬ್ರಹ್ಮನು ತನ್ನ ಮನಸ್ಸಿನಿಂದ ಮಾಡಿದುದೆಲ್ಲ ಶಿಲ್ಪವೇ ಎಂದು ಹೇಳುತ್ತದೆ.[೨]

೦೧. ಲಕ್ಷ್ಮಣ್ ತೆಲಗಾವಿ (ಸಂ.) : ಹರತಿಸಿರಿ, ಪುಟ – ೬೧

೦೨. ಡಾ. ಎಸ್. ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ, ಪುಟ – ೩೦೪



ಶಿಲ್ಪ ಎಂದರೆ ಮೂರು ಆಯಾಮಗಳ ಆಕೃತಿ. ಕಲ್ಲು, ಮರ, ಕಂಚು ಮುಂತಾದ ಮಾಧ್ಯಮಗಳಿಂದ ಮಾಡಿದ ಆಕೃತಿ. ಈ ವ್ಯಾಖ್ಯಾನ ವಿಸ್ತಾರಗೊಳ್ಳುತ್ತ, ಶಾಸ್ತ್ರಗಳಿಂದಾಚೆಗೂ ಬೆಳೆದ ಶೈಲಿಗಳು, ಜನರ ಕ್ರಿಯಾಶೀಲತೆಯ ವ್ಯಾಖ್ಯಾನವಾಗುತ್ತ ಇಂದಿಗೂ ಬದಲಾಗುತ್ತಿವೆ. ಒಂದು ಕಲೆ ಜೀವಂತವಾಗಿರುವುದಕ್ಕೆ ಇದೇ ಸಂಕೇತ. ಕಲ್ಪನೆಗಳಿಗೆ ಆಕಾರಕೊಟ್ಟು, ಭಾವನೆಗಳು ಮೂಡುವಂತೆ ಮೂರು ಆಯಾಮಗಳಲ್ಲಿ ಅರ್ಧಶಿಲ್ಪ, ಉಬ್ಬುಶಿಲ್ಪ, ಅದರಲ್ಲೂ ಸ್ವಲ್ಪವೇ ಉಬ್ಬುಶಿಲ್ಪ, ಪೂರ್ಣಶಿಲ್ಪ ಬಂದಿದೆ. ಇದು ರೂಢಿಗೆ ಬಂದಿರುವ ವ್ಯಾಖ್ಯಾನ. ಬಳಸುವ ಮಾಧ್ಯಮಗಳು ಬದಲಾದಂತೆ ವಿಸ್ತಾರವೂ ಬದಲಾಗುತ್ತಾ ಬಂದಿದೆ. ಸಿಮೆಂಟ್, ಪ್ಲಾಸ್ಟರ್ ಆಫ್ ಪ್ಯಾರಿಸ್, ಫೈಬರ್ ಗ್ಲಾಸ್ ಇತ್ಯಾದಿ ಪರಿಕರಗಳ ಮಾಧ್ಯಮಗಳಿಂದಲೂ ಅಥವಾ ಶಿಲ್ಪದ ವ್ಯಾಖ್ಯಾನ ಹಾಗೂ ಅದರ ವಿಡಿಯೋ ಆರ್ಟ್, ಸ್ಥಾಪನಾಕಲೆ ಇತ್ಯಾದಿ ಕಲಾಮಾಧ್ಯಮಗಳಿಂದಲೂ ಶಿಲ್ಪ ಮರುವ್ಯಾಖ್ಯಾನ ಪಡೆಯುತ್ತಿದೆ.[೩]

ಪ್ರಪಂಚದಲ್ಲಿ ಶಿಲ್ಪಕಲೆಯ ಉಗಮ ಬಹಳ ಪ್ರಾಚೀನವೆಂದು ತಿಳಿಯಲಾಗಿದೆ. ಮಾತೃದೇವತೆಯ ಶಿಲ್ಪವೊಂದು ವಿಯೆನ್ನಾದ ಸಂಗ್ರಹಾಲಯದಲ್ಲಿದ್ದು, ಅದರ ಕಾಲವನ್ನು ಕ್ರಿ.ಪೂ. ಸುಮಾರು ೧೫,೦೦೦ ರಿಂದ ೧೦,೦೦೦ ಎಂದು ಭಾವಿಸಲಾಗಿದೆ. ಅದನ್ನು ಹೊರತುಪಡಿಸಿಯೇ ಕ್ರಿ.ಪೂ. ೩೦೦೦ದ ವೇಳೆಗಾಗಲೇ ಶಿಲ್ಪಕಲೆಯು ಮಹತ್ವ ಪಡೆದಿದ್ದುದನ್ನು ಈಜಿಪ್ಟ್, ಮೆಸಪಟೋಮಿಯಾ[೪] ಮುಂತಾದ ಹಲವಾರು ದೇಶಗಳಲ್ಲಿ ದೊರೆತಿರುವ ಶಿಲ್ಪಗಳನ್ನು ಗುರುತಿಸಬಹುದು.

ಶಿಲ್ಪಕಲೆಯನ್ನು ಪ್ರಾಚೀನ ಕಾಲದಿಂದ ಅನೇಕ ರಾಜ ಮಹಾರಾಜರು ಪೋಷಿಸಿ ಬೆಳೆಸಿಕೊಂಡು ಬಂದಿದ್ದಾರೆ. ಸಿಂಧೂ ನಾಗರಿಕತೆಯಿಂದ ಇಂದಿನವರೆಗೆ ಭಾರತೀಯ ಶಿಲ್ಪಕಲೆ ಕಾಲಕಾಲಕ್ಕೆ ವಿವಿಧ ಆಯಾಮಗಳಲ್ಲಿ ಅನಾವರಣಗೊಳ್ಳುತ್ತಾ ಬಂದಿದೆ. ಭಾರತೀಯ ವಾಸ್ತುಶಿಲ್ಪದ ಎಲ್ಲ ಮಾದರಿಯ ದೇವಾಲಯಗಳ ಸಂಕೀರ್ಣವೆಂದರೆ ಐಹೊಳೆ. ಬೌದ್ಧ, ನಾಗರ, ವೇಸರ, ದ್ರಾವಿಡ ಶೈಲಿಯ ಅನೇಕ ದೇವಾಲಯಗಳು ಒಂದೇ ಆವರಣದಲ್ಲಿರುವುದನ್ನು ನೋಡಿದರೆ ಐಹೊಳೆ ಪ್ರಾಚೀನವಾಗಿ ಶಿಲ್ಪಕಲಾ ಶಿಕ್ಷಣದ ವಿಶ್ವವಿದ್ಯಾಲಯವಾಗಿದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಚೀನವಾಗಿ ಅಯ್ಯಾಹೊಳೆ, ಆರ್ಯಪುರ, ಐಹೊಳ್ಳಿ, ಐಯ್ಯಾಹೊಳೆ ಎಂಬ ಹೆಸರುಗಳು ಶಾಸನೋಕ್ತವಾಗಿವೆ.[೫] ವರ್ತಕರ ಸಂಘದ ಮೂಲ ಸ್ಥಳವಾಗಿದ್ದ ಈ ಸ್ಥಳಕ್ಕೆ ಐನೂರು ಎಂದೂ ಕರೆಯುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.

ಕರ್ನಾಟಕದ ವಾಸ್ತುಶಿಲ್ಪಕ್ಕೆ ಮೂಲಭೂತ ಕೊಡುಗೆ ನೀಡಿದವರು ಬಾದಾಮಿ ಚಾಲುಕ್ಯರು.[೬]

---

೦೩. ಪ್ರೊ. ಎಂ. ಎಚ್. ಕೃಷ್ಣಯ್ಯ, ಡಾ. ವಿಜಯ, ಶ್ರೀ. ಸಿ. ಆರ್. ಕೃಷ್ಣರಾವ್ (ಸಂ.) : ಕರ್ನಾಟಕ ಕಲಾದರ್ಶನ, ಸಂ.೧, ಪುಟ– ೨೭೯

೦೪. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೧೨೯

೦೫. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ – ಸಂಸ್ಕೃತಿ, ಪುಟ – ೨೧೫

೦೬. ನಿರಂಜನ (ಪ್ರಸಂ.) : ಜ್ಞಾನಗಂಗೋತ್ರಿ, ಕಿರಿಯರ ವಿಶ್ವಕೋಶ, ಸಂ–೫, ಕಲೆ, ಸಾಹಿತ್ಯ, ಪುಟ – ೩೬೭



ಇತಿಹಾಸದ ಶಾಸನಗಳು ಹೇಳುವಂತೆ 'ಬಾದಾಮಿಯ ತೊಟ್ಟಿಲು' ಎಂದೇ ಪ್ರಸಿದ್ಧ ಸ್ಥಳವಾದ ಐಹೊಳೆ, ಅಲ್ಲಿರುವ ದೇವಾಲಯಗಳನ್ನು ಮಾದರಿಯಾಗಿ ಉಪಯೋಗಿಸಿಕೊಂಡು ಬಾದಾಮಿ ಮತ್ತು ಪಟ್ಟದಕಲ್ಲಿನಲ್ಲಿ ಅನೇಕ ದೇವಾಲಯ ಮತ್ತು ಗುಹೆಗಳು ನಿರ್ಮಿತವಾಗಿವೆ. ಅವು ವಿಶ್ವವ್ಯಾಪಿ ಪ್ರಸಿದ್ಧವಾಗಿವೆ. ಆದ್ದರಿಂದ ಬಾದಾಮಿಯನ್ನು ಆಳುತ್ತಿದ್ದ ಚಾಲುಕ್ಯರು ಭಾರತೀಯ ಶಿಲ್ಪಕಲೆಯನ್ನು ಬೆಳೆಸಿದವರಲ್ಲಿ ಪ್ರಮುಖರೆನಿಸಿದ್ದಾರೆ.

ಅಧ್ಯಯನದ ಉದ್ದೇಶ

ಬಾದಾಮಿ ಚಾಲುಕ್ಯರ ಕಾಲಘಟ್ಟ ವಾಸ್ತು ಮತ್ತು ಶಿಲ್ಪಕಲೆಯ ದೃಷ್ಟಿಯಿಂದ ಗಮನಾರ್ಹ ಸ್ಥಾನ ಪಡೆದುಕೊಂಡಿದೆ. ಇವರು ಬಾದಾಮಿ, ಐಹೊಳೆ, ಪಟ್ಟದಕಲ್ಲು ಪ್ರದೇಶಗಳಲ್ಲಿ ಭಾರತೀಯ ದೇವಾಲಯ ವಾಸ್ತುಶಿಲ್ಪದ ವಿವಿಧ ಮಾದರಿಗಳನ್ನು ನಿರ್ಮಿಸುವುದರ ಮೂಲಕ ಈ ಪ್ರದೇಶವನ್ನು ವಾಸ್ತುಕಲೆಯ ತೊಟ್ಟಿಲಾಗಿ ಮಾಡಿದ್ದಾರೆ. ಇದರ ಜೊತೆಗೆ ಈ ವಾಸ್ತು ಕಲಾಪ್ರಕಾರಗಳನ್ನು ಇನ್ನಷ್ಟು ಅಲಂಕರಣಗೊಳಿಸಲು ಶಿಲ್ಪಕಲಾ ಪ್ರಕಾರವನ್ನು ಅದರೊಂದಿಗೆ ಬೆಸೆದಿದ್ದಾರೆ. ಇವರು ರಚಿಸಿದ ಶಿಲ್ಪಕಲಾಕೃತಿಗಳು ಜಾಗತಿಕ ಮಟ್ಟದಲ್ಲಿ ಪ್ರಖ್ಯಾತಿ ಪಡೆದುಕೊಂಡಿವೆ.

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು ವಿವಿಧ ಪ್ರಮಾಣದಲ್ಲಿವೆ. ಕೆಲವು ಬೃಹದಾಕಾರದ ಶಿಲ್ಪಗಳು, ಮತ್ತೆ ಕೆಲವು ಮಧ್ಯಮಾಕಾರದ ಶಿಲ್ಪಗಳು, ಇನ್ನೂ ಕೆಲವು ಚಿಕ್ಕ ಪ್ರಮಾಣದ ಹಾಗೂ ಕುಬ್ಜಾಕಾರದ ಶಿಲ್ಪಗಳಾಗಿವೆ. ಇಂತಹ ಹಲವಾರು ಶಿಲ್ಪಗಳನ್ನು ದ್ವಿಮಾನ ಹಾಗೂ ತ್ರಿಮಾನದಲ್ಲಿ ವಿಂಗಡಿಸಬಹುದಾಗಿದೆ. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ ವಿಶೇಷವಾಗಿ ಬಾದಾಮಿ ಪರಿಸರವನ್ನು ಅನುಲಕ್ಷಿಸಿ, ಬಾದಾಮಿ ಚಾಲುಕ್ಯರ ಕಾಲದ ದ್ವಿಮಾನ ಹಾಗೂ ತ್ರಿಮಾನದ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡುವ ಮುಖ್ಯ ಉದ್ದೇಶವನ್ನು ಹೊಂದಲಾಗಿದೆ.

ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಬಾದಾಮಿ ಚಾಲುಕ್ಯರಿಗಿಂತ ಮುಂಚೆ ಹಲವಾರು ರಾಜಮನೆತನಗಳು ಆಳ್ವಿಕೆ ಮಾಡಿವೆ. ಶಾತವಾಹನರು, ಗಂಗರು, ಕದಂಬರು ಮುಂತಾದ ಅರಸು ಮನೆತನಗಳು ಈ ಪ್ರದೇಶವನ್ನು ಆಡಳಿತವ್ಯಾಪ್ತಿಗೆ ಒಳಪಡಿಸಿಕೊಳ್ಳುವುದರ ಮೂಲಕ ಇದನ್ನು ಶಿಲ್ಪಕಲೆಯ ನೆಲೆಬೀಡಾಗಿ ಮಾಡಿದ್ದಾರೆ. ಅಂದರೆ ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರಿಗಿಂತ ಹಿಂದಿನ ದಿನಗಳಲ್ಲಿ ಮೌರ್ಯರು, ಶಾತವಾಹನರು, ಗಂಗರು, ಕದಂಬರು ಹೀಗೆ ಹಲವು ಅರಸರ ಕಾಲದಲ್ಲಿ ಶಿಲ್ಪಕಲೆಯ ರಚನಾಪ್ರಕ್ರಿಯೆ ನಡೆದುಕೊಂಡು ಬಂದಿದೆ.

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ವಾಸ್ತುಕಲೆಗೆ ಮಾತ್ರವಲ್ಲದೆ ಶಿಲ್ಪಕಲೆಗೂ ಸಹಿತ ಒಂದು ನಿರ್ದಿಷ್ಟ ಆಯಾಮ ದೊರಕಿರುವುದು ಅವರ ಶಿಲ್ಪಕೃತಿಗಳನ್ನು ಗಮನಿಸಿದಾಗ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಬಾದಾಮಿ ಚಾಲುಕ್ಯರ ಕಾಲದ ಸಾಂಸ್ಕೃತಿಕ ಪರಿಸರ, ಕಲೆಯ ಹಿನ್ನೆಲೆ ಯಾವ ರೀತಿಯಲ್ಲಿತ್ತು ಎಂಬುದನ್ನು ತಿಳಿದುಕೊಳ್ಳುವುದರ ಜೊತೆಗೆ ಅವರಿಗಿಂತ



ಮುಂಚಿನ ಕಾಲದ ಶಿಲ್ಪಕಲಾಕೃತಿಗಳನ್ನು ಅಧ್ಯಯನಕ್ಕೊಳಪಡಿಸಿ, ಅವುಗಳ ಪ್ರಭಾವವು ಚಾಲುಕ್ಯರ ಶಿಲ್ಪದ ಮೇಲೆ ಯಾವ ರೀತಿ ಉಂಟಾಗಿದೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಇದರ ಜೊತೆಗೆ ಹಿಂದಿನ ಅರಸರ ಕಾಲದ ಕಲಾಸಂಸ್ಕೃತಿ ಬಾದಾಮಿ ಚಾಲುಕ್ಯರಿಗೆ ಯಾವ ರೀತಿಯ ಸ್ಫೂರ್ತಿಯನ್ನು ಒದಗಿಸಿತು? ಅದರಿಂದ ಇವರು ತಮ್ಮದೆ ಆದ ಚಾಲುಕ್ಯಶೈಲಿಯನ್ನು ಹೇಗೆ ನಿರ್ಮಿಸಿಕೊಂಡರು? ಎಂಬುದನ್ನು ತಿಳಿದುಕೊಳ್ಳುವ ಮಹತ್ವದ ಉದ್ದೇಶವು ಈ ಅಧ್ಯಯನದಲ್ಲಿದೆ.

ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಿಸರವನ್ನು ಗಮನಿಸಿದಾಗ ಇವರ ಕಾಲಕ್ಕೆ ಶೈವ, ವೈಷ್ಣವ, ಜೈನ, ಶಾಕ್ತ, ಬೌದ್ಧ ಮುಂತಾದ ಧರ್ಮಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ. ಅದಕ್ಕನುಗುಣವಾಗಿ ಅವರ ಕಾಲದ ವಾಸ್ತುಕಲೆ ಮತ್ತು ಶಿಲ್ಪಕಲೆಗಳು ಬೆಳವಣಿಗೆ ಹೊಂದಿದವು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಾದಾಮಿಯಲ್ಲಿ ರಚನೆಯಾದ ಗುಹಾಲಯಗಳಲ್ಲಿ ಶೈವ, ವೈಷ್ಣವ, ಜೈನ, ಬೌದ್ಧಧರ್ಮದ ಶಿಲ್ಪಗಳು ಕಂಡುಬರುತ್ತವೆ.

ಇವುಗಳಿಗಿಂತ ಪ್ರಾಚೀನವಾಗಿರುವ ಐಹೊಳೆ ಗುಹಾಲಯಗಳಲ್ಲಿ ಬೌದ್ದ ಮತ್ತು ಜೈನ ಗುಹೆಗಳಿವೆ. ಗುಹಾಲಯಗಳಲ್ಲಿ ಸಂಬಂಧಪಟ್ಟ ಆಯಾ ಧರ್ಮದ ಶಿಲ್ಪಕಲಾಕೃತಿಗಳನ್ನು ರಚಿಸಲಾಗಿದೆ. ಇಂತಹ ಸಂಗತಿಗಳಿಂದ ಚಾಲುಕ್ಯರ ಕಾಲವು ಸಾಂಸ್ಕೃತಿಕ ಧರ್ಮಸಮನ್ವಯದ ಪರಿಸರವನ್ನು ಒಳಗೊಂಡಿತ್ತು ಎಂದು ಆ ಕಾಲದ ಶಿಲ್ಪಕಲಾಕೃತಿಗಳಿಂದ ಕಂಡುಕೊಳ್ಳುವ ಉದ್ದೇಶ ಪ್ರಸ್ತುತ ಅಧ್ಯಯನದಲ್ಲಿದೆ. ಬಾದಾಮಿ ಚಾಲುಕ್ಯರ ಕಾಲದ ಒಟ್ಟಾರೆ ಶಿಲ್ಪಗಳನ್ನು ಗಮನಿಸಿದಾಗ ಅವುಗಳಲ್ಲಿ ಧಾರ್ಮಿಕವಾಗಿ ಶೈವ ಶಿಲ್ಪಗಳು, ವೈಷ್ಣವ ಶಿಲ್ಪಗಳು, ಜೈನ ಶಿಲ್ಪಗಳು ಮತ್ತು ಸಂಕೀರ್ಣ ಶಿಲ್ಪಗಳು ಕಂಡುಬರುತ್ತವೆ. ಹಾಗಾಗಿ ಈ ಅಧ್ಯಯನದಲ್ಲಿ ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳನ್ನು ಧಾರ್ಮಿಕವಾಗಿ ಮೇಲಿನಂತೆ ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸುವ ಪ್ರಮುಖ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಬಾದಾಮಿ ಚಾಲುಕ್ಯರ ಕಾಲದ ಅನೇಕ ಅರಸರು ಶೈವಧರ್ಮದ ಅನುಯಾಯಿಗಳಾಗಿದ್ದರು. ಅಲ್ಲದೆ ಹಲವಾರು ಶೈವ ಗುಹಾಲಯಗಳು, ರಾಚನಿಕ ದೇವಾಲಯಗಳು ಬಾದಾಮಿ ಪರಿಸರದಲ್ಲಿ ರಚನೆಗೊಂಡಿವೆ. ಬಾದಾಮಿಯ ಗುಹಾಲಯಗಳಲ್ಲಿ ಒಂದನೆಯದು ಶೈವ ಗುಹಾಲಯವಾಗಿದ್ದು, ಅತ್ಯಂತ ಕಲಾತ್ಮಕವಾದ ಶೈವಶಿಲ್ಪಗಳನ್ನು ಒಳಗೊಂಡಿದೆ. ಶಿವನ ವಿವಿಧ ರೂಪಗಳು, ಆತನ ಮಹಿಮೆಯನ್ನು ಬಿಂಬಿಸುವ ಕಥಾನಕಗಳು, ಶೈವ ಪುರಾಣಕ್ಕೆ ಸಂಬಂಧಿಸಿದ ಘಟನಾವಳಿಗಳು ಇಲ್ಲಿ ಕೆತ್ತಿಸಲ್ಪಟ್ಟಿವೆ. ಇದಲ್ಲದೆ ಬಾದಾಮಿಯ ಉತ್ತರ ಬೆಟ್ಟದಲ್ಲಿರುವ ಮೇಗಣ ಶಿವಾಲಯ, ಕೆಳಗಣಶಿವಾಲಯ ಹಾಗೂ ಅಗಸ್ತ್ಯತೀರ್ಥದ ದಂಡೆಯ ಮೇಲಿನ ಭೂತನಾಥ ದೇವಾಲಯಗಳು ಶೈವ ಧರ್ಮಕ್ಕೆ ಸಂಬಂಧಪಟ್ಟಿವೆ. ಈ ಎಲ್ಲ ದೇವಾಲಯಗಳಲ್ಲಿ ಶೈವ ಧರ್ಮಕ್ಕೆ ಸಂಬಂದ ಪಟ್ಟ ಶಿಲ್ಪಕಲಾಕೃತಿಗಳಿವೆ. ಇದಲ್ಲದೆ ಐಹೊಳೆ ವಿರೂಪಾಕ್ಷ, ಜಂಬುಲಿಂಗ ದೇವಾಲಯಗಳು,



ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಶೈವಧರ್ಮಕ್ಕೆ ಸಂಬಂಧಪಟ್ಟಿದ್ದು ಇವೆಲ್ಲ ಶೈವಶಿಲ್ಪಗಳಾಗಿವೆ. ಬಾದಾಮಿ ಪರಿಸರದ ಈ ಶೈವ ದೇವಾಲಯಗಳಲ್ಲಿರುವ ಶಿಲ್ಪಗಳು ಚಿಕ್ಕ, ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಶಿಲ್ಪಗಳಾಗಿದ್ದು, ಜೊತೆಗೆ ಶಿವನ ವಿವಿಧ ರೂಪಗಳನ್ನು ಇವು ಒಳಗೊಂಡಿವೆ. ಇವೆಲ್ಲವುಗಳನ್ನು ವಿಷಯಾನುಸಾರ ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಅನೇಕ ವೈಷ್ಣವ ದೇವಾಲಯಗಳು ರಚನೆಗೊಂಡಿವೆ. ಬಾದಾಮಿಯ ಎರಡು ಮತ್ತು ಮೂರನೆಯ ಗುಹೆಗಳು ವೈಷ್ಣವಧರ್ಮಕ್ಕೆ ಸಂಬಂಧಪಟ್ಟವುಗಳಾಗಿವೆ. ಅತ್ಯಂತ ಸುಂದರವಾದ ಶಿಲ್ಪ ಮತ್ತು ಚಿತ್ರಕಲೆ ಹಿನ್ನೆಲೆಯಿಂದ ಪ್ರಖ್ಯಾತಿಯನ್ನು ಪಡೆದ ಮೂರನೆಯ ಗುಹೆಯು ವೈಷ್ಣವಧರ್ಮಕ್ಕೆ ಸಂಬಂಧಪಟ್ಟಿದೆ. ಇಲ್ಲಿಯ ವೈಷ್ಣವ ಗುಹಾಲಯಗಳಲ್ಲಿ ಅತ್ಯಂತ ಬೃಹತ್ ಪ್ರಮಾಣದ ವಿಷ್ಣುವಿನ ಶಿಲ್ಪಗಳಿವೆ. ವಿಷ್ಣುವಿನ ದಶಾವತಾರದ ವಿವಿಧ ಶಿಲ್ಪಗಳು, ದ್ವಾರಪಾಲಕರಾದ ಜಯ–ವಿಜಯರ ಶಿಲ್ಪಗಳು, ವಿಷ್ಣುವಿನ ಮಹಿಮೆಯನ್ನು ಬಿಂಬಿಸುವ ಪೌರಾಣಿಕ ಶಿಲ್ಪಗಳು ಇಲ್ಲಿ ಕಂಡುಬರುತ್ತವೆ. ಇಲ್ಲಿಯೂ ಸಹಿತ ವಿವಿಧ ಆಕಾರದಲ್ಲಿ ಶಿಲ್ಪಕಲಾಕೃತಿಗಳು ರಚನೆಗೊಂಡಿವೆ. ಇವುಗಳನ್ನು ಸಹಿತ ವಿಷಯಕ್ಕನುಗುಣವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧದಲ್ಲಿ ಇಟ್ಟುಕೊಳ್ಳಲಾಗಿದೆ.

ಬಾದಾಮಿ ಚಾಲುಕ್ಯ ದೊರೆಗಳು ಶೈವ ಮತ್ತು ವೈಷ್ಣವ ಧರ್ಮದ ಅನುಯಾಯಿಗಳಾಗಿದ್ದರೂ ಸಹಿತ ಜೈನಧರ್ಮದ ಕಲಾಕೃತಿಗಳನ್ನು ರಚಿಸುವಲ್ಲಿ ಆಸಕ್ತಿಯನ್ನು ತೋರಿಸಿರುವುದು ಕಂಡುಬರುತ್ತದೆ. ಬಾದಾಮಿಯ ನಾಲ್ಕನೆಯ ಗುಹೆ ಐಹೊಳೆಯ ಜೈನ ಗುಹಾಲಯಗಳು ಇದಕ್ಕೆ ನಿದರ್ಶನವಾಗಿವೆ. ಇವುಗಳಲ್ಲಿ ಜೈನ ತೀರ್ಥಂಕರರ ಶಿಲ್ಪಗಳು, ಬಾಹುಬಲಿಯ ಶಿಲ್ಪಗಳು, ಜೈನ ಧರ್ಮದ ತತ್ವಾದರ್ಶಗಳನ್ನು ಸಾರುವ ಉಬ್ಬು ಶಿಲ್ಪಗಳು ಹಲವು ಸಂಖ್ಯೆಯಲ್ಲಿ ಕಂಡುಬರುತ್ತವೆ. ಇವುಗಳನ್ನು ಸಹಿತ ವಿಷಯಾನುಸಾರ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ ಮುಂತಾದ ಪ್ರಮುಖ ಧಾರ್ಮಿಕ ಶಿಲ್ಪಗಳಲ್ಲದೆ ಶಾಕ್ತಪಂಥಕ್ಕೆ ಸಂಬಂಧಪಟ್ಟ ಶಿಲ್ಪಗಳು, ಲಕುಲೀಶ, ಕಾಳಾಮುಖ, ಲಜ್ಜಾಗೌರಿ, ಸಮರ ಕಲೆ, ಸಾಮಾಜಿಕ ಜೀವನ, ರಾಜಕೀಯ ಬೆಳವಣಿಗೆ, ಜನಸಾಮಾನ್ಯರ ಬದುಕು, ಪ್ರಾಣಿ–ಪಕ್ಷಿಗಳು, ಗಿಡ–ಮರಗಳು, ಬೆಟ್ಟಗಳು, ಅಲಂಕಾರಿಕ ನಕ್ಷಾವಿನ್ಯಾಸದ ಶಿಲ್ಪಗಳು ಹೀಗೆ ವೈವಿಧ್ಯಮಯವಾದ ಶಿಲ್ಪಕಲಾಕೃತಿಗಳು ಕಂಡುಬರುತ್ತವೆ. ಇಂತಹ ಶಿಲ್ಪಗಳನ್ನು ಸಂಕೀರ್ಣ ಶಿಲ್ಪಗಳೆಂಬುದಾಗಿ ಪ್ರತ್ಯೇಕವಾಗಿ ವಿಂಗಡಿಸಿಕೊಂಡು ವಿಶ್ಲೇಷಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನದಲ್ಲಿ ಹೊಂದಲಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಕಲಾಕೃತಿಗಳು ವಿಶೇಷವಾಗಿವೆ. ಇವು ತಮ್ಮ ಲಕ್ಷಣ ಮತ್ತು ಶೈಲಿಯಿಂದಾಗಿ ಪ್ರತ್ಯೇಕವಾಗಿ ಗುರುತಿಸಿಕೊಂಡಿವೆ. ಭಾರತದ



ಶಿಲ್ಪಕಲೆ ಕ್ಷೇತ್ರದಲ್ಲಿ ಕಂಡುಬರುವ ಪ್ರಮುಖ ಕಲಾ ಶೈಲಿಗಳಾದ ಮೌರ್ಯ, ಶಾತವಾಹನ, ಗುಪ್ತ, ವಾಕಾಟಕ, ಗಂಗ, ಪಲ್ಲವ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಮುಂತಾದ ಶಿಲ್ಪ ಶೈಲಿಗಳಂತೆ ಬಾದಾಮಿ ಚಾಲುಕ್ಯ ಶೈಲಿ ಪ್ರಖ್ಯಾತವಾಗಿದೆ.

ಬಾದಾಮಿ ಚಾಲುಕ್ಯರ ಶೈಲಿಯನ್ನು ಅಧ್ಯಯನಕ್ಕೊಳಪಡಿಸಿದಾಗ ಅನೇಕ ಕುತೂಹಲಕರವಾದ ಸಂಗತಿಗಳು ಕಂಡುಬರುತ್ತವೆ. ಅತ್ಯಂತ ಕಠಿಣವಾದ ಕೆಂಪು ಮಿಶ್ರಿತ ಮರಳುಗಲ್ಲಿನಲ್ಲಿ ಇವರು ಕಲಾಕೃತಿಗಳನ್ನು ರಚನೆ ಮಾಡಿದ್ದಾರೆ. ಈ ಮಾಧ್ಯಮದಲ್ಲಿ ಬೃಹತ್ ಶಿಲ್ಪಗಳಿಂದ ಹಿಡಿದು ಅತ್ಯಂತ ಚಿಕ್ಕ ಶಿಲ್ಪಕಲಾಕೃತಿಗಳನ್ನು ಅತ್ಯಂತ ಸೂಕ್ಷ್ಮವಾದ ಭಾಗಗಳು ಗೋಚರಿಸುವಂತೆ ರಚನೆಸಿದ್ದಾರೆ. ಇವರು ರಚಿಸಿದ ಶಿಲ್ಪಗಳು ದ್ವಿಮಾನ ಮತ್ತು ತ್ರಿಮಾನದಲ್ಲಿ ಮೂಡಿಬಂದಿವೆ. ಶಿಲ್ಪ ಶಾಸ್ತ್ರಗಳಲ್ಲಿ ಉಲ್ಲೇಖಗೊಂಡಿರುವ ತಾಳಮಾನ, ಪ್ರಮಾಣಬದ್ಧತೆ ಮುಂತಾದ ಸಂಗತಿಗಳು ಇವರ ಕೃತಿಗಳಲ್ಲಿ ಕಂಡುಬರುತ್ತವೆ. ಇಂತಹ ಅತೀಸೂಕ್ಷ್ಮವಾದ ವಿಚಾರಗಳನ್ನು ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಉದ್ದೇಶವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ.

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು ತನ್ನದೆ ಆದ ವಿಶೇಷ ಶೈಲಿಯನ್ನು ಒಳಗೊಂಡಿದ್ದರೂ ಸಹಿತ ಬೇರೆ ಬೇರೆ ರೀತಿಯ ಪ್ರಭಾವ ಹಾಗೂ ಪ್ರೇರಣೆಗಳಿಗೆ ಒಳಗಾಗಿವೆ. ಚಾಲುಕ್ಯರಿಗಿಂತ ಮುಂಚಿನ ಕದಂಬರ ಕಾಲದ ಶಿಲ್ಪ ರಚನೆಯ ಪ್ರೇರಣೆ ಮತ್ತು ಪ್ರಭಾವಗಳು ಇವರ ಮೇಲೆ ಉಂಟಾಗಿರುವ ಸಾಧ್ಯತೆ ಇದೆ. ಅಲ್ಲದೆ ಕದಂಬರ ಸಮಕಾಲೀನರಾದ ಗಂಗರ ಕಾಲದ ಶಿಲ್ಪ ಲಕ್ಷಣಗಳು ಚಾಲುಕ್ಯರ ಪ್ರಾರಂಭಿಕ ಶಿಲ್ಪಗಳ ಮೇಲೆ ಪ್ರಭಾವ ಬೀರಿರುವುದನ್ನು ಗುರುತಿಸಬಹುದಾಗಿದೆ. ನಂತರದ ದಿನಗಳಲ್ಲಿ ಪಲ್ಲವರು ಬಾದಾಮಿ ಚಾಲುಕ್ಯರ ಶಿಲ್ಪಕಲೆಯ ಮೇಲೆ ಪರೋಕ್ಷವಾಗಿ ತಮ್ಮ ಪ್ರಭಾವವನ್ನು ಉಂಟುಮಾಡಿರುವುದನ್ನು ಕಂಡುಕೊಳ್ಳಬಹುದಾಗಿದೆ. ಈ ರೀತಿಯ ಶಿಲ್ಪರಚನೆಗೆ ಚಾಲುಕ್ಯಶಿಲ್ಪಿಗಳಿಗೆ ಧಾರ್ಮಿಕ ವಿಚಾರಗಳಲ್ಲದೆ ಹಲವಾರು ಸಂಗತಿಗಳು ಪ್ರೇರಣೆಯನ್ನು ಒದಗಿಸಿರುವ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ. ಇಂತಹ ಹಲವಾರು ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿವೇಚಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ವಿವೇಚಿಸಲಾಗಿದೆ. ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿತಗೊಳ್ಳುವ ಅಧ್ಯಯನದ ಸ್ವರೂಪವನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಹೇಳಬಹುದು. **ಮೊದಲನೆಯ ಅಧ್ಯಾಯದಲ್ಲಿ** ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳ ಅಧ್ಯಯನಕ್ಕೆ ಕಾರಣವಾದ ಅಂಶಗಳ ಹಿನ್ನೆಲೆ, ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ಅಧ್ಯಯನ ವಿಧಾನವನ್ನು ಕುರಿತು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚಾಲುಕ್ಯ ರಾಜರು, ಅವರ ಆಡಳಿತ ಕಾಲದಲ್ಲಿ ಕಲೆ, ಸಂಸ್ಕೃತಿ ಮತ್ತು ವಾಸ್ತುಶಿಲ್ಪಗಳಿಗೆ ಅವರು ನೀಡಿರುವ ಮಹತ್ವ, ಆಗಿನ ಕಾಲದ ಸಾಂಸ್ಕೃತಿಕ ಪರಿಸರ, ರಚನೆಯಾದ ಶಿಲ್ಪಗಳ ವರ್ಗೀಕರಣದೊಂದಿಗೆ ಅಧ್ಯಯನ ರೂಪಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚನೆಯಾದ ಶೈವ ಧರ್ಮಕ್ಕೆ ಸಂಬಂಧಪಟ್ಟಂತಹ ಶಿಲ್ಪಗಳು, ಅವುಗಳ ವಿಶೇಷತೆ, ಅಲ್ಲಿನ ದೊಡ್ಡ ಮತ್ತು ಸಣ್ಣ ಗಾತ್ರದ ಶಿಲ್ಪಗಳು, ಬಾದಾಮಿ, ಮಹಾಕೂಟ ಐಹೊಳೆ ಮತ್ತು ಪಟ್ಟದಕಲ್ಲಿನ ಪರಿಸರದಲ್ಲಿ ಕಂಡುಬರುವ ಪ್ರಮುಖ ಶೈವಶಿಲ್ಪಗಳ ಕುರಿತಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದ ವೈಷ್ಣವ ಶಿಲ್ಪಗಳು, ಮುಖ್ಯವಾಗಿ ಬಾದಾಮಿಯ ಎರಡನೆಯ ಮತ್ತು ಮೂರನೆಯ ಗುಹೆಯ ವರಾಹ, ನರಸಿಂಹ ಮತ್ತು ಮಹಾವಿಷ್ಣುವಿನ ಶಿಲ್ಪಗಳಲ್ಲದೆ ಇತರ ಹಲವಾರು ಸಣ್ಣ ಮತ್ತು ಮಧ್ಯಮ ಗಾತ್ರದ ಶಿಲ್ಪಗಳು, ಪಟ್ಟದಕಲ್ಲು ಮತ್ತು ಐಹೊಳೆಯ ಪರಿಸರದಲ್ಲಿ ಕಂಡುಬರುವ ವಿಷ್ಣುವಿನ ಶಿಲ್ಪಗಳನ್ನು ಗಮನಿಸಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಜೈನ ಮತ್ತು ಬೌದ್ಧ ಧರ್ಮಕ್ಕೆ ಸಂಬಂಧಪಟ್ಟಂತೆ ರಚನೆಯಾದ ಶಿಲ್ಪಗಳು, ಬಾದಾಮಿಯ ನಾಲ್ಕನೆಯ ಜೈನ ಗುಹೆಯ ಶಿಲ್ಪಗಳು, ಐಹೊಳೆಯ ಮೀನಬಸದಿಯ(ಇಂದಿನ ಮೇಣಬಸದಿ) ಶಿಲ್ಪಗಳು, ಮೇಗುತಿ ಗುಡಿ, ಇತ್ಯಾದಿ ಪ್ರದೇಶಗಳಲ್ಲಿ ಕಂಡುಬರುವ ಶಿಲ್ಪಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚನೆಯಾದ ಸಂಕೀರ್ಣ ಶಿಲ್ಪಗಳು, ಮಹಿಷಾಸುರಮರ್ದಿನಿ, ದುರ್ಗೆ, ಗಣಪತಿ, ಲಕುಲೀಶ, ಕೋಷ್ಟರಾಯ, ದಂಪತಿ ಶಿಲ್ಪಗಳು, ಮಿಥುನ ಶಿಲ್ಪಗಳು, ಲಜ್ಜಾಗೌರಿ, ಇತ್ಯಾದಿ ಶಿಲ್ಪಗಳಲ್ಲದೆ, ವಿವಿಧ ಹೂಬಳ್ಳಿಗಳು, ವ್ಯಾಳಿ, ಮಕರ, ಜಾಲಂಧ್ರಗಳಲ್ಲಿ ರಚಿಸಲಾದ ಅಲಂಕರಣ ಶಿಲ್ಪಗಳು, ರಾಮಾಯಣ, ಮಹಾಭಾರತ, ಶ್ರೀಕೃಷ್ಣನ ಬಾಲಲೀಲೆಗಳನ್ನು ಕುರಿತಾಗಿ ರಚಿಸಿದ ಪಟ್ಟಿಕೆಗಳು, ಇತ್ಯಾದಿ ಶಿಲ್ಪಗಳನ್ನು ಕುರಿತಾಗಿ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾದ ವಿವಿಧ ಶಿಲ್ಪಗಳು, ಅವುಗಳ ರಚನೆಗೆ ಪ್ರೇರಣೆಯಾದ ಅಂಶಗಳು, ಅವುಗಳ ಹಿನ್ನೆಲೆ, ಪ್ರಭಾವಗಳು, ಬಾದಾಮಿಯ ಶಿಲ್ಪಗಳ ವಿಶೇಷ ಲಕ್ಷಣಗಳು, ಮುಂದಿನ ಶಿಲ್ಪಕಲಾಪರಂಪರೆಗೆ ಬಾದಾಮಿಯ ಶಿಲ್ಪಕಲೆ ಪ್ರೇರಣೆಯಾದ ಅಂಶಗಳನ್ನು ಕುರಿತಾಗಿ ಇಲ್ಲಿ ವಿವೇಚಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಮೇಲಿನ ಏಳು ಅಧ್ಯಾಯಗಳಲ್ಲಿ ಕಂಡುಕೊಂಡ ಫಲಿತಗಳನ್ನು ಉಪಸಂಹಾರಾತ್ಮಕವಾಗಿ ಸಮೀಕ್ಷಿಸಲಾಗಿದೆ.



ಅಧ್ಯಯನದ ವ್ಯಾಪ್ತಿ

ಬಾದಾಮಿ ಚಾಲುಕ್ಯರ ಆಡಳಿತ ಕಾಲದಲ್ಲಿ ರಚನೆಯಾದ ಶಿಲ್ಪಗಳ ಕುರಿತಾಗಿ ಅಧ್ಯಯನ ನಡೆಸುವಾಗ ಇಲ್ಲಿನ ಎಲ್ಲ ಶಿಲ್ಪಗಳನ್ನು ಪ್ರತ್ಯೇಕವಾಗಿ ನೋಡುವುದು ಅಸಾಧ್ಯವಾದ ಮಾತು. ಹಾಗಾಗಿ ಕೆಲವು ಪ್ರಮುಖ ಶಿಲ್ಪಗಳನ್ನು ಅವುಗಳ ವಿಶೇಷತೆಯನ್ನು ಆಧರಿಸಿ ನೋಡಬೇಕಾಗುತ್ತದೆ. ಅದಲ್ಲದೆ ಅವರ ಆಡಳಿತದ ಹರವು ದೊಡ್ಡದು. ಉತ್ತರ ಕರ್ನಾಟಕ, ಆಂಧ್ರಪ್ರದೇಶದ ಬಹಳಷ್ಟು ಭಾಗ, ತಮಿಳುನಾಡು ಮತ್ತು ಮಹಾರಾಷ್ಟ್ರದವರೆಗೂ ಅವರ ಆಡಳಿತ ಹರಡಿತ್ತು. ಇಲ್ಲೆಲ್ಲ ಶಿಲ್ಪಗಳು ಮತ್ತು ವಾಸ್ತು ಶಿಲ್ಪಗಳು ರಚನೆಯಾಗಿವೆ. ಅವುಗಳಲ್ಲಿ ಮಹಾರಾಷ್ಟ್ರದ ಎಲಿಫೆಂಟಾ ಹಾಗೂ ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆಯಲ್ಲಿರುವ ಆಲಂಪುರದ ಶಿಲ್ಪಗಳು ಪ್ರಸಿದ್ಧವಾದವು. ಆದರೆ ಇಲ್ಲಿ ಅವುಗಳನ್ನು ಅಧ್ಯಯನದ ವ್ಯಾಪ್ತಿಯಿಂದ ಹೊರಗಿಟ್ಟು, ಬರಿಯ ಚಾಲುಕ್ಯರ ಮೊದಲನೆಯ ಹಂತದಲ್ಲಿ ರಚನೆಯಾದ ಶಿಲ್ಪಗಳು ಮತ್ತು ಎರಡನೆಯ ಹಂತದ ಆಡಳಿತ ಕಾಲದಲ್ಲಿ ರಚನೆಯಾದ ಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ.

ಬಾದಾಮಿಯ ಚಾಲುಕ್ಯರ ವಾಸ್ತು ಶಿಲ್ಪಗಳು ಹೆಚ್ಚಾಗಿ ರಚನೆಯಾಗಿರುವುದು ಬಾದಾಮಿ, ಪಟ್ಟದಕಲ್ಲು, ಐಹೊಳೆಗಳಲ್ಲಿ. ಇದಕ್ಕೆ ಕಾರಣ ಬಾದಾಮಿಯು ಅವರ ಆಡಳಿತ ಕೇಂದ್ರವಾಗಿದ್ದುದಾದರೆ ಪಟ್ಟದಕಲ್ಲು ಅವರ ಪಟ್ಟಾಭಿಷೇಕದ ಸ್ಥಳವಾಗಿತ್ತು. ಆದರೆ ಐಹೊಳೆಯು ಮೊದಲೇ ನಾಗರಿಕ ಕೇಂದ್ರವಾಗಿದ್ದು, ಇಲ್ಲಿ ಪ್ರಾಚೀನ ಕಾಲದಿಂದಲೂ ಜನವಸತಿ ಇದ್ದುದರಿಂದ ಇಲ್ಲಿ ಹಲವಾರು ದೇವಾಲಯಗಳು ಈ ಮೊದಲೇ ರಚನೆಯಾದವುಗಳಾಗಿದ್ದವು. ಅವುಗಳ ಜೊತೆಯಲ್ಲೇ ಇಲ್ಲಿನ ಜನವಸತಿಯ ಕಾರಣದಿಂದಾಗಿ ಇಲ್ಲಿ ಹಲವಾರು ದೇವಾಲಯಗಳು ಚಾಲುಕ್ಯರ ಕಾಲದಲ್ಲಿ ರಚನೆಯಾದವು. ಆದುದರಿಂದ ಇಲ್ಲಿನ ಶಿಲ್ಪಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇನ್ನು ಮಹಾಕೂಟವು ಮೊದಲೇ ಶಕ್ತಿಕೇಂದ್ರವಾಗಿದ್ದು, ಇಲ್ಲಿನ ದೇವಾಲಯದಲ್ಲಿ ಹಲವಾರು ಶಿಲ್ಪಗಳು ಆಗಿನ ಕಾಲದಲ್ಲಿ ರಚನೆಯಾಗಿರುವುದನ್ನು ಮನಗಂಡು ಅವುಗಳನ್ನು ಸಹ ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಾಗಾಗಿ ಇಲ್ಲಿನ ಅಧ್ಯಯನವು ಬಾದಾಮಿ ಮತ್ತು ಅದರ ಸುತ್ತಲಿನ ಪ್ರದೇಶದ ವ್ಯಾಪ್ತಿಗೆ ಸೀಮಿತಗೊಂಡಿದೆ.

ದೃಶ್ಯಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನ ಅಧ್ಯಯನಗಳು

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನೆಯ ಅಧ್ಯಯನ ಪ್ರಾರಂಭಗೊಂಡಿರುವುದು ತೊಂಭತ್ತರ ದಶಕದ ಇತ್ತೀಚೆಗೆ, ಬಹಳಷ್ಟು ತಡವಾಗಿ ದೃಶ್ಯಕಲೆಗಳ ಕುರಿತು ಸಂಶೋಧನಾ ಅಧ್ಯಯನ ವಿಶೇಷವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಫಿಲ್, ಪಿಹೆಚ್.ಡಿಯಂತಹ ಪದವಿಯ ಹಿನ್ನೆಲೆಯಲ್ಲಿ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಇಷ್ಟು ತಡವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಯಲು ಮುಖ್ಯಕಾರಣ ಚಿತ್ರಕಲೆಯ ಅಧ್ಯಯನದ ಕೋರ್ಸ್‌ಗಳು ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ. ಬೋರ್ಡ್‌ನಲ್ಲಿ ನಡೆಯುತ್ತಿದ್ದವು.



ವಿಶೇಷವಾಗಿ ಈ ಎಲ್ಲಾ ಕೋರ್ಸ್‌ಗಳು ಡಿಪ್ಲೋಮಾ ಹಂತಕ್ಕೆ ಸೀಮಿತವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಳ್ಳುತ್ತಿದ್ದರು. ಇನ್ನುಳಿದವರು ಹವ್ಯಾಸಿ ಚಿತ್ರಕಲಾವಿದರಾಗಿ, ಕಮರ್ಶಿಯಲ್ ಆರ್ಟಿಸ್ಟಾಗಿ ವೃತ್ತಿ ಜೀವನವನ್ನು ನಡೆಸಿಕೊಂಡು ಬರುತ್ತಿದ್ದರು. ಈ ಐದು ವರ್ಷದ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಪದವಿತರಗತಿಗೆ ಸೇರಲು ಅವಕಾಶವಿರುತ್ತಿರಲಿಲ್ಲ. ಅವರು ಪದವಿತರಗತಿಗೆ ಸೇರಲೇಬೇಕೆಂದರೆ ಒಂದು ವರ್ಷದ ಬ್ರಿಡ್ಜ್‌ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಿಕೊಂಡಲ್ಲಿ ಮಾತ್ರ ಸ್ನಾತಕೋತ್ತರ ಹಂತಕ್ಕೆ ಹೋಗಲು ಅವಕಾಶವಿದ್ದ ಕಾರಣ ಬಹುಪಾಲು ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ.

ಇನ್ನು ಸ್ನಾತಕೋತ್ತರ ಹಂತದಲ್ಲಿ ದೃಶ್ಯಕಲೆ ಅಧ್ಯಯನಕ್ಕೆ ಕರ್ನಾಟಕದ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ಸ್ವತಂತ್ರವಾದ ದೃಶ್ಯಕಲಾ ಅಧ್ಯಯನದ ವಿಭಾಗಗಳು ಪ್ರಾರಂಭಗೊಳ್ಳಲಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮುಖ್ಯವಾಗಿ ಹಿಂದುಳಿದಿತ್ತು. ಪದವಿಯ ಹಂತದಲ್ಲಿ ಬೆರಣಿಕೆಯಷ್ಟು ಲಲಿತಕಲಾ ಮಹಾವಿದ್ಯಾಲಯಗಳು ಪ್ರಾರಂಭಗೊಂಡಿದ್ದು, ಅವು ಹೆಚ್ಚಾಗಿ ಪದವಿಹಂತಕ್ಕೆ ಮಾತ್ರ ಸೀಮಿತಗೊಂಡು ಕಾರ್ಯ ನಿರ್ವಹಿಸಿವೆ. ಅಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಅಧ್ಯಯನಕ್ಕೆ ಅವಕಾಶಗಳು ಲಭ್ಯವಾಗದೇ ಇರುವುದು ಇನ್ನೊಂದು ಪ್ರಮುಖ ಕಾರಣವಾಗಿದೆ ಎನ್ನಬಹುದು.

ಧಾರವಾಡ, ಗದಗ, ಗುಲಬರ್ಗಾ, ಮೈಸೂರು, ದಾವಣಗೆರೆ ಹಾಗೂ ಬೆಂಗಳೂರು ಈ ಕೆಲವು ಸ್ಥಳಗಳಲ್ಲಿ ಸ್ನಾತಕೋತ್ತರ ದೃಶ್ಯಕಲಾ ಪದವಿ ಕೋರ್ಸ್‌ಗಳು ಪ್ರಾರಂಭಗೊಂಡರೂ ಈ ಕೋರ್ಸ್‌ಗಳು ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣವಾಗಿ ಹಾಗೂ ಅಲ್ಲಿ ಬೋಧನೆ ಮಾಡುತ್ತಿದ್ದ ಅಧ್ಯಾಪಕರೆಲ್ಲರೂ ಯಾವುದೇ ಸಂಶೋಧನೆಯ ಹಿನ್ನೆಲೆಯಿಂದ ಬರದೇ ಇದ್ದುದು ಈ ಕ್ಷೇತ್ರದಲ್ಲಿ ದೃಶ್ಯಕಲೆಗಳ ಶಿಕ್ಷಣವೆಂದರೆ ಕೇವಲ ಪ್ರಾಯೋಗಿಕವಾದ ಕಲೆಗಳ ಅಧ್ಯಯನ ಎಂಬ ಪ್ರಧಾನ ದೃಷ್ಟಿಕೋನವು ಈ ಹಂತದಲ್ಲಿ ಪ್ರಮುಖವಾಗಿತ್ತು.

ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಪ್ರಜ್ಞೆಯ ಕೊರತೆಯಿಂದಾಗಿ ಕೇವಲ ಸ್ನಾತಕೋತ್ತರ ಪದವಿಗಳನ್ನು ಮಾತ್ರ ವಿದ್ಯಾರ್ಥಿಗಳು ಪಡೆದುಕೊಳ್ಳುವಂತಾಯಿತು. ಸ್ನಾತಕೋತ್ತರ ನಂತರದ ಎಂ.ಫಿಲ್, ಪಿಎಚ್.ಡಿ. ಯಂತಹ ಅಧ್ಯಯನಗಳಿಗೆ ಇಲ್ಲಿ ಅವಕಾಶವಿಲ್ಲದಂತಾಗಿ ಈ ಕ್ಷೇತ್ರದ ಸಂಶೋಧನೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆಯಲಿಲ್ಲ.

ಈ ಪರಂಪರೆ ತೊಂಭತ್ತರ ದಶಕದವರೆಗೂ ಮುಂದುವರೆದುಕೊಂಡು ಬಂದಿತು. ತೊಂಭತ್ತರ ದಶಕದ ನಂತರದಲ್ಲಿ ೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್, ಪಿಹೆಚ್.ಡಿ ಸಂಶೋಧನ ಅಧ್ಯಯನ ಪ್ರಾರಂಭಗೊಳ್ಳುವುದರ ಮೂಲಕ ಈ ವಾತಾವರಣ ಸ್ವಲ್ಪ ಬದಲಾಗಿ, ಸ್ನಾತಕೋತ್ತರ ಹಂತದಲ್ಲಿ ಸಂಶೋಧನಾ ಅಧ್ಯಯನಕ್ಕೆ ಅವಕಾಶ



ದೊರೆಯಿತು. ಇಲ್ಲಿ ಸ್ನಾತಕೋತ್ತರ ಹಂತದಲ್ಲಿ ಪ್ರಾಯೋಗಿಕತೆಗೆ ಮತ್ತು ಸಿದ್ಧಾಂತ ಪತ್ರಿಕೆಗಳಿಗೆ ಸಮಾನಾವಕಾಶ ಸಿಕ್ಕ ಕಾರಣ ದೃಶ್ಯಕಲಾ ಸಂಶೋಧನೆಯ ಹೊಸ ಪರಂಪರೆಗೆ ಈ ವಿಶ್ವವಿದ್ಯಾಲಯ ಹೊಸ ದಾರಿಯನ್ನು ಹಾಕಿಕೊಟ್ಟಿತ್ತು. ನಂತರದಲ್ಲಿ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೃಶ್ಯಕಲಾ ಸಂಶೋಧನೆಯ ಅಧ್ಯಯನಕ್ಕೆ ಅವಕಾಶಗಳು ದೊರಕಿವೆ. ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನವು ಈಗ ವಿಶ್ವವಿದ್ಯಾಲಯಮಟ್ಟದಲ್ಲಿ ಇನ್ನುಳಿದ ವಿಷಯಗಳಂತೆ ದೃಶ್ಯಕಲೆಗಳ ಸಂಶೋಧನೆಗೆ ಪ್ರಾಧಾನ್ಯ ಸಿಕ್ಕ ಕಾರಣವಾಗಿ ಈಗ ಸಾಕಷ್ಟು ವಿದ್ಯಾರ್ಥಿಗಳು, ಅಧ್ಯಾಪಕರು ತಮ್ಮನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಕಾರಣವಾಗಿದೆ.

ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಹೆಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳನ್ನು ಇಲ್ಲಿ ೧. ಪಿಎಚ್.ಡಿ. ಪ್ರಬಂಧಗಳು. ೨. ಎಂ.ಫಿಲ್. ಪ್ರಬಂಧಗಳು, ೩. ಡಿ. ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ.

ಕರ್ನಾಟಕದ ವಿಶ್ವವಿದ್ಯಾಲಯಮಟ್ಟದಲ್ಲಿ ಚಿತ್ರಕಲೆಯ ಕುರಿತು ಎಸ್. ಸಿ. ಪಾಟೀಲ ಅವರು ೧೯೮೩ರಲ್ಲಿ **"ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ"**[೭] ಎಂಬ ಕಿರು ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ನಡೆದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರು ಸಂಶೋಧನಾ ಅಧ್ಯಯನವಾಗಿದೆ. ಆನಂತರ ೧೯೮೭ರಲ್ಲಿ ಡಾ. ಚೂಡಾಮಣಿ ನಂದಗೋಪಾಲರವರ **"ಡ್ಯಾನ್ಸ್ ಅಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್"**[೮] ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಕೆ. ಹಿರೇಮಠರ **"ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ"**[೯] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಬಂದಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಕೆಲವು ಪ್ರಯತ್ನಗಳಾಗಿವೆ.

೧. ಪಿಎಚ್.ಡಿ. ಮಹಾಪ್ರಬಂಧಗಳು

ದೃಶ್ಯಕಲೆಯನ್ನೇ ಅಧ್ಯಯನದ ಪ್ರಧಾನ ಉದ್ದೇಶವಾಗಿಟ್ಟುಕೊಂಡು ಬಂದ ಸಂಶೋಧನಾ

---

೦೭. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ.ಧಾರವಾಡ, ೧೯೮೩.

೦೮. ಡಾ. ಚೂಡಾಮಣಿ ನಂದಗೋಪಾಲ: "ಡ್ಯಾನ್ಸ್ ಅಂಡ್ ಆದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್", ಮೈಸೂರು ವಿ.ವಿ.–೧೯೮೭

೦೯. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೮೭

ಅಧ್ಯಯನ ೧೯೯೧ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಎಸ್.ಸಿ. ಪಾಟೀಲ ಅವರ **"ಕರ್ನಾಟಕದ ಜನಪದ ಚಿತ್ರಕಲೆ"**[೧೦] ಎಂಬ ಪಿಹೆಚ್.ಡಿ. ಪ್ರಬಂಧ ಹೊರಬಂದಿದ್ದು ಪೂರ್ಣಪ್ರಮಾಣದಲ್ಲಿ ಚಿತ್ರಕಲೆಯನ್ನೇ ಕುರಿತು ಸಂಶೋಧನೆ ನಡೆಸಿದ ಕರ್ನಾಟಕದ ಮೊಟ್ಟ ಮೊದಲ ಪಿಹೆಚ್.ಡಿ ಮಹಾಪ್ರಬಂಧವಾಗಿದೆ. ಮುಂದೆ ನಾಲ್ಕು ವರ್ಷಗಳ ನಂತರ ೧೯೯೫ ರಲ್ಲಿ **"ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು"**[೧೧] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅ.ಲ. ನರಸಿಂಹನ್ ಅವರಿಂದ ಸಲ್ಲಿಸಲ್ಪಟ್ಟಿತು. ೧೯೯೭ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪುಷ್ಪಾ ದ್ರಾವಿಡ ಅವರು **"ಅನಿವಾಸಿ ಭಾರತೀಯ ಕಲಾವಿದ ದಿ ರೋರಿಕ್‌ರ ಜೀವನ ಮತ್ತು ಕಲಾಕೃತಿಗಳು"**[೧೨] ಎಂಬ ವಿಷಯದ ಮೇಲೆ, ೧೯೯೮ರಲ್ಲಿ ಸಂಪದಾ ಭಟ್ ಅವರು **"ಹಿಂದುಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು"**[೧೩] ಎಂಬ ವಿಷಯದ ಕುರಿತು, ೨೦೦೨ ರಲ್ಲಿ ಯಾದಪ್ಪ ಪರದೇಶಿ ಅವರು **"ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ"**[೧೪], ಶಿವಾನಂದ ಬಂಟನೂರ **"ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ"**,[೧೫] ಗಿರೀಶ ಕುಮಾರ ಅವರ **"ಬುಡಕಟ್ಟು ಚಿತ್ರಕಲೆ"**,[೧೬] ಲಕ್ಷ್ಮೀದೇವಿ ಗವಾಯಿಯವರ **"ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ"**[೧೭], ಶರಣಪ್ಪ ಕೋಲ್ಕಾರ ಅವರ **"ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ"**,[೧೮] ಸೌಮ್ಯಾ ಅವರ **"ಯಂತ್ರಾ ದಿ ವಿಜ್ಯುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್"**[೧೯], ಪ್ರಮೀಳಾ ಲೋಚನ ಅವರ **"ಮೈಂಡ್, ಮ್ಯೂಸಿಕ್ ಅಂಡ್ ಕಲರ್ ಎಕ್ಸಪೋಸೆಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್"**[೨೦] ೨೦೦೩ರಲ್ಲಿ ವೀಣಾ ಶೇಖರ್ ಮಂಡಿಸಿದ **"ಎ ಸ್ಟಡಿ ಆಫ್ ಹಿಸ್ಟಾರಿಕಲ್**

---

೧೦. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೮೧.

೧೧. ಡಾ. ಅ.ಲ. ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೮

೧೨. ಡಾ. ಪುಷ್ಪಾ ದ್ರಾವಿಡ್ : ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೭.

೧೩. ಡಾ. ಸಂಪದಾ ಭಟ್ : ಹಿಂದುಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ೧೯೯೮

೧೪. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟದ ಭಿತ್ತಿ ಚಿತ್ರಕಲೆ – ಒಂದು ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೧.

೧೫. ಡಾ. ಶಿವಾನಂದ ಬಂಟನೂರು : ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ: ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೬. ಡಾ. ಗಿರೀಶ ಕುಮಾರ : ಬುಡಕಟ್ಟು ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೭. ಡಾ. ಲಕ್ಷ್ಮೀದೇವಿ ಗವಾಯಿ : ಪಿಎಚ್.ಡಿ. ಮಹಾಪ್ರಬಂಧ "ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ. ೨೦೦೨.

೧೮. ಡಾ. ಶರಣಪ್ಪ ಕೋಲ್ಕರ್ : ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೨.

೧೯. ಡಾ. ಸೌಮ್ಯಾ : ಯಂತ್ರಾ ದಿ ವಿಜುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್ ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨

೨೦. ಡಾ. ಪ್ರಮೀಳಾ ಲೋಚನ್ : ಮೈಂಡ್ ಕಸಲರ್ ಎಕ್ಸ್‌ಪೋಸೆಸ್ ಅಂಡ್ ಡೆವೆಲಪಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨.

ಪೇಂಟಿಂಗ್ ಆಫ್ ಕರ್ನಾಟಕ"[೨೧](೧೭೮೦-೧೮೨೦), ಸಿದ್ಧಲಿಂಗಸ್ವಾಮಿ ಹಿರೇಮಠರ **"ಕಲಾವಿದ ಆರ್.ಎಂ. ಹಡಪದ – ಒಂದು ಅಧ್ಯಯನ"**[೨೨], ಎಸ್. ಸಿ. ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **"ಎ ಕ್ರಿಟಿಕಲ್ ಅನಾಲಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಡ್ರಾಯಿಂಗ್ ಅಂಡ್ ಪೇಂಟಿಂಗ್"**[೨೩] ಅವರ ಎರಡನೆಯ ಪಿಹೆಚ್.ಡಿ ಮಹಾಪ್ರಬಂಧ, ೨೦೦೪ ರಲ್ಲಿ ವಿ. ಎಂ. ಬಾಗಾಯತ್ ಅವರ **"ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ – ಒಂದು ಅಧ್ಯಯನ"** (೧೪೦೦ - ೧೮೦೦),[೨೪] ಶಿವಕುಮಾರ ಜಿ. ಅವರ **"ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು",**[೨೫] ಪಿ. ಗೌರೀಶ ಅವರ **"ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ",**[೨೬] ಶಶಿಕಲಾ ಹೂಗಾರ ಅವರ **"ಕರ್ನಾಟಕ ತೊಗಲು ಗೊಂಬೆ ಚಿತ್ರಕಲೆ"**[೨೭] ೨೦೦೫ರಲ್ಲಿ ಶಿವಪ್ರಕಾಶ ತುಕ್ಕಣ್ಣವರ ಅವರ **"ಕರ್ನಾಟಕ ರಥ ಶಿಲ್ಪಕಲೆ"**[೨೮], ಎಸ್. ವಿ. ವೆಂಕಟೇಶಯ್ಯ ಅವರ **"ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು: ಒಂದು ಅಧ್ಯಯನ"**[೨೯], ಎಚ್. ಎನ್. ಚಿತ್ರಗಾರ ಅವರ **"ಕರ್ನಾಟಕ ಹಸ್ತಪ್ರತಿ ಚಿತ್ರಕಲೆ"**[೩೦], ೨೦೦೬ರಲ್ಲಿ ವಿಶ್ವೇಶ್ವರಿ ತಿವಾರಿ ಅವರ **"ಹೈದ್ರಾಬಾದ್–ಕರ್ನಾಟಕದ ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು",**[೩೧] ೨೦೦೭ರಲ್ಲಿ ಮಲ್ಲಿಕಾರ್ಜುನ ಬಾಗೋಡಿ ಇವರ **"ಸುರಪುರ ಶೈಲಿಯ ಚಿತ್ರಕಲೆ – ಒಂದು ಅಧ್ಯಯನ"**[೩೨] ಮತ್ತು ಗೀತಾಂಜಲಿ ಬಿ.ಆರ್. ಅವರ **"ಐತಿಹಾಸಿಕ ದೀಪಸ್ತಂಭಗಳು",**[೩೩] ಲಕ್ಷ್ಮಣಸಿಂಗ್ ಆರ್. ರಾಠೋಡ್ ಅವರ **"ಅನ್ವಯಿಕ ಕಲೆ, ಹಿಂದಿನಿಂದ ಇಂದಿನವರೆಗೆ",**[೩೪]

---

೨೧. ಡಾ. ವೀಣಾಶೇಖರ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦–೧೮೨೦), ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೩.

೨೨. ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠ : ಕಲಾವಿದ ಆರ್,ಎಮ್. ಹಡಪದ, ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೩.

೨೩. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಎಜ್ಯಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ ೨೦೦೨.

೨೪. ಡಾ. ವಿ.ಎಂ. ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೪.

೨೫. ಡಾ. ಜಿ. ಶಿವಕುಮಾರ : ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾನಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. ೨೦೦೪.

೨೬. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. ೨೦೦೪.

೨೭. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ., ಹಂಪಿ. ೨೦೦೪

೨೮. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೪.

೨೯. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೫.

೩೦. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿ. ೨೦೦೫.

೩೧. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. ೨೦೦೬

೩೨. ಡಾ. ಮಲ್ಲಿಕಾರ್ಜುನ ಸಿ.ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ–ಒಂದು ಅಧ್ಯಯನ, ಪಿಎಚ್.ಡಿ. ಮ. ಪ್ರ, ಗು.ವಿ.ಗು. ೨೦೦೭.

೩೩. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೭.

೩೪. ಡಾ. ಲಕ್ಷ್ಮಣಸಿಂಗ್ ಆರ್.ರಾಠೋಡ : ಅನ್ವಯಿಕ ಕಲೆ–ಹಿಂದಿನಿಂದ ಇಂದಿನವರೆಗೆ, ಪಿಎಚ್.ಡಿ. ಮ. ಪ್ರ, ಮೈಸೂರು ವಿ.ವಿ.೨೦೦೭.

೨೦೦೮ ರಲ್ಲಿ ಮೋಹನ್ ಪಂಚಾಳ ಅವರ **"ಕಲಾವಿದ ಎಸ್.ಎಂ. ಪಂಡಿತ – ಬದುಕು ಮತ್ತು** PĀ E,[೩೫] ವಿಶ್ವನಾಥ ಎ.ಎಸ್. ಅವರ **"ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು"**[೩೬], ಪಿ.ಟಿ. ಲಕ್ಕಣ್ಣನವರ ಅವರ **"ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ",**[೩೭] ರವೀಂದ್ರ ಕಮ್ಮಾರ ಅವರ **"ಕಲಾವಿದ ವಿ.ಬಿ.ಹಿರೇಗೌಡರ – ಬದುಕು ಮತ್ತು ಕಲಾಕೃತಿಗಳು"**[೩೮], ೨೦೦೯ರಲ್ಲಿ ರೆಹಮಾನ್ ಪಟೇಲ ಅವರ **"ಕರ್ನಾಟಕದ ಬಿದ್ರಿ ಕಲೆ – ಒಂದು ಅಧ್ಯಯನ"**[೩೯], ೨೦೧೦ರಲ್ಲಿ ಶ್ರೀಮತಿ ಸುನಿತಾ ಪಾಟೀಲರ **"ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು"**[೪೦], ೨೦೧೧ರಲ್ಲಿ ನಿಂಗಪ್ಪ ಎಂ. ಅಂಗಡಿಯವರ **"ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ",**[೪೧] ಕಿಶೋರ ಎನ್. ದಾಟನಾಳ ಅವರ **"ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ"**[೪೨], ಕಾಶಿನಾಥ ಡಿ. ವಡ್ಡರ್ ಅವರ **"ಶಾಂತಿನಿಕೇತನದ ಭಿತ್ತಿಚಿತ್ರಗಳು',**[೪೩] ಸತೀಶ್‌ಕುಮಾರ ವಲ್ಲ್ಯೇಪೂರೆಯವರ **'ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು"**[೪೪], ಶಂಕರ ಕುಂದಗೋಳ ಅವರ **"ಕರ್ನಾಟಕದ ಗಂಜೀಫಾ ಚಿತ್ರಕಲೆ"**[೪೫], ೨೦೧೨ರಲ್ಲಿ ಭಾರತಿ ಮರವಂತಿ ಅವರ **"ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ"**[೪೬], ಕಾಮಾಕ್ಷಿ ಸಿ. ಸೊಪ್ಪಣ ಅವರ **"ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ"**[೪೭] ಇವು ದೃಶ್ಯಕಲೆಗಳ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮಾಡುತ್ತಿದ್ದಾರೆ.

---

೩೫. ಡಾ. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ, ಪಿಎಚ್.ಡಿ. ಮ.ಪ್ರ, ಗು.ವಿ.ಗು. ೨೦೦೮.

೩೬. ಡಾ. ವಿಶ್ವನಾಥ ಎ.ಎಸ್. : ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೮.

೩೭. ಡಾ.ಪಿ.ಟಿ. ಲಕ್ಕಣ್ಣನವರ : ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೮.

೩೮. ಡಾ. ರವೀಂದ್ರ ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೮.

೩೯. ಡಾ. ರೆಹಮಾನ್ ಪಟೇಲ : ಕರ್ನಾಟಕದ ಬಿದ್ರಿ ಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು – ೨೦೦೯

೪೦. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೪೧. ಡಾ. ನಿಂಗಪ್ಪ ಎಂ. ಅಂಗಡಿ : ಗಾಜೀನ ಮೇಲಿನ ಚಿತ್ರಗಳು – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೪೨. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦.

೪೩. ಡಾ. ಕಾಶಿನಾಥ ಡಿ. ವಡ್ಡರ : ಶಾಂತಿನಿಕೇತರದ ಭಿತ್ತಿಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. ೨೦೧೧

೪೪. ಡಾ. ಸತೀಶ್‌ಕುಮಾರ ವಲ್ಲ್ಯೇಪೂರೆ : ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು, ೨೦೧೧.

೪೫. ಡಾ. ಶಂಕರ ಕುಂದಗೋಳ : ಕರ್ನಾಟಕದ ಗಂಜೀಫಾ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೧

೪೬. ಡಾ. ಭಾರತಿ ಮರವಂತಿ : ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. ೨೦೧೨

೪೭. ಡಾ. ಕಾಮಾಕ್ಷಿ ಸಿ. ಸೊಪ್ಪಣ : ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. ೨೦೧೨



೨. ಡಿ. ಲಿಟ್ ಮಹಾಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲ ಬಾರಿಗೆ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್ ಪ್ರಬಂಧಗಳು ಹೀಗಿವೆ. ೨೦೦೧ರಲ್ಲಿ ದೇವದಾಸ ಕಳಸದ ಇವರ **"ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ",**[೪೮] ೨೦೦೫ರಲ್ಲಿ ಬಂದ ಆನಂದ ಪೂಜಾರರ **"ಕರಾವಳಿಯ ಕಾವಿ ಚಿತ್ರಕಲೆ".**[೪೯] ಡಿ.ಎ. ಉಪಾಧ್ಯ ಅವರ **"ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ",**[೫೦] ೨೦೧೦ರಲ್ಲಿ ಎಂ.ಎಸ್. ಮೂರ್ತಿ ಅವರ **"ಮಕ್ಕಳ ಮನಸ್ಸಿನ ಚಿತ್ರಗಳು"**[೫೧] ಮುಖ್ಯವಾಗಿವೆ. ಈ ಡಿ.ಲಿಟ್ ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಕನ್ನಡ ವಿಶ್ವವಿದ್ಯಾಲಯವು ಪರಿಶೀಲಿಸಿ, ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್ ಸಂಶೋಧನಾ ಅಧ್ಯಯನಕ್ಕೆ ಅವಕಾಶವಿದೆ.

೩. ಎಂ.ಫಿಲ್. ಅಧ್ಯಯನಗಳು

ಕರ್ನಾಟಕದಲ್ಲಿ ಮೊದಲ ಬಾರಿಗೆ ಕಲೆಯ ಬಗ್ಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು, ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಕಲೆಯ ಕುರಿತಂತೆ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್ ಸಂಶೋಧನಾ ಅಧ್ಯಯನಗಳು ಹೀಗಿವೆ.

೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **"ಚಿತ್ರಕಲಾವಿದ ಜೆ.ಎಸ್.ಖಂಡೇರಾವ್: ಒಂದು ಅಧ್ಯಯನ",**[೫೨] ೨೦೦೩ ರಲ್ಲಿ ಎ.ಎಸ್. ವಿಶ್ವನಾಥ ಅವರ **"ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು",**[೫೩] ೨೦೦೫ ರಲ್ಲಿ ಸಿ.ಡಿ. ಜಟ್ಟೆಣ್ಣವರ ಅವರ **"ಎಂ.ವಿ. ಮಿಣಜಗಿ ಜೀವನ ಮತ್ತು ಕಲಾಬದುಕು",**[೫೪] ಶಂಕರ ಕುಂದಗೋಳರ **"ಡಿ.ವಿ.**

---

೪೮. ಡಾ. ದೇವದಾಸ ಕಳಸದ : ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೧

೪೯. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೫.

೫೦. ಡಾ. ಡಿ.ವಿ. ಉಪಾಧ್ಯ : ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೫.

೫೧. ಡಾ. ಎಂ.ಎಸ್. ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೫೨. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೨.

೫೩. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೩

೫೪. ಸಿ.ಡಿ. ಜಟ್ಟೆಣ್ಣವರ : ಎಂ.ವಿ.ಮಿಣಜಗಿ – ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ.ಹಂಪಿ–೨೦೦೫.



ಹಾಲಭಾವಿಯವರ ಜೀವನ ಮತ್ತು ಕಲಾಬದುಕು",[೫೫] ೨೦೦೬ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ **"ವಿಜಯನಗರದ ಭಿತ್ತಿ ಚಿತ್ರಕಲೆ",**[೫೬] ರಾಜಕುಮಾರ ಎಸ್. ಕಾಳೆ ಅವರ **"ಔಂಧ ಗ್ಯಾಲರಿ",**[೫೭] ಕುರಿತು, ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **"ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು",**[೫೮] ಬಿ.ಎಂ. ಪಾಟೀಲರ **"ನಿಪ್ಪಾಣಿವಾಡೆಯ ಭಿತ್ತಿ ಚಿತ್ರಗಳು",**[೫೯] ಉಮೇಶ ಎ.ಎಸ್.ರ **"ಕರ್ನಾಟಕದ ಜೈನ ಚಿತ್ರಕಲೆ",**[೬೦] ರವಿ ನಾಯಕರ **"ಕಿನ್ನಾಳ ಕಲೆ",**[೬೧] ಶಶಿಕಾಂತ ಬಸರಿಕಟ್ಟಿಯವರ **"ಕಲಘಟಗಿಯ ಚಿತ್ರಕಲೆ",**[೬೨] ಶೈಲಾ ಬರಡೋಲರ **"ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು"**[೬೩] ಎಂಬ ಪ್ರಬಂಧಗಳು ಹೊರಬಂದಿವೆ.

೨೦೦೮ರಲ್ಲಿ ಕೃಷ್ಣವೇಣಿಯವರ **"ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ"**[೬೪] ಯೋಗೀಶ ಹೆಚ್.ರವರ **"ಚಿತ್ರದುರ್ಗಜಿಲ್ಲೆಯ ಚಿತ್ರಕಲೆ",**[೬೫] ಮಹಾಕೂಟೇಶ್ವರಗೌಡ ಪಾಟೀಲರ **"ಬೆಳಗಾವಿ ಜಿಲ್ಲೆಯ ಚಿತ್ರಕಲೆ",**[೬೬] ಸುರೇಶ ಬಡಿಗೇರರ **"ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ",**[೬೭] ಸಂತೋಷಕುಮಾರ ಕುಲಕರ್ಣಿ ಅವರ **"ದಾವಣಗೆರೆ ಜಿಲ್ಲೆಯ ಚಿತ್ರಕಲೆ",**[೬೮] ಜಯರಾಜ ಚಿಕ್ಕಪಾಟೀಲರ **"ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು",**[೬೯] ಮಹೇಶ ಉಮತಾರ ಅವರ **"ಬಿ.ಪಿ. ಬಾಯರಿ: ಕಲೆ ಮತ್ತು ಕಲಾ ಸಾಹಿತ್ಯ"**[೭೦] ಗಿರಿಜಾ ಬಿರಾದಾರರ **"ವಿಜಾಪುರ ಜಿಲ್ಲೆಯ ಚಿತ್ರಕಲೆ",**[೭೧] ಬಸಯ್ಯ ಗವಿಮಠ ಅವರ **"ಬಾಗಲಕೋಟ ಜಿಲ್ಲೆಯ ಚಿತ್ರಕಲೆ",**[೭೨] ಕೃಷ್ಣೆಗೌಡ ಹೆಚ್.ಎನ್. ಅವರ **"ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ",**[೭೩]

---

೫೫. ಶಂಕರ ಕುಂದಗೋಳ : ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೬

೫೬. ಸುಚಿತ್ರಾ ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೬.

೫೭. ರಾಜಕುಮಾರ ಎಸ್. ಕಾಳೆ : ಔಂಧ ಗ್ಯಾಲರಿ ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭.

೫೮. ಜಿತೇಂದ್ರ ಜಿ. ಕೋತಳಿಕರ : ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭.

೫೯. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೬೦. ಉಮೇಶ ಎ.ಎಸ್. : ಕರ್ನಾಟಕದ ಜೈನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೬೧. ರವಿ ನಾಯಕ : ಕಿನ್ನಾಳ ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೬೨. ಶಶಿಕಾಂತ ಬಸರಿಕಟ್ಟಿ : ಕಲಘಟಗಿಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭.

೬೩. ಶೈಲಾ ಬರಡೋಲ : ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೬೪. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೬೫. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೬೬. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೬೭. ಸುರೇಶ ಬಡಿಗೇರ : ಕನ್ನಡ ವಿ.ವಿ. ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೬೮. ಸಂತೋಷಕುಮಾರ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೬೯. ಜಯರಾಜ ಚಿಕ್ಕಪಾಟೀಲ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೭೦. ಮಹೇಶ ಉಮತಾರ : ಬಿ.ಪಿ. ಬಾಯರಿ – ಕಲೆ ಮತ್ತು ಕಲಾ ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೭೧. ಗಿರಿಜಾ ಬಿರಾದಾರ : ವಿಜಾಪುರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೭೨. ಬಸಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೭೩. ಕೃಷ್ಣೇಗೌಡ ಹೆಚ್.ಎನ್.: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

ಮಹಾಂತೇಶ ಪಲದಿನ್ನಿ ಅವರ **"ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು"**[೩೪] ಮತ್ತು ೨೦೦೯ರಲ್ಲಿ ಕಾಂತರಾಜ ಅವರ **"ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ"**,[೩೫] ರಂಗಸ್ವಾಮಿ ಅವರ **"ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ"**[೩೬] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು**,[೩೭] ೨೦೧೦ರಲ್ಲಿ ಭಾನುಮತಿ ಕೆ.ಎಲ್. ಅವರ **"ಚಿತ್ರಕಲಾವಿದ ಎಂ.ಜಿ. ವಾಚೇದಮಠ : ಬದುಕು ಮತ್ತು ಕಲಾಕೃತಿಗಳು"**,[೩೮] ದಿನೇಶ ಬಿ. ಅವರ **"ಚನ್ನಪಟ್ಟಣದ ಚಿತ್ತಾರ ಗೊಂಬೆಗಳು"**,[೩೯] ವಾದಿರಾಜ ಎ. ಅವರ **"ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ, ಕಲಾಕೃತಿಗಳು"**,[೪೦] ಚಿಂತಾಮಣಿ ಅವರ **"ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ"**[೪೧].

೨೦೧೨ರಲ್ಲಿ ಮಲ್ಲಿಕಾರ್ಜುನ ಕೆ.ಜಿ. ಅವರ **ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು**,[೪೨] ರಾಜೀವ್. ಎಂ.ವೈ ಅವರ **ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು**,[೪೩] ರಾಘವೇಂದ್ರ ಅವರ **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ**,[೪೪] ವೈಶಾಲಿ ಕೆ. ಕಾಂಬಳೆ ಅವರ **ಬೀದರ ಜಿಲ್ಲೆಯ ಚಿತ್ರಕಲೆ**,[೪೫] ಶಶಿಕಲಾ ಜಿ.ವಿ. ಅವರ **ಕರ್ನಾಟಕದ ವ್ಯಂಗ್ಯ ಚಿತ್ರಕಲೆ**,[೪೬] ಎನ್.ಜಿ. ಅಂಬರೀಶ್ ಅವರ **ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ**,[೪೭] ಸುರೇಂದ್ರನಾಥ ಡಿ.ಆರ್. ಅವರ **ಕರಾವಳಿ ಕರ್ನಾಕಟದ ಕ್ರೈಸ್ತಚಿತ್ರಕಲೆ**,[೪೮] ಶ್ವೇತ ಡಿ.ಎಸ್. ಅವರ **ರಾಜಾ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ**,[೪೯] ಮಹಾದೇವಪ್ಪ ಸಣತಂಗಿಯವರ **ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ**[೫೦] ಇವುಗಳೆಲ್ಲಾ ಎಂ.ಫಿಲ್ ಪ್ರಬಂಧಗಳಾಗಿವೆ.

---

೩೪. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೩೫. ಕಾಂತರಾಜ : ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೯

೩೬. ರಂಗಸ್ವಾಮಿ : ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೯

೩೭. ಶ್ಯಾಮ ತಾ. ಜಮಾದಾರ : ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೯

೩೮. ಭಾನುಮತಿ ಕೆ.ಎಲ್. : ಚಿತ್ರಕಲಾವಿದ ಎಂ.ಜಿ. ವಾಚೇದಮಠ – ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦

೩೯. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೪೦. ವಾದಿರಾಜ ಎ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ, ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೪೧. ಮಹೇಶ ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೪೨. ಮಲ್ಲಿಕಾರ್ಜುನ ಕೆ.ಜಿ. : ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೪೩. ರಾಜೀವ ಎಂ.ವೈ. : ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೪೪. ರಾಘವೇಂದ್ರ : ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೪೫. ವೈಶಾಲಿ ಕೆ. ಕಾಂಬಳೆ : ಬೀದರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೪೬. ಶಶಿಕಲಾ ಜಿ.ವಿ. : ಕರ್ನಾಟಕದ ವ್ಯಂಗ್ಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೪೭. ಎನ್. ಜಿ. ಅಂಬರೀಶ್ : ಕರ್ನಾಟಕದ ಆಧುನಿಕ ಭಿತ್ತಿಚಿತ್ರ/ಶಿಲ್ಪಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೪೮. ಸುರೇಂದ್ರನಾಥ ಡಿ. ಆರ್. : ಕರಾವಳಿ ಕರ್ನಾಟಕದ ಕ್ರೈಸ್ತಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೪೯. ಶ್ವೇತಾ ಡಿ. ಎಸ್. : ರಾಜಾ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೫೦. ಮಹಾದೇವಪ್ಪ ಸಣತಂಗಿ : ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨



ಇಲ್ಲಿಯವರೆಗೆ ಕರ್ನಾಟಕದಲ್ಲಿ ಒಟ್ಟು ಮೂವತ್ತೊಂದು ಎಂ.ಫಿಲ್. ಪದವಿಯ ಸಂಶೋಧನಾ ಪ್ರಬಂಧಗಳು ಹೊರಬಂದಿದ್ದು, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎರಡು, ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಇಪ್ಪತ್ತೊಂಬತ್ತು ಎಂ.ಫಿಲ್. ಪ್ರಬಂಧಗಳು ಹೊರಬಂದಿವೆ. ಇದಲ್ಲದೆ ಇನ್ನೂ ಅನೇಕ ಪಿಹೆಚ್.ಡಿ., ಎಂ.ಫಿಲ್ ಮತ್ತು ಡಿ.ಲಿಟ್ ಪ್ರಬಂಧಗಳು ರಚನೆಯ ಹಂತದಲ್ಲಿವೆ. ಇವುಗಳಲ್ಲದೆ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳ ಹಂತದಲ್ಲಿಯೂ ಕಿರುಶೋಧ ಪ್ರಬಂಧಗಳು ರಚನೆಯಾಗುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಧಾರವಾಡ, ಶಿವಮೊಗ್ಗ, ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ.

ಎ.ಟಿ.ಸಿ. (ಆರ್ಟ್ ಟೀಚರ್ ಕೋರ್ಸ್) ಐದು ವರ್ಷದ ವಿಶೇಷ ಪರಿಣಿತಿ, ಚಿತ್ರಶಿಲ್ಪ, ಗ್ರಾಫಿಕ್, ವಾಣಿಜ್ಯ ಕಲೆ, ಡಿಪ್ಲೋಮಾ ಅಂತಿಮ ವರ್ಷದ ತರಗತಿಗಳಲ್ಲಿ ಈ ಕೋರ್ಸ್‌ನ ಭಾಗವಾಗಿ ಕಿರು ಪ್ರಬಂಧಗಳನ್ನು ರಚಿಸಿದ್ದು, ಇವುಗಳ ಸಂಖ್ಯೆ ಮೂರು ಸಾವಿರಕ್ಕೂ ಅಧಿಕವಾಗಿದೆ. ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ (ಬಿ.ಎಫ್.ಎ), ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ (ಬಿ.ವಿ.ಎ.) ಪದವಿ ಫೈನ್ ಆರ್ಟ್ಸ್ (ಎಮ್.ಎಫ್.ಎ) ಸ್ನಾತಕೋತ್ತರ ಪದವಿತರಗತಿಗಳಿಗೆ ಅಧ್ಯಯನದ ಭಾಗವಾಗಿ ಈ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗುತ್ತಿವೆ.

ಈ ಕಿರು ಪ್ರಬಂಧಗಳು ವಿದ್ಯಾರ್ಥಿಗಳು ಆಯಾ ಕೋರ್ಸಿನ ಅಧ್ಯಯನದ ಸಂದರ್ಭದಲ್ಲಿ ನಡೆಸಿದ ಸಂಶೋಧನಾ ಅಧ್ಯಯನಗಳಾಗಿದ್ದು, ಇವು ಮುಂದೆ ಸಂಶೋಧನಾ ಅಧ್ಯಯನಕ್ಕೆ ಅಭ್ಯರ್ಥಿಗಳು ತೊಡಗಿಸಿಕೊಳ್ಳಲು ಈ ಹಂತದ ಅಧ್ಯಯನಗಳು ತುಂಬಾ ಸಹಾಯಕಾರಿಯಾಗಿವೆ. ಮತ್ತು ಅನೇಕ ವೈವಿಧ್ಯಮಯವಾದ ವಿಷಯದ ಈ ಕಿರುಪ್ರಬಂಧಗಳು ಸಂಶೋಧನಾ ಅಧ್ಯಯನಕ್ಕೆ ಆಕರ ಸಾಮಗ್ರಿಯಾಗಿವೆ.

ಹೀಗೆ ಕರ್ನಾಟಕದಲ್ಲಿ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಸಂಶೋಧನ ಅಧ್ಯಯನವು ನಡೆದುಬಂದ ಹಿನ್ನೆಲೆಯ ಸ್ಥೂಲ ನೋಟವನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಒಟ್ಟಾರೆ ಇನ್ನುಳಿದ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಯನ್ನು ಗಮನಿಸಿದರೆ ಈ ಕ್ಷೇತ್ರದಲ್ಲಿ ನಡೆದ ಸಂಶೋಧನ ಅಧ್ಯಯನ ತುಂಬಾ ಕಡಿಮೆ ಪ್ರಮಾಣದ್ದಾಗಿದೆ. "ಇಲ್ಲಿ ನಡೆದ ಸಂಶೋಧನಾ ಅಧ್ಯಯನಗಳಲ್ಲಿ ಪ್ರಾಥಮಿಕ ಆಕರಗಳ ಸಂಗ್ರಹ ಸಮೀಕ್ಷೆ ರೂಪದ ಸಂಶೋಧನಾ ಅಧ್ಯಯನಗಳೇ ಹೆಚ್ಚಾಗಿವೆ. ಅಲ್ಲಲ್ಲಿ ವಿಶ್ಲೇಷಣಾತ್ಮಕ ಅಧ್ಯಯನಗಳು ಮತ್ತು ಅಧ್ಯಯನದ ಹಿಂದಿನ ತಾತ್ವಿಕ ಸಿದ್ಧಾಂತಗಳ ಪರಿಕಲ್ಪನೆಯನ್ನು ಕಟ್ಟಿಕೊಡುವ ಪ್ರಯತ್ನದ ಸಂಶೋಧನ ಅಧ್ಯಯನಗಳು ಸ್ವಲ್ಪ ಪ್ರಮಾಣದಲ್ಲಿ ನಡೆದಿವೆ ಎಂದು ಡಾ. ಎಸ್.ಸಿ. ಪಾಟೀಲ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ವಾಸ್ತವದ ಚಿತ್ರಣವಾಗಿದೆ."



ಪ್ರಸ್ತುತ ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳ ಕುರಿತು ನಡೆದ ಅಧ್ಯಯನದ ಸಮೀಕ್ಷೆ

೧೮೭೪ರಲ್ಲಿ ಜೇಮ್ಸ್ ಬರ್ಜಸ್ ಅವರ **ರಿಪೋರ್ಟ್ ಆಫ್ ದಿ ಫಸ್ಟ್ ಸೆಸ್ಸನ್ಸ್ ಆಪರೇಷನ್ ಇನ್ ದಿ ಬೆಳಗಾಂ ಅಂಡ್ ಕಲಾದಗಿ ಡಿಸ್ಟ್ರಿಕ್ಟ್**[೯೧] ಎಂಬ ಲೇಖನವು ಇಂಡಿಯನ್ ಆ್ಯಂಟಿಕ್ವೂರಿಯಲ್ಲಿ ಪ್ರಕಟಗೊಂಡಿದೆ. ಇಲ್ಲಿ ಬಾದಾಮಿ ಪರಿಸರದ ದೇವಾಲಯ, ವಾಸ್ತು ಶಿಲ್ಪ ಕುರಿತಾದ ವಿವರಗಳಿವೆ. ೧೮೮೦ರಲ್ಲಿ ಬಂದ ಫರ್ಗ್ಯೂಸನ್ ಮತ್ತು ಬರ್ಜಸ್ ಅವರ **ಕೇವ್ ಟೆಂಪಲ್ಸ್ ಆಫ್ ಇಂಡಿಯಾ**[೯೨] ಎಂಬ ಗ್ರಂಥದಲ್ಲಿ ಬಾದಾಮಿಯ ಚಾಲುಕ್ಯರ ದೇವಾಲಯಗಳನ್ನು ಕುರಿತು ಚರ್ಚಿಸಿದ್ದಾರೆ. ರ್‍ಯಾಡ್‌ಕ್ಲಿಫೇ, ಕ್ಯಾರೊಲ್ ಎಲಿಜಬೆತ್ ಅವರ **ಅರ್ಲಿ ಚಾಲುಕ್ಯಾ ಸ್ಕಲ್ಪ್‌ಟರ್ಸ್**[೯೩] ಎಂಬ ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧವನ್ನು ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ್ದಾರೆ. ಈ ಗ್ರಂಥದಲ್ಲಿ ಚಾಲುಕ್ಯರ ಕಾಲದ ವಾಸ್ತುಶಿಲ್ಪ, ಗುಹಾಲಯಗಳ ಕುರಿತಾದ ವಿವರಗಳಿವೆ.

೧೯೬೯ರಲ್ಲಿ ಡಾ. ಶಿವರಾಮ ಕಾರಂತರವರು ಬರೆದ **ಚಾಲುಕ್ಯ ವಾಸ್ತು ಮತ್ತು ಶಿಲ್ಪ**[೯೪] ಎಂಬ ಕೃತಿಯಲ್ಲಿ ಚಾಲುಕ್ಯ ದೇವಾಲಯಗಳ ವಾಸ್ತು ಶಿಲ್ಪಗಳನ್ನು ಸ್ಥೂಲವಾಗಿ ಪರಿಚಯಿಸಿದ್ದಾರೆ. ೧೯೭೩ರಲ್ಲಿ ನಿರಂಜನ ಅವರ ಸಂಪಾದನೆಯಲ್ಲಿ ಹೊರಬಂದ **ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ (ಸಂ–೫) ಕಲೆ ಸಾಹಿತ್ಯ**[೯೫] ಎಂಬ ವಿಶ್ವಕೋಶದಲ್ಲಿ ಬಾದಾಮಿ ಚಾಲುಕ್ಯರ ಇತಿಹಾಸ, ಪರಂಪರೆ, ದೇವಾಲಯ, ಶಿಲ್ಪಗಳ ಕುರಿತಂತೆ ಲೇಖನಗಳು ಸಂಗ್ರಹಗೊಂಡಿವೆ. ೧೯೭೫ರಲ್ಲಿ ಡಾ. ಶಿವರಾಮ ಕಾರಂತರು ಬರೆದ **"ಭಾರತೇಯ ಶಿಲ್ಪ"**[೯೬] ಎಂಬ ಕೃತಿಯನ್ನು ಪ್ರಕಟಣಾ ಮತ್ತು ಪ್ರಚಾರೋಪನ್ಯಾಸ ವಿಭಾಗದಿಂದ ಪ್ರಕಟಗೊಂಡಿದೆ. ಇಲ್ಲಿ ಪಲ್ಲವರು, ಚೋಳರು, ಬಾದಾಮಿ ಚಾಲುಕ್ಯರು, ಕುಶಾನರು, ಗಂಗರು, ಕದಂಬರು ಮುಂತಾದವರು ಶಿಲ್ಪಕಲೆಗೆ ನೀಡಿದ ಕೊಡುಗೆಯನ್ನು ಕುರಿತು ವಿವರಿಸುವ ಉಪನ್ಯಾಸ ಮಾಲೆ ಇದಾಗಿದೆ.

೧೯೮೪ರಲ್ಲಿ **"ಐಹೊಳೆ ಶಿಲ್ಪ ದರ್ಪಣ"**[೯೭] ಎಂಬ ಕೃತಿಯನ್ನು ವಿರೂಪಾಕ್ಷ ಬಡಿಗೇರ ಅವರು ಬರೆದಿದ್ದಾರೆ. ಇದನ್ನು ಕಾಳಿಕಾ ಪ್ರಕಾಶನ, ಐಹೊಳೆಯವರು ಪ್ರಕಟಿಸಿದ್ದಾರೆ. ಐಹೊಳೆಯಲ್ಲಿನ ದೇವಾಲಯಗಳ ಕುರಿತು ಸ್ಥೂಲ ವಿವರಣೆ ನೀಡುವ ಕೃತಿಯಿದಾಗಿದೆ. ಇದೇ ಅವಧಿಯಲ್ಲಿ ಡಾ. ಎ.ವಿ. ನರಸಿಂಹಮೂರ್ತಿ ಅವರ **ಚಾಲುಕ್ಯ ವಾಸ್ತು ಶಿಲ್ಪ ಪರಿಚಯ**[೯೮]

---

೯೧. ಜೇಮ್ಸ್ ಬರ್ಜಸ್ : ರಿಪೋರ್ಟ್ ಆಫ್ ದಿ ಫಸ್ಟ್ ಸೆಸ್ಸನ್ಸ್ ಆಪರೇಷನ್ ಇನ್ ದಿ ಬೆಳಗಾಂ ಅಂಡ್ ಕಲಾದಗಿ ಡಿಸ್ಟ್‌ಟ್ರಿಕ್ಟ್. ೧೮೭೪

೯೨. ಫರ್ಗ್ಯೂಸನ್ ಮತ್ತು ಬರ್ಜಸ್ : ಕೇವ್ ಟೆಂಪಲ್ಸ್ ಆಫ್ ಇಂಡಿಯಾ, ೧೮೮೦

೯೩. ರ್‍ಯಾಡ್‌ಕ್ಲಿಫೇ, ಕ್ಯಾರೊಲ್ ಎಲಿಜಬೆತ್ : ಅರ್ಲಿ ಚಾಲುಕ್ಯಾ ಸ್ಕಲ್ಪ್‌ಚರ್ಸ್. ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂದ, ನ್ಯೂಯಾಕ್ ವಿಶ್ವವಿದ್ಯಾಲಯ, ನ್ಯೂಯಾರ್ಕ್. ೧೮೮೦

೯೪. ಡಾ. ಶಿವರಾಮ ಕಾರಂತ : ಚಾಲುಕ್ಯ ವಾಸ್ತು ಮತ್ತು ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೬೯

೯೫. ನಿರಂಜನ (ಪ್ರಸಂ.) : ಜ್ಞಾನಗಂಗೋತ್ರಿ, ಕಿರಿಯರ ವಿಶ್ವಕೋಶ ಸಂ–೫, ಕಲೆ ಮತ್ತು ಸಾಹಿತ್ಯ, ಕರ್ನಾಟಕ ಸಹಕಾರಿ ಪ್ರಕಾಶನ, ಮಂದಿರ, ಬೆಂಗಳೂರು. ೧೯೭೩

೯೬. ಡಾ. ಶಿವರಾಮ ಕಾರಂತ : ಭಾರತೇಯ ಶಿಲ್ಪ, ಪ್ರಕಟಣಾ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂ.ವಿ.ಬೆಂಗಳೂರು. ೧೯೭೫

೯೭. ವಿರೂಪಾಕ್ಷ ಬಡಿಗೇರ : ಐಹೊಳೆ ಶಿಲ್ಪ ದರ್ಪಣ, ಕಾಳಿಕಾ ಪ್ರಕಾಶನ, ಐಹೊಳೆ. ೧೯೮೪

೯೮. ಡಾ. ಎ. ವಿ. ನರಸಿಂಹಮೂರ್ತಿ : ಚಾಲುಕ್ಯ ವಾಸ್ತು ಶಿಲ್ಪ ಪರಿಚಯ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೮೪

[illegible]



ಎಂಬ ಕೃತಿಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಪ್ರಕಟಿಸಿದ್ದಾರೆ. ಇಲ್ಲಿ ಚಾಲುಕ್ಯ ಕಾಲದ ವಾಸ್ತು ಮತ್ತು ಶಿಲ್ಪಗಳನ್ನು ಪರಿಚಯಿಸಿಕೊಡುವ ಪ್ರಯತ್ನ ಮಾಡಲಾಗಿದೆ.

೧೯೯೨ರಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಬರೆದ **ಕರ್ನಾಟಕದ ಸಂಸ್ಕೃತಿ ಸಮೀಕ್ಷೆ**[೯೯] ಎಂಬ ಕೃತಿಯನ್ನು ಡಿ.ವಿ.ಕೆ. ಮೂರ್ತಿ ಪ್ರಕಾಶನದವರು ಪ್ರಕಟನೆ ಮಾಡಿದ್ದಾರೆ. ಇಲ್ಲಿ ಕರ್ನಾಟಕದ ಸಂಸ್ಕೃತಿಯನ್ನು ಹಾಗೆಯೇ ಬಾದಾಮಿಯ ಚಾಲುಕ್ಯರ ಇತಿಹಾಸ, ಶಿಲ್ಪ, ಚಿತ್ರಕಲೆಗಳ ಸಂಸ್ಕೃತಿಯನ್ನು ಕುರಿತು ವಿವರಿಸುವ ಕೃತಿ ಇದಾಗಿದೆ. ೧೯೯೩ರಲ್ಲಿ ಎಚ್. ಎಸ್. ಗೋಪಾಲರಾವ್ ಅವರ **ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ**[೧೦೦] ಎಂಬ ಕೃತಿಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಪೂರಕವಾಗಿ ಬಾದಾಮಿ ಚಾಲುಕ್ಯರ ಪ್ರಸ್ತಾಪವು ಇಲ್ಲಿ ವ್ಯಕ್ತವಾಗಿದೆ.

೧೯೯೪ರಲ್ಲಿ **"ಶಿಲ್ಪಕಲಾ ಪ್ರಪಂಚ"**[೧೦೧] ಎಂಬ ಗ್ರಂಥ ಪಿ.ಆರ್. ತಿಪ್ಪೇಸ್ವಾಮಿ ಅವರ ಪ್ರಧಾನ ಸಂಪಾದನೆಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಹೊರ ಬಂದ ಕೃತಿಯಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಕ್ಕೆ ಸಂಬಂಧಿಸಿದ ಹಲವಾರು ಲೇಖನಗಳ ಸಂಗ್ರಗಳನ್ನೊಳಗೊಂಡ ಕೃತಿ ಇದಾಗಿದೆ. ೨೦೦೦ರಲ್ಲಿ ಡಾ. ಶೀಲಾಕಾಂತ ಪತ್ತಾರ್ ಅವರ **"ಬಾದಾಮಿ ಸಾಂಸ್ಕೃತಿಕ ಅಧ್ಯಯನ"**[೧೦೨] ಎಂಬ ಕೃತಿಯು ಅವರ ಡಿ.ಲಿಟ್ ಮಹಾಪ್ರಬಂಧವಾಗಿದೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪ್ರಸಾರಾಂಗದಿಂದ ಮುದ್ರಣಗೊಂಡ ಈ ಕೃತಿಯು ಬಾದಾಮಿಯ ನೆಲೆ-ಹಿನ್ನೆಲೆ, ಆಡಳಿತ, ಆರ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ಜೀವನ, ಧರ್ಮಗಳು ಹಾಗೂ ಅಲ್ಲಿನ ಕಲೆಗಳ ಕುರಿತು ಬಾದಾಮಿಗೆ ಸೀಮಿತಗೊಂಡು ನಡೆಸಿದ ಅಧ್ಯಯನವಾಗಿದೆ.

ಪಿ.ವಿ. ಕೃಷ್ಣಮೂರ್ತಿ ಮತ್ತು ಡಾ. ಕೆ. ವಸಂತಲಕ್ಷ್ಮೀ ಅವರ ಸಂಪಾದನೆಯಲ್ಲಿ **"ಸೂರ್ಯಕೀರ್ತಿ"**[೧೦೩] ಎಂಬ ಗ್ರಂಥವನ್ನು ೨೦೦೦ರಲ್ಲಿ ಹೊರತರಲಾಗಿದೆ. ಇಲ್ಲಿ ಬಾದಾಮಿ ಇತಿಹಾಸ, ಸಂಸ್ಕೃತಿ, ಸಂಶೋಧನ ಲೇಖನಗಳು ಸಂಗ್ರಹಗೊಂಡಿವೆ. ಇದೇ ಅವಧಿಯಲ್ಲಿ ಆನಂದ ಕೆ. ಪೂಜಾರ ಅವರ **ಐತಿಹಾಸಿಕ ಬಾದಾಮಿ**[೧೦೪] ಎಂಬ ಪುಸ್ತಕವನ್ನು ಶಾಂಭವಿ ಪ್ರಕಾಶನದವರು ಪ್ರಕಟನೆ ಮಾಡಿದ್ದಾರೆ. ಇಲ್ಲಿ ಬಾದಾಮಿಯ ಕುರಿತು ಸಂಕ್ಷಿಪ್ತವಾದ ಇತಿಹಾಸವನ್ನು

೯೯. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕದ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು. ೧೯೯೨

೧೦೦. ಎಚ್. ಎಸ್. ಗೋಪಾಲರಾವ್ : ಕಲ್ಯಾಣ ಚಾಲುಕ್ಯ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ೧೯೯೩

೧೦೧. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

೧೦೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೧೦೩.. ಪಿ.ವಿ.ಕೃಷ್ಣಮೂರ್ತಿ ಮತ್ತು ಡಾ. ಕೆ. ವಸಂತಲಕ್ಷ್ಮೀ (ಸಂ.): ಸೂರ್ಯಕೀರ್ತಿ, (ಸೂರ್ಯನಾಥ ಕಾಮತರ ಅಭಿನಂದನ ಗ್ರಂಥ) ಡಾ. ಸೂರ್ಯನಾಥ ಕಾಮತ್ ಅಭಿನಂದನ ಸಮಿತಿ, ಬೆಂಗಳೂರು. ೨೦೦೦

೧೦೪. ಆನಂದ ಕೆ. ಪೂಜಾರ : ಐತಿಹಾಸಿಕ ಬಾದಾಮಿ, ಶಾಂಭವಿ ಪ್ರಕಾಶನ, ಬಾದಾಮಿ. ೨೦೦೦

ಪರಿಚಯಿಸಿಕೊಡುವ ಕೃತಿಯಾಗಿದೆ. **ಚಾಲುಕ್ಯ ಸಿರಿ ಪಟ್ಟದಕಲ್ಲು-ಐಹೊಳೆ ಉತ್ಸವ (ಸ್ಮರಣ ಸಂಚಿಕೆ)**[೧೦೫] ಎಂಬ ಕೃತಿಯು ೨೦೦೦ರಲ್ಲಿ ಬಾಳಾಸಾಹೇಬ ಲೋಕಾಪುರ ಅವರ ಸಂಪಾದನೆಯಲ್ಲಿ ಬಂದ ಸ್ಮರಣ ಸಂಚಿಕೆಯಾಗಿದೆ. ಇಲ್ಲಿ ಬಾದಾಮಿಯ ಸುತ್ತಮುತ್ತಲ ಪ್ರದೇಶಗಳಾದ ಪಟ್ಟದಕಲ್ಲು ಮತ್ತು ಐಹೊಳೆಯ ವಾಸ್ತು ಶಿಲ್ಪಗಳ ಕುರಿತು ಲೇಖನಗಳು ಸಂಗ್ರಹಗೊಂಡಿವೆ.

೨೦೦೨ರಲ್ಲಿ ಕಲವೀರ ಮನ್ವಾಚಾರ್ ಅವರ **ಮಾತೃದೇವತಾರಾಧನೆ ಉಗಮ ಮತ್ತು ವಿಕಾಸ**[೧೦೬] ಎಂಬ ಅಪ್ರಕಟಿತ ಮಹಾಪ್ರಬಂಧವು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಕೃತಿಯಲ್ಲಿ ಮಹಿಷಾಸುರ ಮರ್ದಿನಿ, ಕಾಳಿ, ಬನಶಂಕರಿ ಮುಂತಾದ ದೇವತೆಗಳ ಹಿನ್ನೆಲೆ ಕುರಿತು ಚರ್ಚಿಸಲಾಗಿದೆ. ೨೦೦೩ರಲ್ಲಿ ಮಲ್ಲಿಕಾರ್ಜುನ ಹಿರೇಮಠರವರ ಪ್ರಧಾನ ಸಂಪಾದನೆಯಲ್ಲಿ **ಸತ್ಯಾಶ್ರಯ**[೧೦೭] ಎಂಬ ಗ್ರಂಥವನ್ನು ಹೊರತರಲಾಗಿದೆ. ಇಲ್ಲಿ ಚಾಲುಕ್ಯರ ಇತಿಹಾಸ, ಸಂಸ್ಕೃತಿ ಕುರಿತ ಲೇಖನಗಳ ಸಂಗ್ರಹ ಕೃತಿಯಾಗಿದೆ. ಇದೇ ಅವಧಿಯಲ್ಲಿ ಡಾ. ವಿಠ್ಠಲರಾವ್ ಗಾಯಕ್ವಾಡ ಅವರ **ಲಜ್ಜಾಗೌರಿ**[೧೦೮] ಎಂಬ ಕೃತಿಯಲ್ಲಿ ಲಜ್ಜಾಗೌರಿ ಶಿಲ್ಪಗಳ ಕುರಿತು ಪರಿಚಯಿಸಲಾಗಿದೆ.

೨೦೦೭ರಲ್ಲಿ ಎನ್. ಶಿವಾನಂದ ಸಾತಿಹಾಳ ಅವರು ಬಿ.ವಿ.ಎ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಬಾದಾಮಿ ಪರಿಸರದ ಮಹಾಕೂಟ : ಒಂದು ಅಧ್ಯಯನ**[೧೦೯] ಎಂಬ ವಿಷಯ ಕುರಿತು ಕಿರುಯೋಜನಾ ವರದಿಯನ್ನು ಸಲ್ಲಿಸಿದ್ದಾರೆ. ಇಲ್ಲಿ ಮಹಾಕೂಟ ಪರಿಸರದಲ್ಲಿನ ಕೆಲವು ಪ್ರಮುಖ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಇದೇ ಅವಧಿಯಲ್ಲಿ ಡಾ. ಶೀಲಾಕಾಂತ ಪತ್ತಾರ ಅವರು ಬರೆದ **"ಪಟ್ಟದಕಲ್ಲು ದರ್ಶನ"**[೧೧೦] ಎಂಬ ಕೃತಿ ಪ್ರಕಟಣೆಯಾಗಿದೆ. ಈ ಕೃತಿಯಲ್ಲಿ ಪಟ್ಟದಕಲ್ಲು ಮತ್ತು ದೇವಾಲಯಗಳ ಕಂಬಗಳಲ್ಲಿನ ಶಿಲ್ಪ, ಪಂಚತಂತ್ರದ ಶಿಲ್ಪ, ವಾಸ್ತುಶಿಲ್ಪಗಳ ಕುರಿತು ವಿವರಣೆ ನೀಡುವ ಪುಸ್ತಕವಿದಾಗಿದೆ. ಇದೇ ಅವಧಿಯಲ್ಲಿ ಡಾ. ಶ್ರೀನಿವಾಸ ವೆಂ. ಪಾಡಿಗಾರ ಅವರ **ಬಾದಾಮಿಯ ಚಲುಕ್ಯರ ಶಾಸನಗಳು : ವಾಸ್ತು ಮತ್ತು ಶಿಲ್ಪಕಲೆ**[೧೧೧] ಕೃತಿಯಲ್ಲಿ ಚಾಲುಕ್ಯ ದೇವಾಲಯಗಳ ವಾಸ್ತು ಮತ್ತು ಅಲ್ಲಿನ ಶಿಲ್ಪಗಳ ಶೈಲಿಯನ್ನು ಕುರಿತು ಚರ್ಚಿಸಿದ್ದಾರೆ. ೨೦೦೮ರಲ್ಲಿ ಡಾ. ಶೀಲಾಕಾಂತ ಪತ್ತಾರ ಅವರು ಸಂಪಾದಿಸಿದ

---

೧೦೫. ಬಾಳಾಸಾಹೇಬ ಲೋಕಾಪುರ (ಸಂ.) : ಚಾಲುಕ್ಯ ಸಿರಿ ಪಟ್ಟದಕಲ್ಲು-ಐಹೊಳೆ ಉತ್ಸವ (ಸ್ಮರಣ ಸಂಚಿಕೆ), ಮಾ ಪ್ರಿಂಟರ್ಸ್, ಬೆಂಗಳೂರು. ೨೦೦೦

೧೦೬. ಕಲವೀರ ಮನ್ವಾಚಾರ್ : ಮಾತೃದೇವತಾರಾಧನೆ ಉಗಮ ಮತ್ತು ವಿಕಾಸ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಕ.ವಿ.ವಿ. ಹಂಪಿ. ೨೦೦೨

೧೦೭. ಮಲ್ಲಿಕಾರ್ಜುನ ಹಿರೇಮಠ (ಪ್ರ.ಸಂ.) : ಸತ್ಯಾಶ್ರಯ, ಚಾಲುಕ್ಯ ಉತ್ಸವ ಸಮಿತಿ, ಬಾಗಲಕೋಟೆ. ೨೦೦೩

೧೦೮. ಡಾ. ವಿಠ್ಠಲರಾವ್ ಗಾಯಕವಾಡ : ಲಜ್ಜಾಗೌರಿ, ಪ್ರಸಾರಾಂಗ, ಕ.ವಿ.ವಿ. ಹಂಪಿ. ೨೦೦೩

೧೦೯. ಎನ್. ಶಿವಾನಂದ ಸಾತಿಹಾಳ : ಬಾದಾಮಿ ಪರಿಸರದ ಮಹಾಕೂಟ – ಒಂದು ಅಧ್ಯಯನ, (ಬಿ.ವಿ.ಎ. ಕಿ.ಯೋ.ವ) ಕ.ವಿ.ವಿ. ಹಂಪಿ. ೨೦೦೭

೧೧೦. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ. ೨೦೦೭-೦೮

೧೧೧. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಲುಕ್ಯರ ಶಾಸನಗಳು : ವಾಸ್ತು ಮತ್ತು ಶಿಲ್ಪಕಲೆ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ. ೨೦೦೭-೦೮



“ಬಾದಾಮಿ ಚಾಲುಕ್ಯ ಸಂಪದ”[೧೧೨] ಗ್ರಂಥದಲ್ಲಿ ಬಾದಾಮಿ ಚಾಲುಕ್ಯರ ಕುರಿತು ಈಗಾಗಲೇ ಪ್ರಕಟಗೊಂಡ ವಿದ್ವಾಂಸರ ಲೇಖನಗಳನ್ನು ಸಂಗ್ರಹಿಸಿದ ಕೃತಿ ಇದಾಗಿದೆ. ಬಾದಾಮಿ, ಐಹೊಳೆ ಹಾಗೂ ಪಟ್ಟದಕಲ್ಲಿನಲ್ಲಿರುವ ಶಿಲ್ಪಗಳ ಕುರಿತು ಪರಿಚಯ ಮಾಡಿಕೊಡುವ ಗ್ರಂಥವಿದಾಗಿದೆ. ಇದೇ ಅವಧಿಯಲ್ಲಿ ಮಹಾಂತೇಶ ಎಂ. ಪಲದಿನ್ನಿ ಅವರು ಎಂ.ಫಿಲ್ ಪದವಿಗಾಗಿ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು : ಒಂದು ದೃಶ್ಯಾತ್ಮಕ ಅಧ್ಯಯನ**[೧೧೩] ಎಂಬ ಶೀರ್ಷಿಕೆಯಡಿ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇಲ್ಲಿ ಉತ್ತರ ಕರ್ನಾಟಕದಲ್ಲಿರುವ ಲಜ್ಜಾಗೌರಿ ಶಿಲ್ಪಗಳ ಕುರಿತು ಅಧ್ಯಯನ ಮಾಡಲಾಗಿದೆ.

ವಿಶ್ವನಾಥ ವಂಶಾಕೃತಮಠ ಅವರ ಪ್ರಧಾನ ಸಂಪಾದನೆಯಲ್ಲಿ ೨೦೦೮ರಲ್ಲಿ ಹೊರಬಂದ **“ಸ್ವಸ್ತಿ”**[೧೧೪] ಎಂಬ ದತ್ತಿ ಉಪನ್ಯಾಸ ಮಾಲಿಕೆಯು ಬಾದಾಮಿ ಶಿಲ್ಪ-ಚಿತ್ರಕಲೆಯನ್ನು ವಿವರಿಸುವ ಕೃತಿಯಾಗಿದೆ. ಇದು ಬಾದಾಮಿ ತಾಲೂಕಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ, ಬಾದಾಮಿ ಇವರಿಂದ ಪ್ರಕಟಣಗೊಂಡಿದೆ. ಇದೇ ಅವಧಿಯಲ್ಲಿ ಡಾ. ಎಚ್. ಎಸ್. ಗೋಪಾಲರಾವ್ ಅವರ ಸಂಪಾದನೆಯಲ್ಲಿ ಬಂದ **ಬಾದಾಮಿ ಚಲುಕ್ಯ ಶಿಲ್ಪಕಲೆ**[೧೧೫] ಎಂಬ ಕೃತಿಯಲ್ಲಿ ಈ ಪ್ರದೇಶದ ಶಿಲ್ಪಕಲೆಯನ್ನು ಪರಿಚಯಿಸುವ ಕೃತಿಯಾಗಿದೆ.

೨೦೦೯ರಲ್ಲಿ ಮುದ್ರಣಗೊಂಡ **“ಚಾಲುಕ್ಯರ ಇತಿಹಾಸ”**[೧೧೬] ಎಂಬ ಕೃತಿಯನ್ನು ಎ. ಎಸ್. ನಂಜುಂಡಸ್ವಾಮಿ ಅವರು ಬರೆದಿದ್ದು, ಸಮಾಜ ಪುಸ್ತಕಾಲಯ, ಧಾರವಾಡ ಇವರಿಂದ ಪ್ರಕಟಗೊಂಡಿದೆ. ಚಾಲುಕ್ಯರ ಆಳ್ವಿಕೆ, ಧಾರ್ಮಿಕ, ಸಾಮಾಜಿಕ ಆರ್ಥಿಕ ಹಾಗೂ ಶಿಕ್ಷಣ ಕುರಿತು ಚರಿತ್ರೆಯ ರೂಪದಲ್ಲಿ ತಿಳಿಸಿಕೊಡುವ ಕೃತಿಯಾಗಿದೆ. ಇದೇ ಅವಧಿಯಲ್ಲಿ **“ಬಾದಾಮಿ ಚಾಲುಕ್ಯರು ಲೇಖನ ಸಂಪುಟ”**[೧೧೭] ಎಂಬ ಕೃತಿಯನ್ನು ಡಾ. ಎ. ಮುರಿಗೆಪ್ಪ ಅವರ ಪ್ರಧಾನ ಸಂಪಾದನೆಯಿಂದ ಹೊರತರಲಾಗಿದೆ. ಬಾದಾಮಿಯ ನೆಲೆ-ಹಿನ್ನೆಲೆ, ಶಾಸನಗಳು, ಅವರ ಆಡಳಿತ, ಶಿಲ್ಪ, ಭಿತ್ತಿಚಿತ್ರ, ವಿವಿಧ ಶೈಲಿಯ ದೇವಾಲಯಗಳ ಕುರಿತು ತಿಳಿಸಿಕೊಡುವ ಗ್ರಂಥ ಇದಾಗಿದೆ.

೨೦೦೯ರಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು ಇವರಿಂದ

---

೧೧೨. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆ, ಬಾದಾಮಿ, ೨೦೦೮

೧೧೩. ಮಹಾಂತೇಶ ಎಂ. ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು : ಒಂದು ದೃಶ್ಯಾತ್ಮಕ ಅಧ್ಯಯನ, ಎಂ.ಫಿಲ್ ಸಂಪ್ರಬಂಧ, ಕ.ವಿ.ವಿ. ಹಂಪಿ.೨೦೦೮

೧೧೪. ವಿಶ್ವನಾಥ ವಂಶಾಕೃತಮಠ (ಪ್ರಸಂ.) : ಸ್ವಸ್ತಿ ದತ್ತಿ ಉಪನ್ಯಾಸ ಮಾಲಿಕೆ, ಬಾದಾಮಿ ತಾಲೂಕಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ, ಬಾದಾಮಿ. ೨೦೦೮

೧೧೫. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮

೧೧೬. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ. ೨೦೦೯

೧೧೭. ಡಾ. ಎ. ಮುರಿಗೆಪ್ಪ (ಸಂ.) : ಬಾದಾಮಿ ಚಾಲುಕ್ಯರ ಲೇಖನ ಸಂಪುಟ, ಪ್ರಸಾರಾಂಗ, ಕ.ವಿ.ವಿ. ಹಂಪಿ. ೨೦೦೯

ಜಯದೇವಪ್ಪ ಜೈನಕೇರಿ ಅವರು ಬರೆದಂತಹ **"ಕರ್ನಾಟಕ ಶಿಲ್ಪ-ಸಂಸ್ಕೃತಿ"**[೧೧೮] ಎಂಬ ಕೃತಿಯು ಮುದ್ರಣಗೊಂಡಿದೆ. ಕರ್ನಾಟಕದ ಪ್ರಮುಖ ಸ್ಥಳಗಳಲ್ಲಿನ ಶಿಲ್ಪ ಮತ್ತು ಅಲ್ಲಿನ ಸಂಸ್ಕೃತಿಗಳ ಕುರಿತು ವಿವರಣೆ ನೀಡುವ ಗ್ರಂಥವಾಗಿದೆ. ೨೦೧೧ರಲ್ಲಿ ಮರುಮುದ್ರಣಗೊಂಡ ಡಾ. ಚೂಡಾಮಣಿ ನಂದಗೋಪಾಲ ಅವರು ಬರೆದಂತಹ **"ಶಿಲೆ-ಕಲೆ"**[೧೧೯] ಎಂಬ ಕೃತಿಯು ಅಲ್ಪ್ರಾ ಪಬ್ಲಿಕೇಷನ್ ಬೆಂಗಳೂರು ಇವರಿಂದ ಮುದ್ರಣಗೊಂಡಿದೆ. ಕರ್ನಾಟಕದ ನೃತ್ಯ ಮತ್ತು ಶಿಲ್ಪಗಳ ಬಗ್ಗೆ ಸಾಂಸ್ಕೃತಿಕವಾಗಿ ಅಧ್ಯಯನ ವಿವರಣೆ ನೀಡುವ ಗ್ರಂಥವಾಗಿದೆ.

ಇದಲ್ಲದೇ ಕರ್ನಾಟಕ ಇತಿಹಾಸ ದರ್ಶನ ಸಂಪುಟಗಳಲ್ಲಿ, ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಅನೇಕ ಅಭಿನಂದನಾ ಗ್ರಂಥ ಮತ್ತು ವಿಶ್ವಕೋಶಗಳಲ್ಲಿ, ಪತ್ರಿಕೆಗಳಲ್ಲಿ ಅನೇಕ ಲೇಖನಗಳು ಆಗಾಗ ಪ್ರಕಟಗೊಳ್ಳುತ್ತಲೇ ಬಂದಿವೆ. ವಿಶೇಷವಾಗಿ ಕೆ. ಮಂಕೋಡಿ, ಆರ್. ಡಿ. ಬ್ಯಾನರ್ಜಿ, ಆರ್. ಎಸ್. ಪಂಚಮುಖಿ, ಶ್ರೀಮತಿ ಕೆರೊಲ ರ್‍ಯಾಡ್‌ಕ್ಲಿಫ್, ಶ್ರೀಮತಿ ನಲಿನಿ ಹಾಗೂ ಶ್ರೀಮತಿ ನಾಗವನಜ ಅವರ ಮಹಾಪ್ರಬಂಧಗಳು ಆಶ್‌ವಿನ್ ಲಿಪ್ಟೆ, ಅ. ಸುಂದರ, ಶ್ರೀನಿವಾಸ ಪಾಡಿಗಾರ, ಡಾ. ಎಸ್. ರಾಜಶೇಖರ, ಡಾ. ಶೀಲಾಕಾಂತ ಪತ್ತಾರ, ಡಾ. ಎಸ್. ಸಿ. ಪಾಟೀಲ ಮುಂತಾದವರು ಅನೇಕ ಸಂಶೋಧನಾತ್ಮಕ ಬಿಡಿ ಲೇಖನಗಳು ಚಾಲುಕ್ಯ ಶಿಲ್ಪ, ಚಿತ್ರಕಲೆಯ ಬಗ್ಗೆ ಬೆಳಕು ಚೆಲ್ಲುವ ಮಹತ್ವದ ಸಂಶೋಧನೆಗಳಾಗಿವೆ.

ಹಾಗೆಯೆ ಡಾ. ಸಿ.ವಿ. ರಂಗಸ್ವಾಮಿ, ಡಾ. ಎಂ.ವಿ. ಕೃಷ್ಣಪ್ಪ, ಡಾ. ಜಿ. ಆರ್. ಕುಪ್ಪುಸ್ವಾಮಿ, ಡಾ. ಬಾ.ರಾ. ಗೋಪಾಲ, ಡಾ. ಎಸ್. ಕೆ. ಜೋಶಿ, ಡಾ. ಮಾಧವ ಕಟ್ಟಿ, ಡಾ. ಎಸ್. ಎಚ್. ರಿತ್ತಿ, ಡಾ. ಎ.ವಿ. ನರಸಿಂಹ ಮೂರ್ತಿ, ಡಾ. ರಘುನಾಥ ಭಟ್ಟ, ಡಾ. ಎಸ್. ಆರ್. ರಾವ್, ಡಾ. ಎಸ್. ಶೆಟ್ಟರ, ಡಾ. ಇಷಿಕವ ಕಾನ್, ಡಾ. ಎಂ. ಎಂ. ಕಲಬುರ್ಗಿ, ಡಾ. ಎಸ್. ಕೆ. ರಾಮಚಂದ್ರರಾವ್ ಮೊದಲಾದ ವಿದ್ವಾಂಸರು ಬಾದಾಮಿ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದ್ದಾರೆ.

ಈ ಎಲ್ಲ ವಿದ್ವಾಂಸರು ಇತಿಹಾಸ ಮತ್ತು ಸಾಹಿತ್ಯದ ಹಿನ್ನೆಲೆಯಲ್ಲಿ ವಿಶೇಷವಾಗಿ ಬಾದಾಮಿಯ ವಾಸ್ತು, ಶಿಲ್ಪಕಲೆಯನ್ನು ಪ್ರಧಾನವಾದ ಶಿಲ್ಪಗಳನ್ನು ಮಾತ್ರ ಕುರಿತು ಬಿಡಿ ಬಿಡಿಯಾಗಿ ಚರ್ಚಿಸಿದ್ದಾರೆ. ಆದರೆ ದೃಶ್ಯಕಲೆಗಳ ಹಿನ್ನೆಲೆಯಲ್ಲಿ ಪ್ರಧಾನ ಮತ್ತು ಅಪ್ರಧಾನದ ಸಮಗ್ರ ಶಿಲ್ಪಗಳನ್ನು ಇಲ್ಲಿಯವರೆಗೆ ಅಧ್ಯಯನವಾಗದೇ ಇರುವುದನ್ನು ಗಮನಿಸಿ, ಇಲ್ಲಿ ವಿಶೇಷವಾಗಿ ದ್ವಿ ಮತ್ತು ತ್ರಿ ಆಯಾಮದ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

---

೧೧೮. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ-ಸಂಸ್ಕೃತಿ, ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು. ೨೦೦೯

೧೧೯. ಡಾ. ಚೂಡಾಮಣಿ ನಂದಗೋಪಾಲ : ಶಿಲೆ-ಕಲೆ, ಅಲ್ಪ್ರಾ ಪಬ್ಲಿಕೇಶನ್, ಬೆಂಗಳೂರು. ೨೦೧೧



ಅಧ್ಯಯನದ ವೈಧಾನಿಕತೆ

ಯಾವುದೇ ಒಂದು ಗ್ರಂಥದ ರಚನೆಯ ಕಾಲದಲ್ಲಿ ಸಂಶೋಧನೆಯು ಪ್ರಮುಖವಾದುದು. ಈ ಸಂಶೋಧನೆಯು ಹಲವಾರು ಹಂತಗಳನ್ನು ಒಳಗೊಂಡಿರುತ್ತದೆ. ಈ ಸಂಶೋಧನೆಯು ಮುಖ್ಯವಾಗಿ ಕ್ಷೇತ್ರಕಾರ್ಯ, ಪೂರಕ ಸಾಮಗ್ರಿಗಳು, ಛಾಯಾಚಿತ್ರಗಳು, ಪ್ರಮುಖ ಸಂಶೋಧಕರಿಂದ ಕೇಳಿ ತಿಳಿದುಕೊಳ್ಳುವಿಕೆ ಅಥವಾ ಸಂದರ್ಶನ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇವುಗಳನ್ನು ಮೂಲ ಆಕರ ಸಾಮಗ್ರಿ ಮತ್ತು ಆನುಷಂಗಿಕ ಆಕರ ಸಾಮಗ್ರಿಗಳೆಂದು ವಿಂಗಡಿಸಿಕೊಳ್ಳಲಾಗುತ್ತದೆ.

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು ಎಂಬ ಮಹಾಪ್ರಬಂಧವನ್ನು ರಚಿಸುವ ಸಲುವಾಗಿ ಎರಡು ರೀತಿಯ ಆಕರಸಾಮಗ್ರಿಗಳಿಂದ ವಿಷಯಸಂಗ್ರಹ ಮಾಡಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೦೧. ಮೂಲ ಆಕರ ಸಾಮಗ್ರಿ   ೦೨. ಆನುಷಂಗಿಕ ಆಕರ ಸಾಮಗ್ರಿ

೦೧. ಮೂಲ ಆಕರ ಸಾಮಗ್ರಿ

ಒಂದು ನಾಡಿನ ಕಲೆ ಮತ್ತು ಸಂಸ್ಕೃತಿಯ ಕುರಿತಾಗಿ ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯವು ಬಹಳ ಮಹತ್ವದ ಅಂಶ. ಇದು ನಮ್ಮ ಸಂಶೋಧನೆಗೆ ಬೇಕಾಗುವ ಮೂಲ ಆಕರಗಳನ್ನು ಒದಗಿಸಿ ಕೊಡುತ್ತದೆ. ಅಲ್ಲಿನ ಪರಿಸರ, ಶಿಲ್ಪಗಳು, ವಾಸ್ತುಶಿಲ್ಪಗಳು ಇತ್ಯಾದಿಗಳನ್ನು ತಿಳಿದುಕೊಳ್ಳಲು ಕ್ಷೇತ್ರಕಾರ್ಯವು ಅಗತ್ಯದ ಅಂಶ, ಹಾಗಾಗಿ ಇಲ್ಲಿ ಕ್ಷೇತ್ರಕಾರ್ಯ ಸಂದರ್ಭಗಳಲ್ಲಿ ಇತರ ಆಕರ ಸಾಮಗ್ರಿಗಳು ಪ್ರಮುಖವಾಗಿವೆ.

ಈ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತೆಗೆಯಲಾದ ಛಾಯಾಚಿತ್ರಗಳು, ಅಲ್ಲಿನ ಅನುಭವಸ್ಥ ಜನರ ಹೇಳಿಕೆಗಳು, ಸಂಭಾಷಣೆಗಳು, ಇವುಗಳ ಧ್ವನಿಮುದ್ರಣ, ಇತರ ಲಭ್ಯ ಮಾಹಿತಿಗಳನ್ನು ಪಟ್ಟಿ ಮಾಡಿಕೊಂಡು, ಅವುಗಳನ್ನು ಗುರುತುಹಾಕಿಕೊಂಡು ಅವುಗಳ ಆಧಾರದಲ್ಲಿ ಈ ಸಂಶೋಧನಾ ಕೃತಿ ರಚನೆ ಮಾಡಲಾಗಿದೆ. ಇವುಗಳಿಗೆ ಪೂರಕವಾಗಿ ಆನುಷಂಗಿಕ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

ಅ. ಸಂದರ್ಶನ

ಬ. ಧ್ವನಿಗ್ರಹಣ

ಕ. ಛಾಯಾಚಿತ್ರಣ

ಡ. ಸಂಗ್ರಹಣೆ

ಅ. ಸಂದರ್ಶನ

ಚಾಲುಕ್ಯರ ವಾಸ್ತು, ಶಿಲ್ಪಗಳನ್ನು ಅಧ್ಯಯನ ಮಾಡಿದ ಹಿರಿಯ ಸಂಶೋಧಕರನ್ನು ಸಂದರ್ಶಿಸಿ ಮತ್ತು ಸ್ಥಳಿಯ ಜನರಿಂದ ಮಾಹಿತಿ ಪಡೆಯಲಾಯಿತು.



ಬ. ಧ್ವನಿ ಗ್ರಹಣ

ಧ್ವನಿ ಗ್ರಹಣ ಮಾಡಿಕೊಳ್ಳುವ ಮೂಲಕ ವಿಷಯ ಸಂಗ್ರಹಿಸಿ, ನಂತರ ಅದನ್ನು ಬರಹಕ್ಕೆ ಇಳಿಸಿ, ವಿಷಯ ಸಂಗ್ರಹಿಸಲಾಯಿತು.

ಕ. ಛಾಯಾಚಿತ್ರಣ

ಬಾದಾಮಿ ಪರಿಸರದಲ್ಲಿನ ಚಾಲುಕ್ಯರ ಕಾಲದ ದೇವಾಲಯಗಳನ್ನು ಪರಿಶೀಲಿಸಿ, ಅಲ್ಲಿನ ಶಿಲ್ಪಗಳನ್ನು ತ್ರಿಮಾನ, ದ್ವಿಮಾನದಂತೆ ವಿಂಗಡಿಸಿಕೊಂಡು ಛಾಯಾಚಿತ್ರಗಳನ್ನು ತೆಗೆದುಕೊಂಡು ಮಾಹಿತಿ ಸಂಗ್ರಹಿಸಲಾಯಿತು.

ಡ. ಸಂಗ್ರಹಣೆ

ಬಾದಾಮಿ ಚಾಲುಕ್ಯರಿಗೆ ಸಂಬಂಧಪಟ್ಟಂತೆ ವಿಷಯಗಳನ್ನು ಪಟ್ಟಿ ಮಾಡಿಕೊಳ್ಳುವುದು

೦೨. ಆನುಷಂಗಿಕ ಆಕರ ಸಾಮಗ್ರಿಗಳು

ಕ್ಷೇತ್ರಕಾರ್ಯಕ್ಕೆ ಪೂರಕವಾಗಿ ವಿವಿಧ ಮಾಹಿತಿಗಳು, ತಜ್ಞರಿಂದ ಪ್ರಕಟಿಸಲಾದ ವಿವಿಧ ಲೇಖನಗಳು, ದೇಶ–ವಿದೇಶಗಳಲ್ಲಿ ಪ್ರಕಟವಾದ ವಿವಿಧ ಗ್ರಂಥಗಳು, ವಿವಿಧ ಸಂಶೋಧನಾ ಲೇಖನಗಳು, ಕಿರು ಪ್ರಬಂಧಗಳು, ಮಹಾಪ್ರಬಂಧಗಳು, ಶಾಸನ ಸಂಪುಟಗಳು, ಗೆಝಟಿಯರುಗಳು, ವಿವಿಧ ಅನುವಾದ ಗ್ರಂಥಗಳು ಇತ್ಯಾದಿಗಳು ಮೂಲ ಆಕರ ಸಾಮಗ್ರಿಗಳಿಗೆ ಪೂರಕವಾಗಿ ಕೆಲಸ ಮಾಡುತ್ತವೆ. ತಜ್ಞರ ಹೇಳಿಕೆಗಳನ್ನು ಆಧಾರವಾಗಿ ತೆಗೆದುಕೊಂಡು ಅವರು ಕೊಟ್ಟ ಅಥವಾ ಕೊಡುವ ಮಾಹಿತಿಗಳ ಆಧಾರದಿಂದ ಹೊಸ ಸಂಶೋದನೆಗಳು ನಡೆಯುವುದಕ್ಕೆ ಅನುಕೂಲವಾಗುತ್ತವೆ. ಈ ಹಿನ್ನೆಲೆಯಲ್ಲಿ ಇಂತಹ ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಮೂಲ ಆಕರ ಸಾಮಗ್ರಿಗಳೊಂದಿಗೆ ಸೇರಿಸಿ ಈ ಸಂಶೋಧನಾ ಕೃತಿ ರಚನೆ ಮಾಡಲಾಗಿದೆ. ಇವುಗಳಿಗೆ ಪೂರಕವಾಗಿ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಪ್ರಕಟಿತ ಗ್ರಂಥಗಳಿಂದ ಆಧಾರವಾಗಿ ಪಡೆದ ಮಾಹಿತಿಗಳನ್ನು ಅಡಿಬರಹವಾಗಿ ಉಲ್ಲೇಖಿಸಲಾಗಿದೆ.



ಅಧ್ಯಾಯ : ಎರಡು

ಬಾದಾಮಿ ಚಾಲುಕ್ಯರ ಕಾಲದ ಸಾಂಸ್ಕೃತಿಕ ಪರಿಸರ ಮತ್ತು ಶಿಲ್ಪಗಳ ವರ್ಗೀಕರಣ

ಭಾರತದಲ್ಲಿ ಕ್ರಿ.ಪೂ. ೨೫೦೦ರ ಸುಮಾರಿಗೆ ಶಿಲ್ಪಕಲೆ ಬೆಳೆದು ಬಂದಿದ್ದನ್ನು ಹರಪ್ಪಾ ಮತ್ತು ಮೆಹೆಂಜೊದಾರೋ ನಾಗರಿಕತೆಯಲ್ಲಿ ನಾವು ಕಾಣಬಹುದು.[೧] ಭಾರತದೇಶದ ಇತಿಹಾಸವನ್ನು ಶ್ರೀಮಂತಗೊಳಿಸಿದ ಹಲವಾರು ಅರಸುವಂಶಗಳು ಚರಿತ್ರೆಯಲ್ಲಿ ದಾಖಲಾಗಿ ಹೋಗಿವೆ. ಕೆಲವು ರಾಜವಂಶಗಳು ತಾವು ಆಳ್ವಿಕೆ ನಡೆಸಿದ ರೀತಿಯಿಂದ ದೇಶದ ಜನರಿಗೆ ಮಾಡಿದ ಅನೂಕೂಲಗಳಿಂದ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ನೀಡಿದ ಪ್ರೋತ್ಸಾಹದಿಂದ ಜಗತ್ಪ್ರಸಿದ್ಧವಾಗಿವೆ. ತಮ್ಮ ಭೌಗೋಳಿಕ ಚೌಕಟ್ಟಿನ ಆಚೆಗೂ ತಮ್ಮ ಕೀರ್ತಿಯನ್ನು ಪಸರಿಸಿದ ಹಲವಾರು ರಾಜಮನೆತನಗಳು ದೇಶದ ಭವ್ಯತೆಗೆ, ಬೆಳವಣಿಗೆಗೆ ಸಾಕ್ಷಿಯಾಗಿ ಉಳಿದಿವೆ. ಅವುಗಳನ್ನು ಇಂದಿಗೂ ನಾವು ಗುರುತಿಸಬಹುದು.

ಉತ್ತರ ಭಾರತದಲ್ಲಿ ಕೆಲವು ರಾಜವಂಶಗಳಾದ ಮೌರ್ಯ, ಶುಂಗ, ಗುಪ್ತರಿದ್ದರೆ, ವಿಂಧ್ಯ ಪರ್ವತದ ಈಚೆಗೆ ಅಂದರೆ ಕ್ರಿ.ಪೂ. ೨ನೇ ಶತಮಾನದ ವೇಳೆಗೆ ದಕ್ಷಿಣ ಭಾರತದಲ್ಲಿ ಶಿಲ್ಪಕಲೆಯು ಬೌದ್ಧಸ್ತೂಪಗಳಲ್ಲಿ ಅರಳಿರುವುದನ್ನು ಆಂಧ್ರಪ್ರದೇಶದ ಜಗ್ಗಯ್ಯಪೇಟ, ಅಮರಾವತಿಯಲ್ಲಿ ಕಾಣಬಹುದು. ಅದೇ ಕಾಲದ ಗುಡಿಮಲ್ಲನ ಶಿವಲಿಂಗ ಶಿಲ್ಪವಂತೂ ಶಿಲ್ಪಕಲೆಯ ಅತ್ಯುಚ್ಚ ಉದಾಹರಣೆಯಾಗಿದೆ. ಆಂಧ್ರಪ್ರದೇಶದಲ್ಲಿ ಶಾತವಾಹನರು, ವೆಂಗಿಯ ಚಾಲುಕ್ಯರು ಶಿಲ್ಪಕಲೆಗೆ ಪ್ರೋತ್ಸಾಹ ನೀಡಿದಂತೆಯೇ ಕರ್ನಾಟಕದಲ್ಲಿ ಬಾದಾಮಿಯ ಚಾಲುಕ್ಯರು, ವಾಕಾಟಕ, ಗಂಗರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರ

೦೧. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೧೨೯



ಮತ್ತಿತರ ಅರಸು ಮನೆತನಗಳವರು, ತಮಿಳುನಾಡಿನ ಪ್ರಾಂತಗಳಲ್ಲಿ ಪಲ್ಲವರು, ಪಾಂಡ್ಯರು, ಚೋಳರು[೨] ಮುಂತಾದ ಅರಸು ಮನೆತನಗಳು ಶಿಲ್ಪಕಲೆಗೆ ನೀಡಿದ ಕೊಡುಗೆಗಳು ಮಹತ್ವದ್ದಾಗಿವೆ. ಇವರ ಆಳ್ವಿಕೆ ಮುಗಿದು ನೂರು ಶತಮಾನಗಳು ಕಳೆದು ಹೋದರೂ ಜನರ ನೆನಪಿನಲ್ಲಿ ಇವರ ನೆನಪು ಉಳಿದುಕೊಂಡಿದೆ.

ಇದಕ್ಕೆ ಕಾರಣ ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಪ್ರೀತಿಸಿ, ಅವುಗಳಿಗೆ ಉದಾರ ನೆರವು ನೀಡಿ ಒಂದು ಶ್ರೀಮಂತ ನೆಲೆಗಳನ್ನು ಒದಗಿಸಿಕೊಟ್ಟಿರುವುದು. ಅಂತಹ ಒಂದು ರಾಜವಂಶವೇ ದಕ್ಷಿಣ ಭಾರತವನ್ನು, ಅದರಲ್ಲೂ ಕರ್ನಾಟಕದೇಶವನ್ನು ಆಳಿದ ಚಾಲುಕ್ಯ ರಾಜಮನೆತನ. ಇವರು ಬಿಟ್ಟು ಹೋದ ಹಲವಾರು ಕಲಾಕೃತಿಗಳು, ವಾಸ್ತು ಶಿಲ್ಪಗಳು, ಶಾಸನಗಳು ಇಂದಿಗೂ ಅವರ ಕಥೆಯನ್ನು ಹೇಳುತ್ತಿವೆ. ಜನರಿಗೆ ಸ್ಫೂರ್ತಿಯನ್ನು ಒದಗಿಸುತ್ತಿವೆ. ಕಲಾವಿದರಿಗೆ ಮಾದರಿಗಳಾಗಿ ನಿಂತಿವೆ. ಇಂತಹ ಒಂದು ರಾಜವಂಶದ ಕಥೆಯನ್ನು ಅಥವಾ ಇತಿಹಾಸವನ್ನು ಅವರು ನೀಡಿದ ಕೊಡುಗೆಗಳಾದ ವಾಸ್ತು ಮತ್ತು ಶಿಲ್ಪಕಲೆಗಳ ಮೂಲಕ ಅಧ್ಯಯನ ಮಾಡುವುದು ಒಂದು ಹೆಮ್ಮೆಯ ಸಂಗತಿಯಾಗಿದೆ.

ಕದಂಬರ ನಂತರ ಪ್ರಬಲರಾದ ಬಾದಾಮಿ ಚಾಲುಕ್ಯರು ಸುಮಾರು ೨೦೦ ವರ್ಷ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ವೈಭವದಿಂದ ಆಳಿದ್ದಾರೆ. ಇವರಿಗೆ ಬಾದಾಮಿ ಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿತ್ತು. ಗ್ರೀಕ್ ವಿಜ್ಞಾನಿ ಟಾಲೆಮಿ ತನ್ನ ಕೃತಿಯಲ್ಲಿ ಬಾದಾಮಿ ಕುರಿತು ಉಲ್ಲೇಖಿಸಿದ್ದಾನೆ. ಉತ್ತರ ಬದಿಯ ಗುಡ್ಡಗಳ ಇಕ್ಕಟ್ಟಾದ ಸಂದುಗಳಲ್ಲಿ ದೊರಕಿರುವ ಮಣ್ಣಿನ ಪಾತ್ರೆಗಳ ಚೂರುಗಳು, ಕ್ರಿ.ಪೂ. ೩ನೇ ಶತಮಾನಕ್ಕೆ ಸೇರಿದವು ಎಂದು ವಿದ್ವಾಂಸರು ಗುರುತಿಸಿದ್ದಾರೆ.

ನಂತರದ ಕಾಲಘಟ್ಟದ ಅನೇಕ ಕಟ್ಟಡಗಳ ಅವಶೇಷಗಳು ಬಾದಾಮಿಯಲ್ಲಿ ಕಂಡುಬಂದಿವೆ. ಚಾಲುಕ್ಯ ಚಕ್ರವರ್ತಿ ಒಂದನೇ ಪುಲಿಕೇಶಿ ಇಲ್ಲಿನ ಕೋಟೆಯನ್ನು ಕಟ್ಟಿಸಿದ್ದಾನೆ.[೩] ಬಾದಾಮಿ ಎಂದ ಕೂಡಲೇ ನಮಗೆ ನೆನಪಾಗುವುದು ವಾತಾಪಿ ಗಣಪತಿ ಭಜನೆ. ಆಗಿನ ಕಾಲಕ್ಕೆ ವಾತಾಪಿ ದೊಡ್ಡ ನಗರವಾಗಿದ್ದಿರಬಹುದೆಂದೂ 'ವಾತಾಪಿ ರಾಜಧಾನಿ' ಎಂಬ ಉಲ್ಲೇಖ ಶಾಸನದಿಂದ ತಿಳಿದುಬರುತ್ತದೆ.[೪] ಇದು ೮ನೆಯ ಶತಮಾನದ ಆರಂಭದಲ್ಲಿ ರಚಿತವಾದ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದಲ್ಲಿ ದೊರೆತ ತ್ರಿಪದಿಗಳು ಈ ಕೆಳಗಿನಂತಿವೆ.

"ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ॥"

೦೨. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) ಶಿಲ್ಪಕಲಾ ಪ್ರಪಂಚ, ಪುಟ – ೧೩೦
೦೩. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ – ಸಂಸ್ಕೃತಿ, ಪುಟ – ೨೧೦
೦೪. ಅದೇ., ಪುಟ – ೨೧೧

"ಒಳ್ಳೆಯವರಿಗೆ ಒಳ್ಳೆಯವನು. ಮಧುರ
ಗುಣ ಉಳ್ಳವರಿಗೆ ಮಧುರವಾಗಿ ವರ್ತಿಸುವವನು
ತೊಂದರೆಪಡಿಸುವ ದುಷ್ಟರಿಗೆ ದುಷ್ಟರಂತೆ
ಕಾಣಿಸುವವನು. ಈತನು ಅಸಾಮಾನ್ಯನಾದ
ಮಾಧವನೇ ಆಗಿರುವನು."[೫]

ನಂತರ ಬಂದ ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ಕಾಲದ ಅವಶೇಷಗಳು ಹೆಚ್ಚಾಗಿ ಕಂಡುಬರುತ್ತಿಲ್ಲ. ಕ್ರಿ.ಶ. ೧೩೫೪ರ ಒಂದು ಶಾಸನದಂತೆ ವಿಜಯನಗರ ದೊರೆ ಒಂದನೇ ಹರಿಹರ ಉತ್ತರದ ಕೋಟೆ ಕಟ್ಟಲು ಬಾದಾಮಿ ಮಹಾಜನರಿಗೆ ಅನುಮತಿ ನೀಡಿದ್ದಾನೆ. ನಂತರ ಕೃಷ್ಣದೇವರಾಯನ ಕಾಲದವರೆಗೂ ಬಾದಾಮಿ ವಿಜಯನಗರ ಆಳ್ವಿಕೆಗೆ, ಅನಂತರ ಆದಿಲ್‌ಶಾಹಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೧೭೪೬ರಲ್ಲಿ ಸವಣೂರು ನವಾಬರ ಆಳ್ವಿಕೆಯಲ್ಲಿತ್ತು. ನಂತರ ಕ್ರಿ.ಶ. ೧೭೫೬ರಲ್ಲಿ ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟಿತ್ತು. ಬನಶಂಕರಿ ಎಂದೇ ಪ್ರಸಿದ್ಧವಾಗುವ ವನದೇವತೆ ಬನಶಂಕರಿ ಶಕ್ತಿದೇವತೆ. ಬಾದಾಮಿಗೆ ಮೊದಲೇ ಸಿಗುವ ಬನಶಂಕರಿ ದೇವಾಲಯ ದ್ರಾವಿಡ ವಾಸ್ತು ಶೈಲಿ, ವಿಜಯನಗರ ಮಿಶ್ರ ವಾಸ್ತುಶೈಲಿಯಿಂದ ಕೂಡಿದ ಬೃಹತ್ ದೇವಾಲಯವಾಗಿದೆ. ಮೂಲ ದೇವಾಲಯ ಕಲ್ಯಾಣ ಚಾಲುಕ್ಯರ ಅರಸ ೧ನೇ ಜಗದೇಕಮಲ್ಲ (ಕ್ರಿ.ಶ. ೧೧೪೫)ನಿಂದ ನಿರ್ಮಾಣವಾಗಿದೆ ಎಂಬ ಸಂಗತಿ ಶಾಸನದಿಂದ ತಿಳಿದುಬರುತ್ತದೆ. ನಂತರ ಪೇಶ್ವೆಗಳ ಕಾಲದಲ್ಲಿ ನವೀಕರಣಗೊಂಡಿದೆ.

ಈಗಿನ ಬನಶಂಕರಿ ದೇವಾಲಯವನ್ನು ಸಾತಾರೆಯ ಪರಶುರಾಮ ನಾಯಕ ಅಗಳೆ ಎಂಬಾತನು ಕ್ರಿ.ಶ. ೧೭೫೦ರಲ್ಲಿ ಸ್ಥಾಪಿಸಿದನೆಂದು ಹೇಳಲಾಗಿದೆ.[೬] ನಂತರ ಬಾದಾಮಿಯನ್ನು ೧೭೭೮ರಲ್ಲಿ ಮೈಸೂರಿನ ಹೈದರ್ ಅಲಿ ವಶಪಡಿಸಿಕೊಂಡನು. ಪುನಃ ೧೭೮೬ರಲ್ಲಿ ಮರಾಠರ ಆಳ್ವಿಕೆಗೆ ಬಂದಿತು. ೧೮೧೮ರಲ್ಲಿ ಜನರಲ್ ಮನ್ರೋ ವಶಕ್ಕೆ ಬಂದ ಬಾದಾಮಿಯನ್ನು ೧೮೪೦ರಲ್ಲಿ ನರಸಿಂಗರಾವ್ ಎಂಬ ಕುರುಡ ದಂಡನಾಯಕ ಅರಬ್ಬರ ಸಹಾಯದಿಂದ ಲೂಟಿ ಹೊಡೆದು ತಾನೇ ದೊರೆ ಎಂದು ಘೋಷಿಸಿಕೊಂಡನು.[೭]

ಚಾಲುಕ್ಯ ರಾಜವಂಶದ ಹಿನ್ನೆಲೆ

ಬಾದಾಮಿ ಚಾಲುಕ್ಯರು ಕ್ರಿ.ಶ. ೬ನೆಯ ಶತಮಾನದ ಹೊತ್ತಿಗೆ ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ವಿಂಧ್ಯ ಪರ್ವತದ ಕೆಳಭಾಗದಲ್ಲಿ ಗೋದಾವರಿಯಿಂದ ಕಾವೇರಿ ನದಿ ಬಯಲು ಪ್ರದೇಶದವರೆಗೆ ಆಳ್ವಿಕೆ ನಡೆಸಿದ ಒಂದು ಪ್ರಮುಖ ರಾಜವಂಶ ಇದಾಗಿದೆ. ಇವರ ಮೂಲ ಪುರುಷರ ಕುರಿತಾಗಲೀ ಇವರ ವಂಶಕ್ಕೆ ಈ ಹೆಸರು ಬಂದ ಬಗ್ಗೆ ಇಂದಿಗೂ ಸಾಕಷ್ಟು

೦೫. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೧೪೫
೦೬. ಡಾ. ಎ. ಮುರಿಗೆಪ್ಪ (ಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೨೦೭
೦೭. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ – ಸಂಸ್ಕೃತಿ, ಪುಟ – ೨೧೦-೨೧೧

ಭಿನ್ನಾಭಿಪ್ರಾಯಗಳು ಉಳಿದುಕೊಂಡಿವೆ. ತಾವು ಸೋಮವಂಶದವರೆಂದೂ ಮಾನವ್ಯ ಗೋತ್ರದವರೆಂದೂ ಹಾರೀತ ಪುತ್ರರೆಂದೂ ಸಪ್ತ ಮಾತೃಕೆಯರಿಂದ ಪೋಷಿಸಲ್ಪಟ್ಟವರೆಂದೂ ಸ್ಕಂದ ಮಹಾಸೇನನ (ಕಾರ್ತಿಕೇಯ) ಅನುಗ್ರಹ ಮತ್ತು ರಕ್ಷಣೆಯಿಂದ ಏಳಿಗೆ ಹೊಂದಿದವರೆಂದೂ ಸ್ವಸ್ತಿ ಶ್ರೀ ಮಾನವ್ಯಾಸ ಗೋತ್ರಾಣಾಂ ಹಾರೀತಿ ಪುತ್ರಾಣಾಂ ಮಾತ್ರಿಕ ಗಣ ಸಂವರ್ಧಿತಾನಾಂ ಸ್ವಾಮಿ ಮಹಾಸೇನ ಪಾದಾಸುದ್ವಾತಾನಾಂ ಎಂಬುದಾಗಿ ಗೌರಿ ಬಿದನೂರಿನ ಶಾಸನವೊಂದರಲ್ಲಿ ಹೇಳಿಕೊಂಡಿದ್ದಾರೆ.[೧೮] ಇವರ ಕುರಿತಾಗಿ ಹಲವಾರು ದಂತಕಥೆಗಳಿವೆ. ಮುಖ್ಯವಾಗಿ ಇವರಲ್ಲಿ ಮೂಲಪುರುಷ ವಿಷ್ಣುವಿನ ನಾಭಿಯಿಂದ ಜನಿಸಿದ ಬ್ರಹ್ಮನ ಕಮಂಡಲದ ನೀರಿನಿಂದ ನೇರವಾಗಿ ಉದ್ಭವಿಸಿದನೆಂದು ದಂತಕಥೆಯಿದೆ. ಸಾಮಾನ್ಯವಾಗಿ ರಾಜ್ಯವಾಳುವ ಅರಸರು ತಾವು ದೇವಾಂಗ ಸಂಭೂತರೆಂದೂ ಪ್ರತ್ಯಕ್ಷ ದೇವರೆಂದೂ ಹೇಳಿಕೊಳ್ಳುವ ವಾಡಿಕೆ ಇದೆ. ಇದು ಅಂತಹುದೆ ಒಂದು ನಂಬಿಕೆಯಷ್ಟೆ.

ಬಾದಾಮಿ ಚಾಲುಕ್ಯರಿಗೆ ದಿವ್ಯ ನಾರಾಯಣನ ಅನುಗ್ರಹದಿಂದ ಅವರಿಗೆ ಲಭಿಸಿದ ವರಾಹಲಾಂಛನ ದರ್ಶನ ಮಾತ್ರದಿಂದ ಎಲ್ಲ ಜನರೂ ಅವರ ಪ್ರಜಾಕೋಟಿಗೆ ಸೇರುವಂತಾಯಿತು. ಸಾಮಾನ್ಯವಾಗಿ ಅವರ ವಂಶನಾಮವು 'ಚಾಲುಕ್ಯ' ಎಂದು. ಆದರೆ ಆ ಹೆಸರು ಶಾಸನಗಳಲ್ಲಿ ಚಲುಕ್ಯ, ಚಾಲಿಕ್ಯ, ಚಾಲುಕ್ಯ ಮತ್ತು ಚಾಲೋಕ್ಯ ಎಂದು ಮೊದಲಾಗಿ ಲಿಖಿತವಾಗಿದೆ. ಆಮೇಲೆ ಬರೆಯಲಾದ ಶಾಸನಗಳಲ್ಲಿ ಈ ವಂಶನಾಮದ ಶಬ್ದೋತ್ಪತ್ತಿಯನ್ನು 'ಚಲುಕ್ಯ' ಪದಕ್ಕೆ ಜೋಡಿಸಲಾಗಿದೆ. ಇದರರ್ಥ 'ಜಲಪಾತ್ರ' ಅಥವಾ ನೀರು ಹಿಡಿಯುವ ಬೊಗಸೆ ಎಂದು. ಈ ಬಗ್ಗೆ ಒಂದು ಕಥೆ ಹೀಗಿದೆ. ಹಿರಣ್ಯಗರ್ಭ (ಬ್ರಹ್ಮ)ನಿಂದ ಉದ್ಭವಿಸಿದ ಹಾರೀತಿ ಪಂಚಶಿಖನು ಸಂಧ್ಯಾವಂದನೆ ಮಾಡುತ್ತಿದ್ದನು. ಅವನು ಅರ್ಘ್ಯ ಕೊಡುತ್ತಿರುವಾಗ ಅವನ 'ಚಲುಕ' ದಿಂದ ಅಂದರೆ ಅಂಜಲಿಯಿಂದ ಒಬ್ಬ ಯೋಧನು ಉದ್ಭವಿಸಿದನು ಅವನನ್ನು 'ಚಲುಕ' ಎಂದು ಕರೆಯಲಾಯ್ತು. ಅವನ ವಂಶಜರು "ಚಾಲುಕ್ಯ"ರಾದರು.[೧೯] ಕರ್ನಾಟಕದ ಬಹುತೇಕ ರಾಜಮನೆತನಗಳ ಮೂಲದಂತೆಯೇ ಚಾಲುಕ್ಯರ ಮೂಲವು ಅಸ್ಪಷ್ಟ ಮತ್ತು ವಾದಗ್ರಸ್ತ. ಐತಿಹಾಸಿಕತೆಗಿಂತ ದಂತಕತೆಗಳಿಗೆ ಹೆಚ್ಚಿನ ಮಹತ್ವವಿದ್ದು ಇವುಗಳ ಕುರಿತು ಯಾವುದೇ ಆಧಾರಗಳು ಸಿಗುವುದಿಲ್ಲ. ಆದರೂ ತಮ್ಮ ಕುಲದ ಶ್ರೇಷ್ಠತೆಯನ್ನು ತಮ್ಮ ಆಸ್ಥಾನ ಕವಿಗಳ ಹಾಗೂ ಇತಿಹಾಸಕಾರರ ಮೂಲಕ ಹೇಳಿಸಿ, ಅದನ್ನು ಶಾಶ್ವತವಾಗಿರಿಸುವುದೇ ರಾಜಮನೆತಗಳ ಉದ್ದೇಶವಾಗಿತ್ತು. ಈ ಪದ್ಧತಿ ಜಗತ್ತಿನ ಎಲ್ಲೆಡೆ ಸಾಮಾನ್ಯವಾಗಿ ಕಂಡು ಬರುತ್ತವೆ.

ಚಾಲುಕ್ಯ ಶಬ್ದದ ಬಗೆಗಿರುವ ಈ ಕಾಲ್ಪನಿಕ, ಪೌರಾಣಿಕ ಉತ್ಪತ್ತಿಯನ್ನು ಅಂಗೀಕರಿಸುವ ಅಗತ್ಯವಿಲ್ಲ. ಇದಕ್ಕೆ ಬದಲಾಗಿ ಪ್ರಾಚೀನ ಶಾಸನಗಳನ್ನು ಲಕ್ಷ್ಯಪೂರ್ವಕವಾಗಿ ಅವಲೋಕಿಸಿದ

---

೧೮. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೧೭

೧೯. ಆರ್. ಆರ್. ದಿವಾಕರ (ಸಂ.) : ಕರ್ನಾಟಕ ಪರಂಪರೆ, ಸಂ – ೧, ಪುಟ – ೨೩೭–೨೩೮

ನಂತರ ಒಂದು ಸೂಚನೆಯನ್ನು ಮಂಡಿಸಬಹುದಾಗಿದೆ. ಅದೆಂದರೆ ಅವರ ಮೂಲನಾಮವು ಚಲುಕಿ, ಚಲ್ಕಿ, ಸಲುಕಿ ಅಥವಾ ಸಲ್ಕಿ ಎಂಬ ಕನ್ನಡ ಪದ. ಇದು ಹಾರೆಯಂತಹ ಒಂದು ಕೃಷಿಯ ಉಪಕರಣದ ಹೆಸರು. ಈ ಮನೆತನದ ಮೂಲ ಪುರುಷನು ಇದನ್ನು ತನ್ನ ಅಂಕಿತನಾಮವಾಗಿ ಸ್ವೀಕರಿಸಿರಬೇಕು. ಈ ರೀತಿ ಹೆಸರಿಟ್ಟುಕೊಳ್ಳುವುದು ಈಗಲೂ ಕರ್ನಾಟಕದಲ್ಲಿ ಬಳಕೆಯಲ್ಲಿದೆ. ಸಲ್ಕೆಪ್ಪ, ಗುದ್ದೆಪ್ಪ ಎಂಬ ಹೆಸರುಗಳು ಬಹಳ ಸಾಮಾನ್ಯ. ಕೃಷಿ ಉಪಕರಣದ ಜೊತೆಗೆ 'ಅಪ್ಪ'(ಆರ್ಯ) ಎಂಬ ಗೌರವದ ಪದ ಜೋಡಿಸುವುದು ವಾಡಿಕೆ.[೧೦] ಮೂಲತಃ ಚಾಲುಕ್ಯರು ಬಾದಾಮಿಯ ಎಡ-ಬಲದಲ್ಲಿ ವಾಸಿಸುವ ಒಕ್ಕಲಿಗರ ಬಣಕ್ಕೆ ಸಂಬಂಧಿಸಿರಬೇಕು.

ಆದರೆ ಇಂತಹ ದಂತ ಕಥೆಗಳಿಗಾಲೀ ಪೌರಾಣಿಕ ಹಿನ್ನೆಲೆಗಳಿಗಾಲೀ ಅಂತಹ ಮಹತ್ವ ನೀಡಬೇಕಾದುದಿಲ್ಲ. ಏಕೆಂದರೆ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನಮಗೆ ಸಿಗುವ ಮಾಹಿತಿಗಳು, ಸಾಕ್ಷ್ಯಗಳು ಮತ್ತು ಆಧಾರಗಳ ಮೇಲೆಯೆ ಇತಿಹಾಸವು ರಚನೆಯಾದುದನ್ನು ನಾವು ಕಾಣುತ್ತೇವೆ. ಇಂದಿನ ಬೆಳವಣಿಗೆಯ ಕಾಲದಲ್ಲಿ ಪ್ರತಿಯೊಂದು ವಿಚಾರವನ್ನು ವೈಜ್ಞಾನಿಕವಾಗಿ ಅವಲೋಕಿಸುವಾಗ ಪ್ರತಿಯೊಂದು ಸೂಕ್ಷ್ಮವಸ್ತುವೂ ಒಂದು ಮುಖ್ಯ ಆಧಾರವಾಗಿ ದಾಖಲಾಗುತ್ತದೆ. ಅಂತೆಯೇ ಚಾಲುಕ್ಯರ ಇತಿಹಾಸದ ವಿಚಾರವಾಗಿಯೂ ಚಾಲುಕ್ಯರು ಇದೇ ಮಣ್ಣಿನ ಮಕ್ಕಳು, ಉತ್ತರ ಕರ್ನಾಟಕದವರೇ ಎಂದು ಹೇಳುವ ಆಧಾರಗಳನ್ನು ಹಲವಾರು ಇತಿಹಾಸಕಾರರು ಸಾಕ್ಷಿಸಮೇತ ಸಾಬೀತುಪಡಿಸಿರುವುದನ್ನು ನಾವು ಕಾಣಬಹುದು.

'ಚಲುಕ್ಯ' ಎಂಬುದು ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿ ಆಳಿದ ರಾಜವಂಶದ ಹೆಸರು. ಈ ಪದವನ್ನು ಜೇಮ್ಸ್ ಬರ್ಜೆಸ್ (೧೮೭೪) ಹಾಗೂ ಹೆನ್ರಿ ಕಜಿನ್ಸ್ (೧೯೨೬) ತಪ್ಪಾಗಿ ಚಾಲುಕ್ಯ ಎಂದು ಬಳಸಿದರು. ಉಳಿದವರು ಹಾಗೆಯೇ ಬಳಸುತ್ತ ಬಂದಂತೆ ತೋರುತ್ತದೆ. 'ಚೆಲ್ಕ್ಯ' ಎಂಬುದು ಈ ರಾಜಕುಲದ ಹೆಸರಿನ ಸರಿಯಾದ ರೂಪವಿರಬಹುದು. ಆದರೆ ಇದುವರೆಗೆ ಲಭ್ಯವಾದ ಚಾಲುಕ್ಯರ ಶಾಸನಗಳಲ್ಲಿ ಅತಿ ಪ್ರಾಚೀನವಾದ ಕ್ರಿ.ಶ. ೫೪೩ರ ಪೊಲೆಕೇಶಿ ಬಂಡೆಗಲ್ಲು ಶಾಸನದಲ್ಲಿ ಈ ವಂಶದ ಹೆಸರು ಚಲಿಕ್ಯ ಎಂದು ಕಾಣಿಸಿಕೊಂಡಿದ್ದು,[೧೧] ಇದೇ ಕುಲನಾಮದ ಮೂಲ ರೂಪವೆನಿಸಿರಬೇಕು.

ಚಾಲುಕ್ಯ ಎಂಬ ಪದ ಸಂಸ್ಕೃತದ ಪದವಲ್ಲವೆಂದೂ ಅದು ಗುರ್ಜರ ಅಥವಾ ಹೂರ್ಣಮೂಲದಿಂದ ಬಂದಿರಬಹುದೆಂದು ಡಾ.ಯೊಯೆಸ್ಸ ಜಾಕ್ಸನ್ ಮುಂತಾದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಚಾಲುಕ್ಯ ಎಂಬ ಪದದ ಪೌರಾಣಿಕ ಶಬ್ದದ ಉತ್ಪತ್ತಿಯನ್ನು ಸೃಷ್ಟಿಸಿಕೊಳ್ಳಬೇಕಾಗಿಲ್ಲವೆಂದು ಡಾ. ಎಸ್. ಸಿ ನಂದಿಮಠ ರವರು ವಾದಿಸಿರುವುದಲ್ಲದೆ ಆದಿಯ ಶಾಸನಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದರೆ ಚಲುಕಿ, ಚಲ್ಕಿ, ಸಲುಕಿ, ಅಥವಾ ಸಲ್ಕಿ, ಎಂಬ

---

೧೦. ಆರ್. ಆರ್. ದಿವಾಕರ (ಸಂ.) : ಕರ್ನಾಟಕ ಪರಂಪರೆ, ಸಂ - ೧, ಪುಟ - ೨೩೮

೧೧. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೧೭

ಪದಗಳ ಮೊದಲಿನ ಅರ್ಥವು ಹಾರೆ ಅಥವಾ ಗಢಾರಿಯನ್ನು ಹೋಲುವ ಯಾವುದೊ ಬೇಸಾಯದ ಉಪಕರಣ ಇರಬಹುದೆಂದು ಬರೆದಿದ್ದಾರೆ. ಸಲ್ಕೆಪ್ಪ, ಗುದ್ಲೆಪ್ಪ ಎಂಬ ಹೆಸರುಗಳನ್ನು ಇಂದಿಗೂ ಕೆಲವು ಜನ ಇಟ್ಟುಕೊಳ್ಳುವುದರಿಂದ ಚಾಲುಕ್ಯ ಮನೆತನದ ಮೂಲ ಪುರುಷನು ಬೇಸಾಯದ ಉಪಕರಣಕ್ಕೆ ಸಂಬಂಧಿಸಿದ ಪದವನ್ನೇ ಹೆಸರನ್ನಾಗಿ ಸ್ವೀಕರಿಸಿರಬೇಕೆಂದು ಎಸ್. ಸಿ. ನಂದಿಮಠ ಅವರು ತರ್ಕಿಸಿದ್ದಾರೆ. ಚಾಲುಕ್ಯರು ಬಾದಾಮಿಯ ಸುತ್ತಮುತ್ತಲೂ ವಾಸಿಸುತ್ತಿದ್ದ ಬಡ್ಕಲು ಮನೆತನಕ್ಕೆ ಸೇರಿದವರಿರಬೇಕೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೨] ಕರ್ನಾಟಕದ ಇತಿಹಾಸವನ್ನು ಕುರಿತು ಅಧ್ಯಯನ ನಡೆಸಿದ ಹಲವಾರು ವಿದ್ವಾಂಸರು ಚಾಲುಕ್ಯರು ಇದೇ ಪ್ರದೇಶದಲ್ಲಿ ಹುಟ್ಟಿ ಬೆಳೆದ ಒಕ್ಕಲು ಮನೆತನಗಳಲ್ಲೇ ಒಂದು ಆಗಿದ್ದಿರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಡಾ.ಶೀಲಾಕಾಂತ ಪತ್ತಾರ, ಹಂಪ ನಾಗರಾಜಯ್ಯ ಮುಂತಾದವರೆಲ್ಲ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಪೈಕಿ ಡಾ. ಹಂಪ ನಾಗರಾಜಯ್ಯನವರ ವಿಚಾರವು ಬಹು ಮಟ್ಟಿಗೆ ಸತ್ಯಕ್ಕೆ ಸಮೀಪವಾಗಿರಬಹುದು. ಚಾಲುಕ್ಯರದು ಕೂಡಾ ಅಚ್ಚ ಕನ್ನಡ ಅರಸುಕುಲ. ಚಾಳುಕ್ಯವಂಶದ ಉಗಮ ಹಾಗೂ ನಿಷ್ಪತ್ತಿಯನ್ನು ಕುರಿತು ಅನೇಕ ಚರ್ಚೆಗಳಾಗಿವೆ.

ಚರಿತ್ರಕಾರರು ನಡೆಸಿರುವ ಚಿಂತನ ಮಂಥನಗಳಿಗಿಂತ ಬೇರೆಯದಾದ ನಿಲುವು ನನ್ನದು. ಇದುವರೆಗೆ ಸೂಚಿತವಾಗಿರುವ ಶಬ್ದಾರ್ಥ ಜಿಜ್ಞಾಸೆಗೆ ಇನ್ನೊಂದು ಅರ್ಥವನ್ನು ಪೋಣಿಸುವುದಷ್ಟೇ ನನ್ನ ಉದ್ದೇಶವಲ್ಲ ಭಾಷಿಕ, ಸಾಮಾಜಿಕ, ಬೌಗೋಳಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಿಂದ ಈ ಚಾಳುಕ್ಯ ಶಬ್ದದ ನಿರ್ವಚನ ಮತ್ತು ಪುನರ್ ವ್ಯಾಖ್ಯೆಗೆ ಅವಕಾಶವಿದೆ.[೧೩] ಇದಕ್ಕೆ ಅವರು ಸಾಕಷ್ಟು ಶಾಸನಗಳ ಆಧಾರವನ್ನು ಕೊಡುತ್ತಾರೆ. ಅಲ್ಲದೆ ಉತ್ತರ ಕನ್ನಡ ಆಡುಭಾಷೆಯಲ್ಲಿ ಉಪಯೋಗಿಸುವ ಶಬ್ದಗಳ ಅರ್ಥಗಳು ಹಿನ್ನೆಲೆಗಳನ್ನು ಸಾಕಷ್ಟು ಆಧಾರವಾಗಿ ಕೊಡುತ್ತಾರೆ. ಹಿರಿಯ ವಿದ್ವಾಂಸರ ಅಭಿಪ್ರಾಯಗಳನ್ನು ತುಲನೆ ಮಾಡಿ ಚಾಲುಕ್ಯ ತಲೆಮಾರಿನ ಆಡಳಿತವನ್ನು ಪೂರಕವಾಗಿ ಕೊಡುತ್ತದೆ.

೧. ಚಲ್ಕ: ಬಾದಾಮಿ ಶಾಸನ : ಕ್ರಿ.ಶ. ೫೭೮

೨. ಚಳಿಕ್ಯ: ಮಹಾಕೂಟ ಸ್ತಂಭ ಶಾಸನ : ಕ್ರಿ.ಶ. ೬೦೨

೩. ಚಲಿಕ್ಯ: ಮಂಗಳೇಶನ ಶಾಸನ : ಕ್ರಿ.ಶ. ೭ನೇ ಶತಮಾನ

೪. ಚಲುಕ್ಯ: ಪುಲಿಕೇಶಿ ೨ ಐಹೊಳೆಯ ಶಾಸನ : ಕ್ರಿ.ಶ. ೬೩೪

೫. ಚಳುಕಿ: ೩೭ ಅತೇದಿ

೬. ಸಳುಕಿ: ಕ್ರಿ.ಶ. ೮೭೨

೧೨. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೮-೯

೧೩. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೩೪



ಈ ಶಬ್ದದ ಚರ್ಚೆಯ ರೂಪರೇಷೆಗೆ ಒಳಪಡಿಸುವ ಸಮಾನ ಮೂಲದ ಶಬ್ದಗಳ ಜಾತಕವನ್ನು ಬಿಡಿಸಿ ನೋಡಬಹುದು. ಚವುಳು, ನವುಳ. ತಮಿಳು ಚವಡು, ತೆಲುಗು ಚವುಡು Z Ëq Ä೪ ಈ ಮೇಲಿನ ಮಾತುಗಳು ಚಲುಕ್ಯ ಪದದ ಅರ್ಥದ ಕುರಿತದ್ದಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಚಲುಕ್ಯ ಎಂಬ ಶಬ್ದದ ಹಿನ್ನೆಲೆಯಲ್ಲಿ ಚಲ್ಕಿ ಅಥವಾ ಚಳುಕಿ ಎಂಬ ಶಬ್ದಮೂಲವು ಇದ್ದಂತೆ ಭಾಸವಾಗುತ್ತದೆ. ಆದರೆ ಇವಿಷ್ಟರಿಂದಲೆ ಚಲುಕ್ಯ ಎಂಬ ರಾಜವಂಶದ ಪ್ರಾರಂಭ ಎಲ್ಲಿಂದ ಆರಂಭವಾಯಿತೆಂದು ಹೇಳಲಾಗದು. ಆದರೆ ಹಂಪನಾ ಅವರು ಮುಂದುವರೆದು, ಸಲಿಕೆ (ಚ್ಟ) ಸಲಾಕೆ, ಸಂಸ್ಕೃತ, ಶಲಾಕೆ, ಕಬ್ಬಿಣದ ಸರಳು, ಕೃಷಿ ಉಪಕರಣ. ಮೇಲಿನ ಶಬ್ದ ರೂಪಗಳ ಹಿನ್ನೆಲೆಯಿಂದ ನೋಡುವಾಗ ಚಳಿಯ, ಚವುಳ, ಜವುಳು ಎಂಬ ಶಬ್ದಗಳು ಒಂದು ಮೂಲ ಪ್ರಕೃತಿ (ಆಕೃತಿ) ಯಿಂದ ನಿಷ್ಪನ್ನವಾದ ಶಬ್ದಗಳೆಂದು ಕಾಣುತ್ತವೆ. ಇವೆಲ್ಲವೂ ಮಣ್ಣಿಗೆ ಸಂಬಂಧಿಸಿದ ಮಾತುಗಳು. ಸಲಿಕೆ, ಸಲಾಕೆ ಎಂಬುದನ್ನು ಚಳುಕ್ಯ, ಸಳುಕಿ ಎಂಬ ಶಬ್ದಮೂಲಕ್ಕೆ ಜ್ಞಾತಿಶಬ್ದಗಳೆಂದು ಕಲ್ಪಿಸಬಹುದು. ಇದರಿಂದ ಪ್ರತೀತವಾಗುವಂತೆ ಈ ಚಾಳುಕ್ಯ ವಂಶದ ಮೂಲದ ಪುರುಷರು ಒಕ್ಕಲು ಮಕ್ಕಳಾಗಿದ್ದು, ಅವರು ಮೊದಲು ಮಣ್ಣಿನ ಮಕ್ಕಳಾಗಿದ್ದು ಪ್ರಬಲ ಶಕ್ತಿ ಗಳಿಸಿ ಒಂದು ರಾಜಕುಲವಾಗಿ ಬೆಳೆದದು ಚಾಲುಕ್ಯರ ಕೃಷಿಕ ಕುಟುಂಬವೆಂದು ತೀರ್ಮಾನ ತಳೆಯಲು ನೆರವಾಗುವದು ಈ ವಂಶದ ಪೊಲಕೊಸಿನ್ ಎಂಬ ಹೆಸರು.

ಪೊಲ (ಹೊಲ)+ಕೇಸಿಸ್ (ಚೇಸಿನ್ ಮಾಡುವವನು)=ಪೊಲಕೇಸಿನ್ ಎಂಬುದಾಗಿದೆ. ತೆಲುಗು ಭಾಷೆಯಲ್ಲಿ ಚೇಸಿನ್ ಎಂಬ ಕ್ರಿಯಾರೂಪಕ್ಕೆ ಮಾಡಿದ ಎಂದೂ, ಚೇಸಿನವಾರು ಎಂಬುದಕ್ಕೆ ಮಾಡಿದವರು ಎಂದೂ ಅರ್ಥ. ಕೇಸಿನ್ ಚೇಸಿನ್ ಎಂಬುದು ತೌಲವಿಕರಣ ಗೊಂಡಿರುವ (palatalisation) ದ್ರಾವಿಡ ರೂಪ. ಇಂಥ ಇನ್ನೂ ಹತ್ತಾರು ಸಮಾನ ಸದೃಶ ರೂಪಗಳಿವೆ. ಕೆಲವು ಉದಾಹರಣೆಗಳು ಕೇರ–ಚೇರ, ಕೇಯ್–ಚೆಯ್, ಕೆದರು–ಚೆದರ್, ಗೆದ್ದಲು– ಚೆದಲ್ ಕೇಸಿಸ್ ಚೆಲೆವು. ಮೂಲ ದ್ರಾವಿಡ ಕ್ ಸ್ವರವು ಅದರ ಮುಂದೆ ಇರು ಎವ ಎಂಬ ಪೂರ್ವ ಸ್ವರಗಳು ಬಂದಾಗ ಅದು ತಮಿಳು, ತೆಲುಗು, ಮಲೆಯಾಳ ಭಾಷೆಗಳಲ್ಲಿ ಚ್ ಆಗುತ್ತದೆ.

ಪೂರ್ವೇತರ ಸ್ವರಗಳಾದ ಅ,ಉ,ಲ ಪರವಾದಾಗ ವ್ಯತ್ಯಾಸವಾಗುವುದಿಲ್ಲ. ಕನ್ನಡ ತುಳು ಭಾಷೆಗಳಲ್ಲಿ ಪೂರ್ವ ಪೂರ್ವೇತರ ಸ್ವರಗಳಲ್ಲಿ ಯಾವುದೇ ಬಂದರೂ ಸ್ವರ ವ್ಯತ್ಯಾಸ ಸಂಭವಿಸಿದೆ. ಕ್ ಸ್ವರ ಅಬಾಧಿತವಾಗಿಯೆ ನಿಲ್ಲುತ್ತದೆ. ಉದಾ (ಕನ್ನಡ) ಕಿರಿ, ಕೆಯ್, ಕೇರು, ಕೆದರು–ಈ ಶಬ್ದಗಳಿಗೆ ತಮಿಳು, ತೆಲುಗು, ಮಲೆಯಾಳಭಾಷೆಗಳಲ್ಲಿ ಕ್ರಮವಾಗಿ ಚಿರಿ, ಚೆಯ್–ಚೇತ್, ಚೇರುಕ್–ಚೆರುಗು, ಚೆದರು ಎಂಬ ರೂಪಗಳಿವೆ. ಪನಿಕೇಸರಿ ಪನಿಚೇಸರಿ ಪೊಲಕೇಸಿನ್ ಎಂಬುದು 'ಹೊಲ ಮಾಡುವವನು' ಎಂಬ ಅರ್ಥದ ಮಾತಾಗಿದೆ. ಇಂದಿಗೂ ಹೊಲ

---

೧೪. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೩೪



ಮಾಡಿಕೊಂಡಿದ್ದಾನೆ, ಹೊಲ ಗೆಯ್ಕೊಂಡಿದ್ದಾನೆ, ಹೊಲಗೆಯ್ಯ ಎಂಬುವ ರೈತಾಪಿ ಜನರ ರೂಢಿಯ ಮಾತುಗಳಾಗಿವೆ. ಪೊಲಕೇಸಿನ್ (ಹೊಲ ಮಾಡುವವನು) ಎಂಬ ಹೆಸರಿನ ಸ್ತ್ರೀ ಪುರುಷನನ್ನು ಕನ್ನಡ ಶಾಸನಗಳು ಹೆಸರಿಸಿವೆ. ಪೊಲ್ಲಬ್ಬೆ, ಹೊಲ್ಲಗಾವುಂಡ ಇತ್ಯಾದಿ ಶಬ್ದಗಳಿವೆ.[೧೫] ಮೇಲೆ ಹೇಳಿದ ಡಾ. ಹಂಪ ನಾಗರಾಜಯ್ಯ ಅವರ ಮಾತುಗಳು ಚಾಲುಕ್ಯ ಶಬ್ದದ ಹಿಂದಿನ ಚಲುಕ್ಯ ಶಬ್ದದ ಮೂಲವು ಚಲುಕ ಅಥವಾ ಚಲ್ಕ ಶಬ್ದ ಮತ್ತು ಪುಲಕೇಸಿನ್ ಪುಲಕೇಶಿ ಎಂಬುದು ಹಿನ್ನೆಲೆಯಲ್ಲಿ ಒಕ್ಕಲುತನ ಮಾಡಿಕೊಂಡಿದ್ದವರಿಂದಲೆ ಬಹುಶ ಚಲುಕ್ಯ ರಾಜಮನೆತನದ ರಾಜಲಾಂಛನ (ವರಾಹ)ವೂ ಇದೇ ಹಿನ್ನೆಲೆಯಿಂದ ಕೂಡಿರಬಹುದಾಗಿದೆ ಈ ಹಿನ್ನೆಲೆಯಲ್ಲಿಯೂ ಚಲುಕ್ಯರ ಮೂಲವನ್ನು ನೋಡಿದರೆ ತಪ್ಪಾಗಲಾರದು.

ಚಾಲುಕ್ಯರು ಮೂಲತಃ ಕರ್ನಾಟಕದವರು ಅದರಲ್ಲಿಯೂ ಉತ್ತರ ಕರ್ನಾಟಕದ ರೈತಾಪಿ ವರ್ಗದಿಂದಲೇ ಮೇಲೆ ಬಂದು ಬಲಿಷ್ಠರಾಗಿ, ಮುಂದೆ ರಾಜ್ಯ ಕಟ್ಟಿ ಆಳುವ ಹಂತಕ್ಕೆ ಬಂದರೆಂಬುದಕ್ಕೆ ಹಲವಾರು ಸಾಕ್ಷ್ಯಗಳು ದೊರಕುತ್ತವೆ. ಇವರು ಆಳಿದ ರಾಜ್ಯವನ್ನು ಕರ್ನಾಟಕ ರಾಜ್ಯವೆಂದು ಹೇಳಲಾಗುತ್ತಿತ್ತು ಇದನ್ನು ಹಲವಾರು ಶಾಸನಗಳು ಪುಷ್ಟೀಕರಿಸುತ್ತವೆ, ಅಲ್ಲದೆ ಕನ್ನಡಭಾಷೆಯಲ್ಲಿ ದೊರೆತ ಆಗಿನ ಶಾಸನಗಳು, ನಾಣ್ಯಗಳು ಇದನ್ನು ಬಲಪಡಿಸುತ್ತವೆ. ಚಾಲುಕ್ಯ ಶಬ್ದದ ನಿಷ್ಪತ್ತಿ ಅಥವಾ ಚಲುಕ್ಯರ ಮೂಲವೇನೇ ಇರಲಿ, ಕನ್ನಡ ನಾಡಿನ ಅಥವಾ ಕರ್ನಾಟಕ ರಾಜ್ಯದ ಒಟ್ಟು ಇತಿಹಾಸದಲ್ಲಿ ಚಾಲುಕ್ಯರ ಹೆಸರು ಶಾಶ್ವತವಾಗಿಯೇ ಉಳಿದಿರುತ್ತದೆ.

ಚಾಲುಕ್ಯರ ವಂಶದ ಆರಂಭಕಾಲ

ಚಲುಕ್ಯ ಅಥವಾ ಚಾಲುಕ್ಯ ವಂಶದ ಆರಂಭದಲ್ಲಿ ಕಂಡು ಬರುವ ಹೆಸರು ಜಯಸಿಂಹ ಅವನ ನಂತರ ಮಗ ರಣರಾಗ. ಬಹುಶಃ ಇಂದು ನಾವು ನೋಡುವ ಚಲುಕ್ಯವಂಶದ ಪ್ರಥಮರಾಜ ಜಯಸಿಂಹನೇ ಚಲುಕ್ಯ ಅರಸು ಮನೆತನದ ಮೂಲ ಪುರುಷ. ಜಯಸಿಂಹ (ಕ್ರಿ.ಶ. ೫೦೦–೫೨೦) ಈತನ ಮಗ ರಣರಾಗ (ಕ್ರಿ.ಶ. ಸುಮಾರು ೫೨೦–೫೪೦) ಇವನು ಕದಂಬರ ಮಾಂಡಲಿಕರಾಗಿ ಐಹೊಳೆಯಲ್ಲಿ ಆಡಳಿತ ನಡೆಸಿದರೆಂದು ತೋರುತ್ತದೆ. ಚಲುಕ್ಯ ಮನೆತನದ ಮೊದಲ ಸ್ವತಂತ್ರ ದೊರೆ ಎಂದರೆ ರಣರಾಗನ ಮಗನಾದ ಒಂದನೆಯ ಪೊಲೆಕೇಶಿ (ಪುಲಿಕೇಶಿ). ಇವನು ಕ್ರಿ.ಶ.ಸು ೫೪೦ರಲ್ಲಿ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಅಶ್ವಮೇಧ ಮೊದಲಾದ ಯಜ್ಞಗಳನ್ನು ಮಾಡಿದನು. ಕ್ರಿ.ಶ. ೫೪೩ ರಲ್ಲಿ ಇವನು ಕಟ್ಟಿಸಿದ ಕೋಟೆಯು ದಕ್ಷಿಣ ಭಾರತದ ಪ್ರಾಚೀನ ದುರ್ಗಗಳಲ್ಲಿ ಒಂದು. ಬಾದಾಮಿಯ ಜೀವವೆನಿಸಿರುವ ಅಗಸ್ತ್ಯತೀರ್ಥ (ಭೂತನಾಥ ಕೆರೆ) ಈತನ ಕಾಲದ ನಿರ್ಮಾಣ.[೧೬] ಚಾಲುಕ್ಯರ ಮೂಲ ಪುರುಷ ಜಯಸಿಂಹ ಎಂದು ಎಲ್ಲ ರೀತಿಯಲ್ಲಿಯು ಒಪ್ಪಿತವಾಗಿದೆ. ಶಾಸನಗಳಲ್ಲಿ

೧೫. ಡಾ. ಶೀಲಾಕಾಂತ ಪತ್ತಾರ್ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೩೫–೩೬

೧೬. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೧೩

ಇವನಿಗೆ ವಲ್ಲಭ, ಸತ್ಯಾಶ್ರಯ ಎಂಬ ಬಿರುದುಗಳಿರುವುದು ಕಂಡುಬರುತ್ತದೆ. ಶ್ರೀಯುತ ಎ.ಎಸ್. ನಂಜುಂಡಸ್ವಾಮಿಯವರು ಈ ವಿಚಾರದಲ್ಲಿ ಸ್ವಲ್ಪ ವಿಭಿನ್ನ ವಾದವನ್ನು ಮಂಡಿಸಿದ್ದಾರೆ. ಚಾಲುಕ್ಯ ಸಂತತಿಯ ಐತಿಹಾಸಿಕ ವ್ಯಕ್ತಿಗಳಲ್ಲಿ ಜಯಸಿಂಹ ಹಾಗೂ ಅವನ ಮಗನಾದ ರಣರಾಗ ಎಂಬುವರ ಹೆಸರುಗಳು ಮೊಟ್ಟಮೊದಲೇ ಬರುತ್ತವೆ. ಅವರು ಬಾಗಲಕೋಟ ಜಿಲ್ಲೆಯ ಬಾದಾಮಿಯ ಪ್ರದೇಶದಲ್ಲಿ ಆರನೆಯ ಶತಮಾನದ ಪೂರ್ವಾರ್ಧದಲ್ಲಿ ಆಳಿರಬಹುದೆಂದು ನಂಬಲಾಗಿದೆ. ಜಯಸಿಂಹನಿಗೆ ವಲ್ಲಭ ಅಥವಾ ವಲ್ಲಭೇಂದ್ರ ಎಂಬ ಬಿರುದಿತ್ತು.

ಐದನೆಯ ವಿಕ್ರಮಾದಿತ್ಯನ ಕೌಥೆಮ್ ಶಾಸನದಲ್ಲಿ ಜಯಸಿಂಹನು ರಾಷ್ಟ್ರಕೂಟ ಅರಸನಾಗಿದ್ದ ಕೃಷ್ಣನ ಮಗನಾಗಿದ್ದ. ಇಂದ್ರನು ಸೋಲಿಸಿ ಚಾಲುಕ್ಯರ ಪರಾಮಾಧಿಕಾರವನ್ನು ಮತ್ತೆ ಊರ್ಜಿತಗೊಳಿಸಿದನೆಂದು ಹೇಳಲಾಗಿದೆ. ಆದರೆ ತ್ರಿಲೋಚನ ಪಲ್ಲವನೊಂದಿಗೆ ಜರುಗಿದ ಸಮರದಲ್ಲಿ ಜಯಸಿಂಹನು ಮಡಿದನಂತೆ. ಆಗ ಗರ್ಭಿಣಿಯಾಗಿದ್ದ ಅವನ ರಾಣಿಯು ವಿಷ್ಣು ಸೇನೆ ಮಯಾಜಿ ಎಂಬ ಬ್ರಾಹ್ಮಣನ ಮನೆಯಲ್ಲಿ ಆಶ್ರಯ ಪಡೆದು, ರಾಜಸಿಂಹನೆಂಬ ಮಗನನ್ನು ಹಡೆದಳಂತೆ. ಅವನು ದೊಡ್ಡವನಾದ ಮೇಲೆ ಪಲ್ಲವರೊಂದಿಗೆ ಕಾಳಗಮಾಡಿ ಜಯಶೀಲನಾದುದಲ್ಲದೆ, ಕೌಥೆಮ್ ಶಾಸನದ ಪ್ರಕಾರ ಅಯೋಧ್ಯೆಯಲ್ಲಿ ಚಾಲುಕ್ಯಕುಲದ ಐವತ್ತೊಂಭತ್ತು ಮಂದಿ ಆಳಿದರೆಂದು, ನಂತರ ಹದಿನಾರು ಮಂದಿ ದಕ್ಷಿಣಾಪಥದಲ್ಲಿ ಆಳಿದರೆಂದು ಆದರೆ ಕೆಲವು ವರ್ಷಗಳ ಕಾಲ ಇಳಿಮುಖವಾಗಿದ್ದ ಚಾಲುಕ್ಯವಂಶದ ಘನತೆಯನ್ನು ಜಯಸಿಂಹನು ಮತ್ತೆ ಹೆಚ್ಚಿಸಿದನೆಂದು ಬಣ್ಣಿಸಲಾಗಿದೆ.

ಜಯಸಿಂಹನ ಮೊಮ್ಮಗನೂ ರಣರಾಗನ ಪ್ರಿಯತನುಜನೂ ಆಗಿದ್ದ ಒಂದನೆಯ ಪುಲಿಕೇಶಿಯನ್ನೇ ಬಾದಾಮಿ ಚಾಲುಕ್ಯ ರಾಜ್ಯದ ನಿಜವಾದ ಸ್ಥಾಪಕನೆನ್ನಬಹುದು.[೧೭] ಈ ಹಿನ್ನೆಲೆಯಲ್ಲಿ ಗಮನಿಸಿದರೆ ಚಾಲುಕ್ಯರ ವಂಶವು ಕ್ರಿ.ಶ. ಸುಮಾರು. ೫೦೦ ಕ್ಕೂ ಹಿಂದೆ ಅಸ್ತಿತ್ವದಲ್ಲಿದ್ದು ಬಹುಶಃ ಜಯಸಿಂಹನ ಕಾಲದಲ್ಲಿ ಹೆಚ್ಚು ಪ್ರಸಿದ್ಧಿಗೆ ಬಂದಿತೆನ್ನಬಹುದು. ಒಟ್ಟಿನಲ್ಲಿ ಚಾಲುಕ್ಯ ಅರಸುಮನೆತನವು ಜಯಸಿಂಹನಿಂದ ಮೊದಲಾದರೂ ಮೊದಲನೆಯ ಪುಲಿಕೇಶಿಯೇ ಚಾಲುಕ್ಯ ಅರಸು ವಂಶದ ಮೊದಲ ಸ್ವತಂತ್ರ ದೊರೆ ಎಂದು ಹೆಚ್ಚಿನ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮೊದಲನೆಯ ಪುಲಕೇಶಿ

ಇವನು ಜಯಸಿಂಹನ ಮೊಮ್ಮಗ, ರಣರಾಗನ ಮಗ. ಇವನ ಕಾಲದ ಕುರಿತಾಗಿಯೂ ವಿಭಿನ್ನ ಹೇಳಿಕೆಗಳಿವೆ. ಶ್ರೀಯುತ ಎಸ್. ಲಕ್ಷ್ಮೀನಾರಾಯಣರಾವ್ ತಮ್ಮ ಪೊಲೆಕೇಶಿ (ಪುಲಕೇಶಿ) ಎಂಬ ಹೆಸರಿನ ಅರ್ಥವೇನು? ಎನ್ನುವ ಲೇಖನದಲ್ಲಿ ಈತನ ಕಾಲ ಸುಮಾರು ಕ್ರಿ.ಶ.

---

೧೭. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೯-೧೦



೫೪೩–೫೬೬ ಎಂದು ಹೇಳುತ್ತಾರೆ. ಮೊದಲನೆಯ ಪೊಲಕೇಶಿ ಬಾದಾಮಿ ಚಾಲುಕ್ಯ ರಾಜ್ಯದ ಸ್ಥಾಪಕನು. ಇವನು ಪ್ರಾಯಶಃ ಕದಂಬರಿಂದ ಬಾದಾಮಿ ಪಟ್ಟಣವನ್ನು ವಶಪಡಿಸಿಕೊಂಡು ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಇದುವರೆಗೆ ದೊರೆತ ಕ್ರಿ.ಶ. ೫೪೩ರ ಇವನ ಒಂದೇ, ಶಾಸನವು ಇವನು ಈ ಪಟ್ಟಣವನ್ನು ಕೋಟೆಕೊತ್ತಲುಗಳಿಂದ ಭದ್ರಪಡಿಸಿ ಅಜೇಯವಾಗಿ ಮಾಡಿದನೆಂದು ಹೇಳುತ್ತದೆ. ಇವನು ಅಗ್ನಿಷ್ಟೋಮ, ವಾಜಪೇಯ, ಅಶ್ವಮೇಧಾದಿ ಯಾಗಗಳನ್ನು ಮಾಡಿದನೆಂದು ಶಾಸನಗಳು ಇವನನ್ನು ವರ್ಣಿಸುತ್ತವೆ. ಪ್ರಧಾನವಾದರೂ ಅನೇಕ ಯಾಗಗಳನ್ನು ಮಾಡಿದುದರಿಂದ ಇವನು ಬಹು ಶೂರನಾದ ಸಾಮ್ರಾಟನಾಗಿದ್ದನೆಂಬುದು[೧೮] ಸ್ಪಷ್ಟವಾಗಿದೆ.

ಶ್ರೀಯುತ ಎ. ಎಸ್. ನಂಜುಡಸ್ವಾಮಿಯವರು, ಒಂದನೆಯ ಪುಲಿಕೇಶಿಯ ಕಾಲವನ್ನು ಸುಮಾರು ಕ್ರಿ.ಶ. ೫೩೫–೫೬೬ ಎಂದು ಹೇಳಿರುತ್ತಾರೆ. ಇವರ ಪ್ರಕಾರ, ವಾತಾಪಿಯನ್ನಾಳಿದ ಚಾಲುಕ್ಯ ಸಂತತಿಯ ಮೊದಲ ಮಹಾರಾಜನಾದ ಒಂದನೆಯ ಪುಲಕೇಶಿಯು ರಾಜಸಿಂಹ ಅಥವಾ ರಣರಾಗನ ಮಗನು. ಪೊಲಕೇಶಿತ್ಯಭಿಖ್ಯಾತ ನಾಮಧೇಯೋ ರಣವಿಕ್ರಮ ದ್ವಿತೀಯ ನಾಮದೇಯ? ಎಂಬುದಾಗಿ ಶಾಸನದಲ್ಲಿ ವರ್ಣಿಸಲಾಗಿದೆ. ರಣವಿಕ್ರಮನೆಂಬ ಮತ್ತೊಂದು ಹೆಸರಿನ ಜೊತೆಗೆ ಸತ್ಯಾಶ್ರಯ ಶ್ರೀ ಪೃಥ್ವಿವಲ್ಲಭ, ಶ್ರೀ ವಲ್ಲಭ ಇತ್ಯಾದಿ ಬಿರುದುಗಳು ಅವನಿಗಿದ್ದವು. ಅಶ್ವಮೇಧ ಯಾಗದ ನಂತರ ಅವಭೃತ ಸ್ನಾನದಿಂದ ಶುಚಿರ್ಭೂತನಾದನೆಂದು ವರ್ಣಿಸಲ್ಪಟ್ಟಿರುವದರಿಂದ ಒಂದು ಪಾಳ್ಯದ ಅರಸನಾಗಿದ್ದವನು ಕದಂಬರನ್ನು ಮೂಲೆಗೊತ್ತಿ ರಾಜ್ಯವೊಂದನ್ನು ಕಟ್ಟಲು ಶ್ರಮಿಸಿದನೆಂದು ಹೇಳಬಹುದು.

ಮೊದಲು ಜುದುಕೊಂಟವು (ಈಗಿನ ಅಜಂತಾ) ಅವನ ರಾಜಧಾನಿಯಾಗಿತ್ತೆಂದು ಮಲಪ್ರಭಾ ನದಿಯ ಸಮೀಪದಲ್ಲಿ ಕೋಟೆಕೊತ್ತಲುಗಳಿಂದ ಕೂಡಿದ ವಾತಾಪಿ (ಈಗಿನ ಬಾದಾಮಿ)ಯನ್ನು ಕಟ್ಟಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ಹೇಳಲಾಗಿದೆ. (ಆದರೆ ಚಿಪ್ಳೂಣ್ ಶಾಸನವು, ವಾತಾಪಿಯ ಶಂಕು ಸ್ಥಾಪನೆಯ ಕೀರ್ತಿಯನ್ನು ಅವನ ಮಗನಾದ ಒಂದನೆಯ ಕೀರ್ತಿವರ್ಮನಿಗೆ ಸಲ್ಲಿಸಿದೆ.) ಈ ಚಾಲುಕ್ಯ ವಲ್ಲಭೇಶ್ವರನ ಬಾದಾಮಿ ಶಾಸನವು ಅವನನ್ನು ಹಿರಣ್ಯಗರ್ಭಪ್ರಸೂತ[೧೯]ನೆಂದು ಕರೆದಿದೆ.

ಮೊದಲನೆಯ ಪುಲಿಕೇಶಿಯೇ ಚಾಲುಕ್ಯ ವಂಶದ ಮೊದಲ ಸಾಮ್ರಾಟ ಮತ್ತು ಸ್ವತಂತ್ರ ದೊರೆಯೆಂದು ಹೇಳಬಹುದಾದ ಹಲವಾರು ದಾಖಲೆಗಳು ಇಂದು ಲಭ್ಯವಾಗುತ್ತವೆ. ಹಲವಾರು ವಿದ್ವಾಂಸರು ಈ ವಿಚಾರವನ್ನು ನಿರ್ವಿವಾದವಾಗಿ ಒಪ್ಪಿಕೊಂಡಿದ್ದಾರೆ. ಈತ ಹಲವಾರು ಯಾಗಗಳನ್ನು ದಾನ–ಧರ್ಮಗಳನ್ನು ಮಾಡಿ ಜಗದ್ವಿಖ್ಯಾತನಾಗಿರುವುದು ಮಾತ್ರವಲ್ಲದೆ

೧೮. ಡಾ. ಶೀಲಾಕಾಂತ ಪತ್ತಾರ್ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೩೦–೩೧

೧೯. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೧೧



ರಾಮಾಯಣ, ಮಹಾಭಾರತ ಮತ್ತು ಧರ್ಮಶಾಸ್ತ್ರ, ಪುರಾಣಗಳಲ್ಲೂ ಪರಿಶ್ರಮ ಹೊಂದಿದ್ದನು. ಪುಲಿಕೇಶಿಯು ಬಾತ್ಪೂರ ವಂಶದ ದುರ್ಲಭದೇವಿಯನ್ನು ವಿವಾಹವಾಗಿದ್ದನು. ಅವನಿಗೆ ಕೀರ್ತಿವರ್ಮ ಮತ್ತು ಮಂಗಳೇಶ ಎಂಬ ಇಬ್ಬರು ಪುತ್ರರು. ಪುಲಕೇಶಿಯು, ಕೀರ್ತಿವರ್ಮನೂ ಸೇರಿ ಮಹಾಕೂಟದಲ್ಲಿರುವ ಮಹಾಕೂಟೇಶ್ವರ ದೇವರಿಗಾಗಿ ಉಂಬಳಿ ನೀಡಿದರೆಂದು ಸ್ತಂಭ ಶಾಸನದಿಂದ ತಿಳಿದು ಬರುತ್ತದೆ. ಹಲವಾರು ಜನೋಪಯೋಗಿಯಾದ ಕೆಲಸಗಳನ್ನು ಮಾಡಿಸಿರುವುದಲ್ಲದೆ ರಾಜ್ಯದ ಭದ್ರತೆಗಾಗಿ ಕೋಟೆಕೊತ್ತಲುಗಳನ್ನು ನಿರ್ಮಿಸಿದನು. ಬಾದಾಮಿಯ ಜನರ ಉಪಯೋಗಕ್ಕಾಗಿ ಎರಡು ಬೆಟ್ಟಗಳ ನಡುವೆ ಒಡ್ಡನ್ನು ನಿರ್ಮಿಸಿ ಬೃಹದಾಕಾರದ ಕೆರೆಯನ್ನು ಕಟ್ಟಿಸಿದನು. ಅದು ಇಂದಿಗೂ ಜನರ ಜೀವನಾಡಿಯಾದ ಅಗಸ್ತ್ಯತೀರ್ಥ, ಇಂದು ಅದನ್ನು ಭೂತನಾಥ ಕೆರೆಯೆಂದೂ ಕರೆಯುತ್ತಾರೆ.

ಪುಲಿಕೇಶಿಯ ನಂತರ ಪಟ್ಟಕ್ಕೆ ಬಂದವನು ಆತನ ಹಿರಿಯ ಪುತ್ರನಾದ ಕೀರ್ತಿವರ್ಮ. ಕ್ರಿ.ಶ. ೫೬೬ ರಿಂದ ೫೯೮ರವರೆಗೆ ರಾಜ್ಯವಾಳಿದ ಕೀರ್ತಿವರ್ಮನನ್ನು ಐಹೊಳೆಯ ಶಾಸನವು ವಾತಾಪ್ಯ ಪ್ರಥಮ ವಿಧಾತಾ ಎಂದು ಹೊಗಳಿದೆ. ತನ್ನ ತಂದೆಯು ಸ್ಥಾಪಿಸಿದ ರಾಜ್ಯವನ್ನು ವಿಸ್ತರಿಸಿ ಅದಕ್ಕೆ ಸಾಮ್ರಾಜ್ಯದ ಘನತೆಯನ್ನು ತಂದು ಕೊಟ್ಟನು. ವಾತಾಪಿಪುರವನ್ನು ವಾಸ್ತು ಶಿಲ್ಪಗಳಿಂದ ಸಿಂಗರಿಸಿದ ಹಿರಿಮೆ ಈತನದು. ಬಾದಾಮಿಯ ಅತ್ಯಂತ ಭವ್ಯ ಹಾಗೂ ಸುಂದರವಾದ ವೈಷ್ಣವ ಗುಹಾದೇವಾಲಯವು ನಿರ್ಮಾಣಗೊಂಡಿದ್ದು ಈತನ ಆಳ್ವಿಕೆಯಲ್ಲಿಯೆ. ಮಂಗಲೇಶನ ಶಾಸನದಲ್ಲಿ ಉಲ್ಲೇಖಿತವಾಗಿರುವ ಮುಕುಟೇಶ್ವರ ಗುಡಿ ಮತ್ತು ದೇವದ್ರೋಣಿ (ಪುಷ್ಕರಣಿ)[೨೦] ಕೂಡ ಪ್ರಾಯಶಃ ಕೀರ್ತಿವರ್ಮನ ಕಾಣಿಕೆಗಳು.

ಕೀರ್ತಿವರ್ಮನು ಅಸಮಾನ ಸಾಹಸಿಯಾಗಿದ್ದವನು, ಹಲವಾರು ಯುದ್ಧಗಳನ್ನು ಮಾಡಿ ರಾಜ್ಯಕ್ಕೆ ಬೊಕ್ಕಸವನ್ನು ತುಂಬಿ ದೇಶದ ಕೀರ್ತಿಯನ್ನು ಉದ್ದಗಲಕ್ಕೂ ಹಬ್ಬಿಸಿದವನು. ಬಾದಾಮಿ, ಐಹೊಳೆಯ ಸುತ್ತ ಮುತ್ತ ಹಲವಾರು ದೇವಾಲಯಗಳು ಈತನ ಕಾಲದಲ್ಲಿ ನಿರ್ಮಾಣವಾದವು. ಮಾತ್ರವಲ್ಲದೆ ಬಾದಾಮಿಯ ಪ್ರಸಿದ್ಧ ಗುಹಾದೇವಾಲಯಗಳ ರಚನೆಯಾದುದು ಈತನ ಕಾಲಾವಧಿಯಲ್ಲಿಯೇ. ಇವನಿಗೆ ಸತ್ಯಾಶ್ರಯ, ಬರುರುಣ ಪರಾಕ್ರಮ ಮುಂತಾದ ಬಿರುದುಗಳು ಇದ್ದವು. ಸೇಂದ್ರಕ ರಾಜಮನೆತನದ ರಾಜ ಸೇನಾನಂದನ ಸೋದರಿಯನ್ನು ಈತ ವಿವಾಹವಾಗಿದ್ದ. ಉತ್ತರ ಕೊಂಕಣದ ಮೌರ್ಯರನ್ನು ಸೋಲಿಸಿ ಆ ಪ್ರದೇಶವನ್ನು ತನ್ನ ಆಳ್ವಿಕೆಗೆ ತೆಗೆದುಕೊಂಡನು. ಬನವಾಸಿಯ ಕದಂಬರನ್ನು ಮೂಲೆಗೊತ್ತಿದನು. ಬಳ್ಳಾರಿ ಮತ್ತು ಕರ್ನೂಲುಗಳನ್ನು ಆಳುತ್ತಿದ್ದ ನಳರನ್ನು ಗೆದ್ದು ರಾಜ್ಯವನ್ನು ವಶಪಡಿಸಿಕೊಂಡನು.

ಐಹೊಳೆಯ ಶಾಸನವು ಕೀರ್ತಿವರ್ಮನ ಸಾಧನೆಗಳನ್ನು ಹಾಡಿ ಹೊಗಳಿ ಕೊಂಡಾಡಿದೆ. ಒಟ್ಟಿನಲ್ಲಿ ಈತ ಸಮಸ್ತ ಸಣ್ಣ ಪುಟ್ಟ ರಾಜರನ್ನು ಸೋಲಿಸಿ ರಾಜ್ಯ ವಿಸ್ತಾರವನ್ನು ಮಾಡಿದುದಲ್ಲದೆ

೨೦. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೧೨

ಅವುಗಳ ಕುರುಹಾಗಿ ಹಲವಾರು ದೇವಾಲಯಗಳ ರಚನೆಗೆ ಕಾರಣವಾದುದು ಕಂಡುಬರುತ್ತದೆ. ಕೀರ್ತಿವರ್ಮನಿಗೆ ನಾಲ್ವರು ಮಕ್ಕಳು ಪುಲಕೇಶಿ, ವಿಷ್ಣುವರ್ಧನ, ಧಾರಾಶ್ರಯ ಜಯಸಿಂಹ ಮತ್ತು ಬುದ್ಧವರ ಅವನ ತಾಯಿ ಬಟ್ಟುರ ವಂಶದ ದುರ್ಲಭಾದೇವಿಯು, ಅವನ ಹೆಂಡತಿ ಸೇಂದ್ರಕ ವಂಶದ ರಾಜಕುಮಾರಿ, ಶ್ರೀ ವಲ್ಲಭಸೀನಾನಂದನ ಸೋದರಿ, ಈತನ ಅವಸಾನ ಕಾಲ ಕ್ರಿ.ಶ. ೫೯೬–೫೯೭. ಇವನು ತೀರಿಕೊಂಡಾಗ ಇವನ ಮಗ ಪುಲಿಕೇಶಿಯು ತೀರ ಚಿಕ್ಕವ, ಮೊದಲನೆಯ ಕೀರ್ತಿವರ್ಮನ ತಮ್ಮನಾದ ಮಂಗಲೀಶ ರಾಜ್ಯದ ಆಡಳಿತ ಸೂತ್ರಗಳನ್ನು ವಹಿಸಿಕೊಂಡು ರಾಜ್ಯಭಾರ ನಡೆಸಿದನು. ಈತನು ಮೊದಲನೆಯ ಕೀರ್ತಿವರ್ಮನ ಮಲತಮ್ಮನೆಂದು ತೋರುತ್ತದೆ. ಈತನನ್ನು ಮಂಗಲರಾಜ, ಮಂಗಲೀಶ, ಮಂಗಲಾರ್ಣವ ಮತ್ತು ಮಂಗಲೇಶ್ವರ ಎಂದು ಕೂಡ ಕರೆಯಲಾಗುತ್ತಿತ್ತು ಈತನು ರಣವಿಕ್ರಾಂತ, ಉರುರಣ ವಿಕ್ರಾಂತ, 'ಪೃಥಿವೀವಲ್ಲಭ', ಶ್ರೀ ಪೃಥಿವೀವಲ್ಲಭೇಂದ್ರ[೨೧] ಎಂಬ ಬಿರುದುಗಳನ್ನು ಹೊಂದಿದ್ದನು, ಈತನನ್ನು ಪರಮಭಾಗವತ ಎಂದು ಬಣ್ಣಿಸಲಾಗಿದೆ.

ಆದರೆ ಈತ ಬಹು ಮಹತ್ವಕಾಂಕ್ಷೆಯ ವ್ಯಕ್ತಿಯಾಗಿದ್ದು ಕೀರ್ತಿವರ್ಮನ ಹಿರಿಯ ಮಗ ಪುಲಕೇಶಿಯು ಪ್ರಾಪ್ತ ವಯಸ್ಕನಾದಾಗ ರಾಜ್ಯ ಬಿಟ್ಟು ಕೊಡಲಿಲ್ಲ. ಅಲ್ಲದೆ ತನ್ನ ಮಗನಿಗೆ ಅಧಿಕಾರ ಸಿಗುವ ಸಲುವಾಗಿ ಪುಲಕೇಶಿಯನ್ನು ಕೊಲ್ಲಿಸಲು ಸಂಚು ರೂಪಿಸಿದನು. ಆಗ ಪುಲಕೇಶಿಯು ರಾಜ್ಯ ಬಿಟ್ಟು ಹೋಗಿ ಒಂದೆಡೆ ಅವಿತು ತನ್ನ ಬೆಂಬಲಿಗರನ್ನು ಒಟ್ಟು ಸೇರಿಸಿ ಚಿಕ್ಕಪ್ಪನಾದ ಮಂಗಳೇಶನ ಮೇಲೆ ಯುದ್ಧಮಾಡಿ ರಾಜ್ಯವನ್ನು ಕಿತ್ತುಕೊಂಡುದಲ್ಲದೆ ಮಂಗಳೇಶನನ್ನು ಸಂಹಾರ ಮಾಡಿದನು. ಈ ಸ್ವಲ್ಪ ಸಮಯದಲ್ಲಿ ರಾಜ್ಯದಲ್ಲಿ ಅಂತರ್ಯುದ್ಧವೂ ಅತಿಯಾಗಿ ನಡೆದಿದ್ದು ಕಂಡುಬರುತ್ತದೆ. ಮುಂದೆ ಕ್ರಿ.ಶ ೬೧೦ ರಿಂದ ಇಮ್ಮಡಿ ಪುಲಕೇಶಿಯ ಚಾಲುಕ್ಯರ ರಾಜನಾದನು.

ಇಮ್ಮಡಿ ಪುಲಕೇಶಿ (ಕ್ರಿ.ಶ.೬೧೦–೬೪೨)

ಚಾಲುಕ್ಯ ಅರಸರಲ್ಲಿಯೆ ಅತ್ಯಂತ ಪ್ರಖ್ಯಾತನಾದವನೆಂದರೆ ಇಮ್ಮಡಿ ಪುಲಕೇಶಿ. ಕೀರ್ತಿವರ್ಮನ ಮಗನಾದ ಈತ ಸಹಜವಾಗಿ ರಾಜ್ಯದ ಹಕ್ಕುದಾರನಾಗಿದ್ದನು. ಉಸ್ತುವಾರಿ ರಾಜನಾಗಿದ್ದ ತನ್ನ ಚಿಕ್ಕಪ್ಪ ಮಂಗಳೇಶನು ಈತನಿಗೆ ರಾಜ್ಯ ನಿರಾಕರಿಸಿದುದರ ಪರಿಣಾಮವಾಗಿ ರಾಜ್ಯ ಭ್ರಷ್ಟನಾಗಿ ಸ್ವತಂತ್ರ ಸೈನ್ಯವನ್ನು ಕಟ್ಟಿ, ಚಿಕ್ಕಪ್ಪನಾದ ಮಂಗಳೇಶನನ್ನು ಸೋಲಿಸಿ, ರಾಜ್ಯವನ್ನು ಆತನಿಂದ ಕಸಿದುಕೊಂಡು ರಾಜ್ಯನಾದವನು. ಹಾಗೆಂದು ಮಂಗಳೇಶನು ಸಾಮಾನ್ಯನಾಗಿರಲಿಲ್ಲ ಸ್ವತ ಅಸದಳ ಪರಾಕ್ರಮಿ, ರಣವಿಕ್ರಮನಾಗಿದ್ದ, ಆತನನ್ನೇ ಸೋಲಿಸಿದನೆಂದ ಮೇಲೆ ಆತನ ಶೂರತನಕ್ಕೆ ಬೇರೆ ಉದಾಹರಣೆ ಬೇಕಿಲ್ಲ. ಆದರೂ ತಾನು ರಾಜ್ಯಭಾರ ವಹಿಸಿಕೊಂಡಾಗ

೨೧. ಡಾ. ಎಸ್. ಸಿ. ನಂದಿಮಠ (ಮೂಲ) : ಕರ್ನಾಟಕ ಪರಂಪರೆ, ಸಂ–೧, ಪುಟ – ೨೪೨

ಬಾದಾಮಿ ಚಾಲುಕ್ಯರ ರಾಜ್ಯಾಡಳಿತ ಸುಗಮವಾಗಿರಲಿಲ್ಲ. ತನ್ನ ಆಪ್ತರೆ ಆಗಿದ್ದ ಅಪ್ಪಾಮಿಕ ಮತ್ತು ಗೋವಿಂದರೆಂಬ ಇಬ್ಬರು ನಾಯಕರು ಅವನ ವಿರುದ್ಧ ದಂಗೆ ಎದ್ದರು. ಅವರನ್ನು ಸದೆ ಬಡಿದು ಅಂತಃಕಲಹವನ್ನು ಕೊನೆಗಾಣಿಸಿ ರಾಜ್ಯವನ್ನು ಸುಭಿಕ್ಷದತ್ತ ಕೊಂಡೊಯ್ದನು. ಇವನು ಮಹಾರಾಜ ಪೃಥ್ವಿವಲ್ಲಭ, ವಲ್ಲಭೇಂದ್ರ, ಸತ್ಯಾಶ್ರಯ ಇತ್ಯಾದಿ ಬಿರುದುಗಳನ್ನು ಹೊಂದಿದನು. ಶಾಸನಗಳಲ್ಲಿ ಇವನ ಹೆಸರನ್ನು ಪುಲಕೇಶಿ, ಪೊಲೆಕೇಶಿ, ಪುಲಿಕೇಶಿ ಮುಂತಾದ ರೀತಿಗಳಲ್ಲಿ ಉಲ್ಲೇಖಿಸಲಾಗಿದೆ. ಪರಮೇಶ್ವರ ಎಂಬ ಸಾಮ್ರಾಜ್ಯಶಾಹಿ ಪ್ರಶಸ್ತಿಯು ಈತನಿಗಿದ್ದಿತ್ತು.[೨೨] ಗಂಗ ರಾಜನಾದ ದುರ್ವಿನೀತನು ಈತನ ಸಾಮರ್ಥ್ಯಕ್ಕೆ ಸೋತು ತಲೆಬಾಗಿ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದನು. ಇದರಿಂದ ದಕ್ಷಿಣ ಕರ್ನಾಟಕ ಪ್ರದೇಶವು ಇವನ ಆಳ್ವಿಕೆಗೆ ಒಳಪಟ್ಟಿತು. ಕೊಂಕಣದ ಮೌರ್ಯರನ್ನು ಪರಾಭವಗೊಳಿಸಿ ಮುಂಬೈ ಬಳಿಯ ಎಲಿಫೆಂಟಾ ದ್ವೀಪದ ಮೇಲಿದ್ದ ಪುರಿನಗರವನ್ನು ಸ್ವಾಧೀನ ಪಡಿಸಿಕೊಂಡನು.[೨೩] ಈ ರೀತಿ ಪಶ್ಚಿಮದ ಪ್ರದೇಶ ಅವನ ಕೈವಶವಾಯಿತು.

ಐಹೊಳೆಯ ಪ್ರಶಸ್ತಿ ಶಾಸನವು ಇಮ್ಮಡಿ ಪೊಲಕೇಶಿಯ ಪರಾಕ್ರಮ, ದಿಗ್ವಿಜಯಗಳನ್ನು ಸುದೀರ್ಘವಾಗಿ ಬಣ್ಣಿಸಿದೆ. ಅವನು ಚತುರ್ದಿಶೆಗಳಲ್ಲಿ ಜಯಸಾಧಿಸಿದನು. ಬನವಾಸಿಯ ಕದಂಬರು, ತಲಕಾಡಿನ ಗಂಗರು, ಅಳುಪರು, ಕೊಂಕಣದ ಮೌರ್ಯರು, ಲಾಟದ ಅರಸರು, ಮಾಳವರು ಇಮ್ಮಡಿ ಪೊಲಕೇಶಿಯ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ಉತ್ತರಾಪಥೇಶ್ವರ ನೆನಿಸಿದ್ದ ಹರ್ಷವರ್ಧನನನ್ನು ನರ್ಮದೆಯ ತೀರದಲ್ಲಿ ಪರಾಭವಗೊಳಿಸಿ ದಕ್ಷಿಣಾಪಥೇಶ್ವರ ನೆನಿಸಿದನು. ಪಲ್ಲವ ದೊರೆ ಒಂದನೆಯ ಮಹೇಂದ್ರವರ್ಮನನ್ನು ಸೋಲಿಸಿದನು. ಬಾದಾಮಿಯ ಸಾಮ್ರಾಟನು ೯೯,೦೦೦ ಗ್ರಾಮಗಳನ್ನೊಳಗೊಂಡ ಮಹಾರಾಷ್ಟ್ರಕತ್ರಯ ಎಂದು ಕರೆಯಲ್ಪಟ್ಟ ವಿಶಾಲ ಸಾಮ್ರಾಜ್ಯದ ಪ್ರಭುವೆನಿಸಿದನು. ಈತನ ಆಳ್ವಿಕೆಯಲ್ಲಿ ದಕ್ಷಿಣ ಭಾರತವನ್ನು ಸಂದರ್ಶಿಸಿದ ಚೀನಿ ಯಾತ್ರಿಕ ಹುಯೆನ್‌ತ್ಸಾಂಗನು[೨೪] ಚಾಲುಕ್ಯರ ನಾಡು ಮತ್ತು ಅಲ್ಲಿನವರ ಕುರಿತು ಹೆಮ್ಮೆಯ ಮಾತನ್ನು ಹೇಳಿದ್ದಾನೆ.

ನಿಸ್ಸೀಮ ಸಾಹಸಿಯಾಗಿದ್ದ ಇಮ್ಮಡಿ ಪೊಲಿಕೇಶಿಯು ರಾಜ್ಯಗಳ ನಂತರ ರಾಜ್ಯಗಳನ್ನು ವಶಪಡಿಸಿಕೊಳ್ಳುತ್ತ ಹೋದನು. ಹೀಗೆ ವಶಪಡಿಸಿಕೊಂಡ ರಾಜ್ಯಗಳನ್ನು ತನ್ನ ಅಂಕೆಯಲ್ಲಿರಿಸಿಕೊಳ್ಳುವುದು ಸುಲಭದ ಮಾತಲ್ಲ. ಆದುದರಿಂದ ತನ್ನ ಸಹೋದರರನ್ನೆ ಪ್ರಧಾನ ಮಂತ್ರಿಗಳನ್ನಾಗಿ, ಉಳಿದ ರಾಜ್ಯಗಳ ಅಧಿಕಾರಿಗಳನ್ನಾಗಿಯೂ ನೇಮಕ ಮಾಡಿಕೊಂಡನು. ಉತ್ತರಾಪಥವನ್ನು ರಾಜ ಹರ್ಷವರ್ಧನನನ್ನು ಸೋಲಿಸಿ ತನ್ನ ತೆಕ್ಕೆಗೆ ತೆಗೆದುಕೊಂಡನು.

---

೨೨. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೧೪-೧೫

೨೩. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೧೫

೨೪. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ –



ಹರ್ಷವರ್ಧನನನ್ನು ಗೌರವಿಸಿ ಮಿತ್ರನನ್ನಾಗಿ ಮಾಡಿಕೊಂಡು ಆ ರಾಜ್ಯವನ್ನು ಅವನಿಗೆ ಹಿಂದಿರುಗಿಸಿದನು. ಮಹಾರಾಷ್ಟ್ರದ ಕೆಲ ಪ್ರಾಂತಗಳಿಗೆ ತನ್ನ ಒಬ್ಬ ಸಹೋದರ ಧರಾಶ್ರಯನನ್ನು ಪ್ರಧಾನನ್ನಾಗಿ ನೇಮಕ ಮಾಡಿದನು. ಆಂಧ್ರಪ್ರದೇಶವನ್ನೊಳಗೊಂಡ ವೆಂಗಿಮಂಡಲಕ್ಕೆ ತನ್ನ ಪ್ರೀತಿಯ ಸಹೋದರನಾದ ವಿಷ್ಣುವರ್ಧನ(ಕುಬ್ಜ ವಿಷ್ಣು) ನನ್ನು ನೇಮಿಸಿದನು. ಈ ವಿಷ್ಣುವರ್ಧನ ಐದು ಶತಮಾನಗಳ ಕಾಲ ಆಳಿದ ಪೂರ್ವ ಚಾಲುಕ್ಯ ರಾಜರಲ್ಲಿ ಮೊದಲನೆಯವನು. ಆಗ ವೆಂಗಿಯು ಆ ರಾಜ್ಯದ ರಾಜಧಾನಿಯಾಗಿತ್ತು. ಪುಲಕೇಶಿಯು ತನ್ನ ಮತ್ತೋರ್ವ ಸಹೋದರನಾದ ಜಯಸಿಂಹನನ್ನು ವಾಯುವ್ಯ ಪ್ರಾಂತಗಳಿಗೆ ರಾಜಪ್ರತಿನಿಧಿಯನ್ನಾಗಿ ನೇಮಿಸಿದನು. ಆ ಜಯಸಿಂಹನೇ[೨೫] ಗುಜರಾತಿನ ಚಾಲುಕ್ಯ ಅಥವಾ ಸೋಲಂಕಿ ಸಂತತಿಯ ಸ್ಥಾಪಕನಾದನು.

ಹರ್ಷವರ್ಧನನನ್ನು ಸೋಲಿಸಿ ಎರಡನೆಯ ಪುಲಿಕೇಶಿಯು ಪರಮೇಶ್ವರ ಎಂಬ ಬಿರುದಿಗೆ ಪಾತ್ರನಾದನು. ಹರ್ಷವರ್ಧನನನ್ನು ಈತ ಸೋಲಿಸಿದ ವರ್ಷ ಬಹುಶಃ ಕ್ರಿ.ಶ ೬೧೨ ರ ಸುಮಾರಿಗೆ ಇರಬಹುದೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಪಲ್ಲವರ ಮೇಲಿನ ದಿಗ್ವಿಜಯ ಬಹುಶಃ ಕ್ರಿ.ಶ. ೬೩೦ರ ಹೊತ್ತಿಗೆ ಇರಬಹುದೆಂದು ಅಭಿಪ್ರಾಯ ಪಡಲಾಗಿದೆ. ಎರಡನೆಯ ಪುಲಿಕೇಶಿಯು ಮಹಾಪರಾಕ್ರಮಿ ಮತ್ತು ರಾಜಕಾರಣಿಯಾಗಿದ್ದನೆಂದು ಅವನ ಕಾಲದಲ್ಲಿ ರಚಿತವಾದ ಐಹೊಳೆಯ ಮೇಗುಟಿ ಗುಡಿಯಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ಅದರ ರಚನಾಕಾಲ ಸುಮಾರು ಕ್ರಿ.ಶ. ೬೩೪-೩೫. ಇದನ್ನು ಪುಲಿಕೇಶಿಯ ಆಶ್ರಿತನಾದ ರವಿಕೀರ್ತಿ[೨೬]ಯೆಂಬ ಜೈನಕವಿಯು ಪ್ರೌಢವಾದ ಸಂಸ್ಕೃತ ಪದ್ಯ ಮತ್ತು ಗದ್ಯರೂಪದಲ್ಲಿ ರಚಿಸಿರುವುದು.

ಇಮ್ಮಡಿ ಪುಲಿಕೇಶಿಯ ಕೀರ್ತಿಯು ಭಾರತದಿಂದಾಚೆಗೆ ವಿದೇಶಗಳಿಗೂ ಹಬ್ಬಿತ್ತು. ಅವನ ಕೀರ್ತಿಯಿಂದ ಪ್ರಭಾವಿತನಾದ ಪರ್ಶಿಯಾದ ರಾಜ ಎರಡನೆಯ ಖುಸ್ರುವು ಆತನ ಸ್ನೇಹ ಬಯಸಿ ತನ್ನ ರಾಯಭಾರಿಯನ್ನು ಕಳುಹಿಸಿಕೊಟ್ಟಿದ್ದ. ಮುಸ್ಲಿಂ ಇತಿಹಾಸಕಾರನಾದ ಕಬರಿಯ ವರದಿಯ ಪ್ರಕಾರ ಕ್ರಿ.ಶ. ೬೦೫-೨೬ ರಲ್ಲಿ ಪರ್ಷಿಯಾದ ಅರಸನಾಗಿದ್ದ ಎರಡನೆಯ ಖುಸ್ರುವು ಚಾಲುಕ್ಯರ ಅರಸ ಪೃಮೇಶನ (ಪರಮೇಶ್ವರ ಪುಲಿಕೇಶಿ) ಪರವಾಗಿ ಬಂದ ರಾಯಭಾರಿಯನ್ನು ಬರ ಮಾಡಿಕೊಂಡನು. ಅದಕ್ಕೆ ಮೊದಲು ಪರ್ಷಿಯನ್ ರಾಯಭಾರಿಯು ಪುಲಿಕೇಶಿಯ ಆಸ್ಥಾನಕ್ಕೆ ಬಂದಿದ್ದನು.[೨೭] ಇಮ್ಮಡಿ ಪುಲಿಕೇಶಿಯ ಇನ್ನೊಂದು ಮಹತ್ಸಾಧನೆ ಎಂದರೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರದ ಭಾಗಗಳನ್ನೊಳಗೊಂಡ ವಿಶಾಲವಾದ ಸಾಮ್ರಾಜ್ಯವನ್ನು ಏಕತೆಗೊಳಿಸಿ ಮಹಾರಾಷ್ಟ್ರಕತೆಯ ಎಂದು ಕರೆಯಲಾಗುವ ಸಾಮ್ರಾಜ್ಯವನ್ನು ಸ್ಥಾಪಿಸಿದುದು,

೨೫. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೧೬

೨೬. ಎ.ಎಂ. ಅಣ್ಣಿಗೇರಿ : ಐಹೊಳೆ ಸಂಸ್ಕೃತಿ ಮತ್ತು ಕಲೆ, ಪುಟ – ೫

೨೭. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೧೭



ಇದು ಮೂರೂ ರಾಜ್ಯಗಳನ್ನೊಳಗೊಂಡು ೯೯.೦೦೦ ಸಾವಿರ ಗ್ರಾಮಗಳನ್ನು ಹೊಂದಿದೆ. ಪುಲಿಕೇಶಿ ೯೯.೦೦೦ ಗ್ರಾಮಗಳುಳ್ಳ ಮೂರು ರಾಷ್ಟ್ರಗಳಿಗೆ ಅಧಿಪತಿಯಾದನೆಂದು ಐಹೊಳೆ ಶಾಸನದಲ್ಲಿ ಬರೆದಿದೆ. ಅವನ ರಾಜಧಾನಿ ವಾತಾಪಿ (ಬಾದಾಮಿ)ಯಾಗಿತ್ತು.[೨೮] ಈ ಮಹಾರಾಷ್ಟ್ರ ವೆಂಬುದರ ಕುರಿತು ವಿದ್ವಾಂಸರಲ್ಲಿ ವಿಭಿನ್ನ ಅಭಿಪ್ರಾಯವೂ ಇದೆ. ಇಂದಿನ ಕರ್ನಾಟಕ ಬನವಾಸಿ ಹಾಗೂ ಕೊಂಕಣ ದೇಶಗಳು ಸೇರಿ ಈ ಮಹಾರಾಷ್ಟ್ರ ಎಂಬ ಹೆಸರು ಬಂದಿರಬಹುದು ಎಂದು ಕೆಲ ವಿದ್ವಾಂಸರು ಅಭಿಪ್ರಾಯ ಪಟ್ಟಿರುವುದೂ ಇದೆ.

ಒಂದನೆಯ ವಿಕ್ರಮಾದಿತ್ಯ

ಮೊದಲನೆಯ ವಿಕ್ರಮಾದಿತ್ಯನ ಗಿರಿಯಣ್ಣ ಚಂದ್ರಾದಿತ್ಯನ ಉಲ್ಲೇಖ ಮಾಡುತ್ತದೆ. ಅದರಲ್ಲಿ ಇವನನ್ನು 'ಪೃಥ್ವೀವಲ್ಲಭ' ಮತ್ತು 'ಮಹಾರಾಜ' ಎಂದು ಕರೆಯಲಾಗಿದೆ. ಈ ದತ್ತಿ ಶಾಸನದ ದಿನಾಂಕವು ಡಾ. ಫ್ಲೀಟರ ಪ್ರಕಾರ ಕ್ರಿ.ಶ. ೧೩–೯–೬೫೫ ಕ್ಕೆ ಸರಿಹೊಂದುತ್ತದೆ. ಆ ಶಾಸನವು ಮೊದಲನೆಯ ವಿಕ್ರಮಾದಿತ್ಯನನ್ನು ವರ್ಣಿಸುತ್ತ ಅವನು ಎಂದೂ ಹಿಮ್ಮೆಟ್ಟಿದವನೆಂದೂ ದೇಶ ದೇಶಗಳ ರಿಪುರಾಜರನ್ನು ಪರಾಜಯಗೊಳಿಸಿದವನೆಂದೂ ತನ್ನ ಪೂರ್ವಜರ ಭಾಗ್ಯ ಮತ್ತು ಸಾರ್ವಭೌಮತ್ವವನ್ನು ಸಂಪಾದಿಸಿದನೆಂದೂ ಹೇಳುತ್ತದೆ.[೨೯] ಚಾಲುಕ್ಯ ರಾಜವನ್ನಾಳಿದ ಈತನ ಕಾಲದಲ್ಲಿ ಚಾಲುಕ್ಯರ ಕೀರ್ತಿ ಜಗತ್ತಿನಾದ್ಯಂತ ಹಬ್ಬಿತ್ತು. ಹಲವಾರು ದೇವಾಲಯಗಳನ್ನು ನಿರ್ಮಿಸಿದ ಈತನ ಕಾಲದಲ್ಲಿ ಸಾಹಿತ್ಯ, ಕಲೆ, ಸಂಸ್ಕೃತಿಗೆ ವಿಶೇಷ ಪ್ರೋತ್ಸಾಹ ದೊರಕಿತ್ತು. ಇಂದಿನ ಬಾದಾಮಿಯಲ್ಲಿ ಆಗಿನ ಕಾಲದ ಹಲವಾರು ದೇವಾಲಯಗಳು ಮತ್ತು ಶಾಸನಗಳು ದೊರಕಿರುವುದು ರಾಜಕೀಯ ಇತಿಹಾಸ ಸಂಶೋಧಕರಿಗೆ ಉತ್ತಮ ಆಕರವಾಗಿವೆ.

ವಿನಯಾದಿತ್ಯ

ಒಂದನೆಯ ವಿಕ್ರಮಾದಿತ್ಯನ ನಂತರ ವಿನಯಾದಿತ್ಯನು ತನ್ನ ತಂದೆ ಒಂದನೆಯ ವಿಕ್ರಮಾದಿತ್ಯನ ನಂತರ ಕ್ರಿ.ಶ. ೬೮೨ರಲ್ಲಿ ಪಟ್ಟಕ್ಕೆ ಬಂದನು. ಅವನ ಬಿರುದುಗಳು 'ಸತ್ಯಾಶ್ರಯ' ಮತ್ತು 'ರಾಜಾಶ್ರಯ' ಕವು ಠೇಮದ ದತ್ತಿಲಿಪಿಯಲ್ಲಿ ಅವನನ್ನು "ಯುದ್ಧಮಲ್ಲ" ಎಂದೂ ಕರೆಯಲಾಗಿದೆ. ರನ್ನ ಕವಿಯು ಅವನನ್ನು "ದುರ್ಧರ ಮಲ್ಲ" ಎಂದು ಕರೆದಿದ್ದಾನೆ. ತನ್ನ ತಂದೆಯ ಅಪ್ಪಣೆಯ ಮೇರೆಗೆ ಚೋಳ, ಪಾಂಡ್ಯ, ಕೇರಳ, ಈ ಮೂವರು ರಾಜರ ಮತ್ತು ಪಲ್ಲವರ ಬಲಾಧಿಕ್ಯವನ್ನು ವಿನಯಾದಿತ್ಯನು ತಡೆಗಟ್ಟಿದನೆಂದು ಹೇಳಲಾಗಿದೆ. ವಿನಯಾದಿತ್ಯನಿಗೆ ವಿಜಯಾದಿತ್ಯ ಎಂಬ ಮಗನೂ ಕುಂಕುಮ ಮಹಾದೇವಿ[೩೦] ಎಂಬ ಒಬ್ಬ ಮಗಳೂ ಇದ್ದರು.

---

೨೮. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೩೮

೨೯. ಆರ್. ಆರ್. ದಿವಾಕರ್ (ಸಂ.) : ಕರ್ನಾಟಕ ಪರಂಪರೆ, ಆದಿಕಾಲ, ಸಂ –೧, ಪುಟ – ೨೫೦

೩೦. ಆರ್. ಆರ್. ದಿವಾಕರ್ (ಸಂ.) : ಕರ್ನಾಟಕ ಪರಂಪರೆ, ಆದಿಕಾಲ, ಸಂ –೧, ಪುಟ – ೨೫೧

ವಿಜಯಾದಿತ್ಯ

ವಿನಯಾದಿತ್ಯನ ನಂತರ ಆತನ ಉತ್ತರಾಧಿಕಾರಿಯಾಗಿ ವಿನಯಾದಿತ್ಯನ ಮಗ ವಿಜಯಾದಿತ್ಯನು ಆಡಳಿತವನ್ನು ನಡೆಸಿದನು. ಈತನು ಶೂರನು, ಅತಿಶಯ ಪರಾಕ್ರಮಿಯೂ ಆಗಿದ್ದಾತ. ಸತ್ಯಾಶ್ರಯ, ಸಮಸ್ತ, ಭುವನಾಶ್ರಯ, ಪೃಥ್ವಿವಲ್ಲಭ ಇತ್ಯಾದಿ ಬಿರುದುಗಳನ್ನು ಹೊಂದಿದ್ದ. ವಿಜಯಾದಿತ್ಯನು ಬಾದಾಮಿ ಮತ್ತು ಪಟ್ಟದಕಲ್ಲುಗಳ ಸಮಸ್ತ ಅಭಿವೃದ್ಧಿ ಮತ್ತು ವಾಸ್ತು ಶಿಲ್ಪ ಹಾಗೂ ಶಿಲ್ಪಕಲೆಗಳ ಬೆಳವಣಿಗೆಗೆ ಕಾರಣನಾಗುತ್ತಾನೆ. ವಾಸ್ತು ಶಿಲ್ಪ ಪ್ರೇಮಿಯಾಗಿದ್ದ ಈತನ ಕಾಲದಲ್ಲಿ ಹಲವಾರು ದೇವಾಲಯಗಳು ರಚನೆಯಾದವು. ಉದಾರಿಯೂ ಆಗಿದ್ದ ವಿಜಯಾದಿತ್ಯನು ಹಲವಾರು ದೇವಾಲಯ ಮತ್ತು ಜಿನಾಲಯಗಳಿಗೆ ದತ್ತಿಗಳನ್ನು ನೀಡಿದ್ದನು. ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯವು ಇವನ ಕಾಲದ ರಚನೆಯಾಗಿದೆ. ವಿಜಯಾದಿತ್ಯ ಸತ್ಯಾಶ್ರಯನ ಬಾದಾಮಿ ಶಾಸನವು ರಾಜಮಾತೆಯಾದ ವಿನಯವತಿಯ ವಿಜಯ ವಾತಾಪ್ಯಧಿಷ್ಠಾನ ಎಂಬಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದುದನ್ನು ಅಲ್ಲಿ ಹದಿನಾಲ್ಕು ಶಾಸ್ತ್ರಗಳಲ್ಲಿ ಪರಿಣಿತರಾಗಿದ್ದ ಅನೇಕ ಸಹಸ್ರ ದ್ವಿಜರಿದ್ದುದನ್ನು ತಿಳಿಸಿದೆ.[೩೧] ಈ ದೇವಾಲಯವನ್ನು ಈಗ ಜಂಬುಲಿಂಗ ದೇವಾಲಯವೆಂದು ಕರೆಯಲಾಗುತ್ತಿದೆ.

ಕ್ರಿ.ಶ. ೬೯೯ರಲ್ಲಿ ನಿರ್ಮಾಣವಾದ ಈ ದೇವಾಲಯವು ದಕ್ಷಿಣ ಭಾರತದಲ್ಲಿಯೆ ನಿರ್ಮಾಣವಾದ ಪ್ರ ಪ್ರಥಮ ತ್ರಿಕೂಟಾಚಲ ದೇವಾಲಯವೆಂದು ಬಾದಾಮಿಯ ಇತಿಹಾಸ ಸಂಶೋಧಕರಾದ ಡಾ. ಶೀಲಾಕಾಂತ ಪತ್ತಾರರು ಹೇಳುತ್ತಾರೆ. "ಕಲಾತ್ಮಕವಾದ ಉಬ್ಬು ಶಿಲ್ಪಗಳಿಂದ ತುಂಬಿಕೊಂಡಿರುವ ಈ ದೇವಾಲಯದ ಸಭಾಮಂಟಪ ಮತ್ತು ಛತ್ತುಗಳು ಆಕರ್ಷಣೀಯವಾಗಿವೆ. ವಿಜಯಾದಿತ್ಯನ ಸಹೋದರಿಯಾದ ಕುಂಕುಮ ಮಹಾದೇವಿಯು ಲಕ್ಷ್ಮೇಶ್ವರದ ಆನೆಸಜ್ಜೆಯಲ್ಲಿ ಜಿನಾಲಯವನ್ನು ಕಟ್ಟಿಸಿದ್ದಾಳೆ. ಅಲ್ಲದೆ ವಿಜಯಾದಿತ್ಯನ ಪ್ರಿಯತಮೆಯಾಗಿದ್ದ ವಿನಾಪೋಟಿ ಎಂಬಾಕೆ ಮಹಾಕೂಟದ ದೇವಾಲಯಕ್ಕೆ ಭೂದಾನ ಸಹಿತ ಹಲವಾರು ದಾನಗಳನ್ನು ಮಾಡಿದ್ದಾಳೆ. ಜೈನ, ಶೈವ ಮತ್ತು ವೈಷ್ಣವ ಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಿ ದೀರ್ಘಕಾಲ (ಕ್ರಿ.ಶ. ೬೯೬ ರಿಂದ ೭೩೩ ವರೆಗೆ) ರಾಜ್ಯವಾಳಿದ ಈತನ ಕಾಲ ಬಾದಾಮಿಯ ಚಾಲುಕ್ಯರ[೩೨] ಕಾಲದ ನಿರ್ಮಾಣದ ಘಟ್ಟ ತಲುಪಿತೆನ್ನಬಹುದು."

ಇಮ್ಮಡಿ ವಿಕ್ರಮಾದಿತ್ಯ (ಕ್ರಿ.ಶ. ೭೩೩–೭೪೪)

ಚಾಲುಕ್ಯರ ವಂಶದಲ್ಲಿ ಇಮ್ಮಡಿ ಪುಲಿಕೇಶಿಯ ನಂತರ ಅತ್ಯಂತ ಪ್ರಸಿದ್ಧನಾದ ರಾಜನೆಂದರೆ ಇಮ್ಮಡಿ ವಿಕ್ರಮಾದಿತ್ಯನು ಕ್ರಿ.ಶ ೭೩೩ರಲ್ಲಿ ರಾಜ್ಯಸೂತ್ರವನ್ನು ವಹಿಸಿಕೊಂಡು ಕ್ರಿ.ಶ. ೭೪೪ರವರೆಗೆ

---

೩೧. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೨೫

೩೨. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೨೪



ರಾಜ್ಯವಾಳಿದನು. ಪಲ್ಲವರೊಂದಿಗೆ ವೈರತ್ವ ಎಂದಿನಂತೆ ಇದ್ದೇ ಇತ್ತು. ಅವರನ್ನು ನಿರ್ಮೂಲಗೊಳಿಸಬೇಕೆಂಬ ಉದ್ದೇಶದಿಂದ ಇಮ್ಮಡಿ ವಿಕ್ರಮಾದಿತ್ಯನು ತುಂಡಾಕ ವಿಷಯವನ್ನು ಹೊಕ್ಕು ನಂದಿಪೋತವರ್ಮನನ್ನು ಹೊಡೆದೋಡಿಸಿದನು. ಇಮ್ಮಡಿ ವಿಕ್ರಮಾದಿತ್ಯನು ಕಾಂಚಿಯನ್ನು ವಶಪಡಿಸಿಕೊಂಡನಾದರೂ ಅದನ್ನು ನಾಶಮಾಡದೆ ಅಲ್ಲಿಯ ರಾಜಸಿಂಹೇಶ್ವರ ಹೈಹಯ ವಂಶದ ರಾಜಕುಮಾರಿಯಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ಇವನ ಅರಸಿಯರು. ತಮ್ಮ ಪತಿಯು ಮೂರು ಬಾರಿ ಕಂಚಿಯನ್ನು ಗೆದ್ದ ಸವಿನೆನಪಿಗಾಗಿ ಇವರು ಪಟ್ಟದಕಲ್ಲಿನಲ್ಲಿ ಕ್ರಮವಾಗಿ ಲೋಕೇಶ್ವರ (ಇಂದಿನ ವಿರೂಪಾಕ್ಷ) – ತ್ರೈಲೋಕೇಶ್ವರ (ಇಂದಿನ ಮಲ್ಲಿಕಾರ್ಜುನ) ಗುಡಿಗಳನ್ನು ಕಟ್ಟಿಸಿದರು. ಸ್ಥಪತಿಗಳಾದ ಸರ್ವಸಿದ್ಧಿ ಆಚಾರಿ ಹಾಗೂ ಗುಂಡ ಅನಿವಾರಿತಾಚಾರಿ ಇವರೀರ್ವರಿಗೆ 'ಪೆರ್ಜೆರೆಪು' ಎಂಬ ಬಿರುದು ನೀಡಿ ಸನ್ಮಾನಿಸಿದರು.[೩೩] ಇಮ್ಮಡಿ ವಿಕ್ರಮಾದಿತ್ಯನ ಕಾಲದ ದೇವಾಲಯಗಳು ಅಂದಿನ ಚರಿತ್ರೆಯ ಕುರುಹುಗಳಾಗಿ ಉಳಿದುಕೊಂಡಿವೆ.

ಇಮ್ಮಡಿ ಕೀರ್ತಿವರ್ಮ (ಕ್ರಿ.ಶ. ೭೪೪–೭೫೭)

ಈತನು ಬಾದಾಮಿ ಚಾಲುಕ್ಯರ ವಂಶದ ಕೊನೆಯ ರಾಜ ಇಮ್ಮಡಿ ವಿಕ್ರಮಾದಿತ್ಯನ ಮಗನಾದ ಇಮ್ಮಡಿ ಕೀರ್ತಿವರ್ಮನು. ಕ್ರಿ.ಶ. ೭೪೪ರಲ್ಲಿ ಸಿಂಹಾಸನವನ್ನೇರಿ ಕ್ರಿ.ಶ. ೭೫೭ರವರೆಗೆ ರಾಜಸೂತ್ರಗಳನ್ನು ನಿರ್ವಹಿಸಿದನು. ಇಮ್ಮಡಿ ಕೀರ್ತಿವರ್ಮನ ಆಳ್ವಿಕೆಯು ಶಾಂತಿಯುತವಾಗಿತ್ತು. ಆದರೆ ಚಾಲುಕ್ಯರ ಸಾಮಂತರು ಸ್ವತಂತ್ರರಾಗುವ ಅವಕಾಶಕ್ಕಾಗಿ ಕಾದು ಕುಳಿತಿದ್ದರು. ಅವರಲ್ಲಿ ರಾಷ್ಟ್ರಕೂಟ ದಂತಿದುರ್ಗನು ಈ 'ಕರ್ನಾಟಬಲ'ವನ್ನು ಸೋಲಿಸುವಲ್ಲಿ ಯಶಸ್ವಿಯಾದನು. ಇಮ್ಮಡಿ ಕೀರ್ತಿವರ್ಮನು ಚಾಲುಕ್ಯ ವಂಶದ ಕೊನೆಯ ಅರಸನಾದನು.[೩೪] ಚಾಲುಕ್ಯ ರಾಜರು ಸಾಹಸಿಗಳಾಗಿ ರಾಜ್ಯ ಕಟ್ಟಿ ಮೆರೆದು ಇಂದಿನ ಉತ್ತರ ಕರ್ನಾಟಕವನ್ನು ಅತ್ಯಂತ ಶ್ರೀಮಂತ ಕಲೆ ವಾಸ್ತು ಶಿಲ್ಪ ಮತ್ತು ರಾಜಕೀಯಗಳ ಕೇಂದ್ರವನ್ನಾಗಿ ಬಾದಾಮಿಯನ್ನು ಅಭಿವೃದ್ಧಿ ಪಡಿಸಿದರು. ಹಲವಾರು ದೇವಾಲಯಗಳು, ಗುಹಾಲಯಗಳು, ಜಿನಾಲಯಗಳನ್ನು ಕಟ್ಟಿ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮೆರೆದವರು. ಉತ್ತರದ ನರ್ಮದಾನದಿಯಿಂದ ಪಶ್ಚಿಮದ ಅರಬ್ಬಿ ಸಮುದ್ರದ ವರೆಗೂ ಪೂರ್ವದಲ್ಲಿ ಬಂಗಾಳಕೊಲ್ಲಿಯವರೆಗೂ ರಾಜ್ಯ ವಿಸ್ತರಿಸಿ ಸುಭದ್ರ ಆಡಳಿತವನ್ನು ನೀಡಿದವರು ಚಾಲುಕ್ಯರು. ಅಂದಿನ ಶಿಲಾಶಾಸನಗಳು ಇಂದು ಲಭ್ಯವಾಗುತ್ತಿದ್ದು ಅವರ ಇತಿಹಾಸವನ್ನು ಇಂದಿನ ಪೀಳಿಗೆಗೆ ಒದಗಿಸಿಕೊಟ್ಟು, ಇತಿಹಾಸದಲ್ಲಿ ಚಾಲುಕ್ಯರ ಪ್ರಭಾವವನ್ನು ತೋರಿಸುತ್ತವೆ.

---

೩೩. ಎ. ಎಸ್. ನಂಜುಂಡಸ್ವಾಮಿ : ಚಾಲುಕ್ಯರ ಇತಿಹಾಸ, ಪುಟ – ೧೫

೩೪. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೧೨–೧೩



ಸಾಂಸ್ಕೃತಿಕ ಪರಿಸರ

ಬಾದಾಮಿಯನ್ನು ಕೇಂದ್ರವಾಗಿಟ್ಟುಕೊಂಡು ರಾಜ್ಯಾಡಳಿತವನ್ನು ನಡೆಸಿದ ಚಾಲುಕ್ಯರು ಕಲೆ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತಿಕೆಯಿಂದ ಮೆರೆದರು. ದೇವರಲ್ಲಿ ಭಕ್ತಿ ಮತ್ತು ಪ್ರಜೆಗಳಲ್ಲಿ ಪ್ರೀತಿಯನ್ನು ತೋರಿಸುತ್ತಿದ್ದರು. ಆರಂಭದಲ್ಲಿ ಇವರು ವೈಷ್ಣವಧರ್ಮದ ಅನುಯಾಯಿಗಳಿದ್ದವರು ನಂತರ ಒಂದನೆಯ ವಿಕ್ರಮಾದಿತ್ಯನ ಕಾಲದಲ್ಲಿ ಪಲ್ಲವರನ್ನು ಸೋಲಿಸಿದ ಸಂದರ್ಭದಲ್ಲಿ ಸುದರ್ಶನಾಚಾರ್ಯರಿಂದ ಶಿವದೀಕ್ಷೆಯನ್ನು ಪಡೆದು ಶೈವ ಧರ್ಮಾವಲಂಬಿಗಳಾದರು. ಆನಂತರ ಹೆಚ್ಚಾಗಿ ಶಿವನ ಕುರಿತಾದ ದೇವಾಲಯಗಳನ್ನು ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ಸ್ಥಾಪಿಸಿ ಶೈವ ಧರ್ಮಕ್ಕೆ ಹೆಚ್ಚು ಒತ್ತು ಕೊಟ್ಟರು. ಉಳಿದ ಮತಗಳನ್ನು ನಿರಾಕರಿಸಲಿಲ್ಲ ಅದಕ್ಕೆ ಅವರ ಕಾಲದಲ್ಲಿ ಮತ್ತು ನಂತರವೂ ಸ್ಥಾಪನೆಯಾದ ಜೈನಾಲಯಗಳು ಮತ್ತು ಇತರ ದೇವಾಲಯಗಳು ಸಾಕ್ಷಿಯನ್ನೊದಗಿಸುತ್ತವೆ.


ಚಾಲುಕ್ಯರು ದೈವಭೀರುಗಳಾಗಿದ್ದವರು, ಆದುದರಿಂದ ಅಲ್ಲಿನ ಆಗಿನ ಸಾಂಸ್ಕೃತಿಕ ಪರಿಸರವು ಅತ್ಯಂತ ಸಹನೀಯವಾಗಿ ಮತ್ತು ಪ್ರಜಾನುಕೂಲವಾಗಿತ್ತೆಂದು ಹೇಳಬಹುದು. ಪ್ರತಿಯೊಬ್ಬ ರಾಜನು ತಾನು ಪಟ್ಟಕ್ಕೆ ಬಂದನಂತರ ಯುದ್ಧಗಳನ್ನು ಮಾಡಿದಂತೆಯೆ ಹಲವಾರು ಯಾಗಗಳನ್ನು ಮಾಡಿದವರು, ದೇವಾಲಯಗಳಿಗೆ ದಾನದತ್ತಿಗಳನ್ನು ನೀಡುತ್ತಿದ್ದವರು. ಬಾದಾಮಿಯ ಚಾಲುಕ್ಯರ ವಂಶದ ಹಲವಾರು ರಾಜರು ಶ್ರೀ ಪೃಥ್ವಿವಲ್ಲಭ, ಶ್ರೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ, ಸತ್ಯಾಶ್ರಯ ಭಟ್ಟಾರಕ, ಭುವನಾಕ್ರಮ ಮುಂತಾದ ಬಿರುದುಗಳನ್ನು ಹೊಂದಿದ್ದರು. ತಮ್ಮ ಮನೆತನದ ಶ್ರೇಯಸ್ಸಿಗಾಗಿ ಅಶ್ವಮೇಧಯಾಗ, ಹಿರಣ್ಯ ಗರ್ಭದಾನ ಮುಂತಾದ ಧಾರ್ಮಿಕ ಕ್ರಿಯೆಗಳನ್ನು ನಡೆಸಿದವರಾಗಿದ್ದರು. ಒಂದನೆಯ ಪುಲಿಕೇಶಿಗೆ ಹಿರಣ್ಯ ಗರ್ಭ, ವಿನೂತನೆಂಬ ಕೀರ್ತಿ ಇದ್ದಿತು. ಅವನು ಅಶ್ವಮೇಧ ಮುಂತಾದ ನಾನಾ ಶ್ರೌತಯಾಗಗಳನ್ನು ಸಾಂಗವಾಗಿ ನೆರವೇರಿಸುದುದಲ್ಲದೆ ಅಗ್ನಿಹೋಮ ಅಗ್ನಿಚಯನ ವಾಜಪೇಯ ಬಹು ಸುವರ್ಣ ಮತ್ತು ಪೌಂಡರಿಕ ಯಾಗಗಳನ್ನು ನಿರ್ವಹಿಸಿದವನು[೩೫] ಎಂದು ಶ್ರೀ ಎ.ಎಸ್.ನಂಜುಂಡಸ್ವಾಮಿಯವರು ಚಾಲುಕ್ಯರ ಇತಿಹಾಸ ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

ಕರ್ನಾಟಕದಲ್ಲಿ ವಾಸ್ತು ಶಿಲ್ಪ ರಚನೆಯಾಗಲೀ, ಶಿಲ್ಪಕಲೆಯಾಗಲೀ ಪ್ರಾರಂಭವಾದುದು ಕದಂಬ ಅರಸರು ಕರ್ನಾಟಕವನ್ನು ಆಳುತ್ತಿದ್ದ ಕಾಲದಲ್ಲಿ. ಇದನ್ನು ಮುಂದುವರೆಸಿಕೊಂಡು ಹೋದುದು ಮಾತ್ರವಲ್ಲದೆ ಇದಕ್ಕೆ ನೀರು ಗೊಬ್ಬರಗಳನ್ನು ಹಾಕಿ ಬೆಳೆಸಿದವರು ಚಾಲುಕ್ಯರು. ಇವರು ತಾವು ಪ್ರೋತ್ಸಾಹ ನೀಡಿದುದಲ್ಲದೆ ತಮ್ಮ ಅರಸಿಯರು, ವರ್ತಕರು ಕೂಡಾ ಇದರಲ್ಲಿ ಭಾಗಿಯಾಗುವಂತೆ ಮಾಡಿದರು ಎಂದರೆ ತಪ್ಪಾಗದು. ಶ್ರೀಸಾಮಾನ್ಯರು ಕೂಡಾ ಕಲಾ ಆಸಕ್ತರಾಗುವಂತೆ ಮಾಡಿದವರು ಚಾಲುಕ್ಯರು. ಆದುದರಿಂದಲೆ ಚಾಲುಕ್ಯರ ಕಾಲದ ಕಲೆ

---

೩೫. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೬೫

[illegible]



ಇಷ್ಟು ಶ್ರೀಮಂತವಾಗಲು ಕಾರಣವಾಯಿತು ಎಂದು ಹೇಳಬಹುದು. "ಚಾಲುಕ್ಯ ಅರಸರದು ಮಾನವ್ಯ ಗೋತ್ರ, ಇವರ ಕುಲದೇವತೆ ವಿಷ್ಣು, ಇವರ ರಾಜಲಾಂಛನ ವರಾಹ, ವೈಷ್ಣವ ಮತಾವಲಂಬಿಗಳಾದ ಇವರು ಪರಮ ಭಾಗವತರೆಂದು ಬಣ್ಣಿತರು. ಒಂದನೆಯ ವಿಕ್ರಮಾದಿತ್ಯನು ಶಿವ ಮಂಡಲ ದೀಕ್ಷೆಯನ್ನು ಪಡೆದು ಮಹೇಶ್ವರನೆನಿಸಿದನು. ಅನಂತರದ ಎಲ್ಲಾ ಚಾಲುಕ್ಯ ಅರಸರು ಶೈವ ಧರ್ಮೀಯರು, ಇದರಿಂದಾಗಿಯೇ ಆ ಬಳಿಕ ಹೆಚ್ಚಿನ ಸಂಖ್ಯೆಯಲ್ಲಿ ಶಿವ ದೇವಾಲಯಗಳು ತಲೆ ಎತ್ತಿದವು.

ಚಾಲುಕ್ಯರು ಸ್ವಾಮಿ ಮಹಾಸೇನ (ಕಾರ್ತಿಕೇಯ)ನನ್ನು ಭಜಿಸಿದರು. ಸಪ್ತ ಮಾತೃಕೆಯರನ್ನು ಪೂಜಿಸಿದರು, ಸೂರ್ಯದೇವನನ್ನು ಆರಾಧಿಸಿದರು, ಅವರ ಧರ್ಮಪ್ರಜ್ಞೆ ವಿಶಾಲವಾಗಿತ್ತು. ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದರು, ಬೌದ್ಧಧರ್ಮಕ್ಕೆ ಆಸರೆ ಕೊಟ್ಟರು, ಎಲ್ಲ ಮತ ಪಂಥಗಳನ್ನು ಗೌರವಿಸಿದರು. ಸರ್ವಧರ್ಮ ಸಮನ್ವಯತೆ ಅವರ ಜೀವನಸಂದೇಶವಾಗಿತ್ತು, ಬದುಕಿನ ಭಾಗವಾಗಿತ್ತು."[೩೬] ಬಾದಾಮಿಯನ್ನು ವಾಸ್ತು ಶಿಲ್ಪಗಳಿಂದ ಮತ್ತು ಕಲಾಕೃತಿಗಳಿಂದ ಸಿಂಗರಿಸಿದವರು ಇವರು ಐಹೊಳೆಯನ್ನು ತಮ್ಮ ವಾಸ್ತುಕಲೆಯ ಅಭಿವೃದ್ಧಿಗೆ ಪ್ರಯೋಗ ಭೂಮಿಯನ್ನಾಗಿ ಮಾಡಿಕೊಂಡರು. ಪಟ್ಟದಕಲ್ಲು ಇದು ಮೊದಲು ಪಟ್ಟದಕಿಸುವೋಳಲ್ ಎಂಬುದಾಗಿತ್ತು. ಚಾಲುಕ್ಯ ರಾಜರು ಇಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿಕೊಳ್ಳುತ್ತಿದ್ದರು. ಶಿಲ್ಪಕಲೆಯ ಕೇಂದ್ರವನ್ನಾಗಿಸಿದವರು ಚಾಲುಕ್ಯರು. ಬಾದಾಮಿಯ ಕಠಿಣ ಮರಳು ಕಲ್ಲಿನ ಬೆಟ್ಟದ ಮಗ್ಗಲನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ ತಮ್ಮ ಹೆಸರನ್ನು ಅಜರಾಮರವಾಗಿಸಿದರು.

ಚತುರರಾದ ಕಲಾವಿದರನ್ನು, ಸಾಹಿತಿಗಳನ್ನು ಸಾಂಸ್ಕೃತಿಕ ರಾಯಭಾರಿಗಳೆಂದು ಮನ್ನಿಸಿ ಗೌರವಿಸುವ ಗುಣ ಚಾಲುಕ್ಯರದ್ದಾಗಿತ್ತು. ಅವರನ್ನು ಆಸ್ಥಾನ ಕಲಾವಿದರೆಂದು ಮನ್ನಿಸುತ್ತಿದ್ದರು. ಇದರಿಂದಾಗಿ ಸಹಜವಾಗಿಯೇ ಉತ್ತಮ ಸಾಂಸ್ಕೃತಿಕ ಪರಿಸರ ನಿರ್ಮಾಣ ಅಲ್ಲಿ ಸಾಧ್ಯವಾಗಿತ್ತು. ಚಾಲುಕ್ಯರು ಉತ್ತಮ ಶಿಲ್ಪಗಳನ್ನು ಮತ್ತು ಕವಿ-ಕಲಾವಿದರನ್ನು ಮನ್ನಿಸಿ ಗೌರವಿಸುತ್ತಿದ್ದರೆನ್ನುವ ಕೆಲವು ಮುಖ್ಯ ಸಾಕ್ಷಿಗಳು ನಮಗೆ ಕಂಡುಬರುತ್ತವೆ. ಅವುಗಳಲ್ಲಿ ಒಂದು ಐಹೊಳೆಯ ಶಾಸನವೊಂದರಲ್ಲಿ, ಶಿಲ್ಪಿ ನರಸನೊಬ್ಬ ಎಂಬಾತನು ಹೊಗಳಿ ಕೆತ್ತಿರುವ ಶಾಸನ. ಐಹೊಳೆಯ ಕೆಲವು ಪ್ರಮುಖ ದೇವಾಲಯಗಳ ರಚನೆಗೆ ಕಾರಣನಾದವನು ನರಸೊಬ್ಬ ಎಂಬ ಶಿಲ್ಪಿ. ಈತ ದೇವಾಲಯಗಳ ನಿರ್ಮಾಣದಲ್ಲಿ ಪಳಗಿದವನಾಗಿದ್ದನು. ಗುಹಾಲಯಗಳನ್ನು ರಚಿಸುವದರಲ್ಲಿ ನಿಷ್ಣಾತನಾಗಿದ್ದನು. ಇವನ ಸಾಧನೆಯನ್ನು ಗುರುತಿಸುವ ಶಾಸನವು ಐಹೊಳೆಯ ಹುಚ್ಚಪ್ಪಯನ ಗುಡಿಯಲ್ಲಿದೆ. ಇದರಲ್ಲಿ ಶಿಲ್ಪಿನರಸನೊಬ್ಬನನ್ನು ಹೀಗೆ ವರ್ಣಿಸಲಾಗಿದೆ:

ಸ್ವಸ್ತಿ ಜಮ್ಬುದ್ವೀಪಾನ್ತರೇ ಕಶ್ಚಿ (ದ್)
ವಾಸ್ತು ಪ್ರಾಸಾದ ತದ್ಗತಃ ।

೩೬. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೬೬



ನರಸೊಬ್ಬ ಸಮೋ ವಿದ್ವಾನ್
ನ ಭೂತೋ ನ ಭವಿಷ್ಯತೆ.[೩೭]

ಅಂದರೆ ಜಂಬೂದ್ವೀಪದಲ್ಲಿ ವಾಸ್ತು ನಿರ್ಮಾಣದಲ್ಲಿ ನರಸೊಬ್ಬನೆಂಬ ಶಿಲ್ಪಿಗೆ ಸಮಾನರಾದ ಶಿಲ್ಪಿಗಳು ಭೂತ ವರ್ತಮಾನ ಭವಿಷ್ಯತ್ತುಗಳಲ್ಲಿ ಇನ್ನೊಬ್ಬರಿರುವುದು ಸಾಧ್ಯವಿಲ್ಲ ಎಂಬ ಅರ್ಥವನ್ನು ತೋರಿಸುತ್ತದೆ. ಇದು ಅಂದಿನ ಕಾಲದಲ್ಲಿ ಶಿಲ್ಪಿಯೊಬ್ಬನಿಗೆ ಸಿಗಬಹುದಾದ ಅತಿ ದೊಡ್ಡ ಮನ್ನಣೆ ಎನ್ನಬಹುದು. ಅಂತಹುದೆ ಇನ್ನೊಂದು ಉದಾಹರಣೆಯನ್ನು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ನಾವು ನೋಡಬಹುದು. ಸರ್ವಸಿದ್ಧಿ ಆಚಾರ್ಯ ಎಂಬ ವಾಸ್ತು ಶಿಲ್ಪಿಯಿದ್ದು, ಇದನ್ನು ಕಟ್ಟಿಸಿದವರು ಇಮ್ಮಡಿ ವಿಕ್ರಮಾದಿತ್ಯನ ಪತ್ನಿಯಾದ ಲೋಕಮಹಾದೇವಿ, ಇಮ್ಮಡಿ ವಿಕ್ರಮಾದಿತ್ಯನು ಪಲ್ಲವರನ್ನು ಮೂರು ಬಾರಿ ಸೋಲಿಸಿದುದರ ಕುರುಹಾಗಿ ಈ ದೇವಾಲಯಗಳನ್ನು ನಿರ್ಮಿಸಿ ತನ್ನ ಅರಸನಿಗಾಗಿ ಅರ್ಪಿಸಿದುದರ ಕುರುಹು. ಈ ಲೋಕಮಹಾದೇವಿ ಮಂದಿರ, ಈ ಪ್ರವೇಶದ್ವಾರದ ಎರಡು ಕಂಬಗಳ ಮೇಲಿನ ಎರಡು ಶಿಲಾಶಾಸನಗಳು ಈ ಇಬ್ಬರು ಮಹಾಶಿಲ್ಪಿಗಳಿಗೆ ರಾಜರು ಸನ್ಮಾನವಾಗಿದ್ದ ಪೆರ್ಜೆರೆಪು ಎಂಬ ಪಟ್ಟವನ್ನು ನೀಡಿ ಇಮ್ಮಡಿ ವಿಕ್ರಮಾದಿತ್ಯನು ಗೌರವಿಸಿರುವುದನ್ನು, ಆತನಿಗೆ ತೆರಿಗೆ ವಿನಾಯಿತಿಯನ್ನು ನೀಡಿರುವುದನ್ನು, ಆತನ ವ್ಯಕ್ತಿತ್ವವನ್ನು ಗೌರವಿಸಿರುವುದನ್ನು ಇಲ್ಲಿ ಕಾಣಬಹುದು.

"ಸ್ವಸ್ತಿ ಶ್ರೀ ಸರ್ವಸಿದ್ಧಿ ಆಚಾರಿ ಸಕಲ ಗುಣಾಶ್ರಯ
ಅನೇಕ ರೂಪು ವಾಸ್ತು ಪಿತಾಮಹನ್ ಸಕಲ ನಿಷ್ಕಲ
ಸೂಕ್ಷ್ಮಾತಿಭಾಷಿತನ್ ವಾಸ್ತು ಪ್ರಾಸಾದ ಯೋಗಾಸನ
ಸಯನ ಮಣಿಮುಕುಟ ರತ್ನ ಚೂಡಾಮಣಿ
ತೆಂಕಣದಿಶೆಯಾ ಸೂತ್ರಧಾರಿ"[೩೮]

ಅಂದರೆ ಸರ್ವಸಿದ್ಧಿ ಆಚಾರಿ ಎಂಬುವನು ವಾಸ್ತು ಪ್ರಾಸಾದ ಶಯನಗೃಹ ಇತ್ಯಾದಿಗಳನ್ನು ನಿರ್ಮಿಸುವುದರಲ್ಲಿ ಸಿದ್ಧಹಸ್ತನೂ ನಿಷ್ಕಲಂಕನೂ ಆಗಿದ್ದನೆಂದು ವರ್ಣಿಸುತ್ತದೆ. ಇಂತಹುದೆ ಇನ್ನೊಂದು ಶಾಸನ ಅದರ ಪಕ್ಕದ ಕಂಬದ ಮೇಲೆ ಕೆತ್ತಲಾಗಿದ್ದು ಇದು ಗುಂಡ ಅನಿವಾರಿತಾಚಾರಿಗೆ ಸಲ್ಲಿಸುವ ಗೌರವವಾಗಿದೆ. ಇವನನ್ನು ಸಮಸ್ತ ತ್ರಿಭುವನಾಚಾರಿ ಎಂದು ಸಂಬೋಧಿಸಲಾಗಿದೆ. ಈತನೂ ಲೋಕಮಹಾದೇವಿ ಮಂದಿರದ ವಾಸ್ತು ಶಿಲ್ಪಿಗಳಲ್ಲಿ ಒಬ್ಬನಾಗಿದ್ದನು.

ಈ ತೆರನಾದ ಗೌರವವು ಅಂದಿನ ಕಾಲದ ಶಿಲ್ಪಿಗಳಿಗೆ ಸಾಮಾನ್ಯವಾಗಿ ಸಲ್ಲಬಹುದಾದ ಗೌರವವಾಗಿತ್ತು. ಇಂತಹ ಪ್ರೋತ್ಸಾಹಗಳಿಂದಾಗಿ ಶಿಲ್ಪಿಗಳು, ಕಲಾವಿದರು ತಮ್ಮ ಕೃತಿಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳಲು ಉತ್ತೇಜನ ದೊರಕಿದಂತಾಗುತ್ತಿತ್ತು. ಅದರಿಂದಾಗಿಯೇ ಚಾಲುಕ್ಯರ ಕಾಲದಲ್ಲಿ ಅಂತಹ ಬೃಹತ್ ಸಂಖ್ಯೆಯ ಮತ್ತು ಗುಣಮಟ್ಟದ ಶಿಲ್ಪಗಳು ರಚನೆಯಾಗಲು ಸಾಧ್ಯವಾಯಿತೆಂದು ಹೇಳಬಹುದು. ಒಟ್ಟಿನಲ್ಲಿ ಅಂದಿನ ಸಾಂಸ್ಕೃತಿಕ ಪರಿಸರ ಕಲಾವಿದ,

೩೭. ಡಾ. ಶಿವರಾಮ ಕಾರಂತ : ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪುಟ – ೧೦
೩೮. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೨೦-೨೧

ಶಿಲ್ಪಿಗಳಿಗೆ ಅತ್ಯಂತ ಸುಭಿಕ್ಷದ ಕಾಲವಾಗಿತ್ತೆಂದು ಹೇಳಬಹುದು. ಕರ್ನಾಟಕದ ಶಿಲ್ಪ ಮತ್ತು ವಾಸ್ತು ಕಲೆಗೆ ಮಹತ್ತರವಾದ ಕೊಡುಗೆಯನ್ನು ನೀಡಿದ ಚಾಲುಕ್ಯ ಕಲೆಯ ಮೂಲವನ್ನು ಕೆಲ ವಿದ್ವಾಂಸರು ಉತ್ತರ ಭಾರತದಲ್ಲಿ ಆಳಿದ ಗುಪ್ತರದೆಂದು ಅಭಿಪ್ರಾಯ ಪಡುತ್ತಾರೆ. ಇನ್ನೂ ಕೆಲ ವಿದ್ವಾಂಸರು ಚಾಲುಕ್ಯರಿಗಿಂತ ಮೊದಲು ಆಂಧ್ರವನ್ನು ಆಳಿದ ಇಕ್ಷ್ವಾಕು ಅರಸರಿಂದ ಬಂದಿದೆ ಎಂದು ಹೇಳುತ್ತಾರೆ.

ವೈಷ್ಣವ ಶಿಲ್ಪಗಳು ಗಂಗೆ, ಯಮುನೆಯರ ಶಿಲ್ಪಗಳಲ್ಲಿ ಆ ದೇವತೆಗಳ ವಾಹನಗಳನ್ನು ಮತ್ತು ಚಾಲುಕ್ಯರ ಕಾಲದ ಮೊದ ಮೊದಲ ಶಿಲ್ಪಗಳ ರಚನೆಯನ್ನು ಗಮನಿಸಿದಾಗ ಕೆಲವೊಮ್ಮೆ ಆ ಭಾವನೆ ಬರುವುದು ಸಹಜ. ಸರಳ ದೇವತಾ ಶಿಲ್ಪಗಳು, ಶಂಖನಿಧಿ, ಪದ್ಮನಿಧಿಗಳ ಕೆತ್ತನೆ, ದೇವಾಲಯ ಪ್ರವೇಶದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳು ಇವೆಲ್ಲಾ ಗುಪ್ತರ ಕಾಲದ ಕಲ್ಪನೆ ಎಂಬುದು ನಿಜವಾದರೂ ಚಾಲುಕ್ಯರು ಇಲ್ಲಿ ತಮ್ಮ ಸ್ವಂತಿಕೆಯನ್ನು ಮೆಳ್ಯೆಸಿಕೊಂಡಿರುವುದನ್ನು ನಾವು ಗಮನಿಸಬೇಕಾಗುತ್ತದೆ. ಯಾವುದೇ ಚಿತ್ರಕಲೆಯಾಗಲಿ, ಶಿಲ್ಪವಾಗಲಿ ಅಥವಾ ಸಾಹಿತ್ಯವೆ ಆಗಲಿ, ಅದರ ರಚನೆಯಲ್ಲಿ ಎಲ್ಲೋ ಒಂದೆಡೆಯಿಂದ ಸ್ಫೂರ್ತಿಯನ್ನು ಪಡೆದಿದ್ದರೆ ಆಶ್ಚರ್ಯವಿಲ್ಲ. ಆದರೆ ಅದನ್ನೆ ಸಂಪೂರ್ಣವಾಗಿ ನಕಲು ಮಾಡದೆ ಅಥವಾ ಪ್ರತಿಕೃತಿಯನ್ನು ರಚಿಸದೆ ತಮ್ಮತನವನ್ನು ತೋರಿಸಿ ಸಂಯೋಜನೆ ಮಾಡಿ ಶಿಲ್ಪಗಳನ್ನು ರಚಿಸುವುದರಲ್ಲಿ ಹೆಚ್ಚಿನ ಜಾಣ್ಮೆ ಇದೆ. ಅದು ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಕಂಡುಬರುತ್ತದೆ.

ಮೊದಲಿನಿಂದಲೂ ಉತ್ತರ ಭಾರತದಿಂದ ದಕ್ಷಿಣಕ್ಕೆ ಹಾಗೆ ದಕ್ಷಿಣ ಭಾರತದಿಂದ ಉತ್ತರಕ್ಕೆ ಜನರು ವ್ಯಾಪಾರ ಉದ್ದೇಶದಿಂದಲೋ ವಿದ್ಯಾಭ್ಯಾಸಕ್ಕಾಗಲಿ ಅಥವಾ ಇನ್ನಾವುದೆ ಉದ್ದೇಶಕ್ಕೆ ಸಂಚರಿಸುವುದು ಸಹಜವಾಗಿತ್ತು. ಈ ಹಿನ್ನೆಲೆಯಲ್ಲಿ ಉತ್ತರ ಭಾರತದಲ್ಲಿ ಅಂದು ಚಲಾವಣೆಯಲ್ಲಿದ್ದ ಶೈಲಿಯನ್ನು ಅಥವಾ ವಾಸ್ತುವನ್ನು ಅನುಕರಿಸಿದ್ದರೆ ಆಶ್ಚರ್ಯವಿಲ್ಲ. ಆದರೆ ಶಿಲ್ಪಗಳ ರಚನೆ ಅಂಗವಿನ್ಯಾಸ ತಾಳ, ಪ್ರಮಾಣ, ಭಾವ, ಭಂಗಿಗಳು ಅಥವಾ ರೇಖಾವಿನ್ಯಾಸ ಚಾಲುಕ್ಯರದೆ ವಿಶೇಷತೆಯನ್ನು ಹೊಂದಿದೆ. ಅವರ ಶಿಲ್ಪ ಸಂಯೋಜನೆಗಳು, ರೇಖಾವಿನ್ಯಾಸಗಳು ವಿಶೇಷ ಕಲ್ಪನೆಯಿಂದ ಕೂಡಿವೆ. ಅವರು ಉಪಯೋಗಿಸಿದ ಸ್ಥಳೀಯವಾಗಿ ಲಭ್ಯವಿದ್ದ ನಸುಗೆಂಪು ಮರಳುಕಲ್ಲು ತಮ್ಮ ಕಲ್ಪನೆಗೆ ಉತ್ತಮವಾದ ಪರಿಣಾಮಕಾರಿಯಾದ ಮಾಧ್ಯಮವಾಗಿದೆ. ಚಾಲುಕ್ಯರ ಶಿಲ್ಪಕಲೆಯನ್ನು ನಾವು ಗುಂಪುಗಳಾಗಿ ವಿಂಗಡಿಸಿ ಅಧ್ಯಯನ ಮಾಡುವುದು ಹೆಚ್ಚು ಸೂಕ್ತವಾಗುತ್ತದೆ. ಒಂದನೆಯ ಗುಹಾಲಯ ಅಥವಾ ಗುಹಾಂತರ ದೇವಾಲಯ ಮತ್ತು ಎರಡನೆಯ ರಾಚನಿಕ ದೇವಾಲಯ ಅಥವಾ ಕಟ್ಟಲಾದ ವಾಸ್ತು ಶಿಲ್ಪಗಳು.

ಗುಹಾಂತರ ದೇವಾಲಯಗಳು

ಚಾಲುಕ್ಯರ ಕಾಲದಲ್ಲಿ ಬೃಹದಾಕಾರದ ಬಂಡೆಯನ್ನು ಕೊರೆದು ಅದರ ಒಳಭಾಗದಲ್ಲಿ



ಶಿಲ್ಪಗಳನ್ನು ಕೆತ್ತಿ ನಿರ್ಮಿಸುವುದೇ ಗುಹಾಂತರ ದೇವಾಲಯಗಳು. ಭಾರತದ ಇತಿಹಾಸದಲ್ಲಿ ಗುಹಾಂತರ ದೇವಾಲಯಗಳು ಬಹು ಹಿಂದಿನಿಂದಲೆ ಕಂಡುಬರುತ್ತವೆ. ಬ್ಲಾಜ್ ಕಾಲ್, ಬೇಡ್ಸಾ ಮುಂತಾದಡೆಗಳಲ್ಲಿ ಕ್ರಿಸ್ತ ಪೂರ್ವದ ಹೊತ್ತಿಗೆ ಬೌದ್ಧ ಗುಹಾಲಯಗಳು ಕಡಿಮೆ. ಅಂತಹ ಅಪರೂಪದ ಗುಹಾಲಯಗಳು ಬಾದಾಮಿಯಲ್ಲಿದ್ದು ಇಂದು ವಿಶ್ವವಿಖ್ಯಾತವಾಗಿವೆ. ಈ ರೀತಿಯ ಶಿಲ್ಪಗಳು ಅಥವಾ ಗುಹಾಲಯಗಳ ನಿರ್ಮಾಣ ತುಂಬಾ ಕ್ಲಿಷ್ಟಕರವಾದುದು. ಇಲ್ಲಿ ಶಿಲ್ಪಿಯು ಬಹಳ ಮಟ್ಟಿಗೆ ಪರಿಪೂರ್ಣನಿದ್ದು ತಾನು ರಚಿಸಬೇಕಾದ ಶಿಲ್ಪವನ್ನು ಮೊದಲೆ ನಿರ್ಧರಿಸಿಕೊಂಡು ಕಲ್ಲನ್ನು ಕೆತ್ತಿ ತೆಗೆದು ಹಾಕಬೇಕು. ಅಂತಹ ಸಂದರ್ಭದಲ್ಲಿ ನಿರ್ದಿಷ್ಟತೆಗಿಂತ ಹೆಚ್ಚು ಕೆತ್ತಿದರೆ ಬೇಕಾದ ಶಿಲ್ಪ ರಚನೆಯಾಗಲಾರದು. ಬೇಕಾದ ಭಾಗವನ್ನು ಉಳಿಸಿಕೊಂಡು ಬೇಕಾದುದನ್ನು ಕೆತ್ತಿ ತೆಗೆಯುವ ಈ ರೀತಿಯ ಶಿಲ್ಪರಚನೆಗಳು ಅಜಂತಾದಲ್ಲಿ ಉತ್ಕೃಷ್ಟ ಮಟ್ಟದಲ್ಲಿ ರಚನೆಯಾದುದನ್ನು ನಾವು ನೋಡಬಹುದು.

ಉತ್ತರ ಭಾರತದಲ್ಲಿ ಹೆಚ್ಚಾಗಿ ಕಂಡುಬರುವ ಈ ರೀತಿಯ ಗುಹಾಲಯಗಳು ಬೌದ್ಧರ ಕಾಲದಲ್ಲಿ ಹೆಚ್ಚು ರಚನೆಯಾಗಿವೆ. ಸುಮಾರು ೫ನೇ ಶತಮಾನದ ಹೊತ್ತಿಗೆ ಗುಪ್ತರು ಭಾರತದ ಬಹುಭಾಗವನ್ನು ಆಳುತ್ತಿದ್ದ ಕಾಲದಲ್ಲಿ ನಾವು ನೋಡಬಹುದು. ಉತ್ತರ ಭಾರತದಲ್ಲಿ ಹೆಚ್ಚಾಗಿ ಕಂಡುಬರುವ ಈ ರೀತಿಯ ಗುಹಾಲಯಗಳು ಬೌದ್ಧರ ಕಾಲದಲ್ಲಿ ಹೆಚ್ಚು ರಚನೆಯಾಗಿವೆ. ಸುಮಾರು ೫ ನೇ ಶತಮಾನದ ಹೊತ್ತಿಗೆ ಗುಪ್ತರು ಭಾರತದ ಬಹುಭಾಗವನ್ನು ಆಳುತ್ತಿದ್ದ ಕಾಲದಲ್ಲಿ ವೈಷ್ಣವ ಗುಹಾಲಯಗಳ ರಚನೆ ಪ್ರಾರಂಭವಾಯಿತು. ಮುಂದೆ ದಕ್ಷಿಣದಲ್ಲಿ ಚಾಲುಕ್ಯರ ಕಾಲದಲ್ಲಿ ಬಾದಾಮಿ ಮತ್ತು ಐಹೊಳೆಯಲ್ಲಿ ಇಂತಹ ಗುಹಾಂತರ ದೇವಾಲಯಗಳು ನಿರ್ಮಾಣವಾದವು.

ಕರ್ನಾಟಕದ ಇಂದಿನ ಬಾಗಲಕೋಟ ಜಿಲ್ಲೆಯ ಬಾದಾಮಿಯಲ್ಲಿ ಮತ್ತು ಸಮೀಪದ ಐಹೊಳೆಯಲ್ಲಿ ಚಾಲುಕ್ಯರ ಕಾಲದಲ್ಲಿ ಗುಹಾಲಯಗಳ ನಿರ್ಮಾಣವಾಯಿತೆಂದು ಈ ಮೊದಲೆ ಹೇಳಲಾಗಿದೆ. ಇವುಗಳಲ್ಲಿ ಐಹೊಳೆಯ ಗುಹಾಲಯಗಳು ಬಾದಾಮಿಯ ಗುಹಾಂತರ ದೇವಾಲಯಗಳಿಗಿಂತ ಮೊದಲೆ ರಚನೆಯಾಗಿವೆ. ಐಹೊಳೆಯು ಕ್ರಿ. ಶ. ಆರಂಭದಿಂದಲೂ ಪ್ರಸಿದ್ಧ ವ್ಯಾಪಾರಿ ಕೇಂದ್ರವಾಗಿತ್ತು. ಇಲ್ಲಿ ಬಹು ಹಿಂದಿನಿಂದಲೂ ಜನವಸತಿ ಇದ್ದ ಗುರುತುಗಳಿವೆ. ಬಹುಶಃ ಅವರಿಂದಾಗಿಯೆ ಈ ಪ್ರದೇಶದಲ್ಲಿ ಮೊದಲು ಗುಹಾಲಯ ಪ್ರಾಯೋಗಿಕ ವಾಗಿದ್ದಿರಬಹುದೆನೋ ಇರಲಿ, ಮೊದಲು ಈ ಗುಹಾಲಯಗಳನ್ನು ನೋಡೋಣ.

ರಾವಳಫಡಿ ಗುಹಾಲಯ, ಐಹೊಳೆ

ಈ ಗುಹಾಲಯವು ಬಾದಾಮಿಯ ಗುಹಾಲಯಗಳಿಗೆ ಹೋಲಿಸಿದರೆ ಸಣ್ಣದು. ಸಹಜ ನೈಸರ್ಗಿಕ ಬಂಡೆಯನ್ನು ಆಯ್ದುಕೊಂಡು ಇದನ್ನು ಕೆತ್ತಲಾಗಿದೆ. ಈ ಪ್ರದೇಶದ ಸುತ್ತ ಮುತ್ತ

ಬೇಕಾದಷ್ಟು ಮರಳು ಕಲ್ಲಿನ ಬೆಟ್ಟಗಳಿವೆ. ಕಲ್ಲನ್ನು ಒಡೆದು ತುಂಡರಿಸಿ ಕಟ್ಟಡ ನಿರ್ಮಿಸಲು ಸಹಕಾರಿಯಾಗಿವೆ. ಎಲ್ಲೆಂದರಲ್ಲಿ ಹೆಬ್ಬಂಡೆಗಳು ಮರಳು ಗಲ್ಲು ಕೊರೆಯುವುದಕ್ಕಾಗಲಿ ಒಡೆದು ರೂಪಿಸುವುದಕ್ಕಾಗಲಿ ಶಿಲೆಯಷ್ಟು ಕಠಿಣವಲ್ಲ. ಅದರ ಬಣ್ಣ ಬಲು ಆಕರ್ಷಕವಾದುದು. ಈ ಊರ ಮಧ್ಯದಲ್ಲಿ ನಿಂತಿರುವ ಹೆಬ್ಬಂಡೆಯೊಂದರ ಕಡಿದಾದ ಮಗ್ಗುಲನ್ನು ಸವರಿ ಚಿಕ್ಕ ಪ್ರಮಾಣದ ಒಂದು ಗುಹಾಲಯವನ್ನು ನಿರ್ಮಿಸಿದ್ದಾರೆ. ಅದರ ಚಾವಡಿ ೩೦ ಅಡಿ ಉದ್ದ ಮತ್ತು ೧೦ ಅಡಿ ಎತ್ತರವಾಗಿದ್ದು ಹಿಂಭಾಗ ೨೦ ಅಡಿಗಳಷ್ಟು ಹಿಂದಕ್ಕೆ ಸರಿದಿದೆ. ಮುಂದೆಡೆ ಚಾವಡಿಯ ಎರಡೂ ಬದಿಗಳಲ್ಲಿ ಚಾವಡಿಗಳನ್ನು ರೂಪಿಸಿದ್ದಾರೆ. ಅಲ್ಲಿ ಮತ್ತು ಎದುರಿನ ಗೋಡೆಗಳಲ್ಲಿ ಸುಂದರ ಶಿಲ್ಪಗಳನ್ನು ಕೆತ್ತಿದ್ದಾರೆ.

ಮುಂಭಾಗವನ್ನು ಎತ್ತಿ ಹಿಡಿದಿರುವಂತೆ ಚೌಕಾಕಾರದ ಛೇದದ ಸ್ತಂಭಗಳಿವೆ. ಮಗ್ಗಲು ಚಾವಡಿಗಳಲ್ಲಿ ಅಂತರವಿದೆ. ಗೋಡೆಗಳಲ್ಲಿ ಶಿಲ್ಪಗಳನ್ನು ಕೆತ್ತಿದಂತೆ ಮುಚ್ಚಿಗೆಯಲ್ಲಿ ಶಿಲ್ಪದ ಕೆತ್ತನೆ ಇದೆ. ವಾಸ್ತುರಚನೆಗಿಂತಲೂ ಇಲ್ಲಿನದು ಸಾಮಾನ್ಯ ಗಾತ್ರದ್ದಾದುದರಿಂದ ಇದನ್ನು ದೂರದಿಂದ ಕಾಣುವಾಗ ವಿಶೇಷ ಪರಿಣಾಮವನ್ನುಂಟು ಮಾಡುವುದಿಲ್ಲ."[೩೯] ನೆಲಮಟ್ಟಕಿಂತ ಸ್ವಲ್ಪ ಮೇಲುಭಾಗದಲ್ಲಿರುವ ಈ ಗುಹೆಯಲ್ಲಿ ಒಟ್ಟು ಮೂರು ಭಾಗಗಳಿವೆ. ಮಧ್ಯದಲ್ಲಿ ಗರ್ಭಗೃಹ, ಎರಡೂ ಪಕ್ಕಗಳಲ್ಲಿ ಪಾರ್ಶ್ವಕೋಷ್ಟಗಳು ಮಂಟಪವು ಆಯತಾಕಾರದಲ್ಲಿದೆ.

Shiva Ardhnarishwar (Shiva and Parvati), the seven mothers and Harihar, shiva and Vishnu sculptures have impressived.[೪೦] ಇದಲ್ಲದೆ ಗುಹೆಯ ಮುಂಭಾಗದ ಎರಡು ಬದಿಯಲ್ಲಿ ಶಂಖನಿಧಿ ಮತ್ತು ಪದ್ಮನಿಧಿ ವಿಗ್ರಹಗಳಿವೆ. ಪಕ್ಕದಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಹೀಗೆ ಹಲವಾರು ಉತ್ತಮ ಶಿಲ್ಪಗಳಿಂದ ಕೂಡಿದ ಈ ಗುಹೆಯು ತನ್ನ ಆಕಾರಕ್ಕಿಂತ ಹೆಚ್ಚಾಗಿ ಒಳಭಾಗದ ಶಿಲ್ಪ ಕೆತ್ತನೆಗಳಿಂದಾಗಿ ಆಕರ್ಷಕವಾಗಿವೆ.

ಮೀನ ಬಸದಿ (ಮೇಣ ಬಸದಿ)

ಐಹೊಳೆಯಲ್ಲಿ ಕಂಡುಬರುವ ಇನ್ನೊಂದು ಪ್ರಮುಖವಾದ ಗುಹಾಲಯವು ಮೀನ ಬಸದಿ, ಇದು ಜಿನಾಲಯವಾಗಿದೆ. ಹಲವಾರು ಜ್ಯಾಮಿತಿಕ ನಕ್ಷೆಗಳು, ಕಮಲ, ಪುಷ್ಪ, ಸ್ವಸ್ತಿಕ, ಮೀನು, ಮಕರ ಮುಂತಾದ ಉಬ್ಬು ಶಿಲ್ಪಗಳನ್ನು ಹೊಂದಿದೆ. ಒಳಭಾಗದ ಗೋಡೆಗಳಲ್ಲಿ ಯಕ್ಷ, ಯಕ್ಷಿಣಿಯರು, ಧರಣೇಂದ್ರ, ಪದ್ಮಾವತಿ ಶಿಲ್ಪಗಳನ್ನು ಹೊಂದಿದ್ದು ದಕ್ಷಿಣದ ಗೋಡೆಗಳಲ್ಲಿ ಬಾಹುಬಲಿ ಮತ್ತು ಆತನ ಸೋದರಿಯರ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಬಾಹುಬಲಿ ಪದ್ಮಾಸನಸ್ಥನಾಗಿದ್ದು ತಲೆಯ ಹಿಂಭಾಗ ಪ್ರಭಾಮಂಡಲ ಹಾಗೂ ಮುಕ್ಕೂಡೆ (ಛತ್ರಿ)ಯನ್ನು ಹೊಂದಿದ್ದು ಸುಂದರವಾಗಿದೆ.

---

೩೯. ಫಾಲಾಕ್ಷ : ಇತಿಹಾಸ, ಪುಟ – ೭೪

೪೦. Winand M. Callewaerf : Gods and Temples in South India, P.No. 101



ಬಾದಾಮಿ ಗುಹಾಂತರ ದೇವಾಲಯಗಳು

ಚಾಲುಕ್ಯರ ಕಾಲದ ಬಹುದೊಡ್ಡ ಕೊಡುಗೆ ಎಂದು ನಾವು ಹೇಳಬಹುದಾದ ಶಿಲ್ಪಗಳು ಅಥವಾ ಗುಹಾಲಯಗಳೆಂದರೆ ಬಾದಾಮಿಯ ಗುಹಾಲಯಗಳು. ಇಲ್ಲಿ ಒಟ್ಟು ೫ ಗುಹಾಲಯಗಳಿವೆ. ಇವುಗಳಲ್ಲಿ ಒಂದು ನೈಸರ್ಗಿಕ ಗುಹೆಯಾಗಿದ್ದು ಮಿಕ್ಕಿದ ನಾಲ್ಕರಲ್ಲಿ ಎರಡು ವಿಷ್ಣುಗುಹೆಗಳು, ಮೊದಲನೆಯದು ಶೈವ ಗುಹೆ, ಕೊನೆಯ ಒಂದು ಗುಹೆಯು ಜೈನ ಧರ್ಮಕ್ಕೆ ಸೇರಿದುದಾಗಿದೆ. ಇವುಗಳಲ್ಲಿ ಗುಹಾಲಯದ ನೈಜ ದರ್ಶನವಾಗುತ್ತದೆ. ಅವುಗಳಲ್ಲಿಯೂ ಮೂರನೆಯದಾದ ವೈಷ್ಣವ ಗುಹೆಯು ಅತ್ಯಂತ ಭವ್ಯವೂ ಸುಂದರವೂ ಆದುದಾಗಿದೆ.

ಮೊದಲನೆಯ ಗುಹಾಲಯದ ಬೃಹದಾಕಾರದ ನಟರಾಜನ ಶಿಲ್ಪವೂ ಅತ್ಯಂತ ಸುಂದರ ಕೆತ್ತನೆಗಳಲ್ಲಿ ಒಂದು. ಇವುಗಳಲ್ಲಿಯ ಶಿಲ್ಪಗಳ ಕುರಿತಾಗಿ ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ಚರ್ಚಿಸಲಾಗುವುದರಿಂದ ಈ ಅಧ್ಯಯನದಲ್ಲಿ ಶಿಲ್ಪಗಳ ಕುರಿತು ವಿವರಣೆ ನೀಡಿಲ್ಲ. ಕೊನೆಯದಾದ ಜೈನಗುಹೆಯು ಸಣ್ಣದಾಗಿದ್ದರೂ ಅದರ ಶಿಲ್ಪಗಳಿಂದಾಗಿ ಗಮನಾರ್ಹವಾಗಿದೆ. ಅಲ್ಲಿನ ಮಧ್ಯದ ನೈಸರ್ಗಿಕ ಗುಹೆಯ ಚಾಚಿನಲ್ಲಿ ಪದ್ಮಪಾಣಿ ಬುದ್ಧನ ಅಪೂರ್ಣ ಕೆತ್ತನೆಯ ಶಿಲ್ಪವಿದೆ. ಇದು ಬೌದ್ಧಧರ್ಮೀಯವಾಗಿದ್ದು ಒಟ್ಟು ಅಧ್ಯಯನದ ದೃಷ್ಟಿಯಿಂದ ಈ ಗುಹಾಲಯವೂ ಗಮನಾರ್ಹವಾಗಿದೆ.

ರಾಚನಿಕ ದೇವಾಲಯಗಳು

ಬಾದಾಮಿಯ ಚಾಲುಕ್ಯರ ಪ್ರಾರಂಭದ ಕಾಲದಲ್ಲಿ ಗುಹಾಲಯಗಳ ರಚನೆಗಳು ಕಂಡು ಬಂದವಾದರೂ ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆ ಹಿನ್ನೆಲೆಗೆ ಸರಿದು ಹೋಯಿತು. ಇದಕ್ಕೆ ಕಾರಣಗಳು ಇರಬಹುದು. ಆದರೆ ನಂತರದ ದಿನಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ದೇವಾಲಯಗಳನ್ನು ಕಟ್ಟುವ ಕಲ್ಲುಗಳನ್ನು ಒಂದೊಂದಾಗಿ ಕೆತ್ತಿ ಜೋಡಿಸಿ ಹಂತ ಹಂತವಾಗಿ ರಚನೆ ಮಾಡುವ ಪ್ರವೃತ್ತಿ ಬೆಳೆದು ಬಂದುದೇನಲ್ಲ. ವಾಸ್ತು ಶಿಲ್ಪನಿರ್ಮಾಣ ಮೊದಲಿನಿಂದಲೂ ನಡೆದು ಬಂದೇ ಇತ್ತು. ಐಹೊಳೆ ಪ್ರದೇಶಗಳಲ್ಲಿ ಚಾಲುಕ್ಯ ಕಾಲದವರಿಗಿಂತಲೂ ಮೊದಲು ದೇವಾಲಯಗಳು ಇದ್ದ ಕುರುಹುಗಳು ಕಂಡುಬರುತ್ತವೆಂದೂ ಪ್ರಾಚ್ಯವಸ್ತು ಸಂಶೋದಕರು ಅಭಿಪ್ರಾಯ ಪಟ್ಟಿದ್ದಾರೆ. ಅದಲ್ಲದೆ ಲಾಡ್‌ಖಾನ್ ದೇವಾಲಯವು ಗುಹಾಲಯಕ್ಕಿಂತ ಮೊದಲಿನ ರಚನೆ ಎಂದು ಒಪ್ಪಿಕೊಳ್ಳಲಾಗಿದೆ. ಇಂತಹ ಹಲವಾರು ದೇವಾಲಯಗಳು ಮುಂದಿನ ವಾಸ್ತು ಶಿಲ್ಪ ಕಲೆಯ ಬೆಳವಣಿಗೆಗೆ ದಾರಿದೀಪವಾದಂತಾಯಿತು ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ಚಾಲುಕ್ಯರು ನೂರಕ್ಕೂ ಹೆಚ್ಚು ರಾಚನಿಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಕಟ್ಟಡ ನಿರ್ಮಾಣ ಚಟುವಟಿಕೆಗಳು ಕರ್ನಾಟಕ ಮತ್ತು ಆಂಧ್ರಪ್ರದೇಶದ ಅನೇಕ ನೆಲೆಗಳಲ್ಲಿ ನಡೆದವು. ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲು, ಕರ್ನಾಟಕದ ಮಹತ್ವದ ಸ್ಥಳಗಳು ಇವಲ್ಲದೆ



ನಾಗರಾಳ, ಸಿದ್ದನಕೊಳ್ಳ, ಕೆಲೂರು, ಭದ್ರನಾಯಕನ ಜಾಲಿಹಾಳ, ಹುನಗುಂದ, ಸಂಡೂರು ಮೊದಲಾದೆಡೆಗಳಲ್ಲಿ ಚಾಲುಕ್ಯರ ರಾಚನಿಕ ಮಂದಿರಗಳನ್ನು ಕಾಣುತ್ತೇವೆ. ಆಂಧ್ರದ ಆಲಂಪುರವು ಇಂದಿನ ಕರ್ನಾಟಕದ ಗಡಿಯಾಚೆಗಿನ ಪ್ರಸಿದ್ಧ ಚಾಲುಕ್ಯರ ಕಲಾನೆಲೆ. ಆಂಧ್ರಪ್ರದೇಶದ ಪಾಪನಾಶನ ಕೂಡವೆಲಿ ಸತ್ಯಾಪೋಲು ಕಡಮರ ಕಾಲವ, ಮಹಾನಂದಿ ಬಂಡಿತಾಂಡ ಪಾಡು ಪಾಣ್ಯಂ ಮೊದಲಾದೆಡೆಗಳಲ್ಲಿ ಕೂಡಾ ಚಾಲುಕ್ಯರ ರಾಚನಿಕ ದೇವಾಲಯಗಳು ಕಂಡುಬರುತ್ತವೆ."[೪೧] ಕರ್ನಾಟಕದ ಆಂಧ್ರ, ಮಹಾರಾಷ್ಟ್ರ, ತಮಿಳುನಾಡಿನ ಕೆಲಭಾಗವು ಸೇರಿ ಬಹುಪಾಲು ದಕ್ಷಿಣ ಭಾರತವನ್ನು ಆಳಿದ ಚಾಲುಕ್ಯರ ಕಾಲದಲ್ಲಿ ನೂರಾರು ದೇವಾಲಯಗಳು ರಚನೆಯಾದುದನ್ನು ನಾವು ಕಾಣಬಹುದು. ಇವೆಲ್ಲಾ ಶಿಲ್ಪಕಲಾ ಕೇಂದ್ರಗಳು. ಇವುಗಳಲ್ಲಿ ಬಾದಾಮಿ, ಐಹೊಳೆ, ಮತ್ತು ಪಟ್ಟದಕಲ್ಲಿನ ದೇವಾಲಯಗಳು ಮತ್ತು ವಸ್ತುವಿನ್ಯಾಸಗಳ ದೃಷ್ಟಿಯಿಂದ ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತವೆ. ಅಂತಹ ಕೆಲ ದೇವಾಲಯಗಳನ್ನು ಇಲ್ಲಿ ಗಮನಿಸಬಹುದು.

ಐಹೊಳೆ

ಐಹೊಳೆಯು ಶಾಸನಗಳಲ್ಲಿ ಆರ್ಯಪುರವೆಂದು ಕರೆಯಲ್ಪಡುತ್ತದೆ. ಇದು ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿಗೆ ಸೇರಿದ ಹಳ್ಳಿ. ಈ ಹಳ್ಳಿಯನ್ನು 'ದೇವನಗರ' ಎಂದೂ ಕರೆಯಲಾಗುತ್ತಿತ್ತು.[೪೨] ಚಾಲುಕ್ಯರ ಆಡಳಿತದ ಆರಂಭ ಕಾಲದಲ್ಲಿ ದೇವಾಲಯಗಳು ರಚನೆಯಾದವು. ಇಲ್ಲಿಯ ದೇವಾಲಯಗಳ ನಿರ್ಮಾಣದಲ್ಲಿ ಅವರು ಮಾಡಿರುವ ವಿವಿಧ ಪ್ರಯೋಗಗಳು ನಮಗಿಲ್ಲಿ ಕಂಡು ಬರುತ್ತವೆ. ಚಾಲುಕ್ಯರ ಕಾಲದ ಬಹುಪಾಲು ದೇವಾಲಯಗಳು ಇಲ್ಲಿಯೇ ರಚನೆಯಾಗಿವೆ. ಅವರ ಆರಂಭದ ಕಾಲದಿಂದ ಕೊನೆಯವರೆಗೂ ಇಲ್ಲಿ ವಾಸ್ತು ನಿರ್ಮಾಣಗಳು ರಚನೆಯಾಗಿವೆ. ಐಹೊಳೆಯು ಪ್ರಾರಂಭದಲ್ಲಿ ಚಾಲುಕ್ಯರ ರಾಜಧಾನಿಯಾಗಿದ್ದು ಮತ್ತು ಭಾರತದ ಪ್ರಮುಖ ವ್ಯಾಪಾರಿಕೇಂದ್ರವಾಗಿದ್ದು ಮತ್ತೊಂದು ಕಡೆ ವಾಸ್ತು ಶಿಲ್ಪ ಪ್ರಯೋಗಾಲಯವೂ ಆಗಿದ್ದಿತು."[೪೩] ಇಲ್ಲಿ ಚಾಲುಕ್ಯರ ಕಾಲದ ೭೦ ದೇವಾಲಯಗಳು ಇರುವುದನ್ನು ಕಾಣಬಹುದು. ಚಾಲುಕ್ಯರ ಕಾಲದ ಪ್ರಾರಂಭದ ದೇವಾಲಯಗಳು ಸ್ಥೂಲ ಕಟ್ಟಡಗಳಾಗಿದ್ದವು. ಸಮತಟ್ಟಾದ ಮೇಲ್ಛಾವಣಿಯಿಂದ ಕೂಡಿರುತ್ತಿದ್ದವು. ಗುಪ್ತರ ಕಾಲದ ದೇವಾಲಯಗಳು ಇದೇ ರೀತಿಯಲ್ಲಿರುತ್ತಿದ್ದವು. ಮೊದ ಮೊದಲಿನ ದೇವಾಲಯಗಳಲ್ಲಿ ಗರ್ಭಗೃಹದ ಸುತ್ತಲಿನ ಪ್ರದಕ್ಷಿಣಾ ಪಥವಿರುತ್ತಿರಲಿಲ್ಲ. ನಂತರದ ರಚನೆಗಳಲ್ಲಿ ದೇವಾಲಯದ ಎದುರು ಮುಖ ಮಂಟಪ, ಸುತ್ತಲೂ ಪ್ರದಕ್ಷಿಣಾಪಥ, ನವರಂಗ, ಇತ್ಯಾದಿಗಳು ಸೇರಿಕೊಂಡವು. ದೇವಾಲಯದ ಗರ್ಭಗೃಹದ ಮೇಲು ಭಾಗದಲ್ಲಿ ಶಿಖರ, ಕೆಳಗೆ ಸುಖನಾಸಿ, ಅರ್ಧಮಂಟಪ

---

೪೧. ಡಾ. ಶಿವರಾಮ ಕಾರಂತ : ಚಾಲುಕ್ಯತ ವಾಸ್ತು ಮತ್ತು ಶಿಲ್ಪ, ಪುಟ – ೧೬

೪೨. ಡಿ. ಗುರುರತ್ನಬಾಬು (ಸಂ.) : ದಕ್ಷಿಣ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪ, ಪುಟ – ೧೦೦

೪೩. ಮಾಲಿನಿ ಮಲ್ಯ (ಸಂ.) : ಡಾ. ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂ–೩೦, ಕ.ಪ್ರ – ೨, ಪುಟ – ೧೫೫

ಮುಂತಾದ ಭಾಗದಲ್ಲೂ ಸೇರಿಕೊಂಡವು. ಹಾಗೆ ದೇವಾಲಯಗಳು ದೊಡ್ಡದಾಗಿ ಭವ್ಯವಾಗಿ ಕಾಣುವಂತೆ ಅಲಂಕರಣಗಳ ಶಿಲ್ಪಗಳು ಸೇರಿಕೊಂಡವು. ಈ ರೀತಿಯಾಗಿ ಚಾಲುಕ್ಯರ ಕಲೆಯು ಬೆಳೆಯಲು ಐಹೊಳೆಯ ದೇವಾಲಯಗಳು ಕಾರಣವಾಗಿವೆ. ಅಲ್ಲದೆ ದುರ್ಗಾದೇವಾಲಯ ಹೊಸ ರೀತಿಯ ಪ್ರಯೋಗಕ್ಕೆ ಒಳಗಾಗಿದೆ. ಬೇರೆ ಬೇರೆ ಕಡೆ ಪ್ರಚಲಿತವಿದ್ದ ಶೈಲಿಗಳನ್ನು ಇದರಲ್ಲಿ ಅಳವಡಿಸುವ ಪ್ರಯತ್ನ ನಡೆದಿದೆ.[೪೪] ನಂತರ ಇದೊಂದು ಪ್ರಯೋಗ ಶಾಲೆಯಾಗಿ ಮಾರ್ಪಟ್ಟಿತೆಂದು ತೋರುತ್ತದೆ. ಮುಂದೆ ವಿವಿಧ ಶೈಲಿಗಳು ಇಲ್ಲಿ ಸೇರಿಕೊಂಡು ಇನ್ನಷ್ಟು ವಿಸ್ತಾರವಾಯಿತು. ಇಂತಹ ಕೆಲ ದೇವಾಲಯಗಳನ್ನು ನಾವಿಲ್ಲಿ ನೋಡೋಣ.

ಲಾಡ್‌ಖಾನ್ ದೇವಾಲಯ

ಈ ದೇವಾಲಯ ಗರ್ಭಗೃಹದಲ್ಲಿ ಪ್ರತಿಮೆಗೆ ಲಂಗವದಂತೆ ಕಂಡರೂ ಅದು ಸೂರ್ಯ ದೇವಸ್ಥಾನವೆಂದು ನಿಖರವಾಗಿ ಹೇಳಲು ಅನೇಕ ಆಧಾರಗಳಿವೆ. ಗರ್ಭಗೃಹದ ಗೋಡೆಯ ಮೇಲೆ ಗರುಡನಿದ್ದಾನೆ. ಈ ದೇವಸ್ಥಾನವು ೭ನೇಯ ಶತಮಾನದ ಕೊನೆ ಅಥವಾ ಎಂಟನೆಯ ಶತಮಾನದ (೧೮೭-೧೮೮ರ) ಆದಿ ಭಾಗದ್ದೆಂದು ಹೇಳುತ್ತಾರೆ. ಪ್ರಥಮವಾಗಿ ಇದು ಯಾಗಶಾಲೆಯಾಗಿ ಮತ್ತು ಇದೇ ಜಾಗದಲ್ಲಿ ಬಹುಶಃ ಪುಲಿಕೇಶಿ ಅಶ್ವಮೇಧಯಾಗವನ್ನು ಮಾಡಿರಬೇಕು (ಡಾ. ಸೂರ್ಯನಾಥ ಕಾಮತ್‌ರವರ ವಿಶ್ಲೇಷಣೆ).

"ಚಾಲುಕ್ಯರ ಕಾಲಕ್ಕಿಂತಲೂ ಮೊದಲಿನ ರಚನೆ ಎಂದು ಹೇಳಲಾಗಿದೆ. ಈ ದೇಗುಲಕ್ಕೆ ಈ ಹೆಸರು ಹೇಗೆ ಬಂತು ಎಂಬುದೆ ವಿಚಿತ್ರ. ಅತ್ಯಂತ ಹಳೆಯ ದೇಗುಲಗಳಲ್ಲಿ ಒಂದಾದ ಇದರ ರಚನೆ ಚಾಲುಕ್ಯರಿಗಿಂತಲೂ ಒಂದು ಶತಮಾನ ಮೊದಲನೆಯದು ಎಂದು ಡಾ. ಶಿವರಾಮ ಕಾರಂತರು ಅಭಿಪ್ರಾಯ ಪಟ್ಟಿದ್ದಾರೆ. ಐಹೊಳೆಯಲ್ಲಿ ತೀರಾ ಪುರಾತನ ದೇವಾಲಯಗಳಲ್ಲಿ ಒಂದೆನಿಸುವ ಲಾಡ್‌ಖಾನ್ ಎಂಬ ವಿಚಿತ್ರ ಹೆಸರನ್ನು ಪಡೆದುಕೊಂಡ ಹಳೆಯ ದೇಗುಲವಿದೆ. ಅದು ಕ್ರಿ.ಶ ೪೫೦ರದ್ದು, ಚಾಲುಕ್ಯರು ಕಾಲಿರಿಸುವಾಗಲೆ ಅಲ್ಲಿ ಇದ್ದಿತ್ತೆನ್ನಬಹುದು."[೪೫] ಹೊರ ನೋಟಕ್ಕೆ ತೀರಾ ಸಾಮಾನ್ಯವೆಂಬಂತೆ ಕಂಡುಬರುವ ಈ ದೇವಾಲಯದಲ್ಲಿ ಗರ್ಭಗೃಹದ ಮುಂದುಗಡೆ ನಂದಿ ಮಂಟಪ ಇತ್ಯಾದಿಗಳಿವೆ.

ಈ ದೇವಾಲಯಕ್ಕೆ ಯಾವುದೇ ಶಾಸನಾಧಾರವಿಲ್ಲ. ಬಹುಶಃ ಲಾಡ್‌ಖಾನ್ ಎಂಬುವನು ಇಲ್ಲಿ ವಾಸವಾಗಿದ್ದಿರಬಹುದು.[೪೬] ಆದ್ದರಿಂದ ಇದನ್ನು ಲಾಡ್‌ಖಾನ್ ದೇವಾಲಯ ಎಂದು ಕರೆಯುವರು. ಎರಡು ಹಂತಗಳನ್ನು ಹೊಂದಿರುವ ಈ ವಿಶಿಷ್ಟ ದೇವಾಲಯದ ಮಾಡು ಮೇಲಿನ ಹಂತದಲ್ಲಿ ಸ್ವಲ್ಪ ಇಳಿಜಾರಾಗಿದ್ದು, ಒಳಗಡೆ ಕಂಬಸಾಲುಗಳು ಮುಖಮಂಟಪ

---

೪೪. ಪಿ. ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ - ೨೨೭

೪೫. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ - ೨೭

೪೬. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ-ಸಂಸ್ಕೃತಿ, ಪುಟ - ೨೧೮

ಎತ್ತರದ ಗೋಡೆಗಳಲ್ಲಿ ಹೊಂದಿದ ಕಂಬಗಳು ಉಬ್ಬುಶಿಲ್ಪಗಳಿಂದ ಆಕರ್ಷಕವಾಗಿ ಅಲಂಕರಿಸಲ್ಪಟ್ಟಿವೆ. ಆನೆಗಳು, ಕುದುರೆಗಳು, ನವಿಲು ಮೊದಲಾದ ಪ್ರಾಣಿ ಪಕ್ಷಿಗಳ ಕೆತ್ತನೆಗಳಿಂದಾಗಿ ಕೂಡಿದ ಈ ದೇವಾಲಯದ ಕಂಬವೊಂದರಲ್ಲಿ ಚಾಲುಕ್ಯರ ರಾಜಲಾಂಛನವನ್ನು ಬಿಡಿಸಲಾಗಿದೆ. ಶಂಖ, ಚಕ್ರ ಮತ್ತು ವರಾಹಗಳು ಈ ಲಾಂಛನದಲ್ಲಿ ಮೂಡಿಬಂದಿವೆ.[೪೭] ಇವನ್ನು ಗಮನಿಸಿದರೆ ಈ ದೇವಾಲಯವನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗಿದೆ ಎಂದು ಹೇಳಬಹುದಾಗಿದೆ. ಬಹುಶಃ ಮೊದಲು ನಿರ್ಮಿತವಾಗಿದ್ದ ದೇವಾಲಯಕ್ಕೆ ಚಾಲುಕ್ಯರ ಕಾಲದಲ್ಲಿ ಮುಂದಿನ ಮುಖಮಂಟಪ ಮತ್ತು ನಂದಿ ಮಂಟಪಗಳನ್ನು ಸೇರಿಸಿ ಜೀರ್ಣೋದ್ಧಾರ ಮಾಡಿದ್ದು ಚಾಲುಕ್ಯರ ಕಾಲದಲ್ಲಿ ಆಗಿರಬಹುದುದಾಗಿದೆ. ದೇವಾಲಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಲ್ಲಿ ಎರಡು ಶೈಲಿಗಳು ಕೂಡಿದ್ದು ಕಂಡುಬರುತ್ತದೆ. ಲಾಡ್‌ಖಾನ್ ಗುಡಿಯ ಮುಖ ಮಂಟಪದ ಕಂಬಗಳಲ್ಲಿ ಮಧ್ಯಗಾತ್ರದ ರಸಿಕ ದಂಪತಿ ಶಿಲ್ಪಗಳಿದ್ದು ಮತ್ತು ರಾಸಲೀಲೆಯ ಚಿಕಣಿ ಶಿಲ್ಪಗಳು ಅರ್ಧ ವರ್ತುಲಾಕೃತಿಯಲ್ಲಿವೆ.[೪೮]

ಹುಚ್ಚಿಮಲ್ಲಿ ಗುಡಿ

ಐಹೊಳೆಯ ಪ್ರಾಚೀನ ಗುಡಿಗಳಲ್ಲಿ ಹುಚ್ಚಿಮಲ್ಲಿ ಗುಡಿಯೂ ಒಂದು. ಸುಮಾರು ಕ್ರಿ.ಶ ೭ನೇ ಶತಮಾನದ್ದೆಂದು ಅಂದಾಜಿಸಲಾಗಿದೆ. ಗರ್ಭಗೃಹ ಅದಕ್ಕಿಂತ ಸ್ವಲ್ಪ ದೊಡ್ಡದಾದ ಮಂಟಪ ಮತ್ತು ಎದುರುಗಡೆ ಮುಖಮಂಟಪಗಳುಳ್ಳ ಈ ದೇವಾಲಯಕ್ಕೆ ಸುತ್ತಲೂ ಎತ್ತರವಾದ ಗೋಡೆಗಳಿವೆ. ಮಂಟಪಕ್ಕೆ ಹೊಂದಿಕೊಂಡಿರುವ ಮುಖಮಂಟಪಕ್ಕೆ ಎರಡು ಸ್ತಂಭಗಳು ಆಧಾರವಾಗಿವೆ. ಗರ್ಭಗೃಹದ ಮೇಲುಗಡೆ ನಾಗರ ಶೈಲಿಯ ಶಿಖರವಿದೆ. ಮುಖಮಂಟಪದ ಮೇಲುಬಾಗದಲ್ಲಿ ತಾರಕಾಸುರನನ್ನು ವಧಿಸುತ್ತಿರುವ ಕಾರ್ತಿಕೇಯನನ್ನು ಕೆತ್ತಲಾಗಿದೆ.[೪೯] ಮಂಟಪದ ಛತ್ತಿನಲ್ಲಿ ಕಮಲದಳಗಳು, ವಿವಿಧ ಪುಷ್ಪ ವಿನ್ಯಾಸಗಳು, ಶಿವ ವಿಷ್ಣು ಮೊದಲಾದ ದೇವತಾ ಶಿಲ್ಪಗಳಿದ್ದು ಸುಖನಾಸಿಯಲ್ಲಿ ಸಣ್ಣ ಗಾತ್ರದ ನಟರಾಜನ ಶಿಲ್ಪವನ್ನು ನೋಡಬಹುದು.

ವಿರೂಪಾಕ್ಷ ದೇವಾಲಯ, ಐಹೊಳೆ

ಇದು ಅಂದಿನ ಕಾಲದ ಪ್ರಸಿದ್ಧ ಶಿಲ್ಪಿ ನರಸೊಬ್ಬ ಎಂಬ ಸ್ಥಪತಿಯ ನಿರ್ಮಾಣ. ಈತ ಸ್ಥಪತಿಯೂ ಆಗಿದ್ದ. ಈ ದೇವಾಲಯದ ಹೊರಗೋಡೆಯ ಎರಡು ದೇವಕೋಷ್ಟಗಳಲ್ಲಿ ಹಿರಣ್ಯಕಶಿಪುವನ್ನು ವಧಿಸುವ ಉಗ್ರನರಸಿಂಹನ ಶಿಲ್ಪವು, ಶಿವನ ಗಜಾಸುರವಧ ಪ್ರಸಂಗವೂ ಕೆತ್ತಲ್ಪಟ್ಟಿದೆ. ಸಭಾಮಂಟಪದಲ್ಲಿ ಯಕ್ಷ ಯಕ್ಷಿಣಿಯರ ಸಣ್ಣ ಗಾತ್ರದ ಕೆತ್ತನೆಗಳಿವೆ. ಮುಖಮಂಟಪದಲ್ಲಿ ಶಂಖನಿಧಿ ಪದ್ಮನಿಧಿಯರ ಶಿಲ್ಪಗಳನ್ನು ಕೆತ್ತಿರಿಸಲಾಗಿದೆ. ಹಲವು ಸುಂದರ

---

೪೭. ಪಿ.ವಿ.ಕೃಷ್ಣಮೂರ್ತಿ, ಡಾ. ಕೆ. ವಸಂತಲಕ್ಷ್ಮೀ (ಸಂ.) : ಸೂರ್ಯ ಕೀರ್ತಿ (ಡಾ. ಸೂರ್ಯನಾಥ ಕಾಮತರ ಅ.ಗ್ರ), ಪುಟ–೧೮೭

೪೮. ಅದೇ., ಪುಟ– ೧೮೮

೪೯. ಎ. ಎಂ. ಅಣ್ಣಿಗೇರಿ : ಐಹೊಳೆ : ಸಂಸ್ಕೃತಿ ಮತ್ತು ಕಲೆ, ಪುಟ – ೬೨



ಶಿಲ್ಪಗಳನ್ನು ಹೊಂದಿರುವ ಈ ದೇವಾಲಯದ ಭತ್ತಿನಲ್ಲಿ ಅತಿ ಭಂಗಿಯಲ್ಲಿರುವ ನಟರಾಜನ ಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗೃಹದ ಎದುರು ಭಾಗದಲ್ಲಿ ದ್ವಾರಪಾಲಕರು ಶಿವನ ರೂಪದಲ್ಲಿ ಇದ್ದು ಅಂದಿನ ಕಾಲದ ಶಿಲ್ಪಿಗಳ ಕೌಶಲ್ಯಕ್ಕೆ ನಿದರ್ಶನವಾಗಿವೆ. ಇಲ್ಲಿ ಕಾಣಿಸುವ ಕೆಲವು ಶಿಲ್ಪಗಳು ವಿಶಿಷ್ಟವಾಗಿವೆ. ದೇಗುಲದ ಪ್ರವೇಶದ್ವಾರದ ಎರಡೂ ಬದಿಗಳಲ್ಲಿ ವೃಕ್ಷದ ನೆರಳಿನಲ್ಲಿ ನಿಂತಂತೆ ಕೆತ್ತಲಾಗಿರುವ ಎರಡು ಸ್ತ್ರೀಶಿಲ್ಪಗಳಿವೆ. ಮುಖವು ತರುಣಿಯಂತೆ ಕಾಣಿಸುವ ಸ್ತ್ರೀಯೊಬ್ಬಳು ಪುರುಷನನ್ನು ಆಲಿಂಗಿಸಿಕೊಂಡು ನಿಂತಿರುವ ವಿಶಿಷ್ಟ ರಚನೆ ಇದೆ. ಇದಲ್ಲದೆ ಇನ್ನೂ ಕೆಲವು ರಸಿಕ ಶಿಲ್ಪಗಳಿವೆ. ಭತ್ತಿನಲ್ಲಿ ಬ್ರಹ್ಮನ ಉಬ್ಬು ಶಿಲ್ಪವಿದ್ದು ಋಷಿಗಳು ಆತನನ್ನು ಪೂಜಿಸುತ್ತಿರುವ ಶಿಲ್ಪವಿದೆ. ಅದಲ್ಲದೆ ನಂದಿವಾಹನ ಶಿವ ಶೇಷಾಸೀನನಾದ ವಿಷ್ಣು ಮುಂತಾದ ಶಿಲ್ಪಗಳನ್ನು ನಾವಿಲ್ಲಿ ನೋಡಬಹುದು.

ದುರ್ಗಾ ದೇವಾಲಯ, ಐಹೊಳೆ

ಐಹೊಳೆಯ ದುರ್ಗಾ ಮಂದಿರ ಸೂರ್ಯ ದೇವಸ್ಥಾನವಾಗಿತ್ತೆಂದು ಶಾಸನ ಸೂಚಿಸುತ್ತದೆ. ಈ ಶಾಸನದಲ್ಲಿ ನಿರೂಪಿತವಾಗಿರುವಂತೆ, ಎರಡನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕೋರಮಾರಸಿಂಗ ಎಂಬುವನು ಆದಿತ್ಯ ದೇವರಿಗೆ ದಾನ ಮಾಡಿರುವುದಾಗಿ ಹೇಳಿದೆ.[೫೦] ಇದರ ತಳಪಾಯ ನೆಲಮಟ್ಟಕಿಂತ ಸುಮಾರು ೫ರಿಂದ ೬ಅಡಿ ಎತ್ತರವಾಗಿದೆ. ಗರ್ಭಗೃಹದ ಹಿಂಭಾಗ ಅರ್ಧ ವರ್ತುಲಾಕಾರದಲ್ಲಿದ್ದು ಅದನ್ನು ಸುತ್ತುವರಿಯುವ ಪ್ರದಕ್ಷಣಾಪಥವು ಎದುರಿನ ಮುಖಮಂಟಪಕ್ಕೆ ಸೇರಿಕೊಳ್ಳುತ್ತದೆ.

ಈ ಮಂಟಪಕ್ಕೆ ಎರಡು ಸಾಲು ಸ್ತಂಭಗಳಿವೆ. ಇವೆಲ್ಲವನ್ನು ಸುತ್ತುವರಿದ ಎರಡನೆ ಪ್ರದಕ್ಷಿಣಾಪಥ ಒಂದರ ಭಾಗ ತೆರೆದಿದ್ದು ಅದರ ಕಿಡಕಿಯಲ್ಲಿ ನಿರ್ಮಿಸಲಾಗಿರುವ ಆಯತಾಕಾರದ ಸ್ತಂಭಗಳ ಮೇಲೆ ಶಿಲ್ಪಗಳು ವಿರಾಜಿಸುತ್ತವೆ. ಇದರ ಕೊನೆಯ ಭಾಗ ಮೇಲ್ಮುಖವಾಗಿದ್ದು ಸುಮಾರು ೬೦ ಅಡಿ ಉದ್ದ, ೩೬ ಅಡಿ ಅಗಲವಿದ್ದು ಮುಖಮಂಟಪವು ಸುಮಾರು ೨೪ ಅಡಿಗಳಷ್ಟಿದೆ. ಇದರ ಒಟ್ಟು ಉದ್ದ ಸುಮಾರು ೮೪ ಅಡಿಗಳಷ್ಟಿದ್ದು ಎದುರಿನ ಮುಖಮಂಟಪಕ್ಕೆ ಪ್ರವೇಶಿಸಲು ಅದರ ಎರಡು ಪಕ್ಕದಲ್ಲಿ ಏರು ಮೆಟ್ಟಿಲುಗಳಿವೆ.

ಈ ದೇವಾಲಯದ ಹೊರನೋಟದಷ್ಟೇ ಪ್ರಾಮುಖ್ಯ ಇಲ್ಲಿನ ಶಿಲ್ಪಸೌಂದರ್ಯಕ್ಕೂ ಇದೆ. ಈ ದೇವಾಲಯದ ಹೊರಗೋಡೆಗಳಲ್ಲಿ ದೇವಕೋಷ್ಟಕಗಳಲ್ಲಿ ಭಿತ್ತಿಶಿಲ್ಪಗಳಿವೆ. ಕೆಲವು ಶಿಲ್ಪಗಳು ಪ್ರಕೃತಿಯ ವಿಕೋಪಕ್ಕೆ ನಶಿಸಿದ್ದು ಇನ್ನೂ ಕೆಲವು ಅಲ್ಪ ಸ್ವಲ್ಪ ಉಳಿದುಕೊಂಡಿವೆ. ಇಲ್ಲಿ ಶಿಲ್ಪಗಳನ್ನು ಮಹಾಭಾರತ ಮತ್ತು ರಾಮಾಯಣದ ಕತೆಗಳನ್ನಾಧರಿಸಿದ ಅದ್ಭುತ ಕಲ್ಪನೆಗಳ ಶಿಲ್ಪಗಳು ಇಲ್ಲಿ ರಾರಾಜಿಸುತ್ತಿವೆ. ನರಸಿಂಹ, ವರಾಹ, ಹರಿಹರ, ವಿಷ್ಣು, ಮಹಿಷಾಸುರ ಮರ್ದಿನಿ, ಶಿವ ಪಾರ್ವತಿ ಇನ್ನೂ ಹಲವಾರು ಶಿಲ್ಪಗಳಿವೆ. ಇದಲ್ಲದೆ ವಿವಿಧ ಪುಷ್ಪವಿನ್ಯಾಸವು,

೫೦. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೨೩

[illegible]

ಜಾಮಿತಿಕ ನಕ್ಷೆಗಳು ಸ್ವಸ್ತಿಕ ಮುಂತಾದವುಗಳೊಂದಿಗೆ ಇಲ್ಲಿ ಮಿಥುನಶಿಲ್ಪಗಳನ್ನು ಶಿಲ್ಪದ ಆವರಣದಲ್ಲಿ ಕಾಣಬಹುದು. ಹಾಗೆ ದ್ವಾರದ ಮೇಲೆ ಗರುಡ ಮತ್ತು ದ್ವಾರದ ಅಕ್ಕ ಪಕ್ಕಗಳಲ್ಲಿ ಗಂಗಾ-ಯಮುನಾ ಶಿಲ್ಪಗಳಿವೆ. ದ್ವಾರದ ಮೇಲ್ಭಾಗದಲ್ಲಿ ಮಕರ ತೋರಣಗಳಿದ್ದು ದ್ವಾರಕ್ಕೆ ಸೊಗಸನ್ನು ತಂದು ಕೊಟ್ಟಂತಿವೆ. ಒಟ್ಟಿನಲ್ಲಿ ಹಲವು ವಿಭಿನ್ನ ಶೈಲಿಗಳ ಮಿಶ್ರಣದಂತೆ ಕಂಡುಬರುವ ಈ ದೇವಾಲಯ ಚಾಲುಕ್ಯರ ಕಾಲದ ಒಂದು ವೈಶಿಷ್ಟವೆನ್ನಬಹುದು.

ಕೊಂತಿಗುಡಿ, ಐಹೊಳೆ

ಐಹೊಳೆಯಲ್ಲಿರುವ ಪೇಟೆಯೊಳಗೆ ಸುಮಾರು ನಡುಮಧ್ಯದಲ್ಲಿ ಕೊಂತಿಗುಡಿಗಳ ಗುಂಪಿದೆ. ಇದು ನಾಲ್ಕು ದೇವಾಲಯಗಳ ಕೂಟ. ಒಂದನೆಯ ದೇವಾಲಯ ಆಕಾರದ ಮಟ್ಟ, ಭಾವಣಿಯ ಮಂಟಪ, ಒಳಗೆ ಆರು ಕಂಬಗಳ ಎರಡು ಸಾಲುಗಳಿವೆ. ಹಿಂಬದಿಯ ಗೋಡೆಗೆ ಸೇರಿದಂತೆ ಚಿಕ್ಕ ಆಯತಾಕಾರದ ಗರ್ಭಗೃಹವಿದೆ. ಮಂಟಪದ ಛತ್ತಿನಲ್ಲಿ ಕಮಲಾಸೀನ ಬ್ರಹ್ಮ, ಅನಂತಶಾಯಿ ವಿಷ್ಣು ಮತ್ತು ಉಮಾಮಹೇಶ್ವರ, ಶಿಲ್ಪ ಚದರವು ಗರ್ಭಗುಡಿಯ ದಕ್ಷಿಣ ಗೋಡೆಯ ಮೇಲೆ ಶಿವತಾಂಡವ, ದ್ವಾರಪಾಲಕರು, ಕಂಬಗಳ ಮೇಲೆ ರಸಿಕ ದಂಪತಿಗಳ[೫೧] ಶಿಲ್ಪವಿದ್ದು, ಇವು ಕಾಣುವುದಕ್ಕೆ ವಿಶಿಷ್ಟವಾಗಿ ಮತ್ತು ಆಕರ್ಷಕವಾಗಿವೆ.

ಇಲ್ಲಿ ಶೈವ ಮತ್ತು ವೈಷ್ಣವಧರ್ಮಕ್ಕೆ ಸಂಬಂಧಿಸಿದ ಹಲವಾರು ಸುಂದರ ಶಿಲ್ಪಗಳನ್ನು ಈ ಆವರಣದಲ್ಲಿ ನೋಡಬಹುದು. ಬಾದಾಮಿ ಚಾಲುಕ್ಯರ ಕಾಲದ ಗುಹೆಗಳು ಮತ್ತು ದೇವಾಲಯಗಳನ್ನು ಶಿಲ್ಪಿಗಳು ದೇವಾಲಯಗಳಿಗೆ ತಕ್ಕಂತೆ ಶಿಲ್ಪಗಳನ್ನು ರಚಿಸುವುದು ಮತ್ತು ವಾಸ್ತು ಪ್ರಕಾರವಾಗಿ ದೇವಾಲಯಗಳನ್ನು ನಿರ್ಮಿಸಿದ್ದಾರೆ ಎಂದರೆ ತಪ್ಪಾಗಲಾರದು. ಹಾಗೆ ಚಾಲುಕ್ಯರ ವ್ಯಾಪ್ತಿಯನ್ನು, ಆ ಶಿಲ್ಪದ ವೈಶಿಷ್ಟ್ಯವನ್ನು ವೀಕ್ಷಿಸಲು ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟ ಮುಂತಾದವುಗಳಲ್ಲಿ ರಚಿಸಲ್ಪಟ್ಟ ವಾಸ್ತುಶಿಲ್ಪ ಕೈಬೀಸಿ ಕರೆಯುತ್ತಿವೆ.

ಮೇಗಣ ಶಿವಾಲಯ, ಬಾದಾಮಿ

ಎರಡನೆಯ ಪುಲಿಕೇಶಿಯ ಕಾಲದಲ್ಲಿ ನಿರ್ಮಾಣವಾಗಿರುವ ಈ ವಿಷ್ಣು ದೇವಾಲಯದ ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಗೋಪುರವಿದೆ.[೫೨] ಬಹುಪಾಲು ಶಿಥಿಲವಾಗಿರುವ ಈ ದೇವಾಲಯದ ಸಭಾಮಂಟಪದ ಹೊರಗೋಡೆಯ ದೇವಕೋಷ್ಟದಲ್ಲಿರುವ ಕೆಲ ಶಿಲ್ಪಗಳು ಗಮನಾರ್ಹವಾಗಿವೆ. ಅವುಗಳಲ್ಲಿ ನರಸಿಂಹ, ಗೋವರ್ಧನಗಿರಿ, ಕಾಳಿಂಗಮರ್ದನ ಶಿಲ್ಪಗಳು ಆಕರ್ಷಕವಾಗಿವೆ. ಇದಲ್ಲದೆ ಅಧಿಷ್ಠಾನದ ಒಳಭಾಗದಲ್ಲಿ ರಾಮಾಯಣದ ಹಲವಾರು ಸನ್ನಿವೇಶಗಳನ್ನೊಳಗೊಂಡ ಶ್ರೀ ಕೃಷ್ಣನ ಬಾಲಲೀಲೆಯ ಹಲವಾರು ಶಿಲ್ಪಗಳ ಪಟ್ಟಿಕೆಗಳಿವೆ.

---

೫೧. ಡಾ. ಅಂಬಳಿಕೆ ಹಿರಿಯಣ್ಣ (ಸಂ.) : ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಪುರಾತತ್ವ, ಪುಟ – ೧೮೪

೫೨. ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ವಿಜಯ, ಶ್ರೀ. ಸಿ. ಆರ್. ಕೃಷ್ಣರಾವ್ (ಸಂ.) : ಕರ್ನಾಟಕ ಕಲಾದರ್ಶನ, ಪುಟ – ೩೨೫

ಮಾಲಗಿತ್ತಿ ಶಿವಾಲಯ, ಬಾದಾಮಿ

ಮಾಲಗಿತ್ತಿ ಶಿವಾಲಯವು ಬಾದಾಮಿಯಲ್ಲಿರುವ ಮೂರನೇ ಪ್ರಾಚೀನ ದೇವಾಲಯ, ಹೆಚ್ಚು ಉತ್ತಮ ಸ್ಥಿತಿಯಲ್ಲಿ ಉಳಿದಿರುವ ದೇವಾಲಯವಾಗಿದೆ.[೫೩] ಇದನ್ನು ನಿರ್ಮಿಸಿದಾತ ಆರ್ಯಮಂಚಿ ಉಪಾಧ್ಯಾಯ ಎಂಬ ಸ್ಥಪತಿ. ಚಾಲುಕ್ಯರ ರಾಜಧಾನಿಯಾದ ಬಾದಾಮಿಯಲ್ಲಿರುವ ಈ ಶಿವಾಲಯವು ಮೂಲತಃ ಸೂರ್ಯ ದೇವಸ್ಥಾನವೆಂದು ಡಾ. ಅ. ಸುಂದರ ಅವರು ಅಭಿಪ್ರಾಯ ಪಡುತ್ತಾರೆ.[೫೪] ಇಲ್ಲಿರುವ ಶಿವ ಮತ್ತು ವಿಷ್ಣುವಿನ ಕುರಿತಾದ ಕೆಲವು ಶಿಲ್ಪಗಳು, ದ್ವಾರಪಾಲಕರ ಶಿಲ್ಪಗಳು, ಮಕರತೋರಣ ಹಾಗೂ ದೇವಕೋಷ್ಠಕಗಳಲ್ಲಿ ಕೆತ್ತಲಾದ ಕೆಲವು ಶಿಲ್ಪಗಳು ಮಹತ್ವದ ಕಲಾಕೃತಿಗಳಾಗಿವೆ. ಇಲ್ಲಿನ ಹೊರಗೋಡೆಯಲ್ಲಿ ಕೆತ್ತಲಾಗಿರುವ ನರಸಿಂಹ ಶಿಲ್ಪವು ಸುಂದರ ಕಲಾಕೃತಿಯಾಗಿದೆ.

ಜಂಬುಲಿಂಗ ದೇವಾಲಯ, ಬಾದಾಮಿ

ಬಾದಾಮಿಯಲ್ಲಿ ಕಟ್ಟಲಾಗಿರುವ ಪ್ರಾಚೀನ ದೇವಾಲಯಗಳಲ್ಲಿ ನಿರ್ಮಾಣದ ಖಚಿತ ದಿನಾಂಕ ಲಭ್ಯವಾಗಿರುವುದು, ಜಂಬುಲಿಂಗ ದೇವಾಲಯಕ್ಕೆ ಸಂಬಂಧಿಸಿದ್ದು, ವಿಜಯಾದಿತ್ಯನ ತಾಯಿ ರಾಣಿ ವಿನಯವತಿಯು ಕ್ರಿ.ಶ. ೬೯೯ರಲ್ಲಿ ಈ ತ್ರಿಕೂಟ ದೇವಾಲಯವನ್ನು ಕಟ್ಟಿಸಿದ್ದು ಸ್ಪಷ್ಟವಾಗಿ ತಿಳಿದಿದೆ. ಇದು ಬಾದಾಮಿಯಲ್ಲಿ ಕಟ್ಟಲಾದ ಮೊದಲನೆಯ ತ್ರಿಕೂಟ ದೇವಾಲಯ. ಮೂರೂ ಗರ್ಭಗೃಹಗಳಿಗೆ ಸೇರಿದಂತೆ ಒಂದೇ ಸಭಾಮಂಟಪವಿದೆ. ಅದರ ಮುಂಭಾಗದಲ್ಲಿ ತೆರೆದ ಮುಖ ಮಂಟಪವಿದೆ. ಮಧ್ಯದ ಗರ್ಭಗೃಹದ ಸಭಾಮಂಟಪದ ಭುವನೇಶ್ವರಿಯಲ್ಲಿ ಶಿವ, ಬ್ರಹ್ಮ ಮತ್ತು ವಿಷ್ಣುವಿನ ಶಿಲ್ಪಗಳಿವೆ.

ಉಳಿದೆರಡು ಗರ್ಭಗೃಹಗಳ ಮುಂದಿನ ಸಭಾಮಂಟಪದ ಒಳಛಾವಣಿಯಲ್ಲಿ ಮತ್ಸ್ಯ ಚಕ್ರ, ನಂದ್ಯಾವರ್ತ ಮತ್ತು ಸ್ವಸ್ತಿಕ ಚಿಹ್ನೆಗಳಿವೆ.[೫೫] ಒಟ್ಟಾರೆ ಬಾದಾಮಿಯ ಈ ದೇವಾಲಯವು ಶಿಲ್ಪಕಲೆಯ ಸೌಂದರ್ಯಕ್ಕೆ ಒಂದು ಉತ್ತಮ ನಿದರ್ಶನವಾಗಿದೆ. ಇಲ್ಲಿರುವ ಅಲಂಕಾರಿಕವಾದ ಜ್ಯಾಮಿತಿಕ ನಕ್ಷೆಗಳು ಈ ದೇವಾಲಯದ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸಿವೆ. ಪ್ರಸ್ತುತ ಈ ದೇವಾಲಯವನ್ನು ಅಂಗನವಾಡಿ ಶಾಲೆಯನ್ನಾಗಿ ಉಪಯೋಗಿಸುತ್ತಿದ್ದಾರೆ. ಅಲ್ಲದೆ ಅಲ್ಲಿನ ಎಲ್ಲಾ ಶಿಲ್ಪಗಳಿಗೂ ಮತ್ತು ಗೋಡೆಗಳಿಗೆ ಸುಣ್ಣವನ್ನು ಹಚ್ಚಿದ್ದಾರೆ.

ಪಟ್ಟದಕಲ್ಲಿನ ದೇವಾಲಯಗಳು

ಪಟ್ಟದಕಲ್ಲಿನ ಪ್ರಾಚೀನ ಹೆಸರು ಕಿಸುವೊಳಲು. ಅಂದರೆ ಕೆಂಪಾದ ಪಟ್ಟಣ, ಕಿಸು ಎಂದರೆ ಕೆಂಪು, ವೊಳಲು ಎಂದರೆ ಪಟ್ಟಣ. ಇಲ್ಲಿ ಬಾದಾಮಿ ಚಾಲುಕ್ಯ ದೊರೆಗಳ ಪಟ್ಟಾಭಿಷೇಕ

---

೫೩. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೩೫

೫೪. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩

೫೫. ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ವಿಜಯ, ಶ್ರೀ. ಸಿ. ಆರ್. ಕೃಷ್ಣರಾವ್ (ಸಂ.) : ಕರ್ನಾಟಕ ಕಲಾದರ್ಶನ, ಪುಟ – ೩೨೫



ನಡೆಯುತ್ತಿದ್ದರಿಂದ ಈ ಊರಿಗೆ ಪಟ್ಟದ ಕಿಸುವೊಳಲ್ ಎಂದು ಹೆಸರು ಪ್ರಾಪ್ತವಾಯಿತು.[೫೬] ಕ್ರಮೇಣ ಪಟ್ಟದಕಲ್ಲು ಎಂದಾಯಿತು. ಪಟ್ಟದಕಲ್ಲು ಭಾರತೀಯ ವಾಸ್ತುಶಿಲ್ಪದ ತೂಗುತೊಟ್ಟಿಲು ಎನ್ನಲು ದೇವಾಲಯನಿರ್ಮಾಣದಲ್ಲಿ ಇಲ್ಲಿನ ಪ್ರಯೋಗಗಳು ಮತ್ತು ಅದರ ಫಲವಾಗಿ ಉಳಿದಿರುವ ದೇವಾಲಯಗಳು ಸಾಕ್ಷಿಗಳಾಗಿವೆ. ಕೇವಲ ಗರ್ಭಗೃಹ, ಅಂತರಾಳ ಅಥವಾ ಅರ್ಧಮಂಟಪ ಅಥವಾ ಸುಕನಾಸಿಯು ಸಹಿತ ಸಾಧಾರ ಗರ್ಭಗೃಹ, ಅದಕ್ಕೆ ಹೊಂದಿಕೊಂಡಂತಿರುವ ಸಭಾಮಂಟಪ ಅಥವಾ ನವರಂಗ, ಮುಚ್ಚಿದ ಅಥವಾ ತೆರೆದ ಮುಖಮಂಟಪದ ಕಂಬಗಳು, ಬೋದಿಗೆಗಳು, ಅವುಗಳ ಮೇಲಿನ ಅಲಂಕರಣ, ಮಿಥುನ ಶಿಲ್ಪಗಳು, ಮಿಶ್ರ ಮಾದರಿಯ ಶಿಖರಗಳು ದೇವಾಲಯ ನಿರ್ಮಾಣ ಪ್ರಕ್ರಿಯೆಯಲ್ಲಿನ ಸಾಧನೆಯನ್ನು ಸ್ಪಷ್ಟಪಡಿಸುತ್ತವೆ. ಆದ್ದರಿಂದಲೇ ಪಟ್ಟದಕಲ್ಲನ್ನು ವಾಸ್ತುಶಿಲ್ಪದ ಪ್ರಯೋಗ ಕೇಂದ್ರ ಎಂದು ಕರೆಯುತ್ತಾರೆ.[೫೭]

ಬಾದಾಮಿಯ ಚಾಲುಕ್ಯರ ಒಂದು ಪ್ರಮುಖ ನಗರವಾಗಿತ್ತು. ಇಲ್ಲಿ ಅಂದಿನ ರಾಜರು ಪಟ್ಟಕ್ಕೆ ಬಂದಾಗ ಪಟ್ಟಾಭಿಷೇಕ ನಡೆಯುತ್ತಿದ್ದು ಇದು ಮೊದಲು ಪಟ್ಟದ ಕಿಸುವೊಳಲ್ ಎಂದಾಗಿದ್ದು ನಂತರ ಪಟ್ಟದಕಲ್ಲು ಎಂಬ ಹೆಸರಿನಿಂದ ಪ್ರಖ್ಯಾತವಾಯಿತು. ಬಾದಾಮಿಯ ಚಾಲುಕ್ಯರ ಶಿಲ್ಪಕಲೆಯ ಸೌಂದರ್ಯವನ್ನು ಸವಿಯಲು ಪಟ್ಟದಕಲ್ಲು ಅತ್ಯಂತ ಪ್ರಶಸ್ತವಾದ ಜಾಗ. ಅವರ ವಿವಿಧ ಪ್ರಯೋಗಗಳು ವಿವಿಧ ಶೈಲಿಯ ವಿನ್ಯಾಸದ ದೇವಾಲಯಗಳು ಅಪೂರ್ವ ಶಿಲ್ಪಗಳು ಇಲ್ಲಿ ಮೈದಳೆದವು.

ಸುಮಾರು ಎರಡು ಶತಮಾನಗಳ ಕಾಲ ಚಾಲುಕ್ಯ ಅರಸರು ಶಿಲ್ಪಕಲೆಗೆ ಮತ್ತು ವಾಸ್ತು ಶಿಲ್ಪಗಳಿಗೆ ನೀಡಿದ ಪ್ರಾತಿನಿಧ್ಯವನ್ನು ಇಲ್ಲಿ ನಾವು ಗಮನಿಸಬಹುದು. ಇಲ್ಲಿಯ ಕೆಲ ಪ್ರಮುಖ ದೇವಾಲಯಗಳೆಂದರೆ ಗಳಗನಾಥ, ವಿರೂಪಾಕ್ಷ, ಮಲ್ಲಿಕಾರ್ಜುನ ಹಾಗು ಪಾಪನಾಥ ಮತ್ತು ಸಂಗಮೇಶ್ವರ ದೇವಾಲಯಗಳನ್ನು ಹೆಸರಿಸಬಹುದು. ಇತಿಹಾಸ ಅಧ್ಯಯನದಲ್ಲಿ ಪಟ್ಟದಕಲ್ಲಿಗೆ ವಿಶೇಷ ಸ್ಥಾನದಲ್ಲಿರುವುದನ್ನು ಕಾಣಬಹುದು. ಕಾರಣ ಇಲ್ಲಿ ಕಂಡು ಬರುವ ಭಾರತದ ಎರಡು ಪ್ರಮುಖ ವಾಸ್ತು ಪ್ರಕಾರಗಳು. ಒಂದೇ ಕಡೆ ದ್ರಾವಿಡ ಮತ್ತು ನಾಗರ ಶೈಲಿಯ ಎರಡು ವಾಸ್ತು ಪ್ರಕಾರಗಳು ಪಟ್ಟದಕಲ್ಲಿನಲ್ಲಿ ಕಂಡುಬರುತ್ತವೆ.

ಇಲ್ಲಿನ ಕೆಲ ದೇವಾಲಯಗಳು ೬-೭ ನೇ ಶತಮಾನದಲ್ಲಿ ರಚನೆಯಾದರೆ ಇನ್ನೂ ಕೆಲವು ಎಂಟನೆ ಶತಮಾನದಲ್ಲಿ ರಚನೆಗಳಾಗಿವೆ. ಆದರೆ ೮ ನೇ ಶತಮಾನದಲ್ಲಿ ಇಲ್ಲಿನ ವಾಸ್ತು ಮತ್ತು ಶಿಲ್ಪಕಲೆ ಅತ್ಯಂತ ಉನ್ನತ ಮಟ್ಟಕ್ಕೇರಿತು. ಇದಕ್ಕೆ ಕಾರಣ ಚಾಲುಕ್ಯ ಅರಸರಾದ ವಿಜಯಾದಿತ್ಯ ಮತ್ತು ೨ನೇ ವಿಕ್ರಮಾದಿತ್ಯರು ಇಲ್ಲಿನ ವಾಸ್ತುಶಿಲ್ಪಗಳಿಗೆ ಕೊಟ್ಟ ಮಹತ್ವ

೫೬. ಡಾ. ಎಂ. ಜೆ. ಮಂಜುನಾಥ : ಕರ್ನಾಟಕ ಸಾಂಸ್ಕೃತಿಕ ಇತಿಹಾಸ, ಪುಟ – ೧೩೦

೫೭. ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ವಿಜಯ, ಶ್ರೀ. ಸಿ. ಆರ್. ಕೃಷ್ಣರಾವ್ (ಸಂ.) : ಕರ್ನಾಟಕ ಕಲಾದರ್ಶನ, ಪುಟ – ೩೩೫

ಆದುದರಿಂದ ಈ ಕಾಲವನ್ನು ಚಾಲುಕ್ಯ ಕರ್ನಾಟಕ ವಾಸ್ತುಶಿಲ್ಪಗಳ ಸುವರ್ಣಯುಗವೆಂದೇ ಕರೆಯಲಾಗಿದೆ.

ಗಳಗನಾಥ ದೇವಾಲಯ

ಈ ದೇವಾಲಯದ ವಾಸ್ತುಶಿಲ್ಪವು ರೇಖಾನಾಗರಶೈಲಿಯಲ್ಲಿದೆ. ಅದ್ಭುತವಾದ ಬಹಳಷ್ಟು ಶಿಲ್ಪಗಳನ್ನು ಹೊಂದಿರುವ ಈ ದೇವಾಲಯ ಶಿಲ್ಪಗಳ ಸಂಯೋಜನೆಯಿಂದಾಗಿ ಸ್ವತಃ ಒಂದು ಶಿಲ್ಪದಂತೆ ಭಾಸವಾಗುತ್ತದೆ. ಸಭಾಮಂಟಪದಲ್ಲಿ ಮುಖ ಮಂಟಪಗಳು ನಶಿಸಿದ್ದು ದಕ್ಷಿಣದ ಅರ್ಧಮಂಟಪದಲ್ಲಿಯ ಅಂಧಕಾಸುರ ಶಿವನ ಶಿಲ್ಪವು ಒಂದು ಅಪೂರ್ವ ಕಲಾಕೃತಿ. ಅದರ ಪಕ್ಕದ ಜಾಲಂಧ್ರಗಳು, ಅದರ ಹತ್ತಿರದ ಸಿಂಹಶಿಲ್ಪಗಳು ದೇವಾಲಯದ ಮೂಲ ಸ್ವರೂಪದಲ್ಲಿಯ ಕಲೆಗಳನ್ನು ಗ್ರಹಿಸಲು ನೆರವಾಗುತ್ತವೆ.[೫೮]

ವಿರೂಪಾಕ್ಷ ದೇವಾಲಯ

ಸರ್ವಸಿದ್ಧಿ ಆಚಾರಿ ಎಂಬ ಶಿಲ್ಪಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವನ್ನು ರೂಪಿಸಿದನು.[೫೯] ಚಾಲುಕ್ಯರ ರಚನೆಗಳಲ್ಲೇ ಅತ್ಯಂತ ಉತ್ಕೃಷ್ಟವಾದ ಒಂದು ದೇವಾಲಯ. ಚಾಲುಕ್ಯರ ಅರಸ ಇಮ್ಮಡಿ ವಿಕ್ರಮಾದಿತ್ಯನು ಪಲ್ಲವರನ್ನು ಮೂರು ಬಾರಿ ಯುದ್ಧದಲ್ಲಿ ಸೋಲಿಸಿ ಕಂಚಿಯನ್ನು ತನ್ನ ಅರಸೊತ್ತಿಗೆಗೆ ಸೇರಿಸಿಕೊಂಡದ್ದರ ನೆನಪಿಗಾಗಿ ಆತನ ಪಟ್ಟಧರಿಸಿ ಲೋಕ ಮಹಾದೇವಿಯು ಈ ದೇವಾಲಯವನ್ನು ನಿರ್ಮಿಸಿದಳೆಂದು ಇಲ್ಲಿಯ ಶಾಸನವು ಹೇಳುತ್ತದೆ.

ವಿರೂಪಾಕ್ಷ ದೇವಾಲಯವು ವಾಸ್ತುಶಿಲ್ಪಗಳ ದೃಷ್ಟಿಯಿಂದ ಒಂದು ಮಹತ್ವದ ದೇಗುಲವಾಗಿದೆ. ಹಿಂದಿನ ದೇವಾಲಯಗಳಿಗಿಂತ ಇಲ್ಲಿನ ಶಿಲ್ಪಗಳು ಮತ್ತು ಕುಸುರಿ ಕಲೆಗಾರಿಕೆ ಹೆಚ್ಚಾಗಿದೆ. ಜಾಲಂಧ್ರಗಳ ರಚನೆ ಮತ್ತು ದೇವಾಲಯದ ಒಳಗೆ ಗಾಳಿ. ಬೆಳಕುಗಳ ಸಲುವಾಗಿ ರಚನೆಯಾದರೂ ಅವುಗಳಿಗೆ ಅಲಂಕಾರಿಕ ಸೌಂದರ್ಯವನ್ನು ನೀಡುವಲ್ಲಿ ಇವು ಬಹು ಮಟ್ಟಿಗೆ ಸಫಲವಾಗಿವೆ. ದ್ರಾವಿಡ ಶೈಲಿಯ ದೇವಾಲಯಗಳ ವೈಶಿಷ್ಟ್ಯವಾಗಿ ಮುಂದುವರಿಯಿತು.[೬೦] ಈ ದೇವಾಲಯದಲ್ಲಿ ಬೃಹದಾಕಾರದ ವಸ್ತುಗಳಲ್ಲಿ ಸಹಜವಾಗಿ ಉಂಟಾಗುವ ಬೋಳುತನವನ್ನು ಹೋಗಲಾಡಿಸಲು ಜಾಲಂಧ್ರಗಳು, ಸ್ತಂಭಗಳನ್ನು ಬಳಸಿದ್ದು ಭವ್ಯತೆಯನ್ನು ತರುವ ಪ್ರಯತ್ನದಲ್ಲಿ ಈ ವಾಸ್ತು ಶಿಲ್ಪವು ಯಶಸ್ವಿಯಾಗಿದೆ. ದೇವಾಲಯದ ಹೊರಗೋಡೆಯ ಮೇಲೆ ಕೆಳಭಾಗದಲ್ಲಿ ದೊಡ್ಡ ಅಲಂಕಾರಿಕ ವಿನ್ಯಾಸದ ಪಟ್ಟಿಕೆಗಳಿವೆ. ಮೇಲುಭಾಗದಲ್ಲಿ ಚಿಕ್ಕ ಚಿಕ್ಕ ಅರ್ಧ ಕಂಬಗಳು, ನಾಸಿಗಳು ಮೊದಲಾದ ಅಲಂಕಾರಗಳಿವೆ. ಇದಲ್ಲದೆ ದೇವಾಲಯದ ಹೊರಗೋಡೆಗಳಲ್ಲಿ

---

೫೮. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೪೨

೫೯. ಡಾ. ಎಂ. ಚಿದಾನಂದ ಮೂರ್ತಿ : ಕರ್ನಾಟಕ ಸಂಸ್ಕೃತಿ, ಪುಟ – ೧೫

೬೦. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೪೧

ಸುತ್ತಲು ಶಿಲ್ಪಕಲಾಕೃತಿಗಳಿವೆ. ನಂದಿಮಂಟಪವು ಪ್ರತ್ಯೇಕವಾಗಿದ್ದು ಬಗೆ ಬಗೆಯ ಶಿಲ್ಪಗಳಿಂದ ತುಂಬಿಕೊಂಡಿದೆ. ಗರ್ಭಗೃಹದ ದ್ವಾರದ ಮೇಲಿನ ಮಕರತೋರಣ, ಮುಖಮಂಟಪದಲ್ಲಿ ದ್ವಾರಪಾಲಕರು ಮೇಲುಗಡೆ ಸೂರ್ಯ ಮುಂತಾದ ಶಿಲ್ಪಗಳಿವೆ. ಇದಲ್ಲದೆ ವಿವಿಧ ಪುಷ್ಪವಿನ್ಯಾಸಗಳು ಮತ್ತು ಉಬ್ಬು ಶಿಲ್ಪಗಳು ಕಂಬಗಳಿಗೆ ಹೆಚ್ಚಿನ ಸೌಂದರ್ಯವನ್ನು ತಂದುಕೊಟ್ಟಿವೆ. ಅಲ್ಲಲ್ಲಿ ಮಿಥುನ ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದು. ದೇವಾಲಯದ ಹೊರಗೋಡೆಗಳಲ್ಲಿ ಲಿಂಗೋದ್ಭವ ಶಿವ, ಅಪಸ್ಮಾರನ ಮೇಲೆ ನಿಂತಿರುವ ಶಿವ, ನರಸಿಂಹ, ರಾವಣ ಕೈಲಾಸ ಪರ್ವತವನ್ನು ಎತ್ತುತ್ತಿರುವುದು, ಜಟಾಯು ರಾವಣ ಕಾಳಗ, ನಂದಿವಾಹನ ಶಿವ, ಅರ್ಧನಾರೀಶ್ವರ, ತ್ರಿವಿಕ್ರಮ ವಿಷ್ಣು, ಗಜೇಂದ್ರ ಮೋಕ್ಷ, ಮುಂತಾದ ಹಲವಾರು ಶಿಲ್ಪಗಳಿಂದ ಶ್ರೀಮಂತಗೊಂಡಿದೆ.

ವಾಸ್ತುಶಿಲ್ಪ

ವಿರೂಪಾಕ್ಷ ದೇವಾಲಯದ ಇನ್ನೊಂದು ವಿಶೇಷತೆ ಎಂದರೆ ಮೂರ್ತಿ ಶಿಲ್ಪ ಮತ್ತು ವಾಸ್ತುಶಿಲ್ಪಗಳೆರಡಕ್ಕೆ ಇಲ್ಲಿ ಪ್ರಾಧಾನ್ಯವನ್ನು ನೀಡಲಾಗಿದೆ. ದೇವಾಲಯದ ಸುತ್ತಲೂ ನಿರ್ಮಿಸಲಾಗಿರುವ ಎತ್ತರವಾದ ಗೋಡೆಯು ಪೂರ್ವ ಪಶ್ಚಿಮವಾಗಿ ಸುಮಾರು ೨೨೪ ಅಡಿಗಳಷ್ಟು ಉದ್ದವಾಗಿದ್ದು ಉತ್ತರ ದಕ್ಷಿಣವಾಗಿ ಸುಮಾರು ೧೦೫ ಅಡಿಗಳಷ್ಟು ಅಗಲವಾಗಿದೆ. ಪೂರ್ವ ಮತ್ತು ಪಶ್ಚಿಮದ ಎರಡೂ ಕಡೆಗಳಿಂದ ಮಹಾದ್ವಾರಗಳನ್ನು ರಚಿಸಲಾಗಿದೆ. ಪೂರ್ವದ ಭಾಗವು ಮಲಪ್ರಭಾ ನದಿಗೆ ಎದುರಾಗಿದ್ದು ಪ್ರವೇಶಿಸುತ್ತಿದ್ದಂತೆಯೆ ಎದುರಿನ ನಂದಿ ಮಂಟಪದಲ್ಲಿ ಬೃಹದಾಕಾರದ ನಂದಿವಿಗ್ರಹವಿದೆ.

ಮುಂದೆ ದೇವಾಲಯದ ಮುಖಮಂಟಪ, ನಂತರ ವಿಸ್ತಾರವಾದ ಮಹಾಮಂಟಪವಿದ್ದು ಅದಕ್ಕೆ ಉತ್ತರ ಮತ್ತು ದಕ್ಷಿಣಗಳಲ್ಲಿ ಮುಖಗರ್ಭಗೃಹಗಳಿವೆ. ಪೂರ್ವಾಭಿಮುಖವಾಗಿ ಮುಖ್ಯ ಗರ್ಭಗೃಹವಿದ್ದು ಅದಕ್ಕೆ ಸ್ವಲ್ಪ ಮುಂದೆ ಎರಡೂ ಕಡೆ ಉತ್ತರ ಮತ್ತು ದಕ್ಷಿಣದಿಕ್ಕುಗಳಲ್ಲಿ ಎರಡು ಚಿಕ್ಕ ಗರ್ಭಗೃಹಗಳಿವೆ. ಮುಖ್ಯ ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರ ಮತ್ತು ಒಳಭಾಗದಲ್ಲಿ ಸುತ್ತಲೂ ಪ್ರದಕ್ಷಿಣಾ ಪಥವಿದ್ದು ಒಳಭಾಗದಲ್ಲಿ ೩ ಗರ್ಭಗೃಹಗಳಿವೆ. ಮುಖ್ಯ ಗರ್ಭಗೃಹವು ಪೂರ್ವದಿಕ್ಕಿಗೆ ಮುಖಮಾಡಿದ್ದು ಸುಂದರವಾದ ಶಿವಲಿಂಗವು ಇಲ್ಲಿ ಪ್ರತಿಷ್ಠಾಪಿತವಾಗಿದೆ. ೧೨x೧೨ ಅಡಿಯ ಚೌಕಾಕಾರದ ಗರ್ಭಗೃಹವಿದ್ದು, ಅದರ ಮುಂದೆ ಸುಖನಾಸಿ ಇದೆ. ಇದರ ಸುತ್ತ ಸುಮಾರು ೪ ಅಡಿಗಳಷ್ಟು ಅಗಲವಾದ ಪ್ರದಕ್ಷಿಣಾ ಪಥವಿದೆ. ಮುಖ್ಯ ಗರ್ಭಗುಡಿಯ ಮುಂದೆ ಎಡಬಲಗಳಲ್ಲಿ ಇನ್ನೆರಡು ಸಣ್ಣ ಗರ್ಭಗುಡಿಗಳಿದ್ದು ಎಡಭಾಗದ ಗರ್ಭಗುಡಿಯಲ್ಲಿ ಮಹಿಷಾಸುರ ಮರ್ದಿನಿಯ ಸುಂದರ ವಿಗ್ರಹವಿದೆ. ಮೇಲೆ ದ್ರಾವಿಡ ಶೈಲಿಯ ಗೋಪುರವಿದ್ದು ಒಟ್ಟಿನಲ್ಲಿ ವಾಸ್ತು ಮತ್ತು ಶಿಲ್ಪಗಳ ಸೊಬಗನ್ನು ಇಲ್ಲಿ ಸವಿಯಲು ಸುಂದರ ಅವಕಾಶವಿದೆ.

ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು

ಅಕ್ಕ ಲೋಕಮಹಾದೇವಿ ಕಟ್ಟಿಸಿದ ಗುಡಿ ವಿರೂಪಾಕ್ಷನದು, ತಂಗಿ ತ್ರೈಲೋಕ್ಯ ಮಹಾದೇವಿ ಕಟ್ಟಿಸಿದ ಗುಡಿ ಮಲ್ಲಿಕಾರ್ಜುನನದು. ಈ ಅಕ್ಕ ತಂಗಿಯರಿಂದ ನಿರ್ಮಿತವಾದ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ವಾಸ್ತು ಪ್ರಪಂಚಕ್ಕೆ ಉತ್ತಮ ಕೊಡುಗೆಗಳಾಗಿದ್ದು, ಈ ದೇವಾಲಯಗಳಲ್ಲಿ ಅನೇಕ ಸಾಮ್ಯಗಳಿವೆ. ಎರಡೂ ಗುಡಿಗಳ ತಲವಿನ್ಯಾಸ ಒಂದೇ ಬಗೆಯದು. ಅಳತೆಯಲ್ಲಿ ತಂಗಿ ಕಟ್ಟಿಸಿದ ಈ ಗುಡಿಯು ಚಿಕ್ಕದು.[೬೧] ಇಲ್ಲಿ ನಾವು ನೋಡುವ ಶಿಲ್ಪಗಳು, ವಿನ್ಯಾಸಗಳು ಪುನರಾವರ್ತನೆಯಾಗಿವೆ ಎನ್ನಬಹುದು. ಸಮುದ್ರ ಮಂಥನ, ರಾಮಾಯಣ, ಮಹಾಭಾರತ ಮುಂತಾದ ಕಥೆಗಳನ್ನು ಇಲ್ಲಿ ಕೆತ್ತಲಾಗಿದೆ. ಬಾಗಿಲುಗಳು, ಕಂಬಗಳು, ಹಾಗೂ ಹೊರಗೋಡೆಗಳಲ್ಲಿ ಹಲವಾರು ಸುಂದರ ಶಿಲ್ಪಗಳಿದ್ದು ವಿರೂಪಾಕ್ಷ ದೇವಾಲಯದ ಶೈಲಿಯನ್ನೇ ಹೋಲುತ್ತವೆ.

ಪಾಪನಾಥ ದೇವಾಲಯ, ಪಟ್ಟದಕಲ್ಲು

ಪಾಪನಾಥ ದೇವಾಲಯ ಕಾಲದ ನಿರ್ಣಯದ ಬಗ್ಗೆ ವಿದ್ವಾಂಸರಲ್ಲಿ ಸಹಮತವಿಲ್ಲ. ಕ್ರಿ.ಶ. ೬೭೦ರಿಂದ ೭೪೦ರ ತನಕ ಈ ಕಾಲವನ್ನು ಸೂಚಿಸಲಾಗಿದೆ. ಇಲ್ಲಿಯ ಶಾಸನಗಳಲ್ಲಿ ಸರ್ವಸಿದ್ಧಿ ಆಚಾರಿ ಬಲದೇವ ಚೆಙ್ಯಮ್ಮ ಎಂಬ ಶಿಲ್ಪಿಗಳ ಹೆಸರುಗಳನ್ನು ಹೇಳಲಾಗಿದೆ.[೬೨] ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮಲಪ್ರಭಾ ನದಿಯ ದಂಡೆಯ ಮೇಲಿದ್ದು ಎತ್ತರವಾದ ಪೀಠದ ಮೇಲೆ ಈ ದೇವಾಲಯವನ್ನು ನಿರ್ಮಿಸಲಾಗಿದೆ.

ಕಸೆನ್ಸ್ ಮತ್ತು ಪರ್ಸಿ ಬ್ರಾನರ ಪ್ರಕಾರ ಈ ದೇವಾಲಯವು ಮೊದಲಿಗೆ ವಿಷ್ಣು ಮತ್ತು ಸೂರ್ಯನಿಗೆ ಸಮರ್ಪಿತವಾಗಿದ್ದು, ಅನಂತರ ಶಿವಾಲಯವಾಗಿ ಪರಿವರ್ತಿತವಾಯಿತು. ಈ ದೇವಾಲಯದ ಮೂಲ ಯೋಜನೆ ಮತ್ತು ಮುಂಭಾಗದ ರಚನೆಗಳಲ್ಲಿ ಹಲವಾರು ಪ್ರಮಾಣರಹಿತ ಅನುಚಿತ ಅಂಶಗಳೇ ಸೇರಿವೆಯೆಂದು ಹೇಳುವ ಬ್ರಾನರು, ವಾಸ್ತುಶಿಲ್ಪಗಳ ಅನಾಯಭವವೇ ಇದಕ್ಕೆ ಕಾರಣವೆಂದು ಅಭಿಪ್ರಾಯಪಡುತ್ತಾರೆ. ಇದರ ಒಳರಚನೆಯ ದೃಢತೆ ಎಂದರೆ ಗೋಡೆಗಳ ಗಾತ್ರ ಮತ್ತು ಕಂಬಗಳ ಆಕಾರವನ್ನು ಗಮನಿಸಿದರೆ, ಇದರ ಮೇಲೆ ಗುಹಾಶಿಲ್ಪದ ಪ್ರಭಾವ ಉಂಟಾಗಿರಬೇಕೆಂದೂ ಅವರ ಅಭಿಪ್ರಾಯ, ಇದರ ಗೋಡೆಯೊಂದರ ಮೇಲಿನ ಒಂದು ಶಾಸನವು 'ಚತ್ತರೇವಡಿ ಓವಜ್ಜ' ಎಂಬ ಶಿಲ್ಪಿಯನ್ನು ಹೆಸರಿಸಿ ಅವನು ಈ ದೇವಾಲಯದ ಕನಿಷ್ಟ ಒಂದು ಭಾಗವನ್ನಾದರೂ ನಿರ್ಮಿಸಿದನೆಂಬ ಅಂಶವನ್ನು ತಿಳಿಸುತ್ತದೆ.[೬೩] ಈ ದೇವಾಲಯದ ಹೊರಗೋಡೆಗಳಲ್ಲಿ ಸಾಕಷ್ಟು ಪೌರಾಣಿಕ ಉಬ್ಬುಶಿಲ್ಪಗಳಿವೆ. ಇಲ್ಲಿನ ದ್ವಾರಪಾಲಕರು, ನಟರಾಜ

---

೬೧. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೫೯

೬೨. ಡಾ. ಜಿ. ಜ್ಞಾನಾನಂದ : ಶಿಲ್ಪಾದರ್ಶ, ಸಂ.೨, ಪುಟ – ೧೪೯

೬೩. ವಿಶ್ವನಾಥ ವಂಶಾಕೃತಮಠ (ಪ್ರಸಂ.) : ಸ್ವಸ್ತಿ–ದತ್ತಿ ಉಪನ್ಯಾಸ ಮಾಲಿಕೆ, ಪುಟ – ೩೯



ಮುಂತಾದ ಶಿಲ್ಪಗಳನ್ನು ಕೆತ್ತಲಾಗಿದೆ. ಇಲ್ಲಿನ ದೇವಕೊಷ್ಠಗಳು ಜಾಲಂಧ್ರಗಳಲ್ಲಿ ಉತ್ತಮ ರೇಖಾವಿನ್ಯಾಸಗಳನ್ನು ನೋಡಬಹುದು. ಭಿತ್ತಿನಲ್ಲಿರುವ ನಟರಾಜನ ಶಿಲ್ಪವು ಸುಂದರವಾಗಿದ್ದು ಸುಖನಾಸಿಯು ಸಾಕಷ್ಟು ವಿಸ್ತಾರವಾಗಿದ್ದು ಪ್ರದಕ್ಷಿಣಾಪಥ, ರಂಗ ಮಂಟಪ ಮತ್ತು ಮುಖ ಮಂಟಪಗಳಿವೆ. ಗರ್ಭಗುಡಿಯ ಚೌಕಟ್ಟಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಗಮನಿಸಬಹುದು.

ಸಂಗಮೇಶ್ವರ ದೇವಾಲಯ


ಪಟ್ಟದಕಲ್ಲಿನ ಈ ದೇವಾಲಯವು ಮೊದಲು ವಿಜಯೇಶ್ವರ ಎಂದಾಗಿದ್ದು ನಂತರ ಸಂಗಮೇಶ್ವರ ಎಂದು ಬದಲಾಗಿದೆ. ಚಾಲುಕ್ಯ ರಾಜ ವಿಜಯಾದಿತ್ಯನು ಈ ದೇವಾಲಯದ ನಿರ್ಮಾತೃವಾಗಿದ್ದುದರಿಂದ ಇದು ವಿಜಯೇಶ್ವರ ದೇವಾಲಯವಾಗಿದೆ. ವಿಜಯಾದಿತ್ಯನು ಕ್ರಿ.ಶ. ೬೯೬ ರಿಂದ ೭೩೩ರಲ್ಲಿ ಪ್ರಾರಂಭಿಸಿದ ಈ ದೇಗುಲವು ಕೆಲವು ಅಂಶಗಳಲ್ಲಿ ಅಪೂರ್ಣವಾಗಿದೆ.[೭೪] ಇಲ್ಲಿ ಗರ್ಭಗೃಹದ ಮುಂದೆ ಉತ್ತರ ಮತ್ತು ದಕ್ಷಿಣಕ್ಕೆ ಮುಖ ಮಾಡಿರುವ ಎರಡು ಚಿಕ್ಕ ಗರ್ಭಗೃಹಗಳಿವೆ. ಬಹಶಃ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳಿಗೆ ಇದೇ ಮೂಲವಾಗಿರಬೇಕು. ಇಲ್ಲಿ ಮುಖ್ಯ ಗರ್ಭಗೃಹಕ್ಕೆ ಸುಖನಾಸಿ ಇಲ್ಲ ಮಾತ್ರವಲ್ಲ, ಗರ್ಭಗೃಹದ ಚೌಕಟ್ಟಿನ ಮೇಲೆ ಯಾವ ಶಿಲ್ಪವೂ ಇಲ್ಲ. ಆದರೆ ದ್ವಾರಪಾಲಕಶಿಲ್ಪಗಳಿದ್ದು ಪ್ರದಕ್ಷಿಣಾ ಪಥವಿದೆ. ಜಾಲಂಧ್ರಗಳು ಹಾಗೂ ಗರ್ಭಗೃಹದ ಮುಂಭಾಗಕ್ಕೆ ನವರಂಗವಿದ್ದು ಪೂರ್ವ ಪಶ್ಚಿಮ ಸಾಲಿನಲ್ಲಿ ಮೂರು ಸಾಲು ಕಂಬಗಳಿಂದ ಕೂಡಿದೆ.

ಮಂಟಪದ ಮೇಲ್ಛಾವಣಿಯ ಒಳಭಾಗದಲ್ಲಿ ಕಮಲದಳಗಳ ವಿನ್ಯಾಸವಿದೆ. ಗುಡಿಯ ಹೊರಭಾಗದ ಗೋಡೆಗಳಲ್ಲಿ ಶಿವ, ವಿಷ್ಣು, ವರಾಹ, ಗಜಾಸುರವಧೆ ಮೊದಲಾದ ಹಲವಾರು ಶಿಲ್ಪಗಳಿವೆ. ದ್ರಾವಿಡ ಶೈಲಿಯ ಶಿಖರವನ್ನು ಹೊಂದಿರುವ ಈ ದೇವಾಲಯ ವಿರೂಪಾಕ್ಷ ದೇವಾಲಯದಷ್ಟು ಕಲಾತ್ಮಕವಾಗಿಲ್ಲವಾದರೂ ಅತ್ಯಂತ ಮಹತ್ವದ ದೇವಾಲಯಗಳಲ್ಲಿ ಒಂದಾಗಿದೆ. ಬಾದಾಮಿ ಚಾಲುಕ್ಯರು ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ಮಾತ್ರವಲ್ಲದೆ ಕರ್ನಾಟಕದ ಗಡಿಭಾಗಗಳು ಹಾಗೂ ಆಂಧ್ರದಲ್ಲಿಯೂ ಹಲವಾರು ವಾಸ್ತುಶಿಲ್ಪಗಳನ್ನು ನಿರ್ಮಿಸಿದ್ದಾರೆ. ಇಂತಹವುಗಳಲ್ಲಿ ಮಹಾಕೂಟದಲ್ಲಿರುವ ಮಹಾಕೂಟೇಶ್ವರ ದೇವಾಲಯ, ಆಲಂಪುರದ ನವಬ್ರಹ್ಮ ದೇವಾಲಯ, ಮುಂತಾದವುಗಳನ್ನು ಹೇಳಬಹುದು. ಇಲ್ಲಿ ಅಧ್ಯಯನಕ್ಕೆ ಸ್ಥಳಾವಕಾಶ ಮತ್ತು ವಿಸ್ತಾರದ ಭಯದಿಂದ ಈ ಮೂರು ಪ್ರದೇಶಗಳನ್ನಷ್ಟೇ ಆಯ್ದುಕೊಳ್ಳಲಾಯಿತು. ಇದರಿಂದ ಅಧ್ಯಯನದ ವಿಚಾರ ಹೆಚ್ಚು ಸಮಗ್ರವಾಗುತ್ತದೆ.

ಮಹಾಕೂಟೇಶ್ವರ ದೇವಾಲಯ, ಮಹಾಕೂಟ

ಬಾದಾಮಿಯಿಂದ ೧೨ ಕೀ.ಮಿ ದೂರದಲ್ಲಿ ೫ನೇ ಶತಮಾನದಲ್ಲಿ ದ್ರಾವಿಡವಾಸ್ತುಶೈಲಿಯಲ್ಲಿ

೭೪. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೩೯



ನಿರ್ಮಿತವಾಗಿರುವ ಮಹಾಕೂಟೇಶ್ವರ ದೇವಾಲಯಸಂಕೀರ್ಣದಲ್ಲಿ ಹತ್ತಾರು ಚಿಕ್ಕ ದೇವಾಲಯಗಳಿವೆ. ನಂದಿಕೇಶ್ವರ ದೇವಾಲಯದ ಮೂಲ ಹೆಸರು ಮುಕುಟೇಶ್ವರ, ಚಾಲುಕ್ಯರ ಆರಾಧ್ಯದೈವ ಮಹಾಕೂಟೇಶ್ವರ ಶಿವಲಿಂಗ ಸುಂದರವಾಗಿದೆ. ಗುಡಿಯ ಮಂಟಪದಲ್ಲಿ ಕೆಲವು ಶಾಸನಗಳಿವೆ. ಚಾಲುಕ್ಯ ಅರಸರು ಧರ್ಮ ಜಯಸ್ತಂಭವನ್ನು ಸ್ಥಾಪಿಸಿದ್ದು ಮತ್ತು ಮಂಗಳೇಶನು ದೇವಾಲಯಕ್ಕೆ ಹತ್ತು ಹಳ್ಳಿಗಳನ್ನು ದಾನವಾಗಿತ್ತ ಉಲ್ಲೇಖ ಶಾಸನಗಳಲ್ಲಿದೆ. ವಿಜಯಾದಿತ್ಯನ ಸೂಳೆಯೊಬ್ಬಳು ಮಹಾಕೂಟೇಶ್ವರನಿಗೆ ರತ್ನಪೀಠ, ಬೆಳ್ಳಿಛತ್ರಿ, ಭೂಮಿದಾನ ನೀಡಿದ ಉಲ್ಲೇಖಗಳಿವೆ. ೫ನೇ ಶತಮಾನದಿಂದಲೂ ಭಕ್ತಿಯ ಕೇಂದ್ರವಾಗಿರುವ ಮಹಾಕೂಟಕ್ಕೆ "ದಕ್ಷಿಣ ಕಾಶಿ" ಎಂಬ ಹೆಸರೂ ಇದೆ.[೬೫] ಇದರ ಆವರಣದಲ್ಲಿ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಮೆಟ್ಟಿಲುಗಳನ್ನು ಹೊಂದಿದ ಚಿಕ್ಕ ಪುಷ್ಕರಣಿಯಿದೆ. ಅಲ್ಲದೆ ಇಲ್ಲಿ ಕೆಲವು ಧರ್ಮದ ಶಿಲ್ಪಗಳನ್ನು ಸಹ ಕಾಣಬಹುದು.

ಮಹಾಕೂಟೇಶ್ವರ ದೇವಾಲಯದ ಮುಂದೆ ಚಾಲುಕ್ಯರಾಜ ಮಂಗಲೀಶನ ಶಾಸನವುಳ್ಳ ಅಷ್ಟಕೋನದ ಶಿಲಾಸ್ತಂಭವಿತ್ತು. ಇದು ಪ್ರಸ್ತುತ ಬಿಜಾಪುರದಲ್ಲಿರುವ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿದೆ, ಮಂಗಲೀಶ, ಕಳುಚೂರಿ ಮುಂತಾದವರನ್ನು ಗೆದ್ದು ಯುದ್ಧದಲ್ಲಿ ಸಂಗ್ರಹವಾದ ಐಶ್ವರ್ಯವನ್ನು ಚಕ್ರವರ್ತಿಯಾಗಿದ್ದ ತನ್ನ ಅಣ್ಣ ಕೀರ್ತಿವರ್ಮನ ಮಹಾರಾಣಿ ದುರ್ಬಲದೇವಿಯ ಇಚ್ಛೆಯಂತೆ ಮುಕುಟೇಶ್ವರನಿಗೆ ಕರವರ್ಷ ೫೨೪ರಲ್ಲಿ ಅರ್ಪಿಸಿದನೆಂದು ಶಾಸನದಲ್ಲಿ ಹೇಳಿದೆ. ಆದ್ದರಿಂದ ಈ ದೇವಾಲಯ ೬ನೆಯ ಶತಮಾನದ್ದೆಂದು ತೋರುತ್ತಿದೆ.[೬೬]

ಶಿಲ್ಪಗಳ ವರ್ಗೀಕರಣ

ಮೂರ್ತಿಗಳನ್ನು ಚಲ, ಅಚಲ, ಚಲಾಚಲ ಎಂದೂ ಚಿತ್ರ, ಚಿತ್ರಾರ್ಧ ಮತ್ತು ಚಿತ್ರಾಭಾಸ ಎಂದು ವರ್ಗೀಕರಿಸಲಾಗಿದೆ. ಚಲವರ್ಗಕ್ಕೆ ಸೇರಿದ ಮೂರ್ತಿಗಳನ್ನು ಲೋಹದಿಂದ ನಿರ್ಮಿಸಲಾಗಿರುತ್ತದೆ. ಅಚಲ ವಿಗ್ರಹಗಳು ಶಿಲೆಯಲ್ಲಿ ನಿರ್ಮಿಸಿದ ಮೂಲ ವಿಗ್ರಹಗಳಾಗಿರುತ್ತವೆ.[೬೭] ಚಾಲುಕ್ಯರ ಕಾಲದ ಶಿಲ್ಪಗಳನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಅಲ್ಲಿನ ಶಿಲ್ಪಗಳನ್ನು ವಿಶೇಷವಾಗಿ ದ್ವಿಮಾನ ಹಾಗೂ ತ್ರಿಮಾನದ ದೃಷ್ಟಿಯಿಂದ ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅಲ್ಲಿನ ಶಿಲ್ಪಗಳನ್ನು ಹೀಗೆ ವಿಂಗಡಿಸಬಹುದು.

೧. **ಧಾರ್ಮಿಕ ಶಿಲ್ಪಗಳು** : ವಿವಿದ ಧರ್ಮಗಳಿಗೆ ಸಂಬಂಧಿಸಿದ ದೇವತಾಶಿಲ್ಪಗಳು ದೇವರ ಮೂರ್ತಿಗಳು ಆರಾಧನಾ ಮೂರ್ತಿಗಳು ಕಥಾನಕ ಶಿಲ್ಪಗಳು ಇತ್ಯಾದಿ.

೨. **ಲೌಕಿಕ ಶಿಲ್ಪಗಳು** : ಇವು ಧಾರ್ಮಿಕ ಶಿಲ್ಪಗಳಿಂದ ಹೊರತಾದ ದಂಪತಿಶಿಲ್ಪಗಳು

---

೬೫. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ–ಸಂಸ್ಕೃತಿ, ಪುಟ – ೨೨೦

೬೬. ಪ್ರೊ. ಡಿ. ಕೆ.ರಾಜೇಂದ್ರ (ಪ್ರಸಂ.) : ಕನ್ನಡ ವಿಶ್ವಕೋಶ, ಸಂ.೧೩

೬೭. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೧೧೭



ಮಿಥುನ ಶಿಲ್ಪಗಳು ಜ್ಯಾಮಿತಿ ಪುಷ್ಪವಿನ್ಯಾಸಗಳು ಆನೆ ರಥ ಕುದುರೆ ಇತ್ಯಾದಿಗಳು. ಜನ ಜೀವನವನ್ನು ಸೂಚಿಸುವ ಶಿಲ್ಪಗಳು ಇತ್ಯಾದಿ. ಇಂತಹ ಶಿಲ್ಪಗಳು ಅಂದಿನ ಸಾಮಾಜಿಕ ಜೀವನ ಪದ್ಧತಿಯನ್ನು ಹೆಚ್ಚಾಗಿ ನಿರೂಪಿಸುತ್ತವೆ.

ಧಾರ್ಮಿಕ ಶಿಲ್ಪಗಳು

ಭಾರತೀಯ ಕಲೆಯ ನಿಜವಾದ ಮರ್ಮವೇ ಧರ್ಮವಾಗಿದೆ. ಪ್ರಾಚೀನ ಕಾಲದಿಂದಲೂ ಧರ್ಮದ ಆಧಾರದಲ್ಲಿ ಸಾಮಾಜಿಕ ಜೀವನ ಪದ್ಧತಿ ಬೆಳೆದು ಬಂದಿದ್ದು, ಅದರ ತಳಹದಿಯಲ್ಲಿ ದೈನಂದಿನ ಬದುಕು ನಿರ್ಧಾರಿತವಾಗಿತ್ತು. ಆಯಾ ಕಾಲಮಾನಕ್ಕೆ ಆಯಾ ಧರ್ಮ ಪ್ರಭುತ್ವ ಸ್ಥಾಪಿಸಿದ್ದು ಇದೇ ಆಳರಸರ ಮರ್ಜಿಯನ್ನು ಹೊಂದಿಕೊಂಡಿತ್ತು. ಮುಖ್ಯವಾಗಿ ಅಂದಿನ ಜನರು ಅದರಲ್ಲಿ ತೊಡಗಿ ಭಾರತದಲ್ಲಿ ವೈದಿಕ ಧರ್ಮವು ಮೊದಲು ಇದ್ದುದಾದರೂ ನಂತರದ ದಿನಗಳಲ್ಲಿ ಜೈನ ಧರ್ಮ ಮತ್ತು ಬೌದ್ಧ ಧರ್ಮಗಳು ಹಿಂದೂ ಧರ್ಮದಿಂದ ಅಥವಾ ವೈದಿಕ ಧರ್ಮದ ಕವಲುಗಳಾಗಿ ಜೀವ ತಳೆದು ಸ್ವತಂತ್ರ ಧರ್ಮಿಗಳಾಗಿ ಬೆಳೆದು ಬಂದವು.

ಇದರ ಪರಿಣಾಮವಾಗಿ ಆ ಧರ್ಮಗಳ ಪ್ರಚಾರಕ್ಕಾಗಿ ಶಿಲ್ಪಕಲೆಯು ಒಂದು ಜೀವಂತ ಮಾಧ್ಯಮವಾಗಿ ಧರ್ಮದ ಪ್ರಸರಣೆಗೆ ಕಾರಣವಾದಂತೆ ಶಿಲ್ಪಕಲೆಯ ಬೆಳವಣಿಗೆಗೆ ಧರ್ಮವೂ ಕಾರಣವಾಯಿತು. ಸಾಹಿತ್ಯಕ್ಕಿಂತಲೂ ಶಿಲ್ಪಕಲೆಯು ಹೆಚ್ಚು ಪ್ರಭಾವಶಾಲಿಯಾದುದರಿಂದ ಜನಸಾಮಾನ್ಯರ ಮನ್ನಣೆ ಪಡೆಯಿತು. ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚನೆಯಾದ ಶಿಲ್ಪಗಳಲ್ಲಿ ಮಹಿಷಾಸುರ ಮರ್ದಿನಿ ಶಿಲ್ಪಗಳು ಹೇರಳವಾಗಿವೆ. ಅಲ್ಲದೆ ಸಪ್ತ ಮಾತೃಕೆ ಶಿಲ್ಪಗಳನ್ನು ಇವುಗಳಲ್ಲಿ ಸೇರಿಸಬಹುದು. ಹೀಗೆ ಇವುಗಳನ್ನು ಒಟ್ಟಾಗಿ ದೇವಿ ಶಿಲ್ಪಗಳೆಂದು ಕರೆಯಬಹುದಾಗಿದೆ. ಸಪ್ತಮಾತೃಕೆ ಶಿಲ್ಪಗಳು ಮುಂದಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ. ಚಾಲುಕ್ಯ ಅರಸರು ತಾವು ಸಪ್ತ ಮಾತೃಕೆಯರಿಂದ ಅನುಗ್ರಹಿತರು ಎಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಆದುದರಿಂದ ಐಹೊಳೆಯಲ್ಲಿ ಸಪ್ತ ಮಾತೃಕೆ ಶಿಲ್ಪಗಳು ಹೆಚ್ಚಾಗಿ ಕಂಡುಬಂದಿವೆ.

ಇವಲ್ಲದೆ 'ಲಜ್ಜಾಗೌರಿ' ಎಂಬ ಇನ್ನೊಂದು ವಿಶಿಷ್ಟ ರೀತಿಯ ಶಿಲ್ಪಗಳು ಇಲ್ಲಿ ಅಲ್ಲಲ್ಲಿ ಕಂಡುಬಂದಿವೆ. ಇಂತಹ ಶಿಲ್ಪಗಳನ್ನು ನಾವಿಲ್ಲಿ ನೋಡಬೇಕಾಗುತ್ತದೆ. ಲಜ್ಜಾಗೌರಿಯು ಪಾರ್ವತಿಯ ರೂಪವೆಂದು ನಂಬಲಾಗಿದೆ. ಸ್ತ್ರೀಯು ಅಂಗಾತವಾಗಿ ಮಲಗಿರುವಂತೆ ಯೋನಿಭಾಗವು ಕಾಣುವಂತೆ ಕೆತ್ತಲಾಗಿದೆ. ಈ ಶಿಲ್ಪಗಳ ತಲೆಯ ಬಾಗದಲ್ಲಿ ಕಮಲವನ್ನು ಕೆತ್ತಿರುವುದು ಈ ಶಿಲ್ಪಗಳ ವಿಶೇಷ. ಇವಲ್ಲದೆ ಗಣಪತಿ, ಕಾರ್ತಿಕೇಯ, ನಟರಾಜ ಇತ್ಯಾದಿ ಇನ್ನೂ ಹಲವಾರು ಧಾರ್ಮಿಕ ಮೂರ್ತಿಗಳು ಅಲ್ಲಲ್ಲಿ ಕಂಡುಬಂದಿವೆ. ಇವುಗಳಲ್ಲಿ ಕಾರ್ತಿಕೇಯ ಮತ್ತು ಗಣಪತಿಗೆ ಹೆಚ್ಚಿನ ಮಹತ್ವವಿದೆ. ಚಾಲುಕ್ಯ ಅರಸರು ಕಾರ್ತಿಕೇಯನನ್ನು ವಿಶೇಷವಾಗಿ ನಂಬಿದ್ದರು. ಆ ಹಿನ್ನೆಲೆಯಲ್ಲಿ ಮಹಾಸೇನನೆಂದು ಪೂಜಿಸಿರುವದರಿಂದ ಕಾರ್ತಿಕೇಯನ ಹಲವಾರು ಶಿಲ್ಪಗಳು

[illegible]



ಅಲ್ಲಿನ ದೇವಾಲಯಗಳಲ್ಲಿ ಕಂಡು ಬರುತ್ತವೆ. ಇವಷ್ಟೆ ಅಲ್ಲದೆ ಇನ್ನು ಹಲವಾರು ರೀತಿಯ ಧಾರ್ಮಿಕ ಶಿಲ್ಪಗಳು ನಮಗಿಲ್ಲಿ ಕಂಡುಬರುತ್ತವೆ. ಅವುಗಳೆಂದರೆ ಬ್ರಹ್ಮ, ಸೂರ್ಯ, ನಾಗರಾಜ, ಅಷ್ಟದಿಕ್ಪಾಲಕರು, ದ್ವಾರಪಾಲಕರು, ಶಂಖನಿಧಿ, ಪದ್ಮನಿಧಿ ಇತ್ಯಾದಿ ಶಿಲ್ಪಗಳು. ಇವೆಲ್ಲವೂ ಅವರ ದೇವಾಲಯಗಳ ವಿವಿಧ ಸ್ಥಳಗಳಲ್ಲಿ ಗೋಡೆಗಳಲ್ಲಿ ಛತ್ತುಗಳಲ್ಲಿ ಕಂಡುಬರುತ್ತವೆ. ಸೂರ್ಯನಿಗಾಗಿ ಐಹೊಳೆಯಲ್ಲಿ ದೇವಾಲಯವಿದ್ದುದ್ದು ಕಂಡುಬರುತ್ತದೆ. ಇಲ್ಲಿ ೬ ಅಡಿ ಎತ್ತರದ ಸೂರ್ಯನ ಶಿಲ್ಪವಿದೆ. ಇದಲ್ಲದೆ ಬೇರೆ ದೇವಾಲಯಗಳಲ್ಲಿ ಈಗ ಕಂಡುಬರುವದಿಲ್ಲವಾದರೂ ಆಗಿನ ಕಾಲದಲ್ಲಿ ಇತ್ತೆಂದು ಹೇಳಲಾಗಿದೆ. ಇವರ ಕಾಲದ ಪ್ರತ್ಯೇಕ ದೇವಾಲಯವು ಬಾದಾಮಿಯ ಮಾಲಗಿತ್ತಿ ಶಿವಾಲಯವು ಮೂಲತಃ ಸೂರ್ಯದೇವಾಲಯವಾಗಿತ್ತು. ಅದರಂತೆ ಐಹೊಳೆಯ ದುರ್ಗಾದೇವಾಲಯವು ಸೂರ್ಯದೇವಸ್ಥಾನವಾಗಿತ್ತು. ಆದರೆ ಈಗ ಅವುಗಳಲ್ಲಿ ಸೂರ್ಯಶಿಲ್ಪಗಳಿಲ್ಲ.[೬೮]

ಇದೇ ರೀತಿ ಬ್ರಹ್ಮನ ಕುರಿತಾದ ಶಿಲ್ಪಗಳು ಕೂಡಾ ಬ್ರಹ್ಮನಿಗಾಗಿ ದೇವಾಲಯವಿಲ್ಲವಾದರು ದೇವಾಲಯದ ಛತ್ತುಗಳಲ್ಲಿ ಅಲ್ಲಲ್ಲಿ ಬ್ರಹ್ಮನ ಶಿಲ್ಪವನ್ನು ಕೆತ್ತಿರಿಸಿದ್ದಾರೆ. ರಾಮಾಯಣ–ಮಹಾಭಾರತದ ಕುರಿತಾದ ಕಥಾನಕ ಶಿಲ್ಪಗಳನ್ನು ನಾವಿಲ್ಲಿ ಗಮನಿಸಬಹುದು. ಪುರಾಣ ಕಥಾನಕಗಳನ್ನು ಮಹಾಕಾವ್ಯಗಳನ್ನು ಚಿತ್ರರೂಪದಲ್ಲಿ ಕೆತ್ತರಿಸಿರುವುದು ಜನರಿಗೆ ಆ ಕಥಾನಕಗಳ ಪರಿಚಯವನ್ನು ನೀಡುವ ಪ್ರಯತ್ನ. ಇಂತಹ ಹಲವಾರು ಶಿಲ್ಪಗಳನ್ನು ನಾವು ಇಲ್ಲಿ ಕಾಣುತ್ತೇವೆ.

ಶೈವ ಶಿಲ್ಪಗಳು

ಬಾದಾಮಿ ಚಾಲುಕ್ಯರು ನಂತರದ ದಿನಗಳಲ್ಲಿ ಶೈವಧರ್ಮದಿಂದ ಪ್ರೇರಣೆಯನ್ನು ಪಡೆದು ಶಿವಮಂಡಲ ದೀಕ್ಷೆಯನ್ನು ಪಡೆದು ಶೈವಧರ್ಮದ ಅನುಯಾಯಿಗಳಾದರು. ಆದುದರಿಂದ ಮುಂದಿನ ದಿನಗಳಲ್ಲಿ ಶೈವದೇವಾಲಯಗಳು, ಶಿಲ್ಪಗಳು ಹೇರಳವಾಗಿ ರಚನೆಯಾದವು. ಬಾದಾಮಿಯ ಒಂದನೆ ಗುಹೆಯು ಶೈವಗುಹೆಯಾಗಿದ್ದು ಇಲ್ಲಿ ಶಿವನ ಕುರಿತಾದ ಶಿಲ್ಪಗಳು ಹೇರಳವಾಗಿವೆ. ಮುಂದೆ ಪಟ್ಟದಕಲ್ಲಿನಲ್ಲಿ ನಿರ್ಮಾಣವಾದ ವಿರೂಪಾಕ್ಷ ದೇವಾಲಯ, ಲೋಕೇಶ್ವರ ದೇವಾಲಯ, ಸಂಗಮೇಶ್ವರ ದೇವಾಲಯ ಇತ್ಯಾದಿ ಪ್ರಸಿದ್ಧ ಶೈವದೇವಾಲಯಗಳು ಮಹಾಕೂಟದಲ್ಲಿರುವ ಮಹಾಕೂಟೇಶ್ವರ ದೇವಾಲಯವಂತೂ ಅತ್ಯಂತ ಪ್ರಸಿದ್ಧವಾಗಿದೆ. ಇವರ ಕಾಲದಲ್ಲಿ ನಿರ್ಮಾಣವಾದ ನಟರಾಜ, ಅರ್ಧನಾರೀಶ್ವರ, ಹರಿಹರ, ಅಂಧಕಾಸುರವಧೆ, ಗಜಾಸುರವಧೆಯ ಶಿವ ಇತ್ಯಾದಿಗಳಂತೂ ಅತ್ಯದ್ಭುತವಾದ ಕಲಾಕೃತಿಗಳು.

ವೈಷ್ಣವ ಶಿಲ್ಪಗಳು

ವಿಷ್ಣುವಿನ ವಿವಿಧ ರೂಪಗಳ ಅವತಾರಗಳನ್ನು ಈ ಶಿಲ್ಪಗಳು ತೋರಿಸುತ್ತವೆ. ಬಾದಾಮಿ

೬೮. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೬



ಚಾಲುಕ್ಯರು ಮೂಲತಃ ವೈಷ್ಣವರಾಗಿದ್ದರು. ಈ ಹಿನ್ನೆಲೆಯಲ್ಲಿ ಮೊದ ಮೊದಲಿನ ಶಿಲ್ಪವು ಹೆಚ್ಚಾಗಿ ವೈಷ್ಣವ ಶಿಲ್ಪಗಳಾಗಿದ್ದವು. ಅಲ್ಲದೆ ವಾಸ್ತು ಶಿಲ್ಪಗಳಲ್ಲಿಯೂ ಹೆಚ್ಚಾಗಿ ದೇವಾಲಯಗಳನ್ನು, ಗುಹಾಲಯಗಳನ್ನು ವಿಷ್ಣುವಿನ ಸಲುವಾಗಿ ರಚಿಸಲಾಗಿದ್ದವು. ಬಾದಾಮಿ ಚಾಲುಕ್ಯರ ಕಾಲದಲ್ಲಿ ವಿಷ್ಣುವಿನ ಶಿಲ್ಪಗಳು ಹೇರಳವಾಗಿವೆ. ಮುಖ್ಯವಾಗಿ ವಾಮನ ತ್ರಿವಿಕ್ರಮ ನರಸಿಂಹಾವತಾರದ ಶಿಲ್ಪಗಳು ಅದ್ಭುತ ಕಲಾಕೃತಿಗಳಾಗಿವೆ. ಅಲ್ಲದೆ ಬಾದಾಮಿಯಲ್ಲಿನ ಎರಡು ಪ್ರಸಿದ್ಧ ಗುಹಾಂತರ ದೇವಾಲಯಗಳು ವಿಷ್ಣುವಿಗೆ ಸಂಬಂಧಿಸಿದವುಗಳಾಗಿವೆ. ಅಂತಹ ಶಿಲ್ಪಗಳನ್ನು ವಿಶೇಷವಾಗಿ ಗಮನಿಸಲಾಗಿದೆ. ವಿಷ್ಣುವಿನ ವಿವಿಧ ಅವತಾರಗಳ ಶಿಲ್ಪಗಳಲ್ಲಿ ಅಂದಿನ ಶಿಲ್ಪಿಗಳು ಕೆತ್ತಿದ ರೀತಿಯನ್ನು, ಸೌಂದರ್ಯವನ್ನು ಇಲ್ಲಿ ಗಮನಿಸಲಾಗುತ್ತದೆ.

ಜೈನ ಶಿಲ್ಪಗಳು

ಬಾದಾಮಿ ಚಾಲುಕ್ಯರ ಆಡಳಿತಾವಧಿಯಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳ ನಂತರ ಅತಿ ಹೆಚ್ಚಿನ ಮನ್ನಣೆ ಪಡೆದಿರುವುದು ಜೈನಧರ್ಮ. ಅದಕ್ಕೆ ಅಲ್ಲಿ ಆಗಿನ ಕಾಲದಲ್ಲಿ ರಚಿತವಾದ ಶಿಲ್ಪಗಳು ಮತ್ತು ವಾಸ್ತು ಶಿಲ್ಪಗಳು ಸಾಕ್ಷಿಯಾಗಿವೆ. ಬಾದಾಮಿಯಲ್ಲಿರುವ ಗುಹಾಲಯವಾಗಲಿ, ಐಹೊಳೆಯಲ್ಲಿನ ಗುಹಾಲಯವಾಗಲಿ, ಚಾಲುಕ್ಯರ ಕಾಲದಲ್ಲಿ ರಚನೆಯಾಗಿರುವ ಗುಹಾಂತರ ಜಿನಾಲಯಗಳಾದರೆ ಹಲವು ಜೈನಮಂದಿರಗಳು ನಿರ್ಮಾಣವಾಗಿರುವುದು ಕಂಡುಬರುತ್ತದೆ. ಅಲ್ಲದೆ ಹಲವಾರು ಸುಂದರ ಜೈನ ತೀರ್ಥಂಕರ ಶಿಲ್ಪಗಳು ಯಕ್ಷ ಯಕ್ಷಿಯರ ಶಿಲ್ಪಗಳು ನಮಗೆ ಇಲ್ಲಿ ಕಂಡುಬರುತ್ತವೆ.

ಇವರ ಗುಹಾಲಯಗಳಲ್ಲಿ ಬಾಹುಬಲಿ, ಪಾರ್ಶ್ವನಾಥ, ತೀರ್ಥಂಕರ ಮಹಾವೀರನ ಶಿಲ್ಪಗಳು ಪ್ರಧಾನವಾಗಿ ಮೂಡಿಬಂದಿವೆ. ಇದಲ್ಲದೆ ಇನ್ನೂ ಹಲವಾರು ಶಿಲ್ಪಗಳು ಗಮನ ಸೆಳೆಯುತ್ತವೆ. ಮುಖ್ಯವಾಗಿ ಬಾದಾಮಿಯ ನಾಲ್ಕನೆಯ ಗುಹಾಲಯದಲ್ಲಿರುವ ಬಾಹುಬಲಿ ಮಹಾವೀರ ಮತ್ತು ಸುತ್ತಲೂ ಇರುವ ಯಕ್ಷ ಯಕ್ಷಿ ಶಿಲ್ಪಗಳು ಸುಂದರವಾಗಿದ್ದು ಆಗಿನ ಕಾಲದ ಶಿಲ್ಪಿಗಳ ಸೌಂದರ್ಯಪ್ರಜ್ಞೆಯನ್ನು ಎತ್ತಿ ತೋರಿಸುತ್ತವೆ.ಜೈನರ ತೀರ್ಥಂಕರ ಜೀವನಚರಿತ್ರೆಯನ್ನಾಗಲಿ ಬೌದ್ಧರ ಮೂಲ ಗುರು ಬುದ್ಧನ ಜೀವನ ಚರಿತ್ರೆಯನ್ನಾಗಲಿ ತೋರಿಸಲು ಶಿಲ್ಪಕಲೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಯಿತು.

ಅದೇ ರೀತಿ ಮೊದಲಿನ ವೈದಿಕ ಧರ್ಮವು ರೂಪಾಂತರಗೊಂಡು ವೈಷ್ಣವ ಧರ್ಮವಾಗಿ ಹಿಂದೂ ಧರ್ಮವಾಗಿಯೆ ನವ ಚೈತನ್ಯವನ್ನು ಪಡೆದಾಗ ವಿಷ್ಣು, ಶಿವ, ಕೃಷ್ಣಲೀಲೆಗಳನ್ನು ರಾಮಾಯಣ ಮಹಾಭಾರತದಂತಹ ಕಥೆಗಳನ್ನು, ಪುರಾಣಗಳನ್ನು ಶಿಲ್ಪಗಳಲ್ಲಿ ತೋರಿಸುವ ಪ್ರವೃತ್ತಿ ಬೆಳೆದು ಬಂತು. ಹೀಗೆ ರಚಿಸಲಾದ ಶಿಲ್ಪಗಳನ್ನು ಅಧ್ಯಯನ ದೃಷ್ಟಿಯಿಂದ ಧಾರ್ಮಿಕ ಶಿಲ್ಪಗಳೆಂದು ಕರೆದು ವಿವಿದ ಧರ್ಮಗಳು ದೇವತೆಗಳು ಶಿಲ್ಪಗಳನ್ನು ಆಯಾ ಗುಂಪುಗಳಾಗಿ



ವಿಂಗಡಿಸಿ ಅಧ್ಯಯನ ಮಾಡುವ ಪ್ರವೃತ್ತಿಯೂ ಬೆಳೆದು ಬಂದಿದೆ. ಅಂತಹ ವಿಂಗಡಣೆ ಅಧ್ಯಯನದ ದೃಷ್ಟಿಯಿಂದ ಅನುಕೂಲಕರವಾಗಿರುತ್ತದೆ. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಿ ನೋಡಲಾಗಿದೆ.

ಬೌದ್ಧ ಶಿಲ್ಪಗಳು

ಕರ್ನಾಟಕದಲ್ಲಿ ಬೌದ್ದ ಧರ್ಮವು ಇತಿಹಾಸ ಪೂರ್ವದಲ್ಲೆ ಸಾಕಷ್ಟು ಪ್ರಚಲಿತವಾಗಿತ್ತು. ಚಕ್ರವರ್ತಿ ಅಶೋಕನ ಕಾಲದಲ್ಲಿ ಕರ್ನಾಟಕದಲ್ಲಿ ಬೌದ್ಧಧರ್ಮವು ಹರಡಿದ್ದ ಕುರಿತು ಉತ್ಖನನದಲ್ಲಿ ಹಲವಾರು ಅವಶೇಷಗಳು ಕಂಡುಬಂದಿವೆ. ಆದರೆ ಬಾದಾಮಿಯಲ್ಲಿ ಚಾಲುಕ್ಯರು ಆಡಳಿತಕ್ಕೆ ತೊಡಗುವ ಕಾಲಕ್ಕೆ ಬೌದ್ದರ ನೆಲೆಯಾಗಿತ್ತೆಂದು ಅಲ್ಲಿ ಅನೇಕ ಸಂಘಾರಾಮಗಳಿದ್ದವೆಂದೂ ಪುಲಿಕೇಶಿಯ ಆಸ್ಥಾನಕ್ಕೆ ಬಂದಿದ್ದ ಚೀನಿ ಪ್ರವಾಸಿ ಹ್ಯೂಯನ್‌ತ್ಸಾಂಗ್ ಹೇಳುತ್ತಾನೆ. ಗುಹೆಗಳ ನಡುವಿನ ನೈಸರ್ಗಿಕ ಗುಹೆಯೊಂದರಲ್ಲಿ ಕಂಡುಬರುವ ಪದ್ಮಪಾಣಿ[೧೯]ಯದೆಂದು ಹೇಳಲಾಗುವ ಶಿಲ್ಪವೊಂದನ್ನು ನಾವಿಲ್ಲಿ ಗಮನಿಸಬಹುದು.

ಅರ್ಧ ಕೆತ್ತಲಾಗಿರುವ ಸಾಮಾನ್ಯ ಶಿಲ್ಪ ಇದಾಗಿದ್ದು ಕಲೆಯ ಅಥವಾ ಸೌಂದರ್ಯದ ದೃಷ್ಟಿಯಿಂದ ಅಂತಹ ಮಹತ್ವವೇನಿಲ್ಲವಾದರೂ ಇತಿಹಾಸದ ದೃಷ್ಟಿಯಿಂದ ಗಮನಿಸಬೇಕಾದ ಶಿಲ್ಪವಿದು. ಐಹೊಳೆಯ ಬೌದ್ಧ ಗುಹೆಯು ಕರ್ನಾಟಕದ ಅತಿ ಪ್ರಾಚಿನ ಗುಹೆಯೆಂದು ಡಾ. ಶೀಲಾಕಾಂತ ಪತ್ತಾರರು ಅಭಿಪ್ರಾಯ ಪಟ್ಟಿದ್ದಾರೆ. ಇದು ಭಾಗಶಃ ರಾಚನಿಕ ದೇಗುಲವಾಗಿದೆ. ಇದರ ಮೇಲ್ಗಂಡಿನಲ್ಲಿ ವ್ಯಾಖ್ಯಾನಮುದ್ರೆಯ[೨೦] ಬುದ್ದನ ಶಿಲ್ಪವು ಸುಂದರವಾಗಿದೆ. ಈ ಬೌದ್ಧ ಗುಹೆಯು ಎರಡು ಅಂತಸ್ತಿನ ಚೈತ್ಯಾಲಯವಾಗಿದ್ದು ಕೆಳಗಿನ ಅಂತಸ್ತು ಗರ್ಭಗೃಹ ಹಾಗೂ ಮುಖ ಮಂಟಪಗಳಿಂದಾಗಿದ್ದು ಗರ್ಭಗೃಹದ ಬಾಗಿಲುವಾಡದ ಶಾಖೆಗಳಲ್ಲಿ ಜಾತಕ ಕಥೆಗಳ ಸನ್ನಿವೇಶಗಳನ್ನು ಕೆತ್ತಲಾಗಿದೆ. ಒಟ್ಟಿನಲ್ಲಿ ಬೌದ್ಧಧರ್ಮವು ಆ ಕಾಲದಲ್ಲಿ ಅಲ್ಲಿ ಸ್ವಲ್ಪ ಮಟ್ಟಿಗಾದರೂ ಚಲಾವಣೆಯಲ್ಲಿತ್ತು ಎಂಬುದನ್ನು ತೋರಿಸುವಂತೆ ಈ ಶಿಲ್ಪಗಳನ್ನು ನಾವು ಗಮನಿಸಬಹುದಾಗಿದೆ.

ಲೌಕಿಕ ಶಿಲ್ಪಗಳು


ಸಾಮಾನ್ಯವಾಗಿ ದೇವತಾ ಶಿಲ್ಪಗಳು ಮತ್ತು ಧಾರ್ಮಿಕ ಶಿಲ್ಪಗಳಿಂದ ಹೊರತಾದ ಜನರ ಸಾಮಾಜಿಕ ಜೀವನವನ್ನು ತೋರಿಸುವ ಶಿಲ್ಪಗಳನ್ನು ಅಲಂಕಾರಿಕ ಶಿಲ್ಪಗಳನ್ನು ವಿವಿಧ ಪ್ರಾಣಿ ಪಕ್ಷಿಗಳ ಅಲಂಕಾರಿಕ ಶಿಲ್ಪಗಳನ್ನು ಲೌಕಿಕ ಶಿಲ್ಪಗಳೆಂದು ಕರೆಯಬಹುದಾಗಿದೆ. ಚಾಲುಕ್ಯ ಅರಸರ ಕಾಲದಲ್ಲಿ ಅಂತಹ ಹಲವಾರು ಶಿಲ್ಪಗಳನ್ನು ದೇವಾಲಯದ ಗೋಡೆಗಳಲ್ಲಿ ಕಂಬಗಳಲ್ಲಿ ಅಲಂಕಾರಿಕವಾಗಿ ಕೆತ್ತಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಇಂತಹ ಶಿಲ್ಪಗಳು ಗಾತ್ರದಲ್ಲಿ ಕಿರಿದಾಗಿರುತ್ತವೆ. ಚಾಲುಕ್ಯ ಶಿಲ್ಪಿಗಳು ಅಂದಿನ ಜನ ಜೀವನವನ್ನು ಸೂಚಿಸುವ ಶಿಲ್ಪಗಳನ್ನು

---

೧೯. ಡಾ. ಎ. ಮುರಿಗೆಪ್ಪ (ಪ್ರಸಂ.): ಬಾದಾಮಿ ಚಾಲುಕ್ಯರು, ಲೇಖನ ಸಂಪುಟ ೩೩೮

೨೦. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೯

[illegible]



ಅರಸ ಅರಸಿಯರು ದಾಸಿಯರು ಸೇವಕರು ಸೈನಿಕರು ಸಂಗೀತಗಾರರು ಕುಸ್ತಿಪಟುಗಳು ಇಂತಹ ಹಲವಾರು ರೀತಿಯ ಶಿಲ್ಪಗಳನ್ನು ಕೆತ್ತಿದ್ದಾರೆ. ಇದಲ್ಲದೆ ಸಾಮಾಜಿಕರ ವಿವಿಧ ಕ್ರೀಡೆಗಳು ಸಂಗೀತ ನೃತ್ಯಗಳಲ್ಲಿ ತಲ್ಲೀನರಾಗಿರುವುದನ್ನು ತೋರಿಸುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿರುವುದನ್ನು ಕಂಡುಬರುತ್ತದೆ. ಇದಲ್ಲದೆ ರಾಸಕ್ರೀಡೆ, ಮೈಥುನ, ಪಂಚತಂತ್ರದಂತಹ ನೀತಿಬೋಧೆಯ ಕಥೆಗಳನ್ನು ಶಿಲ್ಪಗಳಲ್ಲಿ ತೋರಿಸಿದ್ದಾರೆ. ಮತ್ತೊಂದು ವಿಷಯವೆಂದರೆ ವಿವಿಧ ರೀತಿಯ ಪುಷ್ಪವಿನ್ಯಾಸಗಳು ಮತ್ತು ಜ್ಯಾಮಿತಿಯ ಅಲಂಕಾರಿಕಗಳಿದ್ದು, ಇವುಗಳನ್ನು ಒಟ್ಟಾಗಿ ಲೌಕಿಕ ಶಿಲ್ಪಗಳೆಂದು ಹೇಳಬಹುದು.

ಸಾಲಭಂಜಿಕೆಯರ ಶಿಲ್ಪಗಳು

ಸಾಲಭಂಜಿಕೆ ಶಿಲ್ಪಗಳು ಪ್ರಾಚೀನ ಪರಿಕಲ್ಪನೆಯಾಗಿವೆ. ಸಾಂಚಿಯ ಸ್ತೂಪಗಳಲ್ಲಿ ಇಂತಹ ಶಿಲ್ಪಗಳು ಕಂಡುಬರುತ್ತವೆ. ಇವು ಒಟ್ಟು ಶಿಲ್ಪಗಳ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತವೆ. ಹೆಣ್ಣಿನ ಸಹಜ ಸೌಂದರ್ಯವನ್ನು ದೇಹದ ಬಾಗು ಬಳುಕುಗಳನ್ನು ವಕ್ರರೇಖೆಗಳಲ್ಲಿ ತೋರಿಸುವ ರೀತಿಯ ಶಿಲ್ಪಗಳ ಕೆತ್ತನೆಯಲ್ಲಿ ಚಾಲುಕ್ಯ ಶಿಲ್ಪಿಗಳು ನಿಷ್ಣಾತರಾಗಿದ್ದರು.

ಬಾದಾಮಿಯ ಮೂರನೆಯ ಗುಹೆಯಲ್ಲಿ ಇಂತಹ ಹಲವಾರು ಶಿಲ್ಪಗಳನ್ನು ಕಂಬಗಳಲ್ಲಿ ಕೆತ್ತಿದ್ದು ಅಂದಿನ ಶಿಲ್ಪಿಗಳ ಕೌಶಲ್ಯವನ್ನು ಮನದಟ್ಟುಮಾಡುತ್ತದೆ. ಅಲ್ಲಿನ ಮರಳುಕಲ್ಲಿನ ಒರಟುತನದಲ್ಲಿಯೂ ಹಿತಮಿತವಾದ ಆಭರಣಗಳೊಂದಿಗೆ ಹೆಣ್ಣಿನ ಸಹಜ ಅಂಗಭಂಗಿಗಳನ್ನು ಕೆತ್ತಿರುವುದು ಗಮನಾರ್ಹವಾಗಿದೆ. ಇವಲ್ಲದೆ ಕುಬ್ಜಗಣಗಳನ್ನು ಪಟ್ಟಿಕೆಗಳಲ್ಲಿ ಕೆತ್ತಿರುವುದು ಕಂಡುಬರುತ್ತದೆ. ಗುಹಾಲಯಗಳಲ್ಲಿಯೂ ರಾಚನಿಕ ಮಂದಿರಗಳಲ್ಲಿಯೂ ಇಂತಹ ಶಿಲ್ಪಗಳನ್ನು ಕೆತ್ತಿರಿಸಿದ್ದಾರೆ. ಸಾಮಾನ್ಯವಾಗಿ ಇವು ಶಿಲ್ಪಗಳಲ್ಲಿ ಕೆಳಭಾಗದಲ್ಲಿ ಪಟ್ಟಿಕೆಗಳ ರೂಪದಲ್ಲಿರುತ್ತವೆ. ಅಲ್ಲದೆ ಮಂಟಪದ ಮೇಲ್ಗಂಡಿನಲ್ಲಿಯೂ ಇಂತಹ ಶಿಲ್ಪಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಸಾಮಾನ್ಯ ಜನಜೀವನದ ರೀತಿ ರಿವಾಜುಗಳನ್ನು ಚಟುವಟಿಕೆಗಳನ್ನು ಗಮನಿಸಬಹುದು.

ಅರಸ ಅರಸಿಯರ ಶಿಲ್ಪಗಳು

ಚಾಲುಕ್ಯಕಾಲದ ಶಿಲ್ಪಗಳು ತಮ್ಮ ಕಸುಬಿಗೆ ವಿಶೇಷ ಪ್ರೋತ್ಸಾಹವನ್ನು ನೀಡಿದ ಅಂದಿನ ರಾಜ ರಾಣಿಯರ ಶಿಲ್ಪಗಳನ್ನು ರಚಿಸಿರುವುದು ಕಂಡುಬರುತ್ತದೆ. ಬಾದಾಮಿಯ ಮೂರನೆಯ ಗುಹೆಯ ಬೋಧಿಗೆಯಲ್ಲಿ ಕಟ್ಟಲಾದ ದೇವಾಲಯಗಳ ಕಂಬಗಳಲ್ಲಿ ಇಂಥ ರಚನೆಗಳಿವೆ. ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಮಂಟಪದ ತೊಲೆಯ ಮೇಲೆ ಇರುವ ಒಡ್ಡೋಲಗದಲ್ಲಿ ಕುಳಿತಿರುವ ಶಿಲ್ಪವನ್ನು ಇಲ್ಲಿ ಗಮನಿಸಬಹುದಾಗಿದೆ. ಇಂತಹ ಕೆಲವು ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ.



ಮಿಥುನ ಶಿಲ್ಪಗಳು

ದೇವಾಲಯಗಳಲ್ಲಿ ಮಿಥುನಶಿಲ್ಪಗಳನ್ನು ಕೆತ್ತುವುದು ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ಬೌದ್ಧ ವಿಹಾರಗಳಲ್ಲಿಯೂ ಸ್ತೂಪಗಳಲ್ಲಿಯೂ ಇಂತಹ ದಂಪತಿಶಿಲ್ಪಗಳು ಕಂಡುಬಂದಿವೆ. ಮೈಥುನವು ಇತರ ಅಭ್ಯಾಸಗಳಂತೆಯೆ ಸಹಜ ಕ್ರಿಯೆ ಮತ್ತು ರಸಿಕತೆಯನ್ನು ವ್ಯಕ್ತಪಡಿಸುವ ಕಲೆ ಎಂಬ ಹಿನ್ನೆಲೆ ಇದಕ್ಕಿರಬಹುದು. ಆದುದರಿಂದಲೆ ಚಾಲುಕ್ಯ ಶಿಲ್ಪಿಗಳು ಈ ರೀತಿಯ ಶಿಲ್ಪಗಳನ್ನು ಎಲ್ಲಾ ದೇವಾಲಯಗಳಲ್ಲಿ ಎಲ್ಲೆಂದರಲ್ಲಿ ಕೆತ್ತಿದ್ದಾರೆ ಎನ್ನಬಹುದು.

ದೇಗುಲದ ಕಂಬಗಳಲ್ಲಿ ಅರ್ಧಕಂಬಗಳಲ್ಲಿ ಬಾಗಿಲುವಾಡಗಳಲ್ಲಿಯು ಇದನ್ನು ಕೆತ್ತಿರುವುದನ್ನು ಕಾಣುತ್ತೇವೆ. ಇವು ಸಹಜವೆಂಬ ಭಾವನೆ ಬರುವ ರೀತಿಯಲ್ಲಿ ಇಂತಹ ಶಿಲ್ಪಗಳನ್ನು ಚಾಲುಕ್ಯ ಶಿಲ್ಪಿಗಳು ಕೆತ್ತಿರಿಸಿದ್ದಾರೆ. ಇಲ್ಲಿ ಕಾಮ-ರತಿ ಇಲ್ಲದಿದ್ದರೂ ರಸಿಕತೆ ಇದೆ. ಬಾದಾಮಿಯ ಮೂರನೆಯ ಗುಹೆಯಲ್ಲಿ ಇಂತಹ ಕೆಲ ಶಿಲ್ಪಗಳನ್ನು ನೋಡಬಹುದು. ಮಹಾಕೂಟದ ದೇವಾಲಯದಲ್ಲಿ ಇಂತಹ ಹಲವಾರು ಶಿಲ್ಪಗಳಿವೆ. ಇಲ್ಲಿ ಕಾಮಕ್ರೀಡೆ ಇಲ್ಲದಿದ್ದರೂ ದಾಂಪತ್ಯದ ಸೌಂದರ್ಯವಿದೆ. ಇಂತಹ ಶಿಲ್ಪಗಳು ದೇವಾಲಯದ ಒಟ್ಟು ಆಕಾರಕ್ಕೆ ಪೂರಕವಾಗಿದ್ದು ಶಿಲ್ಪಕಲೆಯ ವಿವಿಧ ಮಜಲುಗಳನ್ನು ಅನುಭವಿಸಲು ಸಹಕಾರಿಯಾಗುತ್ತವೆ.

ಅಲಂಕರಣ ಶಿಲ್ಪಗಳು

ವಿವಿಧ ಪ್ರಾಣಿ ಪಕ್ಷಿಗಳನ್ನು ಹೂವಿನ್ಯಾಸಗಳನ್ನು ಜ್ಯಾಮಿತಿವಿನ್ಯಾಸಗಳನ್ನು ಶಿಲ್ಪ ಪಟ್ಟಿಕೆಗಳ ಅಲಂಕರಣಕ್ಕಾಗಿಯೂ ಸಂಯೋಜನೆಗೆ ಪೂರಕವಾಗಿಯೂ ರಚಿಸಲಾಗಿದೆ. ಇಂತಹ ಶಿಲ್ಪಗಳು ಚಾಲುಕ್ಯರ ವಾಸ್ತುಶಿಲ್ಪಗಳಲ್ಲಿ ಎಲ್ಲೆಡೆ ಕಂಡುಬರುತ್ತವೆ. ನವಿಲು, ಗರುಡ, ಸಿಂಹ, ಹಸು ಇತ್ಯಾದಿಗಳಲ್ಲದೆ ಆನೆ, ಮಕರ, ಆಮೆ ಇತ್ಯಾದಿಗಳು ಧಾರ್ಮಿಕ ಶಿಲ್ಪಗಳ ಜೊತೆಗೆ ವಾಹನಗಳಾಗಿ ಕಂಡು ಬರುತ್ತವೆ. ಇದಲ್ಲದೆ ಸಂಕೀರ್ಣವನ್ನು ಅಂದಗೊಳಿಸಲು ಹಲವಾರು ಈ ರೀತಿಯ ಶಿಲ್ಪಗಳನ್ನು ಬಳಸಿಕೊಳ್ಳಲಾಗಿದೆ. ಇಂತಹ ಹಲವಾರು ಶಿಲ್ಪಗಳು ಶಿಲ್ಪ ಪಟ್ಟಿಕೆಗಳಲ್ಲಿ ಕಂಡುಬರುತ್ತವೆ.

ಒಟ್ಟಿನಲ್ಲಿ ಚಾಲುಕ್ಯ ಶಿಲ್ಪಿಗಳು ಧಾರ್ಮಿಕ ಶಿಲ್ಪಗಳ ಜೊತೆ ಜೊತೆಗೆ ಲೌಕಿಕ ಶಿಲ್ಪಗಳನ್ನು ಸಂಯೋಜನೆಗಳಲ್ಲಿ ಬಳಸಿಕೊಂಡು ಅಂದಿನ ಜನಜೀವನದ ಸಾಮಾಜಿಕ ಪದ್ಧತಿಯನ್ನು ರಸಿಕತೆಯನ್ನು ವ್ಯಕ್ತ ಪಡಿಸಿರುವ ರೀತಿ, ಅವರ ಸೌಂದರ್ಯ ಪ್ರಜ್ಞೆ ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ. ನೀತಿ ಬೋಧಕ ಕಥೆಗಳನ್ನು ಶಿಲ್ಪಗಳಲ್ಲಿ ಕೆತ್ತಿ ಜನರಲ್ಲಿ ಸಾಮಾಜಿಕ ಮೌಲ್ಯವನ್ನು ನೈತಿಕತೆಯ ಪಾಠವನ್ನು ಹೇಳುವ ಅವರ ಬುದ್ಧಿವಂತಿಕೆ ಮೆಚ್ಚಬೇಕಾದುದು.



ಮೊದಲನೆಯ ಶೈವ ಗುಹಾಲಯ, ಬಾದಾಮಿ



ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ನಾಲ್ಕನೆಯ ಜೈನ ಗುಹಾಲಯ, ಬಾದಾಮಿ



ಎಲ್ಲಮ್ಮ ದೇವಾಲಯ, ಬಾದಾಮಿ



ಮೇಗಣ ಶಿವಾಲಯ, ಬಾದಾಮಿ



ಮಾಲೆಗಿತ್ತಿ ದೇವಾಲಯ, ಬಾದಾಮಿ




ಗಳಗನಾಥ ದೇವಾಲಯ, ಐಹೊಳೆ



ನೈಸರ್ಗಿಕ ಗುಹಾಲಯ, ಬಾದಾಮಿ



ಮೇಗುತಿ ದೇವಾಲಯ, ಐಹೊಳೆ



ಜೈನ ಗುಹಾಲಯ, ಐಹೊಳೆ



ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಪಾಪನಾಥ ದೇವಾಲಯ, ಪಟ್ಟದಕಲ್ಲು



ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು



ಲಾಡ್‌ಖಾನ್ ದೇವಾಲಯ, ಐಹೊಳೆ




ಹುಚ್ಚಿಮಲ್ಲಿ ದೇವಾಲಯ, ಐಹೊಳೆ



ವಿರೂಪಾಕ್ಷ ದೇವಾಲಯ, ಐಹೊಳೆ



ದುರ್ಗಾ ದೇವಾಲಯ, ಐಹೊಳೆ



ರಾವಳಫಡಿ ಗುಹಾಲಯ, ಐಹೊಳೆ



ಭೂತನಾಥ ದೇವಾಲಯ, ಬಾದಾಮಿ



ಅಧ್ಯಾಯ : ಮೂರು

ಬಾದಾಮಿ ಚಾಲುಕ್ಯರ ಕಾಲದ ಶೈವಶಿಲ್ಪಗಳು

ಶೈವಧರ್ಮವು ಪ್ರಪಂಚದ ಜೀವಂತವಾದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಆರ್ಯ ಪೂರ್ವ ಸಿಂಧೂ ಸಂಸ್ಕೃತಿಯಲ್ಲಿ ಶಿವಾರಾಧನೆ ಇದ್ದಿತೆಂದೂ ಶಿವನನ್ನು ಪಶುಪತಿಯ ರೂಪದಲ್ಲಿ ಪೂಜಿಸುತ್ತಿದ್ದರೆಂದೂ ಹರಪ್ಪಾ ಮೆಹಂಜೋದಾರೋಗಳಲ್ಲಿ ಸಿಕ್ಕಿರುವ ಅವಶೇಷಗಳಿಂದ ವ್ಯಕ್ತಪಡುತ್ತದೆ ಎಂದು ಸರ್ ಜಾನ್ ಮಾರ್ಷಲ್ಲರು ಅಭಿಪ್ರಾಯ ಪಟ್ಟಿದ್ದಾರೆ.[೧] ಬಾದಾಮಿಯನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿದ ಚಾಲುಕ್ಯರು ಮೂಲತಃ ವೈಷ್ಣವ ಧರ್ಮೀಯರಾಗಿದ್ದರು. ಜಯಸಿಂಹ (ಕ್ರಿ.ಶ.ಸುಮಾರು ೫೦೦–೫೨೦)[೨]ನಿಂದ ಪ್ರಾರಂಭವಾದ ಚಾಲುಕ್ಯ ಅರಸು ಮನೆತನದ ಆಡಳಿತದ ಕಾಲದಿಂದಲೂ ಚಾಲುಕ್ಯರು ಎಲ್ಲಾ ಧರ್ಮಗಳಿಗೂ ಸಮಾನ ಪ್ರೋತ್ಸಾಹವನ್ನು ನೀಡುತ್ತಾ ಬಂದವರು.

ಮುಂದೆ ಮೊದಲನೆಯ ಪುಲಕೇಶಿಯ ಕಾಲದಲ್ಲಿ ಇವರು ಸ್ವತಂತ್ರ ರಾಜರೆಂದು ಘೋಷಿಸಿಕೊಂಡ ನಂತರ ಚಾಲುಕ್ಯರ ಮುಂದಿನ ತಲೆಮಾರಿನ ಎಲ್ಲಾ ಅರಸರು ಹಲವಾರು ದೇವಾಲಯಗಳನ್ನು ನಿರ್ಮಿಸಿದರು, ಅದಲ್ಲದೆ ಹಲವಾರು ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿದರು. ಮೊದಲನೆಯ ಪುಲಿಕೇಶಿಯು ಅಶ್ವಮೇಧ, ಮೊದಲಾದ ಯಜ್ಞಗಳನ್ನು ನೆರವೇರಿಸಿದನು.[೩] ರಾಜ್ಯದ ಭದ್ರತೆಗಾಗಿ ಬಾದಾಮಿಯಲ್ಲಿ ಸುತ್ತಲೂ ಕೋಟೆಯನ್ನು ನಿರ್ಮಿಸಿದ

೦೧. ಆರ್. ಆರ್. ದಿವಾಕರ (ಸಂ.) : ಕರ್ನಾಟಕ ಪರಂಪರೆ ಸಂ.೧, ಪುಟ – ೫೨೭

೦೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೯

೦೩. ಡಾ. ಎ. ಮುರಿಗೆಪ್ಪ. (ಪ್ರಸಂ) ಬಾದಾಮಿ ಚಾಲುಕ್ಯರು ಲೇಖನ ಸಂಪುಟ ಪುಟ – ೧೨

ಪುಲಕೇಶಿ. ಬಾದಾಮಿಯ ಜನರಿಗೆ ಇಂದಿಗೂ ನೀರುಣಿಸುವ ಅಗಸ್ತ್ಯತೀರ್ಥವು ಈತನ ಕಾಲದಲ್ಲಿ ನಿರ್ಮಾಣವಾಗಿದೆ. ಇದರಿಂದಾಗಿ ಬಾದಾಮಿಪ್ರದೇಶಕ್ಕೆ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆತಂತಾಯಿತು.

ಇವನ ಮಕ್ಕಳೇ ಕೀರ್ತಿವರ್ಮ ಮತ್ತು ಮಂಗಳೇಶ. ಕೀರ್ತಿವರ್ಮನು ಅತ್ಯಂತ ಸಮರ್ಥನಾದ ರಾಜನಾಗಿದ್ದನು. ಪರಮ ಸಾಹಸಿಯಾಗಿದ್ದ ಕೀರ್ತಿವರ್ಮನು ಹಲವಾರು ಯುದ್ಧಗಳನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದನು. ಇವನು ವಶಪಡಿಸಿಕೊಂಡ ಸಂಪತ್ತಿನಿಂದ ರಾಜ್ಯವನ್ನು ಶ್ರೀಮಂತಗೊಳಿಸಿದನು. ಬಾದಾಮಿಯಲ್ಲಿರುವ ಜಗತ್ಪ್ರಸಿದ್ಧ ಗುಹಾಂತರ ದೇವಾಲಯಗಳಲ್ಲಿ ೩ನೆಯ ಗುಹೆಯನ್ನು ಕೀರ್ತಿವರ್ಮನ ತಮ್ಮನಾದ ಮಂಗಳೇಶನು ಇದನ್ನು ಕ್ರಿ.ಶ. ೫೭೮ರಲ್ಲಿ ಮಾಡಿಸಿದನೆಂದು ಶಾಸನಾಧಾರದಿಂದ ತಿಳಿದ ವಿಷಯ. ಇದನ್ನು ಶಾಸನದಲ್ಲಿ ಮಹಾವಿಷ್ಣು ಗೃಹವೆಂದು ಕರೆದಿದೆ.[೪] ಮಂಗಳೇಶನು ಬಹು ಶೂರ ಮತ್ತು ಅತಿ ಸಮರ್ಥನಾದ ಯುವರಾಜನಾಗಿದ್ದನು.

ಅಣ್ಣನ ಆಡಳಿತದಲ್ಲಿ ಹಲವಾರು ಯುದ್ಧಗಳನ್ನು ಗೆಲ್ಲಿಸಿಕೊಟ್ಟನು. ಅಣ್ಣನ ನಿಧನದ ತರುವಾಯ ಉಸ್ತುವಾರಿಯಾಗಿ ರಾಜ್ಯಭಾರವನ್ನು ವಹಿಸಿಕೊಂಡ ಮಂಗಳೇಶನು ಹಲವಾರು ಯದ್ಧಗಳಲ್ಲಿ ಗೆದ್ದು ರಾಜ್ಯವನ್ನು ಇನ್ನಷ್ಟು ಶ್ರೀಮಂತಗೊಳಿಸಿದನು. ಕಳಚೂರಿಗಳನ್ನು ಸೋಲಿಸಿ ವಶವಾದ ಅಪಾರ ಸಂಪತ್ತನ್ನು ಮಹಾಕೂಟೇಶ್ವರ ದೇವರಿಗೆ ಸಮರ್ಪಿಸಿದ್ದಲ್ಲದೆ ಮಹಾಕೂಟದ ಸ್ತಂಭ ಶಾಸನದಲ್ಲಿ ರಣರಾಗನ ಪುತ್ರನಾದ ಮೊದಲನೆಯ ಪುಲಕೇಶಿಯನ್ನು 'ಪ್ರಿಯತನುಜ' ಎಂದು ಬಣ್ಣಿಸಲಾಗಿದೆ. ದಾನದ ಲೇಖನಗಳಲ್ಲಿ ಈತನ ಹೆಸರನ್ನು ಪೊಲೆಕೇಶಿನ್, ಪುಲಿಕೇಶಿನ, ಪುಲಕೇಶಿನ ಎಂದು ಬಗೆ ಬಗೆಯಾಗಿ ಬರೆಯಲಾಗಿದೆ.[೫] ಬಾದಾಮಿಯ ಮೂರನೆಯ ವೈಷ್ಣವ ಗುಹೆಯನ್ನು ಈತನೇ ನಿರ್ಮಿಸಿ ಅಣ್ಣನಿಗೆ ಸಮರ್ಪಿಸಿದನೆಂಬುದಕ್ಕೆ ಆಧಾರಗಳಿವೆ. ಬಾದಾಮಿಯ ಮೊದಲನೆಯ ಗುಹಾಲಯವು ಶೈವ ಗುಹಾಲಯವಾಗಿದ್ದು, ಇದು ಇವನ ಕಾಲದಲ್ಲಿ ರಚನೆಯಾದುದಾಗಿದೆ.

ಶೈವ ದೇವಾಲಯಗಳು ಮತ್ತು ಶೈವ ಶಿಲ್ಪಗಳ ದೃಷ್ಟಿಯಿಂದ ಬಾದಾಮಿಯ ಮೊದಲನೆಯ ಗುಹಾಲಯವು ಬಹು ಮಹತ್ವ ಪಡೆದಿದೆ. ಒಂದು ಕಾಲದಲ್ಲಿ ನಿರ್ಮಾಣಗೊಂಡ ವಿವಿಧ ಧರ್ಮೀಯರ ದೇವಸ್ಥಾನಗಳ ಸಂಖ್ಯೆ, ಒಳಹೊರಗಿನ ಗೋಡೆಗಳು, ಕಂಬ, ತೊಲೆ, ಛತ್ತು, ಬಾಗಿಲು, ಲಲಾಟಬಿಂಬ, ಶಿಖರ, ಅಧಿಷ್ಠಾನ ಇತ್ಯಾದಿ ಸ್ಥಳಗಳಲ್ಲಿ ಕೆತ್ತಿದ, ಕೊರೆದ, ಕಟೆದ ಹಾಗೂ ಬಿಡಿಸಿದ ವಿಗ್ರಹಗಳು, ಉಬ್ಬುಶಿಲ್ಪ, ರೇಖಾಶಿಲ್ಪ ಮತ್ತು ಮೂರ್ತಿಶಿಲ್ಪಗಳು ಧಾರ್ಮಿಕ ಪರಿಸರ ಅಧ್ಯಯನದ ದೃಷ್ಟಿಯಿಂದ ಹೆಚ್ಚು ಮಹತ್ವದ್ದೆನ್ನಿಸುತ್ತವೆ. ಈ ಹಿನ್ನೆಲೆಯಲ್ಲಿ ಚಾಲುಕ್ಯರ

೦೪. ಡಾ. ಬಾ. ರಾ. ಗೋಪಾಲ : ಕರ್ನಾಟಕದ ಕಲೆಗಳು, ವಾಸ್ತು, ಸಂ–೪, ಪುಟ – ೪೯

೦೫. ಆರ್. ಆರ್. ದಿವಾಕರ್ (ಸಂ.) : ಕರ್ನಾಟಕ ಪರಂಪರೆ, ಸಂಪುಟ – ೧, ಪುಟ – ೨೪೧



ಶಿಲ್ಪಗಳನ್ನು ಅಧ್ಯಯನ ಮಾಡುವಾಗ ಅಂದಿನ ರಾಜ್ಯಾಡಳಿತದಲ್ಲಿನ ಏರುಪೇರುಗಳು ಕೂಡಾ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಇದು ಚಾಲುಕ್ಯರ ಆಡಳಿತ ಕಾಲದಲ್ಲಿಯೂ ಕಂಡುಬರುತ್ತದೆ. ಇಂತಹ ಒಂದು ಮಹತ್ವದ ಬೆಳವಣಿಗೆಯಲ್ಲಿ ಪುಲಿಕೇಶಿಯ ನಿಧನದ ನಂತರ, ಆಡಳಿತ ನಡೆಸಿದ ಕೀರ್ತಿವರ್ಮನು ಅಕಾಲಮೃತ್ಯುವಿಗೀಡಾದಾಗ, ಮಂಗಳೇಶನು ಅಧಿಕಾರವನ್ನು ತನ್ನ ಕೈಯೊಳಗೆ ಇಟ್ಟುಕೊಂಡಾಗ, ಆಸ್ತಿಯ ಸಹಜ ಹಕ್ಕುದಾರನಾದ. ಇಮ್ಮಡಿ ಪುಲಿಕೇಶಿಯ ಚಿಕ್ಕಪ್ಪನು ಹಕ್ಕುದಾರನಾದ ತನಗೆ ಅಧಿಕಾರ ನಿರಾಕರಿಸಿದುದನ್ನು ಪ್ರತಿಭಟಿಸಿ ದಂಗೆಯೆದ್ದನು. ಯುದ್ಧದಲ್ಲಿ ಮಂಗಳೇಶನನ್ನು ಸೋಲಿಸಿ ಅಧಿಕಾರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡನು. ನಂತರ ಇವನ ಕಾಲದಲ್ಲಿ ಬಾದಾಮಿಯ ಚಾಲುಕ್ಯರ ಆಡಳಿತದಲ್ಲಿ ಹಲವಾರು ಶೈವ ದೇವಾಲಯಗಳು ನಿರ್ಮಾಣವಾದವು. ಕಲೆ, ಸಂಸ್ಕೃತಿ, ಶಿಲ್ಪ ವಾಸ್ತುಶಿಲ್ಪಗಳ ನಿರ್ಮಾಣದಲ್ಲಿ ಬಹುದೊಡ್ಡ ಕ್ರಾಂತಿಯೇ ನಡೆಯಿತು. ಸ್ವತಃ ರಾಜನೆ ಕಲಾರಾಧಕನಾಗಿದ್ದನು.

ಹಲವಾರು ದೇವಾಲಯಗಳಿಗೆ ದಾನ ದತ್ತಿಗಳನ್ನು ಕೊಟ್ಟು ಪ್ರೋತ್ಸಾಹಿಸಿದನು. ಕ್ರಿ.ಶ ೬೪೨ರಲ್ಲಿ ಪಲ್ಲವ ಅರಸು ಮೊದಲನೆ ನರಸಿಂಹವರ್ಮನು ಬಾದಾಮಿಯ ಮೇಲೆ ತನ್ನ ಪ್ರಭುತ್ವ ಸ್ಥಾಪಿಸಿದ ಪರಿಣಾಮವನ್ನು ನಾವು ಚರ್ಚಿಸಬೇಕಾಗುತ್ತದೆ. ಕ್ರಿ.ಶ. ೬೫೫ರಲ್ಲಿ ಮೊದಲನೆಯ ವಿಕ್ರಮಾದಿತ್ಯನು ಚಾಲುಕ್ಯ ಪ್ರಭುತ್ವವನ್ನು ಪುನರ್ ಸ್ಥಾಪಿಸುವವರೆಗೆ ೧೩ ವರ್ಷಗಳ ಕಾಲ ಈ ನಾಡು ಪಲ್ಲವರ ಪ್ರಭಾವಕ್ಕೊಳಗಾಗಿತ್ತು. ಅದಕ್ಕೂ ಮೊದಲೇ ಮಹಾಕೂಟ, ಐಹೊಳೆ ಮತ್ತು ಬಾದಾಮಿಗಳಲ್ಲಿ ದ್ರಾವಿಡ ಶೈಲಿಯಲ್ಲಿ ಕಟ್ಟಲ್ಪಟ್ಟ ದೇವಾಲಯಗಳು ಅಸ್ತಿತ್ವದಲ್ಲಿದ್ದವು.[೬]

ಮುಂದೆ ಹದಿಮೂರು ವರ್ಷಗಳ ನಂತರ ಇಮ್ಮಡಿ ಪುಲಿಕೇಶಿಯ ಮಗನಾದ ಮೊದಲನೆಯ ವಿಕ್ರಮಾದಿತ್ಯನು ಅಳಿದುಳಿದ ಸೈನ್ಯವನ್ನು ಒಟ್ಟುಗೂಡಿಸಿ ಪಲ್ಲವರ ಮೇಲೆ ದಾಳಿಮಾಡಿ ಪುಡಿಗಟ್ಟಿದನು. ಈತನೇ ಪಲ್ಲವರ ಮೂರು ತಲೆಮಾರುಗಳ ರಾಜರನ್ನು ಸೋಲಿಸಿ ಚಾಲುಕ್ಯರ ಕೀರ್ತಿಯನ್ನು ದಕ್ಷಿಣಭಾರತ ಮಾತ್ರವಲ್ಲದೆ ಉತ್ತರ ಭಾರತಕ್ಕೂ ಕೊಂಡೊಯ್ದನು. ಮೊದಲನೆಯ ವಿಕ್ರಮಾದಿತ್ಯನು ಪರಮ ಸಾಹಸಿಯಾಗಿದ್ದನು. ಹಾಗೆಯೇ ಅತ್ಯಂತ ಶ್ರದ್ಧಾಳುವಾದ ಧಾರ್ಮಿಕ ವ್ಯಕ್ತಿಯೂ ಆಗಿದ್ದನು. ಬಾದಾಮಿಯ ಚಾಲುಕ್ಯರ ಕಾಲದ ವಾಸ್ತುಶಿಲ್ಪದ ಸಂಪೂರ್ಣ ಬೆಳವಣಿಗೆಯ ಕೀರ್ತಿಯು ಈತನಿಗೆ ಸಲ್ಲುತ್ತದೆ. ಇವನ ಹಿರಿಯರು ವೈಷ್ಣವರಾಗಿದ್ದರು. ಬಾದಾಮಿಯ ಎರಡನೆಯ ಮತ್ತು ಮೂರನೆಯ ಗುಹಾಲಯಗಳು ಬೃಹತ್ ಗಾತ್ರದ ಅದ್ಭುತ ಶಿಲ್ಪಕಲಾಕೃತಿಗಳಾಗಿದ್ದು ಇವರ ವೈಷ್ಣವ ಧರ್ಮದ ಮೇಲಿನ ನಂಬಿಕೆಯನ್ನು ವ್ಯಕ್ತಪಡಿಸುತ್ತವೆ. ಆದರೆ ಇಮ್ಮಡಿ ಪುಲಿಕೇಶಿಯ ಮಗನಾದ ಮೊದಲನೆಯ ವಿಕ್ರಮಾದಿತ್ಯನು ಸುದರ್ಶನಾಚಾರ್ಯರಿಂದ ಶಿವಮಂಡಲದೀಕ್ಷೆಯನ್ನು[೭] ಪಡೆದುಕೊಂಡು ಶೈವ

---

೦೬. ಡಾ. ಶೀಲಾಕಾಂತ ಪತ್ತಾರ (ಸಂ) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೨೮

೦೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨

ಧರ್ಮೀಯನಾದನು. ಇದರಿಂದಾಗಿ ಮುಂದಿನ ಚಾಲುಕ್ಯ ವಂಶಸ್ಥರು ಶೈವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟರು, ಹೀಗಾಗಿ ಶೈವ ಧರ್ಮಕ್ಕೆ ಹೆಚ್ಚಿನ ಬೇಡಿಕೆ ದೊರೆಯಿತು. ಹಲವಾರು ಶೈವ ದೇವಾಲಯಗಳು ಇವನ ಕಾಲದಲ್ಲಿ ರಚನೆಯಾದವು. ಇದರಿಂದಾಗಿ ಬಾದಾಮಿಯು ಶೈವ ಕೇಂದ್ರವೆನಿಸಿತು.

ಪ್ರಮುಖ ಶೈವ ದೇವಾಲಯಗಳು

ಚಾಲುಕ್ಯರು ಎರಡನೆಯ ಹಂತದಲ್ಲಿ(ಉತ್ತರ ಚಾಲುಕ್ಯರು) ಶೈವಧರ್ಮೀಯರಾಗಿದ್ದುದರಿಂದ ನಂತರದ ಕಾಲದಲ್ಲಿ ನಿರ್ಮಾಣವಾದ ಬಹುತೇಕ ದೇವಾಲಯಗಳು ಶೈವ ಮಂದಿರಗಳಾಗಿವೆ. ಈ ಕಾರಣದಿಂದಾಗಿ ಶೈವ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು ತಲೆಯೆತ್ತಿದವು.[೮] ಚಾಲುಕ್ಯರ ಕಾಲದಲ್ಲಿ ಶೈವ ದೇವಾಲಯಗಳು ಅವರ ಆಡಳಿತಕ್ಕೆ ಒಳಪಟ್ಟಂತಹ ಎಲ್ಲಾ ಪ್ರಾಂತಗಳಲ್ಲಿ ಕಂಡುಬರುತ್ತವೆ. ಅದರಲ್ಲಿಯೂ ಪ್ರಮುಖವಾಗಿ ಬಾದಾಮಿಯ ಶೈವ ಗುಹಾಲಯ, ಬಾದಾಮಿಯಲ್ಲಿನ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗಾಗಿ ಕಟ್ಟಿಸಿರುವ ತ್ರಿಕೂಟಾಚಲ–ಜಂಬುಲಿಂಗ ದೇವಾಲಯ, ರಾವಳಫಡಿಯ ಗುಹಾಲಯ, ಆಲಂಪುರದ ಕೂಡುವೇಲಿಯ ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಮತ್ತು ತ್ರೈಲೋಕೇಶ್ವರ ದೇವಾಲಯಗಳು ಮುಖ್ಯವಾಗಿವೆ. ಇವುಗಳಲ್ಲದೆ ಮಹಾಕೂಟೇಶ್ವರ ದೇವಾಲಯ, ಬಾದಾಮಿಯ ಮೇಗಣ ಶಿವಾಲಯ, ಕೆಳಗಣ ಶಿವಾಲಯ ಇತ್ಯಾದಿಗಳು ಮುಖ್ಯವಾಗಿ ಕಂಡುಬರುವ ಶಿವಾಲಯಗಳು.

ಇವುಗಳಲ್ಲಿ ಚಾಲುಕ್ಯರ ಆಡಳಿತದ ಮೊದಲ ಹಂತದಲ್ಲಿ (ಪೂರ್ವ ಚಾಲುಕ್ಯರ ಕಾಲದಲ್ಲಿ) ಕೆತ್ತಲಾದ ಗುಹಾಂತರ ದೇವಾಲಯಗಳಲ್ಲಿ ರಾಚನಿಕ ದೇವಾಲಯಗಳು ಕಡಿಮೆ. ಬಾದಾಮಿಯ ಗುಹಾಂತರ ದೇವಾಲಯಗಳು ನಾಲ್ಕು ಹಾಗೂ ಇನ್ನೊಂದು ಐಹೊಳೆಯ ರಾವಣಫಡಿಯ ಗುಹಾಲಯ. ಇವುಗಳಲ್ಲಿ ಬಾದಾಮಿಯ ಗುಹೆ ಮೊದಲನೆಯದು ಮಾತ್ರ ಶಿವನಿಗೆ ಸಂಬಂಧಿಸಿರುವುದು. ಮಿಕ್ಕ ಎರಡು ವಿಷ್ಣುವಿನ ಗುಹಾಲಯವಾದರೆ ಕೊನೆಯ ಸಣ್ಣ ಗುಹಾಲಯ ಜೈನ ಧರ್ಮಕ್ಕೆ ಸಂಬಂಧಿಸಿರುವುದು. ಪೂರ್ವ ಚಾಲುಕ್ಯರ ಕಾಲದಲ್ಲಿ ಕಟ್ಟಲಾದ ಶಿವಾಲಯಗಳು ಕಂಡುಬರುವುದು ಕೆಲವೇ ಕೆಲವು. ಹೆಚ್ಚಿನ ದೇವಾಲಯಗಳು ಬಾದಾಮಿಯ ಮೇಗಣ ಶಿವಾಲಯದಂತಹ ಸಣ್ಣ ಗುಡಿಗಳು. ಆದರೂ ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳ ದೃಷ್ಟಿಯಿಂದ ಅಧ್ಯಯನಯೋಗ್ಯವಾಗಿವೆ. ಆದರೆ ನಂತರದ ಕಾಲದಲ್ಲಿ ಅಂದರೆ ಏಳನೇ ಶತಮಾನದ ಕೊನೆಯ ಭಾಗದಿಂದ ಹೆಚ್ಚಿನ ರೀತಿಯಲ್ಲಿ ದೇವಾಲಯಗಳು ರಚನೆಯಾದವು. ಇದಕ್ಕೆ ಒಂದು ಮುಖ್ಯ ಕಾರಣ, ಮೊದಲನೆಯ ವಿಕ್ರಮಾದಿತ್ಯನು ಶೈವಧರ್ಮಕ್ಕೆ ಮತಾಂತರ ಹೊಂದಿದ್ದು, ಇದರಿಂದ ಶೈವಧರ್ಮಕ್ಕೆ ಹೆಚ್ಚಿನ ಉತ್ತೇಜನ ದೊರೆತುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಶೈವದೇವಾಲಯಗಳು ರಚನೆಯಾದವು.

೦೮. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೧೨



ಶಿಲ್ಪಗಳು

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾದ ಕೆಲವು ಶಿವಾಲಯಗಳ ಕುರಿತು ಚರ್ಚಿಸಲಾಗಿದೆ. ಈ ಕಾಲದಲ್ಲಿ ಹಲವಾರು ಇತರ ದೇವಾಲಯಗಳೂ ರಚನೆಯಾಗಿವೆ. ಇವುಗಳಲ್ಲಿ ಕೆಲವು ವಿಷ್ಣು ದೇವಾಲಯಗಳಾದರೆ ಕೆಲವು ದೇವಿ ಆಲಯಗಳು. ಈ ದೇವಾಲಯಗಳಲ್ಲಿಯೂ ಶೈವ ಶಿಲ್ಪಗಳು ಹೇರಳವಾಗಿ ಕಂಡುಬರುತ್ತವೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ದೇವಾಲಯಗಳ ವಿಚಾರದಲ್ಲಾಗಲೀ ಶಿಲ್ಪಗಳಿಗೆ ಸಂಬಂಧಿಸಿದಂತಾಗಲೀ ಶೈವ ಅಥವಾ ವೈಷ್ಣವ ಎಂಬ ಭೇದಭಾವ ಇರಲಿಲ್ಲ. ಎಲ್ಲಾ ಧರ್ಮಗಳೂ ಸಮಾನ ಮಹತ್ವ ಪಡೆದಿದ್ದವು. ಆದ್ದರಿಂದಲೆ ವೈಷ್ಣವ ದೇವಾಲಯಗಳಲ್ಲಿ ಶೈವ ಶಿಲ್ಪಗಳೂ, ಶೈವ ದೇವಾಲಯಗಳಲ್ಲಿ ವಿಷ್ಣುವಿನ ವಿವಿಧ ರೂಪಗಳ ಶಿಲ್ಪಗಳೂ ಹೇರಳವಾಗಿ ಕಂಡುಬರುತ್ತವೆ.

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳನ್ನು ಅಧ್ಯಯನ ಮಾಡುವಾಗ ದೇವಾಲಯಗಳ ಬದಲಾಗಿ ಮೂರ್ತಿಗಳನ್ನು ಪ್ರತ್ಯೇಕವಾಗಿ ಗಮನಿಸುವುದು ಸೂಕ್ತವಾಗಿದೆ. ಶೈವ ಶಿಲ್ಪಗಳಲ್ಲಿ ಮುಖ್ಯವಾಗಿ ಕಂಡುಬರುವ ಶಿಲ್ಪಗಳು–ನಟರಾಜ, ಹರಿಹರ, ಶಿವಪಾರ್ವತಿಯರ ಶಿಲ್ಪ, ಅರ್ಧನಾರೀಶ್ವರ, ಉಮಾಮಹೇಶ್ವರ, ಗಜಾಸುರ ಸಂಹಾರಕಮೂರ್ತಿ, ತ್ರಿಪುರಾಂತಕ ಶಿವ, ಅಂಧಕಾಸುರ ಸಂಹಾರಕ ಶಿವ, ಭೈರವಮೂರ್ತಿ, ಭಿಕ್ಷಾಟನ ಮೂರ್ತಿ, ಗಂಗಾಧರಮೂರ್ತಿ, ಲಕುಲೀಶ ಇತ್ಯಾದಿ ಶಿಲ್ಪಗಳನ್ನು ಗಮನಿಸಬಹುದು. ಇದಲ್ಲದೆ ಮಹಾಕೂಟೇಶ್ವರದಲ್ಲಿ ಬಹು ಅಪರೂಪವಾದ ಊರ್ಧ್ವರೇತೇಶ್ವರ ಎಂಬ ಇನ್ನೊಂದು ಶಿಲ್ಪವನ್ನೂ ನೋಡಬಹುದು.

ಈ ಮೇಲೆ ಹೇಳಲಾದ ಎಲ್ಲ ಶಿಲ್ಪಗಳು ಶಿವನಿಗೆ ಸಂಬಂಧಿಸಿದ ಶಿಲ್ಪಗಳಾದರೆ ಇನ್ನೂ ಹಲವಾರು ಶಿಲ್ಪಗಳು ಶಿವನದಲ್ಲದಿದ್ದರೂ ಶೈವ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳಾಗಿವೆ. ಅವುಗಳೆಂದರೆ ಭೃಂಗಿ, ನಂದಿ, ಕಾರ್ತಿಕೇಯ, ಗಣಪತಿ, ಪಾರ್ವತಿ....... ಹೀಗೆ ಇನ್ನೂ ಹಲವಾರು ಶಿಲ್ಪಗಳು ಕಂಡುಬರುತ್ತವೆ. ಈ ಕಾಲಘಟ್ಟದಲ್ಲಿ ಶಿಲ್ಪಗಳು ವಿಭಿನ್ನ ರೀತಿಯಲ್ಲಿ ರಚನೆಯಾಗಿದ್ದು, ಅಂತಹ ಶಿಲ್ಪಗಳನ್ನು ಈ ಕೆಳಗೆ ವಿವರಿಸಲಾಗಿದೆ.

ನಟರಾಜ

ಭರತನ ನಾಟ್ಯಶಾಸ್ತ್ರ ಸಂಪ್ರದಾಯವನ್ನು ಆಧರಿಸಿ ಚಾಲುಕ್ಯ ಶಿಲ್ಪಿಗಳು ದೇವಾಲಯಗಳಲ್ಲಿ ಊರ್ಧ್ವಜಾನು, ಚತುರ, ಅರ್ಧಮತ್ತಲಿ, ರೇಚಿತ, ನಿಕುಟ್ಟಿತ, ಅರ್ಧಸೂಚಿ, ಪೃಷ್ಠಸ್ವಸ್ತಿಕ ಮುಂತಾದ ಕರ್ಣಗಳಲ್ಲಿ ನಾಟ್ಯಶಿವನ ಶಿಲ್ಪಗಳನ್ನು ಕಲಾತ್ಮಕವಾಗಿ ರಚಿಸಿದ್ದಾರೆ.[೧೯] ಕ್ರಿ.ಶ. ೫೫೦ರಿಂದ ೫೭೮ರಲ್ಲಿ ನಿರ್ಮಿತವಾಗಿರಬಹುದಾದ ಬಾದಾಮಿಯ ಒಂದನೆಯ ಗುಹೆಯ ಬಲಭಾಗಕ್ಕೆ ಸುಮಾರು ೫ ಅಡಿ ಎತ್ತರದ ಹದಿನೆಂಟು ಕೈಗಳುಳ್ಳ 'ಮಹಾನಟನನ್ನು' ಆಯತಾಕಾರದ

೧೯. ಡಾ. ಅಂಬಳಿಕೆ ಹಿರಿಯಣ್ಣ (ಸಂ.) : ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ – ೩೯೧



ಪದ್ಮಪೀಠದ ಮೇಲೆ ನರ್ತಿಸುತ್ತಿರುವಂತೆ ಕೆತ್ತಲಾಗಿದೆ. ಶಿವನ ಹದಿನೆಂಟು ಕೈಗಳಲ್ಲಿ ಕ್ರಮವಾಗಿ (ಎಡ+ಬಲಕ್ಕೆ) ಮೂರು ಹಸ್ತಗಳಲ್ಲಿ ಆಯುಧಗಳನ್ನು ಮೇಲಿನ ಎರಡು ಹಸ್ತಗಳಲ್ಲಿ ಸರ್ಪವನ್ನು ೪+೪=೮ ಹಸ್ತಗಳಿಂದ 'ಕರಣ'ಗಳನ್ನು ಮಾಡುತ್ತಿರುವಂತೆ ಶಿಲ್ಪಿಯು ಚಿತ್ರಿಸಿದ್ದಾನೆ. ಬಲಗಾಲು ಪಾರ್ಶ್ವಪಾದದಲ್ಲಿ, ಎಡಗಾಲು ಸೂಚೀಪಾದದಲ್ಲಿ ಹಾಗೂ ಬಲಭಾಗದ ಕಟಿಯು ಉದ್ವಾಹಿತ ಕಟಿಯೊಂದಿಗೆ ತ್ರಿಭಂಗಿಯಲ್ಲಿದೆ.[೧೦] ಸಣ್ಣ ಮತ್ತು ಮಧ್ಯಮ ಗಾತ್ರದ ಶಿಲ್ಪಗಳಲ್ಲದೆ ಬೃಹತ್ ಗಾತ್ರದ ನಟರಾಜ ಶಿಲ್ಪಗಳು ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚನೆಯಾಗಿವೆ. ಗುಹಾಲಯದ ಗೋಡೆಗಳಲ್ಲಿ, ರಾಚನಿಕ ದೇವಾಲಯದ ಭಿತ್ತಿಗಳಲ್ಲಿ, ಮೇಲ್ಛಾವಣಿಗಳಲ್ಲಿ, ಸುಖನಾಸಿಗಳಲ್ಲಿ ಅನೇಕ ನಟರಾಜ ಶಿಲ್ಪಗಳು ಕಂಡುಬರುತ್ತವೆ.

ಶಿಲ್ಪ –೧

ಬಾದಾಮಿಯ ಒಂದನೆಯ ಗುಹಾಲಯದ ನಟರಾಜ ಶಿಲ್ಪವು ೬ನೇ ಶತಮಾನದ ಚಾಲುಕ್ಯ ಶಿಲ್ಪಶೈಲಿಯ ಮೇರುಕೃತಿಗಳ ಅಗ್ರಪಂಕ್ತಿಯಲ್ಲಿ ಬಾದಾಮಿಯ ನಟೇಶ ಶಿಲ್ಪವು ಮೆರೆಯುತ್ತದೆ. ಬಾದಾಮಿಯ ನಾಲ್ಕು ಗುಹಾಂತರ ರಚನೆಗಳಲ್ಲಿ ಮೊಟ್ಟ ಮೊದಲ ಶಿಲ್ಪ ಇದಾಗಿದೆ. ಭಾರತೀಯ ಚಾರಿತ್ರಿಕ ಆಧಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನಾಟ್ಯಾಗಮವನ್ನು ಸಮಗ್ರವಾಗಿ ರೂಪಿಸಿರುವ ಪೂರ್ಣ ಪ್ರಮಾಣದ ನಟೇಶನ ಶಿಲ್ಪವು ಮೊದಲ ಉದಾಹರಣೆಯಾಗಿ ನಿಲ್ಲುತ್ತದೆ.[೧೧] ತ್ರಿಭಂಗಿಯಲ್ಲಿ ನಾಟ್ಯ ಮಾಡುತ್ತಿರುವ ನಟರಾಜನ ಶಿಲ್ಪವನ್ನು ಮೊದಲನೆ ಶೈವ ಗುಹೆಯಲ್ಲಿ ನೋಡಬಹುದಾಗಿದೆ.

ಆಯತಾಕಾರದ ಸಂಯೋಜನೆಯನ್ನು ಹೊಂದಿರುವ ಈ ನಟರಾಜನ ಶಿಲ್ಪದಲ್ಲಿ ಹದಿನೆಂಟು ಬಾಹುಗಳುಳ್ಳ ಈತನು ಕೈಗಳಲ್ಲಿ ಹಾವು, ಡಮರು, ತಂತಿವಾದ್ಯ, ತ್ರಿಶೂಲ, ಪರಶು ಮುಂತಾದವುಗಳನ್ನು ಹಿಡಿದಿದ್ದು, ಪೀಠದ ಮೇಲೆ ತನ್ನ ಬಲಗಾಲನ್ನು ಊರಿ ಎಡಗಾಲಿನ ಹಿಮ್ಮಡವನ್ನು ಮೇಲಕ್ಕೆತ್ತಿ ಮೈಮಣಿಸಿ ಕುಣಿಯುತ್ತಿದ್ದಾನೆ. ಎಡಗಡೆ ನಿಂತಿರುವ ಗಣಪತಿ ಸಹ ನರ್ತಿಸುತ್ತಿರುವ ಹಾಗೆ ಕಂಡುಬರುತ್ತದೆ. ಗಣಪತಿಯ ಹಿಂದೆ ಮದ್ದಲೆಕಾರನೊಬ್ಬ ಮೃದಂಗವನ್ನು ನುಡಿಸುತ್ತಿದ್ದಾನೆ.[೧೨] ನಟರಾಜನ ತಲೆಯ ಹಿಂಭಾಗದಲ್ಲಿ ಪ್ರಭಾಚಕ್ರವನ್ನು ಹೊಂದಿ ಆಯತಾಕಾರದ ಪದ್ಮಪೀಠದ ಮೇಲೆ ನಿಂತಿರುವ ಈ ಶಿಲ್ಪಕಲಾಕೃತಿಯ ಎಡ ಭಾಗದಲ್ಲಿ ಬಾಲ ಗಣಪತಿಯು ತಂದೆಯ ನೃತ್ಯಕ್ಕೆ ಹೆಜ್ಜೆ ಹಾಕುತ್ತಾ ಆನಂದಿಸುತ್ತಿದ್ದಾನೆ. ಶಿವನ ಬಲಭಾಗದಲ್ಲಿ ನಂದಿಯು ನೃತ್ಯಕ್ಕೆ ಮತ್ತು ಲಯಬದ್ಧವಾದ ತಾಳಕ್ಕೆ ತಲೆದೂಗುತ್ತಿದ್ದಾನೆ. ಜೇಮ್ಸ್ ಫರ್ಗ್ಯೂಸನ್ ತಮ್ಮ 'ಕೇವ್ ಟೆಂಪಲ್ಸ್ ಆಫ್ ಇಂಡಿಯಾ' ಗ್ರಂಥದಲ್ಲಿ ವಾದ್ಯಕಾರನನ್ನು

---

೧೦. ಎಂ.ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ(ಸಂ.) : ಇತಿಹಾಸ ದರ್ಶನ, ಸಂ–೧೯, ಪುಟ – ೧೧೫

೧೧. ಡಾ. ಚೂಡಾಮಣಿ ನಂದಗೋಪಾಲ : ಶಿಲೆ–ಕಲೆ, ಪುಟ – ೧೬೫

೧೨. ಡಾ. ಬಾ. ರಾ. ಗೋಪಾಲ : ಕರ್ನಾಟಕದ ಕಲೆಗಳು, ವಾಸ್ತು, ಸಂ–೪, ಪುಟ – ೪೮



ನಾರದ ಎಂದು ಹೇಳುತ್ತಾರೆ.[೧೩] ಬಲಗಾಲು ಪಾರ್ಶ್ವಪಾದದಲ್ಲಿ, ಎಡಗಾಲು ಸೂಚಿಪಾದದಲ್ಲಿ ಹಾಗೂ ಬಲಭಾಗದ ಕಟಿಯು ಉದ್ವಾಹಿತ ಕಟಿಯೊಂದಿಗೆ ತ್ರಿಭಂಗ ಸ್ಥಾನಕದಲ್ಲಿ ನಿಂತಿರುವಂತೆ ಶಿಲ್ಪವನ್ನು ಕೆತ್ತಿದ್ದಾರೆ.

ಸುಂದರವಾಗಿ ಹಾಗೂ ವಿಶೇಷವಾಗಿ ಕಂಡುಬರುವಂತಹ ಜಟಾಮುಕುಟವನ್ನು ಹೊಂದಿರುವ ನಟರಾಜನು ಕತ್ತಿನಲ್ಲಿ ಕಂಠಾಭರಣ, ರುದ್ರಾಕ್ಷಿಮಾಲೆ, ಯಜ್ಞೋಪವೀತವನ್ನು ಧರಿಸಿದ್ದಾನೆ. ಕಟಿಗೆ ಸುಂದರವಾದ ಕಟಿಬಂಧ ಮತ್ತು ಕಟಿಸೂತ್ರವನ್ನು ಧರಿಸಿದ್ದಾನೆ. ಮಧ್ಯದಲ್ಲಿ ಉದರಸೂತ್ರವು ಶಿಲ್ಪದ ಮಧ್ಯರೇಖೆಯಾಗಿ ಕೆಳಗೆ ಇಳಿಬಿದ್ದುದನ್ನು ಕಾಣಬಹುದು. ಇಲ್ಲಿ ಶಿಲ್ಪಿಯು ಉದರಸೂತ್ರವನ್ನೇ ಶಿಲ್ಪದ ಮಧ್ಯರೇಖೆಯಾಗಿ ಬಳಸಿಕೊಳ್ಳುವ ಜಾಣತನವನ್ನು ಮೆಚ್ಚಬೇಕಾಗುತ್ತದೆ. ಸಾಂಪ್ರದಾಯಿಕ ಶಿಲ್ಪಿಗಳು ಸಾಮಾನ್ಯವಾಗಿ ಶಿಲ್ಪಗಳಲ್ಲಿ ಮಧ್ಯರೇಖೆಯಾಗಿ ಇನ್ನೊಂದು ಕಲ್ಲನ್ನು ಆಧಾರವಾಗಿ ಉಪಯೋಗಿಸುವಾಗ ಇದು ಶಿಲ್ಪಕ್ಕೆ ಪೂರಕವಾಗುವಂತೆ ಉಪಯೋಗಿಸುವ ಜಾಣ್ಮೆಯನ್ನು ಪ್ರದರ್ಶಿಸುತ್ತಿದ್ದರು. ಎಲ್ಲ ಹದಿನೆಂಟು ಕೈಗಳಿಗೂ ಕಡಗಗಳನ್ನು ಧರಿಸಿದ್ದಾನೆ. ಎಡತೋಳುಗಳಲ್ಲಿ ತೋಳಬಂದಿ[೧೪]ಗಳಿವೆ. ಒಟ್ಟಾರೆ ಈ ಶಿಲ್ಪದ ವಸ್ತ್ರ ವಿನ್ಯಾಸವು ಅತ್ಯಂತ ಸರಳ ವಿನ್ಯಾಸದಿಂದ ಕೂಡಿದೆ.

ಶಿವನು ಎಡಭಾಗದ ವಿವಿಧ ಕೈಗಳಲ್ಲಿ ತ್ರಿಶೂಲ, ರುದ್ರವೀಣೆ, ಪಾಶ ಇತ್ಯಾದಿಗಳನ್ನು ಹಿಡಿದಿದ್ದಾನೆ. ಬಲಭಾಗದ ಒಂದು ಕೈಯಲ್ಲಿ ಡಮರುಗವನ್ನು ಹಿಡಿದಿದ್ದಾನೆ. ಮೇಲಿನ ಕೈಗಳ ಬಲಗೈಯಲ್ಲಿ ಹಾವಿನ ತಲೆಯನ್ನು ಹಿಡಿದಿದ್ದರೆ ಬಾಲವನ್ನು ಎಡಗೈಯಲ್ಲಿ ಎತ್ತಿಹಿಡಿದಿದ್ದಾನೆ. ಉಳಿದ ಕೈಗಳು ತಾಳಕ್ಕೆ ತಕ್ಕಂತೆ ವಿವಿಧ ಮುದ್ರೆಗಳನ್ನು ಪ್ರದರ್ಶಿಸುತ್ತಿವೆ. ಎಲ್ಲಾ ಕೈಗಳಲ್ಲಿ ಆಭರಣಗಳಿದ್ದು ಸರಳವಾಗಿವೆ. ಕೈಗಳ ಭಂಗಿಯು ಶಿಲ್ಪದಲ್ಲಿ ಚಲನೆಯ ಭಾವನೆಯನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದೆ. ದೇಹದ ಬಾಗು ಮತ್ತು ಮುದ್ರೆಗಳು ಮಯೂರ ನೃತ್ಯದ ಭಂಗಿಯನ್ನು ಸೂಚಿಸುತ್ತವೆ. ಅಂಗಾಂಗಗಳು ಪ್ರಮಾಣಬದ್ಧವಾಗಿದ್ದು, ಲಯಬದ್ಧವಾದ ನರ್ತನವನ್ನು ಪ್ರದರ್ಶಿಸುತ್ತಿವೆ. ದೇಹದಲ್ಲಿನ ಸರಳ ಆಭರಣಗಳು ಮತ್ತು ಜಟಾಮುಕುಟವು ಶಿವನ ನಿರಾಡಂಬರ ಮತ್ತು ಸರಳತೆಯನ್ನು ವ್ಯಕ್ತಪಡಿಸಿದರೆ ನೃತ್ಯಭಂಗಿಯು ನಾಟ್ಯದಲ್ಲಿನ ತಲ್ಲೀನತೆಯನ್ನು ವ್ಯಕ್ತಪಡಿಸುತ್ತದೆ. ತೋಳುಗಳು ಮತ್ತು ತೊಡೆಗಳು ನೀಳವಾಗಿದ್ದು ಉತ್ತಮ ದಶತಾಳದ ಮಾದರಿಯ ಶಿಲ್ಪವಾಗಿದೆ.

ಬಾದಾಮಿಯ ನಟರಾಜ ಶಿಲ್ಪದ ಕುರಿತು ಹಲವಾರು ವಿದ್ವಾಂಸರು ಹಲವಾರು ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಇವರಲ್ಲಿ ಟಿ.ಎ.ಗೋಪಿನಾಥ ರಾವ್ ಮುಖ್ಯರು. ಇವರ ಭಾರತೀಯ ಶಿಲ್ಪ ಶಾಸ್ತ್ರದ ಕುರಿತಾದ 'ಎಲಿಮೆಂಟ್ಸ್ ಆಫ್ ಹಿಂದು ಐಕೋನೊಗ್ರಫಿ'[೧೫] ಗ್ರಂಥವು ಹಿಂದು ಶಿಲ್ಪ

೧೩. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೭೭

೧೪. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೭೭

೧೫. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೭೮

ಶಾಸ್ತ್ರದ ಕುರಿತಾದ ಹಲವಾರು ವಿವರಗಳನ್ನು ನೀಡುತ್ತದೆ. ಇದರಂತೆ 'ಅಲೈಸ್ ಬೋನರ್' ಎಂಬ ಸಂಶೋಧಕರು ತಮ್ಮ 'ಟೈಮ್ ಅಂಡ್ ಸ್ಪೇಸ್' ಎಂಬ ತತ್ವದಲ್ಲಿ ಅನೇಕ ಹೊಸ ವಿಚಾರಗಳನ್ನು ಹೇಳಿದ್ದರೂ ಕೆಲವು ಮುಖ್ಯ ದೋಷಗಳು ಕಂಡುಬರುತ್ತವೆ. ಮೊದಲನೆಯದಾಗಿ ಶಿಲ್ಪದಲ್ಲಿ ಶಿವನಿಗೆ 'ಹದಿನೇಳು ಕೈಗಳಿವೆ' ಎಂದು, ಶಿವನು ತನ್ನ ಎಡಕೈಯಲ್ಲಿ ಪರಶುವನ್ನು ಹಿಡಿದಿರುವುದಾಗಿ ತಿಳಿಸುತ್ತಾರೆ. ಶ್ರೀ ಟಿ.ಎ. ಗೋಪಿನಾಥ ರಾವ್ ಅವರೂ ಸಹ ಇದನ್ನು 'ಪಾಶ' ಅಸ್ತ್ರ ಎಂದು ತಿಳಿಸುತ್ತಾರೆ.[೧೬] ಶ್ರೀ ಸೀ.ಬಿ.ಸೀತಾರಾಂ ಅವರು ಬಾದಾಮಿಯ ನಟರಾಜನ ಕುರಿತಾಗಿ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನವನ್ನು ನೀಡಿದ್ದಾರೆ. ಇವರೂ ತಮ್ಮ ಲೇಖನಕ್ಕೆ ಆಧಾರವಾಗಿ ಶ್ರೀ ಟಿ.ಎ. ಗೋಪಿನಾಥರಾಯರನ್ನೇ ತೆಗೆದುಕೊಂಡಿದ್ದಾರಾದರೂ ಶಿಲ್ಪದ ಕುರಿತಾದ ವಿವರಣೆಯನ್ನು ನೀಡುವಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿರುವುದನ್ನು ಕಾಣಬಹುದು. ಶಿವನು ಷೋಡಶಭುಜಗಳಿಂದ ಪ್ರಕಾಶಿಸುತ್ತಿದ್ದಾನೆ. ಇವುಗಳಲ್ಲಿ ಶೂಲ, ಪರಶು, ನಾಗ ಮುಂತಾದ ಲಾಂಛನಗಳನ್ನು ಧರಿಸಿದ್ದಾನೆ. ಎಡಗೈಗಳಲ್ಲಿ ಒಂದು ಗಜಹಸ್ತ, ಅತ್ಯಂತ ಕೆಳಗಣ ಬಲಗೈ ಚತುರ ಮೂರನೆಯ ಮುಕುಟ ದಿವ್ಯವಾದ 'ಪ್ರಭಾಮಂಡಲ'ದಿಂದ ವಿಲಸಿತವಾಗಿದೆ. ವಾಮಪಾದ ನಿಕುಟ್ಟಿತ ಭಂಗಿಯಲ್ಲಿದೆ. ಶಿವನ ಹಿಂದೆ ಅವನ ವಾಹನವಾದ ವೃಷಭವಿದೆ. ಎಡಪಾರ್ಶ್ವದಲ್ಲಿ ಗಣೇಶನು ನರ್ತಿಸುವ ಭಾವದಲ್ಲಿದ್ದಾನೆ. ಅವನ ಎಡಭಾಗದಲ್ಲಿ ಭೇರಿಯನ್ನು ಪ್ರಾಯಶಃ ನಂದೀಶ್ವರನು ಧ್ವನಿಗೈಯುತ್ತಿದ್ದಾನೆ.[೧೭] ಆದರೆ ಈ ಶಿಲ್ಪದಲ್ಲಿ ಕಂಡುಬರುವ ಈ ವಾದ್ಯಗಾರನನ್ನು ಕುರಿತು ವಿಭಿನ್ನ ಅಭಿಪ್ರಾಯಗಳಿವೆ.

ಸೀತಾರಾಂ ಅವರು ಇದು ನಂದೀಶ್ವರನ ಶಿಲ್ಪವೆಂದರೆ ಡಾ. ಕರುಣಾ ವಿಜಯೇಂದ್ರರವರು ಇದು ಒಬ್ಬ ಪುರುಷನ ಶಿಲ್ಪವೆಂದಷ್ಟೇ ಹೇಳುತ್ತಾರೆ. ಮಹಾನಟನ ಹಿಂಬದಿಯಲ್ಲಿ ನಂದಿಯೂ ಎಡಭಾಗದಲ್ಲಿ ಕೆಳಗಡೆ ಗಜಮುಖ ಗಣಪತಿಯು ನರ್ತನದಲ್ಲಿಯೂ (ಕರಿಹಸ್ತಕರಣ) ಹಾಗೂ ಒಬ್ಬ ಪುರುಷನು 'ಊರ್ಧ್ವಕ' ಎಂಬ ಚಲುಕ್ಯರ ಕಾಲದ ಅವನದ್ಧ ವಾದ್ಯವನ್ನು ನುಡಿಸುತ್ತಿದ್ದಾನೆ.[೧೮] ಶತಾವಧಾನಿ ಆರ್. ಗಣೇಶ ಅವರು "ನಾರದಮುನಿಯು ವೈಣಿಕ ಕಲಾವಿದ. ಇಲ್ಲಿ ಪುರುಷನಿಗೆ ಸುಂದರವಾದ ಕೇಶವಿನ್ಯಾಸವಿದೆ. ಭೃಂಗಿ ಅಥವಾ ನಾರದಮುನಿಗೆ ಇರಬೇಕಾಗಿದ್ದ ಜಟಾಮುಕುಟವಿಲ್ಲ. ಪೌರಾಣಿಕವಾಗಿ ಶಿವನ ತಾಂಡವನೃತ್ಯಕ್ಕೆ ವಿಷ್ಣು ಮದ್ದಳೆ ನುಡಿಸಿದ ಆಧಾರಗಳು ದೊರೆಯುತ್ತವೆ. ಆದ್ದರಿಂದ ಈತನು ವಿಷ್ಣುವಾಗಿರಬೇಕು" ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.[೧೯]

---

೧೬. ಎಂ.ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ(ಸಂ.) : ಇತಿಹಾಸ ದರ್ಶನ, ಸಂ–೧೯, ಪುಟ – ೧೧೪

೧೭. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ) : ಶಿಲ್ಪಕಲಾ ಪ್ರಪಂಚ, ಪುಟ –೨೭೩–೨೭೪

೧೮. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೮೭

೧೯. ಎಂಜಿ. ನಾಗರಾಜ, ಡಾ.ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ, ಸಂ – ೧೯, ಪುಟ – ೧೧೬



ಶಿಲ್ಪ –೨

ಬಾದಾಮಿಯ ಚಾಲುಕ್ಯರ ಕಾಲದ ನಟರಾಜ ಶಿಲ್ಪಗಳಲ್ಲಿ ಇನ್ನೊಂದು ಮಹತ್ವದ ಶಿಲ್ಪ ಐಹೊಳೆಯ ರಾವಳಫಡಿ ಗುಹಾಲಯದಲ್ಲಿರುವ ನಟರಾಜ ಶಿಲ್ಪ. ಇದರ ಕಾಲಮಾನದ ಬಗ್ಗೆ ಇತಿಹಾಸಕಾರರು ವಿಭಿನ್ನ ಅಭಿಪ್ರಾಯವನ್ನು ಹೊಂದಿದ್ದಾರೆ. ಕೆಲವು ಇತಿಹಾಸಕಾರರು ಇದರ ರಚನೆ ಬಾದಾಮಿ ಗುಹಾಲಯದ ನಂತರದ ರಚನೆ ಎಂದರೆ, ಕೆಲವರು ಇದು ಪೂರ್ವ ಚಾಲುಕ್ಯರ ಕಾಲದ ಮೊದಲ ಶಿಲ್ಪವೆಂದಿದ್ದಾರೆ. ಆದರೆ ಇದರ ರಚನೆಯನ್ನು ನೋಡಿದರೆ ಶಿಲ್ಪಗಳ ಗುಣಲಕ್ಷಣಗಳನ್ನು ನೋಡಿದರೆ ಈ ಗುಹಾಲಯವು ಬಾದಾಮಿಯ ಗುಹಾಲಯಕ್ಕಿಂತ ಪೂರ್ವದ್ದು ಎಂದು ತಿಳಿಯುತ್ತದೆ.

ಬಹುಶಃ ಈ ಶಿಲ್ಪವು ಅಂದಿನ ಕಲಾವಿದರಿಗೆ ಬಾದಾಮಿಯಲ್ಲಿನ ಬೃಹತ್ ಗಾತ್ರದ ಶಿಲ್ಪ ರಚನೆಗೆ ಸ್ಫೂರ್ತಿಯಾಗಿರಬಹುದು. ಶಿಲ್ಪದ ಲಕ್ಷಣಗಳನ್ನು ನೋಡಿದರೆ ಈ ಅಂಶ ಮನದಟ್ಟಾಗುತ್ತದೆ. ಶಿಲ್ಪವು ಬಾದಾಮಿಯ ನಟರಾಜನಿಗಿಂತ ದೊಡ್ಡದಾಗಿದ್ದು ಪ್ರಾಯೋಗಿಕವಾಗಿದ್ದಂತೆ ಕಂಡುಬರುತ್ತದೆ. ಈ ಶಿಲ್ಪವು ಸೌಂದರ್ಯದ ದೃಷ್ಟಿಯಿಂದ ನೋಡಿದರೆ ಬಾದಾಮಿಯ ಶಿಲ್ಪದಷ್ಟು ಆಕರ್ಷಕವಾಗಿಲ್ಲ. ಆಕಾರದಲ್ಲಿಯೂ ದೊಡ್ಡದಾಗಿದೆ. ಇಲ್ಲಿರುವ ಇತರ ಶಿಲ್ಪಗಳನ್ನು ನೋಡಿದಾಗಲೂ ಈ ಅನುಭವವಾಗುತ್ತದೆ. ಇದಕ್ಕೆ ಇನ್ನೊಂದು ಕಾರಣವನ್ನು ಹೇಳಬಹುದು. ಐಹೊಳೆಯ ಗುಡ್ಡದಲ್ಲಿನ ಬಂಡೆಯು ಬಾದಾಮಿಯ ಬಂಡೆಯಷ್ಟು ಎತ್ತರವಾಗಿಲ್ಲ. ಅವಕಾಶವು ಕಡಿಮೆಯಿತ್ತು. ಇದರಿಂದಾಗಿ ಶಿಲ್ಪಿಗಳು ಲಭ್ಯವಿರುವ ಬಂಡೆಯಲ್ಲಿಯೇ ಸಣ್ಣ ಗಾತ್ರದ ಗುಹಾಲಯವನ್ನು ಕೆತ್ತಿರಬಹುದು.

ಉತ್ತರ ಭಾರತದ ಕೆಲವಡೆ ಗುಪ್ತರ ಕಾಲದಲ್ಲಿ ಇಂತಹ ಕೆತ್ತನೆಗಳ ರಚನೆಯನ್ನು ಕಾಣಬಹುದು. ದಕ್ಷಿಣ ಭಾರತದಲ್ಲಿ ಈ ರೀತಿಯ ಗುಹಾಲಯಗಳು ಕಂಡುಬರುವುದಿಲ್ಲ. ಇಲ್ಲಿಯೂ ಅಂತಹ ಶಿಲ್ಪಗಳನ್ನು ರಚಿಸಲು ಪ್ರಾರಂಭದ ದಿನಗಳಲ್ಲಿ ಚಾಲುಕ್ಯ ಕಲಾವಿದರು ಪ್ರಯತ್ನಿಸಿರಬಹುದು. ಇದರ ಯಶಸ್ಸಿನಿಂದ ಮುಂದೆ ಬಾದಾಮಿಯಲ್ಲಿ ಬೃಹತ್ ಗಾತ್ರದ ಬಂಡೆಯನ್ನು ಕಡೆದು ಶಿಲ್ಪ ರಚಿಸಲು ಇದು ಕಾರಣವಾಗಿದ್ದರೆ ಆಶ್ಚರ್ಯವಿಲ್ಲ.

ಐಹೊಳೆಯ ರಾವಳಫಡಿ ಗುಹೆಯಲ್ಲಿರುವ ಶಿಲ್ಪಗಳು ಅಮೋಘವಾದವು. ಅಲ್ಲಿ ನಟರಾಜ ವಿಗ್ರಹಕ್ಕೆ ಹತ್ತು ಕೈಗಳಿರುವುದಾದರೂ ಹಿಂದಿನ ಕೈಗಳು ಪರದೆಯ ಮೇಲಿನ ಹಾರಗಳು ಎಂದು ಕಾಣುವಂತೆ ಮಾಡಿ ದೇವರನ್ನು ಅಷ್ಟೇ ಪ್ರಧಾನವಾಗಿ ತೋರಿಸಿರುವ ಜಾಣ್ಮೆ ಕಂಡುಬರುತ್ತಿದ್ದು, ವಿಗ್ರಹದ ಅಂಗಾಂಗಗಳ ಸಹಜ ಪ್ರಮಾಣ, ನೃತ್ಯಭಂಗಿಗೆ ಸಹಜವಾದ ಮೈಬಾಗುಗಳು, ಮುಖದಲ್ಲಿ ಎದ್ದು ಕಾಣುವ ಭಾವತನ್ಮಯತೆ ಇವೆಲ್ಲವೂ ಮೂರ್ತಿಯ ಕಳೆಯನ್ನು ಹೆಚ್ಚಿಸಿವೆ.[೨೦] ಇಂದಿನ ಆಂಧ್ರಪ್ರದೇಶದ ಅನಂತಪುರ ಸಮೀಪವಿರುವ ಆಲಂಪುರದ ಕೂಡುವೇಲಿ ಸಂಗಮೇಶ್ವರ ದೇವಾಲಯದ ದೇವಕೋಷ್ಟದಲ್ಲಿ, ಬಾಲಬ್ರಹ್ಮ ಗುಡಿಯ ಛತ್ತಿನಲ್ಲಿ

೨೦. ಡಾ. ಅರವಿಂದ ಮಾಲಗತ್ತಿ (ಪ್ರಸಂ.) : ಕನ್ನಡ ವಿಶ್ವಕೋಶ ಕರ್ನಾಟಕ ಸಂ–೧, ಪುಟ – ೯೨೫

ಅಷ್ಟಭುಜ ನಟರಾಜನ ಶಿಲ್ಪಗಳಿವೆ. ಪಟ್ಟದಕಲ್ಲಿನಲ್ಲಿ ಶಿವನ ನಟರಾಜ ಭಂಗಿಯ ಹಲವಾರು ಶಿಲ್ಪಗಳು ಕಂಡುಬರುತ್ತವೆ. ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯ ಹೊರಭಿತ್ತಿಯಲ್ಲಿ ಶಿವನು ನಟರಾಜನಾಗಿ ನಾಟ್ಯ ಮಾಡುತ್ತಿರುವ ಶಿಲ್ಪವಿದೆ. ಇದು ಚತುರ್ಭುಜಗಳನ್ನು ಹೊಂದಿದೆ. ಇಲ್ಲಿನ ಪಾಪನಾಥ ದೇವಾಲಯದಲ್ಲಿ ಅದರ ಮಂಟಪದ ಛತ್ತಿನಲ್ಲಿ, ದಕ್ಷಿಣ ಅರ್ಧಮಂಟಪದಲ್ಲಿ, ಪಶ್ಚಿಮದ ಹೊರಭಿತ್ತಿಯಲ್ಲಿ, ಸುಕನಾಸಿಯಲ್ಲಿ ನಟರಾಜನ ಶಿಲ್ಪಗಳಿವೆ.[೨೧]

ಶಿಲ್ಪ –೩

ಪಟ್ಟದಕಲ್ಲಿನ ಕಾಶೀವಿಶ್ವೇಶ್ವರ ದೇವಾಲಯದಲ್ಲಿ ಎಡಕಂಬದ ಮೇಲೆ ಶಿವನು ನಟರಾಜನಾಗಿ ನೃತ್ಯ ಮಾಡುತ್ತಿರುವ, ಸಣ್ಣದಾದರೂ ಸುಂದರವಾದ ಶಿಲ್ಪವಿದೆ. ಈ ಶಿಲ್ಪದ ಸೂಕ್ಷ್ಮವಾದ ವಿವರಗಳು ಸವೆದುಹೋಗಿದ್ದರೂ ಶಿಲ್ಪದ ಸೌಂದರ್ಯವನ್ನು ಗಮನಿಸಲು ಯಾವುದೇ ತೊಂದರೆ ಇಲ್ಲ. ಇದೇ ದೇವಾಲಯದ ಛತ್ತಿನಲ್ಲಿ ಇನ್ನೊಂದು ಸುಂದರವಾದ ನಟರಾಜನ ಶಿಲ್ಪವಿದೆ. ಇದರ ವಿವರಗಳು ನಶಿಸಿಹೋಗಿವೆಯಾದರೂ ಶಿಲ್ಪದಲ್ಲಿನ ಕೆತ್ತನೆಯನ್ನು ಗಮನಿಸಬಹುದಾಗಿದೆ.

ಶಿಲ್ಪ –೪

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಹೊರಗಿನ ಹಿಂಬಾಗಿಲಲ್ಲಿ ಒಂದು ಸುಂದರವಾದ ನಟರಾಜನ ಶಿಲ್ಪವಿದೆ. ಇದು ಅಷ್ಟಭುಜ ನಟರಾಜ ಶಿಲ್ಪವಾಗಿದ್ದು, ಬಲಗಾಲನ್ನು ನೆಲಕ್ಕೆ ಊರಿದ್ದು, ಎಡಗಾಲಿನ ತುದಿಯನ್ನು ನೆಲಕ್ಕೆ ಊರಿ ತಲ್ಲೀನವಾದ ರೀತಿಯಲ್ಲಿ ಕೆತ್ತಲಾಗಿದೆ. ಶಿವನು ಹಸನ್ಮುಖನಾಗಿದ್ದು ನಾಟ್ಯವನ್ನು ಆನಂದಿಸುತ್ತಿದ್ದಾನೆ. ಒಂದು ಎಡಕೈಯನ್ನು ಕಟಿಪ್ರದೇಶದ ಮೇಲಿರಿಸಿದ್ದು, ಬಲಗೈ ಶುಕತುಂಡ ಮುದ್ರೆಯಲ್ಲಿದೆ. ಹಿಂದಿನ ಕೈಯಲ್ಲಿ ಚಪ್ಪೆಕೊಡಲಿಯನ್ನು ಹಿಡಿದಿದ್ದಾನೆ. ಶಿಲ್ಪದ ಬಹಳಷ್ಟು ಭಾಗಗಳು ಭಗ್ನವಾಗಿವೆಯಾದರೂ ಶಿವನ ಮುಖಭಾವ ಮತ್ತು ನಿಂತ ನಿಲುವಿನ ಭಂಗಿಯ ಮೂಲಕ ಶಿಲ್ಪದ ನೋಟ ಸಾಧ್ಯವಾಗಿದೆ. ಇಲ್ಲಿ ನಟರಾಜನ ಕಾಲಡಿಯಲ್ಲಿ ಅಪಸ್ಮಾರ ಇಲ್ಲ. ಆದರೆ ಶಿವನ ಎಡಭಾಗದಲ್ಲಿ ಕೆಳಗೆ ಗಣಶಿಲ್ಪವೊಂದು ಕೈಮುಗಿದುಕೊಂಡು ನಿಂತಿದೆ. ಆದರೆ ಶಿಲ್ಪವು ಮಾಸಿಹೋಗಿರುವುದರಿಂದ ಶಿಲ್ಪದ ವಿವರಗಳು ಕಾಣಿಸುವುದಿಲ್ಲ.

ಶಿಲ್ಪ –೫

ಪಟ್ಟದಕಲ್ಲು ಕಾಶೀವಿಶ್ವೇಶ್ವರ ದೇವಾಲಯದಲ್ಲಿ ಇನ್ನೊಂದು ಗಮನಾರ್ಹ ಅಂಶವೆಂದರೆ ಶಿವನ ಬಲಭಾಗದಲ್ಲಿ ಸಣ್ಣದೊಂದು ಶಿಲ್ಪದ ತುಣುಕು ಕಂಡುಬರುತ್ತದೆ. ಇದು ಗಣಪತಿಯ ಶಿಲ್ಪದಂತಿದೆ. ಬಹುಶಃ ಗಣಪತಿಯು ನಟರಾಜನ ನೃತ್ಯವನ್ನು ನೋಡುತ್ತಾ ಆನಂದಿಸುತ್ತಿರುವ ಭಂಗಿ ಇದು. ಬಾದಾಮಿಯಲ್ಲಿ ಕೂಡಾ ನಟರಾಜನ ಪಕ್ಕದಲ್ಲಿ ಗಣಪತಿಯು ಇದ್ದುದನ್ನು

೨೧. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೧–೩೨

ನೋಡಿದರೆ ಇದು ಗಣಪತಿಯ ಶಿಲ್ಪವೇ ಆಗಿದೆ ಎನ್ನಬಹುದು. ಆದರೆ ಶಿಲ್ಪವು ಬಹುಪಾಲು ಸವೆದು ಹೋಗಿರುವುದರಿಂದ ವಿವರಗಳು ಲಭ್ಯವಾಗುವುದಿಲ್ಲ. ಆದರೂ ಲಭ್ಯ ಅವಕಾಶದಲ್ಲಿ ಶಿಲ್ಪಿಯು ನಟರಾಜನ ಶಿಲ್ಪವನ್ನು ಸಂಯೋಜಿಸಿದ ರೀತಿ ಗಮನಾರ್ಹವಾಗಿದೆ.

ಇಲ್ಲಿ ಶಿಲ್ಪದ ಸುತ್ತಲೂ ವೃತ್ತವನ್ನು ಕೆತ್ತಿರುವ ರೀತಿಯಿಂದ ಒಟ್ಟು ಶಿಲ್ಪಕ್ಕೆ ಚಲನೆಯ ಅನುಭವವನ್ನು ನೀಡುವುದರಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆ. ಇಲ್ಲಿನ ಗಳಗನಾಥ ದೇವಾಲಯದ ಬಾಗಿಲಿನಲ್ಲಿ ನಟರಾಜನ ಒಂದು ಶಿಲ್ಪವಿದೆ. ಇದು ಕೂಡಾ ಭಗ್ನ ಶಿಲ್ಪವಾಗಿದ್ದು, ಶಿಲ್ಪದ ಅಳಿದುಳಿದ ಕುರುಹುಗಳಿಂದಲೆ ಶಿಲ್ಪದ ಸೌಂದರ್ಯವನ್ನು ಗುರುತಿಸಬೇಕಿದೆ. ಇದು ಕೂಡಾ ಕುಬ್ಜಾಕಾರದ ಶಿಲ್ಪವಾಗಿದೆ. ಶಿವನ ಎಡಬಲಗಳಲ್ಲಿ ಇಬ್ಬರು ಗಣಗಳು ಕುಳಿತು ವಾದ್ಯ ನುಡಿಸುತ್ತಿರುವಂತಿದೆ. ಒಂದು ಗಣ ಶಿಲ್ಪದ ಕೈಯಲ್ಲಿ ಕೊಳಲಿನಂತಹ ವಾದ್ಯರಚನೆ ಕಂಡುಬರುತ್ತದೆ.

ಶಿಲ್ಪ –೬

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಹೊರಗೋಡೆಯಲ್ಲಿ ಇರುವ ನಟರಾಜ ಶಿಲ್ಪವು ಗಮನಾರ್ಹವಾಗಿದೆ. ಬೇರೆ ಕಡೆಯಿಂದ ತಂದು ಗೋಡೆಗೆ ಈ ದೊಡ್ಡಗಾತ್ರದ ಶಿಲ್ಪವನ್ನು ನಿಲ್ಲಿಸಿದ್ದು, ಚತುರ್ಭುಜ ಶಿವನು ಅಪಸ್ಮಾರನ ಮೇಲೆ ನಿಂತುಕೊಂಡು ದ್ವಿಭಂಗಿಯಲ್ಲಿ ನಾಟ್ಯವಾಡುತ್ತಿದ್ದಾನೆ. ಶಿವನ ಎಡಗಾಲು ಭಗ್ನಗೊಂಡಿದ್ದು ಯಾವ ಆಸನವೆಂದು ಊಹಿಸಲು ಕಷ್ಟವಾಗುತ್ತದೆ. ಶಿವನು ಎಡಗೈಯಲ್ಲಿ ಹಿಡಿದುಕೊಂಡಿರುವ ತ್ರಿಶೂಲವು ದೊಡ್ಡದಾಗಿದ್ದು ಕಲಾತ್ಮಕವಾಗಿದೆ. ಈ ರೀತಿಯಲ್ಲಿ ಅಲಂಕರಣಗೊಂಡಿರುವ ತ್ರಿಶೂಲದ ರಚನೆಯು ಉಳಿದೆಡೆಗಳಲ್ಲಿ ಕಂಡುಬರುವುದಿಲ್ಲ. ಆಭರಣಗಳು ವಸ್ತ್ರದ ಕಲಾತ್ಮಕ ವಿನ್ಯಾಸ, ನಿಂತ ನಿಲುವು ಇತ್ಯಾದಿಗಳು ಇಲ್ಲಿ ಗಮನಾರ್ಹವಾಗಿವೆ. ಈ ಶಿಲ್ಪವೂ ಭಗ್ನಶಿಲ್ಪವಾಗಿದ್ದು ಅಳಿದುಳಿದ ರಚನೆಯನ್ನು ಗಮನಿಸಿದರೆ ಇದು ಒಂದು ಪರಿಪೂರ್ಣ ನಟರಾಜನ ಶಿಲ್ಪವಾಗಿತ್ತು ಎನ್ನುವುದಕ್ಕೆ ಕುರುಹುಗಳು ಸಿಗುತ್ತವೆ.

ಈ ಶಿಲ್ಪದ ಕಾಲು, ಆಭರಣ ವಿನ್ಯಾಸ, ಆಯುಧಗಳ ವಿನ್ಯಾಸದಲ್ಲಿ ಕಂಡುಬರುವ ಅಲಂಕರಣಗಳು, ಶಿವನ ಹಿಂದುಗಡೆಯಿಂದ ಇಳಿದುಬಂದಿರುವ ಅಂಗವಸ್ತ್ರದ ರಚನೆ, ದಷ್ಟ–ಪುಷ್ಟವಾಗಿರುವ ಅಪಸ್ಮಾರ, ಈ ಶಿಲ್ಪದ ಕೆಳಗಿನ ಪಟ್ಟಿಕೆಯಲ್ಲಿ ತೋರಿಸಿರುವ ನವಿಲಿನ ರೇಖಾವಿನ್ಯಾಸದ ಕೆತ್ತನೆ ಇವುಗಳನ್ನೆಲ್ಲ ಗಮನಿಸಿದರೆ ಈ ಕಾಲಕ್ಕಾಗಲೇ ಚಾಲುಕ್ಯ ಶಿಲ್ಪಿಗಳು ಶಿಲ್ಪಗಳಲ್ಲಿ ಅಂಗಪ್ರಮಾಣ, ಸಹಜತೆಗಳಿಗಿಂತ ಹೆಚ್ಚಾಗಿ ಅಲಂಕರಣ, ಅಸಹಜ ರೇಖಾವಿನ್ಯಾಸ, ಬಾಗುಬಳುಕುಗಳಿಗೆ ಮಹತ್ವ ನೀಡಲು ಪ್ರಾರಂಭ ಮಾಡಿರುವಂತೆ ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ಇದೇ ದೇವಾಲಯದ ಇನ್ನೊಂದು ನಟರಾಜ ಶಿಲ್ಪವನ್ನು ಕೂಡಾ ನೋಡಬಹುದು.

ಶಿಲ್ಪ –೭

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಬಾಗಿಲದ ಬಲಗಡೆಯಲ್ಲಿ ಒಂದು ನಟರಾಜನ



ಶಿಲ್ಪವನ್ನು ನೋಡಬಹುದು. ಈ ಶಿಲ್ಪವು ದುಂಡಗಾಗಿದ್ದು ಕುಬ್ಜವಾಗಿದೆ. ಅಷ್ಟಬಾಹುಗಳ ಈ ಶಿಲ್ಪವು ಅಸಹಜ ತ್ರಿಭಂಗಿಯಲ್ಲಿದೆ. ದಷ್ಟ–ಪುಷ್ಟ ದೇಹ, ದುಂಡಗಾಗಿರುವ ಕೈಕಾಲುಗಳು, ಎಡಬಲಗಳಲ್ಲಿ ಬಾಗಿರುವ ಕಾಲುಗಳು, ಆಕಾರದಲ್ಲಿ ಅಂಗಪ್ರಮಾಣದ ಕೊರತೆಯಿದ್ದು ಶಿಲ್ಪವು ಅಸಹಜತೆಯಿಂದ ಕೂಡಿರುವುದು ಕಂಡುಬರುತ್ತದೆ.

ಅಪಸ್ಮಾರನ ಮೇಲೆ ನಿಂತು ಕುಣಿಯುತ್ತಿರುವ ನಟರಾಜ ಶಿವನ ಬಿಂಬಗಳು ಇಲ್ಲಿ ಸಾಕಷ್ಟಿವೆ. ಕೈಗಳಲ್ಲಿ ಸರ್ಪ, ಡಮರುಗ, ಅಗ್ನಿಪಾತ್ರೆ ಹಿಡಿದು ಹಸನ್ಮುಖಿಯಾಗಿರುವ ಶಿವನ ಉಳಿದ ಕೈಗಳು ವಿವಿಧ ಮುದ್ರೆಗಳಲ್ಲಿವೆ. ಅನೇಕ ಆಭರಣಗಳು, ಯಜ್ಞೋಪವೀತ, ಮೂರು ಮಡಿಕೆಗಳ ಕಟಿವಸ್ತ್ರ, ಅಂತಹುದೇ ಸೊಂಟಪಟ್ಟಿ, ನಾಗಮುರಿಗೆಯ ತೋಳ್ಬಂದಿ, ಕಾಲಲ್ಲಿ ಗೆಜ್ಜೆಸರ ಮುಂತಾದವು ಸಮಕಾಲೀನ ಶೈಲಿಯ ಸ್ವರೂಪವನ್ನು ಬಯಲು ಮಾಡುತ್ತವೆ. ಚಾಲುಕ್ಯ ರಾಜ್ಯದಲ್ಲಿ ಅಗ್ನಿ ಪಾತ್ರೆಯನ್ನು ಕೈಯಲ್ಲಿ ಹಿಡಿದು ನರ್ತಿಸುತ್ತಿರುವ ಶಿವನ ಇನ್ನೊಂದು ಶಿಲ್ಪ ಇಲ್ಲ. ಆದುದರಿಂದ ಇದನ್ನು ಅಪೂರ್ವವಾದುದು ಎಂದು ಹೇಳಬಹುದು.

ಇಲ್ಲಿಯ ಎಲ್ಲ ನಟರಾಜ ಶಿಲ್ಪಗಳಲ್ಲಿ ಕಾಲಡಿ ಅಪಸ್ಮಾರ ಪುರುಷನಿರುವುದು ಗಮನೀಯವಾಗಿದೆ.[೨೨] ಇಲ್ಲಿನ ದುಂಡಗಾಗಿರುವ ಮಗುಮುಖದ ಹಾಗೂ ಆಕಾರದ ಈ ಶಿಲ್ಪದಲ್ಲಿ ವಿವರವಾದ ಕೆತ್ತನೆಯನ್ನು ನೋಡಬಹುದಾಗಿದೆ. ಆದರೂ ಈ ಶಿಲ್ಪವನ್ನು ನೋಡಿದರೆ ಶಿಲ್ಪಿಗಳು ಬರಬರುತ್ತ ನಟರಾಜನ ಶಿಲ್ಪವನ್ನು ಕೆತ್ತುವಲ್ಲಿ ಶಿಲ್ಪದ ಗಾಂಭೀರ್ಯಕ್ಕಿಂತ ಹೆಚ್ಚಾಗಿ ಅಲಂಕಾರಿಕತೆಗೆ, ಕಲಾತ್ಮಕತೆಗೆ ಹೆಚ್ಚಿನ ಗಮನ ನೀಡಲು ಪ್ರಾರಂಭಿಸಿದರೆನ್ನಬಹುದು. ಈ ಶಿಲ್ಪದಲ್ಲಿ ನಾವು ಬಾದಾಮಿಯಲ್ಲಿ ಅಥವಾ ರಾವಳಪಢಿ ಗುಹಾಲಯದಲ್ಲಿ ವೀಕ್ಷಿಸಿದ ಶಿಲ್ಪದ ಸೊಬಗಾಗಲಿ, ನೈಜತೆಯಾಗಲಿ ಕಂಡುಬರುವುದಿಲ್ಲ. ವಿಚಿತ್ರ ನಾಟಕೀಯತೆಯತ್ತ ನಟರಾಜನ ಶಿಲ್ಪವು ವಾಲಿರುವುದನ್ನು ಗಮನಿಸಬೇಕಾಗುತ್ತದೆ.

ವಿರೂಪಾಕ್ಷ ದೇವಾಲಯದ ರಚನೆ ಸುಮಾರು ಕ್ರಿ.ಶ. ೭೩೩–೭೪೫. ಅಂದರೆ ಬಾದಾಮಿ ಗುಹಾಲಯಗಳ ರಚನೆಯ ಹೆಚ್ಚು–ಕಡಿಮೆ ಎರಡು ಶತಮಾನಗಳ ಅಂತರವಿದೆ. ಬಹುಶಃ ಇದರಿಂದಾಗಿ ಈ ಬದಲಾವಣೆ ಅಥವಾ ಬೆಳವಣಿಗೆ ಎನ್ನಬಹುದೇನೊ? ಕಾರಣವೇನೆಂದರೆ ಇಲ್ಲಿಯ ಶಿಲ್ಪದಲ್ಲಿ ಮುಖ್ಯವಾಗಿ ಗಮನಿಸಬೇಕಾದುದೆಂದರೆ ಶಿಲ್ಪದಲ್ಲಿ ಗಾಂಭೀರ್ಯವಿಲ್ಲ, ಬದಲಾಗಿ ನಗುನಗುತ್ತಾ ಅಥವಾ ಉನ್ಮತ್ತನಾಗಿ ನರ್ತನ ಮಾಡುತ್ತಿರುವಂತಿದೆ. ಶಿವನ ಅಂಗಭಾಗಗಳು ಪ್ರಮಾಣಬದ್ಧವಾಗಿರುವಂತೆ ಕಂಡುಬರುವುದಿಲ್ಲ. ಶಿವನಿಗಿಂತಲೂ ಅಪಸ್ಮಾರನ ರಚನೆಗೆ ಗಮನ ಕೊಟ್ಟಂತಿದೆ. ದೇಹದ ಮೇಲಿನ ವಸ್ತ್ರದ ನೆರಿಗೆಗಳು ಶಿಲ್ಪದ ವೇಗಕ್ಕೆ ಸರಿಯಾಗಿ ಬಾಗದೆ ಬದಲಾಗಿ ಅಲಂಕಾರಿಕವಾಗಿ ಕೆತ್ತಲಾಗಿರುವುದರಿಂದ ಕೃತಕತೆಯ ಅನುಭವವಾಗುತ್ತದೆ. ಇವುಗಳೆಲ್ಲ ಶಿಲ್ಪಿಯ ದೃಷ್ಟಿಕೋನದಲ್ಲಿ ಆದ ಬದಲಾವಣೆಗಳಿರಬಹುದು. ಆದರೆ ಶಿಲ್ಪದ ಒಟ್ಟು

೨೨. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ– ೮೪–೮೫

ದೃಶ್ಯಾತ್ಮಕತೆಯಲ್ಲಿ ಶಿಲ್ಪದ ಸೌಂದರ್ಯಕ್ಕೆ ಪೂರಕವಾಗಿ ಮುಖಭಾವ, ಅದಕ್ಕೆ ಪೂರಕವಾಗಿ ಬಾಗುಬಳುಕುಗಳು ಕೂಡಿದ್ದರೆ ಶಿಲ್ಪಕ್ಕೆ ನೈಜ ಸೌಂದರ್ಯದ ಚೆಲುವು ಸಿಗುತ್ತದೆ. ಆ ದಿಕ್ಕಿನಲ್ಲಿ ನೋಡಿದರೆ ಶಿಲ್ಪಿಗಳು ನಿಧಾನವಾಗಿ ಶಿಲ್ಪದಲ್ಲಿ ನೈಜತೆಗಿಂತ ಹೆಚ್ಚಾಗಿ ಕೃತಕ ಅಲಂಕಾರಗಳಿಗೆ ಮೊರೆಹೋದಂತೆ ಭಾವನೆ ಬಂದಾಗ ಶಿಲ್ಪದ ಸೊಬಗು ಮಾಸಿದಂತೆ ಕಾಣುತ್ತದೆ.

ಶಿಲ್ಪ –೮

ವಿರೂಪಾಕ್ಷ ದೇವಾಲಯದ ಸುತ್ತಲೂ ಗೋಡೆಯಿರುವ ಉತ್ತರ ದ್ವಾರದ ಬಲಭಾಗದ ಒಳಗೋಡೆಯ ಬಿಡಿಪಟ್ಟಿಕೆಯಲ್ಲಿ ದಕ್ಷಿಣಾಭಿಮುಖವಾಗಿ ಚತುರ್ಭುಜನಾಗಿ ನಾಟ್ಯಮಾಡುತ್ತಿದ್ದು, ನೋಡಲು ಬಾದಾಮಿ ನಟರಾಜನ ಶಿಲ್ಪದಂತೆ ಇರುವ ಈ ಶಿಲ್ಪದ ಕೆಳಗಡೆ ಇಬ್ಬರು ಕುಬ್ಜರು ನಾಟ್ಯಕ್ಕೆ ಸಂಗೀತ ಪರಿಕರಗಳಿಂದ ಈ ಶಿಲ್ಪಕ್ಕೆ ಸಂಯೋಜಿತರಾಗಿದ್ದಾರೆ. ಈ ಶಿಲ್ಪವು ಅತಿ ಎತ್ತರವಿದ್ದು, ಅರ್ಧವೃತ್ತಾಕಾರದಲ್ಲಿ ರಚಿತವಾಗಿರುವ ದ್ವಿಮಾನ ಉಬ್ಬುಶಿಲ್ಪವಾಗಿದೆ. ಮುಖ ಮಾತ್ರ ಸವೆದು ಹೋಗಿದೆ. ಬಲಭಾಗದಲ್ಲಿ ಕುಬ್ಜನು ಕುಂಭದ ಆಕಾರದಲ್ಲಿ ಇರುವ ವಾದ್ಯವನ್ನು ಬಾರಿಸುತ್ತಿದ್ದು, ಎಡಭಾಗದಲ್ಲಿ ಇರುವ ಕುಬ್ಜನು ನಟರಾಜನ ನೃತ್ಯವನ್ನು ನೋಡಿ ಸಂತೋಷ ಭರಿತನಾಗಿ ಚಪ್ಪಾಳೆ ಹೊಡೆಯುತ್ತಿರುವಂತೆ ಈ ಶಿಲ್ಪವನ್ನು ಕೆತ್ತಲಾಗಿದೆ.

ಶಿಲ್ಪ –೯

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಮೂರನೇ ಅಂಕಣದ ಭತ್ತಿನಲ್ಲಿ ಅಷ್ಟಬಾಹುಗಳನ್ನೊಳಗೊಂಡ ನಟರಾಜನ ಶಿಲ್ಪವಿದೆ. ಎಡಭಾಗದಲ್ಲಿ ಪಾರ್ವತಿಯು ನಾಟ್ಯ ಮಾಡುವಂತೆ ನಟರಾಜನ ಜೊತೆಗಿದ್ದಾಳೆ. ನಟರಾಜನ ಬಲಭಾಗದ ಕೈಗಳಲ್ಲಿ ಅಭಯ ಹಸ್ತ, ತ್ರಿಶೂಲ, ಡಮರು ಇತ್ಯಾದಿ, ಎಡಭಾಗದಲ್ಲಿ ಗಜಾಹಸ್ತ, ಮೇಲಿನ ಭಾಗದ ಹಸ್ತದಲ್ಲಿ ಸರ್ಪ, ಇನ್ನೊಂದು ಕೈಯಲ್ಲಿ ದಂಡವನ್ನು ಹಿಡಿದಿದ್ದಾನೆ. ಶಿವನ ಹಿಂದೆ ನಂದಿಯೂ ಸಹ ನಟರಾಜನ ನೃತ್ಯಕ್ಕೆ ತಲೆದೂಗುತ್ತಿದೆ. ಇಲ್ಲಿ ಆಯತಾಕಾರದ ವಿನ್ಯಾಸದಲ್ಲಿ ಈ ಶಿಲ್ಪವನ್ನು ಸಂಯೋಜಿಸಲಾಗಿದ್ದು, ಶಿಲ್ಪದ ಸುತ್ತಲೂ ವಿನ್ಯಾಸವುಳ್ಳ ಪಟ್ಟಿಕೆಯು ಶಿಲ್ಪವನ್ನು ಅಂದಗೊಳಿಸಿದೆ.

ಶಿಲ್ಪ –೧೦

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಉತ್ತರ ದಿಕ್ಕಿನ ಗೋಡೆಯ ಮೇಲ್ಭಾಗದಲ್ಲಿ ಷಟ್‌ಬಾಹುಗಳನ್ನು ಒಳಗೊಂಡ ಶಿಲ್ಪವಿದ್ದು, ಇದು ಭಗ್ನಗೊಂಡಿದ್ದರೂ ನಾಟ್ಯದ ರೀತಿಯನ್ನು ಸ್ಪಷ್ಟವಾಗಿ ಕೆತ್ತಲಾಗಿರುವುದು ಕಾಣಬಹುದು.

ಶಿಲ್ಪ –೧೧

ಪಾಪನಾಥ ದೇವಾಲಯದ ಎಡಭಾಗದ ಮೇಲ್ಛಾವಣಿಯ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಷಟ್‌ಬಾಹುಗಳನ್ನು ಹೊಂದಿದ್ದು, ಇದು ಬಿಡಿ ಶಿಲ್ಪವಾಗಿದ್ದು, ಅಲ್ಲಲ್ಲಿ



ಭಗ್ನಗೊಂಡಿದ್ದು, ಹಸ್ತಗಳಲ್ಲಿ ಯಾವ ಮುದ್ರೆ ಮತ್ತು ಆಯುಧಗಳನ್ನು ಹಿಡಿದಿರುವುದು ಎಂಬುದು ಸಾಧ್ಯವಾಗದಷ್ಟು ಅಸ್ಪಷ್ಟವಾಗಿದೆ. ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ಹಸ್ತಗಳಲ್ಲಿ ಡಮರು ಹಾಗೂ ದಂಡವಿರುವುದನ್ನು ಗುರುತಿಸಬಹುದಾಗಿದೆ.

ಶಿಲ್ಪ –೧೨

ಪಟ್ಟದಕಲ್ಲು ಗಳಗನಾಥ ದೇವಾಲಯದ ದ್ವಾರದ ಲಲಾಟಬಿಂಬದಲ್ಲಿ ನಟರಾಜನ ಶಿಲ್ಪವು ಚತುರ್ಭುಜ ಹೊಂದಿ ಬಲಗೈಯಲ್ಲಿ ತ್ರಿಶೂಲವಿದ್ದು, ಎಡಗೈಯಲ್ಲಿರುವ ಆಯುಧವು ಭಗ್ನಗೊಂಡಿದೆ. ಬಲ ಮತ್ತು ಎಡಕೈಗಳು ನಾಟ್ಯ ಮುದ್ರೆಯಲ್ಲಿವೆ. ಶಿಲ್ಪದ ಇಬ್ಬದಿಗಳಲ್ಲಿ ಕುಬ್ಜಗಣಗಳು ನಟರಾಜನ ನೃತ್ಯಕ್ಕೆ ವಾದ್ಯ ನುಡಿಸುತ್ತಿರುವಂತೆ ಕಂಡರಿಸಲಾಗಿದೆ. ಈ ಶಿಲ್ಪವು ಅಲ್ಲಲ್ಲಿ ಭಗ್ನಗೊಂಡಿದ್ದರೂ ಸೊಗಸಾಗಿ ದ್ವಿಮಾನದಲ್ಲಿ ಮೂಡಿಬಂದಿದೆ.

ಚಿತ್ರ –೧೩

ಪಟ್ಟದಕಲ್ಲಿನ ಪಾಪನಾಥ ದೇವಾಲಯ ಉತ್ತರ ಮುಖಮಂಟಪದ ಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ ಶಿಲ್ಪವು ೫ ಅಡಿ ಎತ್ತರವಾಗಿದ್ದು, ಇನ್ನುಳಿದ ಭಾಗವೆಲ್ಲ ಸಂಪೂರ್ಣವಾಗಿ ಭಗ್ನವಾಗಿದೆ. ಈ ಶಿಲ್ಪದ ಕೆಳಭಾಗದ ಇಬ್ಬದಿಗಳಲ್ಲಿ ಕುಬ್ಜಗಣಗಳನ್ನು ಕಾಣಬಹುದು. ಈ ಶಿಲ್ಪವು ಈಗ ಪೂರ್ಣವಿದ್ದಿದ್ದರೆ ನಟರಾಜನ ಶಿಲ್ಪಗಳಲ್ಲಿಯೇ ಅತ್ಯಂತ ಆಕರ್ಷಕ ಶಿಲ್ಪ ಎಂದು ಹೇಳಬಹುದು. ಒಟ್ಟಾರೆ ಈ ಶಿಲ್ಪವನ್ನು ತ್ರಿಮಾನದ ಭಾವನೆ ಬರುವಂತೆ ಕೆತ್ತಲಾಗಿದೆ.

ಶಿಲ್ಪ –೧೪

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ದಕ್ಷಿಣದ್ವಾರದ ಎಡ ಕೋಷ್ಟಕದಲ್ಲಿರುವ ಈ ಶಿಲ್ಪ ಪಶ್ಚಿಮಾಭಿಮುಖವಾಗಿದೆ. ಈ ಶಿಲ್ಪವನ್ನು ಕುಳಿತಿರುವಂತೆ ರಚಿಸಲಾಗಿದೆ. ಮುಖ, ಮತ್ತು ಕೈಕಾಲುಗಳು ಭಗ್ನಗೊಂಡಿದೆ. ಬಲಗೈಯಲ್ಲಿ ದೊಡ್ಡ ತ್ರಿಶೂಲವಿದ್ದು, ಎಡಗೈಯಲ್ಲಿ ಸರ್ಪವಿದೆ. ಹಿಂದಿನ ಕೈಯು ವೃಷಭದಂಡವನ್ನು ಎತ್ತಿಹಿಡಿದಿದ್ದು, ಇದನ್ನು ದ್ವಿಮಾನದ ಹಿನ್ನೆಲೆಯಲ್ಲಿ ರಚಿಸಿರುವುದರಿಂದ ಗಮನಾರ್ಹ ಶಿಲ್ಪಗಳಲ್ಲಿ ಇದೊಂದಾಗಿದೆ.

ಶಿಲ್ಪ –೧೫

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಎಡಬದಿಯ ಹೊರಜಾಲಂಧ್ರದ ಮೇಲೆ ಉತ್ತರಾಭಿಮುಖವಾಗಿರುವ ಈ ಶಿಲ್ಪವು ಗಾತ್ರದಲ್ಲಿ ಚಿಕ್ಕದಾಗಿದೆ. ಕುಬ್ಜನ ಹಾಗೆ ಕಾಣುವ ಈ ಶಿಲ್ಪವು ಅಲ್ಲಲ್ಲಿ ಮುಸುಕಾಗಿದೆ. ನಾಟ್ಯವಾಡುವ ಭಂಗಿಯಲ್ಲಿರುವ ಈ ನಟರಾಜನ ಶಿಲ್ಪವನ್ನು ದ್ವಿಮಾನದಲ್ಲಿ ರಚಿಸಲಾಗಿದೆ.



ಶಿಲ್ಪ –೧೬

ವಿರೂಪಾಕ್ಷ ದೇವಾಲಯುದ ಪೂರ್ವದ್ವಾರದ ಬಲಭಾಗದ ಒಳಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ ಅಷ್ಟಭುಜಗಳನ್ನು ಹೊಂದಿರುವ ಶಿಲ್ಪ ಅಪಸ್ಮಾರನ ಮೇಲೆ ನಿಂತಿದೆ. ಈ ಶಿಲ್ಪದ ಎಡಗೈ ತೊಡೆಯ ಮೇಲೆ ಇಟ್ಟಿದ್ದು, ಇನ್ನೊಂದು ಹಸ್ತವು ಅಭಯಮುದ್ರೆ ಹೊಂದಿದಂತೆ ಅಸ್ಪಷ್ಟವಾಗಿ ಕಾಣುತ್ತದೆ. ಬಲಭಾಗದಲ್ಲಿ ಕೊಳಲನ್ನು ಊದುತ್ತಿರುವ ಕುಬ್ಜನಿದ್ದಾನೆ ಎಡಭಾಗದಲ್ಲಿ ಘಟಂವಾದ್ಯವನ್ನು ನುಡಿಸುತ್ತಿರುವ ಶಿಲ್ಪವಿದೆ. ಶಿಲ್ಪ ಸಂಯೋಜನೆಯು ಅತ್ಯಂತ ಆಕರ್ಷಕವಾಗಿ ಮೂಡಿ ಬಂದಿದೆ. ಒಟ್ಟಾರೆ ಇದು ಉಬ್ಬುಶಿಲ್ಪವಾದರೂ ಕೈಗಳಲ್ಲಿನ ಮುದ್ರೆಗಳನ್ನು ಸುಂದರವಾಗಿ ರಚನೆ ಮಾಡಲಾಗಿದೆ.

ಶಿಲ್ಪ –೧೭

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಹಿಂದೆ ಇರುವ ಗೋಡೆ, ಪಶ್ಚಿಮದ್ವಾರದ ಎಡಭಾಗದ ಎಡಭಿತ್ತಿಯಲ್ಲಿ ಪೂರ್ವಾಭಿಮುಖವಾಗಿರುವ ಶಿಲ್ಪವು ಚತುರ್ಬಾಹುಗಳನ್ನು ಹೊಂದಿದೆ. ನಟರಾಜನ ಹಿಂದೆ ಒಂದು ಮಂಟಪಾಕಾರದ ಚಿಹ್ನೆಯಿದೆ. ಹೂ ಬಳ್ಳಿಗಳಿಂದ ಕೂಡಿದ ಅರ್ಧವರ್ತುಳಾಕಾರದ ವೃತ್ತದಲ್ಲಿ ನಟನೆ ಮಾಡುತ್ತಿದ್ದಾನೆ. ಬಲಭಾಗದಲ್ಲಿ ಕೊಳಲುವಾದಕ, ಎಡಭಾಗದಲ್ಲಿ ತಾಳ ಹಾಕುತ್ತಿರುವ ಶಿಲ್ಪವಿದೆ. ಇಲ್ಲಿ ವಾದ್ಯಗಾರರನ್ನು ಆಕರ್ಷಕವಾಗಿ ಕೆತ್ತಿದ್ದಾರೆ.

ಶಿಲ್ಪ –೧೮

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಗರ್ಭಗೃಹದ ಮುಂದೆ ಎರಡನೆಯ ಅಂಕಣದ ಛತ್ತಿನಲ್ಲಿ ಪಾರ್ವತಿಸಮೇತ ನಟರಾಜನ ಸುಂದರ ಶಿಲ್ಪವು ವೃತ್ತಾಕಾರದ ಪಟ್ಟಿಕೆಯಲ್ಲಿ ಮೂಡಿಬಂದಿದೆ. ಇದರ ಸುತ್ತಲೂ ಇನ್ನೊಂದು ವೃತ್ತವಿದ್ದು, ಅದರಲ್ಲಿ ಗಂಧರ್ವ, ಕಿನ್ನರರು ಮುಂತಾದ ಶಿಲ್ಪಗಳಿದ್ದು ವಿವಿಧ ನಾಟ್ಯಭಂಗಿಯಲ್ಲಿವೆ. ನಟರಾಜನ ಶಿಲ್ಪವು ಅಪಸ್ಮಾರನ ಮೇಲೆ ನಿಂತಿದೆ. ಕೈಗಳಲ್ಲಿ ತ್ರಿಶೂಲ, ಢಮರು, ನಾಗ ಆಯುಧಗಳನ್ನು ಹಿಡಿದಿದ್ದಾನೆ. ಅವನ ತಾಂಡವ ನೃತ್ಯಕ್ಕೆ ಹೆಜ್ಜೆ ಹಾಕುತ್ತಿರುವ ಶಿಲ್ಪಗಳನ್ನು ಇಲ್ಲಿ ಕಾಣಬಹುದು.

ಶಿಲ್ಪ –೧೯

ಐಹೊಳೆಯ ಹುಚ್ಚಿಮಲ್ಲಿ ದೇವಾಲಯದ ಗೋಪುರದ ಮೇಲೆ ವೃತ್ತಾಕಾರದಲ್ಲಿ ರಚಿತವಾದ ಈ ಶಿಲ್ಪವು ಷಟ್‌ಭುಜಗಳನ್ನು ಹೊಂದಿದ್ದು, ರಾವಳಫಡಿಯಲ್ಲಿರುವ ನಟರಾಜನ ಶಿಲ್ಪವನ್ನೇ ಹೋಲುವಂತಿದ್ದರೂ ಗಾತ್ರದಲ್ಲಿ ಚಿಕ್ಕದಾಗಿದೆ. ಎಡಭಾಗದಲ್ಲಿ ಸ್ತ್ರೀ ಶಿಲ್ಪವಿದ್ದು ಶಿವನ ನಾಟ್ಯವನ್ನು ನೋಡಿ ಬೆರಗಾಗಿ ನಿಂತಿರುವಂತೆ ಕಾಣುತ್ತದೆ. ಒಂದು ಕೈ ಗಲ್ಲದ ಮೇಲಿಟ್ಟು ಇನ್ನೊಂದು ಕೈ ಸೊಂಟದ ಮೇಲೆ ಇಟ್ಟುಕೊಂಡು ನಟರಾಜನ ಪಕ್ಕದಲ್ಲಿ ನಿಂತಿದ್ದಾಳೆ. ಬಲಭಾಗದಲ್ಲಿ ಕುಬ್ಜ



ವಾದ್ಯಗಾರನ ಶಿಲ್ಪವಿದೆ. ಸ್ತ್ರೀ ಮತ್ತು ಕುಬ್ಜ ಶಿಲ್ಪಗಳು ನೇರವಾಗಿರದೇ ವೃತ್ತಕ್ಕೆ ಹೊಂದಿಕೊಂಡಂತಿದ್ದು, ಬೀಳುತ್ತಿದ್ದಾರೆ ಎಂಬ ಭಾವನೆಯನ್ನುಂಟುಮಾಡುತ್ತದೆ. ಒಟ್ಟಾರೆ ಪ್ರಧಾನ ಶಿಲ್ಪಕ್ಕೆ ನೀಡಿದ ಪ್ರಾಧಾನ್ಯವನ್ನು ಇಲ್ಲಿಯೂ ಸಹ ಕೊಟ್ಟಿರುವುದು ಕಂಡುಬರುತ್ತದೆ.

ಶಿಲ್ಪ –೨೦

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಹೊರ ಪಶ್ಚಿಮದ್ವಾರದ ಎಡಭಾಗದಲ್ಲಿ ಪೂರ್ವಾಭಿಮುಖವಾಗಿರುವ ಎಡಭಿತ್ತಿಯಲ್ಲಿ ದಕ್ಷಿಣಾಭಿಮುಖವಾಗಿ ಅಷ್ಟಬಾಹುಗಳನ್ನು ಹೊಂದಿರುವ ನಟರಾಜನ ಶಿಲ್ಪವಿದೆ. ಈ ಶಿಲ್ಪದ ಕೈಗಳಲ್ಲಿರುವ ಆಯುಧಗಳನ್ನು ಗುರುತಿಸಲು ಸಾಧ್ಯವಾಗದಷ್ಟು ಶಿಲ್ಪವು ಪ್ರಕೃತಿಯ ವಿಕೋಪಕ್ಕೆ ನಶಿಸಿಹೊಗಿದೆ. ಸೂಕ್ಷ್ಮವಾಗಿ ಗಮನಿಸಿದಾಗ ಶಿಲ್ಪದ ಕೆಳಭಾಗದಲ್ಲಿ ವಾದ್ಯಮೇಳದವರಿಬಹುದೆಂದು ಗುರುತಿಸಬಹುದು. ಈ ಶಿಲ್ಪವು ದ್ವಿಮಾನದಲ್ಲಿ ರಚಿತವಾದರೂ ನಾಟ್ಯದ ಭಂಗಿಯು ಇಲ್ಲಿ ಗಮನಾರ್ಹವಾಗಿದೆ.

ಶಿಲ್ಪ –೨೧

ವಿರೂಪಾಕ್ಷ ದೇವಾಲಯ ಆವರಣದ ಗೋಡೆಯ ದ್ವಾರದ ಬಲಭಾಗದ ಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ, ದಶಬಾಹುಗಳನ್ನು ಹೊಂದಿರಬಹುದಾದ ನಟರಾಜನ ಶಿಲ್ಪವಿರಬಹುದು ಎಂದು ಊಹಿಸಲು ಸಾಧ್ಯವಾಗದಷ್ಟು ನಶಿಸಿಹೋಗಿದೆ. ಇದು ಗಾತ್ರದಲ್ಲಿ ದೊಡ್ಡದಾಗಿದ್ದು, ಇದನ್ನು ದ್ವಿಮಾನದಲ್ಲಿ ಕೆತ್ತಲಾಗಿದೆ.

ಶಿಲ್ಪ –೨೨

ಪಟ್ಟದಕಲ್ಲು ಪಾಪನಾಥ ದೇವಾಲಯದ ಉತ್ತರ ಭಾಗದ ಅರ್ಧ ಮಂಟಪದ ಭಿತ್ತಿಯಲ್ಲಿರುವ ಈ ಶಿಲ್ಪವು ದಶಬಾಹುಗಳನ್ನು ಹೊಂದಿದೆ. ಈ ಶಿಲ್ಪದ ಅರ್ಧ ದೇಹ ಬಿಟ್ಟರೆ ಇನ್ನಾವುದೇ ಭಾಗವು ಇಲ್ಲಿ ನಶಿಸಿ ಹೋಗಿದೆ. ಈ ಶಿಲ್ಪದ ಕೆಳಗೆ ವಾದ್ಯಗಾರರಿರುವುದನ್ನು ಗಮನಿಸಬಹುದು. ಅಲ್ಲದೇ ದೊಡ್ಡಗಾತ್ರದಲ್ಲಿರುವ ಅಪಸ್ಮಾರ ಶಿಲ್ಪವನ್ನು ಇಲ್ಲಿ ಕಾಣಬಹುದು. ಇದನ್ನು ದ್ವಿಮಾನದಲ್ಲಿ ರಚಿಸಿದರೂ ತ್ರಿಮಾನದ ಭಾವನೆಯನ್ನು ಮೂಡಿಸುವುದು ಇದರ ವಿಶೇಷತೆಯಾಗಿದೆ.

ಶಿಲ್ಪ –೨೩

ಪಟ್ಟದಕಲ್ಲಿನ ಪಾಪನಾಥ ದೇವಾಲಯ ಗರ್ಭಗೃಹದ ಮುಂದಿನ ಅಂಕಣದ ಛತ್ತಿನಲ್ಲಿ ಚೌಕಾಕಾರದ ವಿನ್ಯಾಸದಲ್ಲಿ ಚತುರ್ಭುಜನಾಗಿ ನಟರಾಜನು ನೃತ್ಯ ಮಾಡುತ್ತಿದ್ದು, ಬಲಗೈ ಅಭಯ ಮುದ್ರೆಯಲ್ಲಿದ್ದು, ಇನ್ನೊಂದರಲ್ಲಿ ತ್ರಿಶೂಲವಿದೆ. ಎಡಗೈ ನಾಟ್ಯಭಂಗಿಯಲ್ಲಿದೆ. ಇನ್ನೊಂದು ಕೈಯಲ್ಲಿ ಸರ್ಪವನ್ನು ಹಿಡಿದಿದ್ದಾನೆ. ಇಲ್ಲಿ ಗಮನಿಸಬಹುದಾದ ವಿಷಯವೇನೆಂದರೆ, ಸರ್ಪದ ತಲೆಯ ಮೇಲೆ ಮಣಿ ಇರುವುದು ವಿಶೇಷವಾಗಿದೆ. ಎಡಭಾಗದಲ್ಲಿ ಪಾರ್ವತಿಯು ಬಲಗೈ



ತೊಡೆಯ ಮೇಲೆ ಇರಿಸಿ, ಎಡಗೈ ಸೊಂಟದ ಮೇಲಿಟ್ಟು ಅರಳಿದ ಪದ್ಮದ ಮೇಲೆ ನಿಂತಿರುವುದು ಈ ಶಿಲ್ಪದಲ್ಲಿನ ವಿಶೇಷವಾಗಿದೆ. ಪಾರ್ವತಿಯ ಕೇಶಾಲಂಕಾರವು ವಿಶಿಷ್ಟವಾಗಿದ್ದು, ನಂದಿ ಮಂಟಪದಲ್ಲಿರುವ ಸಾಲಭಂಜಿಕೆಯರ ಕೇಶವಿನ್ಯಾಸವನ್ನು ಹೋಲುತ್ತದೆ. ನಟರಾಜನ ಬಲಭಾಗದ ಹಿಂಬದಿಯಲ್ಲಿ ನಂದಿಯು ನಟರಾಜನ ನೃತ್ಯಕ್ಕೆ ತಲೆದೂಗುತ್ತಿದೆ. ಕೆಳಗಡೆ ವಾದ್ಯಮೇಳದವರಲ್ಲಿ ಒಬ್ಬನು ಘಟಂವಾದ್ಯ ನುಡಿಸುತ್ತಿದ್ದು, ಇನ್ನೊಂದು ಶಿಲ್ಪವು ಕೊಳಲನ್ನು ಊದುತ್ತಿದೆ. ನಟರಾಜನ ಬಲಬದಿಗೆ ಇದ್ದ ಕುಬ್ಜ ಶಿಲ್ಪವು ತಾಳ ಬಡಿಯುತ್ತಿದೆ. ಒಟ್ಟಾರೆಯಾಗಿ ಚೌಕಾಕಾರದ ವಿನ್ಯಾಸದಲ್ಲಿ ಕೆತ್ತನೆ ಮಾಡಿರುವ ಈ ಶಿಲ್ಪದಲ್ಲಿ ಶಿಲ್ಪಿಯು ತನ್ನ ಪ್ರೌಢಿಮೆಯನ್ನು ತೋರಿದ್ದಾನೆ.

ಶಿಲ್ಪ –೨೪

ಪಟ್ಟದಕಲ್ಲು ಪಾಪನಾಥ ದೇವಾಲಯ ಸಭಾಮಂಟಪದ ಭಿತ್ತಿನಲ್ಲಿರುವ ನಟರಾಜನು ಅಷ್ಟಬಾಹುಗಳನ್ನು ಹೊಂದಿ ನಾಟ್ಯಭಂಗಿಯಲ್ಲಿದ್ದಾನೆ. ಎಡಭಾಗದಲ್ಲಿ ಪಾರ್ವತಿಯೂ ಸಹ ಪದ್ಮದ ಮೇಲೆ ನರ್ತಿಸುತ್ತಿದ್ದಾಳೆ. ಈ ಶಿಲ್ಪವು ಆಯತಾಕಾರದ ಪಟ್ಟಿಕೆಯಲ್ಲಿ ದೊಡ್ಡ ಗಾತ್ರದಲ್ಲಿ ನಿರ್ಮಿತವಾಗಿದೆ. ನಟರಾಜನ ಬಲಭಾಗದ ಕೈಗಳು ನಾಟ್ಯಮುದ್ರೆಯಲ್ಲಿದ್ದು, ಎಡಭಾಗದ ಕೈಗಳು ಭಗ್ನಗೊಂಡಿವೆ. ದ್ವಿಮಾನದಲ್ಲಿ ರಚನೆಯಾದ ಈ ಶಿಲ್ಪದ ಇಬ್ಬದಿಗಳಲ್ಲಿ ಇಬ್ಬರು ವ್ಯಕ್ತಿಗಳು ನಟರಾಜನ ನೃತ್ಯಕ್ಕೆ ವಾದ್ಯಮೇಳದವರಿದ್ದಾರೆ. ಒಟ್ಟಾರೆ ಈ ಶಿಲ್ಪವು ಆಕರ್ಷಕವಾಗಿ ಮೂಡಿಬಂದಿದೆ.

ಶಿಲ್ಪ –೨೫

ಬಾದಾಮಿಯ ಎರಡನೆಯ ವೈಷ್ಣವ ಗುಹಾಲಯದ ಮುಖಮಂಟಪದ ಎಡಭಾಗದಲ್ಲಿ ತ್ರಿವಿಕ್ರಮನ ಶಿಲ್ಪದ ಮೇಲೆ ಸ್ವಲ್ಪ ಅಂತರದಲ್ಲಿ ಚಿಕ್ಕ ಗಾತ್ರದ ನಟರಾಜನ ಉಬ್ಬು ಶಿಲ್ಪವಿದೆ. ದಶಭುಜಗಳನ್ನು ಹೊಂದಿರುವ ನಟರಾಜನು ನೃತ್ಯ ಮಾಡುತ್ತಿದ್ದು, ಆಕಾರದಲ್ಲಿ ರಾವಳಫಡಿಯ ನಟರಾಜನ ಶಿಲ್ಪವನ್ನೆ ಹೋಲುತ್ತದೆ. ಆದರೆ ಗಾತ್ರದಲ್ಲಿ ಚಿಕ್ಕದಾಗಿದ್ದರೂ ವೃತ್ತಾಕಾರದಲ್ಲಿ ರಚಿತವಾಗಿದೆ. ಈ ಉಬ್ಬುಶಿಲ್ಪವು ಆಭರಣಗಳಿಲ್ಲದೇ ಒಂದು ರೀತಿಯ ಸೊಗಸನ್ನು ಉಂಟುಮಾಡಿದೆ.

ಬಾದಾಮಿಯ ಚಾಲುಕ್ಯರ ಆಡಳಿತದ ಎರಡು ಶತಮಾನಗಳ ಕಾಲದಲ್ಲಿ ನೂರಾರು ಸಣ್ಣ ಮತ್ತು ಮಧ್ಯಮ ಗಾತ್ರದ ಹಾಗೂ ಕೆಲವೊಂದು ದೊಡ್ಡ ಗಾತ್ರದ ನಟರಾಜನ ಶಿಲ್ಪಗಳು ರಚನೆಯಾಗಿವೆ. ಇವು ಬಾದಾಮಿ, ಐಹೊಳೆ ಹಾಗೂ ಪಟ್ಟದಕಲ್ಲಿನ ಸುತ್ತಮುತ್ತಲಿನ ದೇವಾಲಯ ಸಮುಚ್ಚಯಗಳಲ್ಲಿ ಹರಡಿಕೊಂಡಿವೆ. ಆದರೆ ಎಲ್ಲವೂ ಒಂದೇ ರೀತಿಯಲ್ಲಿಲ್ಲ. ವಿಭಿನ್ನ ಹಾಗೂ ವಿಶಿಷ್ಟವಾದ ಶಿಲ್ಪಗಳು ಕೆಲವು ಇವೆ. ಹೆಚ್ಚಿನ ಶಿಲ್ಪಗಳು ಒಂದೇ ರೀತಿಯಿಂದ ಕೂಡಿವೆ. ಆದರೆ ಪ್ರಾರಂಭದ ಶಿಲ್ಪಗಳಲ್ಲಿದ್ದ ಸಹಜ ಸೌಂದರ್ಯವು ಬರಬರುತ್ತಾ ಕಡಿಮೆಯಾಗಿ ಅಲಂಕಾರಿಕತೆಗೆ



ಒತ್ತುಕೊಡುತ್ತ ಬಂದಂತೆ ಶಿಲ್ಪದ ಸೊಬಗು ಮತ್ತು ಕಲಾತ್ಮಕತೆಯಲ್ಲಿ ಹಿನ್ನಡೆಯಾಗಿರುವುದು ಹಾಗೂ ಉಬ್ಬುಶಿಲ್ಪವಾಗಿ ರಚಿಸಿರುವುದು ಕಂಡುಬರುತ್ತದೆ. ಇದಕ್ಕೆ ಶಿಲ್ಪಿಗಳ ವೈಯಕ್ತಿಕ ಪ್ರತಿಭೆಯ ಉದ್ದೇಶವೂ ಕಾರಣವಾಗಿರುವ ಸಾಧ್ಯತೆಯೂ ಇದೆ. ಒಟ್ಟಿನಲ್ಲಿ ಹೇಳುವುದಾದರೆ ಬಾದಾಮಿಯ ಶಿಲ್ಪ ಈ ಎಲ್ಲಾ ನಟರಾಜ ಶಿಲ್ಪಗಳಿಗೆ ಮಾದರಿಯಾಗಿ ರಚನೆಯಾಗಿದೆ ಎನ್ನಬಹುದು.

ಶಿಲ್ಪ –೨೬

ಸಂಗಮೇಶ್ವರ ದೇವಾಲಯ ಬಲಭಾಗದ ಹೊರಭಿತ್ತಿಯಲ್ಲಿ ಚತುರ್ಭುಜ ನಟರಾಜನು ಅತಿ ಭಂಗಿಯಲ್ಲಿ ನಾಟ್ಯವಾಡುವಂತೆ ಈ ಶಿಲ್ಪವನ್ನು ನಿರ್ಮಿಸಲಾಗಿದೆ. ಬಲಗೈಯೊಂದರಲ್ಲಿ ತ್ರಿಶೂಲ ಹಿಡಿದಿದ್ದು, ಇನ್ನುಳಿದ ಕೈಗಳಲ್ಲಿರುವ ಆಯುಧಗಳು ಗುರುತಿಸಲಾಗದಷ್ಟು ಸವೆದು ಹೋಗಿವೆ. ದ್ವಿಮಾನದಲ್ಲಿ ರಚಿಸಿರುವ ಈ ಶಿಲ್ಪವು ತ್ರಿಮಾನದ ಅನುಭವವನ್ನು ನೀಡುತ್ತದೆ. ಒಟ್ಟಾರೆ ಈ ಶಿಲ್ಪವು ಅಪೂರ್ಣವಾಗಿದ್ದರೂ ಸಹ ನಟನೆಯ ಭಂಗಿ ಆಕರ್ಷಕವಾಗಿ ಮೂಡಿಬಂದಿದೆ.

ಶಿಲ್ಪ –೨೭

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯ ಸಭಾಮಂಟಪದ ಎಡಭಾಗದ ಮೂರನೆ ಕಂಬದಲ್ಲಿ ಉತ್ತರಾಭಿಮುಖವಾಗಿರುವ ನಟರಾಜನನ್ನು ಚತುರ್ಬಾಹುಗಳನ್ನು ಹೊಂದಿ ನಾಟ್ಯವಾಡುವಂತೆ ಕೆತ್ತಲಾಗಿದೆ. ಎರಡು ಮುಖ್ಯ ಕೈಗಳು ನಾಟ್ಯಮುದ್ರೆಯಲ್ಲಿದ್ದು, ಹಿಂದಿನ ಬಲಗೈಯಲ್ಲಿ ಸರ್ಪವನ್ನು ಮೇಲೆ ಎತ್ತಿಹಿಡಿದಿದ್ದು, ಎಡಗೈಯಲ್ಲಿ ಉದ್ದವಾದ ತ್ರಿಶೂಲವನ್ನು ಹಿಡಿದಿದ್ದಾನೆ. ಎಡಪಕ್ಕದಲ್ಲಿ ಪಾರ್ವತಿಯು ನಟರಾಜನ ನೃತ್ಯವನ್ನು ನೋಡಿ ಬೆರಗಾಗಿ ದ್ವಿಭಂಗಿಯಲ್ಲಿ ನಿಂತಿದ್ದಾಳೆ. ನಟರಾಜನ ಬಲಭಾಗದಲ್ಲಿ ಘಟಂ ವಾದ್ಯವನ್ನು ನುಡಿಸುತ್ತಿದ್ದಾರೆ. ಇವನ ಪಕ್ಕದಲ್ಲಿ ಮತ್ತೊಂದು ಶಿಲ್ಪವಿದ್ದು, ಇದೇ ರೀತಿ ಪಾರ್ವತಿಯ ಎಡಪಕ್ಕದಲ್ಲಿಯೂ ಚಿಕ್ಕ ಸ್ತ್ರೀ ಶಿಲ್ಪವಿದೆ. ಅರ್ಧವೃತ್ತಾಕಾರದಲ್ಲಿರುವ ಈ ಉಬ್ಬುಶಿಲ್ಪವನ್ನು ಸಂಯೋಜನೆ ಮಾಡಿದ್ದು ಈ ಎಲ್ಲ ಶಿಲ್ಪಗಳನ್ನು ಚಿಕ್ಕ ಗಾತ್ರದ ಪಟ್ಟಿಕೆಯಲ್ಲಿ ಕಲಾತ್ಮಕವಾಗಿ ರಚಿಸಲಾಗಿದೆ.

ಶಿಲ್ಪ –೨೮

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಸಭಾಮಂಟಪದ ಎಡಭಾಗದ ಎರಡನೆಯ ಕಂಬದಲ್ಲಿ ಪೂರ್ವಾಭಿಮುಖವಾಗಿ ಅರ್ಧವೃತ್ತಾಕಾರದಲ್ಲಿ ಈ ಶಿಲ್ಪವನ್ನು ರಚಿಸಲಾಗಿದೆ. ಚತುರ್ಭುಜವಾಗಿ ನಾಟ್ಯವಾಡುವಂತೆ ರಚಿಸಿರುವ ಈ ಶಿಲ್ಪದ ಬಲಗೈಯಲ್ಲಿ ಹಾವನ್ನು ಎತ್ತಿ ಹಿಡಿದಿದ್ದು, ಹಿಂದಿನ ಬಲಗೈಯಲ್ಲಿ ಧ್ವಜಪತಾಕೆಯನ್ನು ಹಿಡಿದಿದ್ದಾನೆ. ಎಡಗೈಯನ್ನು ಎಡಪಕ್ಕದಲ್ಲಿ ನಿಂತಿರುವ ಪಾರ್ವತಿಯ ಭುಜದ ಮೇಲೆ ಇರಿಸಿದ್ದಾನೆ. ಇಲ್ಲಿ ಪಾರ್ವತಿಯನ್ನು ದ್ವಿಮಾನದಲ್ಲಿ ರಚಿಸಲಾಗಿದೆ. ಪಾರ್ವತಿಯ ಬಲಗೈ ಶುಭ ಮುದ್ರೆಯಲ್ಲಿದ್ದು, ಎಡಗೈ ಕೆಳಗೆ ಇಳಿ ಬಿಟ್ಟಿದ್ದಾಳೆ.

ನಟರಾಜನ ಹಿನ್ನೆಲೆಯಲ್ಲಿ ನಂದಿಯು ಕೂಡ ನೃತ್ಯದಲ್ಲಿರುವುದನ್ನು ಗಮನಿಸಬಹುದು. ನಟರಾಜನ ನೃತ್ಯಕ್ಕೆ ಸ್ಫೂರ್ತಿದಾಯಕರೂ ಕೂಡ ಇಬ್ಬದಿಗಳಲ್ಲಿ ವಾದ್ಯಗಳನ್ನು ನುಡಿಸುತ್ತಿದ್ದಾರೆ. ಒಬ್ಬ ಬಲಭಾಗದಲ್ಲಿ ಮೃದಂಗವನ್ನು ನುಡಿಸುತ್ತಿದ್ದರೆ, ಇನ್ನೊಬ್ಬ ಎಡಭಾಗದಲ್ಲಿ ಕೊಳಲು ಊದುತ್ತಿದ್ದಾನೆ. ಇವನ ಮೇಲೆ ಪುರಷನ ಶಿಲ್ಪವಿದ್ದು, ಅದು ಗಂಧರ್ವಶಿಲ್ಪವಿರಬಹುದು. ಮೇಲೆ ನೋಡಿದ ಶಿಲ್ಪದಂತೆ ಕಂಡರೂ ನಾಟ್ಯದ ಭಂಗಿ ಬೇರೆ ರೀತಿಯಲ್ಲಿದೆ. ಉಬ್ಬುಶಿಲ್ಪದಲ್ಲಿ ರಚನೆಯಾದ ಈ ಶಿಲ್ಪ ಮತ್ತು ನಂದಿಯ ಮುಖದಲ್ಲಿ ಅತ್ಯಂತ ಜೀವಂತಿಕೆ ಕಂಡುಬರುತ್ತದೆ. ಈ ಶಿಲ್ಪವು ಗಾತ್ರದಲ್ಲಿ ಚಿಕ್ಕದಾದರೂ ಶಿಲ್ಪಿಯು ಸಂಯೋಜಿಸಿರುವ ರೀತಿ, ವಸ್ತುವಿಷಯ ಮತ್ತು ನಟರಾಜನ ಸಂಗಡಿಗರನ್ನು ಈ ಚಿಕ್ಕದಾದ ಪಟ್ಟಿಕೆಯಲ್ಲಿ ರಚಿಸಿರುವುದು ಮುಖ್ಯ ಶಿಲ್ಪಕ್ಕೆ ಮೆರುಗು ತಂದಿದೆಯೆನ್ನಬಹುದು.

ಶಿಲ್ಪ –೨೯

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯ ಸಭಾಮಂಟಪದ ಎಡಭಾಗದಲ್ಲಿನ ಕಂಬದಲ್ಲಿ ಈ ಶಿಲ್ಪವಿದ್ದು, ಇದು ದ್ವಿಬಾಹುವನ್ನು ಹೊಂದಿದೆ. ಇದರಲ್ಲಿ ಎರಡು ಕೈಗಳಿಂದ ದೊಡ್ಡದಾದ ಸರ್ಪವನ್ನು ಮೇಲೆ ಎತ್ತಿ ಹಿಡಿದು ನಾಟ್ಯವಾಡುತ್ತಿದ್ದಾನೆ. ಇದು ತೆಳು ಉಬ್ಬುಶಿಲ್ಪವಾಗಿದೆ. ನಟರಾಜನ ಬಲಭಾಗದಲ್ಲಿ ಘಟಂ ವಾದ್ಯವನ್ನು ನುಡಿಸುತ್ತಿದ್ದರೆ, ಎಡಭಾಗದಲ್ಲಿ ಕೊಳಲನ್ನು ಊದುತ್ತಿದ್ದಾನೆ. ಕೊಳಲಿನ ನಾದಕ್ಕೆ ಸರ್ಪವು ಹೆಡೆ ಎತ್ತಿ ನಿಂತಿದೆ. ಈ ಶಿಲ್ಪವೂ ಕೂಡ ಅರ್ಧವೃತ್ತಾಕಾರದಲ್ಲಿ ರಚಿತವಾಗಿದೆ. ಅಲ್ಲದೇ ಬಹು ಆಕರ್ಷಕ ಶಿಲ್ಪವಾಗಿದೆ.

ಅರ್ಧನಾರೀಶ್ವರ ಶಿಲ್ಪಗಳು

ಬಾದಾಮಿ ಚಾಲುಕ್ಯರ ಕಾಲದ ಗಮನ ಸೆಳೆಯುವ ಶಿಲ್ಪಗಳಲ್ಲಿ ಮುಖ್ಯವಾಗಿ ಕಂಡುಬರುವುದು ಅರ್ಧನಾರೀಶ್ವರ ಶಿಲ್ಪಗಳು. ಕುತೂಹಲಕಾರಿಯಾಗಿರುವ ಈ ಶಿಲ್ಪಗಳು ಶೈವ ಶಿಲ್ಪಗಳಲ್ಲಿ ವಿಶಿಷ್ಟವಾಗಿವೆ. ಬಾದಾಮಿಯ ಮೊದಲನೆಯ ಗುಹಾಲಯದಲ್ಲಿ ಬೃಹತ್ ಗಾತ್ರದ ಅರ್ಧನಾರೀಶ್ವರ ಶಿಲ್ಪವಿದ್ದು, ಈ ಶಿಲ್ಪಗಳಲ್ಲೆಲ್ಲ ಅತಿ ಪ್ರಮುಖ ಹಾಗೂ ಶ್ರೇಷ್ಠ ಶಿಲ್ಪಕಲಾಕೃತಿಯಾಗಿದೆ. ಪುರುಷ ಮತ್ತು ಪ್ರಕೃತಿಯ ಸಂಯೋಗವನ್ನು ಒಂದೇ ಶಿಲ್ಪದಲ್ಲಿ ವ್ಯಕ್ತಪಡಿಸುವಂತೆ ಸಂಯೋಜಿಸುವ ಕಲ್ಪನೆಯು ಅಂದಿನ ಕಲಾವಿದನ (Creative) ಜಾಣ್ಮೆಯನ್ನು ತೋರಿಸುತ್ತದೆ. ಈ ಸಂಯುಕ್ತ ವಿಗ್ರಹದ ಎಡಬದಿಯಲ್ಲಿ ಸುರೂಪದ ಸ್ತ್ರೀ ಶಿಲ್ಪ, ಬಲ ಬದಿಯಲ್ಲಿ ಕುರೂಪದ ಅಸ್ಥಿಪಂಜರಗಳು ಶಿಲ್ಪಿಯ ವಿಶಿಷ್ಟ ರಚನೆಗಳಾಗಿವೆ. ಮೇಲ್ಭಾಗದಲ್ಲಿ ವಿದ್ಯಾಧರರ ಜೋಡಿಗಳನ್ನು ನಿರ್ಮಿಸಿದ್ದರಿಂದ ಭಿತ್ತಿ ಪೂರ್ಣಗೊಂಡಿದೆ.

ಬಾದಾಮಿಯ ಚಾಲುಕ್ಯರ ಆಡಳಿತದ ಕಾಲದಲ್ಲಿ ಹಲವಾರು ಅರ್ಧನಾರೀಶ್ವರ ಶಿಲ್ಪಗಳು ರಚಿತವಾದುದು ಕಂಡುಬರುತ್ತದೆ. 'ಬಾದಾಮಿಯ ಮೂರನೆಯ ಗುಹಾಲಯದ ಭೋದಿಗೆಯಲ್ಲಿ

ನಟರಾಜ ಶಿಲ್ಪಗಳು



ಶಿಲ್ಪ-೧. ಶೈವ ಗುಹಾಲಯ, ಬಾದಾಮಿ



ಶಿಲ್ಪ-೨. ರಾವಳಫಡಿ ಗುಹಾಲಯ, ಐಹೊಳೆ


ನಟರಾಜ ಶಿಲ್ಪಗಳು




ಶಿಲ್ಪ-೬. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೪. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೫. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ನಟರಾಜ ಶಿಲ್ಪಗಳು



ಶಿಲ್ಪ-೮. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೯. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು




ಶಿಲ್ಪ-೧೦. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೧. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೨. ಗಳಗನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೩. ಪಾಪನಾಥ ದೇವಾಲಯ, ಪಟ್ಟದಕಲ್ಲು

ನಟರಾಜ ಶಿಲ್ಪಗಳು



ಶಿಲ್ಪ-೧೪. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೧೫. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೧೨. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೬. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೮. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೯. ಹುಚ್ಚಿಮಲ್ಲಿ ದೇವಾಲಯ, ಐಹೊಳೆ



ಶಿಲ್ಪ-೨೦. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ನಟರಾಜ ಶಿಲ್ಪಗಳು



ಶಿಲ್ಪ-೨೧. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨೨. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨೩. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨೪. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨೫. ಎರಡನನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨೬. ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು

ನಟರಾಜ ಶಿಲ್ಪಗಳು



ಶಿಲ್ಪ-೧೭. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೮. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೯. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಅರ್ಧನಾರೀಶ್ವರ, ಮಹಾಕೂಟದ ಸಂಗಮೇಶ್ವರ ಗುಡಿಯ ದೇವಕೋಷ್ಠದಲ್ಲಿಯ ಅರ್ಧನಾರೀಶ್ವರ, ಐಹೊಳೆಯ ರಾವಳಫಡಿಯ ಅರ್ಧನಾರೀಶ್ವರ'[೨೩] ಐಹೊಳೆಯಲ್ಲಿನ ಪ್ರಸಿದ್ಧ ದುರ್ಗಾ ದೇವಾಲಯದಲ್ಲಿಯ ಅರ್ಧನಾರೀಶ್ವರ ಶಿಲ್ಪಗಳನ್ನು ನಾವಿಲ್ಲಿ ನೋಡಬಹುದು. ಇವಲ್ಲದೆ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿದ್ದ ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿಯ ಆಲಂಪುರದ ಬಾಲಬ್ರಹ್ಮ ದೇವಾಲಯದ ಅಂತರಾಳದ ಭಿತ್ತಿಯಲ್ಲಿಯ ಅರ್ಧನಾರೀಶ್ವರ ಶಿಲ್ಪವೂ ಆಕರ್ಷಕ ಶಿಲ್ಪವಾಗಿದೆ. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಮಲ್ಲಿಕಾರ್ಜುನ ಗುಡಿಯ ಅರ್ಧನಾರೀಶ್ವರ ಶಿಲ್ಪಗಳನ್ನು ಇಲ್ಲಿ ಉದಾಹರಿಸಬಹುದು. ಇವರ ಕಾಲದ ಅರ್ಧನಾರೀಶ್ವರ ಶಿಲ್ಪಗಳು ದ್ವಿಭುಜ ಹಾಗೂ ಚತುರ್ಭುಜ ಶಿಲ್ಪಗಳಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿವೆ.

ಶಿಲ್ಪ –೧

'ಬಾದಾಮಿಯ ಮೊದಲನೆಯ ಗುಹೆಯಲ್ಲಿ ಗಮನಾರ್ಹ ಶಿಲ್ಪಗಳೆಂದರೆ ಅರ್ಧನಾರೀಶ್ವರ ಮತ್ತು ಶಿವನ ಲೀಲೆಯನ್ನು ಚಿತ್ರಿಸುವ ಶಿಲ್ಪಗಳು. ಮುಖಮಂಟಪದ ಗೋಡೆಗಳ ಮೇಲೆ ದೊಡ್ಡ ಆಕೃತಿಯ ಈ ಶಿಲ್ಪಗಳು ರಚನೆಯಾಗಿವೆ. ಬಲಭಾಗ ಶಿವನ ರೂಪದಿಂದಲೂ ಎಡಭಾಗ ಪಾರ್ವತಿ ರೂಪದಿಂದಲೂ ಸಮನ್ವಯಿತವಾಗಿರುವುದನ್ನು ಈ ವಿಗ್ರಹದಲ್ಲಿ ಶಿಲ್ಪಿ ಬಹಳ ಕುಶಲತೆಯಿಂದ'[೨೪] ಎಡ ಭಾಗದಲ್ಲಿ ಸ್ತ್ರೀ ಸಹಜ ಲಾವಣ್ಯವುಳ್ಳ ತರುಣಿ ಮತ್ತು ಅಸ್ಥಿಪಂಜರದ ವಿಕಾರ ರೂಪದ ಭೃಂಗಿ ಶಿಲ್ಪಿತರಾಗಿದ್ದಾರೆ. ಒಂದು ಸರೂಪ ಇನ್ನೊಂದು ಕುರೂಪ. ಒಂದು ಸಂತೋಷಕರ, ಇನ್ನೊಂದು ವಿಷಾದಕರ, ಇವೆರಡನ್ನೂ ಸಮನಾಗಿ ಕಾಣುವ ಪರಮಾತ್ಮ ಮಧ್ಯದಲ್ಲಿದ್ದಾನೆ. ಈ ಶಿಲ್ಪದ ಬಲಭಾಗ ಶಿವನದಾಗಿದ್ದು ಹಾಗೂ ಎಡ ಭಾಗ ಪಾರ್ವತಿಯದಾಗಿದೆ. ಶಿವನು ಜಟಾಮುಕುಟ, ಸರ್ಪ ಕುಂಡಲ, ವ್ಯಾಘ್ರ ಚರ್ಮ ಧರಿಸಿರುವುದು ಮತ್ತು ಪಾರ್ವತಿಯು ಕೇಶಾಲಂಕಾರದೊಂದಿಗೆ ಕಾಲ್ಗಡಗ, ತೋಳಬಂದಿಗಳನ್ನು ಹೊಂದಿರುವಳು. ವಿಗ್ರಹದ ಬಲಗಡೆ, ಅಸ್ಥಿಪಂಜರದಂತೆ ಇರುವ ಭೃಂಗಿ ಕೈ ಮುಗಿದು ನಿಂತಿರುವನು. ಎಡಭಾಗದಲ್ಲಿ ಎಡಗೈಯಲ್ಲಿ ಪ್ರಸಾದದ ಪೆಟ್ಟಿಗೆಯನ್ನು ಹೊತ್ತಿರುವ ಸೇವಕಿ ನಿಂತಿರುವಳು. ವಿಗ್ರಹದ ಕೆಳಗಡೆ ಅಷ್ಟಗಣದ ಪಟ್ಟಿಕೆ ಇದೆ. ಸಂಯುಕ್ತ ಪ್ರತಿಮೆಯ ವಾಮಭಾಗ ಪಾರ್ವತಿಯದಾಗಿದೆ. ಅವಳು ಮೇಲಿನ ಎಡಗೈಯಲ್ಲಿ ಕಮಲ ಹಾಗೂ ಎಡಗೈಯನ್ನು ತನ್ನ ಎದೆಗೆ ಒತ್ತಿದ್ದಾಳೆ.

ಈ ಶಿಲ್ಪದ ಇನ್ನೊಂದು ವೈಶಿಷ್ಟ್ಯವೆಂದರೆ ಶಿವ ಮತ್ತು ಪಾರ್ವತಿಯರನ್ನು ಒಂದೇ ಶಿಲ್ಪದಲ್ಲಿ ಕೆತ್ತುವ ಮೂಲಕ ಪುರುಷ ಮತ್ತು ಪ್ರಕೃತಿಯನ್ನು ಒಂದಾಗಿ ನೋಡುವ ಕಲ್ಪನೆಯನ್ನು ಜನತೆಗೆ ನೀಡಿರುವುದು. ಇಲ್ಲಿ ಶಿವ ಮತ್ತು ಪಾರ್ವತಿಯನ್ನು ನೋಡುವ ಬದಲಾಗಿ ಶಿವ ಶಕ್ತಿಯರನ್ನು ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆನ್ನಬಹುದು ಮತ್ತು ಅದರಲ್ಲಿ ಯಶಸ್ವಿಯೂ

೨೩. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೨

೨೪. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ – ೫೫೪



ಆಗಿದ್ದಾರೆ. ಇಂತಹದೇ ಇನ್ನೊಂದು ಪರಿಕಲ್ಪನೆಯನ್ನು ಹರಿಹರ ಶಿಲ್ಪದಲ್ಲಿಯೂ ಗಮನಿಸಬಹುದು. ಈ ಶಿಲ್ಪವೂ ಇಂತಹದೆ ಕಲ್ಪನೆಯನ್ನು ನಮಗೆ ಕಟ್ಟಿ ಕೊಡುತ್ತದೆ.(ಇದರ ಬಗ್ಗೆ ಮುಂದೆ ಚರ್ಚಿಸಲಾಗಿದೆ) ಅರ್ಧನಾರೀಶ್ವರ ಶಿಲ್ಪದ ಬಲಭಾಗದ ಪುರುಷ ಭಾಗವು ಹುಲಿ ಚರ್ಮವನ್ನು ಸುತ್ತಿಕೊಂಡಿರುವುದು, ಸರ್ಪಭೂಷಣನಾಗಿರುವುದು, ತಾಮಸ ಸ್ವರೂಪನಾಗಿರುವುದು,(ಜಡ ರೂಪಿಯಾಗಿರುವುದು) ಕಂಡುಬಂದರೆ ಮತ್ತೊಂದು ಬಾಗದಲ್ಲಿ ಶಕ್ತಿ ಸ್ವರೂಪಿಣಿಯಾಗಿರುವುದು ಕಂಡುಬರುತ್ತದೆ. ಪಾರ್ವತಿಯು ಸರ್ವಾಲಂಕಾರ ಭೂಷಿತೆಯಾಗಿದ್ದಾಳೆ. ಮುಖದಲ್ಲಿ ಜೀವಕಳೆ ಕಂಡುಬರುತ್ತದೆ. ಉತ್ತಮವಾದ ಕೇಶಾಲಂಕಾರ, ಕಾಲುಗಳಿಗೆ ಕಾಲ್ಗಡಗ, ತೋಳುಗಳಲ್ಲಿ ತೋಳುಬಂದಿಗಳನ್ನು ಹೊಂದಿರುವುದು ಕಂಡುಬರುತ್ತದೆ.

ಇಲ್ಲಿ ಶಿಲ್ಪಿಯ ಜಾಣ್ಮೆಯನ್ನು ಮೆಚ್ಚದಿರಲು ಸಾಧ್ಯವೇ ಇಲ್ಲ. ಶಿಲ್ಪದ ಮೇಲ್ಭಾಗದಲ್ಲಿ ಎಡಬಲ ಮೂಲೆಗಳಲ್ಲಿ ವಿದ್ಯಾಧರ ದಂಪತಿಗಳ ಜೋಡಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ಶಿಲ್ಪ ಸಂಯೋಜನೆಯ ಸಂದರ್ಭದಲ್ಲಿ ಶಿಲ್ಪದ ಚೌಕಟ್ಟಿನೊಳಗಿನ ಎಲ್ಲ ಭಾಗಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ಶಿಲ್ಪಕ್ಕೊಂದು ಚಲನೆಯನ್ನು ಮತ್ತು ಲಯವನ್ನು ತಂದುಕೊಡುವ ಉದ್ದೇಶದಿಂದ ಈ ರೀತಿಯ ಶಿಲ್ಪಗಳನ್ನು ಕೆತ್ತಿರುವ ಕಲಾವಂತಿಕೆಯನ್ನು ಕಾಣಬಹುದು. ಶಿಲ್ಪದ ಬದಿಗಳಲ್ಲಿ ಭೃಂಗಿ, ನಂದಿ, ಸೇವಕಿ ಇವರನ್ನು ಬಳಸಿಕೊಂಡ ರೀತಿ ಕಲಾತ್ಮಕವಾಗಿದೆ. ನುರಿತ ಕಲಾವಿದರ ಕೆತ್ತನೆಯನ್ನು ನಾವಿಲ್ಲಿ ಕಾಣಬಹುದು. ಈ ಶಿಲ್ಪದ ನಂತರ ಕಾಣಿಸಿಕೊಳ್ಳುವ ಅರ್ಧನಾರೀಶ್ವರ ಶಿಲ್ಪಗಳಲ್ಲಿ ಭೃಂಗಿ, ನಂದಿ ಕಂಡುಬರುವುದಿಲ್ಲ.[೨೫]

ಬಾದಾಮಿ ಚಾಲುಕ್ಯರ ಕಾಲದ ಪ್ರಿಯವಾದ ಪ್ರತಿಪಾದನಗಳಲ್ಲಿ ಅರ್ಧನಾರೀಶ್ವರ ಶಿಲ್ಪಗಳು ಮುಖ್ಯ ಹಾಗೂ ಹೆಚ್ಚಾಗಿ ಪಟ್ಟದಕಲ್ಲು, ಬಾದಾಮಿಯಲ್ಲಿ ಕಂಡುಬರುತ್ತವೆ. ಶಿಲ್ಪಗಳೇ ಪ್ರಾಯಶಃ ಇಲ್ಲಿ ಪ್ರಥಮ ಬಾರಿಗೆ ಪ್ರಕೃತಿಪುರುಷ ತತ್ವದ ಸಮ್ಮಿಳನದ ಪ್ರಯೋಗವಾಗಿವೆ. ಮುನಿ ಕಪಿಲನ ಸಾಂಖ್ಯ ಮತ್ತು ಪತಂಜಲಿಯ ಯೋಗ ಸಿದ್ಧಾಂತಗಳು ಸುಮಾರು ಆರನೇ ಶತಮಾನದ ಹೊತ್ತಿಗೆ ತಾತ್ವಿಕ ಚರ್ಚೆಗೆ ಒಳಪಡಲಾಗಿದ್ದ ಈ ಸೈದ್ಧಾಂತಿಕ ಸಂಕೇತದೋಪಾದಿಯಲ್ಲಿ ಶಿವಶಕ್ತಿಯರ ಗುಣಗಳು, ಮಾನಸಿಕ ಮತ್ತು ದೈಹಿಕ ಕ್ರಿಯಾಶಕ್ತಿಗಳು ಒಂದು ಸೃಷ್ಟಿಗೆ ಕಾರಣೀಭೂತವಾಗುತ್ತವೆ ಎಂಬುದನ್ನು ಅರ್ಧನಾರೀಶ್ವರ ತತ್ವದಲ್ಲಿ ಇಡಲಾಗಿದೆ.[೨೬] ಈ ತತ್ವವನ್ನು ಕಲಾತ್ಮಕವಾಗಿ ಚಾಲುಕ್ಯ ಶಿಲ್ಪಿ ಬಳಸಿಕೊಂಡಿದ್ದಾನೆ.

ಶಿವ ಪುರಾಣದ ಅರ್ಧನಾರೀಶ್ವರ ಲೀಲೆಯ ಕಥಾವಸ್ತು ಹೀಗಿದೆ. 'ಒಮ್ಮೆ ಕೈಲಾಸದಲ್ಲಿ ಸಕಲ ದೇವಾಧಿ ದೇವತೆಗಳು ಋಷಿ-ಮುನಿಗಳು ಶಿವ-ಪಾರ್ವತಿಯರನ್ನು ದರ್ಶನಗೈದು ಇಬ್ಬರಿಗೂ ಭಕ್ತಿಯಿಂದ ಪ್ರದಕ್ಷಿಣೆಗೈದು ಪುನೀತರಾದರು, ಶಿವನ ಗಣಗಳಲ್ಲಿ ಒಬ್ಬನಾದ ಭೃಂಗಿಯು

---

೨೫. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೨೧೦

೨೬. ಡಾ. ಚೂಡಾಮಣಿ ನಂದಗೋಪಾಲ : ಶಿಲೆ-ಕಲೆ, ಪುಟ - ೧೭೫

[illegible]



ತಾನು ಕೇವಲ ಶಿವಭಕ್ತನಾಗಿದ್ದು ಪಾರ್ವತಿಯನ್ನು ಬಿಟ್ಟು ಶಿವನನ್ನೆ ಪ್ರದಕ್ಷಿಣೆಗೈಯಲು ಕೋಪದಲ್ಲಿ ಪಾರ್ವತಿಯು ಇವನ ಅಹಂಕಾರವನ್ನು ಮುರಿಯಲು ಇವನ ದೇಹದ ರಕ್ತ–ಮಾಂಸಗಳನ್ನು ಕಿತ್ತುಕೊಂಡು ಚೈತನ್ಯ ಹೀನನನ್ನಾಗಿ ಮಾಡಿದಳು, ಅಲ್ಲದೆ ಶಿವನನ್ನು ತಪಸ್ಸು ಮಾಡಿ ಶಿವನಿಂದ ಬೇರ್ಪಡದ ಹಾಗೆ ಶಿವನ ವಾಮಭಾಗದಲ್ಲಿ ಸೇರಿ ಅರ್ಧನಾರೀಶ್ವರಳಾಗಿ ಭೃಂಗಿಯ ಹತ್ತಿರ ಬರಲು, ಛಲಬಿಡದ ಭೃಂಗಿ ತನ್ನ ತಪಸ್ಸಿನ ಶಕ್ತಿಯಿಂದ ಭ್ರಮರವಾಗಿ ಶಿವನ ನಾಭಿಮಾರ್ಗದಿಂದ ಶಿವನನ್ನೇ ಪ್ರದಕ್ಷಿಣೆಗೈದು ಪಾರ್ವತಿಯನ್ನು ಚಕಿತಗೊಳಿಸಿದ. ಭೃಂಗಿಯ ಶಿವಭಕ್ತಿಗೆ ತಲೆದೂಗಿದ ಪಾರ್ವತಿಯು ಪುನಃ ಚೈತನ್ಯ ನೀಡಿ ಕರುಣಿಸಿದಳು ಹಾಗೂ ಶಿವನಿಂದ ಮುಕ್ತಿಯೂ ಲಭಿಸುವಂತೆ ಬೇಡಿಕೊಂಡಳೆಂದು ಪುರಾಣದಲ್ಲಿ ಹೇಳಲಾಗಿದೆ.

ಈ ಮಾತುಗಳೇನೇ ಇರಲಿ, ಇಲ್ಲಿಯ ಶಿಲ್ಪದ ಸೊಗಸು ಮತ್ತು ಶಿಲ್ಪಿಯ ಕಲಾ ಚಾತುರ್ಯದ ಕುರಿತು ಎರಡು ಮಾತಿಲ್ಲ. ಈ ಅರ್ಧನಾರೀಶ್ವರ ಶಿಲ್ಪವು ಹಲವು ಆಯಾಮಗಳಲ್ಲಿ ಚಿಂತನೆ ನಡೆಸಲು ಅವಕಾಶ ಮಾಡಿಕೊಡುತ್ತದೆ. ಬಹುಶಃ ಸಾಹಿತ್ಯದ ಮೂಲಕ ಅರ್ಧನಾರೀಶ್ವರ ಕಲ್ಪನೆಯನ್ನು ಶಿಲ್ಪಗಳ ಮೂಲಕ ವ್ಯಕ್ತಪಡಿಸುವಲ್ಲಿ ಚಾಲುಕ್ಯ ಶಿಲ್ಪಿಗಳಷ್ಟು ಯಶಸ್ವಿಯಾಗಿ ಇನ್ನಾರಿಂದಲೂ ಸಾಧ್ಯವಾಗಿಲ್ಲವೆನ್ನಬಹುದು.

ಶಿಲ್ಪ –೨

ಬಾದಾಮಿಯ ಮೂರನೆಯ ಗುಹಾಲಯದ ವೈಷ್ಣವ ಗುಹೆಯಲ್ಲಿಯೂ ಒಂದು ಸುಂದರ ಅರ್ಧನಾರೀಶ್ವರ ಶಿಲ್ಪವಿದೆ. 'ಮೂರನೆಯ ಗುಹಾಲಯದ ಬೋದಿಗೆಯಲ್ಲಿಯ ಅರ್ಧನಾರೀಶ್ವರನ ಶಿಲ್ಪ ಆಕಾರದಲ್ಲಿ ಸಣ್ಣದಾದರೂ ನೋಡಲು ಸುಂದರವಾಗಿದೆ. ಎಡಭಾಗದಲ್ಲಿ ಸ್ತ್ರೀ ರೂಪ ಮತ್ತು ಬಲಭಾಗದಲ್ಲಿ ಪುರುಷಾಕೃತಿಯನ್ನು ಹೊಂದಿರುವ ಶಿಲ್ಪದ ಎಡಭಾಗದಲ್ಲಿ ಸಣ್ಣ ಗಾತ್ರದ ಗಣಶಿಲ್ಪವಿದೆ. ಶಿರೋಭಾಗವು ಎಡಗಡೆಗೆ ಬಾಗಿದಂತಿದೆ.

ಸಂಪೂರ್ಣ ಅಲಂಕಾರವನ್ನು ಹೊಂದಿರುವ ಈ ಶಿಲ್ಪವು ಮೊದಲ ಗುಹಾಲಯದ ಶಿಲ್ಪದ ಮುಂದುವರಿದ ಭಾಗದಂತಿದೆ. ಚತುರ್ಭುಜ ಶಿಲ್ಪವು ಇದಾಗಿದೆ. ಅರ್ಧನಾರೀಶ್ವರನ ಕೆಳಗಡೆ ೩ ಕುಬ್ಜಗಣ ಶಿಲ್ಪಗಳಿದ್ದು, ಅವು ಅರ್ಧನಾರೀಶ್ವರನನ್ನು ಎರಡು ಕೈಗಳಿಂದ ಮೇಲೆ ಎತ್ತಿರುವಂತೆ ಕೆತ್ತಿರುವುದು ವಿಶೇಷವಾಗಿದೆ. 'ಮಹಾಕೂಟದ ಸಂಗಮೇಶ್ವರ ದೇವಾಲಯದ ಅರ್ಧನಾರೀಶ್ವರ ಶಿಲ್ಪವು ಭಾರತದ ಕೆಲವೇ ಉತ್ಕೃಷ್ಟ ಶಿಲ್ಪಗಳಲ್ಲಿ ಒಂದಾಗಿದೆಯೆಂದು ಕೆರೋಲ್ ಯಾರ್ಡ್‌ಕ್ಲಿಫ್ ಗುರುತಿಸಿದ್ದಾರೆ. ಇದು ದ್ವಿಬಾಹು ಅರ್ಧನಾರೀಶ್ವರ ಶಿಲ್ಪವಾಗಿರುವುದೊಂದು ವಿಶೇಷ. ದೀರ್ಘ ವೃತ್ತಾಕಾರದ ಪ್ರಭಾಮಂಡಲ, ಚಿತ್ತಾಕರ್ಷಕ ಕೇಶವಿನ್ಯಾಸ, ಹಿತಮಿತವಾದ ಆಭರಣಗಳು, ಸಂಕೀರ್ಣ ನಕ್ಷೆಗಳಿಂದ ಕೂಡಿದ ನಯ ನಾಜೂಕಿನ ಅಧೋವಸ್ತ್ರ, ತ್ರಿಭಂಗಿ ನಿಲುವಿನಿಂದಾಗಿ ದೇವಿಯ ಸ್ತನದ ಕೆಳಗೆ ಮೂಡಿದ ಸ್ತ್ರೀ ಸೌಂದರ್ಯದ ಕುರುಹಾಗಿರುವ



ಮಡಿಕೆಗಳು, ಎಲ್ಲಕ್ಕೂ ಮಿಗಿಲಾಗಿ ದೈವೀಕಳೆಯಿಂದ ಕೂಡಿದ ಪ್ರಸನ್ನವಾದ ಮುಖಭಾವ-ಇವೆಲ್ಲವೂ ಮಹಾಶಿಲ್ಪಿಯ ಕಲಾಸೃಷ್ಟಿ ಎಂದು ಸಾರುವ[೨೭] ಈ ಶಿಲ್ಪವನ್ನು ತ್ರಿಮಾನದಲ್ಲಿ ರಚಿಸಲಾಗಿದೆ.

ಶಿಲ್ಪ –೩

ಪಟ್ಟದಕಲ್ಲಿನ ಕಾಶೀವಿಶ್ವೇಶ್ವರ ದೇವಾಲಯದ ಬಲಕಂಬದ ಮೇಲೆ ಒಂದು ಆಯತಾಕಾರದ ಪಟ್ಟಿಕೆಯಲ್ಲಿ ಅರ್ಧನಾರೀಶ್ವರ ಶಿಲ್ಪವೊಂದು ಕಂಡುಬರುತ್ತದೆ. ಸಣ್ಣ ಗಾತ್ರದ್ದಾದರೂ ಸುಂದರವಾಗಿರುವ ಈ ಶಿಲ್ಪದ ವಿಶೇಷತೆಯೆಂದರೆ ಎರಡು ಕುಬ್ಜಗಣಗಳು ಕೆಳಭಾಗದಲ್ಲಿ ನಾಟ್ಯವಾಡುತ್ತಿವೆ. ಮತ್ತೊಂದು ಶಿಲ್ಪ ಭಗ್ನವಾಗಿದೆ. ಹಿಂಭಾಗದಲ್ಲಿ ವಿದ್ಯಾಧರ ಶಿಲ್ಪಗಳು ಹೂ ಮಾಲೆಯನ್ನು ಹಾಕುವಂತಿದೆ. ಇಲ್ಲಿ ಶಿಲ್ಪಿಯು ವಿದ್ಯಾಧರಶಿಲ್ಪಕ್ಕೂ ಮಹತ್ವ ಕೊಟ್ಟಿದ್ದಾನೆ. ಇವರ ಹಿಂದೆ ಒಂದು ಶಿಲ್ಪವಿದೆ. ಒರಟಾಗಿ ಕೆತ್ತಿದಂತೆ ಕಂಡುಬರುವ ಈ ಶಿಲ್ಪದ ಅಂಗ ಪ್ರಮಾಣ ಸ್ವಲ್ಪ ವಿಚಿತ್ರವೆನ್ನಿಸುವಂತಿದೆ. ಈ ಉಬ್ಬು ಶಿಲ್ಪವು ಸಮ ಭಂಗಿಯಲ್ಲಿ ಚತುರ್ಭುಜವಾಗಿ ಸಣ್ಣ ಗಾತ್ರದ್ದಾಗಿರುವುದರಿಂದ ಶಿಲ್ಪಿಯು ಹೆಚ್ಚಿನ ವಿವರಗಳನ್ನು ಹೇಳಿದಂತಿಲ್ಲ. ಸ್ತ್ರೀ ಭಾಗವು ಉಲ್ಲಾಸಯುಕ್ತ ಮುಖಭಾವದಿಂದ ಕಂಡುಬಂದರೆ ಪುರುಷಭಾಗವು ಜಡತ್ವವನ್ನು ಹೊಂದಿದೆ. ಆಭರಣಗಳು ಕಡಿಮೆಯಿದ್ದು ಸೊಂಟದ ಭಾಗದಲ್ಲಿ ಕೇವಲ ಒಂದು ಅರ್ಧವಸ್ತ್ರ ಮಾತ್ರ ಇದೆ. ಎಲ್ಲಾ ಶಿಲ್ಪಗಳು ಸಮಾನಾಂತರದಲ್ಲಿದ್ದು ಮಧ್ಯದಲ್ಲಿನ ಶಿಲ್ಪದೆಡೆಗೆ ಕೇಂದ್ರೀಕೃತವಾಗಿರುವ ಈ ಶಿಲ್ಪವು ಉಬ್ಬುಶಿಲ್ಪವಾಗಿದೆ.


ಶಿಲ್ಪ –೪

ಈ ಶಿಲ್ಪವು ಕಾಶಿವಿಶ್ವೇಶ್ವರ ದೇವಾಲಯದ ಹೊರ ಭಿತ್ತಿಯಲ್ಲಿ ಕಂಡುಬರುತ್ತದೆ. ಇದು ಬಿಡಿ ಶಿಲ್ಪವಾಗಿದ್ದು ದುಂಡು ಶಿಲ್ಪವಾಗಿದೆ. ಇಲ್ಲಿ ವಿದ್ಯಾಧರ ಶಿಲ್ಪಗಳಿಲ್ಲ. ಬದಲಾಗಿ ಗಣ ಶಿಲ್ಪಗಳಿವೆ. ಇವು ಮುಖ್ಯ ಶಿಲ್ಪಕ್ಕೆ ಹಿನ್ನೆಲೆಯಲ್ಲಿ ಒತ್ತಿಕೊಂಡಂತಿದ್ದು ಶಿಲ್ಪವು ಬಹುಪಾಲು ಭಗ್ನವಾಗಿದೆ. ಇದು ಕೂಡಾ ಚತುರ್ಭುಜ ಶಿಲ್ಪವಾಗಿದೆ. ಅಂಗಗಳು ಪ್ರಮಾಣಬದ್ಧವಾಗಿವೆ. ಮೊದಲು ಹೇಳಿದ ಶಿಲ್ಪಕ್ಕಿಂತ ಹೆಚ್ಚು ಪರಿಪೂರ್ಣವಾಗಿದೆ. ಶಿಲ್ಪದ ಹಿಂದೆ ಪ್ರಭಾಮಂಡಲ ಕಂಡುಬರುವಂತೆ ಈ ಶಿಲ್ಪವನ್ನು ದ್ವಿಮಾನದಲ್ಲಿ ಕೆತ್ತಲಾಗಿದೆ. ಇಲ್ಲಿ ಶಿಲ್ಪಿಯು ಲಭ್ಯ ಸ್ಥಳಾವಕಾಶದಲ್ಲಿ ಕೇವಲ ಅರ್ಧನಾರೀಶ್ವರ ಶಿಲ್ಪವನ್ನು ಮಾತ್ರ ಕೆತ್ತಿದ್ದು ಬಹುಶಃ ಸ್ಥಳಾವಕಾಶದ ಕೊರತೆಯಿಂದಾಗಿ ಇತರ ಶಿಲ್ಪಗಳನ್ನು ಕೆತ್ತಿಲ್ಲವೆನ್ನಬಹುದು.

ಶಿಲ್ಪ –೫

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿಯಲ್ಲಿ ಒಂದು ಸುಂದರವಾದ

೨೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೦





ಅರ್ಧನಾರೀಶ್ವರ ಶಿಲ್ಪವಿದೆ. ಈ ಶಿಲ್ಪವು ಕಾಶೀವಿಶ್ವೇಶ್ವರ ದೇವಾಲಯದಲ್ಲಿರುವ ಶಿಲ್ಪಕ್ಕಿಂತ ವಿಭಿನ್ನವಾಗಿದೆ, ಮುಖಭಾವವು ಸ್ಪಷ್ಟವಾಗಿದ್ದು ಶಿಲ್ಪವು ಹೆಚ್ಚಿನ ತೇಜಸ್ಸಿನಿಂದ ಕೂಡಿದೆ. ಚತುರ್ಭುಜ ಶಿಲ್ಪವು ಇದಾಗಿದೆ. ಶಿವನ ಭಾಗದಲ್ಲಿ, ಒಂದು ಕೈಯನ್ನು ಸೊಂಟದ ಮೇಲಿಟ್ಟುಕೊಂಡಿದ್ದರೆ ಹಿಂದಿನ ಕೈಯಲ್ಲಿ ತ್ರಿಶೂಲವಿದ್ದು ಕೈ ಭುಜಮಟ್ಟಕ್ಕೆ ಎತ್ತಿ ಹಿಡಿಯಲಾಗಿದೆ.

ಪಾರ್ವತಿಯ ಭಾಗದಲ್ಲಿ, ಕೈಯನ್ನು ಕೆಳಗೆ ಇಳಿಬಿಡಲಾಗಿದೆ. ಪುರುಷ ಭಾಗದಲ್ಲಿ ಕಾಲು ನೀಳವಾಗಿ ಬಿಡಲಾಗಿದೆ. ಶಿಲ್ಪವು ಆಭರಣ ಭೂಷಿತವಾಗಿದೆ. ಶಿವನ ತೋಳಿನಲ್ಲಿ ನಾಗಬಂಧ ತೋಳಾಭರಣವಿದೆ. ಇಲ್ಲಿ ಶಿಲ್ಪದ ಸುತ್ತ ಗಣಗಳು ಕಂಡುಬರುವುದಿಲ್ಲ. ಕೇವಲ ಅರ್ಧನಾರೀಶ್ವರ ಶಿಲ್ಪವನ್ನಷ್ಟೇ ಇಲ್ಲಿ ಕೆತ್ತಲಾಗಿದೆ. ಸುಂದರ ಮುಖಭಾವನೆಯನ್ನು ವ್ಯಕ್ತಪಡಿಸುತ್ತದೆ. ಶಿರೋಭಾಗದಲ್ಲಿ ಪುರುಷಭಾಗವು ಜಟಾಮುಕುಟವನ್ನು ಹೊಂದಿದ್ದರೆ ಸ್ತ್ರೀಭಾಗದಲ್ಲಿ ಕೂದಲನ್ನು ಬಾಚಿ ಹಿಂದಕ್ಕೆ ಇಳಿಬಿಟ್ಟಂತಿದೆ. ಶಿಲ್ಪದ ಎಡಕಾಲು ಭಗ್ನಗೊಂಡಿದೆ, ಆದರೂ ಅಪರೂಪದ ಸುಂದರ ದ್ವಿಮಾನ ಉಬ್ಬು ಶಿಲ್ಪವು ಇದಾಗಿದೆ.

ಶಿಲ್ಪ –೬

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ್ಯದ ಹೊರಭಾಗದ ಎಡಗೋಡೆಯಲ್ಲಿ ಇನ್ನೊಂದು ಅರ್ಧನಾರೀಶ್ವರ ಶಿಲ್ಪವನ್ನು ಗಮನಿಸಬಹುದು. ನೀಳಕಾಯದ ಈ ಶಿಲ್ಪದಲ್ಲಿ ಚಾಲುಕ್ಯರ ಕಾಲದ ಶಿಲ್ಪಿಗಳ ಕೌಶಲ್ಯವನ್ನು ಗಮನಿಸಬಹುದು. ಈ ಶಿಲ್ಪದಲ್ಲಿ ಶಿರೋಭಾಗವು ಬಲಗಡೆಗೆ ಬಾಗಿಕೊಂಡಿದೆ. ಸ್ತ್ರೀಭಾಗದ ಎಡಗೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡಿದೆ. ಇನ್ನೊಂದು ಕೈಯನ್ನು ಸೊಂಟದ ಮೇಲಿರಿಸಲಾಗಿದೆ. ಪುರುಷಭಾಗದ ಮುಂದಿನ ಕೈಮುದ್ರೆ ಭಗ್ನವಾಗಿದ್ದು, ಹಿಂದಿನ ಕೈಯಲ್ಲಿ ತ್ರಿಶೂಲವಿದೆ. ತೋಳಿನಲ್ಲಿ ನಾಗಬಂಧದ ಆಭರಣವಿದ್ದರೆ ಸ್ತ್ರೀ ಭಾಗದ ತೋಳಿನಲ್ಲಿ ಸಾಮಾನ್ಯವಾದ ತೋಳಬಂದಿ ಇದೆ. ಉಳಿದಂತೆ ಶಿಲ್ಪದ ಮುಖಭಾವದಲ್ಲಿ ಶಿವನ ಭಾಗವು ಜಡತ್ವವನ್ನು ವ್ಯಕ್ತಪಡಿಸಿದರೆ ಸ್ತ್ರೀಭಾಗದಲ್ಲಿ ಜೀವಕಳೆ ಕಂಡುಬರುತ್ತದೆ. ಸ್ತನಭಾಗವು ಗುಂಡಾಗಿ ಜೀವಕಳೆ ಮತ್ತು ಪುಷ್ಟತೆಯನ್ನು ವ್ಯಕ್ತಪಡಿಸುತ್ತದೆ. ಶಿವನ ಭಾಗದಲ್ಲಿ ಸಣ್ಣದಾದ ಚರ್ಮಾಂಬರವಿದ್ದರೆ, ಸ್ತ್ರೀ ಭಾಗದಲ್ಲಿ ಮೊಣಕಾಲಿನವರೆಗೂ ನೆರಿಗೆಯಿರುವ ವಸ್ತ್ರವನ್ನು ಉಟ್ಟಿರುವುದನ್ನು ಇಲ್ಲಿ ಗಮನಿಸಬಹುದು.

ಸಿಂಹದ ಮೇಲೆ ನಿಂತಂತೆ ಕೆತ್ತಿರುವ ಈ ಶಿಲ್ಪದ ಹಿಂಭಾಗದಲ್ಲಿ ಸಣ್ಣಗಾತ್ರದ ಗಣ ಶಿಲ್ಪವನ್ನು ಕೆತ್ತಿರುವುದು ಕಂಡುಬರುತ್ತದೆ. ಅಲ್ಲದೇ ಇದನ್ನು ದ್ವಿಮಾನದಲ್ಲಿ ಕೆತ್ತಲಾಗಿದೆ. ಒಟ್ಟಾರೆ ಬಾದಾಮಿಯ ಸಮೀಪವಿರುವ ಮಹಾಕೂಟದ ಪರಿಸರದಲ್ಲಿನ ಅರ್ಧನಾರೀಶ್ವರ ಶಿಲ್ಪಗಳನ್ನಿಲ್ಲಿ ಉಲ್ಲೇಖಿಸಬೇಕಾಗುತ್ತದೆ. ಅತ್ಯಂತ ಸುಂದವಾದ ಈ ಶಿಲ್ಪಗಳು ಚಾಲುಕ್ಯರ ಕಾಲದ ಶಿಲ್ಪಿಗಳ ಕಲಾಕೌಶಲ್ಯಕ್ಕೊಂದು ಉತ್ತಮ ನಿದರ್ಶನವಾಗಿವೆ.



ಶಿಲ್ಪ –೭

ಮಹಾಕೂಟೇಶ್ವರ ದೇವಾಲಯದ ಎಡಗಡೆ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಅರ್ಧನಾರೀಶ್ವರನ ಶಿಲ್ಪವನ್ನು ನೋಡಬಹುದು. ಇಲ್ಲಿರುವ ಅರ್ಧನಾರೀಶ್ವರ ಶಿಲ್ಪವು ಅತ್ಯಂತ ಕಲಾತ್ಮಕವಾಗಿದ್ದು ಪಾರ್ವತಿ ಮತ್ತು ಶಿವನ ಬಟ್ಟೆಯಲ್ಲಿ ವಿಶೇಷವಾಗಿ ನೆರಿಗೆಗಳು ಮತ್ತು ತಲೆಯ ಭಾಗದಲ್ಲಿ ಕಂಡುಬರುವ ಕೆತ್ತನೆಯನ್ನು ಗಮನಿಸಬಹುದು. ಶಿವನು ಬಲಗೈಯಲ್ಲಿ ಹಿಡಿದಿರುವ ಉದ್ದವಾದ ತ್ರಿಶೂಲವನ್ನಾಗಲೀ ತೊಡೆಯ ಭಾಗದಲ್ಲಿ ಕಂಡುಬರುವ ನಾಗಬಂಧವನ್ನಿಲ್ಲಿ ಉಲ್ಲೇಖಿಸಬಹುದಾಗಿದೆ. ಇದು ದ್ವಿಭುಜ ಶಿಲ್ಪವಾಗಿರುವುದೊಂದು ವಿಶೇಷ. ಇನ್ನೊಂದು ಗಮನಾರ್ಹವಾದ ಅಂಶವೆಂದರೆ ತಲೆಯ ಜಟಾಮುಕುಟ. ಶಿವನ ಭಾಗದಲ್ಲಿ ಕೂದಲು ಸ್ವಲ್ಪಮಾತ್ರ ಇಳಿಬಿಟ್ಟಿದ್ದರೆ ಪಾರ್ವತಿಯ ಭಾಗದಲ್ಲಿ ಕೂದಲು ಉದ್ದವಾಗಿ ಭುಜದಿಂದ ಕೆಳಗೆ ಇಳಿಬಿದ್ದಿರುವುದು ಕಂಡುಬರುತ್ತದೆ. ಪಾರ್ವತಿಯ ದೇಹವು ಲಯಬದ್ಧವಾಗಿ ಬಾಗಿಕೊಂಡು, ಕೈಯಲ್ಲಿ ಪುಷ್ಪಗುಚ್ಛವನ್ನು ಹಿಡಿದಿದ್ದು ಮುಖಭಾವವು ಶಾಂತತೆಯನ್ನು ಸೂಚಿಸುತ್ತದೆ. ಆದರೆ ಶಿವನ ಮುಖಭಾವದಲ್ಲಿ ಸ್ವಲ್ಪಮಟ್ಟಿಗಿನ ಉಗ್ರತೆಯು ಕಂಡುಬರುವುದೊಂದು ವಿಶೇಷ. ಪಾರ್ವತಿಯು ಕೈ ಮತ್ತು ತೋಳಿನಲ್ಲಿ ಆಭರಣಗಳನ್ನು ಹೊಂದಿದ್ದು ಶಿವನು ಕೇವಲ ನಾಗಾಭರಣನಾಗಿದ್ದಾನೆ. ಸೊಂಟದ ಕೆಳಭಾಗದಲ್ಲಿ ಧರಿಸಿರುವ ನಾಗನು ಹೆಡೆಬಿಚ್ಚಿಕೊಂಡಿದ್ದು ಗಂಟು ಹಾಕಲಾಗಿರುವುದೊಂದು ವಿಶೇಷ. ಈ ರೀತಿಯ ಅಲಂಕರಣಗಳು ಈ ಮೊದಲು ನೋಡಿದ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ. ಶಿವಗಣಗಳು ಇಲ್ಲಿ ಕಂಡುಬರುವುದಿಲ್ಲ.

ಬಟ್ಟೆಯಲ್ಲಿ ಕಂಡುಬರುವ ವಿಶಿಷ್ಟವಾದ ನೆರಿಗೆಯು ಈ ಶಿಲ್ಪಕ್ಕೆ ಹೆಚ್ಚಿನ ಸೌಂದರ್ಯವನ್ನು ತಂದುಕೊಟ್ಟಿದೆ. ಸೊಂಟದಲ್ಲಿ ನೇತುಹಾಕಲಾಗಿರುವ ಗಂಟೆಯು ಇನ್ನೊಂದು ಗಮನಿಸಬಹುದಾದ ಅಂಶ. ಒಟ್ಟಿನಲ್ಲಿ ಹೇಳುವುದಾದರೆ ದ್ವಿಮಾನದಲ್ಲಿ ಕಂಡುಬರುವ ಈ ಶಿಲ್ಪವು ಉಳಿದ ಶಿಲ್ಪಗಳಿಗಿಂತ ಹಲವಾರು ರೀತಿಯ ವಿಭಿನ್ನತೆಯನ್ನು ಹೊಂದಿರುವುದನ್ನು ಕಾಣಬಹುದು.

ಶಿಲ್ಪ –೮

ಮಹಾಕೂಟದ ಸಂಗಮೇಶ್ವರ ದೇವಾಲಯದ ಗರ್ಭಗೃಹದ ಹಿಂಭಾಗದ ಹೊರ ಭಿತ್ತಿಯ ಮೇಲೆ ಪಶ್ಚಿಮಾಭಿಮುಖವಾಗಿದೆ. ಇದು ಕೂಡಾ ಕಲಾತ್ಮಕವಾಗಿ ಗಮನಿಸಬಹುದಾದ ಶಿಲ್ಪ. ಈ ಶಿಲ್ಪದಲ್ಲಿ ಇನ್ನೊಂದು ಮುಖ್ಯವಾಗಿ ಗಮನಿಸಬಹುದಾದ ಅಂಶವೆಂದರೆ, ಈ ಶಿಲ್ಪದಲ್ಲಿ ಶಿವನಿಗಿಂತಲೂ ಪಾರ್ವತಿಯ ಕಡೆಗೆ ಹೆಚ್ಚಿನ ಪ್ರಾಮುಖ್ಯ ದೊರೆತಂತೆ ಕಂಡುಬರುತ್ತದೆ. ಇಲ್ಲಿ ಶಿವನ ಕೈಯಲ್ಲಿ ತ್ರಿಶೂಲವಿಲ್ಲ, ಬದಲಾಗಿ ಶಿವನು ಕೈಯನ್ನು ಕೆಳಗಡೆಗೆ ಇಳಿಬಿಟ್ಟಿದ್ದು ಕೈಯ ಮೇಲೆಯೇ ಎಲ್ಲ ಭಾರವನ್ನು ಹಾಕಿದ್ದು ನೋಡಿದರೆ ಇಲ್ಲಿ ಶಿಲ್ಪಕೆತ್ತನೆ ಇದ್ದಿರಬಹುದು, ಆದರೆ ಸದ್ಯ ಇಲ್ಲ. ಶಿವನ ತೋಳಿನಲ್ಲಿ ನಾಗಬಂಧವಿದ್ದು, ಪಾರ್ವತಿಯು ಕೈಯನ್ನು ಭುಜಮಟ್ಟಕ್ಕೆ

ಎತ್ತಿದ್ದು ಕೈಯ ಬೆರಳುಗಳು ಕಿವಿಯ ಓಲೆಗಳನ್ನು ಹಿಡಿದಂತಿವೆ. ಕೆತ್ತನೆಯಂತೂ ಅತ್ಯಂತ ಸುಂದರವಾಗಿ ಮೂಡಿರುವುದು ಕಂಡುಬರುತ್ತದೆ. ದೇಹದ ಪೂರ್ಣ ಭಾರವನ್ನು ಶಿವನ ಭಾಗಕ್ಕೆ ಹಾಕಲಾಗಿದೆ. ಅಂದರೆ ಪಾರ್ವತಿಯ ಭಾಗವು ಬಹುವಾಗಿ ಬಾಗಿದ್ದು ಹೆಚ್ಚಿನ ರೇಖಾಭಾಗವನ್ನು ಹೊಂದಿದೆ. ತಲೆಯು ಎಡಭಾಗಕ್ಕೆ ಸ್ವಲ್ಪವೆ ಬಾಗಿದ್ದು ತಲೆಯ ಹಿಂದುಗಡೆ ಪ್ರಭಾಮಂಡಲ ಅಂಡಾಕಾರದಲ್ಲಿದೆ. ಶಿಲ್ಪದಲ್ಲಿ ರೇಖಾಲಾಲಿತ್ಯಕ್ಕೆ ವಿಶೇಷ ಗಮನ ನೀಡಿರುವುದನ್ನು ಗಮನಿಸಬಹುದು. ಪಾರ್ವತಿಯ ಸ್ತನದ ಕೆಳಭಾಗದಲ್ಲಿ ನೋಡಿದರೆ ಚಾಲುಕ್ಯರ ಕಾಲದಲ್ಲಿ ಶರೀರ ಶಾಸ್ತ್ರ(Anatomy Study)ಕ್ಕೆ ಮಹತ್ವ ಕೊಟ್ಟಿದ್ದಾರೆ. ಸೊಂಟದ ಬಾಗುಗಳು, ಉದ್ದಕ್ಕೆ ನಿಂತಿರುವ ಪಾರ್ವತಿಯ ಸೊಂಟದ ಕೆಳಗೆ ಇಳಿಬಿಟ್ಟಿರುವ ಸೀರೆಯ ನೆರಿಗೆಗಳು, ಸೊಂಟಪಟ್ಟಿ, ಪಾರ್ವತಿಯ ಕಾಲುಂಗುರ ಮುಂತಾದವುಗಳು ಶಿಲ್ಪಕ್ಕೆ ವಿಶೇಷ ಮೆರುಗನ್ನು ತಂದುಕೊಟ್ಟಿವೆ. ಈ ಶಿಲ್ಪವನ್ನು ದ್ವಿಮಾನದಲ್ಲಿ ರಚಿಸಲಾಗಿದೆ. ಆದರೆ ಈ ಹಿಂದೆ ನೋಡಿದ ಎಲ್ಲ ಅರ್ಧನಾರೀಶ್ವರ ಶಿಲ್ಪಗಳು ದ್ವಿಮಾನದಲ್ಲಿ ರಚಿಸಿದರೂ ಇದರಷ್ಟು ಕಲಾವಂತಿಕೆ ಇಲ್ಲವೆನ್ನಬಹುದು.

ಶಿಲ್ಪ –೯

ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದ ಎಡಭಾಗದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಈ ಶಿಲ್ಪವಿದ್ದು, ಇದು ಸಣ್ಣಗಾತ್ರದ್ದಾದರೂ ಸುಂದರವಾಗಿದೆ. ಆಕಾರದಲ್ಲಿ ದಷ್ಟಪುಷ್ಟವಾಗಿದ್ದು ಚತುರ್ಭುಜ ಶಿಲ್ಪವಾಗಿದೆ. ಕೈಗಳು ನೈಜತೆಗಿಂತ ಹೆಚ್ಚು ದೊಡ್ಡದಾಗಿದ್ದು ಶಿಲ್ಪದ ಅನುಭವವಾಗುತ್ತದೆ. ಶಿಲ್ಪದ ಮುಖಭಾವವು ಶಾಂತವಾಗಿದೆ. ಶಿಲ್ಪದ ಕೆಳಭಾಗದಲ್ಲಿ ಸಣ್ಣಗಾತ್ರದ ಕುಬ್ಜಗಣಶಿಲ್ಪವಿದೆ. ಮೇಲಿನ ಕೈಯಲ್ಲಿ ದೊಡ್ಡಗಾತ್ರದ ಪರಶುವನ್ನು (ಕೊಡಲಿ) ಹಿಡಿದಿದೆ. ಇದು ಉಳಿದ ಅರ್ಧನಾರೀಶ್ವರ ಶಿಲ್ಪಗಳಿಗಿಂತ ವಿಭಿನ್ನವಾಗಿದೆ. ಉಳಿದಂತೆ ಇತರ ಅರ್ಧನಾರೀಶ್ವರ ಶಿಲ್ಪಗಳಂತೆಯೇ ಇರುವ ಇತರ ಅಂಶಗಳನ್ನು ಹೊಂದಿದೆ.

ಇಲ್ಲಿ ಗಮನಿಸಬಹುದಾದ ವ್ಯತ್ಯಾಸವೆಂದರೆ ಶಿಲ್ಪದಲ್ಲಿ ಶಿವನ ಹಿಂಭಾಗದಿಂದ ತೊಡೆ ಭಾಗದಿಂದ ಮುಂದುವರಿದು ಬಂದಿರುವ ಉತ್ತರೀಯದ ಬಟ್ಟೆಯು ಎಡಕಾಲಿನವರೆಗೂ ಮುಂದುವರಿದಿದ್ದು ಅದರ ತುದಿಯನ್ನು ಪಾರ್ವತಿಯು ಎರಡು ಬೆರಳುಗಳಲ್ಲಿ ಹಿಡಿದುಕೊಂಡಿರುವುದು ಶಿಲ್ಪಕ್ಕೆ ಹೆಚ್ಚಿನ ಸೌಂದರ್ಯವನ್ನು ನೀಡಿದೆ. ಸೊಂಟದ ಭಾಗದಲ್ಲಿರುವ ಸೊಂಟಪಟ್ಟಿಯು ನಾಗಬಂಧವಾಗಿದ್ದು ಮೂರು ಎಳೆಗಳನ್ನು ಹೊಂದಿದೆ.

ಶಿಲ್ಪದ ಪುರುಷಭಾಗವು ಒರಟುತನಕ್ಕೆ ಉದಾಹರಣೆಯಾಗಿದ್ದು, ಪಾರ್ವತಿಯ ಅಂಗಭಾಗವು ಹೆಚ್ಚಿನ ಬಾಗುಗಳನ್ನು ಹೊಂದಿದ್ದು, ಹೆಚ್ಚು ಅಲಂಕರಣಗಳನ್ನು ಹೊಂದಿರುವುದು ಕಂಡುಬರುತ್ತದೆ. ಈಗಿನ ಜನರು ಶಿಲ್ಪದ ಮಹತ್ವ ತಿಳಿಯದೇ ಬಲಭಾಗದಲ್ಲಿ ಸ್ತನಕ್ಕೆ ಗಾರೆ ಮೆತ್ತಿರುವುದನ್ನು ಕಾಣಬಹುದು. ಒಟ್ಟಾರೆ ದ್ವಿಮಾನದಲ್ಲಿ ರಚಿತವಾದ ಈ ಶಿಲ್ಪವನ್ನು ಹೆಚ್ಚು ಆಳವಾಗಿ ಕೆತ್ತಿದ್ದಾರೆ.

ಶಿಲ್ಪ –೧೦

ಮಹಾಕೂಟದ ವಿರೂಪಾಕ್ಷ ದೇವಾಲಯದ ಬಲಭಾಗದಲ್ಲಿ ಒಂದು ಚಿಕ್ಕ ಶಿವಾಲಯವಿದ್ದು, ಅದರ ಹಿಂಭಾಗದ ಹೊರಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿರುವ ಶಿಲ್ಪವನ್ನು ಕಾಣಬಹುದು. ಈ ಶಿಲ್ಪದಲ್ಲಿ ಶಿವನು ಬಲಗೈಯಲ್ಲಿ ನಾಗವನ್ನು ಹಿಡಿದು, ಎಡಗೈ ಕರ್ಣಾಭರಣವನ್ನು ಮುಟ್ಟಿದೆ. ಈ ಶಿಲ್ಪವು ಪೂರ್ಣಗೊಳಿಸದೆ ಗಡಸುತನದಿಂದ ಕೂಡಿದೆ. ಶಿಲ್ಪ ಕೆತ್ತನೆಗಾರಿಕೆಯನ್ನು ತೋರಿಸುವದು ಶಿಲ್ಪಿಯ ಉದ್ದೇಶವಿರಬಹುದು. ಆದುದರಿಂದಲೇ ಈ ಶಿಲ್ಪವನ್ನು ಪೂರ್ಣಗೊಳಿಸದೇ ಹಾಗೆಯೇ ಬಿಟ್ಟಿರಬಹುದೆಂದು ಊಹಿಸಬಹುದು.

ಶಿಲ್ಪ –೧೧


ಮಹಾಕೂಟದ ಕಾಲಕಾಲೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿ ಅರ್ಧನಾರೀಶ್ವರ ಶಿಲ್ಪವಿದೆ. ಇದೇ ಆವರಣದಲ್ಲಿರುವ ಸಂಗಮೇಶ್ವರ ದೇವಾಲಯದ ಶಿಲ್ಪದ ಆಕಾರವನ್ನೇ ಹೋಲುತ್ತದೆ. ಈ ಶಿಲ್ಪವು ಎರಡು ಕಂಬಗಳ ಮಧ್ಯ ದ್ವಿಭಂಗಿಯಲ್ಲಿ ನಿಂತಿದ್ದು, ಗಜಚರ್ಮಾಂಬರವನ್ನು ಧರಿಸಿದ್ದಾನೆ. ಶಿವನ ಭಾಗದ ಕೇಶವು ಜಟಾಮುಕುಟದಿಂದ ಕೂಡಿದೆ. ಶಿವನ ಕಿವಿಯು ಉದ್ದವಾಗಿದ್ದು, ಮಕರಕುಂಡಲ ಭುಜದ ಮೇಲೆ ಇಳಿಬಿದ್ದಿದ್ದು ನಾಗಬಂಧವನ್ನು ಧರಿಸಿದ್ದಾನೆ.

ಪಾರ್ವತಿಯ ಎಡಗೈ ತನ್ನ ಕಿವಿಯೋಲೆಯನ್ನು ಹಿಡಿದಿದ್ದು, ತೆಳುವಸ್ತ್ರದಿಂದ ಶೋಭಿತಳಾಗಿದ್ದಾಳೆ. ಶಿರದ ಹಿಂದುಗಡೆ ಅಂಡಾಕಾರದ ಪ್ರಭಾಮಂಡಲವಿದ್ದು, ನೋಡಲು ಸುಂದರವಾಗಿದೆ. ಶಿವನ ಬಲಭಾಗದ ಕೈಯು ಕೆಳಗೆ ಇಳಿಬಿಟ್ಟಿರುವುದನ್ನು ನೋಡಿದರೆ ಕೈ ಕೆಳಗೆ ಯಾವುದೋ ಒಂದು ಶಿಲ್ಪವಿರಬಹುದೆಂದು ಊಹಿಸಬಹುದು. ಏಕೆಂದರೆ ಎಲ್ಲ ತನ್ನ ಭಾರವನ್ನು ಈ ಕೈಯಲ್ಲಿ ಹಾಕಿರುವುದರಿಂದ ಇಲ್ಲಿ ಕುಬ್ಜ ಶಿಲ್ಪವಿರಬಹುದಾದ ಸಾಧ್ಯತೆಗಳಿವೆ.

ಶಿಲ್ಪ –೧೨

ಪಟ್ಟದಕಲ್ಲಿನ ಕಾಡಸಿದ್ಧೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ ಅರ್ಧನಾರೀಶ್ವರ ಶಿಲ್ಪ ದ್ವಿಭಂಗಿಯಲ್ಲಿದ್ದು, ಶಿವನ ಭಾಗದಲ್ಲಿ ನಂದಿಯಿದ್ದು, ನಂದಿಯ ತಲೆಯ ಮೇಲೆ ಕೈ ಊರಿದ್ದಾನೆ. ಶಿವನ ಹಸ್ತವು ನಂದಿಯ ಎಡಗಣ್ಣನ್ನು ಮರೆಮಾಚಿದಂತೆ ತೋರುತ್ತದೆ. ಶಿವನು ಬಲಗಾಲನ್ನು ಮಡಿಚಿದ್ದು, ನಂದಿಯ ಗದ್ದಕ್ಕೆ ಮೊಣಕಾಲು ಒತ್ತಿ ತನ್ನ ಭಾರವನ್ನು ನಂದಿಯ ಮೇಲೆ ಹೊರಿಸಿದ್ದಾನೆ. ನಂದಿಯ ಮುಂದೆ ಕುಬ್ಜಗಣವಿದೆ. ಶಿವನು ನಿರಾಭರಣನಾಗಿದ್ದಾನೆ. ಪಾರ್ವತಿಯ ಕೈಯಲ್ಲಿ ಕಮಲವಿರುವುದು ವಿಶೇಷವಾಗಿದೆ. ಪಾರ್ವತಿಯು ವಸ್ತ್ರಾಭರಣಗಳಿಂದ ಅಲಂಕೃತಳಾಗಿದ್ದು ಮುಖವು ಸ್ವಲ್ಪ ಭಗ್ನವಾದರೂ ಶಿಲ್ಪದಲ್ಲಿ ಜೀವಂತಿಕೆಯಿದೆ.

[illegible]



ಶಿಲ್ಪ –೧೩

ಮಹಾಕೂಟೇಶ್ವರ ದೇವಾಲಯದ ಹೊರಭಿತ್ತಿಯಲ್ಲಿರುವ ಜಾಲಂಧ್ರದ ಕೆಳಗೆ ದಕ್ಷಿಣಾಭಿಮುಖವಾಗಿರುವ ಅರ್ಧನಾರೀಶ್ವರ ಶಿಲ್ಪವಿದೆ. ಶಿರವನ್ನು ದೊಡ್ಡದಾಗಿ ಕಂಡರಿಸಲಾಗಿದೆ. ನಿಂತಿರುವ ಶಿಲ್ಪವನ್ನು ಸಮತೋಲನ ತಪ್ಪಿದಂತೆ ವಕ್ರವಾಗಿ ಕೆತ್ತಲಾಗಿದೆ. ಎಡಬಾಗದಲ್ಲಿ ಪಾರ್ವತಿಯ ಕೈ ಕರ್ಣಾಭರಣವನ್ನು ಹಿಡಿದಂತೆ ಕೆತ್ತಲಾಗಿದ್ದು, ಇದೊಂದು ಅಪೂರ್ಣ ಶಿಲ್ಪವೆಂದು ಹೇಳಬಹುದು.

ಶಿಲ್ಪ –೧೪

ಐಹೊಳೆಯು ವಸ್ತು ಸಂಗ್ರಹಾಲಯುದಲ್ಲಿ ಇರುವ ಅರ್ಧನಾರೀಶ್ವರಶಿಲ್ಪವು ಮಹಾಕೂಟದಲ್ಲಿರುವ ಸಂಗಮೇಶ್ವರ ದೇವಾಲಯದ ಅರ್ಧನಾರೀಶ್ವರ ಶಿಲ್ಪದಂತೆ ಹೋಲಿಕೆಯಲ್ಲಿ ಕಂಡುಬರುತ್ತದೆ. ಶಿರದ ಹಿಂದೆ ಪ್ರಭಾಮಂಡಲ ಹೊಂದಿದ್ದು, ಮುಖವು ಭಗ್ನಗೊಂಡಿದೆ. ಆಭರಣಗಳು ಸ್ಪಷ್ಟವಾಗಿ ಕಾಣುತ್ತವೆ. ಈ ಶಿಲ್ಪವು ದುಂಡಾಗಿದ್ದು ತ್ರಿಮಾನದಲ್ಲಿದೆ.

ಶಿಲ್ಪ –೧೫

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ ಅರ್ಧನಾರೀಶ್ವರನ ಶಿಲ್ಪವು ವಿಶೇಷತೆಯಿಂದ ಕೂಡಿದೆ. ಶಿವನು ಕೈಯಲ್ಲಿ ಸರ್ಪದ ಬಾಲವನ್ನು ಹಿಡಿದಿದ್ದಾನೆ. ಸರ್ಪವು ತಲೆ ಕೆಳಗಾಗಿ ನೇತಾಡುತ್ತಿರುವಂತೆ ತೋರುತ್ತದೆ. ಇನ್ನೊಂದು ಕೈ ಅರ್ಧಪತಾಕೆ ಮುದ್ರೆಯಲ್ಲಿದೆ. ಗಜಚರ್ಮವನ್ನು ಹೊಂದಿದ್ದಾನೆ. ಕೆಳಗಡೆ ಕುಬ್ಜಗಣವು ವಿಕಾರ ರೂಪವನ್ನು ಹೊಂದಿದ್ದು, ಶಿವನ ಉಪವೀತವನ್ನು ಎಳೆಯುತ್ತಿದ್ದಾನೆ. ಪಾರ್ವತಿಯ ಒಂದು ಕೈ ಕಟ್ಯವಲಂಬಿತವಾಗಿದ್ದು, ಇನ್ನೊಂದರಲ್ಲಿ ದರ್ಪಣ ಹಿಡಿದಂತೆ ಕಾಣುತ್ತದೆ.

ಶಿಲ್ಪ –೧೬

ಐಹೊಳೆಯ ಲಾಡ್‌ಖಾನ್ ದೇವಾಲಯದ ಗರ್ಭಗೃಹದ ಮೇಲಿನ ಅರ್ಧ ಮಂಟಪದಲ್ಲಿ ಉತ್ತರಾಭಿಮುಖವಾಗಿರುವ ಅರ್ಧನಾರೀಶ್ವರ ಶಿಲ್ಪವು ಅಪೂರ್ಣವಾಗಿದೆ. ಅರ್ಧ ದೇಹವನ್ನು ಮಾತ್ರ ಕೆತ್ತಲಾಗಿದೆ. ಕಟಿಭಾಗ, ತೋಳು, ಎದೆಭಾಗ ಸ್ವಲ್ಪ ಮಾತ್ರ ಕಾಣುತ್ತದೆ. ಸೊಂಟದಿಂದ ಕೆಳಗಡೆ ಕಲ್ಲನ್ನು ಯಥಾವತ್ತಾಗಿ ಬಿಡಲಾಗಿದೆ.

ಶಿಲ್ಪ –೧೭

ಐಹೊಳೆಯ ದುರ್ಗಾ ದೇವಾಲಯದ ಮುಖಮಂಟಪದ ಎಡಭಾಗದ ಮೊದಲನೆಯ ಕಂಬದಲ್ಲಿ ಪೂರ್ವಾಭಿಮುಖವಾಗಿರುವ ಅರ್ಧನಾರೀಶ್ವರನ ಶಿಲ್ಪವು ಚತುರ್ಭುಜ ಹೊಂದಿದ್ದು, ಶಿವನ ಬಲಬದಿಗೆ ಕುಬ್ಜಗಣವಿದೆ. ಶಿವನು ಒಂದು ಕೈಯಲ್ಲಿ ಪರಶು ಹಿಡಿದಿದ್ದು, ಇನ್ನೊಂದು

ಕೈಯನ್ನು ಕೆಳಗೆ ಇಳಿಬಿಟ್ಟಿದ್ದಾನೆ. ತೋಳ್ಬಂದಿ, ಕೈಗಡಗ ಧರಿಸಿದ್ದಾನೆ. ಪಾರ್ವತಿಯ ಭಾಗವು ವಿಶೇಷವಾಗಿದೆ. ಕೈಯಲ್ಲಿರುವ ಬಳೆಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಒಂದು ಕೈ ಕರ್ಣಾಭರಣವನ್ನು ಮುಟ್ಟಿದ್ದು, ಇನ್ನೊಂದು ಕೈಯನ್ನು ಕುಬ್ಜ ಸ್ತ್ರೀಯ ತಲೆಯ ಮೇಲೆ ಇರಿಸಿದ್ದು, ವಸ್ತ್ರಾಭರಣದಿಂದ ಶೋಭಿತಳಾಗಿದ್ದಾಳೆ.

ಶಿಲ್ಪ –೧೮

ಐಹೊಳೆಯ ರಾವಳಫಡಿಯ ಗುಹಾಲಯದಲ್ಲಿ ಅರ್ಧನಾರೀಶ್ವರನು ಗರ್ಭಗೃಹಕ್ಕೆ ಅಭಿಮುಖವಾಗಿದ್ದಾನೆ. ನೀಳಕಾಯದ ಈ ಶಿಲ್ಪವು ನಯನಮನೋಹರವಾಗಿದೆ. ಶಿರಚಕ್ರವು ಗೀರುಗಳಿಂದ ಕೂಡಿದ್ದು, ಆಕರ್ಷಣೀಯವಾಗಿದೆ. ಇದು ದ್ವಿಭುಜ ಶಿಲ್ಪವಾಗಿದ್ದು, ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದಾನೆ. ತ್ರಿಶೂಲವು ಇವನಿಗಿಂತ ದೊಡ್ಡದಾಗಿದೆ. ಪಾರ್ವತಿಯ ಕಾಲಲ್ಲಿ ಕಾಲ್ಗಡಗವು ದೊಡ್ಡದಾಗಿದ್ದು, ಮೊಣಕಾಲಿನವರೆಗೆ ವಸ್ತ್ರವಿದ್ದು, ಆಭರಣಗಳಿಂದ ಶೋಭಿತಳಾಗಿದ್ದಾಳೆ. ನಿಂತಿರುವ ಪೀಠದ ಭಾಗದಲ್ಲಿ ಸಿಂಹ ಮತ್ತು ಕುಬ್ಜಗಣವನ್ನು ಕೆತ್ತಿರಿಸಲಾಗಿದೆ.

ಹರಿಹರ ಶಿಲ್ಪಗಳು

ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಗಣನೀಯವಾಗಿ ಕಂಡುಬರುವ ಶಿಲ್ಪಗಳಲ್ಲಿ ಹರಿಹರ ಸಂಯುಕ್ತ ಶಿಲ್ಪಗಳು ಮುಖ್ಯವಾಗಿ ಗಮನ ಸೆಳೆಯುತ್ತವೆ. ವಿಷ್ಣು ಮತ್ತು ಶಿವ ಒಂದಾಗಿರುವ ಶಿಲ್ಪಗಳಿವು. ಇದನ್ನು 'ಶಿವ–ನಾರಾಯಣ ಶಿಲ್ಪಗಳು'[೨೮] ಎಂದು ಕೂಡಾ ಕರೆಯಲಾಗಿದೆ. ಬಾದಾಮಿಯ ಶೈವ ಗುಹೆ ಹಾಗೂ ಮಹಾವಿಷ್ಣು ಗೃಹಗಳಲ್ಲಿ ಬೃಹದಾಕಾರದ ಶಿವ–ನಾರಾಯಣ ಶಿಲ್ಪಗಳಿವೆ. ಶೈವ ಗುಹೆಯ ಈ ಸಂಯುಕ್ತ ಪ್ರತಿಮೆಯ ಎಡಬಲಗಳಲ್ಲಿ ಆಯಾ ದೇವನ ಅರ್ಧಾಂಗಿಯರ ಶಿಲ್ಪ ಕೆತ್ತನೆ[೨೯] ಇದೆ. ಬಾದಾಮಿಯ ಮೊದಲನೆಯ ಶೈವ ಗುಹೆಯ ಒಂದು ಅಂಕಣದಲ್ಲಿ ಒಂದು ಮೂರ್ತಿಯನ್ನು ಕೆತ್ತಿದ್ದು ಅದು ಶಿವನಾರಾಯಣ ಮೂರ್ತಿ, ಅಥವಾ ಹರಿಹರೇಶ್ವರ ಮೂರ್ತಿ, ಶಿವ ಕೇಶವರ ಸಂಯುಕ್ತ ಸ್ವರೂಪ. ಗುಹೆಯ ಪೂರ್ವಕ್ಕೆ ಇದ್ದ ಗೋಡೆಯ ಮೇಲೆ ಈ ವಿಗ್ರಹ ಉಂಟು. ಶಿವ ಮತ್ತು ವಿಷ್ಣುವಿನಲ್ಲಿ ಭೇದವಿಲ್ಲ ಎಂಬುದರ ದ್ಯೋತಕವಾಗಿ ಈ ಶಿಲ್ಪವನ್ನು ಕೆತ್ತಿದ್ದಾರೆ ಎಂದರೆ ಆಶ್ಚರ್ಯವಿಲ್ಲ. ಶೈವ ಮತ್ತು ವೈಷ್ಣವ ಧರ್ಮೀಯರಲ್ಲಿ ಮೇಲಾಟ ಮೊದಲಿನಿಂದಲೂ ನಡೆದು ಬಂದ ವಿಚಾರ. ಅಷ್ಟೇ ಏಕೆ, ಬಾದಾಮಿಯ ಚಾಲುಕ್ಯರು ಮೊದಲು ವೈಷ್ಣವ ಧರ್ಮೀಯರೇ ಆಗಿದ್ದವರು.

ನಂತರದ ದಿನಗಳಲ್ಲಿ ಚಾಲುಕ್ಯರು ಶೈವಧರ್ಮಕ್ಕೆ ಸೇರ್ಪಡೆಯಾದುದನ್ನೂ ಈ ಮೊದಲೇ ಹೇಳಲಾಗಿದೆ. ಅಂತಹ ಸಂದರ್ಭದಲ್ಲಿ ಕೂಡಾ ಶೈವಗುಹೆಯಲ್ಲಿ ಮೊದಲಿಗೆ ನಾವು ಶಿವ

---

೨೮. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೧೭೪

೨೯. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೧೭೪

[illegible]

[illegible]

[illegible]



ಮತ್ತು ವಿಷ್ಣುವಿನ ಸಂಯುಕ್ತ ಶಿಲ್ಪವನ್ನು ಕಾಣುತ್ತೇವೆ. ಅಂದರೆ ಹರಿಹರರಲ್ಲಿ ಭೇದವಿಲ್ಲ ಎಂಬುದನ್ನು ಇಲ್ಲಿ ಸೂಚ್ಯವಾಗಿ ಹೇಳಿದ್ದಾರೆಂದು ಅರ್ಥೈಸಿಕೊಳ್ಳಬಹುದಾದ ರೀತಿಯಲ್ಲಿ ಈ ಶಿಲ್ಪವಿದೆ. ಮುಖಮಂಟಪದ ಪೂರ್ವ ಪಾರ್ಶ್ವದ ಗೋಡೆಯಲ್ಲಿ ಲಕ್ಷ್ಮೀ–ಪಾರ್ವತಿ ಸಹಿತ ಹರಿ–ಹರ ಶಿಲ್ಪವಿದೆ. ಹರಿಹರನ ಅರ್ಧಭಾಗ ಶಿವನ ಮೂರ್ತಿ, ಉಳಿದ ಭಾಗ ವಿಷ್ಣುವಿನದು. ಶಿವನ ಭಾಗದಲ್ಲಿ ಸರ್ಪಕುಂಡಲ, ಜಟಾಮುಕುಟ ಮತ್ತು ಬದಿಗೆ ಪಾರ್ವತಿ, ನಂದಿ ಇರುವರು. ವಿಷ್ಣುವಿನ ಭಾಗದಲ್ಲಿ ಶಂಖ, ಚಕ್ರಾದಿಗಳಿವೆ. ಬದಿಯಲ್ಲಿ ಲಕ್ಷ್ಮಿಯ ಶಿಲ್ಪವಿದೆ. ಮತ್ತು ಎರಡೂ ಕೈಗಳನ್ನು ಕಟ್ಟಿಕೊಂಡು ನಿಂತ ಗರುಡ ಇರುವನು. ಆಕಾಶದಲ್ಲಿ ಎಡ ಬಲಗಳಲ್ಲಿ ಪುಷ್ಪಮಾಲೆ ಹಿಡಿದುಕೊಂಡಿರುವ ಗಂಧರ್ವರು ಮತ್ತು ವಿಗ್ರಹದ ಕೆಳಗೆ ಕುಬ್ಜ ಸಂಗೀತಗಾರರ ಪಟ್ಟಿಕೆಯನ್ನು ಇಲ್ಲಿ ಕಾಣಬಹುದು. ಶೈವ ಗುಹಾಲಯದ ಹರಿಹರ ಶಿಲ್ಪ ಒಂದು ಬೃಹದಾಕಾರದ ಹರಿಹರ ಶಿಲ್ಪವೆಂಬುದಾಗಿ ಡಾ. ಶೀಲಾಕಾಂತ ಪತ್ತಾರರು ಹೇಳುತ್ತಾರೆ.

‘ಹರ ಪರಶುಧರನಾಗಿ, ಹರಿ ಶಂಖಧರರಾಗಿ ಶಿಲ್ಪವನ್ನು ಕೆತ್ತಲಾಗಿದೆ. ಶಿವನ ಬಳಿ ಮಾನವರೂಪಿ ನಂದಿ ಇದ್ದರೆ, ವಿಷ್ಣುವಿನ ಬಳಿ ಮಾನವರೂಪಿ ಗರುಡನಿದ್ದಾನೆ. ಶಿವನ ಪಕ್ಕದಲ್ಲಿ ಪಾರ್ವತಿ ಮತ್ತು ವಿಷ್ಣುವಿನ ಪಕ್ಕದಲ್ಲಿ ಲಕ್ಷ್ಮೀ ಶಿಲ್ಪವಿದ್ದು ಅವರಿಬ್ಬರೂ ನಿಂತ ನಿಲುವು, ಕೈಯಲ್ಲಿ ಪದ್ಮ ಹಿಡಿದ ರೀತಿ ಮತ್ತು ಲೋಲ ಹಸ್ತಗಳನ್ನು ಇಳಿಬಿಟ್ಟ ಭಂಗಿಗಳಲ್ಲಿ ಸಾಮ್ಯಗಳನ್ನು ಗುರುತಿಸಬಹುದು. ಅವರ ಕಿವಿಯೊಡವೆ, ನಡುಪಟ್ಟಿಗಳಲ್ಲಿ ಭಿನ್ನತೆಯಿದೆ. ಲಕ್ಷ್ಮೀ ವಿಷ್ಣುವಿಗೆ ಹೊಂದಿಕೊಂಡು ನಿಂತಂತೆ, ಮತ್ತು ಪಾರ್ವತಿಯು ಶಿವನಿಂದ ಸ್ವಲ್ಪ ದೂರ ನಿಂತಂತೆ ಶಿಲ್ಪಗಳಿವೆ.

ಪ್ರತಿಮಾಲಕ್ಷಣಗಳನ್ನು ಆಧರಿಸಿ ಚಾಲುಕ್ಯರ ಕಾಲದ ಶಿವನಾರಾಯಣ (ಹರಿಹರ) ಶಿಲ್ಪಗಳನ್ನು (೧) ಸಮಸ್ಥಾನಕ ಚತುರ್ಭುಜ (೨) ಸಮಸ್ಥಾನಕ ಅಷ್ಟಭುಜ (೩) ಸ್ಥಾನಕ ಚತುರ್ಭುಜ ಮತ್ತು (೪) ಆಸೀನ ಚತುರ್ಭುಜ ಹರಿಹರ ಶಿಲ್ಪಗಳಾಗಿ ವರ್ಗೀಕರಿಸಿ ಅಧ್ಯಯನ ಮಾಡಬಹುದು. ಈ ಶಿಲ್ಪಗಳು ಆಲಂಪುರ, ಪಟ್ಟದಕಲ್ಲು, ಐಹೊಳೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಡಿಕೊಂಡಿವೆ.[೩೦] ಬಾದಾಮಿಯ ಶೈವ ಗುಹಾಲಯದಲ್ಲಿರುವುದು ಸಮಸ್ಥಾನಕ ಚತುರ್ಭುಜ ಹರಿಹರ ಶಿಲ್ಪ. ಎಡ ಬಲಗಳಲ್ಲಿ ಆಯಾ ದೇವತೆಗಳ ಪತ್ನಿಯರಿದ್ದಾರೆ. ಈ ರೀತಿಯ ಶಿಲ್ಪಗಳು ಎಲ್ಲೆಡೆ ಕಂಡುಬರುವುದಿಲ್ಲ. ಶಿಲ್ಪದ ಕೆಳ ಭಾಗದಲ್ಲಿ ಕುಬ್ಜಗಣ ಶಿಲ್ಪಗಳಿವೆ. ಇವುಗಳು ಕೂಡಾ ಉಳಿದೆಡೆಯಲ್ಲಿ ಇಲ್ಲ. ಅಷ್ಟೇ ಅಲ್ಲದೆ ಉಳಿದೆಡೆಯಲ್ಲಿ ನಾವು ನೋಡುವ ಹರಿಹರ ಶಿಲ್ಪಗಳು ಇಲ್ಲಿನ ಶಿಲ್ಪದಷ್ಟು ಪ್ರಾಮುಖ್ಯ ಪಡೆಯದಿರುವುದನ್ನು ಗಮನಿಸಬಹುದು.

ಶಿಲ್ಪ –೧

ಬಾದಾಮಿಯ ಶೈವ ಗುಹಾಲಯದಲ್ಲಿ ಅರ್ಧನಾರೀಶ್ವರನ ಶಿಲ್ಪದ ಎದುರಿಗೆ

೩೦. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೨



ಮುಖಮಂಟಪದ ಪೂರ್ವದ ಗೋಡೆಗೆ ಹರಿಹರ (ವಿಷ್ಣು ಮತ್ತು ಶಿವ) ಮೂರ್ತಿಯು ಕಾಣಿಸಿಕೊಳ್ಳುತ್ತದೆ. ಶೈವ ಮತ್ತು ವೈಷ್ಣವ ಪಂಥಗಳು ವೈದಿಕ ಕಾಲದ ನಂತರ ಪ್ರತಿಸ್ಪರ್ಧಾತ್ಮಕವಾಗಿ ಬೆಳೆದು ಬಂದಿವೆ. ಇದರಿಂದ ಈ ಪಂಥಗಳ ಅನುಯಾಯಿಗಳಲ್ಲಿ ಸಾಕಷ್ಟು ವೈಷಮ್ಯವೂ ಬೆಳೆದು ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗತೊಡಗಿತು. ಈ ಪರಿಸ್ಥಿತಿಯನ್ನು ಸ್ಥಿಮಿತಕ್ಕೆ ತರುವ ಒಂದು ಪ್ರಯತ್ನ ಹರಿಹರ ಒಂದೇ ಎಂಬ ತಾತ್ವಿಕ ಭಾವನೆಯ ಪ್ರತಿಪಾದನೆ. ಈ ಸಿದ್ಧಾಂತದ ಪ್ರತೀಕವಾಗಿ ವಿಷ್ಣು ಮತ್ತು ಶಿವನ ವಿಗ್ರಹಲಕ್ಷಣಗಳನ್ನು ಮೇಳೈಸಿ ಹರಿಹರ ವಿಗ್ರಹವನ್ನು ರಚಿಸಲಾಯಿತು.[೩೧]

ಸುಂದರವಾಗಿ ಕೆತ್ತಲಾಗಿರುವ ಈ ಶಿಲ್ಪದ ಬಹು ಮುಖ್ಯ ಅಂಶವೆಂದರೆ, ಇದರ ಬೃಹದಾಕಾರ ಶಿಲ್ಪದಲ್ಲಿ ಕಂಡುಬರುವ ರೇಖಾಲಾವಣ್ಯ, ಹಿತವಾದ ಕೆತ್ತನೆ, ಮುಖಭಾವದಲ್ಲಿರುವ ಪ್ರಶಾಂತತೆ, ಮುಖ್ಯವಾಗಿ ಮುಖ್ಯ ಶಿಲ್ಪಕ್ಕೆ ಆದ್ಯತೆಯನ್ನು ತೋರಿಸುವಂತೆ ನಿಂತಿರುವ ಸ್ತ್ರೀ ಶಿಲ್ಪಗಳ ಜೊತೆಗೆ ಹಿನ್ನೆಲೆಯಲ್ಲಿ ಕೈ ಮುಗಿದುಕೊಂಡು ಅಥವಾ ಕೈ ಕಟ್ಟಿಕೊಂಡು ನಿಂತಿರುವ ಅವರ ವಾಹನಗಳು ಮತ್ತು ಇದೆಲ್ಲದಕ್ಕೆ ಪೂರಕವಾಗಿ ಶಿಲ್ಪಕ್ಕೆ ಆಹ್ಲಾದಕರ ಸೊಬಗನ್ನು ನೀಡುವ ಉದ್ದೇಶದಿಂದ ಎಂಬಂತೆ ಕೆತ್ತಲಾಗಿರುವ ಶಿಲ್ಪದ ಕೆಳ ಪಟ್ಟಿಕೆಯಲ್ಲಿರುವ ಕುಬ್ಜ ಶಿಲ್ಪಗಳು ವಿವಿಧ ಸಂಗೀತ ವಾದ್ಯಗಳನ್ನು ನುಡಿಸುತ್ತಿವೆ. ಇವುಗಳೆಲ್ಲ ಸೇರಿ ಈ ಶಿಲ್ಪಕ್ಕೆ ಒಂದು ಅಲೌಕಿಕವಾದ ತೇಜಸ್ಸನ್ನು ತಂದುಕೊಟ್ಟಿವೆ. (ವಿಷ್ಣುವಿನ) ಸಾತ್ವಿಕ ಮತ್ತು (ಶಿವನ) ತಾಮಸ ಭಾವವನ್ನು ಒಟ್ಟಾಗಿ ಶಿಲ್ಪದ ಮುಖಭಾವದಲ್ಲಿ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ಸಮ ಭಂಗಿಯಲ್ಲಿ ನಿಂತಿರುವ ಶಿಲ್ಪದ ವಿಷ್ಣು ಒಂದು ಕೈಯನ್ನು ಸೊಂಟದ ಮೇಲಿರಿಸಿದ್ದರೆ ಇನ್ನೊಂದು ಕೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ತಲೆಯ ಹಿಂಭಾಗದಲ್ಲಿ ಸುಂದರ ಪ್ರಭಾಮಂಡಲ ಹೊಂದಿದ್ದು ವಿಷ್ಣುವಿನ ಭಾಗದಲ್ಲಿ ಕಿರೀಟ ಮುಕುಟವಿದ್ದರೆ, ಶಿವನ ಭಾಗವು ಜಟಾಮುಕುಟವನ್ನು ಹೊಂದಿದೆ. ಶ್ರೀ ನಾರಾಯಣ ಸಂಗಮ ಅವರು ಬಾದಾಮಿಯ ಶಿವನಾರಾಯಣ (ಹರಿಹರ) ಶಿಲ್ಪದ ಕುರಿತು ವಿವರವಾಗಿ ಚರ್ಚಿಸಿದ್ದಾರೆ.

'ವಿಗ್ರಹದ ಬಲಕ್ಕೆ ಶಿವಸ್ವರೂಪವಿದ್ದರೆ, ಎಡಕ್ಕೆ ನಾರಾಯಣ ಸ್ವರೂಪವಿದೆ. ಎರಡು ಬಲಕೈಗಳು, ಎರಡು ಎಡಕೈಗಳು, ಒಂದು ಬಲಗೈಯಲ್ಲಿ ಹಾವು ಸುತ್ತಿಕೊಂಡಿದ್ದ ಚಪ್ಪೆಕೊಡಲಿ, ದೇವತೆಯ ಬಲಪಾದದ ಬಳಿಗೆ ತ್ರಿಶೂಲಧಾರಿಯಾಗಿ ನಿಂತ ಎತ್ತಿನ ಮುಖವುಳ್ಳ ಚಿಕ್ಕ ನಿಲುವಿನ ನಂದಿ. ಈ ಗುರುತುಗಳಿಂದ ಶಿವಭಾಗ ತೋರಿಸಲ್ಪಟ್ಟಿದೆ. ಇನ್ನು ಎಡಗಡೆ ವಿಷ್ಣು ಭಾಗ, ಒಂದು ಎಡಗೈಯಲ್ಲಿ ಶಂಖವಿದೆ. ಶಿವ ನಾರಾಯಣ ಪ್ರತಿಮೆಯ ಬಗ್ಗೆ ಶಿಲ್ಪಶಾಸ್ತ್ರ ವಿಧಿಸಿದ ನಿಯಮದಂತೆ ಇನ್ನೊಂದು ಎಡಗೈ ಕಟಕ ಭಂಗಿಯಲ್ಲಿದೆ. ಎಡ ಪಾದದ ಬದಿಗೆ ಗರುಡ ಕೈಕಟ್ಟಿ ನಿಂತಿದ್ದಾನೆ. ಇವನ ನಿಲುವು ಚಿಕ್ಕದಾಗಿದೆ. ನಂದಿ-ಗರುಡರು, ಎಷ್ಟಾದರೂ

೩೧. ಡಾ. ಚೂಡಾಮಣಿ ನಂದಗೋಪಾಲ : ಶಿಲೆ-ಕಲೆ, ಪುಟ - ೧೨೬

ದೇವರ ನಿಲುವಿಗೆ ದೇವರ ಎತ್ತರಕ್ಕೆ ಹೇಗೆ ಬಂದಾರು? ವಿಗ್ರಹದ ಎರಡೂ ಬದಿಗೆ, ಎರಡು ಸ್ತ್ರೀ ಪ್ರತಿಮೆಗಳಿವೆ. ಅವು ಉಮಾ–ಲಕ್ಷ್ಮಿಯರ ಪ್ರತಿಮೆಗಳು. ಶಿವ ನಾರಾಯಣ ಸ್ವಾಮಿಯ ಹೆಗಲ ಮಟ್ಟಕ್ಕೆ ಬಳುಕಿ ನಿಂತಿರುವ ಅಂಗನೆಯರ ಅಂಗಭಂಗಿ, ಮುಖಲಾವಣ್ಯ, ತುಂಬ ಸುಕುಮಾರ, ಹೃದಯಂಗಮ. ನಟ್ಟನಡುವೆ, ಮುಖ್ಯದೇವತಾಮೂರ್ತಿ, ವೇದಿಕೆಯ ಮೇಲೆ ದಂಡಾಯಮಾನವಾಗಿ ವಿರಾಜಿಸುತ್ತದೆ. ಶಿವನಾರಾಯಣನ ಮಸ್ತಕದ ಅರ್ಧಭಾಗ ಜಟಾಜೂಟದಿಂದ ಚಂದ್ರ ಚಿಹ್ನದಿಂದ ಬೆಳಗುತ್ತಿದ್ದರೆ, ಇನ್ನರ್ಧಭಾಗ ರತ್ನಖಚಿತ ಮುಕುಟದಿಂದ ಬೆಳಗುತ್ತಿದೆ. ಅವನ ಬಲಭಾಗ ರುಂಡಮಾಲೆ ಉರಗಾಭರಣ ಧರಿಸಿದ್ದರೆ, ಅವನ ಎಡಭಾಗ ರತ್ನಾಲಂಕಾರಗಳಿಂದ ವಿಭೂಷಿತವಾಗಿದೆ.[೩೨] ಹರಿಹರ ಶಿಲ್ಪದ ಬಲಗಡೆ ತ್ರಿಶೂಲವನ್ನು ಹಿಡಿದ ದ್ವಾರಪಾಲಕ ಹಸನ್ಮುಖನಾಗಿ ಕಿರೀಟಧಾರಿಯಾಗಿರುವನು.

ಬಾದಾಮಿಯ ಮೊದಲ ಗುಹಾಲಯದ ಹರಿಹರ ಶಿಲ್ಪದ ನಂತರ ರಚನೆಯಾದ ಶಿಲ್ಪಗಳಲ್ಲಿ ಹಲವಾರು ಬದಲಾವಣೆಗಳು ಕಂಡುಬರುತ್ತವೆ. ಮುಖ್ಯವಾಗಿ ನಂತರ 'ರಚನೆಯಾದ ಶಿಲ್ಪಗಳಲ್ಲಿ ಪಾರ್ವತಿ ಮತ್ತು ಲಕ್ಷ್ಮಿಯರ ಶಿಲ್ಪಗಳು ಮತ್ತು ವಾಹನಗಳು ಕಂಡುಬರುವುದಿಲ್ಲ. ಕೇವಲ ಹರಿಹರನು ಮಾತ್ರ ಶಿಲ್ಪಿತವಾಗಿದ್ದಾನೆ. ಮಾತ್ರವಲ್ಲದೆ ಶಿವನು ಹಿಡಿದುಕೊಳ್ಳುವ ಆಯುಧದಲ್ಲಿಯೂ ಬದಲಾವಣೆ ಕಂಡುಬರುತ್ತದೆ. ಬಾದಾಮಿಯ ಮೊದಲ ಗುಹಾಲಯದ ಶಿಲ್ಪದಲ್ಲಿ ಶಿವನು ತನ್ನ ಆಯುಧವನ್ನಾಗಿ 'ಚಪ್ಪೆಕೊಡಲಿ'[೩೩]ಯನ್ನು ಹಿಡಿದುಕೊಂಡಿದ್ದರೆ ನಂತರದ ಶಿಲ್ಪಗಳಲ್ಲಿ ಬೃಹದಾಕಾರದ ತ್ರಿಶೂಲವನ್ನು ಹಿಡಿದಿರುವುದು ಕಂಡುಬರುತ್ತದೆ.

ಶಿಲ್ಪ –೨

ಬಾದಾಮಿಯ ಮೂರನೆಯ ಗುಹೆಯಾದ 'ಮಹಾವಿಷ್ಣು ಗೃಹ'ದಲ್ಲಿಯೂ ಒಂದು ಸುಂದರವಾದ ಬೃಹದಾಕಾರದ ಹರಿಹರಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪದ ಕೆಳಗೆ ಕುಬ್ಜಗಣ ಶಿಲ್ಪಗಳ ಪಟ್ಟಿಕೆ ಇಲ್ಲ. ದುಂಡಾದ ಮುಖ ಹಾಗೂ ಕಿರೀಟಾದಿ ಆಭರಣಗಳು ಭಿನ್ನ ಶೈಲಿಯವಾಗಿವೆ. ಹರಿಹರ ಶಿಲ್ಪವು ಸಾಮಾನ್ಯವಾಗಿ ಶೈವಮಂದಿರಗಳಲ್ಲಿ ಕಂಡುಬಂದರೆ ಇಲ್ಲಿ ವೈಷ್ಣವ ಗುಹಾಲಯದಲ್ಲಿ ಕೆತ್ತನೆಗೊಂಡಿರುವುದು ವಿಶೇಷದ ಸಂಗತಿಯಾಗಿದೆ. ಸಮಪಾದದಲ್ಲಿರುವ ಹರಿಹರನ ಬಲಗೈಗಳಲ್ಲಿ ಫಲ, ಪರಶು ಹಾಗೂ ಎಡಗೈಗಳಲ್ಲಿ ಶಂಖ ಮತ್ತು ಕಟ್ಯವಲಂಬಿತ ಹಸ್ತವಿರುವ ಈ ದೇವತೆಯ ಮುಕುಟ ಎತ್ತರವಾಗಿದೆ. ತಲೆಯ ಹಿಂದಿರುವ ಪ್ರಭಾಚಕ್ರದಲ್ಲಿನ ಗೀರುಗಳು ಗಮನ ಸೆಳೆಯುತ್ತವೆ. ಶಿವನ ಸೊಂಟದಲ್ಲಿ ನಾಗಪಟ್ಟಿಯಿದೆ. ಆದರೆ ಹರಿಯ ಭಾಗದಲ್ಲಿ ಈ ಪಟ್ಟಿಯು ಸಾಮಾನ್ಯ ಆಭರಣ ಪಟ್ಟಿಕೆಯಾಗಿದೆ. ಕುತ್ತಿಗೆಯಲ್ಲಿ ಎರಡೆಳೆಯ ಕಂಠಾಭರಣವಿದೆ. ಹರನ ಭಾಗದಲ್ಲಿ ತೋಳಿಗೆ ಸರ್ಪಬಂಧವಿದ್ದರೆ ಹರಿಯ ತೋಳಿನಲ್ಲಿ

೩೨. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೧೭೫

೩೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೧

ಸಾಮಾನ್ಯವಾಗಿ ವಿಷ್ಣು ಶಿಲ್ಪಗಳಲ್ಲಿ ಕಂಡುಬರುವಂತಹ ತೋಳುಪಟ್ಟಿ ಆಭರಣವಿದೆ. ವಿಷ್ಣುವಿನ ಭಾಗದ ಮೇಲಿನ ಕೈಯಲ್ಲಿ ಶಂಖವನ್ನು ಹಿಡಿದಿದ್ದರೆ ಎಡಕೈಯನ್ನು ತೊಡೆಯ ಮೇಲೆ ಬರುವಂತೆ ಕೆತ್ತಲಾಗಿದೆ. ಶಿವನ ಕಿವಿಯಲ್ಲಿ ಸರ್ಪಕುಂಡಲವಿದೆ. ಶಿವನು ಸೊಂಟದ ಬಟ್ಟೆಯನ್ನು(ಗಜ ಚರ್ಮಾಂಬರ) ತೊಡೆಯವರೆಗೆ ಉಟ್ಟಿದ್ದರೆ ವಿಷ್ಣುವಿನ ಬಟ್ಟೆಯನ್ನು ವಿಷ್ಣುವಿನ ಪ್ರತಿಮಾ ಲಕ್ಷಣದಲ್ಲಿ ವಿವರಿಸಿದಂತೆ ಕಾಲಿನವರೆಗೂ ಇಳಿಬಿಡಲಾಗಿದೆ. ಇಲ್ಲಿ ಇನ್ನೊಂದು ಗಮನಿಸಬಹುದಾದ ಕುತೂಹಲಕರವಾದ ಅಂಶವೆಂದರೆ, ಮೊದಲ ಗುಹೆಯಲ್ಲಿ ಕಂಡಂತೆ ಪಾರ್ವತಿ ಮತ್ತು ಲಕ್ಷ್ಮಿಯ ಶಿಲ್ಪಗಳೂ ಇಲ್ಲ ಮತ್ತು ಉಳಿದ ಗಣಶಿಲ್ಪಗಳೂ ಇಲ್ಲ, ಇದರಿಂದಾಗಿ ಇದು ಬಿಡಿ ಶಿಲ್ಪದಂತೆ ಭಾಸವಾಗುತ್ತದೆ.

ಶಿಲ್ಪವನ್ನು ಹೆಚ್ಚು ಆಳವಾಗಿ ಕೆತ್ತಲಾಗಿದ್ದು ಇದರಿಂದಾಗಿ ತ್ರಿಮಾನದ ಭಾವನೆ ಉಂಟಾಗುವುದರ ಜೊತೆಗೆ ಶಿಲ್ಪಕ್ಕೆ ಇನ್ನಷ್ಟು ಭವ್ಯತೆಯನ್ನು ತಂದುಕೊಟ್ಟಿದೆ. ಕಲ್ಲಿನಲ್ಲಿ ಕಂಡುಬರುವ ಸಹಜ ಗೆರೆಗಳು ಶಿಲ್ಪಕ್ಕೆ ಇನ್ನಷ್ಟು ಮೆರುಗನ್ನು ನೀಡಿವೆ. ಇಲ್ಲಿ ಇನ್ನೊಂದು ಕುತೂಹಲಕಾರಿಯಾಗಿ ಕಂಡುಬರುವುದು ಯಜ್ಞೋಪವೀತದ ಜೊತೆಗೆ ಇನ್ನೊಂದು ಉದ್ದನೆಯ ದಾರದಂತೆ ಕಂಡುಬರುವ ಹಾರವು ಭುಜದಿಂದ ಕಾಲಿನ ವರೆಗೂ ಇಳಿದುಬಂದಿದೆ. ಎಲ್ಲ ನಾಲ್ಕು ಕೈಗಳಲ್ಲಿ ಎರಡೆರಡು ಕೈಬಳೆಗಳಿವೆ. ಸಮಭಂಗಿಯಲ್ಲಿ ನಿಂತಿರುವ ಶಿಲ್ಪದ ಮುಖವು ನೇರವಾಗಿದ್ದು ಯಾವುದೇ ಭಾವನೆಗಳಿಗೆ ಅವಕಾಶವಿಲ್ಲ. ಈ ಶಿಲ್ಪವು ತನ್ನ ಆಕಾರ ಮತ್ತು ಭವ್ಯತೆಯಿಂದಾಗಿ ಸೌಂದರ್ಯವನ್ನು ಹೊಂದಿದ್ದರೆ, ಕಲಾತ್ಮಕವಾಗಿ ನೋಡಿದಾಗ ಮೊದಲ ಗುಹೆಯಲ್ಲಿನ ಶಿಲ್ಪವು ಮನಸ್ಸಿಗೆ ಹೆಚ್ಚು ತಟ್ಟುತ್ತದೆ.

ಶಿಲ್ಪ –೩

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಪ್ರದಕ್ಷಿಣಾಪಥದ ಎಡ ಹೊರಭಾಗದಲ್ಲಿ ಉತ್ತರಾಭಿಮುಖವಾಗಿ ಹರಿಹರ ಶಿಲ್ಪವನ್ನು ವಿಶೇಷವಾಗಿ ಗಮನಿಸಬಹುದು. ಬಾದಾಮಿಯ ಗುಹಾಲಯಗಳ ನಿರ್ಮಾಣದ ಎರಡು ಶತಮಾನಗಳ ನಂತರದ ಈ ರಚನೆಯಲ್ಲಿ ಶಿಲ್ಪಕಲೆಯಲ್ಲಿ ಆದ ಹಲವಾರು ಬೆಳವಣಿಗೆಗಳನ್ನು ಇಲ್ಲಿ ಕಾಣಬಹುದು. ಈ ಶಿಲ್ಪದ ಮುಖ್ಯ ವಿಶೇಷತೆಯೆಂದರೆ ಚತುರ್ಬಾಹು ಹೊಂದಿದ್ದು ಪ್ರತ್ಯೇಕವಾಗಿ ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಹರಿಹರನ ಕಟಿಪ್ರದೇಶದಲ್ಲಿ ವಿಭಿನ್ನ ಅಲಂಕಾರಗಳಿಂದ ಕೂಡಿರುವ ಸೊಂಟಪಟ್ಟಿಯಿದೆ. ಕೆಲವೆಡೆ ನಾವು ನೋಡಿದ ಶಿಲ್ಪಗಳಲ್ಲಿರುವಂತೆ ದೊಡ್ಡ ತ್ರಿಶೂಲವಿಲ್ಲ, ಬದಲಾಗಿ ಸಣ್ಣ ಗಾತ್ರದಲ್ಲಿದ್ದು ವಿಶೇಷ ಸೌಂದರ್ಯದಿಂದ ಕೂಡಿದೆ. ವಿಷ್ಣುವಿನ ಕೈಯಲ್ಲಿ ಶಂಖದ ಬದಲು ಕೊಡಲಿಯನ್ನು ಹಿಡಿದಿದ್ದು ಕಂಡುಬರುತ್ತದೆ. ಶಿವನ ತೋಳಿನಲ್ಲಿ ಸುಂದರವಾದ ಸರ್ಪಬಂಧವಿದೆ. ಕಿರೀಟವು ಇಲ್ಲಿ ಸಣ್ಣದಾಗಿರುವುದಕ್ಕೆ ಕಲ್ಲಿನ ಮಿತಿಯೇ ಕಾರಣವಾಗಿದೆ. ಉದರಬಂಧದ ಜೊತೆಗೆ

ಕಟ್ಟಲಾಗಿರುವ ಉತ್ತರೀಯವನ್ನು ಎರಡು ಕಡೆಗಳಲ್ಲಿಯೂ ಗಂಟು ಹಾಕಲಾಗಿದೆ. ಸೊಂಟದಲ್ಲಿಯ ವಸ್ತ್ರವು ಚಲಿಸಿದಂತೆ ಕಂಡುಬರುವುದೊಂದು ವಿಶೇಷ. ಮೇಲ್ನೋಟಕ್ಕೆ ಈ ಶಿಲ್ಪವು ಉಳಿದೆಡೆಗಳಲ್ಲಿಯ ಹರಿಹರ ಶಿಲ್ಪಕ್ಕಿಂತ ಎಲ್ಲ ರೀತಿಯಲ್ಲಿಯೂ ಭಿನ್ನವಾಗಿರುವುದು ಕಂಡುಬರುತ್ತದೆ. ಹರಿಹರ ನಿಂತಿರುವ ಪೀಠದ ಕೆಳಗಡೆ ಸುರುಳಿಗಳಿಂದ ಕೂಡಿದ ನಕ್ಷಾ ಚಿತ್ರಣವಿದೆ. ಇದರ ಕೆಳಗಡೆ ಎರಡು ಸಿಂಹಗಳನ್ನು ನೋಡುಗರ ಎದುರಿಗೆ ಕಾಣುವಂತೆ ಶಿಲ್ಪಿಯು ಕೆತ್ತಿದ್ದಾನೆ. ಈ ಶಿಲ್ಪವನ್ನು ನೋಡಿದರೆ ತ್ರಿಮಾನದ ಅನುಭವವನ್ನುಂಟು ಮಾಡುತ್ತದೆ. ಈ ಶಿಲ್ಪವು ವಿರೂಪಾಕ್ಷ ದೇವಾಲಯದ ಎಡಗಡೆಯ ಹೊರಗೋಡೆಯಲ್ಲಿದೆ.

ಶಿಲ್ಪ –೪

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಎಡಗಡೆಯ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಇನ್ನೊಂದು ಶಿಲ್ಪವನ್ನು ಗಮನಿಸಬಹುದು. ಈ ಶಿಲ್ಪವು ಇಲ್ಲಿನ ಮೇಲಿನ ಶಿಲ್ಪಕ್ಕಿಂತ ಭಿನ್ನವಾಗಿದೆ. ಈ ಶಿಲ್ಪದಲ್ಲಿ ಶಿವನ ಬಲಗೈಯಲ್ಲಿ ತ್ರಿಶೂಲವು ಅಳತೆಗಿಂತ ದೊಡ್ಡದಾಗಿದ್ದು ಶಿಲ್ಪದ ಎತ್ತರಕ್ಕೆ ಸಮನಾಗಿದೆ. ಇನ್ನೊಂದು ಕೈ ತೊಡೆಯ ಮೇಲಿದ್ದು, ಶಿಲ್ಪವು ಹರನ ಭಾಗದಲ್ಲಿ ಹೆಚ್ಚು ಭಾಗವನ್ನು ಪಡೆದಿದ್ದು, ಹೆಚ್ಚು ಸಂಕೀರ್ಣತೆಯನ್ನು ಹೊಂದಿದೆ. ಶಿವನ ಜೊತೆಯಲ್ಲಿ ನಂದಿಯನ್ನು ಹರಿಯ ಭಾಗದಲ್ಲಿ ವಿನೀತನಾಗಿ ನಿಂತಿರುವ ಗರುಡನನ್ನೂ ನೋಡಬಹುದು ಮತ್ತು ಪ್ರಭಾಮಂಡಲದಲ್ಲಿ ಉಬ್ಬುಶಿಲ್ಪದ ಕೆತ್ತನೆಯಿರುವುದನ್ನು ಗಮನಿಸಬಹುದು. ಕಿರೀಟವು ಸಣ್ಣದಾಗಿದ್ದು ಕರಂಡಮುಕುಟವನ್ನು ಹೋಲದಿರುವುದು ವಿಶೇಷ.

ಕಟಿಯ ಭಾಗವನ್ನು ಮತ್ತು ಒಟ್ಟು ಶಿಲ್ಪದ ರಚನೆಯನ್ನು ನೋಡಿದರೆ ಉಳಿದ ಶಿಲ್ಪಗಳಿಗೆ ಹೋಲಿಸಿದರೆ ತೆಳ್ಳಗಾಗಿದೆ ಎಂಬ ಭಾವನೆ ಉಂಟಾಗುತ್ತದೆ. ಹರಿಯ ಎಡ ಕೈಯಲ್ಲಿರುವ ಶಂಖವೂ ಆಕರ್ಷಕವಾಗಿದೆ. ಹರಿಯ ಕೆಳಗೈ ಭಗ್ನವಾಗಿದೆ. ಎದೆಹಾರ, ಯಜ್ಞೋಪವೀತ, ಉಡುದಾರ ಇತ್ಯಾದಿಗಳು ಹೆಚ್ಚು ಕಲಾತ್ಮಕವಾಗಿ ಮೂಡಿಬಂದಿರುವುದೊಂದು ವಿಶೇಷ. ಶಿಲ್ಪದ ಕೆಳಭಾಗದ ಪಟ್ಟಿಕೆಯಲ್ಲಿ ಅಲಂಕಾರಿಕ ಕೆತ್ತನೆಯ ಜೊತೆಗೆ ಅದಕ್ಕಿಂತಲೂ ಕೆಳಗೆ ಹಂಸ ಅಲಂಕಾರಿಕ ಕೆತ್ತನೆಯನ್ನು ಹೊಂದಿದ್ದು ಶಿಲ್ಪಕ್ಕೆ ಹೊಸತನವನ್ನು ನೀಡಿದೆ ಎನ್ನಬಹುದು. ಇಲ್ಲಿ ನಂದಿಯನ್ನು ಗಮನಿಸುವುದು ಅಗತ್ಯವಾಗಿದೆ. ನಂದಿಯ ಶಿಲ್ಪವು ಶಿವನ ಆಕಾರಕ್ಕೆ ಸಮನಾಗಿ ಗಮನಿಸಿದರೆ ಸಣ್ಣದಾಗಿದ್ದರೂ ದಷ್ಟ–ಪುಷ್ಟವಾಗಿದೆ ಮಾತ್ರವಲ್ಲದೆ ಶಾಂತವಾಗಿದ್ದರೂ ದುಂಡು ಶಿಲ್ಪವಾಗಿದ್ದು, ಓಡಲು ತಯಾರಾಗಿರುವಂತಿದೆ. ಒಟ್ಟಾರೆ ಈ ಶಿಲ್ಪವನ್ನು ಕಲಾತ್ಮಕವಾಗಿ ಸಂಯೋಜಿಸಿದ್ದಾರೆ. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಹಲವಾರು ಶೈವಶಿಲ್ಪಗಳು ವಿಭಿನ್ನ ಸಂಯೋಜನೆಯಿಂದ ಕೂಡಿರುವ ಶಿಲ್ಪಗಳು ರಚನೆಯಾಗಿರುವುದು ನಿಜವಷ್ಟೇ! ಈ ಶಿಲ್ಪಗಳು ಶಿವನ ವಿವಿಧ ರೂಪ ಮತ್ತು ವಿಭಿನ್ನ ಕಥಾವಸ್ತುಗಳನ್ನು ಹೊಂದಿರುವುದು ಕೂಡಾ ನಿಜ.



ಶಿಲ್ಪ –೫

ಮಹಾಕೂಟದ ಪಿನಾಕಪಾಣಿ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ದೇವಾಲಯದ ಬಲಭಾಗದ ಹೊರ ಭಿತ್ತಿಯಲ್ಲಿ ಹರಿಹರನು ಉತ್ತರಾಭಿಮುಖವಾಗಿ ಚತುರ್ಭುಜಗಳನ್ನು ಹೊಂದಿದ್ದಾನೆ. ಬಲಗೈಯಲ್ಲಿ ಪರಶುವನ್ನು ಹಿಡಿದಿದ್ದು, ಇನ್ನೊಂದು ಕೈಯು ಅಭಯಮುದ್ರೆ ಇರಬಹುದಾಗಿದ್ದು, ಭಗ್ನಗೊಂಡಿದೆ. ಬಲಭಾಗದಲ್ಲಿ ತೊಡೆಯವರೆಗೆ ಮಾತ್ರ ವಸ್ತ್ರವಿದ್ದು, ಪಕ್ಕದಲ್ಲಿ ನಂದಿ ಇದೆ. ಎಡಭಾಗದ ಕೈ ಕಟ್ಯವಲಂಬಿತವಾಗಿದ್ದು, ಇನ್ನೊಂದು ಕೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಕಟಿಯಿಂದ ಪಾದದವರೆಗೆ ವಸ್ತ್ರವನ್ನು ಧರಿಸಿದ್ದಾನೆ. ಜಟಾಮುಕುಟ ಹೊಂದಿದ ಈ ಶಿಲ್ಪವನ್ನು ದ್ವಿಮಾನದಲ್ಲಿ ರಚಿಸಲಾಗಿದೆ.

ಶಿಲ್ಪ –೬

ಮಹಾಕೂಟದ ಕಾಲಕಾಲೇಶ್ವರ ದೇವಾಲಯದ ಎಡಭಾಗದ ಹೊರಭಿತ್ತಿಯಲ್ಲಿರುವ ಉತ್ತರಾಭಿಮುಖವಾಗಿರುವ ಹರಿಹರನ ಶಿಲ್ಪವು ದ್ವಿಭಂಗಿಯಲ್ಲಿದ್ದು, ಬಲಭಾಗದ ಒಂದು ಕೈಯಲ್ಲಿ ಪರಶುವನ್ನು ಹಿಡಿದಿದ್ದು, ಇನ್ನೊಂದು ಕೈಯಲ್ಲಿ ಕೆಳಗೆ ಇಳಿಬಿಡಲಾಗಿದೆ. ಹಸ್ತವು ಭಗ್ನಗೊಂಡಿದೆ. ಹರಿಹರನು ತೋಳಬಂದಿ, ಕೈಗಡಗ, ಮತ್ತು ಉದರಬಂಧ ಹೊಂದಿದ್ದಾನೆ. ಎಡಗೈ ಕಟ್ಯವಲಂಬಿತವಾಗಿದ್ದು, ಇನ್ನೊಂದು ಕೈಯಲ್ಲಿ ಚಕ್ರವಿದೆ. ಜಟಾಮುಕುಟ ಹೊಂದಿರುವ ಈ ಶಿಲ್ಪದ ಶಿರದ ಹಿಂದೆ ಪ್ರಭಾಮಂಡಲ ಆಕರ್ಷಕವಾಗಿದ್ದು ಗಮನಿಸತಕ್ಕದ್ದಾಗಿದೆ.

ಶಿಲ್ಪ –೭

ಮಹಾಕೂಟದ ಸಂಗಮೇಶ್ವರ ದೇವಾಲಯದ ಗರ್ಭಗೃಹದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ ಹರಿಹರ ಶಿಲ್ಪವು ಚತುರ್ಭುಜವನ್ನು ಹೊಂದಿದೆ. ಬಲಭಾಗದ ಒಂದು ಕೈಯಲ್ಲಿ ಪರಶು ಇದ್ದು, ಇನ್ನೊಂದು ಕೈಯನ್ನು ಕೆಳಗೆ ಇಳಿಬಿಟ್ಟಿದೆ. ಎಡಭಾಗದ ಕೈ ಕಟ್ಯವಲಂಬಿತವಾಗಿದೆ. ಹಿಂದಿನ ಕೈಯಲ್ಲಿ ಶಂಖವನ್ನು ಧರಿಸಿದ್ದು, ಯಜ್ಞೋಪವೀತ, ಕೈಗಡಗ, ತೋಳ್ಭಂದಿ, ಉದರಭಂದಿ, ಕರ್ಣಾಭರಣ ಹೊಂದಿದ್ದು, ಇವೇ ಮುಂತಾದ ಆಭರಣಗಳಿಂದ ಶೋಭಿತನಾಗಿದ್ದು, ದ್ವಿಮಾನದಲ್ಲಿ ಈ ಶಿಲ್ಪವನ್ನು ರಚಿಸಲಾಗಿದೆ.

ಶಿಲ್ಪ –೮

ಮಹಾಕೂಟ ದೇವಾಲಯಗಳ ಸಮೂಹದಲ್ಲಿರುವ ವಿರೂಪಾಕ್ಷ ದೇವಾಲಯದ ಬಲಭಾಗದಲ್ಲಿರುವ ಒಂದು ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಹರಿಹರನ ಶಿಲ್ಪವಿದೆ. ಬಲಭಾಗದ ಹಿಂದಿನ ಒಂದು ಕೈಯಲ್ಲಿ ಪರಶು, ಇನ್ನೊಂದು ಕೈಯಲ್ಲಿ ಸರ್ಪವನ್ನು ಹಿಡಿದಿದ್ದು, ಎಡಭಾಗದ ಕೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಇನ್ನೊಂದು ಕೈಯು ಕಟ್ಯವಲಂಬಿತವಾಗಿದೆ. ದ್ವಿಮಾನದಲ್ಲಿ ರಚಿತವಾದ ಈ ಶಿಲ್ಪದ ಬಹುತೇಕ ಭಾಗಗಳು ನಶಿಸಿಹೋಗಿವೆ.

ಶಿಲ್ಪ –೯

ಪಟ್ಟದಕಲ್ಲಿನಲ್ಲಿರುವ ಕಾಡಸಿದ್ಧೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿರುವ ಹರಿಹರಶಿಲ್ಪವಿದೆ. ಬಲಗೈ ಕೆಳಗೆ ಇಳಿಬಿಟ್ಟಿದ್ದು, ಹಿಂದಿನ ಕೈಯಲ್ಲಿ ಪರಶು ಹೊಂದಿದ್ದಾನೆ. ಎಡಗೈ ಕಟ್ಯವಲಂಬಿತವಾಗಿದ್ದು, ಹಿಂದಿನ ಕೈಯಲ್ಲಿ ಶಂಖ ಹಿಡಿದಿದ್ದಾನೆ. ಬಲಭಾಗದಲ್ಲಿ ತೊಡೆಯ ವರೆಗೆ ಮಾತ್ರ ಆಭರಣಗಳಿದ್ದು, ಎಡಭಾಗದಲ್ಲಿ ಕಟಿಯಿಂದ ಪಾದದವರೆಗೆ ವಸ್ತ್ರವನ್ನು ಧರಿಸಿದ್ದಾನೆ. ದ್ವಿಮಾನದಲ್ಲಿ ರಚಿತವಾದ ಈ ಶಿಲ್ಪವು ಅಲ್ಲಲ್ಲಿ ಭಗ್ನಗೊಂಡಿದೆ.

ಶಿಲ್ಪ –೧೦

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿಯ ಮೇಲೆ ದಕ್ಷಿಣಾಭಿಮುಖವಾಗಿದ್ದು, ಕಿರೀಟಮುಕುಟವನ್ನು ಹೊಂದಿದ್ದಾನೆ. ಈ ಶಿಲ್ಪವು ಮಂದಹಾಸವನ್ನು ಬೀರುತ್ತಿದೆ. ಬಲಗೈಯು ಭಗ್ನಗೊಂಡಿದೆ. ಎಡಗೈ ಕಟ್ಯವಲಂಬಿತವಾಗಿದ್ದು, ಇನ್ನೊಂದು ಕೈಯಲ್ಲಿರುವ ಆಯುಧವನ್ನು ಗುರುತಿಸಲಾರದಷ್ಟು ನಾಶವಾಗಿದೆ. ಬಲಭಾಗದಲ್ಲಿ ನಂದಿಶಿಲ್ಪವಿದೆ. ಮುಖವು ಭಗ್ನಗೊಂಡಿದೆ. ಆದರೂ ಆಕರ್ಷಕವಾಗಿ ದ್ವಿಮಾನದಲ್ಲಿ ಮೂಡಿಬಂದಿದೆ.

ಶಿಲ್ಪ –೧೧

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ ಹರಿಹರನ ಶಿಲ್ಪವು ವಿಶೇಷವಾಗಿದೆ. ಮುಖಭಾಗವು ದುಂಡಾಗಿದ್ದು, ಬಲಭಾಗದ ಒಂದು ಕೈಯಲ್ಲಿ ತ್ರಿಶೂಲವಿದ್ದು, ಇನ್ನೊಂದು ಕೈಯು ತುಂಡಾಗಿದೆ. ಎಡಗೈಯಲ್ಲಿ ಶಂಖವಿದ್ದು, ಇನ್ನೊಂದು ಕೈಯು ಕಟ್ಯವಲಂಬಿತವಾಗಿದೆ. ಹಿಂದಿನ ಕೈಗಳಲ್ಲಿ ಆಯುಧಗಳನ್ನು ಹಿಡಿದಿರುವ ಎರಡು ಕೈಗಳು ಗಾತ್ರದಲ್ಲಿ ಚಿಕ್ಕದಾಗಿವೆ. ಹರಿಹರನ ಇಬ್ಬದಿಗಳಲ್ಲಿ ದ್ವಾರಪಾಲಕರ ಶಿಲ್ಪಗಳಿದ್ದು, ಗದೆಯ ಮೇಲೆ ತನ್ನ ಭಾರವನ್ನು ಹಾಕಿಕೊಂಡು ನಿಂತಿವೆ. ಶಿಲ್ಪದ ಹಿಂಭಾಗದಲ್ಲಿ ನಂದಿಯ ಶಿಲ್ಪವಿದೆ. ಹರಿಹರನ ಶಿಲ್ಪದ ಇಬ್ಬದಿಗಳಲ್ಲಿ ಕಂಬಗಳಿದ್ದು, ಕಂಬಗಳಲ್ಲಿ ಸಿಂಹಗಳನ್ನು ಕೆತ್ತಿರುವುದು ಈ ಶಿಲ್ಪಕ್ಕೆ ಮೆರಗು ತಂದಂತಾಗಿದೆ.

ಚಿತ್ರ –೧೨

ಐಹೊಳೆ ರಾವಳಫಡಿಯ ಆಗ್ನೇಯ ಬದಿಯ ದ್ವಾರಪಾಲಕನ ಪಕ್ಕದಲ್ಲಿ ಹರಿಹರನ ಶಿಲ್ಪವಿದೆ. ಸಮಪಾದನಾಗಿ ನಿಂತಿರುವ ಈತನ ಬಲಗೈಗಳಲ್ಲಿ ರುದ್ರಾಕ್ಷಿಮಾಲೆ ಹಾಗೂ ಸರ್ಪ ಇವೆ. ಮೇಲಿನ ಎಡಗೈಯಲ್ಲಿ ಶಂಖ ಧರಿಸಿದ್ದು, ಕೆಳಗಿನ ಕೈ ಕಟ್ಯವಲಂಬಿತ ರೀತಿಯಲ್ಲಿರಿಸಿದೆ. ಶಿರಭಾಗವನ್ನು ಜಟಾಮಕುಟ, ವ್ಯಾಘ್ರ ಚರ್ಮದಿಂದಲೂ, ವಿಷ್ಣುಭಾಗವನ್ನು ಕಿರೀಟಮಕುಟ, ಮುಕ್ತಾಯಜ್ಞೋಪವೀತ, ಅರ್ಧೋರುಕ ಧೋತಿಯಿಂದಲೂ ವಿವಿಧ ಆಭರಣಗಳಿಂದಲೂ

[illegible]

ಅಲಂಕರಿಸಲಾಗಿದೆ.[೩೪] ಇಲ್ಲಿ ಶಿವನು ಮತ್ತು ಪಕ್ಕದಲ್ಲಿ ಹರಿಹರನು ಇರುವುದರಿಂದ ಶೈವ ಮತ್ತು ವೈಷ್ಣವ ಧರ್ಮಗಳ ನಡುವಿನ ಯಾವುದೇ ಭೇದಭಾವವಿಲ್ಲದಂತೆ ತೋರಿಸಿರುವುದು, ಅಲ್ಲದೇ ಇದನ್ನು ಒಂದೇ ಭಿತ್ತಿಯಲ್ಲಿ ಕೆತ್ತಿರುವುದು ಈ ಶಿಲ್ಪದ ವಿಶೇಷತೆಯಾಗಿದೆ.

ಈ ಮೇಲಿನ ಶಿಲ್ಪಗಳಲ್ಲಿ ಶಿವನ ನಟರಾಜ ಶಿಲ್ಪಗಳ ಗುಂಪು ಒಂದಾದರೆ 'ಸಂಯುಕ್ತ ಶಿಲ್ಪಗಳು' ಎಂದು ಕರೆಯಲಾಗುವ ಅರ್ಧನಾರೀಶ್ವರ ಮತ್ತು ಹರಿಹರ ಶಿಲ್ಪಗಳು ಮುಖ್ಯವಾಗಿವೆ. ಇವುಗಳಲ್ಲದೆ ಶಿವನ ವಿವಿಧ ರೂಪಗಳನ್ನು ತೋರಿಸುವ ಶೈವ ಶಿಲ್ಪಗಳೂ ಇವೆ. ಅವುಗಳನ್ನು ಇಲ್ಲಿ ನೋಡೋಣ. 'ಶಿವ ಶಿಲ್ಪಗಳನ್ನು ಸ್ಥೂಲವಾಗಿ ಎರಡು ವಿಧವಾಗಿ ವಿಂಗಡಿಸಬಹುದು.

೧. ಶಾಂತ ಮೂರ್ತಿಗಳು ೨. ಸಂಹಾರ ಮೂರ್ತಿಗಳು. ಚಾಲುಕ್ಯರ ಕಾಲದ ಮೊದಲ ಸಾಂಸ್ಕೃತಿಕ ಹಂತದಲ್ಲಿ ಶಾಂತಮೂರ್ತಿಗಳು ಹೆಚ್ಚು ಜನಪ್ರಿಯವಾಗಿರುವುದನ್ನು ಗುರುತಿಸಬಹುದು. ಎರಡನೆಯ ಹಂತದಲ್ಲಿ ಹೆಚ್ಚಾಗಿ ಸಂಹಾರ ಮೂರ್ತಿಗಳು ಕೆತ್ತನೆಗೊಂಡಿದ್ದು ಕಂಡುಬರುತ್ತವೆ.[೩೫]

ಇವುಗಳಲ್ಲಿ ಕೆಲವು ಶಿಲ್ಪಗಳು ಕೇವಲ ಶಿವನನ್ನು ಮಾತ್ರ ಹೊಂದಿದ್ದರೆ ಕೆಲವು ಗಣಗಳಿಂದ ಕೂಡಿದ ಪರಿವಾರಸಮೇತ ಶಿವಮೂರ್ತಿಗಳಿವೆ. ಕೆಲವು ಉಮಾಸಹಿತನಾದ ಪರಮೇಶ್ವರ ಮೂರ್ತಿಯಾಗಿವೆ. ಇನ್ನು ಚಂದ್ರಶೇಖರ ಶಿವ, ಸೋಮಸ್ಕಂದಮೂರ್ತಿ ಇತ್ಯಾದಿಗಳಿವೆ. ಶಿವನು ನಿಂತಿರುವ ಭಂಗಿ, ಆಯುಧ, ತಲೆಯ ಮೇಲೆ ಹೊತ್ತುಕೊಂಡಿರುವ ಗಂಗೆ, ಚಂದ್ರ ಇತ್ಯಾದಿಗಳನ್ನು ಅನುಲಕ್ಷಿಸಿ ಪ್ರತಿಮಾಶಾಸ್ತ್ರದ ಆಧಾರದಿಂದ ಇವುಗಳನ್ನು ವರ್ಗೀಕರಿಸಲಾಗುತ್ತದೆ.

ಇವುಗಳೆಲ್ಲ ಶಾಂತಮೂರ್ತಿಗಳು. ಇಲ್ಲಿ ಶಿವನ ಉಗ್ರರೂಪ ನೋಡಲು ಸಿಗುವುದಿಲ್ಲ. ಬದಲಾಗಿ ಸಂಸಾರಸಮೇತನಾಗಿ ಶಾಂತವಾಗಿ ಕುಳಿತಿರುವ ಅಥವಾ ನಿಂತಿರುವ ಭಂಗಿಯಲ್ಲಿರುತ್ತದೆ. ಇದೇ ಗುಂಪಿನಲ್ಲಿ ಶಿವ ಪಾರ್ವತಿಯರ ವಿವಾಹದ ದೃಶ್ಯವನ್ನು ಹೊಂದಿರುವ ಶಿಲ್ಪಗಳೂ ಸೇರುತ್ತವೆ. ಅರ್ಧನಾರೀಶ್ವರ ಶಿಲ್ಪಗಳು ಮತ್ತು ಹರಿಹರಶಿಲ್ಪಗಳನ್ನು ಇದೇ ಗುಂಪಿಗೆ ಸೇರಿಸಬಹುದು. ಶಿವನ ಉಗ್ರ ರೂಪವನ್ನು ಪ್ರಕಟಿಸುವ, ರಾಕ್ಷಸರನ್ನು ಸಂಹರಿಸುತ್ತಿರುವ ಶಿಲ್ಪಗಳು, ತಾಂಡವನೃತ್ಯವನ್ನು ಮಾಡುತ್ತಿರುವ ಶಿಲ್ಪಗಳು ಇತ್ಯಾದಿ. ಶಿಲ್ಪಗಳು ಬಾದಾಮಿ ಚಾಲುಕ್ಯರ ಕಾಲದಲ್ಲಿ ಸಾಕಷ್ಟು ರಚನೆಯಾಗಿವೆ.

ಇಂತಹ ಶಿಲ್ಪಗಳನ್ನು ಸಂಹಾರ ಮೂರ್ತಿಗಳು ಅಥವಾ ಉಗ್ರ ಮೂರ್ತಿಗಳು ಎಂದು ವರ್ಗೀಕರಿಸಬಹುದು. ಶಿವನ ಶಾಂತಮೂರ್ತಿಗಳಲ್ಲಿ ಒಂದು ರೀತಿಯ ಶಾಂತತೆಯ ಸೊಬಗು ಮತ್ತು ಸೌಂದರ್ಯವಿದ್ದರೆ ಉಗ್ರ ಅಥವಾ ಸಂಹಾರ ಮೂರ್ತಿಗಳಲ್ಲಿ ಗಾಂಭೀರ್ಯದ ಚೆಲುವು ಸೇರಿಕೊಂಡಿರುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚನೆಯಾದ ಇಂತಹ ಶಿಲ್ಪಗಳನ್ನು ನೋಡಿಯೇ ಅನುಭವಿಸಬೇಕು. ಶಿವನ ಗಜಾಸುರ ಸಂಹಾರ ಮೂರ್ತಿ, ತ್ರಿಪುರಾಂತಕ ಮೂರ್ತಿ,

೩೪. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೭೦-೭೧
೩೫. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೦೮

ಅಂಧಕಾಸುರ ಸಂಹಾರ ಮೂರ್ತಿ, ಭಿಕ್ಷಾಟನ ಶಿವ ಇತ್ಯಾದಿ ಶಿಲ್ಪಗಳು ಕೆಲವಾದರೆ ಇನ್ನು ಕೆಲವು ಶಿವ ಗಂಗಾಧರ, ಲಕುಲೀಶ ಇತ್ಯಾದಿ ಕೆಲವು ಶಿಲ್ಪಗಳಿವೆ.

ಉಮಾ ಮಹೇಶ್ವರ ಶಿಲ್ಪಗಳು

ಶೈವಭಕ್ತರು ಶಿವನನ್ನು ಬೇರೆ ಬೇರೆ ರೂಪಗಳಿಂದ ಗುರುತಿಸುತ್ತಾರೆ. ಅವುಗಳಲ್ಲಿ ಕೇವಲ ಶಿವನ ಬಿಡಿ ಶಿಲ್ಪವಲ್ಲದೆ ಬೇರೆ ಶಿಲ್ಪಗಳು ಅಂದರೆ ಶಿವ ಪಾರ್ವತಿಯರು ಜೊತೆಯಲ್ಲಿರುವ ಶಿಲ್ಪಗಳು ಸೇರಿವೆ. ಅಂತಹ ಶಿಲ್ಪಗಳಲ್ಲಿ ಮೊದಲು ತೋರುವ ಶಿಲ್ಪಗಳೆಂದರೆ ಉಮಾಮಹೇಶ್ವರ ಶಿಲ್ಪಗಳು. ಶಿವನು ಉಮೆಯೊಂದಿಗೆ ಒಂದೇ ಪೀಠದ ಮೇಲೆ ಅಥವಾ ಹತ್ತಿರ ಬೇರೆ ಪೀಠಗಳಲ್ಲಿ ಜೊತೆಯಾಗಿ ಕುಳಿತಿದ್ದರೆ ಅದು ಉಮಾ–ಮಹೇಶ್ವರ ಮೂರ್ತಿ ಎಂದೆನಿಸುತ್ತದೆ. ಇಲ್ಲಿ ಕೆಲವೆಡೆ (ನಂತರದ ಕಾಲದ ರಚನೆಗಳಲ್ಲಿ) ಶಿವ–ಉಮೆಯರೊಂದಿಗೆ ಅವರ ಮಕ್ಕಳಾದ ಗಣೇಶ ಮತ್ತು ಕಾರ್ತಿಕೇಯರೂ ಇರುವುದುಂಟು.

ಶಿಲ್ಪ –೧

ಬಾದಾಮಿಯ ಮೂರನೆಯ ಗುಹೆಯ ಕಂಬ ೨೪ರ ಪಶ್ಚಿಮ ಬದಿಯ ಬೋಧಿಗೆ ಶಿಲ್ಪವು ಉಮಾ ಸಹಿತ ಚಂದ್ರಶೇಖರನು, ಮೇಲಿನ ಬಲಗೈಯಲ್ಲಿ ಪರಶು, ಕೆಳಗಿನ ಬಲಗೈಯಲ್ಲಿ ಡಮರು ಹಿಡಿದಿದ್ದಾನೆ. ಮೇಲಿನ ಎಡಗೈಯನ್ನು ಮೇಲಕ್ಕೆ ಚಾಚಿದ್ದಾನೆ. ಕೆಳಗಿನ ಕೈ ಪಾರ್ವತಿಯ ಹಿಂದೆ ಆಕೆಯ ಮೊಳಕೈ ಹತ್ತಿರವಿದೆ. ನಾಗವೊಂದು ಶಿವನ ಕಟಿವಸ್ತ್ರವಾಗಿದೆ. ಶಿವನು ಗಣನ ತಲೆಯ ಮೇಲೆ ಎಡಗಾಲನ್ನು ಇರಿಸಿದ್ದಾನೆ. ಇದರಿಂದ ಕುಬ್ಜನ ತೊಡೆಯ ಭಾಗವು ಭೂಮಿಗೆ ಸಮಾನಾಂತರವಾಗಿದೆ. ಶಿವನ ತೊಡೆಯ ಮೇಲೆ ದ್ವಿಭುಜ ಪಾರ್ವತಿ ತನ್ನ ಬಲ ಮೊಳಕೈಯನ್ನೂರಿ ಶಿವನತ್ತ ಬಾಗಿದ್ದಾಳೆ. ಪಾರ್ವತಿಯ ಸ್ತ್ರೀ ಸಹಜ ಲಾವಣ್ಯ, ಅಪರೂಪದ ಮೈ ಮಣಿತದಿಂದಾಗಿ ಶಿಲ್ಪವು ಚಿತ್ತಾಕರ್ಷಕವಾಗಿದೆ. ಚಂದ್ರಶೇಖರನ ನಿಲುವು, ಉಮೆಯ ಮೈ ಬಾಗುಗಳು ಶಿಲ್ಪ ಸಂಯೋಜನೆಯಲ್ಲಿ ವೈವಿಧ್ಯ ತಂದಿವೆ.

ಶಿಲ್ಪ –೨

ಪಟ್ಟದಕಲ್ಲಿನ ಆವರಣದಲ್ಲಿರುವ ಇನ್ನೊಂದು ದೇವಾಲಯ ಸಣ್ಣದಾದರೂ ಕಲಾತ್ಮಕವಾಗಿರುವ ದೇವಾಲಯ 'ಕಾಡಸಿದ್ಧೇಶ್ವರ' ದೇವಾಲಯ. ಇಲ್ಲಿ ಕೆಲವು ಉತ್ತಮ ಹಾಗೂ ಕಲಾತ್ಮಕವಾಗಿರುವ ಶಿಲ್ಪಕಲಾಕೃತಿಗಳಿವೆ. ಅವುಗಳಲ್ಲಿ ಒಂದು ಇಲ್ಲಿನ ಶಿವ–ಪಾರ್ವತಿಯ ಶಿಲ್ಪ ದೇವಾಲಯದ ಗರ್ಭಗುಡಿಯ ಲಲಾಟಬಿಂಬದಲ್ಲಿದೆ. ಇದು ಒಂದು ಸುಂದರ ಶಿಲ್ಪವಾಗಿದೆ. ಈ ಶಿಲ್ಪವು ಮೊದಲು ನೋಡಿದ ಶಿಲ್ಪಕ್ಕಿಂತ ಹೆಚ್ಚು ಭಿನ್ನವಾಗಿದೆ. ಚಿಕ್ಕದಾಗಿರುವ ಈ ಶಿಲ್ಪದಲ್ಲಿ ಪಾರ್ವತಿಯನ್ನು ಎಡ ಪಕ್ಕದಲ್ಲಿ ಇರುವ ಸ್ವಲ್ಪ ಜಾಗದಲ್ಲಿ ಕೆತ್ತಲಾಗಿರುವಂತಿದೆ. ಪಾರ್ವತಿಯು ಬಲ ತೊಡೆಯನ್ನು ಎಡಭಾಗಕ್ಕೆ ತಿರುಗಿಸಿದ್ದು ಎಡತೊಡೆಯನ್ನು ಹಿಂಭಾಗಕ್ಕೆ ಸಮಾನಾಂತರವಾಗಿ

ಕೆತ್ತಲಾಗಿದೆ. ಶಿವ–ಪಾರ್ವತಿಯರ ಮಧ್ಯದಲ್ಲಿ ಸ್ವಲ್ಪ ಅಂತರವನ್ನು ಕಾಯ್ದುಕೊಂಡಿರುವುದು ಇಲ್ಲಿ ಕಂಡುಬರುತ್ತದೆ. ಶಿವನು ಮೇಲಿನ ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿದ್ದಾನೆ. ಬಲ ಮೇಲುಗೈಯಲ್ಲಿ ಸರ್ಪವನ್ನು ಸುತ್ತಿಕೊಂಡ ಚಪ್ಪೆಕೊಡಲಿ ಇದ್ದು ಜಟಾಮುಕುಟಧಾರಿ ಆಗಿರುವನು. ಕುತ್ತಿಗೆಯಲ್ಲಿ ಒಂದೆಳೆ ಕಂಠೀಹಾರವಿದೆ. ಶಿವ ಚತುರ್ಭುಜನಾಗಿದ್ದು ಪಾರ್ವತಿ ದ್ವಿ ಬಾಹು ಹೊಂದಿದ್ದಾಳೆ. ಸುಂದರವಾದ ದೇಹಾಕಾರವನ್ನು ಹೊಂದಿದೆ. ಶಿಲ್ಪದ ಕೆಳಭಾಗದಲ್ಲಿ ನಂದಿಶಿಲ್ಪದ ಭಗ್ನಗೊಂಡ ಕೆತ್ತನೆಯಿದೆ. ದೇವಾಲಯದ ಸ್ಥಳ ಖಾಲಿಯಾಗುಳಿಯದೆ ಆಕರ್ಷಕವಾಗಿ ಕಾಣಲೆಂಬ ಉದ್ದೇಶದಿಂದ ಕೆತ್ತಿರುವ ಶಿಲ್ಪವಿದಾಗಿರಬಹುದಾಗಿದೆ. ಒಟ್ಟಿನಲ್ಲಿ ಶಿಲ್ಪವು ಸುಂದರವಾಗಿದ್ದು ಅಪರೂಪದ ಪ್ರಮಾಣಬದ್ಧ ಅಂಗವಿನ್ಯಾಸವನ್ನು ಹೊಂದಿದೆ. ಸರಳವಾಗಿ ಹಿತಮಿತವಾದ ಆಭರಣಗಳನ್ನು ಕೆತ್ತಲಾಗಿದ್ದು ಪಾರ್ವತಿಯ ದೇಹರಚನೆಯಲ್ಲಿ ಲಯಬದ್ಧವಾದ ಕೆತ್ತನೆಯನ್ನು ಗಮನಿಸಬಹುದು. ಶಿವನ ಆಕಾರವು ಸದೃಢವಾಗಿದ್ದು, ಪಾರ್ವತಿಯ ದೇಹವು ತೆಳ್ಳಗಿದ್ದು ಕೋಮಲ ಭಾವನೆಯನ್ನು ಉಂಟುಮಾಡುತ್ತದೆ. ಚಾಲುಕ್ಯರ ಕಾಲದ ಶಿಲ್ಪಿಗಳಲ್ಲಿನ ವೈಯಕ್ತಿಕ ಶೈಲಿಗೆ ಈ ಶಿಲ್ಪವು ಒಂದು ನಿದರ್ಶನವಾಗಿ ಕಂಡುಬರುತ್ತದೆ.

ಶಿಲ್ಪ –೩

ಪಟ್ಟದಕಲ್ಲು ಕಾಶೀವಿಶ್ವೇಶ್ವರ ದೇವಾಲಯದ ಗರ್ಭಗುಡಿಯ ಮುಂದಿನ ಬಲಗಡೆಯ ಕಂಬದಲ್ಲಿ ಕೆತ್ತಲಾಗಿರುವ ವಿಶಿಷ್ಟ ಶಿಲ್ಪ. ಇಲ್ಲಿ ಶಿವನು ಬಲಗಾಲ ಪಾದವನ್ನು ಸಮಾನಾಂತರವಾಗಿಟ್ಟುಕೊಂಡು ಎಡಗೈಯನ್ನು ಪಾರ್ವತಿಯ ಸೊಂಟವನ್ನು ಬಳಸಿ ನಿಂತುಕೊಂಡಿದ್ದಾನೆ. ಪಾರ್ವತಿಯು ಶಿವನ ಎಡಭಾಗದಲ್ಲಿ ದ್ವಿಭಂಗಿಯಲ್ಲಿ ನಿಂತಿದ್ದು ತನ್ನ ಎಡ ಭಾಗದಲ್ಲಿ ಮಗುವನ್ನು ಸೊಂಟದಲ್ಲಿರಿಸಿಕೊಂಡಿದ್ದಾಳೆ. ಬಲಭಾಗದಲ್ಲಿ ನಂದಿ, ಭೃಂಗಿ, ಇತರ ಗಣಗಳು, ಋಷಿ ಮುನಿಗಳು, ಆಕಾಶದಲ್ಲಿ(ಮೇಲುಭಾಗದಲ್ಲಿ) ವಿದ್ಯಾಧರ ಶಿಲ್ಪಗಳು ಹೂಮಾಲೆಯನ್ನು ಹಿಡಿದುಕೊಂಡು ಹಾರಾಡುತ್ತಿದ್ದಾರೆ. ಯಥಾದರ್ಶನ(Perspective)ವು ಈ ಉಬ್ಬುಶಿಲ್ಪದಲ್ಲಿರುವುದನ್ನು ಸಹ ತೋರಿಸಲಾಗಿದೆ.

ಶಿವನು ಬೃಹದಾಕಾರದ ತ್ರಿಶೂಲವನ್ನು ಹಿಡಿದಿದ್ದಾನೆ. ಶಿವನು ಒಂದು ಕೈಯಲ್ಲಿ ಡಮರುಗವನ್ನು ಹಿಡಿದಿದ್ದಾನೆ. ಜಟಾಮುಕುಟಧಾರಿಯಾದ ಶಿವನ ತಲೆಯು ಸಹಜ ಅಳತೆಗಿಂತ ದೊಡ್ಡದಾಗಿದೆ. ಸುತ್ತಲೂ ಇರುವ ಗಣಗಳು ಮತ್ತು ಋಷಿಗಳು ದೇವರಿಗೆ ಕೈಮುಗಿಯುತ್ತಿದ್ದಾರೆ. ಶಿವನು ಸ್ಥಿರ ಭಂಗಿಯಲ್ಲಿದ್ದರೆ ಪಾರ್ವತಿಯು ಚಲನೆಯ ರೂಪದಲ್ಲಿರುವುದು ವಿಶೇಷ. ಮೇಲು ಭಾಗದಲ್ಲಿರುವ ವಿಧ್ಯಾಧರ ಶಿಲ್ಪಗಳು ಕೈಯಲ್ಲಿ ಹಿಡಿದಿರುವ ಹೂಮಾಲೆಯಲ್ಲಿನ ಸುರುಳಿ ಕೆತ್ತನೆಯ ಅಲಂಕರಣಯುಕ್ತ ವಿನ್ಯಾಸವು ಶಿಲ್ಪದ ಒಟ್ಟು ಸಂಯೋಜನೆಗೆ ಹೆಚ್ಚಿನ ಮೆರುಗು ನೀಡಿದೆ. ಪಾರ್ವತಿಯ ಕೈಯಲ್ಲಿರುವ ಮಗುವಿನ(ಕಾರ್ತಿಕೇಯ?) ಮುಖಭಾವವನ್ನು

ಕೂಡಾ ಇಲ್ಲಿ ಗಮನಾರ್ಹವಾಗಿ ಸೆರೆಹಿಡಿಯಲಾಗಿದೆ. ಶಿವನ ಕುತ್ತಿಗೆಯಲ್ಲಿ ಬುಡಕಟ್ಟಿನ ಜನರು ಬಳಸುವ ರೀತಿಯ ಹಾರವಿದೆ. ಯಜ್ಞೋಪವೀತವು ಸರಳವಾಗಿದ್ದು ಶಿವನ ಸೊಂಟದಲ್ಲಿ ಎರಡು ಸುತ್ತಿನ ಸೊಂಟಪಟ್ಟಿಯಿದೆ. ಶಿಲ್ಪಗಳು ದುಂಡಗಾಗಿದ್ದು ಸಣ್ಣ ಚೌಕಟ್ಟಿನಲ್ಲಿರುವ ಈ ಶಿಲ್ಪವು ಮೇಲುನೋಟಕ್ಕೆ ಬುಡಕಟ್ಟಿನ ಜನರ ರೀತಿಯಲ್ಲಿದೆ. ಶಿವನ ಮುಖಭಾವಕ್ಕೆ ಕೊಟ್ಟಷ್ಟು ಗಮನ ಉಳಿದೆಡೆಗೆ ನೀಡಿದ್ದು ಕಂಡುಬರುವುದಿಲ್ಲ. ಉಳಿದೆಡೆಗಳಲ್ಲಿ ನೋಡಿದ ಶಿಲ್ಪಗಳಲ್ಲಿಯಂತೆ ಸರಳ ತೆಳ್ಳಗಿನ ಕೆತ್ತನೆಯಿದೆ.

ಶಿಲ್ಪ –೪

ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಇನ್ನೊಂದು ಶಿಲ್ಪವು ಸಣ್ಣದಾದರೂ ಅತ್ಯಂತ ಸುಂದರವಾದ ಶಿಲ್ಪವಾಗಿದೆ. ಮಲ್ಲಿಕಾರ್ಜುನ ದೇವಾಲಯದ ಬಲಗಡೆಯ ಕಂಬದಲ್ಲಿ ಅರ್ಧವೃತ್ತಾಕಾರದ ಆಕಾರದಲ್ಲಿ ಕೆತ್ತಲಾಗಿರುವ ಶಿಲ್ಪ. ಶಿಲ್ಪದ ಸುತ್ತಲೂ ಅರ್ಧವೃತ್ತಾಕಾರವನ್ನು ಚೌಕಟ್ಟನ್ನಾಗಿ ಕೆತ್ತಲಾಗಿದೆ. ಇದು ಮೂರು ಸುತ್ತುಗಳಲ್ಲಿದ್ದು ಎರಡು ಸರಳಗೆರೆಗಳ ಮಧ್ಯದಲ್ಲಿ ಸಣ್ಣವೃತ್ತಗಳಿವೆ. ಮತ್ತೊಂದು ಅಲಂಕರಣವನ್ನು ಹೊಂದಿರುವ ವೃತ್ತವಿದೆ.


ಇದರೊಳಗೆ ಗಣೇಶ, ಕಾರ್ತಿಕೇಯ ಮತ್ತು ನಂದಿಯರನ್ನೊಳಗೊಂಡು ಶಿವ–ಪಾರ್ವತಿಯರ ಶಿಲ್ಪವಿದೆ. ಶಿವನು ಆಲೀಢಾಸನದಲ್ಲಿ ಆಸೀನನಾಗಿದ್ದು ಪಾರ್ವತಿಯು ಶಿವನ ಎಡಭಾಗದಲ್ಲಿ ನೃತ್ಯಭಂಗಿಯಲ್ಲಿ ದ್ವಿಭಂಗಿಯಲ್ಲಿ ನಿಂತಿದ್ದಾಳೆ. ಶಿವನು ತನ್ನ ಬಲಗೈಯನ್ನು ಬಲಮೊಣಕಾಲಿನ ಮೇಲೆ ಸರಳವಾಗಿ ಇಳಿಬಿಟ್ಟು ಕುಳಿತಿದ್ದಾನೆ. ಎಡ ಕೈಯನ್ನೊಂದನ್ನು ಮೇಲೆ ಎತ್ತಿ ಹಿಡಿದಿದ್ದು ಬಹುಶಃ ಪಾಶವನ್ನು ಹಿಡಿದುಕೊಂಡಿದ್ದಾನೆ. ಜಟಾಮುಕುಟವನ್ನು ಹೊಂದಿದ್ದಾನೆ. ಶಿವನ ಉಬ್ಬುಶಿಲ್ಪವನ್ನು ಕೆತ್ತಿದ್ದ ರೀತಿಯಿಂದ ದ್ವಿಮಾನದ ಅನುಭವವಾಗುತ್ತದೆ. ಅದ್ಭುತವಾಗಿದೆ. ಶಿಲ್ಪವು ಭಗ್ನವಾಗಿದೆಯಾದರೂ ಅಳಿದುಳಿದ ಭಾಗವು ಶಿಲ್ಪದ ಸೌಂದರ್ಯವನ್ನು ತೋರಿಸಿಕೊಡುತ್ತದೆ.

ಪಾರ್ವತಿಯ ಶಿಲ್ಪವು ಸರಳವಾಗಿದೆಯಾದರು ಕೆತ್ತನೆಯ ರೀತಿಯಿಂದ ಗಮನಾರ್ಹವಾಗಿದೆ. ಪಾರ್ವತಿಯ ಎಡಪಕ್ಕದಲ್ಲಿ ಬಾಲಗಣಪತಿಯು ನಿಂತಿರುವ ಶಿಲ್ಪವಿದ್ದು ಡೊಳ್ಳುಹೊಟ್ಟೆಯ, ಕುಬ್ಜಕಾಲುಗಳ, ಅಪ್ಪ–ಅಮ್ಮನೆಡೆಗೆ ಕುತೂಹಲದ ದೃಷ್ಟಿಯಿಂದ ನೋಡುತ್ತಿರುವ ಈ ಶಿಲ್ಪವು ಗಮನಾರ್ಹ. ಶಿವನ ಪಕ್ಕದಲ್ಲಿ ಅಂದರೆ ಶಿವನ ಬಲಭಾಗದಲ್ಲಿ ಕೆಳಗೆ ಕಾರ್ತಿಕೇಯನ ಶಿಲ್ಪವಿದೆ. ಈ ಶಿಲ್ಪದ ಒಂದು ಕೈಯನ್ನು ನೆಲಕ್ಕೆ ಊರಿದ್ದರೆ ಎಡಗೈಯ ಬೊಟ್ಟನ್ನು ಬಾಲಕನು ಚೀಪುತ್ತಿರುವಂತಿದೆ. ಆಭರಣಗಳು ಸರಳವಾಗಿದ್ದು ಅಲಂಕಾರಿಕವಾಗಿವೆ. ತೆಳು ದೇಹದ ಈ ಶಿಲ್ಪದ ಇನ್ನೊಂದು ವಿಶೇಷವೆಂದರೆ ರೇಖಾಪ್ರಧಾನವಾಗಿದ್ದು ಅಂಗಾಂಗಗಳು ಪ್ರಮಾಣಬದ್ಧವಾಗಿವೆ ಮಾತ್ರವಲ್ಲದೆ ಅತ್ಯುತ್ತಮ ಚಲನಾಭಾವವನ್ನು ಹೊಂದಿದ್ದು ಲಯಬದ್ಧವಾಗಿವೆ. ಶಿಲ್ಪದ ಕೆಳ


ಅರ್ಧನಾರಿಶ್ವರ ಶಿಲ್ಪಗಳು



ಶಿಲ್ಪ-೧. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೩. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು


ಅರ್ಧನಾರಿಶ್ವರ ಶಿಲ್ಪಗಳು




ಶಿಲ್ಪ-೫. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೬. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೭. ಮಹಾಕೂಟೇಶ್ವರ ದೇವಾಲಯ, ಮಹಾಕೂಟ



ಶಿಲ್ಪ-೮. ಸಂಗಮೇಶ್ವರ ದೇವಾಲಯ, ಮಹಾಕೂಟ

ಅರ್ಧನಾರಿಶ್ವರ ಶಿಲ್ಪಗಳು




ಶಿಲ್ಪ-೯. ಮಲ್ಲಿಕಾರ್ಜುನ ದೇವಾಲಯ, ಮಹಾಕೂಟ



ಶಿಲ್ಪ-೧೦. ವಿರೂಪಾಕ್ಷ ದೇವಾಲಯ, ಮಹಾಕೂಟ



ಶಿಲ್ಪ-೧೧. ಕಾಲಕಾಲೇಶ್ವರ ದೇವಾಲಯ, ಮಹಾಕೂಟ



ಶಿಲ್ಪ-೧೨. ಕಾಡಸಿದ್ದೇಶ್ವರ ದೇವಾಲಯ, ಪಟ್ಟದಕಲ್ಲು

ಅರ್ಧನಾರಿಶ್ವರ ಶಿಲ್ಪಗಳು



ಶಿಲ್ಪ-೧೩. ಮಹಾಕೂಟೇಶ್ವರ ದೇವಾಲಯ, ಮಹಾಕೂಟ



ಶಿಲ್ಪ-೧೪. ಪ್ರಾಚ್ಯವಸ್ತು ಸಂಗ್ರಹಾಲಯ, ಐಹೊಳೆ



ಶಿಲ್ಪ-೧೫. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೬. ಲಾಡ್‌ಖಾನ್ ದೇವಾಲಯ, ಐಹೊಳೆ

ಅರ್ಧನಾರಿಶ್ವರ ಶಿಲ್ಪಗಳು



ಶಿಲ್ಪ-೧೭. ದುರ್ಗಾ ದೇವಾಲಯ, ಐಹೊಳೆ




ಶಿಲ್ಪ-೧೮. ರಾವಳ್‌ಫಡಿ ಗುಹಾಲಯ, ಐಹೊಳೆ

ಹರಿಹರ ಶಿಲ್ಪಗಳು



ಶಿಲ್ಪ-೧. ಶೈವ ಗುಹಾಲಯ, ಬಾದಾಮಿ




ಶಿಲ್ಪ-೨. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ


ಹರಿಹರ ಶಿಲ್ಪಗಳು



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೪. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೫. ಪಿನಾಕಪಾಣಿ ದೇವಾಲಯ, ಮಹಾಕೂಟ



ಶಿಲ್ಪ-೬. ಕಾಲಕಾಲೇಶ್ವರ ದೇವಾಲಯ, ಮಹಾಕೂಟ


ಹರಿಹರ ಶಿಲ್ಪಗಳು



ಶಿಲ್ಪ-೭. ಸಂಗಮೇಶ್ವರ ದೇವಾಲಯ, ಮಹಾಕೂಟ



ಶಿಲ್ಪ-೮. ಮಹಾಕೂಟ ಆವರಣ, ಮಹಾಕೂಟ




ಶಿಲ್ಪ-೯. ಕಾಡಸಿದ್ದೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೦. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು

1

ಹರಿಹರ ಶಿಲ್ಪಗಳು



ಶಿಲ್ಪ-೧೧. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೨. ರಾವಳಫಡಿ ಗುಹಾಲಯ, ಐಹೊಳೆ

ಉಮಾ ಮಹೇಶ್ವರ ಶಿಲ್ಪಗಳು



ಶಿಲ್ಪ-೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಕಾಡಸಿದ್ಧೇಶ್ವರ ದೇವಾಲಯಲಯ, ಪಟ್ಟದಕಲ್ಲು



ಶಿಲ್ಪ-೩. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೪. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಮಧ್ಯಭಾಗದಲ್ಲಿ ನಂದಿ ಇರಬೇಕಾದ ಸ್ಥಳದಲ್ಲಿ ಕುತೂಹಲಕಾರಿಯಾಗಿ ಕೆತ್ತಲಾಗಿರುವ ಮೂಷಿಕವನ್ನು ಗಮನಿಸಬಹುದು.

ಶಿವಪಾರ್ವತಿ ಶಿಲ್ಪಗಳು

ಶಿಲ್ಪ –೧

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಹೊರಗೋಡೆಯ ಬಲಭಾಗದಲ್ಲಿರುವ ಶಿವ ಪಾರ್ವತಿಯ ಶಿಲ್ಪವೊಂದನ್ನಿಲ್ಲಿ ಗಮನಿಸೋಣ. ಇದು ಶಿವ–ಪಾರ್ವತಿಯರು ನಿಂತಿರುವ ಭಂಗಿಯಲ್ಲಿರುವ ಶಿಲ್ಪ. ಶಿವ ಪಾರ್ವತಿಯ ಸೊಂಟವನ್ನು ಬಳಸಿಕೊಂಡು ನಿಂತಿರುವ ಈ ಶಿಲ್ಪದಲ್ಲಿ ಪಾರ್ವತಿಯ ಬಲಗೈಯು ಶಿವನ ಕಟಿಪ್ರದೇಶಕ್ಕೆ ಬಳಸಿಕೊಂಡಿದೆ. ಶಿವನು ಚರ್ಮಾಂಬರಧಾರಿಯಾಗಿದ್ದರೆ ಪಾರ್ವತಿಯು ಬಲಭಾಗದ ಬಟ್ಟೆಯನ್ನು ಪಾದದವರೆಗೂ ಇಳಿಬಿಟ್ಟಿದ್ದು ಎಡಭಾಗದಲ್ಲಿ ಮೊಳಕಾಲಿನ ಸ್ವಲ್ಪ ಕೆಳಗಿನವರೆಗೆ ಇಳಿಬಿಟ್ಟಿದ್ದಾಳೆ. ಪಾರ್ವತಿಯ ಸೊಂಟದಲ್ಲಿ ತೆಳುವಾದ ಸೊಂಟಪಟ್ಟಿಯಿದ್ದರೆ ಶಿವನ ಸೊಂಟಪಟ್ಟಿಯು ಅಗಲವಾಗಿದ್ದು ಮೂರು ಹಂತಗಳಲ್ಲಿದೆ.

ಶಿವನು ತನ್ನ ಕೆಳಗಿನ ಬಲಗೈಯನ್ನು ಸೊಂಟದ ಮೇಲಿರಿಸಿಕೊಂಡಿದ್ದು ಬಲಭಾಗದ ಇನ್ನೊಂದು ಕೈಯಲ್ಲಿ ಅಲಂಕೃತವಾದ ನಾಗನನ್ನು ಹಿಡಿದುಕೊಂಡಿದ್ದಾನೆ. ವಿಶೇಷವಾದ ಬಾಹುಗಳಿಂದ ಕೂಡಿದ ಸರ್ಪವು ಕಲಾತ್ಮಕವಾದ ಕೆತ್ತನೆಯಾಗಿದೆ. ಶಿವನ ಅಲಂಕಾರವಿಲ್ಲದ ಜಟಾಮುಕುಟ ತುಂಬ ಸರಳವಾಗಿದ್ದು ಪಾರ್ವತಿಯು ಕೂಡಾ ಅಲಂಕಾರವಿಲ್ಲದ ಜಡೆಯನ್ನು ಮೇಲಕ್ಕೆ ಎತ್ತಿಕಟ್ಟಿರುವಂತಿದ್ದು, ಇದು ಉಬ್ಬುಶಿಲ್ಪವಾಗಿದ್ದು, ಇದು ಕೂಡಾ ಆಕರ್ಷಕವಾಗಿದೆ. ಶಿವನ ಯಜ್ಞೋಪವೀತವು ತೆಳ್ಳಗಾಗಿದ್ದು ಸರಳತೆಯಿಂದ ಕೂಡಿದ್ದು, ಕುತ್ತಿಗೆಯಲ್ಲಿ ಸರಳವಾದ ಕಂಠಾಭರಣವಿದೆ. ಶಿಲ್ಪವು ಅತ್ಯಂತ ಸರಳವಾಗಿ ಸುಂದರವಾಗಿದ್ದು ನೋಡುಗರಲ್ಲಿ ವಿಶೇಷವಾದ ಅನುಭವವನ್ನು ನೀಡುವಂತಿದೆ. ಶಿಲ್ಪದ ಕೆಲಭಾಗಗಳು ಭಗ್ನಗೊಂಡಿವೆ.

ಮುಖ್ಯವಾಗಿ ಪಾರ್ವತಿಯ ಸ್ತನಭಾಗ ಮತ್ತು ಮುಖವು ಭಗ್ನವಾಗಿದ್ದು ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿ ಕೆಡಿಸಿದ್ದಾರೆ. ಪಾರ್ವತಿಯ ಕುತ್ತಿಗೆಯಲ್ಲಿ ಕೇವಲ ಒಂದೆಳೆ ಹಾರವಿದೆ. ಇಲ್ಲಿ ಎದೆಹಾರವಿಲ್ಲ. ಕೈಯಲ್ಲಿ ಒಂದು ಬಳೆ ಮಾತ್ರವಿದೆ. ಸರಳವಾಗಿ ತೆಳುವಾಗಿ ಅಲಂಕಾರಿಕ ವಿನ್ಯಾಸಗಳನ್ನು ಕೆತ್ತಿರುವುದು ಇಲ್ಲಿನ ವಿಶೇಷತೆ. ಈ ರೀತಿಯ ಶಿಲ್ಪಗಳು ಮುಂದಿನ ದಿನಗಳಲ್ಲಿ ಬಹಳಷ್ಟು ರಚನೆಯಾಗಿರುವುದು ಕಂಡುಬರುತ್ತದೆ. ಪಟ್ಟದಕಲ್ಲಿನಲ್ಲಿ ಹಲವಾರು ದೇವಾಲಯಗಳು ರಚನೆಯಾಗಿದ್ದು ಇವುಗಳೆಲ್ಲ ಹೆಚ್ಚಾಗಿ ಶೈವ ದೇವಾಲಯಗಳು. ಆದುದರಿಂದ ಇಲ್ಲೆಲ್ಲಾ ಹಲವಾರು ಶಿಲ್ಪಗಳು, ಶಿವನಿಗೆ ಸಂಬಂಧಿಸಿದ ಶಿಲ್ಪಗಳು ಕಂಡುಬರುತ್ತವೆ. ಇವುಗಳಲ್ಲಿ ಶಿವ–ಪಾರ್ವತಿಯರ ಜೋಡಿ ಶಿಲ್ಪಗಳೂ ಸೇರಿವೆ.

[illegible]



ಶಿಲ್ಪ –೨

ಈ ಶಿಲ್ಪವು ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಕಂಬದಲ್ಲಿದ್ದು, ಮೊದಲಿನ ಶಿಲ್ಪದೊಂದಿಗೆ ತುಲನೆ ಮಾಡಬಹುದು. ಈ ಶಿಲ್ಪದಲ್ಲಿ ಶಿವ–ಪಾರ್ವತಿಯರು ಅಲಂಕೃತ ಮರವೊಂದರ ಪಕ್ಕದಲ್ಲಿ ನಿಂತಿದ್ದಾರೆ. ಶಿವನು ದ್ವಿಭಂಗಿಯಲ್ಲಿ ನಿಂತಿದ್ದು ಪಕ್ಕದಲ್ಲಿ ಪಾರ್ವತಿಯನ್ನು ಬಳಸಿ ಹಿಡಿದಿದ್ದಾನೆ. ತೆಳು ಉಬ್ಬು ಶಿಲ್ಪವಾಗಿರುವ ಇಲ್ಲಿ ಶಿವನ ಕುತ್ತಿಗೆಯಲ್ಲಿ ಹಾವು ಹೆಡೆ ಬಿಚ್ಚಿಕೊಂಡಿದೆ. ಪಾರ್ವತಿಯು ಶಿವನೆಡೆಗೆ ಕುತೂಹಲದಿಂದ ನೋಡುತ್ತಿದ್ದಾಳೆ. ಶಿವನ ತಲೆಯಲ್ಲಿ ಜಟೆ ಇದ್ದು ಅಲಂಕರಣವಿಲ್ಲ, ಶಿವನು ಸರ್ಪಾಭರಣ ಭೂಷಿತನಾಗಿದ್ದರೆ ಪಾರ್ವತಿಯ ಕುತ್ತಿಗೆಯಲ್ಲಿ ಒಂದೆಳೆಯ ಅಗಲವಾದ ಹಾರವಿದೆ. ದೇಹದ ಬಟ್ಟೆಯ ವಿವರಗಳು, ಅಥವಾ ನೆರಿಗೆಗಳು ಇಲ್ಲಿ ಕಂಡುಬರುವುದಿಲ್ಲ. ಪಕ್ಕದಲ್ಲಿ ಕೆತ್ತಲಾಗಿರುವ ವೃಕ್ಷವು ಸುರುಳಿಗಳಿಂದ ಅಲಂಕೃತವಾಗಿದೆ. ಈ ಶಿಲ್ಪವು ಕೂಡಾ ಅರ್ಧವೃತ್ತಾಕಾರದಲ್ಲಿದೆ.

ಆದರೆ ಈ ಶಿಲ್ಪವನ್ನು ಮೊದಲ ಶಿಲ್ಪಕ್ಕೆ ಹೋಲಿಸಿದರೆ ಬಹುಶಃ ಅಭ್ಯಾಸಿಕರು ಕೆತ್ತಿರಬಹುದು. ಇಲ್ಲಿನ ಹಲವಾರು ಶಿಲ್ಪಗಳನ್ನು ನೋಡಿದರೆ ಈ ಅನುಭವವಾಗುತ್ತದೆ. ಎಲ್ಲ ಶಿಲ್ಪವನ್ನು ನುರಿತ ಶಿಲ್ಪಿಗಳೆ ಕೆತ್ತಿರಬೇಕೆಂದೇನಿಲ್ಲ. ಅಭ್ಯಾಸಿಗರು ಹಲವಾರು ಶಿಲ್ಪಗಳನ್ನು ಕೆತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಈ ಶಿಲ್ಪವೂ ಅದೇ ರೀತಿಯದ್ದಿರಬೇಕು. ಇಲ್ಲಿ ಶಿವನ ಮುಖಭಾವವು ಹಸನ್ಮುಖವಾಗಿದ್ದು ಆಕರ್ಷಕವಾಗಿದೆ. ದೇಹವು ಎಡಭಾಗಕ್ಕೆ ಹೆಚ್ಚು ಬಾಗಿರುವುದರಿಂದ ಸಮತೋಲನ ಕಳೆದುಕೊಂಡಿದೆ. ಪಾರ್ವತಿಯು ತನ್ನ ದೇಹದ ಭಾರವನ್ನು ತನ್ನ ಎಡಗಾಲಿನ ಮೇಲೆ ಹಾಕಿ ಕೈಯನ್ನು ಸೊಂಟದ ಮೇಲಿರಿಸಿಕೊಂಡಿದ್ದಾಳೆ. ತಲೆಕೂದಲನ್ನು ಮೇಲಕ್ಕೆತ್ತಿ ಕಟ್ಟಿದ್ದು ಶಿವನೆಡೆಗೆ ನೋಡುತ್ತಿರುವಂತಿದೆ. ಒಟ್ಟಿನಲ್ಲಿ ಶಿಲ್ಪವು ದೇವಾಲಯದ ಮೊದಲಿನ ಕಂಬದ ಶಿಲ್ಪಕ್ಕೆ ಹೋಲಿಸಿದರೆ ವೃಕ್ಷದ ಸುರುಳಿಗಳಿಂದಾಗಿ ಗಮನ ಸೆಳೆಯುತ್ತದೆ. ಸುತ್ತಲಿನ ವೃತ್ತಾಕಾರದ ಚೌಕಟ್ಟಿನಲ್ಲಿಯೂ ಯಾವುದೇ ಅಲಂಕರಣವಿಲ್ಲದಿರುವುದರಿಂದ ಖಾಲಿಯೆನಿಸುತ್ತದೆ.

ಶಿಲ್ಪ –೩

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ಇನ್ನೊಂದು ಶಿವ–ಪಾರ್ವತಿಯರ ಶಿಲ್ಪವಿದ್ದು, ಇಲ್ಲಿ ಉಲ್ಲೇಖಾರ್ಹವಾದುದು. ದೇವಾಲಯದ ಹೊರಗೋಡೆಯಲ್ಲಿರುವ ಈ ಶಿಲ್ಪದಲ್ಲಿ ಶಿವ–ಪಾರ್ವತಿಯರು ನಿಂತಿರುವ ಚತುರ್ಭುಜ ಶಿವನು ತನ್ನ ಎಡಗಾಲನ್ನು ನಂದಿಯ ಮೇಲಿರಿಸಿಕೊಂಡಿದ್ದಾನೆ. ನಂದಿಯು ವಿನೀತ ಭಾವದಿಂದ ಶಿವನ ಭಾರವನ್ನು ಹೊತ್ತುಕೊಂಡಿದೆ. ಶಿವನ ಮುಖವು ಹಸನ್ಮುಖವಾಗಿದೆ. ಬಲಗೈ ತೊಡೆಯ ಮೇಲಿದೆ. ಹಿಂದಿನ ಕೈಯಲ್ಲಿ ಹಾವನ್ನು ಹಿಡಿದಿದ್ದಾನೆ. ತನ್ನ ಎಡಗೈಯಿಂದ ಪಾರ್ವತಿಯನ್ನು ಬಳಸಿಕೊಂಡಿದ್ದಾನೆ. ಇನ್ನೊಂದು ಎಡಗೈಯನ್ನು ಮೇಲಕ್ಕೆತ್ತಿದ್ದು ಅದರಲ್ಲಿ ಪರಶುವನ್ನು ಹಿಡಿದಿದ್ದಾನೆ. ಪಾರ್ವತಿಯು


ದ್ವಿಭುಜೆಯಾಗಿದ್ದು ಶಿವನೆಡೆಗೆ ಲಜ್ಜಾಭಾವದಿಂದ ನೋಡುತ್ತಿದ್ದಾಳೆ. ತನ್ನ ಎಡಗೈಯನ್ನು ಇಳಿಬಿಟ್ಟಿದ್ದು ಬಲಗೈಯನ್ನು ನಾಟ್ಯಮುದ್ರೆಯಲ್ಲಿ ಹಿಡಿದಿರುವಂತಿದೆ. ಬಲಮುಂಗೈ ಭಗ್ನವಾಗಿರುವುದರಿಂದ ಮುದ್ರೆ ಯಾವುದೆಂದು ಸ್ಪಷ್ಟವಾಗುವುದಿಲ್ಲ.

ಪಾರ್ವತಿಯ (ಸೀರೆ) ನೆರಿಗೆಗಳು ಅಗಲವಾಗಿದ್ದು ವಾರೆರೇಖೆಗಳಿಂದ ಕೂಡಿದೆ. ಸೊಂಟದಲ್ಲಿ ಎರಡು ಸುತ್ತಿನ ಪಟ್ಟಿಕೆಯಿದ್ದು ಕಲಾತ್ಮಕತೆಯಿಂದ ಕೂಡಿದೆ. ತನ್ನ ಎಡಗೈಯಲ್ಲಿ ಬಟ್ಟೆಯ ಚುಂಗನ್ನು ಹಿಡಿದಿದ್ದಾಳೆ. ಇಲ್ಲಿ ಪಾರ್ವತಿಯ ತೋಳಿನ ಆಭರಣವೂ(ತೋಳಬಂದಿ) ಐದು ವೃತ್ತಗಳಿಂದ ಕೂಡಿದ್ದು ಸರ್ಪಬಂಧದಂತಿದೆ. ದುಂಡಗಾದ ಸ್ತನಗಳು, ಅಗಲವಾದ ಸೊಂಟ, ನೀಳವಾದ ಕಾಲುಗಳು, ಅದಕ್ಕೆ ಒಪ್ಪುವಂತೆ ಸೀರೆಯ ನೆರಿಗೆ ಇವು ಶಿಲ್ಪಕ್ಕೆ ಹೆಚ್ಚಿನ ಮೆರುಗನ್ನು ನೀಡಿದೆ. ಶಿವನ ದೇಹವು ದಷ್ಟ-ಪುಷ್ಟವಾಗಿದ್ದು ಅಗಲವಾದ ತೋಳುಗಳು, ಅಗಲವಾದ ಎದೆಭಾಗ, ದುಂಡಗಾದ ಮುಖ ಮತ್ತು ತಲೆ, ದಪ್ಪಗಾದ ತೋಳುಗಳು, ಅಗಲವಾದ ದಪ್ಪನಾದ ತೊಡೆಭಾಗ, ಶಿವನ ಬಟ್ಟೆಯನ್ನು ಗುರುತಿಸುವ ತೆಳ್ಳಗಿನ ವಾರೆ ರೇಖೆಗಳುಳ್ಳ ಆದರೆ ತೊಡೆಯವರೆಗಷ್ಟೆ ಇರುವ ಬಟ್ಟೆ ಇವು ಶಿಲ್ಪದ ಶ್ರೀಮಂತಿಕೆಯನ್ನು ತೋರಿಸುತ್ತವೆ.

ಶಿವನ ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲವಿದೆ. ಅಗಲವಾದ ಯಜ್ಞೋಪವೀತವನ್ನು ಎಡಗಡೆಯಿಂದ ಬಲಗಡೆಗೆ ನೇರವಾಗಿ ಬರುವಂತೆ ಕೆತ್ತಲಾಗಿದೆ. ಶಿವನ ಕುತ್ತಿಗೆಯಲ್ಲಿ ಅಗಲವಾದ ಕಂಠಹಾರವಿದೆ. ದೇಹವು ಶ್ರೀಮಂತಿಕೆಯನ್ನು ಸೂಚಿಸುವ ರೀತಿಯಲ್ಲಿ ಶಿವನ ಕುತ್ತಿಗೆಯ ಸುತ್ತ ಎರಡು ಸುತ್ತು ಮಡಿಕೆಗಳಿವೆ. ಶಿವ-ಪಾರ್ವತಿಯ ಮಧ್ಯದಲ್ಲಿ ಮಂಡಿಯೂರಿ ಕುಳಿತಿರುವ ನಂದಿಯಿದ್ದು, ತಲೆಯನ್ನು ಸ್ವಲ್ಪ ಬಲಗಡೆಗೆ ಬಾಗಿಸಿದ್ದು, ಅತ್ಯಂತ ಜೀವಂತಿಕೆಯನ್ನು ಹೊಂದಿದೆ. ಶಿವನದೆ ಮತ್ತೊಂದು ರೂಪವಾಗಿರುವ ನಟರಾಜನ ಶಿಲ್ಪವೂ ಪಕ್ಕದಲ್ಲಿದ್ದು, ತುಲನಾತ್ಮಕವಾಗಿ ನೋಡಿದರೆ ಈ ಶಿಲ್ಪಕ್ಕೂ ಮೊದಲಿನ ಶಿವಪಾರ್ವತಿಯ ಶಿಲ್ಪಕ್ಕೂ ಕೆತ್ತನೆಯಲ್ಲಿ ಮತ್ತು ದೇಹಾಕಾರದಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಆದುದರಿಂದ ಅಂದಿನ ಶಿಲ್ಪಿಗಳು ಕೆತ್ತನೆ ಮತ್ತು ಅಂಗರಚನೆಯನ್ನು ತೋರಿಸುವುದರಲ್ಲಿ ಸ್ವಂತಿಕೆಯನ್ನು ಕಾಯ್ದುಕೊಂಡಿದ್ದರೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಇಲ್ಲಿನ ನಟರಾಜ ಶಿಲ್ಪವು ತೆಳ್ಳಗಾಗಿದ್ದು ಸಪೂರವಾದ ದೇಹವನ್ನು ಹೊಂದಿ, ಹೆಚ್ಚಿನ ಅಲಂಕರಣವನ್ನು ಹೊಂದಿದ್ದರೆ, ಶಿವಪಾರ್ವತಿಯರ ಜೋಡಿಶಿಲ್ಪವು ದಷ್ಟ-ಪುಷ್ಟವಾಗಿದ್ದು, ಸರಳ ಅಲಂಕರಣವನ್ನು ಹೊಂದಿದ್ದು ತನ್ನ ಆಕಾರದಿಂದ ಗಮನ ಸೆಳೆಯುತ್ತದೆ. ಈವರೆಗೆ ನೋಡಿರುವ ಶಿಲ್ಪಗಳೆಲ್ಲ ಶಿವ-ಪಾರ್ವತಿಯ ಜೋಡಿ ಶಿಲ್ಪಗಳ ಕುರಿತದ್ದಾದರೆ ಇನ್ನು ಶಿವನ ಒಂಟಿ ಶಿಲ್ಪಗಳು ಸಾಕಷ್ಟಿವೆ. ಇವುಗಳಲ್ಲಿ ಹೆಚ್ಚಿನವು ಶಿವನ ನಟರಾಜ ಭಂಗಿಯ ಶಿಲ್ಪಗಳು. ಈ ಕುರಿತು ಈಗಾಗಲೇ ಚರ್ಚಿಸಲಾಗಿದೆ. ಇವಲ್ಲದೆ ಶಿವನು ಸಮಭಂಗಿಯಲ್ಲಿ ನಿಂತಿರುವ ಶಿಲ್ಪಗಳು, ದ್ವಿಭಂಗಿಯಲ್ಲಿ ನಿಂತಿರುವ ಶಿಲ್ಪಗಳು. ಇವೆಲ್ಲ ಹೆಚ್ಚಾಗಿ ಬಿಡಿ ಶಿಲ್ಪಗಳು. ದೇವಾಲಯದ

ಶಿವ ಪಾರ್ವತಿ ಶಿಲ್ಪಗಳು



ಶಿಲ್ಪ-೧. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಗೋಡೆಗಳ ಕಂಬಗಳಲ್ಲಿ ಕೆತ್ತಲಾಗಿರುವ ಶಿಲ್ಪಗಳು. ಇಂತಹ ಶಿಲ್ಪಗಳಲ್ಲಿ ಹರಿ–ಹರ ಶಿಲ್ಪಗಳು ಮತ್ತು ಅರ್ಧನಾರೀಶ್ವರ ಶಿಲ್ಪಗಳೂ ಇವೆ. ಇವುಗಳಲ್ಲಿ ಶಿವನು ಒಂಟಿಯಾಗಿ ನಿಂತಿರುವ ಶಿಲ್ಪಗಳು ಶಾಂತ ಮೂರ್ತಿಗಳಾಗಿವೆ. ಇವುಗಳಲ್ಲದೆ ಇನ್ನೊಂದು ಬಗೆಯ ಶಿಲ್ಪಗಳೂ ಸೇರಿವೆ. ಅವುಗಳೆಂದರೆ ಲಕುಲೀಶ ಶಿಲ್ಪಗಳು. ಇವು ಶಿವನ ರೂಪವೆ ಆಗಿದ್ದರೂ ಶಿವನ ಶಿಲ್ಪಗಳಿಗಿಂತ ವಿಭಿನ್ನ. ಶಿವನ ತಾಂತ್ರಿಕ ಆರಾಧಕರಾದ ಲಾಕುಲೀಶಪಂಥದವರು (ಲಕುಲೀಶ ಪಂಥ ಅಥವಾ ಲಾಕುಳರು) ಆರಾಧಿಸುತ್ತಿದ್ದಿರಬಹುದೆಂದು ನಂಬಲಾದ ಈಶ್ವರನ ಶಿಲ್ಪಗಳು. ಇವು ಬಾದಾಮಿಯ ಚಾಲುಕ್ಯರ ಆಡಳಿತ ಕಾಲದಲ್ಲಿಯೂ, ರಾಷ್ಟ್ರಕೂಟರ ಕಾಲದಲ್ಲಿಯೂ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿಯೂ ಸಾಕಷ್ಟು ರಚನೆಯಾಗಿರುವುದನ್ನು ಕಾಣಬಹುದು. 'ಲಕುಲೀಶನು ಶಿವನ ಅವತಾರ. ಚಾಲುಕ್ಯರ ಕಾಲದ ಲಕುಲೀಶ ಮೂರ್ತಿಗಳನ್ನು ಬಾದಾಮಿ, ಮಹಾಕೂಟ, ಪಟ್ಟದಕಲ್ಲು ದೇವಾಲಯಗಳ ಕಂಬ ಇಲ್ಲವೇ ಗೋಡೆಗಳ ಮೇಲೆ ಕಾಣುತ್ತೇವೆ.'[೩೬]

ಶಿವನ ಬಿಡಿ ಶಿಲ್ಪಗಳು

ಬಾದಾಮಿ ಚಾಲುಕ್ಯರ ಕಾಲದಲ್ಲಿ ಶೈವ ಧರ್ಮಕ್ಕೆ ಸಂಬಂಧಪಟ್ಟಂತೆ ಹಲವಾರು ಶಿಲ್ಪಗಳು ರಚನೆಯಾಗಿರುವುದನ್ನು ಮೊದಲೇ ಹೇಳಲಾಗಿದೆ. ಇದರಲ್ಲಿ ಶಿವನನ್ನು ಮುಖ್ಯವಾಗಿಟ್ಟುಕೊಂಡು ರಚನೆಯಾಗಿರುವ ಶಿಲ್ಪಗಳು ಹೆಚ್ಚು. ಇದರಲ್ಲಿ ನಟರಾಜ ಶಿಲ್ಪಗಳು, ಹರಿಹರ ಶಿಲ್ಪಗಳು, ಅರ್ಧನಾರೀಶ್ವರ ಶಿಲ್ಪಗಳು ಮತ್ತು ಇತರ ಹಲವಾರು ಶಿಲ್ಪಗಳೂ ಇವೆ. ಇವಲ್ಲದೆ ಶಿವನ ಉಗ್ರ ರೂಪವನ್ನು ತೋರಿಸುವ ಶಿಲ್ಪಗಳು ಇವೆ. ಇವಲ್ಲದೆ ಶಿವನ ಕೆಲವಾರು ಒಂಟಿ ಶಿಲ್ಪಗಳು ಇವೆ. ಇವು ಬೇರೆ ಬೇರೆ ಸಂದರ್ಭದಲ್ಲಿ ರಚನೆಯಾಗಿವೆ. ಇಂತಹ ಕೆಲ ಶಿಲ್ಪಗಳ ಕುರಿತು ಈಗಾಗಲೇ ಚರ್ಚಿಸಲಾಗಿದೆ. ಆದರೂ ಇನ್ನು ಕೆಲವು ಶಿಲ್ಪಗಳು ಈ ಸಂದರ್ಭದಲ್ಲಿ ಉಲ್ಲೇಖಕ್ಕೆ ಅಗತ್ಯವಾದವುಗಳು. ಅಂತಹ ಕೆಲ ಶಿಲ್ಪಗಳನ್ನು ಈಗ ನೋಡೋಣ.

ಶಿಲ್ಪ –೧

ಆರ್ಯಮಂಚಿ ಉಪಾಧ್ಯಾಯ ಎಂಬ ವಾಸ್ತುಶಿಲ್ಪಿಯು ಕಟ್ಟಿದ ಮಾಲೆಗಿತ್ತಿ ಶಿವಾಲಯವು ಏಳನೆ ಶತಮಾನದ ದ್ವಿತೀಯಾರ್ಧದ ಒಂದು ದೊಡ್ಡ ದೇವಾಲಯ. ಕ್ರಿ.ಶ. ೬೫೫ರಲ್ಲಿ ನಿರ್ಮಿತವಾದ ಮಾಲೆಗಿತ್ತಿ ಶಿವಾಲಯದ ದಕ್ಷಿಣ ಗೋಡೆಯಲ್ಲಿರುವ ಶಿವನ ಶಿಲ್ಪವು ಕಲಾತ್ಮಕವಾಗಿದೆ. ಅದು ವೈಶಿಷ್ಟ್ಯಪೂರ್ಣವೂ ಹೌದು. ಇದು ಚತುರ್ಭುಜ ಶಿವನ ಮೂರ್ತಿಯಾಗಿದೆ. ಶಿವನು ಸಮಭಂಗಿಯಲ್ಲಿ ನಿಂತಿದ್ದಾನೆ. ಮೇಲಿನ ಬಲಗೈಯಲ್ಲಿ ಸರ್ಪವಿದೆ. ಕೆಳಗಿನ ಬಲಗೈ ಕಟ್ಯವಲಂಬಿತವಾಗಿದೆ. ಆತನ ಎಡಗೈಯಲ್ಲಿ ತ್ರಿಶೂಲ, ಇನ್ನೊಂದು ಕೈ ಸೊಂಟದ ಮೇಲೆ ಇದೆ. ಎಡಕ್ಕೆ ಮತ್ತು ಬಲಕ್ಕೆ ಒಬ್ಬೊಬ್ಬ ಋಷಿ ನಿಂತಿದ್ದಾರೆ. ಶಿವನು

೩೬. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ ೧೯ ಸಂಪುಟ ಪುಟ. ೧೨೯



ಹಿತಮಿತವಾದ ಆಭರಣಗಳಿಂದ ಶೋಭಿತನು. ರತ್ನಖಚಿತ ಕಿರೀಟದ ಹಿಂದೆ ತಲೆಗೂದಲು ಸುರುಳೆಯಾಗಿ ಆಕರ್ಷಕವಾಗಿದೆ. ದೇವನು ಅಂತರ್ಮುಖಿಯಾಗಿರುವಂತೆ ಚಿತ್ರಿತನಾಗಿದ್ದಾನೆ. ಮೇಲಿನ ಮೂಲೆಗಳಲ್ಲಿ ಮಾಲಾವಾಹಕರಿದ್ದಾರೆ. ಮುಖಲಕ್ಷಣಗಳನ್ನು ಗಮನಿಸಿದಾಗ ಇದು ಗುಹಾ ಶಿಲ್ಪಗಳಿಗಿಂತ ಭಿನ್ನವಾಗಿರುವಂತೆ ತೋರುತ್ತದೆ. ಈ ಶಿಲ್ಪವು ಗುಪ್ತರ ಕಾಲದ ಮೂರ್ತಿಗಳನ್ನು ನೆನಪಿಸುತ್ತದೆ.[೩೭] ಡಾ. ಅ. ಸುಂದರ ಅವರು ಮಾಲೆಗಿತ್ತಿ ಶಿವಾಲಯವು ಮೂಲತಃ ಸೂರ್ಯದೇವಸ್ಥಾನವೆಂದು ಅಭಿಪ್ರಾಯಪಡುತ್ತಾರೆ.

ಶಿಲ್ಪ –೨

ಬಾದಾಮಿ ಮಾಲೆಗಿತ್ತಿ ಶಿವಾಲಯವು ಪೂರ್ವಾಭಿಮುಖವಾಗಿದ್ದು, ಈ ದೇವಾಲಯದ ಎಡಭಾಗದ ಹೊರಭಿತ್ತಿಯಲ್ಲಿ ಶಿವನು ಪೂರ್ವಾಭಿಮುಖನಾಗಿ ದ್ವಿಭುಜ ಶಿಲ್ಪವಾಗಿದೆ. ದ್ವಿಭಂಗಿಯಲ್ಲಿ ನಿಂತಿರುವ ಶಿವನು ಕಿರೀಟ ಮುಕುಟನಾಗಿದ್ದು, ತಲೆಯ ಹಿಂದೆ ದೊಡ್ಡದಾದ ಪ್ರಭಾಮಂಡಲವಿದೆ. ಕೊರಳಲ್ಲಿ ಅಗಲವಾದ ಪಟ್ಟಿಕೆಯಿದ್ದು, ಬರಿದಾಗಿದೆ. ಎರಡು ಕೈಗಳು ಭಗ್ನಗೊಂಡಿವೆ. ಕಾಲಿನ ಇಬ್ಬದಿಗಳಲ್ಲಿ ಶಿಲ್ಪಗಳಿದ್ದು, ಅವು ಕೂಡಾ ನಾಶವಾಗಿವೆ. ಮೇಲಿನ ಮೂಲೆಯಲ್ಲಿ ಕುಬ್ಜಗಣ ಶಿಲ್ಪಗಳನ್ನು ಕತ್ತರಿಸಿದ್ದಾರೆ. ಒಟ್ಟಾರೆ ಇದು ದ್ವಿಮಾನದಲ್ಲಿ ರಚಿತವಾದ ಶಿಲ್ಪವಾಗಿದೆ.

ಶಿಲ್ಪ –೩

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಸಭಾಮಂಟಪದ ಎಡಭಾಗದ ಹೊರಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿ ನಂದಿಗೆ ಆಸರೆಯಾಗಿ ನಿಂತಿರುವ ಶಿವನ ಶಿಲ್ಪವಿದೆ. ಚತುರ್ಭುಜ ಹೊಂದಿದ್ದು ಬಲಗೈಯನ್ನು ನಂದಿಯ ಮೇಲಿಟ್ಟಿದ್ದಾನೆ. ಹಿಂದಿನ ಬಲಗೈಯಲ್ಲಿ ಡಮರನ್ನು ಹಿಡಿದಿದ್ದಾನೆ. ಎಡಗೈಯು ಕಟ್ಯವಲಂಬಿತವಾಗಿದೆ. ಹಿಂದಿನ ಎಡಗೈಯಲ್ಲಿ ಧ್ವಜ ಪತಾಕೆಯನ್ನು ಹಿಡಿದಿದ್ದಾನೆ. ಕೊರಳಲ್ಲಿ ಅಗಲವಾದ ಸರವಿದ್ದು, ತೋಳಿನಲ್ಲಿ ನಾಲ್ಕು ಸುತ್ತಿನ ನಾಗಬಂಧವನ್ನು ಧರಿಸಿದ್ದಾನೆ. ಉದರಬಂಧ, ಯಜ್ಞೋಪವೀತ ಶಿಲ್ಪದಲ್ಲಿ ಕಾಣಬಹುದು. ನಂದಿಯು ಶಿವನಿಗೆ ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯ ಶಿಲ್ಪಿಯು ನಂದಿಗೂ ಕೊಟ್ಟಿದ್ದಾನೆ. ದ್ವಿ ಆಯಾಮದಲ್ಲಿ ರಚಿತವಾದ ಈ ಶಿಲ್ಪವು ಅತ್ಯಾಕರ್ಷಕವಾಗಿ ಮೂಡಿಬಂದಿದೆ.

ಶಿಲ್ಪ –೪

ಮಹಾಕೂಟದ ಸಮೂಹದಲ್ಲಿ ಮಲ್ಲಿಕಾರ್ಜುನ ದೇವಾಲಯವು ಪೂರ್ವಾಭಿ ಮುಖವಾಗಿದ್ದು, ಇದರ ಹಿಂಭಾಗದ ಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿ ಚತುರ್ಭುಜನಾಗಿದ್ದಾನೆ. ಬಲಗೈಯಲ್ಲಿ ಅಕ್ಷಮಾಲಾ, ಹಿಂದಿನ ಕೈಯಲ್ಲಿ ಪರಶು, ಎಡಭಾಗದ ಒಂದು ಕೈ ಕಟ್ಯವಲಂಬಿತವಾಗಿದೆ. ಹಿಂದಿನ ಕೈಯಲ್ಲಿ ಹಾವನ್ನು ಹಿಡಿದಿದ್ದಾನೆ. ಕಿರೀಟ ಮುಕುಟನಾಗಿದ್ದು,

೩೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೦೮

ಕೊರಳಲ್ಲಿ ಅಗಲವಾದ ಸರವಿದ್ದು, ಎದೆಯ ಭಾಗ ಪ್ರಮಾಣದಲ್ಲಿ ಚಿಕ್ಕದಾಗಿದೆ. ಮತ್ತು ಯಜ್ಞೋಪವೀತ, ಉದರಬಂಧವನ್ನು ಧರಿಸಿದ್ದಾನೆ. ಕಿರೀಟಮುಕುಟನಾಗಿರುವ ಶಿವನ ತಲೆಯ ಹಿಂದೆ ವಿನ್ಯಾಸವಿಲ್ಲದ ಬರಿದಾಗಿರುವ ಪ್ರಭಾಮಂಡಲವಿದೆ. ಈ ಶಿಲ್ಪದಲ್ಲಿ ಪ್ರಮಾಣಬದ್ಧತೆ ಇಲ್ಲವೆಂಬುದಾಗಿ ಗುರುತಿಸಬಹುದು. ಎಡಗೈಯು ಉದ್ದವಾಗಿದ್ದು, ಹಸ್ತ ದೊಡ್ಡದಾಗಿದೆ. ಎದೆಭಾಗ ಚಿಕ್ಕದಾಗಿದೆ. ಆದರೂ ಅಲಂಕಾರವುಳ್ಳ ಶಿಲ್ಪವಾಗಿದೆ. ಇಬ್ಬದಿಗಳಲ್ಲಿ ಸ್ತ್ರೀಯರು ದ್ವಿಭಂಗಿಯಲ್ಲಿ ನಿಂತಿದ್ದಾರೆ. ದ್ವಿಮಾನದಲ್ಲಿ ರಚಿತವಾದರೂ ತ್ರಿಮಾನದ ಅನುಭವವನ್ನುಂಟು ಮಾಡುತ್ತದೆ.

ಶಿಲ್ಪ –೫

ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ, ಇಕ್ಕಟ್ಟಾದ ಎರಡು ಕಂಬಗಳ ಮಧ್ಯ ದ್ವಿಭುಜನಾಗಿ ಸಮಭಂಗಿಯಲ್ಲಿ ನಿಂತಿದ್ದಾನೆ. ಬಲಗೈಯಲ್ಲಿ ಉದ್ದವಾದ ತ್ರಿಶೂಲ ಹಾಗೂ ಎಡಗೈಯಲ್ಲಿ ಹಾವನ್ನು ಹಿಡಿದಿದ್ದಾನೆ, ಇದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕಿರೀಟಮುಕುಟನಾಗಿರುವ ಶಿವನ ತಲೆಯ ಹಿಂದೆ ಪ್ರಭಾಮಂಡಲ ಅಲಂಕೃತಗೊಂಡಿದೆ. ಕೊರಳಲ್ಲಿ ಒಂದೆಳೆಯ ಪದಕವಿದ್ದು, ಯಜ್ಞೋಪವೀತ ಮತ್ತು ಉದರಬಂಧವನ್ನು ಧರಿಸಿದ್ದಾನೆ. ಸೊಂಟಪಟ್ಟಿ ಮುತ್ತಿನಿಂದ ಅಲಂಕೃತಗೊಂಡಿದೆ. ಶಿವನನ್ನು ಗಜಚರ್ಮಾಂಬರ ಬದಲಿಗೆ ಗೀರುಗಳಿಂದ ಅಂದಗೊಳಿಸಿದ್ದು ಶಿಲ್ಪಿಯ ಜಾಣ್ಮೆಯನ್ನು ನಿರೂಪಿಸುವಂತಿರುತ್ತದೆ. ಇಕ್ಕಟ್ಟಾದ ಜಾಗದಲ್ಲಿ ರಚಿತವಾದರೂ ಸ್ಪಷ್ಟವಾಗಿದೆ.

ಶಿಲ್ಪ –೬

ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ದಕ್ಷಿಣಾಭಿಮುಖವಾಗಿ ಶಿವನ ರೂಪಿತವಾಗಿರುವ ಭಿಕ್ಷಾಟನಾ ಶಿಲ್ಪವಿದೆ. ಅಲಂಕಾರವುಳ್ಳ ಕೇಶವನ್ನು ಎತ್ತಿಕಟ್ಟಿದ್ದಾನೆ. ಮುಖವು ಮಂದ ಲಘು ಹಾಸ್ಯದಿಂದ ಕೂಡಿದ್ದು ಕಿವಿಯಲ್ಲಿನ ನಾಗವು ಭುಜದ ಮೇಲೆ ಇಳಿಬಿದ್ದಿವೆ. ಇದು ದೊಡ್ಡ ಗಾತ್ರದಲ್ಲಿದ್ದು, ಕೊರಳಲ್ಲಿ ದೊಡ್ಡ ಗಾತ್ರದ ಹಗ್ಗದ ರೀತಿಯ ಕೆತ್ತನೆ ಇದೆ. ಬಲಗೈಯಲ್ಲಿ ಅಕ್ಷಯಪಾತ್ರೆ, ಎಡಗೈಯಲ್ಲಿ ನಾಗನನ್ನು ಹಿಡಿದಿದ್ದಾನೆ. ದ್ವಿಭಂಗಿಯಲ್ಲಿ ನಿಂತಿರುವ ಈ ಶಿಲ್ಪವು ಉಬ್ಬು ಹಾಗೂ ಗಡಸುತನದಿಂದ ಕೂಡಿದ ಅಪೂರ್ಣ ಕಲಾಕೃತಿಯಾಗಿದೆ.

ಶಿಲ್ಪ –೭

ಪಟ್ಟದಕಲ್ಲು ಸಂಗಮೇಶ್ವರ ದೇವಾಲಯ ಹಿಂಭಾಗದ ಹೊರಕೋಷ್ಠಕದಲ್ಲಿ ಶಿವನ ಶಿಲ್ಪವಿದ್ದು, ಪಶ್ಚಿಮಾಭಿಮುಖವಾಗಿ ಚತುರ್ಭುಜನಾಗಿದ್ದಾನೆ. ನೀಳವಾದ ಕಿರೀಟವನ್ನು ಧರಿಸಿ ಕೊರಳಲ್ಲಿ ಅಗಲವಾದ ಸರವನ್ನು ಧರಿಸಿದ್ದಾನೆ. ಬಲಬದಿಗೆ ನಿಂತಿರುವ ಭೃಂಗಿಯ ತಲೆಯ ಮೇಲೆ ಬಲಗೈಯನ್ನು ಊರಿದ್ದಾನೆ. ಭೃಂಗಿಯು ಶಿವನ ಕಾಲನ್ನು ತಬ್ಬಿ ಹಿಡಿದಿದ್ದಾನೆ.



ಭೃಂಗಿಯ ಕೈಯಲ್ಲಿ ಘಂಟೆಯಿರುವುದನ್ನು ಗಮನಿಸಬಹುದು. ಶಿವನ ಹಿಂದಿನ ಬಲಗೈಯಲ್ಲಿ ದೊಡ್ಡದಾದ ಸರ್ಪವನ್ನು ಹಿಡಿದಿದ್ದು, ಎಡಗೈ ಬೆರಳಚ್ಚುಗಳು ಸವೆದು ಹೋಗಿವೆ. ಇನ್ನೊಂದು ಕೈಯಲ್ಲಿ ತ್ರಿಶೂಲವಿದೆ. ಅದು ಅಪೂರ್ಣವಾಗಿದ್ದು, ಇದು ಹೆಚ್ಚು ಆಳವಿಲ್ಲದ ಉಬ್ಬು ಶಿಲ್ಪವೆನ್ನಬಹುದು.

ಶಿಲ್ಪ –೮

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯ ಗರ್ಭಗೃಹದ ಎಡಭಾಗದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ದ್ವಿಭುಜದ ಶಿಲ್ಪವಿದೆ. ಶಿವನ ಕೇಶವು ಬಿಡಿ ಬಿಡಿಯಾಗಿ ಅಲಂಕಾರಿಕವಾಗಿ ಕಟ್ಟಲಾಗಿದೆ. ಕೇಶದಲ್ಲಿ ಬುರುಡೆಯನ್ನು ಸಹ ಕೆತ್ತಿಸಿದ್ದಾರೆ. ಮೇಲಿನ ಮೂಲೆಯಲ್ಲಿ ಗಂಧರ್ವ ದಂಪತಿಗಳನ್ನು ಇದ್ದಿದ್ದು ಕಾಣಬಹುದು. ಈ ಶಿಲ್ಪದಲ್ಲಿ ಹೆಚ್ಚಿನ ಅಲಂಕಾರದೊಂದಿಗೆ ರಚಿಸಲಾಗಿದೆ. ಮುಖದಲ್ಲಿರುವ ನಗುವನ್ನು ತೋರಿಸಲು ಹಲ್ಲುಗಳನ್ನು ಸಹ ಕೆತ್ತಿದ್ದಾರೆ. ಕೊರಳಲ್ಲಿ ಅಲಂಕಾರವುಳ್ಳ ಅಗಲವಾದ ಮುತ್ತಿನ ಸರವಿದ್ದು, ಯಜ್ಞೋಪವೀತ, ಉದರಬಂಧ, ಸೊಂಟಪಟ್ಟಿ, ತೋಳಬಂಧಿ ಧರಿಸಿದ್ದಾನೆ. ಬಲಗೈ ಭಗ್ನವಾಗಿದ್ದು, ಎಡಗೈ ಕಟ್ಯವಲಂಬಿತವಾಗಿದೆ. ದ್ವಿಭಂಗಿಯಲ್ಲಿ ಅಪಸ್ಮಾರನ ಮೇಲೆ ನಿಂತಿದ್ದಾನೆ. ಅಪಸ್ಮಾರನು ಮಲಗಿದ್ದು, ಎಡಗೈಯನ್ನು ತಲೆಗೆ ಆಧಾರವಾಗಿಟ್ಟಿದ್ದಾನೆ. ಶಿಲ್ಪಕ್ಕೆ ಇನ್ನೂ ಅಂದಗೊಳಿಸಲು ಶಿವನು ನಿಂತಿರುವ ಪೀಠದ ಕೆಳಗೆ ಅಲಂಕಾರವುಳ್ಳ ನಕ್ಷಾವಿನ್ಯಾಸವಿದ್ದು, ಈ ಶಿಲ್ಪ ದ್ವಿಮಾನದಲ್ಲಿ ರಚನೆಯಾಗಿದೆ.

ಶಿಲ್ಪ –೯

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿ ಚತುರ್ಭುಜ ಶಿವನ ಶಿಲ್ಪವಿದೆ. ಈ ಶಿಲ್ಪವು ದ್ವಿಭಂಗಿಯಲ್ಲಿದ್ದು, ಬಲಭಾಗದ ಒಂದು ಕೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದಾನೆ. ಇನ್ನೊಂದು ಕೈಯನ್ನು ಮೊಣಕಾಲ ಮೇಲೆ ಊರಿದ್ದಾನೆ. ಬಲಗಾಲನ್ನು ಕುಬ್ಜಗಣದ ಭುಜದ ಮೇಲೆ ಇರಿಸಿದ್ದಾನೆ. ಕುಬ್ಜಗಣದ ಮುಖವು ಭಗ್ನಗೊಂಡಿದೆ. ಎಡಭಾಗದ ಒಂದು ಕೈಯಲ್ಲಿ ನಾಗವನ್ನು ಹಿಡಿದಿದ್ದಾನೆ. ನಾಗವು ಹೆಡೆಯೆತ್ತಿದೆ. ಇನ್ನೊಂದು ಕೈಯಲ್ಲಿ ಪರಶುವನ್ನು ಹಿಡಿದಿದ್ದು, ಆ ಕೈ ಭಗ್ನಗೊಂಡಿದ್ದು, ಸರಿಯಾಗಿ ಗೋಚರಿಸುವುದಿಲ್ಲ. ಶಿವನು ಜಟಾಮುಕುಟವನ್ನು ಹೊಂದಿದ್ದು, ಕರ್ಣಾಭರಣ, ಕೊರಳ ಹಾರ, ಉದರಬಂಧ, ಯಜ್ಞೋಪವೀತ, ಕಟಿವಸ್ತ್ರಾಭರಣಗಳನ್ನು ಧರಸಿದ್ದಾನೆ. ಎಡಭಾಗದ ಕೆಳಗೆ ಕುಬ್ಜನಿದ್ದು ಅದು ಭಗ್ನಗೊಂಡಿದೆ.

ಶಿಲ್ಪ –೧೦

ಐಹೊಳೆಯ ದುರ್ಗಾದೇವಾಲಯದ ಹೊರ ಕೋಷ್ಠಕದಲ್ಲಿ ದಕ್ಷಿಣಾಭಿಮುಖವಾಗಿ ಶಿವನು ಅಷ್ಟಭುಜಗಳನ್ನು ಹೊಂದಿದ್ದಾನೆ. ಜಟಾಮುಕುಟಧಾರಿಯಾದ ಶಿವನು ಜಟೆಯಲ್ಲಿ

ಚಂದ್ರನನ್ನು ಧರಿಸಿ ಚಂದ್ರಶೇಖರನೆನಿಸಿದ್ದಾನೆ. ಕರ್ಣಾಭರಣ, ಯಜ್ಞೋಪವೀತ, ತೋಳಬಂಧಿ, ಕೈಕಡಗಗಳನ್ನು ಹೊಂದಿದ್ದಾನೆ. ಬಲಭಾಗದ ಒಂದು ಕೈಯಲ್ಲಿ ಅಕ್ಷಮಾಲೆಯನ್ನು, ಇನ್ನೊಂದು ಕೈಯಲ್ಲಿ ಜಟೆಯನ್ನು ಹಿಡಿದಿರುವಂತೆ ತೋರಿಸಲಾಗಿದೆ.

ಎಡಭಾಗದಲ್ಲಿರುವ ಒಂದು ಕೈಯಲ್ಲಿ ನಾಗಸರ್ಪವನ್ನು ಹಿಡಿದಿದ್ದಾನೆ. ಒಂದು ಕೈ ಹಸ್ತವು ತುಂಡಾಗಿದ್ದು ಸ್ಪಷ್ಟವಾಗಿ ಕಾಣುವುದಿಲ್ಲ. ಎರಡೂ ಕೈಗಳಿಂದ ನಂದಿಯು ಕಿವಿಗಳನ್ನು ಹಿಡಿದಿದ್ದಾನೆ. ನಂದಿಯು ಶಿವನ ಹಿಂದೆ ನಿಂತಿದ್ದು, ಎಡಭಾಗಕ್ಕೆ ಮುಖ ಮಾಡಿದ್ದಾನೆ. ಶಿವನು ನಂದಿಯ ತಲೆಯ ಮೇಲೆ ಮೊಣಕೈ ಊರಿದ್ದಾನೆ. ಶಿವನ ಬಲಭಾಗದಲ್ಲಿರುವ ಕುಬ್ಜಗಣವು ನಂದಿಯ ಬಾಲದೊಂದಿಗೆ ಚೆಲ್ಲಾಟವಾಡುತ್ತಿರುವಂತೆ ಕೆತ್ತಲಾಗಿದ್ದು, ಅಲ್ಲಿಯ ಕಲ್ಪನಾಚಾತುರ್ಯವನ್ನು ಮೆಚ್ಚಲೇಬೇಕು. ಶಿವನ ತಲೆಯ ಹಿಂದೆ ಕಮಲದಳಗಳಿದ್ದು, ಪ್ರಭಾಮಂಡಲವನ್ನು ಹೊಂದಿದೆ. ಶಿವನು ವ್ಯಾಘ್ರ ಚರ್ಮವನ್ನು ಧರಿಸಿದ್ದು ವಿಶೇಷವಾಗಿ ಕಾಣಬಹುದು.

ಶಿಲ್ಪ –೧೧

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಎಡಭಾಗದ ಹೊರಭಿತ್ತಿಯಲ್ಲಿರುವ ಶಿವನ ಶಿಲ್ಪವು ಅಷ್ಟಭುಜಗಳನ್ನು ಹೊಂದಿದ್ದು, ಸಮಭಂಗಿಯಲ್ಲಿದೆ. ಬಲದ ಒಂದು ಕೈ ಕಟ್ಯವಲಂಬಿತವಾಗಿದ್ದು, ಉಳಿದ ಕೈಗಳಲ್ಲಿ ಸರ್ಪ ಮತ್ತು ತ್ರಿಶೂಲವನ್ನು ಹಿಡಿದಿದ್ದಾನೆ. ಒಂದು ಕೈ ಭಗ್ನಗೊಂಡಿದೆ. ಎಡಭಾಗದ ಒಂದು ಕೈಯನ್ನು ಕೆಳಗೆ ಇಳಿಬಿಟ್ಟಿದ್ದು ಉಳಿದ ಕೈಗಳಲ್ಲಿ ಕ್ರಮವಾಗಿ ಡಮರು, ಗಜದಂಡ, ಪರಶುಗಳನ್ನು ಹಿಡಿದಿದ್ದಾನೆ. ಶಿವನು ಅಪಸ್ಮಾರದ ಮೇಲೆ ನಿಂತಿದ್ದಾನೆ. ಜೊತೆಗೆ ಅಪಸ್ಮಾರದ ಮೇಲೆ ಒಂದು ಕುಬ್ಜಗಣವು ನಿಂತಿದೆ, ಕುಬ್ಜಗಣದ ಉದರಭಾಗದಲ್ಲಿ ರಾಕ್ಷಸ ಆಕಾರದ ಮುಖವನ್ನು ಕೆತ್ತಲಾಗಿದೆ. ಬಹುತೇಕ ಹಸಿವೆಯ ಮಹತ್ವವನ್ನು ತೋರಿಸಲು ಶಿಲ್ಪಿಯು ಈ ರೀತಿ ಮಾಡಿರಬಹುದು. ಕೆಳಗಿರುವ ಅಪಸ್ಮಾರನ ಕೈಯಲ್ಲಿ ನಾಗ ಸರ್ಪವಿದೆ. ಶಿರಭಾಗದ ಮೇಲ್ಗಡೆಗೆ ಯೋಗ ಮತ್ತು ತಪಸ್ಸಿನಲ್ಲಿ ತೊಡಗಿರುವ ಋಷಿ–ಮುನಿಗಳನ್ನು ಕಂಡರಿಸಲಾಗಿದೆ.

ಶಿಲ್ಪ –೧೨

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಸಭಾಮಂಟಪದ ಎಡಭಾಗದ ಹೊರಭಿತ್ತಿಯಲ್ಲಿರುವ ಶಿವನು ಚತುರ್ಭುಜನಾಗಿದ್ದು, ತ್ರಿನೇತ್ರನು. ಚೆಂಗಮ್ಮ ಎಂಬ ಶಿಲ್ಪಿಯು ಇದನ್ನು ರೂಪಿಸಿದುದನ್ನು ಶಾಸನವು ದಾಖಲಿಸಿದೆ. ಚೆದುರಿದ ಕೂದಲು ಶಿಲ್ಪದ ಚೆಲುವನ್ನು ಹೆಚ್ಚಿಸಿದೆ. ತ್ರಿಶೂಲ ಮತ್ತು ಧ್ವಜಸ್ತಂಭಗಳನ್ನು ಹಿಡಿದುಕೊಂಡು ಶಿವನು ನರ್ತಿಸುತ್ತಿದ್ದಾನೆ.[೩೮]

೩೮. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೫೩



ಎಡಗಾಲನ್ನು ಅಪಸ್ಮಾರನ ಮೇಲೆ ಇರಿಸಿದ್ದಾನೆ. ಒಟ್ಟಾರೆ ಇದೊಂದು ಸುಂದರವಾದ ದ್ವಿಮಾನದ ಕಲಾಕೃತಿ. ಪ್ರಮಾಣಬದ್ಧವಾದ ದೇಹ ,ಭಾವಪೂರ್ಣ ಮುಖದಿಂದಾಗಿ ಮೂರ್ತಿ ಸಜೀವವಾಗಿದೆ.

ಶಿಲ್ಪ –೧೩

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಎಡಗಡೆಯ ಹೊರಭಿತ್ತಿಯಲ್ಲಿ ಇರುವ ಶಿವನು ಉತ್ತರಾಭಿಮುಖನಾಗಿದ್ದಾನೆ. ನಾಲ್ಕು ಬಾಹುಗಳನ್ನು ಹೊಂದಿದ್ದು, ಬಲದ ಬಾಹುಗಳಲ್ಲಿ ತ್ರಿಶೂಲ ಮತ್ತು ನಾಗವನ್ನು ಹಿಡಿದಿದ್ದಾನೆ. ನಾಗವು ಉದ್ದವಾಗಿದ್ದು, ಪಾದದವರೆಗೆ ಇಳಿಬಿದ್ದಿದೆ. ಎಡಭಾಗದ ಒಂದು ಕೈಯಲ್ಲಿ ಪರಶುವನ್ನು ಹಿಡಿದಿದ್ದು, ಇನ್ನೊಂದು ಕೈ ಕಟ್ಯವಲಂಬಿತವಾಗಿದೆ. ಕರ್ಣಾಭರಣ, ಯಜ್ಞೋಪವೀತ, ಉದರಬಂಧ, ಕೈಕಡಗಗಳನ್ನು ಧರಿಸಿದ್ದಾನೆ. ಸೊಂಟದ ಪಟ್ಟಿಯಲ್ಲಿ ಕೀರ್ತಿ ಮುಖವಿರುವುದು ಹಾಗೂ ದ್ವಿಮಾನದಲ್ಲಿ ರಚಿತವಾಗಿರುವುದು ವಿಶೇಷವಾಗಿದೆ.

ಶಿಲ್ಪ –೧೪

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಎಡಭಾಗದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿದ್ದ ಶಿವನ ಕೈಗಳು ತುಂಡಾಗಿದ್ದು, ಆಯುಧಗಳು ಸರಿಯಾಗಿ ಕಾಣಿಸುವುದಿಲ್ಲ. ಬಲಭಾಗದ ಒಂದು ಕೈ ಕಟ್ಯವಲಂಬಿತವಾಗಿದ್ದು ಹಸ್ತವು ತುಂಡಾಗಿದೆ. ಉದರಬಂಧ, ಯಜ್ಞೋಪವೀತ ಮತ್ತು ಕರ್ಣಾಭರಣಗಳನ್ನು ಧರಿಸಿದ್ದಾನೆ. ದ್ವಿಮಾನದಲ್ಲಿ ಮೂಡಿಬಂದಿರುವ ಈ ಶಿಲ್ಪವು ಕೆಲವು ಕಡೆ ಭಗ್ನವಾಗಿದೆ.

ಶಿಲ್ಪ –೧೫

ಪಟ್ಟದ ಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಬಲಭಾಗದ ಹೊರಭಿತ್ತಿಯ ಮೇಲಿರುವ ಜಟಾಧಾರಿ ಶಿವನು ಚತುರ್ಭುಜನಾಗಿದ್ದಾನೆ. ತಲೆಯ ಮೇಲೆ ಪೇಟದಂತೆ ಇರುವ ಜಟಾಧಾರವು ವಿಶೇಷ ಗಮನ ಸೆಳೆಯುತ್ತದೆ. ಶಿವನ ಕಂಠದಿಂದ ಕಟಿಯವರೆಗೆ ಭಗ್ನಗೊಂಡಿದೆ. ಬಲಭಾಗದ ಹಿಂದಿನ ಕೈಯಲ್ಲಿ ತ್ರಿಶೂಲ ಹಿಡಿದಿದ್ದು, ಒಂದು ಕೈ ತುಂಡಾಗಿದೆ. ಎಡಭಾಗದ ಹಿಂದಿನ ಕೈಯಲ್ಲಿ ಪರಶುವನ್ನು ಹಿಡಿದಿದ್ದಾನೆ. ಇನ್ನೊಂದು ಕೈ ಕಟ್ಯವಲಂಬಿತವಾಗಿದ್ದು ತುಂಡಾಗಿದೆ. ಒಟ್ಟಾರೆ ದ್ವಿಮಾನದಲ್ಲಿ ರಚಿತಗೊಂಡ ಈ ಶಿಲ್ಪ ನೋಡಲು ಆಕರ್ಷಕವಾಗಿ ಮೂಡಿಬಂದಿದೆ.

ಶಿಲ್ಪ –೧೬

ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಬಲಭಾಗದ ಹೊರಭಿತ್ತಿಯಲ್ಲಿ ದಕ್ಷಿಣಾಭಿ ಮುಖನಾಗಿರುವ ಶಿವನು ಚತುರ್ಭುಜನಾಗಿದ್ದು, ಬಲಭಾಗದ ಒಂದು ಕೈಯಲ್ಲಿ ನಾಗನನ್ನು ಹಿಡಿದಿದ್ದು, ಇನ್ನೊಂದು ಕೈಯಲ್ಲಿ ದೊಡ್ಡದಾದ ತ್ರಿಶೂಲವನ್ನು ಹಿಡಿದಿದ್ದಾನೆ. ತ್ರಿಶೂಲ ಮತ್ತು ನಾಗವು ಭಗ್ನವಾಗಿವೆ. ಎಡಭಾಗದ ಒಂದು ಕೈ ನಾಗವನ್ನು ಹಿಡಿದಿದ್ದು, ಇನ್ನೊಂದು ಕೈ

[illegible]


ಶಿವನ ಬಿಡಿ ಶಿಲ್ಪಗಳು



ಶಿಲ್ಪ-೧. ಮಾಲೆಗಿತ್ತಿ ಶಿವಾಲಯ, ಬಾದಾಮಿ



ಶಿಲ್ಪ-೨. ಮಾಲೆಗಿತ್ತಿ ಶಿವಾಲಯ, ಬಾದಾಮಿ



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೪. ವಿರೂಪಾಕ್ಷ ದೇವಾಲಯ, ಮಹಾಕೂಟ

ಶಿವನ ಬಿಡಿ ಶಿಲ್ಪಗಳು



ಶಿಲ್ಪ-೫. ಮಹಾಕೂಟೇಶ್ವರ ದೇವಾಲಯ, ಮಹಾಕೂಟ



ಶಿಲ್ಪ-೬. ಮಹಾಕೂಟೇಶ್ವರ ದೇವಾಲಯ, ಮಹಾಕೂಟ



ಶಿಲ್ಪ-೭. ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಶಿವನ ಬಿಡಿ ಶಿಲ್ಪಗಳು



ಶಿಲ್ಪ-೯. ವಿರುಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೦. ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೧೧. ವಿರುಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೧೨. ವಿರುಪಾಕ್ಷ ದೇವಾಲಯ, ಪಟ್ಟದಕಲ್ಲು

ಶಿವನ ಬಿಡಿ ಶಿಲ್ಪಗಳು




ಶಿಲ್ಪ-೧೩. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೪. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೫. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೬. ಮಲ್ಲಿಕಾರ್ಜುನ ದೇವಾಲಯ, ಮಹಾಕೂಟ

1



ಕಟ್ಯವಲಂಬಿತವಾಗಿದೆ. ಯಜ್ಞೋಪವಿತ, ಕಂಠಹಾರ, ತೋಳಬಂಧ, ಕೈ ಕಡಗಗಳನ್ನು ಧರಿಸಿದ್ದಾನೆ. ಜಟಾಮುಕುಟವಿದೆ. ಪ್ರಭಾಮಂಡಲವನ್ನು ಹೊಂದಿದ್ದು, ಕಿವಿಗಳಲ್ಲಿ ಕರ್ಣಕುಂಡಲ ಮತ್ತು ಮಕರಕುಂಡಲಗಳನ್ನು ಧರಿಸಿದ್ದಾನೆ.

ಲಕುಲೀಶ ಶಿಲ್ಪಗಳು

ಶೈವ ಧರ್ಮವು ಮೊದಲಿನಿಂದಲೂ ಪ್ರಬಲ ಧರ್ಮವಾಗಿರುವುದು ಶಾಸನಗಳಿಂದ ಮತ್ತು ಸಾಹಿತ್ಯ ಕೃತಿಗಳಿಂದ ತಿಳಿದಿರುವ ವಿಚಾರ. ಸಿಂಧೂ ನದಿಯ ಬಯಲಿನ ಸೈಂಧವ ಸಂಸ್ಕೃತಿ, ವೇದಗಳು, ಪುರಾಣಗಳು ಶಿವನನ್ನು ಪರಿಚಯಿಸಿವೆ. ಶಿವಪರವಾದ ಶೈವ ಧರ್ಮದಲ್ಲಿ ವೇದ–ಪುರಾಣಗಳಷ್ಟೇ ಪ್ರಾಚೀನವಾದುದು. ಶೈವ ಧರ್ಮದಲ್ಲಿ ಲಕುಲೀಶ (ಲಕುಳ), ಪಾಶುಪತ, ಕಾಳಾಮುಖ, ಕಾಪಾಲಿಕ ಇತ್ಯಾದಿ ಪಂಥಗಳಿದ್ದವು. ಶಕ್ತಿಪರ್ಷೆ ಮತ್ತು ಸಿಂಹಪರ್ಷೆಗಳೆಂಬ ಎರಡು ಪಂಗಡಗಳಿದ್ದವು. ಇವುಗಳಲ್ಲಿ ಪ್ರತ್ಯೇಕ ಶಾಖೆಗಳಿದ್ದವು. ಅವೇ ಆಮ್ನಾಯ ಅಥವಾ ಆವಳಿಗಳು. ಅವುಗಳಲ್ಲಿ ಮುಖ್ಯವಾದುವು ಪರ್ವತಾವಳಿ ಮತ್ತು ಭುಜಂಗಾವಳಿ. ಇವುಗಳಲ್ಲಿ ಇಟ್ಟಿಗೆಯ ಸಂತತಿ ಮೂವರ ಕೋಣಿಯ ಸಂತತಿ ಇತ್ಯಾದಿ ಉಪಶಾಖೆಗಳಿದ್ದವು.

ಈ ಕಾಳಾಮುಖರು ಕಾಶ್ಮೀರದಿಂದ ಕರ್ನಾಟಕದೇಶಕ್ಕೆ ಬಂದವರು. ಇವರು ಲಗುಡಧಾರಣರು ಅಥವಾ ದಂಡಧಾರಿಗಳು ಎಂದು ಶ್ರೀ ಭಾಷ್ಯದಲ್ಲಿ ಹೇಳಿದೆ. ಇದು ಅವರ ವೈಶಿಷ್ಟ್ಯವಾಗಿದೆ ಎಂದು ಡಾ. ಎಂ.ಎಚ್. ಕೃಷ್ಣಯ್ಯ ಅವರ ಅಭಿಪ್ರಾಯವನ್ನು ಶ್ರೀ ಕಪಟರಾಳ ಕೃಷ್ಣರಾಯರು ವಿಶ್ಲೇಷಿಸುತ್ತಾ, ಎಲ್ಲಾ ಕಾಳಾಮುಖಿಳರು ಬೇರೆ ಬೇರೆ ಸಂತಾನದವರೆಂದು ಅನೇಕ ಗುರುಪರಂಪರೆಯವರ ಪೀಳಿಗೆಗಳನ್ನು ಹೇಳಲಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೩೯]

ಮಹಾಕೂಟ ಪ್ರದೇಶ ಅಂದಿನ ಕಾಲದ ಇನ್ನೊಂದು ಪ್ರಸಿದ್ಧ ಶೈವ ಕೇಂದ್ರವಾಗಿತ್ತು. ಇಲ್ಲಿ ಹಲವಾರು ಶಿಲ್ಪಗಳಿದ್ದು, ಇಲ್ಲಿನ ಶಿಲ್ಪಗಳಲ್ಲಿ ವೈವಿಧ್ಯವಿದೆ. ಮಹಾಕೂಟದ ಪರಿಸರದಲ್ಲಿ ಶಿವನಿಗೆ ಸಂಬಂಧಿಸಿದ ಹಲವಾರು ದೊಡ್ಡ ಸಣ್ಣ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ ಶಿವ, ಹರಿಹರ, ಲಕುಲೀಶ(ಊರ್ಧ್ವರೇತೇಶ್ವರ) ಇತ್ಯಾದಿ ಶಿಲ್ಪಗಳು ಮುಖ್ಯವಾಗುತ್ತವೆ. ಇಲ್ಲಿರುವ ಈ ಶಿಲ್ಪಗಳ ರಚನೆಯಲ್ಲಿ ವೈವಿಧ್ಯವಿದೆ, ವಿಭಿನ್ನ ಶೈಲಿಯಿದೆ. ಕೆಲವು ಶಿಲ್ಪಗಳನ್ನು ಅಲಂಕಾರಿಕವಾಗಿ ಕೆತ್ತಲಾಗಿದ್ದು ಕಲಾತ್ಮಕವಾಗಿ ಸುಂದರವಾಗಿದ್ದರೆ, ಇನ್ನು ಕೆಲವು ತಮ್ಮ ವಿಶಿಷ್ಟವಾದ ಕೆತ್ತನೆ, ದೇಹರಚನೆ, ಆಕಾರ ಮತ್ತು ಮುಖಭಾವನೆಗಳಿಂದಾಗಿ ವಿಭಿನ್ನ ಅನುಭವವನ್ನು ನೀಡುತ್ತವೆ. ಇವುಗಳಲ್ಲಿ ಶಿವನ ಊರ್ಧ್ವರೇತೇಶ್ವರ ಶಿಲ್ಪವೂ ಒಂದು ಅಥವಾ ಲಕುಲೀಶ ಶಿಲ್ಪವೂ ಸುಂದರವಾಗಿರುವ ಕೆತ್ತನೆ.

---

೩೯. ಎಚ್. ಎಸ್. ಗೋಪಾಲರಾವ್ : ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪುಟ – ೧೮೨


ಸ್ವರ್ಣಮಯ ಮೇರು ಪರ್ವತವನ್ನು ದಾನ ಮಾಡುವುದಕ್ಕಿಂತಲೂ ಸಮಸ್ತ ಭೂಮಂಡಲವನ್ನೇ ಕೊಡುವುದಕ್ಕಿಂತಲೂ ರತ್ನಗಳಿಂದ ತುಂಬಿದ ಸಮುದ್ರವನ್ನೇ ದಾನ ಮಾಡುವುದಕ್ಕಿಂತಲೂ ಅಹಿಂಸೆ ಹೆಚ್ಚಿನದು ಎಂದು ತಿಳಿದು ಆಸ್ತಿಕ ಮತವಾದ "ಪಾಶುಪತ ಪಂಥ"ದ ಗುರುವಾಗಿ ಸಂಸಾರದಲ್ಲಿ ಸಿಲುಕಿಕೊಂಡಿರುವ ವೈಯಕ್ತಿಕ ಜೀವಿಗಳೇ ಪಶುಗಳು. ಪ್ರಾಪಂಚಿಕ ಬಂಧನದಿಂದ ಬಿಡುಗಡೆ ಹೊಂದಿ ಮೇಲೆದ್ದವನೇ ಪಶುಪತಿಯಾಗಲು ಸಾಧ್ಯವೆಂದು ಬೋಧಿಸುತ್ತ, ಅಗಣಿತ ಶಿಷ್ಯರೊಂದಿಗೆ ಇದ್ದ ಶೈವಯತಿ 'ಲಕುಲೀಶ'ನ ಕೇಂದ್ರಸ್ಥಾನ ಮಹಾಕೂಟವಾಗಿತ್ತು.[೪೦]

ಶಿಲ್ಪ –೧

ಮಹಾಕೂಟ ಸಂಗಮೇಶ್ವರ ಗುಡಿಯ ಹೊರಭಿತ್ತಿಯಲ್ಲಿರುವ ಲಕುಲೀಶ ಶಿಲ್ಪವು ಊರ್ಧ್ವರೇತೇಶ್ವರ ಎಂದೇ ಇಲ್ಲಿ ಪ್ರಸಿದ್ಧವಾಗಿರುವ ಶಿಲ್ಪ. ಇಲ್ಲಿನ ಶಿಲ್ಪದ ಮೇಲು ಭಾಗದಲ್ಲಿ ಊರ್ಧ್ವರೇತೇಶ್ವರ ಎಂದು ಬರೆಯಲಾಗಿದೆ. ಆದರೆ ಇದು ಲಕುಲೀಶ ಶಿಲ್ಪವೆಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. 'ಮಹಾಕೂಟದ ನಂದಿಮಂಟಪದ ಬಲಕ್ಕಿರುವ ವಿರೂಪಾಕ್ಷ ದೇವಾಲಯದ ದಕ್ಷಿಣ ಭಿತ್ತಿಯಲ್ಲಿ ಅಪಸ್ಮಾರನ ಮೇಲೆ ಲಕುಲೀಶನು ನಿಂತಿರುವಂತೆ ಶಿಲ್ಪಿತನಾಗಿದ್ದಾನೆ.' ಮೊದಲಿನ ಲಕುಲೀಶಕ್ಕಿಂತ ಭಿನ್ನವಾಗಿ ವೈರಾಗ್ಯಮೂರ್ತಿಯಂತೆ ಕಂಡುಬರುವ ಈ ಶಿಲ್ಪದಲ್ಲಿ ಶಿವನು ಬಲಗೈಯಲ್ಲಿ ವರದ ಹಸ್ತ, ಎಡಗೈಯಲ್ಲಿ ಪಾಶವನ್ನು ಹಿಡಿದು ಅಪಸ್ಮಾರನ ಮೇಲೆ ಸಮಭಂಗಿಯಲ್ಲಿ ನಿಂತಿದ್ದಾನೆ. ಶಿವನ ಬಲಭಾಗದಲ್ಲಿ ಶಿವನ ಭುಜಮಟ್ಟಕ್ಕೆ ಹಾವೊಂದು ಹೆಡೆ ಬಿಚ್ಚಿಕೊಂಡು ನಿಂತಿದೆ. ಶಿವನ ಎಡಭಾಗದಲ್ಲಿ ಶಿವನ ಆಯುಧವಾಗಿರುವ ಪರಶುವಿದೆ. ಶಿವನ ಸೊಂಟಪಟ್ಟಿಯು ಒಂದೇ ಸುತ್ತಿನದಾಗಿದ್ದು ಅದರ ಎರಡೂ ತುದಿಯು ಎರಡೂ ಪಕ್ಕಗಳಲ್ಲಿ ನೇತಾಡುತ್ತಿದೆ. ಇಲ್ಲಿನ ಇನ್ನೊಂದು ವಿಶೇಷತೆಯೆಂದರೆ ಶಿವನ ಶಿಶ್ನವು (ಲಿಂಗ) ಆಕಾಶದ ಕಡೆಗೆ ಮುಖ ಮಾಡಿದೆ. ಅಂದರೆ ಶಿವನ ರೇತವು ಊರ್ಧ್ವಮುಖವಾಗಿರುವುದರಿಂದ ಇದನ್ನು ಊರ್ಧ್ವರೇತೇಶ್ವರ ಎಂದು ಕರೆಯಲಾಗಿದೆ.

ಲೌಕಿಕ ವ್ಯವಹಾರವೆ ಶಾಶ್ವತವೆಂದು ನಂಬಿರುವುದೇ ಅಜ್ಞಾನ: ಈ ವಿಷಯಾದಿಗಳೆಂಬ ಅಜ್ಞಾನವನ್ನು ಮೂರ್ತಗೊಳಿಸಿ ಅವನನ್ನೇ ಅಪಸ್ಮಾರನನ್ನಾಗಿಸಿ ಯೋಗಿಯ ಪಾದದ ಕೆಳಗೆ ಶಿಲ್ಪಿ ಕಟೆದಿದ್ದಾನೆ. ಅವನ ಮೇಲೆ ನಿಂತ ಯೋಗಿ ತನ್ನಲ್ಲಿರುವ ಆತ್ಮರೂಪ ಶಕ್ತಿಯನ್ನು ಸರ್ಪದಂತೆ ಚಿತ್ರಿಸಿ ಅದನ್ನು ನಿದ್ರೆಯಿಂದ ಎಚ್ಚರಗೊಳಿಸುವುದೆ. 'ಕುಂಡಲಿನಿಯೋಗ'ವೆಂಬುದನ್ನು ಈ ಮೂರ್ತಿಯಲ್ಲಿ ತೋರಿಸಿದ್ದಾನೆ. ಮೂಲಾಧಾರ ಚಿತ್ರದಲ್ಲಿರುವ ಸ್ವಯಂಭೂ ಲಿಂಗವನ್ನು ಕುಂಡಲದಂತೆ ಸುತ್ತಿಕೊಂಡ ಕಾರಣ ಇದು ಕುಂಡಲಿನಿಯಾಯಿತು. ಮಲಗಿರುವ ಈ ಹಾವಿಗೆ

೪೦. ಎನ್. ಶಿವಾನಂದ ಸಾತಿಹಾಳ : ಬಾದಾಮಿ ಪರಿಸರದ ಮಹಾಕೂಟ – ಒಂದು ಅಧ್ಯಯನ, (ಬಿ.ವಿ.ಎ ಕಿ.ಯೋ.ವ), ಪುಟ – ೧೬



ಭುಜಂಗಿಯೆಂದು ಹೆಸರಿದೆ. ಯೋಗವಿಧಿಯಿಂದ ಅದನ್ನು ಎಚ್ಚರಿಸಿದಾಗ ಅದು ಶಕ್ತಿಯಾಗಿ ಎಂಟೂ ಚಕ್ರಗಳನ್ನು ಭೇದಿಸಿಕೊಂಡು ಸಹಸ್ರಾರ ಚಕ್ರದಲ್ಲಿರುವ ದಶದಲ ಕಮಲವನ್ನು ಮುಟ್ಟಿ ಅಲ್ಲಿ ಶಿವ ಸಂವಿತ್ ಸ್ವರೂಪದ ಶಿವನೊಂದಿಗೆ ಬೆರೆಯುತ್ತದೆ. ಇದೇ ಮಿಥುನಯೋಗ. ಮಹಾಕೂಟ ಸರ್ಪವಿದೆ. ಅಥವಾ ದಿವ್ಯಜ್ಞಾನ, ಸರ್ಪಜ್ವಾಲೆಯೆಂದು ಕರೆಯುವುದುಂಟು. ಅಂದರೆ ರೇತಸ್ಸನ್ನು ಅಧೋಮುಖೀಕರಣಗೊಳಿಸದೇ ಆಧಾರ ಚಕ್ರದಿಂದ ಊರ್ಧ್ವಗೊಳಿಸುವುದೇ ಕುಂಡಲಿನಿಯೋಗ. ಒಟ್ಟಾರೆ ಈ ಮೂರ್ತಿ ಪ್ರಜೋತ್ಪತ್ತಿ ವೃಕ್ಷಕ್ಕೆ ಕೊಡಲಿ ಪ್ರಾಯವೆಂಬಂತೆ ಕೊಡಲಿ ಹಿಡಿದು ನಿಂತಿದೆ. ಈ ಮೂರ್ತಿಯನ್ನು ಊರ್ಧ್ವರೇತೇಶ್ವರ ಎಂದು ಹೆಸರಿಸಿರುವುದು ಅರ್ಥಪೂರ್ಣವಾಗಿದೆ.[೪೧]

ಸುಂದರ ಮುಖದೊಂದಿಗೆ ಅಕ್ಷಮಾಲೆ, ಯಜ್ಞೋಪವೀತ, ವ್ಯಾಘ್ರಚರ್ಮ ಧರಿಸಿ ಸಮಸ್ಥಾನಕ ಭಂಗಿಯಲ್ಲಿ ಅಪಸ್ಮಾರುಪುರುಷನ ಮೇಲೆ ಊರ್ಧ್ವಲಿಂಗಿಯಾಗಿ ನಿಂತಿರುವ ಶಿವನು ಜಟಾಮುಕುಟನಾಗಿದ್ದಾನೆ.[೪೨] ಬುದ್ಧನ ತಲೆಯ ಕೂದಲಿನ ರೀತಿಯಲ್ಲಿನಂತೆ ಶಿವನ ಜಟೆಯನ್ನು ಮೇಲ್ಮುಖವಾಗಿ ಕಟ್ಟಲಾಗಿದ್ದು ಹಿಂಭಾಗದಲ್ಲಿ ಕೂದಲನ್ನು ಇಳಿಬಿಡಲಾಗಿದೆ. ಶಿವನ ಭುಜಗಳು ಅಗಲವಾಗಿದ್ದು ಶಿವನ ಕುತ್ತಿಗೆಯಲ್ಲಿ ಒಂದೆಳೆಯ ಕಂಠಹಾರವಿದೆ. ಶಿಲ್ಪವು ಸರಳವಾಗಿದ್ದು ಸುಂದರವಾಗಿದೆ. ಈ ಶಿಲ್ಪದ ಇನ್ನೊಂದು ವಿಶೇಷತೆಯೆಂದರೆ ಎಲ್ಲ ದೃಷ್ಟಿಯಿಂದಲೂ ಈ ಶಿಲ್ಪವು ವೈರಾಗ್ಯ ಮೂರ್ತಿಯಂತೆ ಕಂಡುಬರುವುದು ಮಾತ್ರವಲ್ಲದೆ ಅಂದಿನ ಕಾಲದ ಜೈನ ಮತ್ತು ಬೌದ್ಧ ಶಿಲ್ಪಗಳ ಸಾಮ್ಯವನ್ನು ಹೊಂದಿರುವುದನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಗಮನಿಸಬಹುದಾದ ಇನ್ನೊಂದು ವಿಶೇಷತೆಯೆಂದರೆ ಅಪಸ್ಮಾರನನ್ನು ಕೆತ್ತಿದ ರೀತಿ. ಬೆನ್ನು ಮೇಲಾಗಿ ಮಲಗಿರುವ ಅಪಸ್ಮಾರನು ಗಣಶಿಲ್ಪದ ರೀತಿಯಲ್ಲಿದ್ದು ಶಿವನು ಆತನ ಮೇಲೆ ಸಮಭಂಗಿಯಲ್ಲಿ ನಿಂತಿದ್ದರೂ ಅಪಸ್ಮಾರನ ಶಿಲ್ಪದಲ್ಲಿಯೂ ಅಲಂಕಾರಿಕ ಕೆತ್ತನೆಯನ್ನು ಶಿಲ್ಪಿಯು ಕಡೆಗಣಿಸಿಲ್ಲ.

ಈ ಶಿಲ್ಪದ ಕೆತ್ತನೆಯು ಸುಂದರವಾಗಿದೆ. ಆದರೆ ಶಿವನ ಮುಖದಲ್ಲಿ ಕಂಡುಬರುವ ನಸುನಗು ಆಕರ್ಷಕವಾಗಿದೆ. ಶಿವನ ಲಕುಲೀಶ ಶಿಲ್ಪಗಳು ಅಂದಿನ ಕಾಲದ ರಚನೆಗಳಲ್ಲಿ ಬಹಳ ಕಡೆ ಕಂಡುಬಂದಿದ್ದರೂ ಈ ರೀತಿಯ ರಚನೆಗಳು ಅಪರೂಪದವು. ಈ ಕುರಿತು ಹಲವಾರು ವಿದ್ವಾಂಸರು ಸಂಶೋಧನೆ ನಡೆಸಿದ್ದಾರೆ. ಇವರಲ್ಲಿ ಪ್ರಮುಖವಾಗಿ ಕಂಡುಬರುವುದು ಡಾ. ಶೀಲಾಕಾಂತ ಪತ್ತಾರ, ಡಾ.ಎಂ.ಎಂ.ಕಲ್ಬುರ್ಗಿ, ಡಾ.ಚಿದಾನಂದಮೂರ್ತಿ, ಆರ್.ಎಸ್.ಪಂಚಮುಖಿ, ಡಾ. ಎಂ. ಎನ್. ಕಡಪಟ್ಟಿ ಮುಂತಾದವರು ಇವರಲ್ಲದೆ ಹಿರಿಯ ಸಂಶೋಧಕರು ಸಾಕಷ್ಟು ಜನ ಈ ಶಿಲ್ಪದ ಕುರಿತು ಚರ್ಚಿಸಿದ್ದಾರೆ. ಲಕುಲೀಶ ಶಿಲ್ಪದ

೪೧. ಎನ್. ಶಿವಾನಂದ ಸಾತಿಹಾಳ : ಬಾದಾಮಿ ಪರಿಸರದ ಮಹಾಕೂಟ: ಒಂದು ಅಧ್ಯಯನ, (ಬಿ.ವಿ.ಎ ಕಿ.ಯೋ.ವ), ಪುಟ – ೧೭

೪೨. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೮೩

[illegible]



ಕುರಿತಾಗಲೀ ಅಥವಾ ಲಕುಲೀಶ ಎಂಬ ಶಿವನ ಇನ್ನೊಂದು ರೂಪ(ಅವತಾರ)ದ ಕುರಿತಾಗಲೀ ನಮಗೆ ಮೊದಲ ಮಾಹಿತಿ ದೊರಕುವುದು ಕ್ರಿ.ಶ.ದ ಆದಿಭಾಗದಲ್ಲಿಯೇ. ಲಕುಲೀಶನ ಕಾಲದ ಬಗ್ಗೆ ನಿಖರ ಮಾಹಿತಿಯಿಲ್ಲ. ಬಹುಶಃ ಕ್ರಿ.ಶ. ೧ನೇ ಶತಮಾನವಾಗಿರಬಹುದೆಂದು ಅಭಿಪ್ರಾಯವಿದೆ.

ಈ ಕುರಿತು ಗುಪ್ತರ ಕಾಲದ ಮಥುರಾಶಾಸನ ಅತ್ಯಂತ ಮಹತ್ವದ್ದಾಗಿದೆ. ೨ನೇ ಚಂದ್ರಗುಪ್ತನ ಮಥುರಾಶಾಸನವು (ಗುಪ್ತವರ್ಷ ೬೧: ಕ್ರಿ.ಶ.೩೮೦) ಲಕುಲೀಶನ ಶಿಷ್ಯನ ಕುರಿತು ನೇರವಾಗಿ ಪ್ರಸ್ತಾಪಿಸುತ್ತದೆ'[೪೩] ಎಂದು ಲಕುಲೀಶ ಶಿಲ್ಪದ ಕುರಿತು ಹೆಚ್ಚಿನ ಅಧ್ಯಯನ ನಡೆಸಿದ ಸಂಶೋಧಕರಾದ ಡಾ. ಎಂ.ಎನ್. ಕಡಪಟ್ಟಿಯವರು ಹೇಳುತ್ತಾರೆ. ಇಲ್ಲಿ ಲಕುಲೀಶನ ಕುರಿತು ನೇರ ಪ್ರಸ್ತಾಪ ಇಲ್ಲದಿದ್ದರೂ ಲಕುಲೀಶನ ನೇರ ಶಿಷ್ಯನಾದ ಕುಶಿಕನ ಕುರಿತು ಹೇಳುತ್ತದೆ. 'ಉದಯಪುರದ ಸಮೀಪದಲ್ಲಿರುವ ಏಕಲಿಂಗಜಿಯ ಶಾಸನವು (ಕ್ರಿ.ಶ.೯೭೧) ಲಕುಳವನ್ನು ಕೈಯಲ್ಲಿ ಹಿಡಿದಿರುವ ವ್ಯಕ್ತಿಯೊಬ್ಬ ಭೃಗುಕಚ್ಛದಲ್ಲಿ ಅವತಾರಮಾಡಿದನೆಂದೂ ಅವನಿಗೆ ಕುಶಿಕ, ಮಿತ್ರ, ಗರ್ಗ ಮತ್ತು ಕೌರುಷ್ಯರೆಂಬ ಶಿಷ್ಯರೆಂದೂ ಇವರು ಪಾಶುಪತ ಯೋಗವನ್ನು ಪ್ರಚಾರ ಮಾಡಿದರೆಂದೂ ಹೇಳುತ್ತದೆ.' ಲಕುಲೀಶನ ಶಿಲ್ಪರಚನೆಯ ಕುರಿತು 'ವಿಶ್ವಕರ್ಮ ವಾಸ್ತುಶಾಸ್ತ್ರಂ' ಎಂಬ ಕೃತಿಯಲ್ಲಿ ಪ್ರತಿಮಾ ಶಾಸ್ತ್ರವು ಹೀಗೆ ಹೇಳುತ್ತದೆ: "ಲಕುಲೀಶನು ಊರ್ಧ್ವಮೇಢ್ರನಾಗಿ ಕಮಲದ ಮೇಲೆ ಕುಳಿತಿರುತ್ತಾನೆ. ಅಥವಾ ಪದ್ಮಾಸನದಲ್ಲಿ ಕುಳಿತಿರುತ್ತಾನೆ. ಬಲಗೈಯಲ್ಲಿ ಮಾತೃಲಿಂಗ ಹಿಡಿದು ಎಡಕೈಯಲ್ಲಿ ಲಕುಶ ಹಿಡಿದಿರುತ್ತಾನೆ."[೪೪] ಆದರೆ ಎಲ್ಲ ಲಕುಲೀಶ ಶಿಲ್ಪಗಳು ಹೀಗಿಲ್ಲ. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಹೆಚ್ಚಾಗಿ ನಿಂತಿರುವ ಲಕುಲೀಶ ಶಿಲ್ಪಗಳು ತ್ರಿಮಾನದ ಭಾವನೆಯಲ್ಲಿ ಕಂಡುಬರುತ್ತವೆ.

ಶಿಲ್ಪ –೨

ಮೊದಮೊದಲಿನ ಶಿಲ್ಪಗಳಲ್ಲಿ ಲಕುಲೀಶನ ಕುಳಿತ ಶಿಲ್ಪಗಳು ಕಂಡುಬಂದಿವೆ. ಬಾದಾಮಿಯ ಎರಡನೇ ಗುಹಾಂತರ ದೇವಾಲಯದ ಸಭಾಮಂಟಪದಲ್ಲಿರುವ ಎಡ ಮೊದಲನೆ ಭಾಗದ ಕಂಬದ ಪಶ್ಚಿಮ ಮುಖದಲ್ಲಿ ಲಕುಲೀಶನನ್ನು ಚತುರ್ಭುಜನಾಗಿ ನಗ್ನವಾಗಿ ಊರ್ಧ್ವಮೇಢ್ರನಾಗಿ ಕುಳಿತಂತೆ ಕೆತ್ತಲಾಗಿದೆ. 'ಬಲಕೈಯಲ್ಲಿ ದಂಡ, ಪರಶು, ಹಾಗೂ ಎಡಕೈಗಳಲ್ಲಿ ಅಕ್ಷಮಾಲಾ, ವ್ಯಾಖ್ಯಾನ ಮುದ್ರೆ ಇವೆ. ಯಜ್ಞೋಪವೀತ, ಜಟಾ ಮುಕುಟ ಇವೆ. ಅಕ್ಕಪಕ್ಕದಲ್ಲಿ ನಾಲ್ಕು ಜನ ಶಿಷ್ಯರಿದ್ದಾರೆ. ಒಬ್ಬ ಶಿಷ್ಯ ಪಾಠ ಓದುತ್ತಿದ್ದಾನೆ. ಈ ಶಿಲ್ಪವನ್ನು ಬಾದಾಮಿ ಚಾಲುಕ್ಯರ ಕಾಲದ ಹಾಗೂ ಕರ್ನಾಟಕದ ಅತಿ ಪ್ರಾಚೀನ ಲಕುಲೀಶ ಶಿಲ್ಪವೆಂದು ಸದ್ಯ ಪರಿಗಣಿಸಬಹುದು.'[೪೫]

೪೩. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ– ೧೮೭

೪೪. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೧೮೮

೪೫. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ– ೧೮೮–೧೮೯

ದಕ್ಷಿಣ ಭಾರತದಲ್ಲಿ ಬಾದಾಮಿ ಪರಿಸರದಲ್ಲಿ ಲಕುಲೀಶ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. 'ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ವಿರಳವಾಗಿ ಕಾಣಿಸುವ ಲಕುಲೀಶ ಶಿಲ್ಪಗಳು ಬಾದಾಮಿ ಪರಿಸರದಲ್ಲಿ ಗಣನೀಯ ಸಂಖ್ಯೆಯಲ್ಲಿ ದೊರೆಯುತ್ತವೆ. ಲಕುಲೀಶನು ಮಾನವ ರೂಪದಲ್ಲಿ ಜನಿಸಿದವ. ಆದ್ದರಿಂದ ಆತನು ಎರಡು ಕೈಗಳೊಂದಿಗೆ ಚಿತ್ರಿತನಾಗಿರುವುದೇ ಹೆಚ್ಚು. ಬಾದಾಮಿಯ ಎರಡನೆಯ ವೈಷ್ಣವ ಗುಹಾಲಯದ ಆರನೆಯ ಕಂಬದ ಮೇಲಿನ ಲಕುಲೀಶನು ಮಾತ್ರ ಚತುರ್ಭುಜನಾಗಿ, ನಗ್ನವಾಗಿ ಊರ್ಧ್ವಮೇಢ್ರನಾಗಿ ಕುಳಿತುಕೊಂಡಿದ್ದಾನೆ. ಬಲಗೈಯಲ್ಲಿ ದಂಡ, ಪರಶು ಹಾಗೂ ಎಡಗೈಯಲ್ಲಿ ಅಕ್ಷಮಾಲಾ, ವಾಖ್ಯಾನ ಮುದ್ರೆ ಇದೆ. ಯಜ್ಞೋಪವೀತ, ಜಟಾಮುಕುಟವಿದ್ದು ಅಕ್ಕಪಕ್ಕಗಳಲ್ಲಿ ನಾಲ್ಕು ಜನ ಶಿಷ್ಯರಿದ್ದಾರೆ. ಈ ಶಿಲ್ಪವನ್ನು ಚಾಲುಕ್ಯರ ಕಾಲದ ಪ್ರಾಚೀನ ಶಿಲ್ಪವೆಂದು ಹೇಳಬಹುದು.[೪೬] ಎಲ್ಲ ಲಕುಲೀಶನ ಶಿಲ್ಪಗಳನ್ನು ಗಮನಿಸಿದರೆ ಇದು ಒಂದು ಮಾತ್ರ ಗಾತ್ರದಲ್ಲಿ ಚಿಕ್ಕದಾಗಿದ್ದು, ಈ ಶಿಲ್ಪವು ಉಬ್ಬುಶಿಲ್ಪವಾಗಿದೆ.

ಶಿಲ್ಪ –೩

ಮಹಾಕೂಟದ ನಂದಿಮಂಟಪದ ಬಲಗಡೆಯಿರುವ ಚಿಕ್ಕ ದೇವಾಲಯದ ದಕ್ಷಿಣ ಗೋಡೆಯಲ್ಲಿ ಸಮಸ್ಥಾನಕದಲ್ಲಿ ಲಕುಲೀಶ ಶಿಲ್ಪವಿದೆ. ಈ ಶಿಲ್ಪದ ವಿಶೇಷತೆಯೆಂದರೆ ಇಲ್ಲಿ ಲಕುಲೀಶನ ಕೆಳಭಾಗದಲ್ಲಿ ಅಪಸ್ಮಾರನಿಲ್ಲ. ಶಿವನು ಇಲ್ಲಿ ದ್ವಿಭುಜನಾಗಿದ್ದಾನೆ. ಬಲಗೈಯಲ್ಲಿ ದಪ್ಪನಾಗಿರುವ ದಂಡವಿದೆ. ಎಡಗೈ ಸೊಂಟದ ಮೇಲಿರಿಸಿಕೊಂಡಿದ್ದಾನೆ.[೪೭] ತಲೆಗೂದಲು ದಪ್ಪನಾಗಿ ಎರಡೂಬದಿಯಲ್ಲಿ ಭುಜದ ಮೇಲೆ ಇಳಿಬಿದ್ದಿದೆ. ಇಲ್ಲಿ ಶಿವನು ತರುಣನಾಗಿ ಕಂಡುಬರುತ್ತಾನೆ. ಸೊಂಟಕ್ಕೆ ಹುಲಿಯ ಚರ್ಮವನ್ನು ಸುತ್ತಿಕೊಂಡಿದ್ದಾನೆ. ತೆಳ್ಳನಾಗಿರುವ ಯಜ್ಞೋಪವೀತವಿದೆ. ಶಿವನ ಕುತ್ತಿಗೆಯಲ್ಲಿ ದಪ್ಪನಾಗಿರುವ ಹಾರವಿದೆ. ಸೊಂಟದಲ್ಲಿ ಹಾವಿನ ರೀತಿಯಲ್ಲಿ ಮೇಖಲೆಯಿದೆ. ಕಾಲಿನಲ್ಲಿ ಕಡಗವಿಲ್ಲದಿದ್ದರೂ ಬಲಗಾಲಿನಲ್ಲಿ ಕಡಗದ ರೀತಿಯಲ್ಲಿ ಕೆತ್ತನೆಯಿದೆ. ಮುಂಗೈಯಲ್ಲಿ ಬಳೆಯಿದ್ದು ದಪ್ಪನಾಗಿದೆ. ಈ ಶಿಲ್ಪವನ್ನು ಮೊದಲು ನೋಡಿದ ಲಕುಲೀಶ ಶಿಲ್ಪಕ್ಕೆ ಹೋಲಿಸಿದರೆ ಕೆತ್ತನೆಯಲ್ಲಿ ಕೊರತೆ ಕಂಡುಬರುತ್ತದೆ. ಇದು ಶಿಲ್ಪವನ್ನು ರಚಿಸುವ ಮೊದಲನೆಯ ಹಂತವಿರಬಹುದು. ತೋಳು ಮತ್ತು ತೊಡೆಗಳು ದಪ್ಪನಾಗಿದ್ದು ಕುಬ್ಜಾಕಾರದಲ್ಲಿ, ದ್ವಿಮಾನದಲ್ಲಿ ರಚಿಸಿರುವುದು ಕಂಡುಬರುತ್ತದೆ. ಶಿಲ್ಪವು ಕಲಾತ್ಮಕವಾಗಿ ಆಕರ್ಷಕವಾಗಿ ಕಂಡುಬರದಿದ್ದರೂ ಶಿಲ್ಪದ ಒಟ್ಟು ದೃಷ್ಟಿಕೋನದಲ್ಲಿ ಅಧ್ಯಯನಕ್ಕೆ ಯೋಗ್ಯವಾಗಿದೆ.

ಶಿಲ್ಪ –೪

'ಮಹಾಕೂಟೇಶ್ವರ ದೇವಾಲಯದ ನಂದಿಮಂಟಪದ ಉತ್ತರಕ್ಕಿರುವ ಜೀರ್ಣಗೊಂಡ

---

೪೬. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ ೧೯, ಪುಟ– ೧೩೦

೪೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಚಾಲುಕ್ಯ ಸಂಪದ, ಪುಟ – ೧೮೯

ದೇಗುಲದ ದಕ್ಷಿಣ ಗೋಡೆಯ ಮೇಲೆ ಕೆತ್ತಲಾದ ಲಕುಲೀಶನ ಶಿಲ್ಪವು ಮೊದಲನೆಯ ಹಂತದಲ್ಲಿ ನಿರ್ಮಾಣವಾಗಿರಬಹುದು. ಈತನು ಸಮಭಂಗಿಯಲ್ಲಿ ನಿಂತಿದ್ದಾನೆ. ಬಲಗೈ ವರದ ಹಸ್ತ, ಎಡಗೈಯಲ್ಲಿ ಪರಶುವಿದೆ. ಮಹಾಕೂಟದ ಉಳಿದ ಮೂರು ಶಿಲ್ಪಗಳಲ್ಲಿ ಲಕುಲೀಶನು ಅಪಸ್ಮಾರನ ಮೇಲೆ ನಿಂತಂತೆ, ಮತ್ತು ಲಗುಡದ ಬದಲು ಪರಶು ಹಿಡಿದಂತೆ ಕೆತ್ತನೆಗೊಂಡಿದ್ದಾನೆ. ಅಜ್ಞಾನದ ಕುರುಹಾದ ಅಪಸ್ಮಾರನ ಮೇಲೆ ಲಕುಲೀಶ ನಿಂತಿರುವ ಕಲ್ಪನೆ ದಕ್ಷಿಣ ಭಾರತದಲ್ಲಿ ಕಾಣಿಸಿಕೊಂಡ ಎಂಟನೆಯ ಶತಮಾನದ ಪ್ರತಿಮಾ ಲಕ್ಷಣವೆನ್ನಬಹುದು.' ಬಾದಾಮಿ ಚಾಲುಕ್ಯರ ಸುಂದರ ಲಕುಲೀಶ ಶಿಲ್ಪಗಳಲ್ಲಿ ಕೆಲವು ಮಹಾಕೂಟದಲ್ಲಿ ರಚನೆಯಾಗಿರುವುದು ಇಲ್ಲಿ ಗಮನಾರ್ಹವಾಗಿದೆ. ಅವುಗಳಲ್ಲಿ ಒಂದು ಈ ಮೊದಲೇ ಚರ್ಚಿಸಲಾಗಿರುವ ಸಂಗಮೇಶ್ವರ ಗುಡಿಯಲ್ಲಿನ ಶಿಲ್ಪದ ಮಾದರಿಯನ್ನೇ ಹೋಲುತ್ತದೆ. ಪ್ರಸ್ತುತ ಈ ಶಿಲ್ಪವನ್ನು ದ್ವಿಮಾನದಲ್ಲಿ ಹೆಚ್ಚು ಆಳವಿಲ್ಲದೆ ರಚಿಸಲಾಗಿದೆ.

ಶಿಲ್ಪ –೫

ಪಿನಾಕಪಾಣಿ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಹೊರಭಿತ್ತಿಯಲ್ಲಿ ದಕ್ಷಿಣಾಭಿಮುಖವಾಗಿ ಲಕುಲೀಶನು ಸಮಭಂಗಿಯಲ್ಲಿ ಅಪಸ್ಮಾರನ ಮೇಲೆ ನಿಂತಿದ್ದಾನೆ. ಅಪಸ್ಮಾರನ ಶಿಲ್ಪವು ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗಿದೆ. ಲಕುಲೀಶನು ಬಲಗೈಯಲ್ಲಿ ವರದಹಸ್ತ, ಎಡಗೈಯಲ್ಲಿ ಪರಶುವನ್ನು ಹಿಡಿದಿದ್ದಾನೆ. ಲಕುಲೀಶನ ರುಂಡವು ತುಂಡಾಗಿರುವುದನ್ನು ಹಾಗೂ ಇದನ್ನು ದ್ವಿಮಾನದಲ್ಲಿ ರಚಿಸಿರುವುದನ್ನು ಕಾಣಬಹುದು. ಈ ಶಿಲ್ಪವು ಹಿಂದೆ ನೋಡಿದ ಸಂಗಮೇಶ್ವರ ದೇವಾಲಯದ ಶಿಲ್ಪವನ್ನು ಹೋಲುತ್ತದೆ.

ಶಿಲ್ಪ –೬

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ದಕ್ಷಿಣ ಗೋಡೆಯಲ್ಲಿ ಲಕುಲೀಶನ ಶಿಲ್ಪವಿದೆ. ಈ ಶಿಲ್ಪವೂ ಸಮಭಂಗಿಯಲ್ಲಿ ನಿಂತಿರುವ ಶಿಲ್ಪವಾಗಿದೆ. ಶಿವನ ಬಲಗೈಯಲ್ಲಿ ದಂಡವಿದೆ. ಎಡಗೈಯು ಸೊಂಟದ ಭಾಗದಲ್ಲಿದೆ, ಅಂದರೆ ಕಟ್ಯವಲಂಬಿತ ಶಿಲ್ಪವಾಗಿದೆ. ಈ ಶಿಲ್ಪದಲ್ಲಿ ಇನ್ನೊಂದು ವಿಶೇಷ ಅಂಶವೆಂದರೆ ಉಳಿದ ಶಿಲ್ಪಗಳಲ್ಲಿ ಶಿವನು ಕೈಯಲ್ಲಿ ಒಂದು ಸುತ್ತಿನ ಬಳೆ ಮಾತ್ರ ಧರಿಸಿದ್ದರೆ ಇಲ್ಲಿ ಮೂರು ಬಳೆಗಳಿವೆ. ಮುತ್ತಿನಿಂದ ಪೋಣಿಸಲಾದ ಯಜ್ಞೋಪವೀತ ಧರಿಸಿದ್ದಾನೆ, ಉದರಬಂಧವಿದೆ. ಊರ್ಧ್ವಮೇಢ್ರನಾಗಿದ್ದಾನೆ. ಸೊಂಟದಲ್ಲಿ ಮೇಖಲೆಯ ಬದಲು ಉಡಿದಾರದಂತೆ ಒಂದು ಸುತ್ತಿನ ಪಟ್ಟಿಯನ್ನು ಧರಿಸಿದ್ದು ವ್ಯಾಘ್ರಚರ್ಮದ ಬದಲಾಗಿ ಬಟ್ಟೆ ಧರಿಸಿದ್ದಾನೆ. ತಲೆಯಲ್ಲಿ ಮುನಿ ಕುಮಾರರು ಹೊಂದಿರುವಂತಹ ಜಟಾಮುಕುಟವಿದೆ. ಅಪಸ್ಮಾರನ ಮೇಲೆ ನಿಂತಿರುವ ಈ ಶಿಲ್ಪದಲ್ಲಿ ಅಪಸ್ಮಾರನು ಪಾರ್ಶ್ವಕ್ಕೆ ತಿರುಗಿಕೊಂಡಿದ್ದು ಮುಖವು ನೋಡುಗರೆಡೆಗೆ ತಿರುಗಿರುವುದು ಗಮನಾರ್ಹ. ಶಿಲ್ಪದ ಮುಖವು ಭಗ್ನವಾಗಿರುವುದರಿಂದ



ಶಿವನ ಮುಖಭಾವ ತಿಳಿಯುವುದಿಲ್ಲ. ಬಲಗೈಯಲ್ಲಿ ಹಿಡಿದಿರುವ ದಂಡವು(ಲಗುಡ) ಸಾಕಷ್ಟು ದೊಡ್ಡದಾಗಿದೆ. ಇದು ಕೂಡ ದ್ವಿಮಾನದಲ್ಲಿ ರಚಿತವಾದರೂ ಉಳಿದಂತೆ ಇತರ ಲಕುಲೀಶ ಶಿಲ್ಪಗಳನ್ನೇ ಹೋಲುತ್ತದೆ.

ಶಿಲ್ಪ –೭

'ಪಟ್ಟದಕಲ್ಲಿನ ಕಾಡಸಿದ್ಧೇಶ್ವರ ದೇವಾಲಯದ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನಕದಲ್ಲಿ ನಿಂತಿರುವ ಲಕುಲೀಶ ಶಿಲ್ಪವು ಅಸ್ಪಷ್ಟವಾಗಿದ್ದು, ಕೆಲವು ಭಾಗಗಳು ಭಗ್ನವಾಗಿವೆ. ಇನ್ನುಳಿದ ಭಾಗಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಲಕುಲೀಶ ಶಿಲ್ಪ ಎಂದು ಊಹಿಸಬಹುದು.

ಶಿಲ್ಪ –೮

ಪಟ್ಟದಕಲ್ಲಿನ ಜಂಬುಲಿಂಗ ದೇವಾಲಯದ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಭಂಗಿಯಲ್ಲಿರುವ ಲಕುಲೀಶನ ಬಲಗೈ ಬಹುಶಃ ವರದಹಸ್ತದಲ್ಲಿದೆ. ಎಡಗೈಯಲ್ಲಿ ಪರಶುವಿದೆ. ಶಿರದ ಹಿಂದೆ ಅಂಡಾಕಾರದ ಪ್ರಭಾಮಂಡಲ ಕಾಣಬಹುದು. ಈ ಶಿಲ್ಪದ ಮುಖವು ಪ್ರಕೃತಿವಿಕೋಪದಿಂದ ನಾಶವಾಗಿದೆ. ಈ ಶಿಲ್ಪವನ್ನು ದ್ವಿಮಾನದಲ್ಲಿ ರಚಿಸಿದ್ದು, ನೋಡಲು ಆಕರ್ಷಣೀಯವಾಗಿದೆ.

ಶಿಲ್ಪ –೯

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಪಶ್ಚಿಮ ಗೋಡೆಯಲ್ಲಿ(ಹಿಂಭಾಗದ ಗೋಡೆಯಲ್ಲಿ)ರುವ ಶಿಲ್ಪವು ಚಾಲುಕ್ಯರ ಕಾಲದಲ್ಲಿ ರಚನೆಯಾದ ಸುಂದರ ಶಿಲ್ಪಗಳಲ್ಲೊಂದಾಗಿದ್ದು ಸಮಭಂಗಿಯಲ್ಲಿ ನಿಂತಿರುವ ಶಿಲ್ಪವಾಗಿದೆ. ಬಲಗೈಯು ಪರಶುಪಾಣಿಯಾಗಿದ್ದು ಎಡಗೈ ಕಟ್ಯವಲಂಬಿತವಾಗಿದೆ. ಈ ಶಿಲ್ಪದಲ್ಲಿ ಕಂಡುಬರುವ ವಿಶೇಷತೆಯೆಂದರೆ, ಶಿವನ ತಲೆಯ ಭಾಗದಲ್ಲಿ ಸಾಮಾನ್ಯವಾಗಿ ಕಂಡುಬರುವ ಜಡೆಯು ಇರುವ ಬದಲು ಕೂದಲನ್ನು ಎರಡೂ ಬದಿಯಲ್ಲಿ ಇಳಿಬಿಡಲಾಗಿದೆ. ಸೊಂಟದಲ್ಲಿ ಒಂದು ಸುತ್ತಿನ ಉಡಿದಾರ ಮಾತ್ರವಿದ್ದು ಅದಕ್ಕೆ ಘಂಟೆಯನ್ನು ಕಟ್ಟಲಾಗಿದೆ.

ಶಿವನು ವ್ಯಾಘ್ರಚರ್ಮಾಂಬರನಾಗಿದ್ದಾನೆ. ತೆಳ್ಳಗಿನ ಯಜ್ಞೋಪವೀತವಿದ್ದು ಕಿವಿಯಲ್ಲಿ ಆಭರಣವಿದೆ. ಹಸನ್ಮುಖನಾಗಿರುವ ಮುನಿಕುಮಾರನ ರೀತಿಯಲ್ಲಿದೆ. ಮೊದಲಿನ ಶಿಲ್ಪದಲ್ಲಿ ನೋಡಿದಂತೆ ಈ ಶಿಲ್ಪದಲ್ಲಿ ಉದರಬಂಧವಿಲ್ಲ. ಕೈಯಲ್ಲಿ ಹಿಡಿದಿರುವ ಪರಶು ಬುಡದಲ್ಲಿ ದಂಡದಂತೆ ಕೆತ್ತಲಾಗಿದ್ದು ತುದಿ ಭಾಗದಲ್ಲಿ ಮಾತ್ರ ಪರಶುವಿನಂತೆ ಕಂಡುಬರುತ್ತದೆ. ಪ್ರಸನ್ನ ಮುಖಭಾವವನ್ನು ಹೊಂದಿದ ಅಗಲವಾದ ಮುಖ, ಹೆಗಲಿನ ಎರಡೂ ಬದಿಯಲ್ಲಿ ಇಳಿಬಿದ್ದ ಕೂದಲುಗಳಿಂದಾಗಿ ಶಿಲ್ಪವು ಆಕರ್ಷಕವಾಗಿ ಕಂಡುಬರುತ್ತದೆ.



ಶಿಲ್ಪ –೧೦

'ಐಹೊಳೆಯ ದುರ್ಗಾದೇವಾಲಯದ ತೆರೆದ ಪ್ರದಕ್ಷಿಣಾಪಥದ ದಕ್ಷಿಣಕ್ಕಿರುವ ಕಂಬದ ಪೂರ್ವಮುಖದಲ್ಲಿರುವ ಲಕುಲೀಶನು ಅಪಸ್ಮಾರನ ಮೇಲೆ ನಿಂತಿದ್ದಾನೆ. ಸಮಭಂಗಿಯಲ್ಲಿರುವ ಲಕುಲೀಶನ ಶಿಲ್ಪದ ಎರಡೂ ಭಾಗದಲ್ಲಿ ಇಬ್ಬರು ವ್ಯಕ್ತಿಗಳಿದ್ದಾರೆ. ಮೇಲಿನ ಕೈಯಲ್ಲಿ ಪರಶು, ಎಡಭಾಗದ ಮೇಲಿನ ಕೈಗಳಲ್ಲಿ ಸರ್ಪ, ಕಟ್ಯವಲಂಬಿತ ಹಸ್ತ ಹಾಗೂ ಕಮಂಡಲಗಳನ್ನು ಹಿಡಿದಿದ್ದಾನೆ. ಇಲ್ಲಿ ಶಿವನ ತಲೆಯಲ್ಲಿ ಕಿರೀಟ ಮುಕುಟವಿದೆ. ಈ ಶಿಲ್ಪವನ್ನು ಡಾ. ಕಡಪಟ್ಟಿಯವರು ಷಡ್ಭುಜ ಲಕುಲೀಶ ಶಿಲ್ಪವೆಂದು ತಪ್ಪಾಗಿ ಗುರುತಿಸಿದ್ದಾರೆ.[೪೮] ಏಕೆಂದರೆ ಈ ಶಿಲ್ಪವು ಚತುರ್ಭುಜಗಳನ್ನು ಮಾತ್ರ ಹೊಂದಿದ್ದನ್ನು ಸೂಕ್ಷ್ಮವಾಗಿ ಗಮನಿಸದರೆ ತಿಳಿದುಬರುತ್ತದೆ. ಈ ಶಿಲ್ಪದ ವಿಶೇಷತೆಯೆಂದರೆ, ಹೆಚ್ಚಿನ ಲಕುಲೀಶಶಿಲ್ಪಗಳು ದ್ವಿಭುಜಶಿಲ್ಪಗಳಾಗಿದ್ದರೆ ಇದು ಚತುರ್ಭುಜಗಳೊಂದಿಗೆ ದ್ವಿಮಾನದಲ್ಲಿ ರಚಿತಗೊಂಡ ಶಿಲ್ಪವಾಗಿದೆ.

ಶಿಲ್ಪ –೧೧

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಹೊರಭಾಗದ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನಕವಾಗಿದ್ದು, ಬಲಗೈಯಲ್ಲಿ ಲಕುಟ, ಎಡಗೈ ಕಟ್ಯವಲಂಬಿತವಾಗಿದೆ. ವ್ಯಾಘ್ರಚರ್ಮವಿದ್ದು, ಸೊಂಟದಲ್ಲಿ ಹೆಜ್ಜೆಯ ಮೇಖಲೆಯನ್ನು ಧರಿಸಿದ್ದಾನೆ. ಯಜ್ಞೋಪವೀತವು ಗೆಜ್ಜೆಯಿಂದ ರಚಿತವಾಗಿದೆ. ಜಟೆ ಹರಡಿಕೊಂಡಿದೆ. ಊರ್ಧ್ವ ಮೇಢ್ರನಾಗಿದ್ದಾನೆ.[೪೯] ಈ ಶಿಲ್ಪವು ಅತ್ಯಂತ ಆಕರ್ಷಣೀಯವಾಗಿದ್ದು, ಕೆಲ ಭಾಗಗಳು ಸವೆದು ಹೋಗಿವೆ. ಆದರೂ ಪುನಃ ನೋಡಬೇಕೆನಿಸುತ್ತದೆ.

ಶಿಲ್ಪ –೧೨

ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿರುವ ಆವರಣದಲ್ಲಿ ಒಂದು ಚಿಕ್ಕ ಮಂಟಪದ ಹೊರಭಿತ್ತಿಯಲ್ಲಿ ದಕ್ಷಿಣಾಭಿಮುಖವಾಗಿ ಸಮಸ್ಥಾನಕದಲ್ಲಿ ನಿಂತ ಲಕುಲೀಶನ ಶಿಲ್ಪವನ್ನು ನೋಡಬಹುದು. ಈ ಹಿಂದೆ ನೋಡಿದ ಶಿಲ್ಪಗಳೆಲ್ಲವುಗಳ ಕೈಗಳಲ್ಲಿ ಪರಶು, ಲಗುಡ, ವರದ ಹಸ್ತಗಳಿದ್ದವು. ಆದರೆ ಇಲ್ಲಿ ಬಲಗೈಯಲ್ಲಿ ಲಿಂಗುವನ್ನು ಹಿಡಿದಿರುವುದು ಈ ಶಿಲ್ಪದ ವಿಶೇಷತೆ ಎನ್ನಬಹುದು. ಎಡಗೈಯಲ್ಲಿ ಲಗುಡ ಆಕರ್ಷಕವಾಗಿ ಮೂಡಿಬಂದಿದೆ. ಅಲ್ಲಲ್ಲಿ ಭಗ್ನಗೊಂಡರೂ ಸುಂದರ ಶಿಲ್ಪವಾಗಿದೆ. ಎರಡೂ ಕಂಬಗಳ ಮಧ್ಯದಲ್ಲಿರುವ ಈ ಶಿಲ್ಪವು ದ್ವಿಮಾನದಲ್ಲಿ ರಚಿತವಾಗಿದ್ದು, ನೆರಳು –ಬೆಳಕಿನ ಪ್ರಭಾವದಿಂದ ತ್ರಿಮಾನದ ಭಾವನೆಯನ್ನು ಮೂಡಿಸುತ್ತದೆ.

---

೪೮. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ- ೧೯೧

೪೯. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ – ೧೯, ಪುಟ- ೧೩೦

ಶಿಲ್ಪ –೧೩

ಮಹಾಕೂಟದ ಪುಷ್ಕರಣಿಯ ಪಕ್ಕದಲ್ಲಿ ಲಕುಲೀಶನ ಶಿಲ್ಪವನ್ನು ತಂದಿಡಲಾಗಿದೆ. ಬಲಗೈಯು ವರದ ಹಸ್ತ, ಎಡಗೈಯಲ್ಲಿ ಪರಶುವನ್ನು ಹಿಡಿದಿದ್ದಾನೆ. ಕೂದಲನ್ನು ಎರಡೂ ಭುಜದ ಮೇಲೆ ಇಳಿಬಿಡಲಾಗಿದೆ. ಊರ್ಧ್ವಮೇಢ್ರನಾಗಿ ಅಪಸ್ಮಾರನ ಮೇಲೆ ನಿಂತಿದ್ದಾನೆ. ಕೊರಳಲ್ಲಿ ಒಂದು ಸರವಿದ್ದು ಯಜ್ಞೋಪವೀತ, ಕಟಿಬಂಧವನ್ನು ಧರಿಸಿದ್ದಾನೆ. ಈ ಶಿಲ್ಪವು ಆಕಾರದಲ್ಲಿ ಪಿನಾಕಪಾಣಿ ದೇವಾಲಯದಲ್ಲಿರುವ ಶಿಲ್ಪವನ್ನು ಹೋಲುತ್ತದೆ. ದ್ವಿ ಆಯಾಮದಲ್ಲಿ ರಚಿತವಾಗಿದೆ.

ಶಿಲ್ಪ –೧೪

ಪಟ್ಟದಕಲ್ಲು ಪಾಪನಾಥ ದೇವಾಲಯದ ಬಲಭಾಗದ ಕೋಷ್ಠಕದಲ್ಲಿ ದಕ್ಷಿಣಾಭಿಮುಖವಾಗಿ ಲಕುಲೀಶನು ಊರ್ಧ್ವಮೇಢ್ರವಾಗಿ ಸಮಭಂಗಿಯಲ್ಲಿದ್ದಾನೆ. ಬಲಗೈಯಲ್ಲಿ ಅಕ್ಷಮಾಲೆ, ಎಡಗೈ ಕಟ್ಯವಲಂಬಿತವಾಗಿದೆ. ಕೊರಳಲ್ಲಿ ಅಗಲವಾದ ಸರವಿದ್ದು, ಮೂರೆಳೆಯ ಯಜ್ಞೋಪವೀತ, ಉದರಬಂಧ, ಕಟಿಬಂಧವನ್ನು ಧರಿಸಿದ್ದಾನೆ. ಇಲ್ಲಿಯೂ ಸಹ ಘಂಟೆಯಿರುವುದನ್ನು ಗಮನಿಸಬಹುದು. ಕೈಗಳಲ್ಲಿ ಕಡಗ, ತೋಳಬಂಧಿ ಧರಿಸಿದ್ದು, ತೆಳು ವಸ್ತ್ರವನ್ನು ಧರಿಸಿದ್ದಾನೆ. ಈ ಮೇಲೆ ಚರ್ಚಿಸಿದ ಎಲ್ಲ ಲಕುಲೀಶ ಶಿಲ್ಪಗಳು ಆಕಾರದಲ್ಲಿ ಮತ್ತು ಗಾತ್ರದಲ್ಲಿ ಒಂದೇ ರೀತಿಯವಾಗಿವೆ. ಈ ಶಿಲ್ಪ ತನ್ನದೇ ವಿಶಿಷ್ಟ ಸಕಲ ಆಭರಣಗಳನ್ನು ಧರಿಸಿ ಹೆಚ್ಚು ಆಕರ್ಷಣೆ ಹೊಂದಿದೆ. ಈ ಶಿಲ್ಪವು ನೋಡುಗರಿಗೆ ಹೆಚ್ಚು ಗಮನಕ್ಕೆ ಬಂದಿಲ್ಲವೆನ್ನಬಹುದು. ಇದು ಕೂಡ ದ್ವಿಮಾನದಲ್ಲಿ ರಚಿತಗೊಂಡಂತಹ ಶಿಲ್ಪವಾಗಿದೆ.

ಶಿಲ್ಪ –೧೫

ಬಾದಾಮಿಯಲ್ಲಿರುವ ಇನ್ನೊಂದು ಗಮನಾರ್ಹ ದೇವಾಲಯ ಲಕುಲೀಶನದು. ಲಕುಲೀಶ ಶೈವ ಪಂಥವೊಂದರ ಪ್ರತಿಪಾದಕ. ಅವನು ಶಿವನ ಅವತಾರವೆಂಬ ನಂಬಿಕೆಯೂ ಇದೆ. ಬಾದಾಮಿಯನ್ನು ಬಿಟ್ಟರೆ ದಕ್ಷಿಣ ಭಾರತದಲ್ಲಿ ಇನ್ನೆಲ್ಲೂ ಲಕುಲೀಶನ ಆಲಯಗಳಿಲ್ಲ. ಬಾದಾಮಿ ಆ ಕಾಲಕ್ಕೆ ಉತ್ತಮ ರಕ್ಷಣಾವ್ಯವಸ್ಥೆಯನ್ನು ಹೊಂದಿದ ಶ್ರೀಮಂತ ಪಟ್ಟಣವಾಗಿತ್ತೆಂದು, ಇಮ್ಮಡಿ ಪುಲಿಕೇಶಿಯ ಕಾಲಕ್ಕೆ ಬಾದಾಮಿಗೆ ಬಂದಿದ್ದ ಹ್ಯುಯನ್‌ತ್ಸಾಂಗ್ ವರ್ಣಿಸಿದ್ದಾನೆ.[೫೦] ಒಟ್ಟಾರೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ಸಾಕಷ್ಟು ಲಕುಲೀಶ ಶಿಲ್ಪಗಳು ರಚನೆಯಾಗಿದ್ದು 'ಶೈವ ಧರ್ಮದಲ್ಲಿ ಲಕುಲೀಶನನ್ನು ಪಾಶುಪತ ಮತದ ಪ್ರವರ್ತಕನೆಂದು ಭಾವಿಸಲಾಗುತ್ತದೆ. ಈ ಶಿಲ್ಪಗಳಿರುವುದು ಪಾಶುಪತ ಮತದ ಪ್ರಭಾವದ ಸಂಕೇತವೆಂದು ಪರಿಗಣಿಸಬಹುದು'.[೫೧]

---

೫೦. ನಿರಂಜನ (ಸಂ.) : ಜ್ಞಾನಗಂಗೋತ್ರಿ, ಕಿರಿಯರ ವಿಶ್ವಕೋಶ, ಸಂ.೫, ಪುಟ – ೪೦೨

೫೧. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ– ೧೯೨



ಉಗ್ರ ಶಿಲ್ಪಗಳು (ಸಂಹಾರ ಶಿಲ್ಪಗಳು)

ಶೈವ ಧರ್ಮದಲ್ಲಿ ಶಿವನಿಗೆ ಸಂಬಂಧಿಸಿದ ನೂರಾರು ಶಿಲ್ಪಗಳು ಚಾಲುಕ್ಯರ ಆಡಳಿತಕ್ಕೊಳಪಟ್ಟ ಪ್ರದೇಶಗಳೆಲ್ಲೆಡೆ ರಚನೆಯಾಗಿವೆ. ಅವುಗಳಲ್ಲಿ ಶಿವನ ಶಾಂತಮೂರ್ತಿಗಳೇ ಹೆಚ್ಚು. ಇವುಗಳಲ್ಲಿ ನಟರಾಜನ ಮೂರ್ತಿಗಳೂ ಸೇರಿವೆ. ಕೆಲವೆಡೆ ಶಿವನ ಸಂಹಾರ ಮೂರ್ತಿಗಳು ರಚನೆಯಾಗಿವೆ. ಎರಡನೆಯ ಹಂತದಲ್ಲಿ ಹೆಚ್ಚಾಗಿ ಸಂಹಾರ ಮೂರ್ತಿಗಳು ಕೆತ್ತನೆಗೊಂಡಿದ್ದು ಕಂಡುಬರುತ್ತವೆ. ಇವುಗಳು ಸಾಮಾನ್ಯವಾಗಿ ಪಟ್ಟದಕಲ್ಲಿನ ದೇವಾಲಯಗಳು ಮತ್ತು ಐಹೊಳೆಯ ದೇವಾಲಯ ಸಮುಚ್ಚಯಗಳಲ್ಲಿ ಕಂಡುಬರುವವು. ಈ ಶಿಲ್ಪಗಳಲ್ಲಿ ಗಜಾಸುರ್ ಸಂಹಾರ ಶಿಲ್ಪ, ಅಂಧಕಾಸುರ ಸಂಹಾರ ಶಿಲ್ಪ ಹಾಗೂ ತ್ರಿಪುರಾಂತಕ ಶಿಲ್ಪಗಳು ಮುಖ್ಯವಾಗಿರುವವು.

ಗಜಸಂಹಾರ ಶಿಲ್ಪಗಳು

ಗಜಸಂಹಾರ ಶಿಲ್ಪ ಕೆತ್ತನೆಗಳು ಪಟ್ಟದಕಲ್ಲು, ಐಹೊಳೆಯಲ್ಲಿ ಕಂಡುಬಂದಿವೆ. ಚಾಲುಕ್ಯರ ಗುಹಾಲಯಗಳಲ್ಲಿ ಈ ಶಿಲ್ಪಗಳನ್ನು ನಾವು ಕಾಣುವುದಿಲ್ಲ. ಸಂಗಮೇಶ್ವರ ದೇವಾಲಯದ ದಕ್ಷಿಣ ಹೊರಭಿತ್ತಿಯಲ್ಲಿ, ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿಯಲ್ಲಿ, ಕಾಶೀವಿಶ್ವೇಶ್ವರ ದೇವಾಲಯ ಮಂಟಪದ ಕಂಬದಲ್ಲಿ ಹಾಗೂ ವಿರೂಪಾಕ್ಷ ದೇವಾಲಯ ಪಶ್ಚಿಮ ಭಿತ್ತಿಯಲ್ಲಿ ಗಜಾಸುರಸಂಹಾರ ಶಿಲ್ಪಗಳನ್ನು ಕಾಣಬಹುದು.[೫೨]

ಶಿಲ್ಪ –೧

ಪಟ್ಟದಕಲ್ಲು ಕಾಶೀವಿಶ್ವೇಶ್ವರ ದೇವಾಲಯದ ಕಂಬದಲ್ಲಿರುವ ಉಬ್ಬು ಚಿಕ್ಕದಾಗಿರುವ ಶಿಲ್ಪವು ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿದೆ. ಈ ಶಿಲ್ಪದ ಒಂದು ಗಮನಾರ್ಹ ಅಂಶವೆಂದರೆ ಶಿವನು ಸಂಹರಿಸಿದ ಗಜಾಸುರನ ಇಡಿ ದೇಹದ ಚರ್ಮವನ್ನು ಎತ್ತಿ ತಲೆಯ ಮೇಲೆ ಹಾಕಿಕೊಳ್ಳುತ್ತಿರುವುದು, ಆನೆಯ ಮುಖವು ನೋಡುಗರೆಡೆಗೆ ತಿರುಗಿದ್ದು ಚತುರ್ಭುಜ ಶಿವನ ಗಾಂಭೀರ್ಯ, ಸುತ್ತಲೂ ದೇವತೆಗಳು ನಿಂತುಕೊಂಡು ಕುತೂಹಲಭರಿತ ಭಯದಿಂದ ನೋಡುತ್ತಿರುವುದು ಗಮನಾರ್ಹವಾಗಿದೆ. ಶಿವನು ತನ್ನ ಮತ್ತು ತಾನು ಹೊತ್ತುಕೊಂಡಿರುವ ಆನೆಯ ದೇಹದ ತೂಕವನ್ನು ಸರಿದೂಗಿಸಲು ದೇಹದ ಭಾರವನ್ನು ಎರಡೂ ಕಾಲುಗಳನ್ನು ದೇಹದ ಎರಡೂ ಪಕ್ಕಕ್ಕೆ ಅಗಲಿಸಿಕೊಂಡಿರುವುದು ಆಕರ್ಷಕವಾಗಿದೆ. ಗಜಸಂಹಾರ ಶಿಲ್ಪದ ವಿಶೇಷತೆಯೆಂದರೆ ಶಿವನು ದುಷ್ಟನಾದ ಗಜಾಸುರ ಎಂಬ ರಾಕ್ಷಸನನ್ನು ಸಂಹಾರಮಾಡಿ ಆತನ ಚರ್ಮವನ್ನು ತನ್ನ ಪ್ರಭಾವಳಿಯನ್ನಾಗಿ ಮಾಡಿಕೊಂಡಿದ್ದಾನೆ.

ಬಹುಶಃ ಚಾಲುಕ್ಯರ ಪ್ರಾರಂಭದ ದಿನಗಳಲ್ಲಿ ವೈಷ್ಣವ ಧರ್ಮೀಯರಾಗಿದ್ದ ಇವರು ಶಿವನನ್ನು ವಿಷ್ಣುವಿನ ಜೊತೆಗಾರನಾಗಿ, ಆತನ ಪ್ರತಿರೂಪವಾಗಿ ಕಂಡುದೆ ಕಾರಣವಿರಬಹುದೇನೊ!

---

೫೨. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೨

ಆದುದರಿಂದಲೆ ಆ ಕಾಲದಲ್ಲಿ ಶಿವ ಮತ್ತು ವಿಷ್ಣು ಜೊತೆಯಾಗಿರುವ ಹರಿಹರ ಶಿಲ್ಪಗಳು, ನಟರಾಜ ಶಿವ, ಅರ್ಧನಾರೀಶ್ವರ ಇತ್ಯಾದಿ ಶಿಲ್ಪಗಳಷ್ಟು ಶಿವನ ಉಗ್ರ ರೂಪವನ್ನು ಕೆತ್ತಿಲ್ಲದಿರಬಹುದು. ಇನ್ನೊಂದು ಕಾರಣವೆಂದರೆ, ಅವರ ಎರಡನೆಯ ಹಂತದಲ್ಲಿ ನಡೆದ ಯುದ್ಧಗಳು, ಅವುಗಳಲ್ಲಿ ದೊರಕಿದ ಜಯ, ಅವುಗಳ ಜೊತೆಯಲ್ಲಿ ಇವರ ಕಾಲದಲ್ಲಿ ರಾಜರು ಶೈವಧರ್ಮಕ್ಕೆ ಮತಾಂತರ ಹೊಂದಿದುದರಿಂದ ಶಿವನ ಲೀಲೆಗಳನ್ನು, ಆತನ ಪರಾಕ್ರಮವನ್ನು ತೋರಿಸುವ ಉತ್ಸಾಹವೂ ಇದ್ದಿರಬಹುದು. ಇದರಿಂದಾಗಿ ಮುಂದಿನ ಹಂತದಲ್ಲಿ ನಮಗೆ ಶಿವನ ಉಗ್ರರೂಪದ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ. 'ಯುದ್ಧದ ಉತ್ಸಾಹವು ಈ ಶಿಲ್ಪರಚನೆಗೆ ಎಡೆಮಾಡಿಕೊಟ್ಟಿರಬಹುದು'.[೫೩]

ಶಿಲ್ಪ –೨

ಪಟ್ಟದಕಲ್ಲಿನ ನಂದಿಮಂಟಪದಲ್ಲಿ ನಂದಿಶಿಲ್ಪದ ಅಭಿಮುಖವಾಗಿ ಮಂಟಪದ ಎಡಗಡೆಯ ಒಳಬೋಧಿಗೆಯಲ್ಲಿದೆ. ಈ ಶಿಲ್ಪವು ಹತ್ತು ಕೈಗಳನ್ನು ಹೊಂದಿದ್ದು, ಕೈಗಳಲ್ಲಿ ಹಾವು, ಘಂಟೆ ಹೀಗೆ ವಿವಿಧ ರೀತಿಯ ಆಯುಧಗಳನ್ನು ಹೊಂದಿದ್ದಾನೆ. ಪಕ್ಕದಲ್ಲಿ ಪಾರ್ವತಿ ಸಮೇತವಾದ ಈ ಶಿಲ್ಪವು ಉಬ್ಬುತನದಿಂದ ಸುಂದರವಾಗಿ ಮೂಡಿಬಂದಿದೆ ಎನ್ನಬಹುದು.

ಬಾದಾಮಿಯ ನಟರಾಜನ ಶಿಲ್ಪದಂತೆ ಕಂಡರೂ ನಟರಾಜನಲ್ಲ. ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯದು, ಇಲ್ಲಿ ಗಜಾಸುರನ ಸಂಹಾರ ಮಾಡಿ ತನ್ನ ಪ್ರಭಾವಳಿಯನ್ನಾಗಿ ಮಾಡಿಕೊಂಡಿದ್ದಾನೆ. ಬಲಪಕ್ಕದಲ್ಲಿ ಆನೆಯ ಮುಖವನ್ನು ಕಾಣಬಹುದು. ಚಿಕ್ಕದಾದರೂ ಎಲ್ಲಾ ಗಜಾಸುರ ಸಂಹಾರ ಶಿಲ್ಪಗಳನ್ನು ಮೀರಿಸುವಂತಹ ಶಿಲ್ಪ ಇದಾಗಿದೆ.

ಶಿಲ್ಪ –೩

ಮಲ್ಲಿಕಾರ್ಜುನ ದೇವಾಲಯದ ಕಂಬದ ಮೇಲಿನ ಬೋಧಿಗೆಯಲ್ಲಿ ದಕ್ಷಿಣಾಭಿಮುಖವಾಗಿರುವ ಶಿವನು ಗಜಾಸುರನ ಚರ್ಮವನ್ನು ಎತ್ತಿ ಹಿಡಿದಿದ್ದು ಪಕ್ಕದಲ್ಲಿ ಪಾರ್ವತಿ(ಇರಬಹುದು)ಯು ನಿಂತು ನೋಡುತ್ತಿರುವಂತಿದೆ. ಒಟ್ಟು ಶಿಲ್ಪವು ಅಸ್ಪಷ್ಟವಾಗಿದ್ದರೂ ಕೆತ್ತನೆಯನ್ನು ಗಮನಿಸಬಹುದಾಗಿದೆ.

ಇಲ್ಲಿಯೂ ಶಿಲ್ಪದಲ್ಲಿ ಹೆಚ್ಚಿನ ವಿವರಗಳು ಕಂಡುಬರುವುದಿಲ್ಲವಾದರೂ ಶಿವನ ನಿಂತ ಭಂಗಿ, ಉಗ್ರಸ್ವರೂಪ, ಎರಡೂ ಕೈಗಳನ್ನು ಮೇಲೆತ್ತಿ ಚರ್ಮವನ್ನು ಎತ್ತಿ ಹಿಡಿದಿರುವ ರೀತಿ, ಶಿಲ್ಪದಲ್ಲಿ ಚಲನೆಯ(Movement) ಭಾವನೆಯನ್ನು ತೋರಿಸಿದ ರೀತಿ ಗಮನ ಸೆಳೆಯುತ್ತದೆ. ತೆಳು ಉಬ್ಬು ಶಿಲ್ಪವಾದ ಈ ಶಿಲ್ಪವು ಭಿತ್ತಿಯಿಂದ ಸ್ವಲ್ಪ ಮಾತ್ರ ಕಾಣಿಸಿಕೊಂಡಿದೆ. ಆದರೂ ಈ ಶಿಲ್ಪದಲ್ಲಿ ಗಜಾಸುರನನ್ನು ಸಂಹರಿಸಿದ ವೇಗವನ್ನು ಕಾಣಬಹುದು.

೫೩. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೨



ಶಿಲ್ಪ –೪

ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ದಕ್ಷಿಣಾಭಿಮುಖವಾಗಿರುವ ಶಿವನು ಗಜಾಸುರನನ್ನು ಸಂಹಾರ ಮಾಡುತ್ತಿರುವ ದೃಶ್ಯದ ಶಿಲ್ಪವಿದೆ. ಚತುರ್ಭುಜಗಳನ್ನು ಹೊಂದಿದ್ದು, ತನ್ನ ಎರಡು ಮುಖ್ಯ ಕೈಗಳಿಂದ ಗಜಚರ್ಮವನ್ನು ಮೇಲೆ ಎತ್ತಿದ್ದಾನೆ. ಹಿಂದಿನ ಎರಡು ಕೈಗಳು ಮುದ್ರೆಯಲ್ಲಿರಬಹುದು. ಕಿರೀಟಮುಕುಟನಾಗಿರುವ ಶಿವನು ತನ್ನ ಬಲಗಾಲನ್ನು ಎತ್ತಿ ಗಜನ ತಲೆಯ ಮೇಲೆ ಊರಿದ್ದಾನೆ. ಎಡಗಾಲು ಸಮಾಂತರದಲ್ಲಿರಿಸಿದ್ದಾನೆ. ಈ ಶಿಲ್ಪದಲ್ಲಿ ಕೊರಳಹಾರ, ಉದರಬಂಧ, ಕಟಿಬಂಧವನ್ನು ಧರಿಸಿದ್ದಾನೆ. ಆದರೆ ಅದು ಅಸ್ಪಷ್ಟವಾಗಿದೆ. ಈ ಶಿಲ್ಪವನ್ನು ಪೂರ್ಣಗೊಳಿಸದೆ ಹಾಗೆ ಬಿಟ್ಟಿರುವುದು ಒಂದು ವಿಶೇಷವಾಗಿದೆ. ಈ ಶಿಲ್ಪದಲ್ಲಿ ಉಳಿಯಿಂದ ಕೆತ್ತಿರುವ ರೇಖೆಗಳು ಇಂದಿಗೂ ಜೀವಂತವಾಗಿವೆ. ಇಲ್ಲಿನ ಉಳಿಯ ರೇಖೆಗಳಿಂದ ಈ ಶಿಲ್ಪಗಳು ಸ್ಫೂರ್ತಿದಾಯಿಯಾಗಿವೆ. ಈ ಶಿಲ್ಪವು ದ್ವಿಮಾನದಲ್ಲಿ ರಚಿಸಿದ ಉಬ್ಬುತಗ್ಗುಗಳನ್ನು ನೋಡಿದರೆ ತ್ರಿಮಾನದಲ್ಲಿ ರಚಿಸಿದ್ದರೆಂಬುದಾಗಿ ತಿಳಿಯಬಹುದು. ಈ ಶಿಲ್ಪ ಅಪೂರ್ಣವಾದರೂ ಇಂದಿನ ಶಿಲ್ಪಗಳಿಗೆ ಮಾದರಿಯಾಗಿದೆ.

ಶಿಲ್ಪ –೫

ವಿರೂಪಾಕ್ಷ ದೇವಾಲಯದ ಸುತ್ತುವರಿದ ಗೋಡೆಯ ಮೇಲೆ ಪೂರ್ವಾಭಿಮುಖವಾಗಿ ಚತುರ್ಭುಜವನ್ನು ಹೊಂದಿದ್ದಾನೆ. ಇಲ್ಲಿಯೂ ಸಹ ಈ ಹಿಂದೆ ನೋಡಿದ ಶಿಲ್ಪದಂತೆ ಕಂಡರೂ ಈ ಶಿಲ್ಪದಲ್ಲಿ ಶಿವನು ತ್ರಿನೇತ್ರನಾಗಿದ್ದಾನೆ. ತನ್ನ ಎರಡು ಕೈಗಳಿಂದ ಗಜಚರ್ಮವನ್ನು ಎತ್ತಿ ಪ್ರಭಾವಳಿಯನ್ನಾಗಿ ಮಾಡಿಕೊಂಡಿದ್ದಾನೆ. ಹಿಂದಿನ ಎರಡು ಕೈಗಳು ಬಲಗಡೆ ಇರುವ ಕೈಯ ಪ್ರಭಾವಳಿಗೆ ಹೊಂದಿಕೊಂಡಂತೆ ಕಂಡುಬರುತ್ತಿದೆ. ಎಡಗೈ ತನ್ನ ತೊಡೆಯ ಮೇಲಿರಿಸಿದ್ದಾನೆ. ಕಿರೀಟಮುಕುಟನಾದ ಶಿವನು ಅಗಲವಾದ ಕೊರಳಹಾರ, ಉದರಬಂಧ, ಕಟಿಬಂಧ ಮತ್ತು ಕಟಿಭಾಗದಲ್ಲಿ ಕಟ್ಟಿದ ವಸ್ತ್ರವನ್ನು ಗಮನಿಸಬಹುದು. ಕೈಗಳಲ್ಲಿ ತೋಳಬಂಧಿ, ಮುಂಗೈಗಳಲ್ಲಿ ಒಂದು ಎಳೆಯ ಕಡಗವನ್ನು ಹಾಕಿದ್ದಾನೆ. ಬಲಗಾಲನ್ನು ಸ್ವಲ್ಪ ಬಾಗಿಸಿ ಸಮಾಂತರದಲ್ಲಿಟ್ಟಿದ್ದು, ಎಡಗಾಲನ್ನು ಗಜಾಸುರನ ತಲೆಯ ಮೇಲೆ ಇರಿಸಿದ್ದಾನೆ. ಗಜಾಸುರನ ರೋದನವನ್ನು ಕಣ್ಣಲ್ಲೇ ಬಿಂಬಿಸಲಾಗಿದೆ. ಒಟ್ಟಾರೆ ಈ ಶಿಲ್ಪವು ದ್ವಿಮಾನದಲ್ಲಿ ರಚಿತವಾಗಿದ್ದರೂ ತ್ರಿಮಾನದ ಭಾವನೆಯನ್ನು ನೀಡುತ್ತದೆ. ಇದು ಬಿಡಿಶಿಲ್ಪವಾಗಿದ್ದು, ಬೇರೆ ಕಡೆಯಿಂದ ತಂದಿರಿಸಲಾಗಿದ್ದರೂ ಉತ್ತಮ ಆಕರ್ಷಕ ಶಿಲ್ಪವಾಗಿದೆ.

ಶಿಲ್ಪ –೬

ಐಹೊಳೆ ವಿರೂಪಾಕ್ಷ ದೇವಾಲಯದ ಹಿಂಬದಿಯ ಎರಡು ಕಂಬಗಳ ಮಧ್ಯೆ ಗಜಾಸುರ ಸಂಹಾರ ಶಿಲ್ಪವನ್ನು ಇರಿಸಲಾಗಿದೆ. ಇದು ಬಿಡಿ ಶಿಲ್ಪವಾಗಿದೆ. ಈ ಹಿಂದೆ ನೋಡಿದ ಎಲ್ಲ


ಲಕುಲೀಶ ಶಿಲ್ಪಗಳು



ಶಿಲ್ಪ-೧. ಸಂಗಮೇಶ್ವರ ದೇವಾಲಯ, ಮಹಾಕೂಟ




ಶಿಲ್ಪ-೨. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಮಹಾಕೂಟ



ಶಿಲ್ಪ-೪. ಮಹಾಕೂಟ



ಶಿಲ್ಪ-೫. ಪಿನಾಕಪಾಣಿ ದೇವಾಲಯ, ಮಹಾಕೂಟ

ಲಕುಲೀಶ ಶಿಲ್ಪಗಳು




ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೭. ಕಾಡಸಿದ್ದೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ಜಂಬುಲಿಂಗ ದೇವಾಲಯ, ಪಟ್ಟದಕಲ್ಲು




ಶಿಲ್ಪ-೯. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಲಕುಲೀಶ ಶಿಲ್ಪಗಳು




ಶಿಲ್ಪ-೧೦ ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೧೧ ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೨. ಪಟ್ಟದಕಲ್ಲು



ಶಿಲ್ಪ-೧೩. ಮಹಾಕೂಟ, ಆವರಣ



ಶಿಲ್ಪ-೧೪. ಪಾಪನಾಥ ದೇವಾಲಯ ಪಟ್ಟದಕಲ್ಲು

ಲಕುಲೀಶ

ಗಜಸಂಹಾರ ಶಿಲ್ಪಗಳು



ಶಿಲ್ಪ-೧೫. ಭೂತನಾಥ ದೇವಾಲಯ ಸಂಕೀರ್ಣ, ಬಾದಾಮಿ




ಶಿಲ್ಪ-೧. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ನಂದಿಮಂಟಪ, ಪಟ್ಟದಕಲ್ಲು



ಶಿಲ್ಪ-೩. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೪. ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೫. ಪಟ್ಟದಕಲ್ಲು, ಆವರಣ



ಶಿಲ್ಪ-೬. ವಿರೂಪಾಕ್ಷ ದೇವಾಲಯ, ಐಹೊಳೆ



ಗಜಾಸುರ ಸಂಹಾರ ಶಿಲ್ಪಗಳಿಗಿಂತ ಭಿನ್ನವಾಗಿದೆ. ಇಲ್ಲಿ ಷಟ್‌ಬಾಹುಗಳನ್ನು ಹೊಂದಿರುವ ಶಿವನ ಕೇಶವು ಬಿಡಿ ಬಿಡಿಯಾಗಿವೆ. ಗಜಚರ್ಮವನ್ನು ಮೇಲೆ ಎತ್ತಲಿಕ್ಕೆ ಮೂರು ಕೈಗಳನ್ನು ಬಳಸಿದ್ದಾನೆ. ಎಡಗೈಯೊಂದು ತೊಡೆಯ ಮೇಲಿದೆ. ಎರಡು ಕೈಗಳು ಚರ್ಮವನ್ನು ಎತ್ತಿ ಹಿಡಿದಿವೆ. ಬಲಭಾಗದ ಒಂದು ಕೈ ಚರ್ಮವನ್ನು ಎತ್ತಿದ್ದರೆ, ಒಂದು ಕೈ ಚರ್ಮವನ್ನು ತನ್ನ ಕಡೆಗೆ ಎಳೆಯುತ್ತಿದೆ. ಮತ್ತೊಂದು ಭಗ್ನವಾಗಿದೆ. ಶಿವನು ಕೊರಳಹಾರವನ್ನು ಧರಿಸಿದ್ದು, ಸ್ವಲ್ಪ ಮಾಸಿ ಹೋಗಿದೆ. ಸೊಂಟಕ್ಕೆ ಕಟ್ಟಿಕೊಂಡಿರುವ ಸರ್ಪವು ಹೆಡೆ ಎತ್ತಿ ನಿಂತಿದೆ. ಈ ಶಿಲ್ಪದಲ್ಲಿ ಅಪಸ್ಮಾರನ ಮೇಲೆ ನಿಂತು ನಾಟ್ಯಮಾಡುತ್ತ ಗಜಾಸುರನ ಸಂಹಾರ ಮಾಡುತ್ತಿರುವ ದೃಶ್ಯ ಅಮೋಘವಾಗಿದೆ. ಇದು ಕೂಡ ದ್ವಿಮಾನದಲ್ಲಿ ರಚಿತವಾದರೂ ಅಪಸ್ಮಾರನು ಮಲಗಿಕೊಂಡಿದ್ದು, ಬಲಗೈಯು ತಲೆಗೆ ಆಸರೆಯಾಗಿದೆ. ಬಲಭಾಗದಲ್ಲಿ ಸಂಹರಿಸಿದ ಗಜಶಿಲ್ಪವನ್ನು ಕಾಣಬಹುದು. ಪದ್ಮಪೀಠದ ಮೇಲೆ ಮಲಗಿರುವ ಈ ಶಿಲ್ಪದ ಕೆಲವು ಭಾಗ ಸವೆದು ಹೋದರೂ ಉತ್ತಮ ಕಲಾಕೃತಿಯಾಗಿದೆ.

ಅಂಧಕಾಸುರಾಂತಕ ಶಿಲ್ಪಗಳು

ಶಿಲ್ಪ –೧

ಪಟ್ಟದಕಲ್ಲು ಕಾಶೀವಿಶ್ವೇಶ್ವರ ದೇವಾಲಯ ಸಭಾಮಂಟಪದ ಬಲಭಾಗದ ಮೊದಲನೆಯ ಕಂಬದಲ್ಲಿ ದಕ್ಷಿಣಾಭಿಮುಖವಾಗಿ ಅಷ್ಟಭುಜವುಳ್ಳವನಾಗಿ ಅಂಧಕಾಸುರನನ್ನು ವಧಿಸುತ್ತಿರುವ ಶಿಲ್ಪವನ್ನು ಕೆತ್ತಲಾಗಿದೆ. ಇದು ಗಾತ್ರದಲ್ಲಿ ಚಿಕ್ಕದಾದರೂ ವಿಷಯಕ್ಕೆ ಕೊರತೆಯಿಲ್ಲ. ಖಡ್ಗ, ಗುರಾಣಿ, ತ್ರಿಶೂಲವನ್ನು ಹಿಡಿದಿದ್ದಾನೆ. ಅಂಧಕಾಸುರನನ್ನು ತ್ರಿಶೂಲದಿಂದ ತಿವಿದಿದ್ದನ್ನು ಶಿಲ್ಪದಲ್ಲಿ ಕಾಣಬಹುದು. ಶಿವನು ಅತಿಭಂಗಿಯಲ್ಲಿ ನಿಂತಿದ್ದು, ಎಡಗಾಲನ್ನು ಅಸುರನ ಬೆನ್ನಿನ ಮೇಲೆ ಇರಿಸಿದ್ದಾನೆ. ಹಿಂದಿನ ಎಡಗೈಯನ್ನು ತೊಡೆಯ ಮೇಲಿರಿಸಿದ್ದಾನೆ. ಮುಖ್ಯ ಬಲಗೈಯಲ್ಲಿ ತ್ರಿಶೂಲದಿಂದ ಅಸುರನನ್ನು ಮೇಲೆ ಎತ್ತಿದ್ದಾನೆ. ಶಿವನ ಮುಖದಲ್ಲಿ ಉಗ್ರತೆಯನ್ನು ಕಾಣಬಹುದು. ಕುತ್ತಿಗೆಯಲ್ಲಿ ದಪ್ಪವಾದ ಎರಡು ಪಟ್ಟಿಕೆಯಿದ್ದು, ಕಿವಿಯಲ್ಲಿನ ಆಭರಣಗಳು ಭುಜಮಟ್ಟಕ್ಕೆ ತಾಗಿವೆ. ಶಿವನ ಬಲಭಾಗದಲ್ಲಿ ನೃತ್ಯ ಮಾಡುತ್ತಿರುವ ಶಿಲ್ಪವಿದೆ. ಬಲಭಾಗದಲ್ಲಿಯೂ ಸ್ತ್ರೀ ಶಿಲ್ಪವಿದ್ದು, ಅಸ್ಪಷ್ಟವಾಗಿದೆ. ಈ ಶಿಲ್ಪವು ಉಬ್ಬುತನದಿಂದ ಕೂಡಿದ್ದು, ಕೈಗಳು ಅಪೂರ್ಣವಾಗಿವೆ. ಒಟ್ಟಾರೆ ಈ ಶಿಲ್ಪವು ಗಾತ್ರದಲ್ಲಿ ಚಿಕ್ಕದಾದರೂ ಉದ್ದೇಶ ಒಂದೇ ಆಗಿದೆ.

ಶಿಲ್ಪ –೨

ಐಹೊಳೆಯ ಗಳಗನಾಥ ದೇವಾಲಯದಲ್ಲಿನ ಶಿಲ್ಪ ಕುತೂಹಲಕಾರಿಯಾದುದಾಗಿದೆ. ಇಲ್ಲಿನ ದೇವಾಲಯದ ದಕ್ಷಿಣ ಅರ್ಧಮಂಟಪದಲ್ಲಿನ ಮುಖ್ಯ ಶಿಲ್ಪವೊಂದರಲ್ಲಿ ಶಿವನು ಅಂಧಕಾಸುರನನ್ನು ವಧಿಸುತ್ತಿರುವ ಶಿಲ್ಪವನ್ನು ನೋಡಬಹುದು. 'ಇದು ಗಾತ್ರದಲ್ಲಿಯೂ,



ಕಲಾತ್ಮಕತೆಯಲ್ಲಿಯೂ ಹಿರಿದಾದುದು. ಈ ಸಂಹಾರಶಿಲ್ಪಕ್ಕೆ ಎಂಟು ಕೈಗಳಿವೆ. ಖಡ್ಗ, ಗುರಾಣಿ, ತ್ರಿಶೂಲವನ್ನು ಹಿಡಿದಿದ್ದಾನೆ. ಅಂಧಕಾಸುರನನ್ನು ಶೂಲದಿಂದ ಚುಚ್ಚಿ ಮೇಲಕ್ಕೆ ಚಿಮ್ಮುತ್ತಿದ್ದಾನೆ. ಇಲ್ಲಿನ ಶಿಲ್ಪವು ಮೊದಲು ನಾವು ನೋಡಿರುವ ಶಿಲ್ಪಕ್ಕಿಂತ ಬಹಳಷ್ಟು ವಿಭಿನ್ನವಾಗಿರುವುದನ್ನು ಗಮನಿಸಬಹುದು.

ದೇವಾಲಯದ ಅರ್ಧಮಂಟಪದ ಹೊರಭಾಗದಲ್ಲಿರುವ ಈ ಶಿಲ್ಪದಲ್ಲಿ ಶಿವನು ಅತಿಭಂಗಿಯಲ್ಲಿ ನಿಂತಿದ್ದು ಎಡಗಾಲನ್ನು ಅಸುರನ ಬೆನ್ನಿನ ಮೇಲೆ ಇರಿಸಿದ್ದಾನೆ. ಒಂದು ಕೈಯನ್ನು ಎಡ ತೊಡೆಯ ಮೇಲಿರಿಸಿದ್ದು ಕೆಳಗಿನ ಬಲಕೈಯಲ್ಲಿ ತ್ರಿಶೂಲದಿಂದ ಅಸುರನನ್ನು ಮೇಲಕ್ಕೆತ್ತಿ ಎಸೆಯುತ್ತಿದ್ದಾನೆ. ಶಿವನ ಮುಖದಲ್ಲಿ ಉಗ್ರತೆಯ ಭಾವನೆಯನ್ನು ಕಲಾವಿದನು ವ್ಯಕ್ತಪಡಿಸಿರುವುದು ಸ್ಪಷ್ಟವಿದೆ. ಶಿವನ ಯಜ್ಞೋಪವೀತವು ರುಂಡಗಳಿಂದ ಕೂಡಿದೆ. ಕುತ್ತಿಗೆಯಲ್ಲಿ ಎರಡು ಸುತ್ತಿನ ಕಂಠಿಹಾರವಿದ್ದು ಕಿವಿಯ ಆಭರಣಗಳು ಭುಜದ ಮೇಲೆ ಇಳಿಬಿದ್ದಿದ್ದು ಕಂಠಿಹಾರದ ತುದಿಭಾಗದಂತೆ ಗೋಚರವಾಗುವುದು ಗಮನಾರ್ಹ. ಶಿವನ ಮುಖವು ಅಳತೆಗಿಂತ ಸಣ್ಣದಾಗಿರುವಂತೆ ಕಾಣಿಸುತ್ತದೆ.

ಇದಕ್ಕೆ ಕಾರಣ ಶಿಲ್ಪಿಯು, ಶಿವನ ಜಟಾಮುಕುಟದಲ್ಲಿ ರಾಕ್ಷಸರ ರುಂಡಗಳನ್ನು ಆಭರಣದಂತೆ ಕೆತ್ತಿರುವುದು, ಇದರಿಂದಾಗಿ ಕಿರೀಟದ ರೀತಿಯಲ್ಲಿ ಶಿವನ ಜಟಾಮುಕುಟದ ಅನುಭವವಾಗುತ್ತದೆ. ಕೈಗಳಲ್ಲಿ ವಿವಿಧ ಆಯುಧಗಳನ್ನು ಹೊಂದಿದ್ದು ಸೊಂಟದಲ್ಲಿ ವ್ಯಾಘ್ರ ಚರ್ಮವನ್ನು ಧರಿಸಿದ್ದಾನೆ. ಕೈಗಳಲ್ಲಿನ ಕಡಗದ ರಚನೆ, ನೀಳವಾದ ತೋಳುಗಳು, ತೊಡೆಗಳನ್ನು ಹೊಂದಿದ ನೀಳಾಕೃತಿ ವಿಶಿಷ್ಟವಾಗಿ ಮೂಡಿಬಂದಿದೆ. ಶಿಲ್ಪಕ್ಕೆ ಹೆಚ್ಚಿನ ಸೊಬಗನ್ನು ನೀಡುವುದಕ್ಕಾಗಿ ಶಿವನ ಎಡ ಹಿಂಭಾಗದಲ್ಲಿ ಗಣನೊಬ್ಬನು ಕುತೂಹಲದ ಕಣ್ಣುಗಳಿಂದ ವೀಕ್ಷಿಸುತ್ತಿರುವುದು ಗಮನ ಸೆಳೆಯುತ್ತದೆ. ಇದರಿಂದ ಶಿಲ್ಪದಲ್ಲಿನ ರೌದ್ರತೆ ಕಡಿಮೆಯಾಗಿ ನೋಡುಗರಲ್ಲಿ ಹಿತವಾದ ಭಾವನೆ ಉಂಟಾಗುವಂತೆ ಮಾಡುವುದಾಗಿದೆ. ಶಿಲ್ಪದಲ್ಲಿ ರಾಕ್ಷಸನು ಬೆನ್ನು ಮೇಲಾಗಿ ಬಿದ್ದಿದ್ದರೂ ಸಹಜತೆಯನ್ನು ಮೂಡಿಸಲು ಶಿಲ್ಪಿಯು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ ಈ ಶಿಲ್ಪವು ಚಾಲುಕ್ಯರ ಆಳ್ವಿಕೆಯ ಎರಡನೆಯ ಹಂತದಲ್ಲಿ ರಚನೆಯಾದ ಶಿಲ್ಪವಾಗಿದ್ದು ಮೊದಲು ರಚಿಸಲ್ಪಟ್ಟಿರುವ ಶಿಲ್ಪಗಳಿಗಿಂತ ಸಾಕಷ್ಟು ವೈವಿಧ್ಯವನ್ನು ಹೊಂದಿರುವುದನ್ನು ಕಾಣಬಹುದು. 'ಇಲ್ಲಿಯ ವಿರೂಪಾಕ್ಷ ದೇವಾಲಯದ ದಕ್ಷಿಣ ಹೊರ ಕಾಶೀವಿಶ್ವೇಶ್ವರ ದೇವಾಲಯದ ಕಂಬವೊಂದರಲ್ಲಿ, ಕೂಡುವೇಲಿ(ಆಂಧ್ರ ಪ್ರದೇಶ)ಯ ಸಂಗಮೇಶ್ವರ ದೇಗುಲದ ದಕ್ಷಿಣ ಭಿತ್ತಿಯಲ್ಲಿ ಅಷ್ಟಭುಜವುಳ್ಳವನಾಗಿದ್ದಾನೆ. ಆಲಂಪುರದ ವಸ್ತು ಸಂಗ್ರಹಾಲಯದಲ್ಲಿಯ ಈ ಬಗೆಯ ಶಿಲ್ಪದಲ್ಲಿ ಹತ್ತು ಕೈಗಳಿವೆ. ಐಹೊಳೆಯ ಚಿಕ್ಕಗುಡಿ, ಹುಚ್ಚುಮಲ್ಲಿಗುಡಿಯ ಮೇಲ್ಛಾವಣಿಯಲ್ಲಿ ಅಂಧಕಾಸುರ ಮೂರ್ತಿಗಳು ಅಸ್ಪಷ್ಟವಾಗಿರುವುದು ಕಂಡುಬರುತ್ತವೆ.'[೫೪]

೫೪. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೪

ಶಿಲ್ಪ –೩

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಬಲಭಾಗದ ಹೊರಗೋಡೆಯಲ್ಲಿ ಶಿವನು ಅಸುರ ಸಂಹಾರ ಮಾಡುತ್ತಿರುವ ಶಿಲ್ಪವಿದೆ. ಇಲ್ಲಿ ಶಿವನು ತ್ರಿಶೂಲದ ಬದಲಾಗಿ ಈಟಿಯನ್ನು ಹಿಡಿದಿದ್ದಾನೆ. ಈಟಿಯ ತುದಿಯನ್ನು ಶಿವನ ಒಂದು ಕೈಯು ಭದ್ರವಾಗಿ ಹಿಡಿದಿದೆ. ದ್ವಿಭುಜದ ಶಿಲ್ಪವು ಇದಾಗಿದೆ. ಶಿವನು ಎಡಗಾಲನ್ನು ಮಡಚಿಕೊಂಡು ಎತ್ತರ ಪೀಠದ ಮೇಲಿರಿಸಿಕೊಂಡಿದ್ದಾನೆ. ಬಲಗಾಲನ್ನು ನೆಲದ ಮೇಲೆ ಊರಿದ್ದಾನೆ. ಶಿವನ ತೋಳಿನಲ್ಲಿ ಸಾಮಾನ್ಯವಾಗಿ ಸರ್ಪದ ತೋಳುಬಂಧಿಯ ಬದಲು ಮುತ್ತಿನ ಆಭರಣಗಳಿಂದ ಕೂಡಿದ ಅಲಂಕಾರಿಕ ತೋಳಬಂಧಿಯಿದೆ. ಶಿವನು ಜಟಾಮುಕುಟನಾಗಿದ್ದು ಯಜ್ಞೋಪವೀತವು ಭುಜದಿಂದ ಹೊರಬಂದು ಹಾರದ ರೀತಿಯಲ್ಲಿ ಬಲಭಾಗಕ್ಕೆ ಸರಿದುಕೊಂಡಿರುವುದು ಶಿಲ್ಪದಲ್ಲಿ ಚಲನೆಯ ಭಾವನೆಯನ್ನು ಉಂಟುಮಾಡುವುದರಲ್ಲಿ ಯಶಸ್ವಿಯಾಗಿದ್ದಾನೆ. ಶಿವನ ಕಂಠದಲ್ಲಿ ಅಗಲವಾದ ಎದೆಹಾರಗಳು ಎರಡು ಸುತ್ತಿನಲ್ಲಿರುವುದು, ಉದರಬಂಧ, ಎರಡು ಸುತ್ತಿನ ಮೇಖಲೆ ಇತ್ಯಾದಿಗಳು ಕಂಡುಬರುತ್ತವೆ. ಶಿಲ್ಪದ ಮೇಲುಭಾಗದಲ್ಲಿ ದೇವನೊಬ್ಬನು ಶಿವನಿಗೆ ಕೈಮುಗಿಯುತ್ತಿರುವುದನ್ನು ಕಾಣಬಹುದು.

ಶಿಲ್ಪ –೪

ಬಾದಾಮಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾದ ಅಂಧಕಾಸುರಾಂತಕ ಶಿಲ್ಪವು ಚತುರ್ಭುಜವಾಗಿದ್ದು, ಇಲ್ಲಿ ವಿಶೇಷ ರೀತಿಯಲ್ಲಿ ಮೂಡಿಬಂದಿದೆ. ಅಂಧಕಾಸುರನನ್ನು ಕೆಳಗೆ ಹಾಕಿ ಎಡಗಾಲನ್ನು ಅಂಧಕಾಸುರನ ಸೊಂಟದ ಮೇಲೆ ಊರಿ ತ್ರಿಶೂಲದ ಹಿಂಬದಿಯಿಂದ ಕುತ್ತಿಗೆ ಭಾಗಕ್ಕೆ ಇರಿಯುತ್ತಿದ್ದಾನೆ. ಅಂದಕಾಸುರನು ದೊಡ್ಡ ಗಾತ್ರದಲ್ಲಿದ್ದು, ಕೇಶವನ್ನು ಎರಡು ಬದಿಗಳಲ್ಲಿ ಗರಿಗರಿಯಾಗಿ ಸುರಳಿಗಳಿಂದ ಇಳಿಬಿಡಲಾಗಿದೆ. ಶಿವನು ಉದರಬಂಧ, ಕೊರಳಲ್ಲಿ ಮುತ್ತಿನ ಸರ ಧರಿಸಿದ್ದು ಕಾಣುತ್ತದೆ. ಕಿರೀಟವು ಚಿಕ್ಕದಾಗಿದ್ದು, ಕಲ್ಲಿನ ಕೊರತೆ ಕಂಡುಬರುತ್ತದೆ. ಈ ಶಿಲ್ಪದ ಹಿಂದಿನ ಎಡಗೈಯಲ್ಲಿ ಡಮರುವನ್ನು ಗಾತ್ರದಲ್ಲಿ ಚಿಕ್ಕದಾಗಿ ಕೆತ್ತಲಾಗಿದೆ. ಹಿಂದಿನ ಬಲಗೈ ಸೊಂಟದ ಮೇಲೆ ಇಟ್ಟಿದ್ದಾನೆ. ಮೇಲೆ ನೋಡಿದ ಶಿಲ್ಪಗಳು ಅಂಧಕಾಸುರನನ್ನು ತ್ರಿಶೂಲದಿಂದ ತಿವಿದು ಮೇಲಕ್ಕೆತ್ತಿದ್ದರೆ ಇಲ್ಲಿ ಕಾಲಕೆಳಗೆ ಹಾಕಿ ಸಂಹರಿಸುತ್ತಿರುವ ಶಿಲ್ಪ ಇದಾಗಿದೆ. ಇದೂ ಬಿಡಿ ಶಿಲ್ಪವಾಗಿದ್ದು, ದ್ವಿಮಾನದಲ್ಲಿ ರಚಿಸಿದ್ದರೂ ಶಿಲ್ಪದಲ್ಲಿ ಜೀವಕಳೆ ಎದ್ದು ಕಾಣುತ್ತದೆ. ಒಟ್ಟಾರೆ ಈ ಶಿಲ್ಪವನ್ನು ಸುವ್ಯವಸ್ಥೆಯಲ್ಲಿ ಇರಿಸಲಾಗಿದ್ದು, ನೋಡುಗರಿಗೆ ಹೆಚ್ಚು ಆಕರ್ಷಣೀಯವಾಗಿದೆ.

ಶಿಲ್ಪ –೫

ಪಟ್ಟದಕಲ್ಲು ಸಂಗಮೇಶ್ವರ ದೇವಾಲಯದ ಬಲಭಾಗದ ಹೊರಭಿತ್ತಿಯಲ್ಲಿ ದಕ್ಷಿಣಕ್ಕೆ ಮುಖಮಾಡಿರುವ ಅಂಧಕಾಸುರಾಂತಕನ ಶಿಲ್ಪವಿದೆ. ಇದು ಬಹಳ ಎತ್ತರದಲ್ಲಿದ್ದು, ದ್ವಿಭುಜ

ಅಂದಕಾಸುರಾಂತಕ ಶಿಲ್ಪಗಳು



ಶಿಲ್ಪ-೧. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ಗಳಗನಾಥ ದೇವಾಲಯ, ಐಹೊಳೆ



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೪. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ



ಶಿಲ್ಪ-೫. ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು

ಶಿಲ್ಪವಾದ ಇಲ್ಲಿಯೂ ಸಹ ಎಡಗಾಲನ್ನು ಎತ್ತರದಲ್ಲಿಟ್ಟ ಕುರುಹುಗಳಿವೆ. ತ್ರಿಶೂಲದಿಂದ ಅಂಧಕಾಸುರನನ್ನು ಇರಿಯುತ್ತಿರುವ ಶಿಲ್ಪವಾಗಿರಬಹುದು. ಇದು ಅಪೂರ್ಣ ಕಲಾಕೃತಿಯಾಗಿದೆ. ಹೆಚ್ಚಿನದನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ.

ತ್ರಿಪುರಾಂತಕ ಶಿಲ್ಪಗಳು

ತ್ರಿಪುರಾಂತಕ, ತ್ರಿಪುರಾರಿ, ತ್ರಿಪುರಾಸುರ ಸಂಹಾರಮೂರ್ತಿ, ತ್ರಿಪುರಸಂಹಾರ, ತ್ರಿಪುರ ವಿಜಯ, ತ್ರಿಪುರ ಸುಂದರ, ಪುರಾರಿ ಹೀಗೆ ಹಲವಾರು ಹೆಸರುಗಳಿಂದ ಕರೆಯಲಾಗುವ ಶಿವನ ಈ ರೂಪ ಅವನ ಹಲವು ಉಗ್ರ ಹಾಗೂ ಲೀಲೆಗಳಲ್ಲಿ ಒಂದಾಗಿದೆ. ತ್ರಿಪುರಾಸುರ ಸಂಹಾರದ ದೃಶ್ಯ ನಿರೂಪಣೆಗಳು ಭಾರತೀಯ ಶಿಲ್ಪ ಹಾಗೂ ಚಿತ್ರಕಲೆಗೆ ಪೂರಕವಾದಂತೆ ಕ್ರಿ.ಶ. ಆರು ಮತ್ತು ಏಳನೇ ಶತಮಾನಗಳಲ್ಲಿ ಜನಪ್ರಿಯವಾಯಿತು.

ಕರ್ನಾಟಕದ ಮಟ್ಟಿಗೆ ಬಾದಾಮಿ ಚಾಲುಕ್ಯ ಕಾಲದಿಂದಲೇ ತ್ರಿಪುರವಿಜಯ ಶಿಲ್ಪಗಳು ಕಂಡುಬರುತ್ತವೆ. ವಿಶೇಷವೆಂದರೆ ಕರ್ನಾಟಕ ಒಂದರಲ್ಲಿಯೇ ತ್ರಿಪುರಸಂಹಾರದ ದೃಶ್ಯ ನಿರೂಪಣೆಯಲ್ಲಿ ಕಾಲಘಟ್ಟಗಳಿಗೆ ಅನುಗುಣವಾಗಿ ವೈವಿಧ್ಯ ಕಂಡುಬರುತ್ತದೆ. ಅಂತಹ ಹಲವು ನಿರೂಪಣೆಗಳನ್ನು ಶಿಲ್ಪ ಮತ್ತು ಚಿತ್ರಕಲೆಯಲ್ಲಿ ಗುರುತಿಸುವುದೇ ಈ ಪ್ರಬಂಧದ ಆಶಯವಾಗಿದೆ. ತ್ರಿಪುರ ಸಂಹಾರದ ಶಿವ ಉಗ್ರರೂಪ, ಪ್ರಾಚೀನ ಶಿಲ್ಪಶಾಸ್ತ್ರ ಕೃತಿಗಳ ಪ್ರಕಾರ ಅವನಿಗೆ ೨,೪,೮ ಅಥವಾ ೧೦ ಕೈಗಳು ಇರುತ್ತವೆ.

ತ್ರಿಪುರಾಂತಕ ಶಿವನು ಯಾವಾಗಲೂ ಎಡಗೈಯಲ್ಲಿ ಬಿಲ್ಲು ಹಾಗೂ ಬಲಗೈಯಲ್ಲಿ ಬಾಣವನ್ನು ಹಿಡಿದಿರಬೇಕು. ಅಲ್ಲದೇ ಯಾವಾಗಲೂ ಉಮೆಯ ಜೊತೆಯಲ್ಲಿ ಇರಬೇಕು. ಹಾಗೂ ರಥಾರೂಢನಾಗಿರಬೇಕು. ಈ ವರ್ಣನೆಯ ಪ್ರಕಾರ ಶಿವನು ಯುದ್ಧೋತ್ಸಾಹದಲ್ಲಿ ಇದ್ದು ತ್ರಿಪುರಾಸುರನನ್ನು ಸಂಹಾರ ಮಾಡಲು ಸನ್ನದ್ಧನಾಗಿರುವಂತೆ ಬಿಂಬಿಸಲಾಗುತ್ತದೆ. ಇದು ಸಾಮಾನ್ಯವಾಗಿ ಬಹುತೇಕ ಶಿಲ್ಪಗಳಲ್ಲಿ ಕಂಡುಬರುವಂತಹ ದೃಶ್ಯ ನಿರೂಪಣೆಯಾಗಿದೆ. ತ್ರಿಪುರಾಂತಕ ಶಿವನ ಪರಿಕಲ್ಪನೆ ವೇದಗಳಲ್ಲಿಯೇ ಉಲ್ಲೇಖಗೊಳ್ಳುತ್ತಿದೆ. 'ಉಪಾಸದ್' ಎಂಬ ವೈದಿಕ ಯಜ್ಞದ ಆಚರಣೆಯಿಂದ ತ್ರಿಪುರಾಂತಕ ಶಿವನ ಕುರಿತಾದಂಥ ಕಥೆ ಹುಟ್ಟಿಕೊಳ್ಳುವುದು. ಈ ಕುರಿತಂತೆ ಖ್ಯಾತ ಇತಿಹಾಸ ತಜ್ಞೆ ಸ್ಟೆಲ್ಲಾಕ್ರಾಮರಿಶ್‌ರು ತಮ್ಮ ಮ್ಯಾನಿಫೆಸ್ಟೇಶನ್ಸ್ ಆಫ್ ಶಿವ ಎಂಬ ಕೃತಿಯಲ್ಲಿ ಚರ್ಚಿಸಿದ್ದಾರೆ.[೫೫]

ಶಿಲ್ಪ –೧

ಪಟ್ಟದಕಲ್ಲು ಪಾಪನಾಥ ದೇವಾಲಯಕ್ಕೆ ಹೊಂದಿಕೊಂಡಂತೆ ಎಡಬದಿಯಲ್ಲಿ ಮಂಟಪವಿದ್ದು, ಮಂಟಪದ ಕಂಬದಲ್ಲಿ ಪೂರ್ವಾಭಿಮುಖವಾಗಿ ತ್ರಿಪುರಾಂತಕನ ಚತುರ್ಭುಜ

೫೫. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ – ೨೫, ಪುಟ – ೧೧೪

ಶಿಲ್ಪವಿದಾಗಿದೆ. ನಾಲ್ಕು ಅಡಿ ಎತ್ತರವಿರುವ ಈ ಶಿಲ್ಪ ರಥದಲ್ಲಿ ನಿಂತು ಮೂರು ಪಟ್ಟಣಗಳಿಗೆ ಬಾಣಬಿಡುತ್ತಿರುವಂತೆ ಕಾಣುವುದು. ಬ್ರಹ್ಮನು ಸಾರಥಿಯಾಗಿದ್ದಾನೆ. ಶಿಲ್ಪವು ಕೆಲವು ಬಾಗ ಸವೆದು ಹೋಗಿದ್ದರೂ ಶಿಲ್ಪದ ಗುರುತುಗಳು ಇಂದಿಗೂ ಸಾಕ್ಷಿಯಾಗಿವೆ. ಈ ಶಿಲ್ಪವು ದ್ವಿಮಾನದಲ್ಲಿ ರಚಿತವಾಗಿದ್ದು, ಆಕರ್ಷಕ ಭಂಗಿಯಲ್ಲಿದೆ. ಒಟ್ಟಾರೆ ಈ ಶಿಲ್ಪವು ನೋಡುಗರನ್ನು ಮೆರಗು ಗೊಳಿಸುವಂತೆ ಕೆತ್ತಲಾಗಿದೆ.

ಶಿಲ್ಪ –೨

ಬಾದಾಮಿ ಚಾಲುಕ್ಯರ ಕಾಲದ ಪಟ್ಟದಕಲ್ಲಿನಲ್ಲಿ ದೊರೆತ ಕ್ರಿ.ಶ. ೭–೮ನೇ ಶತಮಾನಕ್ಕೆ ಸೇರಿದ ಶಿಲ್ಪವೇ ಮೊದಲನೆಯದು. ಈಗ ಬಾದಾಮಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಇದರಲ್ಲಿ ಶಿವನು ರಥಾರೂಢನಾಗಿದ್ದು, ಎಂಟು ಕೈಗಳನ್ನು ಹೊಂದಿದ್ದಾನೆ. ಇಲ್ಲಿ ಬ್ರಹ್ಮನೇ ಸಾರಥಿಯಾಗಿದ್ದು, ಪಾರ್ವತಿಯು ರಥದಲ್ಲಿರುವ ದೃಶ್ಯನಿರೂಪಣೆ ಇದೆ. ತನ್ನ ಸಹಜ ಕೈಗಳಿಂದ ಬಿಲ್ಲು ಬಾಣವನ್ನು ಹಿಡಿದು ಹೆದೆ ಏರಿಸಿದ್ದಾನೆ. ಇನ್ನುಳಿದ ಕೈಗಳಲ್ಲಿ ಖಡ್ಗ, ಗುರಾಣಿ, ವಜ್ರಾಯುಧ ಹಾಗೂ ಸರ್ಪವನ್ನು ಹಿಡಿದಿದ್ದಾನೆ. ಶಿಲ್ಪದ ಎಡ ಮೇಲ್ಭಾಗದಲ್ಲಿ ಮೂರು ನಗರಗಳನ್ನು ಸಾಂಕೇತಿಕವಾಗಿ ಬಿಂಬಿಸುವ ಕಿರಿದಾದ ವಾಸ್ತುಕೃತಿ ಇದೆ. ಇಲ್ಲಿ ಅಸುರನನ್ನು ಸಾಂಕೇತಿಕವಾಗಿ ನಗರಗಳ ರೂಪದಲ್ಲಿ ಬಿಂಬಿಸಲಾಗಿದೆ. ಶಿವನ ಒಟ್ಟಾರೆ ಭಾವಭಂಗಿಯನ್ನು ಗಮನಿಸಿದಾಗ, ಅವನ ದೈಹಿಕ ಚಲನೆ ಹಾಗೂ ಯುದ್ಧೋತ್ಸಾಹದ ಅನುಭವ ದೃಶ್ಯ ನಿರೂಪಣೆಂಯು ಗೋಚರಿಸುತ್ತದೆ. ಇಲ್ಲಿ ರಥದ ಗಾಲಿಗಳು ಸಾಮಾನ್ಯ ಗಾಲಿಗಳಾಗಿಯೇ ನಿರೂಪಣೆಗೊಂಡಿವೆಯಾದರೂ ಕುದುರೆಗಳನ್ನು ಬಿಂಬಿಸಿರುವ ರೀತಿ, ರಥವು ಮುನ್ನುಗ್ಗುತ್ತಿರುವಂತೆ ಗೋಚರವಾಗುತ್ತದೆ.[೫೬]

ಚಿತ್ರ –೩


ಪಟ್ಟದಕಲ್ಲು ಕಾಶೀವಿಶ್ವೇಶ್ವರ ದೇವಾಲಯ ಕುಂಭದಲ್ಲಿ ಚಿಕ್ಕಗಾತ್ರದ ಆಯತಾಕಾರದ ಪಟ್ಟಿಕೆಯಲ್ಲಿ ತ್ರಿಪುರಾಂತಕನ ಶಿಲ್ಪವಿದೆ. ಮೂರು ಪಟ್ಟಣಗಳಿಗೆ ಬಾಣವನ್ನು ಬಿಡುತ್ತಿರುವುದು ಕಾಣಬಹುದು. ಇಲ್ಲಿ ಬಾಣವನ್ನು ದೊಡ್ಡಗಾತ್ರದಲ್ಲಿ ತೋರಿಸಲಾಗಿದೆ. ರಥದ ಮೇಲೆ ಗಣೇಶನ ಉಬ್ಬು ಶಿಲ್ಪವಿದೆ. ಸಿಂಹದ ಮೇಲೆ ಕುಳಿತಿರುವ ದೇವಿಯನ್ನು ಕಾಣಬಹುದು. ಚೌಕಾಕಾರದ ಪಟ್ಟಿಕೆಯಲ್ಲಿ ಶಿಲ್ಪಗಳ ಸಂಯೋಜನೆಯನ್ನು ಮಾಡಿರುವುದು ಶಿಲ್ಪಿಯ ಜಾಣ್ಮೆಯೆನ್ನಬಹುದು. ಇದು ಕೂಡ ಉಬ್ಬುಶಿಲ್ಪವಾಗಿದೆ.

ಗಂಗಾಧರ ಶಿಲ್ಪಗಳು

ಗಂಗೆಯನ್ನು ಹೊತ್ತುಕೊಂಡಿರುವ ಶಿವನ ಕುರಿತಾದ ಉಲ್ಲೇಖಗಳು ಶೈವಾಗಮಗಳಲ್ಲಿ

೫೬. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ – ೨೫, ಪುಟ – ೧೧೪

ತ್ರಿಪುರಾಂತಕ ಶಿಲ್ಪಗಳು



ಶಿಲ್ಪ-೧. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ



ಶಿಲ್ಪ-೩. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ದೊರೆಯುತ್ತವೆ. ಶಿವನು ತಲೆಯಲ್ಲಿ ಹೊತ್ತುಕೊಂಡಿರುವುದು ಈ ಶಿಲ್ಪದ ಪರಿಕಲ್ಪನೆಯಾಗಿದೆ. ಭಗೀರಥನ ತಪಸ್ಸಿನ ಫಲವಾಗಿ ಗಂಗೆಯು ಸ್ವರ್ಗದಿಂದ ಭೂಮಿಗೆ ರಭಸವಾಗಿ ಇಳಿದುಬರುವಾಗ, ಅದರ ವೇಗವನ್ನು ತಡೆಯುವ ಸಲುವಾಗಿ ಶಿವನು ತನ್ನ ಜಡೆಯನ್ನು ಹರಡಿ, ಹರಿದುಬರುತ್ತಿರುವ ಗಂಗೆಯನ್ನು ತನ್ನ ತಲೆಯಲ್ಲಿ ಬಂಧಿಸಿಬಿಡುತ್ತಾನೆ. ಆ ರೀತಿಯಲ್ಲಿ ಗಂಗೆಯು ಶಿವನ ಭಾಗವಾಗಿ ಬಿಡುತ್ತಾಳೆ. ಈ ರೀತಿಯಾಗಿ ಶಿವನು ಗಂಗಾಧರನೆನಿಸಿಕೊಳ್ಳುವ ಕಥೆಯು ಶೈವಾಗಮಗಳಲ್ಲಿ ಕಾಣಬರುತ್ತದೆ. ಚಾಲುಕ್ಯರ ಕಾಲದ ಶಿಲ್ಪಿಗಳು ಶಿವನ ಗಂಗಾಧರಶಿಲ್ಪಗಳನ್ನು ಕೆತ್ತಿರಿಸಿದ್ದಾರೆ. 'ಆಗಮಗಳಲ್ಲಿ ಗಂಗಾಧರಶಿಲ್ಪದ ಉಲ್ಲೇಖಗಳಿವೆ. ಈ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಶಿವನು ಗಂಗೆಯನ್ನು ಭೂಲೋಕಕ್ಕೆ ಕಳಿಸುವ ಸನ್ನಿವೇಶವು ಐಹೊಳೆ, ಪಟ್ಟದಕಲ್ಲು ಮತ್ತು ಆಲಂಪುರದ ಶಿಲ್ಪಗಳಲ್ಲಿ ಮೂಡಿಬಂದಿದೆ.'[೫೭]

ಶಿಲ್ಪ –೧

ಐಹೊಳೆಯಲ್ಲಿರುವ ರಾವಳಫಡಿ ಗುಹಾಲಯವು ಪಶ್ಚಿಮಾಭಿಮುಖವಾಗಿದ್ದು, ನೈರುತ್ಯ ಬದಿಯಲ್ಲಿ ಗಂಗಾಧರ ಶಿವನ ಅಪರೂಪದ ಶಿಲ್ಪವಿದೆ. ಚತುರ್ಭುಜನಾಗಿ ಸಮಪಾದದಲ್ಲಿ ನಿಂತಿರುವ ಶಿವನ ಮುಖ್ಯ ಬಲಗೈ ಕಟಕಹಸ್ತದಲ್ಲಿದೆ. ಎಡಗೈ ಕಟ್ಯವಲಂಬಿತವಾಗಿದೆ. ಉಳಿದೆರಡು ಮೇಲಿನ ಕೈಗಳಿಂದ ಗಂಗೆಯನ್ನು ಧರಿಸುವುದಕ್ಕಾಗಿ ಜಟೆಗಳನ್ನು ಬಿಡಿಸಿ ಹಿಡಿದಿದ್ದಾನೆ. ಮೇಲ್ಗಡೆ ಗಂಗೆ ಸ್ತ್ರೀರೂಪದಲ್ಲಿ ತ್ರಿಪಥಗಾಮಿನಿಯಾಗಿ ಕೈಮುಗಿದು ಇಳಿದುಬರುತ್ತಿದ್ದಾಳೆ. ಶಿವನ ಬಲಪಾರ್ಶ್ವದಲ್ಲಿ ಕೈಗಳನ್ನು ಮೇಲಕ್ಕೆತ್ತಿ ಒಂಟಿಗಾಲ ಮೇಲೆ ತಪಸ್ಸು ಮಾಡುತ್ತಿರುವ ಭಗೀರಥನಿದ್ದಾನೆ. ಎಡಪಾರ್ಶ್ವದಲ್ಲಿ ಪಾರ್ವತಿ ಬಲಗೈಯನ್ನು ಗದ್ದದ ಮೇಲೆ ಇರಿಸಿ ಆಶ್ಚರ್ಯ ಸೂಚಿಸುತ್ತಿದ್ದಾಳೆ.[೫೮]

ಗಂಗಾಧರನ ಮೇಲ್ಭಾಗದಲ್ಲಿದ್ದ ಕಮಲದಲ್ಲಿ ಮೂವರು ಸ್ತ್ರೀದೇವತೆಗಳು ಕೈಮುಗಿದು ಕೊಂಡಿರುವರು. ಇವರು ಜಲದೇವತೆಗಳಾದ ಗಂಗಾ, ಯಮುನಾ, ಸರಸ್ವತಿಗಳೆಂದು ತೋರುವುದು. ಶಿವನು ತನ್ನ ಜಡೆಯಲ್ಲಿ ಆರ್ಯಾವರ್ತದ ಮೂರು ನದಿಗಳ ಪವಿತ್ರ ಜಲವನ್ನು ಧರಿಸಿದ್ದನೆಂಬುದು ಈ ಗಂಗಾಧರಶಿಲ್ಪವನ್ನು ರಚಿಸಿದ ಶಿಲ್ಪಿಯ ಅಭಿಪ್ರಾಯವಾದಂತಿದೆ.[೫೯] ಕೆಳಗಡೆ ಪೀಠದಲ್ಲಿ ನಮಸ್ಕರಿಸುತ್ತಿರುವ ಭಗೀರಥ ಅಥವಾ ಗಂಗೆಯನ್ನು ಕುಡಿಯುತ್ತಿರುವ ಸರ್ಪ ಹಿಡಿದ ಕುಬ್ಜಶಿವಗಣ, ತ್ರಿಶೂಲ ಧರಿಸಿದ ಕುಬ್ಜ ಹಾಗೂ ಪೀಠದ ಮೇಲೆ ಕುಳಿತ ವ್ಯಕ್ತಿಯನ್ನು ಉಬ್ಬು ಶಿಲ್ಪವನ್ನಾಗಿ ತೋರಿಸಿದ್ದಾರೆ. ಗಂಗಾಧರ ಶಿಲ್ಪವನ್ನು ಹೆಚ್ಚು ಆಳವಾಗಿ ದ್ವಿಮಾನದಲ್ಲಿರುವಂತೆ ಎರಡು ಬದಿಗೆ ಕಾಣುವಂತೆ ಕೆತ್ತಿಸಿದ್ದಾರೆ.

೫೭. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೩೪

೫೮. ಡಾ. ಅಂಬಳಿಕೆ ಹಿರಿಯಣ್ಣ (ಸಂ.) : ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ – ೩೮೮

೫೯. ಡಾ. ವೀರಣ್ಣ ರಾಜೂರ (ಸಂ.) : ಸಂಸ್ಕೃತಿ(ಪ್ರೊ, ಸದಾನಂದ ಕನವಳ್ಳಿಯವರ ಅಭಿನಂದನ ಸಂಪುಟ), ಪುಟ – ೪೦೪



ಶಿಲ್ಪ –೨

ಪಟ್ಟದಕಲ್ಲಿನ ಕಾಶೀವಿಶ್ವೇಶ್ವರ ದೇವಾಲಯದ ಒಂದು ಕಂಬದಲ್ಲಿ ಆಯತಾಕಾರದ ಪಟ್ಟಿಕೆಯಲ್ಲಿ ಗಂಗಾಧರನ ಶಿಲ್ಪವಿದೆ. ಇದು ಗಾತ್ರದಲ್ಲಿ ಚಿಕ್ಕದಾದರೂ ಆಕಾರದಲ್ಲಿ ರಾವಳಫಡಿ ಗುಹಾಲಯದಲ್ಲಿರುವ ಗಂಗಾಧರ ಶಿಲ್ಪವನ್ನೇ ಹೋಲುತ್ತದೆ. ಚತುರ್ಭುಜನಾಗಿ ಸಮಪಾದದಲ್ಲಿ ನಿಂತಿರುವ ಶಿವನ ಮುಖ್ಯ ಬಲಗೈಯಲ್ಲಿ ಹೆಣ್ಣಿನ ರೀತಿಯ ಕೆತ್ತನೆಯಿದೆ. ಎಡಗೈ ಕಟ್ಯವಲಂಬಿತವಾಗಿದೆ. ಉಳಿದೆರಡು ಮೇಲಿನ ಕೈಗಳಿಂದ ಗಂಗೆಯನ್ನು ಧರಿಸುವುದಕ್ಕಾಗಿ ಜಟೆಗಳನ್ನು ಬಿಡಿಸಿ ಹಿಡಿದಿದ್ದಾನೆ. ಮೇಲ್ಭಾಗದಲ್ಲಿ ಹರಿದು ಬರುತ್ತಿರುವ ಗಂಗೆಯನ್ನು ಅಚ್ಚುಕಟ್ಟಾಗಿ ತೋರಿಸಿದ್ದಾನೆ. ಶಿವನ ಬಲಭಾಗದಲ್ಲಿ ಕೈಗಳನ್ನು ಮೇಲಕ್ಕೆತ್ತಿ ಒಂಟಿಗಾಲ ಮೇಲೆ ತಪಸ್ಸು ಮಾಡುತ್ತಿರುವ ಭಗೀರಥನಿದ್ದಾನೆ. ಎಡಭಾಗದಲ್ಲಿ ಪಾರ್ವತಿ ಬಲಗೈಯನ್ನು ಸ್ವಲ್ಪ ಮೇಲಕ್ಕೆತ್ತಿ ಆಶ್ಚರ್ಯಕ್ಕೊಳಗಾಗಿದ್ದಾಳೆ. ಮೇಲಿನ ಮೂಲೆಯಲ್ಲಿ ಚಿಕ್ಕ ಗಾತ್ರದ ಶಿಲ್ಪಗಳಿದ್ದು, ಬಲಭಾಗದಲ್ಲಿ ಆನೆಯನ್ನು ಕೆತ್ತಲಾಗಿದೆ. ಶಿವನ ಹಿಂದೆ ನಂದಿಯ ಶಿಲ್ಪವನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಈ ಶಿಲ್ಪವು ಉಬ್ಬುಶಿಲ್ಪವಾದರೂ ಚೌಕಾಕಾರದ ವಿನ್ಯಾಸದಲ್ಲಿ ಇಷ್ಟೊಂದು ಶಿಲ್ಪಗಳನ್ನು ಸಂಯೋಜಿಸಿದ ಶಿಲ್ಪಿಯನ್ನು ಮೆಚ್ಚವಂಥದ್ದಾಗಿದೆ. ಇದು ಗಾತ್ರದಲ್ಲಿ ಚಿಕ್ಕದಾಗಿದ್ದರೂ ರಾವಳಫಡಿಯಲ್ಲಿರುವ ಗಂಗಾಧರನ ಶಿಲ್ಪವನ್ನು ಮೀರಿಸುವಂತ ಶಿಲ್ಪವಾಗಿದೆ.

ಲಿಂಗೋದ್ಭವ ಶಿಲ್ಪಗಳು

ಶಿಲ್ಪ –೧

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಪೂರ್ವದ್ವಾರದ ಬಲಭಾಗದ ಹೊರ ಭಿತ್ತಿಯಲ್ಲಿ ಪೂರ್ವಾಭಿಮುಖವಾಗಿ ಲಿಂಗೋದ್ಭವ ಮೂರ್ತಿಯಿದ್ದು, ಇದೊಂದು ಶಿಲ್ಪಿಯ ಸುಂದರ ಕಲ್ಪನೆ, ಪುರಾಣದ ಕತೆಯ ಮೇರೆಗೆ ಲಿಂಗದ ತುದಿಯನ್ನು ತಲುಪಲು ಬ್ರಹ್ಮನು ಆಕಾಶಕ್ಕೆ ಹಾರಿದನಂತೆ. ಲಿಂಗದ ತಳವನ್ನು ಹುಡುಕುತ್ತ ವಿಷ್ಣು ನೆಲವನ್ನು ಅಗಿದನಂತೆ. ತಮ್ಮ ಪ್ರಯತ್ನಗಳಲ್ಲಿ ಇಬ್ಬರೂ ವಿಫಲರಾಗಿ ಹಿಂತಿರುಗಿದರಂತೆ. ಪುರಾಣದ ಈ ಕಥೆ ಶಿಲ್ಪದಲ್ಲಿ ಬಿಂಬಿತವಾಗಿದೆ. ಇದು ಶಿವನ ಮಹಿಮೆಯನ್ನು ವರ್ಣಿಸುವಂತಹದು.[೬೦] ಈ ಶಿಲ್ಪವನ್ನು ಅಂದಗೊಳಿಸಲು ಚೌಕಟ್ಟಿನ ಮೇಲೆ ನವಿಲಿನ ಉಬ್ಬುಶಿಲ್ಪಗಳು ಸುರುಳಿವಿನ್ಯಾಸಗಳಿಂದ ಅಲಂಕೃತಗೊಂಡಿದ್ದು ಈ ಶಿಲ್ಪಕ್ಕೆ ಹೆಚ್ಚಿನ ಮಹತ್ವ ದೊರೆತಂತಾಗಿದೆ.

ಶಿಲ್ಪ –೨

ಪಟ್ಟದಕಲ್ಲು ಕಾಶೀವಿಶ್ವೇಶ್ವರ ದೇವಾಲಯದ ಕಂಬದಲ್ಲಿ ಚೌಕಾಕಾರದ ಪಟ್ಟಿಕೆಯಲ್ಲಿನ

೬೦. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು, ಪುಟ – ೫೨

[illegible]

ಲಿಂಗೋದ್ಭವ ಶಿಲ್ಪವು ಸುಂದರವಾಗಿ ಮೂಡಿಬಂದಿದೆ. ಲಿಂಗದ ಮಧ್ಯಭಾಗದಲ್ಲಿ ಶಿವನು ಅಭಯ ಮುದ್ರೆಯಲ್ಲಿದ್ದಾನೆ. ಬಲಭಾಗದಲ್ಲಿ ಬ್ರಹ್ಮದೇವನು ಕೈಮುಗಿದು ನಿಂತಿದ್ದಾನೆ. ಕೆಳಗೆ ಕುಬ್ಜಗಣಗಳಿವೆ. ಎಡಭಾಗದಲ್ಲಿ ವರಾಹನೊಂದಿಗೆ ವಿಷ್ಣು ಶಂಖ, ಚಕ್ರಧಾರಿಯಾಗಿ ಕೈ ಮುಗಿದು ನಿಂತಿದ್ದಾನೆ. ಅಷ್ಟದಿಕ್ಪಾಲಕರು ತಮ್ಮ ವಾಹನಗಳ ಮೇಲೆ ಕೈಗಳನ್ನು ಮುಗಿದು ನಿಂತಿದ್ದಾರೆ.

ಚತುರ್ಮುಖ ಲಿಂಗ

ಮಹಾಕೂಟದಲ್ಲಿರುವ ಪುಷ್ಕರಣಿಗೆ ವಿಷ್ಣು ಹಾಗೂ ಶಿವ ಪುಷ್ಕರಣಿಯೆಂದು ಎರಡು ಹೆಸರಿನಿಂದ ಕರೆಯುತ್ತಾರೆ. ಎಲ್ಲಾ ಋತುಗಳಲ್ಲಿಯೂ ಇಲ್ಲಿನ ಜಲಧಾರೆ ಒಂದೇ ತೆರನಾಗಿ ಹರಿಯುತ್ತಿರುತ್ತದೆ. ಇದು ಬಹಳ ವಿಶೇಷವಾದ ಸಂಗತಿಯಾಗಿದೆ. ಈ ಪುಷ್ಕರಣಿಯಲ್ಲಿ ಒಂದು ಸುಂದರ ಮಂಟಪವಿದೆ. ಅದರಲ್ಲಿ ಚತುರ್ಮುಖವುಳ್ಳ ಶಿವನ ತೇಜೋವ ದನಗಳನ್ನು ಕಾಣಬಹುದು. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯ ಈ ಐದು ಹೆಸರುಗಳು ಶಿವನಿಗೆ ಸಂಬಂಧಿಸಿದ್ದು ಏಕೇಶ್ವರವಾದಕ್ಕೆ ವ್ಯಾಖ್ಯಾನಿಸಿದ್ದಾರೆ. ಈ ಮೂರ್ತಿಗೆ ಪಂಚಮುಖಿಲಿಂಗವೆಂದು ಹಲವು ಪ್ರಾಜ್ಞರ ಅಭಿಮತ[೬೧] ವಾದ ಈ ಲಿಂಗವು ಚಾಲುಕ್ಯರ ಕಾಲದ ರಚಿಸಿದ ವಿಶಿಷ್ಟ ಲಿಂಗವಾಗಿದೆ.

ಪಟ್ಟದಕಲ್ಲಿನ ಕಾಶೀವಿಶ್ವೇಶ್ವರ ದೇವಾಲಯದ ಗರ್ಭಗುಡಿಯ ದ್ವಾರದ ಬಲಭಾಗದಲ್ಲಿ ಒಂದು ಶಿಲ್ಪವಿದೆ. ಇದು ಶಿವನ ಶಿಲ್ಪವಾಗಿದ್ದು ಇದು ಚಂದ್ರಶೇಖರ ಶಿವನ ಶಿಲ್ಪವಾಗಿದೆ. ಅಂದರೆ ಶಿವನ ತಲೆಯಲ್ಲಿ ಗಂಗೆಯ ಬದಲು ಚಂದ್ರನನ್ನು ತಲೆಗೆ ಹೊಂದಿಕೊಂಡಂತೆ ಹಿಂದಿದೆ. ಜಟಾಮುಕುಟಧಾರಿಯಾಗಿರುವ ಶಿವನ ತಲೆಯ ಕೂದಲು ಎರಡೂ ಪಕ್ಕಗಳಲ್ಲಿ ಇಳಿಬಿದ್ದಿವೆ. ಚತುರ್ಭುಜನಾಗಿರುವ ಶಿವನ ಬಲಗೈ ಕಟ್ಯವಲಂಬಿತವಾಗಿದೆ. ಮೇಲಿನ ಎಡಗೈಯಲ್ಲಿ ಸರ್ಪವನ್ನು ಹಿಡಿದುಕೊಂಡಿದ್ದು ಅದರ ತಲೆಯು ಶಿವನ ಭುಜದ ಸಮೀಪದಲ್ಲಿ ಹೆಡೆಬಿಚ್ಚಿಕೊಂಡಿದೆ. ಉಳಿದಂತೆ ಶಿಲ್ಪದಲ್ಲಿ ಆಭರಣಗಳು, ಉದರಬಂಧ, ಸೊಂಟದಲ್ಲಿ ಮೇಖಲೆ, ಕುತ್ತಿಗೆಯಲ್ಲಿ ಎರಡು ಸುತ್ತಿನ ಹಾರ ಇತ್ಯಾದಿಗಳಿವೆ. ಇಲ್ಲಿ ಇನ್ನೊಂದು ವಿಶೇಷವೆಂದರೆ, ಶಿವನ ಎಡಗೈ ಸಾಮಾನ್ಯವಾಗಿ ಕಟ್ಯವಲಂಬಿತ ಆಗಿರುವುದರ ಬದಲು ಗದೆಯ ರೀತಿಯ ಆಯುಧವನ್ನು ಹಿಡಿದುಕೊಂಡಿದ್ದು ಇದರ ಕೈ ಭಾಗದಲ್ಲಿ ಹಿಡಿಕೆಯೂ ಇದೆ. ಸಾಮಾನ್ಯವಾಗಿ ಗದೆಗೆ ಹಿಡಿಕೆ ಇರುವುದಿಲ್ಲ. ಆದರೆ ಇಲ್ಲಿ ಇದನ್ನು ಸ್ಪಷ್ಟವಾಗಿ ಗಮನಿಸಬಹುದು. ತಲೆಯಲ್ಲಿ ದೊಡ್ಡದಾಗಿ ಚಂದ್ರನನ್ನು ಕೆತ್ತಲಾಗಿರುವುದು ಮಹತ್ತರ ಅಂಶ. ಇದರಿಂದಾಗಿ ಇಲ್ಲಿ ಚಂದ್ರಶೇಖರನನ್ನೇ ಗಮನ ಕೊಟ್ಟು ಕೆತ್ತಲಾಗಿದೆ ಎನ್ನಬಹುದು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಶಿಲ್ಪಗಳನ್ನು ಕಂಡರಿಸಿದ ಸ್ಥಪತಿಗಳು ಮತ್ತು ಶಿಲ್ಪಗಳ ಹೆಸರುಗಳನ್ನು ಅವುಗಳ ಮೇಲೆ ಕೆತ್ತಿರುವುದನ್ನು

೬೧. ಎನ್. ಶಿವಾನಂದ ಸಾತಿಹಾಳ : ಬಾದಾಮಿ ಪರಿಸರದ ಮಹಾಕೂಟ : ಒಂದು ಅಧ್ಯಯನ, (ಬಿ.ವಿ.ಎ. ಕಿ.ಯೋ.ವ) ಪು – ೧೬



ಕಾಣಬಹುದು. ಅದರಲ್ಲೂ ಸರ್ವಸಿದ್ಧಿ ಆಚಾರ್ಯ, ರೇವಡಿ, ಓವಜ್ಜ, ಗುಂಡ ಅನಿವಾರಿತಾಚಾರಿ, ಆರ್ಯಪಿನ್ವಿ, ಉಪಾಧ್ಯಾಯ, ನರಸೊಬ್ಬ, ಪಾಕ, ಬಲದೇವ, ಆದಿತ್ಯ, ಚೆಂಗಮ್ಮ, ದಾಮೋದರ ಮುಂತಾದವರಿದ್ದಾರೆ. ಹೆಚ್ಚಾಗಿ ದೇವಾಲಯಗಳ ಕಂಬಗಳ ಮೇಲೆ, ಪೀಠಗಳಲ್ಲಿ ಶಿಲ್ಪಗಳು ನೋಡಲು ಸಿಗುತ್ತವೆ. ಪಾಪನಾಥ ದೇವಾಲಯದ ಹೊರಭಿತ್ತಿಯಲ್ಲಿರುವ ಶಾಸನಗಳನ್ನು ಗಮನಿಸಬಹುದು.

ಶಿವನ ಹಲವಾರು ರೂಪಗಳಲ್ಲಿ ಶಿವನ ಭಿಕ್ಷಾಟನೆ ಮೂರ್ತಿಯೂ ಒಂದು. ಶಿವನು ಬ್ರಹ್ಮನ ಕಪಾಲವನ್ನು ಕೀಳಲು ಹೋದಾಗ ಅದು ಶಿವನ ಕೈಯನ್ನೇ ಕಚ್ಚಿ ಹಿಡಿದುಕೊಂಡ ಪ್ರಸಂಗ ಶಿವಪುರಾಣದಲ್ಲಿ ಬರುತ್ತದೆ. ಈ ಕಥೆಯಲ್ಲಿ ಬರುವ ಶಿವನ ಶಿಲ್ಪವು ಮಹಾಕೂಟದ ಮಹಾಕೂಟೇಶ್ವರ, ಆಲಂಪುರದ ವಿಶ್ವಬ್ರಹ್ಮ ದೇವಾಲಯ, ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿಗಳಲ್ಲಿ ದ್ವಿಭುಜ ಬಿಕ್ಷಾಟನ ಶಿವನ ಶಿಲ್ಪಗಳಿದ್ದರೆ,ಪಟ್ಟದಕಲ್ಲಿನ ವಿರೂಪಾಕ್ಷ, ಪಾಪನಾಥ ದೇವಾಲಯದ ಭಿತ್ತಿಗಳಲ್ಲಿ ಚತುರ್ಭುಜ ಭಿಕ್ಷಾಟನ ಶಿವನ ಶಿಲ್ಪಗಳಿವೆ.

ಹೀಗೆ ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾದ ಶಿಲ್ಪಗಳಲ್ಲಿ ಬಹಳಷ್ಟು ವಿಶೇಷತೆಗಳು ಕಂಡುಬರುತ್ತವೆ. ಮುಖ್ಯವಾಗಿ ಅವರ ಶಿಲ್ಪಗಳಲ್ಲಿ ವೈವಿಧ್ಯವಿದೆ. ಒಂದೇ ವಸ್ತು ವಿಷಯವನ್ನು ಇಟ್ಟುಕೊಂಡು ಹಲವಾರು ವಿಭಿನ್ನತೆಯನ್ನು ಶಿಲ್ಪಗಳಲ್ಲಿ ತೋರಿಸಲು ಪ್ರಯತ್ನಿಸಿರುವುದನ್ನು ನಾವು ಇಲ್ಲಿ ಗಮನಿಸಬಹುದು.

ಮುಖ್ಯವಾಗಿ ಶಿವನಿಗೆ ಸಂಬಂಧಿಸಿದ ಶಿಲ್ಪಗಳನ್ನು ನಾವು ನೋಡಿದಾಗ ಈ ವಿಷಯವು ಮನದಟ್ಟಾಗುತ್ತದೆ. ಇಲ್ಲಿ ಶಿವನ ವಿವಿಧ ರೂಪಗಳನ್ನು, ಅವನ ಲೀಲೆಗಳನ್ನು, ಅವರು ಕೆತ್ತಿದ ರೀತಿಯನ್ನು ಗಮನಿಸಿದರೆ ಆಶ್ಚರ್ಯವಾಗದಿರದು. ಕೇವಲ ನಟರಾಜನ ಶಿಲ್ಪವನ್ನೆ ಗಮನಿಸಿದರೂ ಇಲ್ಲಿ ವಿಭಿನ್ನ ಬಗೆಯನ್ನು ನೋಡಲು ಸಾಧ್ಯವಾಗುತ್ತದೆ. ಅಂದರೆ ಪ್ರತಿಯೊಬ್ಬ ಶಿಲ್ಪಿಯೂ ಶಿಲ್ಪವನ್ನು ಕೆತ್ತುವ ಸಂದರ್ಭದಲ್ಲಿ ಅಂಗಪ್ರಮಾಣವನ್ನು ಮತ್ತು ಶಿಲ್ಪಸೂತ್ರಗಳನ್ನು ಪಾಲಿಸಿ ತನ್ನದೇ ಆದ ವೈಯಕ್ತಿಕ ಶೈಲಿಯನ್ನು ಬಿಟ್ಟುಕೊಟ್ಟಿಲ್ಲ. ಅಲ್ಲದೆ ಇಲ್ಲಿಯ ಎಲ್ಲ ಶಿಲ್ಪಗಳನ್ನು ನುರಿತ ಕಲಾವಿದರೆ ಕೆತ್ತಿದರೆಂದು ಹೇಳಲು ಬರುವುದಿಲ್ಲ. ಕೆಲವು ಶಿಲ್ಪಗಳನ್ನು ಅಭ್ಯಾಸಿಗರು ಕೆತ್ತಿರುವುದಾಗಿದೆ. ಕೆಲ ಶಿಲ್ಪಗಳನ್ನು ಒಬ್ಬರೆ ಕೆತ್ತಿರಬಹುದಾಗಿದೆ. ಒಟ್ಟಿನಲ್ಲಿ ಇಲ್ಲಿನ ಶಿಲ್ಪಗಳು ಅಧ್ಯಯನ ಮಾಡಬಯಸುವ ವಿದ್ಯಾರ್ಥಿಗಳಿಗೆ ಉತ್ತಮ ಆಕರಗಳಾಗಿವೆ ಎನ್ನಬಹುದು.

ಇಲ್ಲಿ ಹೇಳಬೇಕಾದ ಇನ್ನೊಂದು ಮಾತೆಂದರೆ, ಈ ಅಧ್ಯಾಯದಲ್ಲಿ ಉಲ್ಲೇಖಿಸಲಾದ ಶಿಲ್ಪಗಳು ಕೆಲವು ಮಾತ್ರ. ಬಹಳಷ್ಟು ಶಿಲ್ಪಗಳು ಇಲ್ಲಿ ಇವೆ, ಕೇವಲ ಕೆಲವೇ ಕೆಲವು ಮುಖ್ಯವಾದ ಶಿಲ್ಪಗಳನ್ನು ಪ್ರಾತಿನಿಧಿಕವಾಗಿ ಆಯ್ದುಕೊಂಡು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇನ್ನೂ ಕೆಲವಾರು ಶಿವನ ಶಿಲ್ಪಗಳು, ಶಿವನ ಒಂಟಿ ಶಿಲ್ಪಗಳು ಮತ್ತು ಹಲವಾರು ಸಣ್ಣ ಶಿಲ್ಪಗಳು ಬಹಳಷ್ಟಿವೆ. ಆದರೆ ತಮ್ಮ ಗಾತ್ರ ಮತ್ತು ವೈಶಿಷ್ಟ್ಯಗಳಿಂದಾಗಿ ಗಮನ ಸೆಳೆಯುವ ಶಿಲ್ಪಗಳನ್ನು



ಆಧಾರವಾಗಿರಿಸಿಕೊಂಡು ಚರ್ಚಿಸಲಾಗಿದೆ. ಉಳಿದಂತೆ ಮುಂದಿನ ಅಧ್ಯಾಯಗಳಲ್ಲಿ ಸಂಕೀರ್ಣ ಶಿಲ್ಪಗಳ ಸಂದರ್ಭದಲ್ಲಿ ಇವುಗಳ ಕುರಿತಾಗಿ ಚರ್ಚಿಸಲಾಗುತ್ತದೆ. ಇಲ್ಲಿಯ ಶಿಲ್ಪಗಳ ಕುರಿತಾಗಿ ಎಷ್ಟು ಮಾತನಾಡಿದರೂ ಮುಗಿಯುವುದಿಲ್ಲ. ಆದರೂ ಅಗತ್ಯವಾದ ಕೆಲವು ಶಿಲ್ಪಗಳನ್ನು ಆಧಾರವಾಗಿರಿಸಿಕೊಂಡು ಬಾದಾಮಿಯ ಶೈವ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಗಂಗಾಧರ ಶಿಲ್ಪಗಳು



ಶಿಲ್ಪ-೧. ರಾವಳಫಡಿ ಗುಹಾಲಯ, ಐಹೊಳೆ



ಶಿಲ್ಪ-೨. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು

ಲಿಂಗೋದ್ಭವ ಶಿಲ್ಪಗಳು




ಶಿಲ್ಪ-೧. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಚತುರ್ಮುಖಲಿಂಗ



ಪುಷ್ಕರಣಿಯ ಮಂಟಪದಲ್ಲಿ, ಮಹಾಕೂಟ



ಅಧ್ಯಾಯ : ನಾಲ್ಕು

ಬಾದಾಮಿ ಚಾಲುಕ್ಯರ ಕಾಲದ ವೈಷ್ಣವ ಶಿಲ್ಪಗಳು

ಉತ್ತರ ಭಾರತದಲ್ಲಿ ಗುಪ್ತರು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ವಿವಿಧ ರಾಜವಂಶಜರು ವಿಂಧ್ಯ ಪರ್ವತದ ಕೆಳಭಾಗವನ್ನು ಆಳುತ್ತಿದ್ದರು. ಅವುಗಳಲ್ಲಿ ಮುಖ್ಯವಾಗಿ ಕದಂಬರು, ಗಂಗರು, ಅಳುಪರು, ಚೇರರು, ಪಾಂಡ್ಯರು ಮತ್ತು ಪಲ್ಲವರು ಕಂಡುಬರುತ್ತಾರೆ. ಇವರಲ್ಲಿ ಸಾಮಾನ್ಯವಾಗಿ ಯುದ್ಧಗಳು, ಮೇಲಾಟಗಳು ನಡೆಯುತ್ತಿದ್ದವು. ಆದರೂ ಒಟ್ಟು ಭಾರತದ ದಕ್ಷಿಣಭಾಗದಲ್ಲಿ ಆಗ ಪ್ರಬಲರಾಗಿದ್ದವರೆಂದರೆ ಬನವಾಸಿಯ ಕದಂಬರೆ ಸೈ. ಇವರ ಮಾಂಡಲಿಕರಾಗಿದ್ದ ಚಾಲುಕ್ಯರು ನಂತರ ಸ್ವತಂತ್ರರಾಗಿ ಬಾದಾಮಿಯನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಲು ಪ್ರಾರಂಭ ಮಾಡಿದರು.

ಕೀರ್ತಿವರ್ಮನ ಕಾಲದಿಂದಲೂ ಚಾಲುಕ್ಯರು ತಮ್ಮ ಪ್ರಾಬಲ್ಯವನ್ನು ತೋರಿಸುತ್ತಾ ಬಂದವರು. ಇಂತಹ ಚಾಲುಕ್ಯರು ದೈವಭಕ್ತರಾಗಿದ್ದುದರಿಂದ ತಮ್ಮ ಆಡಳಿತಕಾಲದಲ್ಲಿ ವಿವಿಧ ಧರ್ಮಗಳಿಗೆ ಪ್ರೋತ್ಸಾಹವನ್ನು ನೀಡಿ, ಆ ಧರ್ಮಗಳ ಆರಾಧನೆಗಳಿಗೆ ಮನ್ನಣೆ ನೀಡುತ್ತಾ ಬಂದರು. ಅಂದಿನ ಕಾಲದಲ್ಲಿ ರೂಢಿಯಲ್ಲಿದ್ದ ಬೌದ್ಧ, ಜೈನ, ಶೈವ, ವೈಷ್ಣವ ಹೀಗೆ ಎಲ್ಲ ಧರ್ಮಗಳ ಪೂಜಾಸ್ಥಳಗಳನ್ನು ಅಭಿವೃದ್ಧಿಪಡಿಸಲು ಸಹಕರಿಸಿದರು. ಇಂತಹ ಸಂದರ್ಭದಲ್ಲಿಯೇ ಬಾದಾಮಿಯ ವಿವಿಧ ಗುಹಾಂತರ ದೇವಾಲಯಗಳ ರಚನೆಯಾದವು. ಆದರೆ ತಮ್ಮ ವೈಯಕ್ತಿಕ ಆಚರಣೆಯಲ್ಲಿ ಇವರು ವೈಷ್ಣವ ಧರ್ಮೀಯರಾಗಿದ್ದರೂ ಕೂಡಾ ಇತರ ಧರ್ಮಗಳನ್ನು ಕಡೆಗಣಿಸಲಿಲ್ಲ. ಆದುದರಿಂದಲೆ ಇವರ ಕಾಲದಲ್ಲಿ ಬಾದಾಮಿಯ ಮೊದಲ ಶೈವಗುಹಾಲಯ ನಿರ್ಮಾಣವಾಯಿತು. ಇದರ ಕಾಲವು ಅಸ್ಪಷ್ಟವಾಗಿದ್ದರೂ ಇದೇ ಮೊದಲ ನಿರ್ಮಾಣವೆಂದು



ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಮೂರನೆಯ ಗುಹೆಯ ರಚನೆಯಾದ ಕಾಲಮಾನದ ಸ್ಪಷ್ಟ ದಾಖಲೆಗಳು ಲಭ್ಯವಿರುವುದರಿಂದ ಮೊದಲಿನ ಗುಹಾಲಯಗಳ ರಚನೆಯನ್ನು ಊಹೆ ಮಾಡಲಷ್ಟೇ ಸಾಧ್ಯವಾಗಿದೆ. ಆದರೂ ಅವರ ಕಾಲದಲ್ಲಿ ರಚನೆಯಾದ ಎರಡನೆಯ ಮತ್ತು ಮೂರನೆಯ ಗುಹಾಲಯಗಳ ಆಧಾರದಿಂದ ಹೇಳುವುದಾದರೆ ಅವರು ವೈಷ್ಣವ ಧರ್ಮಕ್ಕೆ ವೈಯಕ್ತಿಕವಾಗಿ ಹೆಚ್ಚಿನ ಮಹತ್ವವನ್ನು ನೀಡಿದ್ದರೆ ಆಶ್ಚರ್ಯವಿಲ್ಲ.

ಇದಲ್ಲದೆ ಅಂದಿನ ಕಾಲದಲ್ಲಿ ಹಲವಾರು ವೈಷ್ಣವ ದೇವಾಲಯಗಳು ನಿರ್ಮಾಣವಾಗಿದ್ದು ಮುಂದಿನ ದಿನಗಳಲ್ಲಿ ಅವು ಶೈವ ದೇವಾಲಯಗಳಾಗಿ ಮಾರ್ಪಾಡು ಹೊಂದಿದವೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. 'ಬಾದಾಮಿಯ ನಾಲ್ಕು ದೇವಾಲಯಗಳಲ್ಲಿ ಎರಡು ಶಿವನಿಗೆ ಅರ್ಪಿತವಾಗಿವೆ. ಮೇಲಣ ಶಿವಾಲಯವು ಮೂಲತಃ ವಿಷ್ಣು ದೇವಾಲಯವಾಗಿತ್ತು. ಸೂರ್ಯ ದೇವಾಲಯವಾಗಿದ್ದ ಮಾಲೆಗಿತ್ತಿ ಶಿವಾಲಯದಲ್ಲಿ ವಿಷ್ಣುವಿಗ್ರಹಗಳಿವೆ. ಎಂದು ಹಿಂದಿನ ಅಧ್ಯಾಯಗಳಲ್ಲಿ ಹೇಳಲಾಗಿದೆ. 'ಬಾದಾಮಿಯ ಬೆಟ್ಟವನ್ನು ಕೊರೆದು ಮೊದಲ ಎರಡು ಗುಹಾಲಯಗಳನ್ನು – ಒಂದು ಶೈವ, ಇನ್ನೊಂದು ವೈಷ್ಣವ– ನಿರ್ಮಿಸಿದವನು ಮೊದಲನೆಯ ಪುಲಿಕೇಶಿ ಎಂದು ತೋರುತ್ತದೆ.[೧] ಮೂರನೆಯ ವೈಷ್ಣವ ಗುಹಾಲಯ ಕಿ.ಶ. ೫೭೮ ರಲ್ಲಿ ಚಾಲುಕ್ಯ ದೊರೆಯಾದ ಮಂಗಲೇಶ ಕಟ್ಟಿಸಿದನೆನ್ನಲು ಶಾಸನಾಧಾರವಿದೆ.[೨] ಇದು (ಮೂರನೇ ಗುಹೆ) ಚಾಲುಕ್ಯರ ಕಾಲದ ಬಹು ದೊಡ್ಡ ಗುಹಾಲಯವಾಗಿದೆ.

ಬಾದಾಮಿಯ ಎರಡನೆಯ ಮತ್ತು ಮೂರನೆಯ ಗುಹಾಲಯಗಳು ವೈಷ್ಣವ ಗುಹಾಲಯಗಳಾಗಿದ್ದು ಜಗದ್ವಿಖ್ಯಾತವಾಗಿವೆ. ಅಲ್ಲದೆ ಇತರ ಹಲವಾರು ವಿಷ್ಣುವಿಗೆ ಸಂಬಂಧಿಸಿದ ದೇವಾಲಯಗಳೂ ಇವೆ. ಇದಲ್ಲದೆ ಹಿಂದೆ ಹಲವಾರು ದೇವಾಲಯಗಳು ವೈಷ್ಣವ ದೇವಾಲಯಗಳಾಗಿದ್ದು ನಂತರದ ದಿನಗಳಲ್ಲಿ ಕಾರಣಾಂತರಗಳಿಂದ ಶೈವ ದೇವಾಲಯಗಳಾಗಿ ಬದಲಾದ ಉದಾಹರಣೆಗಳು ಕಂಡುಬಂದಿವೆ.

'ಬಾದಾಮಿಯ ಉತ್ತರ ಗುಡ್ಡದ ತುತ್ತ ತುದಿಯ ಮೇಗಣ ಶಿವಾಲಯವು ಮೂಲತಃ ವೈಷ್ಣವ ದೇವಾಲಯವಾಗಿದೆ. ಗುಡಿಯ ಹೊರಗೋಡೆಯ ಮೇಲೆ ಗೋವರ್ಧನ ಗಿರಿಧಾರಿ, ಕಾಳೀಯ ಮರ್ದನ, ನರಸಿಂಹ ಶಿಲ್ಪಗಳು ಪ್ರಧಾನವಾದವುಗಳು. ಜೊತೆಗೆ ಅಧಿಷ್ಠಾನದ ಕೆಳ ಭಾಗದಲ್ಲಿ ಶ್ರೀ ಕೃಷ್ಣ ಚರಿತ್ರೆಯ ಸನ್ನಿವೇಶಗಳನ್ನು ಕಂಡರಿಸಲಾಗಿದೆ. ಹೀಗೆ ರಾಚನಿಕ ಮಂದಿರಗಳ ಅಧಿಷ್ಠಾನದಲ್ಲಿ ಮತ್ತು ಗುಹಾ ದೇವಾಲಯಗಳ ತೊಲೆಗಳ ಮೇಲೆ ಕೆತ್ತಲಾದ ಕೃಷ್ಣ ಲೀಲೆಯ ದೃಶ್ಯಗಳು ಹರಿವಂಶ, ವಿಷ್ಣುಪುರಾಣಗಳ ಪರಂಪರೆಯಲ್ಲಿರುವುದನ್ನು ಶ್ರೀನಿವಾಸ ಪಾಡಿಗಾರ ಅವರು ಗುರುತಿಸಿದ್ದಾರೆ. ಗಜೇಂದ್ರಮೋಕ್ಷ ಮೊದಲಾದ ಕೆಲವು ಕಥಾ ಪ್ರಸಂಗಗಳು ಬಾದಾಮಿಯಲ್ಲಿ

೦೧. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ– ೫೫

೦೨. ಎಚ್ಚೆಸ್ಕೆ (ಸಂ.) : ಅವಲೋಕನ ಕರ್ನಾಟಕದ ಪರಂಪರೆಯ ಸಮೀಕ್ಷೆ ಪುಟ – ೧೦೦

ಕಾಣಿಸದೆ ಪಟ್ಟದಕಲ್ಲಿನಲ್ಲಿ ಕಾಣಿಸಿಕೊಂಡಿದ್ದು ಭಾಗವತಪರಂಪರೆಯು ನಂತರ ರೂಢಿಗತವಾಗಿರಬೇಕೆಂಬ ಅವರ ಅಭಿಪ್ರಾಯವನ್ನು ಒಪ್ಪಬಹುದಾಗಿದೆ.'[೩]

ಬಾದಾಮಿಯ ಚಾಲುಕ್ಯರ ಕಾಲದ ವೈಷ್ಣವ ಶಿಲ್ಪಗಳಲ್ಲಿ ಮುಖ್ಯವಾಗಿ ಕಂಡುಬರುವ ಶಿಲ್ಪಗಳು ಬಾದಾಮಿಯ ಎರಡನೆಯ ಮತ್ತು ಮೂರನೆಯ ಗುಹಾಲಯಗಳಲ್ಲಿರುವ ಶಿಲ್ಪಗಳು. ಇವುಗಳಲ್ಲಿ ಬೃಹದಾಕಾರದ ಶಿಲ್ಪಗಳು ಮತ್ತು ಮಧ್ಯಮ ಗಾತ್ರದ ಶಿಲ್ಪಗಳಿವೆ. ಸಣ್ಣ ಗಾತ್ರದ ಶಿಲ್ಪಗಳೂ ಇವೆ. ಇವಲ್ಲದೆ ಮೊದಲನೆಯ ಗುಹೆಯಲ್ಲಿಯೂ ಕೆಲ ಶಿಲ್ಪಗಳಿವೆ. ಇಲ್ಲಿನ ಶಿಲ್ಪಿಗಳ ಕೈಯಲ್ಲಿ ಬಾದಾಮಿಯ ಗುಡ್ಡದ ಕಠಿಣವಾದ ಮರಳುಗಲ್ಲೂ ಸಹ ಮೃದುವಾದ ಬೆಣ್ಣೆಯಂತೆ ಅಥವಾ ಮೇಣದಂತೆ ಉಪಯೋಗಿಸಲ್ಪಟ್ಟಿದೆ. ಆದ್ದರಿಂದ ಬಾದಾಮಿಯ ಗುಹಾಲಯಗಳನ್ನು ಮೇಣದ ಬಸದಿಯೆಂದು ಕರೆಯುತ್ತಾರೆ. ಬಾದಾಮಿಯ ಸುತ್ತಮುತ್ತಲಿನ ಪರಿಸರದಲ್ಲೆಲ್ಲ ವೈಷ್ಣವಧರ್ಮಕ್ಕೆ ಸಂಬಂಧಿಸಿದ ಹಲವಾರು ಶಿಲ್ಪಗಳು ಕಂಡುಬಂದಿವೆ. ಅಲ್ಲದೇ ಬೇರೆ ದೇವಾಲಯಗಳಲ್ಲಿ (ಶೈವ ಮತ್ತು ದೇವಿ ದೇವಾಲಯಗಳು), ಗೋಡೆಗಳಲ್ಲಿ, ಕಂಬಗಳಲ್ಲಿ, ಛತ್ತಿನಲ್ಲಿ ವಿಷ್ಣುವಿನ ವಿವಿಧ ಅವತಾರಗಳನ್ನು, ರಾಮಾಯಣ, ಮಹಾಭಾರತ, ಭಾಗವತದ ವಿವಿಧ ರೂಪಕಗಳನ್ನು, ಭಗವದ್ಗೀತೆಯ ವಿವಿಧ ದೃಶ್ಯಾವಳಿಗಳನ್ನು ಇಲ್ಲಿನ ಶಿಲ್ಪಗಳಲ್ಲಿ ಕಾಣಬಹುದು. ಹೀಗೆ ಚಾಲುಕ್ಯರ ಕಾಲದ ವೈಷ್ಣವ ಶಿಲ್ಪಗಳು ಗುಹೆಗಳಲ್ಲಿ ಮಾತ್ರವಲ್ಲದೇ ಇತರೆ ದೇವಾಲಯಗಳಲ್ಲಿಯೂ ಕಂಡುಬಂದಿದ್ದು, ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ರಾಚನಿಕ ದೇವಾಲಯಗಳು

ಬಾದಾಮಿ ಚಾಲುಕ್ಯರ ಕಾಲದ ವೈಷ್ಣವಧರ್ಮಕ್ಕೆ ಸಂಬಂಧಪಟ್ಟಂತಹ ಶಿಲ್ಪಗಳು ನಮಗೆ ಪ್ರಮುಖವಾಗಿ ಕಂಡುಬರುವುದು ಬಾದಾಮಿಯ ಎರಡು ಮತ್ತು ಮೂರನೆಯ ಗುಹಾಲಯದ ಕೆತ್ತನೆಗಳಲ್ಲಿ. ಇವು ಬೃಹದಾಕಾರದವುಗಳಾಗಿದ್ದು ಆಕರ್ಷಕ ಕೆತ್ತನೆಯಿಂದ ಕೂಡಿವೆ. ಇವಲ್ಲದೆ ರಾಚನಿಕ ದೇವಾಲಯಗಳಲ್ಲಿ ಕೆಲವೆಡೆ ವೈಷ್ಣವ ಶಿಲ್ಪಗಳು ಕಂಡುಬರುತ್ತವೆ. ಶಿವ ದೇವಾಲಯಗಳಲ್ಲಿಯೂ ಕೆಲವೆಡೆ ವಿಷ್ಣುವಿಗೆ ಸಂಬಂಧಿಸಿದ ಶಿಲ್ಪಗಳು ಕಾಣಿಸುತ್ತವೆ. ಇಂತಹವುಗಳು ಕಡಿಮೆಯಿದ್ದರೂ ಗಮನಾರ್ಹವಾದ ಶಿಲ್ಪಗಳಾಗಿವೆ. ಇತಿಹಾಸದ ಅಧ್ಯಯನಕ್ಕೆ ಸಂಬಂಧಿಸಿದಂತೆ ಇವುಗಳನ್ನು ನಾವು ನೋಡಬೇಕಾಗುತ್ತದೆ.

ಭೂತನಾಥ ದೇವಾಲಯ, ಬಾದಾಮಿ

ಬಾದಾಮಿಯ ಪರಿಸರದಲ್ಲಿರುವ ದೇವಾಲಯಗಳಲ್ಲಿ ಭೂತನಾಥ ದೇವಾಲಯ ಒಂದು. ಅಗಸ್ತ್ಯತೀರ್ಥದ ಪೂರ್ವದ ದಂಡೆಯ ಮೇಲಿರುವ ಗುಡಿಸಮುಚ್ಚಯದ ಪ್ರಧಾನ ದೇವಾಲಯವಿದು. ಇದನ್ನು ಭೂತೇಶ್ವರ ದೇವಾಲಯ ಎಂದು ಹೇಳಲಾಗುತ್ತದೆ. ಬಾದಾಮಿಯಲ್ಲಿ

೦೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೩೦–೧೩೧

ಚಾಲುಕ್ಯರು ಕಟ್ಟಿಸಿದ ಕೊನೆಯ ಗುಡಿ.[೪] ದೇವಾಲಯದಿಂದ ಮುಂದುವರಿದು ಹೋದಾಗ ಕಾಣಸಿಗುವ ಉತ್ತರದ ಗುಂಪಿನ ಭೂತನಾಥ ದೇವಾಲಯದ ಪಕ್ಕದಲ್ಲಿ ಹಾಗೂ ಅದರ ಹಿಂದೆ ರಾಷ್ಟ್ರಕೂಟಕಾಲದ ಮೂರು ಪುಟ್ಟ, ಸರಳ ದೇವಾಲಯಗಳಿವೆ. ಭಾಗಶಃ ರಾಚನಿಕವಾಗಿರುವ ಅನಂತಶಯನ ಗುಡಿಯು ಅಗಸ್ತ್ಯತೀರ್ಥದ ಪೂರ್ವದ ದಂಡೆಯ ಮೇಲಿದೆ. ಇದು ರಾಷ್ಟ್ರಕೂಟರ ಅವಧಿಯದು.[೫] ಸುಂದರವಾದ ಮುಖಮಂಟಪ, ಅಂತರಾಳ, ಗರ್ಭಗೃಹ ಇತ್ಯಾದಿಗಳನ್ನು ಹೊಂದಿರುವ ಈ ದೇವಾಲಯವು ನಂತರದ ದಿನಗಳಲ್ಲಿ ಹಲವಾರು ಪರಿವರ್ತನೆಗಳನ್ನು ಕಂಡಿದೆ. ಇವುಗಳು ಕೂಡಾ ಶೈವ ದೇವಾಲಯಗಳಾಗಿವೆ.

ಈ ದೇವಾಲಯಗಳ ಹಿಂಭಾಗದಲ್ಲಿ ಬೃಹದಾಕಾರದ ಬಂಡೆಯಿದ್ದು ಅಲ್ಲಿ ಕೆಲವು ಸುಂದರ ಶಿಲ್ಪಕಲಾಕೃತಿಗಳನ್ನು ಕೆತ್ತಲಾಗಿದೆ. ಇವುಗಳು ದೇವಾಲಯಗಳ ರಚನೆಯಲ್ಲದಿದ್ದರೂ ಬಿಡಿಯಾಗಿ ಬಂಡೆಯ ಗೋಡೆಯಲ್ಲಿ ಕೆತ್ತಲಾಗಿರುವ ಶಿಲ್ಪಗಳು. ಈ ಶಿಲ್ಪ ರಚನೆಯ ಉದ್ದೇಶವೆ ನಿಗೂಢವಾಗಿದೆಯೆನ್ನಬಹುದು. ಬಹುಶಃ ಇದನ್ನು ಅಭ್ಯಾಸಕ್ಕೆ ರಚನೆ ಮಾಡಿರಲೂಬಹುದು. ಯಾಕೆಂದರೆ ಈ ಶಿಲ್ಪಗಳು ಚಾಲುಕ್ಯರ ಕಾಲದ ರಚನೆಗಳೇ ಆಗಿದ್ದರೂ ಅಲ್ಲೇ ಸಮೀಪದ ಗುಹಾಲಯಗಳಲ್ಲಿನ ರಚನೆಗಿಂತ ಭಿನ್ನವಾಗಿವೆ. ಭೂತನಾಥ ದೇವಾಲಯದಿಂದ ಆಗ್ನೇಯ ದಿಕ್ಕಿನಲ್ಲಿ ಸಾಗಿದರೆ ಸಿಗುವ ಈ ಬೃಹತ್ ಬಂಡೆಯ ಮೇಲಿರುವ ಕೆತ್ತನೆಯ ಕಲಾಕೃತಿಯನ್ನು 'ಪಂಚಲಿಂಗ ಫಡಿ' ಎನ್ನುವರು. ಇಲ್ಲಿ ಕೆಲವು ಶಿಲ್ಪಗಳು ದ್ವಿಮಾನದಲ್ಲಿರುವುದನ್ನು ಕಾಣಬಹುದು.

ಮಹಾಕೂಟ ಪರಿಸರದಲ್ಲಿ ವೈಷ್ಣವ ಶಿಲ್ಪಗಳು

ಬಾದಾಮಿ ಚಾಲುಕ್ಯರ ಕಾಲದಲ್ಲಿ ಮೊದಲ ಹಂತದ ಅರಸರು ವೈಷ್ಣವ ಧರ್ಮೀಯರಾಗಿದ್ದುದರಿಂದ ಬಾದಾಮಿ ಮತ್ತು ಅದರ ಸುತ್ತಮುತ್ತಲು ಹಲವಾರು ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳು ಮತ್ತು ದೇವಾಲಯಗಳು ರಚನೆಯಾಗಿರುವುದನ್ನು ನಾವು ನೋಡಿದೆವು. ಆದರೆ ಮಹಾಕೂಟದ ಪರಿಸರದಲ್ಲಿಯೂ ಹಲವಾರು ವೈಷ್ಣವ ಶಿಲ್ಪಗಳು ರಚನೆಯಾಗಿರುವುದನ್ನು ನಾವು ಗಮನಿಸಬೇಕಾಗುತ್ತದೆ. ಮುಖ್ಯವಾಗಿ ಮಹಾಕೂಟವು ಶೈವ ಕ್ಷೇತ್ರವೆಂದು ಪ್ರಸಿದ್ಧಿಯಾಗಿದೆಯಾದರೂ ಇಲ್ಲಿಯೂ ಹಲವಾರು ವೈಷ್ಣವಶಿಲ್ಪಗಳಿವೆ. ಇದಕ್ಕೆ ಕಾರಣ ಶಿಲ್ಪರಚನೆಯ ವಿಚಾರ ಬಂದಾಗ ಇಲ್ಲಿನ ಶಿಲ್ಪಿಗಳು ಶೈವ ಮತ್ತು ವೈಷ್ಣವ ಎಂಬ ಭೇದವನ್ನು ಮಾಡದೆ ಎರಡೂ ಮತಗಳಿಗೆ ಒತ್ತು ನೀಡಿದ್ದಾರೆ. ಅದರಲ್ಲಿಯೂ ವಿಷ್ಣುವಿನ ಅವತಾರಗಳಲ್ಲಿ ಮುಖ್ಯವಾದ ವರಾಹ, ವಾಮನ ಮತ್ತು ನರಸಿಂಹಾವತಾರದ ಕಥಾನಕಗಳು ಈ ಕಲಾವಿದರಿಗೆ ಮೆಚ್ಚಿನ ವಸ್ತುವಾಗಿದ್ದುದನ್ನು ಗಮನಿಸಬಹುದು. ಆದುದರಿಂದ ಇಲ್ಲಿ ವರಾಹ ಮತ್ತು ಉಗ್ರನರಸಿಂಹನ ಶಿಲ್ಪಗಳನ್ನು ಕಲಾತ್ಮಕವಾಗಿ ಕೆತ್ತಲಾಗಿದ್ದು ಗಮನ ಸೆಳೆಯುತ್ತವೆ.

---

೧೪. ಡಾ. ಎ. ಮುರಿಗೆಪ್ಪ (ಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೪೯

೧೫. ಡಾ. ಎ. ಮುರಿಗೆಪ್ಪ (ಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೪೯



ಪಟ್ಟದಕಲ್ಲಿನಲ್ಲಿನ ವೈಷ್ಣವ ಶಿಲ್ಪಗಳು

ಬಾದಾಮಿಯು ಚಾಲುಕ್ಯರ ಆಡಳಿತಾತ್ಮಕ ರಾಜಧಾನಿಯಾಗಿದ್ದರೆ ಪಟ್ಟದಕಲ್ಲು ಚಾಲುಕ್ಯ ಅರಸರಿಗೆ ರಾಜ್ಯ ಪಟ್ಟಾಭಿಷೇಕ ಮಾಡುವ ಕೇಂದ್ರವಾಗಿದ್ದಿತು. ಇದರಿಂದಾಗಿ ಈ ಪ್ರದೇಶದಲ್ಲಿ ಚಾಲುಕ್ಯರ ವಿವಿಧ ರಾಜರ ಕಾಲದಲ್ಲಿ ಹಲವಾರು ದೇವಾಲಯಗಳು ನಿರ್ಮಾಣವಾಗಿವೆ. ಇವು ವಿವಿಧ ಮತ-ಧರ್ಮಗಳಿಗೆ ಸಂಬಂಧಿಸಿದವುಗಳಾಗಿದ್ದು ಎಲ್ಲಾ ಧರ್ಮಗಳು ಇಲ್ಲಿ ಅವಕಾಶ ಪಡೆದಿರುವುದನ್ನು ಗಮನಿಸಬಹುದು. ಆದರೂ ಇಲ್ಲಿನ ಹೆಚ್ಚಿನ ದೇವಾಲಯಗಳು ಶೈವ ಧರ್ಮಕ್ಕೆ ಸಂಬಂಧಪಟ್ಟವಾಗಿವೆ. ಇದಕ್ಕೆ ಕಾರಣ ಚಾಲುಕ್ಯರ ಎರಡನೆಯ ಹಂತದ ರಾಜರು ಶೈವ ಧರ್ಮಕ್ಕೆ ಮತಾಂತರ ಹೊಂದಿ ಆ ಧರ್ಮಕ್ಕೆ ಹೆಚ್ಚಿನ ಮನ್ನಣೆಯನ್ನು ಕೊಟ್ಟಿರುವುದಾಗಿದೆ. ಆದರೂ ಇಲ್ಲಿ ಕೆಲವು ವೈಷ್ಣವ ದೇವಾಲಯಗಳನ್ನು ಮತ್ತು ಹಲವಾರು ಮಧ್ಯಮಗಾತ್ರದ ವೈಷ್ಣವ ಶಿಲ್ಪಗಳನ್ನು ನಾವು ಕಾಣಬಹುದು.

ಪಾಪನಾಥ ದೇವಾಲಯದಲ್ಲಿನ ವೈಷ್ಣವ ಶಿಲ್ಪಗಳು

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಪರಿಸರದಲ್ಲಿ ಕೆಲ ವೈಷ್ಣವ ಶಿಲ್ಪಗಳಿರುವುದನ್ನು ಗಮನಿಸಬಹುದು. ಇಲ್ಲಿ ರಾಮಾಯಣದ ಕೆಲ ಶಿಲ್ಪಗಳು ಗಮನಾರ್ಹವಾಗಿವೆ. ಶಿಲ್ಪಗಳು ಭಗ್ನಗೊಂಡಿದ್ದರೂ ಶಿಲ್ಪಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಂತಹ ಕೆಲ ಶಿಲ್ಪಗಳಲ್ಲಿ ಮುಖ್ಯವಾದುದು ನರಸಿಂಹಾವತಾರಿವಿಷ್ಣು, ವರಾಹರೂಪಿವಿಷ್ಣು, ಗೋವರ್ಧನಗಿರಿಧಾರಿ ಕೃಷ್ಣನ ಕೆಲವು ಶಿಲ್ಪಗಳನ್ನು ಗುರುತಿಸಬಹುದು.

ಐಹೊಳೆಯಲ್ಲಿನ ವೈಷ್ಣವ ಶಿಲ್ಪಗಳು

ಐಹೊಳೆಯು ಭಾರತದ ಅತ್ಯಂತ ಪುರಾತನ ನಗರಗಳಲ್ಲಿ ಒಂದು. ಇತಿಹಾಸ ಪೂರ್ವಕಾಲದಲ್ಲಿಯೇ ಇಲ್ಲಿ ನಾಗರಿಕತೆ ಇತ್ತೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಪುರಾತನ ವಾಸ್ತು ಸಂಶೋಧನೆಗಳ ಮೂಲಕವೂ ಇಲ್ಲಿ ಹಳೆ ದೇವಾಲಯಗಳಿದ್ದುದು ದೃಢಪಟ್ಟಿದೆ. 'ಐಹೊಳೆಯ ಅಂಬಿಗೇರ ಗುಡಿಯ ಕೆಳಸ್ತರದಲ್ಲಿ ಶಾತವಾಹನರ ಕಾಲದ ಪಾತ್ರೆಗಳ ಚೂರುಗಳನ್ನು ಹಾಗೂ ಆಯತಾಕಾರ ತಲವಿನ್ಯಾಸದ ಇಟ್ಟಿಗೆ ದೇವಾಲಯವನ್ನು ಶೋಧಿಸಲಾಗಿದೆ'. ಇದರಿಂದಾಗಿ ಇಲ್ಲಿನ ಪ್ರಾಚೀನತೆ ತಿಳಿದುಬರುತ್ತದೆ. ಇದಲ್ಲದೆ ಇದೇ ಐಹೊಳೆಯ 'ಹುಚ್ಚಪ್ಪಯ್ಯನ ಮಠದ ಸಂಕೀರ್ಣದ ಅಗೆತದಲ್ಲಿ ಶಾತವಾಹನ ಕಾಲದ ನಾಣ್ಯಗಳೂ, ಮಣ್ಣಿನ ಪಾತ್ರೆಯ ಚೂರುಗಳೂ ಕಂಡುಬಂದಿವೆ. ನಾಣ್ಯಗಳು ಮೂರನೆಯ ಶತಮಾನದವೆಂದೂ, ಮಣ್ಣಿನ ಪಾತ್ರೆಗಳನ್ನು ಆಧರಿಸಿ ಲಾಡ್‌ಖಾನ್ ಗುಡಿಯ ತಳಪಾಯದ ಹತ್ತಿರ ಕಂಡುಬಂದ ಇಟ್ಟಿಗೆ ಗೋಡೆಯು ನಾಲ್ಕನೆಯ ಶತಮಾನದ್ದೆಂದೂ ಊಹಿಸಲಾಗಿದೆ'.[೬] ಇವುಗಳ ಆಧಾರದಿಂದ ಹೇಳುವುದಾದರೆ ಐಹೊಳೆಯು

೦೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬

ಪ್ರಾಚೀನ ನಾಗರಿಕತೆಗಳಲ್ಲಿ ಒಂದಾಗಿದ್ದು ಇಲ್ಲಿ ಚಾಲುಕ್ಯರಿಗಿಂತ ಪೂರ್ವದಲ್ಲಿಯೇ ದೇವಾಲಯಗಳು, ಮತ್ತಿತರ ಕಟ್ಟಡಗಳು ನಿರ್ಮಾಣವಾಗಿದ್ದಿರಲೇಬೇಕು. ಈಗಲೂ ಸಂಶೋಧನೆಗಳು ನಡೆದಂತೆ ಇಲ್ಲಿ ಚಾಲುಕ್ಯರಿಗಿಂತ ಪೂರ್ವಕಾಲದ ಅವಶೇಷಗಳು ಪತ್ತೆಯಾಗುತ್ತಲೇ ಇವೆ. ಇವುಗಳ ಆಧಾರದಿಂದ ಹೇಳಬಹುದಾದರೆ ಇಲ್ಲಿನ ಪ್ರದೇಶಗಳಲ್ಲಿ ಹಲವಾರು ದೇವಾಲಯಗಳು ನಿರ್ಮಾಣವಾಗಿದ್ದು, ಇವುಗಳಲ್ಲಿ ಮೊದಲು ಶೈವ ದೇವಾಲಯಗಳೇ ಹೆಚ್ಚಾಗಿದ್ದವು.

ಗಳಗನಾಥ ದೇವಾಲಯದ ಬಾಗಿಲಮೇಲೆ ಕಂಡುಬರುವ ಗರುಡನ ಶಿಲ್ಪವನ್ನು ನೋಡಬಹುದು. ಸಾಮಾನ್ಯವಾಗಿ ಗರುಡನ ಶಿಲ್ಪವು ಬಾಗಿಲ ಮೇಲೆ ಕಂಡುಬರುವುದು ವೈಷ್ಣವ ದೇವಾಲಯಗಳಲ್ಲಿ ಸಾಮಾನ್ಯ. ಅದೇ ರೀತಿ ಶೈವ ದೇವಾಲಯದ ಗೋಡೆಗಳಲ್ಲಿ ನಂದಿಯ ಶಿಲ್ಪವಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಇಲ್ಲಿಯೂ ವೈಷ್ಣವ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣವಾಗಿರಲೇಬೇಕು. ಇಲ್ಲಿನ ದೇವಾಲಯಗಳಲ್ಲಿ ಹಲವಾರು ಸುಂದರವಾದ ವೈಷ್ಣವ ಶಿಲ್ಪಗಳು ರಚನೆಯಾಗಿರುವುದನ್ನು ಗಮನಿಸಬಹುದು. ಇವುಗಳಲ್ಲಿ ಕೆಲವು ಶಿಲ್ಪಗಳು ಪೂರ್ವ ಚಾಲುಕ್ಯರ ಕಾಲದ ರಚನೆಗಳಾದರೆ, ಕೆಲವು ಏಳು ಮತ್ತು ಎಂಟನೆಯ ಶತಮಾನದಲ್ಲಿ ರಚನೆಯಾಗಿರುವ ಶಿಲ್ಪಗಳಿವೆ.

ಲಾಡ್‌ಖಾನ್ ದೇವಾಲಯದ ಶಿಲ್ಪಗಳು

ಲಾಡ್‌ಖಾನ್ ದೇವಾಲಯವು ಇಲ್ಲಿನ ದೇವಾಲಯಗಳಲ್ಲೆಲ್ಲ ಅತ್ಯಂತ ಪುರಾತನವಾದ ರಚನೆಯೆಂದು ಇತ್ತೀಚಿನವರೆಗೂ ಗುರುತಿಸಲಾಗುತ್ತಿತ್ತು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಆ ಪ್ರದೇಶದಲ್ಲಿ ಅದಕ್ಕಿಂತಲೂ ಹಿಂದಿನ ರಚನೆಗಳಿದ್ದುವೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಲಾಡ್‌ಖಾನ್ ಎಂದು ಕರೆಯಲಾಗುವ ಈ ಹೆಸರಿಗೆ ಯಾವುದೇ ಶಾಸನಾಧಾರವಿಲ್ಲ. ಬಹುಶಃ ಲಾಡ್‌ಖಾನ್ ಎಂಬುವನು ಇಲ್ಲಿ ವಾಸವಾಗಿದ್ದಿರಬಹುದೆಂದು ಕಾಣುತ್ತದೆ.[೭] ಅದೇನೇ ಇದ್ದರೂ ಅಲ್ಲಿನ ದೇವಾಲಯವೂ ಶೈವಮತಕ್ಕೆ ಸಂಬಂಧಿಸಿದ್ದೆಂಬುದು ಸತ್ಯ. ಹಾಗಿದ್ದರೂ ಅಲ್ಲಿ ಕೆಲವು ಶಿಲ್ಪಗಳು ವೈಷ್ಣವಧರ್ಮಕ್ಕೆ ಸಂಬಂಧಪಟ್ಟಂತೆ ರಚನೆಯಾಗಿರುವುದನ್ನು ಗಮನಿಸಬಹುದು. ಆದರೆ ಇಲ್ಲಿ ಶೈವ–ವೈಷ್ಣವ ಎಂಬ ಭಿನ್ನತೆಗೆ ಅವಕಾಶವಿಲ್ಲ. ಹಿಂದೂ ಧರ್ಮಕ್ಕೆ ಸಂಬಂದಿಸಿದ ಶಿಲ್ಪಗಳನ್ನಿಲ್ಲಿ ಕೆತ್ತಲಾಗಿದೆ ಎಂಬುದನ್ನಷ್ಟೇ ಗಮನಿಸಬೇಕಾಗುತ್ತದೆ. ಇಲ್ಲಿನ ಕೆಲವು ಶಿಲ್ಪಗಳು ಗುರುತು ಸಿಗದಷ್ಟು ಮಾಸಿಹೋಗಿದ್ದರೆ ಇನ್ನು ಕೆಲವು ಸಂಕೀರ್ಣತೆಯಿಂದ ಕೂಡಿದ್ದು ಗುರುತಿಸಲು ಸಾಧ್ಯವಾಗುವುದಿಲ್ಲ. ಕೆಲವು ಶಿಲ್ಪಗಳು ಭಗ್ನಗೊಂಡಿವೆ. ಹೀಗೆ ಅಳಿದುಳಿದ ಶಿಲ್ಪಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಈ ಶಿಲ್ಪಗಳ ಆಧಾರದಿಂದ ಇಲ್ಲಿನ ಶಿಲ್ಪಗಳ ಒಟ್ಟು ಕೆತ್ತನೆಯನ್ನು ಗಮನಿಸಬಹುದು.

೦೭. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ ಸಂಸ್ಕೃತಿ, ಪುಟ – ೨೧೮



ದುರ್ಗಾ ದೇವಾಲಯದ ಶಿಲ್ಪಗಳು

ಇಲ್ಲಿ ವಿಷ್ಣುವಿನ ನರಸಿಂಹಾವತಾರದ ಸುಂದರ ದೃಶ್ಯಗಳು ಕೆತ್ತಲ್ಪಟ್ಟಿವೆ. ಮುಖ್ಯವಾಗಿ ರಾಕ್ಷಸನ ಸಂಹಾರದ ಶಿಲ್ಪವು ಜೀವಂತಿಕೆಯಿಂದ ಕೂಡಿದೆ. ಇಲ್ಲಿ ನರಸಿಂಹನ ಎರಡು ಮುಖ್ಯ ಶಿಲ್ಪಗಳಲ್ಲದೆ ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಒಂದು ಶಿಲ್ಪವೂ ಇದೆ. ಸುಂದರವಾದ ಕೆತ್ತನೆಯನ್ನು ಹೊಂದಿರುವ ಇಲ್ಲಿನ ಶಿಲ್ಪಗಳು ಆಕರ್ಷಕವಾಗಿವೆ. ಇದಲ್ಲದೆ ಮಹಿಷಾಸುರಮರ್ದಿನಿ, ಅರ್ಧನಾರೀಶ್ವರ ಮುಂತಾದ ಇನ್ನೂ ಹಲವಾರು ಶಿಲ್ಪಗಳಿವೆ. ಚಾಲುಕ್ಯ ಶಿಲ್ಪಕಲೆಯ ಸೌಂದರ್ಯವನ್ನು ಸವಿಯಬೇಕಾದರೆ ಬಾದಾಮಿಯ ಗುಹಾಲಯದ ಕೆತ್ತನೆಗಳ ನಂತರ ಇಲ್ಲಿನ ಶಿಲ್ಪಗಳನ್ನು ನೋಡಬೇಕೆನಿಸುತ್ತದೆ.

ಗಳಗನಾಥ ದೇವಾಲಯ

ಚಾಲುಕ್ಯರ ಕಾಲದಲ್ಲಿನ ಎರಡನೆಯ ಹಂತದ ರಚನೆಗಳಲ್ಲಿ ಕಂಡುಬರುವ ವೈಷ್ಣವ ಶಿಲ್ಪಗಳಲ್ಲಿ ದುರ್ಗಾಗುಡಿಯ ಶಿಲ್ಪಗಳು, ರಾವಳಫಡಿ ಗುಹಾಲಯದ ಶಿಲ್ಪಗಳ ನಂತರ ಕುತೂಹಲಕಾರಿಯಾದ ಕೆಲ ಶಿಲ್ಪಗಳು ಗಳಗನಾಥ ಗುಡಿಯ ಆವರಣದಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಒಂದು, ವಿಷ್ಣುವು ಸಮಭಂಗಿಯಲ್ಲಿ ನಿಂತಿರುವ ಆರಾಧನಾ ರೀತಿಯ ಶಿಲ್ಪವಾಗಿದ್ದರೆ, ಇನ್ನೊಂದು ವಿಷ್ಣುವು ಆಸೀನ ಭಂಗಿಯಲ್ಲಿರುವ ಉಬ್ಬುಶಿಲ್ಪ, ಒಂದು ಗರುಡನ ಶಿಲ್ಪ. ಹೀಗೆ ನೋಡಿದರೆ ಕೆಲ ಸುಂದರವಾದ ಶಿಲ್ಪಗಳು ಇಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಗಮನ ಸೆಳೆಯುವಂತಹ ಒಂದು ಶಿಲ್ಪ ವಿಷ್ಣುವು ಸುಖಾಸೀನನಾಗಿರುವ ಉಬ್ಬು ಶಿಲ್ಪ. ಇಲ್ಲಿ ವಿಷ್ಣುವು ಕೇಂದ್ರಬಿಂದುವಾಗಿದ್ದಾನೆ. ಗರುಡನು ಅವನ ಕೆಳಭಾಗದಲ್ಲಿ ವಿನೀತನಾಗಿ ಕೈಮುಗಿದು ಕುಳಿತಿದ್ದಾನೆ. ಸುತ್ತಲೂ ದೇವತೆಗಳು ಮತ್ತು ಯಕ್ಷರು ಆಕಾಶದಲ್ಲಿ ಹಾರಾಡುತ್ತಿದ್ದಾರೆ. ಎಲ್ಲರೂ ವಿಷ್ಣುವಿಗೆ ಶುಭಹಾರೈಸುವಂತೆ ಕಂಡುಬರುತ್ತಿದ್ದಾರೆ.

ಐಹೊಳೆಯ ಪರಿಸರದಲ್ಲಿ ಹಲವಾರು ಸುಂದರವಾದ ದೇವಾಲಯಗಳು ಮತ್ತು ಅವುಗಳಲ್ಲಿ ಹಲವಾರು ಸುಂದರವಾದ ಕೆತ್ತನೆಯುಳ್ಳ ಶಿಲ್ಪಗಳು ಚಾಲುಕ್ಯರ ಕಾಲದಲ್ಲಿ ಬೇರೆ ಬೇರೆ ರಾಜರ ಆಡಳಿತದ ಕಾಲದಲ್ಲಿ ಕೆತ್ತಲ್ಪಟ್ಟಿವೆ. ಶೈವ, ವೈಷ್ಣವ, ಜೈನ, ಮತ್ತು ಬೌದ್ಧ ಧರ್ಮಗಳಿಗೆ ಸಂಬಂಧಿಸಿದಂತೆ ಮಹಿಷಾಸುರಮರ್ದಿನಿ, ಅರ್ಧನಾರೀಶ್ವರ, ಹರಿಹರ, ಗಣೇಶ, ಹೀಗೆ ಹಲವಾರು ಶಿಲ್ಪಗಳಿವೆ. ಇವುಗಳು ಬೇರೆ ಬೇರೆ ಹಂತಗಳಲ್ಲಿ ರಚನೆಯಾಗಿದ್ದು ಕೆಲವು ಕಲಾತ್ಮಕವಾಗಿದ್ದರೆ, ಕೆಲವು ಕೇವಲ ಶಿಲ್ಪಗಳಂತಿವೆ. ಮಧ್ಯಮಗಾತ್ರದ ಶಿಲ್ಪಗಳು ಹೆಚ್ಚಾಗಿ ಇಲ್ಲಿ ರಚನೆಯಾಗಿದ್ದು, ಎಲ್ಲವೂ ಒಂದೇ ಶೈಲಿಯಲ್ಲಿಲ್ಲ. ಶಿಲ್ಪಕಲಾ ಅಭ್ಯಾಸಿಗರಿಗೆ ಮತ್ತು ಕಲಾ ಇತಿಹಾಸದ ಬಗ್ಗೆ ಒಳ್ಳೆಯ ಸಾಮಗ್ರಿಯನ್ನು ಒದಗಿಸುವ ಇಲ್ಲಿನ ಶಿಲ್ಪಗಳನ್ನು ನೋಡುತ್ತ ಹೋದಂತೆಲ್ಲ ವಿವಿಧ ಸಾಧ್ಯತೆಗಳ ಕುರಿತಾಗಿ ಯೋಚನೆ ಮಾಡುವಂತಹ ಅವಕಾಶವನ್ನು



ಇಲ್ಲಿನ ಶಿಲ್ಪಗಳು ಒದಗಿಸಿಕೊಡುತ್ತವೆ. ಆದರೆ ಹೆಚ್ಚಿನ ಶಿಲ್ಪಗಳು ನಮಗೆ ಕಂಡುಬರುವುದು ಬಾದಾಮಿಯ ಗುಹಾಲಯಗಳಲ್ಲಿ. ವೈಷ್ಣವ ಶಿಲ್ಪಗಳಲ್ಲಿ ಮುಖ್ಯವಾಗಿ ವಿಷ್ಣುವಿನ ವಿವಿಧ ಅವತಾರಗಳಿಗೆ ಸಂಬಂಧಿಸಿದ ಶಿಲ್ಪಗಳು, ಅಲ್ಲದೆ ವಿಷ್ಣುವಿನ ಬೃಹದಾಕಾರದ ಶಿಲ್ಪಗಳು. ಇವುಗಳಲ್ಲಿ ಕೆಲವು ಶಿಲ್ಪಗಳೆಂದರೆ ವರಾಹಾವತಾರ, ನರಸಿಂಹಾವತಾರದ ಶಿಲ್ಪಗಳು, ವಾಮನ, ತ್ರಿವಿಕ್ರಮ, ರಾಮ ಮತ್ತು ಕೃಷ್ಣನ ಕಥೆಗಳನ್ನು ಹೊಂದಿದ ಶಿಲ್ಪಗಳಿವೆ. ಅದರಲ್ಲಿಯೂ ನರಸಿಂಹನ ಶಿಲ್ಪಗಳು ಹೇರಳವಾಗಿ ಕಂಡುಬರುತ್ತವೆ. ಹೀಗೆ ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತಹ ಪ್ರಮುಖ ಶಿಲ್ಪಗಳನ್ನು ಇಲ್ಲಿ ಸ್ಥೂಲವಾಗಿ ಅಧ್ಯಯನ ಮಾಡಿದ್ದಲ್ಲದೇ ಈ ಕೆಳಗೆ ಅವುಗಳನ್ನು ವಿವರಿಸಲಾಗಿದೆ.

ವಿಷ್ಣು ಶಿಲ್ಪಗಳು

ಬಾದಾಮಿಯಲ್ಲಿರುವ ಎರಡು ಮತ್ತು ಮೂರನೆಯ ಗುಹಾಲಯಗಳಲ್ಲಿ ವೈಷ್ಣವ ಮತಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಕೆತ್ತಲಾಗಿದೆ. ಮೊದಲನೆಯ ಗುಹೆಯಿಂದ ಸುಮಾರು ಅರವತ್ತನಾಲ್ಕು ಮೆಟ್ಟಿಲುಗಳನ್ನು ಹತ್ತಿ ಹೋದರೆ ಬಲಗಡೆ ತೆರೆದ ಮುಖಮಂಟಪವಿದ್ದು ಪೂರ್ವ ಪಶ್ಚಿಮವಾಗಿ ಸುಮಾರು ೩೩ ಅಡಿ, ದಕ್ಷಿಣೋತ್ತರವಾಗಿ ಇಪ್ಪತ್ತಮೂರು ಅಡಿ ಹಾಗೂ ಹನ್ನೊಂದು ಅಡಿಗಳಷ್ಟು ಎತ್ತರವಿರುವ ಮುಖಮಂಟಪದ ರೀತಿಯಲ್ಲಿ ಕಂಡುಬರುವ ಗುಹಾಲಯವೇ ಮೊದಲನೆಯ ವೈಷ್ಣವ ಗುಹೆ. ಇದು ವೈಷ್ಣವ ಧರ್ಮಕ್ಕೆ ಸಂಬಂಧಿಸಿದ್ದಾಗಿದ್ದು ವಿಷ್ಣುವಿನ ದಶಾವತಾರದ ಕುರಿತ ವಿವಿಧ ಶಿಲ್ಪಗಳನ್ನು ಕೆತ್ತಲಾಗಿದೆ. ಅಲ್ಲದೆ ಸಮುದ್ರಮಂಥನದ ಕಥೆ, ಕೃಷ್ಣಲೀಲೆಯ ಕಥೆಯನ್ನು ಇಲ್ಲಿ ಕೆತ್ತಲಾಗಿದೆ.

ಇಲ್ಲಿ ಅತಿ ಮುಖ್ಯವಾದದ್ದಿ ಒಂದು ವಿಷ್ಣುವಿನ ವಾಮನಾವತಾರದ ಶಿಲ್ಪ, ಇನ್ನೊಂದು ವರಾಹಾವತಾರದ ಶಿಲ್ಪ. ಇವೆರಡೂ ಬೃಹದಾಕಾರದ ಶಿಲ್ಪಗಳು. ಇವು ಪ್ರಮುಖ ಶಿಲ್ಪಗಳಾದರೆ ಇನ್ನುಳಿದಂತೆ ಹಲವಾರು ಸಣ್ಣ ಮತ್ತು ಮಧ್ಯಮ ಗಾತ್ರದ ಹಲವಾರು ಶಿಲ್ಪಗಳಿವೆ. ಈ ಶಿಲ್ಪಗಳ ಕೆಳಭಾಗದಲ್ಲಿ ಕುತೂಹಲವೆನಿಸುವ ಶಿವಗಣಗಳ ಸಾಲುಶಿಲ್ಪಗಳು ಕಂಡುಬರುತ್ತವೆ. ಈ ಶಿಲ್ಪಸಾಲುಗಳು ವಿವಿಧ ಭಂಗಿಯ ಶಿವಗಣಗಳ ಶಿಲ್ಪಗಳಾಗಿದ್ದು ವಿವಿಧ ಭಂಗಿಯಲ್ಲಿವೆ. ಕುಬ್ಜಗಣಗಳೆಂದು ಕರೆಯಲಾಗುವ ಈ ಶಿಲ್ಪಗಳಲ್ಲಿ ಒಂದೊಂದೂ ವಿಚಿತ್ರ ಭಂಗಿಯಲ್ಲಿದ್ದು ನೋಡುಗರಲ್ಲಿ ತಮಾಷೆಯನ್ನುಂಟುಮಾಡುವಂತಿವೆ. ಈಗ ಇಲ್ಲಿನ ಕೆಲವು ಪ್ರಮುಖ ಶಿಲ್ಪಗಳನ್ನು ಗಮನಿಸೋಣ.

ಶಿಲ್ಪ –೧

ಚಾಲುಕ್ಯರ ಕಾಲದ ಮೊದಲ ಹಂತದ ಶಿಲ್ಪಗಳಲ್ಲಿ ಸಮಸ್ಥಾನಕ (ನಿಂತಿರುವ) ವಿಷ್ಣುವಿನ ಶಿಲ್ಪಗಳೂ ಮುಖ್ಯವಾಗಿವೆ. ಇವು ವಿಷ್ಣುವಿನ ಅವತಾರದ ಶಿಲ್ಪಗಳಿಗಿಂತ ವಿಭಿನ್ನವಾಗಿದ್ದು ತಮ್ಮ



ನಿಂತ ನಿಲುವು ಮತ್ತು ಸರಳ ಸಾತ್ವಿಕ ಮುಖಭಾವದಿಂದ ಗಮನ ಸೆಳೆಯುತ್ತವೆ. ಈ ಶಿಲ್ಪಗಳು ವಿಷ್ಣುವಿನ ಉಗ್ರರೂಪಿ ಶಿಲ್ಪಗಳಂತಿರದೆ ಸಾತ್ವಿಕತೆಗೆ ಒತ್ತು ಕೊಟ್ಟು ರಚಿಸಲಾಗಿರುವ ಶಿಲ್ಪಗಳು. ಇಂತಹ 'ಸಮಸ್ಥಾನಕ'[೧೮] ಶಿಲ್ಪಗಳು ಚಾಲುಕ್ಯರ ಆಡಳಿತಕ್ಕೊಳಪಟ್ಟ ಪ್ರದೇಶಗಳಲ್ಲಿ ಮುಖ್ಯವಾಗಿ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟಗಳಲ್ಲಿ ಕಂಡುಬರುತ್ತವೆ. ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ರಚಿತವಾದ ಶಿಲ್ಪಗಳಲ್ಲಿ ಹರಿಹರ ಮತ್ತು ನಿಂತಿರುವ ವಿಷ್ಣುವಿನ ಶಿಲ್ಪಗಳು ಪ್ರಮುಖವಾಗಿ ಕಂಡುಬರುತ್ತವೆ.

ವಿಷ್ಣುವಿನ ಸಮಸ್ಥಾನಕ ಶಿಲ್ಪಗಳು ಸಾಮಾನ್ಯವಾಗಿ ನಾಲ್ಕು ಕೈಗಳನ್ನು ಹೊಂದಿದ್ದು ಎರಡೂ ಕಾಲುಗಳನ್ನು ಸಮಭಂಗಿಯಲ್ಲಿರಿಸಿ ನಿಂತುಕೊಂಡಿರುವ ಶಿಲ್ಪಗಳು. ಕೆಲವೆಡೆ ಅಷ್ಟಭುಜ ವಿಷ್ಣುಶಿಲ್ಪಗಳೂ ಕಂಡುಬರುತ್ತವೆ. ಅಂತಹ ಶಿಲ್ಪಗಳಲ್ಲಿ ಪ್ರಮುಖವಾದುದು ಬಾದಾಮಿಯ ಮೂರನೆಯ ಗುಹಾಲಯದ ಗೋಡೆಯಲ್ಲಿರುವ ಅಷ್ಟಭುಜ ವಿಷ್ಣುಶಿಲ್ಪ. 'ಮಹಾವಿಷ್ಣು ಗೃಹದ ಪೂರ್ವದ ಗೋಡೆಯ ಮೇಲಿನ ಅಷ್ಟಭುಜ ವಿಷ್ಣು ಸಮಪಾದದಲ್ಲಿ ನಿಂತಿದ್ದು, ಶಂಖ, ಚಕ್ರವನ್ನು ಹಿಡಿದುಕೊಂಡು ಕಟ್ಯವಲಂಬಿತನಾಗಿದ್ದಾನೆ. ಕಿರೀಟದ ಮೇಲೆ ತೆಳು ಉಬ್ಬು ನರಸಿಂಹ ಶಿಲ್ಪವಿರುವುದೊಂದು ವಿಶೇಷದ ಸಂಗತಿಯಾಗಿದೆ.

ವಿಷ್ಣುವು ಇಲ್ಲಿ ಸಮಪಾದದಲ್ಲಿ ನಿಂತಿದ್ದು ಕೈಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದಾನೆ. ಮೊದಲು ನೋಡಿದ ವಿಷ್ಣುವಿನ ಅವತಾರಗಳಲ್ಲಿ ಆಯುಧಪುರುಷರಿದ್ದರೆ ಇಲ್ಲಿ ಆಯುಧಗಳನ್ನೇ ಕೆತ್ತಲಾಗಿರುವುದು ಗಮನಾರ್ಹ. ಮೇಲಿನ ಎರಡು ಕೈಗಳಲ್ಲಿ ಶಂಖ, ಚಕ್ರ, ಮಧ್ಯದ ಕೈಗಳಲ್ಲಿ ಖಡ್ಗ, ಬಿಲ್ಲುಗಳಿವೆ. ಕೆಳಗಿನ ಎಡಗೈಯನ್ನು ಸೊಂಟದ ಮೇಲಿರಿಸಿಕೊಂಡಿದ್ದಾನೆ. ಗದೆಯು ಭಗ್ನವಾಗಿದೆ. ಮುಖಭಾವವು ಸಾತ್ವಿಕತೆಯಿಂದ ಕೂಡಿದ್ದು ಶಾಂತತೆಯನ್ನು ವ್ಯಕ್ತಪಡಿಸುತ್ತದೆ. ದೊಡ್ಡದಾದ ಕಿರೀಟ ಮುಕುಟವನ್ನು ಹೊಂದಿದ್ದು ತಲೆಯ ಹಿಂದುಗಡೆ ಅತ್ಯಂತ ಸುಂದರವಾಗಿ ಪ್ರಭಾವಲಯವನ್ನು ಕೆತ್ತಲಾಗಿದೆ. ವಿಶೇಷವಾಗಿ ಗಮನಕೊಟ್ಟು ಕೆತ್ತಲಾಗಿರುವ ಸರಳ ಮತ್ತು ಸುಂದರವಾದ ಆಭರಣಗಳು ವಿಗ್ರಹಕ್ಕೆ ಹೆಚ್ಚಿನ ಶೋಭೆಯನ್ನುಂಟುಮಾಡುತ್ತವೆ. ಅಗಲವಾದ ಕುತ್ತಿಗೆಯ ಸುತ್ತಲೂ, ಎದೆಯ ಮೇಲೆ ಮೂರು ಹಂತಗಳ ಎದೆಹಾರ, ಕಂಠಪಟ್ಟಿ, ತೋಳಿನ ಸುತ್ತಲೂ ಮುತ್ತುಗಳಿಂದ ಖಚಿತವಾದ ಅಲಂಕೃತ ತೋಳಬಂಧಿ, ದಪ್ಪನಾದ ಆದರೆ ಅಷ್ಟೇ ಸುಂದರವಾಗಿ ಕೆತ್ತಲಾಗಿರುವ ಯಜ್ಞೋಪವೀತ, ಮುಂಗೈಬಳೆಗಳು, ಉದರಬಂಧ, ಉಡಿದಾರ, ಒಡ್ಯಾಣ, ಮೇಖಲೆಗಳಿಂದ ಅಲಂಕೃತವಾಗಿ ಕೆತ್ತಲಾಗಿರುವ ದೇಹಭಾಗದ ಕಲಾತ್ಮಕತೆ ಶಿಲ್ಪಕ್ಕೆ ಹೆಚ್ಚಿನ ಸೌಂದರ್ಯವನ್ನು ತಂದುಕೊಟ್ಟಿದೆ.

ಲಂಬ ಸಂಯೋಜನೆಯ ಈ ಶಿಲ್ಪದಲ್ಲಿ ಸಾಮಾನ್ಯವಾಗಿ ವಿಷ್ಣು ಶಿಲ್ಪಗಳಲ್ಲಿ ಕಂಡುಬರುವ ವಿಷ್ಣುವಿನ ವಾಹನವಾಗಿರುವ ಗರುಡನಾಗಲೀ ವಿಷ್ಣುವಿನ ಮಡದಿ ಲಕ್ಷ್ಮೀಯಾಗಲೀ

೧೮. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೦೩

[illegible]

ಕಂಡುಬರುವುದಿಲ್ಲ. ಆದರೆ ವಿಷ್ಣುಶಿಲ್ಪದ ಮೇಲುಭಾಗದಲ್ಲಿ ಹಾರಾಡುತ್ತಿರುವಂತೆ ಕೆತ್ತಲಾದ ವಿದ್ಯಾಧರ ಶಿಲ್ಪಗಳಿವೆ. ದ್ವಿಮಾನ ಉಬ್ಬು ಶಿಲ್ಪಗಳಾಗಿದ್ದು ಶಿಲ್ಪದ ಕೆಳಭಾಗದಲ್ಲಿ ಪೀಠವೂ ಇಲ್ಲದೆ ನಿಂತಂತೆ ಕೆತ್ತಲಾಗಿರುವುದು ಗಮನಾರ್ಹ. ಬಹುಶಃ ಈ ಶಿಲ್ಪದ ಕೆತ್ತನೆಯ ಸಂದರ್ಭದಲ್ಲಿ ಸ್ಥಳಾವಕಾಶದ ಕೊರತೆಯಿದ್ದುದರಿಂದ ಕೇವಲ ವಿಷ್ಣುವನ್ನಷ್ಟೆ ಕೆತ್ತಿರಬಹುದೆನ್ನಿಸುತ್ತದೆ. ಶಿಲ್ಪವು ಬೃಹದಾಕಾರವಾಗಿದ್ದರೂ ಪ್ರಮಾಣಬದ್ಧವಾಗಿವೆ.

ಎಲ್ಲಿಯೂ ಲೋಪ ಕಂಡುಬರುವುದಿಲ್ಲ. ರೇಖೆಗಳು ನೇರವಾಗಿದ್ದು ಸರಳತೆಯಿಂದ ಕೂಡಿವೆ. ಎಲ್ಲಿಯೂ ಶಿಲ್ಪಿಯು ಅತಿಯಾದ ಕೌಶಲ್ಯವನ್ನು ಪ್ರದರ್ಶಿಸಿಲ್ಲ. ಶಿಲ್ಪವು ಎಲ್ಲಿಯೂ ಚೈತನ್ಯವನ್ನು ಕಳೆದುಕೊಂಡಿಲ್ಲ. ಸುಂದರವಾಗಿ ಮೂಡಿಬಂದಿರುವ ಈ ಶಿಲ್ಪವು ತನ್ನ ಗಾತ್ರ ಮತ್ತು ಕೆತ್ತನೆಯಲ್ಲಿ ಹಿತಮಿತವಾಗಿ ಬಳಸಲಾಗಿರುವ ಆಭರಣಗಳಿಂದ ಕೂಡಿದ ಕಲಾತ್ಮಕತೆಯಿಂದಾಗಿ ಗಮನ ಸೆಳೆಯುತ್ತದೆ.

ಮೇಲೆ ಹೇಳಿದ ವೈಷ್ಣವ ಶಿಲ್ಪಗಳೆಲ್ಲ ವಿಷ್ಣು ಮತ್ತು ಆತನ ಅವತಾರಗಳಿಗೆ ಸಂಬಂಧಪಟ್ಟ ಶಿಲ್ಪಗಳು. ಇವಲ್ಲದೆ ಹಲವಾರು ಸಣ್ಣ ಪ್ರಮಾಣದ ಶಿಲ್ಪಗಳು, ಬಾಗಿಲು, ತೊಲೆಗಳಲ್ಲಿ ರಚಿಸಲಾದ ಉಬ್ಬುಚಿತ್ರಗಳು, ಮದನಿಕಾ ಶಿಲ್ಪಗಳು ಮುಂತಾದವುಗಳಿವೆ. ಅಲಂಕಾರಿಕ ಕೆತ್ತನೆಗಳಾದ ಲತಾ–ಪುಷ್ಪಗಳ ಕೆತ್ತನೆಗಳಿವೆ. ವ್ಯಾಳಿ, ಪಶು–ಪಕ್ಷಿಗಳ ಕುರಿತ ಶಿಲ್ಪಗಳಿವೆ. ಇವಲ್ಲದೆ ಮುಖ್ಯವಾಗಿ ಗಮನಿಸಬೇಕಾದ ಕಥಾಚಿತ್ರಗಳಿವೆ. ಅಂದರೆ ಹರಿಭಕ್ತಿಸಾರ, ಕೃಷ್ಣಲೀಲೆ, ದಶಾವತಾರದ ಕಥೆಗಳನ್ನು ಹೇಳುವ ಶಿಲ್ಪದ ಫಲಕಗಳು ಹೇರಳವಾಗಿವೆ. ಶೈವ ಧರ್ಮಕ್ಕೆ ಸಂಬಂಧಪಟ್ಟ ಶಿಲ್ಪಗಳು, ಶಿವಪಾರ್ವತಿ, ಅರ್ಧನಾರೀಶ್ವರ, ನಟರಾಜ ಮುಂತಾದ ಶಿಲ್ಪಗಳೂ ಇಲ್ಲಿವೆ. ಗುಹಾಲಯದ ಯಾವ ಭಾಗವೂ ಖಾಲಿಯಾಗಿರದಂತೆ ಹಲವಾರು ಸಣ್ಣ ದೊಡ್ಡ ಶಿಲ್ಪಗಳನ್ನಿಲ್ಲಿ ಕೆತ್ತಲಾಗಿದೆ.

ಶಿಲ್ಪ –೨

ಐಹೊಳೆಯ ದುರ್ಗಾದೇವಾಲಯದ ಇನ್ನೊಂದು ಗಮನ ಸೆಳೆಯುವ ವಿಷ್ಣುವಿನ ಶಿಲ್ಪಗಳಲ್ಲಿ ಇದು ಒಂದಾಗಿದೆ. ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಈ ಶಿಲ್ಪದ ಮುಖ್ಯ ಅಂಶವೆಂದರೆ ಇಲ್ಲಿ ವಿಷ್ಣು ವಿಶ್ವರೂಪಿಯಾಗಿರುವುದು. ಇಲ್ಲಿ ವಿಷ್ಣುವಿಗೆ ಎಂಟು ಕೈಗಳಿವೆ. ಶಿಲ್ಪದ ಕೆಳಗಿನ ಬಲಬದಿಯಲ್ಲಿ ಗರುಡ, ಎಡಬದಿಯಲ್ಲಿ ಲಕ್ಷ್ಮಿಯ ಶಿಲ್ಪಗಳಿದ್ದರೆ ಮೇಲಿನ ಭಾಗದಲ್ಲಿ ಇನ್ನೆರಡು ಸ್ತ್ರೀ ಶಿಲ್ಪಗಳಿವೆ. ಇಲ್ಲಿ ವಿಷ್ಣುವಿನ ಬಲಭಾಗದ ಕೈಗಳು ಭಗ್ನಗೊಂಡಿವೆ. ಎಡಭಾಗದ ಒಂದು ಕೈಯಲ್ಲಿ ಶಂಖವನ್ನು ಹಿಡಿದಿದ್ದಾನೆ, ಮೇಲಿನ ಎಡಗೈಯಲ್ಲಿ ಚಕ್ರವನ್ನು ಹಿಡಿದಿರುವಂತಿದ್ದು ಭಗ್ನಗೊಂಡಿದೆ. ವಿಷ್ಣುವು ಸಮಭಂಗಿಯಲ್ಲಿ ನಿಂತಿದ್ದು ಶಂಖವನ್ನು ಹಿಡಿದಿರುವ ಕೈ ಕಟಿಭಾಗವನ್ನು ಅವಲಂಬಿಸಿದೆ. ವಿಷ್ಣುವಿನ ಮುಖದಲ್ಲಿ ಸಾತ್ವಿಕ ಕಳೆ ಕಂಡುಬರುತ್ತದೆ. ತಲೆಯಲ್ಲಿ ಕಿರೀಟಮುಕುಟವಿದೆ. ಇದು ಸಾಕಷ್ಟು ದೊಡ್ಡದಾಗಿದ್ದು ಎರಡು ಹಂತದ ಕೆತ್ತನೆಯನ್ನು

ಗಮನಿಸಬಹುದು. ಒಂದು ಕೈಯಲ್ಲಿ ದೊಡ್ಡದಾದ ಖಡ್ಗವನ್ನು ಹಿಡಿದಿದ್ದಾನೆ, ಇನ್ನೊಂದು ಕೈಯನ್ನು ಕೆಳಗೆ ಇಳಿಬಿಟ್ಟಿದ್ದು ಮುದ್ರೆಯನ್ನು ಪ್ರದರ್ಶಿಸುತ್ತಿರುವಂತಿದೆ. ಶಿಲ್ಪದ ಕೆಳಭಾಗದಲ್ಲಿರುವ ಲಕ್ಷ್ಮಿಯ ಶಿಲ್ಪವನ್ನು ಎಡಗಡೆಗೆ ವಾಲಿಕೊಂಡಿರುವಂತೆ ಕೆತ್ತಲಾಗಿದೆ. ಗರುಡನ ಶಿಲ್ಪವನ್ನು ಕುಬ್ಜಶಿಲ್ಪದ ರೀತಿಯಲ್ಲಿ ಕೆತ್ತಲಾಗಿದ್ದು ಅಧಮ ದಶತಾಳದಲ್ಲಿದೆ. ಬಹುಶಃ ಬಲಗೈಯಲ್ಲಿ ಒಂದು ಅಭಯ ಅಥವಾ ವರದ ಹಸ್ತವಾಗಿರಬಹುದು.

ವಿಗ್ರಹಶಾಸ್ತ್ರದ ಅಧ್ಯಯನದಲ್ಲಿ ಮಹಾವಿಷ್ಣುವಿನ ವಿವಿಧ ರೂಪಗಳ ಪ್ರತಿಪಾದನೆ ಮುಖ್ಯವಾಗುತ್ತದೆ. ಸ್ಥಾನಕ, ಮೂರ್ತಿ, ಆಸೀನ ಮೂರ್ತಿ ಮತ್ತು ಶಯನಮೂರ್ತಿಗಳ ವಿಭಿನ್ನ ಪ್ರಕಾರಗಳು ಈ ಪ್ರತಿಪಾದನೆಯ ಒಂದು ಮುಖ್ಯ ಅಂಗ. ದಶಾವತಾರದ ತಾತ್ವಿಕ ಬೆಳವಣಿಗೆ ವಿಷ್ಣುವಿನ ರೂಪಗಳಿಗೆ ಹೊಸ ತಿರುವನ್ನು ನೀಡಿದವು. ದೇವಾಲಯ ರಚನೆಗಳ ವ್ಯಾಪಕತೆ ಬೆಳೆದಂತೆಲ್ಲಾ ವಿಷ್ಣುವಿನ ಈ ದಶಾವತಾರ ರೂಪಗಳು ಹೊಸ ವಿಶ್ಲೇಷಣೆಯೊಂದಿಗೆ ಶಿಲ್ಪ ಮತ್ತು ಚಿತ್ರಮಾಧ್ಯಮಗಳಲ್ಲಿ ವೇಗಗತಿ, ಜನಪ್ರಿಯತೆ ಪಡೆದವು. ಇವುಗಳಲ್ಲಿ ತ್ರಿವಿಕ್ರಮ, ನರಸಿಂಹ, ರಾಮ ಮತ್ತು ಕೃಷ್ಣನ ಅವತಾರಗಳು. ದಶಾವತಾರಗಳನ್ನು ಸೂಚಿಸುವ ಪಟ್ಟಿಯಲ್ಲಿ ಪ್ರತಿಪಾದನೆಯ ರೂಪದಲ್ಲಿ ಮಾತ್ರ ಮಹತ್ವ ಪಡೆದವು.

ಬಾದಾಮಿ ಚಾಲುಕ್ಯರ ಕಾಲದಿಂದ ವಿಜಯನಗರವರೆಗಿನ ಶಿಲ್ಪ ಮತ್ತು ಚಿತ್ರಗಳಲ್ಲಿ ಮೊದಲು ಹೇಳಿದ ಐದು ಅವತಾರಗಳ ಶಿಲ್ಪಗಳನ್ನು ಸೃಜನಶೀಲತೆಯಿಂದ ಅಭಿವ್ಯಕ್ತಗೊಳಿಸಿದ್ದಾರೆ.[೧೯] ಸಾಮಾನ್ಯವಾಗಿ ನಮಗೆ ಕಂಡುಬರುವ ವೈಷ್ಣವ ಅಥವಾ ವಿಷ್ಣುವಿನ ಶಿಲ್ಪಗಳು ನಾಲ್ಕು ಕೈಗಳನ್ನು ಹೊಂದಿದ್ದು ಶಂಖ ಮತ್ತು ಚಕ್ರಗಳನ್ನು ಮಾತ್ರ ಎರಡು ಕೈಗಳಲ್ಲಿ ಹಿಡಿದುಕೊಂಡಿದ್ದು, ಉಳಿದೆರಡು ಕೈಗಳಲ್ಲಿ ಒಂದು ಅಭಯಹಸ್ತ ಮತ್ತು ಇನ್ನೊಂದು ಕಟ್ಯವಲಂಬಿತವಾಗಿರುತ್ತದೆ. ಆದರೆ ಇಲ್ಲಿ ಎಂಟು ಕೈಗಳಿದ್ದು ಖಡ್ಗವೂ ಇದೆ. ಉಳಿದ ಕೈಗಳು ಭಗ್ನಗೊಂಡಿರುವುದರಿಂದ ವಿವರಗಳು ಕಾಣಿಸುವುದಿಲ್ಲ. ಇಲ್ಲಿನ ಕೆತ್ತನೆ ಗಮನಿಸುವಂತಹುದಾಗಿದೆ.

ಇಲ್ಲಿನ ಶಿಲ್ಪದಲ್ಲಿ ವಿಷ್ಣುವಿನ ತಲೆಯ ಹಿಂಭಾಗದಲ್ಲಿ ಅಂಡಾಕಾರದ ಪ್ರಭಾಮಂಡಲವಿದೆ. ಕಿರೀಟದ ಮೇಲಿನ ಭಾಗದಲ್ಲಿ ಅಲಂಕರಣವಿಲ್ಲ, ಮುಂಭಾಗದಲ್ಲಿ ವಿನ್ಯಾಸವುಳ್ಳ ಕೆತ್ತನೆಯಿದೆ. ಕುತ್ತಿಗೆಯಲ್ಲಿ ಕೇವಲ ಒಂದೇ ಹಾರವಿದ್ದು ಇನ್ನೊಂದು ಉದ್ದನೆಯ ಮಣಿಸರವನ್ನು ಕುತ್ತಿಗೆಯಿಂದ ಕಾಲಿನವರೆಗೂ ಇಳಿಬಿಡಲಾಗಿದೆ. ಇದು ಆಭರಣಮಾಲೆ ಅಥವಾ ಪುಷ್ಪಮಾಲೆಯ ರೀತಿ ಇರುವ ಬದಲಾಗಿ ಸಂಕೋಲೆಯ (ಸರಪಳಿ) ರೀತಿಯಲ್ಲಿರುವುದು ಗಮನಾರ್ಹವಾಗಿದೆ. ಅದೇ ರೀತಿ ಇಲ್ಲಿನ ಶಿಲ್ಪದಲ್ಲಿ ಯಜ್ಞೋಪವೀತವಿಲ್ಲ. ಉದರಬಂಧ ಮತ್ತು ಕಟಿಬಂಧಗಳನ್ನು ಹೊಂದಿದ್ದು ಮೇಖಲೆಯಿದೆ. ಇಲ್ಲಿ ವಿಷ್ಣುವು ತೊಟ್ಟ ಬಟ್ಟೆಯು ಸಾಮಾನ್ಯವಾಗಿ ವಿಷ್ಣುವಿನ ಶಿಲ್ಪಗಳಲ್ಲಿ ಕಂಡುಬರುವಂತೆ ಕಾಲಿನವರೆಗೂ ಇಲ್ಲದೆ ತೊಡೆಯವರೆಗಷ್ಟೆ ಇರುವಂತೆ ಕಾಣಿಸುತ್ತದೆ.

೧೯. ಡಾ. ಚೂಡಾಮಣಿ ನಂದಗೋಪಾಲ : ಶಿಲೆ-ಕಲೆ, ಪುಟ – ೧೭೭



ಅವುಗಳಲ್ಲಿ ನಿರಿಗೆಗಳನ್ನು ಕೆತ್ತಲಾಗಿರುವುದು ಗಮನಾರ್ಹ. ಕಟಿಪ್ರದೇಶದಲ್ಲಿ ದಪ್ಪವಾದ ಕಟೀಬಂಧವನ್ನು ರಚಿಸಿದ್ದು ಮೇಖಲೆಯನ್ನು ಮಧ್ಯಭಾಗಕ್ಕೆ ಬರುವಂತೆ ಕೆತ್ತಲಾಗಿದೆ. ನಿಂತ ಭಂಗಿಯು ಸಮಭಂಗಿಯಾಗಿದ್ದರೂ ಇಲ್ಲಿನ ಕೆತ್ತನೆ ಆಕರ್ಷಕವಾಗಿದೆ. ಕಿವಿಯಲ್ಲಿ ಉದ್ದವಾದ ಕರ್ಣಾಭರಣವಿದ್ದು ಇದು ಭುಜದವರೆಗೂ ಇಳಿಬಿದ್ದಿದೆ. ಸರಳವಾದ ತೋಳುಬಂಧಿ, ಮುಂಗೈ ಆಭರಣಗಳನ್ನು ಹೊಂದಿದ್ದು ಇವುಗಳಲ್ಲಿ ಹೆಚ್ಚಿನ ಮಹತ್ವವಿಲ್ಲ. ಇಲ್ಲಿ ವಿಷ್ಣುವಿನ ಶಿಲ್ಪಕ್ಕೆ ಕೊಡಲಾದ ಗಮನ ಲಕ್ಷ್ಮಿಯ ಶಿಲ್ಪಕ್ಕೆ ಕೊಟ್ಟಿಲ್ಲ. ಇದು ಸಾಮಾನ್ಯ ಶಿಲ್ಪಗಳಂತಿದ್ದು ಹೆಚ್ಚಿನ ಅಲಂಕಾರವಾಗಲೀ, ಅಂಗಲಾವಣ್ಯವಾಗಲೀ ಇಲ್ಲದಿರುವುದರಿಂದ ಗಮನ ಸೆಳೆಯುವುದಿಲ್ಲ. ಅದಕ್ಕೆ ಹೋಲಿಸಿದರೆ ವಿಷ್ಣುವಿನ ಮೇಲುಭಾಗದಲ್ಲಿರುವ ಎರಡು ಸ್ತ್ರೀ ಶಿಲ್ಪಗಳು ಹೆಚ್ಚು ಅಲಂಕರಣದಿಂದ ಕೂಡಿದ್ದು ಆಕರ್ಷಕವಾಗಿವೆ. ಈ ಶಿಲ್ಪಗಳನ್ನು ಇಲ್ಲಿ ತೋರಿಸಲಾದ ಉದ್ದೇಶವೇನೆಂಬುದು ತಿಳಿಯುವದಿಲ್ಲ. ಈ ಎರಡೂ ಶಿಲ್ಪಗಳು ಬೇರೆ ಬೇರೆ ಭಂಗಿಯಲ್ಲಿದ್ದು ಕೈಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದುಕೊಂಡಂತಿವೆ.

ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಬಹುಶಃ ಶಿಲ್ಪಿಗಳು ವಿಷ್ಣುವಿನ ಶಿಲ್ಪಕ್ಕೆ ಪೂರಕವಾಗಿ ಇತರ ಶಿಲ್ಪಗಳನ್ನು ಮತ್ತು ಸ್ಥಳಾವಕಾಶವನ್ನು ಬಳಸಿಕೊಳ್ಳುವ ಸಲುವಾಗಿ ಈ ಶಿಲ್ಪಗಳನ್ನು ಕೆತ್ತಿರಬಹುದೆನಿಸುತ್ತದೆ.

ಶಿಲ್ಪ –೩

ಮಾಲಗಿತ್ತಿ ಶಿವಾಲಯವು ಮೂಲತಃ ಸೂರ್ಯ ದೇವಾಲಯವೆಂದು ಡಾ. ಅ. ಸುಂದರ ಅವರು ಅಭಿಪ್ರಾಯ ಪಡುತ್ತಾರೆ.[೧೦] 'ಮಾಲೆಗಿತ್ತಿ ಶಿವಾಲಯಕ್ಕೆ ಸೂರ್ಯ ದೇವಾಲಯ, ವಿಷ್ಣು ದೇವಾಲಯವೆಂದೂ ಕರೆಯುವರು. ಆದರೆ ಜನರು ರೂಢಿಯಲ್ಲಿ ಮಾಲೆಗಿತ್ತಿ ಶಿವಾಲಯ ಎಂದು ಕರೆಯುವ ವಾಡಿಕೆಯಿದೆ. ಹೂ ಮಾರುವ ಸ್ತ್ರೀ ಪ್ರತಿದಿನ ಹೂ ಮಾರಿ ಸ್ವಲ್ಪ ಹಣವನ್ನು ಸಂಗ್ರಹಿಸುತ್ತ ಕೊನೆಗೆ ಆ ಹಣದಿಂದ ಈ ದೇವಾಲಯವನ್ನು ಕಟ್ಟಿಸಿರುವುದರಿಂದ ಮಾಲೆಗಿತ್ತಿ ಶಿವಾಲಯವೆಂದು ಕರೆಯುವುದಾಗಿಯೂ ಜನ ಹೇಳುತ್ತಾರೆ. ಆದರೆ ಇದಕ್ಕೆ ಯಾವುದೇ ಆಧಾರಗಳಿಲ್ಲ. ಜನರು ಆಡುಮಾತಿನಲ್ಲಿ ಕರೆಯುವ ಹೆಸರೆ ಇದಕ್ಕೆ ಖಾಯಂ ಆಗಿದೆ ಎಂದಷ್ಟೇ ಇಲ್ಲಿ ಹೇಳಬಹುದು. 'ಆರ್ಯಮಿಂಚಿ ಉಪಾಧ್ಯಾಯ' ಎಂಬ ವಾಸ್ತು ಶಿಲ್ಪಿಯು ಕಟ್ಟಿದ ಈ ದೇವಾಲಯ ಕ್ರಿ. ಶ ೬೫೫ ರಲ್ಲಿ ನಿರ್ಮಾಣವಾಗಿದೆ.[೧೧] ದೇವಾಲಯದ ಉತ್ತರ ಗೋಡೆಯಲ್ಲಿ ಚತುರ್ಭುಜ ವಿಷ್ಣು ಶಿಲ್ಪ ಆಕರ್ಷಕವಾಗಿದೆ. ಹಸ್ತಗಳಲ್ಲಿ ಫಲ, ಶಂಖ, ಚಕ್ರಗಳಿವೆ. ಶಿಲ್ಪಕ್ಕೆ ವಸ್ತ್ರ ಮೈಗಂಟಿಕೊಂಡಂತೆ ಶಿಲ್ಪಿ ತನ್ನ ಚಾಕಚಕ್ಯತೆಯನ್ನಿಲ್ಲಿ ತೋರಿಸಿರುವನು. ಇಲ್ಲಿ ವಿಷ್ಣುವು ಸಮಭಂಗಿಯಲ್ಲಿ ನಿಂತಿರುವ ಭಂಗಿಯಲ್ಲಿದ್ದಾನೆ. ಮೇಲಿನ ಬಲಗೈಯಲ್ಲಿ ಚಕ್ರ

---

೧೦. ಪಿ.ವಿ. ಕೃಷ್ಣಮೂರ್ತಿ, ಡಾ. ಕೆ. ವಸಂತಲಕ್ಷ್ಮೀ (ಸಂ.) : ಸೂರ್ಯಕೀರ್ತಿ (ಡಾ. ಸೂರ್ಯಕಾಮತರ ಅ.ಗ್ರ), ಪು. ೧೮೮

೧೧. ಡಾ. ಎ.ಮುರಿಗೆಪ್ಪ (ಪ್ರಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ. ಪುಟ – ೩೨೧

ಮತ್ತು ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದು ಬಹಳ ಸುಂದರವಾಗಿ ಕೆತ್ತಲಾಗಿದೆ. ತ್ರಿಮಾನದಲ್ಲಿ ಕೆತ್ತಲಾಗಿರುವ ಆಯುಧಗಳು ಗಮನಸೆಳೆಯುತ್ತವೆ. ಕೆಳಗಿನ ಎಡಗೈಯನ್ನು ಕಟಿಪ್ರದೇಶದಲ್ಲಿರಿಸಿದ್ದು ಕಟ್ಯವಲಂಬಿತವಾಗಿದೆ. ಬಲಗೈ ವರದ ಹಸ್ತವಾಗಿದೆ. ಶಂಖ, ಚಕ್ರಗಳನ್ನು ಹಿಡಿದಿರುವ ಕೈಗಳ ಹಿಂಭಾಗದಲ್ಲಿ ಎರಡು ವಿದ್ಯಾಧರ ಶಿಲ್ಪಗಳಿವೆ. ವಿಷ್ಣುವಿನ ಕೆಳಭಾಗದ ಬಲಗಡೆ ಸ್ತ್ರೀ ಶಿಲ್ಪವಿದ್ದರೆ ಎಡಭಾಗದಲ್ಲಿ ಗರುಡನು ಸುಂದರವಾಗಿ ನಿಂತಿರುವ ಶಿಲ್ಪವಿದೆ.

ವಿಷ್ಣುವಿನ ನಿಂತ ನಿಲುವು ಆಕರ್ಷಕವಾಗಿದ್ದು ಕಿರೀಟಮುಕುಟಧಾರಿಯಾಗಿದ್ದಾನೆ. ತಲೆಯ ಹಿಂಭಾಗದಲ್ಲಿ ಪ್ರಭಾಚಕ್ರವಿದ್ದು ಇದು ವೃತ್ತಾಕಾರವಾಗಿರುವುದರ ಬದಲು ಅಂಡಾಕಾರದಲ್ಲಿರುವುದನ್ನು ಗಮನಿಸಬಹುದು. ಚತುರ್ಭುಜ ವಿಷ್ಣುವಿನ ಬಳಿಯಲ್ಲಿ (ಬಲಭಾಗದಲ್ಲಿ) ನಿಂತಿರುವ ಸ್ತ್ರೀ ಶಿಲ್ಪವು ನಾಟ್ಯಭಂಗಿಯಲ್ಲಿದೆ. ಸ್ತ್ರೀಶಿಲ್ಪವನ್ನು ಲಕ್ಷ್ಮಿಯ ಶಿಲ್ಪವೆಂದು ಹೇಳಲು ಸಾಧ್ಯವಿಲ್ಲ. ದುಂಡಗಾದ ಸ್ತನಗಳು, ಗುಂಗುರಾಗಿರುವ ಇಳಿಬಿದ್ದಿರುವ ಕೂದಲು, ನಿಂತಿರುವ ಭಂಗಿ, ಎಡಗೈಯಲ್ಲಿ ಹಿಡಿದಿರುವ ಹೂಗೊಂಚಲು, ಇತ್ಯಾದಿ ಪ್ರತಿಯೊಂದು ಭಾಗವೂ ಗಮನಿಸುವಂತಿದೆ. ವಿಷ್ಣುವಿನ ಮುಖವು ದೇಹದ ಒಟ್ಟು ಆಯ ಅಳತೆಗೆ ಹೋಲಿಸಿದರೆ ಸಣ್ಣಗಾಗಿದೆ. ಶಿಲ್ಪದ ಒಟ್ಟು ಕೆತ್ತನೆಯನ್ನು ನೋಡಿದರೆ ಈ ಶಿಲ್ಪವು ಗುಪ್ತರ ಕಾಲದಲ್ಲಿನ ಬುದ್ಧಶಿಲ್ಪದ ನೆನಪು ತರುತ್ತದೆ.

ವಿಷ್ಣುವಿನ ದೇಹವನ್ನು ಸುಂದರವಾಗಿ ಮತ್ತು ಅಷ್ಟೇ ಸರಳವಾಗಿ ಕೆತ್ತಲಾಗಿದ್ದು ಹಿತಮಿತವಾದ ಆಭರಣಗಳಿವೆ. ದಪ್ಪವಾದ ಯಜ್ಞೋಪವೀತವಿದ್ದು, ಕುತ್ತಿಗೆಯಲ್ಲಿ ಒಂದೇ ಹಾರವಿದೆ. ಉದರಬಂಧ, ಕಟಿಬಂಧ, ಮೇಖಲೆ, ಕೈಗಳಲ್ಲಿ ಸರಳವಾದ ಬಳೆಗಳು ಮತ್ತು ತೋಳುಬಂಧಿ ಇತ್ಯಾದಿಗಳಿವೆ. ಆದರೆ ವಸ್ತ್ರವನ್ನು ಧರಿಸಿದಂತೆ ಕಾಣಿಸದಷ್ಟು ತೆಳ್ಳಗಿನ ಬಟ್ಟೆ ಇದೆಯೆನ್ನಬಹುದು. ಬಹುಶಃ ಇವುಗಳನ್ನೆಲ್ಲ ಗಮನಿಸಿದರೆ ಇದು ಬೌದ್ಧಧರ್ಮದಿಂದ ಸಾಕಷ್ಟು ಪ್ರೇರಣೆಯನ್ನು ಪಡೆದಿದೆಯೆನ್ನಬಹುದು. ನಸುಗೆಂಪು ಕಲ್ಲಿನಲ್ಲಿ ಕೆತ್ತಲಾಗಿರುವ ಈ ಶಿಲ್ಪವು ಚಾಲುಕ್ಯರ ಕಾಲದ ಸುಂದರವಾದ ವಿಷ್ಣು ಶಿಲ್ಪಗಳಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಇಲ್ಲಿ ಹಲವಾರು ಸುಂದರ ಶಿಲ್ಪಗಳಿದ್ದು ಮುಖ್ಯವಾಗಿ ಹಲವಾರು ಗಣಗಳ ವಿವಿಧ ಭಾವ-ಭಂಗಿಗಳನ್ನು ಸೂಚಿಸುತ್ತವೆ. ಕಲಾತ್ಮಕವಾದ ಈ ಶಿಲ್ಪಗಳು ನೋಡಲು ಆಕರ್ಷಕವಾಗಿದ್ದು ವಿವಿಧ ಸಂಗೀತವಾದ್ಯಗಳನ್ನು ನುಡಿಸುತ್ತಿರುವಂತಿವೆ. ಬಾಗಿಲಿನ ಚೌಕಟ್ಟಿನ ಮಧ್ಯದಲ್ಲಿ ಹಾವುಗಳನ್ನು ಹಿಡಿದಿರುವ ಗರುಡನ ವಿಗ್ರಹ ಕಲಾತ್ಮಕವಾಗಿ ರಚನೆಯಾಗಿದೆ.

ಶಿಲ್ಪ –೪

ಪಟ್ಟದಕಲ್ಲು ಪಾಪನಾಥ ದೇವಾಲಯವು ಪೂರ್ವಾಭಿಮುಖವಾಗಿದ್ದು, ಎಡಭಾಗದ ಹೊರ ಭಿತ್ತಿಯಲ್ಲಿ ಗದಾಧಾರಿ ವಿಷ್ಣುವಿನ ಶಿಲ್ಪವೊಂದಿದೆ. ಇವನನ್ನು ಗದಾಧಾರಿ ವಿಷ್ಣು ಎಂದು



ಉಲ್ಲೇಖಿಸಲು ಕಾರಣವೆಂದರೆ, ಇಲ್ಲಿ ಕಾಣಿಸುವ ಅಪರೂಪದ ಶಿಲ್ಪದಲ್ಲಿ ವಿಷ್ಣುವು ದೊಡ್ಡ ಗಾತ್ರದ ಗದೆಯೊಂದನ್ನು ತನ್ನ ಬಲಭಾಗದ ಕೆಳಗಿನ ಕೈಯ ಮೂಲಕ ಹಿಡಿದುಕೊಂಡಿದ್ದಾನೆ. ಗದೆಯನ್ನು ನೆಲಕ್ಕೆ ಊರಲಾಗಿದೆ. ಈ ಗದೆಯ ವೈಶಿಷ್ಟ್ಯವೆಂದರೆ ಇಲ್ಲಿ ಗದೆಯು ಕೆಳಭಾಗದಲ್ಲಿ ದಪ್ಪನಾಗಿದ್ದು ಮೇಲಕ್ಕೆ ಹೋದಂತೆಲ್ಲ ಸಣ್ಣದಾಗಿದೆ. ಇಂತಹ ಕೆತ್ತನೆ ಉಳಿದೆಡೆಯಲ್ಲಿನ ವಿಷ್ಣು ಶಿಲ್ಪಗಳಲ್ಲಿ ಕಂಡುಬರುವುದಿಲ್ಲ.

ಮೇಲಿನ ಕೈಗಳಲ್ಲಿ ಶಂಖ, ಚಕ್ರಗಳನ್ನು ಹಿಡಿದುಕೊಂಡಿದ್ದು ಇವುಗಳು ಭಗ್ನವಾಗಿವೆ. ಕೆಳಗಿನ ಎಡಗೈ ಕಟ್ಯವಲಂಬಿತವಾಗಿದೆ. ಶಿಲ್ಪವು ತೆಳ್ಳಗಾಗಿದ್ದರೂ ಆಕರ್ಷಕವಾಗಿದೆ. ತಲೆಯಲ್ಲಿ ಕಿರೀಟಮುಕುಟವಿದ್ದು ಇದು ಕೂಡಾ ಉಳಿದೆಡೆಯ ಶಿಲ್ಪಗಳಿಗಿಂತ ಭಿನ್ನವಾಗಿದೆ. ಸೊಂಟದಲ್ಲಿ ದಪ್ಪನಾದ ಮೇಖಲೆ ಮತ್ತು ಇನ್ನೊಂದು ಸೊಂಟಪಟ್ಟಿ ಇದ್ದು ದಪ್ಪವಾದ ಯಜ್ಞೋಪವೀತವನ್ನು ಧರಿಸಿದ್ದಾನೆ. ಆಭರಣಗಳು ಕಡಿಮೆಯಿದ್ದು ಶಿಲ್ಪವು ಸರಳವಾಗಿದೆ. ವಿಷ್ಣುವಿನ ಎಡಭಾಗದಲ್ಲಿ ಬಾಲಕನೊಬ್ಬ (ಗರುಡ) ನಿಂತುಕೊಂಡಿದ್ದಾನೆ. ವಿಷ್ಣುವು ತೊಟ್ಟ ಪೀತಾಂಬರವನ್ನು ಪಾದದ ವರೆಗೂ ಇಳಿಬಿಡಲಾಗಿದ್ದು ನಿರಿಗೆಗಳನ್ನು ಕೆತ್ತಲಾಗಿದೆ. ಮುಖವು ಭಗ್ನಗೊಂಡಿದ್ದು ವಿವರಗಳು ಕಾಣಿಸುವುದಿಲ್ಲ. ಶಿಲ್ಪದ ಹೆಚ್ಚಿನ ಭಾಗ ಸವೆದು ಹೋಗಿದ್ದರೂ ಶಿಲ್ಪವು ತನ್ನ ಕೆತ್ತನೆಯ ರೀತಿಯಿಂದಾಗಿ ಗಮನ ಸೆಳೆಯುತ್ತದೆ. ವಿಷ್ಣುವು ಸಮಭಂಗಿಯಲ್ಲಿ ನಿಂತುಕೊಂಡಿದ್ದು ಪಕ್ಕದ ಗರುಡನ ಶಿಲ್ಪವು ವಿಷ್ಣುವಿನೆಡೆಗೆ ನೋಡುತ್ತಿರುವಂತಿದೆ. ಉಳಿದಂತೆ ಶಿಲ್ಪದ ಆಸುಪಾಸು ಅಥವಾ ಹಿನ್ನೆಲೆಯಲ್ಲಿ ಯಾವುದೇ ಕೆತ್ತನೆಯಿಲ್ಲ. ವಿಷ್ಣುವಿನ ತಲೆಯ ಹಿಂಭಾಗದಲ್ಲಿ ಈ ಮೊದಲಿನ ಶಿಲ್ಪದಲ್ಲಿ ನೋಡಿದಂತೆ ಪ್ರಭಾಚಕ್ರವಿಲ್ಲ. ತಲೆಕೂದಲು ಎರಡೂ ಬದಿಗಳಲ್ಲಿ ಇಳಿಬಿಡಲಾಗಿದ್ದು ಕರ್ಣಕುಂಡಲಗಳ ಕೆತ್ತನೆಗೆ ಪೂರಕವಾಗುವಂತೆ ರಚಿಸಲಾಗಿದ್ದು ಆಕರ್ಷಕವಾಗಿದೆ. ಒಟ್ಟಿನಲ್ಲಿ ಶಿಲ್ಪವು ಸರಳವಾಗಿದ್ದರೂ ಸುಂದರವಾಗಿದೆ. ಇನ್ನೊಂದು ಆಕರ್ಷಕವಾದ ವಿಷ್ಣುವಿನ ಶಿಲ್ಪವನ್ನಿಲ್ಲಿ ನೋಡಬಹುದು.

ಕಂಬದಲ್ಲಿ ಗರುಡಾರೂಢನಾದ ವಿಷ್ಣುವಿನ ಈ ಶಿಲ್ಪ ಹೆಚ್ಚುಪಾಲು ಸವೆದುಹೋಗಿದ್ದು ಅಳಿದುಳಿದ ಕುರುಹುಗಳಿಂದ ಈ ಶಿಲ್ಪವನ್ನು ಗುರುತಿಸಬಹುದು. ಶಿಲ್ಪದ ಲಕ್ಷಣಗಳನ್ನು ಗಮನಿಸಿದರೆ ಈ ಶಿಲ್ಪದಲ್ಲಿ ಮೊದಲು ನೋಡಿದಂತೆ ಗರುಡನು ವಿಷ್ಣುವನ್ನು ಹೊತ್ತುಕೊಂಡು ಹಾರುತ್ತಿದ್ದಾನೆ. ಶಿಲ್ಪದಲ್ಲಿ ಕ್ರಿಯಾತ್ಮಕತೆ ಎದ್ದುಕಾಣುತ್ತದೆ. ಕೆಲ ವಿಚಾರಗಳನ್ನು ಗಮನಿಸಿದರೆ ಇಲ್ಲಿ ವಿಭಿನ್ನತೆ ಇದೆ. ಇಲ್ಲಿ ವಿಷ್ಣುವು ಮೇಲಿನ ಎರಡೂ ಕೈಗಳನ್ನು ಸಮಾನಾಂತರವಾಗಿ ಮೇಲೆತ್ತಿಕೊಂಡಂತಿದೆ. ಕೆಳಗಿನ ಎಡಗೈಯನ್ನು ತೊಡೆಯ ಮೇಲಿಟ್ಟುಕೊಂಡಿದ್ದಾನೆ. ಗರುಡನು ತನ್ನ ಕೈಗಳಲ್ಲಿ ವಿಷ್ಣುವಿನ ಕಾಲುಗಳನ್ನು ಗಟ್ಟಿಯಾಗಿ ಬಳಸಿ ಹಿಡಿದುಕೊಂಡಿದ್ದಾನೆ. ಮುಖ್ಯ ಶಿಲ್ಪದ ಹಿನ್ನೆಲೆಯಲ್ಲಿ ಕೆಲ ಸಣ್ಣ ಶಿಲ್ಪಗಳಿರುವುದನ್ನು ಗಮನಿಸಬಹುದು. ಗರುಡನ ಕೆತ್ತನೆಯು ಮೊದಲ ಶಿಲ್ಪದಲ್ಲಿ ನೋಡಿದಂತೆ ಬಾಲಕನ ಮುಖವಿಲ್ಲದೆ ಪ್ರೌಢನಾಗಿದ್ದಾನೆ. ಇನ್ನೊಂದು



ಗಮನಾರ್ಹ ಅಂಶವೆಂದರೆ ಮೊದಲ ಶಿಲ್ಪದಲ್ಲಿ ವಿಷ್ಣು ಮತ್ತು ಗರುಡರು ಎದೆ ಉಬ್ಬಿಸಿಕೊಂಡಿರುವಂತೆ ಕೆತ್ತಲಾಗಿದ್ದರೆ ಇಲ್ಲಿ ಸಹಜತೆಯನ್ನು ತೋರಿಸಲಾಗಿದೆ. ಶಿಲ್ಪದ ಹೆಚ್ಚಿನ ಭಾಗಗಳು ಭಗ್ನಗೊಂಡಿರುವುದರಿಂದ ಸೂಕ್ಷ್ಮ ವಿವರಗಳು ಕಾಣಿಸುವುದಿಲ್ಲ. ಆದರೂ ಒಟ್ಟು ಶಿಲ್ಪವು ತನ್ನ ಕೆತ್ತನೆಯ ರೀತಿಯಿಂದ ವೈಶಿಷ್ಟ್ಯಪೂರ್ಣವಾಗಿದೆ.

ಶಿಲ್ಪ -೫

ಲಾಡ್‌ಖಾನ್ ದೇವಾಲಯದ ಕೆಲವು ಶಿಲ್ಪಗಳಲ್ಲಿ ವಿಷ್ಣುವಿನ ಶಿಲ್ಪವೂ ಒಂದು. ಇಲ್ಲಿನ ಕೆತ್ತನೆಗಳು ಹೆಚ್ಚುಪಾಲು ಚಾಲುಕ್ಯರ ಪೂರ್ವಕಾಲದ ಅಥವಾ ಮೊದಲ ಹಂತದ ಚಾಲುಕ್ಯರ ಕಾಲದ ಕೆತ್ತನೆಗಳನ್ನು ಹೋಲುತ್ತವೆ. ಶಿಲ್ಪಗಳು ದುಂಡಗಾಗಿದ್ದು ಕುಬ್ಜತೆಯನ್ನು ಹೊಂದಿವೆ. ಸುಂದರವಾದ ಕೆತ್ತನೆಯನ್ನು ಹೊಂದಿದ್ದು ಹೆಚ್ಚಿನ ಉಬ್ಬನ್ನು ಕೂಡ ಹೊಂದಿವೆ. ಇಲ್ಲಿ ದೇವಾಲಯದ ಗೋಡೆಗಳು, ಕಂಬಗಳು ಮತ್ತು ಬೋಧಿಗೆ ಹಾಗೂ ಮುಚ್ಚಿಗೆಯಲ್ಲಿ ಹಲವಾರು ಶಿಲ್ಪಗಳನ್ನು ಹೊಂದಿದ್ದು ಅಲ್ಲಿನ ಸ್ಥಳಾವಕಾಶಕ್ಕೆ ತಕ್ಕಂತೆ ಶಿಲ್ಪಗಳಿವೆ. ಮುಖ್ಯವಾಗಿ ಹಿತವಾದ ಅಲಂಕರಣದಿಂದ ಕೂಡಿದ್ದು ಆಭರಣಗಳ ಅಲಂಕರಣಕ್ಕಿಂತಲೂ ಶಿಲ್ಪದ ರಚನೆ ಮತ್ತು ಭವ್ಯತೆಗೆ ಹೆಚ್ಚಿನ ಒತ್ತು ನೀಡಿರುವುದನ್ನಿಲ್ಲಿ ಗಮನಿಸಬಹುದು.

ಸಾಮಾನ್ಯವಾಗಿ ದುಂಡಗಾಗಿರುವ ಇಲ್ಲಿನ ಶಿಲ್ಪಗಳಲ್ಲಿ ಜೀವಂತಿಕೆಯಿದ್ದು ಉತ್ತರದ ಗುಪ್ತರ ಕಾಲದ ಶಿಲ್ಪಗಳ ಸಾಮ್ಯವನ್ನಿಲ್ಲಿ ಕಾಣಬಹುದು. ಮುಖ್ಯವಾಗಿ ಕೆತ್ತನೆಯ ರೀತಿ ಮತ್ತು ಅಲಂಕರಣಗಳು ಹಾಗೂ ದೇಹ ರಚನೆಯ ರೀತಿಯು ಬಾದಾಮಿಯ ಶಿಲ್ಪಗಳಿಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ಆದರೆ ಜಾಲಂಧ್ರಗಳು ಮತ್ತು ವ್ಯಾಳಿಗಳ ಕೆತ್ತನೆಯು ಸ್ವಂತಿಕೆಯಿಂದ ಕೂಡಿದೆಯೆನ್ನಬಹುದು. ವಿಷ್ಣುವಿನ ಶಿಲ್ಪವನ್ನಿಲ್ಲಿ ಗಮನಿಸುವುದಾದರೆ ಉಳಿದೆಡೆಗಳಂತೆ ಇಲ್ಲಿ ಚತುರ್ಭುಜ ವಿಷ್ಣುವೂ ಸಮಭಂಗಿಯಲ್ಲಿ ನಿಂತಿದ್ದು, ಅವನ ಎಡ ಬದಿಯಲ್ಲಿ ಗರುಡ ಮತ್ತು ಬಲಭಾಗದಲ್ಲಿ ಸ್ತ್ರೀಶಿಲ್ಪವಿದೆ. ಇವು ಸಣ್ಣಗಾತ್ರದಲ್ಲಿವೆ. ವಿಷ್ಣುವು ಇಲ್ಲಿ ದುಂಡಗಾದ ಕೆತ್ತನೆಯನ್ನು ಹೊಂದಿದೆ.

ಬಾದಾಮಿಯ ಶಿಲ್ಪಗಳಿಗೆ ಹೋಲಿಸಿದರೆ ಈ ಶಿಲ್ಪದ ಕೆತ್ತನೆಯಲ್ಲಿ ಭಿನ್ನತೆಯಿದೆ. ವಿಷ್ಣುವಿನ ತಲೆಯ ಹಿಂಭಾಗದಲ್ಲಿ ವೃತ್ತಾಕಾರದ ಪ್ರಭಾಮಂಡಲವಿದೆ. ಹಿಂದಿನ ಕೈಯಲ್ಲಿ ಶಂಖ, ಚಕ್ರಗಳನ್ನು ಹಿಡಿದಿದ್ದು ಶಂಖದ ಕೆತ್ತನೆ ಗಮನ ಸೆಳೆಯುತ್ತದೆ. ಇಲ್ಲಿ ಶಂಖ ಮತ್ತು ಚಕ್ರಗಳನ್ನು ವಿವರವಾಗಿ ಕೆತ್ತಲಾಗಿದ್ದು, ಸಾಕಷ್ಟು ದೊಡ್ಡದಾಗಿವೆ. ಎಡಗೈಯು ಕಟ್ಯವಲಂಬಿತವಾಗಿದೆ. ಬಲಗೈ ವರದ ಹಸ್ತವಾಗಿದೆ. ಇಲ್ಲಿನ ವಿಷ್ಣುವು ಸಾಕಷ್ಟು ಆಭರಣಗಳಿಂದ ಅಲಂಕೃತನಾಗಿರುವಂತೆ ಕೆತ್ತಲಾಗಿದೆ. ಶಿಲ್ಪದ ಮುಖಭಾವವು ವಿಭಿನ್ನವಾಗಿದ್ದು ಇಲ್ಲಿನ ಶಿಲ್ಪದ ಮುಖದಲ್ಲಿ ಉಳಿದೆಡೆಗಳಲ್ಲಿ ಕಾಣಿಸಿದಂತೆ ಸಾತ್ವಿಕ ಮುಖಭಾವದ ಬದಲು ರಾಜಸ ಮುಖಭಾವವಿರುವಂತೆ ಕಂಡುಬರುತ್ತದೆ. ತಲೆಯು

ಹಿಂದಿನ ಪ್ರಭಾಚಕ್ರವು ದೊಡ್ಡದಾಗಿದ್ದು ವೃತ್ತಾಕಾರವಾಗಿದೆ. ಆದರೆ ಯಾವುದೇ ಅಲಂಕಾರಿಕ ಕೆತ್ತನೆಯಿಲ್ಲದಿರುವುದು ವಿಶೇಷ. ದೇಹವು ದುಂಡಗಾಗಿದ್ದು ಇದರಿಂದಾಗಿ ಶಿಲ್ಪವು ಕುಬ್ಜತೆಯಿಂದಿರುವಂತೆ ಅನುಭವವಾಗುತ್ತದೆ. ಕಂಠಹಾರ, ತುಳಸಿಮಾಲೆ, ಯಜ್ಞೋಪವೀತ, ಎದೆಹಾರ, ಉದರಬಂಧ, ಮೇಖಲೆ ಇತ್ಯಾದಿಗಳಿಂದ ಕೂಡಿದ ಈ ಶಿಲ್ಪದ ಒಟ್ಟು ರಚನೆ ಹಲವಾರು ವೈಶಿಷ್ಟ್ಯಗಳಿಂದ ಕೂಡಿರುವುದನ್ನು ಗಮನಿಸಬಹುದು.

ವಿಷ್ಣುವು ಕೈಯಲ್ಲಿ ಹಿಡಿದಿರುವ ಶಂಖ ಮತ್ತು ಚಕ್ರಗಳನ್ನು ವಿವರವಾಗಿ ಸುಂದರವಾಗಿ ಕೆತ್ತಲಾಗಿದ್ದು ತ್ರಿಮಾನದ ಭಾವನೆಯನ್ನು ಹೊಂದಿದೆ. ವಿಷ್ಣುವು ಉಟ್ಟ ಪೀತಾಂಬರವನ್ನು ಪಾದದ ವರೆಗೂ ಇಳಿಬಿಡಲಾಗಿದ್ದು ಅದಕ್ಕೆ ಪೂರಕವಾಗಿ ಒಡ್ಯಾಣದ ಜೊತೆಗಿನ ಹಾರವು ಸುತ್ತುವರಿದಿದೆ. ಇದರಿಂದಾಗಿ ಶಿಲ್ಪದ ಒಟ್ಟು ಕೆತ್ತನೆಯಲ್ಲಿ ಜೀವಂತಿಕೆಯನ್ನು ಕಾಣಬಹುದು. ವಿಷ್ಣುವಿನ ಎಡಗಡೆ ಕೆಳಭಾಗದಲ್ಲಿ ಗರುಡನು ಬಲಮೊಣಕಾಲನ್ನು ಊರಿ ಅತಿಭಂಗಿಯಲ್ಲಿ ನಿಂತಿದ್ದು ಕೈಯಲ್ಲಿ ವಿಷ್ಣುವಿನ ಗದೆಯನ್ನು ಹಿಡಿದುಕೊಂಡಂತೆ ಭಾಸವಾಗುತ್ತದೆ. ವಿಷ್ಣುವಿನ ಬಲಭಾಗದಲ್ಲಿ ಸ್ತ್ರೀ ಶಿಲ್ಪವಿದೆ. ಇದರ ಕೆತ್ತನೆಯಲ್ಲಿ ವಿಶೇಷವಾದುದೇನೂ ಕಂಡುಬರುವುದಿಲ್ಲ.

ತಲೆಯ ಮೇಲಿನ ಭಾಗದಲ್ಲಿ ಮಂಟಪದ ರೀತಿಯ ರಚನೆ ಕಂಡುಬರುತ್ತಿದ್ದು ಇದರಲ್ಲಿ ವ್ಯಾಳಿ ಮತ್ತು ಪುಷ್ಪವಿನ್ಯಾಸದ ಕೆತ್ತನೆಗಳಿವೆ. ವಿಷ್ಣುವು ಕಿರೀಟಮುಕುಟವನ್ನು ಹೊಂದಿದ್ದು ಇದು ಸಾಕಷ್ಟು ದೊಡ್ಡದಾಗಿದ್ದು ಅಲಂಕೃತ ಕೆತ್ತನೆಗಳಿಂದ ಕೂಡಿದೆ, ಇದಕ್ಕೆ ಪೂರಕವಾಗಿ ದೊಡ್ಡಗಾತ್ರದ ಕರ್ಣಕುಂಡಲಗಳನ್ನು ಕೆತ್ತಲಾಗಿದ್ದು ಶಿರೋಭಾಗಕ್ಕೆ ಹೆಚ್ಚಿನ ಶೋಭೆಯನ್ನುಂಟುಮಾಡಿದೆ. ಒಟ್ಟು ಕೆತ್ತನೆಯ ದೃಷ್ಟಿಯಿಂದ ಈ ಶಿಲ್ಪವು ಬಾದಾಮಿಯಲ್ಲಿನ ರಚನೆಗಿಂತ ಭಿನ್ನವಾಗಿದ್ದರೂ ಸಾಮ್ಯವನ್ನು ಗಮನಿಸಬಹುದು.

ಶಿಲ್ಪ –೬

ಮಹಾಕೂಟ ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಅಪರೂಪ ಮತ್ತು ಅಷ್ಟೇ ಸುಂದರವಾದ ವಿಷ್ಣು ಶಿಲ್ಪವೊಂದನ್ನು ಗಮನಿಸಬಹುದು. ಕಂಡುಬರುವ ವಿಷ್ಣುವು ಚತುರ್ಭುಜನಾಗಿದ್ದು ಸಮಸ್ಥಾನದಲ್ಲಿದ್ದಾನೆ. ಪೀತಾಂಬರಧರನಾದ ವಿಷ್ಣು ಮೇಲಿನ ಎಡಗೈಯಲ್ಲಿ ಶಂಖ, ಬಲಗೈಯಲ್ಲಿ ಚಕ್ರ, ಕೆಳಗಿನ ಬಲಗೈಯಲ್ಲಿ ಫಲವನ್ನು ಹಿಡಿದುಕೊಂಡಿದ್ದು ಕೆಳಗಿನ ಎಡಗೈ ಕಟ್ಯವಲಂಬಿತವಾಗಿದೆ. ಕಿರೀಟಮುಕುಟಧಾರಿಯಾಗಿದ್ದಾನೆ. ಮುಖವು ಶಾಂತಭಾವದಿಂದ ಕೂಡಿದ್ದು ಲಕ್ಷಣವಾಗಿದೆ. ದಷ್ಟಪುಷ್ಟನಾಗಿರುವ ವಿಷ್ಣುವು ಆಭರಣಗಳಿಂದ ಅಲಂಕೃತನಾಗಿದ್ದಾನೆ. ಕೈಗಳಲ್ಲಿ ತೋಳುಬಂಧಿಯಿದ್ದು ನಾಗಬಂಧನದಂತಿದೆ. ಎರಡು ಮುಂಗೈಗಳಲ್ಲಿ ದಪ್ಪನಾದ ಬಳೆಗಳನ್ನು ಕೆತ್ತಲಾಗಿದೆ. ದಪ್ಪವಾದ ಯಜ್ಞೋಪವೀತ, ಎದೆಹಾರ, ಮೇಖಲೆ, ಕಟಿಬಂಧ, ಒಡ್ಯಾಣ, ಉದರಬಂಧ ಇತ್ಯಾದಿಗಳಿಂದ ಅಲಂಕೃತನಾಗಿದ್ದಾನೆ. ತೊಡೆಯ



ಭಾಗದಲ್ಲಿ ಎರಡು ಕಡೆಗಳಿಂದಲೂ ಪೀತಾಂಬರವನ್ನು ಇಳಿಬಿಡಲಾಗಿದ್ದು ದಪ್ಪನಾಗಿ ಎರಡು ಸುತ್ತುಗಳಲ್ಲಿ ಕೆತ್ತಲಾಗಿದ್ದು ಇದರಿಂದ ನೆರಿಗೆಗಳು ಸ್ಪಷ್ಟವಾಗಿ ಕಾಣಲು ಅನುಕೂಲವಾಗುತ್ತದೆ. ಕೈಗಳು ದಪ್ಪವಾಗಿದ್ದು ಮೊದಲ ಹಂತದ ಶಿಲ್ಪಗಳಿಗಿಂತ ವಿಭಿನ್ನವಾಗಿ ಕಂಡುಬರುತ್ತವೆ. ಶಿಲ್ಪದ ಮುಖಭಾವ ಅತ್ಯಂತ ಸೌಮ್ಯವಾಗಿದ್ದು ಸಾತ್ವಿಕ ಕಳೆ ವ್ಯಕ್ತವಾಗುತ್ತದೆ. ಇಲ್ಲಿನ ಶಿಲ್ಪವನ್ನು ಬಿಡಿಯಾಗಿ ಕೆತ್ತಲಾಗಿದ್ದು ಯಾವುದೆ ಕುಬ್ಜಗಣ ಶಿಲ್ಪಗಳಿಲ್ಲ. ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವಿದ್ದರೂ ಶಿಲ್ಪದ ಒಟ್ಟು ಚೌಕಟ್ಟು ಸಣ್ಣದಾಗಿರುವುದರಿಂದ ಇದು ತೀರಾ (conjusted) ಅನ್ನಿಸಿಬಿಡುತ್ತದೆ. ಇದೇನೇ ಇದ್ದರೂ ಶಿಲ್ಪದ ಕೆತ್ತನೆಯು ಅಲಂಕಾರಿಕವಾಗಿದ್ದು ಗಮನ ಸೆಳೆಯುತ್ತದೆ. ಈ ಶಿಲ್ಪದ ಕೆತ್ತನೆಯ ರೀತಿಯನ್ನು ಗಮನಿಸಿದರೆ ಇದು ೮ನೇ ಶತಮಾನ ಅಥವಾ ಆನಂತರ ಕೆತ್ತನೆಗೊಂಡ ಶಿಲ್ಪವಾಗಿರಬಹುದು.

ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಇಲ್ಲಿ ಹೇಳಲಾದ ಕೆಲವು ಮುಖ್ಯ ಶಿಲ್ಪಗಳಲ್ಲದೆ ಇನ್ನೂ ಕೆಲವು ಶಿಲ್ಪಗಳಿವೆ. ಮುಖ್ಯವಾಗಿ ರಾಮಾಯಣ ಮತ್ತು ಮಹಾಭಾರತದ ಕಥಾನಕಗಳನ್ನು ಹೇಳುವ ಕೆಲ ಶಿಲ್ಪಗಳೂ ಇಲ್ಲಿವೆ. ಇದಲ್ಲದೆ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ತ್ರಿಮೂರ್ತಿಗಳ ಒಂದು ಶಿಲ್ಪವೂ ಇದ್ದು ಸಣ್ಣ ಗಾತ್ರದ ಶಿಲ್ಪವಾದರೂ ಗಮನಿಸಬಹುದಾಗಿದೆ. ಕೆತ್ತನೆ ದೃಷ್ಟಿಯಿಂದ ಈ ಶಿಲ್ಪವು ಅಷ್ಟೊಂದು ಮಹತ್ವದ್ದಾಗಿ ಕಂಡುಬರುವುದಿಲ್ಲ. ಇಲ್ಲಿ ಹೇಳಲಾಗಿರುವುದು ಕೆಲವು ಮುಖ್ಯವಾದ ಬಿಡಿಶಿಲ್ಪಗಳಾಗಿದ್ದು, ಅದರಲ್ಲೂ ವಿಷ್ಣು ಮತ್ತು ಆತನ ಅವತಾರದ ಕಥೆಗಳನ್ನು ತೋರಿಸುವ ಶಿಲ್ಪಗಳಾಗಿವೆ. ಇಲ್ಲಿನ ಕೆತ್ತನೆಗಳು ಹೆಚ್ಚುಪಾಲು ಶೈವಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳಾಗಿದ್ದರೂ ಅಲ್ಲಲ್ಲಿ ಕೆಲ ವೈಷ್ಣವ ಧರ್ಮದ ಶಿಲ್ಪಗಳಿರುವುದು ಗಮನಾರ್ಹವಾದುದಾಗಿದೆ.

ಶಿಲ್ಪ –೭

ಮಲ್ಲಿಕಾರ್ಜುನ ದೇವಾಲಯದ ಹೊರಭಾಗದ ಬಲಬದಿಯ ಗೋಡೆಯೊಂದರಲ್ಲಿ ವಿಷ್ಣುವಿನ ಇನ್ನೊಂದು ಸಮಭಂಗಿಯಲ್ಲಿ ನಿಂತಿರುವ ಶಿಲ್ಪದ ಕುರುಹುಗಳನ್ನು ಗುರುತಿಸಬಹುದು. ಇಲ್ಲಿನ ಶಿಲ್ಪದಲ್ಲಿ ಮುಖ ಮಾತ್ರ ಸ್ಪಷ್ಟವಿದ್ದು ಉಳಿದ ಭಾಗಗಳು ಹಾಳಾಗಿವೆ. ಮುಖವು ಶಾಂತಭಾವವನ್ನು ಸೂಚಿಸುತ್ತಿದ್ದು, ಶಿಲ್ಪದ ಅಳಿದುಳಿದ ಭಾಗಗಳ ಆಧಾರದಿಂದ ಇದನ್ನು ವಿಷ್ಣುವಿನ ಶಿಲ್ಪವೆಂದು ಗುರುತಿಸಬೇಕಾಗಿದೆ.

ಈ ಶಿಲ್ಪವು ಅಪೂರ್ಣ ಕೆತ್ತನೆಯಾಗಿದ್ದರೂ ಶಿಲ್ಪವು ಆಕರ್ಷಕವಾಗಿದೆ. ಇಲ್ಲಿ ವಿಷ್ಣುವು ಸರ್ವಾಂಗ ಸುಂದರನಾಗಿದ್ದು ವಿವಿಧ ಆಭರಣಗಳನ್ನು ಹೊಂದಿದ್ದಾನೆ. ಕಿರೀಟ ಮುಕುಟವನ್ನು ಹೊಂದಿರುವ ವಿಷ್ಣುವಿನ ತಲೆಯು ಸ್ವಲ್ಪವೇ ಎಡಕ್ಕೆ ವಾಲಿಕೊಂಡಿರುವುದನ್ನು ಗಮನಿಸಬಹುದು. ಮೇಲಿನ ಎಡಗೈಯಲ್ಲಿ ದೊಡ್ಡದಾದ ಶಂಖವಿದೆ. ಮೇಲಿನ ಬಲಗೈಯಲ್ಲಿ ಚಕ್ರವಿರಬೇಕಾಗಿದ್ದು ಕೆತ್ತನೆ ಅಪೂರ್ಣವಾಗಿದೆ. ಕೆಳಗಿನ ಎಡಗೈ ಕಟ್ಯವಲಂಬಿತವಾಗಿದೆ. ಕಿವಿಯಲ್ಲಿ ಜೋತಾಡುತ್ತಿರುವ



ದೊಡ್ಡದಾದ ಕರ್ಣಕುಂಡಲಗಳನ್ನು ಗಮನಿಸಬಹುದು. ಶಿಲ್ಪವು ದಷ್ಟ–ಪುಷ್ಟವಾಗಿದೆಯಾದರೂ ಕಲಾತ್ಮಕತೆ ಮತ್ತು ಅಂಗಾಂಗಗಳ ಕೆತ್ತನೆಯಲ್ಲಿ ಪ್ರಮಾಣಬದ್ಧತೆಯ ಕೊರತೆಯನ್ನು ಗಮನಿಸಬಹುದು. ಶಿಲ್ಪದ ಒಟ್ಟು ಕೆತ್ತನೆಯ ವಿಚಾರವನ್ನು ಗಮನಿಸಿದರೆ ಶಿಲ್ಪವು ಪರಿಪೂರ್ಣವಾಗಿ ಕೆತ್ತಲ್ಪಟ್ಟಿದ್ದರೆ ಇನ್ನಷ್ಟು ಸುಂದರವಾಗಿರುತ್ತಿತ್ತು. ಇಂತಹ ಹಲವಾರು ಶಿಲ್ಪಗಳು ಇದೇ ದೇವಾಲಯದ ಪರಿಸರದಲ್ಲಿ ಕಂಡುಬರುತ್ತವೆ. ಹಲವು ಶಿಲ್ಪಗಳು ಅಪೂರ್ಣ ಕೆತ್ತನೆಯಾಗಿದ್ದರೆ ಇನ್ನೂ ಕೆಲವು ಶಿಲ್ಪಗಳು ಭಗ್ನಗೊಂಡಿರುವುದೂ ಕಂಡುಬರುತ್ತವೆ. ಹಲವು ಶಿಲ್ಪಗಳು ವಿಷ್ಣುವಿನ ರೂಪವನ್ನು ಹೊಂದಿದ್ದರೂ ಅವು ವೈಷ್ಣವ ಶಿಲ್ಪಗಳು ಹೌದೊ ಅಲ್ಲವೊ ಎಂದು ಗುರುತಿಸುವುದು ಕಷ್ಟವಾಗುತ್ತದೆ.

ಶಿಲ್ಪ –೮

ಪಟ್ಟದಕಲ್ಲು ಆವರಣದಲ್ಲಿರುವ ಜಂಬುಲಿಂಗ ದೇವಾಲಯದ ಗೋಡೆಯ ಹೊರಭಾಗದಲ್ಲಿ ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಶಿಲ್ಪವೊಂದಿದ್ದು ಶಿಲ್ಪದ ಬಹುಪಾಲು ಭಾಗ ಜೀರ್ಣಗೊಂಡಿದೆ, ಕಲಾತ್ಮಕವಾಗಿ ಅಷ್ಟೇನೂ ಪರಿಣಾಮಕಾರಿಯಾಗಿಲ್ಲವೆಂದು ಉಳಿದ ಶಿಲ್ಪಗಳಿಗೆ ಹೋಲಿಸಿದರೆ ತಿಳಿದುಬರುತ್ತದೆ. ಶಿಲ್ಪವು ತೆಳ್ಳಗೆ ಎತ್ತರವಾಗಿದ್ದು ದೇಹಾಕಾರವನ್ನು ಹೊಂದಿದೆ. ಚತುರ್ಭುಜ ವಿಷ್ಣುವು ಮೇಲಿನ ಎರಡು ಕೈಗಳಲ್ಲಿ ಶಂಖ, ಚಕ್ರಗಳನ್ನು ಹಿಡಿದಿದ್ದು ಕೆಳಗಿನ ಬಲಗೈ ವರದಹಸ್ತ ಹೊಂದಿದ್ದು ಎಡಗೈ ಕಟ್ಯವಲಂಬಿತವಾಗಿದೆ. ತಲೆಯ ಹಿಂದೆ ಸಣ್ಣದಾದ ಪ್ರಭಾಮಂಡಲವಿದ್ದು, ಕಿರೀಟಮುಕುಟವನ್ನು ಹೊಂದಿದೆ.

ಶಿಲ್ಪದ ಸುತ್ತಲೂ ಕಿರುದೇವಾಲಯದ ರಚನೆಯಿದ್ದು ಗೋಪುರವನ್ನು ವ್ಯಾಳಿ, ಲತಾಕುಂಜಗಳ ಕೆತ್ತನೆಯಿಂದ ಅಲಂಕರಿಸಲಾಗಿದೆ. ಇವುಗಳಿಗೆ ಆಧಾರವಾಗಿ ಕೆತ್ತಲಾಗಿರುವ ಕಂಬಗಳು ಕೂಡಾ ತೆಳ್ಳಗಿನ ಉಬ್ಬುಶಿಲ್ಪಗಳ ಕೆತ್ತನೆಯನ್ನು ಹೊಂದಿವೆ. ಇದೇ ದೇವಾಲಯದ ಹಿಂದಿನ ಗೋಡೆಯಲ್ಲಿ ಸೂರ್ಯನಾರಾಯಣ ಕೆತ್ತನೆಯ ಶಿಲ್ಪವಿದ್ದು ಅದೂ ಕೂಡ ಇದೆ ರೀತಿಯ ರಚನೆಯಾಗಿದೆ. ಈ ಶಿಲ್ಪಗಳ ರಚನೆಯನ್ನು ಗಮನಿಸಿದರೆ ಈ ಶಿಲ್ಪಗಳು ನಂತರದ ರಚನೆಯಿರಬಹುದು ಎಂದು ಅನಿಸುವಂತಿದೆ. ಅಲ್ಲಿರುವ ಇತರ ಕೆಲಶಿಲ್ಪಗಳು ಇವುಗಳಿಗಿಂತ ಭಿನ್ನವಾಗಿದ್ದು ಎಲ್ಲಾ ಶಿಲ್ಪಗಳು ಒಂದೇ ಶೈಲಿಯಲ್ಲಿಲ್ಲದಿರುವುದು ಗಮನಿಸಬೇಕಾದ ಅಂಶ.

ಶಿಲ್ಪ –೯

ಬಾದಾಮಿಯ ಭೂತನಾಥ ದೇವಾಲಯ ಹಿಂಭಾಗದ ಪಂಚಲಿಂಗ ಬಂಡೆಯ ಮೇಲೆ ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಶಿಲ್ಪವು ಬಹಳಷ್ಟು ಮಾಸಿ ಹೋಗಿದೆಯಾದರೂ ಗಮನಾರ್ಹವಾಗಿದೆ. ಇಲ್ಲಿ ವಿಷ್ಣು ಸಮಭಂಗಿಯಲ್ಲಿ ನಿಂತಿದ್ದು, ಚತುರ್ಭುಜನಾಗಿದ್ದಾನೆ. ಮೇಲಿನ ಎರಡು ಕೈಗಳಲ್ಲಿ ಶಂಖ, ಚಕ್ರಗಳನ್ನು ಹಿಡಿದಿದ್ದು ಕೆಳಗಿನ ಬಲಗೈಯಲ್ಲಿ ಬಹುಶಃ ವರದ ಹಸ್ತ ಇದ್ದಿರಬಹುದು. ಇದು ಭಗ್ನಗೊಂಡಿದ್ದರಿಂದ ಸರಿಯಾಗಿ ವಿವರಿಸಲಾಗುವುದಿಲ್ಲ. ಕೆಳಗಿನ

ಎಡಗೈ ಸೊಂಟದ ಮೇಲಿದೆ. ಕಿರೀಟ ಮುಕುಟವನ್ನು ಹೊಂದಿದ್ದಾನೆ. ಕಟಿವಸ್ತ್ರವು ದೊಡ್ಡದಾಗಿದ್ದು ದಪ್ಪವಾಗಿದೆ. ಆಭರಣದ ವಿವರಗಳು ಕಂಡುಬರುವುದಿಲ್ಲ. ಒಟ್ಟು ನೋಟಕ್ಕೆ ಶಿಲ್ಪವು ಸುಂದರವಾಗಿದ್ದು ಸರಳತೆಯಿಂದ ಕೂಡಿ ದ್ವಿಮಾನದಲ್ಲಿದೆ.

ಶಿಲ್ಪ –೧೦

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯ ಹೊರಭಾಗದ ಭಿತ್ತಿಯಲ್ಲಿ ಪೂರ್ವಾಭಿಮುಖವಾಗಿ ಚತುರ್ಭುಜ ವಿಷ್ಣು ಅಲಂಕಾರಿಕ ವಸ್ತುಗಳಿಂದ ಭೂಷಿತನಾಗಿದ್ದಾನೆ. ಪದ್ಮದ ಮೇಲೆ ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಕೈಗಳಲ್ಲಿ ಬಲಗೈಯಲ್ಲಿ ಫಳವಿದ್ದಿರಬಹುದು. ಎಡಗೈ ಕಟ್ಯವಲಂಭಿತವಾಗಿದೆ. ಹಿಂದಿನ ಎರಡು ಕೈಗಳಲ್ಲಿ ಚಕ್ರ–ಶಂಖವನ್ನು ಹಿಡಿದಿದ್ದಾನೆ. ಕಿರೀಟಮುಕುಟಧಾರಿಯಾಗಿರುವ ವಿಷ್ಣುವಿನ ತಲೆಯ ಹಲವು ಆಭರಣಗಳಿಂದ ಅತ್ಯಾಕರ್ಷಕವಾಗಿ ದ್ವಿಮಾನದಲ್ಲಿದ್ದರೂ ತ್ರಿಮಾನದ ಭಾವನೆ ಮೂಡಿಬಂದಿದ.ಎ ಇವನ ಬಲಭಾಗದಲ್ಲಿ ಚಿಕ್ಕದಾದ ಕುಬ್ಜಗಣವಿದೆ. ಇವನ ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದು ದ್ವಿಭಂಗಿಯಲ್ಲಿದ್ದಾನೆ. ಮತ್ತು ಎಡಭಾಗದಲ್ಲಿ ಗರುಡನು ತನ್ನ ಎರಡು ಕೈಗಳಿಂದ ವಿಷ್ಣುವಿಗೆ ಕೈಮುಗಿರಿಯುತ್ತಿರುವುದು ಗಮನಾರ್ಹವಾಗಿದೆ. ಒಟ್ಟಾರೆ ಇಲ್ಲಿನ ವಿಷ್ಣು ಶಿಲ್ಪಗಳಲ್ಲಿ ಈ ಶಿಲ್ಪ ಆಕರ್ಷಕವಾಗಿದೆ.

ಶಿಲ್ಪ –೧೧

ಬಾದಾಮಿಯ ವಸ್ತುಸಂಗ್ರಹಾಲಯದ ಮುಂದೆ ಬಲಭಾಗದಲ್ಲಿರುವ ಬಂಡೆಯಲ್ಲಿರುವ ವಿಷ್ಣು ಪೂರ್ವಾಭಿಮುಖನಾಗಿ ಚತುರ್ಭುಜನಾಗಿದ್ದಾನೆ. ಈ ಮೇಲೆ ನೋಡಿದ ಶಿಲ್ಪದ ಹಾಗೆ ಕಂಡರೂ ಕೆತ್ತನೆಯಲ್ಲಿ ವಿಶಿಷ್ಟವಾಗಿದೆ. ಈ ಶಿಲ್ಪದಲ್ಲಿ ಕೆಲವು ಆಭರಣಗಳಿದ್ದು, ಶಂಖ, ಚಕ್ರ ಹಿಡಿದಿದ್ದು, ಮುಂದಿನ ಬಲಗೈಯಲ್ಲಿ ವೃತ್ತಾಕಾರದ ಫಲವನ್ನಿಡಿದಿದ್ದಾನೆ. ಎಡಗೈ ಕುಬ್ಜ ಜೊತೆಯಿಂದ ಕೂಡಿದೆ. ಪ್ರಮಾಣ ಬದ್ಧತೆಯಲ್ಲಿ ಕೊರತೆಯಿದ್ದು, ಕೆಲವು ಭಾಗ ಸವೆದು ಹೋಗಿದೆ. ಆದರೆ ಶಿಲ್ಪದ ಸೌಂದರ್ಯವನ್ನು ಸವಿಯಲು ತೊಂದರೆಯಿಲ್ಲ.

ಶಿಲ್ಪ –೧೨

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖ ಅಷ್ಟಭುಜವುಳ್ಳ ವಿಷ್ಣುವಿನ ಶಿಲ್ಪವಿದೆ. ಈ ಶಿಲ್ಪದ ಬಲಗೈಗಳು ಭಗ್ನವಾಗಿರುವುದರಿಂದ ಆ ಕೈಗಳಲ್ಲಿ ಹಿಡಿದಿರುವಂತಹ ಸಾಮಗ್ರಿಗಳು ಅಸ್ಪಷ್ಟವಾಗಿದೆ. ಹಿಂದಿನ ಕೈಗಳಲ್ಲಿ ಒಂದರಲ್ಲಿ ಬಾಣ, ಕತ್ತಿ, ಗದೆ (ಚಕ್ರ ವಿಶಿಷ್ಟವಾಗಿದೆ), ಎಡಕ್ಕೆ ಒಂದು ಕಟ್ಯವಲಂಬಿತವಾಗಿದೆ. ಹಿಂದಿನ ಮೂರು ಕೈಗಳಲ್ಲಿ ಶಂಖ, ಬಿಲ್ಲು, ಗುರಾಣಿ ಹಿಡಿದಿದ್ದು ಮತ್ತು ಬೆನ್ನಿನ ಹಿಂದೆ ಬತ್ತಾಳಿಕೆ ಭುಜದ ಎರಡು ಬದಿಗಳಲ್ಲಿ ಕಾಣಬಹುದು. ಈ ಶಿಲ್ಪವು ಕಿರೀಟದಾರಿಯಾಗಿದ್ದು, ಯಜೋಪವೀತ ಕಂಟಹಾರ, ಕಟಿಬಂಧ, ಉದರಬಂಧ, ತೋಳಬಂಧಿ, ಶಂಖು, ಆಭರಣಗಳಿಂದ ಭೂಷಿತನಾಗಿದ್ದನೆ. ದ್ವಿಮಾನದಲ್ಲಿ ರಚನೆಯಾಗಿರುವ



ಈ ಶಿಲ್ಪದ ಇಬ್ಬದಿಗಳಲ್ಲಿ ಚಿಕ್ಕಗಾತ್ರ ಕುಬ್ಜಗಣ ಶಿಲ್ಪಗಳಿವೆ. ಎಡಪಕ್ಕದಲ್ಲಿರುವ ಶಿಲ್ಪವು ಗರುಡನಿರಬಹುದು. ಮುಸುಕಾಗಿ ಕಾಣುತ್ತಿರುವ ಈ ಶಿಲ್ಪವು ಆಕರ್ಷಕವಾಗಿ ಮೂಡಿಬಂದಿದೆ.

ಶಿಲ್ಪ –೧೩

ಮಹಾಕೂಟ ಪರಿಸರದಲ್ಲಿ ಹೊಂಡದ ಪಕ್ಕದಲ್ಲಿ ನಿಲ್ಲಿಸಲಾದ ವಿಷ್ಣುವಿನ ಶಿಲ್ಪವು ಸಮಭಂಗಿಯಲ್ಲಿದ್ದು, ಚತುರ್ಭುಜನಾಗಿದ್ದಾನೆ. ಬಲಗೈಯಲ್ಲಿ ಫಲವಿರಬಹುದು (ಸೀತಾಫಲ), ಎಡಗೈ ಕಟ್ಯವಲಂಭಿತವಾಗಿದೆ. ಹಿಂದಿನ ಎರಡು ಕೈಗಳಲ್ಲಿ ಚಕ್ರ–ಶಂಖವನ್ನು ಹಿಡಿದಿದ್ದಾನೆ. ಈ ಶಿಲ್ಪವು ಬೇರೆ ಕಡೆಯಿಂದ ತಂದು ನಿಲ್ಲಿಸಲಾದ ಈ ಶಿಲ್ಪವು ಆಕರ್ಷಕವಾಗಿದ್ದು, ಕೆಲ ಆಭರಣಗಳಿದ್ದು ಕಿರೀಟವು ಅಲಂಕಾರವಿಲ್ಲದೆ ಹಾಗೆ ಇವೆ. ಈ ಶಿಲ್ಪವು ಪೂರ್ಣಗೊಳ್ಳದೆ ಅಪೂರ್ಣವಾಗಿದೆ. ಕೆತ್ತಿದ ರೀತಿಯನ್ನು ಈ ಶಿಲ್ಪದಲ್ಲಿ ಗಮನಿಸಬಹುದು. ನಾಲ್ಕು ಅಡಿ ಎತ್ತರದ ಈ ಶಿಲ್ಪವು ದ್ವಿಮಾನದ ಉಬ್ಬು ಶಿಲ್ಪವಾಗಿದೆ.


ಶಿಲ್ಪ –೧೪

ಭೂತನಾಥ ದೇವಾಲಯ ಬಲಭಾಗದ ಚಿಕ್ಕ ದೇವಾಲಯದಲ್ಲಿ ಚತುರ್ಭುಜ ವಿಷ್ಣು ಶಿಲ್ಪವಿದೆ. ಬಲಗೈಯಲ್ಲಿ ಫಲ ಹಿಡಿದಿದ್ದು, ಎಡಗೈ ಕಟ್ಯವಲಂಭಿತವಾಗಿದೆ. ಹಿಂದಿನ ಕೈಗಳಲ್ಲಿ ಚಕ್ರ, ಶಂಖವನ್ನು ಹಿಡಿದಿದ್ದಾನೆ. ಅತ್ಯಂತ ಸರಳರೇಖೆಯ ವಿಷ್ಣುವಿನ ಮೇಲಿರುವ ಕೊರಳ ಹಾರ, ಕಟಿಬಂಧ, ಅಧೋವಸ್ತ್ರ ಅತ್ಯಾಕರ್ಷಕವಾಗಿದೆ. ಈ ಶಿಲ್ಪದಲ್ಲಿ ಕೆಳಭಾಗವು ಸವೆದು ಹೋಗಿದ್ದು, ಕುರುಹುಗಳು ಮಾತ್ರ ಕಾಣುತ್ತದೆ. ಇದು ಬಿಡಿ ಶಿಲ್ಪವಾಗಿದ್ದು, ಹಿಂದಿನ ಎರಡೂ ಕೈಗಳು ಪ್ರಮಾಣದಲ್ಲಿ ಚಿಕ್ಕದಾಗಿದೆ. ಮತ್ತು ಮುಖವು ದೊಡ್ಡದಾಗಿದ್ದು ಹೀಗೆ ಪ್ರಮಾಣದಲ್ಲಿ ಏರುಪೇರುಗಳಾಗಿವೆ. ಬಲಪಕ್ಕದಲ್ಲಿ ಗರುಡನು ಕೈಮುಗಿದು ಕುಳಿತಿದ್ದಾನೆ. ಒಟ್ಟಾರೆ ದ್ವಿಮಾನದಲ್ಲಿ ರಚಿತವಾದ ಈ ಶಿಲ್ಪವು ಸುಂದರವಾದ ಕೆತ್ತನೆಯಾಗಿದೆ.

ಶಿಲ್ಪ –೧೫

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿ ಚತುರ್ಭುಜ ವಿಷ್ಣುವಿನ ಶಿಲ್ಪವಿದೆ. ಈ ಶಿಲ್ಪದಲ್ಲಿ ಕಿರೀಟವು ಚಿಕ್ಕದಾಗಿದೆ. ಹಸನ್ಮುಖ ಹೊಂದಿರುವ ವಿಷ್ಣುವಿನ ತಲೆಯ ಹಿಂದೆ ಪ್ರಭಾಮಂಡಲವಿದ್ದು, ಕೊರಳಲ್ಲಿ ಆಕರ್ಷಕ ಸರವಿದೆ. ಮತ್ತು ತೋಳಬಂಧಿ, ಯಜ್ಞೋಪವೀತ, ಉದರಬಂಧ, ಕಟಿಬಂಧ ಹಾಗೂ ಕೈಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಕಟಿಭಾಗದಿಂದ ಪಾದದವರೆಗೆ ತಿಳುವಾದ ವಸ್ತ್ರವನ್ನು ಧರಿಸಿದ್ದಾನೆ. ಹಿಂದಿನ ಕೈಯಲ್ಲಿ ಶಂಖಚಕ್ರವಿದೆ. ಈ ಶಿಲ್ಪದಲ್ಲಿ ಸೊಂಟಕ್ಕೆ ಕಟ್ಟಿರುವ ಬಂಧಗಳು ಆಕರ್ಷಕವಾಗಿ ನೈಜತೆಯ ಭಾವನೆಯನ್ನು ನೀಡುತ್ತದೆ. ದ್ವಿಮಾನದಲ್ಲಿ ರಚಿತಾವಾಗಿದೆ.

ವಿಷ್ಣು ಶಿಲ್ಪಗಳು



ಶಿಲ್ಪ-೧. ಮೂರನೆಯ ಗುಹಾಲಯ, ಬಾದಾಮಿ



ಶಿಲ್ಪ-೨. ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೩. ಮಾಲೆಗಿತ್ತಿ ಶಿವಾಲಯ, ಬಾದಾಮಿ



ಶಿಲ್ಪ-೪. ಪಾಪನಾಥ ದೇವಾಲಯ, ಪಟ್ಟದಕಲ್ಲು

ವಿಷ್ಣು ಶಿಲ್ಪಗಳು



ಶಿಲ್ಪ-೫. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೬. ಮಲ್ಲಿಕಾರ್ಜುನ ದೇವಾಲಯ, ಮಹಾಕೂಟ



ಶಿಲ್ಪ-೭. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು




ಶಿಲ್ಪ-೮. ಜಂಬುಲಿಂಗ ದೇವಾಲಯ, ಪಟ್ಟದಕಲ್ಲು

ವಿಷ್ಣು ಶಿಲ್ಪಗಳು




ಶಿಲ್ಪ-೯. ಪಂಚಲಿಂಗ ಬಂಡೆ, ಬಾದಾಮಿ



ಶಿಲ್ಪ-೧೦. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೧೧. ಪ್ರಾಚ್ಯವಸ್ತು ಸಂಗ್ರಹಾಲಯದ ಮುಂದೆ ಇರುವ ಬಂಡೆ, ಬಾದಾಮಿ




ಶಿಲ್ಪ-೧೨. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು


ವಿಷ್ಣು ಶಿಲ್ಪಗಳು



ಶಿಲ್ಪ-೧೩. ಮಹಾಕೂಟ ಆವರಣ, ಮಹಾಕೂಟ



ಶಿಲ್ಪ-೧೪. ಭೂತನಾಥ ದೇವಾಲಯ ಸಂಕೀರ್ಣ, ಬಾದಾಮಿ



ಶಿಲ್ಪ-೧೫. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೬. ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ –೧೬

ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯದ ಹೊರಭಿತ್ತಿಯ ಪಶ್ಚಿಮಾಭಿಮುಖವಾಗಿರುವ ಈ ಶಿಲ್ಪವು ಅಪೂರ್ಣವಾಗಿದೆ. ಮುಖಮಾತ್ರ ಕೆತ್ತಲಾಗಿದ್ದು, ಉಳಿದ ಭಾಗವೆಲ್ಲಾ ಹಾಗೆಯೇ ಬಿಟ್ಟಿದ್ದಾರೆ. ಈ ಶಿಲ್ಪವನ್ನು ನೋಡಿದರೆ ಪ್ರಮಾಣದ ಕೆತ್ತನೆಯಲ್ಲಿ ಅಡಚಣೆಯಾಗಿರಬಹುದು. ಆದ್ದರಿಂದ ಈ ಶಿಲ್ಪವನ್ನು ಪೂರ್ಣಗೊಳಿಸದೇ ಹಾಗೆ ಬಿಟ್ಟಿರುವ ಸಾಧ್ಯತೆ ಕೂಡ ಕಂಡುಬರುತ್ತದೆ. ಇಂತಹ ಅನೇಕ ಶಿಲ್ಪಗಳು ಅಪೂರ್ಣವಾಗಿ ಚಾಲುಕ್ಯ ಶಿಲ್ಪಿಗಳು ಬಿಟ್ಟಿದ್ದಾರೆ. ಎಲ್ಲ ಶಿಲ್ಪಗಳನ್ನು ಪ್ರಮಾಣ ತಪ್ಪಿದರೆನ್ನಲು ಸಾಧ್ಯವಿಲ್ಲ. ಏಕೆಂದರೆ ಕೆಲವು ಶಿಲ್ಪಗಳ ರಚನೆಯ ರೀತಿ ತಿಳಿಸಿಕೊಡಲು ಹಾಗೆ ಬಿಟ್ಟಿರುವ ಸಾಧ್ಯತೆ ಇರಬಹುದು.

ತ್ರಿವಿಕ್ರಮನ ಶಿಲ್ಪಗಳು

ಶಿಲ್ಪ –೧

ಬಾದಾಮಿಯ ಎರಡನೇ ವೈಷ್ಣವ ಗುಹಾಲಯದ ಮುಖಮಂಟಪದ ಪಶ್ಚಿಮ ಗೋಡೆಯಲ್ಲಿ ವಾಮನಾವತಾರದ ಕಥಾರೂಪಕದ ಹಿರಿಶಿಲ್ಪವಿದೆ. ವಿರಾಟ್‌ರೂಪದ ತ್ರಿವಿಕ್ರಮನ ಎಡಬದಿಗೆ ಕೆಳಗಡೆ ಅಸುರ ಬಲಿಚಕ್ರವರ್ತಿಯ ಪುರೋಹಿತ ಶುಕ್ರಾಚಾರ್ಯನು ವಟುರೂಪದ ಬ್ರಹ್ಮಚಾರಿ ಕುಳ್ಳ ವಾಮನರೂಪಿ ವಿಷ್ಣುವಿಗೆ ಅರ್ಘ್ಯ ನೀಡುತ್ತಿದ್ದಾನೆ. ಶುಕ್ರಾಚಾರ್ಯನು ಕೃಷ್ಣಾಜಿನ, ಯಜ್ಞೋಪವೀತಧಾರಿಯಾಗಿದ್ದಾನೆ. ವಾಮನನು ಬೇಡಿದ ಮೂರು ಹೆಜ್ಜೆ ಪ್ರದೇಶವನ್ನು ಬಲಿಚಕ್ರವರ್ತಿ ಅರ್ಘ್ಯ ಬಿಟ್ಟು ನೀಡುತ್ತಿರುವ ದೃಶ್ಯವಿದು.[೧೨] ಸ್ವರೂಪದಲ್ಲಿರುವ ತ್ರಿವಿಕ್ರಮ ವಿಷ್ಣುವು ಅಷ್ಟ ಭುಜಗಳನ್ನು ಹೊಂದಿದೆ. ಇಲ್ಲಿ ವಾಮನನು ಬ್ರಾಹ್ಮಣವಟುವಾಗಿ ಕೈಯಲ್ಲಿ ಕೊಡೆ ಹಿಡಿದುಕೊಂಡು ನಿಂತಿರುವ ಶಿಲ್ಪ, ಅದರ ಪಕ್ಕದಲ್ಲಿ ವಾಮನನು ತ್ರಿವಿಕ್ರಮನಾಗಿ ರೂಪಾಂತರ ಹೊಂದಿರುವ ಬೃಹದಾಕರದ ರಾಜಸ್ವಿಯಾಗಿರುವ ವಿಷ್ಣುವಿನ ಶಿಲ್ಪವೂ ಇದೆ. ತ್ರಿವಿಕ್ರಮನು ಬೃಹದಾಕಾರವಾಗಿ ಬೆಳೆದು ಭೂಮಿ–ಆಕಾಶಗಳನ್ನು ವ್ಯಾಪಿಸಿ ನಿಂತಿರುವ ಶಿಲ್ಪವೂ ಜೊತೆಯಾಗಿ ಕಂಡುಬರುತ್ತದೆ.

‘ಇಲ್ಲಿ ತ್ರಿವಿಕ್ರಮ ರೂಪಿ ವಿಷ್ಣುವಿಗೆ ಅಷ್ಟಭುಜಗಳು, ಕೈಗಳಲ್ಲಿ ಶಂಖ, ಚಕ್ರಗಳ ಜೊತೆಗೆ ವಿದ್ಯಾಧರವೆಂಬ ಖಡ್ಗ, ಕೌಮೋದಕೀ ಎಂಬ ಗದೆ, ಬಿಲ್ಲು–ಬಾಣಗಳ ಸಹಿತವಾಗಿದ್ದಾನೆ. ಇಲ್ಲಿ ಮೊದಲು ವಿಷ್ಣು ವಾಮನರೂಪಿಯಾಗಿ ಬಂದಿದ್ದು ಇವನ ಕೈಯಲ್ಲಿ ಪುಟ್ಟ ಕೊಡೆಯಿದೆ. ಶುಕ್ರಾಚಾರ್ಯರ ಕೈಯನ್ನು ಹಿಡಿದು ನಿಂತಿರುವ ಬಲಿರಾಜನ ಪರಿವಾರದೊಂದಿಗೆ ಮಹಾರಾಣಿ ವಿಂಧ್ಯಾವಳಿಯೂ ಇರುವುದನ್ನು ಗಮನಿಸಬಹುದು. ಮತ್ತು ವಿದ್ಯಾಧರ ದಂಪತಿಗಳನ್ನು ಶಿಲ್ಪಿಸಲಾಗಿದೆ. ತ್ರಿವಿಕ್ರಮನು ಎಡಗಾಲನ್ನೆತ್ತಿದ ಹೊಡೆತಕ್ಕೆ ಅಸುರನೊಬ್ಬನು ಆಕಾಶದಲ್ಲಿ ತೂರಿ

---

೧೨. ಡಾ. ಎ. ಮುರಿಗೆಪ್ಪ (ಪ್ರಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೩೪೬



ತಲೆಕೆಳಗಾಗಿ ಬೀಳುತ್ತಿದ್ದಾನೆ. ಚೌಕಾಕಾರದ ಈ ಶಿಲ್ಪ ಸಂಯೋಜನೆಯನ್ನು ಬಳಸದೆ ಉಳಿದ ಸ್ಥಳಾವಕಾಶ ತೀರ ಕಡಿಮೆಯಾದ್ದರಿಂದ ಹೆಚ್ಚು ವ್ಯಕ್ತಿ ಪಾತ್ರಗಳನ್ನು ತುಂಬಿರುವಂತೆ ಗೋಚರವಾಗುತ್ತದೆ.[೧೩] ಶಿಲ್ಪವು ಬಹಳ ಸಂಕೀರ್ಣತೆಯಿಂದ ಕೂಡಿದ್ದು ವಿಷ್ಣುವನ್ನು ದೈತ್ಯಾಕಾರದಲ್ಲಿ ಕೆತ್ತಲಾಗಿದ್ದು ಉಳಿದೆಲ್ಲ ಶಿಲ್ಪಗಳನ್ನು ಆದ್ಯತೆಗೆ ತಕ್ಕಂತೆ ಸಣ್ಣದಾಗಿ ಕೆತ್ತಲಾಗಿದೆ. ಮುಖ್ಯವಾಗಿ ಇಲ್ಲಿ ಕಲಾವಿದರಿಗೆ ವಿಷ್ಣುವಿನ ಭವ್ಯತೆಯನ್ನು ತೋರಿಸುವುದು ಮುಖ್ಯವಾಗಿತ್ತು. ಒಟ್ಟು ಕತೆಗೆ ಭಂಗವಾಗದಂತೆ ಜೊತೆಗೆ ದೈವದ ಸಾಹಸ ಮತ್ತು ದೈವಿಕತೆಗೆ ಮಹತ್ವವನ್ನು ಕೊಟ್ಟು ಕೆತ್ತಲಾಗಿರುವ ಈ ಶಿಲ್ಪವು ನೋಡುಗರಲ್ಲಿ ಭವ್ಯತೆಯ ಅರಿವನ್ನು ಉಂಟುಮಾಡುತ್ತದೆ. ವಿಷ್ಣುವು ತನ್ನ ಎಡಗಾಲನ್ನು ಆಕಾಶದೆತ್ತರಕ್ಕೆ ಚಾಚಿ ನಿಂತಿದ್ದು ತನ್ನ ಕೈಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದಾನೆ. ಶಿಲ್ಪದಲ್ಲಿ ಕಲಾತ್ಮಕವಾದ ಕೆತ್ತನೆ ಗಮನ ಸೆಳೆಯುತ್ತದೆ. ಶಿಲ್ಪದಲ್ಲಿರುವ ಪ್ರತಿಯೊಂದು ವ್ಯಕ್ತಿತ್ವವು ಕ್ರಿಯಾತ್ಮಕವಾಗಿ ಕಾಣಿಸುತ್ತದೆ.

ಶಿಲ್ಪ –೨

ವಾಮನ ತ್ರಿವಿಕ್ರಮ ಶಿಲ್ಪವು ಮೂರನೇ ಗುಹೆಯಾದ ಮಹಾವಿಷ್ಣು ಗುಹೆಯಲ್ಲಿಯೂ ಇದ್ದು ಇದನ್ನು ಎರಡನೇ ಗುಹಾಲಯದ ಶಿಲ್ಪದೊಂದಿಗೆ ತುಲನೆ ಮಾಡಿ ನೋಡಬಹುದಾಗಿದೆ. ಎರಡೂ ಶಿಲ್ಪಗಳೂ ಒಂದೇ ವಿಷಯವನ್ನು ಹೊಂದಿದ್ದರೂ ಶಿಲ್ಪದಲ್ಲಿ ವಿಭಿನ್ನತೆಯನ್ನು ಕಾಣಬಹುದು. ದಷ್ಟಪುಷ್ಟವಾದ ದೇಹವನ್ನು ಹೊಂದಿರುವ ಅಷ್ಟಭುಜ ತ್ರಿವಿಕ್ರಮ ವಿಷ್ಣುವು ತನ್ನ ಒಂದು ಕೈಯಲ್ಲಿ ಬೃಹದಾಕಾರದ ಬಿಲ್ಲನ್ನು ಹಿಡಿದುಕೊಂಡಿದ್ದು ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡಿದ್ದಾನೆ. ಮೇಲಿನ ಬಲಕೈಯೊಂದರಲ್ಲಿ ಚಕ್ರವು ಇದ್ದು ಇನ್ನೊಂದು ಕೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಕಿರೀಟ ಮುಕುಟಧಾರಿಯಾಗಿದ್ದಾನೆ. ಶಿಲ್ಪದಲ್ಲಿ ಮುಖವು ನೇರವಾಗಿದ್ದು ರಾಜಗಾಂಭೀರ್ಯವನ್ನು ಗುರುತಿಸಬಹುದು.

ಎದೆಹಾರ, ಮೇಖಲೆ, ಅಗಲವಾದ ಯಜ್ಞೋಪವೀತ, ಕಂಠಹಾರ, ತೋಳುಬಂಧಿ, ಮತ್ತು ಕಾಲ್ಗಡಗ ಈ ಎಲ್ಲ ಆಭರಣಗಳಿಂದ ಭೂಷಿತನಾಗಿರುವ ವಿಷ್ಣುವು ವಾಮನನಿಂದ ರೂಪಾಂತರಗೊಂಡಿರುವುದನ್ನು ಶಿಲ್ಪಿಯು ತೋರಿಸಿರುವ ರೀತಿ ಅಮೋಘವಾದುದು. ಶಿಲ್ಪದ ದೃಷ್ಟಿಯು ಮುಖ್ಯವ್ಯಕ್ತಿಗೆ ಕೇಂದ್ರೀಕೃತವಾಗುವಂತೆ, ಉಳಿದ ಶಿಲ್ಪಗಳಿಗೆ ಕಡಿಮೆ ಪ್ರಾಮುಖ್ಯವುಂಟಾಗುವಂತೆ ಸಣ್ಣ ಗಾತ್ರದಲ್ಲಿ ಮತ್ತು ಗುಂಪಾಗಿ ಶಿಲ್ಪಸಂಯೋಜನೆ ಮಾಡಿರುವುದು ಇಲ್ಲಿ ಗಮನಾರ್ಹವಾದುದು. ಮೂರನೇ ಗುಹಾಲಯದ ಶಿಲ್ಪದಲ್ಲಿ ಈ ರೀತಿಯ ಸಂಯೋಜನೆ ಕಂಡುಬರುವುದಿಲ್ಲ. ಶಿಲ್ಪದ ಸ್ಥಳಾವಕಾಶದ ಲಭ್ಯತೆಯಲ್ಲಿ ಶಿಲ್ಪಿತ ವಸ್ತುವಿನ ಕಥೆ ಹೇಳುವ ತಂತ್ರವನ್ನು ನಾವಿಲ್ಲಿ ಗಮನಿಸಬಹುದು.

೧೩. ಡಾ. ಎ. ಮುರಿಗೆಪ್ಪ (ಪ್ರಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೩೪೬



ವಿಷ್ಣುವನ್ನು ಬಾಲವಟುವಾದ ವಾಮನನನ್ನಾಗಿ ಸಣ್ಣ ಗಾತ್ರದಲ್ಲಿ ಕೆತ್ತಲಾಗಿದ್ದು ಅವನ ಸಮೀಪ ಬಲಿಚಕ್ರವರ್ತಿಯು ತನ್ನ ಪತ್ನಿಯೊಂದಿಗೆ ಭೂಮಿಯನ್ನು ಧಾರೆಯೆರೆದು ಕೊಡುತ್ತಿರುವ ದೃಶ್ಯವನ್ನು ಕೆತ್ತುವಲ್ಲಿ ತೋರಿದ ಸಂಯೋಜನಾ ತಂತ್ರವನ್ನು ಮೆಚ್ಚಬೇಕಾಗುತ್ತದೆ. ಇಡಿಯ ಕಥಾದೃಶ್ಯವನ್ನು ಒಂದೇ ಚೌಕಟ್ಟಿನಲ್ಲಿ ತೋರಿಸುವಾಗ ಪ್ರತಿಯೊಂದು ವಸ್ತು ಮತ್ತು ವ್ಯಕ್ತಿಗೆ ಇರಬೇಕಾದ ಮಹತ್ವವನ್ನು ಕೊಡುತ್ತಲೇ ದೃಶ್ಯದ ಕಥಾನಾಯಕನಿಗೆ ಹೆಚ್ಚಿನ ಗಮನವನ್ನು ನೀಡಿ ಆ ಮೂಲಕ ದೇವನು ಜಗದ್ವ್ಯಾಪಕನು ಎಂಬ ತತ್ವವನ್ನು ಹೇಳುವ ರೀತಿಯು ಸುಂದರವಾಗಿದೆ. ಇದು ಶಿಲ್ಪಸಂಯೋಜನೆಯ ವಿಚಾರವಾದರೆ ಇನ್ನು ಕೆತ್ತನೆಯ ರೀತಿಯನ್ನು ನೋಡೋಣ.

ಶಿಲ್ಪದ ಪ್ರತಿಯೊಂದು ಭಾಗವೂ ಎಲ್ಲಿಯೂ ಖಾಲಿಯೆನಿಸದಂತೆ ಪ್ರತಿಯೊಂದು ಭಾಗದಲ್ಲಿಯೂ ತನ್ನ ಕೆತ್ತನೆಯ ಕೌಶಲ್ಯವನ್ನು ಮೆರೆದುದು ಇಲ್ಲಿ ಕಂಡುಬರುತ್ತದೆ. ಆಭರಣಗಳು ಎಲ್ಲೆಡೆಯೂ ಅಲಂಕಾರಿಕವಾಗಿದ್ದು ಪ್ರತಿಯೊಂದು ಗೆರೆಯೂ ಜೀವಂತಿಕೆಯನ್ನು ಹೊರಸೂಸುತ್ತದೆ. ವಿಷ್ಣುವು ತನ್ನ ಬಲಗೈಯಲ್ಲಿ ಹಿಡಿದಿರುವ ಗದೆಯೂ ಸುಂದರವಾದ ಅಲಂಕರಣಗಳಿಂದ ಕೂಡಿದ್ದು ಸಾಮಾನ್ಯ ನೋಟಕ್ಕೆ ಹೇಳುವುದಾದರೆ ಅಲ್ಲಿಯ ಅಲಂಕಾರಿಕ ಕೆತ್ತನೆ ಅಗತ್ಯವೆಂದು ಕಂಡುಬರದಿದ್ದರೂ ಒಟ್ಟು ನೋಟದಲ್ಲಿ ಅಲ್ಲಿ ಅಲಂಕರಣವಿಲ್ಲದಿದ್ದರೆ ಖಾಲಿಯೆನಿಸಿ ಬಿಡುವ ಅಪಾಯವಿದೆ. ಅದಕ್ಕಾಗಿ ಅಲ್ಲಿಯೂ ಪರಿಪೂರ್ಣವಾದ ಕೆತ್ತನೆ ಮಾಡಲಾಗಿದೆ.

ಅದೇ ರೀತಿ ಶಿಲ್ಪದ ಎಡಬದಿಯಲ್ಲಿ ರಾಜ ಮತ್ತು ಆತನ ಪರಿವಾರವು ನಿಂತುಕೊಂಡು ದಾನ ನೀಡುವ ಸಂದರ್ಭದ ಚಿತ್ರಣವಿದೆ, ಅಲ್ಲಿಯೂ ಪ್ರತಿಯೊಂದು ವ್ಯಕ್ತಿಯೂ ತನ್ನ ಮುಖಭಾವವನ್ನು ಪ್ರದರ್ಶಿಸುತ್ತಿದೆ. ಮೈಯಲ್ಲಿ ಆಭರಣಗಳ ವಿನ್ಯಾಸವನ್ನು ಕೂಡಾ ಮಾಡಲಾಗಿದೆ. ಇದು ಅಲ್ಲಿಗೆ ಅಗತ್ಯವಾಗುತ್ತದೆ. ಈ ರೀತಿ ಶಿಲ್ಪಿಯು ಯಾವುದೇ ಭಾಗವನ್ನು ಗಮನಿಸದೆ ಬಿಟ್ಟಿಲ್ಲ. ಇದಕ್ಕೆ ಪೂರಕವಾಗಿ ಈ ಶಿಲ್ಪ ಪಟ್ಟಿಕೆಯ ಕೆಳಭಾಗದಲ್ಲಿ ಗಣಗಳು ಅಥವಾ ಕುಬ್ಜ ಶಿಲ್ಪಗಳನ್ನು ಕೆತ್ತಲಾಗಿದೆ.

ಈ ಶಿಲ್ಪಗಳು ಮೇಲಿನ ಶಿಲ್ಪ ಪಟ್ಟಿಕೆಗೆ ವಿಶೇಷ ಸೌಂದರ್ಯವನ್ನು ತಂದುಕೊಟ್ಟಿವೆ. ಈ ಪಟ್ಟಿಕೆಯಲ್ಲಿ ಒಟ್ಟು ಆರು ಗಣ ಶಿಲ್ಪಗಳಿದ್ದು ಸಂಗೀತಗಾರ ಶಿಲ್ಪಗಳಾಗಿವೆ. ಪ್ರತಿಯೊಂದು ಗಣದ ಕೈಯಲ್ಲಿಯೂ ಒಂದೊಂದು ಸಂಗೀತ ಪರಿಕರವಿದೆ. ವಿವಿಧ ಭಂಗಿಯಲ್ಲಿ ಹಾಡುತ್ತಿರುವ, ನೃತ್ಯಮಾಡುತ್ತಿರುವ ರೀತಿಯಲ್ಲಿ ಈ ಶಿಲ್ಪಗಳನ್ನು ಕೆತ್ತಲಾಗಿದೆ. ಇದರಿಂದಾಗಿ ಒಟ್ಟು ಶಿಲ್ಪಕ್ಕೆ ಒಂದು ಸುಂದರವಾದ ಚಿತ್ರಣದ ಮೆರುಗನ್ನು ತಂದುಕೊಟ್ಟಿದೆಯೆಂದು ಹೇಳಬಹುದು. ಒಂದು ಶಿಲ್ಪದ ಕೈಯಲ್ಲಿ ಚಕ್ರತಾಳವಿದ್ದರೆ, ಇನ್ನೊಂದು ಶಿಲ್ಪ ಕೈಯಲ್ಲಿ ಕೊಳಲನ್ನು ಹಿಡಿದುಕೊಂಡು ಕೊಳಲೂದುತ್ತಿದೆ. ಮತ್ತೊಬ್ಬನು ಮೃದಂಗ ಬಾರಿಸುತ್ತಿದ್ದರೆ ಇನ್ನೊಬ್ಬ ನೃತ್ಯ ಮಾಡುತ್ತಿದ್ದಾನೆ. ಗುಂಗುರು ಕೂದಲನ್ನು ಹೊಂದಿರುವ ಶಿಲ್ಪಗಳು ಮೇಲಿನ ಶಿಲ್ಪಕ್ಕೆ ಸಹಜವಾದ ಲಾಸ್ಯವನ್ನು



ತಂದುಕೊಟ್ಟಿವೆ. ಈ ರೀತಿಯ ಶಿಲ್ಪಸಂಯೋಜನೆಯಲ್ಲಿ ಚಾಲುಕ್ಯಕಾಲದ ಶಿಲ್ಪಿಗಳು ವಿಶೇಷ ಪರಿಣತಿಯನ್ನು ಹೊಂದಿರುವುದು ನಮಗಿಲ್ಲಿ ಕಂಡುಬರುತ್ತದೆ.

ಇದು ವೃತ್ತ ಸಂಯೋಜನೆಯ ಶಿಲ್ಪವಾಗಿದ್ದು ತ್ರಿವಿಕ್ರಮನು ಚಿತ್ರದ ಒಟ್ಟು ಚೌಕಟ್ಟಿನಲ್ಲಿ ಪ್ರಧಾನ ಶಿಲ್ಪವಾಗಿದ್ದು ಶಿಲ್ಪದ ಉಳಿದ ಜಾಗೆಯನ್ನು ಇತರ ಶಿಲ್ಪಗಳನ್ನು ಕೆತ್ತುವುದರ ಮುಖಾಂತರ ಶಿಲ್ಪದ ಒಟ್ಟು ವಸ್ತುವನ್ನು ಒಂದು ಸುಂದರ ದೃಶ್ಯಕಾವ್ಯವನ್ನಾಗಿಸಿರುವುದು ಇಲ್ಲಿ ಗಮನಾರ್ಹವಾಗಿದೆ. ಶಿಲ್ಪಕೆತ್ತನೆಯಲ್ಲಿ ಬಾದಾಮಿ ಚಾಲುಕ್ಯರು ಮುಖಭಾವಕ್ಕೆ ವಿಶೇಷ ಮಹತ್ವವನ್ನು ನೀಡುತ್ತಿದ್ದರೆಂಬುದಕ್ಕೆ ಇಲ್ಲಿರುವ ಶಿಲ್ಪದ ಮುಖಭಾವಗಳನ್ನು ನೋಡಿದರೆ ತಿಳಿದುಬರುತ್ತದೆ. 'ಮೂರನೇ ಪಾದವನ್ನು ಪ್ರಯೋಗಿಸದಂತೆ ಬಲಿಚಕ್ರವರ್ತಿಯ ಮಗನಾದ ನಮುಚಿಯು ತ್ರಿವಿಕ್ರಮನ ಪಾದವನ್ನು(ಕಾಲನ್ನು) ಭದ್ರವಾಗಿ ಹಿಡಿದಿರುವಲ್ಲಿ ಆತನ ದುಗುಡ ವ್ಯಕ್ತವಾಗಿದೆ'.[೧೪] ತ್ರಿವಿಕ್ರಮನ ಮುಖಭಾವವು ಶಾಂತವಾಗಿದೆ. ಆದರೆ ರಾಜಕಳೆಯಿಂದ ಕೂಡಿದೆ. ಆದರೆ ವಾಮನನ ಮುಖದಲ್ಲಿ ಲಘುತರವಾದ ಹಾಸ್ಯವನ್ನು ಹೊರಸೂಸುವ ಮುಗುಳ್ನಗೆಯನ್ನು ಹೊಂದಿರುವುದು ಕಂಡುಬರುತ್ತದೆ.

ಇನ್ನೊಂದು ಗಮನಾರ್ಹ ಅಂಶವೆಂದರೆ, ಮೊದಲ ಶಿಲ್ಪದಲ್ಲಿ ತ್ರಿವಿಕ್ರಮನು ಮುಖ ನೇರಮಾಡಿ ನೋಡುಗರೆಡೆಗಿರುವಂತೆ ಕಂಡುಬಂದರೆ ಮೂರನೆಯ ಗುಹಾಶಿಲ್ಪದಲ್ಲಿ ತ್ರಿವಿಕ್ರಮನು ತನ್ನ ಮುಖವನ್ನು ಬದಿಗೆ ಸರಿಸಿಕೊಂಡಂತಿದ್ದು ಇದು ಕಥಾಚಿತ್ರಣಕ್ಕೆ ಹೆಚ್ಚಿನ ಒತ್ತು ನೀಡಿದಂತೆ ಭಾಸವಾಗುತ್ತದೆ. ಒಟ್ಟಿನಲ್ಲಿ ಎರಡು ಶಿಲ್ಪಗಳೂ ತಮ್ಮ ಬೃಹದಾಕಾರ ಮತ್ತು ಕೆತ್ತನೆಯ ರೀತಿಯಿಂದಾಗಿ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಉತ್ಕೃಷ್ಟವೆನ್ನಿಸಿವೆ. ಮೂರನೆಯ ವೈಷ್ಣವ ಗುಹೆಯ ಇನ್ನೊಂದು ಪ್ರಮುಖ ಶಿಲ್ಪ 'ವಾಮನ' ತ್ರಿವಿಕ್ರಮನಾಗಿ ಬದಲಾಗಿ, ಬಲಿಯಿಂದ ದಾನ ಬೇಡುವ ಶಿಲ್ಪ. ಇದು ಎರಡನೆಯ ವೈಷ್ಣವ ಗುಹೆಯ ಶಿಲ್ಪದ ಪುನರವತಾರದಂತೆ ಕಂಡುಬಂದರೂ ಕೆಲ ವ್ಯತ್ಯಾಸಗಳನ್ನು ಗುರುತಿಸಬಹುದು. "ವಿಷ್ಣು ಪುಟ್ಟ ವಾಮನನಾಗಿ ಬಂದು ತ್ರಿವಿಕ್ರಮನಾಗಿ ಬೆಳೆದು ಬಲಿಚಕ್ರವರ್ತಿಯನ್ನು ಸಂಹರಿಸಿದ ಕಥೆ" ಪ್ರಸಿದ್ಧವಾದುದು.

ಎರಡು ಹಾಗೂ ಮೂರನೆಯ ಗುಹೆಗಳಲ್ಲಿ ಒಂದೊಂದರಂತೆ ತ್ರಿವಿಕ್ರಮನ ಎರಡು ಶಿಲ್ಪಗಳಿವೆ. ಇವೆರಡರ ಕಥಾವಸ್ತುವು ಒಂದೇ ಆದರೂ ಅದರ ಗುಣ, ಗಾತ್ರಗಳಲ್ಲಿ ವಿಭಿನ್ನತೆ ಇದೆ. ಮೂರನೆಯ ಗುಹಾಲಯದ ಶಿಲ್ಪವು ಹೆಚ್ಚು ಎತ್ತರವಾಗಿಯೂ, ಕಲಾತ್ಮಕವಾಗಿಯೂ ಇದೆ. ಮೊದಲು ನೋಡಿದ ಶಿಲ್ಪಕ್ಕಿಂತ ಸುಂದರವಾದ ಸಂಯೋಜನೆಯನ್ನು ಇಲ್ಲಿ ಕಾಣಬಹುದು. ಇಲ್ಲಿ ವಾಮನನ ವಿಗ್ರಹ ಭಗ್ನವಾಗಿದೆಯಾದರೂ ಅದರ ಕುರುಹುಗಳನ್ನು ಗುರುತಿಸಬಹುದು. ಇಲ್ಲಿನ ಶಿಲ್ಪಗಳು ಬಿಡಿಬಿಡಿಯಾಗಿರುವಂತೆ ಕಂಡುಬರುತ್ತವೆ, ಅಂದರೆ ಎರಡನೆಯ ಗುಹೆಯ ಶಿಲ್ಪಗಳಂತೆ ಒತ್ತೊತ್ತಾಗಿಲ್ಲ. ಶಿಲ್ಪಗಳು ಹೆಚ್ಚು ಪರಿಪೂರ್ಣವಾಗಿರುವಂತೆ ಕಂಡುಬರುತ್ತವೆ.

೧೪. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೦೫



ಅಲ್ಲದೆ ಸಾಕಷ್ಟು ಸೂಕ್ಷ್ಮವಾದ ಕುಸುರಿಕೆಲಸಗಳ ಅಲಂಕರಣದೊಂದಿಗೆ ಪ್ರತಿ ಶಿಲ್ಪಕ್ಕೂ ಗಮನ ನೀಡಿದ್ದಾರೆನ್ನಬಹುದು.

ಮೊದಲು ನೋಡಿದ ಎರಡನೆಯ ವೈಷ್ಣವ ಗುಹಾಲಯದ ಶಿಲ್ಪಗಳಿಗಿಂತ ಇಲ್ಲಿ ಹೆಚ್ಚಿನ ಶಿಲ್ಪಗಳು ಪಕ್ವತೆಯನ್ನು ಪಡೆದಿವೆಯೆಂದು ಹೇಳಬಹುದು. ಮುಖ್ಯವಾಗಿ ಶಿಲ್ಪಿಗಳು ಶಿಲ್ಪರಚನೆಯಲ್ಲಿ ತಮ್ಮತನವನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆನ್ನಬಹುದು. ಆದರೂ ಇಲ್ಲಿನ ಕೆಲ ಶಿಲ್ಪಗಳಲ್ಲಿ ಗುಪ್ತರ ಕಾಲದ ಶಿಲ್ಪಛಾಯೆಯು ಕಂಡುಬರುತ್ತದೆನ್ನುವುದು ಗಮನಾರ್ಹ. ಇಲ್ಲಿನ ಶುಕ್ರಾಚಾರ್ಯನು ಬೌದ್ಧ ಧರ್ಮದ ಶಿಲ್ಪಗಳಲ್ಲಿ ಕಂಡುಬರುವ ಗೌತಮಬುದ್ಧನಂತೆ ಕಂಡುಬರುತ್ತಾನೆ. ಆತನ ಕೇಶಾಲಂಕಾರದಲ್ಲಿ ಮತ್ತು ನಿಂತಿರುವ ಭಂಗಿಯಲ್ಲಿ ಇದನ್ನು ಗಮನಿಸಬಹುದು. ಪಶ್ಚಿಮ ಗೋಡೆಯಲ್ಲಿ ತ್ರಿವಿಕ್ರಮನ ವಿರಾಟ್ ರೂಪವಿದೆ. ಇದೊಂದು ಭವ್ಯ, ಬೃಹತ್ ಶಿಲ್ಪ. ತ್ರಿವಿಕ್ರಮ ಪಕ್ಕದಲ್ಲಿ ಆಧುನಿಕರು ಬಳಸುವ Flash Back ತಂತ್ರದ ಸನ್ನಿವೇಶವಿದೆ. ಕುಬ್ಜ ಬ್ರಾಹ್ಮಣನ ರೂಪದಲ್ಲಿ ವಿಷ್ಣು ಬಲಿಯ ಗುರುಗಳಾದ ಶುಕ್ರಾಚಾರ್ಯರಿಂದ ಅರ್ಘ್ಯ ಸ್ವೀಕರಿಸುವ ದೃಶ್ಯವಿದೆ. ಬಲಿ ಮಡದಿ ವಿಂಧ್ಯಾವಳಿಯೊಂದಿಗೆ ನಿಂತಿದ್ದಾನೆ. ಇದೊಂದು ಕಥಾನಕ ಶಿಲ್ಪ, ಅಷ್ಟ ಭುಜ ತ್ರಿವಿಕ್ರಮನು ಖಡ್ಗ, ಗದೆ, ಬಾಣ, ಚಕ್ರ, ಶಂಖ, ಬಿಲ್ಲು, ಢಾಲು ಹಿಡಿದುಕೊಂಡು ನಿಂತಿದ್ದಾನೆ. ಆಕಾಶವನ್ನು ಆವರಿಸಿರುವೆ ಎಂದು ಹೇಳುವ ರೀತಿಯಲ್ಲಿ ತ್ರಿವಿಕ್ರಮನು ಒಂದು ಕೈಯನ್ನು ರಾಹುವಿನತ್ತ ತೋರಿಸುತ್ತಿದ್ದಾನೆ.[೧೫]

ಮೊದಲೆ ಹೇಳಿದಂತೆ ಇಲ್ಲಿನ ಶಿಲ್ಪದ ಪ್ರಮುಖ ವಿಶೇಷತೆ ಎಂದರೆ ಈ ಶಿಲ್ಪದ ದೈತ್ಯಾಕಾರ. ಆದರೆ ಇದು ಬರಿಯ ಆಕಾರದಲ್ಲಿ ಮಾತ್ರ ದೈತ್ಯಾಕಾರವಾಗಿಲ್ಲ. ಆದರೆ ಶಿಲ್ಪ ರಚನೆಯ ರೀತಿ ಕೂಡಾ ಅದ್ಭುತವಾಗಿದೆ. ಶಿಲ್ಪ ಸಂಯೋಜನೆಯಲ್ಲಾಗಲಿ, ಕೆತ್ತನೆ ರೀತಿಯಲ್ಲಾಗಲಿ, ಅಲಂಕರಣದಲ್ಲಾಗಲಿ, ಅಥವಾ ಸೂಕ್ಷ್ಮ ವಿವರಗಳನ್ನೇ ಆಗಲಿ ಇಲ್ಲಿ ಸುಂದರವಾಗಿ ಕೆತ್ತಲಾಗಿದೆ. ಆದುದರಿಂದಲೇ ಈ ಶಿಲ್ಪವು ಎರಡನೆಯ ವೈಷ್ಣವ ಗುಹಾಲಯದ ಶಿಲ್ಪಕ್ಕಿಂತಲೂ ಮಹತ್ವವನ್ನು ಪಡೆದಿದೆಯೆನ್ನಬಹುದು. ಇಲ್ಲಿನ ಶಿಲ್ಪದ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿನ ತ್ರಿವಿಕ್ರಮನು ತುಸು ಪಾರ್ಶ್ವಕ್ಕೆ ತಿರುಗಿಕೊಂಡಿದ್ದಾನೆ. ನಿಂತ ನಿಲುವು ದೃಢವಾಗಿದೆ. ಮುಖದಲ್ಲಿ ಶಾಂತತೆಯಿದೆ. ನೋಟವು ನೇರವಾಗಿದ್ದು ಗಾಂಭೀರ್ಯವನ್ನು ಹೊಂದಿದೆ. ಎಡಭುಜದ ಮೇಲಿಂದ ಇಳಿದುಬಂದ ಯಜ್ಞೋಪವೀತವು ಬಲಭುಜದ ಕಡೆಗೆ ವ್ಯಾಪಿಸಿರುವುದರಿಂದ ಶಿಲ್ಪಕ್ಕೆ ಒಂದು ರೀತಿಯ ಚಲನೆಯ ಅನುಭವವಾಗುತ್ತದೆ. ಅಂದರೆ ಶಿಲ್ಪಕ್ಕೆ ಜೀವಂತಿಕೆಯನ್ನುಂಟುಮಾಡುವ ನಿಟ್ಟಿನಲ್ಲಿ ಶಿಲ್ಪಿಯು ಸಾಕಷ್ಟು ಪರಿಶ್ರಮವನ್ನು ತೋರಿರುವುದು ಕಂಡುಬರುತ್ತದೆ.

ತಲೆಯ ಹಿಂದುಗಡೆ ಸುಂದರ ಕೆತ್ತನೆಯ ಪ್ರಭಾಮಂಡಲವಿದ್ದು ಹೆಚ್ಚಿನ ಶೋಭೆಯನ್ನುಂಟು ಮಾಡುತ್ತದೆ. ಕೈಯಲ್ಲಿ ಹಿಡಿದಿರುವ ಆಯುಧಗಳಲ್ಲಿ ತ್ರಿಆಯಾಮದ ಪರಿಮಾಣವಿದೆ. ಶಿಲ್ಪದ

---

೧೫. ಡಾ. ಎ. ಮುರಿಗೆಪ್ಪ (ಪ್ರಸಂ.): ಬಾದಾಮಿ ಚಾಲುಕ್ಯರು ಲೇಖನ ಸಂಪುಟ. ಪುಟ – ೪೪



ಪ್ರತಿಯೊಂದು ಭಾಗದಲ್ಲಿಯೂ ಅಗತ್ಯಕ್ಕೆ ಬೇಕಾಗುವಷ್ಟು ಅಲಂಕರಣವನ್ನು ಕೆತ್ತಿರುವುದರಿಂದ ಯಾವುದೂ ಅತಿಯೆಂಬ ಭಾವನೆ ಉಂಟಾಗುವುದಿಲ್ಲ. ಹಿನ್ನೆಲೆಯಲ್ಲಿ ವಿವಿಧ ದೇವತೆಗಳು ಮತ್ತು ನವಗ್ರಹಗಳು ಕಂಡುಬರುತ್ತಿದ್ದು, ಆಕಾಶದ ಭಾವನೆಯುಂಟಾಗುವಂತೆ ಅರ್ಧಚಂದ್ರನನ್ನು ಕೂಡಾ ಕೆತ್ತಿರುವುದು ಗಮನಾರ್ಹವಾದುದು. ಇಲ್ಲೆಲ್ಲ ಕಂಡುಬರುವುದು ಶಿಲ್ಪಿಯ ಕಾಲ್ಪನಿಕತೆ ಮತ್ತು ಕ್ರಿಯಾಶೀಲತೆ. ಆದುದರಿಂದಲೆ ಇಲ್ಲಿ ಮಾನವ ಮತ್ತು ದೇವರ ನಡುವಿನ ಅಂತರವನ್ನು ತಮ್ಮ ಆಕಾರಗಳ ಮೂಲಕವೆ ವ್ಯಕ್ತವಾಗುವಂತೆ ಶಿಲ್ಪಿಯು ಕೆತ್ತಿದ್ದಾನೆಂದು ಹೇಳಿದರೆ ತಪ್ಪಾಗಲಾರದು. ದ್ವಿಮಾನದ ಶಿಲ್ಪದಲ್ಲಿ ತ್ರಿಮಾನದ ಭಾವನೆ ಉಂಟಾಗುವಂತೆ (Hiyareelife) ಈ ಶಿಲ್ಪವನ್ನು ಕೆತ್ತಿದ್ದರೂ ಶಿಲ್ಪವು ದುಂಡು ಶಿಲ್ಪದ ಅನುಭವವನ್ನು ನೀಡುತ್ತದೆ. ಒಂದೇ ವಸ್ತುವನ್ನು ಹತ್ತಿರದಲ್ಲಿಯೇ ಪುನರ್ ರಚಿಸುವಾಗ ಉಂಟಾಗುವ ತುಲನಾತ್ಮಕತೆಯ ಭಾವನೆಯೊಂದಿಗೆ ವಸ್ತುವಿಷಯದ ಮೇಲೆ ಶಿಲ್ಪರಚನೆಯ ಸಂದರ್ಭದಲ್ಲಿ ರಾಜಿಮಾಡಿಕೊಳ್ಳದೆ ಶಿಲ್ಪದ ವಿವಿಧ ಸಾಧ್ಯತೆಗಳನ್ನು ಇಲ್ಲಿ ತೋರಿಸಿದ್ದಾರೆನ್ನಬಹುದು.

ಶಿಲ್ಪ –೩

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಪೂರ್ವಾಭಿಮುಖವಾಗಿ ಷಟ್‌ಬಾಹುಗಳನ್ನು ಹೊಂದಿರುವ ತ್ರಿವಿಕ್ರಮನ ಶಿಲ್ಪವು ಬ್ಯಾಲೆನೃತ್ಯದ ಭಂಗಿಯನ್ನು ನೆನಪಿಸುವಂತಿದೆ.[೧೬] ಬಾದಾಮಿಯಲ್ಲಿರುವ ತ್ರಿವಿಕ್ರಮನ ಹಾಗೆ ನಿಂತರೂ ಇಲ್ಲಿ ಸಂಯೋಜನೆಯು ಬೇರೆ ರೀತಿಯಲ್ಲಿದೆ. ಮಧ್ಯದಲ್ಲಿ ತ್ರಿವಿಕ್ರಮನು ತಲೆಯ ಮಟ್ಟದವರೆಗೆ ತನ್ನ ಎಡಗಾಲನ್ನು ಎತ್ತಿ ನಿಂತಿದ್ದಾನೆ. ಎಡಗೈ ಕಾಲಿನ ಜೊತೆಗೆ ಸಮಾನಾಂತರವಾಗಿಸಿದ್ದಾನೆ. ಬಲಭಾಗದಲ್ಲಿ ಚಕ್ರವರ್ತಿ ವಾಮನನಿಗೆ ದಾನ ನೀಡುವ ಸಣ್ಣ ಗಾತ್ರದ ಶಿಲ್ಪವಿದೆ. ಎಡಭಾಗದಲ್ಲಿ ಗರುಡನು ಶುಕ್ರಾಚಾರ್ಯನನ್ನು ದಂಡಿಸುತ್ತಿರುವ ಶಿಲ್ಪವಿದೆ. ಆದರೆ ಎರಡನೆಯ ಗುಹಾಲಯದಲ್ಲಿ ಈ ಸನ್ನಿವೇಶ ಇಲ್ಲವೆನ್ನುವುದನ್ನು ಗಮನಿಸಬೇಕು. ಬಾದಾಮಿಯಲ್ಲಿರುವ ತ್ರಿವಿಕ್ರಮನ ಶಿಲ್ಪವು ಎದುರುಮುಖ ಮಾಡಿದರೆ, ಈ ಶಿಲ್ಪವು ತನ್ನ ಮುಖವನ್ನು ಎಡ ಪಾರ್ಶ್ವಕ್ಕೆ ತಿರುಗಿಸಿದೆ. ದ್ವಿಮಾನದಲ್ಲಿ ಕೆತ್ತಿದ್ದರೂ ತ್ರಿಮಾನದ ಭಾವನೆಯನ್ನು ನೀಡುವ ಈ ಶಿಲ್ಪವು ಶಿಲ್ಪಿಯ ಜಾಣ್ಮೆಯನ್ನು ತೋರಿಸುತ್ತದೆ.

ಶಿಲ್ಪ –೪

ಪಟ್ಟದಕಲ್ಲು ದೇವಾಲಯಗಳ ಸಮೂಹವನ್ನು ಬಿಟ್ಟು ಸ್ವಲ್ಪ ಅಂತರದಲ್ಲಿ ಸ್ವತಂತ್ರವಾಗಿ ನಿಂತಿರುವ ಪಾಪನಾಥ ದೇವಾಲಯವು ಪೂರ್ವಾಭಿಮುಖವಾಗಿದೆ. ಉತ್ತರಭಾಗದ ಮುಖಮಂಟಪದ ಕಂಬದ ಮೇಲೆ ತ್ರಿವಿಕ್ರಮನ ಶಿಲ್ಪವಿದೆ. ಈ ಹಿಂದೆ ನೋಡಿದ ವಿರೂಪಾಕ್ಷ ದೇವಾಲಯದ ಶಿಲ್ಪವನ್ನು ಇಲ್ಲಿ ಮರು ನೆನಪಿಸಬಹುದು. ಇಲ್ಲಿ ಚತುರ್ಬಾಹುಗಳನ್ನು ಹೊಂದಿದ್ದು,

೧೬. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೫೫



ಇಲ್ಲಿಯೂ ತನ್ನ ಕಾಲನ್ನು ತಲೆಯ ಮಟ್ಟದಲ್ಲಿ ಎತ್ತಿದ್ದಾನೆ. ಎಡಗೈ ಕಾಲಿನ ಸಮನಾಂತರದಲ್ಲಿದೆ. ಇಲ್ಲಿಯೂ ಬಲಭಾಗದಲ್ಲಿ ಬಲಿಚಕ್ರವರ್ತಿ ವಾಮನನಿಗೆ ದಾನ ನೀಡುವ ಸಣ್ಣ ಗಾತ್ರದ ಶಿಲ್ಪವಿದ್ದು, ಎಡಭಾಗದಲ್ಲಿ ಗರುಡನು ಶುಕ್ರಾಚಾರ್ಯನನ್ನು ದಂಡಿಸುತ್ತಿರುವ ಶಿಲ್ಪವಿದೆ. ಈ ಶಿಲ್ಪ ದ್ವಿಮಾನದಲ್ಲಿದ್ದು, ಪ್ರಸ್ತುತ ಈ ಕಲಾಕೃತಿ ಪ್ರಕೃತಿವಿಕೋಪದಿಂದ ಸವೆದುಹೋಗಿದೆ. ಆದ್ದರಿಂದ ಈ ಶಿಲ್ಪ ಸ್ಪಷ್ಟವಾಗಿ ಕಾಣಿಸುತ್ತಿಲ್ಲ.

ಶಿಲ್ಪ –೫

ಐಹೊಳೆಯ ವಿರೂಪಾಕ್ಷ ದೇವಾಲಯದ ಒಳಭಾಗದ ಬೋಧಿಗೆಯಲ್ಲಿ ಆಯತಾಕಾರದ ಪಟ್ಟಿಕೆಯಲ್ಲಿ ತ್ರಿವಿಕ್ರಮನ ಶಿಲ್ಪವಿದೆ. ಅಷ್ಟಬಾಹುಗಳನ್ನು ಹೊಂದಿರುವ ಶಿಲ್ಪವಿದು. ಬಾದಾಮಿಯ ಶಿಲ್ಪದಂತಿರುವ ಈ ಶಿಲ್ಪವು ಎಲ್ಲ ಆಯುಧಗಳನ್ನು ಹೊಂದಿದೆ. ತನ್ನ ಎಡಭಾಗದಲ್ಲಿ ಬಲಿಚಕ್ರವರ್ತಿ ವಾಮನನಿಗೆ ದಾನ ನೀಡುವ ಶಿಲ್ಪವಿದೆ. ಬಲಭಾಗದಲ್ಲಿ ಗರುಡನು ಶುಕ್ರಾಚಾರ್ಯನನ್ನು ದಂಡಿಸುವ ಶಿಲ್ಪ ಇದಾಗಿದೆ. ಇಲ್ಲಿ ತ್ರಿವಿಕ್ರಮನ ಶಿಲ್ಪವು ಪುನಾವರ್ತನೆಯಾದರೂ ಗಾತ್ರದಲ್ಲಿ ಚಿಕ್ಕದಾಗಿದೆ. ಈ ಶಿಲ್ಪದ ಪಟ್ಟಿಕೆಯಲ್ಲಿ ಶಿಲ್ಪಗಳ ಸಂಯೋಜನೆಯನ್ನು ಮಾಡಿರುವುದು ಶಿಲ್ಪಿಯ ಜಾಣ್ಮೆಯೆನ್ನಬಹುದು.

ಶಿಲ್ಪ –೬

ಪಟ್ಟದಕಲ್ಲು ಕಾಶೀ ವಿಶ್ವೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಎಡಭಾಗದ ಭಿತ್ತಿಯಲ್ಲಿ ನಾಲ್ಕು ಕಂಬಗಳ ಮಧ್ಯದಲ್ಲಿ ಉಬ್ಬುಗೆತ್ತನೆಯ ತ್ರಿವಿಕ್ರಮನ ಶಿಲ್ಪವಿದೆ. ತನ್ನ ಎಡಗಾಲನ್ನು ಮೇಲಕ್ಕೆ ಎತ್ತಿದಂತಿರುವ ಬಲಗೈಯಲ್ಲಿ ಚಕ್ರವಿದ್ದು, ಸವೆದು ಹೋದ ಕುರುಹುಗಳನ್ನು ಗಮನಿಸಬಹುದು. ಇದು ಕೂಡ ವಿರೂಪಾಕ್ಷ ದೇವಾಲಯದ ಶಿಲ್ಪವನ್ನು ಹೋಲುವಂತಹ ಕಲಾಕೃತಿಯಾಗಿದೆ. ತೆಳು ಉಬ್ಬು ಶಿಲ್ಪವಾಗಿದ್ದರೂ ಕೂಡ ದ್ವಿಮಾನದ ಭಾವನೆಯನ್ನು ಮೂಡಿಸುತ್ತದೆ.


ಶಿಲ್ಪ –೭

ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಬಲಭಾಗದ ಕಂಬದಲ್ಲಿ ಅರ್ಧವೃತ್ತಾಕಾರದಲ್ಲಿ ರಚಿತವಾದ ತ್ರಿವಿಕ್ರಮನ ಶಿಲ್ಪವು ಪೂರ್ವಾಭಿಮುಖವಾಗಿದ್ದು, ಬಲಭಾಗದಲ್ಲಿ ಯಥಾವತ್ತಾಗಿ ಬಲಿಚಕ್ರವರ್ತಿ ವಾಮನನಿಗೆ ದಾನನೀಡುವ ಶಿಲ್ಪವಾಗಿದೆ. ಎಡಭಾಗದಲ್ಲಿ ಗರುಡನು ಶುಕ್ರಾಚಾರ್ಯನಿಗೆ ಒದೆಯುತ್ತಿರುವ ದೃಶ್ಯ ಇಲ್ಲಿ ಅಪರೂಪವಾಗಿದೆ. ಈ ಶಿಲ್ಪದಲ್ಲಿ ಬಲಿ ಪರಿವಾರವನ್ನು ಕಾಣಬಹುದು. ಗಾತ್ರದಲ್ಲಿ ಚಿಕ್ಕದಾದರೂ ವಸ್ತು, ವಿಷಯ, ಸಂಯೋಜನೆ ಮಾಡಿರುವ ಶಿಲ್ಪಿಯನ್ನು ಮೆಚ್ಚಲೇಬೇಕು.

ತ್ರಿವಿಕ್ರಮ ಶಿಲ್ಪಗಳು



ಶಿಲ್ಪ-೧. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೪. ಪಾಪನಾಥ ದೇವಾಲಯ, ಪಟ್ಟದಕಲ್ಲು

ತ್ರಿವಿಕ್ರಮ ಶಿಲ್ಪಗಳು



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಐಹೊಳೆ



ಶಿಲ್ಪ-೨. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧. ಕಾಶಿವಿಶ್ವೇಶ್ವರ ದೇವಾಲಯ, ಪಟ್ಟದಕಲ್ಲು



ವರಾಹ ಶಿಲ್ಪಗಳು

ಶಿಲ್ಪ –೧

ಬಾದಾಮಿಯ ಎರಡನೇ ಗುಹೆಯಲ್ಲಿರುವ ವಿಷ್ಣುವಿನ ೯ನೇ ಅವತಾರದ ಶಿಲ್ಪಕೆತ್ತನೆ ಚೆನ್ನಾಗಿ ಮೂಡಿಬಂದಿದೆ. ಉದಾಹರಣೆಗೆ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ತ್ರಿವಿಕ್ರಮ, ಪರಶುರಾಮ ಇತ್ಯಾದಿ ವರಾಹ ಅಥವಾ ಭೂ ವರಾಹ ಎಂದು ಕರೆಯಬಹುದು. ಇಲ್ಲಿ ಶಿಲ್ಪಿಗಳು "ವರಾಹ ಪುರಾಣ"ದ ಕಥೆಯನ್ನು ಶಿಲ್ಪದಲ್ಲಿ ಕೆತ್ತಿರಿಸಿದ್ದಾರೆ.[೧೭] ವರಾಹನು ತನ್ನ ಕೆಳ ಎಡಗೈಯಲ್ಲಿ ಹಿಡಿದಿರುವ ಕಮಲದ ಮೇಲೆ ಭೂದೇವಿಯು ನಿಂತಿದ್ದಾಳೆ. ತನ್ನ ಬಲಗೈಯನ್ನು ಆಸರೆಯಾಗಿ ವಿಷ್ಣುವಿನ (ವರಾಹ) ಮೂರ್ತಿಯ ಮೇಲಿರಿಸಿದ್ದಾಳೆ. ಬಲಗೈಯಲ್ಲಿ ಗದೆಯನ್ನು ಹಿಡಿದಿರುವ ವಿಷ್ಣುವು ಅದನ್ನು ಭೂಮಿಗೆ ಆಧಾರವಾಗಿ ಹಿಡಿದಿರಿಸಿಕೊಂಡಿದ್ದಾನೆ. ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡಿರುವ ವರಾಹದ ಕೋರೆಹಲ್ಲು ಸ್ಪಷ್ಟವಾಗಿ ಕಂಡುಬರುತ್ತದೆ.

ಮುಖದಲ್ಲಿ ಉಗ್ರ ಭಾವವು ವ್ಯಕ್ತವಾಗುತ್ತಿದ್ದು ದೇಹರಚನೆಯಲ್ಲಿ ವೀರಾವೇಶವು ಕಂಡುಬರುತ್ತದೆ. ವಿಷ್ಣುವು ತಲೆಯಲ್ಲಿ ಕಿರೀಟವನ್ನು ಹೊಂದಿದ್ದು ಯಜ್ಞೋಪವೀತ, ಮೇಖಲೆ, ಎದೆಹಾರ ಇತ್ಯಾದಿ ಆಭರಣಗಳು ಕೂಡಾ ಇರುವುದನ್ನು ಗಮನಿಸಬಹುದು. ಭೂದೇವಿಯ ಕೆಳಭಾಗದಲ್ಲಿ ಪಾತಾಳದ ದೊರೆ, ಏಳು ಹೆಡೆಗಳನ್ನು ಹೊಂದಿರುವ ಆದಿಶೇಷನು ತನ್ನ ಪತ್ನಿಯೊಂದಿಗೆ ವಿಷ್ಣುವಿಗೆ ಕೈ ಮುಗಿಯುತ್ತ ನಿಂತಿದ್ದಾನೆ. ಇವರ ಹಿಂಭಾಗದಲ್ಲಿ ಇನ್ನೊಬ್ಬ ನಾಗನು ನಿಂತು ಕೈ ಮುಗಿಯುತ್ತಿದ್ದಾನೆ. ವರಾಹಮೂರ್ತಿಯ ಕೆಳಗಿನ ಪಟ್ಟಿಕೆಯಲ್ಲಿ ಸಂಗೀತವನ್ನು ನುಡಿಸುವ ಕುಬ್ಜಗಣಗಳ ಶಿಲ್ಪಗಳು ಗಮನ ಸೆಳೆಯುತ್ತವೆ. ಮುಖ್ಯ ಶಿಲ್ಪದ ಹಿಂಭಾಗದಲ್ಲಿ ಮತ್ತು ಮೇಲಿನ ಭಾಗದಲ್ಲಿ ದೇವತೆಗಳು ಶುಭ ಹಾರೈಸುತ್ತಿರುವ ದೃಶ್ಯವನ್ನು ಸುಂದರವಾಗಿ ದ್ವಿಮಾನದಲ್ಲಿ ಕೆತ್ತಲಾಗಿದೆ. ಒಟ್ಟಿನಲ್ಲಿ ಸುಂದರ ಸಂಯೋಜನೆಯನ್ನು ಹೊಂದಿರುವ ಬೃಹದಾಕಾರದ ಈ ಶಿಲ್ಪವು ಗಮನ ಸೆಳೆಯುತ್ತದೆ.

ವರಾಹವು ಚಾಲುಕ್ಯರ ರಾಜಲಾಂಛನವಾಗಿತ್ತು. ಆದುದರಿಂದ ಬಾದಾಮಿಯ ಚಾಲುಕ್ಯರ ಆಡಳಿತದ ಕಾಲದಲ್ಲಿ ವರಾಹಾವತಾರದ ಶಿಲ್ಪಕ್ಕೆ ಹೆಚ್ಚಿನ ಮಹತ್ವ ನೀಡಿದ್ದರೆನ್ನಬಹುದು. ವರಾಹವು ಚಾಲುಕ್ಯರ ರಾಜಲಾಂಛನವಾಗಿತ್ತು. ಹೀಗಾಗಿ ಅನೇಕ ಕಡೆಗಳಲ್ಲಿ ವರಾಹಮೂರ್ತಿಗಳನ್ನು ಕೆತ್ತಿದ್ದಾರೆ. ಸಾಮಾನ್ಯವಾಗಿ ಇವೆಲ್ಲವೂ "ಪ್ರತ್ಯಾಲೀಢ" ಭಂಗಿಯಲ್ಲಿ ರಚಿತವಾಗಿವೆ. ಬಾದಾಮಿಯ ವೈಷ್ಣವ ಗುಹೆಗಳಲ್ಲಿ, ಐಹೊಳೆಯ ರಾವಳಫಡಿಯಲ್ಲಿ ದೊಡ್ಡಗಾತ್ರದ ವರಾಹ ಮೂರ್ತಿಗಳಿದ್ದರೆ, ರಾಚನಿಕ ಮಂದಿರಗಳಲ್ಲಿ ಮಧ್ಯಮ ಗಾತ್ರದಲ್ಲಿವೆ. ಮಹಾಕೂಟದ ಮಹಾಲಿಂಗ ದೇವಾಲಯದ ದಕ್ಷಿಣ ದೇವಕೋಷ್ಠದಲ್ಲಿರುವ ವರಾಹ ಶಿಲ್ಪವು ದ್ವಿಮಾನ ಶಿಲ್ಪಗಳಾಗಿದ್ದು, ಇಲ್ಲಿರುವ ವರಾಹ ಶಿಲ್ಪವು ಕಲಾತ್ಮಕವಾಗಿ ಗಮನಿಸಬಹುದಾದ ಹಲವಾರು ಗುಣವಿಶೇಷಗಳನ್ನು ಹೊಂದಿದೆ.

---

೧೭. ಎನ್. ಶಿವಕುಮಾರ (ಸಂ.) : ಬದಾಮಿ ಏಕಶಿಲಾ ಗುಹೆಗಳು, ಪುಟ – ೨೬

ಮುಖ್ಯವಾಗಿ ವರಾಹ ಶಿಲ್ಪದ ದೇಹವು ಮನುಷ್ಯನದಾಗಿದ್ದು ತಲೆಯು ಹಂದಿಯದಾಗಿದೆ. ಅದಕ್ಕೆ ತಕ್ಕಂತೆ ದೇಹರಚನೆಯು ಕಂಡುಬರುತ್ತದೆ. ಮೊದಲು ನೋಡಿದ ತ್ರಿವಿಕ್ರಮನ ಶಿಲ್ಪಕ್ಕೆ ಹೋಲಿಸಿದರೆ ಇದರಲ್ಲಿ ಕೈ ಕಾಲುಗಳು ಕಡಿಮೆ ದಪ್ಪ ವಿದೆ. ಶಿಲ್ಪದಲ್ಲಿ ಮುಖವು ಪಾರ್ಶ್ವವಾಗಿದೆ. ದೇಹಾಕಾರವು ತೆಳ್ಳಗಾಗಿದೆ. ವರಾಹದ ಪ್ರಮಾಣಕ್ಕೆ ಹೋಲಿಸಿದರೆ ಭೂ ದೇವಿಯು ತೀರಾ ಸಣ್ಣಗಿದ್ದಾಳೆ. ಅಂದರೆ ಇಲ್ಲಿ ವಿಷ್ಣುವಿನ ಬೃಹದಾಕಾರವನ್ನು ತೋರಿಸಲು ಭೂದೇವಿಯನ್ನು ಉದ್ದೇಶಪೂರ್ವಕವಾಗಿ ಕೆತ್ತಿದ್ದಾರೆನಿಸುತ್ತದೆ. ವಿಷ್ಣುವಿನ ಎಡಗೈಯು ಭೂದೇವಿಗೆ ಆಧಾರವಾಗಿದ್ದು ಆತನು ಹಿಡಿದು ಕೊಂಡಿರುವ ಗದೆಯು ಹಿನ್ನೆಲೆಯಲ್ಲಿರುವುದನ್ನು ಗಮನಿಸಬಹುದು. ಶಿಲ್ಪದಲ್ಲಿ ವರಾಹವು ಹಲವಾರು ಆಭರಣಗಳನ್ನು ತೊಟ್ಟಿದ್ದು ಸರಳತೆಯಿಂದ ಕೂಡಿವೆ. ತೋಳುಬಂಧಿ, ಕೈಬಳೆ, ಎದೆಹಾರ, ಯಜ್ಞೋಪವೀತ, ಸೊಂಟದಲ್ಲಿ ಮೇಖಲೆ, ಕಾಲ್ಗಡಗ ಇತ್ಯಾದಿಗಳಿವೆ. ಹಲವಾರು ನಾಟಕೀಯ ಅಂಶಗಳನ್ನು ಕೂಡಾ ಈ ಶಿಲ್ಪದಲ್ಲಿ ಕೆತ್ತಿರುವುದನ್ನು ಗಮನಿಸಬಹುದು. ಶಿಲ್ಪಕ್ಕೆ ಇದರಿಂದ ಹೆಚ್ಚಿನ ಸೌಂದರ್ಯ ಬಂದಿದೆಯಾದರೂ ಕಥೆಗೆ ಇದರ ಅಗತ್ಯವು ಕಂಡುಬರುವುದಿಲ್ಲ. ಅಂಥಹವುಗಳಲ್ಲಿ ಒಂದು, ವರಾಹನು ಪಾತಾಳದಿಂದ ಎತ್ತಿಕೊಂಡು ಬಂದಿರುವ ಭೂದೇವಿಯು ವಿಷ್ಣುವಿನ ಮೂತಿಗೆ ಆಸರೆಯನ್ನು ಕೊಟ್ಟು ನಿಂತುಕೊಂಡಿರುವುದು, ಆದರೆ ಆಕೆ ನಿಂತಿರುವುದು ವರಾಹನು ನೀಡಿದ ನೀಳವಾದ ಅಂಗೈಯಲ್ಲಿ, ಆದರೆ ಆಕೆ ಬರಿಗಾಲ ಮೇಲೆ ನಿಂತಿಲ್ಲ, ಬದಲಾಗಿ ಕಮಲಪುಷ್ಪದ ಮೇಲೆ ನಿಂತಿದ್ದಾಳೆ. ಆಕೆಯ ಹಸನ್ಮುಖವನ್ನು ಗಮನಿಸಬಹುದು.

ನಿಶ್ಚಿಂತಳಾಗಿ (Relax) ಒರಗಿದ್ದಾಳೆ. ಇನ್ನೊಂದು ನಾಟಕೀಯವಾಗಿ ಕಂಡುಬರುವ ಕೆತ್ತನೆಯೆಂದರೆ, ವರಾಹವು ಪ್ರತ್ಯಾಲೀಢ ಭಂಗಿಯಲ್ಲಿದ್ದು ಎಡಗಾಲು ಅರ್ಧ ಮೇಲಕ್ಕೆತ್ತಿದೆ. ಆದರೆ ಅವನ ಪಾದದ ಕೆಳಗೆ ಕಮಲ ಪುಷ್ಪದ ಪೀಠವಿದೆ. ಈ ಶಿಲ್ಪದ ಕೆಳಭಾಗದ ಪಟ್ಟಿಕೆಯಲ್ಲಿ ತ್ರಿವಿಕ್ರಮಶಿಲ್ಪದಂತೆ ಇಲ್ಲಿಯೂ ಸಂಗೀತಗಾರ ಕುಬ್ಜಗಣ ಶಿಲ್ಪಗಳಿವೆ. ಆದರೆ ಮೊದಲಿನ ಶಿಲ್ಪದಲ್ಲಿ ನೋಡಿದಂತೆ ಈ ಶಿಲ್ಪಗಳ ಕೈಯಲ್ಲಿ ಸಂಗೀತ ವಾದ್ಯ ಪರಿಕರಗಳು ಕಂಡುಬರುವುದಿಲ್ಲ. ಬದಲಾಗಿ ಆಮೋದ ಪ್ರಮೋದದಲ್ಲಿ ತೊಡಗಿದಂತಿವೆ. ಇಲ್ಲಿ ಶಿಲ್ಪಿಯ ಕ್ರಿಯಾತ್ಮಕ ಕೌಶಲ್ಯವನ್ನು ಗಮನಿಸಬಹುದು.

ಇಲ್ಲಿಯ ಪ್ರತಿಯೊಂದು ಕುಬ್ಜ ಶಿಲ್ಪವೂ ಒಂದಕ್ಕಿಂತ ಒಂದು ಭಿನ್ನವಾಗಿದ್ದು ಮುಖದಲ್ಲಿ ಲಘು ಹಾಸ್ಯವನ್ನು ವ್ಯಕ್ತಪಡಿಸುತ್ತಿವೆ. ಪ್ರತಿಯೊಂದರ ಮುಖಭಾವವೂ ವಿಭಿನ್ನವಾಗಿದೆ ಮತ್ತು ಪ್ರತಿಯೊಂದರ ಕೂದಲ(Hairs) ಶೈಲಿಯೂ ಬೇರೆ ಬೇರೆಯಾಗಿದೆ. ಆದರೆ ನೋಡುಗರಲ್ಲಿ ತಮಾಷೆಯನ್ನು ಉಂಟುಮಾಡುತ್ತವೆ. ಈ ಶಿಲ್ಪಗಳು ಮೇಲಿನ ಶಿಲ್ಪಕ್ಕೆ ಅಗತ್ಯವಿಲ್ಲವಾದರೂ ಬಾದಾಮಿ ಚಾಲುಕ್ಯಶಿಲ್ಪಿಗಳು ಈ ರೀತಿಯ ಶಿಲ್ಪಪಟ್ಟಿಕೆಗಳನ್ನು ಎಲ್ಲೆಡೆಯೂ ಕೆತ್ತಿದ್ದಾರೆ. ಇದು ಬಾದಾಮಿ ಶಿಲ್ಪಿಗಳ ವಿಶೇಷತೆಯೂ ಹೌದು. ಮುಖ್ಯ ವಿಷಯಕ್ಕೆ ಪೂರಕವಾಗಿ ಇಂತಹ



ಶಿಲ್ಪಗಳನ್ನು ಕೆತ್ತಿರುವುದರಿಂದ ಶಿಲ್ಪಕ್ಕೆ ಹೆಚ್ಚಿನ ಸೌಂದರ್ಯದ ಜೊತೆಗೆ ನೋಡುಗರಲ್ಲಿ ಕುತೂಹಲವನ್ನು ಉಂಟುಮಾಡುವುದರಲ್ಲಿ ಇಂತಹ ಶಿಲ್ಪಗಳು ಪ್ರಮುಖ ಪಾತ್ರ ವಹಿಸುತ್ತವೆ.

ಶಿಲ್ಪದ ಸಂಯೋಜನೆಯು ಸಂಕೀರ್ಣವಾಗಿದ್ದು ಒಟ್ಟು ನೋಟದಲ್ಲಿ ಚಲನೆಯ ಭಾವವನ್ನು ಉಂಟುಮಾಡುವುದಿಲ್ಲವಾದರೂ ತನ್ನ ನೀಳವಾದ ಆಕಾರ ಮತ್ತು ಗಾತ್ರದಿಂದ ಗಮನಾರ್ಹವಾಗಿದೆ. ಮುಖ್ಯ ಶಿಲ್ಪಕ್ಕೆ ಪೂರಕವಾಗಿ ಉಳಿದ ಜಾಗೆಯು ಖಾಲಿಯಾಗಿರದಂತೆ ವಿವಿಧ ದೇವತೆಗಳು ವರಾಹರೂಪಿ ವಿಷ್ಣುವಿಗೆ ಕೈ ಮುಗಿಯುತ್ತಿರುವ ಸಣ್ಣ ಗಾತ್ರದ ಶಿಲ್ಪಗಳನ್ನು ಹಿನ್ನೆಲೆಯಲ್ಲಿ ಆಕಾಶದಲ್ಲಿ ತೇಲಾಡುತ್ತಿರುವಂತೆ ಕೆತ್ತಲಾಗಿದೆ. ಈ ಶಿಲ್ಪಗಳು ಸಣ್ಣ ಗಾತ್ರದಲ್ಲಿದ್ದರೂ ಅವುಗಳನ್ನು ತಮ್ಮ ವಾಹನ ಮತ್ತು ಆಯುಧಗಳ ಸಹಾಯದಿಂದ ಗುರುತಿಸಬಹುದು. ಶಿಲ್ಪದ ಸಂಯೋಜನೆಯು ಸಮವಾಗಿದ್ದು ಹದತಪ್ಪದಂತೆ ಎಚ್ಚರವಹಿಸಿರುವುದನ್ನು ಗಮನಿಸಬಹುದು. ಬಾದಾಮಿ ಚಾಲುಕ್ಯರ ಮೊದಲಿನ ಕೆಲವು ಅರಸರು ವೈಷ್ಣವಧರ್ಮಾನುಯಾಯಿಗಳು, ತಮ್ಮ ವಂಶ ಪ್ರಶಸ್ತಿಯಲ್ಲಿ ರಾಜಲಾಂಛನವಾದ ವರಾಹವನ್ನು ಭಗವಾನ್ ನಾರಾಯಣನೆ ಅನುಗ್ರಹಿಸಿದನೆಂದು ಹೇಳಿಕೊಂಡಿದ್ದಾರೆ.[೧೮] ಈ ಕಾರಣದಿಂದ ವಿಷ್ಣುವಿನ ಅವತಾರಗಳಲ್ಲಿ ಒಂದಾದ ವರಾಹ ಶಿಲ್ಪವನ್ನು ಕೆತ್ತಲಾಗಿದೆ.

ಶಿಲ್ಪ –೨

ಮೂರನೇ ವೈಷ್ಣವಗುಹೆಯ ಭಿತ್ತಿಯಲ್ಲಿ ಭೂವರಾಹ ಶಿಲ್ಪವಿದೆ. ಪ್ರತ್ಯಾಲೀಢ ಭಂಗಿಯಲ್ಲಿರುವ ವರಾಹ ಒಂದು ಕೈಯಲ್ಲಿ ಕಮಲವನ್ನು ಹಿಡಿದಿದ್ದು, ಆ ಕಮಲದ ಮೇಲೆ ಭೂದೇವಿ ವರಾಹದ ಮುಖಕ್ಕೆ ತಾಗಿದಂತೆ ಬಳುಕಿ ನಿಂತಿದ್ದಾಳೆ. ಬಲಗಾಲನ್ನು ನೆಲದ ಮೇಲೆ ದೃಢವಾಗಿಟ್ಟುಕೊಂಡು, ಎಡಗಾಲನ್ನು ಹಾವಿನ ಮೇಲೆ ನಯವಾಗಿಟ್ಟಂತೆ ಕಾಣುವ ಈ ಶಿಲ್ಪವು ಉತ್ತಮ ಸಂಯೋಜನೆಯ ಶಿಲ್ಪವೊಂದು ಹೇಗಿರುತ್ತದೆಂಬುದಕ್ಕೆ ಒಂದು ನಿದರ್ಶನವಾಗಿದೆ. ಕೆಳಗಿನ ಎಡಗೈಯಿಂದ ಭೂದೇವಿಯನ್ನು ಎತ್ತಿಕೊಂಡು ಮೇಲಕ್ಕೆತ್ತಿ ತರುತ್ತಿರುವಂತಿದೆ. ಮೊದಲು ನೋಡಿದ(ಎರಡನೇ) ಗುಹೆಯ ಶಿಲ್ಪದಲ್ಲಿ ಭೂದೇವಿಯು ಆರಾಮವಾಗಿ ಒರಗಿಕೊಂಡಿರುವಂತೆ ಕಂಡುಬಂದರೆ, ಇಲ್ಲಿ ಭೂದೇವಿಯು ವಿಷ್ಣುವಿನ ಭುಜಕ್ಕೆ ಕೈಯನ್ನು ಊರಿಕೊಂಡು ಆಧಾರವಾಗಿ ಹಿಡಿದುಕೊಂಡಿರುವಂತಿದೆ. ಇಲ್ಲಿ ವರಾಹನು ಹೆಚ್ಚು ಉಗ್ರವಾಗಿ ಕಂಡುಬರುತ್ತಾನೆ.

ತ್ರಿಮೂರ್ತಿಗಳಲ್ಲಿ ಉಳಿದಿಬ್ಬರು ದೇವತೆಯರು ತಮ್ಮ ಪತ್ನಿಯರೊಂದಿಗೆ ಆಕಾಶದಿಂದ ಕುತೂಹಲಭರಿತರಾಗಿ ನೋಡುತ್ತಿದ್ದಾರೆ. ಪಾತಾಳದಲ್ಲಿ ನಾಗರಾಜ ಮತ್ತು ಆತನ ಸಹಚರರು ಭಕ್ತಿಯಿಂದ ಕೈ ಮುಗಿಯುತ್ತಿದ್ದಾರೆ. ಇಲ್ಲಿ ನಾಗಗಳನ್ನು ಹೆಚ್ಚು ವಿವರವಾಗಿ ಕೆತ್ತಿದ್ದಾರೆ. ಎರಡನೆಯ ಗುಹೆಯಲ್ಲಿ ನಾಗದೇವತೆಗಳು ಒಂದು ಬದಿಯಲ್ಲಿ ನಿಂತಿದ್ದರೆ ಇಲ್ಲಿ ಇವರನ್ನು ಎರಡೂ

---

೧೮. ಡಾ. ಎ. ಮುರಿಗೆಪ್ಪ (ಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೧೮೩



ಬದಿಗಳಲ್ಲಿ ಮತ್ತು ಮಧ್ಯಕ್ಕೆ ಸಮನಾಗಿ ಹಂಚಿದಂತೆ ಸಂಯೋಜಿಸಲಾಗಿದೆ. ಇದಕ್ಕೆ ಪೂರಕವಾಗಿ ಇನ್ನೊಂದು ಗಮನಿಸಬಹುದಾದಂತೆ ಶಿವ ಮತ್ತು ಬ್ರಹ್ಮರನ್ನು ಮೊದಲ ಗುಹೆಯಲ್ಲಿ ಒಂದು ಮೂಲೆಯಲ್ಲಿ ನಿಲ್ಲಿಸಿದಂತೆ ಕೆತ್ತಲಾಗಿದೆ. ಮತ್ತು ದೇವೇಂದ್ರನು ಮಧ್ಯದಲ್ಲಿ ತನ್ನ ವಜ್ರಾಯುಧವನ್ನು ಹಿಡಿದುಕೊಂಡು ನಿಂತಿದ್ದಾನೆ. ಇಲ್ಲಿ ಇದು ಕಂಡುಬರುವುದಿಲ್ಲ. ಎರಡನೆಯ ಗುಹೆಯ ವರಾಹನು ಒಂದು ಕಾಲನ್ನು ಪದ್ಮಪೀಠದ ಮೇಲಿರಿಸಿದ್ದಾನೆ. ಇಲ್ಲಿ ಹಾವಿನ ಬೆನ್ನಮೇಲಿರಿಸಿದ್ದಾನೆ. ಭೂದೇವಿಯು ಇಲ್ಲಿ ದೃಢವಾಗಿ ನಿಂತಿರುವಂತೆ ಕಂಡುಬರುತ್ತಾಳೆ. ಇಂತಹ ಹಲವಾರು ಸಣ್ಣ ಪುಟ್ಟ ಬದಲಾವಣೆಗಳು ಇಲ್ಲಿ ಕಂಡುಬಂದರೂ ಮೇಲ್ನೋಟಕ್ಕೆ ಇದು ಮೊದಲ (ಎರಡನೇ ಗುಹೆಯ) ವರಾಹ ಶಿಲ್ಪದಂತೆಯೆ ಕಂಡುಬರುತ್ತದೆ. ಆದರೆ ಇಲ್ಲಿ ಶಿಲ್ಪಿಯ ಸಂಯೋಜನಾ ಚಾತುರ್ಯವನ್ನು ಮೆಚ್ಚಬೇಕಾಗುತ್ತದೆ.

ಈ ಶಿಲ್ಪದ ಒಟ್ಟು ಸಂಯೋಜನೆಯು ಮೊದಲ ಶಿಲ್ಪಕ್ಕಿಂತ ವಿಭಿನ್ನವಾಗಿ ಮೂಡಿಬಂದಿದೆ. ಮೊದಲ ಶಿಲ್ಪವು ಚೌಕ ಸಂಯೋಜನೆಯ ಶಿಲ್ಪವಾಗಿದ್ದರೆ ಮೂರನೇ ಗುಹೆಯ ಶಿಲ್ಪ ವೃತ್ತ ಸಂಯೋಜನೆಯಾಗಿದೆ. ಅಂದರೆ ಈ ಶಿಲ್ಪದಲ್ಲಿ ನೋಡುಗನ ದೃಷ್ಟಿಯು ಮಧ್ಯದಲ್ಲಿ ಕೇಂದ್ರೀಕೃತವಾಗುವಂತೆ ವರಾಹಮೂರ್ತಿಯನ್ನು ಕೆತ್ತಲಾಗಿದೆ. ಆಕಾರ ಮತ್ತು ಭಂಗಿಯು ಅದೇ ಆಗಿದ್ದರೂ ಶಿಲ್ಪಿಯು ತನ್ನ ಚಾಣಾಕ್ಷತೆಯನ್ನು ಇಲ್ಲಿ ತೋರಿಸಿರುವುದನ್ನು ಗಮನಿಸಬಹುದು. ಆಭರಣಗಳು ಕೂಡಾ ಹೆಚ್ಚು ಅಲಂಕರಣವನ್ನು ಪಡೆದಿವೆ. ಉದಾಹರಣೆಗೆ ಹೇಳುವುದಾದರೆ ಎರಡನೇ ಗುಹೆಯ ಶಿಲ್ಪದಲ್ಲಿ ಉದರಬಂಧವು ತೆಳ್ಳಗಿದ್ದು ಸ್ಪಷ್ಟವಾಗುವುದಿಲ್ಲ. ಆದರೆ ಇಲ್ಲಿ ಹೆಚ್ಚು ಕಲಾತ್ಮಕವಾಗಿ ತೋರಿಸಲಾಗಿದೆ. ಅದೆ ರೀತಿ ಮೇಖಲೆ ಮತ್ತು ಒಡ್ಯಾಣದಲ್ಲಿಯೂ ಕಂಡುಬರುತ್ತದೆ. ಇನ್ನೊಂದು ಗಮನಿಸಬಹುದಾದ ವ್ಯತ್ಯಾಸವೆಂದರೆ, ಎರಡನೆಯ ಗುಹಾಶಿಲ್ಪದಲ್ಲಿ ಆತನ ಯಜ್ಞೋಪವೀತವು ತೆಳ್ಳಗಿದ್ದು, ಎಡಭಾಗದಿಂದ ಇಳಿದು ಸೊಂಟದಲ್ಲಿ ಇಳಿ ಬಿದ್ದಿದ್ದರೆ ಇಲ್ಲಿ ಯಜ್ಞೋಪವೀತವು ದಪ್ಪವಾಗಿದ್ದು ಎಡಭಾಗದಿಂದ ಇಳಿದು ಬಲಭುಜದ ಕಡೆಗೆ ವ್ಯಾಪಿಸಿದೆ. ಇದರಿಂದ ಶಿಲ್ಪಕ್ಕೆ ಹೆಚ್ಚಿನ ವೇಗ ದೊರಕಿದೆ. ಜೊತೆಗೆ ಉಬ್ಬು ಶಿಲ್ಪದಲ್ಲಿ ತ್ರಿಮಾನವನ್ನು ಕೆತ್ತುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿರುವುದು ಕಂಡುಬರುತ್ತದೆ.

ವರಾಹ ಮುಖವು ಮೊದಲಿನ ಶಿಲ್ಪಕ್ಕಿಂತ ಎರಡನೆಯ ಶಿಲ್ಪದಲ್ಲಿ ಮೇಲಕ್ಕೆತ್ತಿರುವುದು ಆತನ ವಿಜಯದ ಹೆಮ್ಮೆಯನ್ನು ವ್ಯಕ್ತಪಡಿಸುತ್ತದೆ. ಮುಖದಲ್ಲಿ ಉಗ್ರತೆ ಇದ್ದರೂ ಅದು ಪ್ರಮುಖವಾಗುವುದಿಲ್ಲ, ಬದಲಾಗಿ ವೀರಭಾವದ ಅಭಿವ್ಯಕ್ತಿಯಾಗಿದೆ. ಶಿಲ್ಪವು ಇಲ್ಲಿ ಮೂರು ಹಂತದ ಸಂಯೋಜನೆಯಾಗಿರುವುದು ಗಮನಾರ್ಹ. ಕೆಳ ಹಂತದಲ್ಲಿ ನಾಗರಾಜ ಮತ್ತು ಆತನ ಪರಿವಾರವಿದ್ದರೆ, ಎರಡನೆಯ ಹಂತದಲ್ಲಿ ವರಾಹಮೂರ್ತಿಯ ದೇಹಾಕಾರ ಮತ್ತು ಮುಖಭಾವಕ್ಕೆ ಹೆಚ್ಚು ಮನ್ನಣೆಯಿದ್ದರೆ ಮೇಲಿನ ಹಂತದಲ್ಲಿ ಉಳಿದ ದೇವತೆಗಳ ಶಿಲ್ಪಗಳನ್ನು ಕೆತ್ತಲಾಗಿರುವುದರಿಂದ ಶಿಲ್ಪದ ಒಟ್ಟು ಸೌಂದರ್ಯವು ಚೌಕಟ್ಟಿನ ಎಲ್ಲೆಡೆಗೆ ಹರಿದು ಮಧ್ಯಭಾಗಕ್ಕೆ

ಬಂದು ನಿಲ್ಲುವಂತೆ ಕೆತ್ತಿರುವುದು ಗಮನಾರ್ಹ. ನಾಗರಾಜ ಮತ್ತು ಆತನ ಪರಿವಾರದವರ ದೇಹವು ಮೊದಲ ಶಿಲ್ಪಕ್ಕಿಂತ ಇದರಲ್ಲಿ ಹೆಚ್ಚು ಸುರುಳಿಯಾಗಿ ಕಂಡುಬರುವುದರಿಂದ ಶಿಲ್ಪಕ್ಕೆ ಹೆಚ್ಚಿನ ಮೆರುಗು ಉಂಟಾಗಿದೆ. ಶಿಲ್ಪವು ದಷ್ಟಪುಷ್ಟವಾಗಿರುವ ದೇಹವನ್ನು ಹೊಂದಿದ್ದು ಆಭರಣಗಳ ವಿಶೇಷ ಅಲಂಕರಣ ಮತ್ತು ಕುಸುರಿಕೆತ್ತನೆಯಿಂದ ಈ ಶಿಲ್ಪವು ಎರಡನೆಯ ಗುಹೆಯ ಶಿಲ್ಪಕ್ಕಿಂತ ಹೆಚ್ಚಿನ ಪರಿಪೂರ್ಣತೆಯನ್ನು ಹೊಂದಿರುವುದನ್ನು ಗಮನಿಸಬಹುದು.

ಶಿಲ್ಪ –೩

ಮಹಾಕೂಟದ ವಿರೂಪಾಕ್ಷ ದೇವಾಲಯದ ದಕ್ಷಿಣ ದೇವಕೋಷ್ಠದ ಈ ಶಿಲ್ಪವು ಮಧ್ಯಮ ಗಾತ್ರದ್ದಾಗಿದೆ. ಅತ್ಯಂತ ಸುಂದರವಾದ ಈ ಕೆತ್ತನೆಯು ಬಾದಾಮಿಯ ಕೆತ್ತನೆಗಳಿಗಿಂತ ವಿಭಿನ್ನವಾಗಿದ್ದು ಆಕರ್ಷಕವಾಗಿದೆ. ಇಲ್ಲಿನ ವರಾಹನು ಪ್ರತ್ಯಾಲೀಢ ಭಂಗಿಯಲ್ಲಿ ನಿಂತಿದ್ದರೂ ಶಿಲ್ಪದ ಒಟ್ಟು ರಚನೆಯಲ್ಲಿ ವಿಭಿನ್ನತೆಯಿದೆ. ಇಲ್ಲಿ ನಾಗರಾಜನು ತನ್ನ ಹಾವಿನ ದೇಹವನ್ನು ಸುರುಳಿಯಾಗಿ ಸುತ್ತಿಕೊಂಡಿದ್ದು ಸೊಂಟದ ಮೇಲ್ಭಾಗ ಮಾನವರೂಪಿಯಾಗಿ ವರಾಹನಿಗೆ ದೀನನಾಗಿ ಕೈಮುಗಿದುಕೊಂಡಿದ್ದಾನೆ. ಪಕ್ಕದಲ್ಲಿ ಆತನ ಪತ್ನಿಯೂ ಭಕ್ತಿಯಿಂದ ಕೈಮುಗಿಯುತ್ತಿದ್ದಾಳೆ. ನಾಗರಾಜನ ಹೆಡೆಯ ಮೇಲೆ ವರಾಹನು ಕಾಲಿರಿಸಿಕೊಂಡಿದ್ದು, ತನ್ನ ಎಡಗೈಯನ್ನು ಭುಜದೆತ್ತರಕ್ಕೆ ಏರಿಸಿದ್ದು ಭೂದೇವಿಯು ಅಲ್ಲಿ ಆಸೀನಳಾಗಿದ್ದಾಳೆ. ಆತನ ಇನ್ನೊಂದು ಕೈಯಲ್ಲಿ ಶಂಖವಿದೆ. ವರಾಹನ ಬಲಗೈ ಕಟ್ಯವಲಂಬಿತವಾಗಿದೆ.

ಮೇಲಿನ ಬಲಗೈಯಲ್ಲಿ ಅಲಂಕಾರಯುತವಾಗಿ ಕೆತ್ತಲಾಗಿರುವ ಚಕ್ರವನ್ನು ಹಿಡಿದುಕೊಂಡಿದ್ದಾನೆ. ಮುಖವು ದುಂಡಾಕಾರವಾಗಿದ್ದು, ತುಂಬಿದ ಮಾಂಸಖಂಡಗಳ ದರ್ಶನವಾಗುತ್ತದೆ. ದೊಡ್ಡದಾದ ಕಣ್ಣುಗುಡ್ಡೆಯು ನೋಡುಗನಲ್ಲಿ ಆಶ್ಚರ್ಯದ ಭಾವನೆಯನ್ನುಂಟುಮಾಡುತ್ತದೆ. ತಲೆಯ ಭಾಗವು ಪಾರ್ಶ್ವವಾಗಿದ್ದು ಎಡಗಡೆಗೆ ಮುಖವನ್ನು ತಿರುಗಿಸಿ ಭೂದೇವಿಯ ಕಡೆಗೆ ನೋಡುತ್ತಿದ್ದಾನೆ. ಇದರಿಂದ ಶಿಲ್ಪದಲ್ಲಿ ಭಾವನೆಗಳನ್ನು ವ್ಯಕ್ತಪಡಿಸಲು ಹೆಚ್ಚಿನ ಅವಕಾಶ ದೊರೆತಿದೆ. ದೇಹವು ಉತ್ತಮ ಅಂಗಪ್ರಮಾಣವನ್ನು ಹೊಂದಿದ್ದು ನೀಳವಾದ ತೊಡೆಗಳು, ಅದಕ್ಕೆ ತಕ್ಕಂತೆ ಪಾದದ ರಚನೆ ಗಮನ ಸೆಳೆಯುತ್ತದೆ.

ಭೂದೇವಿಯ ಕೆತ್ತನೆ ಆಕರ್ಷಕವಾಗಿದ್ದು ಸರಳವಾದ ಅಷ್ಟೇ ನೀಳವಾದ ಕಾಲುಗಳುಳ್ಳ ದೇಹಾಕಾರವನ್ನು ಹೊಂದಿದೆ. ಮುಖವು ಭಗ್ನಗೊಂಡಿರುವುದರಿಂದ ಅದೊಂದು ಕೊರತೆಯೇ ಸರಿ. ದುಂಡಗಾದ ಬೃಹತ್ ಸ್ತನಗಳು, ಸಪೂರವಾದ ಕಟಿಪ್ರದೇಶ, ಆಭರಣಗಳಿಂದ ಕೂಡಿದ ದೇಹರಚನೆ ಗಮನ ಸೆಳೆಯುತ್ತದೆ. ವರಾಹವು ಜಟಾಮುಕುಟವನ್ನು ಧರಿಸಿದೆ. ಕುತ್ತಿಗೆಯಲ್ಲಿ ಆಕರ್ಷಕವಾದ ಒಂದೇ ಸುತ್ತಿನ, ಆದರೆ ಅಗಲವಾದ ಬಿಡಿ ರಚನೆಯ ಮಣಿಗಳುಳ್ಳ ಎದೆಹಾರವಿದೆ. ಅದರ ಮೇಲುಭಾಗದಲ್ಲಿ ಕುತ್ತಿಗೆಯ ಮಡಿಕೆಯಿದೆ. ಇದರಿಂದಾಗಿ ಶಿಲ್ಪದಲ್ಲಿ ವರಾಹನ ದುಂಡನೆಯ

ಮಾಂಸಖಂಡಗಳ ಅನುಭವವಾಗುತ್ತದೆ. ದಪ್ಪನಾದ ಆದರೆ ಗಂಟುಗಳುಳ್ಳ ಯಜ್ಞೋಪವೀತ ಕಲಾತ್ಮಕ ಕೆತ್ತನೆಯಾಗಿದ್ದು ಇಲ್ಲಿ ಪ್ರತಿಯೊಂದು ಎಳೆಯನ್ನು ಕೆತ್ತಿದಂತೆ ತೋರಿಸಲಾಗಿದೆ. ಎದೆಗಿಂತ ಕೆಳಗೆ ಉದರಬಂಧವಿದ್ದು, ಹೊಕ್ಕುಳ ಪ್ರದೇಶಕ್ಕಿಂತ ಕೆಳಭಾಗದಲ್ಲಿ ಮಾಂಸದ ಉಬ್ಬನ್ನು ಕೆತ್ತಿರುವುದನ್ನು ಗಮನಿಸಬಹುದಾಗಿದೆ.

ಕೆಳಭಾಗದಲ್ಲಿ ಕಟಿಬಂಧವು ಅಗಲವಾಗಿದ್ದು ಎರಡು ಸುತ್ತುಗಳ ಮಧ್ಯದಲ್ಲಿ ಬಟ್ಟೆಯನ್ನು ಕೆತ್ತಲಾಗಿದ್ದು ಮೇಖಲೆಯನ್ನು ಕೆಳಭಾಗದವರೆಗೂ ಇಳಿಬಿಟ್ಟಿದ್ದು ಅಗಲವಾಗಿ ಆಕರ್ಷಕವಾಗಿ ಕೆತ್ತಲಾಗಿದೆ. ಕಟಿಬಂಧದ ಗಂಟನ್ನು ಹಿಂಭಾಗದಲ್ಲಿ ಗಂಟುಹಾಕಲಾಗಿದ್ದು ಕೆಳಗಿನವರೆಗೂ ಇಳಿಬಿಡಲಾಗಿದೆ. ಇಲ್ಲಿ ಆಭರಣಗಳ ಕೆತ್ತನೆ ಕಡಿಮೆ. ಅಂದರೆ ಚತುರ್ಭುಜ ವರಾಹನ ಕೈಗಳಲ್ಲಿ ತೋಳಿಗೆ ತೋಳುಬಂಧಿ, ಮುಂಗೈಗಳಲ್ಲಿ ಎರಡು ಬಳೆಗಳು ಮಾತ್ರವಿದೆ, ಕಾಲಲ್ಲಿ ಕಾಲ್ಗಡಗವಿಲ್ಲ. ಸರಳವಾಗಿ ಆದರೆ ಸುಂದರವಾಗಿ ಕೆತ್ತಲಾದ ಈ ಶಿಲ್ಪದಲ್ಲಿ ಬೃಹದಾಕಾರಕ್ಕಿಂತಲೂ ಅಂಗಪ್ರಮಾಣಗಳುಳ್ಳ ಸರಳತೆಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ತ್ರಿಮಾನದ ಜೊತೆಗೆ ದೇಹಸೌಂದರ್ಯಕ್ಕೆ ಗಮನ ನೀಡಲಾಗಿರುವುದನ್ನು ಗಮನಿಸಬಹುದು.

ಇದರ ಜೊತೆಗೆ ಕೆತ್ತಲಾಗಿರುವ ವರಾಹರೂಪಿಯ ಕೆಳಭಾಗದಲ್ಲಿ ಭಕ್ತಿಯಿಂದ ಕೈಮುಗಿದುಕೊಂಡಿರುವ ನಾಗರಾಜ ದಂಪತಿಗಳ ಶಿಲ್ಪವು ಒಟ್ಟು ರಚನೆಯಲ್ಲಿ ಪೂರಕ ಅಂಶವಾಗಿದ್ದು ಸುರುಳಿಯಾಗಿ ಕೆತ್ತಲಾಗಿರುವ ಹಾವಿನ ದೇಹಭಾಗ, ವಿನಮ್ರತೆಯಿಂದ ಕೈಮುಗಿದುಕೊಂಡಿರುವ ಭಂಗಿ, ಆತನ ತಲೆಯ ಮೇಲೆ ಐದು ಹೆಡೆಗಳ ಕೆತ್ತನೆಯಲ್ಲಿ ಚಾಲುಕ್ಯಶಿಲ್ಪಿಗಳ ಪರಿಣತಿಯನ್ನು ತೋರಿಸುತ್ತದೆ. ಬಾದಾಮಿಯ ಶಿಲ್ಪಗಳಲ್ಲಿ ನಾವು ಬೃಹದಾಕಾರವನ್ನು ನೋಡಿದರೆ ಇಲ್ಲಿ ಮಧ್ಯಮ ಗಾತ್ರದ ಶಿಲ್ಪದಲ್ಲಿ ಸರಳ ಸೌಂದರ್ಯವನ್ನು ನೋಡುತ್ತೇವೆ. ನಾಗಿಣಿಯ ದೇಹದ ಬಾಗು-ಬಳುಕುಗಳು, ಆಕೆಯ ವಯ್ಯಾರವೂ ಆಕರ್ಷಕವಾಗಿದೆ. ಇದರಿಂದಾಗಿ ಒಟ್ಟು ಶಿಲ್ಪದಲ್ಲಿ ವರಾಹರೂಪಿಯ ಭವ್ಯತೆಯನ್ನು ವ್ಯಕ್ತಪಡಿಸುವಲ್ಲಿ ಶಿಲ್ಪಿಗಳು ಯಶಸ್ವಿಯಾಗಿದ್ದಾರೆನ್ನಬಹುದು.

ಶಿಲ್ಪ –೪

ಐಹೊಳೆಯ ದುರ್ಗಾ ದೇವಾಲಯದ ಕೋಷ್ಠಕದಲ್ಲಿ ಗಮನಾರ್ಹ ವರಾಹರೂಪಿ ವಿಷ್ಣುವಿನ ಶಿಲ್ಪವಿದ್ದು, ಹೆಚ್ಚುಪಾಲು ಬಾದಾಮಿ ಗುಹಾಲಯದ ಶಿಲ್ಪವನ್ನೇ ಹೋಲುವ ಈ ಶಿಲ್ಪವನ್ನು ಸೂಕ್ಷ್ಮವಾಗಿ ನೋಡಿದಾಗ ಹಲವಾರು ವಿಶೇಷಗಳನ್ನು ಹೊಂದಿರುವುದನ್ನು ಗಮನಿಸಬಹುದು. ಮಧ್ಯಮ ಗಾತ್ರದ ಈ ಶಿಲ್ಪದಲ್ಲಿ ವರಾಹವು ಭೂದೇವಿಯನ್ನು ಹೊತ್ತುಕೊಂಡು ನೀರಿನಿಂದ ಮೇಲಕ್ಕೆ ಎದ್ದು ಬರುವ ರೀತಿಯ ಕೆತ್ತನೆಯಿದೆ. ಅತಿಭಂಗಿಯಲ್ಲಿ ನಿಂತಿರುವ ಭಂಗಿಯ ಶಿಲ್ಪದಲ್ಲಿ ಭೂದೇವಿಯು ವರಾಹನ ಎಡಭುಜದ ಮೇಲೆ ಆಸೀನಳಾಗಿದ್ದಾಳೆ.



ಕೆಳಭಾಗದಲ್ಲಿ ಪಾತಾಳಲೋಕವಿದ್ದು ನಾಗರಾಜನು ತನ್ನ ಪತ್ನಿಯೊಡನೆ ವರಾಹನಿಗೆ ವಿನೀತನಾಗಿ ಕೈಮುಗಿಯುತ್ತಿದ್ದಾನೆ. ವರಾಹನ ಮೇಲಿನ ಎರಡು ಕೈಗಳಲ್ಲಿ ಶಂಖ-ಚಕ್ರಗಳಿದ್ದು ಭಗ್ನಗೊಂಡಿವೆ. ವರಾಹನ ದೇಹಕ್ಕೆ ಹೋಲಿಸಿದರೆ ತಲೆಯು ಬಹಳ ದೊಡ್ಡದಾಗಿದೆ. ತಲೆಯು ಶಿಲ್ಪದ ಚೌಕಟ್ಟಿನ ಹೆಚ್ಚಿನ ಭಾಗವನ್ನು ಆಕ್ರಮಿಸಿದಂತೆ ಕಂಡುಬರುತ್ತದೆ.

ಇದನ್ನು ಉದ್ದೇಶಪೂರ್ವಕವಾಗಿ ಶಿಲ್ಪದಲ್ಲಿ ರೌದ್ರತೆಯನ್ನು ವ್ಯಕ್ತಪಡಿಸಲು ರಚಿಸಿರಬಹುದು. ಇಲ್ಲಿನ ಶಿಲ್ಪದಲ್ಲಿ ಸರಳತೆಯ ಜೊತೆಗೆ ಅಲಂಕರಣಕ್ಕೂ ಮಹತ್ವ ನೀಡಲಾಗಿದೆ. ವರಾಹನು ಎದೆಹಾರ, ಕೇಯೂರ, ಉದರಬಂಧ, ಕಟಿಬಂಧ, ಮುಂಗೈಬಳೆ, ತೋಳುಪಟ್ಟಿ, ಕರ್ಣಕುಂಡಲ ಇತ್ಯಾದಿ ಆಭರಣಗಳನ್ನು ಹೊಂದಿದ್ದು, ಮುಖವು ರೌದ್ರವಾಗಿದೆ. ಕೆಳಭಾಗದಲ್ಲಿ ಕೆತ್ತಲಾದ ನಾಗರಾಜದಂಪತಿಗಳ ಶಿಲ್ಪವೂ ಆಕರ್ಷಕ ಕೆತ್ತನೆಯನ್ನು ಹೊಂದಿದೆ. ಉಳಿದಂತೆ ಶಿಲ್ಪದ ಹಿನ್ನೆಲೆಯಲ್ಲಿ ಬೇರಾವುದೆ ಕೆತ್ತನೆಗಳಿಲ್ಲದಿರುವುದರಿಂದ ನೋಡುಗನ ಗಮನ ನೇರವಾಗಿ ವರಾಹನ ಕಡೆಗೆ ಉಳಿಯುವುದರಿಂದ ಶಿಲ್ಪವು ಹೆಚ್ಚು ಪ್ರಭಾವಶಾಲಿಯಾಗಿ ಉಳಿದುಬಿಡುತ್ತದೆ. ರಾವಳಫಡಿ ಗುಹಾಲಯದಲ್ಲಿರುವ ವರಾಹಶಿಲ್ಪವನ್ನು ಇಲ್ಲಿ ನಾವು ಮೇಲಿನ ಶಿಲ್ಪದೊಂದಿಗೆ ತುಲನೆ ಮಾಡಿದರೆ, ಐಹೊಳೆಯ ರಾವಳಫಡಿ ಗುಹಾಲಯದಲ್ಲಿನ ವರಾಹಶಿಲ್ಪವೂ ದುರ್ಗಿಗುಡಿಯ ಶಿಲ್ಪದಂತೆಯೇ ಕೆತ್ತಲಾಗಿರುವ ಅತಿಭಂಗಿಯಲ್ಲಿರುವ ಶಿಲ್ಪ. ಇಲ್ಲಿನ ಈ ಶಿಲ್ಪವು ಹೆಚ್ಚು ಸಂಕೀರ್ಣತೆಯನ್ನು ಹೊಂದಿದೆ.

ಶಿಲ್ಪ –೫

ರಾವಳಫಡಿ ಗುಹಾಲಯದಲ್ಲಿ ಕೆತ್ತಲಾಗಿರುವ ವರಾಹ ಶಿಲ್ಪದಲ್ಲಿ ಪಾತಾಳದಲ್ಲಿ ನಾಗರಾಜ ದಂಪತಿಗಳು ಮೂಲೆಯಲ್ಲಿ ಕೈಮುಗಿಯುತ್ತ ನಿಂತಿರುವ ಶಿಲ್ಪವಿದೆ. ಇವು ಹೆಚ್ಚು ದುಂಡಗಾಗಿದ್ದು ನಾಗರಾಜನ ತಲೆಯ ಮೇಲೆ ಏಳು ಹೆಡೆಗಳನ್ನು ವಿವರವಾಗಿ ಕೆತ್ತಲಾಗಿದೆ. ಶಿಲ್ಪಗಳು ತ್ರಿಮಾನವನ್ನು ಹೋಲುವ ಉಬ್ಬು ಕೆತ್ತನೆಯನ್ನು ಹೊಂದಿವೆ. ಅದೇ ರೀತಿ ವರಾಹವಾಗಲಿ, ಭೂದೇವಿಯಾಗಲಿ ಇಲ್ಲಿ ತ್ರಿಮಾನದ ಕಲ್ಪನೆ ಬರುವಂತೆ ಉಬ್ಬು ಶಿಲ್ಪದಲ್ಲಿ ರಚನೆಯಾಗಿದೆ. ಇಲ್ಲಿನ ವರಾಹನ ತಲೆಯು ದುರ್ಗಿಗುಡಿಯ ವರಾಹನ ತಲೆಯಂತೆ ತೀರಾ ದೊಡ್ಡದಾಗಿಲ್ಲದಿರುವುದರಿಂದ ನೈಜತೆಗೆ ಹತ್ತಿರವಾಗಿದೆ. ನಾಗರಾಜ ದಂಪತಿಗಳ ಹಾವಿನ ಸುರುಳಿ ಕೆತ್ತನೆ ಇಲ್ಲಿ ಕಂಡುಬರುವುದಿಲ್ಲ. ಅಲ್ಲದೆ ನಾಗರಾಜನಿಗಿಂತ ಮುಂಭಾಗದಲ್ಲಿ ಆತನ ಪತ್ನಿಯನ್ನು ವಿನೀತವಾಗಿ ಭಕ್ತಿಯಿಂದ ಕೈಮುಗಿಯುತ್ತಿರುವಂತೆ ರಚಿಸಲಾಗಿರುವುದು ಗಮನಾರ್ಹ. ಭೂದೇವಿಯು ಇಲ್ಲಿ ಸಮಭಂಗಿಯಲ್ಲಿ ಆರಾಮವಾಗಿ ವರಾಹನ ತೋಳಿನ ಮೇಲೆ ಕುಳಿತಿದ್ದು ಶಿಲ್ಪದ ಕೆತ್ತನೆ ಸುಂದರವಾಗಿ ಮೂಡಿಬಂದಿದೆ. ಇಲ್ಲಿ ವರಾಹನಿಗೆ ನಾಲ್ಕು ಕೈಗಳಿದ್ದು, ಎಡಭಾಗದ ಕೆಳಗಿನ ಕೈಯನ್ನು ಭೂದೇವಿಯ ಕಾಲನ್ನು ಚಾಚುವಂತೆ ಹಿಡಿದುಕೊಂಡಿರುವುದು ಅಥವಾ ದೇವಿಯು ಅವನ



ಕೈಮೇಲೆ ಕಾಲುಗಳನ್ನು ಇಳಿಬಿಟ್ಟಂತೆ ಕೆತ್ತಲಾಗಿರುವುದು ವಿಶೇಷ. ಮೇಲಿನ ಎಡಗೈಯಲ್ಲಿ ಭೂದೇವಿಗೆ ಕುಳಿತುಕೊಳ್ಳುವ ಆಸನದಂತೆಯೂ, ಬಲಗೈಯಲ್ಲಿ ಚಕ್ರವನ್ನು ಹಿಡಿದುಕೊಂಡಿದ್ದು ಇವು ಸಾಕಷ್ಟು ಕಲಾತ್ಮಕವಾಗಿದ್ದು ದೊಡ್ಡ ಗಾತ್ರದಲ್ಲಿವೆ. ಇಲ್ಲಿ ವರಾಹ ರೂಪಿ ವಿಷ್ಣುವಿನ ಆಯುಧವಾದ ಶಂಖವನ್ನು ಕೈಯಲ್ಲಿ ಹಿಡಿಯುವುದರ ಬದಲಾಗಿ ಮೇಲಿನ ಮೂಲೆಯಲ್ಲಿ ಕೆತ್ತಲಾಗಿದೆ. ಬಲಭಾಗದ ಕೆಳಗಿನ ಕೈ ಕಟ್ಯವಲಂಬಿತವಾಗಿದೆ.

ತಲೆಯಲ್ಲಿ ವರಾಹನಿಗೆ ಜಟೆಯಿರುವುದು ವಿಶೇಷ. ತಲೆಯು ಸಣ್ಣಗಾತ್ರದಲ್ಲಿದ್ದು ಜಟೆಯನ್ನು ಅದಕ್ಕೆ ಪೂರಕವಾಗುವಂತೆ ಕೆತ್ತಲಾಗಿರುವುದರಿಂದ ಚಿತ್ರದಲ್ಲಿ ಸಹಜತೆ ಕಾಣಿಸುತ್ತದೆ. ಮೊದಲಿನ ಶಿಲ್ಪದಲ್ಲಿ ನೋಡಿದಂತಹ ವೈಭವೀಕರಣ ಇಲ್ಲಿಲ್ಲ. ಆದರೆ ಇಲ್ಲಿ ಅಲಂಕಾರಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ವರಾಹನ ಎದೆಯ ಮೇಲೆ ಹಲವಾರು ಹಾರಗಳಿವೆ. ಇದರ ಜೊತೆಗೆ ಯಜ್ಞೋಪವೀತದ ರೀತಿಯಲ್ಲಿ ಕೆತ್ತಲಾಗಿರುವ ಮುತ್ತಿನ ಮಾಲೆ ಎಡಭುಜದಿಂದ ಬಲಗಡೆಗೆ ಹಾದಿದೆ. ಇದಲ್ಲದೆ ಇನ್ನೊಂದು ಸುತ್ತಿನಲ್ಲಿ ತುಳಸಿಮಾಲೆಯಿದೆ. ತೋಳು ಮತ್ತು ಮುಂಗೈಗಳಲ್ಲಿ ಆಭರಣಗಳಿದ್ದು ಹೆಚ್ಚು ವಿನ್ಯಾಸಗಳನ್ನು ಹೊಂದಿರುವುದು ಕಂಡುಬರುತ್ತದೆ.

ಅದೇ ರೀತಿ ಉದರಬಂಧ, ಕೇಯೂರ, ಮೇಖಲೆಗಳಿದ್ದು ವರಾಹನು ತೊಟ್ಟಿರುವ ಚಲ್ಲಣವು ಅಲಂಕಾರಿಕ ನೆರಿಗೆಗಳನ್ನು ಹೊಂದಿದೆ. ಮೊದಲಿನ ಶಿಲ್ಪದಲ್ಲಿ ವರಾಹನು ಎಡಗಾಲನ್ನು ನಾಗರಾಜನ ದೇಹದ ಮೇಲೆ ಊರಿದ್ದರೆ ಇಲ್ಲಿ ಮುಂಗಾಲಿನ ಮೇಲೆ ಭಾರವನ್ನು ಊರಿ ನಿಂತಿದ್ದಾನೆ. ಮೊದಲಿನ ಶಿಲ್ಪದಲ್ಲಿ ನಾವು ನೋಡುವ ರೌದ್ರತೆ ಇಲ್ಲಿನ ಶಿಲ್ಪದಲ್ಲಿ ಕಂಡುಬರದಿರುವುದರಿಂದ ಶಿಲ್ಪವು ಹೆಚ್ಚು ಆಕರ್ಷಣೆಯನ್ನುಂಟುಮಾಡುತ್ತದೆ. ಇಲ್ಲಿನ ಶಿಲ್ಪವೂ ಒಟ್ಟು ನೋಟಕ್ಕೆ ಹೆಚ್ಚು ಆಳವಾಗಿದ್ದು ಅತಿ ಉಬ್ಬು ಶಿಲ್ಪದಲ್ಲಿ ತ್ರಿಮಾನದ ಅನುಭವವಾಗುವಂತೆ ಕೆತ್ತಲಾಗಿರುವುದರಿಂದ ಸಂಕೀರ್ಣತೆಯಲ್ಲಿಯೂ ಗೊಂದಲವುಂಟಾಗದಂತಹ ಸೌಂದರ್ಯವನ್ನು ಆಸ್ವಾದಿಸಲು ಸಾಧ್ಯವಾಗುತ್ತದೆ.

ಶಿಲ್ಪ –೬

ಬಾದಾಮಿ ಭೂತನಾಥ ದೇವಾಲಯದ ಹಿಂದೆಯಿರುವ ಪಂಚಲಿಂಗಫಡಿಯ ಮೇಲೆ ಪ್ರತ್ಯಾಲೀಢ ಭಂಗಿಯಲ್ಲಿರುವ ಈ ವರಾಹಮೂರ್ತಿಯು ಇಲ್ಲಿನ ಗುಹಾಂತರ ದೇವಾಲಯದ ಶಿಲ್ಪಕ್ಕಿಂತ ವಿಭಿನ್ನತೆಯನ್ನು ಹೊಂದಿದೆ. ಈ ಶಿಲ್ಪದಲ್ಲಿ ಭೂದೇವಿಯು ವರಾಹದ ಕೈ ಮಣಿಗಂಟಿನ ಮೇಲೆ ಧ್ಯಾನಭಂಗಿಯಲ್ಲಿ ಕುಳಿತಿದ್ದು ಆಕೆಯು ತನ್ನ ಕೈಯನ್ನು ಆಧಾರಕ್ಕೆ ವರಾಹದ ಮೂತಿಯ ಮೇಲಿಟ್ಟಿದ್ದಾಳೆ. ವರಾಹವು ಉಗ್ರರೂಪಿಯಾಗಿದೆ. ಚತುರ್ಭುಜ ವರಾಹಮೂರ್ತಿಯು ಎರಡು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದು (ಶಂಖ, ಚಕ್ರಗಳನ್ನು) ಕೆಳಗಿನ ಬಲಗೈಯು ಸೊಂಟದ ಮೇಲಿದೆ. ಸರಳವಾಗಿದ್ದು ಸುಂದರವಾಗಿರುವ ಶಿಲ್ಪವು ಕೆಲವೇ ಆಭರಣಗಳನ್ನು ಹೊಂದಿದೆ.

[illegible]

[illegible]



ಶಿಲ್ಪಕ್ಕೆ ಅಲಂಕರಣವೂ ಕಡಿಮೆಯಿದ್ದು ಒರಟುತನದಲ್ಲಿ ಮತ್ತು ಭೀಕರತೆಯಲ್ಲಿ ಸೌಂದರ್ಯವನ್ನು ವ್ಯಕ್ತಪಡಿಸುತ್ತದೆ. ಸೊಂಟದಲ್ಲಿ ದಪ್ಪನಾದ ಸೊಂಟಪಟ್ಟಿ, ಒಡ್ಯಾಣ, ಮೇಖಲೆ, ದಪ್ಪವಾದ ಯಜ್ಞೋಪವೀತ, ಮುಂಗೈಯಲ್ಲಿ ಒಂದು ಬಳೆ, ತೆಳ್ಳನೆಯ ತೋಳುಬಂಧಿ ಇತ್ಯಾದಿಗಳಿವೆ. ಇಲ್ಲಿ ಶಿಲ್ಪಿಯು ಅಲಂಕರಣಕ್ಕಾಗಲಿ, ವಿವರಗಳಿಗಾಗಲಿ ಶಿಲ್ಪದಲ್ಲಿ ಹೆಚ್ಚಿನ ಪರಿಶ್ರಮವನ್ನು ತೋರಿಸಿಲ್ಲ, ಬದಲಾಗಿ ಸರಳತೆಯಲ್ಲಿ ಕಲಾತ್ಮಕತೆಯನ್ನು ವ್ಯಕ್ತಪಡಿಸಲು ಪ್ರಯತ್ನಿಸಿರುವುದು ಗಮನಿಸಬಹುದಾದ ಅಂಶವಾಗಿದೆ. ಶಿಲ್ಪದ ಸುತ್ತಲಿನ ಜಾಗದಲ್ಲಿಯೂ ಯಾವುದೆ ಶಿಲ್ಪಗಳಿಲ್ಲ. ಕೇವಲ ವರಾಹಮೂರ್ತಿಯನ್ನಷ್ಟೇ ಇಲ್ಲಿ ಕೆತ್ತಲಾಗಿದ್ದು ಇಲ್ಲಿ ಶಿಲ್ಪಿಯ ಕೆತ್ತನೆಯ ಕೌಶಲ್ಯದ ಪ್ರದರ್ಶನವಾಗುತ್ತದೆ.

ಶಿಲ್ಪ –೭

ಪಟ್ಟದಕಲ್ಲು ಸಂಗಮೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ಕಂಡುಬರುವ ಈ ಶಿಲ್ಪವು ಉತ್ತರಾಭಿಮುಖವಾಗಿದ್ದು, ಇಲ್ಲಿ ವರಾಹನು ಬಲಪಾರ್ಶ್ವಕ್ಕೆ ತಿರುಗಿ ಭೂದೇವಿಯನ್ನು ತನ್ನ ಎರಡು ಕೈಗಳಿಂದ ಎತ್ತಿ ಹಿಡಿದಿದ್ದಾನೆ. ತನ್ನ ಎಡಗಾಲನ್ನು ಮಡಿಚಿದ್ದಾನೆ. ಕೆಳಗೆ ಉಳಿದಿರುವ ಭಾಗವನ್ನು ನಾಗದೇವತೆಯರ ಶಿಲ್ಪಗಳನ್ನು ಕೆತ್ತಲು ಕಲ್ಲನ್ನು ಹಾಗೆ ಬಿಟ್ಟಿದ್ದಿರಬಹುದಾಗಿದೆ. ಒಟ್ಟಾರೆ ಈ ಶಿಲ್ಪವು ನೋಡಲು ಅಸ್ಪಷ್ಟವಾಗಿರುವುದರಿಂದ ಹೆಚ್ಚಿನ ವಿವರಣೆ ನೀಡಲು ಅವಕಾಶವಿಲ್ಲದಂತಾಗಿದೆ.

ಶಿಲ್ಪ –೮

ಪಟ್ಟಕದಲ್ಲು ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿರುವ ಈ ವರಾಹನು ಚತುರ್ಭುಜನಾಗಿದ್ದಾನೆ. ಮೇಲೆ ನೋಡಿದ ಎಲ್ಲ ವರಾಹಶಿಲ್ಪಗಳು ತನ್ನ ಎಡ ಪಾರ್ಶ್ವಕ್ಕೆ ಮುಖ ತಿರುಗಿಸಿದ್ದನ್ನು ಗಮನಿಸಬಹುದು. ಆದರೆ ಈ ಶಿಲ್ಪ ಮತ್ತು ಸಂಗಮೇಶ್ವರ ದೇವಾಲಯದ ಶಿಲ್ಪವು ತನ್ನ ಬಲಪಾರ್ಶ್ವಕ್ಕೆ ಮುಖ ತಿರುಗಿಸಿದುದು ವಿಶೇಷವಾಗಿದೆ. ಇಲ್ಲಿ ವರಾಹನ ಬಲ ಮೊಣಕೈಯ ಮೇಲೆ ಲಕ್ಷ್ಮಿಯು ಕುಳಿತಿದ್ದು, ಅಸ್ಪಷ್ಟವಾಗಿರುವ ಈ ಕಲಾಕೃತಿಯ ಹಿಂದಿನ ಕೈಯಲ್ಲಿ ಶಂಖವನ್ನು ತ್ರಿಮಾನದಲ್ಲಿ ರಚಿಸಲಾಗಿದೆ. ವರಾಹನ ಶಿಲ್ಪದ ಕೆಲವು ಭಾಗ ಸವೆದು ತುಂಡಾಗಿದೆ. ಎಡಗಾಲಿನ ಮೇಲೆ ನಿಂತು ಬಲಗಾಲನ್ನು ಆದಿಶೇಷನ ತಲೆಯ ಮೇಲೆ ಊರಿದ್ದಾನೆ. ನಾಗರಾಜನು ಭಕ್ತಿಯಿಂದ ಕೈಮುಗಿಯುತ್ತಿದ್ದಾನೆ. ಇಲ್ಲಿ ವರಾಹ ಶಿಲ್ಪವನ್ನು ದ್ವಿಮಾನದಲ್ಲಿ ರಚಿಸಲಾಗಿದೆ. ನಾಗರಾಜನ ಶಿಲ್ಪವನ್ನು ತ್ರಿಮಾನದ ಭಾವನೆಯನ್ನು ನೀಡುವಂತೆ ಕೆತ್ತಲಾಗಿದೆ.

ಶಿಲ್ಪ –೯

ಐಹೊಳೆ ವಿರೂಪಾಕ್ಷ ದೇವಾಲಯ ಬಲಭಾಗದ ಬೋಧಿಗೆಯಲ್ಲಿ ವರಾಹನ ಶಿಲ್ಪವಿದೆ.

ವರಾಹ ಶಿಲ್ಪಗಳು



ಶಿಲ್ಪ-೧. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಮಹಾಕೂಟ



ಶಿಲ್ಪ-೪. ದುರ್ಗಾ ದೇವಾಲಯ, ಐಹೊಳೆ

ವರಾಹ ಶಿಲ್ಪಗಳು




ಶಿಲ್ಪ-೫. ರಾವಳಫಡಿ ಗುಹಾಲಯ, ಐಹೊಳೆ




ಶಿಲ್ಪ-೩. ಪಂಚಲಿಂಗ ಬಂಡೆ, ಬಾದಾಮಿ



ಶಿಲ್ಪ-೨. ಸಂಗಮೇಶ್ವರ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೬. ವಿರೂಪಾಕ್ಷ ದೇವಾಲಯ, ಐಹೊಳೆ

ಮೇಲೆ ನೋಡಿದ ಎಲ್ಲ ಶಿಲ್ಪಗಳು ನಿಂತುಕೊಂಡಿರುವ ಶಿಲ್ಪಗಳಾದರೆ, ಇಲ್ಲಿರುವ ವರಾಹನು ಕುಳಿತುಕೊಂಡಿರುವುದು ಗಮನಾರ್ಹವಾಗಿದೆ. ಇಲ್ಲಿ ವರಾಹನು ಚತುರ್ಭುಜನಾಗಿದ್ದು, ಬಲಗೈಯನ್ನು ಸೊಂಟದ ಮೇಲೆ ಊರಿದ್ದಾನೆ. ಎಡ ಮೊಣಕೈಯ ಮೇಲೆ ಲಕ್ಷ್ಮಿಯನ್ನು ಹೊತ್ತುಕೊಂಡಿದ್ದಾನೆ. ಹಿಂದಿನ ಬಲಗೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಕಿರೀಟ ಮುಕುಟನಾಗಿದ್ದು, ಅತ್ಯಂತ ಜೀವಕಳೆಯಿಂದ ಕೂಡಿದ ಶಿಲ್ಪ ಇದಾಗಿದೆ. ಈ ಶಿಲ್ಪದ ಭಂಗಿಯನ್ನು ಕೂಡ ನೋಡುಗರ ಗಮನವನ್ನು ಸೆರೆಹಿಡಿಯುವಂತೆ ಕೆತ್ತಲಾಗಿದೆ. ಅಲ್ಲದೇ ಈ ಶಿಲ್ಪವೂ ದ್ವಿಮಾನದಲ್ಲಿ ಹೆಚ್ಚು ಆಳವಾಗಿ ಕೆತ್ತಲ್ಪಟ್ಟದ್ದಾಗಿದೆ.

ಗರುಡಾರೂಢ ವಿಷ್ಣು ಶಿಲ್ಪಗಳು

ಶಿಲ್ಪ –೧

ಎರಡನೇ ಗುಹಾಲಯದ ವಿಷ್ಣುವಿನ ಶಿಲ್ಪಗಳಲ್ಲಿ ಈ ಶಿಲ್ಪವೂ ಗಮನಾರ್ಹವಾಗಿದೆ. ಸಣ್ಣ ಗಾತ್ರದ ಶಿಲ್ಪವು ಇದಾಗಿದ್ದರೂ ತನ್ನದೆ ಆದ ಇರುವನ್ನು ವ್ಯಕ್ತಪಡಿಸುವ ಈ ಶಿಲ್ಪವು ಛತ್ತಿನಲ್ಲಿ ಕೆತ್ತಲ್ಪಟ್ಟಿದೆ. ವೃತ್ತಾಕಾರದ ಸಂಯೋಜನೆಯನ್ನು ಹೊಂದಿರುವ ಈ ಶಿಲ್ಪದಲ್ಲಿ ವಿಷ್ಣುವು ಗರುಡನ ಬೆನ್ನ ಮೇಲೆ ಕುಳಿತು ಆಕಾಶದಲ್ಲಿ ಹಾರುತ್ತಿದ್ದಾನೆ. ಗರುಡನು ಮಾನವ ರೂಪಿಯಾಗಿರುವುದು ವಿಶೇಷ. ಚತುರ್ಭುಜ ವಿಷ್ಣುವು ಗರುಡನ ಬೆನ್ನ ಮೇಲೆ ಭದ್ರವಾಗಿ ತಳವೂರಿ ಕುಳಿತಂತೆ ಕಂಡುಬರುವ ಈ ಶಿಲ್ಪದ ಕೆತ್ತನೆಯಲ್ಲಿ ಸಹಜತೆ ಕಂಡುಬರುತ್ತದೆ.

ಗಾಳಿಯಲ್ಲಿ ಅವರು ಹಾರುತ್ತಿರುವಾಗಿನ ವೇಗದ ಅನುಭವವಾಗುವಂತೆ ಇಲ್ಲಿ ಅನುಭವವಾಗುತ್ತದೆ. ವಿಷ್ಣುವಿನ ಮೇಲಿನ ಎರಡು ಕೈಗಳಲ್ಲಿ ಶಂಖ ಚಕ್ರಗಳಿವೆ. ಎಡ ಕೆಳಗಿನ ಕೈಯನ್ನು ಗರುಡನ ಬೆನ್ನ ಮೇಲೆ ಭದ್ರವಾಗಿ ಹಿಡಿದಿದ್ದಾನೆ. ಕಿರೀಟ ಮುಕುಟವನ್ನು ಹೊಂದಿರುವ ವಿಷ್ಣುವಿನ ಮುಖದಲ್ಲಿ ಮಂದಹಾಸವಿದೆ. ತೋಳುಬಂಧಿ, ಕೈಬಳೆ, ಎದೆಹಾರ ಇತ್ಯಾದಿ ಆಭರಣಗಳಲ್ಲದೆ ಯಜ್ಞೋಪವೀತವನ್ನು ವಿಷ್ಣುವು ಹೊಂದಿದ್ದಾನೆ. ಶಿಲ್ಪವು ಗಾತ್ರದಲ್ಲಿ ಸಣ್ಣದಾಗಿದ್ದರೂ ಶಿಲ್ಪಿಯ ಕೆತ್ತನೆಯ ಪರಿಣಾಮದಿಂದಾಗಿ ಈ ಶಿಲ್ಪವು ಪ್ರಭಾವಶಾಲಿಯಾಗಿದೆ. ಗರುಡನು ಹಾರುವಾಗ ತನ್ನ ಕಾಲನ್ನು ಹಿಂದುಗಡೆ ತೇಲಿಬಿಟ್ಟಿರುವುದು, ಬಲಗಾಲನ್ನು ಮಡಚಿಕೊಂಡಿರುವುದು ದೇವನಲ್ಲಿ ತಾನು ತೋರುವ ವಿಧೇಯತೆಯನ್ನು ವ್ಯಕ್ತಪಡಿಸುತ್ತಿರುವಂತಿದೆ.

ಶಿಲ್ಪ –೨

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಮಂಟಪದ ಎಡಭಾಗದ ಕಂಬದಲ್ಲಿ ಕೆತ್ತಲಾಗಿರುವ ಗರುಡಾರೂಢನಾಗಿರುವ ವಿಷ್ಣುವಿನ ಶಿಲ್ಪವು ಅತ್ಯಂತ ಆಕರ್ಷಕ ಶಿಲ್ಪಗಳಲ್ಲೊಂದು. ಇಲ್ಲಿ ಗರುಡನು ವಿಷ್ಣುವನ್ನು ಹೆಗಲಿನ ಮೇಲಿರಿಸಿಕೊಂಡು ಹಾರುತ್ತಿರುವಂತೆ ಕೆತ್ತಲಾಗಿದೆ. ಗರುಡನು ನೆಲದಿಂದ ಸ್ವಲ್ಪ ಮೇಲಿದ್ದು ಅವನ ಭುಜದ ಮೇಲೆ ವಿಷ್ಣುವು ಎರಡೂ ಪಕ್ಕಗಳಲ್ಲಿ



ತನ್ನ ಕಾಲುಗಳನ್ನು ಇಳಿಬಿಟ್ಟಿದ್ದಾನೆ. ವಿಷ್ಣುವಿನ ಮುಖವು ಮೇಲಕ್ಕೆತ್ತಿದ್ದು ಆಕಾಶದ ಕಡೆಗೆ ನೋಡುತ್ತಿರುವಂತಿದೆ. ಇದರಿಂದಾಗಿ ಆತನು ತನ್ನ ದೃಷ್ಟಿಯನ್ನು ದೂರದವರೆಗೆ ಚಾಚಿದಂತಿದ್ದು ಆಕಾಶದಲ್ಲಿ ಹಾರುತ್ತಿರುವ ಭಾಸವಾಗುತ್ತದೆ.

ಇಲ್ಲಿ ವಿಷ್ಣುವು ಚತುರ್ಭುಜನಾಗಿದ್ದಾನೆ. ಮೇಲಿನ ಬಲಗೈಯಲ್ಲಿ ಚಕ್ರವನ್ನು, ಮೇಲಿನ ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಕೆಳಗಿನ ಎರಡೂ ಕೈಗಳನ್ನು ತೊಡೆಯ ಮೇಲಿರಿಸಿಕೊಂಡಿದ್ದು, ಕತ್ತಿನ ಮೇಲುಭಾಗವನ್ನು ಎತ್ತರಿಸಿದ್ದು ದೃಷ್ಟಿಯು ದೂರಗಾಮಿಯಾಗಿದೆ. ಎದೆಯು ಸೆಟೆದುಕೊಂಡಿದೆ. ಕಿರೀಟಮುಕುಟನಾಗಿರುವ ವಿಷ್ಣುವು ಇಲ್ಲಿ ಗರುಡನ ಮೇಲೆ ಕುಳಿತಿರುವ ಭಂಗಿಯು ಆಕರ್ಷಕವಾಗಿದೆ. ಇಲ್ಲಿನ ವಿಷ್ಣುವನ್ನು ಹೊತ್ತುಕೊಂಡಿರುವ ಗರುಡನ ಕೆತ್ತನೆಯೂ ಆಕರ್ಷಕವಾಗಿದೆ. ಎದೆಯನ್ನು ಉಬ್ಬಿಸಿಕೊಂಡಿರುವ ಗರುಡನ ಮುಖ ಎಳೆಯ ಹುಡುಗನ ತರವಿದ್ದು ನಗುಮುಖದಿಂದ ಕೂಡಿದೆ. ವಿಷ್ಣುವನ್ನು ಹೊತ್ತುಕೊಂಡಿರುವ ಹೆಮ್ಮೆ ಗರುಡನ ಮುಖದಲ್ಲಿ ಕಾಣುವಂತಿದೆ.

ಎಡಗಾಲನ್ನು ಮಡಚಿಕೊಂಡಿದ್ದು ಬಲಗಾಲು ಹಿಂದಿದೆ. ಉದರಬಂಧ, ಯಜ್ಞೋಪವೀತ, ಎದೆಯಲ್ಲಿ ಒಂದೆಳೆ ಹಾರ, ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲ ಇತ್ಯಾದಿಗಳಿವೆ. ತಲೆಕೂದಲು ಗುಂಗುರುಗುಂಗುರಾಗಿದ್ದು ಆಕರ್ಷಕವಾಗಿದೆ. ತಲೆಯ ಎರಡೂ ಪಕ್ಕಗಳಲ್ಲಿ ವಿಷ್ಣುವಿನ ಎರಡೂ ತೊಡೆಗಳಿವೆ. ಅಂದರೆ ವಿಷ್ಣುವನ್ನು ತನ್ನ ಭುಜದ ಮೇಲೆ ಕೂರಿಸಿಕೊಂಡಿರುವುದರಿಂದ ಆತನ ಕಾಲುಗಳು ತನ್ನ ಭುಜದಿಂದ ಎರಡೂ ಬದಿಗಳಲ್ಲಿ ಎಳಿಬಿಟ್ಟಿದ್ದು ದಷ್ಟಪುಷ್ಟವಾಗಿವೆ. ಕುಳಿತಿರುವುದರಿಂದ ವಿಷ್ಣುವಿನ ಉಟ್ಟ ಉಡುಗೆಯ ನೆರಿಗೆಗಳನ್ನು ಆಕರ್ಷಕವಾಗಿ ಕಂಡುಬರುವಂತೆ ಕೆತ್ತಲಾಗಿದೆ.

ಈ ನೆರಿಗೆಗಳು ಹದವಾದ ಉಬ್ಬುಕೆತ್ತನೆಯಿಂದ ಕೂಡಿವೆ. ವಿಷ್ಣುವಿನ ದೇಹದ ಕೆತ್ತನೆಯೂ ಸುಂದರವಾಗಿದ್ದು, ಹಿತವಾಗಿ ಮಿತವಾಗಿ ಆಭರಣಗಳಿವೆ. ಉದರಬಂಧ, ಯಜ್ಞೋಪವೀತ ಮತ್ತು ಕೇವಲ ಒಂದೇ ಎದೆಹಾರವಿದೆ. ತೋಳಿನಲ್ಲಿ ತೋಳುಬಂಧಿಯಿದ್ದು, ಕಿವಿಯಲ್ಲಿ ಆಕರ್ಷಕ ಕರ್ಣಕುಂಡಲವಿದೆ. ಚೌಕಾಕಾರದ ಮುಖವಿದ್ದು ಕಿರೀಟಮುಕುಟವಿದೆ. ಹಾಗೆ ನೋಡಿದರೆ ಕೈಯಲ್ಲಿ ಹಿಡಿದಿರುವ ಆಯುಧಗಳು ಅಳತೆಗಿಂತ ಸಣ್ಣದಾಗಿವೆ. ಇನ್ನೊಂದು ವಿಚಾರವೆಂದರೆ ವಿಷ್ಣುವು ಚಕ್ರವನ್ನು ಹಿಡಿದುಕೊಂಡಿರುವ ರೀತಿ, ಚಕ್ರವನ್ನು ಎಸೆಯುತ್ತಿರುವಂತಿದೆ. ಶಿಲ್ಪವನ್ನು ಅತ್ಯಂತ ಕುಶಲತೆಯಿಂದ ಕೆತ್ತಲಾಗಿದೆ.

ಶಿಲ್ಪದಲ್ಲಿ ಉತ್ತಮ ಚಲನೆಯ ಭಾವನೆಯನ್ನು ಸುಂದರವಾಗಿ ಕೆತ್ತಲಾಗಿದೆ. ಈ ಶಿಲ್ಪವನ್ನು ಗಮನಿಸಿದರೆ ಚಾಲುಕ್ಯರ ಕಾಲದಲ್ಲಿನ ಶಿಲ್ಪಿಗಳು ಶಿಲ್ಪಕಲೆಯ ಕೌಶಲ್ಯವನ್ನು ಪ್ರದರ್ಶಿಸುವುದರಲ್ಲಿ ಎಷ್ಟೊಂದು ಪರಿಣತರಾಗಿದ್ದರೆಂಬುದನ್ನು ತಿಳಿಯಬಹುದು.

ಶಿಲ್ಪ –೩

ಐಹೊಳೆಯಲ್ಲಿ ವೈಷ್ಣವಧರ್ಮಕ್ಕೆ ಸಂಬಂಧಿಸಿದ ಹೆಚ್ಚಿನ ಶಿಲ್ಪಗಳು ಕಂಡುಬರುವವು. ಐಹೊಳೆಯ ದುರ್ಗಾದೇವಾಲಯದ ಭಿತ್ತಿಯ ಕೋಷ್ಟಕದಲ್ಲಿ ಅಳವಡಿಸಲಾದ ವಿಷ್ಣು ಗರುಡಾರೂಢನಾಗಿದ್ದಾನೆ. ನಾಲ್ಕು ಕೈಗಳಲ್ಲಿ ಮೇಲಿನ ಎರಡರಲ್ಲಿ ಶಂಖ–ಚಕ್ರಗಳನ್ನು, ಕೆಳಗಿನ ಒಂದು ಕೈ ಅಧೋಮುಖ ಪತಾರ(ವರದ)ದಲ್ಲಿದ್ದು, ಎಡಹಸ್ತ ಮೊಣಕಾಲ ಮೇಲೆ ಅರ್ಧಚಂದ್ರ ಹಸ್ತದಲ್ಲಿ ಒತ್ತಿ ಹಿಡಿಯಲಾಗಿದೆ. ಬಲಗಾಲು ನೀಳವಾಗಿ ನೀಡಿದ್ದು, ಎಡಗಾಲನ್ನು ಮಡಚಿ ಗರುಡನ ಮೇಲೆ ಕುಳಿತುಕೊಳ್ಳುವಂತೆ ಚಿತ್ರಿಸಲಾಗಿದೆ. ವಿಷ್ಣುವಿನ ಮುಖ ಅತ್ಯಂತ ಶಾಂತ ಚಿತ್ರದಲ್ಲಿದ್ದು, ಪಕ್ಕದಲ್ಲಿಯ ದೇವಿ ಲಾಸ್ಯರೂಪದ ಸ್ಥಾನಕದಲ್ಲಿ ನಿಂತಿದ್ದಾಳೆ. ಗರುಡನು ಕುಂಚಿತಕರಣದಲ್ಲಿ ಉಲ್ಲಾಸದಿಂದ ವಿಷ್ಣುವನ್ನು ಹೊರುವಂತೆ ರಚಿತಗೊಂಡಿದ್ದಾನೆ.[೧೯] ಮೇಲೆ ಹಾರಲು ಸಿದ್ಧರಾಗಿರುವಂತೆ ಶಿಲ್ಪಕೆತ್ತನೆ ಮಾಡಿದ್ದಾನೆ. ಇನ್ನೊಂದು ವಿಷ್ಣುವಿನ ಶಿಲ್ಪವನ್ನು ನಾವಿಲ್ಲಿ ನೋಡಬಹುದು.

ಈ ಶಿಲ್ಪದಲ್ಲಿ ವಿಷ್ಣುವು ಗರುಡಾರೂಢನಾಗಿ ಆಕಾಶಗಾಮಿಯಾಗಲು ಸಜ್ಜಾಗಿರುವಂತಿದೆ. ಇಲ್ಲಿ ಗರುಡನನ್ನು ತನ್ನ ರೆಕ್ಕೆಗಳನ್ನು ಅಗಲಿಸಿ ಹಾರುವುದಕ್ಕೆ ಸಿದ್ಧನಾಗಿರುವಂತೆ ಕೆತ್ತಲಾಗಿದ್ದರೆ ವಿಷ್ಣುವು ಅವನ ಮೇಲೆ ಕುಳಿತುಕೊಳ್ಳುತ್ತಿರುವಂತಿದೆ. ಆದರೆ ಅವನ ಎಡಗಾಲು ಭಗ್ನಗೊಂಡಿದ್ದು ಅದು ಇಲ್ಲಿ ಕೊರತೆಯಾಗಿ ಕಾಣಿಸುತ್ತದೆ. ಉಳಿದಂತೆ ವಿಷ್ಣುವಿನ ಬಲಬದಿಯಲ್ಲಿ ಲಕ್ಷ್ಮಿಯೂ ಇದ್ದಾಳೆ. ಲಕ್ಷ್ಮೀಯ ಶಿಲ್ಪವನ್ನಿಲ್ಲಿ ಸುಂದರವಾಗಿ ಕೆತ್ತಲಾಗಿದೆ. ವಿಷ್ಣುವಿನ ಮೇಲಿನ ಎರಡು ಕೈಗಳಲ್ಲಿ ಶಂಖ–ಚಕ್ರಗಳಿದ್ದು ಕೈಗಳು ಭಗ್ನವಾಗಿದ್ದರೂ ಆಯುಧಗಳು ಉಳಿದುಕೊಂಡಿವೆ. ಇವು ಸುಂದರವಾಗಿ ಕೆತ್ತಲ್ಪಟ್ಟಿವೆ.

ತಲೆಯ ಹಿಂಭಾಗದಲ್ಲಿ ಎರಡು ಹಂತದಲ್ಲಿ ಕೆತ್ತಲಾದ ಪ್ರಭಾಚಕ್ರವಿದೆ. ಮೊದಲ ವೃತ್ತದಲ್ಲಿ ಅಲಂಕಾರಿಕ ಕೆತ್ತನೆಯಿದ್ದರೆ ಹಿಂಭಾಗವು ಸರಳವಾಗಿದೆ. ಕಿರೀಟಮುಕುಟವನ್ನು ಹೊಂದಿರುವ ವಿಷ್ಣುವಿನ ಮುಖವು ವೃತ್ತಾಕಾರವಾಗಿದ್ದು ದೇಹಾಕಾರಕ್ಕೆ ಹೋಲಿಸಿದರೆ ಸಣ್ಣದಾಗಿರುವಂತಿದೆ. ಇದಕ್ಕೆ ಇನ್ನೊಂದು ಕಾರಣ, ತಲೆಯ ಮೇಲಿರುವ ಕಿರೀಟ ಮತ್ತು ಪ್ರಭಾಚಕ್ರವು ದೊಡ್ಡದಾಗಿರುವುದು. ಮುಖವು ಮತ್ತು ತಲೆಯು ಸಣ್ಣದಾಗಿರುವಂತೆ ತೋರುತ್ತದೆ. ಇಲ್ಲಿನ ಕೆತ್ತನೆಯಲ್ಲಿ ಶಿಲ್ಪದ ಆಕಾರಕ್ಕಿಂತಲೂ ಲಯಬದ್ಧವಾದ ಸೌಂದರ್ಯಕ್ಕೆ ಮಹತ್ವ ನೀಡಿದಂತಿದೆ. ಆಭರಣಗಳೂ ಇಲ್ಲಿ ಹೆಚ್ಚು ಕಂಡುಬರುತ್ತಿದ್ದು ಅಲಂಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

ಅದೇ ರೀತಿ ಅಂಗಭಂಗಿ ಮತ್ತು ಭಾವನಾತ್ಮಕತೆಗೆ ಹೆಚ್ಚಿನ ಒಲವು ತೋರಿಸಿರುವುದು ಕಾಣಿಸುತ್ತದೆ. ಮೊದಲು ನೋಡಿದ ಶಿಲ್ಪಕ್ಕಿಂತ ಇದು ತ್ರಿಮಾನ ಶಿಲ್ಪವಾಗಿದ್ದು ಹಲವಾರು ರೀತಿಯಲ್ಲಿ ವಿಭಿನ್ನವಾಗಿರುವುದು ವಿಶೇಷ.

೧೯. ಡಾ. ಚೂಡಾಮಣಿ ನಂದಗೋಪಾಲ : ಶಿಲೆ–ಕಲೆ, ಪುಟ – ೧೭೮



ಶಿಲ್ಪ –೪

ರಾವಳಫಡಿಯ ಗುಹಾಲಯದ ಭಿತ್ತಿನಲ್ಲಿ ವೃತ್ತಾಕಾರದಲ್ಲಿ ರಚನೆಯಾದ ಗರುಡಾರೂಢನು ಚತುರ್ಭುಜನಾಗಿದ್ದಾನೆ. ಇವನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ತಲೆಯ ಹಿಂದಿರುವ ಪ್ರಭಾಮಂಡಲವು ಅತ್ಯಾಕರ್ಷಕವಾಗಿದ್ದು, ಹಿನ್ನೆಲೆಯಲ್ಲಿ ಮೋಡದ ಕೆತ್ತನೆಯಿದೆ. ವಿಷ್ಣುವಿನ ಇಬ್ಬದಿಗಳಲ್ಲಿ ಇಬ್ಬರು ವ್ಯಕ್ತಿಗಳು ಕುಳಿತಿದ್ದಾರೆ. ಗರುಡನು ವಿಷ್ಣುವನ್ನು ಹೊತ್ತುಕೊಂಡು ಹೋಗುವ ದೃಶ್ಯ ಸ್ಪಷ್ಟವಾಗಿ ಮೂಡಿಬಂದಿದೆ. ಇದೊಂದು ಉಬ್ಬುಶಿಲ್ಪವಾಗಿದ್ದು ಹೆಚ್ಚು ಆಕರ್ಷಕವಾಗಿದೆ.

ಶಿಲ್ಪ –೫

ಬಾದಾಮಿ ೩ನೇ ಗುಹಾಲಯದ ಬೋಧಿಗೆಯಲ್ಲಿ ಚಿಕ್ಕ ಗಾತ್ರದಲ್ಲಿ ಗರುಡಾರೂಢ ವಿಷ್ಣುವಿನ ಶಿಲ್ಪವಿದೆ. ಚತುರ್ಭುಜನಾಗಿ ಗರುಡನ ಮೇಲೆ ಸವಾರಿ ಮಾಡುತ್ತಿರುವಂತೆ ರಚಿಸಲಾದ ಈ ಶಿಲ್ಪವು ಹಿಂದಿನ ಎರಡು ಕೈಗಳಲ್ಲಿ ಶಂಖ, ಚಕ್ರವನ್ನು ಧರಿಸಿ ಮುಂದಿನ ಎರಡು ಕೈಗಳನ್ನು ತನ್ನ ಮೊಣಕಾಲು ಮೇಲೆ ಊರಿದ್ದಾನೆ. ಇಲ್ಲಿ ಗರುಡನು ಕಿರೀಟಮುಕುಟವನ್ನು ಧರಿಸಿ ಸಕಲ ಆಭರಣಗಳನ್ನು ಧರಿಸಿದ್ದಾನೆ.

ಅತ್ಯಂತ ಕಾಳಜಿಯಿಂದ ವಿಷ್ಣುವನ್ನು ಹೊತ್ತುಕೊಂಡು ಹೋಗುವ ದೃಶ್ಯ ಅಪರೂಪವಾಗಿದೆ. ಚಿಕ್ಕ ಗಾತ್ರದಲ್ಲಿ ರಚಿಸಿದರೂ ಶಿಲ್ಪಕ್ಕೆ ಯಾವುದೇ ಕೊರತೆ ಇಲ್ಲವೆಂಬುವಂತೆ ಕೆತ್ತನೆ ಮಾಡಿದ್ದನ್ನು ಈ ಶಿಲ್ಪದಲ್ಲಿ ಕಾಣಬಹುದಾಗಿದೆ. ಉಬ್ಬುತನದಿಂದ ಕೂಡಿದ ಈ ಶಿಲ್ಪವು ಜನರ ಗಮನ ಸೆಳೆಯುವ ಕಲಾಕೃತಿಯಾಗಿದೆ.

ಶಿಲ್ಪ –೬

ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ದ್ವಾರಬಾಗಿಲದ ಲಲಾಟಬಿಂಬದಲ್ಲಿ ಚಿಕ್ಕ ಗಾತ್ರದ ಗರುಡಾರೂಢನ ಶಿಲ್ಪವನ್ನು ಕಾಣಬಹುದು. ಚತುರ್ಭುಜನಾಗಿದ್ದು, ಮೇಲಿನ ಎರಡು ಕೈಗಳಲ್ಲಿ ಚಕ್ರ–ಶಂಖವನ್ನು ಹಿಡಿದಿದ್ದಾನೆ. ಮುಖ್ಯ ಎರಡು ಕೈಗಳನ್ನು ಬಲಗೈ ಮೊಣಕಾಲಿನ ಮೇಲೆ ಆರಾಮವಾಗಿ ಇಟ್ಟಿದ್ದಾನೆ. ಎಡಗೈ ತೊಡೆಯ ಮೇಲೆ ಇರಿಸಿ ಕುಳಿತುಕೊಂಡಿದ್ದಾನೆ. ವಿಷ್ಣು ಗರುಡನ ಮೇಲೆ ಕುಳಿತಿದ್ದು, ಗರುಡನು ಕಿರೀಟಮುಕುಟನಾಗಿದ್ದು, ಎರಡು ಬದಿಗಳಲ್ಲಿ ಗರಿಯನ್ನು ಅಗಲಿಸಿಕೊಂಡು ಹಾರಲು ಸಿದ್ಧನಾಗಿದ್ದಾನೆ. ಉಬ್ಬುಶಿಲ್ಪವಾಗಿರುವ ಇದು ಜೀವಂತಿಕೆಯಿಂದ ಕೂಡಿದ ಶಿಲ್ಪವಾಗಿದೆ.

ಬಾದಾಮಿ ಚಾಲುಕ್ಯರ ದೇವಾಲಯಗಳಲ್ಲಿ ಲಲಾಟಬಿಂಬಗಳಲ್ಲಿ ಗಜಲಕ್ಷ್ಮಿಯನ್ನು ಕಾಣಬಹುದು. ಇಲ್ಲಿ ಗರುಡಾರೂಢ ವಿಷ್ಣುವಿರುವುದು ವಿಶೇಷವಾಗಿದೆ.

ಗರುಡಾರೂಢ ವಿಷ್ಣು ಶಿಲ್ಪಗಳು



ಶಿಲ್ಪ-೧. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು




ಶಿಲ್ಪ-೩. ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೪. ರಾವಳಫಡಿ ಗುಹಾಲಯ, ಐಹೊಳೆ

ಗರುಡಾರೂಢ ವಿಷ್ಣು ಶಿಲ್ಪಗಳು



ಶಿಲ್ಪ-೫. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೬. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೭. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ

ಶಿಲ್ಪ –೭

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯ ಸಭಾಮಂಟಪದ ಬಲಗಡೆ ಎರಡನೆಯ ಸಾಲಿನ ಮೂರನೆಯ ಕಂಬದಲ್ಲಿ ದಕ್ಷಿಣಾಭಿಮುಖವಾಗಿ ಗರುಢಾರೂಢನ ಚತುರ್ಭುಜ ಹೊಂದಿದ ಶಿಲ್ಪ ಗಾತ್ರದಲ್ಲಿ ಚಿಕ್ಕದಾಗಿದ್ದರೂ ಆಕರ್ಷಣೀಯವಾಗಿದೆ. ವಿಷ್ಣುವನ್ನು ಭುಜದ ಮೇಲೆ ಎತ್ತಿಕೊಂಡು ಹೋಗುವ ದೃಶ್ಯ ಅಮೋಘವಾಗಿದೆ. ಇಲ್ಲಿ ಗರುಡನ ರೆಕ್ಕೆಗಳು ಗಾಲಿಯಲ್ಲಿ ತೇಲಾಡುವಂತೆ ಕೆತ್ತಲಾಗಿದೆ. ತಿಳು ಉಬ್ಬುಶಿಲ್ಪವಾದರೂ ಇದ್ದ ಸ್ಥಳಾವಕಾಶದಲ್ಲಿ ಸುಂದರವಾಗಿ ಈ ಶಿಲ್ಪವನ್ನು ರಚಿಸಿರುವುದು ಶಿಲ್ಪಿಯ ಬುದ್ಧಿವಂತಿಕೆ ಎನ್ನಬಹುದು.

ಶಿಲ್ಪ –೮

ಬಾದಾಮಿ ೨ನೆಯ ವೈಷ್ಣವ ಗುಹಾಲಯದ ಬೋಧಿಗೆಯಲ್ಲಿ ವೃತ್ತಾಕಾರದ ಗೂಡಿನಲ್ಲಿ ಚತುರ್ಭುಜ ಗರುಢಾರೂಢ ಶಿಲ್ಪವನ್ನು ಕಾಣಬಹುದು. ಭುಜದ ಮೇಲೆ ವಿಷ್ಣುವನ್ನು ಎತ್ತಿಕೊಂಡಿದ್ದಾನೆ. ಈ ಶಿಲ್ಪದ ಇಬ್ಬದಿಗಳಲ್ಲಿ ಚಿಕ್ಕಗಾತ್ರದ ಶಿಲ್ಪಗಳಗಿದ್ದು, ಅವು ಅಸ್ಪಷ್ಟವಾಗಿವೆ. ಉಬ್ಬುಶಿಲ್ಪವಾಗಿರುವ ಈ ಶಿಲ್ಪವು ನೋಡಲು ಚಿಕ್ಕದಾಗಿದ್ದರೂ ಎಲ್ಲರ ಗಮನ ಸೆಳೆಯುತ್ತದೆ.

ಅನಂತಶಯನ ಶಿಲ್ಪಗಳು

ಶಿಲ್ಪ –೧

ಎರಡನೇ ವೈಷ್ಣವ ಗುಹಾಲಯದ ಸಭಾಮಂಟಪದ ಗೋಡೆಗಳಲ್ಲಿ ಮತ್ತು ಕಂಬಗಳಲ್ಲಿ ಹಾಗೂ ತೊಲೆಗಳ ಮೇಲೆ ಹಲವಾರು ಸುಂದರ ಸಣ್ಣ ಗಾತ್ರದ ಶಿಲ್ಪ ಪಟ್ಟಿಕೆಗಳನ್ನು ಕೆತ್ತಿದ್ದಾರೆ. ಇಲ್ಲಿಯ ಶಿಲ್ಪಗಳು ವರಾಹಾವತಾರದ ಶಿಲ್ಪಗಳಷ್ಟು ದೊಡ್ಡವಲ್ಲವಾದರೂ ಶಿಲ್ಪಕಲೆಯ ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗಿವೆ. ಅಂತಹ ಶಿಲ್ಪಗಳಲ್ಲಿ ಒಂದು ಅನಂತಶಯನನದು. ವಿಷ್ಣುವು ಶೇಷಶಾಯಿಯಾಗಿ ಕ್ಷೀರಸಾಗರದಲ್ಲಿ ಮಲಗಿರುವ ಕಲ್ಪನೆಯನ್ನು ತೋರಿಸುವ ಈ ಕಥಾನಕವು ಮುಂದಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಆದರೆ ಬಹುಶಃ ಮೊದಲ ಕೆತ್ತನೆ ಇದೇ ಇರಬಹುದೇನೊ ಎಂದೆನಿಸುತ್ತದೆ. ಇಲ್ಲಿನ ಐದನೆ ಅಂಕಣದ ತೊಲೆಯ ಮೇಲೆ ವಿಷ್ಣುವು ಅನಂತಶಯನನಾಗಿರುವ ಶಿಲ್ಪವೊಂದನ್ನು ಗಮನಿಸಬಹುದು. 'ವಿಷ್ಣು ಅನಂತಶಯನನಾಗಿದ್ದು ಭೂಲೋಕದ ದೇವತೆಗಳು ಅನಂತಶಯನನಾದ ವಿಷ್ಣುವಿಗೆ ಅರಿಕೆ ಮಾಡಿಕೊಳ್ಳುವಂತೆ ತೋರಿಸಲಾಗಿದೆ. ವಿಷ್ಣುವು ಕಾಲನ್ನು ಚಾಚಿ ಮಲಗಿರುವ ಈ ಶಿಲ್ಪದಲ್ಲಿ ವಿಷ್ಣುವಿನ ಕೆತ್ತನೆಯಲ್ಲಿ ಜೀವಂತಿಕೆ ಕಂಡುಬರುವುದಿಲ್ಲ. ಕಡಿದಾದ ಸ್ಥಳಾವಕಾಶದಲ್ಲಿ ಕೆತ್ತಲಾಗಿರುವ ಶಿಲ್ಪದಲ್ಲಿ ಬಹಳಷ್ಟು ದೇವತೆಗಳು ನಿಂತಿರುವುದನ್ನು, ಕೈಮುಗಿಯುತ್ತಿರುವುದನ್ನು ತೋರಿಸಲಾಗಿದೆ. ವಿಷ್ಣುವಿನ ತಲೆದಿಂಬು ಮತ್ತು ನೆರಳಾಗಿ ಕಂಡುಬರುವ ಆದಿಶೇಷನ ವಿವರ ಇಲ್ಲಿ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಶಿಲ್ಪಗಳು ದುಂಡು ದುಂಡಾಗಿದ್ದು



ಶಿಲ್ಪಕೆತ್ತನೆಯಲ್ಲಿ ನಿಪುಣತೆ ಕಂಡುಬರುವುದಿಲ್ಲ. ವಿಷ್ಣುವು ಕಿರೀಟಮುಕುಟನಾಗಿದ್ದು ಮುಖದಲ್ಲಿ ಮಂದಹಾಸವಿರುವುದನ್ನು ಗಮನಿಸಬಹುದು.

ವಿಷ್ಣುವಿನ ದೇಹವು ಹೆಚ್ಚು ನೀಳವಾಗಿದ್ದು ಕಾಲುಗಳು ಅಂಗಪ್ರಮಾಣದ ಅಗತ್ಯಕ್ಕಿಂತಲೂ ನೀಳವಾಗಿವೆ. ವಿಷ್ಣುವು ಪಾರ್ಶ್ವಕ್ಕೆ ತಿರುಗಿದ್ದಾನೆ. ಸುತ್ತಲೂ ದೇವತೆಗಳು ಕೈ ಮುಗಿದುಕೊಂಡಿರುವ ಹಲವಾರು ಶಿಲ್ಪಗಳಿವೆ. ತಲೆಯ ಭಾಗದಲ್ಲಿ ದೇವೇಂದ್ರನು ಕೈಮುಗಿದುಕೊಂಡು ನಿಂತಿದ್ದಾನೆ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ ಶಿಲ್ಪಿಗಳು ಲಭ್ಯ ಸ್ಥಳಾವಕಾಶವನ್ನು ಖಾಲಿಬಿಡದೆ ಏನಾದರೊಂದು ವಿಷಯದ ಕುರಿತಾಗಿ ಶಿಲ್ಪರಚನೆ ಮಾಡಿರುವುದು.

ಇಲ್ಲಿನ ಎಲ್ಲ ಶಿಲ್ಪಗಳು ಒಂದೇ ಕೈಯಿಂದ ರಚಿತವಾದವುಗಳಲ್ಲ. ಹಾಗಾಗಿ ರಚನೆಯಲ್ಲಿ ವಿಭಿನ್ನತೆ ಕಂಡುಬರುತ್ತದೆ. ಕೆಲವು ಶಿಲ್ಪಗಳು ಪರಿಪೂರ್ಣ ರಚನೆಯ ನುರಿತ ಕೈಯಿಂದ(ಶಿಲ್ಪಿಯಿಂದ) ಕೆತ್ತಲ್ಪಟ್ಟಿದ್ದರೆ ಉಳಿದ ಇಂತಹ ಕೆತ್ತನೆಗಳನ್ನು ಬಹುಶಃ ಅಭ್ಯಾಸಿಕರು ಕೆತ್ತಿರಬಹುದು. ಅಥವಾ ಮುಂದಿನ ಬೃಹತ್ ಶಿಲ್ಪಗಳ ರಚನೆಗೆ ಪೂರಕವಾಗಿ ಚಿಕಣಿ ಶಿಲ್ಪಗಳಂತೆ ಅಂದರೆ ಇಂದಿನ ಶಿಲ್ಪಿಗಳು ಮಾಡುವ (ಮ್ಯಾಕೆಟ್) ರಚನೆ ಮಾಡಿರಬಹುದು. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಹಲವೆಡೆ ಇಂತಹ ಶಿಲ್ಪಗಳು ಕಂಡುಬಂದಿವೆ.

ಇದಲ್ಲದೆ ಸಮುದ್ರಮಂಥನದ ದೃಶ್ಯಗಳನ್ನು ಎರಡನೇ ವೈಷ್ಣವ ಗುಹಾಲಯದ ಮುಖ ಮಂಟಪದ ತೊಲೆಗಳಲ್ಲಿ ಕೆತ್ತಿರುವುದು ಕಂಡುಬರುತ್ತದೆ. ಮೊದಲನೆಯ ಅಂಕಣದ ತೊಲೆಯ ಮೇಲೆ 'ಅಮೃತಕ್ಕಾಗಿ ಸುರಾಸುರರ ಯುದ್ಧದ ಸನ್ನಿವೇಶವಿದ್ದರೆ ಎರಡನೆಯ ಅಂಕಣದಲ್ಲಿ ಸುರಾಸುರರು ಅಮೃತ ಕುಂಭಕ್ಕಾಗಿ ಕ್ಷೀರಸಾಗರದ ಮಂಥನದ ಕಾರ್ಯದಲ್ಲಿ ನಿರತರಾಗಿದ್ದಾರೆ. ಇವುಗಳಲ್ಲಿ ಸಮುದ್ರವನ್ನು ಕಡೆಯುವ ದೃಶ್ಯವು ತುಂಬ ಸುಂದರವಾಗಿ ಮೂಡಿಬಂದಿದೆ. ವಿಂಧ್ಯ ಪರ್ವತವನ್ನು ಮಧ್ಯದಲ್ಲಿ ಕಡಗೋಲನ್ನಾಗಿ ಮಾಡಿಕೊಂಡು, ಆದಿಶೇಷನನ್ನು ಹಗ್ಗವನ್ನಾಗಿ ಮಾಡಿಕೊಂಡು ಸಮುದ್ರವನ್ನು ಕಡೆಯುತ್ತಿರುವ ದೃಶ್ಯವಿದು. ದೇವತೆಗಳು ಮತ್ತು ಅಸುರರನ್ನು ಸಾಲಾಗಿ ನಿಲ್ಲಿಸಿದಂತೆ ಇಲ್ಲಿ ತೋರಿಸಲಾಗಿದೆ. ಆದರೂ ದೇವತೆಗಳು ಮತ್ತು ಅಸುರರ ನಡುವಿನ ದೈಹಿಕ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸಿರುವುದು ಗಮನಾರ್ಹ.

ಅತ್ಯಂತ ಸಣ್ಣದಾದ ಸ್ಥಳಾವಕಾಶದಲ್ಲಿ ಇಂತಹ ದೊಡ್ಡ ವಿಷಯದ ಕುರಿತಾದ ಶಿಲ್ಪಗಳನ್ನು ಹೆಚ್ಚಾಗಿ ಇಲ್ಲಿ ಕೆತ್ತಲಾಗಿದೆ. ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಪ್ರತಿಯೊಂದು ಶಿಲ್ಪ ಪಟ್ಟಿಕೆಯ ಸುತ್ತಲೂ ಕಮಲದ ಹೂವಿನ ಚಿತ್ರಣದ ಚೌಕಟ್ಟನ್ನು ಕೆತ್ತಿದ್ದಾರೆ. ಇದರಿಂದಾಗಿ ಪ್ರತಿಯೊಂದು ಪಟ್ಟಿಕೆಯೂ ಬೇರೆ ಬೇರೆಯಾಗಿ ಬಿಡುತ್ತದೆ. ಮತ್ತು ಚಿತ್ರಕ್ಕೊಂದು ಸುಂದರವಾದ ಚೌಕಟ್ಟನ್ನು ಒದಗಿಸುತ್ತದೆ. ಎರಡನೇ ವೈಷ್ಣವಗುಹೆಯಲ್ಲಿ ಹಾಗೆ ನೋಡಿದರೆ ಬೃಹತ್ ಪ್ರತಿಮೆಗಳು ಕಡಿಮೆ. ಬದಲಾಗಿ ಅಲಂಕಾರಕ್ಕೆ ಹೆಚ್ಚು ಒತ್ತು ದೊರಕಿದಂತಿದೆ. ಮುಖ್ಯವಾಗಿ ವರಾಹ ಮತ್ತು ತ್ರಿವಿಕ್ರಮಶಿಲ್ಪಗಳು ಮತ್ತು ಶ್ರೀ ಕೃಷ್ಣನ ಬಾಲ್ಯಜೀವನ ಕಥಾನಕವನ್ನು ತೋರಿಸಲಾಗಿದೆ. ಇದಲ್ಲದೆ

[illegible]

ಸಮುದ್ರ ಮಂಥನ, ಶಿವ, ನಟರಾಜ ಶಿಲ್ಪ, ಗಜಗೌರಿಯ ಕೆತ್ತನೆ, ಮಹಿಷಾಸುರ ಮರ್ದಿನಿ ಇತ್ಯಾದಿ ಶಿಲ್ಪಗಳಿವೆ. ಒಟ್ಟು ದೃಷ್ಟಿಯಿಂದ ಈ ಗುಹಾಲಯದ ಕೆತ್ತನೆಗಳು ಗಮನ ಸೆಳೆಯುತ್ತವೆ. ಆದರೆ ವೈಷ್ಣವಧರ್ಮಕ್ಕೆ ಸಂಬಂಧಿಸಿದಂತೆ ಅಥವಾ ವಿಷ್ಣುವಿನ ಕುರಿತು ಬೃಹತ್ ಕೆತ್ತನೆಗಳು ನಮ್ಮ ಗಮನ ಸೆಳೆಯುವುದು ಮೂರನೆಯ ಗುಹಾಲಯದಲ್ಲಿ ಮಾತ್ರ.

ಶಿಲ್ಪ –೨

ಬಾದಾಮಿ ಭೂತನಾಥ ದೇವಾಲಯದ ಹಿಂಬದಿಯಲ್ಲಿ ಚಿಕ್ಕದಾದ ದೇವಾಲಯವಿದೆ. ಇದರಲ್ಲಿ ಅನಂತಶಯನನ ಶಿಲ್ಪವೊಂದಿದೆ. ಆದಿಶೇಷನ ಮೇಲೆ ಮಲಗಿಕೊಂಡಿರುವ ವಿಷ್ಣುವಿನ ಕಾಲಿನ ಬಳಿಯಲ್ಲಿ ಲಕ್ಷ್ಮಿಯು ಕುಳಿತುಕೊಂಡಿರುವ ಶಿಲ್ಪದಲ್ಲಿ ವಿಷ್ಣುವಿನ ವಾಹನವಾದ ಗರುಡನೂ ಇದ್ದಾನೆ. ವಿಷ್ಣುವಿನ ನಾಭಿಯಿಂದ ಕಮಲದ ಮೇಲೆ ಬ್ರಹ್ಮನು ಉದ್ಭವಿಸಿರುವುದನ್ನು ಇಲ್ಲಿ ಕಾಣಬಹುದು. ಇದರ ಸುತ್ತಲೂ ದಶಾವತಾರದ ವಿಗ್ರಹಗಳನ್ನು ಕೂಡಾ ಕೆತ್ತಲಾಗಿದೆ. ಇಂತಹ ಕೆತ್ತನೆಗಳು ಚಾಲುಕ್ಯರ ಕಾಲದಲ್ಲಿ ಅಲ್ಲಲ್ಲಿ ಕಂಡುಬರುತ್ತವೆಯಾದರೂ ಬಿಡಿಯಾಗಿರುವ ಶಿಲ್ಪಗಳನ್ನು ಕೆತ್ತಿರುವುದು ವಿಶೇಷವಾಗಿದೆ. ಗುಹಾಲಯದಲ್ಲಿ ಬೃಹದಾಕಾರದ ಕೆತ್ತನೆಗಳನ್ನು ರಚಿಸಿದ ಶಿಲ್ಪಿಗಳು ಇಂತಹ ಬಂಡೆಯ ಮೇಲೆಯೂ ಶಿಲ್ಪಗಳನ್ನು ಕಿರುಗಾತ್ರದ ದೇವಾಲಯಗಳ ರೀತಿಯಲ್ಲಿ ಕೆತ್ತಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ.

ಇಲ್ಲಿ ಕೆತ್ತಿರುವ ಶಿಲ್ಪಗಳನ್ನು ಗಮನಿಸಿದಾಗ ಒಂದು ಅಂಶವು ಸ್ಪಷ್ಟವಾಗುವುದೇನೆಂದರೆ, ಈ ಶಿಲ್ಪಗಳ ರಚನೆ ಖಂಡಿತವಾಗಿಯೂ ಇವರು ನಂತರ ರಚಿಸಿರಬಹುದಾದ ಶಿಲ್ಪಗಳ ಮಾದರಿಗಳಾಗಿ ರಚಿಸಿರಬಹುದು, ಅಥವಾ ಶಿಲ್ಪಕಲೆಯ ಅಭ್ಯಾಸಕ್ಕಾಗಿ ರಚಿಸಿರಬಹುದು. ಅದೇನೇ ಇದ್ದರೂ ಈ ಶಿಲ್ಪಗಳು ನೋಡುಗರ ಗಮನ ಸೆಳೆಯುವಲ್ಲಿ ಯಶಸ್ವಿಯಾಗುವುದರೊಂದಿಗೆ ಮತ್ತು ಪ್ರತಿಯೊಂದು ಕಲ್ಲುಬಂಡೆ ಕೂಡಾ ಶಿಲ್ಪವೆಂಬ ಭಾವನೆಯುಂಟಾಗುವಂತೆ ಮಾಡುತ್ತವೆ.

ಶಿಲ್ಪ –೩

ಮೂರನೆಯ ವೈಷ್ಣವ ಗುಹಾಲಯದ ಬೋಧಿಗೆಯಲ್ಲಿ ವಿಷ್ಣುವಿನ ಕಥಾನಕ ಭಿತ್ತಿಶಿಲ್ಪಗಳನ್ನು ಗಮನಿಸಬಹುದು. ಈ ಶಿಲ್ಪವು ಆದಿಶೇಷನ ಮೇಲೆ ಮಲಗಿರುವಂತೆ ಕೆತ್ತಲಾಗಿದೆ. ಇಲ್ಲಿ ತಿಳು ಉಬ್ಬುಶಿಲ್ಪವಾಗಿರುವ ವಿಷ್ಣುವಿನ ನಾಭಿಯಿಂದ ಕಮಲದ ಮೇಲೆ ಬ್ರಹ್ಮನು ಉದ್ಭವಿಸಿರುವುದು ಕಾಣಬಹುದು. ಮತ್ತು ಈ ಉದ್ದನೆಯ ಪಟ್ಟಿಕೆಯಲ್ಲಿ ಹಲವಾರು ಚಿಕ್ಕಗಾತ್ರದಲ್ಲಿ ಶಿಲ್ಪಗಳಿದ್ದು, ಅಸ್ಪಷ್ಟವಾಗಿವೆ.

ಶಿಲ್ಪ –೪

ಪಟ್ಟದಕಲ್ಲು ಪಾಪನಾಥ ದೇವಾಲಯದ ಛತ್ತಿನಲ್ಲಿ ಆದಿಶೇಷನ ಮೇಲೆ ಮಲಗಿಕೊಂಡಿರುವ ಅನಂತಶಯನ ಶಿಲ್ಪವಿದೆ. ತಲೆಯ ಹಿಂದೆ ಐದು ಹೆಡೆಯ ಸರ್ಪವಿದ್ದು, ನೈಜತೆಯನ್ನು


ಅನಂತಶಯನ ಶಿಲ್ಪಗಳು




ಶಿಲ್ಪ-೧. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಅನಂತಶಯನ ದೇವಾಲಯ, ಬಾದಾಮಿ



ಶಿಲ್ಪ-೩. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೪. ಪಾಪನಾಥ ದೇವಾಲಯ, ಪಟ್ಟದಕಲ್ಲು

ತಂದು ಕೊಟ್ಟಿದೆ. ಈ ಶಿಲ್ಪವು ಭಿತ್ತಿನಲ್ಲಿದ್ದುದರಿಂದ ಸ್ಪಷ್ಟವಾಗಿ ಕಾಣುತ್ತಿಲ್ಲ. ಆದರೂ ಈ ಶಿಲ್ಪವನ್ನು ಅನಂತಶಯನ ಎಂದು ಗುರುತಿಸಬಹುದಾಗಿದೆ. ಆಯತಾಕಾರದಲ್ಲಿ ರಚಿಸಿದ ಈ ಶಿಲ್ಪವು ಉಬ್ಬುಶಿಲ್ಪವಾಗಿದೆ.

ಶೇಷಾಸೀನ ವಿಷ್ಣು ಶಿಲ್ಪಗಳು

ಚಾಲುಕ್ಯರ ಕಾಲದ ಕೆತ್ತನೆಗಳಲ್ಲಿಯೇ ಅತ್ಯಂತ ಶ್ರೇಷ್ಠ ಮತ್ತು ಸುಂದರವಾದ ಗುಹೆಯೆಂದರೆ ಬಾದಾಮಿಯ ಮೂರನೇ ಗುಹಾಲಯ ಅಥವಾ ಜಗತ್ಪ್ರಸಿದ್ಧವಾದ ಮಹಾವಿಷ್ಣು ಗುಹೆ. ಉತ್ತಾರಾಭಿಮುಖವಾಗಿರುವ ಈ ಗುಹೆಯು ಇಲ್ಲಿನ ಗುಹೆಗಳಲ್ಲಿಯೆ ಅತ್ಯಂತ ವಿಶಾಲವಾದುದು. ಪೂರ್ವ ಪಶ್ಚಿಮವಾಗಿ ಸುಮಾರು ೭೦ ಅಡಿಗಳಷ್ಟು ಮತ್ತು ದಕ್ಷಿಣೋತ್ತರವಾಗಿ ಸುಮಾರು ೪೮ ಅಡಿಗಳಷ್ಟು ವಿಶಾಲವಾಗಿರುವ ಈ ಗುಹೆಯನ್ನು ಚಾಲುಕ್ಯ ಅರಸನಾದ ಕೀರ್ತಿವರ್ಮನ ಮಗನಾದ ಮಂಗಲೇಶನು ತನ್ನ ಅಣ್ಣನ ಪಟ್ಟಾಭಿಷೇಕದ ಸ್ಮರಣಾರ್ಥವಾಗಿ ಕೊರೆಯಿಸಿದನು. ಮೊದಲೆ ಹೇಳಿದಂತೆ ಚಾಲುಕ್ಯರ ಕಾಲದ ಮೊದಲ ಹಂತದ ಅರಸರು ವೈಷ್ಣವರಾಗಿದ್ದರು. ಆದುದರಿಂದ ವೈಷ್ಣವಧರ್ಮಕ್ಕೆ ಸಂಬಂಧಿಸಿದಂತೆ ಇಲ್ಲಿ ಎರಡು ಗುಹಾಲಯಗಳಿದ್ದರೂ ಇಲ್ಲಿಯೂ ಶೈವ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳಿವೆ. ಆದರೆ ಮೊದಲ ಪ್ರಾಶಸ್ತ್ಯವು ವಿಷ್ಣುವಿಗೆ ದೊರಕಿದೆ ಎನ್ನಬಹುದು.

ಶಿಲ್ಪ –೧

ಚಾಲುಕ್ಯರಾಜರು ತಾವು ದೈವಾಂಶಸಂಭೂತರೆಂದು ಭಾವಿಸಿದ್ದಿರಬಹುದೇನೋ! ಆದುದರಿಂದಲೆ ಇಲ್ಲಿನ(ಮೂರನೇ ಗುಹಾಲಯದ) ಬೃಹದಾಕಾರದ ಶೇಷಾಸೀನ ವಿಷ್ಣುವನ್ನು ರಾಜನೆಂಬಂತೆ ಚಿತ್ರಿಸಿರಬಹುದೆಂದು ತೋರುತ್ತದೆ. ಚಾಲುಕ್ಯರು ನಿರ್ಮಿಸಿದ ಅತ್ಯಂತ ಭವ್ಯ ವಿಷ್ಣು ವಿಗ್ರಹವೆಂದರೆ ಬಾದಾಮಿಯ ಮೂರನೇ ಗುಹೆಯಲ್ಲಿರುವ ಶೇಷಾಸೀನ ವಿಷ್ಣು. ಸುತ್ತಿಕೊಂಡ ಸರ್ಪದ ದೇಹವು ವಿಷ್ಣುವಿನ ಪೀಠವಾಗಿದೆ. ಸರ್ಪದ ಹೆಡೆಯೇ ಆತನ ರಾಜಛತ್ರವಾಗಿದೆ. ವಿಷ್ಣು ರಾಜನಾಗಿ ಕುಳಿತಿರುವ ಭಂಗಿ ಕೂಡಾ ಅಪರೂಪವಾದದ್ದು. ಇಲ್ಲಿ ಉಳಿದೆಡೆಗಳಲ್ಲಿ ಕಂಡುಬರುವಂತೆ ವಿಷ್ಣುವು ಸಮಸ್ಥಾನಕದಲ್ಲಿ ನಿಂತಿರದೆ ಅಥವಾ ಯೋಗಾಸೀನನಾಗಿ ಕುಳಿತಿರದೆ ರಾಜಗಾಂಭೀರ್ಯದಿಂದ ಕುಳಿತಿದ್ದಾನೆ. ಈ ವಿಷ್ಣುವಿನ ಶಿಲ್ಪವು ತ್ರಿ ಆಯಾಮದಲ್ಲಿದ್ದು ಇದು ಅಪರೂಪವಾದ ಶಿಲ್ಪವಾಗಿದೆ. ಈ ಶಿಲ್ಪಕ್ಕೆ ಪೂರ್ವಭಾವಿಯಾಗಿ ರಚಿಸಿದ್ದಿರಬಹುದಾದ ಶಿಲ್ಪವೊಂದು ಎರಡನೇ ಗುಹೆಯ ಪಶ್ಚಿಮ ಗೋಡೆಯಲ್ಲಿ ಇದೆಯೆಂದು ಡಾ. ಶೀಲಾಕಾಂತ ಪತ್ತಾರರು ಅಭಿಪ್ರಾಯ ಪಡುತ್ತಾರೆ.

ಎರಡನೇ ಗುಹಾಲಯದ ಪಶ್ಚಿಮ ಅರ್ಧ ಕಂಬದ ಮೇಲೆ ಇದನ್ನು ಹೋಲುವ ಪುಟ್ಟ ಶಿಲ್ಪವೊಂದಿದೆ. ಬೃಹದಾಕಾರದ ಮಹಾವಿಷ್ಣುವಿನ ಶಿಲ್ಪ ರಚನೆಗೆ ಇದು ಮಾದರಿಯಾಗಿರುವ

ಸಾಧ್ಯತೆ ಇದೆ.[೨೦] ವಿಷ್ಣುವಿನ ಕೆಳಗಡೆ ಎಡಭಾಗದಲ್ಲಿ ಸ್ತ್ರೀ ಶಿಲ್ಪವೊಂದಿದೆ. ಬಹುಶಃ ಲಕ್ಷ್ಮಿಯ ಶಿಲ್ಪವು ಇದಾಗಿರಬಹುದು. ಕೆಳಗಿನ ಬಲಭಾಗದಲ್ಲಿ ವಿಷ್ಣುವಿನ ವಾಹನವಾದ ಗರುಡನು ವಿಷ್ಣುವಿಗೆ ಕೈ ಮುಗಿಯುತ್ತಾ ಕುಳಿತಿದ್ದಾನೆ. ಈ ಶಿಲ್ಪವು ಮಗುವಿನ ರೀತಿಯಲ್ಲಿದ್ದು ಆಕರ್ಷಕವಾಗಿದೆ. ವಿಷ್ಣುವು ಸಕಲ ರಾಜ ಪೋಷಾಕಿನೊಂದಿಗೆ ಆಸೀನನಾಗಿದ್ದು ಕಿರೀಟ ಮುಕುಟವನ್ನು ಹೊಂದಿದ್ದಾನೆ. ರಾಜರಿಗೆ ಒಪ್ಪುವಂಥ ಆಭರಣಗಳಿಂದ ಭೂಷಿತನಾಗಿದ್ದಾನೆ. ತೋಳಿನಲ್ಲಿ ಅಗಲವಾದ ಪದಕಗಳಿಂದ ಮತ್ತು ಮುತ್ತುಗಳಿಂದ ಕೂಡಿದ ತೋಳಬಂಧಿ ಇದೆ. ಮೂರು ಸುತ್ತಿನ ಎದೆಹಾರ, ಮುಂಗೈಗಳಲ್ಲಿ ದೊಡ್ಡದಾದ ಬಳೆಗಳು, ಯಜ್ಞೋಪವೀತ, ಮೇಖಲೆ, ಉತ್ತರೀಯಗಳಿಂದ ಭೂಷಿತನಾಗಿದ್ದಾನೆ. ಮುಖವು ಶಾಂತವಾಗಿದೆ. ಉದರಬಂಧವನ್ನು ಹೊಂದಿದ್ದಾನೆ. ಕರ್ಣಕುಂಡಲಗಳನ್ನು ಹೊಂದಿದ್ದು ತಲೆಗೂದಲನ್ನು ಮುಖದ ಎರಡು ಬದಿಗಳಿಂದಲೂ ನೀಳವಾಗಿ ಎರಡೂ ತೋಳಿನ ಮೇಲೆ ಇಳಿಬಿಡಲಾಗಿದೆ. ತಲೆಯ ಮೇಲುಭಾಗದಲ್ಲಿ ನಾಗರಾಜನ ಐದು ಹೆಡೆಗಳು ನೆರಳಿನ ರೀತಿಯಲ್ಲಿ ಅಥವಾ ರಾಜಛತ್ರದ ರೀತಿಯಲ್ಲಿ ಅಲಂಕರಿಸಿದೆ. ವಿಷ್ಣುವಿನ ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವನ್ನು ಕಾಣಬಹುದು.

ಕಲಾತ್ಮಕವಾಗಿರುವ ಕೆತ್ತನೆಯಲ್ಲಿ ಶಿಲ್ಪಿಯು ಮೈವಳಿಕೆಗಳನ್ನು ಚೆನ್ನಾಗಿ ಬಳಸಿಕೊಂಡಿದ್ದಾನೆ. ಪ್ರತಿಯೊಂದು ಭಾಗಕ್ಕೂ ಗಮನ ನೀಡಲಾಗಿದ್ದು ಕೆತ್ತನೆ ರೀತಿಯಂತೂ ಅಮೋಘವಾಗಿದೆ. ಹಾವಿನ ಮೈಯಲ್ಲಿಯೂ ಅದು ಎಲ್ಲಿಯೂ ಖಾಲಿಯೆನಿಸದಂತೆ ಛೇದಗೆರೆಗಳನ್ನು ಕೆತ್ತುವ ಮೂಲಕ ಹಾವಿನ ಮೈವಳಿಕೆಯನ್ನು ಕೆತ್ತಿರುವುದು ಗಮನಾರ್ಹ. ಪ್ರತಿಯೊಂದು ಆಭರಣವನ್ನು ಕೆತ್ತುವಾಗಲೂ ಉಬ್ಬು-ತಗ್ಗುಗಳ ಮೂಲಕ ರೂಪ ನೀಡಲು ಶಿಲ್ಪಿಯು ಪ್ರಯತ್ನಿಸಿದ್ದಾನೆ. ಚಕ್ರವನ್ನು ತ್ರಿಮಾನದಲ್ಲಿ ತೋರಿಸುವ ಉದ್ದೇಶದಿಂದ ಅದನ್ನು ವಾರೆಯಾಗಿ (ಪಾರ್ಶ್ವಕ್ಕೆ) ತಿರುಗಿಸಿರುವುದನ್ನು ಗಮನಿಸಬಹುದು.

ಶಿಲ್ಪದ ಎಲ್ಲ ಅಂಗಗಳು ಪ್ರಮಾಣಬದ್ಧವಾಗಿವೆ. ಅಲಂಕೃತ ಆಭರಣಗಳೊಂದಿಗೆ ರಾಜಪೋಷಾಕಿನಲ್ಲಿ ವಿಷ್ಣುವನ್ನು ತೋರಿಸಲು ಇಲ್ಲಿ ಶಿಲ್ಪಿಯು ಗಮನಕೊಟ್ಟಿರುವುದನ್ನು ನೋಡಬಹುದು. ಇಲ್ಲಿ ಇನ್ನೊಂದು ಗಮನಾರ್ಹ ಅಂಶವೆಂದರೆ, ಮುಖ್ಯ ವ್ಯಕ್ತಿಯ(ವಿಷ್ಣು) ಸಂಯೋಜನೆಗೆ ಭಂಗಬರಬಾರದೆಂಬ ಉದ್ದೇಶದಿಂದ ನಾಗಕನ್ನಿಕೆಯರನ್ನು ಮತ್ತು ಲಕ್ಷ್ಮಿಯ ಶಿಲ್ಪವನ್ನು ಅಡ್ಡಗೋಡೆಯ ಮೇಲೆ ಕೆತ್ತಿರಬಹುದೆನಿಸುತ್ತದೆ. ಅದೇ ರೀತಿ ಗರುಡನೂ ಒಂದು ಬದಿಗೆ ಸರಿದಿದ್ದಾನೆ. ಇದನ್ನು ಗಮನಿಸಿದಾಗ ಶಿಲ್ಪಿಯ ಉದ್ದೇಶವು ಕೇವಲ ಮುಖ್ಯ ಶಿಲ್ಪವಾಗಿತ್ತೆನ್ನಿಸುತ್ತದೆ. ಆದುದರಿಂದ ಈ ಶಿಲ್ಪದ ಕೆತ್ತನೆಯಲ್ಲಿ ಮೈವಳಿಕೆಗಳು, ಅಲಂಕರಣ, ಅಂಗಪ್ರಮಾಣಗಳಿಗೆ ಬಹಳ ಗಮನ ನೀಡಿದ್ದಾರೆನ್ನಬಹುದು. ಹಾವಿನ ಹೆಡೆಗಳೂ ಜೀವಂತಿಕೆಯಿಂದ ಕೂಡಿದ್ದು ಇಲ್ಲಿ ತ್ರಿಮಾನದ ಕೆತ್ತನೆಯು ಪ್ರಭಾವಶಾಲಿಯಾಗಿದೆ. ಈ

೨೦. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೦೩

ಶೇಷಾಸೀನವಿಷ್ಣು ಶಿಲ್ಪಗಳು



ಶಿಲ್ಪ-೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಹುಚ್ಚಪ್ಪಯ್ಯನ (ಮಠ) ದೇವಾಲಯ, ಐಹೊಳೆ

ಶಿಲ್ಪಪಟ್ಟಿಕೆಯ ಕೆಳಗೆ ಸಂಗೀತಗಾರರ ಕುಬ್ಜಗಣಗಳ ಶಿಲ್ಪಗಳಿವೆ. ಬಹಳ ಕ್ರಿಯಾಶೀಲವಾಗಿರುವ ಈ ಕುಬ್ಜಗಣಶಿಲ್ಪಗಳು ಪ್ರತಿಯೊಂದು ವಿವಿಧ ಕ್ರಿಯೆಯಲ್ಲಿ ತೊಡಗಿವೆ. ನೋಡಿದಾಕ್ಷಣ ಹಾಸ್ಯಪ್ರಜ್ಞೆಯನ್ನು ಉಕ್ಕಿಸುವ ಈ ಶಿಲ್ಪಗಳು ಆಗಿನ ಕಲಾವಿದರ ಹಾಸ್ಯಪ್ರಜ್ಞೆಗೆ ಉತ್ತಮ ನಿದರ್ಶನವಾಗಿವೆ.

ಉಬ್ಬುಶಿಲ್ಪದಲ್ಲಿ ತ್ರಿಮಾನದ ಭಾವನೆಯನ್ನು ಉಂಟುಮಾಡುವ ಈ ಶಿಲ್ಪಸಂಯೋಜನೆಯು ಅಪೂರ್ವವಾಗಿದ್ದು, ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಕಲೆಯ ಪ್ರಾತಿನಿಧಿಕ ಶಿಲ್ಪವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಕೇಂದ್ರೀಕೃತ ಸಂಯೋಜನೆಯು ಈ ಶಿಲ್ಪದ ವಿಶೇಷವಾಗಿದ್ದು, ನೋಡುಗನ ಗಮನವನ್ನು ಕೇಂದ್ರಸ್ಥಾನದಲ್ಲಿ ನಿಲ್ಲಿಸುವ ಶಿಲ್ಪಿಯ ಉದ್ದೇಶವು ಸಾರ್ಥಕವಾಗಿದೆ ಎನ್ನಬಹುದು.

ಶಿಲ್ಪ –೨

ಈ ಮೇಲೆ ನೋಡಿದ ಶೇಷಾಸೀನವಿಷ್ಣು ಶಿಲ್ಪಗಳಿಗಿಂತಲೂ ಬಾದಾಮಿಯ ೩ನೇ ಗುಹಾಲಯದ ಈ ಶಿಲ್ಪವು ಗಾತ್ರದಲ್ಲಿ ದೊಡ್ಡದಾಗಿದ್ದು, ಇದೇ ರೀತಿಯಲ್ಲಿರುವ ವಿಷ್ಣು ೨ನೇ ಗುಹಾಲಯದಲ್ಲಿದೆ. ಅದು ಗಾತ್ರದಲ್ಲಿ ಚಿಕ್ಕದಾಗಿದೆ. ಇಲ್ಲಿಯೂ ಸಹ ವಿಷ್ಣು ಚತುರ್ಭುಜನಾಗಿದ್ದು, ಇಲ್ಲಿ ಐದು ಹೆಡೆಯ ಸರ್ಪ ವಿಷ್ಣುವಿಗೆ ಛತ್ರಿಯಾಗಿದೆ. ಹಾವಿನ ಹೆಡೆಗಳು ಜೀವಂತಿಕೆಯಿಂದ ಕೂಡಿದ್ದು, ನೈಜತೆಯಲ್ಲಿದೆ. ಶಿಲ್ಪದ ವೇಷಭೂಷಣ, ಆಭರಣ, ಕುಳಿತಿರುವ ಭಂಗಿಯನ್ನು ನೋಡಿದರೆ ಮೇಲೆ ನೋಡಿದ ಶಿಲ್ಪದ ಆಕಾರ ಹೋಲುತ್ತದೆ.

ಶಿಲ್ಪ –೩

ಐಹೊಳೆಯ ಉಚ್ಚಪ್ಪಯ್ಯನ ಮಠದ ಛತ್ತಿನಲ್ಲಿ ಶೇಷಾಸೀನ ವಿಷ್ಣುವನ್ನು ಕಾಣಬಹುದು. ಇದು ಬಾದಾಮಿಯಲ್ಲಿರುವ ಶಿಲ್ಪದ ಆಕಾರವನ್ನೇ ಹೋಲುತ್ತದೆ. ಆದರೆ ಗಾತ್ರದಲ್ಲಿ ಚಿಕ್ಕದಾಗಿದೆ. ಇಲ್ಲಿಯೂ ಸಹ ಹಿಂದಿನ ಎರಡು ಕೈಗಳಲ್ಲಿ ಶಂಖ–ಚಕ್ರವನ್ನು ಹಿಡಿದಿದ್ದು, ತಲೆಯ ಹಿಂದೆ ಐದು ಹೆಡೆಯ ಸರ್ಪವು ವಿಷ್ಣುವಿಗೆ ನೆರಳನ್ನು ನೀಡುವ ಛತ್ರಿಯಾಕಾರವಾಗಿದೆ. ಇಬ್ಬದಿಗಳಲ್ಲೂ ಸ್ತ್ರೀಯರನ್ನು ಆಕಾಶದಲ್ಲಿ ತೇಲುತ್ತಿರುವಂತೆ ಕೆತ್ತಲಾಗಿದೆ. ಮತ್ತು ವಿಷ್ಣುವಿನ ಕೆಳಭಾಗದ ಇಬ್ಬದಿಗಳಲ್ಲಿ ವಿಷ್ಣುವಿನ ಮುಖದ ಕಡೆ ನೋಡುತ್ತ ಹಾರಾಡುವಂತೆ ಶಿಲ್ಪಗಳನ್ನು ಕೆತ್ತಲಾಗಿದೆ. ಆಯತಾಕಾರದಲ್ಲಿ ರಚಿಸಿದ ಈ ವಿನ್ಯಾಸವು ಸ್ಪಷ್ಟವಾಗಿ ಇನ್ನೂ ಉಳಿದಿದೆ.

ಗಜೇಂದ್ರಮೋಕ್ಷ ಶಿಲ್ಪಗಳು

ಶಿಲ್ಪ –೧

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಉತ್ತರದ್ವಾರದ ಬಲಕಂಬದಲ್ಲಿರುವ ಈ ಶಿಲ್ಪದಲ್ಲಿ ಆನೆಯು ಮೊಸಳೆಯ ಬಾಯಿಯ ಹಿಡಿತಕ್ಕೆ ಸಿಲುಕಿದೆ. ಗರುಡವಾಹನನಾಸಗಿ ವಿಷ್ಣು ಆತನಲ್ಲಿಗೆ

ರಕ್ಷಿಸಲು ಬರುತ್ತಿರುವ ದೃಶ್ಯ ಸೊಗಸಾಗಿದೆ. ಸಂಯೋಜನೆಯ ದೃಷ್ಟಿಯಿಂದ ಇದೊಂದು ಉತ್ತಮ ಕಲಾಕೃತಿಯಾಗಿದೆ.[೨೧] ಎಡಗೈಯನ್ನು ಬಿಟ್ಟರೆ ಇನ್ನುಳಿದ ಭಾಗವೆಲ್ಲವೂ ಹಾಗೆಯೇ ಉಳಿದಿಕೊಂಡಿರುವುದು ವಿಶೇಷವಾಗಿದೆ.

ಶಿಲ್ಪ –೨

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಎಡಭಾಗದ ಭಿತ್ತಿಯ ಕಂಬದಲ್ಲಿ ಉತ್ತರಾಭಿಮುಖವಾಗಿರುವ ಈ ಶಿಲ್ಪವು ಮೇಲಿನ ಶಿಲ್ಪವನ್ನು ಹೋಲುತ್ತದೆ. ಗಜೇಂದ್ರ ಮೋಕ್ಷ: ಗರುಡನ ಮೇಲೆ ಕುಳಿತ ಭಕ್ತವತ್ಸಲ ವಿಷ್ಣು ಪ್ರಯೋಗ ಚಕ್ರದೊಂದಿಗೆ ಧಾವಿಸಿ ಗಜೇಂದ್ರನನ್ನು 'ಗ್ರಾಹ'ದ ಹಿಡಿತದಿಂದ ಮುಕ್ತಿಗೊಳಿಸುತ್ತಿರುವ ದೃಶ್ಯವಿದು. ಇಲ್ಲಿ 'ಗ್ರಾಹ'ವನ್ನು 'ಆಮೆ'ಯಾಗಿ ಚಿತ್ರಿಸಿರುವುದು ವೈಶಿಷ್ಟ್ಯ. ಈ ರೂಢಿ ಡೆಕ್ಕನ್ ಪ್ರದೇಶದಲ್ಲಿ ಪ್ರಚಲಿತವಿತ್ತು.[೨೨] ಬಹುಶಃ ಈ ಶಿಲ್ಪವನ್ನು ಒಬ್ಬರೇ ಕೆತ್ತಿರುವಂತಹ ಸಾಧ್ಯತೆಯೂ ಇದೆ. ಏಕೆಂದರೆ ಈ ಶಿಲ್ಪದ ಇನ್ನೂ ಕೆಲವು ಆಕಾರಗಳು ಹಾಗೆಯೇ ಉಳಿದಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪ್ರಸ್ತುತ ಪ್ರಕೃತಿವಿಕೋಪದಿಂದ ಈ ಶಿಲ್ಪದ ಮೇಲ್ಭಾಗದ ಪದರು ಸವೆದು ಹೋಗಿರುವುದರಿಂದ ಸ್ಪಷ್ಟವಾದ ಮಾಹಿತಿ ನೀಡಲು ಅಸಾಧ್ಯವಾಗಿದೆ.

ನರಸಿಂಹ (ವಿಜಯನರಸಿಂಹ) ಶಿಲ್ಪಗಳು

ಶಿಲ್ಪ –೧

ಬಾದಾಮಿಯ ಮೂರನೇ ಗುಹೆಯಲ್ಲಿ ಕಂಡುಬರುವ ಅಪರೂಪದ ಭಂಗಿಯಲ್ಲಿರುವ ಚತುರ್ಭುಜಸ್ಥಾನಕ ನರಸಿಂಹ. ಅಭಂಗದಲ್ಲಿರುವ ನರಸಿಂಹನ ಮುಖ್ಯ ಬಲಗೈ ಕಟಕ ಮುದ್ರೆಯಲ್ಲಿದೆ. ಎಡಗೈ ಗದೆಯ ಮೇಲೆ ಇರಿಸಲ್ಪಟ್ಟಿದೆ. ಮೇಲಿನ ಕೈಗಳಲ್ಲಿ ಆಯುಧ ಪರಶು, ಸುದರ್ಶನ ಮತ್ತು ಪಾಂಚಜನ್ಯ ಶಂಖ ಇವೆ. ಸಿಂಹಮುಖದ ಶಿರೋಭಾಗದಲ್ಲಿ ಅರಳಿದ ಪದ್ಮವಿದೆ. ನರಸಿಂಹನ ಬಲಪಾರ್ಶ್ವದಲ್ಲಿ ಕುಬ್ಜಾಕಾರದ ಪ್ರಹ್ಲಾದನಿದ್ದಾನೆ. ಅಸುರನೆಂದು ಸೂಚಿಸಲು ಇವನ ಕೂದಲುಗಳನ್ನು ಗುಂಗುರು ಗುಂಗುರಾಗಿ ತೋರಿಸಿದೆ.[೨೩] ಎಡ ಪಾರ್ಶ್ವದಲ್ಲಿ ಗದೆಯ ಪಕ್ಕದಲ್ಲಿ ಗರುಡನು ನಿಂತಿದ್ದಾನೆ. ಮೇಲೆ ವಿದ್ಯಾಧರ ಧಂಪತಿಗಳು ಮಾಲಾವಾಹಕರಾಗಿ ತೇಲಿಬರುತ್ತಿದ್ದಾರೆ. ಹಲವಾರು ರೀತಿಗಳಿಂದ ಉಳಿದ ಶಿಲ್ಪಗಳಿಗಿಂತ ವಿಭಿನ್ನವಾಗಿರುವ ಶಿಲ್ಪವಿದು. ಆದುದರಿಂದಲೆ ಈ ಶಿಲ್ಪವು ಬಾದಾಮಿ ಚಾಲುಕ್ಯ ಶಿಲ್ಪಗಳಲ್ಲಿಯೇ ಒಂದು ಉತ್ಕೃಷ್ಟ ಶಿಲ್ಪವಾಗಿ ನಿಂತುಕೊಂಡಿದೆ.

---

೨೧. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ –೫೧

೨೨. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೮೫

೨೩. ಡಾ. ಎ. ಮುರಿಗೆಪ್ಪ (ಪ್ರಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೩೪೯–೩೫೦



ಶಿಲ್ಪ –೨

ದುರ್ಗಾ ದೇವಾಲಯದ ಮುಖಮಂಟಪದ ಒಳಗೆ ಹಾಗೂ ಹೊರಗೆ ಹಲವಾರು ಸುಂದರ ಕೆತ್ತನೆಗಳಿದ್ದು ಅವುಗಳಲ್ಲಿ ಸುಂದರ ಕೆತ್ತನೆಯ ಸ್ಥಾನಕ ನರಸಿಂಹನ ಶಿಲ್ಪವೂ ಒಂದು. ಮಾನವ ದೇಹ ಮತ್ತು ಸಿಂಹದ ತಲೆಯ ಈ ಶಿಲ್ಪವು ಅನೇಕ ವಿಚಾರಗಳಲ್ಲಿ ಬಾದಾಮಿಯ ಮೂರನೆಯ ಗುಹೆಯ ನರಸಿಂಹನನ್ನು ಹೋಲುತ್ತದೆ. ಅಲ್ಲಿಯೂ ಸ್ಥಾನಕ ಭಂಗಿಯ ನರಸಿಂಹನಿದ್ದು ಇದೇ ರೀತಿಯ ಕೆತ್ತನೆಯನ್ನು ಹೊಂದಿದೆ. 'ಎರಡನೆಯ ಮಾಡದಲ್ಲಿ ಗಂಭೀರವಾಗಿ ನಿಂತ ನರಸಿಂಹನ ಶಿಲ್ಪವಿದೆ. ನರಸಿಂಹನು ಎಡಗಾಲನ್ನು ಭದ್ರವಾಗಿ ಊರಿ, ಎಡ ಟೊಂಕದ ಮೇಲೆ ಎಡಗೈಯನ್ನಿಟ್ಟುಕೊಂಡು ದ್ವಿಭಂಗಿಯಲ್ಲಿ ನಿಂತಿರುವನು. ಅವನ ಮುಖವು ಸಿಂಹದ್ದಿದೆ. ಅವನ ಕೆಳಭಾಗ ಮನುಷ್ಯರೂಪಿಯಾಗಿರುವುದು. ಅವನಿಗೆ ನಾಲ್ಕು ಭುಜಗಳಿವೆ. ಅವನ ಮೇಲಿನ ಬಲಗೈಯಲ್ಲಿ ಚಕ್ರವಿದ್ದಿರಬೇಕು, ಈಗ ಒಡೆದುಹೋಗಿದೆ. ಅದರ ಕೆಳಗಿನ ಕೈ ಗದೆಯ ಮೇಲಿದ್ದಂತೆನಿಸುವುದು. ಆದರೆ ಗದೆಯು ಈಗ ಒಡೆದುಹೋಗಿದ್ದುದರಿಂದ ಕಾಣಿಸುವುದಿಲ್ಲ.

ನರಸಿಂಹನ ಮೇಲಿನ ಎಡಗೈಯಲ್ಲಿ ಶಂಖವನ್ನು ಹಿಡಿದಿರುವನು ಮತ್ತು ಕೆಳಗಿನ ಎಡಗೈಯನ್ನು ಟೊಂಕದ ಮೇಲಿರಿಸಿರುವನು. ನಿಂತ ಭಂಗಿಯಲ್ಲಿ ದೃಢತೆ, ಸ್ಥೈರ್ಯ ತೋರುವುದು. ಇವನು ಕೊರಳಲ್ಲಿ ಮಣಿಹಾರ, ಯಜ್ಞೋಪವೀತದಂತಹ ಆಭರಣ, ಕೇಯೂರ, ಎರಡೆರಡು ಕಂಕಣ, ಕಟಿಬಂಧ ಹಾಕಿಕೊಂಡಿರುವನು ಮತ್ತು ಟೊಂಕಕ್ಕೆ ಒಂದು ವಸ್ತ್ರವನ್ನು ಬಲಗಡೆಗೆ ಗಂಟುಹಾಕಿ ಕಟ್ಟಿಕೊಂಡಿರುವನು.'[೨೪] ಕುತೂಹಲಕಾರಿಯಾದ ಈ ಕೆತ್ತನೆಯಲ್ಲಿ ನರಸಿಂಹನ ಮುಖವು ಆಕರ್ಷಣೆಯ ಕೇಂದ್ರವಾಗಿರುವಂತೆ ಕಂಡುಬರುತ್ತದೆ. ಮುಖವು ದೇಹಕ್ಕೆ ಹೋಲಿಸಿದರೆ ದೊಡ್ಡದಾಗಿರುವಂತೆ ಕಂಡುಬಂದರೂ ಇಲ್ಲಿ ಅದು ಅಗತ್ಯವಾಗಿರುವಂತಿದೆ.

ಮುಖವು ಉಗ್ರವಾಗಿಲ್ಲದಿದ್ದರೂ ಆದರಭಾವನೆ ಉಂಟಾಗುವಂತೆ ದೊಡ್ಡದಾದ ಕಣ್ಣುಗಳು, ಅಗಲವಾಗಿ ತೆರೆದ ನಸುನಗುತ್ತಿರುವ ಬಾಯಿ, ತಲೆಯಿಂದ ಹೊರಗೆ ಬಂದಂತಿರುವ ಸಣ್ಣದಾದ ಕಿವಿಗಳು, ತಲೆಯ ಹಿಂಭಾಗದಲ್ಲಿ ಕೆಳಗೆ ಇಳಿದುಬರುತ್ತಿರುವ ಕೇಸರ, ಅಗಲವಾದ ದೊಡ್ಡ ಮುಖ, ಮುಖದಿಂದ ಹೊರಬರಲು ಹವಣಿಸುತ್ತಿರುವಂತಿರುವ ಕಣ್ಣುಗುಡ್ಡೆಗಳು ನೋಡುಗರಲ್ಲಿ ವಿಸ್ಮಯವನ್ನುಂಟುಮಾಡುತ್ತವೆ. ಕುತ್ತಿಗೆಯಲ್ಲಿ ಒಂದು ಸುತ್ತಿನ ಕಂಠಹಾರವಿದೆ. ಅಗಲವಾದ ಭುಜಗಳು, ಎಡಗೈಯಲ್ಲಿ ಹಿಡಿದಿರುವ ಶಂಖವು ಆಕರ್ಷಕ ಕೆತ್ತನೆಯನ್ನು ಹೊಂದಿದೆ. ಮೇಲಿನ ಮತ್ತು ಕೆಳಗಿನ ಎರಡೂ ಬಲಕೈಗಳು ಭಗ್ನಗೊಂಡಿವೆಯಾದರೂ ಕೆತ್ತನೆಯ ಸ್ವರೂಪವನ್ನು ಗಮನಿಸಲು ತೊಂದರೆಯಾಗುವುದಿಲ್ಲ.

---

೨೪. ಎ. ಎಂ. ಅಣ್ಣಿಗೇರಿ : ಐಹೊಳೆ : ಸಂಸ್ಕೃತಿ ಮತ್ತು ಕಲೆ, ಪುಟ – ೪೧




ಇಲ್ಲಿನ ನರಸಿಂಹನ ಯಜ್ಞೋಪವೀತವು ಇತರೆಡೆಯ ಶಿಲ್ಪಗಳಿಗಿಂತ ಭಿನ್ನವಾಗಿದ್ದು ಕೆಳಭಾಗದಲ್ಲಿ ದಪ್ಪನಾಗಿದ್ದು ಮುತ್ತಿನ ನೇಯ್ಗೆಯನ್ನು ಹೊಂದಿರುವಂತಿದೆ. ಇತರೆಡೆಗಳಲ್ಲಿ ಸಾಮಾನ್ಯವಾಗಿ ಯಜ್ಞೋಪವೀತವು ಮೇಲಿನಿಂದ ಕೆಳಗಿನವರೆಗೂ ಒಂದೇ ಅಳತೆಯನ್ನು ಹೊಂದಿರುತ್ತದೆ. ಆದರೆ ಇಲ್ಲಿ ಬಹುಶಃ ಆಭರಣಗಳಿಂದ ರಚಿಸಲ್ಪಟ್ಟ ಮಾಲೆಯಂತಿದೆ. ಶಿಲ್ಪದ ಮೇಲಿನ ಭಾಗವು ಹೆಚ್ಚು ದಪ್ಪನಾಗಿ ದಷ್ಟಪುಷ್ಟವಾಗಿದ್ದರೆ ಕೆಳಗಿನ ಭಾಗಕ್ಕೆ ಬಂದರೆ ತೆಳ್ಳಗಾಗುತ್ತ ಬಂದಂತಿದೆ. ತೋಳಿನ ಭಾಗದಲ್ಲಿ ಕಂಡುಬರುವ ಕೆತ್ತನೆ ಕಾಲಿನ ಭಾಗಕ್ಕೆ ಬರುತ್ತ ತೆಳ್ಳಗಾಗಿದೆ. ಇದರಿಂದ ಶಿಲ್ಪವು ಎತ್ತರವಾಗಿ ಕಂಡುಬರಲು ಅನುಕೂಲವಾಗಿದೆ.

ಶಿಲ್ಪದ ಹಿಂಭಾಗದಲ್ಲಿ ಕೆತ್ತಿರುವ ಕಂಬದ ಕೆತ್ತನೆಯು ನರಸಿಂಹನು ಕಂಬದಿಂದ ಹೊರಬರುವುದನ್ನು ಸೂಚಿಸುತ್ತಿರುವಂತಿದೆ. ಒಟ್ಟು ನೋಟಕ್ಕೆ ಶಿಲ್ಪವು ಬೃಹದಾಕಾರದ ಕಲ್ಪನೆಯ ಜೊತೆಗೆ ಶಿಲ್ಪಿಯ ಕ್ರಿಯಾತ್ಮಕತೆಯನ್ನು ಪರಿಚಯಿಸುತ್ತದೆ. ನಿಂತ ಭಂಗಿ ಮತ್ತು ಕೆತ್ತನೆಯ ರೀತಿಯಿಂದಾಗಿ ಶಿಲ್ಪವು ಹೆಚ್ಚು ಆಕರ್ಷಕವಾಗಿ ಕಂಡುಬರುತ್ತದೆ. ಇಲ್ಲಿ ಕಲಾವಿದನು ನೇರ ರೇಖೆಗಳಲ್ಲಿ ಶಿಲ್ಪದ ಸೌಂದರ್ಯವನ್ನು ಸೆರೆ ಹಿಡಿಯುವ ಪ್ರಯತ್ನ ಮಾಡಿದ್ದಾನೆಂದರೆ ತಪ್ಪಾಗದು. ಒಟ್ಟಿನಲ್ಲಿ ಹೇಳಬಹುದಾದರೆ ಇಲ್ಲಿನ ಈ ನರಸಿಂಹಶಿಲ್ಪವು ಚಾಲುಕ್ಯರ ಕಲಾತ್ಮಕ ಕೆತ್ತನೆ ಮತ್ತು ಕಥಾನಕವನ್ನು ದೃಶ್ಯೀಕರಣಗೊಳಿಸುವ ಅವರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಆಭರಣಗಳ ರಚನೆಯಲ್ಲಿಯೂ ಸರಳತೆ ಗಮನ ಸೆಳೆಯುತ್ತದೆ.

ಎಲ್ಲಿಯೂ ಅಗತ್ಯತೆಯನ್ನು ಮೀರಿಹೋಗುವುದಿಲ್ಲ. ಇದರಿಂದಾಗಿ ಶಿಲ್ಪದ ಸೌಂದರ್ಯವನ್ನು ಆಸ್ವಾದಿಸಲು ಅನುಕೂಲವಾಗುತ್ತದೆ. ಬಹುಶಃ ಚಾಲುಕ್ಯರ ಕಾಲದ ಶಿಲ್ಪಿಗಳ ಉದ್ದೇಶವು ಅಲಂಕರಣಕ್ಕಿಂತ ಆಕಾರಕ್ಕೆ ಹೆಚ್ಚು ಒತ್ತು ಕೊಡುವಂತಹುದಾಗಿತ್ತು ಎಂದು ಅನಿಸುತ್ತದೆ. ಸಾಮಾನ್ಯವಾಗಿ ನರಸಿಂಹಶಿಲ್ಪಗಳು ಕುಳಿತಿರುವ ಶಿಲ್ಪಗಳಾಗಿರುತ್ತವೆ. ನರಸಿಂಹಶಿಲ್ಪಗಳಲ್ಲಿ ಶಿಲ್ಪತಜ್ಞರ ಪ್ರಕಾರ ಕೆಲವು ಪ್ರಕಾರಗಳಲ್ಲಿದ್ದು ಶಿಲ್ಪಶಾಸ್ತ್ರದ ರೀತಿಯಲ್ಲಿ ಉಲ್ಲೇಖಿಸಿದಂತೆ ಗುರುತಿಸಲಾಗುತ್ತದೆ. ಇವುಗಳು ಪ್ರಮುಖವಾಗಿ ಉಗ್ರ ನರಸಿಂಹ, ಲಕ್ಷ್ಮೀನರಸಿಂಹ, ಯೋಗನರಸಿಂಹ, ವಿಜಯನರಸಿಂಹ ಇತ್ಯಾದಿಗಳಾಗಿವೆ. ಇವುಗಳಲ್ಲಿ ಉಗ್ರನರಸಿಂಹನೆಂದರೆ ವಿಷ್ಣುವು ನರಸಿಂಹಾವತಾರಿಯಾಗಿ ಮುಸ್ಸಂಜೆಯ ಹೊತ್ತಿನಲ್ಲಿ ಬಾಗಿಲ ಹೊಸ್ತಿಲಲ್ಲಿ ಕುಳಿತು ತನ್ನ ಉಗುರಿನಿಂದ ಹಿರಣ್ಯಕಶ್ಯಪನ ಉದರ ಬಗೆಯುತ್ತಿರುವ ಶಿಲ್ಪ, ಇಲ್ಲಿ ವಿಷ್ಣುವು ದುಷ್ಟ ಸಂಹಾರಕನಾಗಿ ಉಗ್ರನಾಗಿ ಕಾಣಿಸಿಕೊಳ್ಳುತ್ತಾನೆ.

ಇನ್ನು ಲಕ್ಷ್ಮೀನರಸಿಂಹನೆಂದರೆ ವಿಷ್ಣುವು ರಾಕ್ಷಸಸಂಹಾರದ ನಂತರ ಶಾಂತನಾಗಿ ಪತ್ನಿಯೊಂದಿಗೆ ಕುಳಿತು ಪ್ರಹ್ಲಾದನಿಗೆ ಆಶೀರ್ವದಿಸುವ ಸಂದರ್ಭದ ಶಿಲ್ಪ. ಇಲ್ಲಿ ಪ್ರಹ್ಲಾದನಿರಬೇಕಾದುದಿಲ್ಲ. ಬದಲಾಗಿ ವಿಷ್ಣುವು ಪತ್ನಿಯೊಂದಿಗೆ ಕುಳಿತು ಎಲ್ಲರನ್ನು ಆಶೀರ್ವದಿಸುವ ಅಥವಾ ಅಭಯ ಮುದ್ರೆಯನ್ನು ಹೊಂದಿರುವ ಶಿಲ್ಪ. ಇದು ಸಾಮಾನ್ಯವಾಗಿ

ಗಜೇಂದ್ರಮೋಕ್ಷ ಶಿಲ್ಪಗಳು



ಶಿಲ್ಪ-೧. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ಪಾಪನಾಥ ದೇವಾಲಯ, ಪಟ್ಟದಕಲ್ಲು

ನರಸಿಂಹ (ವಿಜಯನರಸಿಂಹ) ಶಿಲ್ಪಗಳು



ಶಿಲ್ಪ-೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ದುರ್ಗಾ ದೇವಾಲಯ, ಐಹೊಳೆ

ಎಲ್ಲೆಡೆಯೂ ದೇವಾಲಯಗಳಲ್ಲಾಗಲೀ ಮನೆಗಳಲ್ಲಾಗಲೀ ಕಂಡುಬರುವ ಸಾಮಾನ್ಯ ಶಿಲ್ಪ. ಇಂತಹ ಶಿಲ್ಪಗಳೆ ಮುಂದಿನ ದಿನಗಳಲ್ಲಿ ಅತಿ ಹೆಚ್ಚಾಗಿ ರಚನೆಯಾಗಿವೆ. ಯೋಗನರಸಿಂಹನೆಂದು ಕರೆಯಲ್ಪಡುವ ವಿಷ್ಣು ನರಸಿಂಹನಾಗಿ ಯೋಗಮುದ್ರೆಯಲ್ಲಿ ಕುಳಿತಿರುವ ಶಿಲ್ಪ. ಇದು ಸ್ವಲ್ಪ ಅಪರೂಪವಾದರೂ ಅಲ್ಲಲ್ಲಿ ಕಂಡುಬರುತ್ತದೆ.

ಇದು ಸಾಮಾನ್ಯವಾಗಿ ದೇವಾಲಯಗಳಲ್ಲಿ ಕಂಡುಬರುತ್ತದೆ. ಬಾದಾಮಿ ಚಾಲುಕ್ಯರ ಶಿಲ್ಪಗಳಲ್ಲಿ ಹೆಚ್ಚಾಗಿ ಉಗ್ರ ನರಸಿಂಹನವು. ಇವು ಹೆಚ್ಚಾಗಿ ಕುಳಿತ ಭಂಗಿಯಲ್ಲಿರುತ್ತವೆ. ಕೆಲವು ಸುಂದರವಾದ ನಿಂತಿರುವ ಉಗ್ರನರಸಿಂಹನ ಶಿಲ್ಪಗಳು ಕೂಡಾ ಅಲ್ಲಲ್ಲಿ ಕಂಡುಬಂದಿವೆ. ಇವುಗಳಲ್ಲಿ ಅತ್ಯಂತ ಸುಂದರವಾದ ಶಿಲ್ಪ ಬಾದಾಮಿಯ ಮೂರನೆಯ ಗುಹಾಲಯದ ಸಿಂಹದ ಆಕಾರದ ಮುಖ ಶಿಲ್ಪ, ಸಾಮಾನ್ಯವಾಗಿ ಚರ್ತುಭುಜವುಳ್ಳ ಶಿಲ್ಪವಾಗಿದೆ.

ಉಗ್ರನರಸಿಂಹ ಶಿಲ್ಪಗಳು

ಶಿಲ್ಪ -೧

ಇದು ಬೆಟ್ಟದ ತುದಿಯಲ್ಲಿರುವುದರಿಂದ ಇದಕ್ಕೆ ಮೇಗಣ ಶಿವಾಲಯವೆಂಬ ಹೆಸರಿದೆ. (ಅಪ್ಪರ ಶಿವಾಲಯ) ಇದು ಶಿವಾಲಯವಾಗಿದ್ದರೂ ಇದು ಮೂಲತಃ ವೈಷ್ಣವ ದೇವಾಲಯವಾಗಿತ್ತೆಂದು ಈ ಹಿಂದೆ ಚರ್ಚಿಸಲಾಗಿದೆ. ಇದು ವಿಷ್ಣು ದೇವಾಲಯವೆಂದು ಹೇಳುವಲ್ಲಿ ಪೂರಕವಾಗಿ ಶ್ರೀ ವಿಷ್ಣುವಿನ ಹಲವಾರು ಸುಂದರ ವಿಗ್ರಹಗಳು ಕಂಗೊಳಿಸುವವು. ಅಧಿಷ್ಠಾನದ ಕೆಳಗಿನ ಪಟ್ಟಿಕೆಯಲ್ಲಿ, ಕುಬ್ಜಗಣಗಳು, ರಾಮಾಯಣ-ಮಹಾಭಾರತದ ಕಥಾ ಸನ್ನಿವೇಶಗಳನ್ನು ಅಳವಡಿಸಿದ್ದಾರೆ. ಇಲ್ಲಿರುವ ಕುಬ್ಜಗಣಗಳು ಉಬ್ಬು ಶಿಲ್ಪಗಳಾಗಿ ಕಂಗೊಳಿಸುತ್ತಿವೆ. ಇಲ್ಲಿನ ದೇವಾಲಯವು ಗಮನ ಸೆಳೆಯುವುದು ಇಲ್ಲಿನ ಹಲವಾರು ಸುಂದರವಾದ ಶಿಲ್ಪ ಭಿತ್ತಿಗಳಿಂದಾಗಿ, ಎತ್ತರವಾದ ಸ್ಥಳದಲ್ಲಿ ಕಟ್ಟಲಾಗಿರುವ ಈ ದೇವಾಲಯವು ಚಾಲುಕ್ಯರ ಮೊದಲ ಹಂತದಲ್ಲಿ ರಚನೆಯಾದ ಸರಳ ಮತ್ತು ಅಷ್ಟೇ ಸುಂದರವಾದ ವಾಸ್ತು ಶೈಲಿಯದ್ದಾಗಿದೆ. ಈ ದೇವಾಲಯಕ್ಕೆ ಕಳಸ ಕುಂಭಗಳಿಲ್ಲ. ದೇವಾಲಯವು ಎರಡು ಹಂತಗಳಲ್ಲಿದೆ. ಮೊದಲ ಹಂತದಲ್ಲಿ ವೇದಿಕೆಯ ಮೇಲೆ ಗರ್ಭಗುಡಿಯಿದ್ದು ಅದರ ಮೇಲ್ಭಾಗದಲ್ಲಿ ಚೌಕಾಕಾರದ ತಳವಿದ್ದು ಅದರ ಮೇಲೆ ಗೋಪುರವನ್ನು ನಿರ್ಮಿಸಲಾಗಿದೆ.

ದೇವಾಲಯದ ಸುತ್ತಲೂ ಭಿತ್ತಿಯಲ್ಲಿ ಹಲವಾರು ಸುಂದರ ಶಿಲ್ಪಗಳಿವೆ. ಇಲ್ಲಿ ಗಮನ ಸೆಳೆಯುವ ಒಂದು ಸುಂದರ ಶಿಲ್ಪವೆಂದರೆ ನರಸಿಂಹಾವಾತಾರಿ ವಿಷ್ಣುವಿನ ಶಿಲ್ಪ. ಅಷ್ಟಭುಜಗಳನ್ನು ಹೊಂದಿರುವ ಈ ಶಿಲ್ಪದಲ್ಲಿ ನರಸಿಂಹನು ಹಿರಣ್ಯಕಶ್ಯಪನನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಸಂಹಾರ ಮಾಡುತ್ತಿದ್ದಾನೆ. ಇಲ್ಲಿ ಕೆತ್ತಲಾಗಿರುವ ನರಸಿಂಹಶಿಲ್ಪವು ನಾವು ಚಾಲುಕ್ಯರ ಕಾಲದಲ್ಲಿ ಕಾಣುವ ಶಿಲ್ಪಗಳಲ್ಲೇ ಅತ್ಯಂತ ವಿಶಿಷ್ಟವಾದುದಾಗಿದೆ. ಸಹಜ ತ್ರಿಮಾನದ ಚಲನಭಾವ ಮತ್ತು ಕ್ರಿಯಾತ್ಮಕತೆಯನ್ನು ಹೊಂದಿರುವುದು ಕಂಡುಬರುತ್ತದೆ.



ಇಲ್ಲಿನ ನರಸಿಂಹನು ನಿಂತುಕೊಂಡೇ ಹಿರಣ್ಯಕಶ್ಯಪನ ಹೊಟ್ಟೆ ಸೀಳುತ್ತಿರುವಂತಿದ್ದು ಅಷ್ಟಭುಜನಾಗಿದ್ದಾನೆ. ಮುಖವು ಉಗ್ರವಾಗಿದ್ದು ತನ್ನ ಕ್ರೋಧ ಮತ್ತು ರೋಷಾವೇಶವನ್ನು ಪ್ರದರ್ಶಿಸುತ್ತಿದ್ದಾನೆ. ರಾಕ್ಷಸನು ತನ್ನ ಅಸಹಾಯಕತೆಯಲ್ಲಿ ನರಸಿಂಹನ ತೊಡೆಯ ಮೇಲೆ ಉರುಳಿದ್ದಾನೆ. ಹಿಂದೆ ಇನ್ನೊಬ್ಬ ರಾಕ್ಷಸನು ನರಸಿಂಹನ ಮೇಲೆ ಎಗರಲು ಪ್ರಯತ್ನಿಸುತ್ತಿದ್ದಾನೆ. ಅವನ ಪಕ್ಕದಲ್ಲಿ ಸುತ್ತಮುತ್ತಲೂ ಕೆಲ ರಾಕ್ಷಸರು ತಮ್ಮ ಆಯುಧಗಳೊಂದಿಗೆ ನರಸಿಂಹನ ಮೇಲೆ ಆಕ್ರಮಣ ಮಾಡುವುದಕ್ಕೆ ಪ್ರಯತ್ನಿಸುತ್ತಿರುವಂತಿದೆ.

ಇಂತಹ ಶಿಲ್ಪವು ಬಹಳ ಅಪರೂಪದ್ದಾಗಿದೆ. ಇಲ್ಲಿ ನರಸಿಂಹನ ಅವತಾರಕ್ಕಿಂತಲೂ ಒಟ್ಟು ಕಥಾನಕವನ್ನು ರಚಿಸಲು ಶಿಲ್ಪಿಯು ಪ್ರಯತ್ನ ಪಟ್ಟುದು ಕಂಡುಬರುತ್ತದೆ. ಶಿಲ್ಪವು ಸಣ್ಣದಾಗಿದ್ದರೂ ಪರಿಣಾಮವನ್ನುಂಟುಮಾಡುವಲ್ಲಿ ಯಶಸ್ವಿಯಾಗಿದೆ ಎನ್ನಬಹುದು. ನರಸಿಂಹನ ತಲೆಯ ಕೂದಲು ಸುತ್ತಲೂ ಸುರುಳಿಯಾಗಿ ಹರಡಿಕೊಂಡಿದ್ದು ಶಿಲ್ಪಕ್ಕೆ ಪ್ರಭಾವಳಿಯ ರೀತಿಯಲ್ಲಿ ಪರಿಣಾಮವನ್ನುಂಟುಮಾಡಿದೆ. ಶಿಲ್ಪಕ್ಕೆ ಗಂಭೀರತೆಯನ್ನು ನೀಡುವಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆ. ಶಿಲ್ಪದ ಕೆಳಭಾಗದಲ್ಲಿ ಇನ್ನೊಂದು ಭಿತ್ತಿಪಟ್ಟಿಕೆ ಇದ್ದು ಇದರಲ್ಲಿ ಕೆಲವು ಶಿಲ್ಪಗಳಿವೆ. ರಾಜ ಮತ್ತು ರಾಣಿಯರ ಮತ್ತು ಪರಿವಾರದ ಶಿಲ್ಪಗಳಿವೆ. ಚಾಲುಕ್ಯರ ಕಾಲದ ಸುಂದರ ನರಸಿಂಹ ಶಿಲ್ಪಗಳಲ್ಲಿ ಇದು ಕೂಡಾ ಒಂದೆಂದು ಹೇಳಬಹುದು.

ಬಾದಾಮಿಯ ಮೇಲಿನ ಶಿವಾಲಯದ ಉತ್ತರ ಗೋಡೆಯ ಶಿಲ್ಪದಲ್ಲಿ ಅಷ್ಟಭುಜದ ನರಸಿಂಹನು ತೊಡೆಯ ಮೇಲೆ ಅಸುರನನ್ನು ಇಟ್ಟುಕೊಂಡು ಆತನ ಕರುಳು ಕೀಳುತ್ತಿದ್ದಾನೆ. ಮಹಾಕೂಟದ ಮಹಾಲಿಂಗ ದೇವಾಲಯದ ದೇವಕೋಷ್ಠದಲ್ಲಿರುವ ನರಸಿಂಹನು ನಿಂತುಕೊಂಡೇ ಅಸುರನ ಹೊಟ್ಟೆಯನ್ನು ಸೀಳುತ್ತಿದ್ದಾನೆ. ಇಂತಹ ಶಿಲ್ಪಗಳು ಬಹಳ ಅಪರೂಪವಾದವು. ಬಹುಶಃ ಚಾಲುಕ್ಯರ ಕಾಲದ ಶಿಲ್ಪಿಗಳಿಗೆ ತಮ್ಮ ಇಷ್ಟ ದೇವತೆಯನ್ನು ಒಂದೇ ರೂಪದ ಬದಲು ಹಲವಾರು ರೀತಿಯಲ್ಲಿ ನೋಡಿ ಆನಂದಿಸುವ ಉದ್ದೇಶವಿತ್ತೆಂದು ತೋರುತ್ತದೆ. ಅದಕ್ಕಾಗಿ ಇಂತಹ ಶಿಲ್ಪಗಳನ್ನು ರಚಿಸುವಾಗ ವಿಭಿನ್ನತೆಯನ್ನು ಮೆರೆದಿರಬಹುದು. ನರಸಿಂಹಶಿಲ್ಪವು ಉಳಿದ ನರಸಿಂಹ ಶಿಲ್ಪಗಳಿಗಿಂತ ಭಿನ್ನವಾಗಿದೆ. ಇದು ಪಲ್ಲವರ ಕಲಾಕೃತಿಯಾಗಿರಬೇಕೆಂಬ ಊಹೆ. ಕೆಲ ವಿದ್ವಾಂಸರು ಇದು ನರಸಿಂಹ ಶಿಲ್ಪವಿರುವುದರಿಂದ ಪಲ್ಲವ ದೊರೆ ನರಸಿಂಹವರ್ಮನ ರೂವಾರಿಗಳು ರೂಪಿಸಿರಬಹುದೆಂಬ ಊಹೆಗೆ ಅವಕಾಶ ದೊರೆತಿದೆ. ಬೃಹತ್ ಶಿಲ್ಪಗಳ ಕೆಳಗೆ ಸಾಮಾನ್ಯವಾಗಿ ಗಣಶಿಲ್ಪಗಳು ಕಂಡುಬರುವುದಿಲ್ಲ.

ಇಲ್ಲಿ ಗಮನಿಸಬೇಕಾದ ಅಂಶ, ಕೆಳಗಿನ ಎಡಗೈಯನ್ನು ಗದೆಯ ಮೇಲಿಟ್ಟಿದ್ದಾನೆ. ಆದರೆ ಬಲ ಕೆಳಗಿನ ಕೈ ಅಭಯ ಮುದ್ರೆಯಲ್ಲಿದ್ದು ಬೆರಳುಗಳ ಬದಲಾಗಿ ಸಿಂಹದ ರೀತಿಯಲ್ಲಿ ಪಂಜವನ್ನು ಕೆತ್ತಿರುವುದು ವಿಶೇಷ. ಆದರೆ ಎಡ ಕೆಳಗಿನ ಕೈಯ ಹಿಂಭಾಗ (ಬೆರಳುಗಳು) ಮಾನವನ ಬೆರಳುಗಳ ರೂಪದಲ್ಲಿದ್ದು ವಿವರವಾಗಿ ಕೆತ್ತಲಾಗಿರುವುದು ಕಂಡುಬರುತ್ತದೆ.

ಫಲಕದ ಮೇಲಿನ ಭಾಗದಲ್ಲಿ ಗಂಧರ್ವ ದಂಪತಿಗಳ ಎರಡು ಜೋಡಿಗಳು ಹೂಮಾಲೆಯನ್ನು ಹಿಡಿದುಕೊಂಡು ಆಕಾಶದಲ್ಲಿ ಹಾರಾಡುತ್ತಿರುವಂತೆ ಕೆತ್ತಿರುವುದು ನೋಡಲು ಆಕರ್ಷಕವಾಗಿದೆ. ನರಸಿಂಹನ ಎಡಪಕ್ಕದಲ್ಲಿ ಕಂಬದ ಮೇಲೆ ಮದನಿಕೆಯ ಶಿಲ್ಪಗಳನ್ನು ಕೆತ್ತಲಾಗಿದೆ. ಆದರೆ ಇದು ನರಸಿಂಹನ ಶಿಲ್ಪಕ್ಕೆ ಪೂರಕವಾಗಿರುವಂತೆ ಕಂಡುಬರುವುದಿಲ್ಲ. ಇನ್ನು ಇಲ್ಲಿಯ ಈ ಶಿಲ್ಪಕ್ಕೆ ಸಂಬಂಧಿಸಿದಂತೆ ನೋಡುವುದಾದರೆ, ಈ ಶಿಲ್ಪವು ಕಲಾತ್ಮಕತೆಗೆ ಅತ್ಯುತ್ತಮ ಉದಾಹರಣೆಯಾಗಿದೆ. ಇದರ ಸಂಯೋಜನೆಯಾಗಲಿ, ಆಭರಣ ಮತ್ತು ಉಡುಗೆ ತೊಡುಗೆಯಾಗಲಿ ಕಲಾಭ್ಯಾಸಿಗರಿಗೆ ಉತ್ತಮ ಆಕರವಾಗಿದೆ.

ಶಿಲ್ಪ –೨

ಬಾದಾಮಿಯ ಭೂತನಾಥ ದೇವಾಲಯದ ಹಿಂಭಾಗದಲ್ಲಿರುವ ಪಂಚಲಿಂಗ ಬಂಡೆ ಶಿಲ್ಪಗಳ ಸಾಲಿನಲ್ಲಿರುವ ಮತ್ತೊಂದು ಗಮನಾರ್ಹ ಶಿಲ್ಪ ನರಸಿಂಹನದು. ರಾಕ್ಷಸನನ್ನು ತನ್ನ ತೊಡೆಯ ಮೇಲೆ ಹಾಕಿ ಕರುಳು ಬಗೆಯುತ್ತಿರುವ ನರಸಿಂಹನ ಶಿಲ್ಪವಿದಾಗಿದೆ. ಇಲ್ಲಿ ನರಸಿಂಹನು ಹೊಸ್ತಿಲ ಮೇಲೆ ಕುಳಿತುಕೊಂಡು ಹಿರಣಕಶ್ಯಪನನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಆತನ ಹೊಟ್ಟೆ ಸೀಳಿ ಕರುಳು ಹೊರತೆಗೆಯುತ್ತಿರುವಂತೆ ಕೆತ್ತಲಾಗಿದೆ. ಇಲ್ಲಿನ ವಿಶೇಷತೆಯೆಂದರೆ ಇಲ್ಲಿ ನರಸಿಂಹನು ಮಾನವದೇಹ ಮತ್ತು ಸಿಂಹದ ತಲೆಯನ್ನು ಹೊಂದಿದ್ದು ಜಟಾಮುಕುಟಧಾರಿಯಾಗಿದ್ದಾನೆ. ಚತುರ್ಭುಜ ನರಸಿಂಹನು ಉಗ್ರರೂಪಿಯಾಗಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ, ಚಕ್ರಗಳನ್ನು ಹಿಡಿದಿದ್ದಾನೆ. ಸರಳ ಕೆತ್ತನೆಯ ಈ ಶಿಲ್ಪದಲ್ಲಿ ಹಿತಮಿತವಾದ ಆಭರಣಗಳ ಕೆತ್ತನೆಯಿದ್ದು, ಅಲಂಕಾರಿಕ ಕೆತ್ತನೆಯೇನೂ ಕಂಡುಬರುವುದಿಲ್ಲ. ತೋಳಿನಲ್ಲಿ ತೋಳಬಂಧಿ ಮತ್ತು ಮುಂಗೈಯಲ್ಲಿ ಒಂದೊಂದು ಬಳೆಗಳಿವೆ. ಯಜ್ಞೋಪವೀತವು ಅಗಲವಾಗಿದ್ದು ಉತ್ತರೀಯದಂತೆ ಕಂಡುಬರುತ್ತದೆ. ನರಸಿಂಹನ ತಲೆಯ ಭಾಗವು ಇಲ್ಲಿ ದೊಡ್ಡದಾಗಿರುವಂತಿದ್ದು ಕೈಗಳು ಕೂಡ ದಪ್ಪಗಿವೆ. ಆದರೆ ದೇಹದ ಒಟ್ಟು ಪ್ರಮಾಣಕ್ಕೆ ಹೋಲಿಸಿದರೆ ಇದು ತಾಳೆಯಾಗುವುದಿಲ್ಲ. ದೇಹವು ತೆಳ್ಳಗಿದ್ದು ಸರಳ ದೇಹರಚನೆಯನ್ನು ಹೊಂದಿದೆ. ದೈತ್ಯ ದೇಹಿಯಾದ ರಾಕ್ಷಸನು ನರಸಿಂಹನ ತೊಡೆಯ ಮೇಲೆ ಅಂಗಾತವಾಗಿ ಬಿದ್ದಿದ್ದು, ಆತನ ಎಡಗಾಲು ಮೇಲಕ್ಕೆ ಮಡಚಿಕೊಂಡಿದ್ದು ಶಿಲ್ಪಕ್ಕೆ ಸಹಜತೆಯನ್ನು ತಂದುಕೊಟ್ಟಿದೆ. ರಾಕ್ಷಸನ ಮೈಯ ಮೇಲೆಯೂ ಹೆಚ್ಚಿನ ಆಭರಣಗಳಿಲ್ಲ. ಸೊಂಟಪಟ್ಟಿಯು ಅಗಲವಾಗಿದ್ದು ತೋಳು ಮತ್ತು ಮುಂಗೈಗಳಲ್ಲಿ ಬಳೆಗಳನ್ನು ಹೊಂದಿದೆ. ಒರಟಾದ ಕೆತ್ತನೆಯನ್ನು ಹೊಂದಿರುವ ಈ ಶಿಲ್ಪವು ಬೀಭತ್ಸಕತೆಯನ್ನು ವ್ಯಕ್ತಪಡಿಸುತ್ತದೆ.

ಇಲ್ಲಿಯೂ ಸುತ್ತಲಿನ ಭಾಗದಲ್ಲಿ ಯಾವುದೇ ಶಿಲ್ಪಗಳಾಗಲಿ, ಇತರ ಪೂರಕ ಕೆತ್ತನೆಗಳಾಗಲಿ ಇಲ್ಲ. ಕೇವಲ ಉಗ್ರ ನರಸಿಂಹನ ಶಿಲ್ಪವನ್ನಷ್ಟೇ ಕೆತ್ತಲಾಗಿದ್ದು ಶಿಲ್ಪಿಯ ಉದ್ದೇಶವೇನೆಂಬುದು



ನಿಗೂಢವಾಗಿ ತೋರುತ್ತದೆ. ಇದಕ್ಕೆ ಸ್ಥಳಾವಕಾಶದ ಕೊರತೆಯೆಂದು ಹೇಳಲಾಗದು. ಶಿಲ್ಪದ ಹೊರಭಾಗದಲ್ಲಿ ಕಂಬಗಳನ್ನು ಕೆತ್ತಿದ್ದು ಇದು ಶಿಲ್ಪಕ್ಕೆ ಸುಂದರವಾದ ಚೌಕಟ್ಟನ್ನು ಒದಗಿಸುತ್ತದೆ. ಇದೆ ರೀತಿಯ ಕೆತ್ತನೆಯು ವರಾಹಮೂರ್ತಿಯ ಶಿಲ್ಪದಲ್ಲಿಯೂ ಕಂಡುಬರುತ್ತದೆ. ಇದರಿಂದಾಗಿ ಈ ಕೆತ್ತನೆಗಳು ತಮ್ಮ ಸೀಮಿತ ವ್ಯಾಪ್ತಿಯಲ್ಲಿ ಕಿರು ಗುಡಿಗಳಂತೆ ಕಂಡುಬರುತ್ತವೆ.

ಶಿಲ್ಪ –೩

ಮಹಾಕೂಟದ ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಉಗ್ರನರಸಿಂಹನು ಚರ್ತುಭುಜ ಶಿಲ್ಪವು ಗಮನಾರ್ಹವಾಗಿದೆ ಈ ಶಿಲ್ಪದ ವಿಶೇಷತೆಯೆಂದರೆ ಇಲ್ಲಿ ನರಸಿಂಹನು ಉಗ್ರ ರೋಷದಿಂದ ಹಿರಣ್ಯಕಶ್ಯಪನನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಆತನ ಕರುಳು ಬಗೆಯುತ್ತಿರುವ ಶಿಲ್ಪವು. ಸುಂದರವಾಗಿ ಕೆತ್ತಲಾಗಿರುವ ಶಿಲ್ಪದಲ್ಲಿ ಬೀಭತ್ಸಕತೆಯನ್ನು ಅದ್ಭುತವಾಗಿ ತೋರಿಸಲಾಗಿದೆ. 'ಮಹಾಕೂಟದ ದೇವಾಲಯದಲ್ಲಿ ನರಸಿಂಹನು ನಿಂತುಕೊಂಡೇ ಅಸುರನ ಹೊಟ್ಟೆಯನ್ನು ಸೀಳುತ್ತಿದ್ದಾನೆ, ಇಲ್ಲಿ ನರಸಿಂಹನ ಶಿಲ್ಪದ ಗಮನಾರ್ಹ ಅಂಶವೆಂದರೆ, ಇಲ್ಲಿನ ಶಿಲ್ಪದಲ್ಲಿ ಶಿಲ್ಪಿಯು ತೋರಿಸಿದ ಕೌಶಲ್ಯವನ್ನು ಮೆಚ್ಚಬೇಕಾಗುತ್ತದೆ. ನರಸಿಂಹನ ವೀರಾವೇಶ ಮತ್ತು ಕ್ರೋಧಭಾವ ಎದ್ದು ಕಾಣುತ್ತದೆ. ಇಲ್ಲಿನ ಶಿಲ್ಪವು ಬಹಳಷ್ಟು ಭಗ್ನವಾಗಿದೆಯಾದರೂ ಶಿಲ್ಪವನ್ನು ಆನಂದಿಸುವುದಕ್ಕೆ ಯಾವುದೇ ತೊಂದರೆಯಿಲ್ಲ. ಹಿರಣ್ಯಕಶ್ಯಪನು ದೈತ್ಯ ದೇಹಿಯಾಗಿದ್ದರೂ ನರಸಿಂಹನ ತೊಡೆಯ ಮೇಲೆ ಮಲಗಿರುವ ಅಸುರನು ಮಗುವಿನಂತೆ ಕಾಣಿಸಿದರೆ ಆಶ್ಚರ್ಯವಿಲ್ಲ. ಚತುರ್ಭುಜ ವಿಷ್ಣು(ನರಸಿಂಹ)ವಿನ ಮೇಲಿನ ಬಲಗೈ ಭಾಗಶಃ ಭಗ್ನವಾಗಿದೆ. ಶಿಲ್ಪದ ಮೇಲಿನ ಎಡಗೈಯಲ್ಲಿ ಶಂಖವನ್ನು ಹಿಡಿದಿರುವುದು ಆಕರ್ಷಕವಾಗಿದೆ. ನರಸಿಂಹನ ಕೆಳಗಿನ ಎರಡೂ ಕೈಗಳು ಅಸುರನ ಕರುಳು ಬಗೆಯುತ್ತಿರುವ ದೃಶ್ಯ ಇಲ್ಲಿ ಭಗ್ನವಾಗಿರುವುದರಿಂದ ಅದು ಕೊರತೆಯಾಗಿದೆ. ಆದರೆ ಅಸುರನ ಹೊಟ್ಟೆಯಿಂದ ಹೊರಬಂದಿರುವ ಮಾಂಸವನ್ನು ಗಮನಿಸಬಹುದು.

ವಿಷ್ಣುವಿನ ದೈತ್ಯದೇಹದ ತೊಡೆಯ ಮೇಲೆ ಅಂಗಾತವಾಗಿ ಬಿದ್ದಿರುವ ಅಸುರನ ತಲೆ ಮತ್ತು ಅದಕ್ಕೆ ತೊಟ್ಟ ಕಿರೀಟವು ನರಸಿಂಹನ ಬಲಭಾಗದಲ್ಲಿ ಕೆಳಮುಖಮಾಡಿದೆ. ಆತನ ಬಲಗೈಯಲ್ಲಿ ಗದೆಯಿದೆ. ಎಡಗೈ ಅಸಹಾಯಕತೆಯಿಂದ ಎಡಪಕ್ಕಕ್ಕೆ ಜೋತುಬಿದ್ದಿದೆ. ಅಸುರನು ದೊಡ್ಡದಾದ ರಾಜಮುಕುಟವನ್ನು ಹೊಂದಿರುವುದನ್ನು ಕೂಡಾ ಗಮನಿಸಬಹುದು. ಅಸುರನ ದೇಹದ ಮೇಲೆ ಆಭರಣಗಳನ್ನು ಕೆತ್ತಲಾಗಿದ್ದರೂ ಅವುಗಳಿಗೆ ಅಲಂಕರಣದ ಮಹತ್ವವನ್ನು ನೀಡಲಾಗಿಲ್ಲ. ವೀರಗಚ್ಚೆಯಲ್ಲಿ ಬಿದ್ದಿರುವ ಅಸುರನ ಸೊಂಟದಲ್ಲಿ ದಪ್ಪನಾದ ಕಟಿಬಂಧವಿದೆ. ಎದೆಯಲ್ಲಿ ಪದಕವುಳ್ಳ ಎದೆಹಾರವನ್ನು ಧರಿಸಿದ್ದಾನೆ. ಬಲಗಾಲು ಜೋತುಬಿದ್ದಂತಿದೆ. ಮುಖದಲ್ಲಿ ಬೀಭತ್ಸಕತೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ನರಸಿಂಹನ ಕೆತ್ತನೆಗೆ ಹೋಲಿಸಿದರೆ, ಅಸುರನ

[illegible]



ಕಾಲಿನ ಭಾಗದಲ್ಲಿ ಜೀವಂತಿಕೆಯ ಕೊರತೆಯಿದೆ. ಇಲ್ಲಿ ನರಸಿಂಹನ ಕೆತ್ತನೆಗೆ ವಿಶೇಷ ಗಮನ ನೀಡಲಾಗಿದೆಯೆಂದು ಹೇಳಬಹುದು.

ಉಳಿದೆಡೆಗಳಲ್ಲಿ ನರಸಿಂಹನ ಶಿಲ್ಪಕ್ಕೆ ಹೋಲಿಸಿದರೆ ಅಸುರನ ಶಿಲ್ಪವೂ ತಕ್ಕಮಟಿಗೆ ಪ್ರಾಮುಖ್ಯವನ್ನು ಪಡೆದಿತ್ತು. ಆದರೆ ಇಲ್ಲಿ ನರಸಿಂಹನನ್ನು ವೈಭವೀಕರಿಸಲಾಗಿದೆ. ಅದು ಅಂಗಪ್ರಮಾಣದಲ್ಲಿರಬಹುದು, ಆಕಾರದಲ್ಲಿರಬಹುದು, ಕೆತ್ತನೆಯ ರೀತಿಯಲ್ಲಿರಬಹುದು, ಅಥವಾ ಅಲಂಕರಣದಲ್ಲಿರಬಹುದು. ನರಸಿಂಹನ ಪ್ರತಿಯೊಂದು ರೇಖೆಯನ್ನು ಕೂಡಾ ಕಲಾತ್ಮಕಗೊಳಿಸಲಾಗಿದೆ. ಆತ ಹೊಂದಿರುವ ಕಿರೀಟ, ತೊಟ್ಟಿರುವ ಯಜ್ಞೋಪವೀತ, ಎದೆಯಲ್ಲಿ ಹೊಂದಿರುವ ಕಂಠಾಭರಣಗಳು, ಭುಜದ ಮೇಲೆ ಇಳಿಬಿದ್ದಿರುವ ಆತನ ಕೇಸರ ಮುಂತಾದವುಗಳನ್ನು ಅಲಂಕಾರಿಕ ವಿನ್ಯಾಸದಲ್ಲಿ ರಚಿಸಲಾಗಿದೆ. ಮುಖವು ಭಾಗಶಃ ಭಗ್ನಗೊಂಡಿದ್ದರೂ ನರಸಿಂಹನ ಕ್ರೋಧಭಾವವನ್ನು ಗುರುತಿಸಬಹುದು.

ಇಲ್ಲಿನ ನರಸಿಂಹ ಶಿಲ್ಪದಲ್ಲಿ ಗುರುತಿಸಬೇಕಾದ ಇನ್ನೊಂದು ಶಿಲ್ಪವೆಂದರೆ ನರಸಿಂಹನ ಮೇಲುಭಾಗದಲ್ಲಿ ಕೆತ್ತಲಾಗಿರುವ ಮೂಳೆಚಕ್ಕಳಗಳನ್ನು ಹೊಂದಿರುವ ಕೆತ್ತನೆ. ನರಸಿಂಹನ ತಲೆಯ ಮೇಲೆ ಆಕಾಶದಲ್ಲಿ ಹಾರಾಡುತ್ತಿರುವಂತೆ ಕೆತ್ತಲಾಗಿರುವ ಇಲ್ಲಿ ಆತನ ಮೂಳೆಗಳಷ್ಟೇ ಕಾಣಿಸುತ್ತವೆ. ಅಂಗಾಂಗಗಳು ಪ್ರಮಾಣಬದ್ಧವಾಗಿವೆ. ಇಲ್ಲಿ ಬೇರೆ ಯಾವ ಶಿಲ್ಪಗಳೂ ಇಲ್ಲ. ಸಾಮಾನ್ಯವಾಗಿ ಕಾಣಿಸುವ ಇತರ ರಕ್ಕಸಗಣ ಅಥವಾ ದೇವಗಣಗಳಾವುವೂ ಇಲ್ಲ. ಆದುದರಿಂದಲೇ ಇದು ಕುತೂಹಲಕ್ಕೆ ಕಾರಣವಾಗುತ್ತದೆ.

ಕೆತ್ತನೆಯ ರೀತಿ ನೋಡಿದರೆ ಇದು ಕಾಳಿಯ ಶಿಲ್ಪವಾಗಿರಬಹುದು. ಇದನ್ನು ಹೀಗೆ ಊಹಿಸಲು ಕಾರಣವೇನೆಂದರೆ, ಈ ಶಿಲ್ಪದ ಎಡಗೈಯಲ್ಲಿ ಬಹುಶಃ ರಾಕ್ಷಸನೊಬ್ಬನ ತಲೆಯನ್ನು ಹಿಡಿದುಕೊಂಡಂತಿದೆ. ಉಳಿದಂತೆ ಸ್ತ್ರೀ ಶಿಲ್ಪವೆಂದು ಗುರುತಿಸಲು ಸಾಧ್ಯವಾಗುವುದು. ಕೆತ್ತನೆ ರೇಖೆಗಳಿಂದ ಕೂಡಿ ಲಯಬದ್ಧವಾಗಿದೆ. ಸೊಂಟದ ಭಾಗ ದಪ್ಪವಾಗಿದೆ. ಕುತ್ತಿಗೆಯಲ್ಲಿ ಹಾರವಿದ್ದು ದೊಡ್ಡದಾದ ಕರ್ಣಕುಂಡಲಗಳಿವೆ. ಮುಖವು ಸುಕ್ಕುಸುಕ್ಕಾಗಿದೆ. ಇದರ ಲಕ್ಷಣಗಳನ್ನು ನೋಡಿದರೆ ಇದನ್ನು ಭದ್ರಕಾಳಿಯೆನ್ನಬಹುದು. ಬಹುಶಃ ಅಸುರನ ಸಂಹಾರದ ಕಾಲದಲ್ಲಿ ರಕ್ತಾಹಾರಕ್ಕಾಗಿ ಬಂದಂತೆ ಕೆತ್ತಿರಬಹುದು. ಸುಂದರವಾಗಿ ಈ ಶಿಲ್ಪವನ್ನು ಕೆತ್ತಲಾಗಿದೆ. ಒಟ್ಟಿನಲ್ಲಿ ಈ ಶಿಲ್ಪದ ಒಟ್ಟು ಚಿತ್ರಣವನ್ನು ಗಮನಿಸಿದರೆ ಇಲ್ಲಿನ ನರಸಿಂಹಶಿಲ್ಪವು ಅದ್ಭುತವಾದ ಕೆತ್ತನೆಯಿಂದ ಕೂಡಿದ ಅಪರೂಪದ ಶಿಲ್ಪವೆನ್ನಬಹುದು.

ಶಿಲ್ಪ –೪

ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಮುಖಮಂಟಪದ ಎಡಭಾಗದ ಕಂಬದಲ್ಲಿ ಕೆತ್ತಲಾಗಿರುವ ಈ ಶಿಲ್ಪ ಅತ್ಯಂತ ಸುಂದರ ಶಿಲ್ಪಗಳಲ್ಲಿ ಒಂದು. ಈ ಶಿಲ್ಪದಲ್ಲಿ ಉಗ್ರನರಸಿಂಹನು

[illegible]

ವಿಶಿಷ್ಟವಾಗಿ ಕಂಡುಬರುತ್ತಾನೆ. ಕ್ರಿಯಾತ್ಮಕವಾಗಿ ಕೆತ್ತಲಾಗಿರುವಂತೆ ಕಂಡುಬರುವ ಈ ಶಿಲ್ಪದಲ್ಲಿ ನರಸಿಂಹನು ಅತಿಭಂಗಿಯಲ್ಲಿದ್ದು, ಬಲಗಾಲನ್ನು ಮಡಚಿಕೊಂಡು, ಎಡಗಾಲನ್ನು ಉದ್ದಕ್ಕೆ ಇಳಿಬಿಟ್ಟು ಕುಳಿತುಕೊಂಡಿದ್ದಾನೆ. ಇಳಿಬಿಟ್ಟ ಎಡತೊಡೆಯ ಮೇಲೆ ಲಕ್ಷ್ಮಿಯನ್ನು ತನ್ನ ಎಡಗೈಯಿಂದ ಬಿಗಿಯಾಗಿ ತಬ್ಬಿ ಹಿಡಿದಿದ್ದಾನೆ. ಈ ಭಂಗಿಯು ಎಲ್ಲಿ ಲಕ್ಷ್ಮಿಯು ಓಡಿಹೋಗುವಳೊ ಎಂದುಕೊಂಡು ಬಲವಂತವಾಗಿ ಎಳೆದುಕೊಂಡು ಕುಳ್ಳಿರಿಸಿದಂತಿದೆ. ತನ್ನ ಬಲಗೈಗಳೆರಡನ್ನೂ ಮೇಲೆತ್ತಿ ಹಿಡಿದಿದ್ದಾನೆ, ಆದರೆ ಕೈಗಳೆರಡೂ ಭಗ್ನಗೊಂಡಿವೆ. ಎಡಗೈಗಳಲ್ಲಿ ಒಂದರಲ್ಲಿ ಲಕ್ಷ್ಮಿಯನ್ನು ಬಾಚಿ ಹಿಡಿದುಕೊಂಡಿದ್ದರೆ, ಇನ್ನೊಂದು ಕೈಯನ್ನು ಮೇಲೆತ್ತಿ ಹಿಡಿಯಲಾಗಿದೆ.

ನರಸಿಂಹನು ಜಟಾಮುಕುಟನಾಗಿದ್ದು ತಲೆಯ ಕೇಸರವನ್ನು ಮತ್ತು ಮುಖದ ಸುತ್ತಲಿನ ಕೂದಲನ್ನು(Hairs) ಸುರುಳಿಸುರುಳಿಯಾಗಿ ಅಲಂಕಾರಯುಕ್ತವಾಗಿ ಕೆತ್ತಲಾಗಿದೆ. ಮುಖವು ಭಗ್ನಗೊಂಡಿರುವುದರಿಂದ ಭಾವನೆಯನ್ನು ಗುರುತಿಸಲಾಗದಾದರೂ ಉಗ್ರರೂಪಿಯಾಗಿರುವಂತಿದೆ. ಉದರಬಂಧ, ತೋಳುಪಟ್ಟಿ, ಮೇಖಲೆ, ಕಾಲಕಡಗ ಇತ್ಯಾದಿಗಳಿವೆ. ನರಸಿಂಹನು ವೀರಗಚ್ಚೆಯಲ್ಲಿದ್ದು ಯಜ್ಞೋಪವೀತವಿಲ್ಲದಿರುವುದು ಗಮನಾರ್ಹ ಅಂಶ. ಲಕ್ಷ್ಮಿಯು ನರಸಿಂಹನ ತೊಡೆಯ ಮೇಲೆ ಬಲವಂತದಿಂದ ಕುಳಿತಿರುವಂತಿರುವುದು ಗಮನಾರ್ಹ. ಇಲ್ಲಿ ಲಕ್ಷ್ಮಿಯ ಮೈಮೇಲೆ ಸಾಕಷ್ಟು ಒಡವೆಗಳಿರುವುದು ಕಂಡುಬರುತ್ತದೆ. ನರಸಿಂಹನ ದೇಹಾಕಾರದ ಮುಂದೆ ಲಕ್ಷ್ಮಿಯು ತೀರಾ ಸಣ್ಣಗಿರುವಂತೆ ಕಂಡುಬರುತ್ತಾಳೆ. ಮುಖವು ನರಸಿಂಹನ ಕಡೆಗೆ ಗಾಬರಿಯಿಂದ ನೋಡುತ್ತಿರುವಂತಿದ್ದು, ಮುಖವು ಭಗ್ನಗೊಂಡಿದೆ. ನರಸಿಂಹನ ಬಲಕಾಲಿನ ಕೆಳಭಾಗದಲ್ಲಿ ಅಸುರನು ವಿಮುಖನಾಗಿ ಬಿದ್ದಿರುವಂತಿದ್ದು ಅವನ ಸೊಂಟದ ಮೇಲೆ ನರಸಿಂಹನು ಕಾಲೂರಿದಂತೆ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಚಲನೆಯ ಭಂಗಿಯನ್ನು ಉತ್ತಮವಾಗಿ ಶಿಲ್ಪಿಯು ಕೆತ್ತಿರಿಸಿದಂತೆ ಕಂಡುಬರುತ್ತದೆ.

ಶಿಲ್ಪ –೫

ಪಟ್ಟದಕಲ್ಲು ಪಾಪನಾಥ ದೇವಾಲಯದಲ್ಲಿ ನಾವು ನೋಡಬಹುದಾದ ಇನ್ನೆರಡು ಶಿಲ್ಪಗಳು ನರಸಿಂಹ ಮತ್ತು ವರಾಹಶಿಲ್ಪಗಳು. ಶಿಲ್ಪಗಳು ಬಹುತೇಕ ಹಾಳಾಗಿದ್ದರೂ ಅಳಿದುಳಿದ ಕುರುಹುಗಳ ಮೂಲಕ ಶಿಲ್ಪದ ಸೌಂದರ್ಯವನ್ನು ಗಮನಿಸಲು ಸಾಧ್ಯವಾಗುತ್ತದೆ. ಇಲ್ಲಿನ ನರಸಿಂಹನ ಶಿಲ್ಪದಲ್ಲಿ ನರಸಿಂಹನು ರಾಕ್ಷಸನನ್ನು ಕೊಲ್ಲುತ್ತಿರುವ ರೀತಿ ವಿಭಿನ್ನವಾಗಿ ಕಾಣಿಸುತ್ತದೆ. ಚಾಲುಕ್ಯರ ಉಳಿದ ಶಿಲ್ಪಗಳಲ್ಲಿ ನರಸಿಂಹನು ಅಸುರನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಸಂಹಾರ ಮಾಡುವಂತಿದ್ದರೆ ಇಲ್ಲಿ ಇದು ಬೇರೆಯೇ ರೀತಿಯಲ್ಲಿ ಕಾಣಿಸುತ್ತದೆ. ವಿಷ್ಣುವು ಇಲ್ಲಿ ರಾಕ್ಷಸನನ್ನು ತೊಡೆಯ ಮೇಲೆ ಬಲವಂತವಾಗಿ ಎಳೆದು ಹಾಕಿಕೊಂಡಂತೆ ಕಾಣಿಸುತ್ತದೆ. ಇದನ್ನು ಶಿಲ್ಪಕಲೆಯ ಸಂಯೋಜನೆಯ ದೃಷ್ಟಿಯಿಂದ ತ್ರಿಕೋನ ಸಂಯೋಜನೆಯೆಂದು ಹೇಳಬಹುದು.



ಅಂದರೆ ಇಲ್ಲಿ ರಾಕ್ಷಸನ ಒಂದು ಕಾಲು ಬಿದ್ದ ರೀತಿಯಲ್ಲಿ ಭೂಮಿಗೆ ಸಮಾನಾಂತರವಾಗಿದ್ದರೆ ಎಡಗಾಲನ್ನು ಭೂಮಿಗೆ ಊರಲಾಗಿದೆ. ವಿಷ್ಣುವೂ ಒಂದು ಕಾಲನ್ನು ನೆಲದ ಮೇಲೆ ಊರಿದ್ದರೆ, ಇನ್ನೊಂದು ಕಾಲಿನಿಂದ ಅಸುರನನ್ನು ಬಳಸಲಾಗಿದೆ. ಇಲ್ಲಿ ನರಸಿಂಹನು ಕುಳಿತಿರುವ ರೀತಿ ಕಂಡುಬರುವುದಿಲ್ಲ. ಶಿಲ್ಪದಲ್ಲಿ ವ್ಯಗ್ರತೆಯಿರುವುದನ್ನು ಗುರುತಿಸಬಹುದಾದರೂ ಶಿಲ್ಪವು ಭಗ್ನಗೊಂಡಿರುವುದರಿಂದ ಹೆಚ್ಚಿನ ಚಿತ್ರಣ ಗೊತ್ತಾಗುವುದಿಲ್ಲ. ಆದರೂ ಅಳಿದುಳಿದ ಕೆತ್ತನೆಯಿಂದ ಗಮನಿಸುವುದಾದರೆ ಇಲ್ಲಿ ಶಿಲ್ಪಿಯು ಕೆತ್ತನೆಯಲ್ಲಿ ವೈವಿಧ್ಯವನ್ನು ತೋರಿಸಿರುವುದು ಕಂಡುಬರುತ್ತದೆ. ಶಿಲ್ಪದಲ್ಲಿ ಚಲನೆ ಮತ್ತು ಕ್ರಿಯಾತ್ಮಕತೆ ಗಮನ ಸೆಳೆಯುತ್ತದೆ. ಶಿಲ್ಪವು ಕಿರು ಗಾತ್ರದಲ್ಲಿರುವುದರಿಂದ ಲಭ್ಯ ಸ್ಥಳಾವಾಕಾಶಕ್ಕೆ ತಕ್ಕಂತೆ ಕೆತ್ತಲಾಗಿರುವುದರಿಂದ ಉಳಿದ ಯಾವುದೇ ಕೆತ್ತನೆಗೆ ಆಸ್ಪದವಿಲ್ಲ.

ಶಿಲ್ಪ –೬

ಇಲ್ಲಿನ ದುರ್ಗಾದೇವಾಲಯದ ಎರಡು ಕಂಬಗಳ ಮಧ್ಯದಲ್ಲಿ ನರಸಿಂಹ ಮತ್ತು ಅರ್ಧನಾರೀಶ್ವರ ಶಿಲ್ಪಗಳಿದ್ದು ನರಸಿಂಹಶಿಲ್ಪವನ್ನಿಲ್ಲಿ ನೋಡೋಣ. 'ನರಸಿಂಹನು ಹೊಸ್ತಿಲ ಮೇಲೆ ನಿಂತು ಹಿರಣ್ಯಕಶ್ಯಪುವಿನ ಹೊಟ್ಟೆಯನ್ನು ತನ್ನ ಉಗುರುಗಳಿಂದ ಬಗೆಯುತ್ತಿದ್ದಾನೆ. ನರಸಿಂಹನಿಗೆ ನಾಲ್ಕು ಕೈಗಳಿವೆ. ಅವನು ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖವನ್ನು ಹಿಡಿದಿದ್ದಾನೆ. ಮತ್ತು ಕೆಳಗಿನ ಎರಡೂ ಕೈಗಳನ್ನು, ಆ ದೈತ್ಯನನ್ನು ಸಂಹಾರ ಮಾಡಲು ಉಪಯೋಗಿಸಿದ್ದಾನೆ. ಹಿರಣ್ಯಕಶ್ಯಪು ಎಡಗೈಯಲ್ಲಿ ಢಾಲು ಮತ್ತು ಬಲಗೈಯಲ್ಲಿ ಖಡ್ಗ ಹಿಡಿದಿರುವನು. ಅವನ ಬಲಗೈ ಈಗ ಒಡೆದು ಹೋಗಿದೆ. ಈ ನರಸಿಂಹನು ಉಗ್ರನಿದ್ದು ಭರದಿಂದ ತನ್ನ ಕೆಲಸದಲ್ಲಿ ಮಗ್ನನಾಗಿರುವನು.[೨೫] ಈ ಶಿಲ್ಪದ ಬಹುಭಾಗ ಭಗ್ನಗೊಂಡಿದ್ದರೂ ಶಿಲ್ಪದ ಸೌಂದರ್ಯವನ್ನು ಆಸ್ವಾದಿಸಲು ಸಾಧ್ಯವಾಗುತ್ತದೆ.

ಮಧ್ಯಮ ಗಾತ್ರದ ಶಿಲ್ಪವು ಇದಾಗಿದ್ದು ಕೆತ್ತನೆಯಲ್ಲಿ ಸೊಗಸಿದೆ. ಹಿರಣ್ಯಕಶ್ಯಪುವಿನ ದೇಹವು ಇಲ್ಲಿ ಬಿಲ್ಲಿನಂತೆ ಸಂಪೂರ್ಣ ಬಾಗಿದ್ದು ತನ್ನ ಅಸಹಾಯಕತೆಯನ್ನು ಇಲ್ಲಿ ವ್ಯಕ್ತಪಡಿಸುವಂತೆ ಕೆತ್ತಲಾಗಿದೆ. ವಿಷ್ಣುವು ಬಲಗಾಲನ್ನು ಬಲವಾಗಿ ನೆಲದ ಮೇಲೆ ಊರಿ ತನ್ನ ಶಕ್ತಿಯನ್ನೆಲ್ಲ ಇಲ್ಲಿ ಬಳಸಿಕೊಂಡಂತೆ, ಹಾಗೂ ರಾಕ್ಷಸನ ಮೇಲೆ ಅತಿಯಾದ ಕ್ರೋಧ ತುಂಬಿದ ಶಕ್ತಿಯನ್ನು ಉಪಯೋಗಿಸಿದಂತೆ ಕೆತ್ತಲಾಗಿರುವುದು ಇಲ್ಲಿನ ವೈಶಿಷ್ಟ್ಯ. ಇಲ್ಲಿನ ಶಿಲ್ಪದಲ್ಲಿ ಹೊಸತನ ವಿರುವಂತೆ ಭಾಸವಾಗುತ್ತದೆ. ನರಸಿಂಹನ ಮುಖದ ಕೆತ್ತನೆಯನ್ನಿಲ್ಲಿ ಗಮನಿಸಬಹುದು.

ಇಲ್ಲಿನ ನರಸಿಂಹನ ಮುಖವು ದುಂಡಗಾಗಿ ದೊಡ್ಡದಾದ ಕಣ್ಣುಗಳು, ಉರಿದುಹೋಗುವಂತಹ ಮುಖಭಾವ, ಅದಕ್ಕೊಪ್ಪುವ ದಪ್ಪ ತುಟಿಗಳು, ಅಗಲವಾದ ಹುಬ್ಬು ಇತ್ಯಾದಿಗಳನ್ನು ಹೊಂದಿವೆ. ಬಾಯಿಯ ಭಾಗ ಭಗ್ನವಾಗಿದ್ದರೂ ಅದರ ಆಕಾರವನ್ನು ಗಮನಿಸಬಹುದು. ಹಿರಣ್ಯಕಶಪುವನ್ನು ಹೊಸ್ತಿಲ ಮೇಲೆ ಕುಳಿತು ಮರ್ದಿಸುವುದನ್ನು ತೋರಿಸುವಲ್ಲಿ

---

೨೫. ಎ. ಎಂ. ಅಣ್ಣಿಗೇರಿ : ಐಹೊಳೆ : ಸಂಸ್ಕೃತಿ ಮತ್ತು ಕಲೆ, ಪುಟ – ೩೭



ಕಲಾವಿದನ ಕೌಶಲ್ಯ ಗಮನ ಸೆಳೆಯುತ್ತದೆ. ಶಿಲ್ಪವು ದಷ್ಟ–ಪುಷ್ಟವಾಗಿದ್ದು ಮುಖವು ಅಗಲವಾಗಿದ್ದು ತಲೆಯ ಕೂದಲು ಮತ್ತು ಕೇಸರವನ್ನು ಸುರುಳಿಸುರುಳಿಯಾಗಿ ಕೆತ್ತಲಾಗಿದೆ. ಕೂದಲನ್ನು ತಲೆಯ ಹಿಂಭಾಗದಲ್ಲಿ ಉದ್ದಕ್ಕೆ ಇಳಿಬಿಡಲಾಗಿದೆ. ತನ್ನ ಕೆಳಗಿನ ಎರಡು ಕೈಗಳನ್ನು ಅಸುರನ ಹೊಟ್ಟೆಯೊಳಗೆ ಕೈಹಾಕಿ ಕರುಳು ಹೊರತೆಗೆಯುವಂತೆ ಚಿತ್ರಿಸಿರುವ ರೀತಿ ಅದ್ಭುತವಾಗಿ ಕಂಡುಬರುತ್ತದೆ. ಇಂತಹ ಕೆತ್ತನೆಯ ಇದೇ ರೀತಿಯ ನರಸಿಂಹನ ಶಿಲ್ಪಗಳು ಬೇರೆಡೆಯಲ್ಲಿಯೂ ಕಂಡುಬರುತ್ತವೆಯಾದರೂ ಇಲ್ಲಿನ ಶಿಲ್ಪದಲ್ಲಿ ಪರಿಪೂರ್ಣತೆಯನ್ನು ಸಾಧಿಸಿರುವಂತೆ ಕಂಡುಬರುತ್ತದೆ. ನರಸಿಂಹನ ಕುತ್ತಿಗೆಯಲ್ಲಿ ಎರಡು ಸುತ್ತಿನ ಕಂಠಹಾರವಿದೆ. ದಪ್ಪವಾದ ಯಜ್ಞೋಪವೀತ, ತೋಳುಗಳಲ್ಲಿ ತೋಳಬಂಧಿ, ಮುಂಗೈಯಲ್ಲಿ ಎರಡು ಬಳೆಗಳಿವೆ. ಕಾಲಿನ ಕಾಲ್ಗಡಗವಿಲ್ಲ. ಉಟ್ಟಿರುವ ಬಟ್ಟೆಯನ್ನು ರಾಕ್ಷಸನ ದೇಹ ಮರೆಮಾಡಿದೆ. ಇನ್ನು ಇಲ್ಲಿನ ಶಿಲ್ಪದ ಇನ್ನೊಂದು ಗಮನಾರ್ಹ ಅಂಶವೆಂದರೆ, ಇಲ್ಲಿ ನರಸಿಂಹನು ಹೊಸ್ತಿಲ ಮೇಲೆ ಕುಳಿತ ಭಂಗಿಯಲ್ಲಿ ಇರುವ ಬದಲು ಅಂಗಪ್ರಮಾಣವನ್ನು ಗಮನಿಸಿದರೆ ನಿಂತುಕೊಂಡಿರುವಂತೆ ಹಾಗೂ ಶಿಲ್ಪದಲ್ಲಿ ಹೆಚ್ಚಿನ ಚಲನೆ ಮತ್ತು ಜೀವಂತಿಕೆಯನ್ನು ಕಾಣಬಹುದು. ಇಲ್ಲಿನ ಕಂಬದ ಲಭ್ಯ ಅವಕಾಶದಲ್ಲಿ ಶಿಲ್ಪದಸಂಯೋಜನೆಗೆ ಧಕ್ಕೆಯಾಗದಂತೆ ಇಲ್ಲಿ ಒಟ್ಟು ಕೆತ್ತನೆಯನ್ನು ಸಂಯೋಜಿಸಿದ್ದು ಶಿಲ್ಪಿಯ ಕಲಾಕೌಶಲ್ಯಕ್ಕೆ ಸಾಕ್ಷಿಯಾಗುತ್ತದೆ. ಒಟ್ಟಿನಲ್ಲಿ ಇಲ್ಲಿನ ನರಸಿಂಹನ ಈ ಶಿಲ್ಪವು ಸುಂದರವಾಗಿ ಸಂಯೋಜಿಸಲ್ಪಟ್ಟ ಮತ್ತು ಅಷ್ಟೇ ಪ್ರಮಾಣಬದ್ಧವಾದ ಶಿಲ್ಪವಾಗಿದೆ.

ಶಿಲ್ಪ –೭

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಬಲಭಾಗ ಮಂಟಪದ ಗೋಡೆಯಲ್ಲಿ ನಾಲ್ಕು ಅಡಿ ಎತ್ತರದ ನರಸಿಂಹನ ಶಿಲ್ಪವಿದೆ. ಸುಮಾರು ಅಷ್ಟೇ ಎತ್ತರದ ಹಿರಣ್ಯಕಶ್ಯಪು ದೇವನ ಬಾಹುಬಂಧನದಲ್ಲಿ ಸಿಲುಕಿಕೊಂಡಿದ್ದಾನೆ. ಹಿರಣ್ಯಕಶ್ಯಪುವಿನ ಬಲಗೈಯಲ್ಲಿ ಖಡ್ಗವಿದ್ದರೂ ಅದು ನಿಷ್ಪ್ರಯೋಜಕವಾಗಿರುವಂತೆ ನರಸಿಂಹನು ತನ್ನ ಕೈಗಳಿಂದ ಕಟ್ಟಿಹಾಕಿರುವ ದೃಶ್ಯ ವಿಸ್ಮಯಕಾರಿಯಾಗಿದೆ. ಇಲ್ಲಿ ರೂವಾರಿಯು ತನ್ನ ಕಲಾಕೌಶಲ್ಯವನ್ನು ಸುಂದರವಾಗಿ ಪ್ರದರ್ಶಿಸಿದ್ದಾನೆ. ನರಸಿಂಹನ ಭೀಕರ ರೂಪವನ್ನು ನೋಡುತ್ತಿರುವ ಹಿರಣ್ಯಕಶ್ಯಪುವಿನ ಮುಖದಲ್ಲಿ ಭಯ ಎದ್ದು ಕಾಣುತ್ತದೆ.[೨೬] ನರಸಿಂಹನು ಬಲಗಾಲಿನ ಮೇಲೆ ನಿಂತು ಎಡಗಾಲಿನಿಂದ ಹಿರಣ್ಯಕಶ್ಯಪುನನ್ನು ಬಂಧಿಸಿದ್ದಾನೆ. ಈ ಶಿಲ್ಪವು ಬಲಗಾಲಿನ ಮೇಲೆ ನಿಂತು ಸಂಹರಿಸುವ ಶಿಲ್ಪವಾಗಿದ್ದು ಆಕರ್ಷಕವಾಗಿ ಕಾಣುತ್ತದೆ.

ಶಿಲ್ಪ –೮

ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದ ಮುಂದೆ ಬಲಗಡೆ ಕಂಬದಲ್ಲಿ

---

೨೬. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೪೮



ಅರ್ಧವೃತ್ತಾಕಾರದಲ್ಲಿ ಈ ಶಿಲ್ಪ ರಚಿತವಾಗಿದೆ. ಷಟ್‌ಭುಜನರಸಿಂಹನು ಎಡಗೈಯಿಂದ ಹಿರಣ್ಯಕಶ್ಯಪುನನ್ನು ಹಿಡಿದಿದ್ದಾನೆ. ಹಿರಣ್ಯಕಶ್ಯಪು ಕೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ. ನರಸಿಂಹನು ಉಗ್ರರೂಪವಿರುವುದನ್ನು ನೋಡಿ ಹಿರಣ್ಯಕಶ್ಯಪು ಭಯ ಭೀತನಾಗಿದ್ದಾನೆ. ನರಸಿಂಹನ ಇಬ್ಬದಿಗಳಲ್ಲಿ ಪುರುಷರಿದ್ದು, ಎಡಭಾಗದಲ್ಲಿರುವ ಪುರುಷನು ಕೈಯಲ್ಲಿ ದಂಡ, ಗುರಾಣಿಯನ್ನು ಹಿಡಿದಿದ್ದಾನೆ. ಚಿಕ್ಕದಾಗಿ ಅರ್ಧವೃತ್ತಾಕಾರದಲ್ಲಿ ರಚನೆಯಾದರೂ ಉಬ್ಬುತನದಿಂದ ಕೂಡಿದ ಅಲಂಕಾರಿಕ ಶಿಲ್ಪ ಇದಾಗಿದೆ.

ಶಿಲ್ಪ –೯

ಐಹೊಳೆಯ ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಎರಡು ಕಂಬಗಳ ಮಧ್ಯ ತಂದಿರಿಸಲಾದ ಚತುರ್ಭುಜ ಉಗ್ರನರಸಿಂಹನ ಶಿಲ್ಪವಿದೆ. ಈ ಶಿಲ್ಪವು ಕಿರೀಟಮುಕುಟವಾಗಿದ್ದು, ಕಿರೀಟವು ಆಕರ್ಷಣೀಯವಾಗಿದೆ. ಉಗ್ರನರಸಿಂಹನ ಕೇಶಗಳು ಎರಡು ಭುಜದ ಮೇಲೆ ಸುರುಳಿಯಾಗಿ ಇಳಿಬಿದ್ದಿವೆ. ಉಗ್ರನರಸಿಂಹನು ಹಿಂದಿನ ಎರಡು ಕೈಗಳಲ್ಲಿ ಚಕ್ರ, ಶಂಖವನ್ನು ಹಿಡಿದಿದ್ದಾನೆ. ತನ್ನ ತೊಡೆಯ ಮೇಲೆ ಹಾಕಿಕೊಂಡಿರುವ ಹಿರಣ್ಯಕಶ್ಯಪುವಿನ ಉದರವನ್ನು ಬಗೆಯುತ್ತಿರುವುದಕ್ಕೆ ತನ್ನ ಎರಡು ಕೈಗಳನ್ನು ಇಲ್ಲಿ ಬಳಸಿದ್ದಾನೆ ಎನ್ನಬಹುದು. ಇಲ್ಲಿ ಹಿರಣ್ಯಕಶ್ಯಪುವಿನ ಎಡಗೈಯಲ್ಲಿ ಗುರಾಣಿ, ಬಲಗೈಯಲ್ಲಿ ಗದೆಯನ್ನು ಹಿಡಿದಿದ್ದರೂ ಅದು ನಿಷ್ಪ್ರಯೋಜಕವಾಗಿದೆ. ಈ ಶಿಲ್ಪವು ಬಿಡಿ ಶಿಲ್ಪವಾಗಿದ್ದು ಬೇರೆಡೆಯಿಂದ ತಂದಿರಿಸಲಾಗಿರುವ ಶಿಲ್ಪವಾಗಿದ್ದರೂ ಕೂಡ ದ್ವಿಮಾನದಲ್ಲಿ ರಚನೆಯಾಗಿದೆ.

ಶಿಲ್ಪ –೧೦

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಹೊರಭಿತ್ತಿಯಲ್ಲಿ ಉಗ್ರನರಸಿಂಹನು ಪಶ್ಚಿಮಾಭಿಮುಖವಾಗಿದ್ದು, ನರಸಿಂಹನು ತನ್ನ ತೊಡೆಯ ಮೇಲೆ ಹಿರಣ್ಯಕಶಿಪುವನ್ನು ಹಾಕಿಕೊಂಡು ಸಂಹರಿಸುತ್ತಿರುವುದು ಕಂಡುಬರುತ್ತದೆ. ನರಸಿಂಹನ ಶಿಲ್ಪದ ಕೆಲವು ಭಾಗ ಭಗ್ನಗೊಂಡಿದೆ. ಮತ್ತು ಹಿರಣ್ಯಕಶಿಪುವಿನ ಶಿಲ್ಪವು ಇದಕ್ಕಿಂತಲೂ ಸವೆದು ಹೋಗಿದೆ. ಅಳಿದುಳಿದ ಗುರುತುಗಳನ್ನು ನೋಡಿ ಶಿಲ್ಪ ಗುರುತಿಸಬಹುದಾಗಿದೆ. ಗೂಡಿನಲ್ಲಿ ರಚಿತವಾದ ಈ ಶಿಲ್ಪವು ದ್ವಿಮಾನದಲ್ಲಿದ್ದು, ನೋಡಲು ಕುತೂಹಲಕಾರಿಯಾಗಿದೆ ಎನ್ನಬಹುದು.

ಶಿಲ್ಪ –೧೧

ಒಂದನೆಯ ಶೈವ ಗುಹಾಲಯದ ಕಂಬವೊಂದರಲ್ಲಿ ಅಯತಾಕಾರದ ವಿನ್ಯಾಸದಲ್ಲಿರುವ ಈ ಶಿಲ್ಪವು ಮೇಲೆ ನೋಡಿದ ಎಲ್ಲ ಉಗ್ರನರಸಿಂಹನ ಶಿಲ್ಪಗಳಿಗಿಂತ ಭಿನ್ನವಾಗಿದೆ. ಮೇಲಿನ ಎಲ್ಲವು ಹಿರಣ್ಯಕಶಿಪುವನ್ನು ಸಂಹರಿಸುತ್ತಿದ್ದರೆ ಈ ಶಿಲ್ಪದಲ್ಲಿ ಕುಳಿತಿಕುಂಡಂತೆ ಕೆತ್ತಲಾಗಿದೆ. ಚತುರ್ಭುಜವುಳ್ಳ ಈ ಶಿಲ್ಪದ ಇಬ್ಬದಿಗಳಲ್ಲಿ ಕುಬ್ಜಗಣಗಳಿದ್ದು, ಆಕರ್ಷಿತವಾಗಿದೆ.

ಉಗ್ರನರಸಿಂಹ ಶಿಲ್ಪಗಳು



ಶಿಲ್ಪ-೧. ಮೇಗಣ ಶಿವಾಲಯ, ಬಾದಾಮಿ



ಶಿಲ್ಪ-೨. ಪಂಚಲಿಂಗ ಬಂಡೆ, ಬಾದಾಮಿ



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಮಹಾಕೂಟ



ಶಿಲ್ಪ-೪. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು

ಉಗ್ರನರಸಿಂಹ ಶಿಲ್ಪಗಳು



ಶಿಲ್ಪ-೫. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೬. ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೭. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೮. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು


ಉಗ್ರನರಸಿಂಹ ಶಿಲ್ಪಗಳು



ಶಿಲ್ಪ-೯. ವಿರೂಪಾಕ್ಷ ದೇವಾಲಯ, ಐಹೊಳೆ




ಶಿಲ್ಪ-೧೦. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೧. ಒಂದನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೧೨. ವಿರೂಪಾಕ್ಷ ದೇವಾಲಯ, ಐಹೊಳೆ



ಶಿಲ್ಪ-೧೩. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ

ನರಸಿಂಹನ ಹಿಂದಿನ ಕೈಗಳ ಒಂದರಲ್ಲಿ ಚಕ್ರ, ಇನ್ನೊಂದರಲ್ಲಿ ಶಂಕವನ್ನು ಹಿಡಿದಿದ್ದು, ಬಲಗೈಯನ್ನು ತನ್ನ ಮೊಣಕಾಲಿನ ಮೇಲಿಟ್ಟು ಗಂಭೀರವಾಗಿ ಕುಳಿತುಕೊಂಡಿದೆ. ಎಡಗೈ ತನ್ನ ತೊಡೆಯ ಮೇಲಿದೆ. ಈ ಶಿಲ್ಪ ಆಯತಾಕಾರದ ಚಿಕ್ಕಗಾತ್ರದ ಪಟ್ಟಿಕೆಯಲ್ಲಿದ್ದರೂ ಉಬ್ಬುತನದಿಂದ ಕೂಡಿದ ಶಿಲ್ಪ ಇದಾಗಿದೆ. ಇಲ್ಲಿ ಸಂಹರಿಸದೇ ಕುಳಿತುಕೊಂಡಿರುವುದು ಈ ಶಿಲ್ಪದ ವಿಶೇಷವಾಗಿದೆ.

ಶಿಲ್ಪ –೧೨

ಐಹೊಳೆ ವಿರೂಪಾಕ್ಷ ದೇವಾಲಯದ ಬೋಧಿಗೆಯಲ್ಲಿ ಚತುರ್ಭುಜ ಉಗ್ರನರಸಿಂಹನ ಶಿಲ್ಪವಿದೆ. ಈ ಶಿಲ್ಪದಲ್ಲಿ ಹಿರಣ್ಯಕಶಿಪುವಿನ ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ನರಸಿಂಹನು ತನ್ನ ಎಡಗೈಯಿಂದ ಹಿರಣ್ಯಕಶಿಪುವನ್ನು ಹಿಡಿದಿದ್ದಾನೆ. ಈ ಶಿಲ್ಪದಲ್ಲಿ ಉಗ್ರನರಸಿಂಹನ ತಲೆಯು ಅಳತೆಗಿಂತ ದೊಡ್ಡದಾಗಿದ್ದು, ಭಯಾನಕಬರುವಂತೆ ಕೆತ್ತಲಾಗಿದೆ. ಈ ಶಿಲ್ಪವು ಗಾತ್ರದಲ್ಲಿ ಸ್ವಲ್ಪ ಕುಗ್ಗಿದಂತೆ ಕಾಣುತ್ತಿದ್ದು, ಚಿಕ್ಕದಾದರೂ ಅಧ್ಯಯನಕ್ಕೆ ಯೋಗ್ಯವಾಗಿದೆ.

ಶಿಲ್ಪ –೧೩

ಬಾದಾಮಿ ಮೂರನೆಯ ವೈಷ್ಣವ ಗುಹಾಲಯದ ಬೋಧಿಗೆಯೊಂದರಲ್ಲಿ ಹಿರಣ್ಯಕಶಿಪುವನ್ನು ಉಗ್ರನರಸಿಂಹನು ಸಂಹಾರ ಮಾಡುತ್ತಿರುವ ಈ ಶಿಲ್ಪವು ತೆಳು ಉಬ್ಬುಶಿಲ್ಪವಾಗಿದೆ. ಆಯತಾಕಾರದ ಪಟ್ಟಿಕೆಯಲ್ಲಿ ರಚಿಸಿದ್ದು, ನರಸಿಂಹನ ಇಬ್ಬದಿಗಳಲ್ಲಿ ಮತ್ತು ಹಿಂಭಾಗದಲ್ಲಿ ಚಿಕ್ಕಗಾತ್ರದ ಶಿಲ್ಪಗಳಿದ್ದು, ಆಕರ್ಷಿತವಾಗಿವೆ. ಈ ಶಿಲ್ಪದ ಕೆಲಭಾಗವು ಸವೆದು ಹೋದ ಕಾರಣ ಅಸ್ಪಷ್ಟವಾಗಿದೆ.

ತ್ರಿಮೂರ್ತಿ ಶಿಲ್ಪಗಳು

ಶಿಲ್ಪ –೧

ಬಾದಾಮಿಯ ಭೂತನಾಥ ದೇವಾಲಯದ ಪಂಚಲಿಂಗ ಬಂಡೆಯಲ್ಲಿ ಸಾಲಾಗಿ ಕೆತ್ತಲಾಗಿರುವ ಶಿಲ್ಪಗಳಲ್ಲಿ ಇನ್ನೊಂದು ತ್ರಿಮೂರ್ತಿಗಳ ಶಿಲ್ಪ ಇದೆ. ಇಲ್ಲಿ ಬ್ರಹ್ಮ, ವಿಷ್ಣು ಮತ್ತು ಈಶ್ವರ ಶಿಲ್ಪಗಳು ಒಂದೇ ಪಟ್ಟಿಕೆಯಲ್ಲಿದ್ದು, ಕೆತ್ತಲ್ಪಟ್ಟಿವೆ. ಈ ರೀತಿಯಲ್ಲಿ ಒಂದೇ ಸಾಲಿನಲ್ಲಿ ಬಿಡಿಯಾಗಿ ಕೆತ್ತಲಾಗಿರುವ ಶಿಲ್ಪಗಳು ಚಾಲುಕ್ಯರ ಕಾಲದ ಕೆತ್ತನೆಗಳಲ್ಲಿ ಅಪರೂಪವಾಗಿ ಕಂಡುಬರುತ್ತವೆ. ಮೂರೂ ಶಿಲ್ಪಗಳು ಸಮಭಂಗಿಯಲ್ಲಿ ನಿಂತಿದ್ದು ತಮ್ಮ ಆಯುಧಗಳೊಂದಿಗೆ ಕಂಡುಬರುತ್ತವೆ. ಮಧ್ಯಭಾಗದಲ್ಲಿ ಶಿವನಿದ್ದು, ಅವನ ಎಡ–ಬಲಗಳಲ್ಲಿ ಬ್ರಹ್ಮ ಮತ್ತು ವಿಷ್ಣುವು ನಿಂತಿದ್ದಾರೆ. ಬ್ರಹ್ಮನ ಮೂರು ತಲೆಗಳು ಇಲ್ಲಿ ಕಂಡುಬರುತ್ತವೆ. ಆತನ ಮೇಲಿನ ಬಲಗೈಯಲ್ಲಿ ಜಪಮಾಲೆಯಿದೆ. ಕೆಳಗಿನ ಎಡಗೈ ಕಟ್ಯವಲಂಬಿತವಾಗಿದ್ದು ಬಲ ಕೆಳಗೈಯು ವರದ ಹಸ್ತದಲ್ಲಿದೆ.

ಕಟಿವಸ್ತ್ರ, ಉತ್ತರೀಯ, ಪಂಚೆಗಳನ್ನು ಹೊಂದಿದ್ದು ಜಟಾಮುಕುಟಧಾರಿಯಾಗಿದ್ದಾನೆ. ಮುಖಭಾವವು ಶಾಂತತೆಯನ್ನು ವ್ಯಕ್ತಪಡಿಸುತ್ತದೆ.

ಸರಳ ಕೆತ್ತನೆಯಿಂದ ಕೂಡಿದ ಶಿಲ್ಪವು ಶಿಲ್ಪಕಲಾಭ್ಯಾಸಿಗರಿಗೆ ಉತ್ತಮ ಆಕರವಾಗಿದೆ. ಮಧ್ಯಭಾಗದಲ್ಲಿ ಶಿವನು ಸಮಭಂಗಿಯಲ್ಲಿ ನಿಂತಿದ್ದು, ಆತನ ಮೇಲಿನ ಎಡಗೈಯಲ್ಲಿ ತ್ರಿಶೂಲವಿದೆ. ಬಲಮೇಲಿನ ಕೈಯಲ್ಲಿ ಬಹುಶಃ ದಂಡವಿದೆ. ಕೆಳಗಿನ ಎಡಗೈ ವರದ ಹಸ್ತವಾಗಿದ್ದು ಎಡಗೈಯು ಕಟ್ಯವಲಂಬಿತವಾಗಿದೆ. ಮುಖವು ನೇರವಾಗಿದ್ದು, ಜಟಾಮುಕುಟವನ್ನು ಹೊಂದಿದೆ. ಮುಖವು ಶಾಂತವಾಗಿದ್ದು ಯೋಗಿಭಾವವು ಕಾಣಬರುತ್ತದೆ. ಬ್ರಹ್ಮನ ಶಿಲ್ಪಕ್ಕೆ ಹೋಲಿಸಿದರೆ ಈ ಶಿಲ್ಪವು ಹೆಚ್ಚು ಪೂರ್ಣತೆಯನ್ನು ಹೊಂದಿದೆಯೆನ್ನಬಹುದು. ಅಗಲವಾದ ತೋಳುಗಳು, ವಿಶಾಲ ವಕ್ಷಃಸ್ಥಳ, ಸಪೂರವಾದ ಕಟಿಪ್ರದೇಶ, ನೀಳದಾದ ಕಾಲುಗಳು, ಪ್ರಮಾಣಬದ್ಧವಾದ ದೇಹರಚನೆಗಳು ಶಿಲ್ಪಕ್ಕೆ ಸೌಂದರ್ಯವನ್ನು ತಂದುಕೊಟ್ಟಿವೆ.

ತ್ರಿಮೂರ್ತಿಗಳ ಸಾಲಿನ ಇನ್ನೊಂದು ಶಿಲ್ಪ ವಿಷ್ಣುವಿನದು. ಶಿವನ ಎಡಭಾಗದಲ್ಲಿ ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಶಿಲ್ಪವು ಮೊದಲು ಹೇಳಿದ ಶಿಲ್ಪಕ್ಕಿಂತ ಭಿನ್ನವಾದುದಾಗಿದೆ. ಶಿಲ್ಪವು ಕೊಂಚ ಬಲಕ್ಕೆ ವಾಲಿದಂತಿದ್ದು ಮುಖವೂ ಕೂಡಾ ಅದಕ್ಕೆ ಪೂರಕವಾಗಿರುವಂತೆ ಮಧ್ಯದ ಶಿಲ್ಪದ ಕಡೆಗೆ ಗಮನಿಸುವಂತಿದೆ. ವಿಷ್ಣುವಿನ ಎಡ ಕೆಳಗಿನ ಕೈ ಕಟ್ಯವಲಂಬಿತವಾಗಿದೆ. ವಿಷ್ಣುವಿನ ತಲೆಯ ಮೇಲೆ ಕಿರೀಟಮುಕುಟವಿದೆ. ಮೇಲಿನ ಎರಡು ಕೈಗಳಲ್ಲಿ ಶಂಖ, ಚಕ್ರಗಳಿದ್ದು ಕೆಳಗಿನ ಬಲಗೈಯು ಭಗ್ನಗೊಂಡಿರುವುದರಿಂದ ಇದು ಯಾವ ಹಸ್ತಭಂಗಿಯಲ್ಲಿದೆ ಎಂದು ಹೇಳುವುದು ಕಷ್ಟವಾಗಿದೆ. ಆದರೆ ಗದೆಯು ಇಲ್ಲಿ ಇದ್ದಂತೆ ಕಂಡುಬರುವುದಿಲ್ಲ. ಬದಲಾಗಿ ಬ್ರಹ್ಮನಂತೆ ವರದಹಸ್ತ ಅಥವಾ ಫಲವನ್ನು ಕೈಯಲ್ಲಿ ಹಿಡಿದಿರುವಂತೆ ಕೆತ್ತಿರುವ ಸಾಧ್ಯತೆಯಿದೆ. ಆಭರಣಗಳು ಸವೆದುಹೋಗಿದ್ದು ಮೇಲಿನ ಕೈಗಳಲ್ಲಿನ ಆಭರಣಗಳು ಮಾತ್ರ ಕಂಡುಬರುತ್ತವೆ. ಪೀತಾಂಬರಧಾರಿಯಾಗಿರುವ ವಿಷ್ಣುವಿನ ಕಟಿವಸ್ತ್ರವನ್ನು ಕಾಲಿನವರೆಗೂ ಇಳಿಬಿಡಲಾಗಿದೆ. ಸರಳ ಕೆತ್ತನೆಯು ಇಲ್ಲಿ ಕಂಡುಬರುತ್ತದೆ.

ಇಲ್ಲಿನ ಮೂರೂ ಶಿಲ್ಪಗಳನ್ನು ಒಟ್ಟಾಗಿ ಗಮನಿಸಿದಾಗ ಕೆಲವು ಮಹತ್ತರ ಅಂಶಗಳು ಕಂಡುಬರುತ್ತವೆ. ಇಲ್ಲಿನ ಮೂರೂ ಶಿಲ್ಪಗಳಲ್ಲಿ ತ್ರಿಮೂರ್ತಿಗಳ ಪಕ್ಕ ಸಾಮಾನ್ಯವಾಗಿ ಇರುವಂತಹ ಸ್ತ್ರೀಯರಾಗಲಿ, ದೇವರ ವಾಹನಗಳಾಗಲಿ ಕಂಡುಬರುವುದಿಲ್ಲ. ಶಿಲ್ಪದ ಸುತ್ತಲಿನ ಭಾಗದಲ್ಲಾಗಲಿ, ಹಿಂದುಗಡೆಯಾಗಲಿ, ಬೇರಾವುದೆ ರೀತಿಯ ಕೆತ್ತನೆಗಳಿಲ್ಲ. ಶಿಲ್ಪಗಳಲ್ಲಿ ಅಲಂಕಾರಕ್ಕೆ ಒತ್ತು ನೀಡಿಲ್ಲ. ಸರಳವಾಗಿ ದೇವತೆಗಳನ್ನಷ್ಟೇ ಇಲ್ಲಿ ಕೆತ್ತಲಾಗಿದೆ. ಶಿಲ್ಪಪಟ್ಟಿಕೆಯ ಎಡ–ಬಲಗಳಲ್ಲಿ ಕಂಬದ ಕೆತ್ತನೆಯಿದ್ದು ಇದು ಕೂಡಾ ಸರಳವಾಗಿ ಕೆತ್ತಲ್ಪಟ್ಟಿದೆ. ಶಿಲ್ಪಪಟ್ಟಿಕೆಯ ಎಡಭಾಗದಲ್ಲಿ ಇನ್ನೊಂದು ಸಣ್ಣ ಗುಡಿಯನ್ನು ಕೆತ್ತಲಾಗಿದ್ದು, ಇದರಲ್ಲಿ ಶಿವಲಿಂಗವನ್ನು ಕೂಡಾ ಕೆತ್ತಲಾಗಿದೆ. ಬಲಭಾಗದಲ್ಲಿ ವರಾಹಮೂರ್ತಿಯ ಕೆತ್ತನೆಯಿದ್ದು ಇದರ ಪಕ್ಕದಲ್ಲಿ ಗಣಪತಿಯ ಸುಂದರ



ಶಿಲ್ಪವಿದೆ. ಇದಲ್ಲದೆ ಮಹಿಷಾಸುರಮರ್ದಿನಿಯ ಶಿಲ್ಪವನ್ನೂ ಇಲ್ಲಿ ಕೆತ್ತಲಾಗಿರುವುದು ಗಮನಾರ್ಹ. ಅಂದರೆ ಹಿಂದೂಧರ್ಮಕ್ಕೆ ಸಂಬಂಧಿಸಿದಂತಹ ಎಲ್ಲ ಪ್ರಾತಿನಿಧಿಕ ಶಿಲ್ಪಗಳನ್ನಿಲ್ಲಿ ಕೆತ್ತಿರುವುದು ಕಂಡುಬರುತ್ತದೆ. ಈ ಶಿಲ್ಪಪಟ್ಟಿಕೆಯ ಕೆಳಭಾಗದಲ್ಲಿ ಹಲವಾರು ಶಿಲ್ಪಗಳನ್ನೊಳಗೊಂಡ ನಾಗಕನ್ನಿಕೆಯರ ಶಿಲ್ಪಗಳಿವೆ. ಇವುಗಳು ಗಾತ್ರದಲ್ಲಿ ಸಣ್ಣವಾಗಿದ್ದರೂ ನೋಡಲು ಆಕರ್ಷಕವಾಗಿವೆ.

ಶಿಲ್ಪ –೨

ಮಹಾಕೂಟೇಶ್ವರ ದೇವಾಲಯದ ಹಿಂಭಾಗದಲ್ಲಿ ಎರಡು ಅಡಿ ಎತ್ತರದ ಬಿಡಿ ತ್ರಿಮೂರ್ತಿ ಶಿಲ್ಪವನ್ನು ನಿಲ್ಲಿಸಲಾಗಿದೆ. ಇಲ್ಲಿಯೂ ಸಮಭಂಗಿಯಲ್ಲಿ ತ್ರಿಮೂರ್ತಿಗಳನ್ನು ಒಂದೇ ಕಲ್ಲಿನಲ್ಲಿ ರಚಿಸಲಾಗಿದೆ. ಎಲ್ಲ ಶಿಲ್ಪಗಳ ಬಲಗೈ ಮುದ್ರೆಯಲ್ಲಿ ದ್ವಿಮಾನದಲ್ಲಿದ್ದರೆ ಈ ಶಿಲ್ಪದಲ್ಲಿ ಅಧೋವಸ್ತ್ರವು ನೈಜತೆಯ ಭಾವನೆಯನ್ನು ಶಿಲ್ಪಿಯು ತೋರಿಸಿದ್ದಾನೆ.

ಗೋವರ್ಧನಗಿರಿ ಶಿಲ್ಪಗಳು

ಶಿಲ್ಪ –೧

ಬಾದಾಮಿಯ ಮೇಗಣ ಶಿವಾಲಯದಲ್ಲಿರುವ ಶ್ರೀ ಕೃಷ್ಣನು ಗೋವರ್ಧನಗಿರಿಯನ್ನು ಎತ್ತಿ ಹಿಡಿದಿರುವುದು. ಇದು ಕೂಡಾ ಕಥಾನಕ ಶೈಲಿಯಲ್ಲಿದ್ದು ಸುಂದರವಾದ ಅಲಂಕಾರಪೂರ್ಣ ಕೆತ್ತನೆಗಳಿಂದ ಕೂಡಿದ ಶಿಲ್ಪ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಶ್ರೀ ಕೃಷ್ಣನು ವಿವಿಧ ಕಡೆಗಳಲ್ಲಿ ಮೂಡಿಬಂದಿದ್ದರೂ ಇಲ್ಲಿನ ಶಿಲ್ಪವು ವಿಶಿಷ್ಟವಾಗಿದೆ. ಚಾಲುಕ್ಯ ಶಿಲ್ಪಗಳಲ್ಲಿ ಅತ್ಯಂತ ಮಹತ್ವದ ಕೃಷ್ಣನ ಶಿಲ್ಪವೆಂದರೆ ಬಾದಾಮಿಯ ಮೇಲಣ ಶಿವಾಲಯದ ದೇವಕೋಷ್ಠದ ಭಿತ್ತಿಯಲ್ಲಿರುವ ಗೋವರ್ಧನ ಗಿರಿಧಾರಿಯದು. ಆತನು ವಸ್ತ್ರಾಭರಣಗಳಿಂದ ಅಲಂಕೃತನಾಗಿದ್ದಾನೆ. ಪ್ರಕೃತಿಯ ವಿಕೋಪದಿಂದ ಮುಖವು ಭಗ್ನಗೊಂಡಿದೆ. ಹಾಗಾಗಿ ಶಿಲ್ಪದ ಸೌಂದರ್ಯ ಮರೆಯಾಗಿದೆ. ಇಲ್ಲಿ ಕಥಾನಾಯಕನಾದ ಶ್ರೀ ಕೃಷ್ಣನು ಮಧ್ಯಭಾಗದಲ್ಲಿದ್ದು ಸುತ್ತಲೂ ಗೋವುಗಳು ಮತ್ತು ಗೋಪಾಲಕರು ಶಿಲ್ಪಿತರಾಗಿದ್ದಾರೆ.

ಈ ಶಿಲ್ಪದಲ್ಲಿ ಸುತ್ತಲೂ ಕೆತ್ತಲಾಗಿರುವ ಗೋವುಗಳು, ಹಾಲು ಕುಡಿಯುತ್ತಿರುವ ಕರು, ಅದರ ಮೇಲುಭಾಗದಲ್ಲಿ ಗೋಪಾಲಕರು, ಶಿಲ್ಪದ ಬಲಭಾಗದಲ್ಲಿ ಮೊಸರು ಕಡೆಯುತ್ತಿರುವ ಗೋಪಿಕೆ, ಇತ್ಯಾದಿ ಶಿಲ್ಪಗಳಿವೆ. ಮಧ್ಯದಲ್ಲಿ ಕೃಷ್ಣನು ತನ್ನ ಬಲಗೈಯಲ್ಲಿ ಪರ್ವತವನ್ನು ಎತ್ತಿ ಹಿಡಿದಿದ್ದಾನೆ. ಆತನ ಎಡಗೈಯು ತೊಡೆಯ ಮೇಲಿದೆ. ಮುಖವು ಭಗ್ನಗೊಂಡಿದ್ದು ಪರ್ವತದ ಸಂದಿನಿಂದ ಎರಡು ಮುಖಗಳು ಇಣುಕಿ ನೋಡುತ್ತಿದ್ದ ಶಿಲ್ಪದಲ್ಲಿ ಲಘು ಹಾಸ್ಯಭಾವವನ್ನು ಮೆರೆದಿದೆ. 'ದಕ್ಷಿಣ ಗೋಡೆಯಲ್ಲಿರುವ ಗೋವರ್ಧನಧಾರಿ ಕೃಷ್ಣನ ಉಬ್ಬುಶಿಲ್ಪ ಬಹಳಷ್ಟು ನಾಶವಾಗಿದ್ದರೂ ಬಲು ಸುಂದರ ಕೃತಿಯಾಗಿದೆ. ಕೃಷ್ಣ ಬಲಗೈಯಿಂದ ಗೋವರ್ಧನ ಗಿರಿಯನ್ನೆತ್ತಿ ಎಡಗೈಯನ್ನು ಸೊಂಟದ ಸಮೀಪ ಇರಿಸಿದ್ದಾನೆ. ಗಿರಿಯ ಭಾರ ಅವನ ಮೇಲೆ ಪರಿಣಾಮ



ಬೀರಿದಂತಿಲ್ಲ. ಕಿರೀಟ, ಯಜ್ಞೋಪವೀತ ಮುಂತಾದ ಆಭರಣಗಳಿದ್ದು ಕಾಲಿನವರೆಗೆ ವಸ್ತ್ರ ಇರುವುದು ಕಂಡುಬರುತ್ತದೆ'.


ಶ್ರೀ ಕೃಷ್ಣನು ಮೈ ತುಂಬ ಆಭರಣಗಳನ್ನು ಹೊಂದಿದ್ದಾನೆ. ಮುಂಗೈಯಲ್ಲಿ ಮೂರು ಬಳೆಗಳು, ಮುತ್ತುಗಳಿಂದ ಕೂಡಿದ ಯಜ್ಞೋಪವೀತ, ಉದರಬಂಧ, ಒಡ್ಯಾಣ, ಮೇಖಲೆ, ಎದೆಹಾರ, ಮುತ್ತಿನ ಸರ, ಹೀಗೆ ವಿವಿಧ ಆಭರಣ ಭೂಷಿತನಾಗಿದ್ದಾನೆ. ತಲೆಯಲ್ಲಿ ಮುತ್ತು ರತ್ನ ಖಚಿತವಾದ ಕಿರೀಟವನ್ನು ಹೊಂದಿದ್ದಾನೆ. ಆದರೆ ಸಾಮಾನ್ಯವಾಗಿ ಶ್ರೀ ಕೃಷ್ಣನ ಕೈಯಲ್ಲಿ ಕಂಡುಬರುವ ಕೊಳಲು ಇಲ್ಲಿ ಕಾಣಿಸುವುದಿಲ್ಲ. ಪರ್ವತವನ್ನು ವಿವಿಧ ಜ್ಯಾಮಿತಿಕ ವಿನ್ಯಾಸಗಳಿಂದ ಕೆತ್ತಿ ತೋರಿಸಿರುವುದು ಗಮನಾರ್ಹವಾಗಿದೆ. ಪ್ರತಿಯೊಂದು ಆಭರಣವನ್ನು ವಿಶಿಷ್ಟವಾಗಿ ಕೆತ್ತಿದ್ದು ಇದು ಈ ಕಲಾವಿದರ ಕಲಾತ್ಮಕತೆಯನ್ನು ವ್ಯಕ್ತಪಡಿಸುತ್ತದೆ. ಹಿಂಭಾಗದಲ್ಲಿರುವ ಗೋಪಾಲಕರ ಮುಖದಲ್ಲಿರುವ ಮಂದಹಾಸವನ್ನು ಇಲ್ಲಿ ಗಮನಿಸಬಹುದು. ಪ್ರತಿಯೊಂದು ಗೋವು ಕೂಡಾ ವಿಶಿಷ್ಟ ಭಂಗಿಯಲ್ಲಿದ್ದು ಆಕರ್ಷಕವಾಗಿವೆ.

ಇಲ್ಲಿನ ಶಿಲ್ಪವನ್ನು ವಿಮರ್ಶಕರ ದೃಷ್ಟಿಕೋನದಿಂದ ನೋಡಿದಾಗ ಕೆಲವೊಂದು ಊಹೆಗಳು ಕಂಡುಬರಬಹುದು. ಮುಖ್ಯವಾಗಿ ಅಂಗರಚನಾ ಶಾಸ್ತ್ರವನ್ನು ಗಮನಿಸಿದಾಗ, ಅಥವಾ ಶಿಲ್ಪದ ಸಂಯೋಜನಾ ತಂತ್ರವನ್ನು ನೋಡಿದಾಗ ಹಲವಾರು ಮಹತ್ವದ ಅಂಶಗಳು ಇಲ್ಲಿ ನೋಡಲು ಸಿಗುತ್ತವೆ. ಈ ಶಿಲ್ಪವು ಹಲವಾರು ಕಾರಣಗಳಿಂದಾಗಿ ಮುಖ್ಯವಾಗುತ್ತದೆ. ಶಿಲ್ಪವನ್ನು ಕೆತ್ತಿದ ರೀತಿ, ಕಥಾಚಿತ್ರಣದ ಶೈಲಿ, ಸಂಯೋಜನೆ ಇತ್ಯಾದಿಗಳು ಗಮನ ಸೆಳೆಯುತ್ತವೆ.

ಡಾ. ಶೀಲಾಕಾಂತ ಪತ್ತಾರರು ಈ ಶಿಲ್ಪದ ಕುರಿತಾಗಿ ಹಲವಾರು ಮಹತ್ವದ ವಿಚಾರಗಳನ್ನು ತಿಳಿಸುತ್ತಾರೆ. 'ಇದರ ಮೇಲ್ಭಾಗ ಮತ್ತು ಕೆಳಭಾಗ ಶಿಲ್ಪವಿಲ್ಲದೆ ಖಾಲಿಯಾಗಿದೆ. ಇದರಿಂದ ಶಿಲ್ಪದ ಕಲಾಮೌಲ್ಯ ಕುಗ್ಗಿದೆ ಎನ್ನಬಹುದು. ಕೃಷ್ಣನ ಎಡಗೈ ಬೆರಳುಗಳು ಪ್ರಮಾಣ ಮೀರಿ ದೊಡ್ಡದಾಗಿವೆ. ದ್ವಿಬಾಹು ಕೃಷ್ಣನು ಗೋವರ್ಧನ ಪರ್ವತವನ್ನು ಎತ್ತಿ ಹಿಡಿದಿದ್ದಾನೆ. ಆತನು ಸುಂದರವಾದ ಉಡುಪುಗಳಿಂದ ಅಲಂಕೃತನಾಗಿದ್ದಾನೆ. ಪರ್ವತದ ಕೆಳಗೆ ಸ್ತ್ರೀಯೊಬ್ಬಳು ಮಜ್ಜಿಗೆ ಕಡೆಯುವ ದೃಶ್ಯವಿದೆ. ಇದರಿಂದ ಕೃಷ್ಣನು ಪರ್ವತವನ್ನು ಎತ್ತಿಹಿಡಿದು ಒಂದೆರಡು ದಿನಗಳಾದರೂ ಕಳೆದಿರಬಹುದೆಂದು ತಿಳಿಯಬಹುದು.

ಭಾಗವತ ಪುರಾಣದಲ್ಲಿ ಆತನು ವಾರವಿಡಿ ಗಿರಿಯನ್ನು ಎತ್ತಿ ಹಿಡಿದನೆಂದು ಹೇಳಲಾಗಿದೆ. ಹೀಗೆ ಶಿಲ್ಪದಲ್ಲಿ ಕಲಾವಿದರು ಸಮಯವನ್ನು ಸೂಚಿಸಿದ ತಂತ್ರ ಗಮನಿಸುವಂಥದು.[೨೭] ಈ ದೃಷ್ಟಿಯಿಂದ ಈ ಶಿಲ್ಪವನ್ನು ಗಮನಿಸಿದಾಗ ಇಲ್ಲಿನ ಶಿಲ್ಪಗಳಲ್ಲಿ ಕಥಾನಕದ ಉದ್ದೇಶವು ಇಲ್ಲಿನ ಶಿಲ್ಪಿಗಳಲ್ಲಿತ್ತೆಂದು ಊಹಿಸಬಹುದು. ಬಾದಾಮಿಯ ಶಿಲ್ಪಿಗಳು ಹೆಚ್ಚಾಗಿ ಪುರಾಣ ಅಥವಾ ಮಹಾಕಾವ್ಯಗಳನ್ನು ಚಿತ್ರಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದರೆಂದು

೨೭. ಡಾ. ಶೀಲಾಕಾಂತ ಪತ್ತಾರ. ಬಾದಾಮಿ ಸಾಂಸ್ಕೃತಿಕ ಅಧ್ಯಯನ. ಪುಟ. ೨೦೬



ಊಹಿಸಬಹುದು. ಅಂತಹ ಕೆಲ ಶಿಲ್ಪಗಳು ಈ ದೇವಾಲಯದಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ರಾಮಾಯಣ ಮತ್ತು ಮಹಾಭಾರತದ ಕುರಿತಾದ ಶಿಲ್ಪಗಳು ಇಲ್ಲಿವೆ. ಇದೇ ದೇವಾಲಯದ ಪಶ್ಚಿಮ ಗೋಡೆಯಲ್ಲಿ ಕಾಳೀಯ ದಮನ ಮಾಡುತ್ತಿರುವ ಕೃಷ್ಣನ ಶಿಲ್ಪವಿದೆ. ಹಲವಾರು ಸುಂದರವಾದ ಕುಬ್ಜಗಣಗಳ ಶಿಲ್ಪಗಳು ಇಲ್ಲಿ ಗಮನ ಸೆಳೆಯುತ್ತವೆ. ಈ ಶಿಲ್ಪಗಳಲ್ಲಿ ಹಲವಾರು ಕ್ರಿಯೆಗಳಲ್ಲಿ ನಿರತರಾಗಿರುವ ಗಣ ಶಿಲ್ಪಗಳಿವೆ. ಲಘುಹಾಸ್ಯ ಮನೋಭಾವದ ಈ ಶಿಲ್ಪಗಳು ನೋಡಲು ಆಕರ್ಷಕವಾಗಿದ್ದು ಚಲನೆಯ ಭಾವವನ್ನು ವ್ಯಕ್ತಪಡಿಸುತ್ತವೆ.

ಇಲ್ಲಿರುವ ಹಲವಾರು ಭಿತ್ತಿಶಿಲ್ಪಗಳು ಮುಖ್ಯವಾಗಿ ರಾಮಾಯಣ ಮತ್ತು ಮಹಾಭಾರತದ ಕುರಿತಾದ ಶಿಲ್ಪಗಳು ಗಮನ ಸೆಳೆಯುತ್ತವೆ. ಮಹಾಕಾವ್ಯವನ್ನು ನಿರೂಪಣಾತ್ಮಕವಾಗಿ ಈ ಶಿಲ್ಪಗಳಲ್ಲಿ ಕೆತ್ತಲಾಗಿದೆ. ಇದಲ್ಲದೆ ಮಹಿಷಾಸುರನನ್ನು ವಧಿಸುತ್ತಿರುವ ಚಾಮುಂಡೇಶ್ವರಿಯನ್ನು ಕೂಡಾ ಕೆತ್ತಲಾಗಿದೆ. ಇದರಲ್ಲಿ ಗಮನ ಸೆಳೆಯುವ ಶಿಲ್ಪಗಳಲ್ಲಿ ಒಂದು, ರಾಮ–ರಾವಣರ ಯುದ್ಧ, ಇಲ್ಲಿ ಇಬ್ಬರೂ ರಥಾರೂಢರಾಗಿ ಬಿಲ್ಲು–ಬಾಣಗಳ ಮೂಲಕ ಹೋರಾಡುವ ಶಿಲ್ಪವನ್ನಿಲ್ಲಿ ನೋಡಬಹುದು. ಆದರೆ ಇಲ್ಲಿ ರಾವಣನಿಗೆ ಹತ್ತು ತಲೆಗಳಿಲ್ಲ, ಬದಲಾಗಿ ಒಂದೇ ಶಿರಸ್ಸನ್ನು ಹೊಂದಿರುವ ರಾವಣನ ಪರಾಕ್ರಮ ನೋಡುವಂತಿದೆ.

ಸುತ್ತಲೂ ಹಲವಾರು ಸೈನಿಕರಿರುವುದನ್ನು ಕೂಡಾ ಗಮನಿಸಬಹುದು. ಇಂತಹುದೆ ಇನ್ನೊಂದು ಶಿಲ್ಪದಲ್ಲಿ ರಾಜನು ತನ್ನ ಪರಿವಾರದೊಂದಿಗೆ (ಆರಾಮಾಸನದಲ್ಲಿ) ಕುಳಿತಿರುವ ಶಿಲ್ಪವಿದೆ. ಇಲ್ಲಿ ರಾಜನು ಮಧ್ಯದಲ್ಲಿ ಆಸೀನನಾಗಿದ್ದು ಆತನ ಅರಸಿ ಅವನ ಪಕ್ಕದಲ್ಲಿ ನಿಂತಿದ್ದಾಳೆ. ರಾಜನು ಎತ್ತರದ ಪೀಠದ ಮೇಲೆ ಕುಳಿತಿದ್ದಾನೆ. ಇವರ ಎಡ–ಬಲಗಳಲ್ಲಿ ಇಬ್ಬರು ಸೈನಿಕರು ವೀರಾಸನದಲ್ಲಿ ಕುಳಿತಿದ್ದಾರೆ. ಪಕ್ಕದಲ್ಲಿ ಕೆಲ ಸೇವಕಿಯರು ನಿಂತಿದ್ದಾರೆ. ರಾಜನು ಕಿರೀಟಮುಕುಟವನ್ನು ಹೊಂದಿದ್ದು ಆಕರ್ಷಕವಾಗಿದೆ. ಸೈನಿಕರು ಕೈಯಲ್ಲಿ ದಂಡಗಳನ್ನು ಎತ್ತಿ ಹಿಡಿದಿದ್ದಾರೆ. ಶಿಲ್ಪವು ಸಣ್ಣದಾಗಿದ್ದರೂ ಗಮನ ಸೆಳೆಯುತ್ತದೆ. ಬಹುಶಃ ಇದು ಆಗ ಆಡಳಿತ ಮಾಡುತ್ತಿದ್ದ ರಾಜನ ಶಿಲ್ಪವೇ ಇರಬಹುದು. ಇಲ್ಲಿ ಭಿತ್ತಿಶಿಲ್ಪಗಳಲ್ಲಿನ ವ್ಯಕ್ತಿಗಳ ಶಿಲ್ಪಗಳು ಸರಳವಾಗಿದ್ದು ಗಮನ ಸೆಳೆಯುತ್ತವೆ.

ಶಿಲ್ಪ –೨

ಪಾಪನಾಥ ದೇವಾಲಯದ ಎಡಭಾಗದ ಅರ್ಧ ಮಂಟಪದ ಕಂಬದಲ್ಲಿ ಪೂರ್ವಾಭಿಮುಖವಾಗಿರುವ ಇಲ್ಲಿನ ಇನ್ನೊಂದು ಕುತೂಹಲಕಾರಿ ಶಿಲ್ಪವೆಂದರೆ ಗೋವರ್ಧನ ಗಿರಿಧಾರಿ ಕೃಷ್ಣನ ಶಿಲ್ಪ. ಕೃಷ್ಣನ ಶಿಲ್ಪಗಳು ಚಾಲುಕ್ಯರ ಕಾಲದಲ್ಲಿ ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತವೆ. ಅದರಲ್ಲಿಯೂ ಬಿಡಿಶಿಲ್ಪಗಳಾಗಿ ಕೃಷ್ಣನ ಶಿಲ್ಪಗಳು ಕಡಿಮೆ. ಅಂಥ ಶಿಲ್ಪಗಳಲ್ಲೊಂದು ಇಲ್ಲಿ ಗಮನಿಸಬಹುದಾದದ್ದು ಗೋವರ್ಧನ ಶ್ರೀ ಕೃಷ್ಣ. ಇಲ್ಲಿ ಕೆತ್ತಲಾಗಿರುವ



ಗೋವರ್ಧನಧಾರಿ ಕೃಷ್ಣನು ಬಾಲಕೃಷ್ಣನಾಗಿಲ್ಲ, ಬದಲಾಗಿ ಪ್ರೌಢನಿದ್ದಾನೆ. ಸಾಮಾನ್ಯವಾಗಿ ಕೃಷ್ಣನ ಕೈಯಲ್ಲಿ ಇರಬೇಕಾಗಿದ್ದ ಕೊಳಲು ಇಲ್ಲ. ಕೆಳಗಿನ ಎಡಗೈ ಭಗ್ನವಾಗಿದ್ದು ಅದರಲ್ಲಿಯೂ ಕೊಳಲು ಇದ್ದಿರಬಹುದಾದ ರೀತಿಯ ಕೆತ್ತನೆಯಿಲ್ಲ. ಇಲ್ಲಿನ ಕೃಷ್ಣ ತನ್ನ ಮೇಲಿನ ಬಲಗೈಯಲ್ಲಿ ಚಕ್ರ ಹಿಡಿದಿರುವುದು ಕುತೂಹಲಕಾರಿಯಾದ ಅಂಶ. ನಾಲ್ಕು ಕೈಗಳ ಇಲ್ಲಿನ ಶ್ರೀ ಕೃಷ್ಣ ಎರಡು ಕೈಗಳನ್ನು ಮೇಲೆತ್ತಿದ್ದಾನೆ. ಎರಡು ಕೈಗಳನ್ನು ಸೊಂಟದ ಮೇಲಿರಿಸಿಕೊಂಡಿದ್ದಾನೆ. ಮೇಲೆತ್ತಲಾಗಿರುವ ಬಲಗೈಯಲ್ಲಿ ಚಕ್ರ ಹಿಡಿದಿದ್ದರೆ ಎಡಗೈಯಲ್ಲಿ ಗೋವರ್ಧನ ಪರ್ವತವನ್ನು ಎತ್ತಿ ಹಿಡಿದಿದ್ದು. ಇಲ್ಲಿನ ಶಿಲ್ಪದಲ್ಲಿ ಮುಖ್ಯವಾಗಿ ಕಂಡುಬರುವುದು.

ಈ ಶಿಲ್ಪವನ್ನು ಇನ್ನುಳಿದ ಶಿಲ್ಪಗಳಿಗೆ ಹೋಲಿಸಿದರೆ ಬಹಳ ಕಲಾತ್ಮಕವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ದೇಹಾಕಾರದ ಕೆತ್ತನೆಯಲ್ಲಾಗಲಿ, ಕುಸುರಿ ಕೆತ್ತನೆಯಲ್ಲಿ ಅಥವಾ ಪ್ರಮಾಣಬದ್ಧವಾದ ಅಂಗರಚನೆಯಲ್ಲಾಗಲೀ, ಅಥವಾ ವಿವರಣೆಗಳ ನಿರೂಪಣೆಯಲ್ಲಾಗಲೀ ಈ ಶಿಲ್ಪವು ಕೊರತೆಯಿರುವುದನ್ನು ತೋರಿಸಿಕೊಡುತ್ತದೆ. ಹಾಗೆಂದು ಶಿಲ್ಪವು ಹೊಸಬರ ರಚನೆಯೆಂದು ಹೇಳುವಂತಿಲ್ಲ ಎಂಬಂತಿದೆ. ಅಂದರೆ ಒಟ್ಟು ಶಿಲ್ಪದ ರಚನೆಯನ್ನು ಗಮನಿಸಿದಾಗ ಚಾಲುಕ್ಯರ ಉಳಿದ ಗೋವರ್ಧನಗಿರಿಧಾರಿ ಕೃಷ್ಣನ ಶಿಲ್ಪಗಳಿಗೆ ಹೋಲಿಸಿದರೆ ಈ ಶಿಲ್ಪದಲ್ಲಿ ಕೊರತೆಗಳು ಕಂಡುಬರುತ್ತವೆ.

ಇಲ್ಲಿನ ಗೋವುಗಳನ್ನು ತೀರಾ ಸಣ್ಣ ಆಕಾರದಲ್ಲಿ ತೆಳು ಉಬ್ಬು ಶಿಲ್ಪಗಳಲ್ಲಿ ಕೆತ್ತಲಾಗಿದೆ. ಬಾದಾಮಿಯ ಮೇಗಣ ಶಿವಾಲಯದ ಸುಂದರವಾದ ಶಿಲ್ಪಕ್ಕೆ ಇದನ್ನು ಹೋಲಿಕೆ ಮಾಡುವಂತಿಲ್ಲ. ಶಿಲ್ಪದ ಮುಖ್ಯ ವ್ಯಕ್ತಿ ಕೃಷ್ಣನ ಕೆತ್ತನೆಯಲ್ಲಿ ಕಲಾವಿದ ತೋರಿಸಿದ ಆಸಕ್ತಿಯನ್ನು ಉಳಿದ ವಿಚಾರಗಳಲ್ಲಿ ತೋರಿಸಲಿಲ್ಲದಿರಬಹುದು. ಶ್ರೀ ಕೃಷ್ಣನು ತ್ರಿಭಂಗಿಯಲ್ಲಿ ನಿಂತಿದ್ದು, ಕೆಲವು ಆಭರಣಗಳನ್ನು ಧರಿಸಿರುವುದು ಕಂಡುಬರುತ್ತದೆ. ಮುಖವು ದುಂಡಾಕಾರವಾಗಿದೆ. ದೇಹವು ನೀಳವಾಗಿದ್ದು ತೋಳಿನಲ್ಲಿ ನಾಗಬಂಧದ ರೀತಿಯ ತೋಳುಬಂಧಿಯಿದೆ. ಸೊಂಟದಲ್ಲಿ ಮೇಖಲೆ, ಸೊಂಟಪಟ್ಟಿ ಇತ್ಯಾದಿಗಳಿವೆ.

ಶಿಲ್ಪದ ಹೆಚ್ಚಿನ ಭಾಗಗಳು ಸವೆದುಹೋಗಿದ್ದು ಕೆಲ ಭಾಗಗಳು ಭಗ್ನಗೊಂಡಿರುವುದರಿಂದ ಹೆಚ್ಚಿನ ವಿವರಗಳು ಕಾಣಿಸುವುದಿಲ್ಲವಾದರೂ ಈ ಶಿಲ್ಪವು ಇಲ್ಲಿನ ಒಂದು ಗಮನಾರ್ಹವಾದ ರಚನೆ ಎಂಬುದರಲ್ಲಿ ಎರಡು ಮಾತಿಲ್ಲ. ಇದೇ ದೇವಾಲಯದ ಆವರಣದಲ್ಲಿ ಇನ್ನೂ ಕೆಲವು ಸಂಕೀರ್ಣ ಶಿಲ್ಪಗಳಿರುವುದೂ ಕಂಡುಬರುತ್ತದೆ. ಕೆಲವು ಹರಿಹರ, ದ್ವಾರಪಾಲಕ ಇತ್ಯಾದಿ ಶಿಲ್ಪಗಳಾದರೆ ಕೆಲವು ರಾಮಾವತಾರದ ಕಥೆಯವುಗಳಾಗಿವೆ. ಆದರೆ ಇಲ್ಲಿ ರಾಮಾಯಣದ ಕಥೆಯನ್ನು ಅಥವಾ ರಾಮನನ್ನು ದೇವತೆಯಾಗಿ ತೋರಿಸಿದ ಕೆತ್ತನೆಯಿಲ್ಲ. ಆದರೂ ರಾಮನ ಸಾಹಸವನ್ನು ತೋರಿಸುವ ರೀತಿಯ ಶಿಲ್ಪಗಳಾಗಿವೆ. ಇಲ್ಲಿನ ಕೆತ್ತನೆಯೊಂದರಲ್ಲಿ ರಾಮನು ಬಿಲ್ಲು ಹಿಡಿದು ನಿಂತುಕೊಂಡು ವಾಲಿ-ಸುಗ್ರೀವರ ಕಾಳಗವನ್ನು ಗಮನಿಸುತ್ತ ಬಾಣ ಬಿಡಲು

ಸಜ್ಜಾಗಿ ನಿಂತ ಶಿಲ್ಪವಿದೆ. ಇಲ್ಲಿ ರಾಮನು ದೂರದಲ್ಲಿ ನಿಂತಿರುವುದನ್ನು ತೋರಿಸುವುದರ ಸಲುವಾಗಿ ಸಣ್ಣಗಾತ್ರದಲ್ಲಿ ಕೆತ್ತಲಾಗಿದ್ದರೆ, ವಾಲಿ–ಸುಗ್ರೀವರನ್ನು ಅದಕ್ಕಿಂತ ದೊಡ್ಡದಾಗಿ ಕೆತ್ತಲಾಗಿದೆ. ಇವರಿಬ್ಬರೂ ಕಾಲೊಳಗೆ ಕಾಲುಹಾಕಿ ಕಾದಾಡುತ್ತಿರುವುದನ್ನು ಸುಂದರವಾಗಿ ನಿರೂಪಿಸಲಾಗಿದೆ. ದೂರದಲ್ಲಿ ಉಳಿದ ಕಪಿಗಳು ಕುತೂಹಲದಿಂದ ಗಮನಿಸುತ್ತಿರುವುದನ್ನು ಕೂಡಾ ಕೆತ್ತಲಾಗಿದೆ.

ಇಂತಹುದೆ ಇನ್ನೊಂದು ಶಿಲ್ಪದಲ್ಲಿ ರಾಮ–ಲಕ್ಷ್ಮಣರು ಜೊತೆಯಾಗಿದ್ದು ರಾಮನು ಬಿಲ್ಲಿನ ಹೆದೆ ಎಳೆದು ಹಿಡಿದುಕೊಂಡಿರುವಂತೆ ಕೆತ್ತಲಾಗಿದೆ. ಇಲ್ಲಿ ಕುತೂಹಲ ಮೂಡಿಸುವ ಅಂಶವೆಂದರೆ ರಾಮಾಯಣವು ವೈಷ್ಣವಧರ್ಮಕ್ಕೆ ಸೇರಿದ ಕಥಾನಕವೆ ಆಗಿದ್ದರೂ ವಿಷ್ಣುವಿನ ಇನ್ನೊಂದು ಅವತಾರವೇ ಆಗಿದ್ದರೂ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ರಾಮನನ್ನು ದೇವರ ರೀತಿಯಲ್ಲಿ ಕೆತ್ತಿರುವ ಶಿಲ್ಪಗಳು ಕಾಣಿಸುವುದಿಲ್ಲ. ರಾಮಾಯಣದ ಕಥಾನಕಗಳನ್ನು ಕೆತ್ತುವಾಗಲೂ ಎಲ್ಲಿಯೂ ವೈಭವೀಕರಿಸಿದಂತೆ ಕಂಡುಬರದಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ.

ಶಿಲ್ಪ –೩

ಎರಡನೇ ವೈಷ್ಣವ ಗುಹಾಲಯದ ಇನ್ನೊಂದು ಶಿಲ್ಪ ಕಾಳಿಂಗಮರ್ದನ ಕೃಷ್ಣನದು. ಇದೂ ಸಣ್ಣಗಾತ್ರದ ಕೆತ್ತನೆಯಾಗಿದ್ದರೂ ಸುಂದರವಾದ ಕೆತ್ತನೆಯನ್ನು ಹೊಂದಿದೆ. ದೇವಾಲಯದ ಮುಖಮಂಟಪದ ಭೋದಿಗೆ ಮೇಲೆ ಕೆತ್ತಲಾಗಿರುವ ಶ್ರೀಕೃಷ್ಣನಿಗೆ ಸಂಬಂಧಿಸಿದ ಹಲವಾರು ಶಿಲ್ಪಗಳಿವೆ. ಅವುಗಳಲ್ಲಿ ಇದೂ ಒಂದು. ಇಲ್ಲಿ ಕೃಷ್ಣನು ಬಾಲಕನಾಗಿದ್ದಾಗ ಕಾಳಿಂಗನ ಸೊಕ್ಕನ್ನು ಮುರಿಯಲು ಯಮುನಾ ನದಿಯೊಳಗೆ ಧುಮುಕಿ ಕಾಳಿಂಗನನ್ನು ಮೆಟ್ಟಿ ಆತನ ಗರ್ವಭಂಗ ಮಾಡುವ ದೃಶ್ಯವನ್ನು ಕೆತ್ತಲಾಗಿದೆ. ಆದರೆ ಒಂದು ವಿಶೇಷವೆಂದರೆ ಎಲ್ಲೆಡೆಗಳಲ್ಲಿ ನಾವು ಶ್ರೀ ಕೃಷ್ಣನು ಹಾವಿನ ಹೆಡೆಯೇರಿ ನಿಂತುಕೊಂಡಿರುವ ದೃಶ್ಯವನ್ನು ನೋಡಿದರೆ ಇಲ್ಲಿ ಕಾಳಿಂಗನೊಡನೆ ಸೆಣಸಾಡುತ್ತಿರುವ ದೃಶ್ಯವಿದೆ. ಸುತ್ತಲೂ ನೀರಿನ ಅಲೆಗಳನ್ನು ಕೆತ್ತಲಾಗಿದೆ.

ಬಾಲಕೃಷ್ಣನು ದುಂಡುದುಂಡಾಗಿದ್ದು ಹಾವಿನೊಂದಿಗೆ ಆಟವಾಡುತ್ತಿರುವಂತಿದೆ. ಇಲ್ಲಿ ಹಾವಿನ ರೂಪ, ನೀರಿನ ಅಲೆಗಳ ಗಂಭೀರತೆಯನ್ನು ಶಿಲ್ಪಿಯು ಸುಂದರವಾಗಿ ಕೆತ್ತಿರುವುದು ಕಂಡುಬರುತ್ತದೆ. ಈ ಗುಹಾಲಯದಲ್ಲಿ ಶ್ರೀಕೃಷ್ಣನ ಜೀವನದ ಹಲವಾರು ದೃಶ್ಯಗಳನ್ನು ಕೆತ್ತಲಾಗಿದ್ದು ಗಮನ ಸೆಳೆಯುತ್ತವೆ. 'ಕೃಷ್ಣಚರಿತ್ರೆಯ ಮೂರು ಪಟ್ಟಿಕೆಗಳಿದ್ದು ಅದರಲ್ಲಿ ಕೃಷ್ಣನ ಜನ್ಮ, ಗೋಕುಲದಲ್ಲಿ ಕೃಷ್ಣ–ಬಲರಾಮರು, ನವನೀತಚೋರ ಕೃಷ್ಣ, ಪೂತನಾವಧೆ, ಅಸುರವಧೆ, ಕಾಳೀಯ ಮರ್ದನ, ಗೋವರ್ಧನ ಗಿರಿಧಾರಿ, ಕಂಸವಧೆ ಮುಂತಾದ ಕೃಷ್ಣಲೀಲೆಯ ಶಿಲ್ಪಗಳಾಗಿವೆ'.

[illegible]

ತ್ರಿಮೂರ್ತಿ ಶಿಲ್ಪಗಳು



ಶಿಲ್ಪ-೧. ಪಂಚಲಿಂಗ ಬಂಡೆ, ಬಾದಾಮಿ




ಶಿಲ್ಪ-೨. ಮಹಾಕೂಟೇಶ್ವರ ದೇವಾಲಯ ಆವರಣ, ಮಹಾಕೂಟ

ಗೋವರ್ಧನ ಗಿರಿಧಾರಿ ಶಿಲ್ಪಗಳು



ಶಿಲ್ಪ-೧. ಮೇಗಣ ಶಿವಾಲಯ, ಬಾದಾಮಿ



ಶಿಲ್ಪ-೨. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೩. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ

ಅಧ್ಯಾಯ : ಐದು

ಬಾದಾಮಿ ಚಾಲುಕ್ಯರ ಕಾಲದ ಜೈನ ಮತ್ತು ಬೌದ್ಧ ಶಿಲ್ಪಗಳು

ಜೈನ ಧರ್ಮದ ಹರಿಕಾರನಾದ ವರ್ಧಮಾನ ಮಹಾವೀರ ಅಹಿಂಸೆ ಹಾಗೂ ವೈರಾಗ್ಯ ಮಾರ್ಗದ ಮೂಲಕ ಆತ್ಮದ ಮುಕ್ತಿಗೆ ಪ್ರಾಮುಖ್ಯಕೊಟ್ಟನು. ಅವನ ಅನುಯಾಯಿಗಳಲ್ಲಿ ಯತಿಗಳು ಅಥವಾ ಸಾಧುಗಳು ಹಾಗೂ ಉಪಾಸಕರು ಇದ್ದರು. ಮುಂದೆ ಜೈನಧರ್ಮದಲ್ಲಿ ಎರಡು ಪಂಗಡಗಳಾದವು. ದಿಗಂಬರರು ಹಾಗೂ ಶ್ವೇತಾಂಬರರು, ಇವೆರಡು ಪಂಗಡಗಳು ತನ್ನದೇಯಾದ ಜೈನಧರ್ಮಗಂಧವನ್ನು ಹೊಂದಿವೆ. ಅಲ್ಲದೆ ಪ್ರತಿ ಪಂಗಡವು ಪ್ರಾದೇಶಿಕ ಭಾಷೆ ಹಾಗೂ ಭಾರತೀಯ ಕಲೆಯ ಬೆಳವಣಿಗೆಗೆ ನೆರವಾಗಿವೆ. ಬುದ್ಧನ ಬೋಧನೆಗಳಿಂದ ಬೌದ್ಧ ಧರ್ಮವು ಬೆಳೆದು ಬಂದಿತು.[೧]

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸಕ್ಕೆ ಜೈನಧರ್ಮ ನೀಡಿರುವ ಕೊಡುಗೆ ಅಪಾರ. ಜೈನಧರ್ಮ ಉತ್ತರ ಭಾರತದಲ್ಲಿ ಉಗಮವಾದರೂ ಬೆಳೆದಿದ್ದು ಕರ್ನಾಟಕದಲ್ಲಿ. ಶ್ರವಣಬೆಳಗೊಳ ಮತ್ತಿತರ ಕಡೆಯಲ್ಲಿರುವ ಬೃಹತ್ ಗೊಮ್ಮಟೇಶ್ವರ ವಿಗ್ರಹಗಳು ನಮ್ಮ ನಾಡಿನ ಹೆಮ್ಮೆಯ ಜೈನ ಶಿಲ್ಪಗಳಾಗಿದ್ದು, ಅದರಂತೆ ನಾಡಿನಾದ್ಯಂತ ಇರುವ ವಿವಿಧ ಜೈನ ತೀರ್ಥಂಕರರ ವಿಗ್ರಹಗಳು, ಬಸದಿಗಳು ಆ ಧರ್ಮದ ವಾಸ್ತು ಶಿಲ್ಪಗಳನ್ನು ಪರಿಚಯಿಸುವುದಲ್ಲದೆ ಕರ್ನಾಟಕದಲ್ಲಿ ಇದ್ದ ಸಂಪದ್ಭರಿತವಾದ ಜೈನಸಂಸ್ಕೃತಿಯನ್ನು ತೋರಿಸುತ್ತವೆ. ಕ್ರಿ.ಪೂ. ಕಾಲದಿಂದಲೇ ಕರ್ನಾಟಕದಲ್ಲಿ ಜೈನಧರ್ಮ ಪ್ರವೇಶಿಸಿದ್ದಕ್ಕೆ ಅನೇಕ ಉದಾಹರಣೆಗಳಿದ್ದರೂ ಸುಮಾರು ೧೦–೧೧ನೇ ಶತಮಾನದಲ್ಲಿ ಜೈನಧರ್ಮ ಕರ್ನಾಟಕದಲ್ಲಿ ಪ್ರಬಲವಾಗಿತ್ತೆಂದು ಅನೇಕ

೧. ಎನ್. ಮರಿಶಾಮಾಚಾರ್ : ಭಾರತೀಯ ಕಲೆ, ಪುಟ – ೧

ಶಾಸನಾಧಾರಗಳಿಂದ ತಿಳಿದುಬರುತ್ತದೆ. ಅದರಲ್ಲೂ ೧೦ನೇ ಶತಮಾನವನ್ನು ಇತಿಹಾಸಕಾರರು ಜೈನಧರ್ಮದ ಸುವರ್ಣಯುಗವೆಂದೇ ಗುರುತಿಸಿ ಕರೆದಿದ್ದಾರೆ. ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಆಸಂಧಿ ಗಂಗರು, ಸೇವುಣರು, ಹೊಯ್ಸಳರು ಮುಂತಾದ ದೊರೆಗಳ ರಾಜಾಶ್ರಯದಲ್ಲಿ ಬೆಳೆದ ಈ ಜೈನ ಧರ್ಮ ಹಲವು ಜಿನಾಲಯಗಳ ಸ್ಥಾಪನೆಗೆ ಕಾರಣವಾಯಿತು.[೨]

ಬಾದಾಮಿ ಚಾಲುಕ್ಯ ರಾಜರು ಹಿಂದೂಧರ್ಮವನ್ನು ಅನುಸರಿಸುತ್ತಿದ್ದರಾದರೂ ಉಳಿದ ಧರ್ಮಗಳಿಗೂ ಸಮಾನ ಪ್ರೋತ್ಸಾಹವನ್ನು ನೀಡುತ್ತಿದ್ದರೆಂಬುದರಲ್ಲಿ ಎರಡು ಮಾತಿಲ್ಲ. ಇವರು ಮೂಲತಃ ವೈಷ್ಣವಮತೀಯರಾಗಿದ್ದರೂ ಮುಂದಿನ ದಿನಗಳಲ್ಲಿ ಶೈವಮತವನ್ನು ಅನುಸರಿಸಿ ನಡೆದುಕೊಂಡರಾದರೂ ಉಳಿದ ಧರ್ಮಗಳಿಗೂ ಸಾಕಷ್ಟು ಪ್ರೋತ್ಸಾಹವನ್ನು ನೀಡಿದ್ದರು. ಆದುದರಿಂದಲೇ ಮುಂದಿನ ದಿನಗಳಲ್ಲಿ ಹಲವಾರು ಸುಂದರವಾದ ದೇವಾಲಯಗಳು ಮತ್ತು ಶಿಲ್ಪಗಳು ಜೈನಧರ್ಮದಲ್ಲಿಯೂ ಮೂಡಿಬಂದಿರುವುದನ್ನು ನಾವಿಲ್ಲಿ ಕಾಣಬಹುದು.

ಭಾರತದಲ್ಲಿ ಜೈನಧರ್ಮವು ವೈದಿಕ ಧರ್ಮದೊಂದಿಗೆ ಪರ್ಯಾಯವಾಗಿ ಬೆಳೆದುಬಂದಿದೆ. ಅದೆ ರೀತಿ ಬೌದ್ಧಧರ್ಮವೂ ಬೆಳೆದುಬಂದಿದೆ. ಆದರೆ ಬೌದ್ಧಧರ್ಮವು ಹೆಚ್ಚಾಗಿ ಉತ್ತರಭಾರತದಲ್ಲಿ ಪಸರಿಸಿದ ರೀತಿ ದಕ್ಷಿಣ ಭಾರತದಲ್ಲಿ ಬೆಳೆಯಲಿಲ್ಲ. ಅದಕ್ಕೆ ಕಾರಣಗಳು ಹಲವಾರಿರಬಹುದು. ಇಂದಿನ ಗುಲ್ಬರ್ಗಾ ಜಿಲ್ಲೆಯಲ್ಲಿ ಬೌದ್ಧಧರ್ಮವು ವ್ಯಾಪಕವಾಗಿ ಪ್ರಚಾರದಲ್ಲಿತ್ತೆಂದು ಇತ್ತೀಚಿನ ಸಂಶೋಧನೆಗಳಿಂದ ಕಂಡುಬಂದಿದೆ.

ಅದೇ ರೀತಿ ಬಾದಾಮಿಯ ಪರಿಸರದಲ್ಲಿಯೂ ಬೌದ್ಧಧರ್ಮವು ಅಂದಿನ ಕಾಲದಲ್ಲಿ ಸಾಕಷ್ಟು ಪ್ರಸಿದ್ಧವಾಗಿತ್ತು ಎಂಬುದನ್ನು ಅಲ್ಲಿನ ವಾಸ್ತುಶಿಲ್ಪಗಳನ್ನು ಮತ್ತು ಶಿಲ್ಪಗಳನ್ನು ನೋಡಿದಾಗ ತಿಳಿಯುತ್ತದೆ. ಆದರೂ ಕರ್ನಾಟಕದಲ್ಲಿ ಜೈನಧರ್ಮವು ಹೆಚ್ಚು ಪ್ರಸಿದ್ಧವಾಗಿತ್ತು ಮತ್ತು ವ್ಯಾಪಕವಾಗಿ ಹಬ್ಬಿತ್ತು ಎಂಬುದಾಗಿ ಇಲ್ಲಿನ ಇತಿಹಾಸದ ಅಧ್ಯಯನದಿಂದ ತಿಳಿಯಬಹುದು. 'ಚಾಲುಕ್ಯರ ಕಾಲದಲ್ಲಿ ಜೈನ ಗುಹಾಲಯಗಳು ಹಾಗೂ ಜೈನ ರಾಚನಿಕ ಮಂದಿರಗಳು ನಿರ್ಮಾಣವಾದವು. ಇವರ ಗುಹಾಲಯಗಳಲ್ಲಿ ಗೊಮ್ಮಟ, ಪಾರ್ಶ್ವನಾಥ ಮತ್ತು ಮಹಾವೀರರ ಶಿಲ್ಪಗಳು ಪ್ರಧಾನವಾಗಿ ಮೂಡಿಬಂದಿವೆ. ಇವು ಕರ್ನಾಟಕದ ಅತೀ ಪ್ರಾಚೀನ ಜೀನಬಿಂಬಗಳಾಗಿವೆ'.[೩] ಕರ್ನಾಟಕದಲ್ಲಿ ಜೈನಧರ್ಮವು ಪ್ರಾಚೀನ ಕಾಲದಲ್ಲಿಯೇ ಭದ್ರವಾಗಿ ಬೇರೂರಿತ್ತು. ಇಲ್ಲಿ ಇತಿಹಾಸ ಪೂರ್ವದಲ್ಲಿ ಜೈನಧರ್ಮದ ಆಚರಣೆ ಚಲಾವಣೆಯಲ್ಲಿತ್ತು ಎಂಬುದಕ್ಕೆ ಹಲವಾರು ಆಧಾರಗಳು ಇತ್ತೀಚಿನ ಸಂಶೋಧನೆಗಳಿಂದ ಕಂಡುಬಂದಿವೆ. ಕರ್ನಾಟಕವನ್ನಾಳಿದ ಬಾದಾಮಿಯ ಚಾಲುಕ್ಯರ ಪೂರ್ವದ ಅರಸು ಮನೆತನಗಳಲ್ಲಿ ಕದಂಬ ಅರಸುಮನೆತನ ಗಮನಾರ್ಹವಾದುದು.

---

೦೨. ಡಾ. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ –, ಪುಟ – ೨೦೩

೦೩. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೪೨



ಜೈನಧರ್ಮದ ಕೊನೆಯ ಗುಹಾಲಯವನ್ನು ‘ಜೈನಬಸದಿ’ ಎಂದು ಕರೆಯುತ್ತಾರೆ. ಈ ಧರ್ಮದ ೨೪ನೇ ತೀರ್ಥಂಕರನಾದ ಮಹಾವೀರನ ಶಿಲ್ಪವನ್ನು ಇಲ್ಲಿ ಕಾಣಬಹುದು. ತಲೆಯಲ್ಲಿ ಗುಂಗುರು ಕೂದಲನ್ನು ಸುಂದರವಾಗಿ ಕೆತ್ತಲಾಗಿದೆ. ಮೂರು ಅಂತಸ್ತಿನ ಕೊಡೆಯ ಸಂಕೇತವೇ ಜೈನಧರ್ಮದ ‘ರತ್ನತ್ರಯ ತತ್ವವನ್ನು’ ಜ್ಞಾಪಿಸುತ್ತದೆ. ಮತ್ತೊಂದು ಮಗ್ಗಲಲ್ಲಿ ೨೩ನೇ ತೀರ್ಥಂಕರನಾದ ಪಾರ್ಶ್ವನಾಥನ ಶಿಲ್ಪವಿದೆ. ಇಲ್ಲಿನ ವೈಶಿಷ್ಟ್ಯವೆಂದರೆ ‘ಬಾಹುಬಲಿ’ ಮೂರ್ತಿಯಕೆತ್ತನೆ. ಏಕೆಂದರೆ ಕರ್ನಾಟಕದ ಪ್ರಪ್ರಥಮ ಬಾಹುಬಲಿಯ ಮೂರ್ತಿ ಕೆತ್ತನೆ ಇದಾಗಿದೆ. ಇದನ್ನು ಕ್ರಿ.ಶ. ೫೪೫ರಲ್ಲಿ ಕೆತ್ತಿದೆ ಎಂಬುದಕ್ಕೆ ಜಕ್ಕಬ್ಬೆ ಕುರಿತ ಶಾಸನವೇ ಆಧಾರವಾಗಿದೆ.[೪]

ಇವರು ವೈದಿಕರಾಗಿದ್ದರೂ ಜೈನ ಹಾಗೂ ಬೌದ್ಧಧರ್ಮಗಳ ಬಗ್ಗೆ ಗೌರವ ಭಾವನೆಯುಳ್ಳವರಾಗಿದ್ದು, ಅವುಗಳಿಗೆ ದಾನ ದತ್ತಿಗಳನ್ನು ಕೊಟ್ಟ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಜೈನರಲ್ಲಿ ಶ್ವೇತಾಂಬರ ಮತ್ತು ದಿಗಂಬರ ಪಂಗಡಗಳೆರಡೂ ಇದ್ದು, ಆಗ ಕರ್ನಾಟಕದಲ್ಲಿ ಇವೆರಡೂ ಪಂಗಡಗಳಿದ್ದುದರ ಬಗ್ಗೆ ಉಲ್ಲೇಖ ಶಾಸನಗಳಲ್ಲಿ ಕಂಡುಬರುತ್ತದೆ. ಕದಂಬರ ಕಾಲದ ಕೆಲವು ಶಾಸನಗಳಲ್ಲಿ ಮನ್ಮಥ(ಬಾಹುಬಲಿ) ದೇವಾಲಯ ನಿರ್ಮಿಸಿದ ಉಲ್ಲೇಖದ ಜೊತೆಗೆ ಪದ್ಮಾವತಿ(ಪಾರ್ಶ್ವನಾಥ ಜಿನನ ಯಕ್ಷಿಣಿ)ಯ ಹೆಸರೂ ಕಂಡುಬರುತ್ತದೆ’.[೫]

ಆದಾಗ್ಯೂ ಚಾಲುಕ್ಯರ ಕಾಲದಲ್ಲಿ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತುದರಿಂದ ಇನ್ನಷ್ಟು ಬೆಳವಣಿಗೆ ಹೊಂದಲು ಸಹಾಯಕವಾಯಿತು ಎಂಬುದು ಸತ್ಯ. ಬಾದಾಮಿ, ಐಹೊಳೆ, ಹಳ್ಳೂರು ಇವು ಚಾಲುಕ್ಯರ ಕಾಲದ ಮಹತ್ವದ ಜೈನ ಕೇಂದ್ರಗಳಾಗಿದ್ದವು. ಬಾದಾಮಿಯ ಗುಹಾಲಯಗಳಲ್ಲಿ ಜೀನಾಲಯವೂ ಒಂದು. ಇದು ಪ್ರಾಯಶಃ ಆರನೆಯ ಶತಮಾನದ್ದು. ಇದರ ಗರ್ಭಗೃಹದಲ್ಲಿ ಮಹಾವೀರ ಮತ್ತು ಮೊಗಸಾಲೆಯ ಗೋಡೆಗಳ ಮೇಲೆ ಪಾರ್ಶ್ವನಾಥ ತೀರ್ಥಂಕರರ ಮತ್ತು ಬಾಹುಬಲಿಯ ಬೃಹತ್ ವಿಗ್ರಹಗಳಿವೆ.[೬]

ಇದೇ ರೀತಿ ಐಹೊಳೆಯ ಜಿನಾಲಯವು ಕೂಡಾ ಪ್ರಾಚೀನ ಬಸದಿಯಾಗಿದ್ದು ಹಲವಾರು ಸುಂದರ ಶಿಲ್ಪಗಳು ಮತ್ತು ವಿನ್ಯಾಸಗಳಿದ್ದು ಸುಂದರವಾದ ಕೆತ್ತನೆಯಾಗಿದೆ. ‘ಐಹೊಳೆಯ ಈ ಜೀನಾಲಯದ ಮುಖಮಂಟಪದ ಛತ್ತು ಕಮಲ ಪುಷ್ಪ, ಸ್ವಸ್ತಿಕ ನಕ್ಷೆ, ಜ್ಯಾಮಿತಿಯ ಚಿತ್ತಾರಗಳು, ಮೀನು, ಮಕರಗಳ ಉಬ್ಬು ಶಿಲ್ಪಗಳಿಂದ ಆವೃತವಾಗಿದೆ. ಮುಖಮಂಟಪದ ಉತ್ತರ ಗೋಡೆಯು ಪಾರ್ಶ್ವನಾಥ ತೀರ್ಥಂಕರ ಮತ್ತು ಯಕ್ಷ-ಯಕ್ಷಿಣಿಯರಾದ ಧರಣೇಂದ್ರ ಮತ್ತು ಪದ್ಮಾವತಿಯರ ಶಿಲ್ಪಗಳಿಂದ ಅಲಂಕೃತವಾಗಿದ್ದರೆ, ದಕ್ಷಿಣ ಗೋಡೆಯನ್ನು ಬಾಹುಬಲಿ ಮತ್ತು ಆತನ ಸಹೋದರಿಯರಾದ ಬ್ರಾಹ್ಮಿ ಮತ್ತು ಸುಂದರಿಯ ಶಿಲ್ಪಗಳು ಆವರಿಸಿವೆ. ವೈರಾಗ್ಯಮೂರ್ತಿ

---

೦೪. ಬಾಳಾಸಾಹೇಬ ಲೋಕಾಪುರ (ಸಂ.) : ಚಾಲುಕ್ಯ ಸಿಲುರಿ ಪಟ್ಟದಕಲ್ಲು, (ಐಹೊಳೆ ಉತ್ಸವ ಸ್ಮ. ಸಂಚಿಕೆ), ಪುಟ - ೨೭

೦೫. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ - ೫೩-೫೪

೦೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೧೬೧

[illegible]

ಬಾಹುಬಲಿಯ ಎಡಬಲಗಳಲ್ಲಿ ಸಾಲಂಕೃತ ಸೋದರಿಯನ್ನು ಕಂಡರಿಸಿದ್ದಾರೆ.[೭] ಬಾದಾಮಿಯ ಚಾಲುಕ್ಯರ ಆಳ್ವಿಕೆಗೆ ಬುನಾದಿ ಹಾಕಿದವನು ಮತ್ತು ಅದಕ್ಕೆ ಒಂದು ಭದ್ರವಾದ ನೆಲೆಯನ್ನು ಒದಗಿಸಿದವನು ಒಂದನೆಯ ಪುಲಿಕೇಶಿ. ಇವನ ಕಾಲದಲ್ಲಿಯೇ ಬಾದಾಮಿಯ ಪರಿಸರದ ಸುತಮುತ್ತಲೂ ಹಲವಾರು ದೇವಾಲಯಗಳು ಮತ್ತು ಜಿನಮಂದಿರಗಳು ರಚನೆಯಾದಂತೆ ಕಂಡುಬರುತ್ತವೆ.

ಇವನ ನಂತರ ಬಂದ ಮೊದಲನೆಯ ಕೀರ್ತಿವರ್ಮನ ಕಾಲದಲ್ಲಿಯೇ ಐಹೊಳೆಯ ಜಿನಾಲಯವಾದ ಮೀನಬಸದಿಯ ನಿರ್ಮಾಣವಾಯಿತು.[೮] ಇವರ ನಂತರ ಆಳಿದ ಅರಸರ ಕಾಲದಲ್ಲಿಯೂ ಹಲವಾರು ಜೀನಾಲಯಗಳು ಮುಂದಿನ ಹಂತದಲ್ಲಿ ನಿರ್ಮಾಣವಾದವು. ಅವುಗಳಲ್ಲಿ ಮುಖ್ಯವಾಗಿ ಬಾದಾಮಿಯ ನಾಲ್ಕನೆಯ ಗುಹಾಲಯ ಮತ್ತು ರವಿಕೀರ್ತಿ ನಿರ್ಮಿಸಿದ ಜೈನಬಸದಿ(ಮೇಗುತಿಗುಡಿ)ಗಳು ಮುಖ್ಯವಾಗಿ ಕಂಡುಬರುತ್ತವೆ. ಇವುಗಳು ಹೆಚ್ಚುಪಾಲು ಎರಡನೆಯ ಪುಲಿಕೇಶಿಯ ಕಾಲದಲ್ಲಿ ನಿರ್ಮಾಣವಾದವು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಜೈನಧರ್ಮವು ಕ್ರಿಸ್ತಶಕದ ಆರಂಭದಿಂದಲೇ ರೂಢಿಯಲ್ಲಿದ್ದರೂ ಬಾಹುಬಲಿ ಮತ್ತು ಮಹಾವೀರ ತೀರ್ಥಂಕರರ ಶಿಲ್ಪಗಳು ಕಂಡುಬರುವುದು ಮುಂದಿನ ಹಂತಗಳಲ್ಲಿಯೇ, ಮುಖ್ಯವಾಗಿ ಚಾಲುಕ್ಯರ ಆಡಳಿತದ ಕಾಲದಲ್ಲಿ ನಮಗೆ ಬಾಹುಬಲಿಯ ಮೂರ್ತಿಯನ್ನು ಕೆತ್ತಿರುವುದು ಕಂಡುಬರುತ್ತದೆ. ಅದಕ್ಕೂ ಮೊದಲಿನ ಶಿಲ್ಪಗಳು ಸಾಮಾನ್ಯವಾಗಿ ಆದಿನಾಥ, ಪಾರ್ಶ್ವನಾಥ ಮುಂತಾದ ತೀರ್ಥಂಕರರು ಮತ್ತು ಯಕ್ಷ-ಯಕ್ಷಿಣಿ ಶಿಲ್ಪಗಳಾಗಿರುತ್ತವೆ. ಚಾಲುಕ್ಯರ ಕಾಲಕ್ಕೆ ಅವರ ಸಮಕಾಲೀನರಾಗಿ ಕರ್ನಾಟಕದ ದಕ್ಷಿಣದಲ್ಲಿ ರಾಜ್ಯಭಾರ ಮಾಡಿದ ಗಂಗರ ಆಡಳಿತದಲ್ಲಿ ಬಾಹುಬಲಿಯ ಬೃಹತ್ ಶಿಲ್ಪವು ರಚನೆಯಾದುದು ನಮಗೆ ತಿಳಿದಿರುವ ವಿಚಾರ. 'ಕರ್ನಾಟಕದಲ್ಲಿ ಆರನೆಯ ಶತಮಾನದ ಕಾಲಕ್ಕೆ ಬಾಹುಬಲಿಯ ಮೂರ್ತಿಯನ್ನು ಕೊರೆಯಿಸುವುದು ಮತ್ತು ಪೂಜಿಸುವುದು ರೂಢಿಯಲ್ಲಿದ್ದಿತೆಂದು ಗೊತ್ತಾಗುತ್ತದೆ.'[೯]

ಜೈನಮೂರ್ತಿಗಳು ಎರಡು ಭಂಗಿಗಳಲ್ಲಿರುತ್ತವೆ. ಒಂದು ಖಡ್ಗಾಸನ, ಇನ್ನೊಂದು ಪದ್ಮಾಸನ. ಎರಡು ಕೈಗಳನ್ನು ನೇರವಾಗಿ ಕೆಳಕ್ಕೆ ಬಿಟ್ಟು ನೆಟ್ಟಗೆ ಕಾಲಮೇಲೆ ನಿಂತಿರುವ ಭಂಗಿಯೇ ಖಡ್ಗಾಸನ. ಇದಕ್ಕೆ ಕಾಯೋತ್ಸರ್ಗ ಹಾಗೂ ಪ್ರತಿಮಾಯೋಗವೆಂದೂ ಬೇರೆ ಹೆಸರುಗಳಿವೆ. ಗೊಮ್ಮಟ ಮೂರ್ತಿಗಳಿರುವುದು ಈ ಖಡ್ಗಾಸನ ಸ್ಥಿತಿಯಲ್ಲೇ. ಕರ್ನಾಟಕಕ್ಕೆ ಅಲ್ಲದೆ ಸಮಗ್ರ ಭಾರತದ ಶಿಲ್ಪಕಲೆಗೆ ಜೈನಧರ್ಮದ ವಿಶಿಷ್ಟ ಹಾಗೂ ವಿಶೇಷ ಕೊಡುಗೆಯೆಂದರೆ ಬಾಹುಬಲಿ ಮೂರ್ತಿ, ಸಾಮಾನ್ಯವಾಗಿ ಗೊಮ್ಮಟ (ಗೊಮ್ಮಟೇಶ್ವರ, ಗೊಮ್ಮಟ, ಗೊಮ್ಮಟೇಶ) ಎಂಬ ಜನಪ್ರಿಯ ಹೆಸರಿರುವ ಬಾಹುಬಲಿ ಜೈನರ ಮೊದಲನೆಯ ತೀರ್ಥಂಕರನ ಮಗ.

೦೭. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೧೯

೦೮. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೧

೦೯. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೫೫

ಆತ ತಪಸ್ಸಿಗೆ ನಿಂತ ಸಂದರ್ಭದಲ್ಲಿ ಅವನ ಕಾಲುಗಳ ಬಳಿ ಹುತ್ತ ಬೆಳೆದು ಹಾವುಗಳು ಸುತ್ತಿರುವುದನ್ನು, ಮಾಧವೀ ಬಳ್ಳಿ ಬೆಳೆದು ಕೈಗಳವರೆಗೆ ಸುತ್ತಿಕೊಂಡಿರುವುದನ್ನು ಈ ಸರಳ ಸುಂದರ ಶಿಲ್ಪದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ತೋರಿಸಲಾಗಿದೆ.[೧೦]

ಚಾಲುಕ್ಯರ ಕಾಲದ ಹೆಚ್ಚಿನ ಜೈನಬಸದಿಗಳ ನಿರ್ಮಾಣ ನಮಗೆ ಕಂಡುಬರುವುದು ಚಾಲುಕ್ಯರ ಎರಡನೆಯ ಹಂತದ ಅರಸರ ಕಾಲದಲ್ಲಿ. ಇವರ ಕಾಲದಲ್ಲಿಯೇ ಪಟ್ಟದಕಲ್ಲಿನಲ್ಲಿ ಮತ್ತು ಇತರೆಡೆಗಳಲ್ಲಿಯೂ ಹಲವಾರು ವಾಸ್ತುರಚನೆಗಳು, ಮುಖ್ಯವಾಗಿ ದೇವಾಲಯಗಳು ಮತ್ತು ಜೀನಮಂದಿರಗಳು ರಚನೆಯಾದವು. ವಿನಯಾದಿತ್ಯನ ನಂತರ ಪಟ್ಟಕ್ಕೆ ಬಂದ ವಿಜಯಾದಿತ್ಯನ ಕಾಲದಲ್ಲಿ ಹೆಚ್ಚಿನ ವಾಸ್ತುಶಿಲ್ಪಗಳು ರಚನೆಯಾದವು. ವಿಜಯಾದಿತ್ಯನ ಸೋದರಿ ಕುಂಕುಮ ಮಹದೇವಿ ಲಕ್ಷ್ಮೇಶ್ವರದಲ್ಲಿ ಆನೆಸಜ್ಜೆಯ ಬಸದಿಯನ್ನು ಕಟ್ಟಿಸಿರುವುದು ಗಮನಾರ್ಹವಾಗಿದೆ.[೧೧]

ಬಾದಾಮಿಯ ನಾಲ್ಕನೆಯ ಗುಹಾಲಯವು ಜೈನ ಬಸದಿಯಾಗಿದ್ದು, ಸದ್ಯಕ್ಕೆ ಇದು ಕರ್ನಾಟಕದಲ್ಲಿ ಕಂಡುಬರುವ ಪ್ರಾಚೀನ ಜೈನ ಗುಹಾಲಯವಾಗಿದ್ದರೆ, ರಾಚನಿಕ ಜಿನಾಲಯಗಳಲ್ಲಿ ಐಹೊಳೆಯ ಮೇಗುತಿ(ಮೇಗುಡಿ–ಮೇಲ್ಗುಡಿ) ಗುಡಿಯು ಅತ್ಯಂತ ಹಳೆಯ ರಾಚನಿಕ ಮಂದಿರವಾಗಿದೆ. 'ಸದ್ಯಕ್ಕೆ ಅತ್ಯಂತ ಪ್ರಾಚೀನ ರಾಚನಿಕ ಜೀನಾಲಯವು ಇದಾಗಿದೆ. ಈ ಜಿನ ಗೃಹವನ್ನು ಇಮ್ಮಡಿ ಪುಲಿಕೇಶಿಯ ಆಶ್ರಯದಲ್ಲಿದ್ದ ರವಿಕೀರ್ತಿ ಕವಿಯು ಕ್ರಿ.ಶ. ೬೩೪–೬೩೫ರಲ್ಲಿ ಕಟ್ಟಿಸಿದನು. ಹಳ್ಳೂರಿನ ಮೇಗುಡಿಯೂ ಕೂಡ ಚಾಲುಕ್ಯರ ಕಾಲದ ಮಹತ್ವದ ಜಿನೇಂದ್ರ ಭವನವಾಗಿದೆ.'[೧೨] ಬಾದಾಮಿಯ ಜೈನ ಗುಹೆಯನ್ನು ಕುರಿತು ಹಲವಾರು ವಿದ್ವಾಂಸರು ಸಂಶೋಧನೆಗಳನ್ನು ನಡೆಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಇಲ್ಲಿನ ಗುಹಾಲಯವು ಸುಮಾರು ಏಳನೆಯ ಶತಮಾನ ಮತ್ತು ಎಂಟನೆಯ ಶತಮಾನದ ನಡುವಿನಲ್ಲಿ ಆಗಿರಬಹುದೆಂದು ಕೆಲವರು ತರ್ಕಿಸಿದ್ದಾರೆ. ಇಲ್ಲಿನ ಶಿಲ್ಪಗಳ ರಚನೆ ಮತ್ತು ಇಲ್ಲಿನ ಶಾಸನಗಳ ಆಧಾರದಿಂದ ಇದರ ಕಾಲವನ್ನು ಲೆಕ್ಕಹಾಕಿದ್ದಾರೆ. ಡಾ. ಶಿವರಾಮ ಕಾರಂತರು ಇಲ್ಲಿನ ಗುಹಾಲಯವನ್ನು ೭–೮ನೆಯ ಶತಮಾನದ್ದಿರಬಹುದೆಂದು ಹೇಳಿದ್ದಾರೆ. ನಾಲ್ಕನೆಯದಾದ ಜೈನ ಗುಹೆ ಸ್ವಲ್ಪ ಮುಂದಕ್ಕಿದೆ. ಸ್ವಲ್ಪ ಎತ್ತರದಲ್ಲಿದೆ. ಅದನ್ನು ಮೇಣದ ಬಸದಿ ಎಂದು ಕರೆಯುತ್ತಾರೆ.

ಈ ಗುಹೆಯ ನಿರ್ಮಾಣ ೭–೮ನೆಯ ಶತಮಾನದ್ದಿರಬಹುದೆಂದು ತರ್ಕಿಸುತ್ತಾರೆ. ಈ ಬಸದಿಯನ್ನು ಆದಿನಾಥ ತೀರ್ಥಂಕರನ ಗೌರವಾರ್ಥ ನಿರ್ಮಿಸಿದರು. ಈ ಗುಹೆಯ ಗೋಡೆಗಳಲ್ಲಿ ತೀರ್ಥಂಕರರ, ಯಕ್ಷ ಯಕ್ಷಿಣಿಯರ ಹಲವಾರು ಕೆತ್ತನೆಗಳಿವೆ.[೧೩] ಆದರೆ ಡಾ. ಶೀಲಾಕಾಂತ

೧೦. ಎಚ್ಚೆಸ್ಕೆ (ಸಂ.) : ಅವಲೋಕನ, ಪುಟ – ೧೬೩

೧೧. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೫೭

೧೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೧

೧೩. ಡಾ. ಶಿವರಾಮ ಕಾರಂತ : ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪುಟ – ೧೧



ಪತ್ತಾರ ಅವರ ಅಭಿಪ್ರಾಯ ಕಾರಂತರಿಗಿಂತ ಭಿನ್ನವಾಗಿದೆ. ಇವರ ಪ್ರಕಾರ, ಇದರ ರಚನೆ ಸುಮಾರು ಕ್ರಿ.ಶ ಆರನೆಯ ಶತಮಾನದ್ದು. 'ಬಾದಾಮಿಯ ಗುಹಾಲಯಗಳಲ್ಲಿ ಜಿನಾಲಯವೂ ಒಂದು. ಅದರ ಗರ್ಭಗೃಹದಲ್ಲಿ ಮಹಾವೀರ ಮತ್ತು ಮೊಗಸಾಲೆಯ ಗೋಡೆಗಳ ಮೇಲೆ ಪಾರ್ಶ್ವನಾಥ ತೀರ್ಥಂಕರ ಮತ್ತು ಬಾಹುಬಲಿಯ ಬೃಹತ್ ವಿಗ್ರಹಗಳಿವೆ.[೧೪] ಅಭಿಪ್ರಾಯಗಳೇನೇ ಇರಲಿ, ಬಾದಾಮಿಯ ಜೈನ ಗುಹೆಯು ಕರ್ನಾಟಕದ ಅತ್ಯಂತ ಪ್ರಾಚೀನವಾದ ಮತ್ತು ಸುಂದರವಾದ ರಚನೆಯೆಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿನ ಶಿಲ್ಪಗಳ ರಚನೆ ಸುಂದರವಾಗಿದ್ದು ನೋಡುಗರಲ್ಲಿ ಚೈತನ್ಯವನ್ನುಂಟುಮಾಡುತ್ತದೆಂಬುದರಲ್ಲಿ ಸಂಶಯವಿಲ್ಲ.

ಬಾದಾಮಿಯ ಜೈನ ಗುಹಾಲಯ

ಬಾದಾಮಿಯ ಗುಹಾಲಯಗಳ ಸಾಲಿನಲ್ಲಿ ಮೂರನೆಯ ಗುಹೆಯಿಂದ ಮೇಲೆ, ಅಂದರೆ ಪೂರ್ವಕ್ಕೆ ಒಂಬತ್ತು ಮೆಟ್ಟಿಲುಗಳನ್ನು ಹತ್ತಿ ಸಾಗಿ ಪುನಃ ಕೆಲ ಮೆಟ್ಟಿಲುಗಳನ್ನು ಇಳಿದು ಸಾಗಿದರೆ ಉತ್ತರಕ್ಕೆ ಅಭಿಮುಖವಾಗಿ ಜೈನಗುಹೆ ಇರುವುದು. ಗರ್ಭಗುಡಿಯಲ್ಲಿರುವ ಆದಿನಾಥಸ್ವಾಮಿಗೆ ಯಕ್ಷರು ಚಾಮರಗಳನ್ನು ಬೀಸುತ್ತಿದ್ದಾರೆ. ತೀರ್ಥಂಕರನ ಮೇಲೆ ಮುಕ್ಕೊಡೆಗಳಿವೆ. ಗರ್ಭಗುಡಿಯ ಹೊರಗಿನ ಕೈಸಾಲೆಯಲ್ಲಿ ಪಶ್ಚಿಮದ ಗೊಡೆಯಲ್ಲಿ ಸುಪಾರ್ಶ್ವನಾಥನ ದಿಗಂಬರ ಶಿಲ್ಪವಿದೆ. ಪಕ್ಕದಲ್ಲಿ ಯಕ್ಷ-ಯಕ್ಷಿಣಿಯರಿದ್ದಾರೆ. ತಲೆಯ ಮೇಲೆ ಏಳು ಹೆಡೆಯ ಸರ್ಪವಿದೆ. ಈ ವಿಗ್ರಹದ ಎದುರಿಗೆ ಕಾಣುವುದೇ ತಪಸ್ಸು ಮಾಡುತ್ತ ನಿಂತಿರುವ ಬಾಹುಬಲಿಯ ಕೈ-ಕಾಲುಗಳಿಗೆ ಬಳ್ಳಿಗಳು ಸುತ್ತಿಕೊಂಡಿವೆ.[೧೫]

ಬಾದಾಮಿಯಲ್ಲಿ ಚಾಲುಕ್ಯರು ಆಡಳಿತಕ್ಕೆ ಬರುವ ಹೊತ್ತಿಗೆ ಉತ್ತರ ಭಾರತದಲ್ಲಿ ಗುಪ್ತರ ಆಡಳಿತವು ಪರಾಕಾಷ್ಠೆಯಲ್ಲಿತ್ತು. ಉತ್ತರ ಭಾರತದಲ್ಲಿ ಗುಪ್ತರ ಕಾಲವು ಕಲೆ ಮತ್ತು ಸಾಹಿತ್ಯದ ದೃಷ್ಟಿಯಿಂದ ಸುವರ್ಣಯುಗವಾಗಿತ್ತು. ಇದರಿಂದಾಗಿ ದೇಶದಾದ್ಯಂತ ಹಲವಾರು ಕಡೆಗಳಲ್ಲಿ ಶಿಲ್ಪಕಲೆಯಲ್ಲಿ ಕ್ರಾಂತಿಯೇ ನಡೆದುಹೋಯಿತು. ಇದರ ಪರಿಣಾಮವು ದಕ್ಷಿಣಭಾರತದಲ್ಲಿಯೂ ಆಯಿತು. ಕರ್ನಾಟಕದಲ್ಲಿಯೂ ಅಂದಿನ ಕಾಲದಲ್ಲಿ ಹಲವು ಕಡೆಗಳಲ್ಲಿ ಶಿಲ್ಪ ಮತ್ತು ವಾಸ್ತುಶಿಲ್ಪಗಳು ರಚನೆಯಾದವು. ಚಾಲುಕ್ಯ ಶಿಲ್ಪಿಗಳು ಕೂಡಾ ಗುಪ್ತರ ಶಿಲ್ಪಶೈಲಿಯಿಂದ ಸ್ಫೂರ್ತಿ ಪಡೆದವರೆ ಆಗಿದ್ದರು, ಅಲ್ಲದೆ ಚಾಲುಕ್ಯರ ಆರಂಭದ ಶಿಲ್ಪಗಳು ಗುಪ್ತರ ಶೈಲಿಯನ್ನೆ ಹೆಚ್ಚುಪಾಲು ಅನುಕರಿಸಿವೆ ಎಂದರೆ ತಪ್ಪಾಗಲಾರದು.

ಇದಕ್ಕೆ ಇಲ್ಲಿನ ನಾಲ್ಕನೆಯದಾದ ಜೈನ ಗುಹೆಯಲ್ಲಿನ ಶಿಲ್ಪ ರಚನೆಗಳು ಸಾಕ್ಷಿಯಾಗಿವೆ. ಗುಪ್ತರ ಕಾಲದಲ್ಲಿ ಉತ್ತರ ಭಾರತದಾದ್ಯಂತ ವೈದಿಕ ಧರ್ಮದ ಜೊತೆಗೆ ಜೈನಧರ್ಮದ ಬೆಳವಣಿಗೆಯೂ ಕೂಡಾ ನಡೆದಿತ್ತು. ಉತ್ತರದ ಜೈನಧರ್ಮ ಶಿಲ್ಪಗಳು ಜೈನ ತೀರ್ಥಂಕರರ

೧೪. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೧

೧೫. ಡಾ. ವಿ.ವಿ. ನರಸಿಂಹಮೂರ್ತಿ : ಚಾಲುಕ್ಯ ವಾಸ್ತು ಪರಿಚಯ, ಪುಟ – ೨೨

ಮತ್ತು ಅವರ ಯಕ್ಷ-ಯಕ್ಷಿಣಿಯರ ಕುರಿತಾದ ಶಿಲ್ಪಗಳಾಗಿದ್ದವು. 'ಗುಪ್ತರ ಜೈನ ಪ್ರತಿಮೆಗಳಲ್ಲಿ ಪಾರ್ಶ್ವನಾಥ ತೀರ್ಥಂಕರನು ಕಾಣಿಸಿಕೊಳ್ಳುವುದು ವಾಡಿಕೆಯಾಗಿತ್ತು. ಚಾಲುಕ್ಯರು ಪಾರ್ಶ್ವನಾಥನ ಜೊತೆಗೆ ಬಾಹುಬಲಿ ಮತ್ತು ಮಹಾವೀರರ ಶಿಲ್ಪಗಳನ್ನು ಕೆತ್ತಿಸಿದರು. ಜೊತೆಗೆ ಅವರ ಯಕ್ಷ-ಯಕ್ಷಿಣಿಯರಿಗೂ ಇವರ ಶಿಲ್ಪಗಳಲ್ಲಿ ಜಾಗ ದೊರಕಿತು. ಬಾದಾಮಿ ಮತ್ತು ಐಹೊಳೆಯ ಜಿನಾಲಯಗಳ ಗೋಡೆಗಳ ಮೇಲೆ ಪಾರ್ಶ್ವನಾಥ ಮತ್ತು ಬಾಹುಬಲಿಯ ಶಿಲ್ಪಗಳಿವೆ. ಇದರ ಗರ್ಭಗೃಹದಲ್ಲಿ ಮಹಾವೀರ ಶಿಲ್ಪವು ಕೂಡಾ ಇದೆ. ನಂತರದ ಕಾಲದಲ್ಲಿ ಇದೊಂದು ಶಿಲ್ಪ ಪರಂಪರೆಯಾಗಿ ದಕ್ಷಿಣ ಭಾರತದಲ್ಲಿ ಬೆಳೆಯಿತೆನ್ನಬಹುದು.[೧೬]

ಬಾದಾಮಿಯ ಜೈನ ಗುಹಾಲಯದಲ್ಲಿ ಹಲವಾರು ಸುಂದರ ಶಿಲ್ಪಗಳಿವೆ. ಜೈನ ತೀರ್ಥಂಕರರ ಶಿಲ್ಪಗಳ ಜೊತೆಗೆ ಯಕ್ಷ ಯಕ್ಷಿಣಿಯರ ಶಿಲ್ಪಗಳೂ ಇವೆ. ಇಲ್ಲಿನ ಶಿಲ್ಪಗಳ ಮಹತ್ವವಿರುವುದು ಇವು ದಕ್ಷಿಣ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಕಂಡುಬರುವ ಮೊದಲ ಬಾಹುಬಲಿಯ ಶಿಲ್ಪವಾಗಿರುವುದು ಮತ್ತು ಮಹಾವೀರನ ಶಿಲ್ಪವನ್ನಿಲ್ಲಿ ವಿಶಿಷ್ಟವಾಗಿ ಕೆತ್ತಿರುವುದು ಕಂಡುಬರುತ್ತದೆ.

ಬಾಹುಬಲಿ

ಶಿಲ್ಪ -೧

ಬಾಹುಬಲಿಯು ಮೂಲತಃ ತೀರ್ಥಂಕರನಲ್ಲ, ಆತ ಅರ್ಹಂತ, ಆದರೂ ಜೈನಧರ್ಮದಲ್ಲಿ ಬಾಹುಬಲಿಗೆ ವಿಶೇಷ ಮನ್ನಣೆಯಿದೆ. ಜೈನರ ಆರಾಧನೆಯ ಇಪ್ಪತ್ತನಾಲ್ಕು ತೀರ್ಥಂಕರರಂತೆಯೇ ಬಾಹುಬಲಿಯು ಪೂಜಾರ್ಹನು. ಆದುದರಿಂದಲೇ ಜೈನ ದೇವಾಲಯಗಳಲ್ಲಿ, ಬಸದಿಗಳಲ್ಲಿ, ಬಾಹುಬಲಿಯ ಶಿಲ್ಪವೂ ನೋಡಲು ಸಿಗುತ್ತದೆ. ಇದಲ್ಲದೆ ಬಾಹುಬಲಿಯನ್ನು ವಿಶಿಷ್ಟವಾಗಿ, ಉಳಿದ ಶಿಲ್ಪಗಳಿಗಿಂತ ದೊಡ್ಡದಾಗಿ, ನಗ್ನನಾಗಿ ನಿಂತುಕೊಂಡಿರುವಂತೆ ಕೆತ್ತಲಾಗಿರುವುದನ್ನು ಕಾಣಬಹುದು. ಕರ್ನಾಟಕದ ಹಲವೆಡೆ ಬಾಹುಬಲಿಯ ಬೃಹದಾಕಾರದ ಏಕಶಿಲಾ ಬೃಹತ್ ಶಿಲ್ಪಗಳು ಕಂಡುಬರುತ್ತವೆ. ಇವೆಲ್ಲ ನಂತರದ ರಚನೆಗಳು. ಕರ್ನಾಟಕದಲ್ಲಿ ಮೊದಲ ಬಾರಿಗೆ ಬಾಹುಬಲಿಯ ಸುಂದರ ನಗ್ನ ಸ್ಥಾನಕ ಶಿಲ್ಪ ಕಂಡುಬರುವುದು ಬಾದಾಮಿಯ ನಾಲ್ಕನೆಯ ಗುಹಾಲಯದಲ್ಲಿ. ಇಲ್ಲಿ ಬಾಹುಬಲಿಯನ್ನು ಕಾಯೋತ್ಸರ್ಗ[೧೭] ಭಂಗಿಯಲ್ಲಿ ಕೆತ್ತಲಾಗಿದ್ದು ದ್ವಿಮಾನ ಶಿಲ್ಪವಾಗಿದೆ.

ಬಾಹುಬಲಿಯು ಇಲ್ಲಿ ಮುಗುಳುನಗೆ ಬೀರುತ್ತಿದ್ದು ಅಲೌಕಿಕ ಆನಂದವನ್ನು ಅನುಭವಿಸುತ್ತಿರುವಂತಹ ಭಾವನೆಯುಂಟಾಗುತ್ತದೆ. ಕೂದಲನ್ನು ಸುಂದರವಾಗಿ ಬಾಚಿ ಮೇಲಕ್ಕೆ ಕಟ್ಟಿದಂತಿದೆ. ತಲೆಯ ಉಷ್ಣೀಷದ ಸ್ಪಷ್ಟವಾದ ಕೆತ್ತನೆಯಿದೆ. ಭುಜದ ಎರಡೂ ಬದಿಗಳಲ್ಲಿ

---

೧೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೭

೧೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೭



ಕೂದಲು ಇಳಿಬಿದ್ದಿದೆ. ಅಗಲವಾದ ಕಿವಿಗಳು ಭುಜದಿಂದ ಸ್ವಲ್ಪ ಮೇಲಿನವರೆಗೂ ಜೋತಾಡುತ್ತಿವೆ. ಮೈ ಮೇಲೆ ಹಾವುಗಳು ಹರಿದಾಡುತ್ತಿರುವಂತೆ ಕೆತ್ತಲಾಗಿದೆ. ದಷ್ಟಪುಷ್ಟವಾದ ದೇಹ, ನೀಳವಾದ ಕೈಗಳು ಎರಡು ತೊಡೆಗಳನ್ನು ದಾಟಿ ಕೆಳಗಿಳಿದಿವೆ. ಭುಜದ ಮೇಲೂ ಹಾವುಗಳು ಹರಿದಾಡುತ್ತಿವೆ. ಕಾಲುಗಳ ಮೇಲೆ ಹಾವುಗಳು, ಪುಷ್ಪಬಳ್ಳಿಗಳು ಬೆಳೆದು ನಿಂತಿವೆ. ಹಾವುಗಳು ಆತನ ಕಾಲುಗಳನ್ನು ಸುತ್ತುವರಿದು, ದೇಹಭಾಗವನ್ನು ಸುತ್ತಿ, ಕೈಗಳನ್ನೂ ಬಳಸಿ ಬೆಳೆದಿವೆ. ಇದಲ್ಲದೆ ಕೆಲವು ಹಾವುಗಳು ತಮ್ಮ ಹೆಡೆಗಳನ್ನು ಬಿಡಿಸಿ ಸುತ್ತುಹಾಕಿಕೊಂಡು ಆಶ್ಚರ್ಯದಿಂದ ಮೇಲೆ ನೋಡುತ್ತಿವೆ. ಸುತ್ತಲೂ ಹುತ್ತಗಳು ಬೆಳೆದಿವೆ. ಆ ಹುತ್ತದಿಂದ ಹಾವುಗಳು ಹರಿದಾಡಿ ಬಾಹುಬಲಿಯ ಮೈಯನ್ನು ತಬ್ಬಿಕೊಂಡಿವೆ. ವಿದ್ಯಾಧರಿಯರು ಅವನ ಕೈ–ಕಾಲುಗಳಿಗೆ ಸುತ್ತಿಕೊಂಡಿರುವ ಮಾಧವೀಲತೆಗಳನ್ನು ಬಿಡಿಸುತ್ತ ನಿಂತಿದ್ದಾರೆ. ಇನ್ನಿಬ್ಬರು ವಿದ್ಯಾಧರಿಯರು ಅವನಿಗೆ ನಮಸ್ಕರಿಸುತ್ತ ಕುಳಿತಿದ್ದಾರೆ. ಬಾಹುಬಲಿಯ ಶಿಲ್ಪ ಮಾತ್ರ ಪೂರ್ತಿಗೊಂಡಿದೆ.[೧೮]

ಏಕೆಂದರೆ ಬಾಹುಬಲಿಯು ಸರ್ವಸಂಗ ಪರಿತ್ಯಾಗಿಯಾಗಿರುವಾತ. ಸುಖ–ಭೋಗಗಳಿಂದ ದೂರವಿರುವಾತ, ಆದರೆ ಶಿಲ್ಪಗಳ ರಚನೆಯ ಸಂದರ್ಭದಲ್ಲಿ ಸ್ತ್ರೀಶಿಲ್ಪದ ರಚನೆಯಿಲ್ಲದಿದ್ದರೆ ಆಕರ್ಷಣೆಯ ಕೊರತೆಯಾಗುವುದೆಂಬ ದೂರದೃಷ್ಟಿಯಿಂದ ವಿದ್ಯಾಧರಿಯರನ್ನು ಇಲ್ಲಿ ಕೆತ್ತಿರಬಹುದೆನಿಸುತ್ತದೆ. ಇಲ್ಲಿ ಬಾಹುಬಲಿಯನ್ನು ಹೊರತುಪಡಿಸಿದರೆ ಉಳಿದ ಶಿಲ್ಪಗಳು ಅಪೂರ್ಣವೆಂದೆನಿಸುತ್ತವೆ. ಇದು ಉದ್ದೇಶಪೂರ್ವಕವಾಗಿ ಮಾಡಿರಬಹುದೆನಿಸುವುದು. ಏಕೆಂದರೆ ಜೈನರ ದೃಷ್ಟಿಯಲ್ಲಿ ದೇವನು ಮಾತ್ರ ಪರಿಪೂರ್ಣ, ಉಳಿದಂತೆ ಮಾನವರು ಪರಿಪೂರ್ಣರಲ್ಲದಿರುವುದರಿಂದ ಈ ರೀತಿ ರಚನೆ ಮಾಡಿರಬಹುದು. ಬಾಹುಬಲಿಯ ಶಿಲ್ಪ ಇಲ್ಲಿ ಗಮನ ಸೆಳೆಯುವುದು ಆತನ ಆಕರ್ಷಕವಾದ ಮುಖಭಾವದಿಂದ. ಆತನು ನಸುನಗುತ್ತಿರುವಂತಿದ್ದು, ಅಲೌಕಿಕವಾದ ಆಧ್ಯಾತ್ಮಿಕವಾದ ಆನಂದವನ್ನು ಹೊರಸೂಸುತ್ತಿದ್ದಾನೆ. ಎಲ್ಲವನ್ನು ಪರಿತ್ಯಾಗ ಮಾಡಿದ ನಂತರ ನಿರುಮ್ಮಳನಾಗಿ ಜ್ಞಾನದ ಪರಮೋದ್ದೇಶವಾದ ಆನಂದದ ತುರೀಯಾವಸ್ಥೆಯನ್ನು ತಲುಪಿದಾಗ ಸಿಗುವ ಅಲೌಕಿಕತೆಯ ಸಂದೇಶವನ್ನು ಅವನ ಮುಖಭಾವವು ಸಾರುತ್ತದೆ. ಅಂತಹ ಪ್ರಸನ್ನತೆ ಬಾಹುಬಲಿಯ ಮುಖದಲ್ಲಿ ವ್ಯಕ್ತವಾಗುವುದು ಬಾದಾಮಿ ಬಾಹುಬಲಿಯ ವಿಶೇಷತೆ ಎನ್ನಬಹುದು.

ಇವಕ್ಕೆ ಪೂರಕವಾಗಿ ಉಳಿದ ಶಿಲ್ಪಗಳನ್ನು ಅಪೂರ್ಣವಾಗಿ ಕೆತ್ತಿರುವುದರಿಂದ ನೋಡುಗನ ಗಮನ ನೇರವಾಗಿ ಬಾಹುಬಲಿಯ ಶಿಲ್ಪದತ್ತಲೇ ಆಕರ್ಷಿತವಾಗಿ ಅವನ ಮುಖದತ್ತಲೆ ಕೇಂದ್ರಿತವಾಗುತ್ತದೆ. ಆಗ ಶಿಲ್ಪದ ರಚನೆಯ ಹಿಂದಿನ ಶಿಲ್ಪಿಯ ಉದ್ದೇಶ ಸಾರ್ಥಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಬಾದಾಮಿಯ ಶಿಲ್ಪಿ ರಚಿಸಿದ ಇಲ್ಲಿನ ಶಿಲ್ಪ ನೋಡುಗನ ಗಮನವನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ ಎನ್ನಬಹುದು. ಇಲ್ಲಿ ಬಾಹುಬಲಿಯ ಕೇಶಗಳು

೧೮. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೬೯

[illegible]



ಊರ್ಧ್ವಮುಖವಾಗಿದ್ದು ಭುಜಗಳ ಮೇಲೆ ಕೇಶಗಳು ಇಳಿಬಿದ್ದಿವೆ. ಕೈ-ಕಾಲಿಗೆ ಸುತ್ತಿಕೊಂಡ ಮಾಧವೀಲತೆಗಳಲ್ಲಿ ರೆಂಬೆ ಮಾತ್ರವಿದ್ದು ಎಲೆಗಳಿಲ್ಲ. ಪಾದದ ಬಳಿ ಹಾವುಗಳಿದ್ದು ಎಡಬಲಗಳಲ್ಲಿ ಸೋದರಿಯರಾದ ಬ್ರಾಹ್ಮೀ ಹಾಗೂ ಸುಂದರಿಯರಿದ್ದಾರೆ[೧೯] ಎಂದು ಡಾ. ಶೀಲಾಕಾಂತ ಪತ್ತಾರ ಅವರು ಹೇಳುತ್ತಾರೆ. ಇಲ್ಲಿನ ಶಿಲ್ಪವು ದಕ್ಷಿಣ ಭಾರತದ ಮೊದಲ ಬಾಹುಬಲಿಯ ಶಿಲ್ಪವಾಗಿದ್ದು ಮುಂದಿನ ಶಿಲ್ಪಿಗಳಿಗೆ ಇಲ್ಲಿನ ಶಿಲ್ಪಗಳ ಮೂಲಕ ಪ್ರತಿಮಾಲಕ್ಷಣವನ್ನು ನಿರೂಪಿಸಿರಬಹುದೆನಿಸುತ್ತದೆ.

ಡಾ. ಶೀಲಾಕಾಂತ ಪತ್ತಾರರು ಹೇಳುವಂತೆ, ಈ ಶಿಲ್ಪದ ವಿಶೇಷತೆಗಳಾದ ೧. ಕಾಯೋತ್ಸರ್ಗ ನಿಲುವು, ೨. ಸುತ್ತಿದ ಮಾಧವೀಲತೆ, ೩. ಸುಳಿದಾಡುವ ಸರ್ಪಗಳು, ಹುತ್ತಗಳು ಹಾಗೂ ೪. ಪಕ್ಕದಲ್ಲಿ ಬ್ರಾಹ್ಮಿ-ಸುಂದರಿಯರು ಇವು ಕ್ರಮೇಣ ಬಾಹುಬಲಿಯ ಪ್ರತಿಮಾಲಕ್ಷಣಗಳಾಗಿ ಸ್ಥಿರಗೊಂಡವೆನ್ನಬಹುದು.[೨೦] ಒಟ್ಟಿನಲ್ಲಿ ಹೇಳುವುದಾದರೆ ಇದೊಂದು ಸುಂದರ ಬಾಹುಬಲಿಯ ಶಿಲ್ಪವಾಗಿದ್ದು ಮುಂದಿನ ದಿನಗಳಲ್ಲಿ ಕರ್ನಾಟಕದ ವಿವಿಧೆಡೆಗಳಲ್ಲಿ ರಚನೆಯಾದ ಬೃಹತ್ ಗಾತ್ರದ ಬಾಹುಬಲಿಯ ಶಿಲ್ಪಗಳಿಗೆ ಸ್ಫೂರ್ತಿಯಾಗಿದ್ದರೆ ಆಶ್ಚರ್ಯವಿಲ್ಲ.

ಶಿಲ್ಪ -೨

ಬಾದಾಮಿಯ ಜೈನ ಗುಹೆಯ ಶಿಲ್ಪಗಳಲ್ಲಿ ಮುಖ್ಯವಾಗಿ ಗಮನ ಸೆಳೆಯುವ ಇನ್ನೊಂದು ಪ್ರಮುಖ ಶಿಲ್ಪ ಮಹಾವೀರನದು. ಜೈನ ತೀರ್ಥಂಕರರಲ್ಲಿ ಕೊನೆಯವನಾದ ಮಹಾವೀರನ ಮೊದಲ ಹೆಸರು ವರ್ಧಮಾನ. ಇವನು ಸರ್ವಸಂಗ ಪರಿತ್ಯಾಗಿಯಾಗಿ, ಸತ್ಯವನ್ನು ಅನ್ವೇಷಣೆ ಮಾಡುತ್ತ ಕೊನೆಗೆ ಜ್ಞಾನವನ್ನು ಪಡೆಯುತ್ತಾನೆ. ಜೈನಧರ್ಮೀಯರಿಗೆ ಮಹಾವೀರನು ಅತ್ಯಂತ ಪ್ರಮುಖ ಆರಾಧ್ಯನಾಗಿದ್ದಾನೆ. ಉತ್ತರಭಾರತದಲ್ಲಿ ಮೊದಲಿಗೆ ಇವನ ಕುರಿತಾದ ಶಿಲ್ಪಗಳು ಮತ್ತು ಆಲಯಗಳು ಕಂಡುಬಂದರೂ ದಕ್ಷಿಣಭಾರತದಲ್ಲಿಯೂ ಮಹಾವೀರನ ಶಿಲ್ಪಗಳು ಸಾಕಷ್ಟಿವೆ. ಮೊದಲಿಗೆ ನಮಗೆ ಕಾಣಿಸುವ ಮಹಾವೀರನ ಶಿಲ್ಪವು ಬಾಹುಬಲಿಯಂತೆಯೇ ಬಾದಾಮಿಯ ಗುಹಾಲಯದಲ್ಲಿದೆ. ಮಹಾವೀರನ ಸುಂದರವಾದ ಧ್ಯಾನಮುದ್ರೆಯಲ್ಲಿ ಕುಳಿತ ಶಿಲ್ಪವು ಇಲ್ಲಿ ಗಮನಾರ್ಹವಾದುದಾಗಿದೆ. ಇದಲ್ಲದೆ ಗರ್ಭಗುಡಿಯೊಳಗೆ ಸಿಂಹಾಸನದ ಮೇಲೆ ವರ್ಧಮಾನ ಮಹಾವೀರನು ಮೆದುವಾದ ದಿಂಬೊಂದನ್ನು ಒರಗಿ ಕುಳಿತಿದ್ದಾನೆ.[೨೧] ತಲೆಯ ಮೇಲೆ ಮುಕ್ಕೊಡೆಯಿದ್ದು, ತಲೆಯ ಹಿಂದೆ ಪೂರ್ಣವೃತ್ತಾಕಾರದ ಪ್ರಭಾಮಂಡಲವಿದೆ. ಧ್ಯಾನಮಗ್ನನಾಗಿರುವ ಮಹಾವೀರನ ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ. ಮೇಲೆ ಮೂಲೆಯಲ್ಲಿ ಮೋಡಗಳ ಮಧ್ಯ ವಿದ್ಯಾಧರ ಶಿಲ್ಪಗಳನ್ನು ಕಾಣಬಹುದು.

---

೧೯. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೨೧೮

೨೦. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೨೧೮

೨೧. ಮಲ್ಲಿಕಾರ್ಜುನ ಕಲ್ಮಠ : ಬಾದಾಮಿ ಮಾರ್ಗದರ್ಶಿ, ಪುಟ - ೪೪-೪೫



ಶಿಲ್ಪ –೩

ಈ ಗುಹಾಲಯದಲ್ಲಿ ನಿಂತಿರುವ ಮತ್ತು ಕುಳಿತಿರುವ ಎರಡೂ ತರಹದ ಮಹಾವೀರನ ಶಿಲ್ಪಗಳನ್ನು ನೋಡಬಹುದಾಗಿದೆ. ನಿಂತಿರುವ ಮಹಾವೀರನ ಶಿಲ್ಪವು ಗರ್ಭಗುಡಿಗೆ ಹೊಂದಿಕೊಂಡಿರುವ ಅಂತರಾಳದಲ್ಲಿದ್ದರೆ ಕುಳಿತಿರುವ ಶಿಲ್ಪವು ಒಳಗಿನ ಗರ್ಭಗುಡಿಯಲ್ಲಿದೆ. ಎರಡೂ ಶಿಲ್ಪಗಳು ವಿಶಿಷ್ಟ ಹಾಗೂ ಆಕರ್ಷಕವಾಗಿವೆ. ಇಲ್ಲಿ ಗಮನಿಸತಕ್ಕಂತಹ ಅಂಶವೆಂದರೆ ಸಾಮಾನ್ಯವಾಗಿ ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಿಗಳು ರಚಿಸಿರುವ ಯಾವುದೇ ಶಿಲ್ಪಗಳಿರಲಿ, ಅವುಗಳ ಜೊತೆಯಲ್ಲಿ ಮತ್ತು ಹಿನ್ನೆಲೆಯಾಗಿ ಆ ವಸ್ತುವಿಗೆ ಅಥವಾ ಕಥಾನಕಕ್ಕೆ ಪೂರಕವಾದ ವಿಷಯಗಳನ್ನು ರಚಿಸುವುದನ್ನು ರೂಢಿಸಿಕೊಂಡಿದ್ದರು. ಆದರೆ ಇಲ್ಲಿ ಮಹಾವೀರನ ಶಿಲ್ಪದ ಹಿನ್ನೆಲೆಯಲ್ಲಿ ಅಂಥ ಯಾವುದೇ ವಿಚಾರಗಳನ್ನು ಕೆತ್ತಿಲ್ಲ.

ಅಂತರಾಳದ ಗೋಡೆಯಲ್ಲಿ ಕೆತ್ತಲಾಗಿರುವ ಮಹಾವೀರನು ಖಡ್ಗಾಸನದಲ್ಲಿ ನಿಂತ ಭಂಗಿಯಲ್ಲಿದ್ದಾನೆ. ಸುತ್ತಲೂ ಇಪ್ಪತ್ತನಾಲ್ಕು ಜನ ತೀರ್ಥಂಕರರ ಶಿಲ್ಪಗಳಿವೆ. ಮಹಾವೀರನ ಎರಡೂ ಬದಿಗಳಲ್ಲಿ ಆತನ ಇಬ್ಬರು ಯಕ್ಷಿಣಿಯರಾದ ಜ್ವಾಲಾಮಾಲಿನಿ ಮತ್ತು ಪದ್ಮಾವತಿಯರ ಶಿಲ್ಪಗಳು ಸಣ್ಣದಾಗಿದ್ದರೂ ಸುಂದರವಾಗಿವೆ. ಇದಲ್ಲದೆ ಇವುಗಳಿಗಿಂತ ಸ್ವಲ್ಪ ದೊಡ್ಡ ಗಾತ್ರದಲ್ಲಿ ಪದ್ಮಪಾಣಿ, ಮನ್ಮಥರ ಹಾಗೂ ದ್ವಾರಪಾಲಕ ವಿಗ್ರಹಗಳೂ ಇವೆ. ಇವು ಕೂಡಾ ನಿಂತ ಶಿಲ್ಪಗಳು. ಮಹಾವೀರನ ಶಿರದ ಎರಡೂ ಬದಿಗಳಲ್ಲಿ ಚಾಮರಗಳನ್ನು ಕೆತ್ತಲಾಗಿದ್ದು ತಲೆಯ ಮೇಲೆ ಕೊಡೆಯಿದೆ. ಸುತ್ತಲೂ ಕೆತ್ತಲಾಗಿರುವ ತೀರ್ಥಂಕರ ಶಿಲ್ಪಗಳು ಗಾತ್ರದಲ್ಲಿ ಬಹಳ ಚಿಕ್ಕ ಕಲಾಕೃತಿಗಳು. ಶಿಲ್ಪದ ಸುತ್ತಲಿನ ಚೌಕಟ್ಟಿನ ಉಳಿದ ಸ್ಥಳದಲ್ಲಿ ಹಲವಾರು ಹೂಬಳ್ಳಿಗಳ ಅಲಂಕಾರಿಕ ಕೆತ್ತನೆಗಳಿವೆ.

ಶಿಲ್ಪ –೪

ಬಾದಾಮಿಯ ಜೈನ ಗುಹಾಲಯದ ಭಿತ್ತಿಯಲ್ಲಿ ಮಹಾವೀರನು ಚಿಕ್ಕಗಾತ್ರದಲ್ಲಿದ್ದಾನೆ. ಇವನ ಕೇಶವು ಗುಂಗುರು ಗುಂಗುರಾಗಿದ್ದು ಉದ್ದನೆಯ ಕಿವಿಗಳು ಎರಡೂ ಬದಿಗಳಲ್ಲಿ ಜೋತಾಡುತ್ತಿವೆ. ಮಹಾವೀರನ ತಲೆಯ ಮೇಲೆ ಮುಕ್ಕೊಡೆಯಿದ್ದು, ಸುಂದರವಾಗಿ ರಚಿಸಲಾಗಿದೆ. ತಲೆಯ ಹಿಂದೆ ತುಸು ದೀರ್ಘ ವೃತ್ತಾಕಾರದ ಪ್ರಭಾಮಂಡಲವಿದ್ದು, ಅದನ್ನು ಚುಕ್ಕೆ–ಚುಕ್ಕೆಯಾಗಿ ಕೆತ್ತಲಾಗಿದೆ. ಈ ಹಿನ್ನೆಲೆಯಲ್ಲಿ ಯಕ್ಷರಿಬ್ಬರು (ಚಾಮರಧಾರಿಗಳು) ಎಡಬಲಗಳಲ್ಲಿ ಮಕರ ಪ್ರಾಣಿಯ ಮೇಲೆ ಕುಳಿತಿರುವ ಈ ಶಿಲ್ಪವು ಉಬ್ಬುಶಿಲ್ಪವಾಗಿದೆ. ಇದರ ಕೊರತೆ ಎಂದರೆ ಇವರನ್ನು ಅರ್ಧಮಾತ್ರ ಕೆತ್ತಲಾಗಿದೆ.

ಮಹಾವೀರನು ಕುಳಿತಿರುವ ಮಂಟಪದ ಸುತ್ತ ಯಾವುದೇ ಕೆತ್ತನೆಯಿಲ್ಲ. ಮಹಾವೀರನ ದೇಹವು ಸುಪುಷ್ಟವಾಗಿದೆ. ಅಗಲವಾದ ಭುಜಗಳು, ವಿಶಾಲವಾದ ಎದೆಯನ್ನು ಗಮನಿಸಬಹುದು.

'ಹಿಂಭಾಗದ ಉಳಿದ ಸ್ಥಳವೆಲ್ಲ ಸಾಲವೃಕ್ಷದ ಎಲೆಗಳಿಂದ ತುಂಬಿಕೊಂಡಿದೆ. ಮೇಲೆ ಮಾಲೆ ಹಿಡಿದು ಹಾರಾಡುವ ಗಂಧರ್ವರು ಶಿಲ್ಪಿತರಾಗಿದ್ದಾರೆ. ಆಯತಾಕಾರದ ಸಿಂಹಾಸನದ ಚೌಕಟ್ಟಿನಲ್ಲಿ ಮಕರ ಚಿತ್ರಗಳ ಅಲಂಕಾರವಿದೆ. ಇದರ ಮೇಲ್ಭಾಗದಲ್ಲಿ ಎರಡು ಮೃದಂಗಗಳನ್ನು ಕೆತ್ತಲಾಗಿದೆ. ಅವುಗಳ ಎಡಬಲಗಳಲ್ಲಿ ಅವನ್ನು ನುಡಿಸುವ ಅಂಗೈಗಳನ್ನು ಮಾತ್ರ ತೋರಿಸಲಾಗಿದೆ. ಇದು ಮಹಾವೀರನು ಕೇವಲ ಜ್ಞಾನವನ್ನು ಸಂಪಾದಿಸಿದ ಸನ್ನಿವೇಶವಿರಬಹುದು. ಪೀಠದಲ್ಲಿ ಮೂರು ಸಿಂಹಗಳನ್ನು ಕೆತ್ತಿರಿಸಲಾಗಿದೆ.[೨೨] 'ಧ್ಯಾನಮುದ್ರೆಯಲ್ಲಿರುವ ಮಹಾವೀರನ ಬಲಬದಿಯಲ್ಲಿ ಒಂದು ಸ್ತ್ರೀಶಿಲ್ಪವಿದ್ದು ಈಕೆ ಮಹಾವೀರನ ಭಕ್ತೆ, ಜಕ್ಕವ್ವೆಯೆನ್ನಲಾಗಿದೆ'.[೨೩] ಈಕೆಯು ಕುಳಿತು ಮಹಾವೀರನಿಗೆ ಕೈಮುಗಿಯುತ್ತಿರುವಂತಿದ್ದು, ಹೆಚ್ಚಿನ ಕಲಾತ್ಮಕತೆಯಿಲ್ಲವಾದರೂ ವಿವರಗಳನ್ನು ಗಮನಿಸಬಹುದು. ದೊಡ್ಡದಾದ ಮುಖ, ತಲೆಯ ಮೇಲೆ ದೊಡ್ಡದಾದ ತುರುಬನ್ನು ಹೊಂದಿದ್ದಾಳೆ. ಮೈಮೇಲೆ ಹಲವಾರು ಆಭರಣಗಳ ಕೆತ್ತನೆಯೂ ಇದೆ. ಉದ್ದವಾದ ಮೂಗು, ಸಾಮಾನ್ಯವಾದ ದೇಹಾಕೃತಿಯಿದ್ದು, ಇದು ಸ್ತ್ರೀಯಂತಿರುವುದರಿಂದ ಬಹುಶಃ ಭಕ್ತೆಯ ಶಿಲ್ಪವಿದಾಗಿರಬಹುದು.

ಶಿಲ್ಪ –೫

ಇಲ್ಲಿ ಕಂಡುಬರುವ ಇನ್ನೊಂದು ಪ್ರಮುಖ ಶಿಲ್ಪ 'ಪಾರ್ಶ್ವನಾಥ'. ಪ್ರಾಚೀನ ಕರ್ನಾಟಕದಲ್ಲಿ ಇಪ್ಪತ್ತಮೂರನೆಯ ತೀರ್ಥಂಕರನಾದ ಪಾರ್ಶ್ವನಾಥನ ಮೂರ್ತಿಗಳು ಹೆಚ್ಚಾಗಿ ಕಂಡುಬರುತ್ತವೆ. ಕರ್ನಾಟಕದ ಜೈನರಿಗೆ ಪಾರ್ಶ್ವನಾಥ ಅತಿ ಹೆಚ್ಚು ಪ್ರೀತಿಯ ದೇವರಿಗೆ ಇಷ್ಟವಾಗಿದ್ದರೆ ಆಶ್ಚರ್ಯವಿಲ್ಲ. 'ಬಾದಾಮಿಯ ಜಿನಾಲಯದ ಪಶ್ಚಿಮ ಗೋಡೆಯ ಮೇಲೆ ಪಾರ್ಶ್ವನಾಥನು ಕಾಯೋತ್ಸರ್ಗ ಭಂಗಿಯಲ್ಲಿರುವಂತೆ ಮಾನವಾಕೃತಿಗಿಂತ ತುಸು ದೊಡ್ಡ ಗಾತ್ರದಲ್ಲಿ ಶಿಲ್ಪಿತನಾಗಿದ್ದಾನೆ. ಆತನ ತಲೆಯ ಮೇಲೆ ಐದು ಹೆಡೆಯ ನಾಗನನ್ನು ಕೆತ್ತಲಾಗಿದೆ. ಪಾರ್ಶ್ವನಾಥನ ಬಲಕ್ಕೆ ಪದ್ಮಾವತಿ, ಯಕ್ಷಿಣಿ (ಇವಳ ತಲೆಯ ಮೇಲೆ ಹಾವಿನ ಹೆಡೆಯಿದೆ) ಪಾರ್ಶ್ವನಾಥನ ಮೇಲಿನ ಹಾವಿನ ಹೆಡೆಗಳ ಮೇಲೆ ಬರುವಂತೆ ಕೊಡೆ (ವಜ್ರಕೊಡೆ) ಹಿಡಿದಿದ್ದಾಳೆ. ಮೇಲ್ಗಡೆ ಪಾರ್ಶ್ವನಾಥನ ಜನ್ಮ ಜನ್ಮಾಂತರಗಳ ವೈರಿಯಾಗಿದ್ದ ಉಗ್ರಮುಖದ ಕಮಠನು ಎರಡೂ ಕೈಗಳಿಂದ ಬಂಡೆಯನ್ನು ಎಸೆಯಲು ಪ್ರಯತ್ನಿಸುತ್ತಿರುವಂತಿದೆ. ಕೆಳಗಡೆ ಸೋತ ಕಮಠನು ಬಲಗೈಯನ್ನು ವಿಸ್ಮಯ ಮುದ್ರೆಯಲ್ಲಿ ಹಿಡಿದು ಕುಳಿತಿದ್ದಾನೆ.[೨೪] ಎಡಬದಿಯಲ್ಲಿ ಧರಣೇಂದ್ರ ಕುಳಿತಿದ್ದಾನೆ. ಇಲ್ಲಿಯೂ ಕೂಡಾ ಶಿಲ್ಪಿಯು ಅಪ್ರಧಾನ ವ್ಯಕ್ತಿಗಳಾದ ಪದ್ಮಾವತಿ, ಧರಣೇಂದ್ರ ಹಾಗೂ ಕಮಠರ ಶಿಲ್ಪಗಳನ್ನು ಉದ್ದೇಶಪೂರ್ವಕವಾಗಿ ಪೂರ್ಣಗೊಳಿಸಿಲ್ಲ. ಪರಿಪೂರ್ಣನಾದ ತೀರ್ಥಂಕರನ ಪ್ರತಿಮೆ ಮಾತ್ರ

೨೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೯

೨೩. ಆನಂದ ಕೆ. ಪೂಜಾರ : ಐತಿಹಾಸಿಕ ಬಾದಾಮಿ ಪರಿಚಯ, ಪುಟ – ೪೬

೨೪. ಡಾ. ಅಂಬಳಿಕೆ ಹಿರಿಯಣ್ಣ (ಸಂ.) ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ – ೩೮೮



ಪರಿಪೂರ್ಣವಾಗಿದೆ. ಉಳಿಯ ಹೊಡೆತದ ಗುರುತುಗಳು ಮಳೆ ಸುರಿಯುವ ಪರಿಣಾಮವನ್ನು ಹಿನ್ನೆಲೆಯಲ್ಲಿ ನೀಡಿವೆ. ಇದು ಕಮಠನು ಸುರಿಸಿದ ಕಷ್ಟಗಳ ಮಳೆ'.[೨೫] ಪಾರ್ಶ್ವನಾಥನ ಶಿಲ್ಪವನ್ನು ಕರ್ನಾಟಕದ ಹೆಚ್ಚಿನ ಜೈನ ಮಂದಿರಗಳಲ್ಲಿ ಇಂದು ನಾವು ಕಾಣುತ್ತೇವೆಯಾದರೂ ಬಾದಾಮಿಯ ಚಾಲುಕ್ಯರ ಕಾಲದ ಇಲ್ಲಿನ ಜೈನ ಪಾರ್ಶ್ವನಾಥನ ಶಿಲ್ಪಕ್ಕೆ ಹೆಚ್ಚಿನ ಮಹತ್ವವಿದೆ. ಮಾನವಾಕೃತಿಗಿಂತ ತುಸು ದೊಡ್ಡದಾಗಿರುವ ಇಲ್ಲಿನ ಶಿಲ್ಪವು ಕರ್ನಾಟಕದ ಮಟ್ಟಿಗೆ ಮೊದಲನೆಯದು. ಇದರ ಕೆತ್ತನೆ ಕೂಡಾ ವಿಶಿಷ್ಟವಾಗಿ ಹಾಗೂ ಸುಂದರವಾಗಿ ಕಂಡುಬರುತ್ತದೆ. ಇಲ್ಲಿ ಪಾರ್ಶ್ವನಾಥನು ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿರುವ ಶೈಲಿಯಲ್ಲಿದೆ. ಅವನ ಹಿಂದೆ ತಲೆಯ ಮೇಲೆ ಐದು ಹೆಡೆಯ ನಾಗನು ಪಾರ್ಶ್ವನಾಥನಿಗೆ ನೆರಳಾಗಿದ್ದಾನೆ. ನಾಗನ ಹೆಡೆಗಳ ಕೆತ್ತನೆ ಅತ್ಯಂತ ಜೀವಂತಿಕೆಯಿಂದ ಕೂಡಿದೆ. ಪಾರ್ಶ್ವನಾಥನ ಮುಖಭಾವವು ಶಾಂತಚಿತ್ತದಿಂದ ತುಂಬಿದೆ. ಮುಖವು ದೇಹದ ಒಟ್ಟು ಪ್ರಮಾಣಕ್ಕೆ ಹೋಲಿಸಿದರೆ ತುಸು ಚಿಕ್ಕದಾಗಿರುವಂತೆ ಕಂಡುಬರುತ್ತದೆ. ತಲೆಯ ಕೂದಲನ್ನು ಅರ್ಧವೃತ್ತಾಕಾರದಲ್ಲಿರುವಂತೆ ಕೆತ್ತಲಾಗಿದ್ದು ನೆತ್ತಿಯ ಮೇಲೆ ಸಣ್ಣಗಾತ್ರದಲ್ಲಿ ಉಷ್ಣೀಶವಿದೆ.

ಅಗಲವಾದ ಎದೆಭಾಗ, ವಿಶಾಲವಾದ ವಕ್ಷಃಸ್ಥಲ, ಬಿಲ್ಲಿನಂತೆ ಬಾಗಿದ ಎರಡೂ ಕೈಗಳು ಎಡ-ಬಲಗಳಲ್ಲಿ ತೊಡೆಯವರೆಗೂ ಇಳಿದಿವೆ. ಉದ್ದವಾದ ಜೋಲುಕಿವಿ, ದುಂಡಗಾದ ತೊಡೆಭಾಗ ಇತ್ಯಾದಿಗಳು ಆತನ ದೃಢಕಾಯವನ್ನು ತೋರಿಸುತ್ತವೆ. ಅವನ ಬಲಭಾಗದಲ್ಲಿ ಯಕ್ಷಿಣಿಯು ಅವನಿಗೆ ಚಾಮರ ಬೀಸುತ್ತಿದ್ದಾಳೆ. ಪಾರ್ಶ್ವನಾಥನ ಎಡಭಾಗಲ್ಲಿ ಧರಣೇಂದ್ರ ಯಕ್ಷನು ವೀರಾಸನದಲ್ಲಿ ಕುಳಿತಿದ್ದಾನೆ. ಪದ್ಮಾವತಿ, ಯಕ್ಷಿಣಿಯ ಶಿಲ್ಪವನ್ನಾಗಲಿ, ಧರಣೇಂದ್ರನ ಶಿಲ್ಪವನ್ನಾಗಲಿ ಪೂರ್ಣವಾಗಿ ಕೆತ್ತಿಲ್ಲ. ಯಕ್ಷಿಣಿಯ ಶಿಲ್ಪವು ತೆಳು ಉಬ್ಬು ಶಿಲ್ಪದ ರೀತಿಯಲ್ಲಿದೆ. ಆದರೆ ಮುಖ ಮತ್ತು ದೇಹದ ಮೇಲಿನ ಭಾಗವನ್ನು ಸ್ಪಷ್ಟವಾಗುವಂತೆ ಕೆತ್ತಲಾಗಿದೆ. ಆಕೆಯ ಕುತ್ತಿಗೆಯಲ್ಲಿ ಕೆಲವು ಕಂಠಹಾರಗಳು, ತೋಳಿನಲ್ಲಿ ತೋಳುಬಂಧಿ, ಕೈಬಳೆ, ಕಾಲಿನಲ್ಲಿ ಗೆಜ್ಜೆ ಇತ್ಯಾದಿಗಳಿವೆ. ತಲೆಯಲ್ಲಿ ವಿಶಿಷ್ಟ ಕೆತ್ತನೆಯ ತುರುಬನ್ನು ಗಮನಿಸಬಹುದು.

ಯಕ್ಷಿಣಿಯು ಬಲಗೈಯಲ್ಲಿ ಚಾಮರದ ದಂಡವನ್ನು ಹಿಡಿದಿದ್ದು ಎಡಭಾಗಕ್ಕೆ ಚಾಮರದ ಚೌರಿಯನ್ನು ಹಿಡಿದಿದ್ದಾಳೆ. ಮೇಲುನೋಟಕ್ಕೆ ಈ ಶಿಲ್ಪದ ಕೆತ್ತನೆಯು ಅಪೂರ್ಣವೆಂಬಂತೆ ಭಾಸವಾಗುತ್ತದೆ. ಈಕೆಯ ದೇಹರಚನೆಗಾಗಲಿ, ಸೌಂದರ್ಯಕ್ಕಾಗಲಿ ಶಿಲ್ಪಿಯು ಹೆಚ್ಚಿನ ಮನ್ನಣೆ ನೀಡಿದಂತೆ ಕಂಡುಬರುವುದಿಲ್ಲ. ಮುಖವು ಶಾಂತವಾಗಿದ್ದು ಯಾವುದೇ ಭಾವನೆಗಳಿಗೆ ಅವಕಾಶವಿಲ್ಲ. ಇನ್ನು ಧರಣೇಂದ್ರನ ಶಿಲ್ಪವೂ ಹಾಗೆಯೇ, ಈ ಶಿಲ್ಪವೂ ಮೇಲುನೋಟಕ್ಕೆ ಅಪೂರ್ಣ ಶಿಲ್ಪದಂತೆ ಕಂಡುಬರುತ್ತದೆ. ಕುಬ್ಜಗಾತ್ರದಲ್ಲಿರುವಂತೆ ಕೆತ್ತಲಾಗಿರುವ ಈ ಶಿಲ್ಪದಲ್ಲಿ ಧರಣೇಂದ್ರನು ವೀರಾಸನದಲ್ಲಿರುವಂತೆ ಕುಳಿತಿದ್ದಾನೆ. ಅವನ ಬಲಗೈಯು ಅಶೀರ್ವಾದ

೨೫. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೫

ಮಾಡುವಂತೆ ಮೇಲಿದೆ. ಎಡಗೈಯನ್ನು ಭೂಮುದ್ರೆಯಲ್ಲಿ ಇರಿಸಿದ್ದಾನೆ. ಕುತ್ತಿಗೆಯಲ್ಲಿ ದಪ್ಪವಾದ ಹಾರಗಳಿವೆ. ತಲೆಯ ಮೇಲೆ ದೊಡ್ಡದಾದ ಕರಂಡ ಮುಕುಟವಿದೆ. ಇಲ್ಲಿ ಸರಳವಾದ ವಿನ್ಯಾಸಗಳನ್ನು ಕೆತ್ತಲಾಗಿದೆ. ಇಲ್ಲಿ ಕೂಡಾ ಶಿಲ್ಪಿಯು ಯಕ್ಷನ ದೇಹರಚನೆಗಾಗಲಿ, ಸೌಂದರ್ಯಕ್ಕಾಗಲಿ ಯಾವುದೇ ಮಹತ್ವ ನೀಡದಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಕಮಠನ ಶಿಲ್ಪವಿದೆ. ಅತ್ಯಂತ ಕೋಪದಿಂದ ಕೂಡಿರುವ ಮುಖಭಾವ ಇವನದು. ಕೆತ್ತನೆಯ ದೃಷ್ಟಿಯಿಂದ ಈ ಶಿಲ್ಪವೂ ಮಹತ್ವವನ್ನು ಪಡೆದಿಲ್ಲವಾದರೂ ವಸ್ತುವಿಷಯವನ್ನು ಚಿತ್ರೀಕರಿಸಿದ ರೀತಿಯಿಂದ ಮಹತ್ವ ಪಡೆಯುತ್ತದೆ. ಹಲವು ಜನ್ಮಗಳ ವೈರಿಯಂತಿರುವ ಕಮಠನು ಜಿನನ ಕುರಿತು ಅಸಹನೆಯನ್ನು ವ್ಯಕ್ತಪಡಿಸಲು ಸಂಯೋಜಿಸಿದ ರೀತಿ ಈ ಶಿಲ್ಪದಲ್ಲಿ ಗಮನಾರ್ಹವಾಗಿದೆ.

ಇಲ್ಲಿ ಕೂಡಾ ಶಿಲ್ಪದ ಕೆತ್ತನೆಯಲ್ಲಿ ವಿವರಗಳಿಲ್ಲ ಹಾಗೂ ಅಸ್ಪಷ್ಟತೆಯನ್ನು ಕಾಣುತ್ತೇವೆ. ಅಂದರೆ ಜಿನನ ಮುಂದೆ ಆತನ ವೈರಿಗಳು ನಗಣ್ಯರು ಎಂಬ ಭಾವನೆ ಬರುವಂತಿದೆ. ಇಲ್ಲಿ ಗಮನಾರ್ಹವಾದುದು ಹಾವಿನ ಹೆಡೆಗಳು. ಏಕೆಂದರೆ ಐದು ಹೆಡೆಗಳ ಈ ಹೆಡೆಗುಚ್ಛದಲ್ಲಿ ಮಧ್ಯದ ಹೆಡೆಯು ವೃತ್ತಾಕಾರವಾಗಿದ್ದು, ಇದು ಆಳವಾದ ಕೆತ್ತನೆಯನ್ನು ಹೊಂದಿದೆ, ಉಳಿದ ಹೆಡೆಗಳು ಅದಕ್ಕೆ ಪೂರಕವಾಗಿ ಕೆತ್ತಲ್ಪಟ್ಟಿದ್ದು ಕೆತ್ತನೆಯಲ್ಲಿ ತ್ರಿಮಾನದ ಪೂರ್ಣ ಅನುಭವವಾಗುತ್ತದೆ. ವಿವರಗಳನ್ನು ಸ್ಪಷ್ಟವಾಗಿ ಕೆತ್ತಲಾಗಿದ್ದು ಹೆಡೆಯ ಮಧ್ಯದ ಉಬ್ಬುತಗ್ಗುಗಳನ್ನು ಮತ್ತು ಸುರುಳಿಗಳನ್ನು ಸ್ಪಷ್ಟವಾಗಿ ಕೆತ್ತಲಾಗಿದೆ. ಈ ಹೆಡೆಯ ಸಂಯೋಜನೆಯು ತ್ರಿಕೋನದ ರೀತಿಯಲ್ಲಿದ್ದು ಇಲ್ಲಿರುವ ಇನ್ನೊಂದು ಶಿಲ್ಪದಲ್ಲಿ ವೃತ್ತ ಸಂಯೋಜನೆಯಿರುವುದನ್ನು ಗಮನಿಸಬಹುದು.

ಈ ಹಿನ್ನೆಲೆಯಲ್ಲಿ ಉಳಿಯ ಹೊಡೆತವನ್ನು ತೋರಿಸುವಂತೆ ಉಳಿಯ ಹೊಡೆತಗಳನ್ನು ಉಳಿಸಿಕೊಳ್ಳಲಾಗಿದ್ದು, ಇವು ಆಳವಾಗಿದ್ದು, ಜೋರಾದ ಹೊಡೆತ ಎಂಬ ಭಾವನೆ ಉಂಟಾಗುವಂತಿದೆ. ಅದು ಬಿಟ್ಟರೆ ಹಾವಿನ ದೇಹದ ಸುರುಳಿಯನ್ನು ಭಾಗಶಃ ನೋಡಬಹುದು. ಒಟ್ಟು ಶಿಲ್ಪವು ಗಾತ್ರದಲ್ಲಿ ಮೊದಲ ಮೂರು ಗುಹೆಗಳಂತೆ ದೊಡ್ಡದಲ್ಲದಿದ್ದರೂ ಲಭ್ಯವಾದ ಸ್ಥಳಾವಕಾಶದಲ್ಲಿ ಶಿಲ್ಪದ ಕೆತ್ತನೆಯನ್ನು ಸಂಯೋಜಿಸಿದ ರೀತಿ ಗಮನಾರ್ಹವಾದುದು. ದೇವನಿಗಿಂತ ಯಾವುದೂ ಮತ್ತು ಯಾರೂ ಪರಿಪೂರ್ಣರಲ್ಲ ಹಾಗೂ ಮುಖ್ಯರಲ್ಲ ಎಂಬುದನ್ನು ತೋರಿಸುವುದಕ್ಕಾಗಿ ಉಳಿದ ಕೆತ್ತನೆಗಳನ್ನು ಸೂಚ್ಯವಾಗಿ ತೋರಿಸಿ, ಕೇವಲ ಜಿನನ ಶಿಲ್ಪವನ್ನು ಮಾತ್ರ ಸುಂದರವಾಗಿ ಮತ್ತು ಪರಿಪೂರ್ಣವಾಗುವಂತೆ ಕೆತ್ತಿರುವುದು ಶಿಲ್ಪಿಯ ಜಾಣ್ಮೆಯನ್ನು ತೋರಿಸುತ್ತದೆ.

ಇನ್ನುಳಿದಂತೆ ಇಲ್ಲಿ ಇನ್ನೂ ಕೆಲವು ಶಿಲ್ಪಗಳಿವೆ. ಅವುಗಳಲ್ಲಿ ಇನ್ನೊಂದು ಪಾರ್ಶ್ವನಾಥನ ಶಿಲ್ಪವೂ ಇದೆ. ಇಲ್ಲಿನ ಶಿಲ್ಪದಲ್ಲಿ ಪಾರ್ಶ್ವನಾಥನ ಶಿಲ್ಪವು ಮೊದಲಿನ ಶಿಲ್ಪದಂತೆಯೇ ಇದ್ದರೂ ಕೆಲ ವ್ಯತ್ಯಾಸಗಳನ್ನು ಗಮನಿಸಬಹುದು. ಈ ಶಿಲ್ಪದಲ್ಲಿ ಪಾರ್ಶ್ವನಾಥನ ಮುಖವು ಚೌಕಾಕೃತಿಯಲ್ಲಿದೆ, ಅದೇ ಮೊದಲು ನೋಡಿದ ಶಿಲ್ಪದಲ್ಲಿ ಜಿನನ ಮುಖವು ದುಂಡಗಿದೆ.

ಭುಜವು ವಿಶಾಲವಾಗಿದ್ದರೂ ಅದಕ್ಕೆ ಒಪ್ಪುವಂತೆ ದೇಹರಚನೆಯಿಲ್ಲ. ತಲೆಯ ಮೇಲಿನ ನಾಗಹೆಡೆಯು ವೃತ್ತ ಸಂಯೋಜನೆಯಾಗಿದೆ.

ಶಿಲ್ಪ –೬

ಮೊದಲ ಶಿಲ್ಪದಲ್ಲಿ ಕಂಡಂತೆ ಅಲಂಕಾರಿಕವಾಗಿಲ್ಲದಿದ್ದರೂ ಸಾಕಷ್ಟು ವಿವರವಾಗಿ ಕೆತ್ತಲಾಗಿದ್ದು ಹೆಚ್ಚು ಎತ್ತರವಾಗಿದೆ. ಮಧ್ಯದ ಹೆಡೆಯನ್ನು ವಿವರವಾಗಿ ಕೆತ್ತಲಾಗಿದ್ದು ಅಡ್ಡಗೆರೆಗಳು ಸ್ಪಷ್ಟವಾಗಿವೆ. ಹೆಡೆಯ ಮೇಲುಭಾಗದಲ್ಲಿ ಮುಕ್ಕೊಡೆಯನ್ನು ನೇರವಾಗಿ ಕೆತ್ತಲಾಗಿದ್ದು, ಇದು ದ್ವಿಮಾನದಲ್ಲಿದೆ. ಇದೇ ರೀತಿಯ ಕೊಡೆಯನ್ನು ಮೊದಲು ನೋಡಿದ ಶಿಲ್ಪದಲ್ಲಿ ಅರ್ಧವೃತ್ತಾಕಾರದಲ್ಲಿ ತೆಳುವಾಗಿ ಕೆತ್ತಲಾಗಿದ್ದು, ಅದು ಗಮನಕ್ಕೆ ಬರುವಂತಿಲ್ಲ. ಆದರೆ ಇಲ್ಲಿ ಅದನ್ನು ವಿವರವಾಗಿ ಕೆತ್ತಲಾಗಿದೆ. ಇನ್ನೊಂದು ಗಮನಾರ್ಹ ಅಂಶವೆಂದರೆ, ಇಲ್ಲಿ ನಾಗರಾಜನ ದೇಹವನ್ನು ಸ್ಪಷ್ಟವಾಗಿ ತಿರುವುಗಳ ಮೂಲಕ ಜಿನನ ಹಿಂಬದಿಯಲ್ಲಿ ಕಲಾತ್ಮಕವಾಗಿ ಕೆತ್ತಿರುವುದು, ಜಿನನ ಹಿಂಬದಿಯಲ್ಲಿ ಆತನ ಪಾದದಿಂದಲೇ ಪ್ರಾರಂಭವಾಗುವಂತೆ ಸುರುಳಿ ಸುರುಳಿಯಾಗಿ ಮೇಲಿನ ವರೆಗೂ ಒಂದೆ ರೀತಿಯಲ್ಲಿ ವಿವರವಾಗಿ ಕೆತ್ತಲಾಗಿದೆ. ಇದರಿಂದಾಗಿ ಜಿನನ ಜೊತೆಗೆ ಹಾವಿಗೂ ಜೀವಂತಿಕೆ ಬಂದಿದೆ. ಇಲ್ಲಿ ಬೇರಾವುದೇ ಪೂರಕ ಶಿಲ್ಪಗಳಿಲ್ಲ. ಕೇವಲ ಪಾರ್ಶ್ವನಾಥನ ಶಿಲ್ಪವನ್ನಷ್ಟೇ ಸರಳವಾಗಿ ಸುಂದರವಾಗಿ ಕೆತ್ತಲಾಗಿದೆ.

ಇದಲ್ಲದೆ ಇನ್ನೂ ಹಲವಾರು ತೀರ್ಥಂಕರರ ಶಿಲ್ಪಗಳು ಮತ್ತು ಯಕ್ಷ–ಯಕ್ಷಿಯರ ಶಿಲ್ಪಗಳೂ, ಕೆಲ ಸಾಮಾಜಿಕ ವ್ಯಕ್ತಿಗಳ ಶಿಲ್ಪಗಳನ್ನು ಇಲ್ಲಿ ಕೆತ್ತಿರುವುದನ್ನು ಕಾಣಬಹುದು. ಇನ್ನುಳಿದಂತೆ ಕೆಲವು ತೀರ್ಥಂಕರರ ಶಿಲ್ಪಗಳು ಸಣ್ಣಗಾತ್ರದಲ್ಲಿವೆ. ಮುಖ್ಯವಾಗಿ ಪಾರ್ಶ್ವನಾಥ ತೀರ್ಥಂಕರ ಮತ್ತು ಬಾಹುಬಲಿಯ ಶಿಲ್ಪಗಳ ಸುತ್ತಲೂ ತೀರ್ಥಂಕರ ಶಿಲ್ಪಗಳನ್ನು ಕೆತ್ತಲಾಗಿದೆ. ಇದಲ್ಲದೆ ಆಕಾಶದಲ್ಲಿ ಹಾರುತ್ತಿರುವ ಗಂಧರ್ವ ದಂಪತಿಗಳ ಶಿಲ್ಪವನ್ನಿಲ್ಲಿ ಉಲ್ಲೇಖಿಸಬಹುದು. ಇದು ಸಾಮಾನ್ಯವಾಗಿ ಕೆತ್ತಲಾಗಿರುವ ಶಿಲ್ಪವಾದರೂ ಶಿಲ್ಪದ ಕೆತ್ತನೆಯ ದೃಷ್ಟಿಯಿಂದ ಉತ್ತಮ ಕಲಾತ್ಮಕತೆಯಿಂದ ಕೂಡಿದೆ. ದಂಪತಿಗಳು ಆಕಾಶದಲ್ಲಿ ಹಾರಾಡುತ್ತಿದ್ದು ಶಿಲ್ಪದಲ್ಲಿ ವೇಗವನ್ನು ಗಮನಿಸಬಹುದು.

ಅಲಂಕಾರಿಕವಾದ ಕಿರೀಟ ಮತ್ತು ಇತರ ಅಲಂಕರಣಗಳಿಂದ ಕೂಡಿದ ಈ ಶಿಲ್ಪವು ಸಣ್ಣದಾಗಿದ್ದರೂ ಗಮನ ಸೆಳೆಯುತ್ತದೆ. ಇನ್ನೊಂದು ಇಲ್ಲಿ ಉಲ್ಲೇಖಿಸಬಹುದಾದ ಶಿಲ್ಪ ಲೌಕಿಕ ವಿಷಯಕ್ಕೆ ಸಂಬಂಧಪಟ್ಟದ್ದು. ಇಲ್ಲಿ ಬಹುಶಃ ಚಾಲುಕ್ಯ ಅರಸ ಮತ್ತು ಆತನ ಪತ್ನಿಯರನ್ನು ಕೆತ್ತಿರಬಹುದೆನಿಸುತ್ತದೆ. ಇದು ತೆಳು ಉಬ್ಬುಶಿಲ್ಪದಲ್ಲಿ ಕೆತ್ತಲಾದ ಫಲಕವಾಗಿದೆ. ಇಲ್ಲಿ ರಾಜನು ಆರಾಮವಾಗಿ ಆಸೀನನಾಗಿದ್ದು ಪಕ್ಕದಲ್ಲಿ ಸೇವಕಿಯರು ಚಾಮರ ಬೀಸುತ್ತಿದ್ದಾರೆ. ಆತನ ಬಲಭಾಗದಲ್ಲಿ ರಾಣಿಯು ಆಸೀನಳಾಗಿದ್ದಾಳೆ. ಶಿಲ್ಪವು ಸರಳತೆಯಿಂದ ಕೂಡಿದ್ದು

ರಾಜನು ಕುಳಿತಿರುವ ಭಂಗಿ ಮತ್ತು ಮುಖದಲ್ಲಿ ರಾಜಗಾಂಭೀರ್ಯವನ್ನು ಗಮನಿಸಬಹುದು. ಇಲ್ಲಿರುವ ಸಣ್ಣಗಾತ್ರದ ತೀರ್ಥಂಕರ ಶಿಲ್ಪಗಳಲ್ಲಿ ವಿಶೇಷ ಮಹತ್ವವೇನೂ ಕಂಡುಬರುವುದಿಲ್ಲ. ಇಲ್ಲಿ ನಾವು ಗಮನಿಸಬೇಕಾದ ಒಂದು ಪ್ರಮುಖ ವಿಚಾರವೆಂದರೆ, ಜೈನ ಶಿಲ್ಪಗಳಲ್ಲಿ ತೀರ್ಥಂಕರ ಶಿಲ್ಪಗಳೆಲ್ಲವನ್ನೂ ಸಾಮಾನ್ಯವಾಗಿ ಒಂದೇ ರೀತಿಯಲ್ಲಿ ಕೆತ್ತಲಾಗಿದ್ದು ಆತನ ಕೆಲವು ಲಕ್ಷಣಗಳ ಆಧಾರದಿಂದ ಇದು ಇಂತಹ ತೀರ್ಥಂಕರನ ಶಿಲ್ಪವೆಂದು ಹೇಳಬಹುದಾಗಿದೆ. ಉಳಿದಂತೆ ಸಾಮಾನ್ಯವಾಗಿ ಸುತ್ತಲೂ ಸಣ್ಣಗಾತ್ರದ ತೀರ್ಥಂಕರ ಶಿಲ್ಪಗಳನ್ನು ಪ್ರಮುಖ ಶಿಲ್ಪದ ಸುತ್ತಲಿನ ಗೋಡೆಯಲ್ಲಿ ಕೆತ್ತಲಾಗಿದೆ. ತೀರ್ಥಂಕರನ ಶಿಲ್ಪದ ಎಡ ಮತ್ತು ಬಲಭಾಗಗಳಲ್ಲಿ ಆತನ ಯಕ್ಷ ಮತ್ತು ಯಕ್ಷಿಣಿಯರ ಶಿಲ್ಪಗಳಿರುತ್ತವೆ. ಅದನ್ನು ಹೊರತುಪಡಿಸಿದರೆ ಸಾಮಾನ್ಯವಾಗಿ ಜೈನ ಶಿಲ್ಪಗಳಲ್ಲಿ ಹೊರ ಆವರಣದಲ್ಲಿ ಲತಾಕುಂಜಗಳ ಅಲಂಕಾರಿಕ ಕೆತ್ತನೆಯಿರುತ್ತದೆ. ಅಂತಹ ಕೆತ್ತನೆಗಳನ್ನಿಲ್ಲಿಯೂ ಕಾಣಬಹುದಾಗಿದೆ.

ಇನ್ನು ಅಪರೂಪವಾಗಿ ಲೌಕಿಕ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಅವುಗಳೆಂದರೆ ಆ ಜೀನಾಲಯದ ನಿರ್ಮಾಣಕ್ಕೆ ಕೊಡುಗೆ ನೀಡಿದ ರಾಜ ಅಥವಾ ವ್ಯಾಪಾರಿಗಳ ದಂಪತಿಶಿಲ್ಪಗಳನ್ನು ಕೆತ್ತಲಾಗುತ್ತದೆ, ಅಂತಹ ಒಂದು ಶಿಲ್ಪವು ಇಲ್ಲಿರುವುದನ್ನು ಗಮನಿಸಬಹುದು. ಬಾದಾಮಿಯ ಜಿನಾಲಯವು ಉಳಿದ ಗುಹಾಲಯಗಳ ಕೆತ್ತನೆಯ ಶತಮಾನದ ನಂತರ ಕೆತ್ತಲಾಗಿದ್ದು ಇದು ಇಲ್ಲಿ ಕಂಡುಬರುವ ಕೊನೆಯ ಗುಹಾಂತರ ಕೆತ್ತನೆಯಾಗಿದೆ. ಇಲ್ಲಿನ ಶಿಲ್ಪಗಳನ್ನು ಕೆತ್ತನೆ ಮತ್ತು ಕಲಾತ್ಮಕತೆಯ ದೃಷ್ಟಿಯಿಂದ ಮೊದಲ ಮೂರು ಗುಹಾಲಯಗಳ ಜೊತೆಗೆ ತುಲನೆ ಮಾಡಿ ನೋಡಬಾರದು. ಶಿಲ್ಪದ ಶೈಲಿ ಮತ್ತು ಕಲಾತ್ಮಕತೆಯಿಂದ ಇಲ್ಲಿನ ಗುಹಾಲಯವು ತನ್ನದೇ ಆದ ಮಹತ್ವವನ್ನು ಹೊಂದಿದ್ದು ಶಿಲ್ಪಕಲೆಯ ಅಧ್ಯಯನಾಸಕ್ತರಿಗೆ ಉತ್ತಮ ಆಕರವಾಗಿದೆ.

ಐಹೊಳೆಯ ಜಿನಾಲಯಗಳು

ಚಾಲುಕ್ಯರ ಕಾಲದಲ್ಲಿ ಬಾದಾಮಿಯ ಗುಹಾಲಯದ ಜೈನ ಶಿಲ್ಪಕಲೆಯ ರಚನೆಗಳ ನಂತರ ನಮಗೆ ದೊರೆಯುವ ಹೆಚ್ಚಿನ ಶಿಲ್ಪಕಲೆಯ ರಚನೆಗಳು ಐಹೊಳೆಯಲ್ಲಿ ಕಂಡುಬರುತ್ತವೆ. ಇಲ್ಲಿ ಕೊರೆದು ಮಾಡಿದ ಗುಹಾಲಯಗಳ ಜೊತೆಯಲ್ಲಿ ರಾಚನಿಕ ಜಿನಾಲಯಗಳು ನಮಗೆ ಕಂಡುಬರುತ್ತವೆ. ಇಲ್ಲಿ ಮೂರು ಗುಹಾಲಯಗಳಿದ್ದು ಒಂದು ರಾವಳಫಡಿ ಗುಹಾಲಯವು ವೈದಿಕ ಸಂಪ್ರದಾಯಕ್ಕೆ ಸೇರಿದ ಗುಹಾಲಯವಾಗಿದ್ದರೆ, ಇನ್ನೆರಡು ಜೈನ ಧರ್ಮಕ್ಕೆ ಸಂಬಂಧಪಟ್ಟದ್ದು. ಗುಡ್ಡದ ಮೇಲುಭಾಗದಲ್ಲಿರುವ ಗುಡಿಯು ಮೇಗುಟಿ ಗುಡಿಯೆಂದು ಪ್ರಸಿದ್ಧವಾಗಿದೆ. ಇದು ಗುಡ್ಡದ ಮೇಲಿರುವುದರಿಂದ ಮೇಗುಡಿ ಅಥವಾ ಮೇಲ್ಗುಡಿ ಎಂಬುದಾಗಿದ್ದು ನಂತರದ ಕಾಲದಲ್ಲಿ ಮೇಗುಟಿ ಗುಡಿ ಎಂದು ಬದಲಾಗಿದೆ. ಇಲ್ಲಿನ ಬೃಹತ್ ಶಿಲಾಯುಗದ ಕಾಲದ ಸಮಾಧಿಗಳನ್ನು ದಾಟಿ ಗುಡ್ಡವನ್ನು ಇಳಿಯುವಾಗ, ಮೇಗುಡಿಯ

ಆಗ್ನೇಯಕ್ಕೆ ಸುಮಾರು ೪೦೦ ಮೀಟರುಗಳಷ್ಟು ದೂರದಲ್ಲಿ, ವಿಸ್ತಾರವಾದ ಬಂಡೆಯೊಂದನ್ನು ಕೊರೆದು ಮಾಡಿದ ಗುಹಾಲಯವಿದೆ.[೨೬] ಜೈನರ ಸಂಪ್ರದಾಯಕ್ಕೆ ಸೇರಿದ ಈ ಗುಡಿಯು ಸುಮಾರು ಎಂಟು ಮೀಟರುಗಳಷ್ಟು ಅಗಲ ಮತ್ತು ಎರಡು ಮೀಟರುಗಳಷ್ಟು ಉದ್ದವಾಗಿದೆ. ಸುಮಾರು ಏಳನೆಯ ಶತಮಾನಕ್ಕೆ ಸೇರಿರಬಹುದಾದ ಈ ಗುಹೆಯ ಪಡಸಾಲೆಯ ಭಾಗದಲ್ಲಿ ಕಂಬಗಳನ್ನು ಕೆತ್ತಲಾಗಿದ್ದು, ಪಡಸಾಲೆಯ ಒಳಭಾಗದಲ್ಲಿ ಸ್ವಸ್ತಿಕ ಮತ್ತು ಕಮಲದ ಚಿಹ್ನೆಗಳು ಮತ್ತು ಲತಾಪುಷ್ಪಗಳಿಂದ ಕೂಡಿದ ಚಿತ್ರಗಳನ್ನು ಕೆತ್ತಲಾಗಿದೆ.

ಶಿಲ್ಪ –೭

ಐಹೊಳೆಯ ಜೈನ ಗುಹಾಲಯದ ಪೂರ್ವ ಪಾರ್ಶ್ವಗೋಡೆಯಲ್ಲಿ ಬಾಹುಬಲಿಯ (ಗೊಮ್ಮಟನ) ಶಿಲ್ಪವಿದೆ. ಕಾಯೋತ್ಸರ್ಗ ಮುದ್ರೆಯಲ್ಲಿ ದಿಗಂಬರನಾಗಿ ನಿಂತಿರುವ ಬಾಹುಬಲಿ ತನ್ನ ಪರಿಸರದ ಆಗುಹೋಗುಗಳ ಪರಿವೆ ಇಲ್ಲದೆ ಅಚಲ ಮನಸ್ಕನಾಗಿ ತಪಸ್ಸನ್ನು ಆಚರಿಸುತ್ತಿದ್ದಾನೆ. ಅವನ ಕೂದಲುಗಳು ಜಡೆಗಟ್ಟಿ ಭುಜದ ಮೇಲೆ ಇಳಿಬಿದ್ದಿವೆ. ಕೆಳಗೆ ಹುತ್ತಗಳು ಬೆಳೆದು ಹಾವುಗಳು ಓಡಾಡುತ್ತಿವೆ. ಮಾಧವೀ ಬಳ್ಳಿಗಳು ಅವನ ಕೈ–ಕಾಲುಗಳನ್ನು ಬಳಸಿ ಮೇಲೇರಿವೆ. ಇವನ ಎರಡೂ ಪಾರ್ಶ್ವಗಳಲ್ಲಿ ಒಬ್ಬೊಬ್ಬರಂತೆ ಕಿರೀಟಮುಕುಟಧಾರಿಗಳಾಗಿರುವ ವಿದ್ಯಾಧರಿಯರಿದ್ದಾರೆ. ಕಂಠಹಾರಗಳು ಕುಂಡಲಗಳು ಚನ್ನವೀರದಂತೆ ಸಾಗಿರುವ ಸ್ತನಸೂತ್ರ, ಕಂಕಣಗಳು, ಪಾದಸರಗಳು ಮುಂತಾದ ಆಭರಣಗಳಿಂದ ಅಲಂಕೃತವಾಗಿ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಅವರ ಕಟಿವಸ್ತ್ರ ಮೈಗೆ ಅಂಟಿಕೊಂಡಿರುವಂತೆ ಕಾಲಗಂಟಿನವರೆಗೂ ಇಳಿದಿದೆ. ಎಡಗಡೆಯ ವಿದ್ಯಾಧರಿ ಬಲಗೈಯಿಂದ ಬಾಹುಬಲಿಯ ಮೈಗಂಟಿರುವ ಮಾಧವೀಲತೆಯನ್ನು ತನ್ನೆರಡೂ ಕೈಗಳಿಂದ ಬಿಡಿಸುವುದರಲ್ಲಿ ಮಗ್ನಳಾಗಿದ್ದಾಳೆ. ಬಾಹುಬಲಿಯ ಹಿಂಭಾಗದಲ್ಲಿ ಎಡಗಡೆ ಇಬ್ಬರು ವಿಧ್ಯಾದರರು ತೇಲುತ್ತಿದ್ದಾರೆ. ಹಿನ್ನೆಲೆಯಲ್ಲಿ ಮಾಧವೀಲತೆಗಳು ಜಾಲ ನಿರ್ಮಿಸಿವೆ. ಒಬ್ಬ ವಿದ್ಯಾಧರನು ಅದರೊಳಗಿನಿಂದ ತೂರಿ ಬರಲು ಪ್ರಯತ್ನಿಸುತ್ತಿದ್ದಾನೆ. ಕಥೆಯ ಪ್ರಕಾರ ಬಾಹುಬಲಿಯ ಮೈಬಳಸಿ ಆಕಾಶದಲ್ಲಿ ಹರಡಿದ್ದ ಮಾಧವೀಲತೆಗಳು ಖೇಚರ ವಿದ್ಯಾಧರ ದಂಪತಿಗಳ ಚಲನೆಗೆ ತಡೆಯೊಡ್ಡುತ್ತಿದ್ದವು. ತಮ್ಮ ಚಲನೆಯಿಂದ ಬಾಹುಬಲಿಯ ತಪಸ್ಸಿಗೆ ಭಂಗಬರಬಹುದೆಂಬ ಭಯದಿಂದ ವಿದ್ಯಾಧರಿಯರು ಆಗಾಗ ಮಾಧವೀಲತೆಗಳನ್ನು ಬಿಡಿಸಿ ಹೋಗುತ್ತಿದ್ದರು[೨೭] ಎಂದು ಊಹಿಸಬಹುದು.

ಶಿಲ್ಪದ ಶೈಲಿ ಮತ್ತು ಕೆತ್ತನೆಯ ಆಧಾರದ ಮೇಲೆ ಆ ಶಿಲ್ಪದ ಕಲಾತ್ಮಕ ಅಂಶಗಳನ್ನು ನಾವು ಗಮನಿಸಿ ಆ ಶಿಲ್ಪವು ಹೇಗಿದೆ, ಕಲಾತ್ಮಕ ಅಂಶಗಳೇನು, ಶಿಲ್ಪದಲ್ಲಿ ಕಂಡುಬರುವ ವೈಷಿಷ್ಟ್ಯವೇನು ಇತ್ಯಾದಿಗಳನ್ನು ಗಮನಿಸುತ್ತೇವೆ. ಹಾಗೆ ನೋಡಿದರೆ ಬಾದಾಮಿಯಲ್ಲಿ ಮತ್ತು

೨೬. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೧೦

೨೭. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೭೪

ಐಹೊಳೆಯ ಶಿಲ್ಪಗಳಲ್ಲಿ ಬಹಳಷ್ಟು ವ್ಯತ್ಯಾಸಗಳೇನಿಲ್ಲ. ಆದರೂ ಕಲಾತ್ಮಕ ದೃಷ್ಟಿಯಿಂದ ಗಮನಿಸಿದಾಗ ಬಾದಾಮಿಯ ಶಿಲ್ಪವು ಹೆಚ್ಚು ಕಲಾತ್ಮಕವಾಗಿದೆ.

ಬಾದಾಮಿಯ ಚಾಲುಕ್ಯರ ಇತಿಹಾಸ ಮತ್ತು ಶಿಲ್ಪಗಳನ್ನು ವಿಶೇಷವಾಗಿ ಅಧ್ಯಯನ ನಡೆಸಿದ ಡಾ. ಶೀಲಾಕಾಂತ ಪತ್ತಾರರು ಹೇಳುವಂತೆ 'ಜೈನಪುರಾಣಗಳನ್ನನುಸರಿಸಿ ಚಲುಕ್ಯ ರೂವಾರಿಗಳು ಗೊಮ್ಮಟಶಿಲ್ಪವನ್ನು ಕಡೆದಿರುವರು. ಬಾದಾಮಿ ಮತ್ತು ಐಹೊಳೆಯ ಗುಹಾಲಯಗಳಲ್ಲಿ ಗೊಮ್ಮಟಶಿಲ್ಪಗಳಲ್ಲಿ ವಿವರಗಳು ಒಂದೇ ಆಗಿದ್ದು ಅವುಗಳ ಕಲಾ ಅಭಿವ್ಯಕ್ತಿಯಲ್ಲಿ ವ್ಯತ್ಯಾಸವಿದೆ. ತೌಲನಿಕವಾಗಿ ನೋಡಿದಾಗ ಬಾದಾಮಿಯ ಗೊಮ್ಮಟನು ಭವ್ಯವಾಗಿ ಕಾಣುತ್ತಾನೆ. ಆತನ ಮೊಗದಲ್ಲಿ ದೈವೀ ಕಳೆ ಎದ್ದು ಕಾಣುತ್ತದೆ. ಪ್ರತಿಮೆಯು ಪ್ರಮಾಣಬದ್ಧವಾಗಿದೆ. ಹುತ್ತ, ಹಾವು, ಸುತ್ತಿಕೊಂಡ ಮಾಧವೀಲತೆಗಳು ಆತನ ತಪಸ್ಸಿನ ಕಾಠಿಣ್ಯವನ್ನು ಸೂಚಿಸುತ್ತವೆ.[೨೮] ಇಲ್ಲಿನ ಶಿಲ್ಪದಲ್ಲಿ ಬಾಹುಬಲಿಯ ಸೋದರಿಯರಾದ ಬ್ರಾಹ್ಮಿ ಮತ್ತು ಸುಂದರಿಯರ ಶಿಲ್ಪಗಳನ್ನು ಹೆಚ್ಚು ನಾಜೂಕಾಗಿ ಕೆತ್ತಲಾಗಿದೆ.

ಬಾಹುಬಲಿಯ ದೇಹಸೌಂದರ್ಯಕ್ಕೆ ಹೆಚ್ಚಿನ ಒತ್ತು ನೀಡದೆ, ಅವನ ಮುಖಭಾವದಲ್ಲಿ ಪ್ರಸನ್ನತೆಯನ್ನು ಮತ್ತು ಅಲೌಕಿಕ ಆನಂದವನ್ನು ಸಂಕೇತಿಸುವಂತೆ ಕೆತ್ತಲಾಗಿರುವುದು ವಿಶೇಷ. ಇನ್ನುಳಿದಂತೆ ಎರಡೂ ಶಿಲ್ಪಗಳಲ್ಲಿಯ ವಸ್ತು ಮತ್ತು ಕೆತ್ತನೆಗಳು ಹಾಗೆ ಉಳಿದಿವೆ. ಬಾದಾಮಿ ಮತ್ತು ಐಹೊಳೆಯ ಬಾಹುಬಲಿ ಶಿಲ್ಪಗಳು ಕರ್ನಾಟಕ ಪ್ರದೇಶದಲ್ಲಿ ಕಂಡುಬರುವ ಮೊದಲ ಬಾಹುಬಲಿ ಶಿಲ್ಪಗಳಾಗಿದ್ದು, ನಂತರ ರಚನೆಯಾದ ಎಲ್ಲ ಬಾಹುಬಲಿ ಶಿಲ್ಪಗಳಲ್ಲಿ ಇದೇ ವಸ್ತುಗಳನ್ನು ಕೆತ್ತಲಾಗಿದ್ದು ಬಹುಶಃ ಮುಂದಿನ ಶತಮಾನದ ಶಿಲ್ಪಿಗಳಿಗೆ ಈ ಶಿಲ್ಪಗಳೇ ಪ್ರತಿಮಾಲಕ್ಷಣಗಳಾಗಿ ಉಳಿದಿರಬಹುದೆನಿಸುತ್ತವೆ.

ಶಿಲ್ಪ –೮

ಐಹೊಳೆಯ ಜೈನ ಗುಹಾಲಯದ ಗರ್ಭಗೃಹದಲ್ಲಿ ಧ್ಯಾನಸ್ಥ ಮಹಾವೀರನ ಶಿಲ್ಪವನ್ನು ಕಾಣಬಹುದು. ಪದ್ಮಾಸನದಲ್ಲಿ ಕುಳಿತ ಮಹಾವೀರನ ತಲೆಯ ಹಿಂದೆ ಅಂಡಾಕಾರದ ಪ್ರಭಾಮಂಡಲ ಮತ್ತು ಮುಕ್ಕೊಡೆ ಇದೆ. ಇವನ ಇಬ್ಬದಿಗಳಲ್ಲಿ ಚಾಮರಧಾರಣಿಯರಿದ್ದು, ಈ ಶಿಲ್ಪವು ಆಕರ್ಷಕವಾಗಿದ್ದು, ಹಾಗೆಯೇ ಮಕರಪ್ರಾಣಿಗಳಿದ್ದು, ಈ ಶಿಲ್ಪಕ್ಕೆ ಸಂಯೋಜನೆಯಾಗಿದೆ. ಮುಖವು ಸವೆದು ಹೋಗಿದ ಕಾರಣ ತಕ್ಕಮಟ್ಟಿಗೆ ಅಸ್ಪಷ್ಟವಾಗಿದೆ.

ಶಿಲ್ಪ –೯

ಜೈನ ಧರ್ಮದ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಮಹಾವೀರನ ಶಿಲ್ಪದಂತೆಯೇ ಪ್ರಮುಖವಾಗಿ ಕಾಣಿಸುವುದು ಪಾರ್ಶ್ವನಾಥ ತೀರ್ಥಂಕರನ ಶಿಲ್ಪಗಳು. ಬಾದಾಮಿಯ ಗುಹೆಯ

೨೮. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೪೨



ಸಂದರ್ಭದಲ್ಲಿಯೇ ಈ ವಿಚಾರವನ್ನು ಗಮನಿಸಲಾಗಿದೆ. ಐಹೊಳೆಯ ಮೀನಬಸದಿಯಲ್ಲಿ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದೆ. ಸುಂದರವಾಗಿ ಕೆತ್ತಲಾಗಿರುವ ಈ ಶಿಲ್ಪದ ಸುತ್ತಲೂ ಈತನ ಜೀವನದ ವಿವಿದ ಹಂತಗಳನ್ನು ಸೂಚಿಸುವ ವಿವಿಧ ಕಥಾನಕಗಳನ್ನು ಕೆತ್ತಲಾಗಿದೆ. ಐಹೊಳೆಯ ಪಾರ್ಶ್ವ ಮಂಟಪವೊಂದರಲ್ಲಿ ಪಾರ್ಶ್ವನಾಥನ ಜೀವನದ ವಿವಿಧ ಘಟ್ಟಗಳನ್ನು ವಿವರಿಸುವ ಶಿಲ್ಪವಿದೆ. ಇದೊಂದು ಅಪರೂಪದ ಮತ್ತು ಕಲಾತ್ಮಕ ಶಿಲ್ಪ ಸಂಯೋಜನೆಯಾಗಿದೆ.[೨೯] ಇಲ್ಲಿ ಪಾರ್ಶ್ವನಾಥನು ಧ್ಯಾನಸ್ಥನಾಗಿರುವಂತೆ ಯೋಗಮುದ್ರೆಯಲ್ಲಿ ಕುಳಿತಿದ್ದು, ಮಹಾಮಂಟಪದ ಪಶ್ಚಿಮ ಪಾರ್ಶ್ವಮಂಟಪದ ಹಿಂಗೋಡೆಯಲ್ಲಿ ಮುಖ್ಯ ಗರ್ಭಗೃಹದಲ್ಲಿರುವಂತೆ ಸಿಂಹಾಸನದ ಮೇಲೆ ಪದ್ಮಾಸನದಲ್ಲಿ ತೀರ್ಥಂಕರನು ಕುಳಿತಿದ್ದಾನೆ. ಮೇಲೆ ಕೊಡೆಯಿದ್ದು, ಇಕ್ಕೆಲಗಳಲ್ಲಿ ಚಾಮರಧಾರಿ ಪುರುಷರಿದ್ದಾರೆ. ಹಿಂದುಗಡೆ ದಿಂಬು ಮತ್ತು ಮಕರದ ಆನಿಕೆಗಳಿವೆ. ಬಲಗಡೆ ಐದು ಹೆಡೆಯ ಧರಣೇಂದ್ರನು ಕುಳಿತು ತೀರ್ಥಂಕರನಿಗೆ ವಂದಿಸುತ್ತಿದ್ದಾನೆ. ಎಡಪಕ್ಕದಲ್ಲಿ ಪದ್ಮಾವತೀ ಯಕ್ಷಿಣಿಯೂ ಇದ್ದಾಳೆ. ಈ ಗುಂಪು ಪಾರ್ಶ್ವನಾಥನ ಸಮವಸರಣ ಸಂದರ್ಭವನ್ನು ಕುರಿತಾಗಿದೆ.

ಬಲಭಾಗದ ಗೋಡೆಯಲ್ಲಿ ಪಾರ್ಶ್ವನಾಥನು ಜಿನ ಪದವಿಗೇರುವ ಮೊದಲು ಅನುಭವಿಸಿದ ವಿಲಾಸಿ ಜೀವನವನ್ನು ಚಿತ್ರಿಸುವ ಶಿಲ್ಪವಿದೆ. ಇವನ ಎಡಪಕ್ಕದಲ್ಲಿ ಕಮಠನನ್ನು ಕಾಣಬಹುದು. ಎಡಭಾಗದ ಗೋಡೆಯಲ್ಲಿ ಐರಾವತವನ್ನೇರಿ ತನ್ನ ಸಕಲ ಪರಿವಾರದೊಂದಿಗೆ ಪಾರ್ಶ್ವನಾಥನ ಸಮವಸರಣಕ್ಕೆ ಧಾವಿಸುತ್ತಿರುವ ಇಂದ್ರನ ಮನಮೋಹಕ ಶಿಲ್ಪವಿದೆ. ಈ ಶಿಲ್ಪ ಪೂರ್ಣಗೊಂಡಿದ್ದರೆ ಭಾರತದ ಅಪರೂಪದ ಮತ್ತು ಅತ್ಯುತ್ತಮ ಶಿಲ್ಪಗಳಲ್ಲಿ ಒಂದಾಗುತ್ತಿತ್ತು. ಉಳಿಯ ಗುರುತುಗಳು ಆಳವಾಗಿದ್ದು, ಲಂಬಸೂತ್ರದ ಕುರುಹುಗಳು ಉಳಿದುಕೊಂಡಿವೆ. ಹೀಗೆ ಅಪೂರ್ಣವಾಗಿದ್ದರೂ ಸಹ ನೋಡುಗರನ್ನು ಸಂತೃಪ್ತಿಗೊಳಿಸುವ ಅಪರೂಪದ ಕಥಾವಸ್ತುವುಳ್ಳ ಶಿಲ್ಪಸಂಯೋಜನೆ ಇದಾಗಿದೆ.[೩೦] ಒಟ್ಟಿನಲ್ಲಿ ಈ ಶಿಲ್ಪವು ಉತ್ತಮ ಸಂಯೋಜನೆಯಿಂದ ಕೂಡಿದ್ದು ಅಧ್ಯಯನಕ್ಕೆ ಯೋಗ್ಯವಾಗಿದೆ.

ಶಿಲ್ಪ –೧೦

ಇನ್ನೊಂದು ಗಮನಾರ್ಹ ಅಂಶವೆಂದರೆ, ಪಾರ್ಶ್ವನಾಥನ ಶಿಲ್ಪವು ಐಹೊಳೆ, ಜೈನ ಗುಹೆಯ ಒಳಭಾಗದಲ್ಲಿದೆ. ಮುಖಮಂಟಪದಲ್ಲಿ ಪಶ್ಚಿಮ ಪಾರ್ಶ್ವಗೋಡೆಯಲ್ಲಿ ಕಾಯೋತ್ಸರ್ಗ ಮುದ್ರೆಯಲ್ಲಿ ದಿಗಂಬರನಾಗಿ ನಿಂತಿರುವ ಪಾರ್ಶ್ವನಾಥನ ಶಿಲ್ಪವಿದೆ. ಇವನ ಶಿರದ ಮೇಲ್ಗಡೆ ಐದು ಹೆಡೆಯ ಹಾವಿನ ಆಸರೆಯಿದೆ. ಪಾರ್ಶ್ವನಾಥನ ಬಲಪಕ್ಕದಲ್ಲಿ ಶಿರದ ಮೇಲೆ ನಾಗ ಹೆಡೆಯಿರುವ ಇಬ್ಬರು ಸ್ತ್ರೀಯರು ನಿಂತಿದ್ದಾರೆ. ಒಬ್ಬಳ ಬಲಗೈಯಲ್ಲಿ ಪದ್ಮವಿದೆ. ಇನ್ನೊಬ್ಬ

೨೯. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೪೨

೩೦. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ (ಸಂ.) : ಬಾದಾಮಿ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಗಳು, ಪುಟ – ೭೫

ನಾಗಸ್ತ್ರೀ ಪದ್ಮಾವತಿಯ ಹತ್ತಿರ ತನ್ನೆರಡೂ ಕೈಗಳಿಂದ ದೊಡ್ಡ ವಜ್ರಕೊಡೆಯ ಕೋಲನ್ನು ಹಿಡಿದಿದ್ದಾಳೆ. ತ್ರಿಭಂಗಿಯಲ್ಲಿರುವ ಇವಳನ್ನು ಕಂಠಹಾರಗಳು, ಕುಂಡಲಗಳು, ಕೇಯೂರಗಳು, ಉದರಬಂಧ, ಕಂಕಣ ಪಂಕ್ತಿಗಳು, ಕಟಿಬಂಧ, ಪಾದಸರಗಳು ಇತ್ಯಾದಿ ಆಭರಣಗಳಿಂದ ಸಿಂಗರಿಸಲಾಗಿದೆ. ಇವಳ ಕಟಿವಸ್ತ್ರವು ಮೈಗೆ ಅಂಟಿಕೊಂಡಿರುವಂತೆ ಕಾಲಗಂಟಿನವರೆಗೂ ಇಳಿದಿದೆ. ಮೇಲ್ಗಡೆ ಎಡಮೂಲೆಯಲ್ಲಿ ಎರಡೂ ಕೈಗಳನ್ನೆತ್ತಿ ಬಂಡೆಯನ್ನು ಎಸೆಯಲು ಪ್ರಯತ್ನಿಸುತ್ತಿರುವ ಕಮಠನಿದ್ದಾನೆ. ಪಾರ್ಶ್ವನಾಥನ ತಪೋಭಂಗ ಮಾಡಲು ಅಸಮರ್ಥನಾದ ಕಮಠನನ್ನು ಎಡಪಕ್ಕದಲ್ಲಿ ಅಂಜಲಿ ಮುದ್ರೆಯಲ್ಲಿ ತೋರಿಸಲಾಗಿದೆ.[೩೧] ಇಲ್ಲಿನ ಶಿಲ್ಪವು ಮೊದಲು ನೋಡಿದ ಶಿಲ್ಪಕ್ಕಿಂತ ವಿಭಿನ್ನವಾಗಿದೆ. ನಿಂತ ಭಂಗಿಯಲ್ಲಿರುವ ಶಿಲ್ಪವು ಅಂಗ ಪ್ರಮಾಣದಲ್ಲಿ ಕೊರತೆಯನ್ನು ಹೊಂದಿದ್ದು, ಕುಬ್ಜತನದಿಂದ ಕೂಡಿದೆ.

ಮೇಗುಟಿ ದೇವಾಲಯ (ಮೇಗುಡಿ)

ಐಹೊಳೆಯ ಜೈನಗುಡಿಗಳಲ್ಲಿ ಮೀನಬಸದಿಯಷ್ಟೇ ಪ್ರಮುಖವಾದುದು ಮೇಗುಟಿ ಗುಡಿ. ಇದು ಮೇಲು ಪ್ರದೇಶದಲ್ಲಿ ಅಥವಾ ಗುಡ್ಡದ ಮೇಲಿರುವ ಗುಡಿಯಾಗಿರುವುದರಿಂದ ಮೇಗುಡಿಯಾಗಿದೆ. ಜೈನಧರ್ಮಕ್ಕೆ ಸೇರಿದ ಈ ಗುಡಿಯಲ್ಲಿ ಹಲವು ಸುಂದರ ಶಿಲ್ಪಗಳಿವೆ. ರಾಚನಿಕ ಗುಡಿಯಾಗಿರುವ ಈ ಜಿನಾಲಯದ ನಂತರ ಈ ಪ್ರದೇಶದಲ್ಲಿನ ಕೆಲವು ಜೈನ ದೇವಾಲಯಗಳು ಮುಂದಿನ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಚಿತವಾಗಿವೆ.

ಶಿಲ್ಪ –೧೧

'ಐಹೊಳೆಯ ಆಗ್ನೇಯ ಬೆಟ್ಟದಲ್ಲಿ ಹೊಸದೊಂದು ಶೈಲಿಯಲ್ಲಿ ಈ ಜಿನಾಲಯವನ್ನು ಚಾಲುಕ್ಯ ಎರಡನೆಯ ಪುಲಿಕೇಶಿಯ ಆಸ್ಥಾನಕವಿ ಹಾಗೂ ಸೇನಾಧಿಪತಿಯಾದ 'ರವಿಕೀರ್ತಿ'ಯು ಕಟ್ಟಿಸಿದನೆಂಬುದಾಗಿ ಶಾಸನದಿಂದ ತಿಳಿದುಬರುತ್ತದೆ'.[೩೨] ಆತನಿಂದ ರಚಿತವಾದ ಶಾಸನ ದೇವಾಲಯದ ಪೂರ್ವ ಗೋಡೆಯ ಮೇಲಿದೆ. ಇದು ಪುಲಿಕೇಶಿಯ ದಿಗ್ವಿಜಯವನ್ನು ಸೂಚಿಸುತ್ತದೆ. ಇದಕ್ಕೆ ಐಹೊಳೆ ಶಾಸನವೆನ್ನುವರು. ಈ ದೇವಾಲಯ ಕ್ರಿ.ಶ. ೬೩೪ರಲ್ಲಿ ನಿರ್ಮಿತವಾಗಿದೆ ಎಂದು ಈ ಶಾಸನ ಹೇಳುತ್ತದೆ.[೩೩] ಈ ಶಾಸನವು ಇಡಿ ಚಾಲುಕ್ಯ ಅರಸುವಂಶ ಮತ್ತು ಕರ್ನಾಟಕದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಉತ್ತರಕ್ಕೆ ಮುಖಮಾಡಿ ಕಟ್ಟಲ್ಪಟ್ಟ ಮೇಗುತಿಗುಡಿಯ ಸುತ್ತಲೂ ಕೋಟೆಗೋಡೆಯು ಸುತ್ತುವರಿದಿದೆ. ಗರ್ಭಗೃಹದಲ್ಲಿ ಮಹಾವೀರನ ಸುಂದರವಾದ ಶಿಲ್ಪವಿದೆ. ಮುಖಮಂಟಪದ ಛತ್ತಿನಲ್ಲಿ ಕಮಲದ ನಕ್ಷೆಯಿದೆ. ಅಂತರಾಳದ ಎಡಗಡೆಯಲ್ಲಿ ದೇವಾಲಯದ ಮಾಳಿಗೆಯ ಛತ್ತಿಗೆ ಹೋಗುವಂತೆ ಕಲ್ಲಿನ ಏಣಿಯಿದ್ದು ಅಲ್ಲಿ

---

೩೧. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ (ಸಂ.) : ಬಾದಾಮಿ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಗಳು, ಪುಟ – ೭೪

೩೨. ವಿರೂಪಾಕ್ಷ ಬಡಿಗೇರ : ಐಹೊಳೆ ಶಿಲ್ಪ ದರ್ಪಣ, ಪುಟ – ೬೩

೩೩. ಕೆ. ಎಲ್. ಎನ್. ಮೂರ್ತಿ (ಸಂ.) : ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ, ಪುಟ – ೪೦



ಏರಿಹೋದರೆ ಮತ್ತೊಂದು ಮೇಲ್ಛಾವಣಿಯಿಲ್ಲದ ಗರ್ಭಗೃಹವಿದೆ. ಅಲ್ಲಿ ಛಿದ್ರಗೊಂಡ ತೀರ್ಥಂಕರನ ಮೂರ್ತಿಯಿದೆ.[೩೪] ಇಲ್ಲಿರುವ ಮಹಾವೀರ ಜಿನನ ಶಿಲ್ಪವು ಭಗ್ನಗೊಂಡಿದ್ದರೂ ಕಲಾತ್ಮಕ ಅಂಶಗಳನ್ನು ಗಮನಿಸಬಹುದು. ಪದ್ಮಾಸನದಲ್ಲಿ ಕುಳಿತ ಶಿಲ್ಪ ಇದಾಗಿದೆ. ಬಹುತೇಕ ಭಾಗಗಳು ಭಗ್ನಗೊಂಡಿದ್ದು ಕಾಣುತ್ತದೆ. ಇದು ಒಂದು ತ್ರಿಮಾನದಲ್ಲಿ ರಚಿತವಾದ ಶಿಲ್ಪವಾಗಿದೆ. ಐಹೊಳೆ ಮೇಗುಟಿ ಗುಡಿಯಲ್ಲಿ ದೊಡ್ಡದಾದ ಮಹಾವೀರನು ಪದ್ಮಾಸನದಲ್ಲಿ ಕುಳಿತ ಶಿಲ್ಪವಿದೆ. ಹಿಂದೆ ಇಬ್ಬದಿಗಳಲ್ಲಿ ಚಾಮರಧಾರಿಣಿಯರಿದ್ದಾರೆ. ಈ ಶಿಲ್ಪವು ಸರಿಯಾದ ಪ್ರಮಾಣದಲ್ಲಿಲ್ಲ ಮತ್ತು ಅಪೂರ್ಣ ಶಿಲ್ಪವಾಗಿದೆ. ತಲೆಯ ಹಿಂದುಗಡೆ ಕೆತ್ತಲಾಗಿರುವ ಪ್ರಭಾಮಂಡಲವು ಚಪ್ಪಟೆಯಾಗಿದ್ದು, ಮತ್ತು ಮಹಾವೀರನ ಕುತ್ತಿಗೆಯ ಭಾಗ ಹಾಗೂ ಮುಖವು ಉದ್ದವಾಗಿದೆ. ಬೇರೆಡೆಯಿಂದ ತಂದಿಟ್ಟಿರಬಹುದಾದ ಈ ಶಿಲ್ಪವು ಅಷ್ಟೊಂದು ಆಕರ್ಷಣೀಯವಾಗಿಲ್ಲ ಎನ್ನಬಹುದು.

ಶಿಲ್ಪ –೧೨

ಐಹೊಳೆಯ ಮೇಗುಟಿ ದೇವಾಲಯದಲ್ಲಿ ದೊಡ್ಡದಾದ ಮಹಾವೀರನ ಶಿಲ್ಪವಿದೆ. ಪದ್ಮಾಸನದಲ್ಲಿ ಕುಳಿತ ಈ ಶಿಲ್ಪದ ಹಿಂದೆ ಇಬ್ಬದಿಗಳಲ್ಲಿ ಚಾಮರಧಾರಿಣಿಯರಿದ್ದಾರೆ. ಈ ಶಿಲ್ಪವು ಪ್ರಮಾಣಬದ್ಧವಾಗಿಲ್ಲ ಮತ್ತು ಅಪೂರ್ಣವಾದ ಶಿಲ್ಪವಾಗಿದೆ. ತಲೆಯ ಹಿಂದುಗಡೆ ಕೆತ್ತಲಾಗಿರುವ ಪ್ರಭಾಮಂಡಲವು ಚಪ್ಪಟೆಯಾಗಿದ್ದು, ಮತ್ತು ಮಹಾವೀರನ ಕುತ್ತಿಗೆಯ ಭಾಗ, ಮುಖವು ಉದ್ದವಾಗಿದೆ. ಬೇರಡೆಯಿಂದ ತಂದಿಟ್ಟಿರಬಹುದಾದ ಈ ಶಿಲ್ಪವು ಅಷ್ಟೊಂದು ಆಕರ್ಷಣೀಯವಾಗಿಲ್ಲ ಎನ್ನಬಹುದು.

ಯಕ್ಷ–ಯಕ್ಷಿಣಿಯರು

ಇದುವರೆಗೆ ಹೇಳಿರುವ ವಿಚಾರಗಳು ಜೈನತೀರ್ಥಂಕರ ಮತ್ತು ಬಾಹುಬಲಿಯ ಕುರಿತಾದ ಶಿಲ್ಪಗಳ ಬಗ್ಗೆಯಾದರೂ ಜೈನಧರ್ಮದಲ್ಲಿ ಇತರ ಶಿಲ್ಪಗಳೂ ಹೇರಳವಾಗಿ ರಚಿತವಾಗಿವೆ. ಜೈನ ಧರ್ಮದಲ್ಲಿ ಆರಾಧನಾ ಅಥವಾ ತೀರ್ಥಂಕರ ಶಿಲ್ಪಗಳ ಜೊತೆಯಾಗಿ ಕಂಡುಬರುವ ಶಿಲ್ಪಗಳಾಗಿರುವ ಯಕ್ಷ–ಯಕ್ಷಿಣಿ ಶಿಲ್ಪಗಳು ಇಲ್ಲಿ ಮುಖ್ಯವಾಗುತ್ತವೆ. ಪ್ರತಿಯೊಬ್ಬ ತೀರ್ಥಂಕರನಿಗೂ ಯಕ್ಷ–ಯಕ್ಷಿಣಿಯರಿರುತ್ತಾರೆ. ಒಟ್ಟು ಇಪ್ಪತ್ತನಾಲ್ಕು ತೀರ್ಥಂಕರರಿಗೆ ಅಷ್ಟೇ ಸಂಖ್ಯೆಯ ಯಕ್ಷ ಮತ್ತು ಯಕ್ಷಿಣಿಯರಿದ್ದಾರೆ. ಆದರೆ ಇವರಲ್ಲಿ ಎಲ್ಲ ತೀರ್ಥಂಕರರು ಮತ್ತು ಯಕ್ಷ–ಯಕ್ಷಿಣಿಯರು ಚಾಲುಕ್ಯ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ.

ಧರಣೇಂದ್ರ–ಪದ್ಮಾವತಿ

ಜೈನ ತೀರ್ಥಂಕರರ ಚಾಲುಕ್ಯ ಶಿಲ್ಪಗಳಲ್ಲಿ ಪ್ರಮುಖವಾಗಿ ಕಂಡುಬರುವುದು ಪಾರ್ಶ್ವನಾಥ

೩೪. ವಿರೂಪಾಕ್ಷ ಬಡಿಗೇರ : ಐಹೊಳೆ ಶಿಲ್ಪ ದರ್ಪಣ, ಪುಟ – ೬೩

ತೀರ್ಥಂಕರ. ಅವನ ಜೊತೆಯಲ್ಲಿ ಅವನ ಎಡಬಲಗಳಲ್ಲಿ ಕಾಣಿಸುವ ಶಿಲ್ಪಗಳಲ್ಲಿ ಮುಖ್ಯವಾಗಿ ಕಾಣಿಸುವುದು ಧರಣೇಂದ್ರ ಮತ್ತು ಪದ್ಮಾವತಿಯರು. ಇವರು ಪಾರ್ಶ್ವನಾಥ ತೀರ್ಥಂಕರನ ಯಕ್ಷ-ಯಕ್ಷಿಣಿಯರು. ಚಾಲುಕ್ಯರ ಪಾರ್ಶ್ವನಾಥನ ಜಿನಶಿಲ್ಪಗಳಲ್ಲಿ ಧರಣೇಂದ್ರನು ಸರ್ಪದ ರೂಪದಲ್ಲಿ ಕಾಣಿಸಿಕೊಂಡು ಜಿನನ ತಲೆಯ ಮೇಲೆ ಹೆಡೆಯನ್ನು ಹಿಡಿದು ಜಿನನಿಗೆ ನೆರಳಿನ ರೀತಿಯಲ್ಲಿ ಸೇವೆ ಸಲ್ಲಿಸಿದರೆ, ಪದ್ಮಾವತಿಯು ಕೊಡೆಯನ್ನು ಹಿಡಿದು ಸೇವೆಸಲ್ಲಿಸುತ್ತಿರುವಂತೆ ತೋರಿಸಿದ್ದಾರೆ.[೩೫] ಐಹೊಳೆ ಮತ್ತು ಬಾದಾಮಿಯ ಗುಹಾಲಯಗಳಲ್ಲಿ ನಾವು ಈ ರೀತಿಯ ಕೆತ್ತನೆಗಳನ್ನು ಕಾಣಬಹುದು. ಇಲ್ಲಿ ಕೆಲ ಶಿಲ್ಪಗಳಲ್ಲಿ ಕೇವಲ ಹೆಡೆಯನ್ನು ಎತ್ತಿರುವ ಹಾವು ಮಾತ್ರ ಕಾಣಿಸಿದರೆ ಕೆಲವೆಡೆ ಹಾವನ್ನು ವಿವರವಾಗಿ ಕೆತ್ತಿರುವುದು ಕಂಡುಬರುತ್ತದೆ. ಆದರೆ ಇಲ್ಲಿ ಯಕ್ಷ-ಯಕ್ಷಿಣಿಯರಿಗೆ ಪ್ರಾಧಾನ್ಯ ಇದ್ದರೂ ಕೆತ್ತನೆಯಲ್ಲಿ ವಿಶೇಷ ಮಹತ್ವವನ್ನು ಕಲಾತ್ಮಕ ದೃಷ್ಟಿಯಿಂದ ನೀಡಿದಂತೆ ಕಂಡುಬರುವುದಿಲ್ಲ. ಇದಕ್ಕೆ ಕಾರಣ ಜಿನನೇ ಇಲ್ಲಿ ಕೇಂದ್ರ ಬಿಂದುವಾಗಿರುವುದು, ಇತರ ಶಿಲ್ಪಗಳಿಗೆ ಹೆಚ್ಚಿನ ಗಮನ ನೀಡಿ ಸುಂದರಗೊಳಿಸಿದರೆ ಮುಖ್ಯ ಶಿಲ್ಪಕ್ಕೆ ಕುಂದುಂಟಾಗುವುದೆಂಬ ಕಾರಣವಿದ್ದಿರಬಹುದು.

ಅಂಬಿಕಾ ಯಕ್ಷಿಣಿ

ಇದು ನಮಗೆ ಚಾಲುಕ್ಯ ಶಿಲ್ಪಗಳಲ್ಲಿ ಅಪರೂಪವಾಗಿ ಕಂಡುಬರುತ್ತದೆ. ನೇಮಿನಾಥ ತೀರ್ಥಂಕರನ ಯಕ್ಷಿಣಿಯಾಗಿರುವ ಈಕೆಯನ್ನು ಕೂಷ್ಮಾಂಡಿನಿ ಎಂದೂ ಕರೆಯುತ್ತಾರೆ. ಬಹಳ ಸುಂದರವಾಗಿರುವ ಅಂಬಿಕಾ ಯಕ್ಷಿಣಿಯ ಶಿಲ್ಪವೊಂದು ಐಹೊಳೆಯ ವಸ್ತುಸಂಗ್ರಹಾಲಯದಲ್ಲಿದೆ. ಇದು ಇಲ್ಲಿನ ಮೇಗುತಿ ಗುಡಿಯಲ್ಲಿದ್ದ ಶಿಲ್ಪವೆಂದು ಹೇಳಲಾಗಿದೆ. ಸುಮಾರು ಐದು ಅಡಿ ಎತ್ತರವಿರುವ ಈ ಶಿಲ್ಪವು ಚಾಲುಕ್ಯರ ಅದ್ಭುತ ಕೆತ್ತನೆಗಳಲ್ಲೊಂದು. ಯಕ್ಷಿಣಿಯು ಮಾವಿನ ಗಿಡದ ಸಮೀಪ ಕಾಲೊಂದನ್ನು ಇಳಿಬಿಟ್ಟು ಬಂಡೆಯ ಮೇಲೆ ಕುಳಿತಂತಿರುವ ಈ ಶಿಲ್ಪದಲ್ಲಿ ತೊಡೆಯ ಮೇಲೆ ಮಗುವಿದೆ. ಇನ್ನೊಂದು ಕೈಯಲ್ಲಿ ಮಾವಿನ ಹಣ್ಣಿದೆ. ಶಿಲ್ಪದ ಕೆಳಗೆ ಸಿಂಹದ ಕೆತ್ತನೆಯಿದೆ. ಇವೆಲ್ಲವೂ ಅಂಬಿಕಾ ಯಕ್ಷಿಣಿಯ ಶಿಲ್ಪದ ಪ್ರತಿಮಾಲಕ್ಷಣಗಳು. ಇಲ್ಲಿನ ಶಿಲ್ಪದಲ್ಲಿ ಚಾಲುಕ್ಯ ಶಿಲ್ಪಿಗಳು ಅದ್ಭುತವಾದ ಶಿಲ್ಪ ರಚನಾ ಕೌಶಲ್ಯವನ್ನು ಮೆರೆದಿದ್ದಾರೆ. ಮಾವಿನ ಗಿಡವಾಗಲಿ, ಕುಳಿತ ಭಂಗಿಯಾಗಿರಲಿ ಅಥವಾ ಯಕ್ಷಿಣಿಯ ಶರೀರದ ರಚನೆಯಲ್ಲಾಗಲಿ ಶಿಲ್ಪಿಗಳು ಎಲ್ಲ ರೀತಿಯ ವಿವರಗಳೊಂದಿಗೆ ಕೋಮಲತೆಯನ್ನು ಮತ್ತು ಅದ್ಭುತ ಶಿಲ್ಪ ಸಂಯೋಜನಾ ಚಾತುರ್ಯವನ್ನು ಮೆರೆದಿದ್ದಾರೆ. ಒಟ್ಟಿನಲ್ಲಿ ಒಂದು ಸುಂದರವಾದ ಸಂಯೋಜನೆಯಿಂದ ಮೂಡಿಬಂದಿರುವ ಶಿಲ್ಪವಾಗಿ ಇದು ಕಂಡುಬರುತ್ತದೆ. ಇದಲ್ಲದೆ ಕೆಲವು ಲೌಕಿಕ ಶಿಲ್ಪಗಳು ಮೂಡಿಬಂದಿವೆ. ಮುಖ್ಯವಾಗಿ ರಾಜರ ಮತ್ತು ಗುಡಿಯ ನಿರ್ಮಾಣಕ್ಕೆ

೩೫. ಪ್ರೊ. ಎಸ್. ಕೆ. ರಾಮಚಂದ್ರರಾವ್ (ಸಂ.) : ಕರ್ನಾಟಕ ಪರಂಪರೆ, ಸಂ-೧, ಪುಟ - ೪೩

ಕಾರಣರಾದ ದಾನಿಗಳ ಶಿಲ್ಪವನ್ನು ಕೆಲವೆಡೆ ಕೆತ್ತಿದ್ದಾರೆ. ಅಂತಹ ಕೆಲವು ಶಿಲ್ಪಗಳಲ್ಲಿ ಬಾದಾಮಿಯ ಗುಡಿಯಲ್ಲಿರುವ ಕೆತ್ತನೆಗಳು ಮತ್ತು ಐಹೊಳೆಯ ಮೀನ ಬಸದಿಯಲ್ಲಿರುವ ಎರಡು ಶಿಲ್ಪಗಳು ಗಮನಾರ್ಹವಾಗಿವೆ.

ಇಲ್ಲಿಯೂ ಶಿಲ್ಪ ರಚನೆಯ ಸಂದರ್ಭದಲ್ಲಿ ಇವರ ನೇರ ವ್ಯಕ್ತಿತ್ವದ ಚಿತ್ರಣಕ್ಕೆ ಪ್ರಾಮುಖ್ಯ ನೀಡದೆ ಕೇವಲ ವ್ಯಕ್ತಿಯಂತೆ ಮಾತ್ರ ರಚನೆ ಮಾಡಿದ್ದಾರೆ. ಕಲಾತ್ಮಕವಾಗಿ ಇಂತಹ ಶಿಲ್ಪಗಳಿಗೆ ಪ್ರಾಧಾನ್ಯ ಇಲ್ಲದಿದ್ದರೂ ಶಿಲ್ಪದ ಸಂಯೋಜನೆಯ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಇವುಗಳಲ್ಲದೆ ಅಲಂಕರಣಕ್ಕೆ ಪೂರಕವಾಗುವಂತೆ ಲತಾಕುಂಜಗಳನ್ನು, ಮಕರ ಮತ್ತು ವ್ಯಾಳಿಗಳನ್ನು ಅಗತ್ಯವಿರುವೆಡೆಯಲ್ಲಿ ಕೆತ್ತಲಾಗಿದೆ. ಅಪರೂಪಕ್ಕೆಂಬತೆ ಭಿತ್ತಿನಲ್ಲಿ ಮತ್ತು ಕಂಬಗಳಲ್ಲಿ ಸ್ವಸ್ತಿಕವನ್ನು ಅಲ್ಲಲ್ಲಿ ಕೆತ್ತಿರುವುದು ಕಂಡುಬರುತ್ತದೆ. ಈ ಕೆತ್ತನೆಗಳು ಮುಖ್ಯ ಶಿಲ್ಪಕ್ಕೆ ಪೂರಕವಾಗಿ ಮತ್ತು ವಾಸ್ತುಶಿಲ್ಪಕ್ಕೆ ಪೂರಕವಾಗಿ ಸ್ಥಳಾವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ರಚನೆಯಾಗಿವೆ. ಆದರೂ ಇವುಗಳಿಂದ ಅಲ್ಲಿನ ಒಟ್ಟು ಶಿಲ್ಪಸೌಂದರ್ಯದ ಆಸ್ವಾದನೆಗೆ ಉತ್ತಮ ಅವಕಾಶವನ್ನು ಒದಗಿಸಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಚಾಲುಕ್ಯ ಶಿಲ್ಪಿಗಳ ಸೌಂದರ್ಯ ಪ್ರಜ್ಞೆಯನ್ನು ಮೆಚ್ಚಿಕೊಳ್ಳಬೇಕಾಗುತ್ತದೆ.

ಬೌದ್ಧ ಶಿಲ್ಪಕಲೆ

ಬಾದಾಮಿ ಚಾಲುಕ್ಯರ ಕಾಲದಲ್ಲಿ ಬೌದ್ಧಧರ್ಮವು ಸಾಕಷ್ಟು ಅಲ್ಲದಿದ್ದರೂ ಸ್ವಲ್ಪಮಟ್ಟಿಗೆ ತನ್ನ ಪ್ರಭಾವವನ್ನು ಉಳಿಸಿಕೊಂಡಿತ್ತು. ಹಾಗೆ ನೋಡಿದರೆ ಕರ್ನಾಟಕದಲ್ಲಿ ಬೌದ್ಧಧರ್ಮವು ಚಕ್ರವರ್ತಿ ಅಶೋಕನ ಕಾಲದಿಂದಲೂ ಪ್ರಚಲಿತವಾಗಿತ್ತು, ಕರ್ನಾಟಕದ ತುದಿಯ ಗುಲ್ಬರ್ಗದ ಸಮೀಪದ ಸನ್ನತಿಯಲ್ಲಿ ಉತ್ಖನನ ನಡೆಸಿದಾಗ ಸಾಕಷ್ಟು ಸಂಖ್ಯೆಯಲ್ಲಿ ಅಂದಿನ ಪಳೆಯುಳಿಕೆಗಳು ದೊರಕಿವೆ. ಕಾಲಾನಂತರದಲ್ಲಿ ಕರ್ನಾಟಕದಲ್ಲಿ ಬೌದ್ಧಧರ್ಮವು ಹಿನ್ನೆಲೆಗೆ ಸರಿಯತೊಡಗಿತ್ತು. ಬಾದಾಮಿ ಪ್ರದೇಶದಲ್ಲಿ ಬೌದ್ಧಧರ್ಮವು ವ್ಯಾಪಕವಾಗಿ ಹರಡಿದ್ದುದಕ್ಕೆ ಸದ್ಯಕ್ಕೆ ದೊಡ್ಡ ಪುರಾವೆಗಳೇನೂ ದೊರೆತಿಲ್ಲ.

ಐಹೊಳೆಯು ಕ್ರಿಸ್ತ ಶಕೆಯ ಆರಂಭಕಾಲದಿಂದಲೂ ದೊಡ್ಡ ನಾಗರಿಕ ಪ್ರದೇಶವಾಗಿದ್ದರೂ ಅಲ್ಲಿ ಕ್ರಿಸ್ತಪೂರ್ವಕಾಲದ ಪಳೆಯುಳಿಕೆಗಳು ದೊರಕಿಲ್ಲ. ಸಾಮಾನ್ಯ ಜನಜೀವನಕ್ಕೆ ಸಂಬಂಧಿಸಿದ ವಸ್ತುಗಳು ಮತ್ತು ದೇವರ ಗುಡಿ ಮತ್ತು ಶಿಲ್ಪಗಳು ದೊರಕಿದಂತೆ ಬೌದ್ಧ ಧರ್ಮದ ಶಿಲ್ಪಗಳಾಗಲಿ ಅಥವಾ ಚೈತ್ಯವಿದ್ದ ಗುರುತಾಗಲಿ ಪತ್ತೆಯಾಗಿಲ್ಲ. ಇದಕ್ಕೆ ಕಾರಣವೇನೆಂದು ತಿಳಿಯುವುದಿಲ್ಲ. ಹಾಗಿದ್ದರೂ ದೊರೆಯುವ ಕೆಲವೇ ಕೆಲವು ಶಿಲ್ಪ ಮತ್ತು ವಾಸ್ತುಶಿಲ್ಪಗಳ ಆಧಾರದಿಂದ ಇಲ್ಲಿಯೂ ಬೌದ್ಧ ಧರ್ಮವು ಪ್ರಚಲಿತವಾಗಿತ್ತು ಎಂದು ಊಹಿಸಬಹುದು. ಚಾಲುಕ್ಯರ ಆಡಳಿತದ ಕಾಲಕ್ಕಾಗಲೇ ಕರ್ನಾಟಕದಲ್ಲಿ ಬೌದ್ಧರ ಪ್ರಭಾವವು ಕ್ಷೀಣಿಸತೊಡಗಿತ್ತು. ಜೈನ ಮತ್ತು ವೈದಿಕ

ಧರ್ಮಗಳು ಚಲಾವಣೆಗೆ ಬಂದಿದ್ದವು. ಇದರಿಂದಾಗಿ ಬೌದ್ಧಧರ್ಮವು ಹಿನ್ನೆಲೆಗೆ ಸರಿಯ ತೊಡಗಿತ್ತೆಂದು ಊಹಿಸಬಹುದು.

ಶಿಲ್ಪ –೧೩

ಬಾದಾಮಿ ಪ್ರದೇಶದಲ್ಲಿ ಕಂಡುಬರುವ ಬೌದ್ಧ ಶಿಲ್ಪಗಳು ತೀರ ಕಡಿಮೆ. ಬಾದಾಮಿಯ ಎರಡು ವೈಷ್ಣವ ಗುಹಾಲಯಗಳ ನಡುವೆ ನೈಸರ್ಗಿಕ ಗುಹೆಯೊಂದರಲ್ಲಿ ಪದ್ಮಪಾಣಿ ಅರೆಮುರಿದ ವಿಗ್ರಹವಿದೆ.[೩೬] ಕಲೆಯ ದೃಷ್ಟಿಯಿಂದ ಸತ್ವಹೀನವಾದ ಶಿಲ್ಪವಿದು'.[೩೭] ಈ ಗುಹೆಯು ಉಳಿದ ಗುಹೆಗಳಂತೆ ಮಾನವನಿರ್ಮಿತ ಗುಹೆಯಲ್ಲ, ಬದಲಾಗಿ ನೈಸರ್ಗಿಕವಾಗಿರುವ ಕಲ್ಲು ಬಂಡೆಯೊಂದರ ಗೋಡೆ. ಪ್ರಕೃತಿಸಹಜವಾಗಿ ರಚಿತವಾದ ಕಲ್ಲಿನ ಪಾರ್ಶ್ವವೊಂದರಲ್ಲಿ ಕೆತ್ತಲಾಗಿರುವ ಬುದ್ಧನ ಶಿಲ್ಪವು ಸುಮಾರು ಐದಾರು ಅಡಿಗಳಷ್ಟು ದೊಡ್ಡದಾಗಿದೆ. ಶಿಲ್ಪವು ಸುಂದರವಾಗಿದ್ದರೂ ತಲೆಯ ಭಾಗ ಬಹುತೇಕ ಭಗ್ನಗೊಂಡಿದೆ. ಡಾ. ಕೆ. ಶಿವರಾಮ ಕಾರಂತರು ಈ ಗುಹೆಯು ಪ್ರಾಚೀನ ಗುಹೆಯಾಗಿದ್ದು ಇಲ್ಲಿನ ರಚನೆಯಿಂದಲೆ ಮುಂದಿನ ಗುಹಾಲಯಗಳ ರಚನೆಗೆ ಸ್ಫೂರ್ತಿ ಉಂಟಾಗಿರಬಹುದೆಂದು ತರ್ಕಿಸಿದ್ದಾರೆ.

ಇವರ ಊಹೆಯ ಪ್ರಕಾರ ಬಾದಾಮಿ ಪ್ರದೇಶದಲ್ಲಿ ಬೌದ್ಧಧರ್ಮವು ಸಾಕಷ್ಟು ನಡೆದು ಹೋಗಿರಬೇಕೆಂದು ಹೇಳುತ್ತಾರೆ. 'ಬೌದ್ಧಧರ್ಮ ಪ್ರಸಾರವೂ ಆ ಕಾಲದಲ್ಲಿ ಬಾದಾಮಿ ಪ್ರದೇಶದಲ್ಲಿ ಸಾಕಷ್ಟು ನಡೆದು ಹೋಗಿರಬೇಕು. ಅಲ್ಲಿನ ಗುಹಾಲಯಗಳ ಎಡೆಯಲ್ಲಿ ನೈಸರ್ಗಿಕ ಗುಹಾಲಯವೊಂದಿದೆ. ಸುಮಾರು ೩೦ ಅಡಿ ಎತ್ತರ, ೩೦ಅಡಿ ಹಿಂಜರಿಕೆಯುಳ್ಳ ಈ ಗುಹೆಯ ಗೋಡೆಯೊಂದರಲ್ಲಿ, ಪದ್ಮಪಾಣಿ ಬುದ್ಧನ ಆಕೃತಿಯನ್ನು ಕೆತ್ತಿದ್ದಾರೆ. ಅದಿಂದು ಭಗ್ನಾವಸ್ಥೆಯಲ್ಲಿ ಇದ್ದರೂ, ಇಲ್ಲಿನ ಗುಹಾನಿರ್ಮಾಣದ ಚಟುವಟಿಕೆಗೆ ಅದೊಂದು ಸಮೀಪದ ಪ್ರೇರಣೆಯಾಗಿರಬೇಕೆಂದು ತರ್ಕಿಸಬಹುದು. ಅದರಿಂದ ಸ್ಫೂರ್ತಿ ಪಡೆದಿರಬಹುದಾದ ಮೊದಲನೆಯ ಗುಹೆ ಐಹೊಳೆಯ 'ರಾವಣಪಹಾಡಿ ಗುಹೆ' ಇರಬೇಕು'.[೩೮] ಇದೇನೇ ಇದ್ದರೂ ಶಿಲ್ಪದ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಶಿಲ್ಪವು ಉಳಿದ ಶಿಲ್ಪಗಳಿಗಿಂತ ಮೊದಲೇ ರಚನೆಯಾಗಿರಬಹುದೆನಿಸುತ್ತದೆ.

ಬೋಧಿಸತ್ವ ಪದ್ಮಪಾಣಿಯ ಶಿಲ್ಪದ ಮುಖವೆಲ್ಲ ಭಗ್ನವಾಗಿದೆ. ಆತನ ಬಲಗೈಯಲ್ಲಿ ಪದ್ಮವಿದೆ, ಎಡಗೈ ಕಟ್ಯವಲಂಬಿತವಾಗಿದೆ. ಆತನ ಅಧೋವಸ್ತ್ರ(ಟೋಗ)ವು ಪಾದದವರೆಗೂ ಚಾಚಿಕೊಂಡಿದೆ. ಈತನ ತಲೆಯ ಮೇಲೆ ಜಟೆ ಇದ್ದಿರಬಹುದೆಂದು ಊಹಿಸಬಹುದು. ತಲೆಯ ಹಿಂಭಾಗದಲ್ಲಿರುವ ಪ್ರಭಾಚಕ್ರವನ್ನು ಗುರುತಿಸಬಹುದು. ಪಾದದ ಬಳಿ ಆತನ

---

೩೬. ಪ್ರೊ. ಎಸ್. ಕೆ. ರಾಮಚಂದ್ರರಾವ್ (ಸಂ.) : ಕರ್ನಾಟಕ ಪರಂಪರೆ, ಸಂ–೧, ಪುಟ – ೨೦೮

೩೭. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೪೧

೩೮. ಡಾ. ಶಿವರಾಮ ಕಾರಂತ : ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪುಟ – ೧೦



ಭಕ್ತನೊಬ್ಬನು ಕುಳಿತಿದ್ದಾನೆ. ಬೋಧಿಸತ್ವನ ಇಕ್ಕೆಲಗಳಲ್ಲಿ ಹಲವಾರು ಸಣ್ಣ ಶಿಲ್ಪಗಳಿರುವುದನ್ನು ಗಮನಿಸಬಹುದು. ಶಿಲ್ಪದ ಮುಖಭಾಗವು ಭಗ್ನಗೊಂಡಿರುವುದರಿಂದ ಮುಖಭಾವವನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಆದರೆ ಆತನು ಹೊದ್ದ ವಸ್ತ್ರ ಮತ್ತು ಕೈಯಲ್ಲಿ ಹಿಡಿದಿರುವ ಪದ್ಮ ಇತ್ಯಾದಿಗಳನ್ನು ಗಮನಿಸಲಾಗಿ ಶಿಲ್ಪವು ಸುಂದರವಾಗಿ ಮೂಡಿಬಂದಿತ್ತೆಂದು ಕಂಡುಬರುತ್ತದೆ. ಇದು ಚಾಲುಕ್ಯರ ಕಾಲಕ್ಕಿಂತಲೂ ಮೊದಲೆ ರಚನೆಯಾದ ಶಿಲ್ಪವಾಗಿರುವುದರಿಂದ ಚಾಲುಕ್ಯರ ಕಾಲದ ಕಲಾತ್ಮಕ ಕೆತ್ತನೆಯನ್ನು ಇದರಲ್ಲಿ ಅಪೇಕ್ಷಿಸಲಾಗದು.

ಶಿಲ್ಪ –೧೪ ಕೋಷ್ಠರಾಯ

ಬಾದಾಮಿಯ ಅಗಸ್ತ್ಯತೀರ್ಥದ ಆಗ್ನೇಯ ದಂಡೆಯ ಮೇಲೆ ಒಂದು ನೈಸರ್ಗಿಕ ಗುಹೆ ಇದೆ. ಒಳಗೆ ತೆವಳಿಕೊಂಡು ಹೋಗಬೇಕಾಗುತ್ತದೆ. ಗುಹೆಯ ಪೂರ್ವದ ಗೋಡೆಯ ಮೇಲೆ ಬೃಹದಾಕಾರದ ಕೋಷ್ಠರಾಯನ ಶಿಲ್ಪವನ್ನು ಕೆತ್ತಲಾಗಿದೆ. ರಾಯನು ಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಆತನು ಕಿವಿಯಾಭರಣ, ರತ್ನಹಾರ, ಭುಜಕೀರ್ತಿ, ಕೈಕಡಗ ಮೊದಲಾದವುಗಳಿಂದ ಭೂಷಿತನಾಗಿದ್ದಾನೆ. ಜಪಮಾಲೆ ಹಿಡಿದ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈಧ್ಯಾನ ಮುದ್ರೆಯಲ್ಲಿದೆ. ಕೊರಳಲ್ಲಿ ಯಜ್ಞೋಪವೀತವಿದೆ. ರಾಯನು ಧ್ಯಾನ ನಿರತನಾಗಿರುವುದರಿಂದ ಶಿಲ್ಪಿಯು ತಲೆಯ ಮೇಲೆ ಕಿರೀಟವನ್ನಿರಿಸಿಲ್ಲ. ಸ್ಥಳಿಕರು ಕೋಷ್ಠರಾಯನ ಶಿಲ್ಪ, ಆತನ ಬಗ್ಗೆ ದಂತಕತೆಯನ್ನು ಹೇಳುತ್ತಾರೆ. ಕುಷ್ಠರೋಗದಿಂದ ಬಳಲುತ್ತಿದ್ದ ಅರಸನೊಬ್ಬ ಬಾದಾಮಿಗೆ ಬಂದು ಇಲ್ಲಿಯ ಅಗಸ್ತ್ಯತೀರ್ಥದಲ್ಲಿ ಮಿಂದು ರೋಗದಿಂದ ಮುಕ್ತನಾದನೆಂಬುದು ಕತೆಯ ಸಾರ. ಆ ಕುಷ್ಠರೋಗಿಯೇ ಈ ಕೋಷ್ಠರಾಯ. ಚಾಲುಕ್ಯ ಶೈಲಿಯ ಈ ಶಿಲ್ಪವು ಒಂದನೆಯ ಕೀರ್ತಿವರ್ಮನದೆಂಬ ಊಹೆ ಅ. ಸುಂದರ ಅವರದು. ಕುಷ್ಠರಾಯನು ಕೀರ್ತಿವರ್ಮನಾದ ಪಕ್ಷದಲ್ಲಿ ಈ ರೋಗಗ್ರಸ್ತ ಅರಸನ ಹಿನ್ನೆಲೆಯಲ್ಲಿ ಕಪ್ಪೆ ಅರಭಟ್ಟನ ಶಾಸನಕ್ಕೆ ಅರ್ಥ ಬರುತ್ತದೆಂದು ಹೇಳುತ್ತ ಬಾ.ರಾ. ಗೋಪಾಲ ಅವರು ಕಪ್ಪೆ ಅರಭಟ್ಟ ಎಂಬುದು ಕೀರ್ತಿವರ್ಮನಿಗೆ ಸಲ್ಲುವ ಹೆಸರೆಂದು ಊಹಿಸಿದ್ದಾರೆ.[೩೯]

ಇದು ಬಿಟ್ಟರೆ ಇನ್ನು ನಮಗೆ ಕಾಣಿಸುವ ಬೌದ್ಧ ಶಿಲ್ಪಗಳು ಐಹೊಳೆಯಲ್ಲಿವೆ. ಐಹೊಳೆಯ ಕಲ್ಲುಬಂಡೆಯ ಮೇಲೆ ಕಟ್ಟಲಾಗಿರುವ ಚೈತ್ಯ–ವಿಹಾರವು ಗಮನಾರ್ಹ ಕೆತ್ತನೆ. ಇದು ಶಿಲ್ಪಗಳಿಗಿಂತಲೂ ವಾಸ್ತುಶಿಲ್ಪಕ್ಕಾಗಿ ಪ್ರಸಿದ್ಧವಾಗಿದೆ. ಎರಡು ಹಂತಗಳ ಕಟ್ಟಡವಿದಾಗಿದ್ದು ಮಹಡಿ ಮೇಲೇರಲು ಮೆಟ್ಟಿಲುಗಳಿದ್ದು ಇದು ದೂರದಿಂದ ಗಮನಿಸಿದಾಗ ಗುಹೆಯಂತೆ ಕಂಡುಬಂದರೂ ರಾಚನಿಕ ವಾಸ್ತುಶಿಲ್ಪವಾಗಿದೆ. ಮೇಗುಟಿ ಗುಡಿಗೆ ಹೋಗುವ ದಾರಿಯಲ್ಲಿ ಕಂಡುಬರುವ ಈ ಗುಡಿಯು ಎರಡಂತಸ್ತಿನದ್ದಾಗಿದೆ. ಇದು ಜೈನ ಗುಡಿಯೆಂದು ಕಸಿನ್ಸ್ ಹೇಳಿದ್ದಾರೆ.[೪೦] ಕಲ್ಲಿನಲ್ಲಿ

೩೯. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೧

೪೦. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೧೨



ಕೆತ್ತಲಾಗಿರುವ ಮತ್ತು ಕಟ್ಟಲಾಗಿರುವ ಈ ಶಿಲ್ಪವು ಒಂದು ವಿಶಿಷ್ಟರಚನೆಯಾಗಿದೆ. ಕೆಳಗಿನ ಹಂತದಲ್ಲಿ ನಾಲ್ಕು ಚೌಕಾಕಾರದ ಕಂಬಗಳು ಹಾಗೂ ಗೋಡೆಗೆ ಹೊಂದಿಕೊಂಡಿರುವ ಕಂಬಗಳು ಸೇರಿ ರಚಿತವಾದ ವರಾಂಡವಿದೆ. ಇದನ್ನು ಮುಂದುವರಿದು ಒಳಹೊಕ್ಕರೆ ಬಂಡೆಯಲ್ಲಿ ಕೊರೆದಿರುವ ಮೂರು ಕೋಣೆಗಳಿವೆ. ಇದನ್ನು ಗರ್ಭಗೃಹಗಳೆಂದು ಕೆಲವರು ಹೇಳಿರುವರಾದರೂ ಇವು ಗರ್ಭಗೃಹಗಳಲ್ಲ. ಹೊಂದಿಕೊಂಡಂತಿರುವ ಹಿಂಬದಿಯ ಬಂಡೆಯಲ್ಲಿ ಮೂರು ಗರ್ಭಗೃಹಗಳನ್ನು ಕೊರೆಯಲಾಗಿದೆ.[೪೧] ವಾಸ್ತವವಾಗಿ ಇವು ಗರ್ಭಗೃಹಗಳಲ್ಲ, ಬದಲಾಗಿ ಇವು ಬೌದ್ಧ ಸನ್ಯಾಸಿಗಳು ಧ್ಯಾನ ಮಾಡುವುದಕ್ಕಾಗಿ ಕುಳಿತುಕೊಳ್ಳಲು ಕೆತ್ತಲಾಗಿರುವ ಆಸನಗಳು. ಇಲ್ಲಿರುವ ಕಂಬಗಳಲ್ಲಿ ಜ್ಯಾಮಿತಿಕ ರಚನೆಯ ಕೆತ್ತನೆಗಳಿವೆ. ಮಧ್ಯದ ಕಂಬಗಳಲ್ಲಿಯ ಕೆತ್ತನೆ ಹೆಚ್ಚು ಕಲಾತ್ಮಕವಾಗಿದೆ.

ಅಲ್ಲಿಂದ ಮೇಲಿನ ಅಂತಸ್ತಿಗೆ ಮೆಟ್ಟಿಲುಗಳನ್ನು ಹತ್ತಿ ಹೋದರೆ ವರಾಂಡವಿದೆ. ಆದರೆ ಕೋಣೆ ಮಾತ್ರ ಒಂದೇ ಇದೆ. ಇದನ್ನು ಮೇಲೆ ಚಾಚಿದ ಬಂಡೆಯಲ್ಲಿ ಕೊರೆಯಲಾಗಿದೆ. ಇಲ್ಲಿಯೂ ಕೆಲವು ಕಲಾತ್ಮಕ ಕೆತ್ತನೆಗಳಿವೆ. ಮುಖ್ಯವಾಗಿ ಕಂಬಗಳಲ್ಲಿ ಹೂಬಳ್ಳಿಗಳ ರಚನೆಯಿದೆ, ಸುರುಳಿ ಕೆತ್ತನೆಯ ಅಲಂಕರಣವನ್ನು ಗಮನಿಸಬಹುದು, ಅದಲ್ಲದೆ ಮಿಥುನಶಿಲ್ಪಗಳಿವೆ, ಜೊತೆಗೆ ಹಾವಿನ ರೀತಿಯ ಕೆತ್ತನೆಯನ್ನು ಕೂಡಾ ನಾವಿಲ್ಲಿ ಕಾಣಬಹುದು. ಜ್ಯಾಮಿತಿಕ ರೀತಿಯ ಕೆತ್ತನೆಯನ್ನು ಇದರ ಛತ್ತಿನಲ್ಲಿ ಮಾಡಿರುವುದನ್ನು ಕಾಣಬಹುದು. ಇದರ ಒಳಭಾಗದಲ್ಲಿ 'ಮುಕ್ಕೊಡೆಯ ಕೆಳಗೆ ಕುಳಿತಿರುವ ಒಂದು ವಿಗ್ರಹವನ್ನು ಕೆತ್ತಲಾಗಿದೆ. ಅರಿವೆಯನ್ನು ತೊಟ್ಟಿರುವಂತೆ ತೋರುವ ಇದನ್ನು ಜೈನ ವಿಗ್ರಹವೆಂದು ಕರೆದಿದ್ದಾರೆ'.[೪೨] ಆದರೆ ಇದು ಯಾವ ರೀತಿಯಿಂದಲೂ ಜೈನವಿಗ್ರಹದಂತೆ ತೋರುತ್ತಿಲ್ಲ. ಮುಖ್ಯವಾಗಿ ಜೈನಮುನಿಗಳು ದಿಗಂಬರರಾಗಿದ್ದು ಮೈಮೇಲೆ ಯಾವುದೇ ರೀತಿಯ ಬಟ್ಟೆ ಇರುವುದಿಲ್ಲ. ಆದರೆ ಇಲ್ಲಿ ಇದು ಸ್ಪಷ್ಟವಾಗಿ ಕಂಡುಬರುತ್ತದೆ.

ಶಿಲ್ಪ –೧೫

ಐಹೊಳೆಯ ಮೇಗುತಿ ಗುಡಿಯಲ್ಲಿ ಪದ್ಮಾಸೀನನಾದ ಬುದ್ಧನೆಂದು, ಕೆಳ ಅಂತಸ್ತಿನಲ್ಲಿಯೂ ಅಂತಹದೇ ಮೂರ್ತಿಯನ್ನು ಕೆತ್ತಲಾಗಿದ್ದು, ಅದೂ ಸಹ ಬುದ್ಧನ ಮೂರ್ತಿಯೆಂದೂ ಗುರುತಿಸಲಾಗಿದೆ. ಇದನ್ನು ವಿಹಾರವೆಂದು ಇತ್ತೀಚೆಗೆ ಗುರುತಿಸಲಾಗಿದೆ. ಮೇಲಂತಸ್ತಿನ ಛಾವಣಿಯಲ್ಲಿಯೂ ಇಂತಹದೇ ಮೂರ್ತಿಯನ್ನು ಕೆತ್ತಲಾಗಿದ್ದು, ವಿಗ್ರಹದ ತಲೆಯ ಮೇಲೆ ಛತ್ರಿಯನ್ನು ಮೂಡಿಸಲಾಗಿದೆ. ವಿಗ್ರಹದ ಬಲಗೈ ವ್ಯಾಖ್ಯಾನಮುದ್ರೆಯಲ್ಲಿದ್ದರೆ, ಎಡ ಅಂಗೈ ಎದೆಯ ಮೇಲೆ ಹೊರಮುಖವಾಗಿದೆ. ಇದೆ ಹಣೆಯಲ್ಲಿ ಎರಡು ಹುಬ್ಬುಗಳ ನಡುವೆ ಊರ್ಣ್ಣ ಇದೆ. ಇದು ಬುದ್ಧನಲ್ಲಿ ಕಂಡುಬರುವ ಪುರುಷಲಕ್ಷಣಗಳಲ್ಲೊಂದು. ಶಿಲ್ಪದ ಹಸ್ತಮುದ್ರೆ

೪೧. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೧೨
೪೨. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೧೨



ಸಹ ಬುದ್ಧನಿಗೆ ಸಂಬಂಧಿಸಿದುದೇ ಆಗಿದೆ.[೪೩] ಸೂಕ್ಷ್ಮವಾಗಿ ಗಮನಿಸಿದರೆ ಮೂರ್ತಿಯ ಬಲತೋಳಿನ ಕೆಳಗಿನಿಂದ ಎಡಭುಜದ ಮೇಲೆ ಹೊದೆಯಲಾದ ವಸ್ತ್ರ ಮೊಣಕಾಲಿನವರೆಗೂ ಇಳಿದಿರುವುದು ಇದು ಬೌದ್ಧ ವಿಗ್ರಹವೆನ್ನಲು ಇನ್ನೊಂದು ಆಧಾರವಾಗಿದೆ ಎನ್ನಬಹುದು. ಒಟ್ಟಾರೆ ಈ ಶಿಲ್ಪವು ತುಂಬ ಸುಂದರವಾಗಿ ಕೆತ್ತಲ್ಪಟ್ಟಿದ್ದು ಎಂತಹವರನ್ನೂ ಆಕರ್ಷಿಸದಿರದು.

ಬುದ್ಧನ ಮುಖವು ಶಾಂತವಾಗಿದ್ದು, ಬಲಗೈಯನ್ನು ಎದೆಯ ಮಟ್ಟದಲ್ಲಿ ಹಿಡಿದಿದ್ದು ವ್ಯಾಖ್ಯಾನ ಮುದ್ರೆಯಲ್ಲಿದ್ದಾನೆ. ಮುಖವು ಚೌಕಾಕಾರದಲ್ಲಿದೆ. ತಲೆಯ ಮೇಲೆ ಸುರುಳಿ ಸುರುಳಿಯಾಗಿ ಕೂದಲನ್ನು ಕೆತ್ತಲಾಗಿದೆ. ಅದರ ಮೇಲುಭಾಗದಲ್ಲಿ ಮುಕ್ಕೊಡೆಯನ್ನು ಕೆತ್ತಲಾಗಿರುವುದರಿಂದ ಉಷ್ಣೀಶವು ಕಂಡುಬರುವುದಿಲ್ಲ. ಬಟ್ಟೆಯು ನಯವಾದ ರೀತಿಯಲ್ಲಿದ್ದು ನೆರಿಗೆಗಳು ಕಾಣಿಸುವುದಿಲ್ಲ. ತಲೆಯ ಹಿಂಭಾಗದಲ್ಲಿ ದೊಡ್ಡದಾದ ಪ್ರಭಾಚಕ್ರವಿದೆ. ಇದು ಕೂಡಾ ಜೈನ ಶಿಲ್ಪಗಳಲ್ಲಿ ನೋಡಿದ ಪ್ರಭಾವಳಿಗಳಿಗಿಂತ ಭಿನ್ನವಾಗಿದೆ.

ಬುದ್ಧನು ಪದ್ಮಪೀಠದ ಮೇಲೆ ಆಸೀನನಾಗಿದ್ದು ಕಣ್ಣುಗಳೆರಡನ್ನು ಮುಚ್ಚಿ ಧ್ಯಾನಸ್ಥನಾಗಿದ್ದಾನೆ. ಶಿಲ್ಪದ ದೇಹರಚನೆಯು ಪ್ರಮಾಣಬದ್ಧವಾಗಿದ್ದು ನೋಡುಗನಲ್ಲಿ ಕಲಾತ್ಮಕ ಕೆತ್ತನೆಯ ಅನುಭವವನ್ನುಂಟುಮಾಡುತ್ತದೆ. ಬುದ್ಧನ ಶಿಲ್ಪದ ಸುತ್ತಲೂ ಇತರ ಕೆತ್ತನೆಗಳಿದ್ದ ಕುರುಹುಗಳಿದ್ದು ಎಲ್ಲವೂ ನಾಶವಾಗಿ ಈಗ ಕೇವಲ ಬುದ್ಧನ ಶಿಲ್ಪ ಮಾತ್ರ ಉಳಿದುಕೊಂಡಿದೆ. 'ಬುದ್ಧನು ಪದ್ಮಪೀಠದ ಮೇಲೆ ಸತ್ವಪರ್ಯಂಕಾಸನದಲ್ಲಿ ಕುಳಿತಿದ್ದಾನೆ. ಆತನ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿದೆ. ಎಡಗೈಯನ್ನು ಬಲಗಾಲಿನ ಮೇಲೆ ಅಂಗೈ ಮೇಲೆಮಾಡಿ ಇರಿಸಲಾಗಿದೆ. ದೇಹವು ಭಾಗಶಃ ಬಟ್ಟೆಯಿಂದ ಆವೃತವಾಗಿದೆ. ತಲೆಯ ಮೇಲೆ ಮುಕ್ಕೊಡೆಯಿದೆ. ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ'[೪೪] ಎಂದು ಡಾ. ಶೀಲಾಕಾಂತ ಪತ್ತಾರರು ಹೇಳಿದ್ದಾರೆ. ಆದರೆ ಈಗ ಆ ಕುರುಹುಗಳು ಮಾತ್ರ ಕಂಡುಬರುತ್ತವೆ.

ಇವೆಲ್ಲವುಗಳನ್ನು ಗಮನಿಸಿದಾಗ ಮತ್ತು ಇದಕ್ಕೆ ಪೂರಕವಾಗಿ ಇಲ್ಲಿ ಕೆತ್ತಲಾಗಿರುವ ಇತರ ಸಣ್ಣ ಪುಟ್ಟ ಶಿಲ್ಪಗಳನ್ನು ಮತ್ತು ಜ್ಯಾಮಿತಿಕ ಕೆತ್ತನೆಗಳನ್ನು ಗಮನಿಸಿದಾಗ ಈ ವಾಸ್ತುಶಿಲ್ಪವು ನಿಶ್ಚಿತವಾಗಿ ಬೌದ್ಧ ದೇವಾಲಯವೇ ಆಗಿದೆ. ಇದಲ್ಲದೆ ಇನ್ನೊಂದು ಮುಖ್ಯ ವಿಚಾರವೆಂದರೆ ಕೆಳಗಿನ ಮಾಳಿಗೆಯಲ್ಲಿ ಕಂಡುಬರುವ ಸಣ್ಣ ಸಣ್ಣ ಕೋಣೆಗಳು, ಈ ರೀತಿಯ ಕೋಣೆಗಳು ಬೌದ್ಧ ವಿಹಾರಗಳಲ್ಲಿ ಸಾಮಾನ್ಯ. ಬೌದ್ಧ ಸನ್ಯಾಸಿಗಳು ಧ್ಯಾನ ಮಾಡಲು ಅನುಕೂಲವಾಗುವಂತೆ ಏಕಾಂತ ಪ್ರದೇಶವನ್ನು ಒದಗಿಸುವ ಸಲುವಾಗಿ ಇಂತಹ ಕೋಣೆಗಳನ್ನು ರಚಿಸುತ್ತಿದ್ದರು. ಇಲ್ಲಿಯೂ ಅಂತಹುದೇ ರಚನೆಗಳಿವೆ. 'ಆಂಧ್ರಪ್ರದೇಶದ ಹಾಗೂ ಪಲ್ಲವರ ಆಳ್ವಿಕೆಗೆ ಒಳಪಟ್ಟಿದ್ದ ತೊಂಡೈಮಂಡಲಮ್‌ಗಳಲ್ಲಿ ಇಂತಹ ಗುಹಾಲಯಗಳು ಕಂಡುಬಂದಿವೆ'[೪೫] ಎಂದು ಡಾ.

೪೩. ಬಿ. ಎಂ. ಚಂದ್ರಶೇಖರಯ್ಯ : ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಪರಂಪರೆ, ಪುಟ – ೨೪೮

೪೪. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೦

೪೫. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೧೨


ಬಾ.ರಾ ಗೋಪಾಲ್ ಅವರು ಹೇಳುತ್ತಾರೆ. ಈ ದೃಷ್ಟಿಯಿಂದ ನೋಡಿದಾಗಲೂ ಇದನ್ನು ಬೌದ್ಧ ಚೈತ್ಯಾಲಯವೆನ್ನಲು ಅಡ್ಡಿಯಿಲ್ಲ. ಈ ದೇವಾಲಯವು ಸುಮಾರು ಕ್ರಿ.ಶ. ಐದನೆಯ ಶತಮಾನದಲ್ಲಿ ನಿರ್ಮಾಣವಾಗಿರಬಹುದೆಂದು ಅಂದಾಜಿಸಲಾಗಿದೆ. ಆದರೆ ಇಲ್ಲಿ ಕಂಡಿರಿಸಿರುವ ಕಿರು ಶಾಸನಗಳು ಸುಮಾರು ೭–೮ನೆಯ ಶತಮಾನದ್ದು'.[೪೬] ಈ ವಿಚಾರದಲ್ಲಿ ಸಾಕಷ್ಟು ಸಂಶೋಧನೆಗಳನ್ನು ನಡೆಸಿರುವ ಬಾದಾಮಿಯವರೇ ಆದ ಡಾ. ಶೀಲಾಕಾಂತ ಪತ್ತಾರರು ಸ್ಪಷ್ಟವಾಗಿ ಈ ದೇವಾಲಯವನ್ನು, ಚೈತ್ಯ ಗುಹಾಲಯವಾಗಿದ್ದು ಭಾಗಶಃ ರಾಚನಿಕ ಮಂದಿರವೆಂದು ಮತ್ತು ಕರ್ನಾಟಕದ ಅತ್ಯಂತ ಪ್ರಾಚೀನ ಗುಹೆಯೆಂದು ಹೇಳುತ್ತಾರೆ.

'ಐಹೊಳೆಯ ಬೌದ್ಧ ಗುಹೆಯು ಕರ್ನಾಟಕದ ಅತ್ಯಂತ ಪ್ರಾಚೀನ ಗುಹೆ. ಇದು ಭಾಗಶಃ ರಾಚನಿಕ ದೇಗುಲವಾಗಿದೆ. ಇದರ ಮೇಲ್ಗಂಡಿನಲ್ಲಿ ವ್ಯಾಖ್ಯಾನಮುದ್ರೆಯ ಬುದ್ಧನ ಶಿಲ್ಪವು ಸುಂದರವಾಗಿದೆ. ಈ ಬೌದ್ಧಗುಹೆಯು ಎರಡು ಅಂತಸ್ತಿನ ಚೈತ್ಯಾಲಯವಾಗಿದ್ದು ಕೆಳಗಿನ ಅಂತಸ್ತು ಗರ್ಭಗೃಹ ಹಾಗೂ ಮುಖಮಂಟಪಗಳಿಂದಾವೃತವಾಗಿದೆ. ಗರ್ಭಗೃಹದ ಬಾಗಿಲುವಾಡದ ಶಾಖೆಗಳಲ್ಲಿ ಜಾತಕ ಕಥೆಗಳ ಸನ್ನಿವೇಶವನ್ನು ಕೆತ್ತಲಾಗಿದೆ'.[೪೭]


ಈ ವಿಚಾರಗಳೇನೇ ಇದ್ದರೂ ಬಾದಾಮಿಯ ಸುತ್ತಲಿನ ಪರಿಸರವನ್ನು ಅವಲೋಕಿಸಿದಾಗ ಮತ್ತು ಇಲ್ಲಿನ ಶಿಲ್ಪಕಲೆಯನ್ನು ಗಮನಿಸಿದಾಗ ಗೋಚರಿಸುವುದೇನೆಂದರೆ, ಬಾದಾಮಿಯ ಪರಿಸರದಲ್ಲಿ ಬೌದ್ಧಧರ್ಮ ಮತ್ತು ಕಲೆಯ ಕುರಿತಾಗಿ ಹೆಚ್ಚಿನ ಬೆಳವಣಿಗೆ ನಡೆದಿಲ್ಲ. ನಡೆದಿದ್ದರೂ ಅದು ಚಾಲುಕ್ಯರ ಆಡಳಿತಕ್ಕೆ ಬರುವ ಮೊದಲು ಮತ್ತು ಪ್ರಾರಂಭದ ಹಂತದಲ್ಲಿಯೇ ಮುಗಿದು ಹೋಗಿರಬೇಕು. ಆದರೆ ಆ ಕಾಲದಲ್ಲಿ ಅಂದರೆ ಅದು ಇದ್ದ ಕಾಲದಲ್ಲಿ ಉಚ್ಛ್ರಾಯಾವಸ್ಥೆಯಲ್ಲಿದ್ದಾಗಲೇ ಯಾವುದೋ ಕಾರಣದಿಂದ ಹಿನ್ನೆಲೆಗೆ ಸರಿದು ಹೋಗಿರಬೇಕು. ಹಾಗಾಗಿ ಇಂದು ನಮಗೆ ಇಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳು ಕಾಣಿಸುವುದು ಕಡಿಮೆ. ಏನೇ ಇದ್ದರೂ ಇಲ್ಲಿನ ಕೆಲವೇ ಶಿಲ್ಪಗಳನ್ನು ಗಮನಿಸಿ ನೋಡಿದಾಗ ಇಲ್ಲಿ ಬೌದ್ಧ ಧರ್ಮವೂ ತನ್ನ ಪ್ರಭಾವವನ್ನು ಬೀರಿದ್ದರೆ ಆಶ್ಚರ್ಯವಿಲ್ಲ. ಬಹುಶಃ ಇನ್ನಷ್ಟು ಸಂಶೋಧನೆಗಳು ನಡೆದರೆ ಇನ್ನೂ ಹೆಚ್ಚಿನ ಶಿಲ್ಪಗಳು ಇಲ್ಲಿ ದೊರಕಬಹುದು. ಆಗ ಇತಿಹಾಸದತ್ತ ಮತ್ತೊಮ್ಮೆ ತಿರುಗಿ ನೋಡಬೇಕಾಗಬಹುದು.

೪೬. ಡಾ. ಶೀಲಾಕಾಂತ ಪತ್ತಾರ (ಸಂ.) : ಬಾದಾಮಿ ಚಾಲುಕ್ಯ ಸಂಪದ, ಪುಟ – ೨೧೩
೪೭. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೪೨

ಬೌದ್ಧ ಮತ್ತು ಜೈನ ಶಿಲ್ಪಗಳು



ಶಿಲ್ಪ-೧. ನಾಲ್ಕನೆಯ ಜೈನ ಗುಹಾಲಯ, ಬಾದಾಮಿ



ಶಿಲ್ಪ-೨. ನಾಲ್ಕನೆಯ ಜೈನ ಗುಹಾಲಯ, ಬಾದಾಮಿ



ಶಿಲ್ಪ-೩. ನಾಲ್ಕನೆಯ ಜೈನ ಗುಹಾಲಯ, ಬಾದಾಮಿ



ಶಿಲ್ಪ-೪. ನಾಲ್ಕನೆಯ ಜೈನ ಗುಹಾಲಯ, ಬಾದಾಮಿ

ಬೌದ್ಧ ಮತ್ತು ಜೈನ ಶಿಲ್ಪಗಳು



ಶಿಲ್ಪ-೫. ನಾಲ್ಕನೆಯ ಜೈನ ಗುಹಾಲಯ, ಬಾದಾಮಿ




ಶಿಲ್ಪ-೪. ನಾಲ್ಕನೆಯ ಜೈನ ಗುಹಾಲಯ, ಬಾದಾಮಿ



ಶಿಲ್ಪ-೭. ಜೈನ ಗುಹಾಲಯ, ಐಹೊಳೆ



ಶಿಲ್ಪ-೮. ಜೈನ ಗುಹಾಲಯ, ಐಹೊಳೆ



ಶಿಲ್ಪ-೯. ಮೀನ ಬಸದಿ, ಐಹೊಳೆ

ಬೌದ್ಧ ಮತ್ತು ಜೈನ ಶಿಲ್ಪಗಳು




ಶಿಲ್ಪ-೧೦. ಜೈನ ಗುಹಾಲಯ, ಐಹೊಳೆ



ಶಿಲ್ಪ-೧೧. ಮೇಗುತಿ (ಮೇಗುಡಿ) ದೇವಾಲಯ, ಐಹೊಳೆ



ಶಿಲ್ಪ-೧೨. ಮೇಗುತಿ (ಮೇಗುಡಿ) ದೇವಾಲಯ, ಐಹೊಳೆ



ಶಿಲ್ಪ-೧೩. ನೈಸರ್ಗಿಕ ಗುಹಾಲಯ, ಬಾದಾಮಿ



ಶಿಲ್ಪ-೧೪. ನೈಸರ್ಗಿಕ ಗುಹಾಲಯ, ಬಾದಾಮಿ



ಶಿಲ್ಪ-೧೫. ಬೌದ್ಧ ಗುಹಾಲಯ, ಐಹೊಳೆ



ಅಧ್ಯಾಯ : ಆರು

ಬಾದಾಮಿ ಚಾಲುಕ್ಯರ ಕಾಲದ ಸಂಕೀರ್ಣ ಶಿಲ್ಪಗಳು

ಸಂಕೀರ್ಣ ಶಿಲ್ಪಗಳು ಯಾವುದೇ ಧರ್ಮಕ್ಕೂ ಸೀಮಿತವಾಗಿಲ್ಲ. ಉದಾ. ಶೈವ, ವೈಷ್ಣವ, ಜೈನ ಇತ್ಯಾದಿ ಧರ್ಮಗಳನ್ನು ಬಿಟ್ಟು ಪ್ರತ್ಯೇಕವಾಗಿರುವ ಶಿಲ್ಪಗಳನ್ನು ಸಂಕೀರ್ಣ ಶಿಲ್ಪಗಳೆಂದು ಹೇಳಬಹುದು. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಶೈವ, ವೈಷ್ಣವ ಅಥವಾ ಜೈನ ಮತ್ತು ಬೌದ್ಧ ಧರ್ಮಕ್ಕೆ ಸಂಬಂಧಪಟ್ಟ ಶಿಲ್ಪಗಳೇ ಇರಲಿ, ಇಲ್ಲೆಲ್ಲ ಪ್ರಮುಖ ದೇವತಾ ಶಿಲ್ಪಗಳಲ್ಲದೆ ಇತರ ಹಲವಾರು ರೀತಿಯ ಶಿಲ್ಪಗಳಿವೆ. ಈ ಪ್ರಮುಖ ದೇವತೆಗಳಲ್ಲದೆ ಶಕ್ತಿ ದೇವತೆ ಇದೆ, ಗಣೇಶ, ಸ್ಕಂದ, ಇತರ ಹಿಂದೂ ದೇವತಾ ಶಿಲ್ಪಗಳು, ಅಷ್ಟ ದಿಕ್ಪಾಲಕರು ಇತ್ಯಾದಿ ಶಿಲ್ಪಗಳಿವೆ, ಲೌಕಿಕ ಶಿಲ್ಪಗಳು ರಾಜ-ರಾಣಿಯರ ಶಿಲ್ಪಗಳು, ಮಿಥುನಶಿಲ್ಪಗಳು, ಇವುಗಳ ಸಾಲಿಗೆ ಸೇರುವ ಆದರೆ ಇವುಗಳಿಂದ ಭಿನ್ನವಾಗಿರುವ ಸ್ತ್ರೀ-ಪುರುಷರ ನಿಂತ ಭಂಗಿಯಲ್ಲಿರುವ ದಂಪತಿಶಿಲ್ಪಗಳಿವೆ. ಮುಖ್ಯವಾಗಿ ಸಾಲಭಂಜಿಕೆ ಶಿಲ್ಪಗಳಿವೆ. ಜ್ಯಾಮಿತಿಯ ವಿನ್ಯಾಸಗಳು, ಪ್ರಾಣಿ-ಪಕ್ಷಿಯ ಕೆತ್ತನೆಗಳು, ಮತ್ತು ಅಲಂಕಾರಿಕ ವಿನ್ಯಾಸಗಳುಳ್ಳ ಸುರುಳಿ ಉಬ್ಬು ಶಿಲ್ಪಗಳಿವೆ. ಇವೆಲ್ಲವುಗಳ ಕುರಿತು ಇಲ್ಲಿ ನೋಡೋಣ.

ಬಾದಾಮಿಯ ಚಾಲುಕ್ಯರ ಆಡಳಿತವಿದ್ದ ಕಾಲದಲ್ಲಿ ಅಂದಿನ ರಾಜರು ಜನರ ಸಂಸ್ಕೃತಿಯ ಪ್ರತೀಕವಾಗಿರುವ ದೇವರ ಆರಾಧನೆಗೆ ಅನುಕೂಲವಾಗಲು ನೂರಾರು ಸಂಖ್ಯೆಯಲ್ಲಿ ದೇವಾಲಯಗಳನ್ನು ರಚನೆ ಮಾಡಿದರು. ಇದು ಗುಹಾಲಯಗಳಿಂದ ಹಿಡಿದು ರಾಚನಿಕ ಅಥವಾ ನಿರ್ಮಾಣದ ದೇವಾಲಯದವರೆಗೆ ಹರಡಿದೆ. ಇವುಗಳು ನೂರಾರು ಸಂಖ್ಯೆಯಲ್ಲಿವೆ. ಹಲವು ದೇವಾಲಯಗಳು ಸಂಪೂರ್ಣ ನಾಶವಾಗಿದ್ದರೆ ಕೆಲವು ಭಗ್ನಗೊಂಡು ಪಳೆಯುಳಿಕೆಗಳಷ್ಟೇ

ಇವೆ. ಆದರೆ ಇಲ್ಲಿರುವ ವಾಸ್ತುಶಿಲ್ಪಗಳನ್ನು ಗಮನಿಸಿದಾಗ ಇವುಗಳ ಅಗಾಧತೆಯ ಅರಿವಾಗುತ್ತದೆ. ಚಾಲುಕ್ಯರು ಬರಿ ವಾಸ್ತುಶಿಲ್ಪಕ್ಕಷ್ಟೇ ಗಮನ ನೀಡಿಲ್ಲ. ಅವುಗಳಿಗಿಂತ ಹೆಚ್ಚಾಗಿ ಶಿಲ್ಪಗಳಿಗೆ ಗಮನ ನೀಡಿದರು. ಶಿಲ್ಪಗಳನ್ನು ಎಲ್ಲೆಂದರಲ್ಲಿ ರಚಿಸಿದರೂ ಆ ಮೂಲಕ ಜನರಿಗೆ ಪುರಾಣ ಕಥೆಗಳ, ದೇವ ದೇವತೆಗಳ ಪರಿಚಯವನ್ನು ಮಾಡಿಕೊಟ್ಟರು. ವಾಸ್ತುಶಿಲ್ಪಗಳು ಬರಿಯ ಬೋಳು ಮಂದಿರಗಳಂತೆ ಕಾಣದಿರಲೆಂದು ಅಲ್ಲೆಲ್ಲ ಶಿಲ್ಪಗಳನ್ನು ಕೆತ್ತಿಸಿದರು. ಚಾಲುಕ್ಯಶಿಲ್ಪಿಗಳು ತಾವು ಎಂತಹ ಕುಶಲಿಗಳೆಂಬುದನ್ನು ತಮ್ಮ ಕೆತ್ತನೆಗಳ ಮೂಲಕ ತೋರಿಸಿಕೊಟ್ಟರು. ದೇವತಾಶಿಲ್ಪಗಳ ರಚನೆಯಲ್ಲಿ ಅವಕಾಶವು ಸೀಮಿತವಾಗಿದ್ದು ಪ್ರತಿಮಾಶಾಸ್ತ್ರದ ಆಧಾರವಾಗಿ ಶಿಲ್ಪಗಳನ್ನು ರಚಿಸಬೇಕಿದ್ದುದರಿಂದ ಅವುಗಳ ಹೊರತಾಗಿ ಲೌಕಿಕ ಶಿಲ್ಪಗಳನ್ನು ರಚಿಸಿದರು. ಇವಕ್ಕೆ ಶಾಸ್ತ್ರದ ಕಟ್ಟುಪಾಡುಗಳಿಲ್ಲ. ಶಿಲ್ಪಿಗೆ ಸ್ವಾತಂತ್ರ್ಯವಿದೆ. ಅದನ್ನು ಶಿಲ್ಪಿಗಳು ಚೆನ್ನಾಗಿ ಬಳಸಿಕೊಂಡರು. ಇದರಿಂದಾಗಿ ಹಲವಾರು ಕ್ರಿಯಾತ್ಮಕವಾದ ಶಿಲ್ಪಗಳು ಮೂಡಿಬಂದವು. ಪ್ರಮುಖ ಮೂರು ಮತಗಳಲ್ಲದೆ ಇತರ ಹಲವಾರು ಸಣ್ಣ-ಪುಟ್ಟ ಧಾರ್ಮಿಕ ಗುಂಪುಗಳೂ ತಮ್ಮ ಆರಾಧನೆಯ ದೇವತೆಗಳ ಶಿಲ್ಪಗಳನ್ನು ರಚಿಸುವುದರಲ್ಲಿ ಹಿಂದೆ ಬೀಳಲಿಲ್ಲ. ಇದರಿಂದಾಗಿ ಲಜ್ಜಾಗೌರಿ, ಲಕುಲೀಶದಂತಹ ಹಲವಾರು ಶಿಲ್ಪಗಳು ರಚನೆಯಾದವು. ಇಲ್ಲೆಲ್ಲ ಆ ಕಾಲದ ಶಿಲ್ಪಿಗಳ ಶಿಲ್ಪಪ್ರೌಢಿಮೆ ಬೆರಗನ್ನುಂಟುಮಾಡುತ್ತದೆ.

ಇವುಗಳಲ್ಲಿ ಮಾನವ ಶಿಲ್ಪಗಳಿವೆ, ಮಾನವ ಮತ್ತು ಮನುಷ್ಯರನ್ನು ಕಸಿಮಾಡಿ ರಚಿಸಿದ ಶಿಲ್ಪಗಳಿವೆ. (ಆಡಿನ ಮುಖ,ಮಾನವ ದೇಹ, ಸಿಂಹದ ತಲೆ, ಮನುಷ್ಯದೇಹ) ವಿವಿಧ ಪ್ರಾಣಿ ಪಕ್ಷಿಗಳ ಶಿಲ್ಪಗಳು, ಮೀನುಗಳು, ಹೂಬಳ್ಳಿಗಳು, ವಿವಿಧ ಜ್ಯಾಮಿತಿಕ ರಚನೆಗಳೂ ಇವೆ. ಇಲ್ಲೆಲ್ಲ ಕಲಾವಿದರು ತಮ್ಮ ಪರಿಪೂರ್ಣತೆಯನ್ನು ತೋರಿಸಿದ್ದಾರೆ. ಇಂತಹ ಶಿಲ್ಪಗಳು ನೋಡುಗರಲ್ಲಿ ಕುತೂಹಲವನ್ನು ಉಂಟುಮಾಡಿದರೆ ಕಲೆಯ ಅಧ್ಯಯನ ಮಾಡುವವರಿಗೆ ಆಕರಗಳಾಗುತ್ತವೆ. ವಿವಿಧ ಅಳತೆಯ ಈ ಶಿಲ್ಪಗಳನ್ನು ಕಂಬ, ಜಾಲಂಧ್ರ, ಛತ್ತುಗಳು, ತೋರಣಗಳು, ಮತ್ತು ಗೋಡೆಗಳಲ್ಲಿ ಕೆತ್ತಲಾಗಿದೆ.

ಇವುಗಳೆಲ್ಲ ಲೌಕಿಕ ಶಿಲ್ಪಗಳು. ಇದಲ್ಲದೆ ತಮ್ಮ ಕೆತ್ತನೆಗಳಲ್ಲಿ, ಶೃಂಗಾರ, ಹಾಸ್ಯ, ರೌದ್ರ, ಬೀಭತ್ಸತೆಗಳನ್ನು ಕೂಡಾ ವ್ಯಕ್ತಪಡಿಸುವಂತೆ ಕೆತ್ತಿರುವುದು ಗಮನಾರ್ಹವಾದ ವಿಚಾರ. ಆದುದರಿಂದ ಈ ಲೌಕಿಕ ಶಿಲ್ಪಗಳನ್ನು ನೋಡುವಾಗ ಸಂಪೂರ್ಣ ಕಲೆಯ ರಸದೌತಣ ಸಿಗುತ್ತದೆ. ಆದುದರಿಂದ ಇಲ್ಲಿನ ಸಂಕೀರ್ಣ ಶಿಲ್ಪಗಳನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಇಲ್ಲಿ ಬಿಡಿ ಶಿಲ್ಪಗಳಿವೆ, ಸಮೂಹ ಅಥವಾ ಗುಂಪಿನ ಶಿಲ್ಪಗಳಿವೆ, ಇದಲ್ಲದೆ ರಾಮಾಯಣ, ಮಹಾಭಾರತ, ಕೃಷ್ಣನ ಬಾಲಲೀಲೆಗಳನ್ನು ವ್ಯಕ್ತಪಡಿಸುವ ಕಥಾನಕಗಳ ಕೆತ್ತನೆಗಳಿವೆ. ಇವೆಲ್ಲ ಅಧ್ಯಯನಯೋಗ್ಯವಾದ ಶಿಲ್ಪಗಳು.



ಶಕ್ತಿ ದೇವತೆಯ ಶಿಲ್ಪಗಳು

ಚಾಲುಕ್ಯರ ಕಾಲದಲ್ಲಿ ಮೊದಲು ಚರ್ಚಿಸಿದಂತೆ ಶೈವ, ವೈಷ್ಣವ, ಬೌದ್ಧ, ಜೈನ ಧರ್ಮಗಳಲ್ಲದೆ ಶಾಕ್ತ, ಗಾಣಪತ್ಯ, ಲಕುಲೀಶ (ಲಾಕುಲ) ಪಂಥ ಇತ್ಯಾದಿಗಳು ಕೂಡಾ ಬಳಕೆಯಲ್ಲಿದ್ದುದು ಕಂಡುಬರುತ್ತದೆ. ಇದರಲ್ಲಿ ಶಾಕ್ತಪಂಥವು ಹೆಚ್ಚಾಗಿ ಚಲಾವಣೆಯಲ್ಲಿತ್ತು. ಮಾರ್ಕಂಡೇಯಪುರಾಣದ ಒಂದು ಭಾಗವಾದ 'ದೇವಿಮಹಾತ್ಮ್ಯ'ದಲ್ಲಿ ಶಾಕ್ತಮತದ ವಿಶೇಷತೆಗಳನ್ನು ತಿಳಿಸಲಾಗಿದೆ. ಶಾಕ್ತಮತವು ಹಿಂದೂಧರ್ಮದ ಒಂದು ಅಂಗ'.[೧] ಶಕ್ತಿ ಪೂಜೆಯು ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ರೂಢಿಯಲ್ಲಿದ್ದುದು ಎಲ್ಲರಿಗೂ ತಿಳಿದಿರುವ ಸತ್ಯ. ಅದರಂತೆ ಚಾಲುಕ್ಯರ ಕಾಲಕ್ಕಿಂತಲೂ ಮೊದಲೇ ಕರ್ನಾಟಕದಲ್ಲಿ ಆಚರಣೆಯಲ್ಲಿ ಇತ್ತು. ಮುಂದೆಯೂ ಇದು ನಡೆದು ಬಂತು. ಹಾಗಾಗಿ ಚಾಲುಕ್ಯರ ಕಾಲದಲ್ಲಿಯೂ ಶಕ್ತಿ ದೇವತೆಯನ್ನು ಆರಾಧಿಸುವ ಶಿಲ್ಪಗಳು ಮೂಡಿಬಂದವು. ಅವುಗಳಲ್ಲಿ ಮುಖ್ಯವಾಗಿ ಮಹಿಷಾಸುರಮರ್ದಿನಿಯ ಶಿಲ್ಪವನ್ನು ಗುರುತಿಸಬಹುದು. ಶಕ್ತಿಯ ರೂಪವನ್ನು ಹಲವಾರು ರೀತಿಯಲ್ಲಿ ಹೇಳಲಾಗಿದೆ. ಅದು ದುರ್ಗಾ ಆಗಿರಬಹುದು ಅಥವಾ ಪಾರ್ವತಿ, ಗೌರಿ, ಕಾಳಿ, ಮಹಿಷಾಸುರಮರ್ದಿನಿ ಆಗಿರಬಹುದು. ಇವುಗಳನ್ನು ನಾನಾ ರೂಪಗಳಿಂದ ಪೂಜಿಸಿದರೂ ಅದರ ಹಿಂದೆ ಇರುವ ಶಕ್ತಿ ಒಂದೇ ಆಗಿದೆ.[೨]

ಮಹಿಷಾಸುರಮರ್ದಿನಿ ಅಂದರೆ ದುರ್ಗೆಯ ಪ್ರತಿರೂಪ. ಹಾಗಾಗಿ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಮಹಿಷಾಸುರಮರ್ದಿನಿಯ ಶಿಲ್ಪಗಳು ಬಹಳಷ್ಟು ಕಾಣಸಿಗುತ್ತವೆ. ಇದಲ್ಲದೆ ಬನಶಂಕರಿ, ಲಜ್ಜಾಗೌರಿ ಇತ್ಯಾದಿ ಶಿಲ್ಪಗಳನ್ನಿಲ್ಲಿ ಗಮನಿಸಬಹುದು. ಇವುಗಳು ಶಕ್ತಿ ದೇವತೆಯ ಆರಾಧನೆಗಾಗಿ ರಚಿಸಲಾಗಿರುವ ಶಿಲ್ಪಗಳು. ಇದರಲ್ಲಿ ಲಜ್ಜಾಗೌರಿಯ ಶಿಲ್ಪಗಳಂತೂ ಚಾಲುಕ್ಯರ ಆಡಳಿತವಿದ್ದ ಪ್ರದೇಶಗಳಲ್ಲಷ್ಟೇ ಹೆಚ್ಚಾಗಿ ಕಂಡುಬಂದಿದ್ದು ಇದರ ರಹಸ್ಯವನ್ನೂ ಇನ್ನೂ ಬಿಡಿಸಲು ಸಾಧ್ಯವಾಗಿಲ್ಲ. ಚಾಲುಕ್ಯರ ಕಾಲದಲ್ಲಿ ಶಕ್ತಿಯನ್ನು ಮಹಿಷಾಸುರಮರ್ದಿನಿಯ ರೂಪದಲ್ಲಿ ಪೂಜಿಸಿರುವುದೇ ಹೆಚ್ಚಾಗಿ ಕಂಡುಬಂದಿದೆ. 'ಚಾಲುಕ್ಯರ ಅತಿ ಪ್ರಾಚೀನ ಗುಡಿಗಳಲ್ಲಿ ಒಂದಾದ ಐಹೊಳೆಯ ಗೌಡರ ಗುಡಿಯು ದುರ್ಗಾಭಗವತಿ ಮಂದಿರ'[೩] ಎಂದು ಡಾ. ಶೀಲಾಕಾಂತ ಪತ್ತಾರರು ಅಭಿಪ್ರಾಯಪಟ್ಟಿದ್ದಾರೆ.

ಮಹಿಷಾಸುರ ಮರ್ದಿನಿ ಶಿಲ್ಪಗಳು

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮಹಿಷಾಸುರಮರ್ದಿನಿಯ ಶಿಲ್ಪಗಳು ಹೊಸದೇನಲ್ಲ. ದುರ್ಗೆಯನ್ನು ಶಕ್ತಿಯ ಅವತಾರವಾಗಿ ಮಹಿಷಾಸುರಮರ್ದಿನಿ ದುರ್ಗೆ,

---

೦೧. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೫

೦೨. ಕಲವೀರ ಮನ್ವಾಚಾರ : ಮಾತೃದೇವತಾ ಆರಾಧನೆ (ಅ.ಪ್ರ. ಪಿಎಚ್.ಡಿ ಮ.ಪ್ರ.), ಪುಟ – ೧೨೭

೦೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೬

ಚಾಮುಂಡಿ, ಭಗವತಿ ಹೀಗೆ ವಿವಿಧ ರೂಪಗಳಲ್ಲಿ ಪೂಜಿಸುತ್ತ ಬರಲಾಗಿದೆ. 'ಕರ್ನಾಟಕದ ಮೊಟ್ಟಮೊದಲ ಮಹಿಷಾಸುರಮರ್ದಿನಿ ಶಿಲ್ಪವು ಕದಂಬರ ಕಾಲಕ್ಕೆ ಸೇರಿದುದಾಗಿದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ದಂಬೇಹಳ್ಳಿಯ ಗುಡಿಯಲ್ಲಿರುವ ಶಿಲ್ಪವು ಕ್ರಿ.ಶ.೪೩೦–೪೫೫ರ ಸುಮಾರಿನಲ್ಲಿ ರಚಿತವಾಗಿದೆ. ಇದೇ ಕರ್ನಾಟಕದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಮಹಿಷಾಸುರ ಮರ್ದಿನಿಯ ಶಿಲ್ಪವೆನ್ನಬಹುದು'.[೪] ಶಕ್ತಿ ದೇವತೆಯ ಶಿಲ್ಪಗಳಲ್ಲಿ ಮಹಿಷಾಸುರ ಮರ್ದಿನಿಯ ಶಿಲ್ಪಗಳನ್ನು ಆಕರ್ಷಕವಾಗಿ ಕೆತ್ತಲಾಗಿದೆ.

ಶಿಲ್ಪ –೧

ಬಾದಾಮಿಯ ಶೈವ ಗುಹೆಯ ಉಪಗುಹೆಯು ಸಂಪೂರ್ಣವಾಗಿ ಮಹಿಷಾಸುರಮರ್ದಿನಿಗೆ ಅರ್ಪಿತವಾಗಿದೆ'.[೫] ಬದಾಮಿಯ ಒಂದನೆಯ ಗುಹೆಯು ಶೈವ ಧರ್ಮಕ್ಕೆ ಸಂಬಂಧಿಸಿದ್ದಾಗಿದ್ದರೆ ಅದಕ್ಕೆ ಹೊಂದಿಕೊಂಡಂತಿರುವ ಉಪಗುಹೆಯಿದೆ. ಇಲ್ಲಿ ಬೃಹದಾಕಾರದ ಮಹಿಷಾಸುರ ಮರ್ದಿನಿಯ ಶಿಲ್ಪವನ್ನು ಕೆತ್ತಲಾಗಿದೆ. ೪ ಅಡಿ ಎತ್ತರವಿರುವ ಇದು ಚತುರ್ಭುಜೆ ದುರ್ಗೆಯ ಸುಂದರ ಶಿಲ್ಪ. ಮಾನವನಲ್ಲಿರುವ ಅಹಂಕಾರ, ಕ್ರೋಧ, ದುರಾಸೆ, ಮದ ಮತ್ತು ಅಜ್ಞಾನದ ಸಂಕೇತವಾಗಿರುವ ಮಹಿಷಾಸುರನನ್ನು ದುರ್ಗೆಯು ಉಗ್ರ ರೂಪ ತಾಳಿ ಸಂಹರಿಸುವ ದೃಶ್ಯವಿದು.

ಇಲ್ಲಿನ ಶಿಲ್ಪದಲ್ಲಿ ದುರ್ಗೆಯು ಮಹಿಷಾಸುರನನ್ನು ಸಂಹಾರ ಮಾಡುವ ಕ್ರಿಯೆಯನ್ನು ತೋರಿಸಿರುವ ರೀತಿ ಅದ್ಭುತ. ಮಹಿಷಾಸುರನು ಇಲ್ಲಿ ಕೋಣನ ರೂಪದಲ್ಲಿದ್ದಾನೆ. ದುರ್ಗೆಯು ತನ್ನ ಎಡಗೈಯಿಂದ ಮಹಿಷಾಸುರನ ಬಾಲವನ್ನು ಹಿಡಿದೆತ್ತಿದ್ದಾಳೆ. ಬಲಗಾಲನ್ನು ಮಹಿಷನ ತಲೆಯ ಮೇಲಿಟ್ಟು, ಬಲಗೈಯಲ್ಲಿ ತನ್ನ ತ್ರಿಶೂಲದಿಂದ ಬಲವಾಗಿ ಆತನಿಗೆ ತಿವಿದಿದ್ದು, ಕೈಯಲ್ಲಿ ಹಿಡಿದಿರುವ ತ್ರಿಶೂಲವು ಆತನ ದೇಹವನ್ನು ಛೇದಿಸಿ ನೆಲವನ್ನು ಮುಟ್ಟಿದೆ. ಇಲ್ಲಿ ಆಕೆಯು ಮಹಿಷನನ್ನು ಇರಿಯುವ ಕ್ರಿಯೆಯಲ್ಲಿ ವೇಗವನ್ನು ತೋರಿಸಿರುವ ರೀತಿಯು ಮನಸೆಳೆಯುತ್ತದೆ. ದೇವಿಯು ಮೇಲಿನ ಎರಡು ಕೈಗಳಲ್ಲಿ ಶಂಖ–ಚಕ್ರಗಳನ್ನು ಹಿಡಿದಿದ್ದಾಳೆ. ಹಾಗೂ ಆಭರಣಗಳನ್ನು ಬಹಳ ಆಕರ್ಷಕವಾಗಿ ಕೆತ್ತಲಾಗಿದ್ದು ತೋಳುಬಂಧಿ, ಕೈಬಳೆಗಳು, ಕಂಠಾಭರಣಗಳು ಗಮನಸೆಳೆಯುತ್ತವೆ.

ದೇವಿಯು ರಾಕ್ಷಸನನ್ನು ಕೊಲ್ಲುವ ಕ್ರಿಯೆಯಾಗಿದ್ದರೂ ಅದನ್ನು ಒಂದು ಆಟವಾಗಿ ಕಾಣಿಸುವಂತೆ, ದೇವಿಯು ನಾಟ್ಯಮಾಡುತ್ತಿರುವಂತೆ ಇಲ್ಲಿ ಕೆತ್ತಲಾಗಿದೆ. ನಾಟ್ಯಭಂಗಿಯಲ್ಲಿರುವ ಈ ಶಿಲ್ಪದಲ್ಲಿ ದೇವಿಯ ಮೈಯು ಅಂಕುಡೊಂಕಾಗಿ ಸುಂದರವಾಗಿ ಲಾಲಿತ್ಯಮಯವಾಗಿ ಕಂಡುಬರುತ್ತದೆ. ದೇಹವು ಒಂದೇ ಕಾಲಿನ ಮೇಲೆ ನಿಂತಿದ್ದರೂ ಇಡಿಯ ದೇಹವನ್ನು

೦೪. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೩೨೧

೦೫. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೬



ಒಂದೇ ಕಾಲಿನ ಮೇಲೆ ನಿಂತಿರುವಂತೆ ಕೆತ್ತಿ ಸಮತೋಲನವನ್ನು ಕಾಯ್ದುಕೊಳ್ಳಲಾಗಿದೆ. ಮುಖವನ್ನು ಆಕರ್ಷಕವಾಗಿ ಕೆತ್ತಲಾಗಿದ್ದು ಆಕೆಯ ಮುಖದಲ್ಲಿ ಯಾವುದೆ ಗರ್ವದ ಭಾವವಿಲ್ಲ, ಉಗ್ರತೆಯೂ ಕಾಣಬರುವುದಿಲ್ಲ. ಇದು ದೇಹದ ರಚನೆಗೆ ಇನ್ನಷ್ಟು ಪೂರಕವಾಗಿ ರಚನೆಯಾಗಿದೆ. ರಾಕ್ಷಸನ ಶಿಲ್ಪವು ಇಲ್ಲಿ ಪ್ರಾಣಿಯ(ಮಹಿಷ-ಕೋಣ) ರೂಪದಲ್ಲಿದ್ದು ಸುಂದರವಾಗಿ ಕೆತ್ತಿರುವುದು ಗಮನಾರ್ಹ.

ಚಾಲುಕ್ಯ ಶಿಲ್ಪಿಗಳು ಮಾನವ ಶಿಲ್ಪದಂತೆಯೆ ಪ್ರಾಣಿಗಳ ಶಿಲ್ಪಗಳನ್ನು ಪ್ರಮಾಣಬದ್ಧವಾಗಿ ಕೆತ್ತಿರುವುದಕ್ಕೆ ಇದು ಉದಾಹರಣೆಯಾಗಿದೆ. ಸರಳವಾಗಿದ್ದರೂ ಸುಂದರವಾಗಿ ಸಂಯೋಜಿಸಲಾಗಿರುವ ಈ ಶಿಲ್ಪವು ಸರಳವಾದ ರಚನೆಯಾಗಿದ್ದು ಇಲ್ಲಿ ಯಾವುದೆ ವಸ್ತುವನ್ನು ತಮ್ಮ ಅತಿಯಾದ ಅಲಂಕರಣದಿಂದ ಕೆಡಿಸಿಲ್ಲವಾದುದರಿಂದ ಶಿಲ್ಪದ ವಸ್ತು ಮತ್ತು ಸಂಯೋಜನೆಯ ಆನಂದವನ್ನು ಇಲ್ಲಿ ಅನುಭವಿಸಲು ಸಾಧ್ಯವಾಗುತ್ತದೆ. ಶಿಲ್ಪದ ಉಳಿದ ಭಾಗವು ಸಾಕಷ್ಟು ಖಾಲಿಯಾಗಿದ್ದರೂ ಇಲ್ಲಿ ಯಾವುದೆ ರೀತಿಯ ಶಿಲ್ಪಗಳನ್ನು ಕೆತ್ತಿಲ್ಲ. ಇದರಿಂದಾಗಿ ಕೇವಲ ಮಹಿಷಾಸುರನ ವಧೆಯ ಶಿಲ್ಪವನ್ನಷ್ಟೇ ಇಲ್ಲಿ ಶಿಲ್ಪಿಗಳು ಕೆತ್ತಿರುವುದು ಗಮನಾರ್ಹ.

ಶಿಲ್ಪ -೨

ಬಾದಾಮಿಯ ಭೂತನಾಥ ಗುಡಿಯ ಹಿಂದೆ ಪಂಚಲಿಂಗ ಫಡಿ ಎಂದು ಕರೆಯುವ ಈ ಬಂಡೆಯ ಮೇಲೆ ಮಹಿಷಾಸುರಮರ್ದಿನಿಯ ಶಿಲ್ಪವನ್ನು ಗಮನಿಸಬಹುದು. (ಮಧ್ಯಮ ಗಾತ್ರದ ಶಿಲ್ಪ) ಇಲ್ಲಿ ಮಹಿಷಾಸುರನನ್ನು ಕೋಣನ ರೂಪದ ಬದಲಾಗಿ ಮಾನವ ರೂಪದಲ್ಲಿ ಕೆತ್ತಲಾಗಿದೆ. ಬಹುಪಾಲು ಸವೆದು ಹೋಗಿರುವ ಈ ಶಿಲ್ಪದಲ್ಲಿ ದುರ್ಗೆಯು ಅಷ್ಟ ಭುಜೆಯಾಗಿ ಚಿತ್ರಿತಳಾಗಿದ್ದಾಳೆ. ಬಲಗಾಲನ್ನು ನೆಲದ ಮೇಲೆ ಊರಿದ್ದು ಎಡಗಾಲನ್ನು ಅಸುರನ ಮೇಲಿರಿಸಿದ್ದಾಳೆ. ಆಕೆಯ ಬಲಭಾಗದಲ್ಲಿ ಕೆಳಗಡೆ ಸಿಂಹವು ನಿಂತಿದೆ. ಕೆಳಗಿನ ಬಲಗೈಯಲ್ಲಿ ತ್ರಿಶೂಲದಿಂದ ರಾಕ್ಷಸನನ್ನು ಇರಿಯುತ್ತಿದ್ದು ಇಲ್ಲಿ ದುರ್ಗೆಯು ಉಗ್ರಳಾಗಿ ಕಾಣಿಸುತ್ತಿದ್ದಾಳೆ. ಮೇಲಿನ ಎರಡು ಕೈಗಳಲ್ಲಿ ಶಂಖ-ಚಕ್ರಗಳನ್ನು ಹಿಡಿದಿದ್ದಾಳೆ. ಮಧ್ಯದ ಕೈಗಳಲ್ಲಿ ಒಂದರಲ್ಲಿ ಗದೆಯನ್ನೂ, ಎಡಗೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದಿದ್ದಾಳೆ. ಒಂದು ಕೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾಳೆ. ಇಲ್ಲಿ ಇನ್ನೊಂದು ಗಮನಾರ್ಹ ಅಂಶವೆಂದರೆ, ಇಲ್ಲಿ ದೇವಿಯು ತ್ರಿಶೂಲವನ್ನು ಮೇಲ್ಮುಖವಾಗಿ ಹಿಡಿದಿದ್ದು ಹಿಂಭಾಗದಿಂದ ಇರಿಯುತ್ತಿದ್ದಾಳೆ. ಇನ್ನೊಂದು ಕೈಯಿಂದ ಈಟಿಯ ಮೂಲಕ ಅಸುರನನ್ನು ಇರಿಯುತ್ತಿದ್ದಾಳೆ. ಇದು ಅಸಹಜವಾಗಿ ಕಾಣಿಸುತ್ತದೆ. ದೇವಿಯ ಮುಖವು ಉಗ್ರವಾಗಿದ್ದು ದುಂಡುಮುಖವನ್ನು ಹೊಂದಿದೆ. ಕಿರೀಟವನ್ನು ಧರಿಸಿದ್ದಾಳೆ. ಮಹಿಷಾಸುರನ ಮುಖವು ಕೋಪದಿಂದ ಕೂಡಿದೆ. ಅಸುರನು ನೆಲದ ಮೇಲಿದ್ದು ಅರ್ಧಭಾಗವು ನೆಲದ ಮೇಲೆ ಪವಡಿಸಿದೆ. ಸೊಂಟದ ಮೇಲುಭಾಗವು ಮೇಲ್ಮುಖವಾಗಿದೆ. ಬಹುಶಃ ಮಹಿಷಾಸುರನು

ದೇವಿಯ ಹೊಡೆತಕ್ಕೆ ಸೋತು ಕೆಳಗೆ ಬಿದ್ದವನು ಮೇಲೇಳಲು ಪ್ರಯತ್ನಿಸುತ್ತಿದ್ದಾನೆ. ಅಸುರನ ದೃಷ್ಟಿಯು ಸಮಾನಾಂತರವಾಗಿದ್ದರೆ ದೇವಿಯ ದೃಷ್ಟಿಯು ಅಸುರನ ಮೇಲಿದೆ. ದೇವಿಯು ಮೈ ಮೇಲೆ ಸಾಕಷ್ಟು ಆಭರಣಗಳಿಂದ ಅಲಂಕೃತಗೊಂಡಿದ್ದು ಈಗ ಅವೆಲ್ಲ ಸವೆದುಹೋಗಿದ್ದ ಕುರುಹುಗಳು ಮಾತ್ರ ಕಂಡುಬರುತ್ತವೆ.

ಬಲಭಾಗದಲ್ಲಿ ಕೆತ್ತಲಾಗಿರುವ ದೇವಿಯ ವಾಹನವಾದ ಸಿಂಹವು ಶಾಂತವಾಗಿ ದೇವಿಯ ಆಜ್ಞೆಗಾಗಿ ಕಾಯುತ್ತಿರುವಂತೆ ಪಕ್ಕದಲ್ಲಿ ಸಮಾನಾಂತರವಾಗಿ ಕಾಲುಗಳನ್ನಿಟ್ಟು ನಿಂತುಕೊಂಡಿದೆ. ದೇವಿಯ ಶಿಲ್ಪದ ಕೆತ್ತನೆಯನ್ನಿಲ್ಲಿ ಗಮನಿಸಿದಾಗ ಮೊದಲು ನೋಡಿದ ಶಿಲ್ಪಕ್ಕಿಂತ ಇದು ಭಿನ್ನವಾಗಿ ಕಂಡುಬರುತ್ತದೆ. ಮುಖ್ಯವಾಗಿ ಕೆತ್ತನೆಯನ್ನಿಲ್ಲಿ ನೋಡಬೇಕು. ಕೆತ್ತನೆಯು ಪ್ರಮಾಣಬದ್ಧವಾಗಿದ್ದರೂ ರಚನೆಯ ದೃಷ್ಟಿಯಲ್ಲಿ ನೋಡಿದಾಗ ಅಂತರವು ಕಂಡುಬರುತ್ತದೆ. ಇಲ್ಲಿನ ಕೆತ್ತನೆಯು ಮೊದಲ ಶಿಲ್ಪದಷ್ಟು ಕಲಾತ್ಮಕತೆಯನ್ನು ಹೊಂದಿಲ್ಲ. ದೇವಿಯ ಕಾಲುಗಳು ಮತ್ತು ನಿಂತ ಭಂಗಿಯ ಕೆತ್ತನೆಯಲ್ಲಿ ಅನುಭವದ ಕೊರತೆಯು ಕಂಡುಬರುತ್ತದೆ.

ದೇಹದ ರಚನೆಯಲ್ಲಿ ಮುಖ್ಯವಾಗಿ ಸೊಂಟದ ಕೆಳಭಾಗದ ರಚನೆಯಲ್ಲಿ ಜೀವಕಳೆಯಿಲ್ಲ. ನೇರ ಕಾಲುಗಳು ಅಸಹಜತೆಯನ್ನುಂಟುಮಾಡುತ್ತವೆ. ದೇಹರಚನೆಯು ತೆಳ್ಳನೆಯದಾಗಿದೆ. ಆಯುಧಗಳ ರಚನೆಯಲ್ಲಿಯೂ ಇದನ್ನು ಗಮನಿಸಬಹುದು. ಆಯುಧಗಳು ಗದೆ, ಬಿಲ್ಲು ಇತ್ಯಾದಿಗಳು ಸಮಪ್ರಮಾಣದಲ್ಲಿ ಇಲ್ಲದಿರುವುದು ಕಂಡುಬರುತ್ತವೆ. ಶಿಲ್ಪದ ಸುತ್ತಲೂ ಬೇರೆ ಯಾವ ಶಿಲ್ಪಗಳಿಲ್ಲದಿರುವುದು ಒಂದು ಕೊರತೆಯಾಗಿದೆ. ಶಿಲ್ಪದ ಎಡ–ಬಲಗಳಲ್ಲಿ ಕಂಬಗಳನ್ನು ಕೆತ್ತಲಾಗಿದ್ದು ಅಲ್ಲದೆ ಮೇಲುಭಾಗದಲ್ಲಿ ಛಾವಣಿಯಂತೆ ಕೆತ್ತಲಾಗಿದ್ದು ಇದು ಶಿಲ್ಪಕ್ಕೆ ಚೌಕಟ್ಟನ್ನು ಒದಗಿಸಿದಂತೆ ಅನುಭವವಾಗುತ್ತದೆ. ಶಿಲ್ಪವು ಸಣ್ಣದಾಗಿದ್ದರೂ ಕೆತ್ತನೆಯ ರೀತಿ ಮತ್ತು ಶೈಲಿಯಿಂದಾಗಿ ಈ ಶಿಲ್ಪವು ಗಮನ ಸೆಳೆಯುತ್ತದೆ. ಶಿಲ್ಪದ ಕೆತ್ತನೆಯಲ್ಲಿ ಪರಿಪೂರ್ಣತೆಯ ಕೊರತೆ ಕಾಣಿಸುತ್ತದೆ.

ಇದೇ ಕಾಲಮಾನ ಅಥವಾ ಇದಕ್ಕಿಂತ ಮೊದಲೆ ರಚನೆಯಾಗಿರುವ ಮೊದಲ ಶೈವ ಗುಹೆಯ ಮಹಿಷಾಸುರಮರ್ದಿನಿಯ ಶಿಲ್ಪಕ್ಕೆ ಹೋಲಿಸಿದರೆ ಈ ಶಿಲ್ಪವು ಸಾಧಾರಣವಾಗಿದೆ. ಆದರೂ ಶಿಲ್ಪ ಸಂಯೋಜನೆ, ಚಿತ್ರಣ ರೀತಿ ಇತ್ಯಾದಿಗಳಿಂದ ಈ ಶಿಲ್ಪವನ್ನು ಗಮನಿಸಬಹುದು. ಇಲ್ಲಿ ಇನ್ನೊಂದು ವಿಚಾರವನ್ನು ಗಮನಿಸಬೇಕು, ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಹಲವಾರು ಮಹಿಷಾಸುರಮರ್ದಿನಿಯ ಶಿಲ್ಪಗಳು ರಚನೆಯಾಗಿದ್ದು ಪ್ರತಿಯೊಂದು ಶಿಲ್ಪವೂ ತನ್ನದೆ ಆದ ವೈಶಿಷ್ಟ್ಯವನ್ನು ಹೊಂದಿದೆ.

ಪ್ರತಿಯೊಂದು ಶಿಲ್ಪವನ್ನೂ ಬಿಡಿಯಾಗಿ ನೋಡಬೇಕಲ್ಲದೆ ಇನ್ನೊಂದರ ಜೊತೆ ತುಲನೆ ಮಾಡಿ ನೋಡಬೇಕಾದ ಕಾರಣವಿಲ್ಲ. ದೇವಿಯ ನಿಂತ ನಿಲುವು, ಮಹಿಷನ ಭಂಗಿ, ತೊಟ್ಟ ಆಭರಣಗಳು ಇತ್ಯಾದಿಗಳು ಇವಕ್ಕೆ ಪೂರಕವಾಗಿ ಕೆಲಸ ಮಾಡುತ್ತವೆ. ಆ ಹಿನ್ನೆಲೆಯಲ್ಲಿ



ಪ್ರತಿಯೊಂದು ಶಿಲ್ಪವನ್ನೂ ಪ್ರತ್ಯೇಕವಾಗಿ ಗಮನಿಸಿ ವಿಶೇಷ ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಶಿಲ್ಪ –೩

ಬಾದಾಮಿಯ ಭೂತನಾಥ ಗುಡಿಯ ಇನ್ನೊಂದು ಪಾರ್ಶ್ವದಲ್ಲಿ ಇನ್ನೊಂದು ಸಣ್ಣ ಗಾತ್ರದ ಮಹಿಷಾಸುರಮರ್ದಿನಿ ದುರ್ಗೆಯ ಶಿಲ್ಪವಿದ್ದು ಹೆಚ್ಚಿನ ಜನರ ಗಮನ ಸೆಳೆದಂತಿಲ್ಲ. ಸಣ್ಣಗಾತ್ರದ ಶಿಲ್ಪವು ಇದಾಗಿದ್ದು ಇದರ ರಚನೆ ಮಾತ್ರ ಆಕರ್ಷಕವಾಗಿದ್ದು ಅತ್ಯಂತ ಮೌಲಿಕವಾದ ಶಿಲ್ಪವಾಗಿದೆ. ಕುಬ್ಜ ಶಿಲ್ಪದಂತೆ ಕೆತ್ತಲಾಗಿರುವ ಇಲ್ಲಿನ ಶಿಲ್ಪದಲ್ಲಿ ದುರ್ಗೆಯು ಕೋಣನ ರೂಪದಲ್ಲಿ ಬಿದ್ದಿರುವ ಮಹಿಷಾಸುರನನ್ನು ತಿವಿಯುತ್ತಿದ್ದಾಳೆ. ಬಲಗಾಲನ್ನು ನೆಲದ ಮೇಲೆ ಊರಿ ನಿಂತಿದ್ದು ಎಡಗಾಲನ್ನು ಕೋಣನ ಬೆನ್ನಿನ ಮೇಲಿರಿಸಲಾಗಿದೆ. ದುಂಡುದುಂಡಾಗಿರುವ ದುರ್ಗೆಯ ಈ ರೀತಿಯ ಶಿಲ್ಪವು ದೇವತೆಗಳ ಶಿಲ್ಪವನ್ನು ಚಾಲುಕ್ಯರು ಕೆತ್ತಿರುವ ಶೈಲಿಗೆ ಹೋಲಿಸಿದರೆ ಅಪರೂಪವೆನ್ನಿಸುತ್ತದೆ.

ಇಲ್ಲಿ ಮಹಿಷಾಸುರನು ಬಿದ್ದಿರುವ ರೀತಿಯೂ ಉಳಿದೆಡೆಗೆ ಹೋಲಿಸಿದರೆ ಅಪರೂಪವಾಗಿದೆ. ಸಣ್ಣಗಾತ್ರದಲ್ಲಿರುವ ಕೋಣವು ದೇವಿಯ ಕಾಲಡಿಯಲ್ಲಿ ಬಿದ್ದಿದ್ದು ಅಲ್ಲಿಂದಲೆ ಆಕ್ರಮಣ ಮಾಡಲು ಬರುವವನನ್ನು ದೇವಿಯು ತಿವಿಯುತ್ತಿರುವಂತೆ ಕೆತ್ತಲಾಗಿದೆ. ಎಂಟು ಕೈಗಳನ್ನು ಹೊಂದಿರುವುದರಿಂದ ಅಷ್ಟಭುಜೆ ದುರ್ಗೆಯಾಗಿರುವ ಮಹಿಷಾಸುರಮರ್ದಿನಿಯ ಈ ಶಿಲ್ಪದಲ್ಲಿ ಕೈ–ಕಾಲುಗಳು ದುಂಡಗಾಗಿದ್ದು ಏಳು ಕೈಗಳಲ್ಲಿ ಆಯುಧಗಳಿವೆ. ಎಡಗಡೆಯ ಒಂದು ಕೈಯು ಕೆಳಗಡೆಗೆ ಚಾಚಿದ್ದು ಕಟಿಭಾಗದಲ್ಲಿದೆ. ಮೇಲಿನ ಎರಡು ಕೈಗಳಲ್ಲಿ ಶಂಖ–ಚಕ್ರಗಳಿವೆ, ಉಳಿದ ಕೈಗಳಲ್ಲಿ ಕ್ರಮವಾಗಿ ಬಿಲ್ಲು, ಪಾಶ, ಗದೆ, ಖಡ್ಗಗಳಿದ್ದು ಒಂದು ಕೈಯಲ್ಲಿ ತ್ರಿಶೂಲದ ಮೂಲಕ ಕೋಣವನ್ನು ತಿವಿಯುತ್ತಿದ್ದಾಳೆ.

ತ್ರಿಶೂಲದ ಹಿಂಭಾಗವು ದಪ್ಪವಾಗಿದ್ದು ಕ್ರಮೇಣ ಮುಖದತ್ತ ತೆಳ್ಳಗಾಗುತ್ತ ಹೋಗಿದೆ. ಮೊದಲಿನ ಶಿಲ್ಪದಂತಲ್ಲದೆ ಇಲ್ಲಿ ತ್ರಿಶೂಲದ ಮುಖದಿಂದಲೆ ರಾಕ್ಷಸನನ್ನು ತಿವಿಯುತ್ತಿದ್ದಾಳೆ, ಒಂದು ಕೈಯಲ್ಲಿ ಖಡ್ಗವಿರುವುದು ಇಲ್ಲಿನ ವಿಶೇಷ. ಹಾಗೂ ಆಕೆಯ ವಾಹನವಾದ ಸಿಂಹವು ದೂರದಲ್ಲಿ ನಿಂತಿದ್ದು ಸಣ್ಣದಾಗಿ ಕೆತ್ತಲಾಗಿದೆ. ಕಿರೀಟದ ರಚನೆಯು ವಿಭಿನ್ನವಾಗಿದ್ದು ಮೂರುಸುರುಳಿಗಳಲ್ಲಿ ಶಂಖುವಿನ ಆಕಾರದಲ್ಲಿ ಕಿರೀಟದ ರಚನೆಯಿದೆ. ಇದು ಗಮನಿಸಬಹುದಾದ ವ್ಯತ್ಯಾಸವಾಗಿದೆ. ಅದೆ ರೀತಿ ಈ ಶಿಲ್ಪವು ಸರಳವಾಗಿ ಆಭರಣಗಳ ಕೆತ್ತನೆಯನ್ನು ಹೊಂದಿದ್ದು ಇದು ಕೇವಲ ಉಬ್ಬುಶಿಲ್ಪವಾಗಿದ್ದು ಸೂಕ್ಷ್ಮತೆಯಿಲ್ಲದೆ ಸರಳವಾಗಿ ಕೆತ್ತಲಾಗಿದ್ದು ಎಲ್ಲ ರೀತಿಗಳಲ್ಲಿ ವಿಭಿನ್ನತೆಯನ್ನು ಹೊಂದಿದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವಿದೆ, ಅದೇನೆಂದರೆ ಭೂತನಾಥ ಗುಡಿಯ ರಚನೆ ಎರಡು ಕಾಲಗಳಲ್ಲಾಗಿದೆ. ಮೊದಲನೆಯದು ಚಾಲುಕ್ಯರ ಮೊದಲ

ಹಂತದ ಕಾಲದಲ್ಲಾಗಿದ್ದರೆ ಎರಡನೆಯ ಹಂತದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಾಗಿದೆ. ಭೂಥನಾಥ ಗುಡಿಯಲ್ಲಿ ಎರಡು ಹಂತದ ಕೆತ್ತನೆಗಳಿವೆ. ಆದುದರಿಂದ ಇಲ್ಲಿನ ಶಿಲ್ಪಗಳನ್ನು ಒಟ್ಟಾಗಿ ಭೂತನಾಥ ಗುಡಿಯ ಸಂಕೀರ್ಣ ಶಿಲ್ಪಗಳೆಂದು ಕರೆಯಲಾಗುತ್ತದೆ. ಇಲ್ಲಿ ನಾವು ಎರಡು ಹಂತದ ಶಿಲ್ಪಗಳನ್ನು ನೋಡುತ್ತೇವೆ. ಮೊದಲು ನಾವು ನೋಡಿದ ಶಿಲ್ಪವು ಚಾಲುಕ್ಯರ ಮೊದಲ ಹಂತದಲ್ಲಿ ರಚನೆಯಾಗಿರಬಹುದಾದ ಶಿಲ್ಪವಾಗಿದ್ದರೆ ಎರಡನೆಯ ಮಹಿಷಾಸುರಮರ್ದಿನಿಯ ಶಿಲ್ಪವು ಎರಡನೆಯ ಹಂತದಲ್ಲಿ ಅಂದರೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಚನೆಯಾಗಿದೆ. ಆದುದರಿಂದ ಇಲ್ಲಿನ ಶಿಲ್ಪದಲ್ಲಿ ಈ ವ್ಯತ್ಯಾಸವನ್ನು ಗಮನಿಸಬಹುದಾಗಿದೆ. ಆದಾಗ್ಯೂ ಶಿಲ್ಪದ ರಚನೆಯಲ್ಲಿ, ವಸ್ತು ಮತ್ತು ಚಿತ್ರಣದ ರೀತಿಯಲ್ಲಿ ವ್ಯತ್ಯಾಸಗಳಿದ್ದರೂ ಶಿಲ್ಪದ ರಚನೆಯನ್ನು ಗಮನಿಸಬಹುದು. ಶಿಲ್ಪಕಲೆಯ ಸೂಕ್ಷ್ಮತೆಗಳನ್ನು ಅಭ್ಯಾಸಮಾಡುವಲ್ಲಿದು ಸಹಕಾರಿಯಾಗುತ್ತದೆ.

ಐಹೊಳೆಯ ಪರಿಸರದಲ್ಲಿರುವ ಮಹಿಷಾಸುರಮರ್ದಿನಿಯ ಶಿಲ್ಪಗಳು

ಮಹಿಷಾಸುರಮರ್ದಿನಿಯ ಕೆಲವು ಸುಂದರ ಶಿಲ್ಪಗಳು ಐಹೊಳೆಯ ಪರಿಸರದಲ್ಲಿ ಕಂಡುಬರುತ್ತವೆ. ದುರ್ಗಾಗುಡಿ, ಹುಚ್ಚಪ್ಪಯ್ಯನ ಮಠ ಮತ್ತು ರಾವಳಫಡಿ ಗುಹೆಯಲ್ಲಿವೆ. ಕೊಂತಿಗುಡಿಯಲ್ಲಿರುವ ಮಹಿಷಾಸುರಮರ್ದಿನಿಗೆ ನಾಲ್ಕು ಕೈಗಳಿದ್ದರೆ, ಮಿಕ್ಕ ಶಿಲ್ಪಗಳು ಎಂಟು ಕೈಗಳನ್ನು ಹೊಂದಿವೆ. ಈ ಎಲ್ಲಾ ಶಿಲ್ಪಗಳಲ್ಲಿ ದೇವಿಯು ಹಿಂದಿನಿಂದ ಅಥವಾ ಮುಂದಿನಿಂದ ಅಸುರನನ್ನು ತಿವಿಯುತ್ತಿರುವುದು ಕಾಣಬರುತ್ತದೆ'.[೬] ಅವುಗಳಲ್ಲಿ ಮುಖ್ಯವಾಗಿ ನಾವು ಗಮನಿಸಬಹುದಾದದ್ದು ಐಹೊಳೆಯ ದುರ್ಗದ ಗುಡಿಯಲ್ಲಿರುವ ಶಿಲ್ಪ. ಈ ದೇವಾಲಯವು ದುರ್ಗಾ ದೇವಾಲಯವೆಂದೇ ಪ್ರಸಿದ್ಧವಾಗಿದೆ. ಆದರೂ ಇದಕ್ಕೆ ಈ ಹೆಸರು ಬರಲು ಕಾರಣವಾಗಿರುವುದರ ಬಗ್ಗೆ ಈಗಲೂ ಭಿನ್ನಾಭಿಪ್ರಾಯವಿದೆ. ಆದರೂ ನಾವು ಇಲ್ಲಿನ ದೇವಾಲಯವನ್ನು ದುರ್ಗೆಗೆ ಸಮರ್ಪಿಸಲಾದ ದೇವಾಲಯವೆಂದೇ ಗಮನಿಸಿ, ಇಲ್ಲಿನ ಶಿಲ್ಪಗಳನ್ನು ಗಮನಿಸಬಹುದು. ಇಲ್ಲಿರುವ ಸುಂದರವಾದ ಮಹಿಷಾಸುರಮರ್ದಿನಿ ಶಿಲ್ಪವು ಎಲ್ಲರ ಗಮನಸೆಳೆದಿದೆ.

ಶಿಲ್ಪ –೪

ಐಹೊಳೆಯ ದುರ್ಗಾದೇವಾಲಯದಲ್ಲಿ ಪ್ರದಕ್ಷಿಣಾಪಥದಲ್ಲಿ ನಡೆಯಲು ಪ್ರಾರಂಭಿಸಿದರೆ, ಅಸಂಖ್ಯಾತ ಗೂಡುಗಳು ಕಾಣುತ್ತವೆ. ಒಂದರಲ್ಲಿ, ಮಹಿಷಾಸುರ ಮರ್ದಿನಿಯ ಮುಖದಲ್ಲಿಯ ಶಾಂತಮುದ್ರೆಯು ಮಹಿಷಾಸುರನನ್ನು ಕೊಲ್ಲುತ್ತಿರುವ ಕಾರ್ಯಕ್ಕೆ ತದ್ವಿರುದ್ಧವಾಗಿದೆ. ಆಕೆಯ ಎಂಟೂ ಕೈಗಳು, ಶಿವ, ವಿಷ್ಣು ಮತ್ತು ಇತರ ದೇವತೆಗಳು ಕೊಟ್ಟಿರುವ ಆಯುಧಗಳನ್ನು ಎತ್ತಿ

೦೬. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೩೨೨

ಹಿಡಿದಿವೆ. ಆಕೆಯ ಎಡಗಾಲು ರಾಕ್ಷಸನ ಮೇಲೆ ನಿಂತಿದೆ. ತನ್ನ ಶಕ್ತಿ ಕಳೆದುಕೊಂಡು ಜೀವಚ್ಛವವಾಗಿ ಮಹಿಷಾಸುರನು ಮಲಗಿದ್ದಾನೆ. ಪಕ್ಕದಲ್ಲಿ ಆಕೆಯ ವಾಹನವಾದ ಸಿಂಹವು (ಚಿಕ್ಕ ಗಾತ್ರದಲ್ಲಿ) ಗುರುಗುಟ್ಟುತ್ತ ಬಿದ್ದಿರುವ ಶತ್ರುವನ್ನು ತಿರಸ್ಕಾರದಿಂದ ನೋಡುತ್ತ ನಿಂತಿದೆ. ದೇವಿಯ ಮೂರು ಎಡ ಕೈಗಳೂ ತುಸು ಮೇಲಕ್ಕೆದ್ದಿರುವಂತೆ ಇದ್ದು ಎಡಗಾಲು ಮುರಿದು ಹೋಗಿದ್ದರೂ ಪ್ರತಿಮೆಯು ತನ್ನ ಮೂಲ ಸೌಂದರ್ಯವನ್ನು ಇನ್ನೂ ಹಾಗೆಯೇ ಉಳಿಸಿಕೊಂಡಿದೆ. ಶಕ್ತಿ ಮತ್ತು ರಮ್ಯತೆ ಮೂರ್ತಿವೆತ್ತಂತಿದೆ. ತಲೆಯ ಮೇಲಿನ ಕಿರೀಟ ಹಾಗೂ ಹಿಂದುಗಡೆಯ ಪ್ರಭಾವಳಿ ಆಕೆಯ ದೇವತ್ವವನ್ನು ಪ್ರತಿಪಾದಿಸುತ್ತವೆ. ಮಹಿಷನನ್ನು ಚುಚ್ಚುತ್ತಿರುವ ಆಕೆಯ ತ್ರಿಶೂಲಬಾಧೆಯಿಂದ ತೆರೆದಿರುವ ರಾಕ್ಷಸನ ಬಾಯಿ ಹಾಗೂ ತುಸು ಎದ್ದಿರುವ ಅವನ ಬಲಮುಂಗಾಲು ಈ ದೃಶ್ಯವನ್ನು ತುಂಬಾ ಸೊಗಸಾಗಿ ರಚಿಸಲಾಗಿದೆ.[೭] ಇಲ್ಲಿ ಮೆಚ್ಚುವಂತಹ ಮಾತೆಂದರೆ, ಈ ಶಿಲ್ಪವನ್ನು ತ್ರಿ ಆಯಾಮದಲ್ಲಿ ಸುಂದರವಾಗಿ ಸಂಯೋಜನೆ ಮಾಡಿದ್ದಾರೆ.

ಶಿಲ್ಪ –೫

ಐಹೊಳೆಯ ರಾವಳಫಡಿ ಗುಹಾಲಯದ ಶಿಲ್ಪಗಳಲ್ಲಿ ಪ್ರಮುಖವಾಗಿ ಕಂಡುಬರುವ ಮಹಿಷಾಸುರಮರ್ದಿನಿಯ ಶಿಲ್ಪವು ಗಮನಾರ್ಹವಾಗಿದೆ. ಈ ಶಿಲ್ಪದ ರಚನೆಯನ್ನು ಬಾದಾಮಿಯ ಮಹಿಷಾಸುರಮರ್ದಿನಿ ಶಿಲ್ಪಕ್ಕೆ ಹೋಲಿಸಿದರೆ ಹೆಚ್ಚು ಸುಂದರವಾಗಿಯೂ ಕಲಾತ್ಮಕವಾಗಿಯೂ ಕಂಡುಬರುತ್ತದೆ. ಐಹೊಳೆಯ ಶಿಲ್ಪದಲ್ಲಿ ದುರ್ಗೆಯು ಎಂಟು ಕೈಗಳನ್ನು ಹೊಂದಿದ್ದು, ಅಷ್ಟಭುಜ ದುರ್ಗೆಯಾಗಿದ್ದಾಳೆ. ಬಲಗಾಲು ನೆಲದ ಮೇಲೆ ಊರಿದ್ದು ಎಡಗಾಲ ಮೊಣಕಾಲನ್ನು ಮಹಿಷಾಸುರನ ಮೇಲೆ ಊರಿದ್ದಾಳೆ. ದೇಹವು ಹೆಚ್ಚು ಎಡಭಾಗಕ್ಕೆ ವಾಲಿಕೊಂಡಿದೆ. ಎಂಟು ಕೈಗಳಲ್ಲಿ ಒಂದರಲ್ಲಿ ತ್ರಿಶೂಲ ಹಿಡಿದಿದ್ದು ಆ ಮೂಲಕ ಅಸುರನನ್ನು ತಿವಿಯುತ್ತಿದ್ದಾಳೆ.

ತ್ರಿಶೂಲದ ಹಿಂಭಾಗದಿಂದ ರಾಕ್ಷಸನ ಬೆನ್ನನ್ನು ಚುಚ್ಚಿದ್ದಾಳೆ, ಒಂದು ಕೈಯಲ್ಲಿ ಖಡ್ಗ ಹಿಡಿದಿದ್ದಾಳೆ. ಇನ್ನೊಂದು ಕೈಯಲ್ಲಿ ಬಿಲ್ಲು ಬಾಣಗಳಿವೆ. ಎಡಕೈಗಳಲ್ಲಿ ಒಂದನ್ನು ಮಹಿಷನ ಮುಖವನ್ನು ಹಿಡಿಯಲು ಬಳಸಿಕೊಳ್ಳಲಾಗಿದೆ. ಇನ್ನೊಂದು ಕೈಯಲ್ಲಿ ಗುರಾಣಿಯಿದೆ. ಮೇಲಿನ ಎರಡು ಕೈಗಳಲ್ಲಿ ಒಂದರಲ್ಲಿ ಶಂಖ ಮತ್ತು ಇನ್ನೊಂದರಲ್ಲಿ ಚಕ್ರವಿದೆ. ಇಲ್ಲಿ ಸಿಂಹವು ದೇವಿಯ ಎಡಭಾಗದಲ್ಲಿ ಮಹಿಷನ ಪಕ್ಕದಲ್ಲಿದೆ. ಮೊದಲು ನೋಡಿದ ಶಿಲ್ಪಗಳಲ್ಲಿ ಸಿಂಹವು ದೇವಿಯ ಬಲಭಾಗದಲ್ಲಿ ಚಿತ್ರಿತವಾಗಿದೆ. ಮಹಿಷಾಸುರನು ಕೋಣನ ರೂಪದಲ್ಲಿದ್ದು ಮುಂಗಾಲುಗಳನ್ನು ನೆಲದ ಮೇಲೆ ಊರಿಕೊಂಡು ಶರಣಾಗಿದ್ದಾನೆ. ಆತನ ಕುತ್ತಿಗೆಯ ಭಾಗವು ಮೇಲಕ್ಕೆತ್ತಿದ್ದು ಆತನ ತೊಗಲಿನ ಭಾಗದ ಬಾಗುಗಳು ಕಲಾತ್ಮಕವಾದ ರೇಖಾಲಾಲಿತ್ಯದಿಂದ ಕೂಡಿವೆ. ದೇವಿಯು ತನ್ನ ಎಡಗೈಯಿಂದ ಆತನ ತಲೆಯನ್ನು ಬಲವಂತವಾಗಿ ಹಿಡಿದು

೦೭. ಎಸ್. ಮರಿಶಾಮಾಚಾರ್ : ಭಾರತೀಯ ಕಲೆ, ಪುಟ – ೧೭೦–೧೭೧



ಬಗ್ಗಿಸುತ್ತಿರುವಂತೆ ಕೆತ್ತಲಾಗಿರುವುದು ಇಲ್ಲಿ ಗಮನಿಸಬೇಕಾದ ಸಂಗತಿ. ಇಲ್ಲಿನ ಸಂಪೂರ್ಣ ಸಂಯೋಜನೆಯನ್ನು ದೇವಿಯ ರೌದ್ರತೆ ಮತ್ತು ಅಸುರನ ವಧೆಯ ಚಿತ್ರಣಕ್ಕೆ ಕೇಂದ್ರೀಕರಿಸಲಾಗಿದೆ. ಆದುದರಿಂದ ಇಲ್ಲಿನ ಕೆತ್ತನೆಯು ಹೆಚ್ಚು ಚಲನೆಯ ಭಾವವನ್ನು ವ್ಯಕ್ತಮಾಡುತ್ತದೆ. ದೇವಿಯ ಮೈಯಲ್ಲಿನ ವಸ್ತ್ರವು ಗಾಳಿಗೆ ಹಾರಾಡುವಂತೆ ಬಲಪಕ್ಕದಲ್ಲಿ ಇಳಿಬಿಟ್ಟ ರೀತಿಯಲ್ಲಿ ಕೆತ್ತಿರುವುದು ಶಿಲ್ಪಕ್ಕೆ ಹೆಚ್ಚಿನ ಮೆರುಗನ್ನುಂಟುಮಾಡುತ್ತದೆ. ರಾಕ್ಷಸನ ದೇಹವು ನೆಲಮಟ್ಟಕ್ಕೆ ಬಾಗಿದ್ದು ಆತನ ಕಾಲುಗಳ ಬಾಗುಗಳು, ಗೊರಸುಗಳ ಕೆತ್ತನೆಯಲ್ಲಿ ಕೂಡಾ ವಿಶೇಷ ಮುತುವರ್ಜಿ ಇರುವುದನ್ನು ಕಾಣುತ್ತೇವೆ. ರಾಕ್ಷಸನ ಉದ್ದವಾದ ಕೊಂಬು ಅರ್ಧವೃತ್ತಾಕಾರದಲ್ಲಿ ಬಾಗಿದ್ದು ದೇಹದ ರೇಖಾತ್ಮಕವಾದ ಕೆತ್ತನೆಯಲ್ಲಿ ವಿಶೇಷ ಪರಿಣಾಮವನ್ನುಂಟುಮಾಡಿದೆ.

ದೇವಿಯ ಮುಖವು ಅಂಡಾಕಾರವಾಗಿದ್ದು ದೊಡ್ಡ ಕಣ್ಣುಗಳು, ಮುಖದಲ್ಲಿ ರೌದ್ರತೆ ಎದ್ದು ಕಾಣಿಸುತ್ತದೆ. ದುಂಡಗಾದ ಸ್ತನಗಳು, ತಲೆಯ ಮೇಲೆ ಹೊಂದಿರುವ ಕಿರೀಟ ಮುಕುಟ, ತೆಳುವಾದ ಕೈ-ಕಾಲುಗಳು, ಸಪೂರವಾದ ಸೊಂಟ, ನಿಂತ ನಿಲುವು, ಇವುಗಳು ದೇವಿಯ ಆದರ್ಶ ಅಂಗಪ್ರಮಾಣದ ಕೆತ್ತನೆಯಲ್ಲಿ ಪರಿಪೂರ್ಣತೆಯನ್ನು ಶಿಲ್ಪ ಕಲಾವಿದರು ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ದೇವಿಯ ವಾಹನವಾದ ಸಿಂಹದ ರಚನೆಯಲ್ಲಿ ಇವು ವ್ಯಕ್ತವಾಗುವುದಿಲ್ಲ. ಮೊದಲು ನೋಡಿದ ಶಿಲ್ಪಗಳಲ್ಲಿ ಸಿಂಹದ ಕೆತ್ತನೆಗೂ ವಿಶೇಷ ಗಮನ ನೀಡಿದ್ದಂತೆ ಕಂಡುಬಂದರೆ ಇಲ್ಲಿ ಸಿಂಹವು ದೇವಿಯ ಎಡಭಾಗದಲ್ಲಿ ಸ್ವಲ್ಪ ಹಿಂದೆ ನಿಂತಿದ್ದು, ನಿಂತ ನಿಲುವು ನೇರವಾಗಿದ್ದು ಶಿಲ್ಪದಲ್ಲಿ ಜೀವಂತಿಕೆಯ ಕೊರತೆ ಇದ್ದಂತೆ ಭಾಸವಾಗುತ್ತದೆ. ಆದರೂ ಇದು ಶಿಲ್ಪದ ಒಟ್ಟು ಉದ್ದೇಶಕ್ಕೆ ಪೂರಕವಾಗಿದೆ. ಉಳಿದಂತೆ ಇಲ್ಲಿ ಯಾವುದೇ ಶಿಲ್ಪ ಕೆತ್ತನೆಗಳಿರುವುದಿಲ್ಲವಾದುದರಿಂದ ನೋಡುಗನ ಗಮನ ಕೇವಲ ದೇವಿ ಮತ್ತು ಅಸುರನ ಯುದ್ಧದ ಕಡೆಗೆ ಮತ್ತು ಕೊನೆಯದಾಗಿ ದುರ್ಗೆಯ ನಿಂತ ನಿಲುವಿನೆಡೆಗೆ ಕೇಂದ್ರೀಕೃತವಾಗುವುದರಿಂದ ಶಿಲ್ಪದ ಒಟ್ಟು ಸಂಯೋಜನೆಯು ರೇಖಾಪ್ರಧಾನವಾಗಿ ಕಂಡುಬರುವಂತೆ ಕೆತ್ತಲಾಗಿದೆ. ಇನ್ನು ಇಲ್ಲಿನ ಮಹಿಷಾಸುರಮರ್ದಿನಿ ಶಿಲ್ಪದ ಇನ್ನೊಂದು ವಿಶೇಷತೆಯನ್ನು ಗಮನಿಸಬೇಕಾಗುತ್ತದೆ.

ಅದೇಂದರೆ ಈಕೆಯ ಕೈಯೊಂದರಲ್ಲಿ ಶುಕವನ್ನು ಕೆತ್ತಲಾಗಿದೆ. ಇದು ಬಹಳ ಅಪರೂಪವಾಗಿ ಕಾಣಸಿಗುವ ಅಂಶ. 'ಈ ಶುಕವು ದೇವತೆಯ ಬಲಭಾಗದ ಎರಡನೆಯ ಕೈಯಲ್ಲಿದೆ. ಪ್ರಾಯಶಃ ಇದು ದೇವತೆಯ ಶೃಂಗಾರಭಾವವನ್ನು ವ್ಯಕ್ತಗೊಳಿಸುತ್ತದೆ. ದೇವತೆಯು ಅಸುರನನ್ನು ಸಂಹರಿಸಲು ಮಹಿಷಮರ್ದಿನಿಯ ಅವತಾರ ತಾಳಿದಾಗ ಮುಖ್ಯ ದೇವತೆಗಳು ನಾನಾ ರೂಪವನ್ನು ತಾಳಿರಬಹುದೆಂದು ಹೇಳಲಾಗಿದೆ. ಆದ್ದರಿಂದ ಶಿಲ್ಪಿಯು ಶೃಂಗಾರಭಾವವನ್ನು ವ್ಯಕ್ತಪಡಿಸಲು ಶುಕವನ್ನು ಕೊರೆದಿರಬಹುದು. ಇದೊಂದು ಶಿಲ್ಪದಲ್ಲಿ ಮಾತ್ರ ಗಿಳಿಯನ್ನು ಮಹಿಷಮರ್ದಿನಿಯೊಂದಿಗೆ ಸಂಯೋಜಿಸಲಾಗಿದೆ'.[೮] ಆದರೆ ಇದಕ್ಕೆ ಯಾವುದೇ ಆಧಾರವಿಲ್ಲ.

---

೧೮. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೩೨೨

ಆದುದರಿಂದ ಶಿಲ್ಪವನ್ನು ಇಲ್ಲಿ ಕೇವಲ ಶಿಲ್ಪವಾಗಿ ನೋಡಿ ಆನಂದಿಸುತ್ತ ಗಿಳಿಯನ್ನು ಕೂಡ ದೇವಿಯ ಒಂದು ಆಯುಧವಿರಬಹುದೆಂಬ ಊಹೆಯೊಂದಿಗೆ ನೋಡುವುದು ಒಳಿತು. ದೇವಿಯು ಮೈ ಮೇಲೆ ಹಲವಾರು ಆಭರಣಗಳನ್ನು ಹೊಂದಿದ್ದು, ಕಂಠಹಾರ, ಮುತ್ತಿನ ಮಾಲೆ, ಎದೆಹಾರ, ಮೇಖಲೆ, ಕಂಕಣ, ಕಾಲ್ಗಡಗ, ಕರ್ಣಕುಂಡಲ ಇತ್ಯಾದಿಗಳಿವೆ.

ಕೈಗಳಲ್ಲಿ ತೋಳುಬಂಧಿಯಿದ್ದು ಗುಂಡಗಾದ ಮಣಿಗಳನ್ನು ಪೋಣಿಸಲಾಗಿದೆ. ಮುಂಗೈಯಲ್ಲಿ ಎರಡು ಸುತ್ತಿನ ಬಳೆಗಳಿವೆ. ಕಿರೀಟವು ಅಲಂಕಾರಿಕ ವಿನ್ಯಾಸವನ್ನು ಹೊಂದಿದೆ. ಇದರಿಂದಾಗಿ ಸೌಂದರ್ಯದ ದೃಷ್ಟಿಯಲ್ಲಿಯೂ ಈ ಕೆತ್ತನೆ ಅಲಂಕಾರಿಕವಾಗಿ ಕಂಡುಬರುತ್ತದೆ. ಇಲ್ಲಿ ಗಮನಿಸಬಹುದಾದುದು, ಎಲ್ಲಿಯೂ ಶಿಲ್ಪಿಗಳು ನೇರರೇಖೆಗಳನ್ನು ಕೆತ್ತಿಲ್ಲ, ಎಲ್ಲೆಡೆಯೂ ಬಾಗಿದ ರೇಖೆಗಳು, ವಕ್ರ ರೇಖೆಗಳು ಪ್ರಧಾನವಾಗಿ ಕಂಡುಬರುವುದರಿಂದ ಎಲ್ಲಿಯೂ ದೃಷ್ಟಿಯು ಒಂದೆಡೆಗೆ ಸ್ತಬ್ಧವಾಗದೆ ಒಟ್ಟು ಕೆತ್ತನೆಯೆಡೆಗೆ ಕರೆದೊಯ್ಯುತ್ತದೆ. ಅತ್ಯಂತ ಕ್ರಿಯಾತ್ಮಕ ಸಂಯೋಜನೆಯು ಇಲ್ಲಿ ನೋಡುಗನಿಗೆ ಅನುಭವವಾಗುತ್ತದೆ. ಈ ದೃಷ್ಟಿಯಿಂದ ಈ ಶಿಲ್ಪವು ಅತ್ಯುತ್ತಮವಾದ ಸಂಯೊಜನೆಯಾಗಿದೆ.

ಚಾಲುಕ್ಯರ ಕಾಲದ ಕೆಲವೇ ಕೆಲವು ಮಹಿಷಾಸುರಮರ್ದಿನಿಯ ಶಿಲ್ಪಗಳಲ್ಲಿ ಈ ಶಿಲ್ಪವನ್ನು ಉತ್ಕೃಷ್ಟ ಶಿಲ್ಪವೆನ್ನಬಹುದು. ಆದರೆ ಇಲ್ಲಿ ಒಂದನ್ನು ಗಮನಿಸಬಹುದಾದರೆ, ಈ ಶಿಲ್ಪದ ಸುತ್ತಲೂ ಎಲ್ಲಿಯೂ ಸ್ಥಳಾವಕಾಶವಿಲ್ಲ, ಅಲ್ಲದೆ ಶಿಲ್ಪವನ್ನು ಚೌಕಟ್ಟಿನೊಳಗೆ ಹಿಡಿದಿರುವಂತೆ ಲಭ್ಯ ಜಾಗೆಯಲ್ಲಿ ಕೆತ್ತಲಾಗಿರುವುದರಿಂದ ಸಂಕೀರ್ಣವಾಗಿರುವಂತೆ ತೋರುತ್ತದೆ. ಬಹುಶಃ ಇಲ್ಲಿ ಇನ್ನಷ್ಟು ಸ್ಥಳಾವಕಾಶವಿರುತ್ತಿದ್ದರೆ ಈ ಶಿಲ್ಪದ ಸೌಂದರ್ಯವು ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬರಲು ಸಾಧ್ಯವಿತ್ತೇನೋ? ಅದನ್ನು ಹೊರತುಪಡಿಸಿದರೆ ಇಲ್ಲಿನ ಮಹಿಷಾಸುರಮರ್ದಿನಿ ಶಿಲ್ಪವು ಚಾಲುಕ್ಯರ ಕಾಲದ ಉತ್ತಮ ಶಿಲ್ಪಗಳಲ್ಲಿ ಗಮನಾರ್ಹವಾಗಿ ನಿಲ್ಲುತ್ತದೆ.

ಡಾ. ಶೀಲಾಕಾಂತ ಪತ್ತಾರರು ಹೇಳುವಂತೆ, ಇಲ್ಲಿನ ಶಿಲ್ಪವು ಚಾಲುಕ್ಯ ಕಾಲದ ಉತ್ಕೃಷ್ಟ ಕಲಾಕೃತಿಯಾಗಿದ್ದು ಅತ್ಯಂತ ಉತ್ತಮ ಶಿಲ್ಪಸಂಯೋಜನೆಯನ್ನು ಹೊಂದಿದೆ. ದುರ್ಗಾ ದೇವಾಲಯದ ಹೊರ ಕೋಷ್ಟದಲ್ಲಿಯ ಮಹಿಷಾಸುರಮರ್ದಿನಿ ಶಿಲ್ಪವು ಚಾಲುಕ್ಯರ ಕಾಲದ ಉತ್ಕೃಷ್ಟ ಕಲಾಕೃತಿಗಳಲ್ಲಿ ಒಂದು. ಶಿಲ್ಪದ ಸಮತೋಲತ್ವ ಮತ್ತು ಚಲನಶೀಲತ್ವದ ದೃಷ್ಟಿಯಿಂದ ಮಹತ್ವದ್ದಾಗಿದೆ'.[೯] ಶಿಲ್ಪವು ಮಧ್ಯಮ ಗಾತ್ರದಲ್ಲಿದ್ದು ಶಿಲ್ಪದ ಸುತ್ತಲೂ ಮಂಟಪದ ರಚನೆಯಿರುವುದರಿಂದಾಗಿ ಶಿಲ್ಪದ ಸುತ್ತಲೂ ಚೌಕಟ್ಟಿನ ರೀತಿಯಲ್ಲಿ ಕಾರ್ಯ ನಿರ್ವಹಿಸಿದೆ. ಇಲ್ಲಿ ಗಮನಿಸಬಹುದಾದ ಪಡಸಾಲೆಯ ಗೋಡೆಯ ಬಿಂಬಗಳಲ್ಲಿನ ಪ್ರತಿಯೊಂದು ಶಿಲ್ಪಕ್ಕೂ ಕಂಬಗಳನ್ನು ಕೆತ್ತಿದ್ದು, ಮಂಟಪದ ರಚನೆಯಿದ್ದು, ಪ್ರತಿಯೊಂದು ಕಂಬದ ಮೇಲಿನ ಕೆತ್ತನೆಯೂ

೦೯. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೨

ಪ್ರತ್ಯೇಕತೆಯನ್ನು ಹೊಂದಿದೆ. ಆದುದರಿಂದ ಇದು ಪ್ರತಿ ಶಿಲ್ಪಕ್ಕೂ ವಿಭಿನ್ನತೆಯ ಭಾವನೆಯನ್ನು ನೀಡುತ್ತದೆ. ಕಂಬದ ರಚನೆಯೂ ಇಲ್ಲಿ ನೇರ ರೇಖೆಗಳನ್ನು ಹೊಂದಿರುವುದರಿಂದ ಇದು ಶಿಲ್ಪಕ್ಕೆ ಪೂರಕವಾಗಿ ಕೆಲಸ ಮಾಡಿದೆ.

ಶಿಲ್ಪ –೬

ಐಹೊಳೆಯ ವಿರೂಪಾಕ್ಷ ದೇವಾಲಯದ ಗರ್ಭಗೃಹದ ಎಡಭಾಗದಲ್ಲಿ ದಕ್ಷಿಣಾಭಿಮುಖವಾಗಿ ಒಂದೂವರೆ ಅಡಿ ಎತ್ತರದ ಈ ಶಿಲ್ಪವು ಷಟ್ಭುಜವಾಗಿದ್ದು, ಬಲಗೈಯಲ್ಲಿ ಭರ್ಚಿ, ಚಕ್ರ, ಎಡಗೈಯಲ್ಲಿ ಶಂಖ, ಉಳಿದ ಕೈಗಳು ಭಗ್ನವಾಗಿವೆ. ಇಲ್ಲಿಯೂ ಸಹ ಈ ಹಿಂದೆ ನೋಡಿದ ದುರ್ಗಾ ದೇವಾಲಯದ ಶಿಲ್ಪವನ್ನು ನೆನಪಿಸಬಹುದು. ಇಲ್ಲಿಯೂ ಕೋಣನ ಕತ್ತು ತಿರುವಿ ಎಡಗಾಲನ್ನು ಬೆನ್ನಿನ ಮೇಲಿರಿಸಿದ್ದಾಳೆ. ಒಂದು ಕೈ ಭರ್ಚಿಯಿಂದ ಇರಿದಿದ್ದಾಳೆ. ಇದು ಕೂಡ ದ್ವಿಮಾನದ ಉಬ್ಬುಶಿಲ್ಪವಾಗಿದೆ.

ಪಟ್ಟದಕಲ್ಲು

ಪಟ್ಟದಕಲ್ಲಿನ ಆವರಣದಲ್ಲಿ ಚಾಲುಕ್ಯರ ಕಾಲದಲ್ಲಿ ಬಹಳಷ್ಟು ಶಿಲ್ಪ ಮತ್ತು ವಾಸ್ತುಶಿಲ್ಪಗಳ ರಚನೆಯಾದರೂ ಮಹಿಷಾಸುರಮರ್ದಿನಿಯ ಶಿಲ್ಪಗಳು ಇಲ್ಲಿ ವಿರಳ. ಅವುಗಳಲ್ಲಿ ಪ್ರಮುಖವಾಗಿ ಹೇಳಬಹುದಾದ ಶಿಲ್ಪ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಅಂತರಾಳದ ಗೋಡೆಯಲ್ಲಿ ಕೆತ್ತಲಾಗಿರುವ ಮಹಿಷಾಸುರಮರ್ದಿನಿಯ ಶಿಲ್ಪ. ಇದು ಚಾಲುಕ್ಯರ ಎರಡನೆಯ ಹಂತದಲ್ಲಿ ಅಂದರೆ ಸುಮಾರು ೭೩೪–೩೫ರ ಸುಮಾರಿನ ರಚನೆ. ಇಲ್ಲಿ ಮಹಿಷಾಸುರನು ಕೋಣನ ರೂಪದಿಂದ ಮಾನವರೂಪಕ್ಕೆ ರೂಪಾಂತರ ಹೊಂದಿದ್ದಾನೆ. ಡಾ. ಶೀಲಾಕಾಂತ ಪತ್ತಾರರು ಹೇಳುವಂತೆ, ಚಾಲುಕ್ಯರ ನಂತರದ ಶಿಲ್ಪಗಳಲ್ಲಿ ಮಹಿಷಾಸುರನು ಕೋಣದ ಬದಲಾಗಿ ಮಾನವ ರೂಪದಲ್ಲಿ ಚಿತ್ರಿಸಲು ಇಲ್ಲಿಂದ ಪ್ರಾರಂಭವಾಗಿದೆ. 'ಚಾಲುಕ್ಯರ ಕಾಲದ ಮಹಿಷಮರ್ದಿನಿಯ ಶಿಲ್ಪದ ಬೆಳವಣಿಗೆಯ ಅಂತಿಮ ಹಂತವನ್ನು ಇದು ಸೂಚಿಸುತ್ತದೆ. ಅಸುರನು ಮಾನವ ದೇಹದಲ್ಲಿ ಇದ್ದುದೊಂದು ರೂವಾರಿಯ ಹೊಸ ಕಲ್ಪನೆ'.[೧೦]

ಇಲ್ಲಿ ಮಹಿಷನು ಮಾನವರೂಪದಲ್ಲಿ ನಿಂತುಕೊಂಡು ದೇವಿಯ ಜೊತೆ ಹೋರಾಟ ನಡೆಸುತ್ತಿದ್ದಾನೆ. ದೇವಿಯು ಬಲಭಾಗದಲ್ಲಿ ನಿಂತಿದ್ದಾಳೆ. ಅಷ್ಟಭುಜೆ ದುರ್ಗೆಯಾಗಿ ಇಲ್ಲಿ ದೇವಿಯು ಮಹಿಷನೊಂದಿಗೆ ಹೋರಾಡುತ್ತಿದ್ದಾಳೆ. ಇಲ್ಲಿ ಕೋಣನ ದೇಹವನ್ನು ಕೂಡಾ ಕೆತ್ತಲಾಗಿದೆ. ಕೋಣನ ದೈತ್ಯದೇಹವು ಎಡಭಾಗಕ್ಕೆ ಮುಖ ಮಾಡಿದ್ದು ಅಸುರನ ಮಾನವ ದೇಹವು ವಿರುದ್ಧದಿಕ್ಕಿಗೆ ಮುಖ ಮಾಡಿದೆ. ದೇವಿಯ ಶಿಲ್ಪ ಸಂಪೂರ್ಣ ನಾಶವಾಗಿದ್ದು ಕೇವಲ ಕೈಗಳ ಕೆಲವು ಗುರುತುಗಳು ಉಳಿದುಕೊಂಡಿವೆ. ಇವುಗಳ ಆಧಾರದಿಂದ ಇಲ್ಲಿನ

೧೦. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೩



ಚಿತ್ರಣವನ್ನು ಗುರುತಿಸಬಹುದು. ಬಹುಶಃ ಮೊದಲು ಈ ಶಿಲ್ಪವು ಇಷ್ಟು ನಶಿಸಿದ್ದಿರಲಾರದು. ಡಾ. ಶೀಲಾಕಾಂತ ಪತ್ತಾರರು ಹೇಳುವಂತೆ ಇಲ್ಲಿನ ಶಿಲ್ಪವು ವಿಶಿಷ್ಟ ಪ್ರತಿಮಾಲಕ್ಷಣವನ್ನು ಹೊಂದಿದ್ದು ಆಕರ್ಷಕವಾಗಿ ಕೆತ್ತಲಾಗಿದ್ದಿತ್ತು. ಇಂದಿಗೆ ಅವುಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಶಿಲ್ಪವು ಸಣ್ಣದಾಗಿದ್ದು ಬಹಳಷ್ಟು ನಶಿಸಿಹೋಗಿರುವುದರಿಂದ ಹೆಚ್ಚಿನ ಅಂಶವನ್ನು ಗಮನಿಸಲು ಸಾಧ್ಯವಾಗುವುದಿಲ್ಲ.

ಶಿಲ್ಪ –೭

ಪಟ್ಟದಕಲ್ಲಿನ ಇನ್ನೊಂದು ಪ್ರಮುಖ ದೇವಾಲಯವಾಗಿರುವ ಪಾಪನಾಥ ದೇವಾಲಯದಲ್ಲಿ ಈ ಶಿಲ್ಪವಿರುವುದನ್ನು ಕಾಣಬಹುದು. ಇದರ ರಚನೆ ಸುಮಾರು ಕ್ರಿ.ಶ. ೭೪೦. ವಾಸ್ತುಶಿಲ್ಪದ ದೃಷ್ಟಿಯಿಂದ ಪ್ರಾಮುಖ್ಯವನ್ನು ಪಡೆದಿರುವ ಇಲ್ಲಿನ ದೇವಾಲಯದಲ್ಲಿ ಹಲವಾರು ಸಣ್ಣ ಮತ್ತು ಮಧ್ಯಮ ಗಾತ್ರದ ಶಿಲ್ಪಗಳಿವೆ. ಅವುಗಳ ಪೈಕಿ ಇಲ್ಲಿನ ಮಹಿಷಮರ್ದಿನಿ ಶಿಲ್ಪವೂ ಒಂದೆಂದು ಹೇಳಬಹುದು. ಸಣ್ಣ ಗಾತ್ರದಲ್ಲಿದ್ದು ಇಲ್ಲಿ ದೇವಿಯು ಮಹಿಷಾಸುರನನ್ನು ಕೊಲ್ಲುತ್ತಿರುವ ದೃಶ್ಯವಿದೆ.

ಇಲ್ಲಿಯೂ ವಿರೂಪಾಕ್ಷ ದೇವಾಲಯದ ಶಿಲ್ಪದಂತೆ ಮಹಿಷಾಸುರನು ಮಾನವರೂಪದಲ್ಲಿ ಅಂಗಾತ ಬಿದ್ದಿರುವಂತಿದೆ. ದೇವಿಯು ಉಗ್ರ ರೂಪಿಯಾಗಿದ್ದು ಅಷ್ಟಭುಜಗಳಲ್ಲಿ ಒಂದೊಂದರಲ್ಲಿ ಒಂದೊಂದು ಆಯುಧವಿದೆ. ಬಿಲ್ಲು, ಬಾಣ, ಖಡ್ಗ, ಶಂಖ, ಚಕ್ರ, ತ್ರಿಶೂಲ, ಗುರಾಣಿ, ಘಂಟೆಯನ್ನು ಹೊಂದಿರುವ ದೇವಿಯ ಬಲಗೈ ಬೆನ್ನಿನ ಹಿಂಭಾಗಕ್ಕೆ ಎತ್ತಲ್ಪಟ್ಟಿದೆ, ಬಹುಶಃ ಬಾಣ ಹೂಡುವ ರೀತಿಯಿರಬಹುದು. ಶಿಲ್ಪವು ಸಂಪೂರ್ಣ ಮಸುಕಾಗಿದ್ದು ಭಾಗಶಃ ಕಾಣಿಸುತ್ತಿದೆ. ಆದರೂ ಶಿಲ್ಪದ ಲಕ್ಷಣಗಳನ್ನು ನೋಡಬಹುದು. ಇದು ಕೂಡಾ ಚಾಲುಕ್ಯರ ಎರಡನೆಯ ಹಂತದ ರಚನೆಯಾಗಿದ್ದು, ಹಲವಾರು ಬೆಳವಣಿಗೆಗಳನ್ನು ನೋಡಬಹುದು. ಬಹುಶಃ ಈ ಕಾಲಕ್ಕೆ ದೇವಿಯ ಪ್ರತಿಮಾಲಕ್ಷಣದಲ್ಲಿ ಬೆಳವಣಿಗೆಗಳು ಸ್ಥಿರಗೊಂಡಿದ್ದಿರಬಹುದು. ಈ ಹಂತದ ಶಿಲ್ಪಗಳಲ್ಲಿ ನಾವು ರಾಕ್ಷಸನ ಮಾನವ ದೇಹದ ಚಿತ್ರಣವನ್ನು, ದೇವಿಯು ಯುದ್ಧ ಮಾಡುತ್ತಿರುವ ಭಂಗಿಯ ಕೆತ್ತನೆಗಳನ್ನು ಕಾಣುತ್ತೇವೆ.

ಚಾಲುಕ್ಯರ ಕಾಲದಲ್ಲಿ ಮಹಿಷಾಸುರಮರ್ದಿನಿಯ ಶಿಲ್ಪಗಳು ರಚನೆಯಾಗಿರುವುದು ಕಡಿಮೆ. ಬಾದಾಮಿಯ ಮೊದಲನೆಯ ಗುಹೆಯಲ್ಲಿ ಮತ್ತು ರಾವಳಫಡಿಯ ಗುಹಾಲಯಗಳಲ್ಲಿ ರಚನೆಯಾದ ಸುಂದರ ಶಿಲ್ಪಗಳನ್ನು ಹೊರತುಪಡಿಸಿದರೆ ಉಳಿದ ಶಿಲ್ಪಗಳು ಕಡಿಮೆ. ಬಹುಶಃ ದುರ್ಗಾ ದೇವಾಲಯದ ಆವರಣದಲ್ಲಿ ನಮಗೆ ದೊರೆಯುವ ಶಿಲ್ಪ ಹೆಚ್ಚು ಮಹತ್ವದ್ದಾಗಿದೆ. ಮೊದಲನೆಯ ಹಂತದ ಕಾಲದಲ್ಲಿ ಚಾಲುಕ್ಯರು ಶೈವಾರಾಧಕರಾಗಿದ್ದರೂ ಆ ಹಂತದಲ್ಲಿಯೂ ದುರ್ಗೆಯ ಶಿಲ್ಪಗಳನ್ನು ರಚಿಸಿರುವುದು ಕಡಿಮೆ. ಮುಂದಿನ ಹಂತದ ಕೆತ್ತನೆಯಲ್ಲಿ ಹಲವಾರು



ಕಥಾನಕಗಳ ಶಿಲ್ಪಗಳು, ಹರಿಹರ, ಅರ್ಧನಾರೀಶ್ವರ, ವಿಷ್ಣು ಇತ್ಯಾದಿ ಶಿಲ್ಪಗಳು ಕಂಡುಬಂದರೂ ದೇವಿಯ ಶಿಲ್ಪಗಳು ಗಣ್ಯವಾಗಿವೆ. ಆದರೂ ಇಲ್ಲಿ ದೊರಕುವ ಶಿಲ್ಪಗಳ ಆಧಾರದಿಂದ ಮಹಿಷಾಸುರಮರ್ದಿನಿ ದುರ್ಗೆಯ ಶಿಲ್ಪಗಳ ಕೆತ್ತನೆಯಲ್ಲಿ ಆದ ಬೆಳವಣಿಗೆಗಳನ್ನು ಮತ್ತು ಪ್ರತಿಮಾಲಕ್ಷಣದ ಆಧಾರದಲ್ಲಿ ಶಿಲ್ಪಗಳನ್ನು ರಚಿಸಿರುವುದನ್ನು ಕಾಣಬಹುದು.

ಶಿಲ್ಪ –೮

ವಿರೂಪಾಕ್ಷ ದೇವಾಲಯದ ಗರ್ಭಗೃಹವು ಅನೇಕ ಶಿಲ್ಪ ವಿನ್ಯಾಸಗಳಿಂದ ಕೂಡಿದ್ದು ಅಪರೂಪದ್ದಾಗಿದೆ. ಭವ್ಯವಾದ ಈ ಪ್ರಧಾನ ಗರ್ಭಗೃಹದ ಎಡಬಲಗಳಲ್ಲಿ ಎರಡು ಸಣ್ಣ ಗರ್ಭಗೃಹಗಳಿವೆ. ಎಡಭಾಗದ ಗರ್ಭಗೃಹದ ಮಹಿಷಾಸುರ ಮರ್ದಿನಿಯ ದುಂಡುಶಿಲ್ಪವು ಪೀಠದ ಮೇಲಿದೆ. ಚಾಲುಕ್ಯರ ಕಾಲದ ಶ್ರೇಷ್ಠ ವಿಗ್ರಹಗಳಲ್ಲಿ ಇದೂ ಒಂದು. ಮಧ್ಯಮ ಗಾತ್ರದ ಶಿಲ್ಪವಿದು. ದೇವಿಯು ಎಂಟು ಕೈಗಳಿಂದ ಮಾನವರೂಪದ ಮಹಿಷಾಸುರನನ್ನು ಸಂಹರಿಸುತ್ತಿದ್ದಾಳೆ. ಅಸುರನ ತಲೆಯ ಮೇಲೆ ಎಡಗಾಲನ್ನು ಇಟ್ಟು, ಬಲ ಕೈಗಳಿಂದ ತ್ರಿಶೂಲ ಮತ್ತು ಖಡ್ಗವನ್ನು ಕ್ರಮವಾಗಿ ಆತನ ಕುತ್ತಿಗೆ ಮತ್ತು ಎದೆಯ ನಡುವಿನಲ್ಲಿ ತಿವಿದಿದ್ದಾಳೆ. ಖಡ್ಗದ ಇರಿತದಿಂದ ಚರ್ಮವು ಹರಿದುದನ್ನು ಶಿಲ್ಪಿ ತೋರಿಸಿದ ರೀತಿ ಗಮನಾರ್ಹವಾಗಿದೆ.[೧೧]

ಶಿಲ್ಪ –೯

ಪಟ್ಟದಕಲ್ಲು ಪಾಪನಾಥ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹದ ಎಡಭಾಗದಲ್ಲಿ ಚಿಕ್ಕಮಂಟಪದಂತೆ ಕಾಣುವ ಕೋಷ್ಠವೊಂದಿದೆ. ಇದರಲ್ಲಿ ಮಹಿಷಮರ್ದಿನಿಯ ವಿಗ್ರಹವಿದೆ. ಇದು ಪೂಜಾ ಪ್ರತಿಮೆ. ಅಷ್ಟಭುಜೆಯಾಗಿರುವ ದೇವಿಯು ಬಿಲ್ಲು, ಬಾಣ, ಖಡ್ಗ, ಶೂಲ, ಗುರಾಣಿ ಮತ್ತು ಶಂಖವನ್ನು ಹಿಡಿದಿರುವಳು. ಮಹಿಷಾಸುರನನ್ನು ಮಾನವರೂಪದಲ್ಲಿ ಕಂಡರಿಸಲಾದ ಈ ದೃಶ್ಯ ಅಮೋಘವಾಗಿದ್ದು, ಇಲ್ಲಿ ದೇವತೆಗೆ ಆಭರಣದ ಕೊರತೆ ಇದ್ದು, ಇಕ್ಕಟ್ಟಾದ ಗೂಡಿನಲ್ಲಿ ರಚಿಸಿದರೂ ಶಿಲ್ಪಿಯು ತ್ರಿ ಆಯಾಮದ ಭಾವನೆಯನ್ನು ತರಲು ಪ್ರಯತ್ನಿಸಲಾಗಿದೆ.

ಶಿಲ್ಪ –೧೦

ಮಹಾಕೂಟದ ಮುಖ್ಯ ಬಾಗಿಲದ ಒಳಗಡೆಯ ಭಿತ್ತಿಯ ಮೇಲೆ ದಕ್ಷಿಣಾಭಿಮುಖವಾಗಿ ಎರಡು ಕಂಬಗಳ ಮಧ್ಯ ಚತುರ್ಭುಜಳಾಗಿ ನಿಂತ ಮಹಿಷಾಸುರ ಮರ್ದಿನಿ ಶಿಲ್ಪವಿದೆ. ಬಲಗಾಲು ಕೋಣದ ಬೆನ್ನಿನ ಮೇಲಿದೆ. ಬಲಗೈಯಲ್ಲಿ ತ್ರಿಶೂಲ ಹಿಡಿದು ಕೋಣನನ್ನು ಸಂಹರಿಸುತ್ತಿದ್ದಾಳೆ. ಮೇಲೆ ನೋಡಿದ ಎಲ್ಲ ಶಿಲ್ಪಗಳಲ್ಲಿ ಮರ್ದಿನಿಯು ಅಸುರನನ್ನು ಭರ್ಚಿಯಿಂದ ಸಂಹರಿಸುತ್ತಿದ್ದರೆ ಇಲ್ಲಿರುವ ಮರ್ದಿನಿಯು ಸಂಹರಿಸಿದ ರುಂಡವನ್ನು ತನ್ನ ಕೈಯಲ್ಲಿ

೧೧. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೩೭–೩೮

ಹಿಡಿದಿರುವಂತೆ ಕಾಣಬಹುದು. ಈ ಶಿಲ್ಪವು ದುಂಡಾಗಿದ್ದು, ಸ್ತನಗಳು ಹೆಚ್ಚು ಆಕರ್ಷಣ ಹೊಂದಿವೆ. ಈ ಶಿಲ್ಪವು ಆಕಾರದಲ್ಲಿ ರಾವಳಫಡಿಯಲ್ಲಿರುವ ಮರ್ದಿನಿಯ ಶಿಲ್ಪವನ್ನು ಹೋಲುತ್ತದೆ.

ಶಿಲ್ಪ –೧೧

ಐಹೊಳೆ ಪ್ರಾಚ್ಯವಸ್ತು ಸಂಗ್ರಹಾಲಯದ ಹೊರ ಆವರಣದಲ್ಲಿ ಗೋಡೆಗೆ ಇರಿಸಲಾದ ಮರ್ದಿನಿಯ ಶಿಲ್ಪದ ಮುಖ, ಕೈಗಳು ಸವೆದು ಹೋಗಿವೆ. ಕೆಲಭಾಗಗಳು ಉಳಿದುಕೊಂಡಿರುವ ಇವಳು ಅಷ್ಟಬಾಹುಗಳನ್ನು ಮತ್ತು ಬಿಲ್ಲು, ಬಾಣ, ಶಂಖ ಮುಂತಾದ ಆಯುಧಗಳನ್ನು ಹೊಂದಿದ್ದಾಳೆ. ತನ್ನ ಎಡಗಾಲನ್ನು ಕೋಣನ ಮೇಲಿಟ್ಟು, ಎಡಗೈಯಿಂದ ಕೋಣನ ಕೊಂಬನ್ನು ಹಿಡಿದು ಬಲಗೈಯಲ್ಲಿರುವ ತ್ರಿಶೂಲದಿಂದ ಇರಿದಿದ್ದಾಳೆ. ಒಟ್ಟಾರೆ ದ್ವಿಮಾನದಲ್ಲಿ ರಚಿಸಲಾದ ಈ ಕಲಾಕೃತಿ ಬಿಡಿ ಶಿಲ್ಪವಾಗಿದೆ.

ಶಿಲ್ಪ –೧೨

ಬಾದಾಮಿಯ ಭೂತನಾಥ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ದೇವಾಲಯದ ಬಲಪಕ್ಕದಲ್ಲಿ ಚಿಕ್ಕ ದೇವಾಲಯವಿದೆ. ದೇವಾಲಯದ ಬಾಗಿಲು ಹೊಂದಿಕೊಂಡಂತೆ ಬಲಬದಿಯಲ್ಲಿದೆ. ಗಾತ್ರದಲ್ಲಿ ಚಿಕ್ಕದಾದರೂ ಅಷ್ಟಬಾಹುಗಳನ್ನು ಹೊಂದಿರುವ ಮರ್ದಿನಿಯು ತನ್ನ ಎಡಗಾಲನ್ನು ಕೋಣನ ಮೇಲೆ ಇಟ್ಟಿದ್ದಾಳೆ. ಎಡಗೈಯಿಂದ ಕೋಣನ ಮುಖವನ್ನು ಹಿಡಿದು ಬಲಗೈಯಲ್ಲಿರುವ ತ್ರಿಶೂಲದಿಂದ ಕುತ್ತಿಗೆಯ ಭಾಗಕ್ಕೆ ಇರಿದಿದ್ದಾಳೆ. ಕೋಣವು ನಿಶ್ಯಕ್ತವಾಗಿರುವುದು ಕಂಡುಬರುತ್ತದೆ. ಈ ಶಿಲ್ಪವು ಬಹಳಷ್ಟು ನಾಶವಾಗಿದ್ದರೂ, ಕೈಯಲ್ಲಿರುವ ಆಯುಧಗಳನ್ನು ಗುರುತಿಸಬಹುದು. ಬಿಲ್ಲು, ಶಂಖ, ತ್ರಿಶೂಲ, ಬಾಣ ಮತ್ತು ಕೈಗಳಲ್ಲಿ ಕಡಗವನ್ನು ಧರಿಸಿದ್ದಾಳೆ. ತಲೆಯ ಹಿಂದೆ ಪ್ರಭಾಮಂಡಲವನ್ನು ಧರಿಸಿದ ಮರ್ದಿನಿಯು ಕುಬ್ಜತೆಯಿಂದ ಕೂಡಿದ ದ್ವಿಮಾನ ಉಬ್ಬು ಶಿಲ್ಪವಾಗಿದೆ.

ಶಿಲ್ಪ –೧೩

ಮಹಾಕೂಟದ ಹೊಂಡದ ಪಕ್ಕದಲ್ಲಿ ಇರಿಸಲಾದ ಮಹಿಷಮರ್ದಿನಿಯ ಶಿಲ್ಪವು ಚತುರ್ಭುಜವಾಗಿದ್ದು, ಕುಬ್ಜತೆಯಿಂದ ಕೂಡಿದ ಈ ಶಿಲ್ಪವು ಬಲಗೈಯಲ್ಲಿ ತ್ರಿಶೂಲ ಹಿಡಿದು ಕೋಣನ ಕುತ್ತಿಗೆಯ ಭಾಗಕ್ಕೆ ತಿವಿದಿದ್ದಾಳೆ. ಎಡಗೈಯಿಂದ ಕೋಣನ ಕತ್ತನ್ನು ತಿರುವಿ ಬೆನ್ನಿನ ಮೇಲೆ ಎಡಗಾಲನ್ನಿಟ್ಟಿದ್ದಾಳೆ. ಕೋಣವು ದಷ್ಟಪುಷ್ಟವಾಗಿದೆ. ಬಲಗೈಯಲ್ಲಿ ಇನ್ನೊಂದು ಆಯುಧವಿದ್ದಿರಬಹುದು, ಸವೆದು ಹೋದ ಕಾರಣ ಗುರುತಿಸಲಾಗದಷ್ಟು ನಾಶವಾಗಿದೆ. ದೊಡ್ಡ ಗಾತ್ರದ ಸ್ತನಗಳನ್ನು ಹೊಂದಿದ್ದು, ತಲೆಯ ಹಿಂದೆ ಪ್ರಭಾಮಂಡಲವಿದ್ದಂತೆ ಕಾಣುತ್ತದೆ. ಇಲ್ಲಿ ಪ್ರಮಾಣದ ಕೊರತೆ ಎದ್ದು ಕಾಣುತ್ತಿದೆ. ಇದು ಬಿಡಿ ದುಂಡು ಶಿಲ್ಪವಾಗಿದೆ.



ಶಿಲ್ಪ -೧೪

ಐಹೊಳೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡ ಮಹಿಷಮರ್ದಿನಿಯ ಶಿಲ್ಪವು ಚತುರ್ಭುಜವಾಗಿದ್ದು, ದೇವಿಯು ಎಡಗೈಯಿಂದ ಕೋಣನ ಮುಖವನ್ನು ತಿರುವಿ ಬಲಗೈಯಲ್ಲಿರುವ ತ್ರಿಶೂಲದಿಂದ ಇರಿಯುತ್ತಿದ್ದಾಳೆ. ಹಿಂದಿನ ಬಲಗೈಯಲ್ಲಿ ಭಾರವಾದ ಖಡ್ಗವಿದ್ದು, ಹಿಂದಿನ ಎಡಗೈಯಲ್ಲಿ ಘಂಟೆಯಿದ್ದು, ಕಿರೀಟಮುಕುಟವಾದ ದೇವಿಯ ಶಿರದ ಹಿಂದೆ ಅಂಡಾಕಾರದ ಪ್ರಭಾಮಂಡಲವಿದೆ. ಇಲ್ಲಿ ಶಿಲ್ಪಿಯು ಹೆಚ್ಚಿನ ಗಮನ ಶಿಲ್ಪಕ್ಕೆ ನೀಡಿ, ಇಬ್ಬದಿಗಳಲ್ಲಿ ಮರವನ್ನು ರಚಿಸಿದ್ದಾನೆ. ಈ ಶಿಲ್ಪದಲ್ಲಿ ಜೀವಂತಿಕೆಯಿದ್ದು, ಬಲವಾಗಿ ಕೋಣನನ್ನು ಸಂಹರಿಸಲು ಸಿದ್ಧಳಾಗಿದ್ದಾಳೆ. ಈ ಹಿಂದೆ ನೋಡಿದ ಎಲ್ಲ ಶಿಲ್ಪಗಳಿಗಿಂತಲೂ ಗಾತ್ರದಲ್ಲಿ ಮತ್ತು ವಿನ್ಯಾಸದಲ್ಲಿ ವಿಭಿನ್ನವಾಗಿದೆ.

ಶಿಲ್ಪ -೧೫

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಎಡಭಾಗದ ಹೊರಭಿತ್ತಿಯಲ್ಲಿ ವಿಷ್ಣುವಿನ ಶಿಲ್ಪದ ಪೀಠದ ಕೆಳಗಡೆ ಚೌಕಾಕಾರದ ಪಟ್ಟಿಕೆಯಲ್ಲಿ ರಚಿಸಿರುವ ಮರ್ದಿನಿಯು ಷಟ್‌ಬಾಹುಗಳನ್ನು ಹೊಂದಿದ್ದಾಳೆ. ಎಡಗಾಲನ್ನು ಕೋಣದ ಮುಖದ ಮೇಲೆ ಇರಿಸಿ ತನ್ನ ಎಡಗೈಯಿಂದ ಮುಖವನ್ನು ಕೆಳಗಡೆ ಒತ್ತಿದ್ದಾಳೆ. ಬಲಗೈಯಲ್ಲಿರುವ ಆಯುಧ, ಮುಖದ ಕೆಲವು ಭಾಗಗಳು ನಶಿಸಿವೆ. ಬಲಗಡೆ ಮೂಲೆಯಲ್ಲಿ ಸಿಂಹವಿದ್ದು, ನೋಡುಗರೆಡೆಗೆ ಮುಖಮಾಡಿ ನಿಂತಿದೆ. ಎಡಭಾಗದ ಮೂಲೆಯಲ್ಲಿ ಜಿಂಕೆಯೊಂದಿದೆ. ಮಹಿಷಮರ್ದಿನಿಯ ಎಡಭಾಗದಲ್ಲಿರುವ ಸ್ತ್ರೀಯು ಮೇಲಿರುವ ಜಿಂಕೆಯನ್ನು ತೋರಿಸುವಂತಿದೆ. ಕೆಳಗಡೆ ಒಬ್ಬ ಪುರುಷನು ಕುಳಿತಿದ್ದು, ಮಹಿಷಮರ್ದಿನಿಯ ಹಿಂದಿನ ಕೈಯಿಂದ ಏನೋ ಸ್ವೀಕರಿಸುವ ಶಿಲ್ಪವಿದಾಗಿರಬಹುದು ಮತ್ತು ಬಲಭಾಗದಲ್ಲಿಯೂ ಒಬ್ಬ ಪುರುಷನಿದ್ದಾನೆ. ಈ ಚೌಕಾಕಾರದ ಪಟ್ಟಿಕೆಯಲ್ಲಿ ಸಂಯೋಜನೆ ಮಾಡಿರುವುದು ವಿಶೇಷವಾಗಿದೆ.

ಶಿಲ್ಪ -೧೬

ಬಾದಾಮಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಮಹಿಷಮರ್ದಿನಿ ಶಿಲ್ಪವು ಚತುರ್ಭುಜವಾಗಿದ್ದು, ಶಿರದ ಹಿಂದೆ ಪ್ರಭಾಮಂಡಲವಿದೆ. ಆಭರಣ ಭೂಷಿತಳಾಗಿದ್ದಾಳೆ. ಎರಡು ಕೈಗಳು ತುಂಡಾಗಿದ್ದು, ಹಿಂದಿನ ಬಲಗೈಯಲ್ಲಿ ಉದ್ದವಾದ ಖಡ್ಗವಿದ್ದು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾಳೆ. ದೇವಿಯು ಬಲಗಾಲನ್ನು ಕೋಣನ ಬೆನ್ನಿನ ಮೇಲಿಟ್ಟು ಬಲಗೈಯಲ್ಲಿರುವ ತ್ರಿಶೂಲದಿಂದ ಇರಿದಿದ್ದಾಳೆ. ಇರಿದ ರಭಸಕ್ಕೆ ತ್ರಿಶೂಲವು ಹೊಟ್ಟೆಯ ಕೆಳಭಾಗಕ್ಕೆ ಕಾಣುತ್ತಿರುವುದು ಕಂಡುಬರುತ್ತದೆ. ಮರ್ದಿನಿಯ ಇಬ್ಬದಿಗಳಲ್ಲಿ ಕುಬ್ಜಗಾತ್ರದ ಪುರುಷರಿದ್ದಾರೆ. ಮೇಲಿನ ಮೂಲೆಯಲ್ಲಿ ಗಂಧರ್ವ ಶಿಲ್ಪವನ್ನು ಶಿಲ್ಪಿಸಲಾಗಿದೆ.



ಶಿಲ್ಪ –೧೭

ಐಹೊಳೆ ಗಳಗನಾಥ ದೇವಾಲಯದ ಹೊರಭಿತ್ತಿಯಲ್ಲಿ ಚತುರ್ಭುಜವಾಗಿರುವ ಮಹಿಷಾಸುರ ಮರ್ದಿನಿಯು ಕೋಣನ ಮೇಲೆ ಎಡಗಾಲಿಟ್ಟು ತ್ರಿಶೂಲದಿಂದ ಕೋಣನ ಕುತ್ತಿಗೆಗೆ ತಿವಿದಿದ್ದಾಳೆ. ಮರ್ದಿನಿಯ ಬಲಭಾಗದ ಕೈಗಳಲ್ಲಿ ತ್ರಿಶೂಲ, ಖಡ್ಗ ಹಾಗೂ ಎಡಭಾಗದ ಒಂದು ಕೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾಳೆ. ಇನ್ನೊಂದು ಕೈಯಲ್ಲಿ ಕೋಣನ ಮುಖವನ್ನು ತಿರುವಿದ್ದಾಳೆ. ಬಲಪಕ್ಕದಲ್ಲಿ ಗರ್ಜನೆ ಮಾಡುವಂತೆ ಕುಳಿತ ಸಿಂಹವನ್ನು ಕೆತ್ತಲಾಗಿದೆ. ಈ ಶಿಲ್ಪದಲ್ಲಿ ಕೋಣನನ್ನು ಗಾತ್ರದಲ್ಲಿ ದೊಡ್ಡದಾಗಿ ತೋರಿಸಿದ್ದಾರೆ. ತಿಳು ಉಬ್ಬಶಿಲ್ಪವಾಗಿದ್ದರೂ ಜೀವಂತಿಕೆಯನ್ನು ಈ ಶಿಲ್ಪದಲ್ಲಿ ಕಾಣಬಹುದು.

ಬಾದಾಮಿ ಭೂತನಾಥ ದೇವಾಲಯದ ಬಲಪಕ್ಕದಲ್ಲಿರುವ ಚಿಕ್ಕದೇವಾಲಯದ ಒಳಗೋಡೆಯಲ್ಲಿ ಮಹಿಷಾಸುರ ಮರ್ದಿನಿಯ ಶಿಲ್ಪವನ್ನು ಕಾಣಬಹುದು. ಇದು ಗಾತ್ರದಲ್ಲಿ ದೊಡ್ಡದಾಗಿದ್ದು, ಆಕರ್ಷಕವಾಗಿದೆ. ಇಲ್ಲಿ ಛಾಯಾಚಿತ್ರವನ್ನು ತೆಗೆಯಲು ಸ್ಥಳಾವಕಾಶವಿಲ್ಲದ್ದರಿಂದ ಈ ಶಿಲ್ಪವನ್ನು ನೋಡಲು ಮಾತ್ರ ಸಾಧ್ಯವಾಗಿದೆ.

ಕಾಳಿಕಾ ಶಿಲ್ಪ

ಬಾದಾಮಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಈ ಶಿಲ್ಪವು ಹೆಚ್ಚು ಆಕರ್ಷಕವಾಗಿದೆ. ದಶಭುಜಗಳನ್ನು ಹೊಂದಿರುವ ಶಿಲ್ಪದ ಬಲಭಾಗದ ಕೈಗಳಲ್ಲಿ ಕತ್ತಿ, ಘಂಟೆ, ತ್ರಿಶೂಲವಿದ್ದು, ಇನ್ನುಳಿದ ಆಯುಧಗಳು ಸವೆದು ಹೋಗಿವೆ. ಎಡಭಾಗದ ಕೈಗಳಲ್ಲಿ ರುಂಡ, ಗುರಾಣಿ, ಢಮರು, ಖಟ್ವಾಂಗ ಹಿಡಿದಿದ್ದು, ರೌದ್ರಾವತಾರದ ಶಿಲ್ಪವಾಗಿದೆ. ಈ ಶಿಲ್ಪವು ಪೂರ್ಣವಿದ್ದರೆ ಚಾಲುಕ್ಯರ ಕಾಲದಲ್ಲಿ ರಚಿಸಿದ ದೇವಿಯ ಶಿಲ್ಪಗಳಲ್ಲಿಯೇ ಮೇರು ಕೃತಿಯಾಗುತ್ತಿತ್ತು. ಕೆಂಪು ಮರಳುಗಲ್ಲಿನಲ್ಲಿ ರಚಿಸಲಾದ ಈ ಶಿಲ್ಪವು ತ್ರಿಮಾನದ ದುಂಡುಶಿಲ್ಪವಾಗಿದೆ.

ಸರಸ್ವತಿ ಶಿಲ್ಪ

ಬಾದಾಮಿ ಚಾಲುಕ್ಯರ ಕಾಲದಲ್ಲಿ ಸರಸ್ವತಿ ಶಿಲ್ಪಗಳು ಕಂಡುಬರುವುದಿಲ್ಲ. ಮಹಾಕೂಟದಲ್ಲಿರುವ ಚಿಕ್ಕ ಗುಡಿಯೊಂದರಲ್ಲಿ ಚತುರ್ಭುಜ ಸರಸ್ವತಿ ಶಿಲ್ಪವಿದೆ. ಇದು ಕಲ್ಯಾಣ ಚಾಲುಕ್ಯರ ಕಲಾಕೃತಿ.[೧೨] ಸರಸ್ವತಿಯು ಪದ್ಮಾಸನದಲ್ಲಿ ಪೀಠದ ಮೇಲೆ ಕುಳಿತಿದ್ದಾಳೆ. ಪೀಠದಲ್ಲಿ ಹಂಸವನ್ನು ಕಾಣಬಹುದು. ಈ ಶಿಲ್ಪವು ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಶಿಲ್ಪವಾಗಿದೆ. ಕಿರೀಟ, ವಸ್ತ್ರಾಭರಣಗಳಿಂದ ಇಲ್ಲಿ ಸರಸ್ವತಿಯು ಭೂಷಿತಳಾಗಿದ್ದಾಳೆ. ಕೈಗಳಲ್ಲಿ ಅಕ್ಷಮಾಲೆ ಮತ್ತು ಪುಸ್ತಕವಿದೆ ಹಾಗೂ ತಲೆಯ ಮೇಲೆ ಛತ್ರಿಯಾಕಾರದ ಉಬ್ಬುಶಿಲ್ಪವಿದೆ. ಅದು ಈ ಶಿಲ್ಪಕ್ಕೆ ನೆರಳಾಗಿದೆ. ಇಲ್ಲಿ ಸರಸ್ವತಿಯು ಪ್ರಭಾವಳಿಯಿಂದ ಕೂಡಿದ ತ್ರಿಮಾನದ ಶಿಲ್ಪವಾಗಿದೆ.

---

೧೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯ, ಪುಟ – ೨೩೧

ಮಹಿಷಾಸುರಮರ್ದಿನಿ ಶಿಲ್ಪಗಳು



ಶಿಲ್ಪ-೧. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೨. ಪಂಚಲಿಂಗ ಬಂಡೆ, ಬಾದಾಮಿ



ಶಿಲ್ಪ-೩. ಭೂತನಾಥ ದೇವಾಲಯ, ಬಾದಾಮಿ



ಶಿಲ್ಪ-೪. ದುರ್ಗಾ ದೇವಾಲಯ, ಐಹೊಳೆ

ಮಹಿಷಾಸುರಮರ್ದಿನಿ ಶಿಲ್ಪಗಳು



ಶಿಲ್ಪ-೫. ರಾವಳಫಡಿ ಗುಹಾಲಯ, ಐಹೊಳೆ



ಶಿಲ್ಪ-೬. ವಿರೂಪಾಕ್ಷ ದೇವಾಲಯ, ಐಹೊಳೆ



ಶಿಲ್ಪ-೭. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಮಹಿಷಾಸುರಮರ್ದಿನಿ ಶಿಲ್ಪಗಳು



ಶಿಲ್ಪ-೯. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೦. ವಿರೂಪಾಕ್ಷ ದೇವಾಲಯ ಆವರಣ, ಮಹಾಕೂಟ




ಶಿಲ್ಪ-೧೧. ಪ್ರಾಚ್ಯವಸ್ತು ಸಂಗ್ರಹಾಲಯ ಆವರಣ, ಐಹೊಳೆ



ಶಿಲ್ಪ-೧೨. ಭೂತನಾಥ ದೇವಾಲಯ ಸಂಕೀರ್ಣ
ಬಾದಾಮಿ

ಮಹಿಷಾಸುರಮರ್ದಿನಿ ಶಿಲ್ಪಗಳು



ಶಿಲ್ಪ-೧೩. ಮಹಾಕೂಟೇಶ್ವರ ದೇವಾಲಯ ಆವರಣ ಮಹಾಕೂಟ




ಶಿಲ್ಪ-೧೪. ಪ್ರಾಚ್ಯವಸ್ತು ಸಂಗ್ರಹಾಲಯ, ಐಹೊಳೆ



ಶಿಲ್ಪ-೧೫. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೬. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ



ಶಿಲ್ಪ-೧೭. ಗಳಗನಾಥ ದೇವಾಲಯ ಸಂಕೀರ್ಣ, ಐಹೊಳೆ

ಕಾಳಿಕಾ ಶಿಲ್ಪ



ಶಿಲ್ಪ-೧. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ

ಸರಸ್ವತಿ ಶಿಲ್ಪ



ಶಿಲ್ಪ-೨. ಸರಸ್ವತಿ ದೇವಾಲಯ, ಮಹಾಕೂಟ

ಗಜಲಕ್ಷ್ಮಿ ಶಿಲ್ಪಗಳು

ಲಕ್ಷ್ಮೀಯ ಶಿಲ್ಪಗಳ ಆರಾಧನೆ ಬಹಳ ಹಿಂದಿನಿಂದಲೂ ರೂಢಿಯಲ್ಲಿತ್ತು. ಗಜಲಕ್ಷ್ಮಿಯನ್ನು ಅದೃಷ್ಟದ ದೇವತೆಯೆಂದೂ ಐಶ್ವರ್ಯದ ದೇವತೆಯೆಂದೂ ನಂಬಲಾಗಿದೆ. ಲಕ್ಷ್ಮಿಯ ಶಿಲ್ಪದ ಜೊತೆ ಸೊಂಡಿಲನ್ನು ಮೇಲೆತ್ತಿ ನಿಂತಿರುವ, ಬಾಗಿರುವ, ಅಥವಾ ಸೊಂಡಿಲಿನಲ್ಲಿ ಕಮಲವನ್ನು ಹಿಡಿದಿರುವ ಶಿಲ್ಪವನ್ನು ಎಲ್ಲೆಡೆ ಕಾಣುತ್ತೇವೆ. ದೇವಾಲಯದ ಗರ್ಭಗುಡಿಯ ಪ್ರವೇಶದ್ವಾರದ ಮೇಲೆ ಕೆತ್ತಿರುವ ಶಿಲ್ಪಗಳಿರುತ್ತವೆ. ಪ್ರಾಚೀನ ಶಿಲ್ಪಗಳಲ್ಲಿ ಕಮಲದ ಮೇಲೆ ಕುಳಿತಿರುವ ಲಕ್ಷ್ಮಿ ಶಿಲ್ಪಿತಳಾಗಿದ್ದಾಳೆ. ಭಾರತೀಯ ಶಿಲ್ಪಕಲೆಯು ಸಾಂಕೇತಿಕವೂ ಹೌದು, ಆಧ್ಯಾತ್ಮಿಕವೂ ಹೌದು. ಲಕ್ಷ್ಮಿ ದೇವತೆಯ ಶಿಲ್ಪ ರಚನೆಯಲ್ಲೂ ಇದು ಸತ್ಯವಾದುದು.

ಲಕ್ಷ್ಮಿ ಎಂಬ ಪದವು ಲಕ್ಷ್ಮದಿಂದ ವ್ಯುತ್ಪತ್ತಿ ಹೊಂದಿದ್ದು, ಅದಕ್ಕೆ 'ಸಂಕೇತ' ಎಂಬ ಅರ್ಥವಿದೆ. ಲಕ್ಷ್ಮಿಪೂಜೆಯು ವೇದ ಕಾಲದಷ್ಟು ಪ್ರಾಚೀನವಾದುದು, ಋಗ್ವೇದದ ಶ್ರೀಸೂಕ್ತದಲ್ಲಿ ಲಕ್ಷ್ಮಿಯ ವರ್ಣನೆ ಸುದೀರ್ಘವಾಗಿದೆ. ಅತಿ ಪ್ರಾಚೀನ ಗಜಲಕ್ಷ್ಮೀ ಶಿಲ್ಪಗಳನ್ನು ಬಾರ ಹುತ ಮತ್ತು ಸಾಂಚಿಯ ಸ್ತೂಪಗಳ ತೋರಣಗಳಲ್ಲಿ ಕಾಣುತ್ತೇವೆ. ಕ್ರಿ.ಪೂ. ಎರಡನೆಯ ಶತಮಾನದಷ್ಟು ಪ್ರಾಚೀನವಾದ ಈ ಶಿಲ್ಪಗಳಲ್ಲಿ ಲಕ್ಷ್ಮಿಯು ಕಮಲದ ಮೇಲೆ ಕುಳಿತಿರುವಂತೆ ಇಲ್ಲವೆ ನಿಂತಂತೆ, ಆನೆಗಳಿಂದ ಸೇವೆ ಸ್ವೀಕರಿಸುವಂತೆ ಶಿಲ್ಪಿತಳಾಗಿದ್ದಾಳೆ.[೧೩] ಈ ಶಿಲ್ಪದ ಸಂಯೋಜನೆಯು ಚಾಲುಕ್ಯರ ಕಾಲದಿಂದಲೂ ಇಂದಿಗೂ ಅದೇ ರೂಪದಲ್ಲಿ ಉಳಿದಿರುವುದು ಗಮನಾರ್ಹ ಸಂಗತಿ. ಸಾಮಾನ್ಯವಾಗಿ ಗಜಲಕ್ಷ್ಮೀ ಶಿಲ್ಪವು ಬಾಗಿಲುವಾಡದ ಲಲಾಟಬಿಂಬದಲ್ಲಿ ಬಿಂಬಿತವಾಗಿರುತ್ತದೆ. ಇದು ಒಂದು ಶಿಲ್ಪ ಸಂಪ್ರದಾಯವಾಗಿ ನಂತರ ರೂಢಿಯಲ್ಲಿ ಬಂದಿತೆಂದು ತೋರುತ್ತದೆ.

ಚಾಲುಕ್ಯರ ಅತೀ ಪ್ರಾಚೀನ ಗಜಲಕ್ಷ್ಮೀ ಶಿಲ್ಪವು ಬಾದಾಮಿಯ ಶೈವ ಗುಹಾಲಯದಲ್ಲಿದೆ. ಇದು ಲಲಾಟಬಿಂಬದಲ್ಲಿರದೆ ಕಂಬದ ಮೇಲೆ ಕಂಡರಣೆಗೊಂಡಿದೆ. ಲಕ್ಷ್ಮೀಗೆ ಮಜ್ಜನಗೈಯುವ ಎರಡು ಆನೆಗಳೆಂದರೆ 'ಐರಾವತ' ಎಂಬ ಗಂಡಾನೆ ಮತ್ತು 'ಅಭ್ರಮೂ' ಎಂಬ ಹೆಣ್ಣಾನೆ. ಅಭಿಷೇಕಗೊಳ್ಳುತ್ತಿರುವ ಲಕ್ಷ್ಮಿಯು ಶ್ರೀಫಲಕ ಪದ್ಮವನ್ನು ಹಿಡಿದಿರುವಳೆಂದು ಹಾಗೂ ಪದ್ಮಾಸನದಲ್ಲಿ ಆಸೀನರಾಗಿರುವಳೆಂದು ಮತ್ಸ್ಯಪುರಾಣವು ತಿಳಿಸುತ್ತದೆ. ಈ ಬಗೆಯ ಪ್ರತಿಮಾ ಲಕ್ಷಣಗಳನ್ನು 'ಅಭಿಲಷಿತಾರ್ಥ ಚಿಂತಾಮಣಿ'ಯಲ್ಲಿ ಕೂಡ ಹೇಳಲಾಗಿದೆ. ಎರಡು ಆನೆಗಳು ಶಂಖ ಮತ್ತು ಪದ್ಮ ಎಂಬ ಸಂಪತ್ತುಗಳ ದ್ಯೋತಕವೆಂದು ವಿಷ್ಣು ಧರ್ಮೋತ್ತರ ಪುರಾಣವು ತಿಳಿಸುತ್ತದೆ. ಗಣಿತ ಶಾಸ್ತ್ರದ ಮೇರೆಗೆ ಒಂದು ಪದ್ಮವೆಂದರೆ ೧೦೦ ಕೋಟಿ ಮತ್ತು ಒಂದು ಶಂಖವೆಂದರೆ ಕೋಟಿ ಕೋಟಿ. ಈ ಸಂಖ್ಯೆಗಳು ಅನಂತ ಸಂಪತ್ತು ಎಂದು ಸೂಚಿಸುತ್ತದೆ. ಆನೆಯು ಫಲವತ್ತತೆಯ ಕುರುಹೂ ಹೌದು, ಮುಗಿಲುಗಳು ಮಳೆ ಸುರಿಸಿ ನೆಲವನ್ನು ಫಲವತ್ತಾಗಿ

---

೧೩. ಡಾ. ಎಂ.ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ : ಇತಿಹಾಸ ದರ್ಶನ-೨೪, ಪುಟ - ೧೯೨

ಮಾಡುತ್ತವೆ. ಮುಗಿಲುಗಳು ಆನೆಯ ಸಹೋದರ ಬಂಧುಗಳೆಂಬ ಕಲ್ಪನಾಕತೆಯುಂಟು, ಆನೆಗಳು ಸೊಂಡಿಲುಗಳಿಂದ ಸುರಿಸುವ ನೀರು ಸಮೃದ್ಧಿಯ ಸಂಕೇತ, ಲಕ್ಷ್ಮೀಯು ಧಾನ್ಯಲಕ್ಷ್ಮೀಯಾಗಿಯೂ ಪೂಜಿತಳು. 'ಶಿಲ್ಪರತ್ನವು' ಎರಡು ಕೈಗಳಿರುವ ಲಕ್ಷ್ಮೀ ಮತ್ತು ನಾಲ್ಕು ಕೈಗಳಿರುವ ಲಕ್ಷ್ಮೀ ಎಂದು ಎರಡು ಬಗೆಯ ಗಜಲಕ್ಷ್ಮೀಗಳನ್ನು ಪಟ್ಟಿ ಮಾಡಿದೆ. ಚಾಲುಕ್ಯರ ಶಿಲ್ಪಗಳಲ್ಲಿ ನಾಲ್ಕು ಕೈಗಳಿರುವ ಲಕ್ಷ್ಮೀ ಶಿಲ್ಪಗಳಲ್ಲಿ ಚಾಲುಕ್ಯ ಶಿಲ್ಪಿಗಳು ಅವಳನ್ನು ದ್ವಿಭುಜೆಯಾಗಿಯೇ ಶಿಲ್ಪಿಸಿದ್ದಾರೆ. ದೇವಿಯು ಕುಳಿತಿರುವಂತೆ ಶಿಲ್ಪಿತಳಾಗಿದ್ದಾಳೆ.[೧೪]

ಶಿಲ್ಪ- ೧

ಬಾದಾಮಿಯ ಶೈವ ಗುಹಾಲಯದ ಕಂಬ ೧೩ರಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ. ಲಕ್ಷ್ಮೀ ಕಮಲದ ಮೇಲೆ ಆಸೀನಳಾಗಿದ್ದು ಎಡ-ಬಲಗಳಲ್ಲಿ ಒಬ್ಬೊಬ್ಬ ಗಣರಿದ್ದಾರೆ. ಮೇಲೆ ಕುಂಭಗಳಿಂದ ದೇವಿಗೆ ಅಭಿಷೇಕ ಮಾಡುವ ಎರಡು ಆನೆಗಳನ್ನು ಕೆತ್ತಲಾಗಿದೆ. ಆ ಆನೆಗಳು ಶಂಖ ಮತ್ತು ಪದ್ಮಗಳೆಂಬ ನಿಧಿಗಳನ್ನು ಸೂಚಿಸುತ್ತವೆ'.[೧೫] ಚಾಲುಕ್ಯ ಶಿಲ್ಪಿಗಳು ರಚಿಸಿದ ಗಜಲಕ್ಷ್ಮೀ ಶಿಲ್ಪಗಳಲ್ಲಿ ಈ ಶಿಲ್ಪವು ಅತೀ ಪ್ರಾಚೀನವಾದುದಾಗಿದೆ.

ಬಾದಾಮಿಯ ಮೂರನೆಯ ವೈಷ್ಣವ ಗುಹೆಯ ಬೋಧಿಗೆಯಲ್ಲಿ ಈ ಶಿಲ್ಪವಿದೆ. ತೀರ ಸಣ್ಣಗಾತ್ರದ ಶಿಲ್ಪವು ಇದಾಗಿದ್ದರೂ ಅಧ್ಯಯನಯೋಗ್ಯವಾದ ಶಿಲ್ಪವಾಗಿದೆ. ಈ ಶಿಲ್ಪದಲ್ಲಿ ಲಕ್ಷ್ಮೀಯು ಮಧ್ಯದಲ್ಲಿ ಪದ್ಮಪೀಠದ ಮೇಲೆ ಎರಡು ಕಾಲುಗಳನ್ನು ಕೆಳಗೆ ಇಳಿಬಿಟ್ಟಂತೆ ಆಸೀನಳಾಗಿದ್ದಾಳೆ. ಆನೆಯ ಸೊಂಡಿಲಿನಲ್ಲಿ ಕಮಲವಿರುವುದನ್ನು ಕಾಣಬಹುದು. ಶಿಲ್ಪದ ಶಿಲೆಯ ಪದರಗಳು ಸವೆದು ಹೋಗಿದ್ದು ಹೆಚ್ಚಿನ ವಿವರಗಳು ಕಾಣಿಸುವುದಿಲ್ಲ. ಕಾಣಿಸುವ ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ವಿವರಗಳು ಗಮನಕ್ಕೆ ಬರುತ್ತವೆ. ಲಕ್ಷ್ಮೀಯ ತಲೆಯ ಮೇಲೆ ಸುಂದರವಾದ ಕಿರೀಟವಿದ್ದು ಇದು ಚೂಪಾಗಿದ್ದು ಅಪರೂಪದ ಸುಂದರ ಕೆತ್ತನೆಯಾಗಿದೆ. ಸಾಮಾನ್ಯವಾಗಿ ಚಾಲುಕ್ಯರ ಕಾಲದ ಸ್ತ್ರೀ ದೇವತೆಯ ಶಿಲ್ಪಗಳು ಅಗಲವಾದ ಕರಂಡ ಅಥವಾ ಕಿರೀಟ ಮುಕುಟಗಳನ್ನು ಧರಿಸಿರುವುದು ಕಂಡುಬರುತ್ತದೆ.

ಐಹೊಳೆಯ ಮಹಿಷಾಸುರಮರ್ದಿನಿಯ ಅಥವಾ ದುರ್ಗಾಗುಡಿಯ ದೇವಿಯ ಕಿರೀಟಗಳನ್ನು ಗಮನಿಸಬಹುದು. ಇದಲ್ಲದೆ ಬಾದಾಮಿಯ ಮೊದಲ ದೇವಿಯ ಕಿರೀಟವೂ ಇದೇ ರೀತಿಯದ್ದಾಗಿದೆ. ಆದರೆ ಇಲ್ಲಿನ ಗಜಲಕ್ಷ್ಮೀಯ ಕಿರೀಟವು ಶಂಖುವಿನಾಕೃತಿಯಲ್ಲಿದ್ದು ಹಲವು ಅಲಂಕಾರಿಕ ವಿನ್ಯಾಸಗಳನ್ನು ಹೊಂದಿದೆ. ಮುಖವು ದುಂಡಗಿದ್ದು ನಸುನಗುವನ್ನು ಹೊಂದಿದೆ ಎಂದು ಊಹಿಸಬಹುದು. ತಲೆಯಲ್ಲಿ ಹೊಂದಿರುವ ಕಿರೀಟದ ಅಲಂಕರಣಕ್ಕೆ ಪೂರಕವಾಗಿ ಕರ್ಣಕುಂಡಲಗಳು ಭುಜದ ವರೆಗೂ ಇಳಿಬಿದ್ದಿವೆ. ಇವು ಅಗಲವಾಗಿದ್ದು

೧೪. ಡಾ. ಎಂ.ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ : ಇತಿಹಾಸ ದರ್ಶನ-೨೪, ಪುಟ - ೧೯೨

೧೫. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೨೧೩



ಮೂರು ಸಾಲುಗಳಲ್ಲಿ ಇರುವಂತೆ ಕಂಡುಬರುತ್ತದೆ. ಕತ್ತಿನಲ್ಲಿ ಅಗಲವಾದ ಕಂಠಹಾರವಿದ್ದು ಜೊತೆಗೆ ಎದೆಹಾರ ಮತ್ತು ಪದಕವಿದೆ. ಇದರ ಜೊತೆಗೆ ಜನಿವಾರದಂತೆ ಕಾಣಿಸುವ ಅಗಲವಾದ ಪಟ್ಟಿಯ 'ವೈಕಕ್ಷಿಕ'ವನ್ನು ಎಡಭುಜದಿಂದ ಬಲಭಾಗಕ್ಕೆ ತಂದು ಕಟ್ಟಲಾಗಿದೆ. ಕೈಯಲ್ಲಿ ತುಂಬು ಆಭರಣಗಳಿವೆ. ಸೊಂಟದ ಸುತ್ತಲೂ ಮೇಖಲೆ, ಒಡ್ಯಾಣಗಳಿವೆ.

ಶಿಲ್ಪ –೨

ಬಾದಾಮಿಯ ೨ನೇ ವೈಷ್ಣವ ಗುಹಾಲಯದ ಕಂಬವೊಂದರಲ್ಲಿ ಈ ಶಿಲ್ಪವನ್ನು ಕಾಣಬಹುದು. ಇಲ್ಲಿ ಲಕ್ಷ್ಮಿಯ ಇಬ್ಬದಿಯಲ್ಲಿರುವ ಆನೆಗಳು ಆಕರ್ಷಕವಾಗಿ ಮೂಡಿಬಂದಿವೆ. ಇದರ ಮೇಲೆ ಮೂಲೆಯಲ್ಲಿ ಚಿಕ್ಕಗಾತ್ರದ ಆನೆಗಳಿದ್ದು, ನಮ್ಮೆಡೆಗೆ ನೋಡುತ್ತಿರುವಂತೆ ಕೆತ್ತಲಾಗಿದೆ. ಈ ಆನೆಗಳು ನೈಜತೆಯಿಂದ ಕೂಡಿದ ತಿಳು ಉಬ್ಬುಶಿಲ್ಪವಾಗಿದೆ. ಪದ್ಮದ ಮೇಲೆ ಕುಳಿತ ಲಕ್ಷ್ಮಿಯು ತನ್ನ ಎರಡು ಕೈಗಳನ್ನು ಎದೆಯ ಮೇಲಿರಿಸಿದ್ದಾಳೆ. ಆಯತಾಕಾರದಲ್ಲಿ ರಚನೆಯಾಗಿದ್ದರೂ ಸಂಯೋಜನೆಯು ಮಹತ್ವಪೂರ್ಣವಾಗಿದೆ.

ಶಿಲ್ಪ –೩

ಐಹೊಳೆಯ ಗಳಗನಾಥ ಗುಡಿಯ ಹೊರ ಗೋಡೆಯಲ್ಲಿ ಒಂದು ಸುಂದರವಾದ ಗಜಲಕ್ಷ್ಮೀಯ ಶಿಲ್ಪವನ್ನು ಗಮನಿಸಬಹುದು. ಸುಂದರವಾಗಿ ಕೆತ್ತಲಾದ ಈ ಶಿಲ್ಪವು ಆಕರ್ಷಕವಾಗಿ ಕಂಡುಬರುತ್ತದೆ. ಇಲ್ಲಿ ಲಕ್ಷ್ಮೀಗೆ ಪ್ರಾಮುಖ್ಯವನ್ನು ನೀಡಲಾಗಿದೆ. ದೇವಾಲಯದ ಹಿಂಭಾಗದ ಗೋಡೆಯಲ್ಲಿ ಕಾಣಿಸುವ ಈ ಶಿಲ್ಪದ ಎರಡೂ ಬದಿಗಳಲ್ಲಿ ಲತಾಕುಂಜಗಳನ್ನು ಕೆತ್ತಲಾಗಿದ್ದು ಮಧ್ಯದಲ್ಲಿ ಲಕ್ಷ್ಮೀಯ ಕೆತ್ತನೆಯಿದೆ. ಈಕೆಯ ಎರಡು ಬದಿಯಲ್ಲಿಯೂ ಆನೆಗಳು ಸೊಂಡಿಲನ್ನು ಮೇಲೆತ್ತಿ ಹಿಡಿದಿವೆ. ಮಧ್ಯದಲ್ಲಿ ಲಕ್ಷ್ಮೀಯು ಆಸೀನಳಾಗಿದ್ದಾಳೆ. ಶಿಲ್ಪವು ಬಹಳ ಚಿಕ್ಕದಾಗಿದ್ದರೂ ಹೊಸತನದಿಂದ ಕೂಡಿದಂತಿದೆ.

ಶಿಲ್ಪವು ಘನಾಕೃತಿಯಲ್ಲಿದೆ. ಸುತ್ತಲಿನ ಸ್ಥಳಾವಕಾಶದಲ್ಲಿ ಅಲಂಕಾರಿಕ ಕೆತ್ತನೆಗಳೇನಿಲ್ಲ. ಮಧ್ಯದಲ್ಲಿ ಲಕ್ಷ್ಮೀಯು ಕುಳಿತಿದ್ದು, ಆನೆಗಳು ಮುಂಗಾಲನ್ನು ಪೀಠದ ಮೇಲಿಟ್ಟು ಹಿಂಗಾಲುಗಳ ಮೇಲೆ ಭಾರಹಾಕಿ ನಿಂತುಕೊಂಡಿವೆ. ಇದರಿಂದಾಗಿ ಆನೆಗಳು ದೇವಿಗಿಂತ ಎತ್ತರದಲ್ಲಿರುವಂತೆ ಭಾಸವಾಗುತ್ತದೆ. ದೇವಿಯು ಮೂರು ಹಂತದ ಪೀಠದ ಮೇಲೆ ಆಸೀನಳಾಗಿದ್ದಾಳೆ. ಉಳಿದಂತೆ ಶಿಲ್ಪದ ಉಳಿದ ಸ್ಥಳಾವಕಾಶದಲ್ಲಿ ಯಾವುದೇ ಶಿಲ್ಪಗಳಿಲ್ಲ. ಶಿಲ್ಪದಲ್ಲಿ ದೇವಿಯ ತಲೆಯು ಸ್ವಲ್ಪ ದೊಡ್ಡದಾಗಿರುವಂತೆ ಕಂಡುಬರುತ್ತದೆ. ಶಂಖುವಿನಾಕಾರದ ಕಿರೀಟವನ್ನು ಹೊಂದಿದ್ದಾಳೆ. ತಲೆಯ ಮೇಲುಭಾಗದಲ್ಲಿ ಕಮಾನಿನಾಕಾರದಲ್ಲಿ ಹೂವಿನ ತೋರಣವನ್ನು ಕೆತ್ತಲಾಗಿದೆ. ಅದರ ಎರಡೂ ಬದಿಗಳಲ್ಲಿ ಎರಡು ಸುಂದರವಾದ ನವಿಲುಗಳನ್ನು ಅಲಂಕಾರಿಕವಾಗಿ ಕೆತ್ತಲಾಗಿದ್ದು ತಮ್ಮ ರೆಕ್ಕೆಗಳನ್ನು ಕೆಳಹಾಕಿ ಮಾವಿನ ಮರದ ಟೊಂಗೆಯ ಮೇಲೆ ಕುಳಿತಂತೆ ಕೆತ್ತಲಾಗಿರುವ

ವಿನ್ಯಾಸವನ್ನು ನೋಡುವುದು ಒಂದು ಒಳ್ಳೆಯ ಅನುಭವವನ್ನು ನೀಡುತ್ತದೆ. ಬಹುಶಃ ಶಿಲ್ಪದ ಗಾತ್ರವನ್ನು ಗಮನಕ್ಕೆ ತರುವುದಕ್ಕಾಗಿ ಇಷ್ಟು ದೊಡ್ಡ ಗಾತ್ರದಲ್ಲಿ ಅಲಂಕಾರಿಕ ವಿನ್ಯಾಸವನ್ನು ಕೆತ್ತಿರಬಹುದು. ಉಳಿದಂತೆ ಈ ಗೋಡೆಯ ಉಳಿದೆಡೆಯ ಸ್ಥಳಾವಕಾಶದಲ್ಲಿ ಯಾವುದೇ ಶಿಲ್ಪಗಳಿಲ್ಲ, ಆದರೆ ಲಕ್ಷ್ಮೀಯ ಶಿಲ್ಪದ ಸುತ್ತಲೂ ಮಂಟಪದ ಕಂಬಗಳ ರೀತಿಯ ರಚನೆಯಿದೆ. ಇದೇ ಗೋಡೆಯ ಬಲತುದಿಯಲ್ಲಿ ಇನ್ನೊಂದು ಸಣ್ಣ ಗಾತ್ರದ ನಗ್ನ ಸ್ತ್ರೀ ಶಿಲ್ಪವಿದ್ದು ಕಾಲುಗಳನ್ನು ಅಗಲವಾಗಿರಿಸಿ ಕುಳಿತುಕೊಂಡ ಶಿಲ್ಪವಿದ್ದು ಇದು ಈ ಪ್ರದೇಶದಲ್ಲಿ ಕಂಡುಬರುವ ಲಜ್ಜಾಗೌರಿ ಶಿಲ್ಪವನ್ನು ಹೋಲುತ್ತದೆ. ಇಲ್ಲಿನ ಕಟ್ಟಡವು ಶಿಲ್ಪಗಳಿಗಿಂತಲೂ ವಾಸ್ತುಶಿಲ್ಪಕ್ಕೆ ಪ್ರಾಧಾನ್ಯ ನೀಡಿ ರಚನೆಯಾಗಿದ್ದು, ಶಿಲ್ಪಗಳು ಇಲ್ಲಿ ಪ್ರಮುಖವಾಗುವುದಿಲ್ಲ. ಆದರೂ ಕೆಲವು ಶಿಲ್ಪಗಳು ಇಲ್ಲಿವೆಯಾದರೂ ಅವುಗಳು ಗಣ್ಯವಾಗಿ ಕಾಣಿಸುತ್ತವೆ.

ಶಿಲ್ಪ -೪

ಈ ಸುಂದರವಾದ ಗಜಲಕ್ಷ್ಮೀಯ ಶಿಲ್ಪವು ಜ್ಯೋತಿರ್ಲಿಂಗ ದೇವಾಲಯಗಳ ಸಂಕೀರ್ಣದಲ್ಲಿದೆ. ಈ ದೇವಾಲಯ ಸಂಕೀರ್ಣದಲ್ಲಿ ಹದಿನಾರು ದೇವಾಲಯಗಳಿವೆ. ಇಲ್ಲಿ ಶೈವ ಮತ್ತು ವೈಷ್ಣವ ಎರಡೂ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳು ಮತ್ತು ಶಿಲ್ಪಗಳಿವೆ. ಮುಖ್ಯವಾಗಿ ಈ ದೇವಾಲಯಗಳ ರಚನೆಯು ವಿವಿಧ ಕಾಲಘಟ್ಟಗಳಲ್ಲಿ ಆಗಿದ್ದು, ಹೆಚ್ಚಿನ ದೇವಾಲಯಗಳ ನಿರ್ಮಾಣ ಕ್ರಿ.ಶ. ೯-೧೦ನೇ ಶತಮಾನದಲ್ಲೆಂದು ಹೇಳಬಹುದು.[೧೬] ವಿಷ್ಣು, ಗರುಡ, ಶಿವ, ನಂದಿ ಇತ್ಯಾದಿ ಶಿಲ್ಪಗಳಿರುವ ಇಲ್ಲಿ ಒಂದು ಶಿಲ್ಪ ದ್ವಾರದ ಮೇಲೆ ಗಜಲಕ್ಷ್ಮೀ ಇರುವಳು.

ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಕ್ಕಿಂತ ವಿಭಿನ್ನ ರಚನೆಯಿದಾಗಿದ್ದು ಎರಡೂ ಕಾಲಮಾನಗಳಲ್ಲಿ ರಚನೆಯಾದ ಶಿಲ್ಪಗಳನ್ನಿಲ್ಲಿ ತುಲನಾತ್ಮಕವಾಗಿ ನೋಡಲು ಸಾಧ್ಯವಾಗಿದೆ. ಲಕ್ಷ್ಮೀಯು ಮಧ್ಯದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದು, ಆಕೆಯ ಎರಡೂ ಬದಿಗಳಲ್ಲಿ ಆನೆಗಳು ಮುಂಗಾಲನ್ನು ಮೇಲೆತ್ತಿ ಎರಡು (ಹಿಂಗಾಲುಗಳಲ್ಲಿ) ನಿಂತಿವೆ. ಸೊಂಡಿಲಿನಲ್ಲಿ ಕಲಶಗಳಿವೆ. ಆನೆಗಳು ದೇವಿಗೆ ಸಮಾನಾಂತರದಲ್ಲಿ ನಿಂತಿವೆ. ದುಂಡಗಾಗಿ ಹಲವು ಪಟ್ಟಿಕೆಗಳ ಅಲಂಕರಣದಿಂದ ಕೂಡಿದ ಆಭರಣಗಳನ್ನು ಈ ಆನೆಗಳಿಗೆ ಹೊದಿಸಲಾಗಿದೆ.

ದೇವಿಯ ಆಕಾರಕ್ಕಿಂತ ಆನೆಗಳು ದೊಡ್ಡಗಾತ್ರದಲ್ಲಿದ್ದರೂ ಮೇಲುನೋಟಕ್ಕೆ ಮರಿಯಾನೆಗಳಂತೆ ಕಾಣಿಸುತ್ತವೆ. ಲಕ್ಷ್ಮೀಯ ಶಿಲ್ಪದಲ್ಲಿ ಪಕ್ವತೆ ಕಾಣಿಸುವುದಿಲ್ಲ. ತಲೆಯು ದೊಡ್ಡಗಾತ್ರದ್ದಾಗಿದ್ದು ಮೂರು ಹಂತದ ವಿನ್ಯಾಸವುಳ್ಳ ಕಿರೀಟವನ್ನು ಧರಿಸಿದೆ. ದೊಡ್ಡದಾದ ಕಣ್ಣುಗಳು, ಗಂಭೀರ ಮುಖಭಾವ, ದೊಡ್ಡದಾದ ಪದಕ ಅಥವಾ ಮಣಿಗಳಿಂದ ಕೂಡಿದ ಹಾರ, ದೇಹಕ್ಕೆ ಅಗತ್ಯವಾದುದಕ್ಕಿಂತಲೂ ದೊಡ್ಡ ಗಾತ್ರದ ತೆರೆದ ಸ್ತನಗಳು, ಕೈಗಳಲ್ಲಿ ಹಿಡಿದಿರುವ

೧೬. ಎ. ಎಂ. ಅಣ್ಣಿಗೇರಿ : ಐಹೊಳೆ, ಸಂಸ್ಕೃತಿ - ಕಲೆ, ಪುಟ - ೭೮



ಕಮಲಪುಷ್ಪಗಳು, ಎರಡೂ ಕಾಲುಗಳನ್ನು ಮಡಚಿ ಪದ್ಮಾಸನದಲ್ಲಿ ಕುಳಿತಿರುವ ಭಂಗಿ, ಕೆಳಗಡೆ ಪದ್ಮಪೀಠ, ಇವುಗಳು ಲಕ್ಷ್ಮೀಯ ಶಿಲ್ಪದಲ್ಲಿ ಕಂಡುಬರುವ ರಚನೆಗಳು. ಶಿಲ್ಪದ ರಚನೆಯ ಭಂಗಿಯಲ್ಲಾಗಲೀ, ಪ್ರತಿಮಾಲಕ್ಷಣದ ನಿರೂಪಣೆಯಲ್ಲಾಗಲೀ ಈ ಶಿಲ್ಪವು ಬಾದಾಮಿಯ ಕಾಲದ ಶಿಲ್ಪಿಗಳ ರಚನೆಗಿಂತ ಭಿನ್ನವಾಗಿದ್ದು ಶಿಲ್ಪದ ರಚನೆಯಲ್ಲಿ ಪರಿಪಕ್ವತೆ ಕಂಡುಬರುವುದಿಲ್ಲ. ಶಿಲ್ಪದ ರಚನೆಯಲ್ಲಿ ದೇಹದ ರಚನೆಯಲ್ಲಿನ ಸರಳತೆ ಮತ್ತು ರೇಖೆಗಳಿಗೆ ಕೊಡಲಾಗಿದ್ದ ಪ್ರಾಶಸ್ತ್ಯಗಳು ಮುಂದಿನ ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ. ಅದಕ್ಕೆ ಇಲ್ಲಿನ ಈ ಶಿಲ್ಪವು ಒಂದು ಉದಾಹರಣೆಯಾಗಿದೆ.

ಶಿಲ್ಪದ ನಾಜೂಕುತನಕ್ಕೆ ಬದಲಾಗಿ ವಿಶೇಷ ಅಲಂಕರಣಗಳು, ಆಭರಣಗಳ ವಿನ್ಯಾಸ, ಮುಂತಾದವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರಕಿದ್ದರಿಂದಾಗಿ ಶಿಲ್ಪಗಳಲ್ಲಿನ ಸಹಜ ಸೌಂದರ್ಯದ ಕೊರತೆ ಇಲ್ಲಿ ಕಂಡುಬರುವುದು ಗಮನಿಸಬೇಕಾಗಿರುವ ಅಂಶ. ಶಿಲ್ಪಗಳ ರಚನೆಯಲ್ಲಿನ ತಾಂತ್ರಿಕತೆಯನ್ನು ಗಮನಿಸಿದರೆ ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾದ ಶಿಲ್ಪಗಳು ಅವುಗಳ ನಂತರ ರಚನೆಯಾದ ಕಲ್ಯಾಣ ಚಾಲುಕ್ಯರ ಅಥವಾ ರಾಷ್ಟ್ರಕೂಟರ ಕಾಲದ ಶಿಲ್ಪಗಳಿಗಿಂತಲೂ ಕಲಾತ್ಮಕತೆಯಲ್ಲಿ ಉತ್ತಮವಾಗಿದ್ದು ಸರಳತೆಯಿಂದ ಕೂಡಿದ ಉತ್ತಮ ಸಂಯೋಜನೆ ಗಳಾಗಿದ್ದವೆಂದು ಖಂಡಿತವಾಗಿ ಹೇಳಬಹುದು.

ಶಿಲ್ಪ– ೫

ಈ ಗಜಲಕ್ಷ್ಮೀಯ ಶಿಲ್ಪವನ್ನು ಗೌಡರ ಗುಡಿಯಲ್ಲಿನ ಗರ್ಭಗುಡಿಯ ಬಾಗಿಲ ಮೇಲಿನ ಲಲಾಟಬಿಂಬದ ಮೇಲಿನ ಹಂತದಲ್ಲಿ ಕಾಣಬಹುದು. ಗರ್ಭಗುಡಿಯ ಬಾಗಿಲ ಮೇಲೆ ವಿಷ್ಣುವಿನ ವಾಹನವಾದ ಗರುಡನ ಶಿಲ್ಪವಿದ್ದರೆ ಅದರ ಮೇಲ್ಭಾಗದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಸರೋವರದಿಂದ ಹೊರಬಂದ ದೊಡ್ಡದಾದ ಕಮಲದ ಮೇಲೆ ದೇವಿಯು ಆಸೀನಳಾಗಿದ್ದಾಳೆ.[೧೭] ಸಣ್ಣ ಗಾತ್ರದ ಈ ಶಿಲ್ಪದಲ್ಲಿ ಉಳಿದೆಡೆಗಳಲ್ಲಿನಂತೆ ಮಧ್ಯದಲ್ಲಿ ಲಕ್ಷ್ಮೀಯು ಆಸೀನಳಾಗಿದ್ದು ಆಕೆಯ ಎರಡೂ ಬದಿಗಳಲ್ಲಿ ಆನೆಗಳು ಸೊಂಡಿಲನ್ನು ಮೇಲೆತ್ತಿಕೊಂಡು ನಿಂತಿವೆ.

ಲಕ್ಷ್ಮೀಯು ಕೈಯಲ್ಲಿ ಕಮಲವನ್ನು ಹಿಡಿದಿದ್ದು ಪದ್ಮಪೀಠದ ಮೇಲೆ ಆಸೀನಳಾಗಿದ್ದಾಳೆ. ಲಕ್ಷ್ಮೀಯು ಸುಂದರವಾದ ರಚನೆಯಾಗಿದ್ದು ಸಪೂರವಾದ ಸೊಂಟವನ್ನು ಹೊಂದಿರುವ ಆಕರ್ಷಕ ರಚನೆ. ಆನೆಗಳು ದೊಡ್ಡಗಾತ್ರದಲ್ಲಿದ್ದು ಸರಳವಾದ ರಚನೆಯಾಗಿದೆ. ಶಿಲ್ಪದ ಸುತ್ತಲೂ ಮಂಟಪದ ರೀತಿಯ ಕೆತ್ತನೆಯಿದ್ದು ಅಲಂಕಾರಿಕ ವಿನ್ಯಾಸಗಳನ್ನು ಹೊಂದಿವೆ. ಇಲ್ಲಿ ಹೂಬಳ್ಳಿಗಳ ಅಲಂಕಾರಿಕ ಕೆತ್ತನೆಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು ಶಿಲ್ಪದ ರಚನೆಯು ಪ್ರತಿಮಾಶಾಸ್ತ್ರದ ದೃಷ್ಟಿಯಿಂದಲೂ ಅಧ್ಯಯನ ಯೋಗ್ಯವಾಗಿದೆ.

೧೭. ಡಾ. ಎಂ. ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ : ಇತಿಹಾಸ ದರ್ಶನ – ೨೪, ಪುಟ – ೧೯೪



ಶಿಲ್ಪ –೬

ಐಹೊಳೆಯ ಅತ್ಯಂತ ಹಳೆಯ ದೇಗುಲಗಳಲ್ಲಿ ಒಂದಾದ ಲಾಡ್‌ಖಾನ್ ದೇವಾಲಯ ಕಂಬ ಒಂದರಲ್ಲಿ ಸಣ್ಣ ಗಾತ್ರದ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ. ಅರ್ಧವರ್ತುಲದಲ್ಲಿ ಇನ್ನೊಂದು ಗಜಲಕ್ಷ್ಮೀ ಕೆತ್ತನೆಗೊಂಡಿದ್ದು, ಯಾವುದೇ ವಿಶೇಷತೆ ಇಲ್ಲ.[೧೮] ತೀರ ಸಣ್ಣಗಾತ್ರದಲ್ಲಿರುವ (ಸುಮಾರು ೬ ಇಂಚು) ಈ ಶಿಲ್ಪದಲ್ಲಿ ಲಕ್ಷ್ಮೀಯು ಮಧ್ಯದಲ್ಲಿ ಕುಳಿತಿದ್ದು ಎರಡೂ ಪಕ್ಕಗಳಲ್ಲಿ ಕಲಶವನ್ನು ಸೊಂಡಿಲಿನಲ್ಲಿ ಹಿಡಿದಿರುವ ಆನೆಗಳನ್ನು ಕೆತ್ತಿರುವುದನ್ನು ಕಾಣಬಹುದು.

ಹಾಗೆ ನೋಡಿದರೆ ಐಹೊಳೆಯ ಹೆಚ್ಚಿನ ದೇವಾಲಯಗಳಲ್ಲಿ ಗಜಲಕ್ಷ್ಮೀಯ ಶಿಲ್ಪಗಳಿವೆ. ಇವುಗಳೆಲ್ಲ ದೇವಾಲಯದ ಗರ್ಭಗುಡಿಯ ಲಲಾಟಬಿಂಬ ಮತ್ತು ಸುಕನಾಸಿಗಳಲ್ಲಿ ಹೆಚ್ಚುಪಾಲು ಒಂದೇ ರೀತಿಯಲ್ಲಿವೆ. ಎಲ್ಲಾ ಶಿಲ್ಪಗಳು ಒಂದೇ ಅಳತೆಯಲ್ಲಿವೆ. ಎಲ್ಲ ಶಿಲ್ಪಗಳ ಲಕ್ಷಣಗಳು ಪ್ರತಿಮಾ ಶಾಸ್ತ್ರದ ಅನುಗುಣವಾಗಿ ರಚನೆಯಾಗಿದ್ದು, ಎಲ್ಲ ಶಿಲ್ಪಗಳ ಮಧ್ಯದಲ್ಲಿ ಲಕ್ಷ್ಮೀಯು ಕುಳಿತಿದ್ದು ಎರಡು ಪಕ್ಕಗಳಲ್ಲಿ ಆನೆಗಳು ಕಲಶವನ್ನು ಸೊಂಡಿಲಿನಲ್ಲಿ ಎತ್ತಿ ಹಿಡಿದಿರುತ್ತವೆ. ಗಳಗನಾಥ ದೇವಾಲಯದ ಶಿಲ್ಪವೊಂದರಲ್ಲಿ ಮಾತ್ರ ಕಣ್ಣಿಗೆ ಎದ್ದು ಕಾಣಿಸುವಂತೆ ಆನೆಗಳೆರಡೂ ಸೇರಿ ಒಂದೇ ಕಲಶವನ್ನು ಎತ್ತಿ ಹಿಡಿದಿರುವ ಶಿಲ್ಪವು ಗಮನಾರ್ಹವಾಗಿದೆ. ಉಳಿದಂತೆ ಹೆಚ್ಚಿನ ಶಿಲ್ಪಗಳು ಒಂದೇ ರೀತಿಯಲ್ಲಿರುವುದರಿಂದ ವಿಶೇಷವಾಗಿ ಉಲ್ಲೇಖಿಸುವಂತಹ ಶಿಲ್ಪಗಳಿಲ್ಲ. ಆದುದರಿಂದ ವಿಶಿಷ್ಟ ರೀತಿಯಲ್ಲಿ ರಚನೆಯಾದ ಶಿಲ್ಪಗಳನ್ನಷ್ಟೇ ಇಲ್ಲಿ ಉಲ್ಲೇಖಿಸಲಾಗಿದೆ.

ಶಿಲ್ಪ –೭

ಪಟ್ಟದಕಲ್ಲಿನ ಪಾಪನಾಥ ದೇವಾಲಯ ದ್ವಾರದ ಲಲಾಟಬಿಂಬದಲ್ಲಿ ಚಿಕ್ಕದಾಗಿದ್ದರೂ ಸುಂದರವಾದ ಶಿಲ್ಪವಿದೆ. ಆದರೆ ಇಲ್ಲಿನ ಶಿಲ್ಪದ ವಿಶೇಷತೆಯೆಂದರೆ ಇಲ್ಲಿ ಲಕ್ಷ್ಮೀಯ ಶಿಲ್ಪದ ಜೊತೆಯಲ್ಲಿ ಇರಬೇಕಾದ ಆನೆಗಳಿಲ್ಲ. ಆದುದರಿಂದ ಇದು ಬರಿ ಲಕ್ಷ್ಮೀಯ ಶಿಲ್ಪ. ಕೈಯಲ್ಲಿ ಕಮಲದ ಹೂವನ್ನು ಹಿಡಿದಿರುವ ಲಕ್ಷ್ಮೀಯು ಪದ್ಮಪೀಠದ ಮೇಲೆ ಕುಳಿತಿದ್ದಾಳೆ. ಆನೆಗಳಿರುವ ಜಾಗದಲ್ಲಿ ಲತಾಕುಂಜಗಳ ಸುಂದರ ಕೆತ್ತನೆಯಿದೆ. ದ್ವಾರದ ಮೇಲಿನ ಕೆತ್ತನೆಯಾಗಿರುವ ಇಲ್ಲಿ ಎರಡು ತೋಳುಗಳ ಮಧ್ಯದಲ್ಲಿ ಇದನ್ನು ಕೆತ್ತಲಾಗಿದೆ. ಸುತ್ತಲೂ ಲತಾಪುಷ್ಪಗಳ ಮಕರ ವಿನ್ಯಾಸವನ್ನು ಸುರುಳಿಗಳ ರೀತಿಯಲ್ಲಿ ಕೆತ್ತನೆ ಮಾಡಿರುವುದು ಗಮನಿಸತಕ್ಕ ಅಂಶ.

ಶಿಲ್ಪ –೮

ಬಾದಾಮಿ ಭೂತನಾಥ ದೇವಾಲಯದ ಬಲಭಾಗದ ಚಿಕ್ಕ ಗುಡಿಯ ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವನ್ನು ಅತ್ಯಂತ ಆಕರ್ಷಣೀಯವಾಗಿ ಕೆತ್ತಲಾಗಿದ್ದು, ದ್ವಿಮಾನ ಉಬ್ಬುಶಿಲ್ಪವಾಗಿದೆ. ಇಲ್ಲಿ ಲಕ್ಷ್ಮೀಯು ಪದ್ಮಾಸನದಲ್ಲಿ ಕುಳಿತುಕೊಂಡು ತನ್ನ ಎರಡು ಕೈಗಳಲ್ಲಿ ಕಮಲದ ಮೊಗ್ಗುಗಳನ್ನು

೧೮. ಡಾ. ಎಂ. ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ : ಇತಿಹಾಸ ದರ್ಶನ – ೨೪, ಪುಟ – ೧೯೪

ಹಿಡಿದಿದ್ದಾಳೆ. ಪಕ್ಕದಲ್ಲಿರುವ ಆನೆಗಳ ಸೊಂಡಿಲಿನಲ್ಲಿ ಕುಂಭಗಳನ್ನು ಹಿಡಿದಿರುವಂತೆ ರಚಿಸಲಾಗಿದೆ. ಮೇಲೆ ನೋಡಿದ ಗಜಲಕ್ಷ್ಮೀ ಶಿಲ್ಪಗಳಲ್ಲಿ ಇದು ಕೂಡಾ ಅತ್ಯಂತ ಕುಸುರಿ ಕೆಲಸಗಳನ್ನೊಳಗೊಂಡ ಶಿಲ್ಪವಾಗಿದೆ.

ಶಿಲ್ಪ –೯

ಈ ಗಜಲಕ್ಷ್ಮೀಯ ಶಿಲ್ಪವನ್ನು ನಾವು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಹೊರಭಿತ್ತಿಯ ಎಡ ಭಾಗದಲ್ಲಿ ನೋಡಬಹುದು. ಕಿರು ಗಜಲಕ್ಷ್ಮೀ ಶಿಲ್ಪವನ್ನು ಕೆತ್ತಲಾಗಿರುವ ಈ ಶಿಲ್ಪದ ಸುತ್ತಲೂ ವಿಶಿಷ್ಟ ವಿನ್ಯಾಸದ ಸುರುಳಿ ಕೆತ್ತನೆಗಳಿದ್ದು, ಮಂಟಪದ ಮಧ್ಯದ ರೇಖೆಯಿಂದ ಹೊರಟ ಎರಡು ಲತಾಕುಂಜಗಳ ಬಳ್ಳಿಗಳ ಮೇಲಿನ ಭಾಗದಲ್ಲಿ ಕಮಲದ ಹೂವಿನ ಪೀಠದ ಮೇಲೆ ಕುಳಿತಿರುವ ಲಕ್ಷ್ಮೀಯ ಶಿಲ್ಪವಿದೆ. ಶಿಲ್ಪದ ಎರಡೂ ಬದಿಗಳಲ್ಲಿ ಗಜಶಿಲ್ಪವಿದ್ದು ಇದು ಅಪರೂಪದ ಕೆತ್ತನೆ. ಆನೆಗಳು ಹಿಂಗಾಲನ್ನು ನೆಲಕ್ಕೆ ಊರಿ ಸಿಂಹದ ರೀತಿಯಲ್ಲಿ ಕುಳಿತಂತಿದ್ದು ಸೊಂಡಿಲನ್ನು ಮೇಲಕ್ಕೆತ್ತಿವೆ. ಸೊಂಡಿಲಿನಲ್ಲಿ ಕಲಶವನ್ನು ಹಿಡಿದುಕೊಂಡಿವೆ.

ಲಕ್ಷ್ಮೀಯ ಶಿಲ್ಪವನ್ನು ಸುಂದರವಾಗಿ ಕೆತ್ತಲಾಗಿದ್ದು ಗಮನಾರ್ಹವಾಗಿದೆ. ಈ ಶಿಲ್ಪದ ಮುಖ್ಯ ಆಕರ್ಷಣೆಯೆಂದರೆ ಅಲಂಕೃತ ವಿನ್ಯಾಸದ ಸುರುಳಿ ಕೆತ್ತನೆ. ಇಷ್ಟೊಂದು ಅಲಂಕಾರಿಕವಾದ ವಿನ್ಯಾಸಗಳನ್ನು ಹಿಂದಿನ ಶಿಲ್ಪಗಳಲ್ಲಿ ಕಾಣಲಾಗದು. ಬಹುಶಃ ಎಂಟನೆಯ ಶತಮಾನದ ಹೊತ್ತಿಗೆ ಬಾದಾಮಿಯ ಶಿಲ್ಪಿಗಳು ಅಲಂಕರಣದ ಕಡೆಗೆ ಹೆಚ್ಚಿನ ಗಮನ ನೀಡಲಾರಂಭಿಸಿರಬಹುದು. ಆದರೆ ಇಲ್ಲಿನ ಸುರುಳಿ ವಿನ್ಯಾಸಗಳು ಮತ್ತು ಶಿಲ್ಪಗಳನ್ನು ಸಂಯೋಜಿಸಿದ ರೀತಿ ಮಹತ್ವ ಪಡೆಯುತ್ತದೆ. ಇಲ್ಲಿನ ಸುರುಳಿ ವಿನ್ಯಾಸವು ಅಲಂಕಾರಿಕ ಹೂಬಳ್ಳಿಗಳ ಕೆತ್ತನೆಯಿಂದ ಕೂಡಿದ್ದು ಜೀವಂತಿಕೆ ಇದೆಯೆನ್ನಿಸುತ್ತದೆ. ಅದಕ್ಕೆ ಪೂರಕವಾಗುವಂತೆ ಆಕಾಶದಲ್ಲಿ ಹಾರಾಡುತ್ತಿರುವ ವಿದ್ಯಾಧರ ಶಿಲ್ಪಗಳು ಉತ್ತಮ ಸಂಯೋಜನೆ ಮತ್ತು ಅಂಗಪ್ರಮಾಣದಿಂದ ಕೂಡಿದ್ದು ಶಿಲ್ಪಕ್ಕೆ ಹೆಚ್ಚಿನ ಮೆರುಗನ್ನುಂಟುಮಾಡಿವೆ.

ಶಿಲ್ಪ –೧೦

ಐಹೊಳೆಯ ವಿರೂಪಾಕ್ಷ ದೇವಾಲಯದಲ್ಲಿನ ಗಜಲಕ್ಷ್ಮೀ ಶಿಲ್ಪವು ಸಭಾಮಂಟಪದ ಬಾಗಿಲುವಾಡದ ಹಿಂಭಾಗದ ತೊಲೆಯ ಮೇಲಿದೆ. ೫’ x ೨’ ಅಡಿ ಗಾತ್ರದ ಈ ಶಿಲ್ಪವು ಚಾಲುಕ್ಯರ ಕಾಲದ ಗಜಲಕ್ಷ್ಮೀ ಶಿಲ್ಪಗಳಲ್ಲಿಯೇ ಅತಿ ದೊಡ್ಡದು. ಹೀಗೆ ಗರ್ಭಗೃಹಕ್ಕೆ ಅಭಿಮುಖ ಮಾಡಿರುವಂತೆ ರಚಿಸಲಾದ ಗಜಲಕ್ಷ್ಮೀ ಶಿಲ್ಪ ಇದೊಂದೇ ಆಗಿದೆ.[೧೯] ಬಾದಾಮಿಯ ಚಾಲುಕ್ಯರ ಕಾಲದ ಗಜಲಕ್ಷ್ಮೀಯ ಶಿಲ್ಪಗಳನ್ನು ಗಮನಿಸಿದರೆ ಇವುಗಳು ಹಂತಹಂತವಾಗಿ ಬೆಳವಣಿಗೆ

೧೯. ಡಾ. ಎಂ. ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ : ಇತಿಹಾಸ ದರ್ಶನ – ೨೪, ಪುಟ – ೧೯೩

ಗಜಲಕ್ಷ್ಮೀ ಶಿಲ್ಪಗಳು



ಶಿಲ್ಪ-೧. ಮೂದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೨. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಗಳಗನಾಥ ದೇವಾಲಯ, ಐಹೊಳೆ



ಶಿಲ್ಪ-೪. ಜ್ಯೋತಿರ್ಲಿಂಗ ದೇವಾಲಯ, ಐಹೊಳೆ



ಶಿಲ್ಪ-೫. ಗೌಡರ (ಗುಡಿ) ದೇವಾಲಯ, ಐಹೊಳೆ




ಶಿಲ್ಪ-೬. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೭. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ಭೂತನಾಥ ಸಂಕೀರ್ಣ, ಬಾದಾಮಿ



ಶಿಲ್ಪ-೯. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೦. ವಿರೂಪಾಕ್ಷ ದೇವಾಲಯ, ಐಹೊಳೆ

ಹೊಂದಿರುವುದು ಕಂಡುಬರುತ್ತದೆ. ಮೊದಲು ನೋಡಿದ ಬಾದಾಮಿಯ ಒಂದನೆಯ ಗುಹಾಲಯದ ಶಿಲ್ಪದಲ್ಲಾಗಲೀ, ಮೂರನೆಯ ಗುಹಾಲಯದ ಗೋಡೆಯ ಮೇಲಿರುವ ಶಿಲ್ಪದಲ್ಲಾಗಲೀ ಕಂಡುಬರದ ಕೆತ್ತನೆ, ವಿಶೇಷವಾದ ಸುರುಳಿ ಶಿಲ್ಪಗಳ ಅಲಂಕಾರ, ಸುತ್ತಲೂ ಆನೆ ಮತ್ತು ಇತರ ಕೆತ್ತನೆಗಳನ್ನು ಗಮನಿಸಿದಾಗ ಈ ಶಿಲ್ಪಕ್ಕೆ ಚಾಲುಕ್ಯರ ಎರಡನೆಯ ಹಂತದ ಆಳ್ವಿಕೆಯ ಕಾಲದಲ್ಲಿ ಹೆಚ್ಚಿನ ಮಹತ್ವ ಬಂದಿರಬಹುದು. ಸಾಮಾನ್ಯವಾಗಿ ಈ ಶಿಲ್ಪವು ಗರ್ಭಗುಡಿಯ ಪ್ರವೇಶದ್ವಾರದ ಮೇಲುಭಾಗದಲ್ಲಿ ಕಂಡುಬರುವುದು ಮತ್ತು ಇಲ್ಲಿ ಗರುಡನ ಶಿಲ್ಪವಿದ್ದರೆ ಅದರ ಮೇಲಿನ ಹಂತದಲ್ಲಿ ಈ ಶಿಲ್ಪವನ್ನು ಕೆತ್ತಲಾಗಿರುವುದು ಗಮನಿಸಬೇಕಾದ ಸಂಗತಿ.

ಗಜಲಕ್ಷ್ಮೀ ವಿನ್ಯಾಸವು ಯಾವುದೇ ಧರ್ಮ ಅಥವಾ ಪಂಥದ ಕಟ್ಟುಪಾಡಿಗೆ ಒಳಪಟ್ಟಂತೆ ಕಾಣುವುದಿಲ್ಲ. ಹಲವು ವ್ಯತ್ಯಾಸಗಳೊಂದಿಗೆ ಸಂಯೋಜನಾ ವೈವಿಧ್ಯವನ್ನೇ ಪಡೆದು ಬೌದ್ಧ, ಜೈನ, ಹಿಂದೂ ಶಿಲ್ಪ ಸಂಯೋಜನೆಯಲ್ಲಿಯೂ ಜಾನಪದ ಶಾಸ್ತ್ರೀಯ ಕಲಾರೂಪಗಳಲ್ಲಿಯೂ ವಿವಿಧ ಮಾಧ್ಯಮಗಳಲ್ಲಿಯೂ ಪ್ರತಿಬಿಂಬಿತವಾಗಿವೆ. ಇಲ್ಲಿ ಲಕ್ಷ್ಮೀಯನ್ನು ವಿಷ್ಣುವಿನ ಪತ್ನಿಯಂತೆ ಕಾಣಲಾಗಿಲ್ಲ. ವಿಪುಲತೆ, ಪ್ರಗತಿ, ಕೀರ್ತಿ, ಜಯ, ರಾಜ್ಯಲಾಂಛನ, ಸಾರ್ವಭೌಮತ್ವದ ಸಂಕೇತದಂತೆ ಪರಿಗಣಿಸಲಾಗಿದೆ. ಈ ಒಂದು ಸಾಂಕೇತಿಕ ವಿನ್ಯಾಸದಡಿಯಲ್ಲಿ ಎಲ್ಲ ಮತ ವೈಷಮ್ಯಗಳು ಕ್ಷುಲ್ಲಕ ಭಾವನೆಗಳು ತಲೆತಗ್ಗಿಸಿವೆ.[೨೦] ಸಾಮಾಜಿಕ ಬಾಂಧವ್ಯವನ್ನು ಉಂಟುಮಾಡುವಲ್ಲಿ ಗಜಲಕ್ಷ್ಮಿಯ ಸಂಯೋಜನೆಯು ಸಾಂಕೇತಿಕ ಮಹತ್ವವನ್ನು ಹೊಂದಿ ಅನೇಕ ಶತಮಾನಗಳಿಂದ ಭಾರತೀಯರ ಜನಜೀವನದ ಒಂದು ಮುಖ್ಯ ಅಭಿವ್ಯಕ್ತಿಯಂತೆ ಮೂಡಿಬಂದಿದೆ ಎನ್ನಬಹುದು.

ಲಜ್ಜಾಗೌರಿ ಶಿಲ್ಪಗಳು

ಬಾದಾಮಿಯ ಶಿಲ್ಪಗಳಲ್ಲಿ ಒಂದು ವಿಶಿಷ್ಟವಾದ ಶಿಲ್ಪಗಳ ಸಂಗ್ರಹವಿದೆ. ಕುತೂಹಲ ಮೂಡಿಸುವ ಈ ಶಿಲ್ಪಗಳು ಇಂದಿಗೂ ರಹಸ್ಯವನ್ನು ಉಳಿಸಿಕೊಂಡು ಬಂದಿವೆ. ಇವು ಬಾದಾಮಿಯ ಚಾಲುಕ್ಯರ ಕಾಲದಿಂದ ಪ್ರಾರಂಭವಾಗಿ ಹನ್ನೆರಡನೆಯ ಶತಮಾನದ ವರೆಗೂ ಕಂಡುಬಂದಿವೆ. ಇವೇ ಲಜ್ಜಾಗೌರಿಯ ಶಿಲ್ಪಗಳು. ಹಾಗೆ ನೋಡಿದರೆ ಲಜ್ಜಾಗೌರಿಯ ಶಿಲ್ಪಗಳು ನಮಗೆ ಕ್ರಿಸ್ತ.ಶಕೆಯ ಮೊದಲೇ ಸನ್ನತಿ(ಗುಲ್ಬರ್ಗ ಜಿಲ್ಲೆ) ಯಲ್ಲಿ ಕಾಣಬರುತ್ತವೆಯಾದರೂ ಇವು ಸಣ್ಣ ಗಾತ್ರದ (Terracotta) ಮಣ್ಣಿನಲ್ಲಿ ರಚಿಸಲ್ಪಟ್ಟ ಶಿಲ್ಪಗಳು. ದೊಡ್ಡ ಗಾತ್ರದ ಶಿಲೆಯಲ್ಲಿ ಕೆತ್ತಲಾದ ರಚನೆಗಳು ಕಾಣಸಿಗುವುದು ಹೆಚ್ಚಾಗಿ ಬಾದಾಮಿ ಪ್ರದೇಶದಲ್ಲಿ. 'ಬೆತ್ತಲೆಗೌರಿ, ಬತ್ತಲೆಭೈರವ ವಿಗ್ರಹಗಳ ಉದ್ದೇಶ ತೀರ ಭಿನ್ನವಾಗಿದ್ದು, ಇವು ಪೂಜಾವಿಗ್ರಹಗಳಾಗಿವೆ. ಇವುಗಳಲ್ಲಿ ಲಜ್ಜಾಗೌರಿಯದು. ಯೋನಿ ಪ್ರಧಾನವಾಗಿ ಕಾಣುವಂತೆ ಕಾಲು ಅಗಲಿಸಿ ಕುಳಿತ ಭಂಗಿಯ

೨೦. ಡಾ. ಸೂರ್ಯನಾಥ ಕಾಮತ್, ದೇವರಕೊಂಡಾರೆಡ್ಡಿ, ಜಗನ್ನಾಥ ಎಸ್. ಎ. (ಸಂ.) : ಇತಿಹಾಸ ದರ್ಶನ – ೭, ಪುಟ – ೪೯

[illegible]

[illegible]

ಸ್ತ್ರೀ ವಿಗ್ರಹವಾಗಿದೆ'.[೨೧] ಇವುಗಳಲ್ಲಿ ಕೆಲವು ಶಿಲ್ಪಗಳಲ್ಲಿ ಮುಖದ ಭಾಗದಲ್ಲಿ ಕೇವಲ ವರ್ತುಳಾಕಾರವಿದ್ದರೆ ಕೆಲವೆಡೆ ಕಮಲದ ಹೂವನ್ನು ಕೆತ್ತಲಾಗಿದೆ. ತಲೆಯ ಭಾಗದಲ್ಲಿ ಮುಖವನ್ನು ಹೊಂದಿರುವ ಶಿಲ್ಪಗಳು ಬಲು ಅಪರೂಪ.

ಸಾಮಾನ್ಯವಾಗಿ ಈ ವಿಗ್ರಹದ ಎರಡೂ ಕೈಗಳಲ್ಲಿ ಕಮಲಗಳಿರುತ್ತವೆ. ತೊಡೆಯನ್ನು ಅಗಲವಾಗಿರಿಸಿ ಯೋನಿಭಾಗವನ್ನು ಪ್ರಧಾನವಾಗಿ ಕಾಣುವಂತೆ ಕೆತ್ತಲಾಗಿರುವ ಈ ಶಿಲ್ಪಗಳನ್ನು ಆರಾಧನಾ ಉದ್ದೇಶದಿಂದ ಕೆತ್ತಿರಬಹುದೆಂದು ಶಂಕಿಸಲಾಗಿದೆ. 'ಇವುಗಳ ಯೋನಿಭಾಗ ಮೊದಲು ಮಾಡಿ ಮೊಲೆಯವರೆಗಿನ ಭಾಗವನ್ನು ಕುಂಭದ ಆಕಾರದಲ್ಲಿ ಕೆತ್ತಿರುತ್ತಾರೆ. ಕುಂಭವು ಗರ್ಭಕೋಶದ ಸಂಕೇತವೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ರೀತಿ ಕೆತ್ತಿರಬಹುದು. ಗುದಸ್ಥಾನದ ಮೂಲಾಧಾರ ಚಕ್ರದಿಂದ ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸಿ, ಸುಷುಮ್ನಾನಾಡಿ ಮಾರ್ಗವಾಗಿ ಅದನ್ನು ಮೇಲ್ಮುಖವಾಗಿ ಹರಿಸಿ, ಮೆದುಳಿನಲ್ಲಿರುವ ಸಹಸ್ರದಳ ಚಕ್ರ(ಕಮಲ)ಕ್ಕೆ ಮುಟ್ಟಿಸುವುದು ತಾಂತ್ರಿಕರ ಉದ್ದೇಶವಾಗಿದ್ದು, ಇದನ್ನು ಈ ವಿಗ್ರಹ ಪ್ರತಿನಿಧಿಸುತ್ತದೆಂದು ಶ್ರೀ ಅ. ಸುಂದರ ಅವರು ಹೇಳುತ್ತಾರೆ'.[೨೨]

ಲಜ್ಜಾಗೌರಿ ಶಿಲ್ಪದ ಕುರಿತಾಗಿ ಸಾಕಷ್ಟು ಜನ ವಿದ್ವಾಂಸರು ಸಂಶೋಧನೆಗಳನ್ನು ನಡೆಸಿದ್ದು ಹಲವಾರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಇಲ್ಲಿ ಗಮನಿಸಬೇಕಾದುದೆಂದರೆ ಬಾದಾಮಿಯ ಪರಿಸರದಲ್ಲಿ ದೊರಕಿರುವ ಲಜ್ಜಾಗೌರಿ ಶಿಲ್ಪಗಳ ರಚನೆಯ ರೀತಿ ಮತ್ತು ಅವುಗಳ ಅಸ್ತಿತ್ವದ ಕುರಿತಾಗಿ. ಇಂದಿಗೂ ಈ ಪ್ರದೇಶದ ಜನ ಸಂತಾನಾಪೇಕ್ಷೆಯಿಂದ ಲಜ್ಜಾಗೌರಿ ಶಿಲ್ಪಗಳನ್ನು ಪೂಜಿಸುತ್ತಾರೆ. ಇದರ ಹಿಂದಿನ ನಂಬಿಕೆ ಅಥವಾ ಇದರ ಸುತ್ತಲೂ ಇರುವ ಜನಪದ ಕಥೆಗಳು ಹೀಗಿವೆ.

ಶಿವ ಪಾರ್ವತಿಯರು ನಗ್ನರಾಗಿ ಜಲಕ್ರೀಡೆಯಲ್ಲಿ ನಿರತರಾಗಿರುವಾಗ ಗಣನೊಬ್ಬನು ದರ್ಶನಕ್ಕೆ ಬರುತ್ತಾನೆ. ಶಿವನು ಓಡಿ ಹೋಗಿ ದೇವಾಲಯದ ಲಿಂಗದಲ್ಲಿ ಲೀನನಾಗುತ್ತಾನೆ. ಪಾರ್ವತಿಯು ಲಜ್ಜಿತಳಾಗಿ ನೀರಿನಲ್ಲಿ ಅಡಗಿಕೊಳ್ಳುತ್ತಾಳೆ. ಹೀಗೆ ನಾಚಿಕೊಂಡ ಪಾರ್ವತಿಯು ಲಜ್ಜಾಗೌರಿ ಎಂದೆನಿಸಿದಳು.[೨೩] ಇಂತಹದೇ ಇನ್ನೊಂದು ಕಥೆಯೂ ಈ ಶಿಲ್ಪದ ಬಗ್ಗೆ ಜನಪದರಲ್ಲಿ ಪ್ರಚಲಿತವಿದೆ. ಒಮ್ಮೆ ಶಿವನು ಪಾರ್ವತಿಯ ಕಂಬಳಿಯನ್ನು ತುಂಡರಿಸುತ್ತಾನೆ. ನಂತರ ಸಿಂಪಿಗನ ರೂಪದಲ್ಲಿ ಪಾರ್ವತಿಯ ಎದುರು ಕಾಣಿಸಿಕೊಳ್ಳುತ್ತಾನೆ. ಪಾರ್ವತಿಯು ಶಿವನ ಸಿಟ್ಟನ್ನು ನೆನೆದು ಭಯಭೀತಳಾಗಿ ಸಿಂಪಿಗನಲ್ಲಿ ಕಂಬಳಿಯನ್ನು ಹೊಲಿದು ಕೊಡಲು ಕೇಳುತ್ತಾಳೆ, ಮೊದಲಿನಂತೆ ಅದನ್ನು ಹೊಲಿದುಕೊಟ್ಟರೆ ಬೇಡಿದುದನ್ನು ಕೊಡುವುದಾಗಿ ಭಾಷೆ ಕೊಡುತ್ತಾಳೆ. ಸಿಂಪಿಗನ ರೂಪದ ಶಿವನು ಅದನ್ನು ಹೊಲಿದು ಕೊಟ್ಟು ಪಾರ್ವತಿಗೆ ರತಿಸುಖ ನೀಡಲು

೨೧. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೩೫೬
೨೨. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೩೫೭
೨೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೭೧



ಕೇಳುತ್ತಾನೆ. ಪಾರ್ವತಿಯು ಕೊಟ್ಟ ಮಾತಿಗೆ ತಪ್ಪಲಾಗದೆ ಒಪ್ಪುತ್ತಾಳೆ. ಸಂಭೋಗನಿರತ ಸಿಂಪಿಗನು ತನ್ನ ನಿಜರೂಪವನ್ನು ತೋರುತ್ತಾನೆ. ಆಗ ಪಾರ್ವತಿಯು ನಾಚಿಕೊಂಡಿದ್ದರಿಂದ ಲಜ್ಜಾಗೌರಿ ಎನಿಸುತ್ತಾಳೆ.[೨೪] ಈ ಎರಡು ಕಥೆಗಳು ಜಾನಪದ ನಂಬಿಕೆಗಳಾಗಿದ್ದು, ಸಂಭೋಗದ ಕುರಿತೇ ವರ್ಣಿತವಾಗಿವೆ ಎಂಬುದನ್ನು ನಾವು ಗಮನಿಸಬಹುದಾಗಿದ್ದು, ಎರಡೂ ಕಥೆಗಳಲ್ಲಿ ತಲೆಯನ್ನು ಕಳೆದುಕೊಂಡು ದೇಹ ಮಾತ್ರ ಮುಖ್ಯವಾಗಿ ವರ್ಣಿತವಾಗಿದೆ ಎಂಬುದು ಮುಖ್ಯವಾಗುತ್ತದೆ.

ಶಿಲ್ಪ –೧

ಬಾದಾಮಿಯ ವಸ್ತುಸಂಗ್ರಹಾಲಯ (Museum)ದಲ್ಲಿ ಲಜ್ಜಾಗೌರಿಯ ಶಿಲ್ಪವೊಂದನ್ನು ಪ್ರದರ್ಶಿಸಲಾಗಿದೆ. ಇದರ ಕಾಲಮಾನ ಸುಮಾರು ಏಳನೆಯ ಶತಮಾನ. ಇದನ್ನು ಬಹುಶಃ ನಾಗರಾಳದಿಂದ ಸಂಗ್ರಹಿಸಲಾಗಿದೆ.[೨೫] ಒಂದು ಸುಂದರವಾದ ಲಜ್ಜಾಗೌರಿಯ ಶಿಲ್ಪವನ್ನು ಸಿದ್ದನಕೊಳ್ಳದ ಹಾಸುಬಂಡೆಯ ಮೇಲೆ ಕೆತ್ತಲಾಗಿದೆ. ಇದರ ಕಾಲಮಾನದ ಕುರಿತಾಗಿ ವೈರುಧ್ಯಗಳಿದ್ದರೂ ತಜ್ಞರ ಊಹೆಯ ಪ್ರಕಾರ ಇದು ಸುಮಾರು ೭-೮ನೆಯ ಶತಮಾನದ ಕೃತಿ. ಈ ಶಿಲ್ಪವು ಬಂಡೆಯ ಮೇಲೆ ರಚಿಸಲಾದ ಉಬ್ಬು ಶಿಲ್ಪವಾಗಿದೆ.

ಬಾದಾಮಿಯ (Museum) ಶಿಲ್ಪದ ಕುರಿತಾಗಿ ಹೇಳುವುದಾದರೆ ಈ ಶಿಲ್ಪವು ಮಧ್ಯಮ ಗಾತ್ರದ ಕೆತ್ತನೆಯಾಗಿದ್ದು ಕೆಂಪು ಶಿಲೆಯಲ್ಲಿ ಕೆತ್ತಲಾಗಿದೆ. ಯೋನಿಪ್ರದೇಶವನ್ನು ಮುಂದುಮಾಡಿ ಕುಳಿತ ರೀತಿಯಲ್ಲಿರುವ ಈ ಶಿಲ್ಪದಲ್ಲಿ ತಲೆಯ ಭಾಗದಲ್ಲಿ ಕಮಲದ ಕೆತ್ತನೆಯಿದೆ. ಎರಡೂ ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದು, ಕೈಗಳನ್ನು ಭುಜಮಟ್ಟಕ್ಕೆ ಮೇಲೆತ್ತಿ ಹಿಡಿಯಲಾಗಿದೆ. ದುಂಡಗಾದ ಸ್ತನಗಳನ್ನು ಕೆತ್ತಲಾಗಿದೆ. ಸಾಮಾನ್ಯವಾಗಿ ಲಜ್ಜಾಗೌರಿ ಶಿಲ್ಪಗಳು ನಗ್ನವಾಗಿರುವಂತೆ ಇದು ಕೂಡಾ ನಗ್ನ ಸ್ತ್ರೀ ಶಿಲ್ಪ. 'ಚಾಲುಕ್ಯ ಕಾಲದ ಶಿಲ್ಪಗಳಲ್ಲಿ ಇದು ವಿಶಿಷ್ಟ ಶಿಲ್ಪ ಪ್ರಕಾರ. ಬಾದಾಮಿ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಜ್ಜಾಗೌರಿ ಶಿಲ್ಪಗಳು ದೊರೆತಿರುವುದು ಮಹತ್ವದ ಅಂಶ. ಚಾಲುಕ್ಯ ಶಿಲ್ಪಗಳಲ್ಲಿ ಅತ್ಯಂತ ಕಲಾತ್ಮಕ ಲಜ್ಜಾಗೌರಿ ಶಿಲ್ಪವೆಂದರೆ ಬಾದಾಮಿಯ ಪುರಾತತ್ವ ವಸ್ತುಸಂಗ್ರಹಾಲಯದ್ದು.[೨೬] ಈ ಶಿಲ್ಪದ ಎತ್ತರ ನಾಲ್ಕು ಅಡಿ, ಅಗಲ ಎರಡು ಅಡಿಯಾಗಿದ್ದು ತ್ರಿಮಾನದ ಶಿಲ್ಪವಾಗಿದೆ.

ತಲೆಯ ಭಾಗದಲ್ಲಿ ಸುಂದರವಾಗಿ ಕೆತ್ತಲಾಗಿರುವ ಎರಡು ಸುತ್ತಿನ ಕಮಲ ಪುಷ್ಪವಿದೆ. ಕೆಳಗಿನ ಸುತ್ತಿನ ದಳಗಳು ಪೂರ್ಣವಾಗಿ ಅರಳಿದ್ದು ಕೆಳಮುಖಮಾಡಿದ್ದರೆ ಮೇಲಿನ ಹಂತದ ದಳಗಳು ಅರಳುತ್ತಿರುವಂತಿದೆ. ಎರಡು ಕೈಗಳಲ್ಲಿ ಹಿಡಿದಿರುವ ಕಮಲದ ಪುಷ್ಪಗಳು ಅರಳುತ್ತಿರುವ

---

೨೪. ಡಾ. ಜ್ಯೋತ್ಸ್ನಾ ಕಾಮತ್ : ಮಹಿಳೆ ಒಂದು ಅಧ್ಯಯನ, ಪುಟ – ೧೩

೨೫. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು ಒಂದು ದೃಶ್ಯಾತ್ಮಕ ಅಧ್ಯಯನ, (ಎಂ.ಫಿಲ್.ಸಂ.ಪ್ರ,) ಪುಟ – ೪೪

೨೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೩



ಹೂವುಗಳಾಗಿದ್ದು ಸ್ತ್ರೀತ್ತ್ವದ ಪ್ರತೀಕದಂತಿವೆ. ಇಲ್ಲಿ ಕಮಲದ ದಂಟುಗಳನ್ನು ಸುಂದರವಾಗಿ ಬಾಗುರೇಖೆಗಳಲ್ಲಿ ತೋರಿಸಲಾಗಿದ್ದು ಕಮಲವನ್ನು ಹಿಡಿದಿರುವ ಕೈಗಳು ದೇಹದ ರಚನೆಗೆ ತಕ್ಕಂತೆ ಸುಪುಷ್ಟವಾಗಿದ್ದು ಆಕರ್ಷಕವಾದ ಬೆರಳುಗಳ ಬಾಗುವಿಕೆಯಿಂದಾಗಿ ಹೆಚ್ಚು ಅರ್ಥಪೂರ್ಣವಾಗಿ ಮೂಡಿಬಂದಿವೆ. ತೊಡೆಯನ್ನು ಅಗಲವಾಗಿರಿಸಿ ಯೋನಿಭಾಗದ ಸಂಪೂರ್ಣ ದರ್ಶನವಾಗುವಂತೆ ಕೆತ್ತಲಾಗಿದೆ.

ಕಿಬ್ಬೊಟ್ಟೆಯಿಂದ ಮೇಲಿನ ನೆರಿಗೆ ಮತ್ತು ಸಪೂರವಾದ ಸೊಂಟ, ಮೇಲೆ ಗಮನಿಸಿದರೆ ಪೂರ್ಣ ವೃತ್ತಾಕಾರದಲ್ಲಿ ಕೆತ್ತಲಾದ ಉಬ್ಬಿದ ಸ್ತನಗಳು ಅರೋಗ್ಯವಂತ ಸ್ತ್ರೀ ಶಿಲ್ಪ ರಚನೆಯ ಪ್ರಮಾಣಬದ್ಧತೆಯನ್ನು ವ್ಯಕ್ತಪಡಿಸುತ್ತದೆ. ಕುತ್ತಿಗೆಯಲ್ಲಿ ಎರಡು ಅಗಲವಾದ ಹಾರಗಳಿದ್ದು, ಭುಜದಲ್ಲಿ ನಾಗಬಂಧ, ಮುಂಗೈಯಲ್ಲಿ ಎರಡು ಕೈಬಳೆಗಳಿವೆ. ಕುತ್ತಿಗೆಯಲ್ಲಿ ಧರಿಸಲಾಗಿರುವ ಕಂಠಹಾರಗಳಿಗೆ ಪೂರಕವಾಗಿ 'ವೈಕಕ್ಷಕ'ವನ್ನು ಕಾಣುತ್ತೇವೆ.

ಈ ವೈಕಕ್ಷಕ ಎಂಬುದು ವಿಶಿಷ್ಟ ಒಡವೆಯಾಗಿದ್ದು ಬಾದಾಮಿಯ ಶಿಲ್ಪಗಳಲ್ಲಿ ವಿಶೇಷವಾಗಿ ಕಾಣಸಿಗುತ್ತದೆ. 'ಇದು ಕೇವಲ ಸ್ತ್ರೀಯರು ಧರಿಸುವ ಕೊರಳಹಾರ. ಈ ಒಡವೆಯು ಚಾಲುಕ್ಯರ ವಿಶೇಷತೆಯಾಗಿದೆ. ಎರಡೂ ಹೆಗಲುಗಳ ಮೇಲೆ ಜನಿವಾರದಂತೆ ಧರಿಸಲಾಗುತ್ತದೆ. ಅವೆರಡೂ ಸರಗಳು ಕೂಡುವಲ್ಲಿ, ಸ್ತನಗಳ ಕೆಳಗೆ ಒಂದು ಪದಕ ಹಾಗೂ ಬೆನ್ನಿನ ಮೇಲೆ ಒಂದು ಪದಕವನ್ನು ಜೋಡಿಸಲಾಗುತ್ತದೆ. ತೊಡೆಗಳವರೆಗೆ ಇಳಿಬಿದ್ದ ಕೊರಳ ಮಾಲೆ ಇದು.[೨೭] ಬಾದಾಮಿಯ ಸ್ತ್ರೀ ಶಿಲ್ಪಗಳಲ್ಲಿ ಇಂತಹ ರಚನೆಗಳು ಕಂಡುಬರುತ್ತವೆ. ಕುತ್ತಿಗೆಯಲ್ಲಿನ ಕಂಠಹಾರವು ಎರಡು ಹಂತಗಳ ರಚನೆಯಾಗಿದೆ.

ಲೋಹದ ರಚನೆಯ ಪ್ರತಿರೂಪದಂತಿರುವ ಇಲ್ಲಿ ಮುತ್ತಿನ ಹರಳುಗಳನ್ನು ಜೋಡಿಸಿ ಮಾಡಿದಂತೆ ಕೆತ್ತಲಾಗಿದೆ. ಇದು ಕುತ್ತಿಗೆಗೆ ಅಂಟಿಕೊಂಡಂತಿದ್ದು ಮಣಿಗಳನ್ನು ಜೋಡಿಸಲಾಗಿದೆ. ಇಂತಹ ರಚನೆಗಳನ್ನು ಕಂಠಾಭರಣಗಳೆನ್ನುತ್ತಾರೆ. ಬಾದಾಮಿಯ ಗುಹಾಲಯದ ಶಿಲ್ಪಗಳಲ್ಲಿ ಈ ರೀತಿಯ ರಚನೆಗಳನ್ನು ಕಾಣುತ್ತೇವೆ. ಕಾಲಲ್ಲಿ ಎರಡು ಸುತ್ತಿನ ಕಾಲ್ಗಡಗವಿದೆ. ತೊಡೆಯಲ್ಲಿ ಐದು ಸುತ್ತಿನ ಬಂಧವಿದ್ದು ಇದು ತೊಡೆಯನ್ನು ಬಿಗಿಯಾಗಿ ಬಂಧಿಸಿರುವಂತಿದೆ. ಸೊಂಟದ ಪ್ರದೇಶದಲ್ಲಿ ಕಟಿಬಂಧವಿದ್ದು ಪಟ್ಟಿಗಳಿಂದ ಕೂಡಿದೆ. ಇಲ್ಲಿ ಶಿಲ್ಪಿಗಳು ದೇಹಕ್ಕೆ ಬೇಕಾಗುವ ಕನಿಷ್ಠ ಆಭರಣಗಳನ್ನು ಕೆತ್ತಿದ್ದು ದೇಹವನ್ನು ಮಾತ್ರ ನಗ್ನವಾಗಿ ಕೆತ್ತಿದ್ದಾರೆ. ಆದ್ದರಿಂದ ಈ ಶಿಲ್ಪದ ಉದ್ದೇಶವು ನಗ್ನತೆಯನ್ನು ತೋರಿಸುವುದೇ ಆಗಿದ್ದು, ತಲೆಯ ಭಾಗದಲ್ಲಿ ಕಮಲವನ್ನು ಕೆತ್ತಿರುವುದು ಮಾತ್ರ ಶಿಲ್ಪದ ರಚನೆಯ ಉದ್ದೇಶದ ಕುರಿತಾಗಿ ಪ್ರಶ್ನೆಗಳನ್ನು ಹುಟ್ಟುಹಾಕುವಂತಹದ್ದಾಗಿದೆ.

ಉಳಿದಂತೆ ಶಿಲ್ಪದ ರಚನೆಯು ಸುಂದರವಾಗಿದ್ದು ಕಲಾತ್ಮಕವಾಗಿ ಮೂಡಿಬಂದಿದೆ.

---

೨೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೦೯



ದೇಹದ ಭಾಗಗಳು ಪ್ರಮಾಣಬದ್ಧ ರಚನೆಯಾಗಿದ್ದು ಯಾವುದೇ ಭಾಗವನ್ನು ವೈಭವೀಕರಿಸಿಲ್ಲ. ಇಲ್ಲಿ ಶಿಲ್ಪವು ನಗ್ನವಾಗಿದ್ದರೂ ಅದು ಅಸಭ್ಯತೆಯ ರೀತಿಯಲ್ಲಿ ಕಾಣಬರದಿರುವುದು ಇಲ್ಲಿನ ಶಿಲ್ಪಿಗಳ ಹೆಚ್ಚುಗಾರಿಕೆಯೆನ್ನಬಹುದು.

ಬಾದಾಮಿ ಪರಿಸರದಲ್ಲಿ ಇನ್ನೂ ಹಲವಾರು ಲಜ್ಜಾಗೌರಿ ಶಿಲ್ಪಗಳು ಕಂಡುಬರುತ್ತವೆ. ಆದರೆ ಇವುಗಳು ಯಾವುವೂ ಬಾದಾಮಿ ಗುಹಾಂತರ ದೇವಾಲಯಗಳಲ್ಲಾಗಲೀ ಅಥವಾ ರಾಚನಿಕ ದೇವಾಲಯಗಳಲ್ಲಾಗಲೀ ಕಂಡುಬರದಿರುವುದು ಗಮನಾರ್ಹ. ಮಹಾಕೂಟದಲ್ಲಿ ಒಂದು ಶಿಲ್ಪವು ಭಗ್ನಾವಸ್ಥೆಯಲ್ಲಿರುವುದನ್ನು ನೋಡಬಹುದು. ಈ ಶಿಲ್ಪವು ದೊಡ್ಡಗಾತ್ರದ್ದಾಗಿದ್ದು ಈಗ ಅದರ ಕೆಲವೊಂದು ತುಣುಕುಗಳನ್ನು ಮಹಾಕೂಟದ ದೇವಾಲಯದ ಹೊರ ಆವರಣದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವು ಸುಂದರ ಶಿಲ್ಪವಾಗಿದ್ದು ಕೆತ್ತನೆಯ ದೃಷ್ಟಿಯಲ್ಲಿ ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾಗಿದ್ದು, ಬಾದಾಮಿಯ ಪ್ರಾಚ್ಯವಸ್ತು ಸಂಗ್ರಹಾಲಯದ ಶಿಲ್ಪವನ್ನು ಹೋಲುತ್ತದೆ. ಆದರೆ ಶಿಲ್ಪವು ಹಾಳಾಗಿರುವುದರಿಂದ ಪೂರ್ಣವಾಗಿ ಗಮನಿಸಲಾಗದು.

ಶಿಲ್ಪ –೨

ಹುಲಿಗೆಮ್ಮನ ಕೊಳ್ಳದಲ್ಲಿ ಎರಡು ಲಜ್ಜಾಗೌರಿ ಶಿಲ್ಪಗಳಿದ್ದು ಸಣ್ಣ ಶಿಲ್ಪಗಳಾದರೂ ಗಮನಾರ್ಹವಾಗಿವೆ. ಕೊಳ್ಳದ ಮೂಲದಲ್ಲಿ ಒಂದು ವಿಶಾಲವಾದ ಗವಿ ಇದೆ. ಇದರೊಳಗೆ ಒಂದು ದೇವಿಯ ದೇವಾಲಯವಿದ್ದು, ಅಲ್ಲಿ ದೊಡ್ಡ ಶಿವಲಿಂಗ, ಅದರ ಮುಂದೆ ನಂದಿ, ಪಕ್ಕದಲ್ಲಿ ಗಣೇಶ, ಸ್ವಲ್ಪ ಮುಂದೆ ಮತ್ತೊಂದು ದೇವಿಯ ಶಿಲಾಮೂರ್ತಿಗಳು, ಗವಿಯೊಳಗಿನ ಬಂಡೆಯ ಮೇಲೆ ಕೆತ್ತಿದ ಬ್ರಹ್ಮ, ವಿಷ್ಣು, ಶಿವನೊಡನೆ ಸಪ್ತಮಾತೃಕೆ, ಉಬ್ಬುಶಿಲ್ಪದ ಪಟ್ಟಿಕೆಯೂ ಇದೆ. ಕೊಳದೊಳಗೆ ಹೆಚ್ಚಾಗಿ ಶಿವಲಿಂಗವುಳ್ಳ ಸಣ್ಣ, ಸಣ್ಣ ಗುಡಿಗಳಿವೆ. ಒಂದರೊಳಗೆ ಉಮಾಮಹೇಶ್ವರನ ಮೂರ್ತಿ ಇದೆ.

ಲಜ್ಜಾಗೌರಿ ಮೂರ್ತಿಯೂ ದೇವಿ ದೇವಾಲಯದ ಪಕ್ಕದ ಗುಡಿಯ ಮುಂದೆ ಬಿದ್ದಿದೆ, ಇಲ್ಲಿಯೇ ಮತ್ತೊಂದು ಲಜ್ಜಾಗೌರಿ ಮೂರ್ತಿ ಇದೆ.[೨೮] ಈ ಪ್ರದೇಶವು ತಾಂತ್ರಿಕ ಆರಾಧನೆಯ ಕೇಂದ್ರವಾಗಿದ್ದು, ಇಲ್ಲಿನ ಪರಿಸರ, ಸಪ್ತಮಾತೃಕೆಯರ ಶಿಲ್ಪಗಳು ಇತ್ಯಾದಿಗಳನ್ನು ಗಮನಿಸಿದಾಗ ಈ ಶಿಲ್ಪಗಳು ತಾಂತ್ರಿಕ ಆರಾಧನೆಯ ಹಿನ್ನೆಲೆಯಲ್ಲಿ ರಚಿತವಾಗಿರುವ ಶಿಲ್ಪಗಳೆಂದು ಹೇಳಬಹುದು. ಈ ಶಿಲ್ಪಗಳು ಭಗ್ನಾವಸ್ಥೆಯಲ್ಲಿದ್ದು ಇರುವ ಶಿಲ್ಪವನ್ನು ಸುಣ್ಣ ಹಚ್ಚಿ ಹಾಳುಗೆಡವಲಾಗಿದೆ. ಇಲ್ಲಿನ ಒಂದು ಶಿಲ್ಪದಲ್ಲಿ ಲಜ್ಜಗೌರಿಯ ತಲೆಯ ಭಾಗದಲ್ಲಿ ಕಮಲದ ಕೆತ್ತನೆಯಿದ್ದು ಇದು ಬಾದಾಮಿಯ ಶಿಲ್ಪದಂತೆ ಪರಿಪೂರ್ಣತೆಯನ್ನು ಹೊಂದಿಲ್ಲ.

---

೨೮. ಡಾ. ಎಂ. ಚಿದಾನಂದ ಮೂರ್ತಿ (ಸಂ.) : ಶಂಭಾ ಜೋಶಿ ಅಭಿನಂದನ ಗ್ರಂಥ, ಪುಟ – ೩೮೭

ಶಿಲ್ಪ –೩

ಕ್ರಿ.ಶ. ೬–೭ನೇ ಶತಮಾನಕ್ಕೆ ಸೇರಬಹುದಾದ ಸಿದ್ದನಕೊಳ್ಳದ ಶಿಲ್ಪವನ್ನು ಹಾಸುಬಂಡೆಯ ಮೇಲೆ ರಚಿಸಲಾಗಿದ್ದು ದೊಡ್ಡ ಶಿಲ್ಪವಾಗಿದೆ. ಇದು ಕೂಡಾ ತಾಂತ್ರಿಕ ಆಚರಣೆಯ ಕೇಂದ್ರವಾಗಿದ್ದು ಇಲ್ಲಿ ಸಣ್ಣದಾದ ಗುಹೆಯೂ ಇದೆ. ಇಲ್ಲಿ ಹಿಂದಿನ ತಾಂತ್ರಿಕರು ತಂತ್ರಾರಾಧನೆಯಲ್ಲಿ ತೊಡಗಿರುತ್ತಿದ್ದರು. ಇಲ್ಲಿನ ಲಜ್ಜಾಗೌರಿ ಶಿಲ್ಪಕ್ಕೆ ಬಂಜೆಯರು ಮಕ್ಕಳಾಗುವ ಉದ್ದೇಶದಿಂದ ಪೂಜೆ ಮಾಡುವ ಪದ್ಧತಿಯಿದ್ದು ಇದರಿಂದಾಗಿ ಈ ಶಿಲ್ಪದ ಆರಾಧನೆಗೆ ವಿಶೇಷ ಅರ್ಥ ಬಂದಿದೆ. ಇಲ್ಲಿನ ಶಿಲ್ಪವನ್ನು ಗಮನಿಸಿದರೆ ಈ ಶಿಲ್ಪವನ್ನು ಹಾಸುಬಂಡೆಯ ಮೇಲೆ ಕೆತ್ತಲಾಗಿದ್ದು ಸ್ತ್ರೀ ಶಿಲ್ಪವು ಮಲಗಿದ ಭಂಗಿಯಲ್ಲಿದ್ದು, ಯೋನಿಭಾಗವನ್ನು ತೆರೆದಿಟ್ಟು ತೊಡೆ ಅಗಲವಾಗಿರಿಸಿ ಎರಡೂ ಪಕ್ಕಗಳಲ್ಲಿ ಹರಡಲಾಗಿದೆ. ತಲೆಯ ಭಾಗದಲ್ಲಿ ವೃತ್ತವಿದ್ದು ಕಮಲದ ಕೆತ್ತನೆಯಿದೆ. ಎರಡೂ ಕೈಗಳಲ್ಲಿ ಕಮಲವನ್ನು ಹಿಡಿದಿದ್ದಾಳೆ. ತೋಳಿನಲ್ಲಿ ನಾಗಬಂಧವಿದ್ದು ಮುಂಗೈಗಳಲ್ಲಿ ಎರಡು ಸುತ್ತಿನ ಬಳೆಗಳಿವೆ. ತೊಡೆಯ ಭಾಗದಿಂದ ಕೆತ್ತಲಾದ ಅಧೋವಸ್ತ್ರವು ಪಕ್ಕಕ್ಕೆ ಹರಡಿದೆ. ಉಳಿದಂತೆ ಈ ಶಿಲ್ಪದಲ್ಲಿ ಕಲಾತ್ಮಕವಾದ ಅಂಶಗಳಿಲ್ಲ. ಶಿಲ್ಪದ ಅಂಗಾಂಗ ಪ್ರಮಾಣಬದ್ಧವಾಗಿದ್ದು ಉತ್ತಮ ಕೆತ್ತನೆಯಾಗಿದೆ.[೨೯] ಉಬ್ಬುಶಿಲ್ಪವಾಗಿದ್ದು ಇಂದಿಗೂ ಪೂಜೆಗೊಳ್ಳುತ್ತಿದೆ.

ಶಿಲ್ಪ –೪

ಐಹೊಳೆಯ (Museum) ಪ್ರಾಚ್ಯವಸ್ತು ಸಂಗ್ರಹಾಲಯದ ಆವರಣದಲ್ಲಿ ದೊಡ್ಡಗಾತ್ರದ ಶಿಲ್ಪವನ್ನು ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಭಗ್ನಾವಸ್ಥೆಯಲ್ಲಿರುವುದರಿಂದ ಶಿಲ್ಪದ ಕುರಿತಾಗಿ ಏನೂ ಹೇಳಲು ಸಾಧ್ಯವಾಗುವುದಿಲ್ಲ. ಆದರೂ ಈ ಶಿಲ್ಪವು ಒಂದು ಕಾಲದಲ್ಲಿ ಸುಸ್ಥಿತಿಯಲ್ಲಿದ್ದು ತ್ರಿಮಾನದಲ್ಲಿ ಉತ್ತಮ ಕಲಾತ್ಮಕ ಶಿಲ್ಪವಾಗಿದ್ದಿರಬಹುದೆಂದು ಊಹಿಸಬಹುದು.

ಶಿಲ್ಪ –೫

ಬಾಗಲಕೋಟೆಯ (Museum) ಜಾನಪದ ವಸ್ತುಸಂಗ್ರಹಾಲಯದಲ್ಲಿ ಒಂದು ಲಜ್ಜಾಗೌರಿಯ ಸುಂದರ ಶಿಲ್ಪವಿದ್ದು ಇದು ಬಹುಶಃ ನಂತರದ ಕಾಲಾವಧಿಯಲ್ಲಿ ರಚನೆಯಾಗಿರುವ ಶಿಲ್ಪವಾಗಿದೆ. ಎರಡು ಅಡಿ ಎತ್ತರ, ಒಂದೂವರೆ ಅಡಿ ಅಗಲವಾಗಿದ್ದು ತನ್ನ ಎರಡು ಕೈಗಳಿಂದ ಯೋನಿಯನ್ನು ಅಗಲಿಸಿದಂತೆ ತೋರಿಸಲಾಗಿದೆ. ಬಿಳಿಕಲ್ಲಿನಲ್ಲಿ ರಚಿಸಲಾದ ಈ ಶಿಲ್ಪವು ತ್ರಿಮಾನದಲ್ಲಿದೆ. ಕಲಾತ್ಮಕವಾಗಿ ನೋಡಿದರೆ ಬಾದಾಮಿಯ ಶಿಲ್ಪದಷ್ಟು ಉತ್ತಮ ಕೆತ್ತನೆಯಾಗಿಲ್ಲದಿರುವುದು ಗಮನಾರ್ಹ. ಮೂಲ ಉದ್ದೇಶ ಇಲ್ಲಿಯೂ ಒಂದೇ ಆಗಿದೆ.

ಇದು ಸುಮಾರು ೧೦–೧೧ನೇ ಶತಮಾನದ್ದಿರಬಹುದು. ಇದು ಲಜ್ಜಾಗೌರಿ ಶಿಲ್ಪಗಳಲ್ಲೇ ಅತ್ಯಂತ ವಿಶಿಷ್ಟವಾದುದಾಗಿದೆ. ಗುಡಿಜಾಪುರದಲ್ಲಿ ದೊರಕಿರುವ ಈ ಶಿಲ್ಪ ಲಜ್ಜಾಗೌರಿ ಶಿಲ್ಪಗಳ

---

೨೯. ಡಾ. ಎಂ. ಚಿದಾನಂದ ಮೂರ್ತಿ (ಸಂ.) : ಶಂಭಾ ಜೋಶಿ ಅಭಿನಂದನ ಗ್ರಂಥ, ಪುಟ – ೩೮೮

ಜೊತೆಗೆ ಹೋಲಿಸಿದಾಗ ಸಾಮಾನ್ಯ ಲಜ್ಜಾಗೌರಿ ಶಿಲ್ಪಗಳು ಎರಡೂ ತೊಡೆಗಳನ್ನು ಅಗಲಿಸಿ ಸಂಭೋಗಾವಸ್ಥೆಯ ರೀತಿಯಲ್ಲಿದ್ದರೆ ಇದು ಕಾಲುಗಳನ್ನು ಸ್ವಲ್ಪವೇ ಅಗಲಿಸಿ ಯೋನಿಯ ಭಾಗವನ್ನು ಮಾತ್ರ ತೆರೆದಿಟ್ಟು ಕುಳಿತ ಭಂಗಿಯಲ್ಲಿದೆ. ಕೈಗಳರೆಡು ಯೋನಿಭಾಗವನ್ನು ಅಗಲಿಸಿ ತೋರಿಸುತ್ತಿರುವಂತಿದೆ.[೩೦] ಗಡಸು ಕಲ್ಲಿನಲ್ಲಿ ರಚಿಸಿದರು ಸುಂದರವಾಗಿ ತ್ರಿಮಾನದಲ್ಲಿ ರಚನೆ ಮಾಡಿದ್ದಾರೆ.

ಶಿಲ್ಪ – ೬

ಬಾಗಲಕೋಟೆ ಜಿಲ್ಲೆ ಬಿಳಗಿಯ ಶ್ರೀ ಸಿದ್ದೇಶ್ವರ ದೇವಾಲಯದ ಆವರಣದ ಹಿಂಬಾಗದಲ್ಲಿ ಒಂದು ಲಜ್ಜಾಗೌರಿ ಶಿಲ್ಪವನ್ನು ಕಾಣಬಹುದು. ನಾಲ್ಕು ಅಡಿ ಎತ್ತರದಲ್ಲಿದ್ದು ನೋಡಲು ಜನಪದ ಶೈಲಿಯಲ್ಲಿರುವಂತೆ ಕಾಣುತ್ತಿದ್ದರೂ ಇಂದಿಗೂ ಪೂಜೆಗೊಳ್ಳುತ್ತಿದೆ. ಶಿಲ್ಪದಲ್ಲಿ ಪ್ರಮಾಣವಿಲ್ಲದಿದ್ದರು ಉಬ್ಬುತನದಿಂದ ನೋಡಲು ಆಕರ್ಷಕವಾಗಿದೆ.

ಶಿಲ್ಪ –೭

ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕಿನ ಮಹಾಕೂಟದಲ್ಲಿ ಒಂದು ಹೊಸ ಲಜ್ಜಾಗೌರಿ ಶಿಲ್ಪವಿದೆ. ಮಹಾಕೂಟವು ಪುರಾಣ ಕಾಲದಲ್ಲಿ ಮುಕುಟೇಶ್ವರಿಯ ಹೆಸರಿನಲ್ಲಿ ಹೆಚ್ಚು ಪ್ರಸಿದ್ಧವಿತ್ತು. ಮಹಾಕೂಟಕ್ಕೆ 'ಕೊಟವಿ' ಶಬ್ದಕ್ಕೂ ಸಂಬಂಧವಿದೆ. 'ಕೊಟವಿ' ಎಂದರೆ ದುರ್ಗೆಯ ಇನ್ನೊಂದು ಹೆಸರು. 'ನಗ್ನಸ್ತ್ರೀ' ಎಂದೂ ಮತ್ತೊಂದು ಅರ್ಥವಿದೆ. ಭಾರತದ ಪ್ರಸಿದ್ಧ ಶಕ್ತಿ ಪೀಠಗಳು, ಕ್ರಮೇಣ ಶೈವಪಂಥದ ಕೇಂದ್ರಗಳಾಗಿ ಪರಿಣಮಿಸಿದ ಕಾಲದಲ್ಲಿ ಈ ಮಹಾ ಕೊಟವಿಯ ಪೀಠ ಮುಕುಟ, ಮಹಾಕೂಟೇಶ್ವರ ಆಗಿರಲು ಸಾಕು, ಅಲ್ಲಿದ್ದ ನಗ್ನ ಶಿರೋಹಿನ, ಸ್ತ್ರೀ ವಿಗ್ರಹ ಕೊಟವಿಗೆ 'ಲಜ್ಜಾಗೌರಿ' ಎಂಬ ಹೆಸರಿದೆ.

ಈಗ ಮಹಾಕೂಟೇಶ್ವರ ಮಂದಿರದ ಮೂಲೆಯಲ್ಲಿ ಅತ್ಯಂತ ನಿರ್ದಯತೆಯಿಂದ ಒಡೆದುಹಾಕಿ ಬಿದ್ದಿರುವ ವಿಗ್ರಹ ನೂರು ವರ್ಷಗಳ ಹಿಂದೆ ಸಹ ಸುಸ್ಥಿತಿಯಲ್ಲಿತ್ತು. ಅತ್ಯಂತ ಕಲಾತ್ಮಕವಾಗಿದ್ದು, ಆದರೆ ಶಿರದ ಬದಲಿಗೆ ಕಮಲವಿದ್ದ ಇಂಥ ದೇವಿಯ ವಿಚಿತ್ರ ಮೂರ್ತಿಯನ್ನು ತನ್ನ ಭಾರತಯಾತ್ರೆಯ ಸಂದರ್ಭದಲ್ಲಿ ಇನ್ನೆಲ್ಲಿಯೂ ನೋಡಿದ್ದಿಲ್ಲ.[೩೧] ಅತ್ಯಂತ ಕಲಾತ್ಮಕವಾಗಿದ್ದಿರಬಹುದಾದ ಈ ಶಿಲ್ಪದ ಶಿರೋಭಾಗದಲ್ಲಿ ಅರಳಿದ ಕಮಲವನ್ನು ಕೆತ್ತಲಾಗಿದೆ. ಈ ಕಮಲವು ಪೂರ್ಣವೃತ್ತಾಕಾರದಲ್ಲಿದ್ದು, ಕಮಲದ ದಳಗಳನ್ನು ಸ್ಪಷ್ಟವಾಗಿ ಎರಡು ಹಂತದಲ್ಲಿ ಕೆತ್ತಲಾಗಿದೆ. ಕೈಗಳಲ್ಲಿಯೂ ಕಮಲದ ದಂಟುಗಳಿದ್ದು, ಶಿರೋಭಾಗದ ಕಮಲಕ್ಕಿಂತ ಆಕಾರದಲ್ಲಿ ಸಣ್ಣವಾಗಿವೆ. ಕಮಲದ ಕೈಯ ಸುರುಳಿಯಾಗಿ ತುಂಬಾ ಆಕರ್ಷಕವಾಗಿದ್ದು, ಮತ್ತೆ ಮತ್ತೆ


೩೦. ಮಹಾಂತೇಶ ಫಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು– ಒಂದು ದೃಶ್ಯಾತ್ಮಕ ಅಧ್ಯಯನ, (ಎಂ.ಫಿಲ್.ಸಂ.ಪ್ರ) ಪುಟ – ೪೫

೩೧. ಡಾ. ಜ್ಯೋತ್ಸ್ನಾ ಕಾಮತ್ : ಮಹಿಳೆ ಒಂದು ಅಧ್ಯಯನ, ಪುಟ – ೧೩

ಲಜ್ಜಾಗೌರಿ ಶಿಲ್ಪಗಳು



ಶಿಲ್ಪ-೧. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ



ಶಿಲ್ಪ-೨. ಹುಲಿಗೆಮ್ಮನಕೊಳ್ಳ



ಶಿಲ್ಪ-೩. ಸಿದ್ದನಕೊಳ್ಳ



ಶಿಲ್ಪ-೪. ಪ್ರಾಚ್ಯವಸ್ತು ಸಂಗ್ರಹಾಲಯ ಆವರಣ, ಐಹೊಳೆ



ಶಿಲ್ಪ-೫. ಜಾನಪದ ವಸ್ತು ಸಂಗ್ರಹಾಲಯ, ಬಾಗಲಕೋಟ



ಶಿಲ್ಪ-೬. ಶ್ರೀ ಸಿದ್ದೇಶ್ವರ ದೇವಸ್ತಾನ ಆವರಣ, ಬೀಳಗಿ



ಶಿಲ್ಪ-೭. ಮಹಾಕೂಟೇಶ್ವರ ದೇವಾಲಯ ಆವರಣ
ಮಹಾಕೂಟ

ನೋಡುವಂತಿದೆ. ಮುಂಭಾಗ (ಮುಂಗೈಗಳು) ಉಳಿದಿದ್ದು, ಕೈಗಳನ್ನು ನೋಡಿದರೆ ಅತ್ಯಂತ ಸುಪುಷ್ಟವಾದ ಸ್ತ್ರೀ ಶಿಲ್ಪ ಇದಾಗಿತ್ತು ಎಂದು ಊಹಿಸಬಹುದು. ಈ ಶಿಲ್ಪದಲ್ಲಿ ಸದ್ಯಕ್ಕೆ ಉಳಿದಿರುವ ಭಾಗವನ್ನು ಮಹಾಕೂಟದಲ್ಲಿ ನಾವು ಇಂದಿಗೂ ಗಮನಿಸಬಹುದು.

ಸಪ್ತ ಮಾತೃಕೆಯರು

ಐತಿಹಾಸಿಕವಾಗಿ ಸ್ತ್ರೀದೇವತೆಗಳ ಪ್ರಾಚೀನತೆಯನ್ನು ಗುಪ್ತರ ಕಾಲದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಕದಂಬರು 'ಸ್ವಾಮಿ ಮಹಾಸೇನ ಮಾತೃಗಣಾನುಧ್ಯಾತಾಭಿಷಿಕ್ತಾನಾಂ' ಎಂದು ಮಾತೃಕೆಯರನ್ನು ಸ್ಮರಿಸಿದ್ದಾರೆ. 'ರೂಪಧ್ಯಾನ ರತ್ನಾವಳಿ' ಎಂಬ ತೆಲುಗು ಗ್ರಂಥದಲ್ಲಿ ಮಾತೃಕೆಯರ ಲಕ್ಷಣಗಳನ್ನು ತಿಳಿಸಿದೆ. ಆ ಗ್ರಂಥದ ಪ್ರಕಾರ, ಪ್ರತಿಯೊಂದು ವಿಗ್ರಹಕ್ಕೂ (ಮಹೇಶ್ವರಿ ಮತ್ತು ಚಾಮುಂಡಿಯನ್ನುಳಿದು) ಆರರ ಮೇಲ್ಪಟ್ಟು ಕೈಗಳಿರಬೇಕೆಂದು ವಿಧಿಸಿದೆ.

ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ ।
ಮಾಹೇಂದ್ರೀ ಚೈವ ವಾರಾಹೀ ಚಾಮುಣ್ಡಾ ಸಪ್ತಮಾತರಃ ॥[೩೨]

'ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ಇಂದ್ರಾಣೀ, ವಾರಾಹೀ ಮತ್ತು ಚಾಮುಂಡೀ ಇವರೇ ಸಪ್ತಮಾತೃಕೆಯರು' ಎನ್ನುತ್ತದೆ ಈ ಶ್ಲೋಕ.

ಶಿಲ್ಪ –೧

ಸಾಂಸ್ಕೃತಿಕವಾಗಿ ಕದಂಬರನ್ನೇ ಅನುಸರಿಸಿದ ಚಾಲುಕ್ಯರು ಅನೇಕ ಶಾಸನಗಳಲ್ಲಿ ತಾವು ಸಪ್ತಮಾತೃಕೆಯರಿಂದ ಪೋಷಿಸಲ್ಪಟ್ಟವರೆಂದು ಹೇಳಿಕೊಂಡಿದ್ದಾರೆ.[೩೩] ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದ ಹುಲಿಗೆಮ್ಮನಕೊಳ್ಳದಲ್ಲಿ ಸಪ್ತಮಾತೃಕೆಯಿರುವುದನ್ನು ಕಾಣಬಹುದು. ಇದು ಒಂದೇ ಭಿತ್ತಿಯ ಮೇಲೆ ಎರಡು ಅಡಿ ಎತ್ತರದಲ್ಲಿ ರಚಿತಗೊಂಡಿದೆ. ಪ್ರತಿಯೊಂದು ಶಿಲ್ಪಕ್ಕೂ ಪ್ರತ್ಯೇಕವಾದ ಚೌಕಟ್ಟನ್ನು ನಿರ್ಮಿಸಲಾದ ಇವು ಚತುರ್ಭುಜ ಕುಳಿತ ಶಿಲ್ಪಗಳಾಗಿವೆ. ನಮಗೆ ಹೆಚ್ಚಾಗಿ ಕುಳಿತಿರುವ ಸಪ್ತಮಾತೃಕೆಯರ ಶಿಲ್ಪಗಳು ಮಾತ್ರ ಕಂಡುಬರುವುದು, ಆದರೆ ಐಹೊಳೆಯ ರಾವಳಫಡಿಯ ಗುಹಾಲಯದಲ್ಲಿ ನಿಂತಿರುವ ಸಪ್ತಮಾತೃಕೆಯರಿರುವುದು ವಿಶೇಷವಾದ ಸಂಗತಿಯಾಗಿದೆ.

ಶಿಲ್ಪ –೨

ಐಹೊಳೆಯ ರಾವಳಫಡಿ ಗುಹೆಯಲ್ಲಿ ಎಡಭಾಗದ ಮಂಟಪದಲ್ಲಿ ಶಿವನು ಸಪ್ತಮಾತೃಕೆ ಮತ್ತು ಪಾರ್ವತಿಯೊಂದಿಗೆ ನರ್ತಿಸಲು ಏರ್ಪಡಿಸಿರುವ ರಂಗಮಂಟಪದಂತಿದೆ. ಸಪ್ತಮಾತೃಕೆಯರನ್ನು ಸಾಲಾಗಿ ಆಸೀನರಾಗಿರುವಂತೆಯೇ ಅಥವಾ ನಿಂತಿರುವಂತೆಯೋ

---

೩೨. ಪ್ರೊ. ಲಕ್ಷ್ಮಣ್ ತೆಲಗಾವಿ (ಸಂ.) : ಹರತಿಸಿರಿ, ಪುಟ – ೯೦

೩೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೮

ರಚಿಸಿರುವುದನ್ನು ಅನೇಕ ದೇವಾಲಯಗಲಲ್ಲಿ ಸಾಮಾನ್ಯವಾಗಿ ಕಾಣಬಹುದು. ಆದರೆ ಶಿವನೊಂದಿಗೆ ಸಪ್ತಮಾತೃಕೆಯರೂ ನರ್ತಿಸುವ ಅಪರೂಪ ಕಲ್ಪನೆಯನ್ನು ಚಾಲುಕ್ಯ ಶಿಲ್ಪಗಳು ರಾವಳಫಡಿ ಗುಹೆಯಲ್ಲಿ ಮಾಡಿದ್ದಾರೆ. ಈ ಸಂಯೋಜನೆಯು ಆಕಾರ–ಗಾತ್ರದಲ್ಲಿ ದೊಡ್ಡದಾಗಿದ್ದು, ಹೆಚ್ಚಿನ ಗಮನ ಸೆಳೆಯುತ್ತದೆ.

ಮಾತೃಕೆಯರಾದ ಬ್ರಾಹ್ಮಿಯು ಅಡ್ಡಲಾಗಿ ಹಿಡಿದ ಕೈಗಳಲ್ಲಿ ಅಸ್ತ್ರವನ್ನು ಹಿಡಿದು ಮತ್ತಲಿ ಭೂಮಿಬಾರಿಯಲ್ಲಿ ನರ್ತಿಸುತ್ತಿರುವಳು. ಮಹೇಶ್ವರಿಯು ಆಕರ್ಷಕ ಸಮಪಾದದಲ್ಲಿ, ವೈಷ್ಣವಿಯು ವಿಲಾಸಿತ ಸೂಚಿಪಾದದಲ್ಲಿ, ಪಾರ್ವತಿಯು ಶಿವನನ್ನು ಅನುಸರಿಸುತ್ತ ಕಪಿತ್ಥ ಹಸ್ತವನ್ನು ಹಿಡಿದಿರುವಳು. ಅವಳ ಬಾಗುವಿಕೆ ಮಣಿದ ಮಂದಿ ಸ್ಥಾನಕಗಳು ಐವತ್ತೊಂಭತ್ತನೇ ಕರಣವಾದ ಆವರ್ತದ ಪ್ರಾರಂಭದ ದಿಶೆಯನ್ನು ತೋರುತ್ತದೆ. ಮುಂದೆ ವಾರಾಹಿಯು ಸಮಪಾದದಲ್ಲಿ, ಕುಮಾರಿಯು ಲಲಿತ ಸ್ಥಾನಕದಲ್ಲಿ (ಸ್ತ್ರೀಯರಿಗೆ ವಿಧಿಸಿರುವ ಸ್ಥಾನಕ ಭೇದ) ಎಡಭಾಗದ ಕೊನೆಯಲ್ಲಿ, ಚಾಮುಂಡಿಯು ವಿಚಿತ್ರ ರೀತಿಯಲ್ಲಿ ಸಿಂಗರಿಸಿಕೊಂಡು ಪ್ರಾರಂಭದ ದಿಶೆಯ ಮೂವತ್ತೈದನೆಯ ಕರಣವಾದ ಭೂಜಂಗತ್ರಾಸಿತ ರೇಚಿತದಲ್ಲಿ ನರ್ತಿಸುತ್ತಿರುವಳು.[೩೪] ಇದೆಲ್ಲವನ್ನು ನಾಟ್ಯಶಾಸ್ತ್ರದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಆದರೆ ನಾವಿಲ್ಲಿ ಶಿಲ್ಪದ ಭಂಗಿ ಆಭರಣಗಳನ್ನು ವಿನ್ಯಾಸದೊಂದಿಗೆ ವಿವರಿಸಲೇಬೇಕು. ನಟರಾಜನ ಶಿಲ್ಪದ ಬಲಭಾಗದಿಂದ ಬ್ರಾಹ್ಮೀ, ಮಹೇಶ್ವರಿ, ಕುಮಾರೀ, ವೈಷ್ಣವಿ, ಎಡಭಾಗದಲ್ಲಿ ಕ್ರಮವಾಗಿ ವಾರಾಹೀ, ಇಂದ್ರಾಣಿ, ಚಾಮುಂಡಾ ಶಿಲ್ಪಗಳನ್ನು ಕಾಣಬಹುದು. ದ್ವಿಬಾಹು ಹೊಂದಿರುವ ಇಲ್ಲಿ ದೇವತೆಗಳ ವಾಹನವಿಲ್ಲದಿರುವುದು ಗಮನಿಸತಕ್ಕದ್ದು. ದೇವಿಗೆ ನೀಳವಾದ ಕಿರೀಟ ಮುಕುಟವಿದ್ದು, ತಲೆಯ ಹಿಂದೆ ಪ್ರಭಾಮಂಡಲವಿದೆ. ಕಿವಿಯಲ್ಲಿ ಕರ್ಣಕುಂಡಲ, ತೋಳಬಂಧಿ, ಬಳೆಗಳಿಂದ ಅಲಂಕೃತವಾಗಿವೆ. ಬೇರೆ ಬೇರೆ ವಿನ್ಯಾಸದಿಂದ ಕೂಡಿದ ಕಿರೀಟ ಮತ್ತು ಆಭರಣಗಳು ವಿಶಿಷ್ಟವಾಗಿವೆ. ತೊಟ್ಟಿರುವ ವಸ್ತ್ರಗಳನ್ನು ಶಿಲ್ಪಿಯ ಕೆತ್ತನೆಯಿಂದ ವಿವಿಧಾಕಾರದ ವಿನ್ಯಾಸದೊಂದಿಗೆ ದ್ವಿಮಾನದಲ್ಲಿ ರಚಿಸಲಾಗಿದೆ.

ಶಿಲ್ಪ –೩

ಮಹಾಕೂಟದ ಅಡಕೇಶ್ವರ ಗುಡಿಯಲ್ಲಿ ಇರುವ ಸಪ್ತಮಾತೃಕಾ ಶಿಲ್ಪವು ರಾಷ್ಟ್ರಕೂಟ ಕಾಲದ್ದಿರಬಹುದು. ಏಳು ತಾಯಂದಿರು ಕುಳಿತಿರುವಂತೆ ಕೆತ್ತನೆ ಮಾಡಲಾಗಿದೆ.[೩೫] ಈ ಶಿಲ್ಪವು ಚತುರ್ಭುಜವಾಗಿದ್ದು, ಕೆಲ ಭಾಗಗಳು ಸವೆದು ಹೋಗಿವೆ. ಶಿಲ್ಪವು ಒಂದಕ್ಕೊಂದರಂತೆ ಸಾಮ್ಯ ಹೊಂದಿಲ್ಲ. ಮುಖವು ದಪ್ಪಗಿದ್ದು, ಕೈಗಳು ಪ್ರಮಾಣದಲ್ಲಿ ಚಿಕ್ಕದಾಗಿವೆ ಎಂದೆನಿಸುತ್ತದೆ.

---

೩೪ ಡಾ. ಚೂಡಾಮಣಿ ನಂದಗೋಪಾಲ : ಶಿಲೆ–ಕಲೆ, ಪುಟ ೧೬೮

೩೫. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೯

[illegible]

ಶಿಲ್ಪ –೪

ಬಾದಾಮಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾದ ಸಪ್ತಮಾತೃಕೆ ಶಿಲ್ಪವು ಎಂಟನೆಯ ಶತಮಾನದ್ದೆಂದು ತಿಳಿಯಲಾಗಿದೆ.[೩೬] ಸಪ್ತಮಾತೃಕೆಯರ ಬಲಭಾಗದಲ್ಲಿ ಮೊದಲನೆಯದು ಕುಮಾರನಿರಬಹುದು (ಕಾರ್ತಿಕೇಯ). ಕೊನೆಯಲ್ಲಿ ಗಣೇಶನ ಶಿಲ್ಪವಿದೆ. ಸಪ್ತಮಾತೃಕೆಯರು ಮಧ್ಯದಲ್ಲಿ ಪೀಠದ ಮೇಲೆ ಸುಖಾಸನದಲ್ಲಿ ಆಸೀನರಾಗಿದ್ದಾರೆ. ಚತುರ್ಭುಜನಾಗಿದ್ದು, ಕೆಲವು ಭಾಗ ಸವೆದು ಹೋಗಿವೆ. ಕೆಳಗಡೆ ಪೀಠದಲ್ಲಿ ವಾಹನಗಳಿದ್ದು, ಕೆಲವು ಮಾಸಿವೆ, ಆದರೂ ಅಲ್ಲಿ ವಾಹನವಿದ್ದ ಕುರುಹುಗಳನ್ನು ಗಮನಿಸಬಹುದು.

ಶಿಲ್ಪ –೫

ಸಿದ್ಧನಕೊಳ್ಳ ಸಂಗಮೇಶ್ವರ ದೇವಾಲಯದ ಮುಂದಿನ ಭಾಗದಲ್ಲಿ ಚಿಕ್ಕದಾದ ಗವಿಯ ರೀತಿಯಲ್ಲಿದೆ. ಇಲ್ಲಿಯೂ ಸಪ್ತಮಾತೃಕೆಯರ ಶಿಲ್ಪವಿದ್ದು, ಪೀಠದ ಮೇಲೆ ಸುಖಾಸನದಲ್ಲಿ ಕುಳಿತಿದ್ದು, ಪೀಠದಲ್ಲಿ ವಾಹನಗಳನ್ನು ಕೆತ್ತಿರಬಹುದು. ಪ್ರಸ್ತುತ ಬಣ್ಣಹಚ್ಚಿ ವಾಹನಗಳನ್ನು ಬೇರೆ ಬೇರೆ ಪಕ್ಷಿ, ಹಾವುಗಳು, ವರ್ಣಚಿತ್ರದಿಂದ ರಚಿಸಿ ಹಾಳುಮಾಡಿದ್ದಾರೆ. ಈ ಶಿಲ್ಪದಲ್ಲಿ ಬ್ರಾಹ್ಮೀ, ಕೌಮಾರೀ, ವಾರಾಹೀ, ಇಂದ್ರಾಣಿ ಇವೆಲ್ಲವೂ ದ್ವಿಭುಜವಿದ್ದರೆ ಮಹೇಶ್ವರೀ, ವೈಷ್ಣವೀ, ಚಾಮುಂಡಾ, ಚತುರ್ಭುಜ ಶಿಲ್ಪವಾಗಿವೆ. ಇವು ನಂತರ ಕಾಲದಲ್ಲಿ ರಚಿತವಾಗಿರಬಹುದು. ಈ ರೀತಿ ಕೆತ್ತನೆಯಾಗಿರುವುದು ಅಲ್ಲಿನ ಇಕ್ಕಟ್ಟಾದ ಪ್ರದೇಶ ಮತ್ತು ಕಲ್ಲಿನ ಮಿತಿಯೇ ಕಾರಣವಿರಬಹುದೆಂದು ಊಹಿಸಬಹುದು.

ಶಿಲ್ಪ –೬

ಬಾದಾಮಿಯ ಸ್ವಲ್ಪ ಹತ್ತಿರದಲ್ಲಿರುವ ನೀಲಗುಂದ ಹಳ್ಳಿಯಲ್ಲಿನ ರಾಮಲಿಂಗೇಶ್ವರ ದೇವಾಲಯದ ಹೊರ ಆವರಣದಲ್ಲಿರುವ ಈ ಶಿಲ್ಪವನ್ನು ದ್ವಿಮಾನದಲ್ಲಿ ರಚಿಸಲಾಗಿದೆ. ಸಂಪೂರ್ಣ ಸುಣ್ಣ ಬಳಿಯಲಾಗಿರುವ ಈ ಶಿಲ್ಪವನ್ನು ಸಪ್ತಮಾತೃಕೆಯರೆಂದು ಗುರುತಿಸಬಹುದಾಗಿದೆ.

ಶಿಲ್ಪ –೭

ಐಹೊಳೆಯ ಪ್ರಾಚ್ಯವಸ್ತು ಸಂಗ್ರಹಾಲಯದ ಆವರಣದಲ್ಲಿ ತಂದಿರಿಸಲಾದ ಈ ಶಿಲ್ಪಗಳೆಲ್ಲವೂ ಸುಖಾಸನದಲ್ಲಿ ಕುಳಿತಿದ್ದು, ಈ ಶಿಲ್ಪಗಳು ಸಂಪೂರ್ಣ ಸವೆದು ಹೋಗಿರುವುದರಿಂದ ಯಾವುದೇ ಮಾಹಿತಿಯನ್ನು ಪಡೆಯಲು ಸಾಧ್ಯವಾಗಿಲ್ಲ.

ಗಣೇಶ ಶಿಲ್ಪಗಳು

ಭಾರತದ ದೇವತೆಗಳಲ್ಲಿ ಗಣಪತಿಯೇ ಬಹುವ್ಯಾಪಕವಾಗಿ ಬಹುಸಂಖ್ಯಾತರಿಂದ

೩೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೬೯


ಸಪ್ತಮಾತೃಕೆ ಶಿಲ್ಪಗಳು



ಶಿಲ್ಪ–೧. ಹುಲಿಗೆಮ್ಮನಕೊಳ್ಳ



ಶಿಲ್ಪ–೨. ರಾವಳಫಡಿ ಗುಹಾಲಯ, ಐಹೊಳೆ



ಶಿಲ್ಪ–೩. ಅಡಕೇಶ್ವರ ದೇವಾಲಯ, ಮಹಾಕೂಟ



ಶಿಲ್ಪ–೪. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ

ಸಪ್ತಮಾತೃಕೆ ಶಿಲ್ಪಗಳು



ಶಿಲ್ಪ-೫. ಸಿದ್ದನಕೊಳ್ಳ



ಶಿಲ್ಪ-೩. ರಾಮಲಿಂಗೇಶ್ವರ ದೇವಾಲಯ, ನೀಲಗುಂದ





ಶಿಲ್ಪ-೨. ಪ್ರಾಚ್ಯವಸ್ತು ಸಂಗ್ರಹಾಲಯ ಆವರಣ, ಐಹೊಳೆ

ಪೂಜೆಯನ್ನು ಕೈಗೊಳ್ಳುತ್ತಿರುವ ದೇವ, ಇಂತಿದ್ದರೂಸ ಗಣಪತಿಯ ವ್ಯಾಪ್ತಿಯು ಜಾನಪದ ನೆಲೆಯಲ್ಲಿರುವಷ್ಟೇ ಭದ್ರವಾಗಿ ಶಾಸ್ತ್ರಸಾಹಿತ್ಯದಲ್ಲೂ ಇದೆ. ಗಣಪತಿಯ ಆರಾಧನೆಯು ತುಂಬಾ ಪ್ರಾಚೀನ ಕಾಲದಿಂದಲೂ ನಡೆದು ಬರುತ್ತಿದೆ. ಈ ಕಾಲವು ವೇದಪೂರ್ವವೆಂದರೂ ಸರಿಯಾದೀತು. ಅಂದಿನಿಂದ ವರ್ತಮಾನ ಕಾಲದ ತನಕ ನಿರಂತರವಾಗಿ ಗಣಪತಿಯು ಸಾಗಿಬರುತ್ತಿದ್ದಾನೆ. ಗಣಪತಿಯ ಪುಟ್ಟ ದೇವಾಲಯವೊಂದು ಇಲ್ಲದ ಕುಗ್ರಾಮವು ಭಾರತದಲ್ಲಿಯೇ ಇಲ್ಲ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯ ಮಾತಾಗುವುದಿಲ್ಲ. ಇನ್ನೂ ಊರು, ನಗರಗಳಲ್ಲಿ ಹಲವು ಗಣಪತಿಯ ದೇವಾಲಯಗಳಿರುವುದು ತೀರಾ ಸಾಧಾರಣವಾದ ಸಂಗತಿ.

ಗಣಪತಿಯು ಭಾರತದಲ್ಲಿ ಮಾತ್ರವೇ ಪ್ರಖ್ಯಾತನಲ್ಲ. ನೆರೆಯ ದೇಶಗಳಲ್ಲೂ ಜನಪ್ರಿಯನೆ, ನೇಪಾಳ, ಟಿಬೆಟ್, ಬರ್ಮಾ, ಶ್ರೀಲಂಕಾ, ಜಾವಾ, ಇಂಡೋನೇಷಿಯಾ, ಚೀನಾ ಮತ್ತು ಜಪಾನ್‌ಗಳಲ್ಲೂ ಗಣಪತಿಯ ವಿವಿಧ ರೂಪಗಳು ಜನಪ್ರಿಯವಾಗಿವೆ. ಇದಕ್ಕೆ ಗಣಪತಿಯ ರೂಪವೇ ಒಂದು ಕಾರಣವಾದರೆ, ಗಣಪತಿಯ ರೂಪದೊಂದಿಗೆ ಸ್ಫುರಿಸುವ ಸಂಕೇತಗಳು ಇನ್ನೊಂದು ಕಾರಣ. ಪುರಾಣಗಳಲ್ಲಿ ತನ್ನ ಬಗೆಯ ಕಥೆಗಳಿಂದ ಗಣಪತಿಯು ಪ್ರಖ್ಯಾತನೇ ಆಗಿದ್ದು, ಈ ಪುರಾಣಗಳು ಮತ್ತು ಅಲ್ಲಿ ಹೇಳಿರುವ ಕಥೆಗಳು ಬಹುಪಾಲು ಮಧ್ಯಕಾಲೀನ ಇತಿಹಾಸಕ್ಕೆ ಸೇರಿದವು, ಆದ್ದರಿಂದ ಪುರಾಣಗಳಲ್ಲಿ ಗಣಪತಿಯ ಬಗ್ಗೆ ಅನೇಕ ನಂಬಿಕೆಗಳು, ಕಥೆಗಳು ಲಭಿಸುತ್ತವೆ. ಬೇರೆ ಬೇರೆ ಪುರಾಣಗಳು ಈತನು ರೂಪುಗೊಂಡ ಬಗೆಯನ್ನು ಬೇರೆ ಬೇರೆ ರೀತಿಯಾಗಿ ವರ್ಣಿಸುತ್ತವೆ.

ಶಿವಪುರಾಣವು ಈ ರೀತಿಯಾಗಿ ವಿವರಿಸುತ್ತದೆ: ವಿಘ್ನೇಶ್ವರನ ಜನನವಾದದ್ದು ಹೀಗೆ, ನಂದಿ ಮತ್ತು ಭೃಂಗಿಗಳು ಪಾರ್ವತಿದೇವಿಯ ಸೇವಕರಾಗಿದ್ದರೂ ಪ್ರತ್ಯೇಕವಾದ ಸೇವಕನೊಬ್ಬನನ್ನು ದೇವಿಯು ಸೃಷ್ಟಿಸಿಬೇಕಾದುದು ಅಗತ್ಯವೆಂದು ಜಯ-ವಿಜಯರು ಅರಿಕೆ ಮಾಡಿಕೊಂಡರು. ಆದರೆ ಪಾರ್ವತಿದೇವಿಯು ಕೂಡಲೇ ಈ ಮಾತನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ತನ್ನ ವಾಸದ ಒಳಭಾಗದಲ್ಲಿ ಸ್ನಾನ ಮಾಡುತ್ತಿರುವ ಸಂದರ್ಭದಲ್ಲಿ ಶಿವನು ಒಮ್ಮೆ ಪ್ರವೇಶಿಸಿದಾಗ ತನಗೆ ಪ್ರತ್ಯೇಕವಾದ ಸೇವಕನೊಬ್ಬನ ಅವಶ್ಯಕತೆಯನ್ನು ಆಕೆ ಮನಗಂಡಳು. ಶಿವನು ಪ್ರವೇಶಿಸಿದಂತೆಯೇ ಬೇರೆಯಾದರೂ ಸುಲಭವಾಗಿ ಹಾಗೆಯೇ ಪ್ರವೇಶಿಸಬಹುದಲ್ಲ. ಅದನ್ನು ತಪ್ಪಿಸಬೇಕೆಂದು ತೀರ್ಮಾನಿಸಿ ತನ್ನ ಮೈಯಿಂದ ಕೊಳೆಯನ್ನು ತೆಗೆದು ಅದರಿಂದ ಸುಂದರನಾದ ಬಾಲಕನನ್ನು ಸೃಷ್ಟಿಸಿದಳು.

ಅಂತಃಪುರವನ್ನು ತನ್ನ ಅಪ್ಪಣೆ ಇಲ್ಲದೇ ಯಾರೇ ಆದರೂ ಪ್ರವೇಶಿಸದಂತೆ ತಡೆಯಬೇಕೆಂದು ತಿಳಿಸಿದಳು. ಶಿವನು ಮೊದಲಿಗೆ ಅನುನಯದಿಂದ ಕೋರಿದ, ನಂತರ ಹೆದರಿಸಿದ, ಆದರೆ ಬಾಲಕ ಬಗ್ಗಲಿಲ್ಲ. ಕೆರಳಿದ ಶಂಕರನು ತಾನು ಬಲ ಪ್ರಯೋಗಿಸಿ ಅಂತಃಪುರವನ್ನು ಪ್ರವೇಶಿಸಲು ತೀರ್ಮಾನಿಸುತ್ತಲೇ ದ್ವಾರಪಾಲಕನಾಗಿದ್ದ ಬಾಲನೇ ಶಿವನನ್ನು

[illegible]



ತನ್ನ ದಡದಿಂದ ಬಡಿದ, ಈ ವರ್ತನೆಗೆ ಶಿವನು ಕೃದ್ಧನಾಗಿ ತನ್ನ ಭೂತಗಣಗಳನ್ನು ದ್ವಾರಪಾಲಕನ ವಿರುದ್ಧ ಹೋರಾಡಲು ಹೇಳಿದ. ಇವರೆಲ್ಲರೂ ಸೋತು ಓಡಬೇಕಾಯಿತು. ಶಿವನ ಪರವಾಗಿ ವಿಷ್ಣು ಮತ್ತು ಸುಬ್ರಹ್ಮಣ್ಯರು ಯುದ್ಧವನ್ನು ಪ್ರಾರಂಭಿಸಿದರು.

ಏಕಾಂಗಿಯಾಗಿ ಹೋರಾಡುತ್ತಿರುವ ತನ್ನ ಬಲವನ್ನು ಗಮನಿಸಿದ ಪಾರ್ವತಿಯು ಇಬ್ಬರು ಉಪದೇವತೆಗಳನ್ನು ವಿಘ್ನೇಶ್ವರನ ನೆರವಿಗೆ ಕಳುಹಿಸಿಕೊಟ್ಟಳು. ಅವರು ವಿಘ್ನೇಶ್ವರನತ್ತ ಗುರಿ ಇರಿಸಿದ ಎಲ್ಲಾ ಆಯುಧಗಳನ್ನು ವಿಫಲಗೊಳಿಸತೊಡಗಿದ, ತಾನು ಸೋಲಬೇಕಾಗುತ್ತದೆ ಎಂಬುದನ್ನು ಗ್ರಹಿಸಿದ ವಿಷ್ಣು ತನ್ನ ಮಾಯೆಯಿಂದ ಯುದ್ಧ ಮುಗಿದಿದೆ ಎನ್ನುವಂತೆ ಆ ಪರಿಸರದಲ್ಲಿ ಯಾರೂ ಇಲ್ಲ ಎನ್ನುವ ಭ್ರಮೆಯನ್ನು ಮೂಡಿಸಿದ. ಉಪದೇವತೆಗಳಿಬ್ಬರೂ ತಾವು ಬಂದಿದ್ದ ಉದ್ದೇಶವು ನೆರವೇರಿತು ಎಂದು ಭಾವಿಸಿ, ಹಿಂತಿರುಗಿದರು. ಏಕಾಂಗಿಯಾಗಿರುವ ವಿಘ್ನೇಶ್ವರನ ತಲೆಯನ್ನು ಶಿವನೇ ಕತ್ತರಿಸಿದ, ನಾರದನು ಈ ವಿಷಯವನ್ನು ಪಾರ್ವತಿಗೆ ತಿಳಿಸಿದಾಗ ಆಕೆ ಕೋಪಗೊಂಡು ತನ್ನ ಮಗನ ವಿರುದ್ಧವಾಗಿ ಹೋರಾಡಿದ ಎಲ್ಲರನ್ನು ಶಿಕ್ಷಿಸಲು ಸಾವಿರಾರು ದೇವಿಯರನ್ನು ಸೃಷ್ಟಿಸಿದಳು.

ಈ ದೇವಿಯರು ದೇವತೆಗಳನ್ನು ಕಾಡತೊಡಗಿದರು. ಪೀಡಿತರಾದ ದೇವತೆಗಳನ್ನು ರಕ್ಷಿಸಬೇಕೆಂದು ನಾರದ ಮತ್ತು ಇತರ ಮುನಿಗಳೂ ಪಾರ್ವತಿ ದೇವಿಯನ್ನು ಪ್ರಾರ್ಥಿಸಿದಾಗ, ಮಗನನ್ನು ಬದುಕಿಸಿದರೆ ಈಗ ಕಾಡುತ್ತಿರುವ ದೇವಿಯರನ್ನು ಹಿಂದಕ್ಕೆ ಪಡೆಯುವುದಾಗಿ ಪಾರ್ವತಿದೇವಿ ಹೇಳಿದಳು.ಈ ಮಾತಿಗೆ ಒಪ್ಪಿದ ಶಿವನು ದೇವತೆಗಳಿಗೆ ಉತ್ತರದ ಕಡೆಗೆ ತಲೆಮಾಡಿಕೊಂಡು ಮಲಗಿರುವ ಮೊದಲ ಪ್ರಾಣಿಯನ್ನು ಕಂಡಕೂಡಲೇ ಅದರ ತಲೆ ಕತ್ತರಿಸಿ ತರಬೇಕೆಂದು ಅಜ್ಞಾಪಿಸಿ ಕಳುಹಿಸಿದ. ಈ ರೀತಿ ಹುಡುಕುತ್ತಾ ಹೊರಟ ದೇವತೆಗಳು ಉತ್ತರ ದಿಕ್ಕಿಗೆ ತಲೆ ಇರಿಸಿ ಮಲಗಿದ್ದ ಆನೆಯನ್ನು ಕಂಡು ಅದರ ತಲೆಯನ್ನು ಕತ್ತರಿಸಿ ತಂದರು. ಆನೆಯ ಮುಖವಿರುವ ಈ ದೇವ ಗಜಾನನ ಎಂದು ಕರೆಯಲ್ಪಟ್ಟ. ಆ ಆನೆಗೆ ಒಂದೇ ಒಂದು ದಂತವಿತ್ತು. ಆದ್ದರಿಂದ ಇಂದೂ ಗಣಪತಿಯ ಮುಖದಲ್ಲಿ ಒಂದೇ ದಂತವಿರುತ್ತದೆ. ಇದರಿಂದ ಆತನನ್ನು ಏಕದಂತನೆಂದೂ ಕರೆಯುತ್ತಾರೆ.

ಆನೆಯ ತಲೆಯನ್ನು ವಿಘ್ನೇಶ್ವರನ ಮುಂಡಕ್ಕೆ ಸೇರಿಸಿದಾಗ ಆತನು ಬದುಕಿದ. ವಿಘ್ನೇಶ್ವರನು ತನ್ನ ತಾಯಿಯೊಂದಿಗೆ ಶಿವನ ಬಳಿಗೆ ಹೋಗಿ ತನ್ನ ಕೃತ್ಯಕ್ಕೆ ಕ್ಷಮೆ ಕೇಳಿದ. ಶಿವನು ಸಂಪ್ರೀತನಾಗಿ ಶಿವಗಣಗಳ ನೇತೃತ್ವವನ್ನು ಆತನಿಗೆ ವಹಿಸಿ ಅಂದಿನಿಂದ ಗಣಪತಿ ಎಂಬ ಬಿರುದನ್ನು ಕೊಟ್ಟ. ಹೀಗೆ ವಿಘ್ನೇಶ್ವರ, ಗಜಾನನ, ಏಕದಂತ ಮತ್ತು ಗಣಪತಿ ಎಂಬ ಹೆಸರುಗಳನ್ನು ಪಡೆದುಕೊಂಡನು.[೩೭] ಆದ್ದರಿಂದ ಈ ಹೆಸರುಗಳು ಇಗಲೂ ಬಳಕೆಯಲ್ಲಿವೆ. ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಗಳ ವಿಭಿನ್ನ ವಸ್ತುಗಳಲ್ಲಿ ಗಣಪತಿ ಅಥವಾ ಗಣೇಶನ

೩೭. ಡಾ. ಜಿ. ಜ್ಞಾನಾನಂದ : ಪ್ರತಿಮಾಲಕ್ಷಣ, ಗಣಪತಿ-ಸ್ಕಂದ-ಶಾಸ್ತ್ರ-ಬ್ರಹ್ಮ, ಪುಟ - ೧-೩

ಶಿಲ್ಪಗಳಿಗೂ ಸ್ಥಾನವಿದೆ. ವಿಭಿನ್ನ ರೀತಿಯಲ್ಲಿ ರಚನೆಯಾಗಿರುವ ಈ ಶಿಲ್ಪಗಳು ಶೈವ ಮತ್ತು ವೈಷ್ಣವ ಶಿಲ್ಪ ಪರಂಪರೆಗಳೆರಡರಲ್ಲೂ ಕಂಡುಬರುತ್ತವೆ. ಬಾದಾಮಿಯ ಶೈವ ಗುಹೆಯಲ್ಲಿ ಗಣಪತಿಯು ಸುಖಾಸೀನನಾಗಿ ಕುಳಿತಿರುವುದು ಕಂಡುಬರುತ್ತದೆ.

'ಮಹಿಷಮರ್ದಿನಿಯ ಮಂಟಪದ ಉತ್ತರ ಗೋಡೆಯ, ಅಂದರೆ ಎದುರಿಗೆ ಗಣೇಶನ ಶಿಲ್ಪವಿದೆ. ದ್ವಿಭುಜ ಗಣೇಶ ಸುಖಾಸನದಲ್ಲಿ ಆಸೀನನಾಗಿರುವನು. ಆದರೆ ಮುಖ ಮರಿಯಾನೆಯದು ಹಾಗೂ ದೇಹದ ಪ್ರಮಾಣ ಬಾಲಕನದು. ಇದರಿಂದ ಇದು ಬಾಲ ಗಣೇಶನ ಶಿಲ್ಪವಿರಬೇಕು.[೩೮] ಇದೇ ಗುಹಾಲಯದ ನಟರಾಜ ಶಿಲ್ಪದಲ್ಲಿ ನಟರಾಜನ ಎಡಭಾಗದಲ್ಲಿ ನಟರಾಜನ ನೃತ್ಯಕ್ಕೆ ಕೈಯಲ್ಲಿ ತಾಳಹಾಕುತ್ತ ನಿಂತಿರುವ ಗಣೇಶನ ಶಿಲ್ಪವೂ ಇದೆ. ಇದು ಬಿಡಿಶಿಲ್ಪವಲ್ಲ, ಬದಲಾಗಿ ಕಥಾವಸ್ತುವಿನಲ್ಲಿ ಒಂದು ಪಾತ್ರವಾಗಿ ಕಾಣಿಸಿಕೊಳ್ಳುತ್ತಾನೆ. ಇದಲ್ಲದೆ ರಾವಳಫಡಿಯ ಗುಹಾಲಯದಲ್ಲಿ, ಪಟ್ಟದಕಲ್ಲಿನಲ್ಲಿ, ಬಾದಾಮಿಯ ಮೂರನೆಯ ಗುಹೆಯಲ್ಲಿ ಗಣೇಶನ ಶಿಲ್ಪಗಳಿವೆ.

ಶಿಲ್ಪ –೧

ಬಾದಾಮಿಯ ಮೊದಲ ಶೈವ ಗುಹಾಲಯದ ಉಪಗುಹೆಯಲ್ಲಿನ ಶಿಲ್ಪವಾದ 'ಬಾದಾಮಿಯ ಸುಖಾಸೀನ ಗಣಪತಿ'ಯ ಶಿಲ್ಪವು ವೈಶಿಷ್ಟ್ಯಪೂರ್ಣವಾಗಿದೆ. ಆತನಿಗೆ ಎರಡು ಕೈಗಳಿವೆ. ತಲೆಯ ಮೇಲೆ ಕಿರೀಟವಿಲ್ಲ, ಅದರ ಬದಲು ಕಮಲ ಪುಷ್ಪವಿದೆ. ಗಣೇಶನ ಕಿವಿ, ತಲೆ, ಸೊಂಡಿಲು ನಿರ್ಮಿತಿಯಲ್ಲಿ ಅಂಗಗಳ ವಾಸ್ತವಿಕ ಮಾಟವಿದೆ. ಬಲಗೈಯಲ್ಲಿ ಮುರಿದ ದಂತ(ಕಂದಮೂಲ?)ವಿದೆ. ಎಡಗೈಯಲ್ಲಿ ಮೋದಕಗಳಿಂದ ತುಂಬಿದ ಪಾತ್ರೆ ಇದೆ. ಮಾಲೆಯಂತಹ ಯಜ್ಞೋಪವೀತವಿದೆ.[೩೯] ಗಣಪತಿಯ ಮುಖವು ದೊಡ್ಡದಾಗಿದೆ. ದೇಹವು ಕೂಡಾ ದೊಡ್ಡಗಾತ್ರದಲ್ಲಿದ್ದು ಉಬ್ಬು ಹೊಟ್ಟೆಯ ಬದಲಾಗಿ ಸಮನಾಗಿದೆ.

ಅಗಲವಾದ ಕಿವಿಗಳು, ತಲೆಯ ಮೇಲೆ ಕಿರೀಟದ ಬದಲಾಗಿ ಸಣ್ಣದಾದ ಪದ್ಮ ಮುಕುಟವಿದೆ. ಕೈಗಳು ಸಣ್ಣದಾಗಿದ್ದು ಬಲಗೈಯಲ್ಲಿ ಮುರಿದ ದಂತವನ್ನು ಹಿಡಿದುಕೊಂಡಿದ್ದರೆ ಎಡಗೈಯಲ್ಲಿ ಮೋದಕಗಳಿಂದ ತುಂಬಿದ ತಟ್ಟೆಯನ್ನು ಹಿಡಿದಿದ್ದಾನೆ. ಕಾಲುಗಳು ಸಣ್ಣವಾಗಿದ್ದು ಸುಖಾಸೀನನಾಗಿದ್ದಾನೆ. ಯಜ್ಞೋಪವೀತವು ಸಣ್ಣದಾಗಿದ್ದು ಮುತ್ತುಗಳಿಂದ ಪೋಣಿಸಿದಂತಿದೆ. ಕುತ್ತಿಗೆಯಲ್ಲಿ ಎರಡು ಹಾರಗಳಿದ್ದು ಮುತ್ತಿನ ಕಂಠಾಭರಣಗಳನ್ನು ತೊಟ್ಟಿದ್ದಾನೆ. ಶಿಲ್ಪದ ಕೆತ್ತನೆಯಲ್ಲಿ ಸಾಮರಸ್ಯವನ್ನು ಶಿಲ್ಪಿಗಳು ಇಲ್ಲಿ ತೋರಿಸಿದ್ದಾರೆ. ಉಬ್ಬಿದ ಕಣ್ಣುಗುಡ್ಡೆಗಳು ಶಿಲ್ಪದ ಮುಖಭಾವಕ್ಕೆ ಶೋಭೆಯನ್ನು ನೀಡಿವೆ. ಕಾಲುಗಳಲ್ಲಿ ಯಾವುದೇ ಆಭರಣಗಳಿಲ್ಲ. ಉಳಿದಂತೆ ಶಿಲ್ಪವು ಕಲಾತ್ಮಕವಾಗಿದ್ದು ದೈವಿಕತೆಯ ಜೊತೆಗೆ ಹಾಸ್ಯದ ಭಾವವುಂಟಾಗುತ್ತದೆ.

---

೩೮. ಆನಂದ ಕೆ. ಪೂಜಾರ : ಐತಿಹಾಸಿಕ ಬಾದಾಮಿ ಪರಿಚಯ, ಪುಟ – ೨೯–೩೦

೩೯. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೩

ಶಿಲ್ಪ –೨

ಶೈವ ಗುಹಾಲಯದ ನಟರಾಜನ ಪಕ್ಕದಲ್ಲಿ ನಿಂತುಕೊಂಡಿರುವ ಗಣೇಶನ ಶಿಲ್ಪವು ಇದಕ್ಕಿಂತ ಭಿನ್ನವಾಗಿದ್ದು ಕುತೂಹಲವನ್ನುಂಟುಮಾಡುತ್ತದೆ. ಇಲ್ಲಿ ನಟರಾಜನು ನಾಟ್ಯಭಂಗಿಯಲ್ಲಿದ್ದು ಗಣೇಶನು ನಿಂತುಕೊಂಡು ನಟರಾಜನ ಜೊತೆಯಲ್ಲಿ ನೃತ್ಯಮಾಡುತ್ತ ತಾಳಹಾಕುತ್ತ ನಟರಾಜನಿಗೆ ಪ್ರೇರೇಪಣೆಯನ್ನು ನೀಡುತ್ತಿರುವಂತಿದೆ. ಆತನ ಸೊಂಡಿಲು ಬಲಭಾಗಕ್ಕೆ ತಿರುಗಿದ್ದು ಎರಡು ಕೈಗಳು ಗಾಳಿಯಲ್ಲಿವೆ. ತಲೆಯಲ್ಲಿ ಕಿರೀಟವಿಲ್ಲ. ಅಗಲವಾದ ಕಿವಿಗಳು, ಸಣ್ಣದಾದ ಕೈಕಾಲುಗಳು, ದೊಡ್ಡದಾದ ಮುಖ, ಇವು ಈ ಶಿಲ್ಪದ ವಿಶೇಷತೆಗಳು. ಇಲ್ಲಿ ಗಣೇಶನ ತಲೆಯ ಹಿಂಭಾಗದಲ್ಲಿ ಅರ್ಧವೃತ್ತಾಕಾರವಾಗಿ ಪ್ರಭಾಚಕ್ರವಿರುವುದು ವಿಶೇಷ. ದೇಹದಲ್ಲಿ ವಿಶೇಷ ಆಭರಣಗಳಿಲ್ಲದಿದ್ದರೂ ಒಂದು ಕಂಠಹಾರವಿದೆ, ಮುಂಗೈಯಲ್ಲಿ ಕಡಗದ ರೀತಿಯ ಕೆತ್ತನೆಯಿದೆ.

ಇಲ್ಲಿ ಗಣೇಶನು ಕಚ್ಚೆಪಂಚೆ ಧರಿಸಿದಂತೆ ಕಂಡುಬರುತ್ತಿದ್ದು ಆತನ ಪಂಚೆಯ ಚುಂಗನ್ನು ಗಮನಿಸಬಹುದು. ಈ ಶಿಲ್ಪದಲ್ಲಿ ಆತನ ದೈವಿಕತ್ವಕ್ಕೆ ಮಹತ್ವ ನೀಡದೆ ಒಬ್ಬ ಬಾಲಕನಂತೆ ತೋರಿಸಿರುವುದು ವಿಶೇಷ. ಇದು ಬಾಲ ನಾಟ್ಯಗಣೇಶನ ಶಿಲ್ಪವಾಗಿದ್ದು ಬಹುಶಃ ಮುಂದಿನ ಎಲ್ಲ ಬಾಲಗಣೇಶನ ಶಿಲ್ಪಗಳಿಗೆ ಇದೇ ಪ್ರೇರಣೆಯಾಗಿರಬಹುದು. ಸುಂದರವಾಗಿ ಕೆತ್ತಲಾಗಿರುವ ಈ ಗಣೇಶನ ಶಿಲ್ಪವನ್ನು ನೋಡುತ್ತಿದ್ದರೆ ಹಾಸ್ಯರಸವು ಅನುಭವಕ್ಕೆ ಬರುತ್ತದೆ. ಇಲ್ಲಿ ಗಣೇಶನಿಗೆ ಯಜ್ಞೋಪವೀತವಿಲ್ಲ, ಡೊಳ್ಳುಹೊಟ್ಟೆಯಿದೆ. ಈತನು ಬಾಲಕನೆಂದು ತೋರಿಸುವ ಮುಗ್ಧ ಮುಖಭಾವವನ್ನು ಕೂಡಾ ತೋರಿಸುವಲ್ಲಿ ಶಿಲ್ಪಿಗಳು ಯಶಸ್ವಿಯಾಗಿದ್ದಾರೆ.

ಶಿಲ್ಪ –೩

ಶೈವ ಗುಹಾಲಯದ ಕಂಬವೊಂದರ ಮೇಲ್ತುದಿಯಲ್ಲಿ ಕೆತ್ತಲಾಗಿರುವ ಪರಿಪೂರ್ಣ ಗಣೇಶನ ಶಿಲ್ಪವೊಂದಿದೆ. ತೀರ ಸಣ್ಣಗಾತ್ರದ ಈ ಶಿಲ್ಪವನ್ನು ಇಲ್ಲಿ ನೋಡಲೇಬೇಕು. ಗಣೇಶನು ಕುಳಿತಿರುವ ಭಂಗಿಯಲ್ಲಿರುವ ಈ ಶಿಲ್ಪ ಆರಾಧನಾ ಮೂರ್ತಿಯ ಕೆತ್ತನೆಯಾಗಿದೆ. ನಾಲ್ಕು ಕೈಗಳನ್ನು ಹೊಂದಿರುವ ಈ ಗಣೇಶನು ಎಡಗೈಯಲ್ಲಿ ಪರಶುವನ್ನು, ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದಾನೆ. ತಲೆಯಲ್ಲಿ ಕಿರೀಟವಾಗಲೀ ಅಥವಾ ಜಟೆಯಾಗಲೀ ಇಲ್ಲ ಅಗಲವಾದ ಕಿವಿಗಳು, ದೊಡ್ಡಗಾತ್ರದ ತಲೆ, ಎಡಭಾಗಕ್ಕೆ ತಿರುಗಿದ ಸೊಂಡಿಲು, ಒಂದು ಕೈಯಲ್ಲಿ ಮೋದಕಪಾತ್ರೆ ಇತ್ಯಾದಿಗಳಿವೆ. ಇದು ವಯಸ್ಕ ಗಣಪತಿಯ ಶಿಲ್ಪವಾಗಿದ್ದು ದೊಡ್ಡಗಾತ್ರದ ಹೊಟ್ಟೆಯ ಭಾರ ತಡೆಯದೆ ಕುಳಿತಿರುವಂತೆ ಸುಖಾಸೀನನಾಗಿದ್ದಾನೆ. ಹೊಟ್ಟೆಯ ಸುತ್ತಲೂ ಭದ್ರವಾಗಿ ಕಟ್ಟಲಾದ ಸೊಂಟಪಟ್ಟಿಯಿದ್ದು ಮುತ್ತಿನ ಹರಳುಗಳ ಕೆತ್ತನೆಯಿದೆ. ಶಿಲ್ಪದ ಸುತ್ತಲೂ ಸಣ್ಣಗಾತ್ರದಲ್ಲಿ ಸುರುಳಿ ಕೆತ್ತನೆಗಳಿವೆ. ಶಿಲ್ಪದ ಸುತ್ತಲೂ ಚೌಕಟ್ಟನ್ನು ಕೆತ್ತಲಾಗಿದೆ. ಶಿಲ್ಪದ ಕೆತ್ತನೆಯು




ಸುಂದರವಾಗಿದ್ದು ಮೊದಲು ನೋಡಿದ ಬಾಲಗಣೇಶನ ಶಿಲ್ಪಗಳಂತಿಲ್ಲದೆ ಗಂಭೀರ ವದನನಾಗಿದ್ದಾನೆ. ಈ ಶಿಲ್ಪವನ್ನು ಗಮನಿಸಿದರೆ ಬಾದಾಮಿಯ ಚಾಲುಕ್ಯ ಶಿಲ್ಪಿಗಳಿಗೆ ಗಣೇಶನ ಶಿಲ್ಪದ ರಚನೆ ಕುರಿತು ಪ್ರತಿಮಾ ಶಾಸ್ತ್ರದ ಪೂರ್ಣ ಪರಿಚಯವಿದ್ದಂತೆ ಭಾಸವಾಗುತ್ತದೆ. ಇದೊಂದೇ ಗುಹೆಯಲ್ಲಿ ನಾವು ಮೂರು ವಿಭಿನ್ನ ರೀತಿಗಳ ಗಣೇಶನ ಶಿಲ್ಪದ ವೈವಿಧ್ಯವನ್ನು ಕಾಣಬಹುದಾಗಿರುವುದು ಗಮನಿಸಬೇಕಾಗಿರುವ ಅಂಶವಾಗಿದೆ. ಬಾದಾಮಿಯ ಮೂರನೆಯ ಗುಹೆಯಲ್ಲಿಯ ಗಣೇಶನ ಶಿಲ್ಪವು ವೈಶಿಷ್ಟ್ಯಪೂರ್ಣವಾಗಿದೆ. ಇಲ್ಲಿನ ಗುಹಾಲಯದ ಮೂರನೆಯ ಅಂಕಣದ ಛತ್ತಿನಲ್ಲಿ ಸಣ್ಣದಾಗಿರುವ ಗಣೇಶನ ಶಿಲ್ಪವೊಂದನ್ನು ಕೆತ್ತಲಾಗಿದೆ. ಇಲ್ಲಿರುವ ಗಣೇಶನು ದ್ವಿಬಾಹುವಾಗಿದ್ದು ಮೊದಲನೆಯ ಗುಹಾಲಯದ ಶಿಲ್ಪಕ್ಕೆ ಹೋಲಿಕೆಯಿದೆ. ಇದೂ ಕೂಡಾ ನೃತ್ಯಗಣಪತಿ. ಈ ಶಿಲ್ಪದಲ್ಲಿ ಗಣೇಶನನ್ನು ನಾಟ್ಯವಾಡುತ್ತಿರುವಂತೆ ಕೆತ್ತಲಾಗಿದೆ.

ಶಿಲ್ಪ –೪

ಬಾದಾಮಿಯ ಭೂತನಾಥ ದೇವಾಲಯದ ಸಮುಚ್ಚಯದಲ್ಲಿ (ಪಂಚಲಿಂಗ ಘಡಿ) ದೊಡ್ಡ ಬಂಡೆಯ ಮೇಲೆ ಒಂದು ಗಣೇಶನ ವಿಗ್ರಹವಿರುವುದನ್ನು ಕಾಣಬಹುದು. ಆದರೆ ಇದು ನಂತರದ ಕಾಲದಲ್ಲಿ ಅಂದರೆ ಬಹುಶಃ ಕಲ್ಯಾಣ ಚಾಲುಕ್ಯರ ಕಾಲದ ಕೆತ್ತನೆಯಾಗಿರಬಹುದು. ಇಲ್ಲಿರುವ ಶಿವ, ವಿಷ್ಣು, ವರಾಹಾವತಾರಿ ವಿಷ್ಣು, ಮಹಿಷಾಸುರಮರ್ದಿನಿ ಶಿಲ್ಪಗಳ ಜೊತೆಯಲ್ಲಿ ಬಂಡೆಯ ಮೇಲೆ ಕೆತ್ತಲಾಗಿರುವ ಈ ಶಿಲ್ಪವೂ ಕಲಾಪೂರ್ಣವಾಗಿದೆ. ಈ ಗಣೇಶನ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು ತಲೆಯ ಮೇಲೆ ಜಟೆಯ ರೀತಿಯ ಸಣ್ಣದಾದ ಕಿರೀಟವಿದೆ. ಕಿರೀಟದಲ್ಲಿ ವಿನ್ಯಾಸಪೂರ್ಣವಾದ ಕೆತ್ತನೆಯಿದೆ. ಅಗಲವಾದ ಕಿವಿಗಳು, ಎಡಭಾಗಕ್ಕೆ ತಿರುಗಿದ ಸೊಂಡಿಲು, ಚೌಕಾಕಾರದ ದೇಹರಚನೆಯಿದೆ. ಒಂದು ಕೈಯಲ್ಲಿ ಪಾಶ, ಇನ್ನೊಂದರಲ್ಲಿ ತ್ರಿಶೂಲ ಹಿಡಿದಿದ್ದು ಕೆಳಗಿನ ಎಡಗೈಯಲ್ಲಿ ಉಂಡೆಯನ್ನು ಹಿಡಿದಿದ್ದಾನೆ. ಇಲ್ಲಿನ ಶಿಲ್ಪದಲ್ಲಿ ಮೋದಕವನ್ನು ತಟ್ಟೆಯಲ್ಲಿ ಹಿಡಿಯದೆ ದೊಡ್ಡದಾದ ಒಂದು ಉಂಡೆಯನ್ನು ಹಿಡಿದಿರುವುದು ಗಮನಾರ್ಹ.

ಎಡಗಾಲನ್ನು ಮಡಚಿಕೊಂಡಿದ್ದು, ಬಲಗಾಲನ್ನು ಮಡಚಿ ನೆಲಕ್ಕೆ ಊರಲಾಗಿದ್ದು ಸುಖಾಸನದಲ್ಲಿ ಕುಳಿತಿದ್ದಾನೆ. ಶಿಲ್ಪವು ಬಹಳಷ್ಟು ಸವೆದು ಹೋಗಿರುವುದರಿಂದ ಆಭರಣಗಳ ವಿನ್ಯಾಸವನ್ನು ಗುರುತಿಸಲು ಕಷ್ಟವಾಗಿದೆ. ಬಲಗೈಯ ಕೆಳಗಿನ ಭಾಗದಲ್ಲಿ ದಂತದ ತುಂಡನ್ನು ಹಿಡಿಯಲಾಗಿದೆ. ಹೊಟ್ಟೆಗೆ ಬಹುಶಃ ಹಾವಿನ ಬಂಧವಿದೆ. ಶಿಲ್ಪದ ಎರಡು ಸುತ್ತಲೂ ಕಂಬದ ರಚನೆಯಿದ್ದು ಇದು ದ್ವಿಮಾನದಲ್ಲಿರು ಶಿಲ್ಪಕ್ಕೆ ಚೌಕಟ್ಟನ್ನು ಒದಗಿಸಿದೆ. ಒಟ್ಟಿನಲ್ಲಿ ಈ ಶಿಲ್ಪವು ಸುಂದರ ರಚನೆಯಾಗಿದ್ದು ಬಹುಶಃ ಇದು ನಂತರದ ಕಾಲದ ರಚನೆಯಾಗಿರುವುದರಿಂದ ಶಿಲ್ಪದ ರಚನೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಿರುವುದನ್ನು ಗಮನಿಸಬಹುದು.



ಶಿಲ್ಪ –೫

ಐಹೊಳೆಯ ರಾವಳಫಡಿ ಗುಹಾಲಯದಲ್ಲಿ ಗಣೇಶನ ಸುಂದರವಾದ ಶಿಲ್ಪವೊಂದನ್ನು ಕಾಣಬಹುದು. ಶಿವ-ನಟರಾಜನ ಪಕ್ಕದಲ್ಲಿ ನಾಟ್ಯಮಾಡುತ್ತಿರುವ ಗಣೇಶನ ವಿಗ್ರಹವಿದು. ಶಿವನು ಇಲ್ಲಿ ನಾಟ್ಯ ಮಾಡುತ್ತಿರುವ ಸಂದರ್ಭದಲ್ಲಿ ಅವನ ಪುತ್ರನಾದ ಗಣೇಶನು ಆತನ ನೃತ್ಯಕ್ಕೆ ತಾಳಹಾಕುತ್ತ ತಾನೂ ನಾಟ್ಯ ಮಾಡುತ್ತಿರುವಂತಿದೆ. ಬಾದಾಮಿಯ ಗುಹಾಲಯದಲ್ಲಿಯೂ ಇದೇ ರೀತಿಯ ಶಿಲ್ಪವಿದೆಯಾದರೂ ಅಲ್ಲಿನ ಶಿಲ್ಪಕ್ಕಿಂತ ಇದು ಭಿನ್ನವಾಗಿದೆ. ಅಲ್ಲಿ ಗಣೇಶನು ಚಿಕ್ಕ ಆಕಾರದಲ್ಲಿ ಶಿಲ್ಪಿತನಾಗಿದ್ದರೆ ಇಲ್ಲಿನ ಶಿಲ್ಪದಲ್ಲಿ ಶಿವನ ಅರ್ಧ ಗಾತ್ರದಲ್ಲಿದ್ದಾನೆ. ಇಲ್ಲಿ ಶಿಲ್ಪವನ್ನು ಕೂಡಾ ಸ್ಪಷ್ಟವಾಗಿ ಕೆತ್ತಲಾಗಿದ್ದು ಕಲಾತ್ಮಕವಾಗಿದೆ.

ಬಲಗಾಲನ್ನು ಹಿಂದುಮಾಡಿ ಅದರ ಮೇಲೆ ಪೂರ್ತಿ ಭಾರಹಾಕಿ ನಿಂತಿದ್ದಾನೆ. ಲಘು ಹಾಸ್ಯವನ್ನು ಉಕ್ಕಿಸುವ ಈ ಶಿಲ್ಪದಲ್ಲಿ ಆತನ ಸೊಂಡಿಲು ಎಡಕ್ಕೆ ತಿರುಗಿದೆ. ಬಲಗೈಯಲ್ಲಿ ದಂತದ ತುಂಡನ್ನು ಹಿಡಿದಿದ್ದರೆ ಎಡಕೈಯಲ್ಲಿ ಮೋದಕವಿದೆ. ಡೊಳ್ಳು ಹೊಟ್ಟೆಯ ಗಣೇಶನ ಅಗಲವಾದ ಕಿವಿಗಳು, ದೊಡ್ಡದಾದ ಮುಖ, ಭಾವವನ್ನು ಉಕ್ಕಿಸುವ ಮುಖಭಾವ, ದೊಡ್ಡತಲೆಯ ಮೇಲೆ ಸಣ್ಣಗಾತ್ರದ ಜಟಾಮುಕುಟವಿದೆ. 'ರಾವಳಫಡಿಯ ನಟರಾಜನ ಪಕ್ಕದಲ್ಲಿ ಸ್ಥಾನಕ ಗಣೇಶನು ಕಿರೀಟಧಾರಿಯಾಗಿದ್ದಾನೆ.[೪೦] ಸೊಂಡಿಲಿನ ಕೆತ್ತನೆಯು ಮುಖದಿಂದ ಹೊರಗೆ ಬಂದಿರುವಷ್ಟು ಉಬ್ಬುತನವನ್ನು ಹೊಂದಿದೆ.

ಭುಜದಿಂದ ಹೊರಗೆ ಹಾರಾಡುತ್ತಿರುವ ಆತನ ಉತ್ತರೀಯ, ಹೊಟ್ಟೆಗೆ ಬಿಗಿಯಲಾದ ಉದರಬಂಧ, ಆತನು ತೊಟ್ಟಿರುವ ಅಧೋವಸ್ತ್ರಗಳ ಕೆತ್ತನೆ ಕಲಾತ್ಮಕವಾಗಿದೆ. ಭುಜ, ಮುಂಗೈ, ಕುತ್ತಿಗೆಗಳಲ್ಲಿ ವಿವಿಧ ಆಭರಣಗಳನ್ನು ಧರಿಸಿದ್ದಾನೆ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಗಣೇಶನು ತೊಟ್ಟ ಆಭರಣಗಳಲ್ಲಿ ಕುಸುರಿಕಲೆಯ ಅಲಂಕರಣ ಎದ್ದು ಕಾಣುತ್ತದೆ. ಪ್ರತಿಯೊಂದು ಆಭರಣದ ವಿನ್ಯಾಸವನ್ನು ಕೆತ್ತುವಲ್ಲಿ ಶಿಲ್ಪಿಗಳು ವಿಶೇಷ ಮುತುವರ್ಜಿ ವಹಿಸಿದಂತೆ ಕಂಡುಬರುತ್ತದೆ.

ಅಗಲವಾದ ದಪ್ಪನೆಯ ಯಜ್ಞೋಪವೀತವನ್ನು ಧರಿಸಿದ್ದು ಇದು ಮುತ್ತುಗಳ ಅಲಂಕರಣವನ್ನು ಹೊಂದಿದೆ. ಆತನು ತೊಟ್ಟಿರುವ ಅಧೋವಸ್ತ್ರವು ಕಚ್ಚೆಪಂಚೆಯಾಗಿದ್ದು ತೊಟ್ಟಿರುವ ಈ ಚಲ್ಲಣವು ಎರಡು ತೊಡೆಗಳ ಮಧ್ಯದಿಂದ ಒಳಹೋಗಿರುವುದನ್ನು ಕಲಾತ್ಮಕವಾದ ಉಬ್ಬಿನೊಂದಿಗೆ ತೋರಿಸಿರುವ ಕಲಾವಿದರ ಜಾಣ್ಮೆಯನ್ನು ಮೆಚ್ಚಲೇಬೇಕು. ಇಲ್ಲಿ ಇನ್ನೊಂದು ಗಮನಾರ್ಹ ಅಂಶವೆಂದರೆ, ಇಲ್ಲಿನ ಕೆತ್ತನೆಯಲ್ಲಿ ಶಿಲ್ಪಿಗಳು ಕಲ್ಲಿನ ಕೆತ್ತನೆಯ ಮೈವಳಿಕೆಯನ್ನು ಉಳಿಸಿಕೊಂಡಿದ್ದು. ಅದು ಶಿಲ್ಪಕ್ಕೆ ಪೂರಕವಾದ ಒರಟುತನವನ್ನು ದೊರಕಿಸಿರುವುದಲ್ಲದೆ ಶಿಲ್ಪಕ್ಕೆ ಪೂರಕವಾದ ಮೈವಳಿಕೆಯನ್ನು ಒದಗಿಸಿಕೊಟ್ಟಿದ್ದು ನೆರಳು ಬೆಳಕಿನ ಚೆಲ್ಲಾಟದಲ್ಲಿ ಈ ಮೈವಳಿಕೆಗಳು ಶಿಲ್ಪಕ್ಕೆ ವಿಶಿಷ್ಟ ಸೊಬಗನ್ನುಂಟುಮಾಡುತ್ತವೆ.

---

೪೦. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೩



ಈ ಹಿನ್ನೆಲೆಯಲ್ಲಿ ಇಲ್ಲಿನ ಈ ಗಣಪತಿಯ ಶಿಲ್ಪವು ಬಹುಶಃ ಇಲ್ಲಿನ ಎಲ್ಲ ಗಣೇಶನ ಶಿಲ್ಪಗಳಿಗಿಂತ ಉತ್ಕೃಷ್ಟ ಶಿಲ್ಪವೆನ್ನಬಹುದು. ಇಲ್ಲಿ ಗಣೇಶನು ಸ್ಥಾನಕ ಭಂಗಿಯಲ್ಲಿದ್ದು ಅವನ ಎರಡು ಪಕ್ಕಗಳಲ್ಲಿ ಶಿವ–ಪಾರ್ವತಿಯರು ನೃತ್ಯ ಮಾಡುತ್ತಿದ್ದು, ಆ ಶಿಲ್ಪಗಳ ಜೊತೆಗೆ ಗಣೇಶನನ್ನು ಅವರ ಅರ್ಧಭಾಗಕ್ಕೆ ಬರುವಂತೆ ಮಧ್ಯದಲ್ಲಿ ನಿಲ್ಲಿಸಿರುವ ಸಂಯೋಜನೆಯು ಉತ್ಕೃಷ್ಟವಾಗಿದ್ದು ಕಲಾವಿದರು ಶಿಲ್ಪದಲ್ಲಿ ಸಮತೋಲನವನ್ನು ಸಾಧಿಸಿದ್ದಾರೆ. ಇದರಿಂದಾಗಿ ಈ ಶಿಲ್ಪಕ್ಕೆ ಹೆಚ್ಚಿನ ಸೌಂದರ್ಯ ಪ್ರಾಪ್ತವಾಗಿದೆ.

ಶಿಲ್ಪ –೬

ಪಟ್ಟದಕಲ್ಲು ಪಾಪನಾಥ ದೇವಾಲಯದಲ್ಲಿ ಎರಡು ಗಣೇಶನ ಶಿಲ್ಪಗಳಿದ್ದು ಒಂದು ಆಸೀನ ಗಣೇಶನದ್ದಾದರೆ ಇನ್ನೊಂದು ನಾಟ್ಯ ಗಣೇಶನ ಶಿಲ್ಪ. ಒಂದು ಶಿಲ್ಪದಲ್ಲಿ ಗಣೇಶನು ಕಮಲಪುಷ್ಪದ ಪೀಠದ ಮೇಲೆ ಕುಳಿತಿದ್ದಾನೆ. ಮಧ್ಯಮ ಗಾತ್ರದ ಈ ಶಿಲ್ಪವು ಭಗ್ನಗೊಂಡಿದ್ದರೂ ಗುರುತಿಸಲು ಸಾಧ್ಯವಿದೆ. ಇಲ್ಲಿನ ಶಿಲ್ಪದಲ್ಲಿ ಗಣೇಶನ ತಲೆಯ ಮೇಲೆ ಸಣ್ಣದಾದ ಜಟಾಮುಕುಟವಿದೆ. ದೊಡ್ಡ ಮುಖ, ಎಡಕ್ಕೆ ತಿರುಗಿದ ಸೊಂಡಿಲು, ದೊಡ್ಡ ಹೊಟ್ಟೆ, ಬಲಭಾಗದ ಎದೆಯು ಭಗ್ನಗೊಂಡಿದೆ. ಚತುರ್ಭುಜ ಗಣೇಶನು ಇವನಾಗಿರುವಂತೆ ಕಂಡುಬರುತ್ತದೆ.

ಬಲಗೈಯಲ್ಲಿ ದಂತ, ಎಡಗೈಯಲ್ಲಿ ಮೋದಕವನ್ನು ಹಿಡಿದಿದ್ದಾನೆ. ದಪ್ಪವಾದ ಯಜ್ಞೋಪವೀತವಿದ್ದು ಎರಡು ಸುತ್ತಿನ ಮುತ್ತಿನ ಹರಳುಗಳಿಂದ ಅಲಂಕರಣಗೊಂಡಿದೆ. ಹೊಟ್ಟೆಯ ಸುತ್ತ ಸರ್ಪಬಂಧವನ್ನು ಬಿಗಿಯಲಾಗಿದ್ದು ಸರ್ಪದ ಹೆಡೆಯನ್ನು ಗುರುತಿಸಬಹುದು. ಉಳಿದಂತೆ ಶಿಲ್ಪದಲ್ಲಿ ಮಹತ್ವದ ಅಂಶಗಳೇನೂ ಕಂಡುಬರುವುದಿಲ್ಲ. ಗಣೇಶನು ಕಮಲಪೀಠದ ಮೇಲೆ ಆಸೀನನಾಗಿದ್ದು ಪದ್ಮದಳಗಳನ್ನು ಸ್ಪಷ್ಟವಾಗಿ ಕೆತ್ತಲಾಗಿದೆ. ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಈ ರೀತಿಯಲ್ಲಿ ಪದ್ಮಪೀಠದ ಮೇಲೆ ಆಸೀನನಾಗಿರುವ ಗಣೇಶನ ಶಿಲ್ಪಗಳು ಕಂಡುಬರುವುದು ಬಲು ಅಪರೂಪದ ಸಂಗತಿಯಾಗಿದೆ.

ಶಿಲ್ಪ –೭

ಸುಂದರವಾದ ಇನ್ನೊಂದು ಆಕರ್ಷಕ ಗಣೇಶನ ಶಿಲ್ಪವನ್ನು ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯಲ್ಲಿ ಗಮನಿಸಬಹುದು. ಇಲ್ಲಿ ಗಣೇಶನು ಆಸೀನ ಭಂಗಿಯಲ್ಲಿದ್ದು ಬಲಗಾಲನ್ನು ಮಡಚಿ ಅರ್ಧಾಸನದಲ್ಲಿ ಕುಳಿತಿದ್ದಾನೆ. ಎಡಗಾಲನ್ನು ನೆಲದ ಮೇಲೆ ಇಳಿಬಿಟ್ಟಿದ್ದಾನೆ. ನಾಲ್ಕು ಕೈಗಳನ್ನು ಹೊಂದಿರುವ ಚತುರ್ಭುಜ ಗಣೇಶನ ಶಿಲ್ಪವಿದು. ಇಲ್ಲಿ ಕಾಣುವುದು ಗಣೇಶನ ಆಕರ್ಷಕ ಮುಖ. ಪಾರ್ಶ್ವಕ್ಕೆ ತಿರುಗಿಸಿರುವ ಗಣೇಶನ ತಲೆಯಿಂದಾಗಿ ಆತನ ನಗುವಿನ ಮುಖವು ಪೂರ್ಣ ಗೋಚರವಾಗುತ್ತದೆ. ಅತ್ಯಂತ ಉತ್ತಮ ರೀತಿಯಲ್ಲಿ ಹಾಸಭಾವವನ್ನು ಉಕ್ಕಿಸುವಂತೆ ಇಲ್ಲಿ ಗಣೇಶನನ್ನು ಕೆತ್ತಲಾಗಿದೆ. ಅತ್ಯಂತ ಕ್ರಿಯಾಶೀಲತೆಯನ್ನು ವ್ಯಕ್ತಪಡಿಸುವ

ಇಲ್ಲಿನ ಶಿಲ್ಪದಲ್ಲಿ ಗಣೇಶನು ತನ್ನೆರಡು ಕೈಗಳಿಂದ ಹೊಟ್ಟೆಯ ಸುತ್ತ ಪಟ್ಟಿಯನ್ನು ಬಿಗಿದುಕೊಳ್ಳುತ್ತಿರುವಂತೆ ಕಂಡುಬರುತ್ತದೆ.

ಮೇಲಿನ ಎರಡು ಕೈಗಳಲ್ಲಿ ಬಲಗೈಯು ಗಾಳಿಯಲ್ಲಿರುವಂತೆ ಕಂಡುಬರುತ್ತದೆ. ಮೇಲಿನ ಎಡಗೈಯಲ್ಲಿ ಬಹುಶಃ ದಂತದ ತುಂಡನ್ನು ಹಿಡಿದಿದ್ದಾನೆ. ಪಾದದ ಕೆಳಗೆ ಕಮಲದ ಕೆತ್ತನೆಯಿದೆ. ಅದರ ಮೇಲುಭಾಗದಲ್ಲಿ ಪೀಠದ ಮೇಲೆ ಕುಳಿತಿರುವಂತೆ ಗಣಪತಿಯು ಕಂಡುಬರುತ್ತಾನೆ. ಮುಖವು ದೊಡ್ಡದಾಗಿದ್ದು ಸೊಂಡಿಲು ಆಕರ್ಷಕವಾಗಿ ಬಲಕ್ಕೆ ಚಲಿಸಿದಂತಿದೆ. ಸೊಂಡಿಲು ದೊಡ್ಡ ಗಾತ್ರದ್ದಾಗಿದ್ದು ವೃತ್ತಾಕಾರಕ್ಕೆ ಮೇಲ್ಮುಖವಾಗಿದೆ. ತಲೆಯ ಮೇಲೆ ಟೊಪ್ಪಿಗೆಯಂತಹ ಕಿರೀಟವಿರುವುದು ಗಮನಾರ್ಹ.

ಎರಡು ಕಂಠಹಾರ, ಉದರಬಂಧಗಳನ್ನು ಹೊಂದಿರುವ ಗಣೇಶನ ಹೊಟ್ಟೆಯ ಸುತ್ತ(ಕಿಬ್ಬೊಟ್ಟೆಯ ಭಾಗದಲ್ಲಿ) ಒಡ್ಯಾಣವಿದ್ದು ಆತನು ಉಟ್ಟಿರುವ ಧೋತಿಯ ಚುಂಗು ನೆಲಮಟ್ಟ ತಲುಪಿದ್ದು, ಬಾಗುರೇಖೆಯಲ್ಲಿದೆ. ಕಾಲಿನ ಕೆಳಭಾಗದಲ್ಲಿ ಪದ್ಮದಳಗಳನ್ನು ಕೆತ್ತಲಾಗಿರುವುದು ಕಂಡುಬರುತ್ತದೆ. ಶಿಲ್ಪದ ಎರಡೂ ಸುತ್ತಲೂ ಯಾವುದೇ ಅಲಂಕರಣವಿಲ್ಲದ ಎರಡು ಕಂಬಗಳನ್ನು ಕೆತ್ತಿದ್ದು ಇದು ಶಿಲ್ಪಕ್ಕೆ ಚೌಕಟ್ಟನ್ನು ಒದಗಿಸಿದೆ. ಇಲ್ಲಿನ ಶಿಲ್ಪದಲ್ಲಿ ವಿನ್ಯಾಸಯುಕ್ತ ಅಲಂಕರಣಗಳಿಲ್ಲದಿದ್ದರೂ ಗಣೇಶನ ಕೆತ್ತನೆಯಲ್ಲಿನ ಸರಳತೆ ಮತ್ತು ಆತನ ಹಾಸ್ಯಯುಕ್ತ ಮುಖಭಾವ ಗಮನ ಸೆಳೆಯುತ್ತದೆ.

ಶಿಲ್ಪ –೮

ಪಟ್ಟದಕಲ್ಲು ಪಾಪನಾಥ ದೇವಾಲಯದ ಪ್ರದಕ್ಷಿಣಾಪಥದ ಹೊರಭಿತ್ತಿಯಲ್ಲಿ ಉತ್ತರಾಭಿಮುಖವಾಗಿ ಚತುರ್ಭುಜನಾಟ್ಯ ಶಿಲ್ಪವಿದೆ. ಬಲಗೈಯಲ್ಲಿ ದಂತ, ಎಡಗೈಯಲ್ಲಿ ಫಲ, ಅಕ್ಷ ಮಾಲೆಯನ್ನು ಹಿಡಿದು ಬಲಗಾಲಿನ ಮೇಲೆ ನಿಂತಿರುವುದು ಗಮನಾರ್ಹವಾಗಿದೆ. ಇಲ್ಲಿನ ವಿಶೇಷ ಸಂಗತಿಯೇನೆಂದರೆ ತಲೆಯ ಹಿಂಭಾಗದ ಮೇಲೆ (ಭಿತ್ತಿಯಲ್ಲಿ) ಚಿಕ್ಕ ಪ್ರಮಾಣದ ಛತ್ರಿ ಆಕಾರದ ಉಬ್ಬುಶಿಲ್ಪದ ರೀತಿಯಲ್ಲಿ ಕೆತ್ತಲಾಗಿದೆ. ಪ್ರತ್ಯೇಕವಾದ ಎರಡು ಕಂಬಗಳ ಮಧ್ಯ ರಾಜಾರೋಷವಾಗಿ ನಾಟ್ಯವಾಡುತ್ತಿದ್ದಾನೆ.

ಶಿಲ್ಪ –೯

ಮಹಾಕೂಟೇಶ್ವರ ದೇವಾಲಯ ಮುಖ್ಯ ಬಾಗಿಲಕ್ಕೆ ಹೊಂದಿಕೊಂಡಂತೆ ಒಳಭಾಗದ ಮಂಟಪದಲ್ಲಿ ಪಶ್ಚಿಮಾಭಿಮುಖವಾಗಿ ದ್ವಿಭಂಗಿಯಲ್ಲಿ ನಿಂತಿರುವ ದ್ವಿಬಾಹುವುಳ್ಳ ಸುಂದರವಾದ ಗಣೇಶನ ಶಿಲ್ಪವನ್ನು ಕಾಣಬಹುದು. ಈ ಶಿಲ್ಪದಲ್ಲಿ ಹೊಟ್ಟೆಗಿಂತಲೂ ತಲೆಯು ಬಹಳ ದೊಡ್ಡದಾಗಿದ್ದು, ಕಿವಿಗಳು ತಲೆಗೆ ತಕ್ಕಂತೆ ಇವೆ. ಶಿಲ್ಪಕ್ಕೆ ಯಾವುದೇ ಆಭರಣವಿಲ್ಲ, ಈಗ ಸುಣ್ಣವನ್ನು ಹಚ್ಚಿ ಶಿಲ್ಪದ ಆಕಾರವನ್ನು ಕೆಡಿಸಲಾಗಿದೆ.



ಶಿಲ್ಪ –೧೦

ಬಾದಾಮಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಇರಿಸಲಾದ ಗಣೇಶನ ಶಿಲ್ಪವು ದ್ವಿಭುಜವುಳ್ಳ ದುಂಡು ಶಿಲ್ಪವಾಗಿದೆ. ತ್ರಿ ಆಯಾಮದಲ್ಲಿ ರಚಿಸಲಾದ ಈ ಗಣೇಶನು ಕುಳಿತುಕೊಂಡು ತನ್ನ ಬಲಗೈ ಮೊಣಕಾಲಿನ ಮೇಲಿಟ್ಟಿದ್ದಾನೆ. ಎಡಗೈ ಭಗ್ನಗೊಂಡಿದ್ದು, ನೋಡಲು ಅತ್ಯಂತ ಆಕರ್ಷಣೀಯವಾಗಿದೆ. ಕೊರಳಲ್ಲಿ ಘಂಟೆಯ ಹಾರವನ್ನು ಮತ್ತು ಯಜ್ಞೋಪವೀತವನ್ನು ಉದರಭಂದವನ್ನು ರಚಿಸಲಾಗಿದೆ. ಕೈಯಲ್ಲಿ ಒಂದು ಸುತ್ತಿನ ಕಡಗವನ್ನು ವೀಕ್ಷಿಸಬಹುದು.

ಶಿಲ್ಪ –೧೧

ಐಹೊಳೆಯಲ್ಲಿ ವಿರೂಪಾಕ್ಷ ದೇವಾಲಯದ ಗರ್ಭಗೃಹದ್ವಾರದ ಬಲಭಾಗದಲ್ಲಿ ಉತ್ತರಾಭಿಮುಖವಾಗಿ ಚತುರ್ಭುಜವುಳ್ಳ ಸುಖಾಸನದಲ್ಲಿ ಕುಳಿತ ಗಣೇಶನು ಬಲಪಾರ್ಶ್ವಕ್ಕೆ ತಿರುಗಿದ್ದಾನೆ. ಅತ್ಯಂತ ಹಸನ್ಮುಖಿಯಿಂದ ಕೂಡಿದ ಈ ಶಿಲ್ಪ ಕೆಲ ಭಾಗದಲ್ಲಿ ಭಗ್ನಗೊಂಡಿದೆ. ಆದರೂ ಈ ಶಿಲ್ಪವನ್ನು ರಚಿಸಿದ ಶಿಲ್ಪಿಯು ತನ್ನ ಸ್ವಂತಿಕೆಯನ್ನು ಇಲ್ಲಿ ಉಪಯೋಗ ಮಾಡಿದ್ದಾನೆ. ಬಲಗೈ ತನ್ನ ಬಲಗಾಲಿನ ಮೇಲೆ ಇಟ್ಟಿದ್ದು, ಇನ್ನೊಂದರಲ್ಲಿ ದಂತವಿರಬಹುದು. ಇದು ಭಗ್ನಗೊಂಡಿದೆ. ಎಡಗೈಯಲ್ಲಿ ಪರಶುವನ್ನು ಹಿಡಿದ ಗಣೇಶ ಕಿರೀಟಮುಕುಟನಾಗಿದ್ದಾನೆ.

ಶಿಲ್ಪ –೧೨

ಐಹೊಳೆಯ ಗಳಗನಾಥ ದೇವಾಲಯುಗದ ಸಂಕೀರ್ಣದಲ್ಲಿ ಕಂಡುಬರುವ ದೇವಾಲಯಗಳೊಂದರ ಬಲಬದಿಯ ಭಿತ್ತಿಯ ಮೇಲೆ ದಕ್ಷಿಣಾಭಿಮುಖವಾಗಿ ಗಣೇಶನು ಚತುರ್ಭುಜದಲ್ಲಿದ್ದಾನೆ. ಈ ಶಿಲ್ಪವು ಎಡಪಾರ್ಶ್ವದಲ್ಲಿ ಮುಖ ತಿರುಗಿಸಿದೆ. ತೆರೆದ ಕಣ್ಣುಗಳು ಅತ್ಯಂತ ಆಕರ್ಷಕವಾಗಿದೆ. ಕೆಲವು ಕಡೆ ಪ್ರಕೃತಿವಿಕೋಪದಿಂದ ಸವೆದು ಹೋಗಿದೆ.

ಶಿಲ್ಪ –೧೩

ಬಾದಾಮಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾದದ್ದು ದುಂಡು ಶಿಲ್ಪವಾಗಿದ್ದು, ದ್ವಿಭುಜ ಶಿಲ್ಪವಾಗಿದೆ. ನೋಡಲು ಪ್ರಮಾಣಬದ್ಧತೆ ಇಲ್ಲವೆಂಬಂತೆ ಕಾಣುತ್ತದೆ. ಈ ಶಿಲ್ಪದಲ್ಲಿ ಮುಖವು ಚಿಕ್ಕದಾಗಿದ್ದು, ಸೊಂಡಿಲು ಭಗ್ನವಾಗಿದೆ. ಕೈಗಳೆರಡು ಚಿಕ್ಕದಾಗಿದ್ದು, ಹೊಟ್ಟೆಯ ಭಾಗ ದೊಡ್ಡದಾಗಿದೆ. ಇದಕ್ಕೆ ತಕ್ಕಂತೆ ಮುಖ ಹೊಂದಿಲ್ಲ. ಯಾವುದೇ ಆಭರಣ ಈ ಶಿಲ್ಪದಲ್ಲಿ ಕಂಡುಬರುವುದಿಲ್ಲ. ಒಟ್ಟಾರೆ ಈ ಶಿಲ್ಪವು ನೋಡಲು ಅಸಮಾನತೆಯ ಅಳತೆಯಿಂದ ಕೂಡಿದ್ದಾಗಿದೆ.

ಇನ್ನೂ ಹಲವಾರು ಶಿಲ್ಪಗಳು ಐಹೊಳೆಯ ವಸ್ತುಸಂಗ್ರಹಾಲಯದ ಆವರಣದಲ್ಲಿ ಸಂಗ್ರಹಗೊಂಡಿದ್ದು, ಇವು ಒಂದಕ್ಕಿಂತಲೂ ಒಂದು ಭಿನ್ನವಾಗಿದ್ದು, ಒಂದು ಗಣೇಶನ

ಗಣೇಶ ಶಿಲ್ಪಗಳು



ಶಿಲ್ಪ-೧. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೨. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೩. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೪. ಪಂಚಲಿಂಗ ಬಂಡೆ, ಬಾದಾಮಿ




ಶಿಲ್ಪ-೫. ರಾವಳಫಡಿ ಗುಹಾಲಯ, ಐಹೊಳೆ

ಗಣೇಶ ಶಿಲ್ಪಗಳು



ಶಿಲ್ಪ-೩. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೭. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೯. ಮಹಾಕೂಟೇಶ್ವರ ದೇವಾಲಯ ಆವರಣ ಮಹಾಕೂಟ

ಗಣೇಶ ಶಿಲ್ಪಗಳು



ಶಿಲ್ಪ-೧೦. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ



ಶಿಲ್ಪ-೧೧. ವಿರೂಪಾಕ್ಷ ದೇವಾಲಯ, ಐಹೊಳೆ



ಶಿಲ್ಪ-೧೨. ಗಳಗನಾಥ ದೇವಾಲಯಗಳ ಸಂಕೀರ್ಣ, ಐಹೊಳೆ



ಶಿಲ್ಪ-೧೩. ಪ್ರಾಚ್ಯವಸ್ತು ಸಂಗ್ರಹಾಲಯ, ಬಾದಾಮಿ



ಬಲಗೈಯಲ್ಲಿ ಮೂಲಂಗಿಯನ್ನು ಹಿಡಿದಿದ್ದು, ಈ ಗಣೇಶನ ಕಿವಿಯು ಅತ್ಯಾಕರ್ಷಕವಾಗಿದ್ದು, ಭುಜದ ಮೇಲೆ ಇಳಿಬಿದ್ದಿವೆ. ಮತ್ತೊಂದರ ಗಣೇಶನ ವಿಗ್ರಹದಲ್ಲಿ ಮುಖವು ಭಗ್ನಗೊಂಡಿದ್ದು, ಕೊರಳಲ್ಲಿ ಘಂಟೆಯ ಹಾರವನ್ನು ಧರಿಸಿದ್ದು, ಒಟ್ಟಾರೆ ಈ ಶಿಲ್ಪವು ನೋಡಲು ಆಕರ್ಷಣೀಯವಾಗಿ ಕಂಡು ಬರುತ್ತದೆ.

ಬಾದಾಮಿಯ ಪರಿಸರದಲ್ಲಿ ಮೊದಲಿನಿಂದಲೂ ಗಾಣಪತ್ಯ ಪಂಥವು ಪ್ರಭಾವಶಾಲಿಯಾಗಿ ಬೆಳೆದಿದ್ದುದರಿಂದ ಗಣಪತಿಯ ಶಿಲ್ಪಗಳು ಹೇರಳವಾಗಿ ಕಂಡುಬರುತ್ತವೆ. ಮುಖ್ಯವಾಗಿ ಚಾಲುಕ್ಯರ ಮೊದಲ ಹಂತದಲ್ಲಿ ದ್ವಿಬಾಹು ಗಣೇಶನ ಶಿಲ್ಪಗಳು ಕಂಡುಬಂದರೆ ನಂತರದ ಶಿಲ್ಪಗಳು ಚತುರ್ಭುಜ ಗಣೇಶನ ಶಿಲ್ಪಗಳಾಗಿವೆ. ಬಾದಾಮಿಯ ಶಿಲ್ಪಗಳು ಗಣೇಶನ ದ್ವಿಭುಜ ಶಿಲ್ಪಗಳೇ ಆಗಿವೆ. ಇಲ್ಲಿ ಗಣೇಶನ ಶಿಲ್ಪಗಳು ಸರಳತೆಯಿಂದ ಕೂಡಿದ್ದು ಮುಂದಿನ ಹಂತಗಳಲ್ಲಿ ಆತನ ಕುರಿತಾದ ಕಥಾನಕಗಳು ಬೆಳೆಯುತ್ತಿದ್ದಂತೆ ಬಹುಶಃ ಅವನನ್ನು ಇನ್ನಷ್ಟು ವೈಭವವಾಗಿ ರಚಿಸಲು ಪ್ರಾರಂಭಿಸಿರಬಹುದು. ಇಲ್ಲಿನ ಪರಿಸರದ ಶಿಲ್ಪಗಳಲ್ಲಿ ಗಣೇಶನು ಸರಳವಾಗಿಯೇ ಚಿತ್ರಿತನಾಗಿದ್ದಾನೆ. ಆದರೂ ಗಣೇಶನ ಶಿಲ್ಪಗಳು ಬಿಡಿ ಬಿಡಿಯಾಗಿ ಇಲ್ಲಿನ ಬಂಡೆಗಳಲ್ಲಿ, ಗೋಡೆಗಳಲ್ಲಿ ಅಲ್ಲಲ್ಲಿ ಹೇರಳವಾಗಿ ಕಂಡುಬರುತ್ತವೆ. ಶಿಲ್ಪದ ಲಕ್ಷಣಗಳು ಎಲ್ಲೆಡೆಯೂ ಒಂದೇ ರೀತಿಯಾಗಿದ್ದು ಕಲಾವಿದನ ಕೌಶಲ್ಯದಿಂದಾಗಿ ಕೆಲವೆಡೆಯ ಶಿಲ್ಪಗಳು ಹೆಚ್ಚು ಗಮನಾರ್ಹವಾಗಿ ಕಂಡುಬರುತ್ತವೆ.

ಕಾರ್ತಿಕೇಯ ಶಿಲ್ಪಗಳು

ಬಾದಾಮಿಯ ಶಿಲ್ಪಗಳಲ್ಲಿ ಕಾರ್ತಿಕೇಯ ಅಥವಾ ಸ್ಕಂದನ ಶಿಲ್ಪಗಳು ಬಹಳಷ್ಟು ಕಂಡುಬರುತ್ತವೆ. ಬಾದಾಮಿಯಲ್ಲಿ ಹಿಂದೆ ಕೌಮಾರ ಪಂಥ ಎಂಬ ತಾಂತ್ರಿಕ ಪಂಥವು ಅಸ್ತಿತ್ವದಲ್ಲಿತ್ತು. ಆದುದರಿಂದ ಕುಮಾರ ಅಥವಾ ಕಾರ್ತಿಕೇಯನಿಗೆ ಸಂಬಂಧಿಸಿದ ಶಿಲ್ಪಗಳು ಅಲ್ಲಲ್ಲಿ ಕಂಡುಬಂದಿವೆ. 'ಸ್ಕಾಂದ ಮತದ ಪ್ರಧಾನ ದೇವತೆ ಸ್ಕಂದ. ಇವನು ಯುದ್ಧ ದೇವತೆ ಮತ್ತು ದೇವ ಸೇನಾಧಿಪತಿ. ಈ ಕಾರಣದಿಂದಲೇ ರಾಜರು ಈ ದೇವನನ್ನು ಆರಾಧಿಸಿದರು. ಸ್ಕಾಂದ ಪುರಾಣ, ಶಿವಪುರಾಣ ಮತ್ತು ಕಾಳಿದಾಸನ ಕುಮಾರ ಸಂಭವಗಳು ಈ ದೇವನ ಮಹಿಮಾ ವಿಶೇಷಗಳನ್ನು ಸಾರುತ್ತವೆ. ವಾಯುಪುರಾಣದಲ್ಲಿ ಕಾರ್ತಿಕೇಯನ ಜನನದ ಕಥೆಯಿದೆ.'[೪೧] ಶಿವನ ಪುತ್ರನಾದ ಕಾರ್ತಿಕೇಯನಿಗೆ ಸ್ಕಂದ, ಕಾರ್ತಿಕೇಯ, ಕುಮಾರ, ಸುಬ್ರಹ್ಮಣ್ಯ ಹೀಗೆ ವಿವಿಧ ಹೆಸರುಗಳಿವೆ. ಈತನಿಗೆ ಸ್ಕಂದಪುರಾಣದ ಪ್ರಕಾರ ಆರುತಲೆಗಳು ಇದ್ದು ನವಿಲು ಇವನ ವಾಹನ, ಆದರೆ ಬಾದಾಮಿಯ ಶಿಲ್ಪಗಳಲ್ಲಿ ಇವನು ಹೆಚ್ಚಾಗಿ ಒಂದೇ ಮುಖದಲ್ಲಿ ಕಾಣಿಸುತ್ತಾನೆ. ಬಾದಾಮಿಯ ಶಿಲ್ಪಗಳಲ್ಲಿ ಸಾಕಷ್ಟು ಕಡೆಗಳಲ್ಲಿ ಕಾರ್ತಿಕೇಯನ ಶಿಲ್ಪಗಳು ಕಂಡುಬರುತ್ತವೆ.

೪೧. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೭೫



ಶಿಲ್ಪ –೧

'ಚಾಲುಕ್ಯರ ಕಾಲದ ಅತ್ಯಂತ ಪ್ರಾಚೀನ ಕುಮಾರಸ್ವಾಮಿಯ ಮೂರ್ತಿ ಎಂದರೆ ಪ್ರಾಯಶಃ ಬಾದಾಮಿಯ ಶೈವ ಉಪಗುಹಾಲಯದಲ್ಲಿರುವ ಕಾರ್ತಿಕೇಯನದು. ದ್ವಿಬಾಹು ಕುಮಾರನು ಮಯೂರ ವಾಹನನಾಗಿದ್ದಾನೆ. ಕೈಯಲ್ಲಿ ಆಯುಧಗಳಿಲ್ಲ. ದೇವನು ಸಂಹಾರಮೂರ್ತಿಯಾಗಿರದೆ ಪ್ರಸನ್ನ ಮೂರ್ತಿಯಾಗಿದ್ದಾನೆ.'[೪೨] ಈ ಶಿಲ್ಪವು ಶೈವ ಗುಹೆಯಲ್ಲಿನ ಉಪ ಗುಹೆಯಲ್ಲಿದ್ದು ಗುಣ ಮತ್ತು ಗಾತ್ರದಿಂದಾಗಿ ಆಕರ್ಷಣೀಯವಾಗಿದೆ.

ಇಲ್ಲಿ ಷಣ್ಮುಖನು ಏಕಮುಖನಾಗಿದ್ದಾನೆ. ನವಿಲಿನ ಮೇಲೆ ಕುಳಿತು ಸವಾರಿ ಮಾಡುತ್ತಿರುವಂತಿದೆ, ತನ್ನ ಬಲಗೈಯಿಂದ ನವಿಲನ್ನು ಆಧರಿಸಿದ್ದಾನೆ. ಎಡಗೈಯನ್ನು ನವಿಲಿನ ಬೆನ್ನಿನ ಮೇಲಿರಿಸಿ ಗಂಭೀರವಾಗಿ ಆಸೀನನಾಗಿದ್ದಾನೆ. ನವಿಲಿನ ಗಾತ್ರ ದೊಡ್ಡದಾಗಿದ್ದು ದೇಹವು ಪಾರ್ಶ್ವಕ್ಕೆ ತಿರುಗಿದೆ. ಸುಂದರವಾದ ಕೆತ್ತನೆಯಿಂದ ಕಂಗೊಳಿಸುವ ನವಿಲಿನ ಕೆತ್ತನೆಯಲ್ಲಿ ಕಲಾವಿದರ ಪರಿಪೂರ್ಣತೆಯು ವ್ಯಕ್ತವಾಗಿದೆ. ನವಿಲಿನ ಮುಖವು ಬಲಕ್ಕೆ ತಿರುಗಿದ್ದರೆ ಕಾರ್ತಿಕೇಯನು ಎಡಪಾರ್ಶ್ವಕ್ಕೆ ತಿರುಗಿಕೊಂಡಿದ್ದಾನೆ. ಇದರಿಂದಾಗಿ ಶಿಲ್ಪದಲ್ಲಿ ಚಲನೆಯ ಭಾವವು ಅದ್ಭುತವಾಗಿ ಪ್ರಕಟವಾಗಿದೆ.

ಕಾರ್ತಿಕೇಯನು ಗಂಭೀರನಾಗಿದ್ದು ಯಾವುದೋ ಉದ್ದೇಶದಿಂದ ಸವಾರಿ ಹೊರಟಂತೆ ಕಂಡುಬಂದರೆ ಆಶ್ಚರ್ಯವಿಲ್ಲ. ಇನ್ನು ಶಿಲ್ಪದ ಕಲಾತ್ಮಕತೆಯನ್ನು ಗಮನಿಸಿದರೆ ಕಾರ್ತಿಕೇಯನು ಕಿರೀಟಧಾರಿಯಾಗಿದ್ದಾನೆ. ಮುಖದಲ್ಲಿ ಬಾಲಕಳೆಯಿದೆ. ಕುತ್ತಿಗೆಯಲ್ಲಿ ಎರಡು ಸುತ್ತಿನ ಕಂಠಹಾರವಿದೆ. ಅಗಲವಾದ ಚಪ್ಪಟೆಯಾದ ಆದರೆ ಮುತ್ತಿನ ಹರಳುಗಳಿಂದ ಪೋಣಿಸಲಾದ ಯಜ್ಞೋಪವೀತವಿದೆ. ನೆರಿಗೆಗಳನ್ನು ಹೊಂದಿರುವ ಅಧೋವಸ್ತ್ರವನ್ನು ಧರಿಸಿದ್ದಾನೆ. ತೋಳಿನಲ್ಲಿ ಯಾವುದೇ ಆಭರಣವಿಲ್ಲ, ಆದರೆ ಮುಂಗೈಯಲ್ಲಿ ಕಡಗವಿದೆ. ಇಲ್ಲಿ ಕಾರ್ತಿಕೇಯನಷ್ಟೇ ಗಮನ ಸೆಳೆಯುವುದು ನವಿಲಿನ ರಚನೆ. ನವಿಲಿನ ಕೊಕ್ಕು ದೊಡ್ಡದಾಗಿದ್ದು ಮಧ್ಯದ ಸೀಳು ಕೂಡಾ ವಿವರವಾಗಿ ಕೆತ್ತಲಾಗಿದೆ.

ನವಿಲಿನ ತಲೆಯ ಮೇಲಿನ ತುರಾಯಿ, ರೆಕ್ಕೆಯ ಮೇಲಿನ ಚಿತ್ತಾರಗಳು, ಪ್ರತಿಯೊಂದನ್ನು ಕೂಡಾ ಕಲಾತ್ಮಕವಾಗಿ ಯಾವುದೇ ಕುಂದುಂಟಾಗದಂತೆ ಕೆತ್ತಲಾಗಿದೆ. ಮುಖ್ಯವಾಗಿ ನವಿಲಿನ ಕುತ್ತಿಗೆಯ ಹಿಂಭಾಗದಿಂದ ಹೊರಟು ಮುಂಭಾಗದಲ್ಲಿ ಕುತ್ತಿಗೆಯ ಕೆಳಗಡೆಗೆ ಇಳಿದ ಕಡಿವಾಣದ ಹಾರ, ಕಾಲಿನ ಉಗುರುಗಳನ್ನು ಇಲ್ಲಿ ಗಮನಿಸಲು ಸಾಧ್ಯವಾಗುತ್ತದೆ. ನವಿಲಿನ ಹಿಂಭಾಗದ ರೆಕ್ಕೆಯ ಕೆತ್ತನೆಯಲ್ಲಿ ರೇಖಾಲಾಲಿತ್ಯದ ಸೊಗಸಿದೆ. ಇದಲ್ಲದೆ ನವಿಲಿನ ಹಿಂಭಾಗದ ರೆಕ್ಕೆಯಲ್ಲಿನ ಒಂದೊಂದು ಗೆರೆಯನ್ನು ಕೂಡಾ ವಾರೆ ರೇಖೆಯಲ್ಲಿ ಕೆತ್ತಿರುವುದರಿಂದ ಮತ್ತು ಗರಿಯ ತುದಿಯಲ್ಲಿ ಚಿತ್ತಾರವನ್ನು ಕೆತ್ತಿರುವುದರಿಂದ ಶಿಲ್ಪದ ನೋಟಕ್ಕೆ ಪೂರಕವಾಗಿ ಶಿಲ್ಪದ ಚಲನೆಯ

೪೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೭೬

ಅನುಭವವನ್ನು ಅನುಭವಿಸಲು ಸಾಧ್ಯವಾಗುತ್ತದೆ. ಕಾರ್ತಿಕೇಯ ಶಿಲ್ಪ ರಚನೆಯೂ ಇದಕ್ಕೆ ಪೂರಕವಾಗಿದ್ದು ಗಾಂಭೀರ್ಯದಿಂದ ನವಿಲಿನ ಮೇಲೆ ಸವಾರಿ ಮಾಡುತ್ತಿರುವ ಚಿತ್ರಣ ಆಕರ್ಷಣೀಯವಾಗಿದೆ. ಜಟಾಮುಕುಟಧಾರಿಯಾದ ಕಾರ್ತಿಕೇಯ ಕಿವಿಯಲ್ಲಿ ಕುಂಡಲಸಹಿತವಾದ ಓಲೆ, ಕಂಠದಲ್ಲಿ ಕಂಠಹಾರ, ಒಡ್ಯಾಣ, ಯಜ್ಞೋಪವೀತ, ನೆರಿಗೆಗಳನ್ನು ಹೊಂದಿದ ಅಧೋವಸ್ತ್ರವನ್ನು ಧರಿಸಿದ್ದಾನೆ. ಆತನು ಕುಳಿತ ಭಂಗಿಯಿಂದಾಗಿ ಬಟ್ಟೆಯಲ್ಲಿ ಉಂಟಾದ ನೆರಿಗೆಗಳನ್ನು ಸಹಜತೆಯಿಂದ ಕೆತ್ತಲಾಗಿದೆ.

ಇವುಗಳನ್ನು ಗಮನಿಸಿದರೆ ಈ ಶಿಲ್ಪವು ಚಾಲುಕ್ಯರ ಕಾಲದ ಉತ್ತಮ ಶಿಲ್ಪಗಳಲ್ಲಿ ಒಂದೆಂದು ಖಂಡಿತವಾಗಿ ಹೇಳಬಹುದಾಗಿದೆ. ಶಿಲ್ಪದ ಸುತ್ತಲಿನ ಭಾಗದಲ್ಲೆಲ್ಲೂ ಬೇರೇನೂ ಕೆತ್ತನೆಯಿಲ್ಲದಿರುವುದರಿಂದಾಗಿ ನೋಡುಗನ ದೃಷ್ಟಿಯು ಕೇವಲ ಶಿಲ್ಪದ ಮುಖ್ಯ ವಸ್ತುವಿನಲ್ಲಷ್ಟೇ ಕೇಂದ್ರೀಕೃತವಾಗುವುದರಿಂದಾಗಿ ಶಿಲ್ಪದ ಸೊಗಸು ಇನ್ನಷ್ಟು ಹೆಚ್ಚಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ಈ ಶಿಲ್ಪವನ್ನು ರಚಿಸಿದ ಶಿಲ್ಪಿಗಳು ಅಭಿನಂದನಾರ್ಹರು. ಇನ್ನೊಂದು ಕುತೂಹಲಕಾರಿಯಾದ ಸಂಗತಿಯೆಂದರೆ, ಇಲ್ಲಿ ರಚಿಸಿದ ಕಾರ್ತಿಕೇಯನ ವಾಹನವಾದ ನವಿಲಿನ ಕೆತ್ತನೆಯನ್ನು ಹೋಲುವ ರೇಖಾಚಿತ್ರವೊಂದು ಇದೇ ಉಪ ಗುಹಾಲಯದ ಭಿತ್ತಿಯಲ್ಲಿದೆ. ಕೇವಲ ಸರಳವಾದ ಬಾಹ್ಯರೇಖೆಗಳ ಈ ಚಿತ್ರಕ್ಕೂ ಇಲ್ಲಿ ರಚಿಸಲಾದ ಕಾರ್ತಿಕೇಯನ ಶಿಲ್ಪದಲ್ಲಿನ ನವಿಲಿಗೂ ಸಾಮ್ಯ ಇರುವುದು ಗಮನಾರ್ಹ. ಬಹುಶಃ ಈ ರೇಖಾಚಿತ್ರವನ್ನು ಆಧಾರವಾಗಿಟ್ಟುಕೊಂಡು ಮುಂದಿನ ಸ್ಕಂದನ ಶಿಲ್ಪವನ್ನು ರಚಿಸಿರಬಹುದಾದ ಸಾಧ್ಯತೆಯಿದೆ.

ಶಿಲ್ಪ –೨

ಬಾದಾಮಿಯ ಎರಡನೆಯ ವೈಷ್ಣವ ಗುಹಾಲಯದಲ್ಲಿಯೂ ಕಾರ್ತಿಕೇಯನ ಶಿಲ್ಪವನ್ನು ಕಾಣಬಹುದು. ಆರನೆಯ ಕಂಬದ ಪಶ್ಚಿಮಬದಿಯಲ್ಲಿ ಚತುರ್ಭುಜಸ್ಕಂದನ ಉಬ್ಬು ಶಿಲ್ಪವಿದೆ. ಆತ ಮಯೂರ ವಾಹನನಾಗಿದ್ದಾನೆ.[೪೩] ಸಣ್ಣಗಾತ್ರದಲ್ಲಿ ರಚಿಸಲಾದ ಈ ಶಿಲ್ಪ ಫಲಕದಲ್ಲಿ ಕಾರ್ತಿಕೇಯನ ಶಿಲ್ಪವಿದ್ದು ಇದರಲ್ಲಿ ಕಾರ್ತಿಕೇಯನು ನಾಲ್ಕು ಕೈಗಳನ್ನು ಹೊಂದಿರುವುದು ವಿಶೇಷ. ಸಾಮಾನ್ಯವಾಗಿ ಚಾಲುಕ್ಯರ ಮೊದಲ ಕಾಲದ ರಚನೆಗಳಲ್ಲಿ ಸ್ಕಂದನು ದ್ವಿಭುಜನಾಗಿ ಕಾಣಿಸುತ್ತಿದ್ದು ಇಲ್ಲಿನ ಶಿಲ್ಪದಲ್ಲಿ ಬಹುಶಃ ಮೊದಲ ಬಾರಿಗೆ ಈ ಪ್ರಯೋಗ ಮಾಡಿರುವಂತೆ ಕಂಡುಬರುತ್ತದೆ.

ಇದಲ್ಲದೆ ಇಲ್ಲಿ ಕಾರ್ತಿಕೇಯನು ನವಿಲಿನ ಮೇಲೆ ಕುಳಿತಿರುವುದು ಗಮನಾರ್ಹ. ಆದರೆ ಶಿಲ್ಪವನ್ನು ಸೌಂದರ್ಯ ಮತ್ತು ಪ್ರತಿಮಾಲಕ್ಷಣದ ದೃಷ್ಟಿಯಿಂದ ನೋಡಿದಾಗ ಮೊದಲ ಗುಹಾಲಯದ ಶಿಲ್ಪವೇ ಮನಸ್ಸಿನಲ್ಲಿ ನಿಲ್ಲುತ್ತದೆ. ಮಹಾಕೂಟದ ಪರಿಸರದಲ್ಲಿ ಕುಮಾರಸ್ವಾಮಿಯ ಶಿಲ್ಪವೊಂದನ್ನು ಗುರುತಿಸಲಾಗಿದೆ. ಹಳೆಯ ಮಹಾಕೂಟದ ಚಾಪಾಕಾರ (ದುಂಡಾಯತ)

೪೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೭೬

ಶಿವಾಲಯದ ದ್ವಿಬಾಹು ಕುಮಾರಸ್ವಾಮಿಯು ಶೂಲಧಾರಿಯಾಗಿದ್ದು ಸ್ಥಾನಕ ಭಂಗಿಯಲ್ಲಿದ್ದಾನೆ'.[೪೪] ಅದೇ ಗುಹಾಲಯದ ಛತ್ತಿನ ಮೇಲೆ ಮೂರು ಮುಖಗಳೊಂದಿಗೆ ಕಾರ್ತಿಕೇಯನನ್ನು ರಚಿಸಿರುವುದನ್ನು ಕಾಣಬಹುದು.

ಇಲ್ಲಿನ ಶಿಲ್ಪದಲ್ಲಿನ ವಿಶೇಷತೆಯೆಂದರೆ ಈತನ ಪಕ್ಕದಲ್ಲಿ ಗಂಧರ್ವರನ್ನು ಕೆತ್ತಿರುವುದು. ಈ ರೀತಿಯ ಶಿಲ್ಪಗಳು ಬಹಳ ಅಪರೂಪವಾಗಿ ಕಂಡುಬರುತ್ತವೆ. ಇದೇ ರೀತಿ ಗಂಧರ್ವರನ್ನು ಕೆತ್ತಿರುವುದು ಹುಚ್ಚುಮಲ್ಲಿ ಗುಡೀಯ ಶಿಲ್ಪದಲ್ಲಿ ಕಂಡೂಬಂದರೂ ಅಲ್ಲಿನ ಶಿಲ್ಪಕ್ಕಿಂತ ಇದು ಭಿನ್ನವಾಗಿ ಕಂಡುಬರುತ್ತದೆ. ಇದೇ ಗುಡಿಯ ಇನ್ನೊಂದು ಕಂಬದಲ್ಲಿ ಕುಮಾರನು ಮಯೂರವಾಹನನಾಗಿ ಸವಾರಿ ಹೊರಟಿರುವ ಸಣ್ಣಗಾತ್ರದ ಶಿಲ್ಪವೊಂದನ್ನು ಗಮನಿಸಬಹುದು.

ಶಿಲ್ಪ –೩

ಚಾಲುಕ್ಯರ ಕಾಲದ ಉತ್ಕೃಷ್ಟವಾದ ಕಾರ್ತಿಕೇಯನ ಶಿಲ್ಪವು ನಮಗೆ ಕಾಣಸಿಗುವುದು ಚಾಲುಕ್ಯರ ಕಾಲದ ಪ್ರಾಚೀನ ಗುಡಿಗಳಲ್ಲಿ ಒಂದಾದ ಹುಚ್ಚಿಮಲ್ಲಿ ದೇವಾಲಯದಲ್ಲಿ ಮುಖಮಂಟಪದಲ್ಲಿರುವ ಈ ಶಿಲ್ಪವು ಸುಂದರ ಕಲಾಕೃತಿಯಾಗಿದೆ. 'ಚಾಲುಕ್ಯರ ಕಾಲದ ಸರ್ವೋತ್ಕೃಷ್ಟವಾದ ಕಾರ್ತಿಕೇಯ ಶಿಲ್ಪವೆಂದರೆ ಐಹೊಳೆಯ ಹುಚ್ಚಿಮಲ್ಲಿಗುಡಿಯ ಮುಖಮಂಟಪದ ಛತ್ತಿನಲ್ಲಿರುವ ಕಲಾಕೃತಿ'.[೪೫] ಇಲ್ಲಿ ಕಾರ್ತಿಕೇಯನು ದ್ವಿಬಾಹುವಾಗಿದ್ದಾನೆ. ದೊಡ್ಡದಾದ ನವಿಲಿನ ಮೇಲೆ ಕುಳಿತುಕೊಂಡು ತಾರಕಾಸುರನ ಮೇಲೆ ಯುದ್ಧ ಮಾಡುತ್ತಿರುವ ಸನ್ನಿವೇಶವನ್ನು ಕಥಾನಕದ ರೀತಿಯಲ್ಲಿ ಕೆತ್ತಲಾಗಿದೆ. ಶಿಲ್ಪಫಲಕದ ಹೆಚ್ಚಿನ ಭಾಗವನ್ನು ದೊಡ್ಡಗಾತ್ರದ ನವಿಲು ಆಕ್ರಮಿಸಿಕೊಂಡ ಈ ಶಿಲ್ಪವನ್ನು "ಕೃಚುಜ್ಞ"ನೆಂಬ ಶಿಲ್ಪಿಯು ಕೆತ್ತಿರಬೇಕು.[೪೬]

ಕಾರ್ತಿಕೇಯನು ಬಲಗಾಲನ್ನು ಇಳಿಬಿಟ್ಟು, ಎಡಗಾಲನ್ನು ಮಡಚಿ ಮಯೂರನ ಬೆನ್ನಿನ ಮೇಲೆ ಸಮಾನಾಂತರವಾಗಿ ಇರಿಸಿಕೊಂಡು ಕುಳಿತಿದ್ದಾನೆ. ಬಲಗೈಯಿಂದ ತನ್ನ ಈಟಿಯನ್ನು ಭುಜಮಟ್ಟಕ್ಕೆ ಎತ್ತಿ ಹಿಡಿದಿದ್ದಾನೆ. ಆತನ ವೈರಿಯಾದ ತಾರಕಾಸುರನು ಧರಾಶಾಯಿಯಾಗಿದ್ದಾನೆ. ಆತನ ತಲೆಯ ಮೇಲೆ ಮಯೂರವು ತನ್ನೊಂದು ಕಾಲನ್ನು ಇರಿಸಿಕೊಂಡಿದೆ. ತಾರಕಾಸುರನು ಧರಾಶಾಯಿಯಾಗಿ ಪಾರ್ಶ್ವಕ್ಕೆ ಒರಗಿದ್ದು ಆತನ ಕೈಯೊಂದು ಖಡ್ಗಸಹಿತವಾಗಿ ನೆಲಕ್ಕೆ ಸಮಾನಾಂತರವಾಗಿ ಚಾಚಿಕೊಂಡಿದೆ. ಪಕ್ಕದಲ್ಲಿ ದೇವತೆಗಳು ಆನಂದದಿಂದ ಕೇಕೆಹಾಕುತ್ತ ಕೈಮುಗಿಯುತ್ತ ವೀರಾಸನದಲ್ಲಿ ಕುಳಿತಿರುವುದನ್ನು ಕಾಣಬಹುದು. ಶಿಲ್ಪದ ಮೇಲುಭಾಗದಲ್ಲಿ ದೇವತೆಗಳು ಹೂಮಾಲೆಗಳೊಂದಿಗೆ ದೇವಸೇನಾಧಿಪತಿಗೆ ಶುಭ ಹಾರೈಸುತ್ತಿದ್ದಾರೆ. ಶಿಲ್ಪದ ಒಟ್ಟು ರಚನೆಯಲ್ಲಿ ಕಥಾನಕವನ್ನು ಸುಂದರವಾಗಿ ಮೂಡಿಸಲಾಗಿದೆ. ಕೆತ್ತನೆಯು ಸರಳವಾಗಿದ್ದು

೪೪. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೭೬

೪೫. ಅದೇ., ಪುಟ – ೧೭೬

೪೬. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿ ಚಲುಕ್ಯರ ಶಾಸನಗಳು ವಾಸ್ತು ಮತ್ತು ಶಿಲ್ಪಕಲೆ, ಪುಟ – ೯೧

ಶಿಲ್ಪದಲ್ಲಿ ಹೆಚ್ಚಿನ ಶ್ರೀಮಂತಿಕೆಯಿಲ್ಲ, ಬದಲಾಗಿ ವ್ಯಕ್ತಿಚಿತ್ರಣಕ್ಕೆ ಮಹತ್ವ ನೀಡಲಾಗಿದೆ. ಕಿರೀಟ ಮುಕುಟಧಾರಿಯಾಗಿರುವ ಕಾರ್ತಿಕೇಯನ ಮುಖವು ಬಾಲಕಳೆಯಿಂದ ಕೂಡಿದ್ದು ಹಸನ್ಮುಖವಾಗಿದೆ. ಮುಖವು ನೇರವಾಗಿದ್ದು ಮುಖದ ಎರಡುಬದಿಗಳಿಂದಲೂ ಕೂದಲು ಇಳಿಬಿಡಲಾಗಿದ್ದು ಕಿವಿಯಲ್ಲಿ ಗಾಲಿಯಂತಿರುವ ವೃತ್ತಾಕಾರದ ಕುಂಡಲಗಳನ್ನು ಧರಿಸಿದ್ದಾನೆ. ಕಂಠದಲ್ಲಿ ವೈಕಕ್ಷಕವನ್ನು ಧರಿಸಿದ್ದಾನೆ. ಕಿರೀಟವು ಸುರುಳಿ ಚಿತ್ರಗಳ ವಿನ್ಯಾಸದಿಂದ ಕೂಡಿದೆ. ತೋಳಿನಲ್ಲಿ ನಾಗಸುತ್ತಿನಂತಹ ತೋಳುಬಂಧಿಯನ್ನು ಧರಿಸಿದ್ದು ಮುಂಗೈಗಳಲ್ಲಿ ಎರಡು ಬಳೆಗಳಿದ್ದು ಮುತ್ತಿನ ಅಲಂಕರಣದಿಂದ ಕೂಡಿವೆ. ಯಜ್ಞೋಪವೀತ, ಒಡ್ಯಾಣಗಳನ್ನು ಧರಿಸಿದ್ದಾನೆ. ಬಲಗೈಯಲ್ಲಿ ಮಧ್ಯಮ ಗಾತ್ರದ ಈಟಿಯಂತಹ ಆಯುಧವನ್ನು ಹಿಡಿದಿದ್ದು ಇದು ಇಬ್ಬದಿಯ ಖಡ್ಗದಂತಿರುವುದು ಗಮನಾರ್ಹ.

ಆದರೆ ಇದು ಖಡ್ಗವಾಗಿರದೆ ವೃತ್ತಾಕಾರವನ್ನು ಹೊಂದಿರುವುದರಿಂದ ದಂಡದ ರೀತಿಯಲ್ಲಿಯೂ ಭಾಸವಾಗುತ್ತಿದ್ದು ತುದಿಯು ಮಟ್ಟವಾಗುತ್ತಾ ಚೂಪಾಗಿರುವ ಇದು 'ಶಕ್ತಿ ಆಯುಧವಾಗಿದೆ'.[೪೭] ಎಡಗೈಯನ್ನು ಮೇಲೆತ್ತಿ ಅಸುರನ ಮೇಲೆ ವಿಜಯವನ್ನು ಸಾರುತ್ತಿದ್ದಾನೆ. ಅಸುರನು ಅಂಗಾತವಾಗಿ ಕೆಳಗೆ ಬಿದ್ದಿದ್ದು ಆತನ ಬಲಗೈಯಲ್ಲಿ ಸಣ್ಣದಾಗಿರುವ ಖಡ್ಗವನ್ನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿರುವುದನ್ನು ಗಮನಿಸಬಹುದು.

ಕೆಳ ಬದಿಯಲ್ಲಿ ದೇವತೆಗಳು ಕೈಮುಗಿಯುತ್ತಿದ್ದು ಅವರ ಮುಖದಲ್ಲಿನ ಸಂತೋಷವು ಎದ್ದು ಕಾಣಿಸುವಂತೆ ಕೆತ್ತಲಾಗಿದೆ. ಶಿಲ್ಪದ ಮೇಲುಭಾಗದಲ್ಲಿ ಹೂವಿನ ಹಾರಗಳೊಂದಿಗೆ ಕೈಮುಗಿಯುತ್ತಿರುವ ಗಂಧರ್ವ ಶಿಲ್ಪಗಳಿದ್ದು ಕಿರೀಟಧಾರಿಗಳಾಗಿರುವುದು ಗಮನಾರ್ಹ. ಇವರಲ್ಲಿ ಎಡಭಾಗದಲ್ಲಿ ನಿಂತಿರುವ ಗಂಧರ್ವನು ತೊಟ್ಟಿರುವ ಚಲ್ಲಣದ ಮಡಿಕೆಯು ಗಮನ ಸೆಳೆಯುತ್ತದೆ. ಹೂವಿನ ಹಾರದಲ್ಲಿನ ಮೈವಳಿಕೆಗಳು ಮತ್ತು ಆಭರಣಗಳಲ್ಲಿನ ವಿವರವಾದ ಕೆತ್ತನೆಗಳು ಸುಂದರವಾಗಿ ತ್ರಿಮಾನದ ರಚನೆಯಂತೆ ಭಾಸವಾಗುತ್ತವೆ.

ಇಡಿಯ ಶಿಲ್ಪದಲ್ಲಿ ಎದ್ದು ಕಾಣಿಸುವುದು ಇಲ್ಲಿನ ಮಯೂರ ಚಿತ್ರಣ. ಇಡಿಯ ಶಿಲ್ಪದ ಅರ್ಧಭಾಗವನ್ನು ಇದು ಆಕ್ರಮಿಸಿದೆ. ಸಮಾನಾಂತರವಾಗಿ ನಿಂತಿರುವ ನವಿಲಿನ ಗಾತ್ರ ವ್ಯಕ್ತಿಯ ಮಟ್ಟದಲ್ಲಿರುವುದು ಕಂಡುಬರುತ್ತದೆ. ಶಿಲ್ಪಿಯು ಇಲ್ಲಿ ನವಿಲಿನ ರಚನೆಗೆ ಮಹತ್ವ ನೀಡಿದ್ದು ಅದರ ಪ್ರತಿಯೊಂದು ಭಾಗವನ್ನು ವಿವರವಾಗಿ ಕೆತ್ತಿರುವುದನ್ನು ಗಮನಿಸಬಹುದು. ಒಟ್ಟು ನೋಟಕ್ಕೆ ಈ ಶಿಲ್ಪವು ಅತ್ಯಂತ ಸುಂದರವಾದ ರಚನೆಯಾಗಿದ್ದು ಬಾದಾಮಿಯ ಗುಹಾಲಯದ ಶಿಲ್ಪಗಳ ಮಟ್ಟಕ್ಕೆ ಈ ಶಿಲ್ಪವನ್ನು ಹೋಲಿಸಬಹುದು. ಬಹುಶಃ ಬಾದಾಮಿಯ ಮೊದಲ ಗುಹಾಲಯದ ಕಾರ್ತಿಕೇಯನ ಶಿಲ್ಪವನ್ನು ರಚಿಸಿದ ಶಿಲ್ಪಿಯೇ ಈ ಶಿಲ್ಪವೂ ಕೆತ್ತಿದ್ದರೆ ಆಶ್ಚರ್ಯವಿಲ್ಲ.

೪೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೭೬

ಕಾರ್ತಿಕೇಯ ಶಿಲ್ಪಗಳು



ಶಿಲ್ಪ-೧. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೨. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಹುಚ್ಚಿಮಲ್ಲಿ ದೇವಾಲಯ, ಐಹೊಳೆ



ಶಿಲ್ಪ-೪. ಪ್ರಾಚ್ಯವಸ್ತು ಸಂಗ್ರಹಾಲಯ ಆವರಣ, ಐಹೊಳೆ

ಶಿಲ್ಪ –೪

ಐಹೊಳೆ ಪ್ರಾಚ್ಯವಸ್ತು ಸಂಗ್ರಹಾಲಯದ ಆವರಣದಲ್ಲಿ ಗೋಡೆಗೆ ನಿಲ್ಲಿಸಲಾದ ಕಾರ್ತಿಕೆಯನ ಶಿಲ್ಪವು ಚತುರ್ಭುಜವಾಗಿದ್ದು, ದುಂಡಾಗಿರುವ ಈ ಶಿಲ್ಪದಲ್ಲಿ ಕಾರ್ತಿಕೇಯನು ನವಿಲಿನ ಮೇಲೆ ಕುಳಿತಿದ್ದು, ಇಲ್ಲಿನ ವಿಶೇಷವೆಂದರೆ ಈ ಹಿಂದೆ ನೋಡಿದ ಶಿಲ್ಪಗಳು ನವಿಲಿನ ಮೇಲೆ ಕುಳಿತು ಸವಾರಿ ಮಾಡುತ್ತಿದ್ದರೆ ಇಲ್ಲಿ ಸವಾರಿ ಮಾಡದಿರುವಂತೆ ಕೆತ್ತಲಾಗಿದೆ. ಚಿಕ್ಕದಾದ ಕಿರೀಟಮುಕುಟವನ್ನು ಹಾಗೂ ಕೊರಳಲ್ಲಿ ಸರವನ್ನು ಹೊಂದಿದೆ. ಇನ್ನೂ ಕೆಲವು ಸಣ್ಣ ಗಾತ್ರದ ಕಾರ್ತಿಕೇಯ ಶಿಲ್ಪಗಳು ನಮಗೆ ಬಾದಾಮಿ ಪರಿಸರದಲ್ಲಿ ಚಾಲುಕ್ಯ ಶಿಲ್ಪಿಗಳಿಂದ ರಚಿತವಾದುದು ಅಲ್ಲಲ್ಲಿ ಕಂಡುಬರುತ್ತವೆಯಾದರೂ ಶಿಲ್ಪಕಲೆಯ ದೃಷ್ಟಿಯಿಂದ ಮಹತ್ವದ್ದೆನ್ನಿಸುವುದಿಲ್ಲ. ಇವುಗಳು ಸಾಮಾನ್ಯವಾಗಿ ಕಂಬಗಳಲ್ಲಿ ಮತ್ತು ಒಂದೆರಡು ಚಾಲುಕ್ಯರ ಮೊದಲ ಅಷ್ಟ ದಿಕ್ಪಾಲಕರ ಶಿಲ್ಪಗಳಲ್ಲಿ ಕಂಡುಬರುತ್ತವೆ.

ಗರುಡ ಶಿಲ್ಪಗಳು

ಗರುಡನು ವಿಷ್ಣುವಿನ ವಾಹನ. ವಿಷ್ಣುವನ್ನು ಹೊತ್ತುಕೊಂಡಿರುವ ಗರುಡನ ಶಿಲ್ಪಗಳು ಕೆಲವೆಡೆ ಇದ್ದರೆ ಇನ್ನೂ ಹಲವಾರು ದೇವಾಲಯಗಳಲ್ಲಿ ಗರುಡನ ಬಿಡಿ ಶಿಲ್ಪಗಳು ಕಂಡುಬರುತ್ತವೆ. ಸಾಮಾನ್ಯವಾಗಿ ವಿಷ್ಣುವಿನ ಜೊತೆಗಿರುವ ಗರುಡನ ಶಿಲ್ಪಗಳಲ್ಲಿ ಕೆತ್ತನೆಯು ಪರಿಪೂರ್ಣವಾಗಿದೆ. ದೇವಾಲಯದ ಸುಕನಾಸಿಗಳಲ್ಲಿ, ಲಲಾಟಗಳಲ್ಲಿ ಗರುಡನನ್ನು ಕೆತ್ತಲಾಗಿರುವುದು ಗಮನಾರ್ಹವಾಗಿದೆ. ಈ ದೇವಾಲಯಗಳು ವೈಷ್ಣವ ದೇವಾಲಯಗಳೆಂಬುದರ ಗುರುತಾಗಿರುತ್ತವೆ. ಇಂತಹ ಕಡೆಗಳಲ್ಲಿ ಗರುಡನು ವೀರಾಸನದಲ್ಲಿ ಕುಳಿತಿರುವ ಭಂಗಿಯಲ್ಲಿರುತ್ತವೆ. ಶಿಲ್ಪಗಳು ಸಣ್ಣ ಗಾತ್ರದಲ್ಲಿರುತ್ತವೆ. ಇನ್ನು ಕೆಲವೆಡೆ ಗರುಡನ ಶಿಲ್ಪಗಳು ಸಾಮಾನ್ಯವಾಗಿ ನಿಂತಿರುವ, ಕೆಲವೆಡೆ ಹಾರಲು ಸಿದ್ಧನಾಗಿರುವಂತೆ ರೆಕ್ಕೆಗಳನ್ನು ಬಿಡಿಸಿ, ಕಾಲುಗಳನ್ನು ಬಗ್ಗಿಸಿಕೊಂಡು ಕೈ ಮುಗಿಯುತ್ತಿರುವ ಭಂಗಿಯಲ್ಲಿವೆ. ಚಾಲುಕ್ಯೋತ್ತರ ಕಾಲದ ದೇವಾಲಯದ ರಚನೆಗಳಲ್ಲಿ ಮುಖ್ಯವಾಗಿ ಐಹೊಳೆ ಮತ್ತು ಪಟ್ಟದಕಲ್ಲಿನ ದೇವಾಲಯಗಳಲ್ಲಿ ಗರುಡನ ಬಿಡಿ ಶಿಲ್ಪಗಳನ್ನು ನೋಡಬಹುದು.

ಶಿಲ್ಪ –೧

ಐಹೊಳೆಯ ಗಳಗನಾಥ ಸಂಕೀರ್ಣದ ದೇವಾಲಯಗಳಲ್ಲಿ ಹಲವಾರು ಗರುಡನ ಶಿಲ್ಪಗಳಿವೆ. ಇಲ್ಲಿ ಒಂದು ದೇವಾಲಯದ ದ್ವಾರಪಟ್ಟಿಯ ಮೇಲೆ ಗರುಡನು[೪೮] ಹಾರಲು ಸಿದ್ಧನಾಗಿರುವಂತೆ ಎರಡೂ ಕಾಲುಗಳನ್ನು ಸ್ವಲ್ಪ ಬಾಗಿಸಿ ನಿಂತುಕೊಂಡಿದ್ದಾನೆ, ರೆಕ್ಕೆಗಳು ತೆರೆದುಕೊಂಡಿವೆ, ಕೈಗಳನ್ನು ಜೋಡಿಸಿ ನಿಂತಿದ್ದಾನೆ. ತನ್ನ ಉಡುಗೆಯ ಚುಂಗು ಗಾಳಿಯಲ್ಲಿದೆ.

೪೮. ಡಾ. ಬಾ. ರಾ. ಗೋಪಾಲ : ಕರ್ನಾಟಕದ ಕಲೆಗಳು ಸಂ.೪ ವಾಸ್ತು, ಪುಟ –೬೪



ಜಟಾಮುಕುಟವನ್ನು ಹೊಂದಿದ್ದಾನೆ. ಸೊಂಟದ ಸುತ್ತ ಅಗಲವಾದ ಸೊಂಟಪಟ್ಟಿ ಮತ್ತು ಒಡ್ಯಾಣವನ್ನು ಧರಿಸಿದ್ದಾನೆ. ತೋಳಿನಲ್ಲಿ ತೋಳುಬಂಧ, ಮುಂಗೈಯಲ್ಲಿ ಬಳೆಗಳು, ಕಿವಿಯಲ್ಲಿ ಅಗಲವಾದ ವೃತ್ತಾಕಾರದ ಕುಂಡಲಗಳಿವೆ. ವೀರಗಚ್ಚೆಯನ್ನು ತೊಡೆಯವರೆಗೆ ಸುತ್ತಿದ್ದಾನೆ. ಮುಖವು ಸಣ್ಣದಾಗಿದ್ದು ಗಂಭೀರವಾಗಿದ್ದಾನೆ.

ಶಿಲ್ಪ –೨

ಸಾಮಾನ್ಯವಾಗಿ ಚಾಲುಕ್ಯರ ಎಲ್ಲ ಗರುಡ ಶಿಲ್ಪಗಳು ಇದೇ ರೀತಿಯಲ್ಲಿದ್ದು ಮೇಲುನೋಟಕ್ಕೆ ಒಂದೇ ರೀತಿಯಾಗಿ ಕಂಡುಬರುತ್ತವೆ. ಇದೇ ದೇವಾಲಯದ ಗರ್ಭಗೃಹದ ಬಾಗಿಲ ಮೇಲೆ ಲಲಾಟದಲ್ಲಿ ಕೂಡಾ ಗರುಡನ ಶಿಲ್ಪವನ್ನು ಕೆತ್ತಲಾಗಿದೆ. ಇಲ್ಲಿ ಕೆತ್ತಲಾಗಿರುವ ಗರುಡನು ಪದ್ಮಾಸನ ಭಂಗಿಯಲ್ಲಿ ಕುಳಿತಿದ್ದು ಎರಡು ಕೈಗಳನ್ನು ಜೋಡಿಸಿ ವಿಧೇಯತೆಯಿಂದ ಕೈಮುಗಿಯುತ್ತಿರುವಂತಿದೆ. ತಲೆಯ ಹಿಂಭಾಗದಿಂದ ಇಳಿಬಿಟ್ಟ ಕೂದಲು, ದೊಡ್ಡಗಾತ್ರದ ಕುಂಡಲಗಳು, ಬೆನ್ನ ಹಿಂದೆ ಅಗಲವಾಗಿ ಬಿಡಿಸಲಾಗಿರುವ ರೆಕ್ಕೆಗಳು, ನೀಳ ದೇಹ ಈ ಶಿಲ್ಪದ ಲಕ್ಷಣಗಳಾಗಿವೆ. ಸುಂದರವಾಗಿ ಕೆತ್ತಲಾಗಿರುವ ಈ ಶಿಲ್ಪವು ಗಮನಾರ್ಹವಾಗಿ ಕಂಡುಬರುತ್ತದೆ. ದೊಡ್ಡದಾದ ಕಣ್ಣುಗಳು ಮತ್ತು ಚಾಚಿದ ಚುಂಚುಗಳು ಮತ್ತು ರೆಕ್ಕೆಗಳನ್ನು ಹೊರತು ಪಡಿಸಿದರೆ ಇತರ ವ್ಯಕ್ತಿ ಶಿಲ್ಪಗಳಂತೆ ರಚಿಸಲಾಗಿದೆ. ಇದೇ ಪರಿಸರದಲ್ಲಿ ಇನ್ನೊಂದು ಗರುಡನ ಬಿಡಿ ಶಿಲ್ಪವಿದ್ದು ಇಲ್ಲಿ ಗರುಡನು ವೀರಾಸನದಲ್ಲಿ ಕೈ ಮುಗಿದುಕೊಂಡು ಕುಳಿತಿದ್ದಾನೆ. ಇಲ್ಲಿನ ಶಿಲ್ಪದಲ್ಲಿ ತಲೆಯು ದೊಡ್ಡದಾಗಿ ಕೆತ್ತಲ್ಪಟ್ಟಿದೆ.

ಶಿಲ್ಪ –೩

ಬಾದಾಮಿಯ ಜಗತ್ಪ್ರಸಿದ್ಧವಾದ ಮೂರನೇ ವೈಷ್ಣವಗುಹೆಯಲ್ಲಿ ಗರ್ಭಗೃಹಕ್ಕೆ ಎದುರಾಗಿರುವ ಕಪೋತದಲ್ಲಿ ಗರುಡನ ಬೃಹತ್ ಶಿಲ್ಪವಿದೆ. ಇದು ಚಾಲುಕ್ಯರ ಕಾಲದಲ್ಲಿ ಮೇರು ಕೃತಿಯಾಗಿ ಹೆಸರು ಪಡೆದಿದೆ. ಇಲ್ಲಿ ಹುಬ್ಬುಗಳನ್ನೇರಿಸಿ ತೆರೆದ ಕಣ್ಣುಗಳು, ಕುಳ್ಳ ಮೈಕಟ್ಟಿನೊಂದಿಗೆ ಬಲಗೈಯಲ್ಲಿ ಹಾವನ್ನು ಹಿಡಿದು ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿರುವ ಗರುಡನ ಇಬ್ಬದಿಗಳಲ್ಲಿ ಖಡ್ಗ, ಢಾಲು ಹಿಡಿದು ಕಂಠಾಶ್ಲೇಷ ರೀತಿಯಲ್ಲಿ ಹಾರುತ್ತಿರುವ ವಿದ್ಯಾದರ ದಂಪತಿಗಳನ್ನು ಕೆತ್ತಲಾಗಿದೆ. ಇದು ನೆಲವರ್ಕೆ ಎಂಬ ಶಿಲ್ಪಿಯ ಕೃತಿ.[೪೯] ಈ ಶಿಲ್ಪದಲ್ಲಿ ತಲೆಯ ಹಿಂಭಾಗಕ್ಕೆ ಪ್ರಭಾಮಂಡಲವಿದೆ. ಈ ಶಿಲ್ಪದ ಹಿಂಭಾಗದಲ್ಲಿ ಇನ್ನೂ ಸ್ಥಳಾವಕಾಶವಿದ್ದು ಅದನ್ನು ಹಾಗೆ ಬಿಟ್ಟಿರುವುದು ಮತ್ತು ಸಂಯೋಜನೆಗೆ ಹೆಚ್ಚಿನ ಒತ್ತು ನೀಡಿರುವುದು ಶಿಲ್ಪದ ಮಹತ್ವವಾಗಿದೆ.

ಶಿಲ್ಪ –೪

ಐಹೊಳೆ ಗಳಗನಾಥ ಸಂಕೀರ್ಣದ ಚಿಕ್ಕ ಮಂಟಪದಲ್ಲಿ ಲಲಾಟದಲ್ಲಿ ರಚಿಸಲಾದ ಅತಿ

೪೯. ಡಾ. ಅಂಬಳಿಕೆ ಹಿರಿಯಣ್ಣ (ಸಂ.) : ಕನ್ನಡ ವಿಷಯ ವಿಶ್ವಕೋಶ – ಇತಿಹಾಸ ಮತ್ತು ಪುರಾತತ್ವ, ಪುಟ – ೩೮೮

ಗರುಡ ಶಿಲ್ಪಗಳು



ಶಿಲ್ಪ-೧. ಗಳಗನಾಥ ದೇವಾಲಯ ಸಂಕೀರ್ಣ, ಐಹೊಳೆ



ಶಿಲ್ಪ-೨. ಗಳಗನಾಥ ದೇವಾಲಯ ಸಂಕೀರ್ಣ, ಐಹೊಳೆ



ಶಿಲ್ಪ-೩. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೪. ಗಳಗನಾಥ ದೇವಾಲಯ ಸಂಕೀರ್ಣ, ಐಹೊಳೆ

1



ಚಿಕ್ಕ ಪ್ರಮಾಣದ ಶಿಲ್ಪ ಇದಾಗಿದೆ. ಇಲ್ಲಿಯೂ ಸಹ ಮೇಲೆ ಹೇಳಿದ ಪದ್ಮಾಸನದಲ್ಲಿ ಕುಳಿತಂತೆ ಕೆತ್ತಲಾಗಿದೆ. ಆದರೆ ಈ ಶಿಲ್ಪವು ಮೇಲಿನ ಶಿಲ್ಪಕ್ಕಿಂತ ಸುಂದರವಿಲ್ಲ. ಆದರೂ ಉಬ್ಬು ಕೆತ್ತನೆಯಿದೆ. ಇಲ್ಲಿನ ರೆಕ್ಕೆಗಳನ್ನು ಬಿಡಿ ಬಿಡಿಯಾಗಿ ತೋರಿಸಿರುವುದನ್ನು ಕಾಣುತ್ತೇವೆ. ಎರಡು ಕೈಗಳನ್ನು ಕೂಡಿಸಿ ವಿಧೇಯತೆಯಿಂದ ಕೈಮುಗಿಯುತ್ತಿರುವಂತೆ ಕೆತ್ತಲಾಗಿದೆ.

ನಂದಿ ಶಿಲ್ಪಗಳು

ಶಿವನ ವಾಹನವಾದ ನಂದಿಯ ಕೆತ್ತನೆಯು ಚಾಲುಕ್ಯರ ಕಾಲದಲ್ಲಿ ಸುಂದರವಾಗಿ ರಚನೆಯಾಗಿರುವುದನ್ನು ಕಾಣಬಹುದು. ಮೊದಲ ಹಂತದ ರಚನೆಗಳಲ್ಲಿ ನಂದಿಯನ್ನು ಪ್ರತ್ಯೇಕವಾಗಿ ರಚಿಸುವ ಪದ್ಧತಿ ಚಾಲುಕ್ಯರ ಕಾಲದಲ್ಲಿ ಇದ್ದಂತೆ ಕಂಡುಬರುವುದಿಲ್ಲ. ಸಾಮಾನ್ಯವಾಗಿ ನಂದಿಯು ಶಿವನ ಎಡಭಾಗದಲ್ಲಿ ಅಥವಾ ಬಲಬದಿಯಲ್ಲಿ ಶಿವನ ಜೊತೆಗೆ ನಿಂತಿರುವ ಭಂಗಿಯಲ್ಲಿರುತ್ತಿದ್ದವು. ಇದರ ಹೊರತಾಗಿ ಶಿವ ಪಾರ್ವತಿಯರು ನಂದಿಯ ಮೇಲೆ ಕುಳಿತು ಸವಾರಿ ಹೊರಟಿರುವ ಶಿಲ್ಪಗಳು ನಮಗೆ ಹಲವೆಡೆ ಕಂಡುಬರುತ್ತವೆ. ಆದರೆ ನಂದಿಗೆ ಪ್ರತ್ಯೇಕವಾದ ಶಿಲ್ಪ ಮತ್ತು ಮಂಟಪಗಳಲ್ಲಿ ನಂದಿಯನ್ನು ಪ್ರತಿಷ್ಠಾಪಿಸುವ ಪದ್ಧತಿ ಬಹುಶಃ ನಂತರದ ದಿನಗಳಲ್ಲಿ ಬೆಳೆದು ಬಂದಿರಬೇಕು. ಆದುದರಿಂದ ಇಂತಹ ಶಿಲ್ಪಗಳನ್ನು ಮಹಾಕೂಟ, ಪಟ್ಟದಕಲ್ಲಿನ ಪರಿಸರದಲ್ಲಿ ಮತ್ತು ಐಹೊಳೆಯಲ್ಲಿ ಕಾಣುತ್ತೇವೆ.

ಶಿಲ್ಪ –೧

ಎರಡನೆಯ ಹಂತದಲ್ಲಿ ನಂದಿಗೆ ಪ್ರತ್ಯೇಕವಾದ ಮಂಟಪ ಕಾಣಿಸಿಕೊಂಡಿದ್ದು, ಪಟ್ಟದಕಲ್ಲಿನ ನಂದಿ ಮಂಟಪದ ಮಧ್ಯದ ನಾಲ್ಕು ಸ್ವತಂತ್ರ ಕಂಬಗಳು ಮೇಲ್ಛಾವಣಿಗೆಗೆ ಪ್ರಧಾನ ಆಧಾರವಾಗಿವೆ. ಮಂಟಪದ ಮಧ್ಯದಲ್ಲಿ ಕಪ್ಪುಶಿಲೆಯಲ್ಲಿ ನಿರ್ಮಿಸಲಾದ ಬೃಹತ್ ಗಾತ್ರದ ನಂದಿಶಿಲ್ಪವು ಸ್ಥಾಪಿತವಾಗಿದೆ.[೫೦] ಬಾದಾಮಿಯ ಭೂತನಾಥ ಗುಡಿಯ ಸಂಕೀರ್ಣದಲ್ಲಿ ನಂದಿಯ ಬಿಡಿ ಶಿಲ್ಪವೊಂದನ್ನು ಕೆತ್ತಿರುವುದನ್ನು ಕಾಣಬಹುದು. ಇದು ಸಣ್ಣ ಗಾತ್ರದ ಬಿಡಿ ಶಿಲ್ಪವಾಗಿದ್ದು ಉಬ್ಬು ಶಿಲ್ಪವಾಗಿದೆ.

ಶಿಲ್ಪ –೨

ಬಾದಾಮಿಯ ಭೂತನಾಥ ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ಅದರ ಬಲಭಾಗದ ನಂದಿಯು ಮೊಣಕಾಲುಗಳನ್ನೂರಿ ಭಕ್ತಿಯಿಂದ ಕುಳಿತಿರುವಂತೆ ಪಾರ್ಶ್ವಭಂಗಿಯಲ್ಲಿ ಕೆತ್ತಲಾಗಿರುವ ಶಿಲ್ಪ. ಆದರೆ ಇದು ಚಾಲುಕ್ಯೋತ್ತರ ಕಾಲದಲ್ಲಿ ಅಂದರೆ ಬಹುಶಃ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕೆತ್ತಲಾಗಿರುವ ಶಿಲ್ಪ. ಈ ಸಮಯಕ್ಕಾಗಲೇ ನಂದಿಯನ್ನು ಬಿಡಿ ಶಿಲ್ಪವಾಗಿ ಅಲ್ಲಲ್ಲಿ ಗೋಡೆಗಳಲ್ಲಿ, ಕಂಬಗಳಲ್ಲಿ, ಅವಕಾಶವಿರುವಲ್ಲೆಲ್ಲ ಕೆತ್ತುವ ಪದ್ಧತಿ ಬೆಳೆದುಬಂದಿತ್ತು. ಈ ಶಿಲ್ಪವು ಕಲೆಯ ದೃಷ್ಟಿಯಿಂದ ವಿಶೇಷ ಮಹತ್ವ ಪಡೆಯುವುದಿಲ್ಲ.

೫೦. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೩೩

ಶಿಲ್ಪ –೩

ಮಹಾಕೂಟದ ಪರಿಸರದಲ್ಲಿರುವ ನಂದಿಮಂಟಪದಲ್ಲಿ ಒಂದು ಸುಂದರವಾದ ನಂದಿಯ ಶಿಲ್ಪವಿದೆ. ಮಾನವಸಹಜ ಅಳತೆಯ ಈ ಶಿಲ್ಪದ ಕೆತ್ತನೆ ಆಕರ್ಷಕವಾಗಿದೆ. ಇಲ್ಲಿನ ಶಿಲ್ಪದಲ್ಲಿ ನಂದಿಯ ಮುಖವು ಯುವಕನ ಅಥವಾ ಸಣ್ಣ ಪ್ರಾಯದ್ದಾಗಿದ್ದು ಕಿವಿಗಳು ಅಗಲವಾಗಿ ತೆರೆದುಕೊಂಡಿವೆ. ಸಣ್ಣಗಾತ್ರದ ಕೊಂಬುಗಳುಳ್ಳ ನಂದಿಯನ್ನು ಕರಿಕಲ್ಲಿನಲ್ಲಿ ಕೆತ್ತಲಾಗಿದ್ದು ನುಣುಪಾಗಿದೆ. ಮುಖದಲ್ಲಿ ಗಾಂಭೀರ್ಯವಿದೆ. ಕುತ್ತಿಗೆಯಿಂದ ಕೆಳಗಿಳಿದಿರುವ ಗಂಗೆದೊಗಲು ವೃತ್ತಾಕಾರದ ವಾರೆ ಗೆರೆಗಳನ್ನು ಹೊಂದಿದೆ. ಕೊಂಬಿನ ಸುತ್ತಲೂ ಹಣೆಯ ಭಾಗದಲ್ಲಿ ಬಿಗಿಯಲಾದ ಪಟ್ಟಿ, ಕುತ್ತಿಗೆಯ ಸುತ್ತ ಬಿಗಿಯಲಾದ ಹೆಣೆದ ಹಗ್ಗದ ರೀತಿಯ ಪಟ್ಟಿಗಳು, ಅದರ ಹಿಂದಿನಿಂದ ಜೋತುಹಾಕಲಾದ ಆಭರಣದ ಕೆತ್ತನೆಯ ಘಂಟೆಸರ ಕಲಾತ್ಮಕ ಕುಸುರಿಕೆತ್ತನೆಯಿಂದ ಕೂಡಿದೆ. ನಂದಿಯು ಕಾಲುಗಳನ್ನು ನೆಲಕ್ಕೆ ಮಂಡಿಯೂರಿ ಕುಳಿತಿದ್ದು ಕಾಲಿನ ಗೊರಸುಗಳು, ಮಡಿಕೆಗಳು ಆಕರ್ಷಕವಾಗಿ ಮೂಡಿಬಂದಿವೆ. ಕಣ್ಣುಗಳ ಕೆತ್ತನೆಯಲ್ಲಿ ಜೀವಂತಿಕೆ ಕಂಡುಬರುತ್ತದೆ. ಈ ಶಿಲ್ಪವನ್ನು ಪ್ರಮಾಣಬದ್ಧವಾಗಿ ಕೆತ್ತಲಾಗಿದ್ದು ನೋಡುಗರಲ್ಲಿ ತನ್ಮಯತೆಯನ್ನುಂಟುಮಾಡುತ್ತದೆ.

ಶಿಲ್ಪ –೪

ಮಹಾಕೂಟದ ಪುಷ್ಕರಣಿಯ ಪಕ್ಕದಲ್ಲಿನ ಸುಂದರವಾದ ಈ ಶಿಲ್ಪದ ರಚನೆ ಮೊದಲಿನ ಶಿಲ್ಪಕ್ಕಿಂತ ಭಿನ್ನವಾಗಿದೆ. ಇಲ್ಲಿ ನಂದಿಯು ವಯಸ್ಕನಂತೆ ಕಂಡುಬರುತ್ತದೆ. ಇಲ್ಲಿ ಕುತ್ತಿಗೆಯ ಕೆಳಭಾಗದಲ್ಲಿ ಮೊದಲಿನ ಶಿಲ್ಪದಲ್ಲಿ ನೋಡಿದಂತೆ ಗಂಗೆದೊಗಲನ್ನು ಸುರುಳಿಯಾಗಿ ಕೆತ್ತಿಲ್ಲ, ಬದಲಾಗಿ ಕೆಲವು ಮಡಿಕೆಗಳನ್ನು ಕೆತ್ತಲಾಗಿದ್ದು ಹೆಚ್ಚಿನ ಉಬ್ಬುಗಳಾಗಲಿ, ಲಾವಣ್ಯವಾಗಲಿ ಹೊಂದಿಲ್ಲ. ಉಳಿದಂತೆ ಹಗ್ಗದ ಪಟ್ಟಿಯನ್ನು ಇಲ್ಲಿ ಕೆತ್ತಲಾಗಿದ್ದು ಪ್ರತಿಯೊಂದು ಹೆಣೆಯನ್ನು ಮತ್ತು ಗಂಟನ್ನು ಕೂಡಾ ವಿವರವಾಗಿ ಕೆತ್ತಲಾಗಿದೆ. ಡುಬ್ಬವು ಹೆಚ್ಚಿನ ಎರನ್ನು ಹೊಂದಿದ್ದು ಅದರ ಕೆಳಭಾಗದಲ್ಲಿ ಘಂಟೆಸರವನ್ನು ಕೆತ್ತಲಾಗಿದ್ದು ಪೀಠದವರೆಗೂ ಇಳಿಬಿದ್ದಿರುವುದನ್ನು ಕಾಣಬಹುದು. ಕಲಾತ್ಮಕವಾದ ಈ ಶಿಲ್ಪವು ಅತ್ಯಂತ ಉತ್ಕೃಷ್ಟ ಶಿಲ್ಪಗಳಲ್ಲೊಂದು. ಇಲ್ಲಿ ನಂದಿಯು ಕಾಲುಗಳನ್ನು ಮಡಚಿ ವಿಧೇಯತೆಯಿಂದ ಕುಳಿತಿದ್ದು, ಆತನ ಬಾಲದ ಚುಂಗು ಹಿಂಗಾಲಿನಿಂದ ಒಳಹೊಕ್ಕು ಕಾಲುಗಳ ಮಧ್ಯದಿಂದ ಹೊರಬಂದಿರುವಂತೆ ತೋರಿಸುವಲ್ಲಿ ಕಲಾವಿದರ ಸಾಮರ್ಥ್ಯದ ಅನುಭವವಾಗುತ್ತದೆ.

ಶಿಲ್ಪ –೫

ಐಹೊಳೆಯ ಲಾಡ್‌ಖಾನ್ ದೇವಾಲಯದ ಕಂಬವೊಂದರಲ್ಲಿ ನಂದಿಯ ಸಣ್ಣದಾದ ಉಬ್ಬು ಶಿಲ್ಪವೊಂದನ್ನು ಕೆತ್ತಲಾಗಿದೆ. ಇಲ್ಲಿ ನಂದಿಯ ಪಕ್ಕದಲ್ಲಿ ಶಿವನ ಗಣವೊಂದನ್ನು ಕೂಡ



ಕೆತ್ತಲಾಗಿದೆ. ನಂದಿಯ ಶಿಲ್ಪವು ಮಾಹಾಕೂಟದ ರಚನೆಯಂತೆ ಇದ್ದು ನಂದಿಯು ಸದೃಢವಾಗಿದ್ದು ಶಿಲ್ಪವು ಸಣ್ಣದಾಗಿದ್ದರೂ ಪರಿಪೂರ್ಣವಾಗಿದೆ.

ಶಿಲ್ಪ –೬

ಐಹೊಳೆ ಗಳಗನಾಥ ದೇವಾಲಯದ ಆವರಣದಲ್ಲಿ ಕೆಲವು ನಂದಿಶಿಲ್ಪಗಳನ್ನು ಬಿಡಿಯಾಗಿ ಏಕಶಿಲೆಯಲ್ಲಿ ಕೆತ್ತಲಾಗಿರುವುದು ಕಂಡುಬರುತ್ತದೆ. ಇವುಗಳಲ್ಲಿ ಒಂದು ಭಗ್ನವಾಗಿದ್ದು ಮುಖವು ಕಾಣೆಯಾಗಿದೆ. ಇನ್ನೊಂದು ಶಿಲ್ಪವು ಭಾಗಶಃ ಭಗ್ನಗೊಂಡಿದೆಯಾದರೂ ಶಿಲ್ಪವು ಚೆನ್ನಾಗಿದೆ. ಭಗ್ನಗೊಂಡಿರುವ ಶಿಲ್ಪದಲ್ಲಿ ನಂದಿಯು ಬಲಮುಂಗಾಲನ್ನು ಸ್ವಲ್ಪ ಮೇಲಕ್ಕೆತ್ತಿದ್ದು ಆಕರ್ಷಕವಾಗಿ ಕಂಡುಬರುತ್ತದೆ. ಇನ್ನೊಂದು ಶಿಲ್ಪವು ದೊಡ್ಡಗಾತ್ರದ ರಚನೆಯಾಗಿದ್ದು, ಆಕರ್ಷಕ ಕೆತ್ತನೆಯಿಂದ ಕೂಡಿದೆ. ಇಲ್ಲಿ ನಂದಿಯ ಮುಖವನ್ನು ಮೊದಲಿನ ಶಿಲ್ಪದಲ್ಲಿನಷ್ಟು ಮೇಲಕ್ಕೆತ್ತಿಲ್ಲ, ಬದಲಾಗಿ ತಲೆಯನ್ನು ಸ್ವಲ್ಪ ಕೆಳಕ್ಕೆ ಹಾಕಿ ನೆಲ ನೋಡುತ್ತಿರುವಂತಿದೆ.

ಶಿಲ್ಪದಲ್ಲಿ ನಂದಿಯು ದಷ್ಟಪುಷ್ಟವಾಗಿದ್ದು ತಲೆಯ ಮಟ್ಟಕ್ಕೆ ಬರುವಂತೆ ಇಣಿಯನ್ನು ಕೆತ್ತಲಾಗಿದೆ. ಕುತ್ತಿಗೆಯ ಸುತ್ತ ಗಂಗೆದೊಗಲು ಕುತ್ತಿಗೆಯ ಮೇಲ್ಭಾಗದಿಂದ ಇಳಿದು ಮುಂಗಂಟಿನವರೆಗೂ ಹರಿದುಬರುವಂತೆ ಸುಂದರವಾಗಿ ಕೆತ್ತಲಾಗಿದೆ. ಇದಲ್ಲದೆ ಹಗ್ಗದ ರಚನೆಯೂ ಇದ್ದು ಇದು ಎರಡು ಸುತ್ತುಗಳಿಂದ ಕೂಡಿದೆ. ಇದಲ್ಲದೆ ಇಣಿಭಾಗದಲ್ಲಿ ಘಂಟೆಸರದ ದೊಡ್ಡ ಮಾಲೆಯಿದ್ದು ಕೊರಳ ಕೆಳಭಾಗದಿಂದ ನೆಲದವರೆಗೂ ಹರಡಿದೆ. ಈ ಶಿಲ್ಪದ ರಚನೆಯನ್ನು ಗಮನಿಸಿದರೆ ಮಹಾಕೂಟದ ಶಿಲ್ಪಗಳಲ್ಲಿ ನೋಡಿರುವ ರಚನೆಗಳಿಗಿಂತ ಭಿನ್ನವಾಗಿದ್ದು ಸಹಜತೆಯಿಂದ ಕೂಡಿದೆ. ಕೆತ್ತನೆಯಲ್ಲಿ ಹೆಚ್ಚಿನ ಪರಿಪೂರ್ಣತೆ ಕಂಡುಬರುತ್ತದೆ. ಆದರೆ ಕಾಲುಗಳ ರಚನೆಯಲ್ಲಿ ವಿಶೇಷ ಗಮನವನ್ನು ನೀಡಿದಂತೆ ಕಂಡುಬರುವುದಿಲ್ಲ.

ಪ್ರಮಾಣಬದ್ಧತೆಯಲ್ಲಿ ಅಸಹಜ ಕೆತ್ತನೆಯಿದೆ. ಹಿಂದಿನ ಶಿಲ್ಪಕ್ಕೆ ಕೊಟ್ಟ ಮಹತ್ವವನ್ನು ಇಲ್ಲಿ ನೀಡಿಲ್ಲವೆಂದು ಹೇಳಬೇಕಾಗುತ್ತದೆ. ಸಣ್ಣಗಾತ್ರದ ಕೊಂಬುಗಳನ್ನು ತಲೆಯಿಂದ ಮೇಲಕ್ಕೆದ್ದ ಶಂಖುಗಳೆಂಬಂತೆ ಸಣ್ಣಗಾತ್ರದಲ್ಲಿ ರಚಿಸಲಾಗಿದ್ದು ಈ ಕೊಂಬುಗಳ ಸುತ್ತ ಮಣಿಸರವನ್ನು ಸುತ್ತಲಾಗಿದೆ. ಇದರಿಂದಾಗಿ ಇವು ಎರಡು ಕಳಸದ ತುದಿಯಂತೆ ಕಂಡುಬರುತ್ತವೆ. ಇದೇ ಪರಿಸರದಲ್ಲಿ ಇನ್ನೊಂದು ಭಗ್ನ ಶಿಲ್ಪವಿದ್ದು ತಲೆಯು ತುಂಡಾಗಿದೆ. ಆದರೆ ಕುತ್ತಿಗೆಯಲ್ಲಿನ ಗಂಗೆದೊಗಲು, ಇಣಿ ಆಕರ್ಷಕವಾಗಿ ಕಂಡುಬರುತ್ತವೆ. ಇದು ಇಲ್ಲಿನ ಹೊರ ಆವರಣದ ನಂದಿಯ ಮಂಟಪದಲ್ಲಿ ಸ್ಥಾಪಿತವಾಗಿದೆ.

ಶಿಲ್ಪ –೭

ಐಹೊಳೆಯ ಜ್ಯೋತಿರ್ಲಿಂಗ ದೇವಾಲಯಗಳ ಸಂಕೀರ್ಣದಲ್ಲಿರುವ ನಂದಿಯ ಶಿಲ್ಪ ಆಕರ್ಷಕವಾಗಿದ್ದು ಇದು ಕಲ್ಯಾಣ ಚಾಲುಕ್ಯರ ಕಾಲದ ರಚನೆಯಾಗಿದೆ. ಈ ಶಿಲ್ಪವು ಮೊದಲಿನ


ನಂದಿ ಶಿಲ್ಪಗಳು



ಶಿಲ್ಪ-೧. ನಂದಿ ಮಂಟಪ, ಪಟ್ಟದಕಲ್ಲು




ಶಿಲ್ಪ-೨. ಭೂತನಾಥ ದೇವಾಲಯ, ಬಾದಾಮಿ



ಶಿಲ್ಪ-೩. ನಂದಿ ಮಂಟಪ, ಮಹಾಕೂಟ



ಶಿಲ್ಪ-೪. ಪುಷ್ಕರಣಿ ಪಕ್ಕದಲ್ಲಿ, ಮಹಾಕೂಟ



ಶಿಲ್ಪ-೫. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೬. ಗಳಗನಾಥ ದೇವಾಲಯ, ಐಹೊಳೆ



ಶಿಲ್ಪ-೭. ಜೋತಿರ್ಲಿಂಗ ದೇವಾಲಯ, ಐಹೊಳೆ



ಶಿಲ್ಪ-೮. ರಾಮಲಿಂಗೇಶ್ವರ ದೇವಾಲಯ, ಐಹೊಳೆ

ಶಿಲ್ಪದಷ್ಟು ಸುಪುಷ್ಟವಾಗಿಲ್ಲದಿದ್ದರೂ ಕೆತ್ತನೆಯಲ್ಲಿ ಮೊದಲಿನ ಪ್ರತಿಮಾಲಕ್ಷಣಗಳು ಮುಂದುವರಿದಂತೆ ಕಂಡುಬರುತ್ತದೆ. ಇದರ ಜೊತೆಗೆ ಶಿಲ್ಪಗಳನ್ನು ಇನ್ನಷ್ಟು ಕಲಾತ್ಮಕವಾಗಿಸುತ್ತ ಅಲಂಕರಣಗಳಿಗೆ ಮಹತ್ವ ನೀಡಲಾರಂಭಿಸಿದ್ದನ್ನು ಗಮನಿಸಬಹುದು. ಚಿತ್ರದ ರೇಖೆಗಳು ನೇರವಿದ್ದುದು ಸುರುಳಿಯಾಗುತ್ತ ಅಲಂಕೃತವಾಗುವತ್ತ ಗಮನ ನೀಡಲಾರಂಭಿಸಿದಂತೆ ಕಂಡುಬರುತ್ತದೆ.

ಲಾಡ್‌ಖಾನ್ ದೇವಾಲಯದಲ್ಲಿರುವ ನಂದಿಯು ಸರಳವಾದ ಕೆತ್ತನೆಯಾಗಿದ್ದು ದೇಹರಚನೆಗೆ ಮಹತ್ವ ನೀಡಲಾಗಿದೆ. ಇಲ್ಲಿ ಅಲಂಕರಣಗಳು ಗಂಗೆದೊಗಲು, ಸುರುಳಿಗಳು ಅಥವಾ ಮಣಿಮಾಲೆಗಳ ಕೆತ್ತನೆ ಕಡಿಮೆ. ಬದಲಾಗಿ ಸರಳವಾದ ರೇಖೆಗಳು, ಒಟ್ಟು ಆಕಾರ, ಮೈವಳಿಕೆಗಳಿಗೆ ಗಮನ ನೀಡಲಾಗಿದೆ. ಕಿವಿ ಅಥವಾ ಕೊಂಬುಗಳ ಕೆತ್ತನೆಯನ್ನು ಗಮನಿಸಿದರೆ ಇದು ಕೇವಲ ಸೂಚ್ಯವಾಗಿ ರಚನೆಯಾದಂತೆ ಕಾಣಿಸುತ್ತದೆ. ಆದರೆ ಈ ಶಿಲ್ಪದಲ್ಲಿ ಸೂಚ್ಯವಾಗಿ ತೋರಿಸಲಾದ ಕಣ್ಣಿನ ಉಬ್ಬು ಗಮನ ಸೆಳೆಯುತ್ತದೆ. ಪಟ್ಟದಕಲ್ಲಿನ ದೇವಾಲಯ ಸಮುಚ್ಚಯದಲ್ಲಿ ಸುಂದರವಾದ ಕೆಲವು ನಂದಿಯ ಶಿಲ್ಪಗಳನ್ನು ನೋಡಬಹುದಾಗಿದೆ. ಕಾಶೀವಿಶ್ವೇಶ್ವರ ದೇವಾಲಯದ ಮುಂಭಾಗದಲ್ಲಿ ನಂದಿಯ ಭಗ್ನಶಿಲ್ಪವೊಂದಿದೆ. ಆಕರ್ಷಕ ಕೆತ್ತನೆಯಿಂದ ಕೂಡಿರುವ ಈ ಶಿಲ್ಪವು ಸರಳತೆಯಿಂದ ಕೂಡಿದೆ.

ಶಿಲ್ಪ –೮

ಐಹೊಳೆಯ ಪರಿಸರದಲ್ಲಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಂದಿಯ ಶಿಲ್ಪವಿದ್ದು, ಅತ್ಯಂತ ಸುಂದರವಾಗಿ ಮೂಡಿಬಂದಿದೆ. ಕೊರಳಲ್ಲಿ ಹಗ್ಗದ ಕೆತ್ತನೆಯು ಬ್ರಹ್ಮಗಂಟಿನಿಂದ ಕೂಡಿದ್ದು, ಇಣಿಯ ಕೆಳಗೆ ದೊಡ್ಡಾಕಾರದ ಘಂಟೆಯ ಸರವನ್ನು ಹೊಂದಿದ್ದು ಮತ್ತು ಗೊರಸುಗಳನ್ನು ಅತ್ಯಂತ ಆಕರ್ಷಕವಾಗಿ ಕೆತ್ತಲಾಗಿದೆ.

ನಾಗರಾಜನ ಶಿಲ್ಪಗಳು

ಬಾದಾಮಿಯ ಪರಿಸರದಲ್ಲಿ ನಾಗರಾಜನ ಶಿಲ್ಪಗಳು ಹೇರಳವಾಗಿ ಕಂಡುಬರುತ್ತವೆ. ಮುಖ್ಯವಾಗಿ ದೇವಾಲಯದ ಛಾವಣಿಯಲ್ಲಿ (ಛತ್ತಿನಲ್ಲಿ), ಕೆಲವೆಡೆ ಲಲಾಟಬಿಂಬಗಳಲ್ಲಿ ನಾಗರಾಜನ ಶಿಲ್ಪಗಳು ಕಂಡುಬರುವುದು ವಿಶೇಷ.

ಶಿಲ್ಪ –೧

'ನಾಗರಾಜನು ಪ್ರಾಯಶಃ ಮೊದಲ ಬಾರಿ ಕಾಣಿಸಿಕೊಳ್ಳುವುದು ಬಾದಾಮಿಯ ಶೈವ ಗುಹಾಲಯದ ಛತ್ತಿನಲ್ಲಿ. ಇದು ಮೊದಲನೆಯ ಕಲಾಕೃತಿಯಾಗಿದ್ದರೂ ಒಂದು ಉತ್ಕೃಷ್ಟ ಕಲಾಸೃಷ್ಟಿಯಾಗಿದೆ'.[೫೧] ಇಲ್ಲಿನ ನಾಗರಾಜನು ಐದು ಹೆಡೆಗಳನ್ನು ಹೊಂದಿದ್ದು ದೇಹದ ಮೇಲಿನ ಅರ್ಧಭಾಗ ಮಾನವ ರೂಪದಲ್ಲಿದೆ. ಕೆಳಗಿನ ಅರ್ಧದೇಹವು ಹಾವಿನ ದೇಹದಂತೆ

---

೫೧. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೫



ಸುರುಳಿಗಳನ್ನು ಹೊಂದಿದ್ದು ಮೂರು ಸುರುಳಿಗಳನ್ನು ಹೊಂದಿದೆ. ಮೊದಲ ಸುರುಳಿಯಿಂದ ಪ್ರಾರಂಭವಾಗಿ ಈ ಸುರುಳಿಯು ಸಣ್ಣಗಾಗುತ್ತ ಕೊನೆಗೆ ಹೊರಗಿನ ವೃತ್ತಾಕಾರದೊಂದಿಗೆ ಸಂಯೋಗ ಹೊಂದುತ್ತದೆ. ಇಲ್ಲಿ ಸುರುಳಿಯು ದಪ್ಪನಾಗಿದ್ದು ಉಬ್ಬುತನವನ್ನು ಹೊಂದಿದ್ದು ತ್ರಿಮಾನದ ಪೂರ್ಣ ಅನುಭವವನ್ನು ಉಂಟುಮಾಡಲಾಗಿದೆ. ನಾಗರಾಜನ ಐದು ಹೆಡೆಗಳು ನಾಗರಾಜನಿಗೆ ಪ್ರಭಾವಳಿಯಾಗಿ ಸೊಗಸನ್ನು ನೀಡಿವೆ. ಮುಖವು ಶಾಂತವಾಗಿದ್ದು ಸಣ್ಣದಾಗಿ ಸರಳವಾಗಿ ಕಂಡುಬರುತ್ತದೆ. ತಲೆಯಲ್ಲಿ ಸಣ್ಣ ಗಾತ್ರದ ಕಿರೀಟ ಮುಕುಟವಿದೆ. ಕುತ್ತಿಗೆಯಲ್ಲಿ ಸಣ್ಣದಾದ ಮುತ್ತಿನ ಹಾರವಿದೆ. ಯಜ್ಞೋಪವೀತವನ್ನು ತೆಳ್ಳಗಾಗಿ ಕೆತ್ತಲಾಗಿದ್ದು ಲಯಬದ್ಧವಾಗಿದ್ದು ಕೈಗಳು ಭಗ್ನಗೊಂಡಿವೆ. ಇವುಗಳನ್ನು ಹೊರತುಪಡಿಸಿದರೆ ಶಿಲ್ಪದಲ್ಲಿ ವಿಶೇಷವೇನಿಲ್ಲ.

ಇಲ್ಲಿ ನೋಡಬೇಕಾಗಿರುವುದು ಶಿಲ್ಪದ ಸರಳತೆ ಮತ್ತು ಲಯಬದ್ಧವಾದ ಕೆತ್ತನೆ. ಶಿಲ್ಪದಲ್ಲಿ ಮೈವಳಿಕೆಗಳಿಲ್ಲದಿದ್ದರೂ ಕೆತ್ತನೆ ಪರಿಪೂರ್ಣವಾಗಿದೆ. ಆತನ ಹಾವಿನ ದೇಹದ ಸುರುಳಿಯಲ್ಲಿ ತೆಳ್ಳನೆಯ ಗೆರೆಗಳ ವಾರೆ ರೇಖೆಗಳ ಕೆತ್ತನೆ ಇದ್ದು ಇದನ್ನು ದೇಹದ ಚರ್ಮದ ಮೈವಳಿಕೆಯಂತೆ ಕೆತ್ತಲಾಗಿದೆ. ಶಿಲ್ಪವನ್ನು ಚೌಕದ ಪಟ್ಟಿಕೆಯಲ್ಲಿ ಕೆತ್ತಲಾಗಿರುವುದರಿಂದ ವೃತ್ತಾಕಾರದ 'ನಾಗರಾಜನ ಕೆತ್ತನೆಯ ನಂತರ ಉಳಿಯುವ ನಾಲ್ಕು ಮೂಲೆಗಳ ಸ್ಥಳಾವಕಾಶವನ್ನು ಶಿಲ್ಪಿಯು ಪುಷ್ಪನಕ್ಷೆ, ಮಕರಾದಿ ಪ್ರಾಣಿಗಳಿಂದ ಅಲಂಕರಿಸಿದ್ದಾನೆ'.[೫೨] ಈ ಅಲಂಕೃತ ಸುರುಳಿ ವಿನ್ಯಾಸಗಳಿಂದಾಗಿ ನಾಗರಾಜನ ಶಿಲ್ಪದಲ್ಲಿ ಕಾಣಿಸದಿರುವ ಮೈವಳಿಕೆಗಳ ಕೊರತೆ. ಮುಖ್ಯ ಶಿಲ್ಪದ ಮಹತ್ವವು ಹಾಗೇ ಉಳಿದುಕೊಂಡು ಸುತ್ತಲಿನ ವಿನ್ಯಾಸವೂ ಗಮನ ಸೆಳೆಯುತ್ತದೆ. ಒಟ್ಟಿನಲ್ಲಿ ಈ ಶಿಲ್ಪವು ಬಾದಾಮಿ ಚಾಲುಕ್ಯರ ಕಾಲದ ನಾಗರಾಜರ ಶಿಲ್ಪಗಳಲ್ಲಿ ಪ್ರಾತಿನಿಧಿಕವಾಗಿ ನಿಲ್ಲುತ್ತದೆ.

ಶಿಲ್ಪ –೨

ಐಹೊಳೆಯ ದುರ್ಗಾ ದೇವಾಲಯದಲ್ಲಿ ನಾಗರಾಜನ ಶಿಲ್ಪವನ್ನು ಛತ್ತಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಬಾದಾಮಿಯ ಗುಹಾಲಯದ ಶಿಲ್ಪಕ್ಕೆ ಹೋಲಿಸಿದರೆ ವಿಭಿನ್ನವಾಗಿ ರಚಿತವಾಗಿದೆ. ಆಯತಾಕಾರದ ಚೌಕಟ್ಟಿನಲ್ಲಿ ಕೆತ್ತಲಾಗಿರುವ ಈ ಶಿಲ್ಪದಲ್ಲಿ ನಾಗರಾಜನ ಶಿಲ್ಪದ ಸುತ್ತಲೂ ಕೆಲ ನಾಗ ದೇವತೆಗಳ ಶಿಲ್ಪಗಳನ್ನು ಸಹ ಕೆತ್ತಲಾಗಿದೆ. ಇಲ್ಲಿ ಗಮನಸೆಳೆಯುವುದು ನಾಗರಾಜನ ಶಿಲ್ಪದ ರಚನೆ. ಇಲ್ಲಿನ ನಾಗರಾಜನ ಶಿಲ್ಪದಲ್ಲಿ ನಾಗರಾಜನ ದೇಹದ ಮೇಲಿನ ಎದೆಮಟ್ಟದವರೆಗೆ ಮನುಷ್ಯಾಕೃತಿ ಇದ್ದು ದೇಹದ ಕೆಳಗಿನ ಭಾಗ ಹಾವಿನ ರಚನೆಯಾಗಿದೆ. ಮುಖದ ಕೆತ್ತನೆ ವಿಭಿನ್ನವಾಗಿದೆ. ತಲೆಯು ದೊಡ್ಡ ಗಾತ್ರದ್ದಾಗಿದ್ದು ಮುಖದಲ್ಲಿನ ಭಾವನೆ ಮತ್ತು ಇತರ ವಿವರಗಳು ಸ್ಪಷ್ಟವಾಗಿ ಕಂಡುಬರುತ್ತವೆ.

ಭುಜವು ಅಗಲವಾಗಿದೆ, ವಿಶಾಲವಾದ ವಕ್ಷಸ್ಥಲವಿದೆ. ಮುಖವನ್ನು ಕೆಳಗೆ ಮಾಡಿದ್ದಾನೆ. ಕಂಕಳುವಿನಿಂದ ಕೆಳಗೆ ನೇರ ರೇಖೆಗಳಿದ್ದು ಅಲ್ಲಿಂದ ಅದು ಕೆಳಗಿಳಿದು ವೃತ್ತಾಕಾರಕ್ಕೆ ತಿರುಗುತ್ತದೆ.

---

೫೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೫

[illegible]

[illegible]



ಇದು ಮೇಲ್ಮುಖವಾಗಿ ದೇಹದ ಹಿಂಬದಿಯಿಂದ ಸುತ್ತು ಹಾಕುತ್ತಾ ದೊಡ್ಡ ಸುರುಳಿಯಾಗಿ ಹೊರಗಿನ ವೃತ್ತದಲ್ಲಿ ಒಂದಾಗುತ್ತದೆ. ಇದನ್ನು ಉಬ್ಬು ಶಿಲ್ಪದಲ್ಲಿ ಕೆತ್ತಿರುವುದರಿಂದಾಗಿ ಬಾದಾಮಿಯಲ್ಲಿನ ಶಿಲ್ಪದಂತೆ ಇನ್ನೊಂದು ಆಳ ವೃತ್ತವಿಲ್ಲ. ಬದಲಾಗಿ ಹಾವಿನ ಸುರುಳಿ ಇಲ್ಲಿ ವೃತ್ತಾಕಾರದಲ್ಲಿ ಪರಿವರ್ತನೆಗೊಂಡಿದೆ. ಹಾವಿನ ದೇಹದ ತುಂಬೆಲ್ಲ ಜ್ಯಾಮಿತಿಯಲ್ಲಿ ಮೈವಳಿಕೆಗಳನ್ನು ವಿವರವಾಗಿ ಬಿಡಿಬಿಡಿಯಾಗಿ ಕೆತ್ತಲಾಗಿದೆ. ಇದು ಬಾದಾಮಿಯ ಶಿಲ್ಪಕ್ಕಿಂತ ಭಿನ್ನವಾದ ರಚನೆ. ಇನ್ನೊಂದು ಗಮನಾರ್ಹವಾದ ಬದಲಾವಣೆಯೆಂದರೆ, ಇಲ್ಲಿ ನಾಗರಾಜನಿಗೆ ಏಳು ಹೆಡೆಗಳು ಚಿಕ್ಕವಾಗಿದ್ದು ಮಧ್ಯದ ಹೆಡೆಯು ದೊಡ್ಡಗಾತ್ರದಲ್ಲಿದ್ದು (ಸದ್ಯಕ್ಕೆ ಭಗ್ನಗೊಂಡಿದೆ) ಅರಳಿಕೊಂಡಂತಿದೆ.

ನಾಗರಾಜನು ಕಿರೀಟಮುಕುಟವನ್ನು ಹೊಂದಿದ್ದು ಸಣ್ಣದಾಗಿದೆಯಾದರೂ ಅಲಂಕಾರಯುತವಾಗಿದೆ. ಕಿರೀಟದಲ್ಲಿ ಸುರುಳಿ ವಿನ್ಯಾಸವಿದೆ. ತೆಳ್ಳನೆಯ ಹುಬ್ಬುಗಳು, ಅಗಲವಾಗಿ ತೆರೆದ ಕಣ್ಣುಗಳಿಂದ ಕೂಡಿದ್ದು ಗಂಭೀರನಾಗಿದ್ದಾನೆ. ಕಿವಿಯಲ್ಲಿ ಅಗಲವಾದ ವೃತ್ತಾಕಾರದ ಗಾಲಿಯಂತಹ ಕಿವಿಯೋಲೆಯಿದೆ. ಕುತ್ತಿಗೆಯಲ್ಲಿ ಸಣ್ಣ ಹರಳುಗಳಿಂದ ಕೂಡಿದ ಒಂದು ಹಾರ, ಮತ್ತು ವೈಕಕ್ಷಕವಿದೆ. ಇದು ಎರಡು ಸುತ್ತುಗಳದ್ದಾಗಿದ್ದು ಅಗಲವಾಗಿದೆ. ಈ ವೈಕಕ್ಷಕವು ನಾಗನ ಎಡ ಭುಜದಿಂದ ಇಳಿದುಬಂದು ಬಲಭುಜದ ಪಕ್ಕದಲ್ಲಿ ನೇರವಾಗಿದೆ. ಕುತ್ತಿಗೆಯಲ್ಲಿ ಎರಡು ಸುತ್ತಿನ ನೆರಿಗೆಗಳ ಉಬ್ಬು ಇದ್ದು, ದೇಹವು ಸುರುಳಿ ಸುತ್ತುವಲ್ಲಿ ಮತ್ತೊಮ್ಮೆ ಮಡಿಕೆಗಳಿಂದ ಬಾಗಿಸಲಾಗಿದೆ. ಇದರಿಂದಾಗಿ ನಾಗರಾಜನ ದೇಹವು ಎದ್ದು ಕಾಣುತ್ತದೆ.

ನಾಗರಾಜನು ಎರಡು ಕೈಗಳನ್ನು ಹೊಂದಿದ್ದು ಬಲಕೈಯಲ್ಲಿ ಉದ್ದನೆಯ ಹೂವಿನ ದಂಟನ್ನು ಹಿಡಿದಿದ್ದು ಕಲಾತ್ಮಕ ಕೆತ್ತನೆಯಾಗಿದೆ. ತುದಿಯಲ್ಲಿ ಕಮಲದ ಹೂವಿನಂತಹ ಮೊಗ್ಗು ಇದ್ದು ದಂಟಿನ ತುಂಬೆಲ್ಲ ಮೇಲ್ಮುಖವಾಗಿ ಕೆತ್ತಲಾದ ಎಲೆಗಳಿವೆ. ಬಹುಶಃ ಇದು ಕಮಲದ ಹೂವಾಗಿರದೆ ಸಮುದ್ರಪುಷ್ಪವಿರಬಹುದು. ಎಡಕೈಯಲ್ಲಿ ಇನ್ನೊಂದು ಅದೇ ರೀತಿಯ ಎಸಳುಗಳ ಕೆತ್ತನೆಯುಳ್ಳ ಕುಂಡಿಕೆಯನ್ನು ಹಿಡಿದಿದ್ದಾನೆ. ಇದನ್ನು ಬಹುಶಃ ಸಮುದ್ರದ ಆಳದಲ್ಲಿ ಕಂಡುಬರುವ ಮುತ್ತು ಮತ್ತು ಹವಳಗಳ ಗಡ್ಡೆಯನ್ನು ಪ್ರತಿನಿಧಿಸುವಂತೆ ಕೆತ್ತಿರಬಹುದು. ಈ ರಚನೆಯು ಬೇರೆಡೆಯಲ್ಲಿ ಎಲ್ಲಿಯೂ ಕಂಡುಬರದಿರುವುದು ಆಶ್ಚರ್ಯದ ಸಂಗತಿ.

ಬಹುಶಃ ಬಾದಾಮಿಯ ಶಿಲ್ಪದಲ್ಲಿ ಕೂಡಾ ಇದೇ ರೀತಿಯ ರಚನೆ ಇದ್ದಿರಬಹುದು. ಕೊಂತಿಗುಡಿಯ ಶಿಲ್ಪದಲ್ಲಿ ಇದು ಕಾಣಸಿಗುವುದಿಲ್ಲ. ತೋಳಿನಲ್ಲಿ ಮೂರುಸುತ್ತುಗಳ ನಾಗಬಂಧವಿದ್ದು ಮುಂಗೈಯಲ್ಲಿ ಎರಡು ಕಡಗಗಳಿವೆ. ಇದರ ಹೊರತಾಗಿ ಯಾವುದೇ ವಿಶೇಷ ಆಭರಣಗಳ ರಚನೆಯಿಲ್ಲ. ಶಿಲ್ಪದ ವೃತ್ತದ ಹೊರ ಭಾಗದಲ್ಲಿ ಇತರ ನಾಗಸ್ತ್ರೀಯರನ್ನು ಕೆತ್ತಲಾಗಿದೆ. ಈ ಕೆತ್ತನೆಗಳು ಆಕರ್ಷಕ ರಚನೆಯಾಗಿದ್ದು ಸ್ತ್ರೀಶಿಲ್ಪಗಳು ಸಾಮಾನ್ಯ ಸ್ತ್ರೀ ಶಿಲ್ಪಗಳಂತಿದ್ದು ಹದವಾದ ರಚನೆಯಿದೆ. ಈ ಸ್ತ್ರೀಯರು ಕೂಡಾ ಸಮುದ್ರರತ್ನಗಳ ತಟ್ಟೆಯನ್ನು ಕೈಯಲ್ಲಿ



ಹಿಡಿದಿರುವುದು ಕಂಡುಬರುತ್ತದೆ. ಕೆಲ ಸ್ತ್ರೀ ಶಿಲ್ಪಗಳು ಅಡ್ಡಲಾಗಿ ತೇಲುವಂತಿದ್ದರೆ ಮೇಲಿನ ಸ್ತ್ರೀ ಶಿಲ್ಪಗಳು ಹರಳುಗಳ ಕರಂಡವನ್ನು ಬಲಗೈಯಲ್ಲಿ ಹಿಡಿದುಕೊಂಡು ಎಡಗೈಯನ್ನು ಮೇಲೆತ್ತಿಕೊಂಡಿವೆ. ಒಟ್ಟಿನಲ್ಲಿ ಈ ಶಿಲ್ಪವು ಸುಂದರವಾದ ಕೆತ್ತನೆಯಾಗಿದ್ದು ಬಾದಾಮಿಯ ಶಿಲ್ಪಕ್ಕೆ ಹೋಲಿಸಿದರೆ ಹಲವಾರು ಬದಲಾವಣೆಗಳಾಗಿರುವುದನ್ನು ಗಮನಿಸಬಹುದು.

ಶಿಲ್ಪ –೩

ಪಟ್ಟದಕಲ್ಲು ಪಾಪನಾಥ ದೇವಾಲಯದ ಮೂರನೇ ಅಂಕಣ ಛತ್ತಿನಲ್ಲಿ ಚೌಕಾಕಾರದ ವಿನ್ಯಾಸದಲ್ಲಿ ವೃತ್ತಾಕಾರದ ನಾಗರಾಜನ ಶಿಲ್ಪವಿದೆ. ಐದು ಹೆಡೆಗಳುಳ್ಳ ಈ ಶಿಲ್ಪವು ತನ್ನ ಎರಡು ಕೈಗಳಲ್ಲಿ ಹಾವನ್ನು ಹಿಡಿದಿದೆ. ನಾಲ್ಕು ಮೂಲೆಯಲ್ಲಿ ನಾಗಕನ್ನಿಕೆಯರು ಇರುವಂತೆ ಕೆತ್ತಲಾಗಿದೆ. ನಾಗರಾಜನ ಹಿಂದಿರುವ ಹಾವು ನಾಗರಾಜನ ಶಿಲ್ಪಕ್ಕಿಂತ ಮುಂದೆ ಹೆಚ್ಚು ಬಾಗಿದೆ. ಇಲ್ಲಿಯೂ ಹಾವಿನ ಶರೀರವು ರೇಖೆಗಳಿಂದ ವಿನ್ಯಾಸಗೊಂಡಿದೆ. ಆರು ಅಡಿ ಚೌಕಾಕಾರದ ಈ ಉಬ್ಬುಶಿಲ್ಪವು ತನ್ನ ಬಲಗಡೆಗೆ ಸ್ವಲ್ಪ ಮುಖವನ್ನು ತಿರುಗಿಸಿದೆ. ದುರ್ಗಾದೇವಾಲಯದ ನಾಗರಾಜನ ಶಿಲ್ಪಕ್ಕೆ ಈ ಶಿಲ್ಪವು ಹೋಲಿಕೆಯಾಗುತ್ತದೆ.

ಶಿಲ್ಪ –೪

ಐಹೊಳೆ ಲಾಡ್‌ಖಾನ್ ದೇವಾಲಯದ ಛತ್ತಿನಲ್ಲಿ ನಿರ್ಮಿಸಲಾದ ಈ ಶಿಲ್ಪ ಸ್ವಲ್ಪ ಮುಸುಕಾಗಿದ್ದು, ಹಾವು ಮೂರು ಸುತ್ತುಗಳಿಂದ ಕೂಡಿದ್ದು, ಇಲ್ಲಿಯೂ ಐದು ಹೆಡೆಯ ಹಾವನ್ನು ಕಾಣಬಹುದು. ಈ ಶಿಲ್ಪದಲ್ಲಿ ಹಾವಿನ ತಲೆಯ ಮೇಲೆ ಚಿಕ್ಕದಾದ ಕಳಸವನ್ನು ಇಟ್ಟಿರುವಂತೆ ಕೆತ್ತಿರುವುದು ಈ ಶಿಲ್ಪದ ಮಹತ್ವ, ಇಲ್ಲಿ ಹಾವಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಶಿಲ್ಪ –೫

ಬಾದಾಮಿಯಿಂದ ಏಳು ಕಿಲೊ ಮೀಟರ್ ಅಂತರದ ನಾಗರಾಳದಲ್ಲಿ ನಾಗನಾಥನ (ನಾಗನಾಥಕೊಳ್ಳ) ದೇವಾಲಯದ ಮುಖಮಂಟಪದ ಛತ್ತಿನಲ್ಲಿ ಚೌಕಾಕಾರದ ಪಟ್ಟಿಕೆಯಲ್ಲಿ ನಾಗರಾಜನನ್ನು ವೃತ್ತಕಾರದ ತೆಳು ಉಬ್ಬುಶಿಲ್ಪವಾಗಿ ಸಂಯೋಜಿಸಲಾಗಿದೆ. ನಾಲ್ಕೂ ಮೂಲೆಯಲ್ಲಿ ಪ್ರತ್ಯೇಕವಾದ ಕಮಲ ದಳಗಳನ್ನು ಕೆತ್ತಲಾಗಿದೆ. ಆದರೆ ಇಲ್ಲಿ ನಾಗರಾಜ ಮತ್ತು ಹಾವು ಒಂದಕ್ಕೊಂದು ಸಮ್ಮಿಲನವಿಲ್ಲದಿರುವುದು ಗೋಚರವಾಗುತ್ತದೆ. ಈ ಶಿಲ್ಪವನ್ನು ಗಮನಿಸಿದರೆ ಎದೆಯು ವಿಸ್ತಾರವಾಗಿದ್ದು, ಸೊಂಟವು ಅತಿ ಚಿಕ್ಕದಾಗಿ, ಹಸ್ತಗಳು ಕೂಡ ಚಿಕ್ಕದಾಗಿವೆ. ಒಟ್ಟಾರೆ ಈ ಶಿಲ್ಪವು ಕಲಿಕೆಯ ಹಂತದಲ್ಲಿ ರಚನೆಯಾಗಿರುವ ಸಾಧ್ಯತೆಯಿದೆ.

ಶಿಲ್ಪ –೬

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಸಭಾಮಂಟಪದ ನಾಲ್ಕನೇ ಅಂಕಣದ ಛತ್ತಿನಲ್ಲಿ ನಾಗರಾಜನ ಶಿಲ್ಪವನ್ನು ಕಾಣಬಹುದು. ಮೇಲೆ ನೋಡಿದ ಎಲ್ಲ ಶಿಲ್ಪಕ್ಕಿಂತಲೂ ಇದು

ನಾಗರಾಜನ ಶಿಲ್ಪಗಳು



ಶಿಲ್ಪ-೧. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೨. ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೩. ಪಾಪನಾಥ ದೇವಾಲಯ, ಪಟ್ಟದಕಲ್ಲು

ನಾಗರಾಜನ ಶಿಲ್ಪಗಳು



ಶಿಲ್ಪ-೪. ಲಾಡ್‌ಖಾನ್ ದೇವಾಲಯ, ಐಹೊಳೆ




ಶಿಲ್ಪ-೫. ನಾಗನಾಥನ ಕೊಳ್ಳ, ನಾಗರಾಳ



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ಪಾಪನಾಥ ದೇವಾಲಯ, ಪಟ್ಟದಕಲ್ಲು



ವಿಭಿನ್ನವಾಗಿದೆ. ಇಲ್ಲಿ ನಾಗರಾಜನನ್ನು ಚಿಕ್ಕದಾಗಿ ಕೆತ್ತಿದ್ದು, ಹಾವನ್ನು ನಾಲ್ಕು ಸುತ್ತುಗಳಿಂದ ದಪ್ಪವಾಗಿ ಕೆತ್ತಲಾಗಿದೆ. ಆದರೆ ಮುಖ ಮತ್ತು ಹಾವಿನ ಹೆಡೆಗಳು ಚಿಕ್ಕ ಗಾತ್ರದಲ್ಲಿವೆ. ಇಲ್ಲಿ ವಿಶೇಷವೆಂದರೆ ನಾಗರಾಜನ ಇಬ್ಬದಿಗಳಲ್ಲಿ ಪ್ರತ್ಯೇಕವಾದ ನಾಗಕನ್ನಿಕೆಯರ ಶಿಲ್ಪಗಳಿರುವುದು ಕಂಡುಬರುತ್ತದೆ. ಅದಲ್ಲದೇ ಮೇಲಿನ ಮೂಲೆಗಳಲ್ಲಿ ವಿದ್ಯಾಧರ ಶಿಲ್ಪಗಳನ್ನಿಟ್ಟುಕೊಂಡು ಈ ಶಿಲ್ಪದ ಸಂಯೋಜನೆಯನ್ನು ಪೂರ್ಣಗೊಳಿಸಲಾಗಿದೆ.

ಶಿಲ್ಪ –೨

ಪಟ್ಟದಕಲ್ಲು ಪಾಪನಾಥ ದೇವಾಲಯ ಸಭಾಮಂಟಪದ ಒಂದನೆಯ ಅಂಕದ ಛತ್ತಿನಲ್ಲಿ ಚೌಕಾಕಾರದ ಪಟ್ಟಿಕೆಯಿಲ್ಲದೇ ವೃತ್ತಾಕಾರದಲ್ಲಿ ರಚಿಸಲಾದ ನಾಗರಾಜನ ಶಿಲ್ಪವನ್ನು ಗಮನಿಸಬಹುದು. ತನ್ನ ಎರಡು ಕೈಗಳಲ್ಲಿ ಪದ್ಮಗಳನ್ನು ಹಿಡಿದಿದ್ದು, ಮೇಲಿನ ಮೂಲೆಯಲ್ಲಿ ವಿದ್ಯಾಧರ ಶಿಲ್ಪಗಳನ್ನು ಆಕಾಶದಲ್ಲಿ ಮಾಲಾವಾಹಕರಾಗಿ ನಾಗರಾಜನಿಗೆ ಹಾರೈಸುವಂತೆ ಕೆತ್ತಲಾಗಿದೆ.

ಬ್ರಹ್ಮನ ಶಿಲ್ಪಗಳು

ಬ್ರಹ್ಮನ ಶಿಲ್ಪಗಳು ಬಾದಾಮಿಯ ಚಾಲುಕ್ಯರ ಶಿಲ್ಪಿಗಳ ರಚನೆಯಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ದೇವಾಲಯದ ಛತ್ತುಗಳಲ್ಲಿ ಕಂಡುಬರುತ್ತವೆ. ತ್ರಿಮೂರ್ತಿಗಳಲ್ಲಿ ಮೊದಲನೆಯವನಾದ ಬ್ರಹ್ಮನು ಪೂಜೆಗೊಳ್ಳುವ ದೇವನಲ್ಲವಾದರೂ ತ್ರಿಮೂರ್ತಿಗಳಲ್ಲಿ ಒಬ್ಬನಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾನೆ. ಸಾಮಾನ್ಯವಾಗಿ ಹಂಸವಾಹನನಾಗಿ ಕೈಯಲ್ಲಿ ಅಕ್ಷಮಾಲೆ ಹಿಡಿದುಕೊಂಡಿರುವ ನಾಲ್ಕು ತಲೆಗಳ ಬ್ರಹ್ಮನ ಶಿಲ್ಪವನ್ನು ನಾಲ್ಕು ಕೈಗಳನ್ನು ಹೊಂದಿರುವಂತೆ ಕೆತ್ತಲಾಗಿದೆ. ಅಂತಹ ಕೆಲ ಶಿಲ್ಪಗಳನ್ನಿಲ್ಲಿ ನೋಡೋಣ. 'ಬಾದಾಮಿಯ ಮೂರನೆಯ ಗುಹೆಯಲ್ಲಿ (ಮಹಾವಿಷ್ಣು ಗೃಹದಲ್ಲಿ) ಮಂಟಪದ ಛತ್ತಿನ ಮಧ್ಯಭಾಗದಲ್ಲಿ ಸುಂದರವಾದ ಚತುರ್ಭುಜ ಬ್ರಹ್ಮನ ಶಿಲ್ಪವೊಂದನ್ನು ಕಾಣಬಹುದು.

ಶಿಲ್ಪ –೧

ಬಾದಾಮಿಯ ಮೂರನೆಯ ಗುಹೆಯಲ್ಲಿ (ಮಹಾವಿಷ್ಣು ಗೃಹ) ಅಲ್ಲಿನ ಮಂಟಪದ ಮೇಲ್ಛಾವಣಿಯಲ್ಲಿ ಸಣ್ಣ ಗಾತ್ರದಲ್ಲಿ ವೃತ್ತಾಕಾರದ ಚೌಕಟ್ಟಿನಲ್ಲಿ ಬ್ರಹ್ಮನ ಶಿಲ್ಪವೊಂದನ್ನು ಕಾಣಬಹುದು. ಈ ಪಟ್ಟಿಕೆಯಲ್ಲಿ ಸುತ್ತಲೂ ಅಷ್ಟದಿಕ್ಪಾಲಕ ಶಿಲ್ಪಗಳಿವೆ. ಮಧ್ಯದ ಭಾಗದ ದೊಡ್ಡ ವೃತ್ತದಲ್ಲಿ ಬ್ರಹ್ಮನ ಶಿಲ್ಪವಿದೆ. ಇಲ್ಲಿ ಬ್ರಹ್ಮನಿಗೆ ನಾಲ್ಕು ತಲೆಗಳಿದ್ದು ಮೂರು ಗೋಚರಿಸುತ್ತವೆ. ನಾಲ್ಕು ಕೈಗಳನ್ನು ಹೊಂದಿದ್ದು ಒಂದರಲ್ಲಿ ಅಕ್ಷಮಾಲೆ, ಇನ್ನೊಂದು ಕೈಯಲ್ಲಿ ಕಮಂಡಲವನ್ನು ಹಿಡಿದಿದ್ದು, ಕೆಳಗಿನ ಎಡಗೈ ತೊಡೆಯ ಮೇಲಿದೆ. ಇನ್ನೊಂದು ಕೈಯಲ್ಲಿ 'ಯಜ್ಞದ ಉದ್ಧರಣಿಯನ್ನು ಹಿಡಿದುಕೊಂಡು ಹಂಸದ ಮೇಲೆ ಆಸೀನನಾಗಿದ್ದಾನೆ.[೫೩] ಅವನು ಹಂಸದ

೫೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೫

ಮೇಲೆ ಕುಳಿತಿರುವಂತೆ ಕೆತ್ತನೆಯಿದ್ದು ಮುಖವು ಎಡಭಾಗಕ್ಕಿದೆ. ಬ್ರಹ್ಮನು ಕಿರೀಟ ಮುಕುಟನಾಗಿದ್ದಾನೆ. ಯಜ್ಞೋಪವೀತವನ್ನು ಧರಿಸಿದ್ದಾನೆ. ಕೆತ್ತನೆಯಲ್ಲಿ ಸರಳತೆ ಇದೆ. ದೇಹ ರಚನೆಯು ಸುಂದರವಾಗಿ ಮೂಡಿಬಂದಿದ್ದು ಆತನ ಎರಡು ಮುಖಗಳು ಪಾರ್ಶ್ವಕ್ಕೆ ತಿರುಗಿದ್ದರೂ ಕೆತ್ತನೆಯಲ್ಲಿ ಸ್ಪಷ್ಟತೆಯಿದೆ. ತೆಳ್ಳಗಿನ ದೇಹರಚನೆಯು ಶಿಲ್ಪದ ಕೆತ್ತನೆಗೆ ಹೆಚ್ಚಿನ ಸೌಂದರ್ಯವನ್ನು ನೀಡಿದೆ. ಸಾಕಷ್ಟು ಆಭರಣಗಳನ್ನು ಹೊಂದಿರುವ ಅವನ ಮುಂಗೈಗಳಲ್ಲಿ ಕಡಗಗಳು, ತೋಳುಬಂಧಿ, ಎದೆಹಾರ ಇತ್ಯಾದಿಗಳಿದ್ದು ಆತನು ಅಧೋವಸ್ತ್ರದಲ್ಲಿ ನೆರಿಗೆಗಳನ್ನು ಕೆತ್ತಿರುವುದನ್ನು ಕಾಣಬಹುದು. ಹಂಸದ ರಚನೆಯಿದ್ದರೂ ಇಲ್ಲಿ ಹಂಸದ ಇಡಿ ದೇಹವು ಕಾಣಿಸದೆ ಕುತ್ತಿಗೆಯ ಮೇಲ್ಭಾಗವನ್ನಷ್ಟೇ ಕಾಣಿಸುವಂತೆ ಕೆತ್ತಿದ್ದು ಹಂಸದ ರಚನೆಯಲ್ಲಿ ಲಾಲಿತ್ಯವಿದೆ. ಶಿಲ್ಪದ ಸುತ್ತಲೂ ವೃತ್ತದ ರಚನೆಯಿದೆ. ಸಣ್ಣ ಗಾತ್ರದಲ್ಲಿದ್ದರೂ ಸುಂದರವಾಗಿ ಕೆತ್ತಲಾಗಿರುವ ಈ ಶಿಲ್ಪವು ಬ್ರಹ್ಮನ ಕೆತ್ತನೆಯಲ್ಲಿ ಅವರಿಗೆ ಪರಿಣತಿಯಿತ್ತೆಂಬುದು ಕಂಡುಬರುತ್ತದೆ.

ಇಂತಹದೇ ಇನ್ನೊಂದು ಶಿಲ್ಪವು ಇಲ್ಲಿನ ಮೊಗಸಾಲೆಯ ಛಾವಣಿಯಲ್ಲಿ ಕೂಡಾ ಕಂಡುಬರುತ್ತಿದ್ದು ಇಲ್ಲಿನ ರಚನೆಯು ಮೊದಲಿನ ಶಿಲ್ಪಕ್ಕಿಂತ ಭಿನ್ನವಾಗಿಲ್ಲದಿರುವುದು ಕಂಡುಬರುತ್ತದೆ. ಶಿಲ್ಪದ ರಚನೆಯಲ್ಲಿ ಸರಳತೆಯಿದ್ದು ಶಿಲ್ಪವನ್ನು ಪ್ರತಿಮಾ ಶಾಸ್ತ್ರವನ್ನಾಧರಿಸಿ ವೇದಗಳಲ್ಲಿನ ನಿರೂಪಣೆಯಂತೆ ರಚಿಸಿರುವುದು ಕಂಡುಬರುತ್ತದೆ. ಮಹಾಕೂಟ ವಿರೂಪಾಕ್ಷದೇವಾಲಯದ ಹಿಂಬದಿಯಲ್ಲಿ ಒಂದು ಬಿಡಿ ತ್ರಿಮೂರ್ತಿಗಳ ಶಿಲ್ಪವಿದೆ. ಬ್ರಹ್ಮ, ವಿಷ್ಣು, ಈಶ್ವರರೊಂದಿಗೆ ತ್ರಿಮೂರ್ತಿಗಳಲ್ಲಿ ಒಬ್ಬನಾಗಿ ಸಮಭಂಗಿಯಲ್ಲಿ ನಿಂತಿರುವಂತೆ ಕೆತ್ತಲಾಗಿದೆ. ಇಲ್ಲಿನ ಶಿಲ್ಪದಲ್ಲಿ ಎಡಭಾಗದಲ್ಲಿ ಬ್ರಹ್ಮ, ಮಧ್ಯದಲ್ಲಿ ವಿಷ್ಣು ಮತ್ತು ಕೊನೆಯಲ್ಲಿ ಅಂದರೆ ವಿಷ್ಣುವಿನ ಎಡಭಾಗದಲ್ಲಿ ಶಿವನು ನಿಂತಿರುವ ಶಿಲ್ಪವಿದೆ. ದ್ವಿಭುಜ ಬ್ರಹ್ಮನಿಗೆ ನಾಲ್ಕು ತಲೆಗಳಿದ್ದು ಮೂರುತಲೆಗಳು ಗೋಚರವಾಗುತ್ತವೆ. ಬಲಗೈ ಅಭಯ ಮುದ್ರೆಯಲ್ಲಿದ್ದು ಎಡಗೈ ಕಟ್ಯವಲಂಬಿತವಾಗಿದೆ.

ಇಲ್ಲಿ ಆತನು ತೊಟ್ಟಿರುವ ಅಧೋವಸ್ತ್ರವು ಪಾದದವರೆಗೂ ಇಳಿಬಿದ್ದಿದೆ. ಇಲ್ಲಿ ಹಂಸವಾಗಲಿ, ಕಮಲವಾಗಲಿ ಕಂಡುಬರುವುದಿಲ್ಲ. ಶಿಲ್ಪದ ರಚನೆಯು ಸಾಮಾನ್ಯ ಮಟ್ಟದ್ದಾಗಿದೆ. ತೋಳಿನಲ್ಲಿ ಬಂಧವಿದ್ದು, ಸೊಂಟದಲ್ಲಿ ದಪ್ಪನಾದ ಒಡ್ಯಾಣವಿದೆ, ಅದರ ಕೆಳಗೆ ಮೂರು ಸುತ್ತುಗಳಲ್ಲಿರುವಂತೆ ಕಂಡುಬರುವ ಅಧೋವಸ್ತ್ರಕ್ಕೆ ಹೊಂದಿಕೊಂಡಿರುವ ನೆರಿಗೆಗಳು ಕಂಡುಬರುತ್ತವೆ. ಇನ್ನುಳಿದಂತೆ ಈ ಶಿಲ್ಪದಲ್ಲಿ ಉಲ್ಲೇಖಾರ್ಹವಾಗಿರುವುದೇನೂ ಕಾಣಿಸದು. ಒಟ್ಟಿನಲ್ಲಿ ಬಾದಾಮಿಯ ಪರಿಸರದ ಶಿಲ್ಪಗಳಲ್ಲಿ ಹಲವಾರು ಬ್ರಹ್ಮನ ಶಿಲ್ಪಗಳಿದ್ದು ವೈವಿಧ್ಯದಿಂದ ಕೂಡಿರುವುದು ಕಂಡುಬರುತ್ತದೆ.

ಶಿಲ್ಪ –೨

ಐಹೊಳೆಯ ಪರಿಸರದ ದೇವಾಲಯಗಳಲ್ಲಿ ಕೆಲವು ಬ್ರಹ್ಮನ ಶಿಲ್ಪಗಳಿವೆ. ಇವುಗಳು

[illegible]

ಬ್ರಹ್ಮನ ಶಿಲ್ಪಗಳು



ಶಿಲ್ಪ–೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ–೨. ಹುಚ್ಚಪ್ಪಯ್ಯನ (ಮಠ) ದೇವಾಲಯ, ಐಹೊಳೆ


ಸಾಮಾನ್ಯವಾಗಿ ಛತ್ತಿನಲ್ಲಿವೆ. ಅಪರೂಪದ ಬ್ರಹ್ಮನ ಉಬ್ಬುಶಿಲ್ಪದ ಫಲಕವೊಂದನ್ನು ಐಹೊಳೆಯ ಹುಚ್ಚಪ್ಪಯ್ಯನ ಮಠ ಎಂದು ಇಂದು ಕರೆಯಲಾಗುವ ಮಂದಿರದಲ್ಲಿ ಕಾಣಬಹುದು. ಇದರ ಕಾಲಮಾನವನ್ನು ಊಹಿಸುವುದು ಕಷ್ಟವಾದರೂ ಇಲ್ಲಿನ ಶಿಲ್ಪಗಳ ರಚನೆಯನ್ನು ಗಮನಿಸಿ ಬಹುಶಃ ಕಲ್ಯಾಣ ಚಾಲುಕ್ಯರ ಕಾಲದ ರಚನೆಯೆಂದು ಊಹಿಸಬಹುದು. ಇಲ್ಲಿನ ಫಲಕವು ಅಪರೂಪದ ಬ್ರಹ್ಮನ ಶಿಲ್ಪಗಳಲ್ಲೊಂದು. ತ್ರಿಮೂರ್ತಿಗಳ ಉಬ್ಬು ಶಿಲ್ಪಗಳಾಗಿದ್ದು ಪ್ರತಿಯೊಬ್ಬನಿಗೂ ಒಂದೊಂದು ಫಲಕವು ಮೀಸಲಾಗಿದೆ. ಅಂತೆಯೇ ಬ್ರಹ್ಮನ ಫಲಕವನ್ನು ಇಲ್ಲಿ ನೋಡಬಹುದು.

ಕಮಲದ ಪೀಠದ ಮೇಲೆ ಹಂಸವು ನಿಂತಿದ್ದು ಅದರ ಮೇಲೆ ಬ್ರಹ್ಮನು ಆಸೀನನಾಗಿದ್ದಾನೆ. ಹಂಸವು ತನ್ನೆರಡೂ ರೆಕ್ಕೆಗಳನ್ನು ಅಗಲಿಸಿಕೊಂಡಿದೆ. ಕುತೂಹಲಕರ ಅಂಶವೆಂದರೆ, ಹಂಸವನ್ನು ಎದುರುಭಾಗಕ್ಕೆ ಮುಖಮಾಡಿಕೊಂಡು ಕೊಕ್ಕನ್ನು ಹೊರಹಾಕುವಂತೆ ದೊಡ್ಡದಾಗಿ ಕೆತ್ತಲಾಗಿದೆ. ಬ್ರಹ್ಮನು ನಾಲ್ಕು ತಲೆಗಳನ್ನು ಹೊಂದಿದ್ದು ಮೂರು ತಲೆಗಳು ಗೋಚರವಾಗುತ್ತವೆ. ಕಿರೀಟಮುಕುಟವನ್ನು ಹೊಂದಿದ್ದಾನೆ. ಇಲ್ಲಿನ ಶಿಲ್ಪದಲ್ಲಿ ಬ್ರಹ್ಮನು ಹದಿಹರೆಯದವನಂತೆ ಕಂಡುಬರುತ್ತಾನೆ. ಚತುರ್ಭುಜ ಬ್ರಹ್ಮನು ಬಲಗೈಯಲ್ಲಿ ಅಕ್ಷಮಾಲೆ, ಒಂದು ಕೈಯಲ್ಲಿ ಕಮಂಡಲ, ಎಡಗೈಯಲ್ಲಿ ಯಜ್ಞದ ಉದ್ಧರಣೆಯನ್ನು ಹಿಡಿದಿದ್ದಾನೆ. ಬ್ರಹ್ಮನ ಮುಖವನ್ನು ಅಂಡಾಕಾರದಲ್ಲಿ ಕೆತ್ತಲಾಗಿದ್ದು ಆತನ ಮುಖದಲ್ಲಿ ಮಂದಹಾಸವು ಎದ್ದು ಕಾಣುವಂತಿದೆ. ಶಾಂತಚಿತ್ತವು ಇಲ್ಲಿ ಕಂಡುಬರುತ್ತದೆ. ಅವನ ಸುತ್ತಲೂ ಕೆಲವು ದೇವಗಣಗಳು ಮತ್ತು ಋಷಿ-ಮುನಿಗಳು ಕೈಮುಗಿದುಕೊಂಡು ನಿಂತಿದ್ದಾರೆ. ಇನ್ನೂ ಕುತೂಹಲಕಾರಿ ಅಂಶವೆಂದರೆ ಋಷಿ-ಮುನಿಗಳಲ್ಲಿ ಕೆಲವು ಶಿಲ್ಪಗಳನ್ನು ಮೂಳೆಚಕ್ಕಳಗಳಾಗಿರುವಂತೆ ತೋರಿಸಿರುವುದು. ಇಲ್ಲಿನ ಈ ಬರಿಯ ತೊಗಲುಗಳುಳ್ಳ ಈ ಸಾಧುಗಳ ಮುಖದಲ್ಲಿ ಪ್ರಸನ್ನತೆಯ ಭಾವವಿರುವುದನ್ನು ಗಮನಿಸಬಹುದು.

ಬ್ರಹ್ಮನು ಇಲ್ಲಿ ಯುವಕನಂತೆ ಕಂಡರೂ ಮೈಯಲ್ಲಿ ಹೆಚ್ಚಿನ ಆಭರಣಗಳಿಲ್ಲದೆ, ಕುತ್ತಿಗೆಯಲ್ಲಿ ಒಂದು ಕಂಠಾಭರಣ, ಯಜ್ಞೋಪವೀತ, ಕಿವಿಯಲ್ಲಿ ಇಳಿಬಿಡಲಾಗಿರುವ ಒಂದು ಕುಂಡಲ ಇವಿಷ್ಟನ್ನೇ ಹೊಂದಿದ್ದಾನೆ. ಇಲ್ಲಿ ಬ್ರಹ್ಮನ ಶಿಲ್ಪಕ್ಕಿಂತ ಆತನ ಸುತ್ತ ಸೇರಿರುವ ಮುನಿಗಣಗಳನ್ನು ಕೆತ್ತುವಲ್ಲಿ ಹೆಚ್ಚಿನ ಪರಿಶ್ರಮವನ್ನು ತೋರಿಸಿರುವುದು ಕಂಡುಬರುತ್ತದೆ. ಹಂಸವನ್ನು ಕಮಲದ ಹೂವಿನ ಮೇಲೆ ನಿಂತಂತೆ ಕೆತ್ತಲಾಗಿದ್ದು ಸುಂದರವಾದ ಈ ಶಿಲ್ಪವು ಕುತೂಹಲಕಾರಿಯಾಗಿದೆ.

ಸೂರ್ಯ ಶಿಲ್ಪಗಳು

ಸೂರ್ಯಾರಾಧನೆಯು ಒಂದು ಕಾಲಕ್ಕೆ ಜಗತ್ತಿನೆಲ್ಲೆಲ್ಲಾ ಹರಡಿದ್ದು, ಜನಪ್ರಿಯ ಆರಾಧನೆಯಾಗಿದ್ದುದು ತಿಳಿದು ಬರುತ್ತದೆ. ಪರ್ಷಿಯಾ ಮತ್ತು ಭಾರತದಲ್ಲಿ ವಿಶೇಷವಾಗಿದ್ದಿತು. ಪ್ರಪಂಚದ ಪ್ರಾಚೀನ ನಾಗರಿಕತೆಗಳ ಕಾಲದಲ್ಲಿಯೂ ಸಹ ಸೂರ್ಯನನ್ನು ಪೂಜಿಸಿರುವುದು ತಿಳಿದುಬರುತ್ತದೆ. ಈಜಿಪ್ಟ್‌ನಲ್ಲಿ ಸೂರ್ಯದೇವನು 'ರಾ' ಎಂಬ ಹೆಸರಿನಲ್ಲಿಯೂ



ಮೆಸಪೊಟೊಮಿಯ ನಾಗರಿಕತೆಯಲ್ಲಿ ಶಮಾಶ ಮತ್ತು ಮಾರ್ದುಕ ಎಂಬ ಹೆಸರಿನಿಂದ ಪೂಜಿಸಲ್ಪಡುತ್ತಿದ್ದನು. ಪ್ರಾಚೀನ ಭಾರತದಲ್ಲಿ ಆದಿತ್ಯ ಗೃಹಗಳು ಬಹಳ ಕಡೆ ಇದ್ದವು. ಕೋನಾರ್ಕದ ಸೂರ್ಯ[೫೪] ದೇವಾಲಯವು ಇಂದು ಜಗತ್ಪ್ರಸಿದ್ಧವಾಗಿದೆ. ಚಾಲುಕ್ಯರ ಕಾಲದಲ್ಲಿ ಸೂರ್ಯನ ಶಿಲ್ಪಗಳು ಕೆಲವೆಡೆ ರಚನೆಯಾಗಿರುವುದು ಕಂಡುಬರುತ್ತದೆ. ಸಮಭಂಗಿಯಲ್ಲಿ ನಿಂತಿರುವ ಸೂರ್ಯನ ಶಿಲ್ಪಗಳನ್ನು ಎಲ್ಲೆಡೆ ನೋಡಬಹುದು. 'ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ನಂದಿಮಂಟಪದಲ್ಲಿ ಸುಂದರವಾದ ಸೂರ್ಯನ ಬೃಹತ್ ಉಬ್ಬುಶಿಲ್ಪವಿದೆ. ಸೂರ್ಯನ ಏಳು ಕುದುರೆಗಳನ್ನು ಜಿಗಿದು ಓಡುತ್ತಿರುವಂತೆ ಶಿಲ್ಪಿಯು ರಚಿಸಿದ್ದಾನೆ. ಉಷೆ, ಪ್ರತ್ಯುಷೆಯರು ಆಲೀಡ ಭಂಗಿಯಲ್ಲಿ ನಿಂತಿದ್ದಾರೆ.

ಸೂರ್ಯನ ಪಕ್ಕದಲ್ಲಿ ಬಿಲ್ಲುಗಾರರು, ಹೂಮಾಲೆ ಹಿಡಿದಿರುವವರು, ಗಾಂಧರ್ವರು ಇನ್ನೂ ಮುಂತಾದವರು ಮೋಡದಲ್ಲಿ ತೇಲುತ್ತಿರುವಂತೆ ಶಿಲ್ಪಿಯು ರಚಿಸಿದ್ದಾನೆ.[೫೫] ಒಂದೇ ಚೌಕಾಕಾರದ ಪಟ್ಟಿಕೆಯ ವಿನ್ಯಾಸದೊಂದಿಗೆ ರಚಿತವಾಗಿರುವ ಈ ರೀತಿಯ ಸೂರ್ಯನ ಶಿಲ್ಪವು ಕರ್ನಾಟಕದಲ್ಲಿ ಮೂಡಿಬಂದಿರುವುದು ವಿಶೇಷವಾಗಿದೆ. ಐಹೊಳೆಯ ಬಡಿಗೇರ ಗುಡಿಯು ಸೂರ್ಯನಿಗೆ ಸೇರಿದ ಗುಡಿಯಾಗಿದ್ದು, ಇಲ್ಲಿನ ಗೋಪುರದ ಶಿಖರದಲ್ಲಿ ಸೂರ್ಯನ ಶಿಲ್ಪವಿರುವುದನ್ನು ಗಮನಿಸಬಹುದು. ಈ ಗುಡಿಯು ಒಂಬತ್ತನೆಯ ಶತಮಾನಕ್ಕೆ ಸೇರಿದ್ದು ಚಾಲುಕ್ಯರ ಎರಡನೆಯ ಹಂತದ ರಚನೆಯಾಗಿದೆ.

ಶಿಲ್ಪ –೧

ಐಹೊಳೆಯ ಬಡಿಗೇರ ಗುಡಿಯಲ್ಲಿನ ಶಿಲ್ಪವನ್ನು ಗಮನಿಸಿದರೆ ಈ ಶಿಲ್ಪವು ಚಾಲುಕ್ಯರ ಕಾಲದ ಸುಂದರ ಶಿಲ್ಪಗಳಲ್ಲೊಂದೆಂದು ಖಂಡಿತವಾಗಿ ಹೇಳಬಹುದು. ಈ ಶಿಲ್ಪದಲ್ಲಿ ಸೂರ್ಯನು ಸಮಭಂಗಿಯಲ್ಲಿ ನಿಂತಿದ್ದು ಎರಡು ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದಾನೆ ಏಳು ಕುದುರೆಗಳ (ಸಪ್ತಾಶ್ವಗಳು)ನ್ನು ಹಿಡಿದಿರುವ ಅರುಣನು ಸಾರಥಿಯಾಗಿದ್ದಾನೆ. ಅವನನ್ನು ಚಿಕ್ಕದಾಗಿ ತೋರಿಸಲಾಗಿದೆ. ಸೂರ್ಯನ ಎರಡೂ ಪಕ್ಕಗಳಲ್ಲಿ ಉಷೆ ಮತ್ತು ಪ್ರತ್ಯುಷೆಯರು ತಮ್ಮ ಬಾಣ ಮತ್ತು ಬಿಲ್ಲುಗಳೊಂದಿಗೆ ನಿಂತಿದ್ದು ಕತ್ತಲನ್ನು ದೂರತಳ್ಳುವ ಪರಿಯನ್ನು ಆಕರ್ಷಕವಾಗಿ ತೋರಿಸಲಾಗಿದೆ. ಇಲ್ಲಿನ ಸ್ತ್ರೀ ಶಿಲ್ಪಗಳ ರಚನೆ ಸುಂದರವಾಗಿದ್ದು ಆಕರ್ಷಕ ಬಾಗುಗಳಿಂದ ಕೂಡಿದೆ. ಸೂರ್ಯನು ಕಿರೀಟಮುಕುಟವನ್ನು ಹೊಂದಿದ್ದಾನೆ. ಹಿನ್ನೆಲೆಯಲ್ಲಿ ಪ್ರಭಾವಳಿಯು ಕಂಡುಬರುತ್ತದೆ. ಎರಡೂ ಕೈಗಳಲ್ಲಿ ಕಮಲದ ಮೊಗ್ಗುಗಳಿವೆ. ಸೂರ್ಯನು ದಪ್ಪನಾದ ಕಂಠಹಾರ, ಎದೆಹಾರ, ಉದರಬಂಧ, ಒಡ್ಯಾಣ, ಇತ್ಯಾದಿಗಳಲ್ಲದೆ ಉದ್ದನೆಯ ಪುಷ್ಪಹಾರಗಳನ್ನು ಧರಿಸಿದ್ದಾನೆ. ಕೇಯೂರ, ಕೈಗಳಲ್ಲಿ ಕಡಗ, ಕರ್ಣಾಭರಣ, ಕಾಲ್ಗಡಗ ಇತ್ಯಾದಿ ಆಭರಣಗಳನ್ನು ತೊಟ್ಟಿರುವ

೫೪. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ) : ಶಿಲ್ಪಕಲಾ ಪ್ರಪಂಚ, ಪುಟ – ೨೭೬

೫೫. ಪಿ.ವಿ. ಕೃಷ್ಣಮೂರ್ತಿ, ಡಾ. ಕೆ. ವಸಂತಲಕ್ಷ್ಮೀ (ಸಂ.) : ಸೂರ್ಯಕೀರ್ತಿ, (ಡಾ.ಸೂರ್ಯನಾಥ ಕಾಮತರ ಅ.ಗ್ರ) ಪುಟ–೧೮೯



ಈ ಶಿಲ್ಪದಲ್ಲಿ ಕಲಾತ್ಮಕತೆಯ ಕುಸುರಿ ಕೆಲಸವಿರುವುದನ್ನು ಗಮನಿಸಬಹುದು. ಶಿಲ್ಪದ ಸುತ್ತಲೂ ಅಲಂಕಾರಿಕ ಕೆತ್ತನೆಯ ಕಂಬಗಳನ್ನು ಸೇರಿ ಕೆತ್ತಲಾದ ಮಕರ ಮತ್ತು ಪುಷ್ಪತೋರಣವಿದೆ. ಗೋಪುರದ ಕಿರು ಮಂಟಪದಲ್ಲಿ ಈ ಶಿಲ್ಪವನ್ನು ಕೆತ್ತಿರಿಸಲಾಗಿದ್ದು ಮಧ್ಯಮಗಾತ್ರದ ಸುಂದರವಾದ ರಚನೆಯಾಗಿದೆ.

ಶಿಲ್ಪ –೨

ಐಹೊಳೆಯಲ್ಲಿ ಅಪರೂಪವಾಗಿ ಕಂಡುಬರುವ ಸೂರ್ಯನಾರಾಯಣನ ಗುಡಿಯೊಂದಿರುವುದನ್ನು ಗಮನಿಸಬಹುದು. ಸುಮಾರು ಏಳು–ಎಂಟನೆಯ ಶತಮಾನಕ್ಕೆ ಸೇರಿರಬಹುದಾದ ಈ ದೇಗುಲದ ಗರ್ಭಗೃಹದಲ್ಲಿ ಸುಮಾರು ಐದು ಅಡಿ ಎತ್ತರವಿರುವ ಸೂರ್ಯನಾರಾಯಣನ ಭವ್ಯವಾದ ಶಿಲ್ಪವಿದೆ. ಸುಂದರವಾಗಿ ಕೆತ್ತಲಾಗಿರುವ ಈ ಶಿಲ್ಪದಲ್ಲಿ ಚಾಲುಕ್ಯರ ಕಾಲದ ಶಿಲ್ಪ ಶೈಲಿಯನ್ನು ಗಮನಿಸಬಹುದು. ಒಂದು ಗಮನಾರ್ಹ ವಿಚಾರವೆಂದರೆ ಸಾಮಾನ್ಯವಾಗಿ ಸೂರ್ಯನ ಶಿಲ್ಪದಲ್ಲಿ ಸೂರ್ಯನು ಬೂಟುಗಾಲಿನೊಂದಿಗೆ ಕಾಣಿಸುತ್ತಾನೆ. 'ಉತ್ತರಭಾರತದ ಸೂರ್ಯನ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಬೂಟು ಧರಿಸಿರುವಂತೆ ಕಂಡುಬರುತ್ತವೆ. ಆದರೆ ಇಲ್ಲಿನ ಶಿಲ್ಪದಲ್ಲಿ ಅದು ಕಾಣಿಸುವುದಿಲ್ಲ. ಹೀಗೆ 'ಬೂಟು' ಧರಿಸದ ಸೂರ್ಯ ಶಿಲ್ಪಗಳ ಪರಂಪರೆ ಕರ್ನಾಟಕದಲ್ಲಿ ಚಾಲುಕ್ಯರಿಂದಲೇ ಪ್ರಾರಂಭವಾಯಿತೆನ್ನಬಹುದು'.[೫೬]

ಇಲ್ಲಿನ ಸೂರ್ಯನು ಎರಡು ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದಾನೆ. ಸಮಭಂಗಿಯಲ್ಲಿ ನಿಂತಿರುವ ಸೂರ್ಯನ ಎರಡು ಪಕ್ಕಗಳಲ್ಲಿ ಉಷೆ ಮತ್ತು ಪ್ರತ್ಯುಷೆಯರು ನಿಂತಿದ್ದಾರೆ. ಇವರ ಒಂದು ಕೈಯು ಕಟ್ಯವಲಂಬಿತವಾಗಿದ್ದರೆ ಇನ್ನೊಂದು ಕೈಯಲ್ಲಿ ಕಮಲವನ್ನು ಹಿಡಿದಿದ್ದಾರೆ. ಸೂರ್ಯನ ಮುಖವು ವೃತ್ತಾಕಾರವಾಗಿದ್ದು ತಲೆಯ ಮೇಲೆ ಕಿರೀಟಮುಕುಟವಿದೆ. ಅದರ ಹಿಂದೆ ಸಣ್ಣಗಾತ್ರದ ಪ್ರಭಾಮಂಡಲವಿದೆ. ಮುಖದಲ್ಲಿ ಯಾವುದೇ ಭಾವನೆಗಳು ವ್ಯಕ್ತವಾಗುವುದಿಲ್ಲ. ಕುತ್ತಿಗೆಯಲ್ಲಿ ಹಾರ, ವೈಕಕ್ಷಕ, ಯಜ್ಞೋಪವೀತ, ಸೊಂಟದಲ್ಲಿ ಅಗಲವಾದ ಸೊಂಟಪಟ್ಟಿ, ಉದರಬಂಧ, ಒಡ್ಯಾಣಗಳಿರುವುದನ್ನು ಗಮನಿಸಬಹುದು.

ಕಾಲಿನಲ್ಲಿ ಅಗಲವಾದ ಮತ್ತು ಹರಳುಗಳ ಕೆತ್ತನೆಯಿಂದ ಕೂಡಿದ ಕಡಗವಿದೆ. ಕೈಯಲ್ಲಿ ಬಳೆಗಳಿವೆ. ಈತನಿಗೆ ಸೊಂಟದಿಂದ ತೊಡೆಯವರೆಗಷ್ಟೇ ಬಟ್ಟೆಯಿರುವುದು ಗಮನಾರ್ಹ. ಸೊಂಟಪಟ್ಟಿಯಲ್ಲಿ ನಾಲ್ಕು ಸುತ್ತುಗಳಿದ್ದು ಅವುಗಳಲ್ಲಿ ಮುತ್ತಿನಹರಳುಗಳ ಕೆತ್ತನೆಯಿದೆ. ಶಿಲ್ಪದ ಸುತ್ತಲೂ ಕಮಾನಿನಾಕಾರದ ಚೌಕಟ್ಟು ಇದ್ದು ಇದು ಮಕರ ಮತ್ತು ಹೂವಿನ ಸುರುಳಿಗಳ ಕೆತ್ತನೆಯಿಂದ ಕೂಡಿದೆ. ಇಲ್ಲಿ ಇನ್ನೊಂದು ವಿಶೇಷವೆಂದರೆ ಸೂರ್ಯನ ಜೊತೆಯಲ್ಲಿ ಇರಬೇಕಾದ ಆತನ ಸಪ್ತಾಶ್ವಗಳನ್ನು ಆತನ ಪೀಠದ ಜೊತೆಗೆ ಅಥವಾ ಪೀಠವಾಗಿ ಕಾಣಿಸುವಂತೆ ಕೆತ್ತಲಾಗಿದ್ದು ಇವು ಸಾಂಕೇತಿಕವಾಗಿರುವಂತೆ ಕೆತ್ತಲಾಗಿದೆ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಸೂರ್ಯನ

೫೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೬

ಒಡ್ಯಾಣದಲ್ಲಿ ಅಂಡಾಕಾರದಲ್ಲಿ ಮಣಿಮಾಲೆಯ ಇಳಿತ ಇಲ್ಲದಿರುವುದು. ಶಿಲ್ಪದಲ್ಲಿ ಆಭರಣಗಳನ್ನು ಅಲಂಕಾರಯುತವಾಗಿ ಕೆತ್ತಿರುವುದನ್ನು ಕಾಣಬಹುದು. ಐಹೊಳೆಯ ಬಡಿಗೇರ ಗುಡಿಯ ಸೂರ್ಯನ ಶಿಲ್ಪಕ್ಕಿಂತ ಇಲ್ಲಿನ ರಚನೆ ಭಿನ್ನವಾಗಿದೆ. ಬಹುಶಃ ಈ ಶಿಲ್ಪವು ಆರಾಧನೆಯ ಉದ್ದೇಶಕ್ಕೆ ರಚಿತವಾಗಿರುವುದರಿಂದ ಅನಗತ್ಯ ವಿವರಣೆಗಳ ಬದಲಾಗಿ ಸೌಂದರ್ಯಕ್ಕೆ ಹೆಚ್ಚಿನ ಮನ್ನಣೆ ನೀಡಿರಬಹುದು. ಶಿಲ್ಪದ ರಚನೆಯಲ್ಲಿ ಕೌಶಲ್ಯವು ವ್ಯಕ್ತವಾಗುತ್ತದೆ. ಶಿಲ್ಪಕ್ಕೆ ಸುಂದರವಾಗಿ ಪ್ರಭಾವಳಿಯನ್ನು ಕೆತ್ತಲಾಗಿದ್ದು, ಇಲ್ಲಿ ಕಲಾತ್ಮಕತೆಯನ್ನು ಹೊಂದಿರುವುದು ಗಮನಾರ್ಹ. ಇದು ತ್ರಿ ಆಯಾಮದಲ್ಲಿ ರಚಿಸಿದ ಬಿಡಿ ದುಂಡು ಶಿಲ್ಪವಾಗಿದೆ.

ಶಿಲ್ಪ –೩

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಛಾವಣಿಯಲ್ಲಿ ಸೂರ್ಯನ ಸುಂದರ ವಿಗ್ರಹವಿದೆ.[೫೭] ಸೂರ್ಯನ ಎರಡು ಕೈಗಳಲ್ಲಿ ಕಮಲಗಳಿವೆ. ಇಲ್ಲಿಯೂ ಅವನ ಕಾಲುಗಳಲ್ಲಿ ಬೂಟುಗಳಿಲ್ಲದಿರುವುದು ಗಮನಾರ್ಹ. ಸೂರ್ಯನು ಸಮಭಂಗಿಯಲ್ಲಿ ನಿಂತಿದ್ದಾನೆ. ಅವನ ಎರಡೂ ಪಕ್ಕಗಳಲ್ಲಿ ಉಷೆ ಮತ್ತು ಪ್ರತ್ಯುಷೆಯರು ಬಾಣ ಪ್ರಯೋಗಿಸುವಂತೆ ನಿಂತಿದ್ದಾರೆ. ಇಲ್ಲಿ ಸಪ್ತಾಶ್ವಗಳು ಮತ್ತು ಸಾರಥಿಯಾದ ಅರುಣನನ್ನು ವಿವರವಾಗಿ ಕೆತ್ತಲಾಗಿದೆ. ಇನ್ನೊಂದು ಗಮನಾರ್ಹವಾದ ವಿಚಾರವೆಂದರೆ, ಇಲ್ಲಿ ಗಂಧರ್ವರು ಆಕಾಶದಲ್ಲಿ ಹಾರಾಡುತ್ತಿದ್ದಾರೆ. ಇಲ್ಲಿ ಮೋಡಗಳನ್ನು ಚದರಿಸುತ್ತಿರುವಂತೆ ಕೆತ್ತಲಾಗಿದ್ದು ಇದರಿಂದಾಗಿ ಸೂರ್ಯನು ಆಕಾಶದಲ್ಲಿ ಮೋಡಗಳನ್ನು ಚದರಿಸುತ್ತ ಬೆಳಕನ್ನು ಹರಡುತ್ತ ಬರುವಂತೆ ಕಂಡುಬರುವುದು ವಿಶೇಷ. ಇಲ್ಲಿನ ಕೆತ್ತನೆಯಲ್ಲಿ ವಿಭಿನ್ನತೆಯಿದ್ದು ಸೂರ್ಯನ ಮುಖವು ಶಾಂತತೆಯಿಂದ ಕೂಡಿದ್ದು ಶಿಲ್ಪಕ್ಕೆ ಹೆಚ್ಚಿನ ಸೌಂದರ್ಯವನ್ನು ಶಿಲ್ಪಿಗಳು ನೀಡಿದ್ದಾರೆ.

ಬಾದಾಮಿಯ ಶಿಲ್ಪಿಗಳಿಗೆ ಮೊದಲ ಕೆತ್ತನೆಗಳಲ್ಲಿ ಬ್ರಹ್ಮನನ್ನು ಎಲ್ಲಿ ಕೂರಿಸುವುದೆಂಬುದರ ಕುರಿತಾಗಿ ಸಮಸ್ಯೆ ಇದ್ದಿರಬಹುದೆನ್ನಿಸುತ್ತದೆ. ಯಾಕೆಂದರೆ ಇವರ ರಚನೆಯ ಶಿಲ್ಪಗಳಲ್ಲಿ ಕೆಲವೆಡೆ ಬ್ರಹ್ಮನು ತ್ರಿಮೂರ್ತಿಗಳಲ್ಲಿ ಒಬ್ಬನಾಗಿ ಚಿತ್ರಿತನಾಗಿದ್ದರೆ ಕೆಲವೆಡೆ ಬಿಡಿಶಿಲ್ಪವಾಗಿ ಕಂಡುಬರುತ್ತಾನೆ. ಇನ್ನು ಕೆಲವೆಡೆ ಅಷ್ಟದಿಕ್ಪಾಲಕ ಶಿಲ್ಪಗಳಲ್ಲಿ ಒಬ್ಬನಾಗಿ ಕಂಡುಬಂದರೆ ಕೆಲವೆಡೆ ಅಷ್ಟ ದಿಕ್ಪಾಲಕ ಶಿಲ್ಪಗಳ ಮಧ್ಯದ ಜಾಗೆಯಲ್ಲಿ ಕಾಣಿಸುತ್ತಾನೆ. ಇಲ್ಲಿ ವೈವಿಧ್ಯ ಇರುವುದು ಕಂಡುಬರುತ್ತದೆ.

ಶಿಲ್ಪ –೪

ಮಹಾಕೂಟದ ಅವರಣದಲ್ಲಿ ಚಿಕ್ಕದಾದ ಕೋಟಿಲಿಂಗ ದೇವಾಲಯವು ಪಶ್ಚಿಮಾಭಿ ಮುಖವಾಗಿದ್ದು, ದೇವಾಲಯದ ಹಿಂಭಾಗದ ಭಿತ್ತಿಯಲ್ಲಿ ಪೂರ್ವಾಭಿಮುಖವಾಗಿರುವ

೫೭. ಬಿ.ಎಂ. ಚಂದ್ರಶೇಖರಯ್ಯ : ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ, ಪುಟ – ೩೪

ಸೂರ್ಯನ ಚಿಕ್ಕದಾದ ಶಿಲ್ಪವನ್ನು ಎರಡು ಕಂಬಗಳ ಮಧ್ಯದಲ್ಲಿ ರಚಿಸಲಾಗಿದೆ. ಈ ಶಿಲ್ಪದ ಕಿರೀಟವು ದೊಡ್ಡದಾಗಿದ್ದು, ಎರಡು ಕೈಗಳಲ್ಲಿ ಹಿಡಿದುಕೊಂಡಿದ್ದು, ಅಲ್ಲದೇ ಕೈಗಳಲ್ಲಿ ಕಡಗವನ್ನು ಧರಿಸಲಾಗಿದೆ. ಸಮಭಂಗಿಯಲ್ಲಿ ನಿಂತಿರುವ ಸೂರ್ಯಶಿಲ್ಪಕ್ಕೆ ಹೆಚ್ಚು ಆಭರಣಗಳಿಲ್ಲದೇ ಸುಣ್ಣವನ್ನು ಮೆತ್ತಿ ಹಾಳುಮಾಡಲಾಗಿದೆ.

ಶಿಲ್ಪ –೫

ಮಹಾಕೂಟದ ದೇವಾಲಯದ ಸಂಕೀರ್ಣದಲ್ಲಿ ಸರಸ್ವತಿ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಸರಸ್ವತಿ ವಿಗ್ರಹದ ಬಲಭಾಗದ ಭಿತ್ತಿಯಲ್ಲಿ ಎರಡು ಕಂಬಗಳ ಮಧ್ಯ ಸೂರ್ಯನು ಕಮಲದ ಮೊಗ್ಗನ್ನು ಹಿಡಿದುಕೊಂಡು ಸಮಭಂಗಿಯಲ್ಲಿ ನಿಂತಿದ್ದಾನೆ. ಸರಿಯಾದ ಅಳತೆಯಿಲ್ಲದೆ ಶಿಲ್ಪವನ್ನು ಕೆತ್ತಿದ್ದು, ಪ್ರಸ್ತುತ ಈ ಶಿಲ್ಪಗಳಿಗೆ ಸುಣ್ಣವನ್ನು ಹಚ್ಚಿ ಹಾಳುಮಾಡಿದ್ದಾರೆ.

ಶಿಲ್ಪ –೬

ಐಹೊಳೆ ಲಾಡ್‌ಖಾನ್ ದೇವಾಲಯ ಗೋಪುರದ ಹಿಂಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಸೂರ್ಯನ ಅಪೂರ್ಣವಾದ ಶಿಲ್ಪ ಕೆತ್ತನೆಯಿದೆ. ಇದು ಕಿರೀಟಮುಕುಟಧಾರಿಯಾಗಿದ್ದು, ಎರಡೂ ಕೈಗಳಲ್ಲಿ ಅರಳಿದ ಕಮಲದ ಮೊಗ್ಗನ್ನು ಹಿಡಿದಿದ್ದಾನೆ. ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಈ ಶಿಲ್ಪವನ್ನು ಕಿರೀಟದಿಂದ ಸೊಂಟದವರೆಗೆ ಮಾತ್ರ ಕೆತ್ತಲಾಗಿದೆ. ಮಿಕ್ಕಿದವುಗಳನ್ನು ಹಾಗೆ ಬಿಡಲಾಗಿದೆ. ಇಲ್ಲಿ ಕಲ್ಲಿನ ಕೊರತೆಯಿರುವುದನ್ನು ಗಮನಿಸಬಹುದು. ಆದ್ದರಿಂದ ಶಿಲ್ಪಿಗಳು ಅರ್ಧಕ್ಕೆ ನಿಲ್ಲಿಸಿದ್ದಾರೆ.

ಶಿಲ್ಪ –೭

ಮಹಾಕೂಟದ ದೇವಾಲಯದ ಸಂಕೀರ್ಣದಲ್ಲಿ ಸರಸ್ವತಿ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಸರಸ್ವತಿ ವಿಗ್ರಹದ ಎಡಭಾಗದ ಭಿತ್ತಿಯಲ್ಲಿ ಎರಡು ಕಂಬಗಳ ಮಧ್ಯ ಸೂರ್ಯನು ಕಮಲದ ಮೊಗ್ಗನ್ನು ಹಿಡಿದುಕೊಂಡು ಸಮಭಂಗಿಯಲ್ಲಿ ನಿಂತಿದ್ದಾನೆ. ಸರಿಯಾದ ಅಳತೆಯಿಲ್ಲದೆ ಶಿಲ್ಪವನ್ನು ಕೆತ್ತಿದ್ದು, ಪ್ರಸ್ತುತ ಈ ಶಿಲ್ಪಗಳಿಗೆ ಸುಣ್ಣವನ್ನು ಹಚ್ಚಿ ಹಾಳುಮಾಡಿದ್ದಾರೆ.

ಶಿಲ್ಪ –೮

ಮಹಾಕೂಟ ಪ್ರವೇಶ ದ್ವಾರದೊಳಗಿರುವ ನಂದಿ ಮಂಟಪದ ಬಲಗಡೆಯಿರುವ ಗುಡಿಯ ಹಿಂಭಾಗದ ಭಿತ್ತಿಯಲ್ಲಿ ಸಮಭಂಗಿಯಲ್ಲಿ ನಿಂತಿರುವ, ನಾಲ್ಕು ಅಡಿ ಎತ್ತರವಿರುವ ಎರಡು ಕಂಬಗಳ ಮಧ್ಯದ ಸೂರ್ಯನ ಶಿಲ್ಪವು ಅಪೂರ್ಣತೆಯಿಂದ ಕೂಡಿದೆ. ಯಜ್ಞೋಪವೀತವನ್ನು



ಧರಿಸಿದ ಶಿಲ್ಪವು ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವನ್ನು ಸಹ ಹೊಂದಿರುವ ಈ ಶಿಲ್ಪವು ದ್ವಿಮಾನದಲ್ಲಿ ರಚನೆಯಾಗಿದೆ.

ಶಿಲ್ಪ –೯

ಪಟ್ಟದಕಲ್ಲಿನ ಜಂಬುಲಿಂಗ ದೇವಾಲಯದ ಹಿಂಭಾಗದ ಭಿತ್ತಿಯಲ್ಲಿ ಸೂರ್ಯನ ಶಿಲ್ಪವು ಪಶ್ಚಿಮಾಭಿಮುಖವಾಗಿ ಸಮಭಂಗಿಯಲ್ಲಿ ನಿಂತಿದ್ದು, ಸಂಪೂರ್ಣವಾಗಿ ಭಗ್ನವಾಗಿದೆ. ಕಿರೀಟಮುಕುಟ, ಕೈಯಲ್ಲಿ ಕಮಲದ ಮೊಗ್ಗು, ಕಟಿಭಾಗದಲ್ಲಿ ವಸ್ತ್ರಗಳನ್ನು ಕಟ್ಟಿದ್ದು, ಸೊಂಟಪಟ್ಟಿಯನ್ನು ಧರಿಸಿದ ಕುರುಹುಗಳನ್ನು ಗಮನಿಸಬಹುದು. ಇದು ಸುಸ್ಥಿತಿಯಲ್ಲಿದ್ದರೆ ಸೂರ್ಯನ ಶಿಲ್ಪಗಳಲ್ಲಿ ಇದೊಂದು ಉತ್ತಮ ಕಲಾಕೃತಿಯಾಗುತ್ತಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

ಶಿಲ್ಪ –೧೦

ಪಟ್ಟದಕಲ್ಲಿನ ದೇವಾಲಯಗಳ ಸಮೂಹ ಬಿಟ್ಟು ಸ್ವಲ್ಪ ಅಂತರದಲ್ಲಿ ಸ್ವತಂತ್ರವಾದ ಏಕೈಕ ಪಾಪನಾಥ ದೇವಾಲಯವು ಪೂರ್ವಾಭಿಮುಖವಾಗಿದೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವಿದೆ. ಗರ್ಭಗುಡಿಯ ಎಡಭಾಗದ ಕೋಷ್ಠಕದಲ್ಲಿ ದಕ್ಷಿಣಾಭಿಮುಖವಾಗಿರುವ ಐದು ಅಡಿಯ ಎತ್ತರದಲ್ಲಿ ರಚಿತವಾದ ಸೂರ್ಯನ ಶಿಲ್ಪವೊಂದು ಸಕಲ ಆಭರಣಗಳೊಂದಿಗೆ ಸಮಭಂಗಿಯಲ್ಲಿ ನಿಂತಿದ್ದು, ಎರಡು ಕೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದು, ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವನ್ನು ಕೆತ್ತಲಾಗಿದ್ದು, ಯಜ್ಞೋಪವೀತ ಮತ್ತು ಸೊಂಟದ ಪಟ್ಟಿ, ತೆಳುವಾದ ವಸ್ತ್ರವನ್ನು ತೊಟ್ಟಿರುವಂತೆ ರಚಿಸಲಾಗಿದೆ. ಚಾಲುಕ್ಯರ ಕಾಲದ ಎಲ್ಲ ಶಿಲ್ಪಗಳಲ್ಲಿನ ವಿಶೇಷತೆಯೆಂದರೆ ಇವರ ಕಾಲದಲ್ಲಿ ರಚನೆಯಾದ ಶಿಲ್ಪಗಳು ಯಾವುದೇ ಇರಲಿ, ಅಲ್ಲಿ ತಮ್ಮತನ ಇದೆ, ಕ್ರಿಯಾತ್ಮಕತೆಯಿದೆ, ಸರಳತೆಯ ಜೊತೆಗೆ ನೇರ ಅಭಿವ್ಯಕ್ತಿ ಇದೆ, ಇಷ್ಟೆಲ್ಲ ಇದ್ದರೂ ಇವರು ಪ್ರತಿಮಾಶಾಸ್ತ್ರದ ಚೌಕಟ್ಟಿನಲ್ಲಿ ವಿಭಿನ್ನವಾಗಿ ಕ್ರಿಯಾತ್ಮಕತೆಯಿಂದ ಶಿಲ್ಪ ರಚನೆ ಮಾಡಿರುವುದನ್ನು ಗಮನಿಸಬಹುದು.

ಅಷ್ಟ ದಿಕ್ಪಾಲಕರ ಶಿಲ್ಪಗಳು

ಜಗತ್ತಿನ ಎಂಟು ಮೂಲೆಗಳ (ದಿಕ್ಕುಗಳ) ಒಡೆತನವನ್ನು ಹೊಂದಿರುವ ಅಥವಾ ಅವುಗಳ ರಕ್ಷಣೆಯ ಕಾರ್ಯವನ್ನು ನಿರ್ವಹಿಸುವ ದೇವತೆಗಳೇ ಅಷ್ಟ ದಿಕ್ಪಾಲಕರು. ಇವರ ಕುರಿತಾಗಿ ವೇದಗಳಲ್ಲಿಯೂ ಉಲ್ಲೇಖವಿದೆ. ಆದರೆ ಇವರ ಪೂಜೆಗೊಳ್ಳುವ ದೇವತೆಗಳಲ್ಲ. ಇವರ ಶಿಲ್ಪಗಳು ಕೂಡ ಕಡಿಮೆಯೇ. ಇವರಿಗೆ ಪ್ರತ್ಯೇಕ ದೇವಾಲಯಗಳಿರುವುದಿಲ್ಲ. ಬಾದಾಮಿಯ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಅಷ್ಟ ದಿಕ್ಪಾಲಕರ ಶಿಲ್ಪಗಳನ್ನು ರಚಿಸಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಈ ಶಿಲ್ಪಗಳನ್ನು ದೇವಾಲಯದ ಛತ್ತುಗಳಲ್ಲಿ ಸ್ಥಳಾವಕಾಶ

ಖಾಲಿಯಾಗುಳಿಯದಂತೆ ಅಲಂಕರಿಸುವ ಉದ್ದೇಶದಿಂದ ಬಳಸಿರುವುದು ಕಂಡುಬರುತ್ತದೆ. 'ಚಾಲುಕ್ಯರ ಶಿಲ್ಪಗಳಲ್ಲಿ ದಿಕ್ಪಾಲಕರು ಸಾಮಾನ್ಯವಾಗಿ ದೇವಾಲಯದ ಛತ್ತಿನ ಮೇಲೆ ಕಂಡುಬರುತ್ತಾರೆ. ಛತ್ತಿನ ಅಲಂಕಾರಕ್ಕಾಗಿ ಈ ಧಾರ್ಮಿಕ ಶಿಲ್ಪಗಳನ್ನು ಬಳಸಲಾಗಿದೆ'.[೫೮] ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾದ ಗುಹಾಲಯಗಳು ಮತ್ತು ರಾಚನಿಕ ದೇವಾಲಯಗಳ ಛತ್ತುಗಳಲ್ಲಿ ಅಷ್ಟದಿಕ್ಪಾಲರ ಶಿಲ್ಪಗಳು ರಚನೆಯಾಗಿರುವುದನ್ನು ಕಾಣಬಹುದಾಗಿದೆ. ಇನ್ನೂ ಕುತೂಹಲಕಾರಿ ಅಂಶವೆಂದರೆ, ಯಾವ ದಿಕ್ಕುಗಳಿಗೆ ಯಾವ ದೇವತೆ ಎಂಬ ಬಗ್ಗೆ ಒಮ್ಮತವಿದ್ದಂತೆ ಕಂಡುಬರುವುದಿಲ್ಲ, ಮತ್ತು ಮೊದಮೊದಲಿನ ರಚನೆಗಳಲ್ಲಿ ಕೇವಲ ನಾಲ್ಕೇ ದೇವತೆಗಳಿದ್ದವು. ನಂತರ ಇವು ಎಂಟಾದವು. ಇನ್ನು ಮಧ್ಯದ ಖಾಲಿ ಜಾಗೆಯಲ್ಲಿ ಮೊದಲ ಶಿಲ್ಪಗಳಲ್ಲಿ ಬ್ರಹ್ಮ ಅಥವಾ ಕಾರ್ತಿಕೇಯ ಕಂಡುಬಂದರೆ, ನಂತರದ ಶಿಲ್ಪಗಳಲ್ಲಿ ಇಂದ್ರನ ಶಿಲ್ಪ ರಚನೆಯಾಗಿದೆ. ಹೀಗಾಗಿ ಅಷ್ಟ ದಿಕ್ಪಾಲಕರ ಶಿಲ್ಪಗಳು ಚಾಲುಕ್ಯರ ಕಾಲದಲ್ಲಿಯೇ ಪ್ರಾರಂಭವಾದವೆನ್ನಬಹುದು.

ಶಿಲ್ಪ –೧

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಅಷ್ಟದಿಕ್ಪಾಲಕ ಶಿಲ್ಪಗಳು ಮೊದಲು ಕಂಡುಬರುವುದು ಬಾದಾಮಿಯ ಮೂರನೆಯ ವೈಷ್ಣವ ಗುಹಾಲಯದಲ್ಲಿ. ಈ ಶಿಲ್ಪಗಳನ್ನು ರಚಿಸುವ ಕಾಲದಲ್ಲಿಯೇ ಇವರ ಕಲ್ಪನೆಯಲ್ಲಿ ಯಾವ ದಿಕ್ಕುಗಳಲ್ಲಿ ಯಾರು ಎಂಬ ಕುರಿತಾಗಿ ಏಕ ಅಭಿಪ್ರಾಯವಿದ್ದಂತೆ ಕಂಡುಬರುವುದಿಲ್ಲ. ಇಲ್ಲಿನ ಒಂದು ಛತ್ತಿನಲ್ಲಿ ಬ್ರಹ್ಮನು ಮಧ್ಯದಲ್ಲಿ ಕೆತ್ತಲ್ಪಟ್ಟಿದ್ದಾನೆ. ಇನ್ನೊಂದರಲ್ಲಿ ವಿಷ್ಣುವನ್ನು ಕೆತ್ತಲಾಗಿದೆ. ಇನ್ನೊಂದರಲ್ಲಿ ಇಂದ್ರನನ್ನು ಕೆತ್ತಿದ್ದಾರೆ. ಅಷ್ಟ ದಿಕ್ಪಾಲಕರ ಶಿಲ್ಪಗಳಿರುವೆಡೆ ಒಂದರಲ್ಲಿ ಕೇವಲ ನಾಲ್ಕು ದೇವತೆಗಳಿರುವುದನ್ನು ಕಾಣಬಹುದು.

ಶಿಲ್ಪಶಾಸ್ತ್ರದ ಪ್ರಕಾರ ಅಷ್ಟ ದಿಕ್ಪಾಲಕ ಶಿಲ್ಪಗಳಲ್ಲಿ ಕ್ರಮವಾಗಿ ಪೂರ್ವ, ಆಗ್ನೇಯ, ದಕ್ಷಿಣ, ನೈಋತ್ಯ, ಪಶ್ಚಿಮ, ವಾಯುವ್ಯ, ಉತ್ತರ, ಮತ್ತು ಈಶಾನ್ಯ ಹೀಗೆ ಎಂಟು ದಿಕ್ಕುಗಳಿವೆ. ಈ ದಿಕ್ಕುಗಳಿಗೆ ಕ್ರಮವಾಗಿ ಇಂದ್ರ, ಅಗ್ನಿ, ಯಮ, ನಿರ್ಋತಿ ವರುಣ, ವಾಯು, ಕುಬೇರ ಹಾಗೂ ಈಶಾನ ಇವರು ದಿಕ್ಪಾಲಕರಾಗಿದ್ದಾರೆ. ಈ ಕ್ರಮದಲ್ಲಿ ಶಿಲ್ಪಗಳನ್ನು ರಚಿಸಬೇಕೆಂದು ಶಿಲ್ಪಶಾಸ್ತ್ರಗಳು ಹೇಳುತ್ತವೆ. ಮೂರನೆಯ ಗುಹಾಲಯದ ಮಂಟಪದ ಛತ್ತಿನಲ್ಲಿ ಪೂರ್ವದಲ್ಲಿ ಇಂದ್ರ ಮತ್ತು ಪಶ್ಚಿಮದಲ್ಲಿ ವರುಣರನ್ನು ಕೆತ್ತಲಾಗಿದೆ. ಆದರೆ ದಕ್ಷಿಣದಲ್ಲಿ ಯಮನ ಬದಲಾಗಿ ಕಾರ್ತಿಕೇಯನನ್ನು ಕೆತ್ತಿರುವುದು ಕಂಡುಬರುತ್ತದೆ. ಇಲ್ಲಿ ಮಧ್ಯದಲ್ಲಿ ಬ್ರಹ್ಮನ ಶಿಲ್ಪವಿದೆ.

ಶಿಲ್ಪ –೨

ಬಾದಾಮಿಯ ಮೂರನೇ ಗುಹಾಲಯದ ಇನ್ನೊಂದು ಶಿಲ್ಪದ ಮಧ್ಯದಲ್ಲಿ ವಿಷ್ಣು ಮತ್ತು ಲಕ್ಷ್ಮೀಯರಿಂದ ಕೂಡಿದ ಶಿಲ್ಪವಿದೆ. ಇಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಅಷ್ಟದಿಕ್ಪಾಲಕರನ್ನು

೫೮. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೬

[illegible]

ಕ್ರಮಬದ್ಧವಾಗಿ ಚಿತ್ರಿಸಲಾಗಿದೆ. ಇಲ್ಲಿನ ಶಿಲ್ಪದ ಸಂಯೋಜನೆಯೂ ಸುಂದರವಾಗಿದೆ. ದಿಕ್ಪಾಲಕರನ್ನು ಸಣ್ಣಸಣ್ಣ ಪಟ್ಟಿಕೆಗಳಲ್ಲಿ ಕೆತ್ತಲಾಗಿದೆ. ಆದರೆ ವಿವರವಾಗಿ ಚಿತ್ರಿಸಿರುವುದು ಕಂಡುಬರುತ್ತದೆ.

ಪ್ರತಿಯೊಬ್ಬ ದಿಕ್ಪಾಲಕನಿಗೂ ವಾಹನಗಳಿದ್ದು, ಅವುಗಳ ಮೂಲಕ ಯಾವ ದಿಕ್ಕಿನಲ್ಲಿ ಯಾವ ದಿಕ್ಪಾಲಕನಿದ್ದಾನೆ ಎಂದು ಗುರುತಿಸಲು ಸಾಧ್ಯವಾಗುತ್ತದೆ. ಐರಾವತ(ಆನೆ)ದೊಂದಿಗೆ ಇದ್ದರೆ ಆತ ಇಂದ್ರ, ದೊಡ್ಡ ಹೊಟ್ಟೆಯೊಂದಿಗೆ ಕೈಯಲ್ಲಿ ಗಂಟು ಹಿಡಿದು ಕುಳಿತಿದ್ದರೆ ಆತ ಕುಬೇರ, ಅಗ್ನಿಯೊಂದಿಗೆ ಇದ್ದರೆ ಆತ ಅಗ್ನಿ, ಸಿಂಹಾಸನದಲ್ಲಿ ಕುಳಿತಿದ್ದರೆ ಆತ ವಾಯು, ಹೀಗೆ ಶಿಲ್ಪಿತವಾಗಿರುತ್ತದೆ. ಇನ್ನೊಂದು ಶಿಲ್ಪದಲ್ಲಿ ಕೆಲವು ದೇವತೆಗಳು ಅದಲುಬದಲಾಗಿವೆ. ಈಶಾನ್ಯ ಇರುವೆಡೆಯಲ್ಲಿ ಅಗ್ನಿ, ಅಗ್ನಿ ಇರಬೇಕಾದಲ್ಲಿ ಬ್ರಹ್ಮ, ನೈಋತ್ಯ ದಿಕ್ಕಿನಲ್ಲಿ ನಂದಿಯೊಂದಿಗೆ ಕುಳಿತಿರುವ ಈಶಾನ ಹೀಗೆ ಚಿತ್ರಿಸಿರುವುದು ಕಂಡುಬರುತ್ತದೆ.

ಬಹುಶಃ ಆ ಸಂದರ್ಭದಲ್ಲಿ ಶಿಲ್ಪಿಗಳಿಗೆ ಈ ವಿಚಾರದಲ್ಲಿ ಗೊಂದಲವಿದ್ದಿರಬಹುದೇನೋ ಎಂದು ಅನ್ನಿಸುತ್ತದೆ. ಚಾಲುಕ್ಯರ ಕಾಲದ ಮೊದಮೊದಲಲ್ಲಿನ ಶಿಲ್ಪಗಳಲ್ಲಿ ಈ ರೀತಿಯ ಗೊಂದಲವಿದ್ದುದು ನಂತರದ ದಿನಗಳಲ್ಲಿ ಈ ಗೊಂದಲಗಳು ಬಗೆಹರಿದಿರಬಹುದು ಎಂದು ಯೋಚಿಸಬೇಕಾಗುತ್ತದೆ. ಅದೇನೇ ಇದ್ದರೂ ಅದು ಇಲ್ಲಿ ಅಪ್ರಸ್ತುತವಾಗಿದೆ. ಶಿಲ್ಪಿಗಳ ಉದ್ದೇಶವು ಅಲ್ಲಿನ ಖಾಲಿ ಜಾಗೆಯನ್ನು ಸೂಕ್ತ ಚಿತ್ರಗಳ ಮೂಲಕ ತುಂಬಿಸುವುದೇ ಆಗಿತ್ತು. ಮೊದಲ ಗುಹಾಲಯದ ಛತ್ತಿನಲ್ಲಿಯ ಶಿಲ್ಪಗಳನ್ನು ನೋಡಿದರೆ ಈ ವಿಚಾರವು ಮನದಟ್ಟಾಗುತ್ತದೆ. ಮೊದಲ ಗುಹಾಲಯದಲ್ಲಿ ಈ ಸ್ಥಳವನ್ನು ಕೇವಲ ನಕ್ಷೆಗಳಿಂದ ಅಥವಾ ಮೀನಿನಂತಹ ಚಿತ್ರಗಳಿಂದ ಭರ್ತಿಮಾಡಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಇಲ್ಲಿನ ಶಿಲ್ಪಗಳು ಕುತೂಹಲ ಮೂಡಿಸುವುದು ಇವುಗಳ ರಚನಾರೀತಿ. ಹೆಚ್ಚಿನ ರಚನೆಗಳು ವೃತ್ತಸಂಯೋಜನೆಗಳು. ಮಧ್ಯದಲ್ಲಿನ ಶಿಲ್ಪವೂ ವೃತ್ತಕಾರದಲ್ಲಿಯೇ ಇರುತ್ತದೆ. ಸುತ್ತಲಿನ ಖಾಲಿ ಸ್ಥಳವನ್ನು ಸುರುಳಿ ಚಿತ್ರಗಳಿಂದ ಅಲಂಕರಿಸಲಾಗಿದೆ. ಒಂದು ಶಿಲ್ಪದಲ್ಲಿ ಮಾತ್ರ ಚೌಕಸಂಯೋಜನೆಯಿದೆ. ಮಧ್ಯದಲ್ಲಿ ಇಂದ್ರನಿದ್ದಾನೆ. ಸುತ್ತಲಿನ ಅಷ್ಟ ದಿಕ್ಕುಗಳಲ್ಲಿ ದಿಕ್ಪಾಲಕರಿದ್ದಾರೆ. ಆದರೆ ಅವುಗಳ ಸಂಯೋಜನೆಯಲ್ಲಿ ಸಮತೋಲನವನ್ನು ಉಳಿಸಿಕೊಳ್ಳುವುದಕ್ಕಾಗಿ ಅವುಗಳ ಜೊತೆಗೆ ಸುರುಳಿವಿನ್ಯಾಸಗಳನ್ನು ಕೆತ್ತಲಾಗಿದೆ. ಆದರೆ ಇಲ್ಲಿ ಅಲಂಕರಣ ಅತಿಯಾಗಿದ್ದು ಶಿಲ್ಪದ ಪ್ರಾಮುಖ್ಯ ಕಡಿಮೆಯಾಗಿ ಬಿಟ್ಟಿದೆ. ಇದರಿಂದ ಒಂದು ವಿಚಾರ ಸ್ಪಷ್ಟವಾಗುತ್ತದೆ, ಇವುಗಳ ರಚನೆಯು ಕೇವಲ ಸ್ಥಳಾವಕಾಶದ ಬಳಕೆಯೇ ಆಗಿದೆ. ಆದರೂ ಸಂಯೋಜನೆಯ ರೀತಿಯಿಂದಾಗಿ ಈ ಶಿಲ್ಪಗಳು ನಮ್ಮ ಗಮನಸೆಳೆಯದೆ ಬಿಡುವುದಿಲ್ಲ.

ಐಹೊಳೆಯ ಕೆಲವು ದೇವಾಲಯಗಳಲ್ಲಿನ ಕೆತ್ತನೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಇದು ಕೂಡ ಚಾಲುಕ್ಯರ ಮೊದಲ ಹಂತದ ರಚನೆ. ಇಲ್ಲಿಯೂ ಕೂಡಾ ಅಷ್ಟ ದಿಕ್ಪಾಲಕರ ಶಿಲ್ಪಗಳ ರಚನೆ ದಿಕ್ಕು ತಪ್ಪಿದೆ. ಚಾಲುಕ್ಯರ ಮೊದಲ ಹಂತದ ವಾಸ್ತು ಶಿಲ್ಪಗಳ ರಚನೆಯ

ಸೂರ್ಯ ಶಿಲ್ಪಗಳು



ಶಿಲ್ಪ-೧. ಬಡಿಗೇರ (ಗುಡಿ) ದೇವಾಲಯ, ಐಹೊಳೆ



ಶಿಲ್ಪ-೨. ಸೂರ್ಯನಾರಾಯಣ ದೇವಾಲಯ, ಐಹೊಳೆ



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೪. ಕೋಟಿಲಿಂಗ ದೇವಾಲಯ, ಮಹಾಕೂಟ


ಸೂರ್ಯ ಶಿಲ್ಪಗಳು



ಶಿಲ್ಪ-೫. ಸರಸ್ವತಿ ದೇವಾಲಯ, ಮಹಾಕೂಟ



ಶಿಲ್ಪ-೬. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೭. ಸರಸ್ವತಿ ದೇವಾಲಯ, ಮಹಾಕೂಟ



ಶಿಲ್ಪ-೮. ವಿರೂಪಾಕ್ಷ ದೇವಾಲಯ ಸಂಕೀರ್ಣ, ಮಹಾಕೂಟ

ಸೂರ್ಯ ಶಿಲ್ಪಗಳು



ಶಿಲ್ಪ-೯. ಜಂಬುಲಿಂಗ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೦. ಪಾಪನಾಥ ದೇವಾಲಯ, ಪಟ್ಟದಕಲ್ಲು

ಅಷ್ಟದಿಕ್ಪಾಲಕರ ಶಿಲ್ಪಗಳು



ಶಿಲ್ಪ-೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಸಂದರ್ಭದಲ್ಲಿ ಶಿಲ್ಪಶಾಸ್ತ್ರ ಪರಂಪರೆಗಳು ಇನ್ನೂ ಬಹುಶಃ ನಿಗದಿಯಾಗಿಲ್ಲದಿರುವುದರಿಂದ ಇಲ್ಲಿನ ಶಿಲ್ಪಗಳಲ್ಲಿ ಅಷ್ಟದಿಕ್ಪಾಲಕ ಶಿಲ್ಪಗಳ ರಚನೆಯ ಪ್ರಾರಂಭದ ಹಂತದ ರಚನೆಗಳು ಇವಾಗಿರಬಹುದಾಗಿದ್ದು ಬಹುಶಃ ಪಟ್ಟದಕಲ್ಲಿನ ಪಾಪನಾಥ ದೇವಾಲಯದ ರಚನೆಯ ಸಂದರ್ಭಕ್ಕಾಗಲೇ ದಿಕ್ಕುಗಳಲ್ಲಿನ ದಿಕ್ಪಾಲಕರ ರಚನೆಗಳು ಒಂದು ನಿಶ್ಚಿತ ರೂಪವನ್ನು ಪಡೆದುಕೊಂಡಿರಬಹುದು.

ಇಲ್ಲಿನ ದೇವಾಲಯದ (ಪಾಪನಾಥ) ಭತ್ತಿನಲ್ಲಿ ರಚಿಸಲಾದ ದಿಕ್ಪಾಲಕ ಶಿಲ್ಪಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಇಲ್ಲಿ ಮಧ್ಯದಲ್ಲಿ ಇಂದ್ರ, ಉತ್ತರದಲ್ಲಿ ಕುಬೇರ, ಈಶಾನ, ನಿರ್ಋತಿ, ಅಗ್ನಿ, ಹೀಗೆ ಎಲ್ಲ ದಿಕ್ಪಾಲಕರನ್ನು ಸರಿಯಾದ ಕ್ರಮದಲ್ಲಿ ಸುಂದರವಾಗಿ ಅವರ ವಾಹನಗಳೊಂದಿಗೆ ಕೆತ್ತಲಾಗಿದ್ದು ಉತ್ತಮವಾದ ಸಂಯೋಜನೆಯಿಂದ ಕೂಡಿರುವುದು ಕಂಡುಬರುತ್ತದೆ. ಶಿಲ್ಪದ ಸುತ್ತಲಿನ ಜಾಗೆಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ. ಶಿಲ್ಪಗಳ ರಚನೆಯಲ್ಲಿಯೂ ಶಿಲ್ಪಿಗಳು ತಮ್ಮ ಕಲಾವಂತಿಕೆಯನ್ನು ಮೆರೆದಿರುವುದನ್ನು ಕಾಣಬಹುದು.

ಲೌಕಿಕ ಶಿಲ್ಪಗಳು

ಚಾಲುಕ್ಯರ ಶಿಲ್ಪಪರಂಪರೆಯಲ್ಲಿ ದೇವತಾಶಿಲ್ಪಗಳ ರಚನೆ ಒಂದು ತೂಕದ್ದಾದರೆ, ಇತರ ಲೌಕಿಕ ಶಿಲ್ಪಗಳದ್ದು ಇನ್ನೊಂದು ತೂಕ. ಇವು ಧರ್ಮ, ದೇವತೆಗಳ ಆರಾಧನಾ ಶಿಲ್ಪಗಳಿಗಿಂತ ಮೀರಿದ ರಚನೆ. ಇಲ್ಲಿ ಶಿಲ್ಪಿಗಳು ತಮ್ಮ ಸ್ವಾತಂತ್ರ್ಯವನ್ನು ಸರಿಯಾಗಿ ಉಪಯೋಗಿಸಿಕೊಂಡಿದ್ದಾರೆನ್ನಬಹುದು. ಲೌಕಿಕ ಶಿಲ್ಪಗಳಲ್ಲಿ ಮಿಥುನ ಶಿಲ್ಪಗಳಿವೆ. ರಾಜ–ರಾಣಿಯರ ಶಿಲ್ಪಗಳಿವೆ. ದೇವಾಲಯಕ್ಕೆ ದಾನ ನೀಡಿದ ವ್ಯಾಪಾರಿಗಳ ಶಿಲ್ಪಗಳಿವೆ. ದಂಪತಿಗಳಿದ್ದಾರೆ, ಪ್ರಾಣಿ–ಪಕ್ಷಿಗಳಿವೆ, ಜ್ಯಾಮಿತಿಯ ಅಲಂಕರಣ ಶಿಲ್ಪಗಳಿವೆ, ಹಲವು ಕಥಾನಕ ಶಿಲ್ಪಗಳಿವೆ. ಒಟ್ಟಿನಲ್ಲಿ ಲೌಕಿಕ ಶಿಲ್ಪಗಳ ಹರವು ಬಹು ದೊಡ್ಡದು. ಇವುಗಳು ವಿಶಿಷ್ಟ ಬಗೆಯದಾಗಬಹುದು, ಅಂಥ ಶಿಲ್ಪಗಳನ್ನಿಲ್ಲಿ ನೋಡೋಣ.

ಕುಬ್ಜಗಣ ಶಿಲ್ಪಗಳು

ಕುಬ್ಜ ಶಿಲ್ಪಗಳನ್ನು ನಿರ್ಮಿಸುವಾಗ ಅಧಮ ದಶತಾಲದ ಪ್ರಮಾಣವನ್ನು ಇನ್ನೂ ಸಂಕುಚಿತಗೊಳಿಸಿ ಅಂದರೆ ಇರುವ ಪ್ರಮಾಣವನ್ನು ಮತ್ತಷ್ಟು ಇಳಿಸಿ ರೂಪಿಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಅಧಮ ದಶತಾಲದಲ್ಲಿ ಗೋಪಾಲಕೃಷ್ಣ, ಸ್ಕಂದ ಹಾಗೂ ಇತರ ದೇವತೆಗಳಿದ್ದರೂ ಯಕ್ಷ, ಯಕ್ಷಿ, ಕಿಂಪುರುಷ ಗಣ, ರಾಕ್ಷಸಗಣಗಳನ್ನು ನಿರ್ಮಿಸುವಾಗ ಇನ್ನೂ ಕುಗ್ಗಿಸಿ ನಿರ್ಮಿಸುವುದರಿಂದ ಇವುಗಳು ಕುಬ್ಜಶಿಲ್ಪಗಳು ಎಂದು ಕರೆಯಲ್ಪಟ್ಟಿವೆ. ವಾಸ್ತುಶಾಸ್ತ್ರದ ಹಿನ್ನೆಲೆಯಲ್ಲಿ ಇವರನ್ನು ಅಲಂಕಾರಿಕವಾಗಿ ಬಳಸಬಹುದು ಎಂಬ ವಿವರಣೆ

[illegible]

[illegible]

[illegible]

[illegible]

[illegible]

[illegible]



ಮಾತ್ರ ದೊರಕುತ್ತದೆ. ಇವರಿಗೆ ನಿರ್ದಿಷ್ಟವಾದ ಸ್ಥಾನವಾಗಲಿ, ನಿರ್ದಿಷ್ಟ ಅಳತೆಯಾಗಲಿ ಇರಬೇಕೆಂಬ ನಿಯಮವಿಲ್ಲ.[೫೯] ಮಾಲಗತ್ತಿ ದೇವಾಲಯದ ನಿರ್ಮಾಣದ ಕಾಲಕ್ಕೆ ಹೊರಗೋಡೆಗಳಲ್ಲಿ ಬಹಳ ಸುಂದರವಾದ ದೇಶೀ ನರ್ತನ, ವಾದನಗಳಲ್ಲದೇ ಮಲ್ಲಯುದ್ಧ, ದೊಂಬರಾಟ, ಹಾವಾಡಿಗರಾಗಿಯೂ ದೇಶೀಯ ಶೈಲಿಯ ನಿರೂಪಣೆಯಲ್ಲಿದ್ದಾರೆ. ಐಹೊಳೆಯ ದುರ್ಗಾಗುಡಿ ಅಧಿಷ್ಠಾನದಲ್ಲಿ ಗಣಗಳಾಗಿ ಕಂಡುಬಂದರೂ ಕಂಬಗಳ ಪಟ್ಟಿಕೆಗಳಲ್ಲಿ ಯುದ್ಧ, ಸೈನಿಕತರಬೇತಿಯನ್ನು ಪಡೆಯುವವರಂತೆ, ಕತ್ತಿ, ಗುರಾಣಿ ಹಿಡಿದು ಹೋರಾಡುತ್ತಿರುವಂತೆ ಶಿಲ್ಪಿತರಾಗಿದ್ದಾರೆ.[೬೦] ಮಹಾಕೂಟದ ದೇವಾಲಯದ ಹೊರಗೋಡೆಯ ಪಟ್ಟಿಕೆಯಲ್ಲಿ ಸ್ತ್ರೀಕುಬ್ಜಗಣಗಳ ಸಮುಚ್ಚಯವಿದೆ. ಇವರು ಸಹ ನೃತ್ಯವಾದನಗಳಲ್ಲಿ ನಿರತರಾಗಿದ್ದಾರೆ.

ಶಿಲ್ಪಗಳು ಸಾಮಾನ್ಯವಾಗಿ ಸಣ್ಣವು ಮತ್ತು ಮಧ್ಯಮ ಗಾತ್ರದವುಗಳು. ದೇವಾಲಯಗಳ ಅಧಿಷ್ಠಾನ, ಗೋಡೆಗಳಲ್ಲಿ, ಕಂಬಗಳಲ್ಲಿ, ಭಿತ್ತಿಗಳಲ್ಲಿ ಈ ರೀತಿ ಶಿಲ್ಪಗಳ ರಚನೆಯಾಗಿವೆ. ಕೆಲವು ವೃತ್ತಾಕಾರದ ಸಣ್ಣ ಉಬ್ಬು ರಚನೆಗಳಾದರೆ ಕೆಲವು ದೊಡ್ಡ ಗಾತ್ರದ ಶಿಲ್ಪಗಳನ್ನು ಗೋಡೆಗಳಲ್ಲಿ ಕೆತ್ತಲಾಗಿದೆ. ಸಣ್ಣ ಗಾತ್ರದಲ್ಲಿ ಲಘು ಉಬ್ಬು ಶಿಲ್ಪದ ರೀತಿಯಲ್ಲಿ ಕೆತ್ತಲಾಗಿದ್ದರೆ ಕೆಲವು ಗೋಡೆಗಳಲ್ಲಿ ಉಬ್ಬು ಶಿಲ್ಪದಲ್ಲಿ ಕೆತ್ತಲಾಗಿವೆ. ಗುಹಾಲಯಗಳಲ್ಲಿಯೂ, ರಾಚನಿಕ ಮಂದಿರಗಳ ಅಧಿಷ್ಠಾನ ಭಾಗಗಳಲ್ಲಿ ಲೌಕಿಕ ಜೀವನ ಚಿತ್ರಣವನ್ನು ನೀಡುವ ಗಣ ಶಿಲ್ಪಗಳ ಕೆತ್ತನೆಗಳಾಗಿವೆ.

ಈ ಗುಂಪಿನ ಶಿಲ್ಪಗಳಲ್ಲಿ ಕೆಲವು ಗಣ ಶಿಲ್ಪಗಳು ವಾದ್ಯಗಾರರಾಗಿ ಕಂಡುಬಂದರೆ ಕೆಲ ಶಿಲ್ಪಗಳು ನೃತ್ಯಗಾರರಾಗಿ ಕೆಲವರು ಹಾಸ್ಯನಟರಂತೆ ಕಂಡುಬರುವುದು ವಿಶೇಷ. ಗಣ ಶಿಲ್ಪಗಳನ್ನು ದೀರ್ಘವಾದ ಪಟ್ಟಿಕೆಗಳ ರೀತಿಯಲ್ಲಿ ಕೆತ್ತಲಾಗಿದೆ. ಮಾನವನ ಜೀವನ ರೀತಿಯನ್ನು ಸಾರುವ ಚಿತ್ರಗಳು ಇಲ್ಲಿ ಹೇರಳವಾಗಿ ಕಂಡುಬರುತ್ತವೆ. ಗಣ ಶಿಲ್ಪಗಳು ಬಾದಾಮಿಯ ಗುಹಾಲಯಗಳಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ಮುಖ್ಯ ಶಿಲ್ಪಗಳ ಕೆಳಭಾಗದಲ್ಲಿ ಪಟ್ಟಿಕೆಗಳಲ್ಲಿ ಕೆತ್ತಲಾಗಿದೆ. ಮೊದಲ ಗುಹಾಲಯದಿಂದ ಪ್ರಾರಂಭವಾಗಿ ನಾಲ್ಕೂ ಗುಹಾಲಯಗಳಲ್ಲಿ ಗಣ ಶಿಲ್ಪಗಳು ಕಂಡುಬರುತ್ತವೆ. ಇವುಗಳನ್ನು 'ಕುಬ್ಜ' ಶಿಲ್ಪಗಳೆಂದೂ ಕರೆಯಲಾಗುತ್ತದೆ. ಇವು ಸಾಮಾನ್ಯವಾಗಿ ಶಿಲ್ಪಶಾಸ್ತ್ರದ ರೀತಿಯಲ್ಲಿ ಹೇಳುವುದಾದರೆ 'ಪಂಚತಾಲದ'[೬೧] ಅಳತೆಯ ಶಿಲ್ಪಗಳು. ಸಾಮಾನ್ಯವಾಗಿ ಈ ಶಿಲ್ಪಗಳು ಗಾತ್ರದಲ್ಲಿ ಕುಬ್ಜವಾಗಿದ್ದು ಹೊಟ್ಟೆಯು ಸ್ವಲ್ಪ ದೊಡ್ಡದೆಂಬಂತಿರುತ್ತದೆ. ಮುಖವು ಸಾಮಾನ್ಯವಾಗಿ ಮಕ್ಕಳ ಮುಖದಂತಿರುತ್ತದೆ. ಕೈಕಾಲುಗಳು ಸಣ್ಣವಿದ್ದು ಕಿರೀಟವಿರುವುದಿಲ್ಲ. ವಿವಿಧ ವಾದ್ಯಗಳನ್ನು ಊದುತ್ತಾ ಅಥವಾ ಬಾರಿಸುತ್ತಾ ವಿವಿಧ ಭಂಗಿಯಲ್ಲಿರುತ್ತವೆ.

---

೫೯. ಡಾ. ಅಂಬಳಿಕೆ ಹಿರಿಯಣ್ಣ (ಸಂ.) : ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ – ೩೯೨

೬೦. ಅದೇ., ಪುಟ – ೩೯೨

೬೧. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೫೧



ಕುಬ್ಜ ಪದದ ಅರ್ಥ ಕನ್ನಡ ನಿಘಂಟಿನಲ್ಲಿ ಕುಬುಜ(ನಾ) ಕುಬ್ಜ, ಕುಳ್ಳ, ಗಿಡ್ಡ, ಕುಬುಡ, ವಾಮನ, ವಿಕೃತಿ ಎಂದೂ, ಕುಬುಜಿಸಿ (ಕ್ರಿ): ದೇಹವನ್ನು ಸಂಕೋಚಗೊಳಿಸಿ ಕುಳ್ಳುಮಾಡು, ಬಾಗು ಎಂಬ ಅರ್ಥಗಳು ದೊರಕುತ್ತವೆ. ಈ ಹಿನ್ನೆಲೆಯಲ್ಲಿ ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳಿದ್ದು, ಈ ವಿಶಿಷ್ಟ ಶಿಲ್ಪಗಳನ್ನು ಬೇಕೆಂದೇ ದೇಹವನ್ನು ಸಂಕೋಚಗೊಳಿಸಿ, ಕುಳ್ಳ ಮಾಡಿ ಚಿತ್ರಿಸಿದ್ದಾರೆ ಎಂದು ಹೇಳಬಹುದು. ಶಿಲ್ಪ ಶಾಸ್ತ್ರದಲ್ಲಿ ಈ ರೀತಿಯ ಶಿಲ್ಪಗಳನ್ನು ಗಣಗಳು (Demigods) ಎಂದು ಕರೆಯಲಾಗುತ್ತದೆ.[೬೨] ಇಲ್ಲಿ ಕುಬ್ಜಶಿಲ್ಪಗಳು ವಿವಿಧ ನಮೂನೆಯ ಸಂಗೀತಪರಿಕರಗಳನ್ನು ಊದುತ್ತಿರುವ ಮತ್ತು ಬಾರಿಸುತ್ತಿರುವುದನ್ನು ನೋಡಬಹುದು. ಇದಲ್ಲದೆ ಶಿವನ ಭಿಕ್ಷಾಟನ ಶಿಲ್ಪದ ಮತ್ತು ಪಾರ್ವತಿಯ ಕಲ್ಯಾಣದ ಶಿಲ್ಪದಲ್ಲಿ ವಿವಿಧ ಭಂಗಿಯಲ್ಲಿರುವ ಸ್ತ್ರೀ–ಪುರುಷರ ಶಿಲ್ಪಗಳ ಜೊತೆಯಲ್ಲಿ ನರ್ತಿಸುತ್ತಿರುವ ಹಲವು ಗಣ ಶಿಲ್ಪಗಳಿವೆ.

ಶಿಲ್ಪ –೧

ಎರಡನೆಯ ವೈಷ್ಣವ ಗುಹಾಲಯದಲ್ಲಿ ಹಲವಾರು ಗಣ ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣುತ್ತೇವೆ. ಗುಹಾಲಯದ ಪ್ರವೇಶದಲ್ಲಿ ಮೊದಲು ಕಾಣುವುದು ವಿವಿಧ ಗಣ ಶಿಲ್ಪಗಳು ವಿವಿಧ ಭಂಗಿಯಲ್ಲಿರುವ ಇಲ್ಲಿನ ಗಣಶಿಲ್ಪಗಳು ಕ್ರಿಯಾತ್ಮಕ ಕೆತ್ತನೆಯಾಗಿದ್ದು ಶಿಲ್ಪದಲ್ಲಿ ಚಲನೆಯ ಭಾವವನ್ನು ಕಾಣುತ್ತೇವೆ. ಸಾಮಾನ್ಯವಾಗಿ ಪ್ರತಿಯೊಂದು ಶಿಲ್ಪ ಪಟ್ಟಿಕೆಯ ಕೆಳಭಾಗದಲ್ಲಿ ಗಣಶಿಲ್ಪಗಳನ್ನು ಅವುಗಳ ವಿವಿಧ ಭಂಗಿಯಲ್ಲಿ ಕೆತ್ತಲಾಗಿದೆ. ಸಣ್ಣದಾದ ಲಂಗೋಟಿಯಂತಹ ವಸ್ತ್ರವನ್ನು ಸೊಂಟದಿಂದ ಕೆಳಗೆ ಗಟ್ಟಿಯಾಗಿ ಕಟ್ಟಿಕೊಂಡಿರುವುದು ಕಂಡುಬರುತ್ತದೆ. ಕೈಯಲ್ಲಿ ಕಡಗ, ಕಾಲಲ್ಲಿ ಕಡಗ, ಕೆಲವೊಮ್ಮೆ ಹೊಟ್ಟೆಯ ಮೇಲೆ ಇಳಿಬಿಟ್ಟಿರುವಂತೆ ಕೆತ್ತಲಾಗಿದೆ.[೬೩] ಚಾಲುಕ್ಯರ ಕಾಲದಲ್ಲಿನ ವೇಷಭೂಷಣಗಳು ಇಂದಿನ ಜನಾಂಗಕ್ಕೆ ಮಾದರಿಯಾಗಿವೆ. ಇವೆಲ್ಲವೂ ದೈನಂದಿನ ಜೀವನದಲ್ಲಿ ನಾವು ನೋಡುವ ಕ್ರಿಯೆಗಳೇ ಆಗಿದ್ದರೂ ಇಲ್ಲಿ ಈ ಶಿಲ್ಪಗಳ ಮೂಲಕ ಇವುಗಳನ್ನು ತಿಳಿಹಾಸ್ಯದ ರೂಪದಲ್ಲಿ ತೋರಿಸಲಾಗಿದ್ದು, ಇವುಗಳ ಮೂಲಕ ಮಾನವಸಹಜವಾದ ಕೆಲಸಗಳನ್ನು ಗಣಗಳ ಮೂಲಕ ತೋರಿಸುವ ಮೂಲಕ ಹೇಳುವ ಪ್ರಯತ್ನವನ್ನಿಲ್ಲಿ ಶಿಲ್ಪಿಗಳು ಮಾಡಿದ್ದಾರೆ. ಒಂದು ಪಟ್ಟಿಕೆಯಲ್ಲಿನ ಗಣಶಿಲ್ಪದಲ್ಲಿ ಗಣವೊಂದು ತಲೆ ಕೆಳಗೆ ಹಾಕಿ ಕೈಗಳ ಮೇಲೆ ನಿಂತುಕೊಂಡಿದ್ದು ಕಾಲು ಮೇಲೆ ಮಾಡಿರುವುದನ್ನು ಕಾಣುತ್ತೇವೆ. ಇಂತಹ ಹಲವಾರು ಶಿಲ್ಪಗಳು ಇಲ್ಲಿ ಕಂಡುಬರುತ್ತವೆ. ಇಲ್ಲಿನ ತ್ರಿಪಿಕ್ರಮ ಪಟ್ಟಿಕೆಯ ಕೆಳಗೆ ಸಂಗೀತಗಾರ ಗಣ ಶಿಲ್ಪಗಳ ಕೆತ್ತನೆ ಸುಂದರವಾಗಿ ಮೂಡಿಬಂದಿದೆ.

ಇಲ್ಲಿನ ಸಂಗೀತಗಾರ ಶಿಲ್ಪಗಳ ಮೂಲಕ ಅಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ವಿವಿಧ ವಾದ್ಯಪರಿಕರಗಳನ್ನು ಮತ್ತು ಸಂಗೀತದ ವಿವಿಧ ಭಂಗಿಗಳನ್ನು ತಿಳಿಯಲು ಈ ಶಿಲ್ಪಗಳು

೬೨. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ, ಸಂ–೧೭, ಪುಟ –೧೨೨

೬೩. ಅದೇ., ಪುಟ – ೧೨೧



ಅನುಕೂಲ ಮಾಡಿಕೊಡುತ್ತವೆ. ಈ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ, ಇಲ್ಲಿನ ಗಣಗಳಲ್ಲಿರುವ ಅನ್ಯೋನ್ಯತೆ, ಲಯಬದ್ಧವಾದ ನೃತ್ಯಗಳನ್ನು ಮಾಡುತ್ತಿರುವಂತೆ ಮತ್ತು ಒಬ್ಬರೊಬ್ಬರೊಂದಿಗೆ ಮಾತನಾಡುತ್ತ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಿರುವಂತೆ ಶಿಲ್ಪದಲ್ಲಿ ತಾಳ್ಮೆಯನ್ನು ತೋರಿಸಿರುವುದು ಈ ಶಿಲ್ಪಗಳ ಹೆಚ್ಚುಗಾರಿಕೆಯಾಗಿದೆ. ಕೆತ್ತನೆಯಲ್ಲಿ ಎಲ್ಲ ಶಿಲ್ಪಗಳು ಒಂದೇ ರೀತಿಯಿದ್ದರೂ ಅವುಗಳ ಚಲನೆಯ ಭಂಗಿ, ವಾದ್ಯ ಪರಿಕರ, ಮುಖದಲ್ಲಿನ ಲಘುಹಾಸ್ಯದ ಭಾವ ಇವುಗಳು ಶಿಲ್ಪದಿಂದ ಶಿಲ್ಪಕ್ಕೆ ಬೇರೆಯಾಗಿರುವುದು ಗಮನಾರ್ಹ.

ಶಿಲ್ಪ –೨

ಮೂರನೆಯ ಗುಹೆಯ ಅಧಿಷ್ಠಾನದ ಪಟ್ಟಿಕೆಗಳಲ್ಲಿ ಚೌಕವಾದ ಮಾಡುಗಳನ್ನು ನಿರ್ಮಿಸಿ, ಒಂದರಲ್ಲಿ ಇಬ್ಬರು ಕುಬ್ಜರಂತೆ ಒಟ್ಟು ೧೫ ಗೂಡುಗಳಲ್ಲಿ ಒಟ್ಟು ೩೦ ಜನ ಕುಬ್ಜರನ್ನು ಶಿಲ್ಪಿಸಲಾಗಿದೆ. ಇಲ್ಲಿನ ಕುಬ್ಜರು ಈವರೆಗೆ ಕಂಡ ಕುಬ್ಜರಿಂದ ಬೇರೆಯಾಗಿದ್ದಾರೆ. ಈ ಕುಬ್ಜದ ಶಿಲ್ಪಶೈಲಿಯೇ ಬೇರೆಯಾಗಿದೆ. ಈ ಕುಬ್ಜರು ವರ್ತಕರಂತೆ ಕಂಡುಬರುತ್ತಾರೆ. ಮತ್ತು ಇವರ ನರ್ತನದಲ್ಲಿ ಶಾಸ್ತ್ರೀಯತೆ, ಖಚಿತವಾದ ಭಂಗಿಗಳನ್ನು ಕಾಣಲು ಸಾಧ್ಯವಾಗುವುದಿಲ್ಲ. ಇಲ್ಲಿನ ಕುಬ್ಜರು ನರ್ತನವನ್ನು ಕಲಿಯುತ್ತಿರುವಂತೆ, ಕಲಿತದ್ದನ್ನು ಮಾಡಲು ಪ್ರಯತ್ನಿಸುತ್ತಿರುವಂತೆ ಚಿತ್ರಿತರಾಗಿದ್ದಾರೆ.

ಈ ಗುಹಾದೇವಾಲಯದ ಕುಬ್ಜರ ಮುಖಚರ್ಯೆ, ವೇಷಭೂಷಣಗಳನ್ನು ಚಿತ್ರಿಸಿರುವ ರೀತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೊರಗಿನಿಂದ ಬಂದ ವಿದೇಶಿ ವರ್ತಕರು, ಇಲ್ಲಿನ ಲಲಿತಕಲೆಗಳನ್ನು ಕಲಿಯಲು ಪ್ರಯತ್ನಿಸುತ್ತಿರುವಂತೆ ಕಂಡುಬರುತ್ತದೆ. ಇಲ್ಲಿ ಕಲೆಗಳ ವಿನಿಮಯವಾಗುತ್ತಿರುವ ಸಾಧ್ಯತೆ ಇದೆ.[೬೪] ಮೂರನೆಯ ವೈಷ್ಣವ ಗುಹಾಲಯದ ಗಣಶಿಲ್ಪಗಳು ಕೆತ್ತನೆಯಲ್ಲಿ ಹೆಚ್ಚಿನ ಪರಿಪೂರ್ಣತೆಯನ್ನು ಪಡೆದಿರುವಂತೆ ಕಂಡುಬರುತ್ತದೆ.

ಇಲ್ಲಿ ಶಿಲ್ಪಗಳಲ್ಲಿನ ಕೆಳಗಣ ಪಟ್ಟಿಕೆಯಲ್ಲಿ ಸಾಲು ಶಿಲ್ಪಗಳಿದ್ದರೆ ಕೆಲವೆಡೆ ಎರಡೆರಡು ಗಣಗಳ ಪಟ್ಟಿಕೆಗಳೂ ಇವೆ. ಗುಹೆಯ ಮುಖಮಂಟಪದ ಕೆಳಗಡೆ ಸುಂದರವಾದ ಕುಬ್ಜಗಣಗಳ ಸಾಲುಶಿಲ್ಪಗಳ ಕೆತ್ತನೆಯಿದೆ. ಶಿಲ್ಪದ ವಸ್ತುವು ಅದೇ ಇದ್ದರೂ ಇಲ್ಲಿಯೂ ಕೆತ್ತನೆಯಲ್ಲಿ ಏಕತಾನತೆಯಿಲ್ಲ. ಗಣಗಳು ಮಾತನಾಡುತ್ತಿರುವಂತೆ, ಜಗಳಾಡುತ್ತಿರುವಂತೆ, ಮುಖ ತಿರುಗಿಸಿಕೊಂಡಿರುವಂತೆ ಅಥವಾ ಕೆಲಸಕಾರ್ಯದಲ್ಲಿ ತೊಡಗಿರುವಂತೆ ಇಲ್ಲಿ ಕಾಣಿಸುತ್ತದೆ. ಇಲ್ಲೆಲ್ಲ ಲಘುಹಾಸ್ಯವು ಎದ್ದು ಕಾಣಿಸುವುದು ಈ ಶಿಲ್ಪಗಳ ವಿಶೇಷತೆಯಾಗಿದೆ. ಇಲ್ಲಿ ಪ್ರತಿ ಎರಡು ಗಣ ಶಿಲ್ಪಗಳ ನಂತರ ತೆಳ್ಳನೆಯ ಕಂಬಗಳನ್ನು ರಚಿಸಿದ್ದು, ಇದರಿಂದಾಗಿ ಪ್ರತಿ ಕುಬ್ಜ ಗಣಗಳ ಜೋಡಿಯೂ ಪ್ರತ್ಯೇಕತೆಯನ್ನು ತೋರಿಸುತ್ತದೆ.

೬೪. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ, ಸಂ–೧೭, ಪುಟ – ೧೨೪

[illegible]

[illegible]

[illegible]

[illegible]



ಶಿಲ್ಪ –೩

ಬಾದಾಮಿ ಮಾಲಗತ್ತಿ ದೇವಾಲಯ ಅತ್ಯಂತ ಎತ್ತರದಲ್ಲಿ ಒಂದು ಗುಡ್ಡದ ಮೇಲೆ ನಿರ್ಮಾಣವಾಗಿರುವ ದೇವಾಲಯ. ಈ ದೇವಾಲಯದ ಸುತ್ತಲೂ ಅಧಿಷ್ಠಾನದಲ್ಲಿ ಕುಬ್ಜರನ್ನು ಶಿಲ್ಪಿಸಲಾಗಿದೆ. ಇಲ್ಲಿ ಶಿಲ್ಪರಚನೆಯ ಪ್ರಾರಂಭಿಕ ಹಂತವನ್ನು ಕಾಣಲು ಸಾಧ್ಯವಾಗುತ್ತದೆ. ಶಿಲ್ಪ ರಚನೆಯ ಮೊದಲು ರೇಖೆಗಳಲ್ಲಿ ಆಕಾರಗಳನ್ನು ರಚಿಸಿಕೊಳ್ಳುತ್ತಿದ್ದುದು ಇದರಿಂದ ತಿಳಿದುಬರುತ್ತದೆ. ಇಲ್ಲಿನ ಅನೇಕ ಶಿಲ್ಪಗಳು ಮಾಸಿ ಹೋಗಿವೆ. ದೇವಾಲಯದ ಬಲಭಾಗದ ಕೆಲವು ಶಿಲ್ಪಗಳು ಸ್ಪಷ್ಟವಾಗಿ ಕಂಡುಬರುತ್ತವೆ.


ಈ ಕುಬ್ಜ ಶಿಲ್ಪಶೈಲಿ ಬೇರೆಯಾಗಿದೆ. ವೇಷಭೂಷಣದಲ್ಲಿ ವಸ್ತ್ರವನ್ನು ಸೊಂಟಕ್ಕೆ ಕಟ್ಟಿ, ಎರಡೂ ಕಾಲುಗಳ ನಡುವೆ ನೀಳವಾಗಿ ಕಾಲಿನವರೆಗೆ ಬಿಟ್ಟಿರುವಂತೆ ಶಿಲ್ಪಿಸಲಾಗಿದೆ. ಕೈ, ತೋಳುಗಳಿಗೆ, ಎದೆ, ಹೊಟ್ಟೆ, ಸೊಂಟದ ಭಾಗಗಳಿಗೆ ವಿಶೇಷವಾದ ಆಭರಣಗಳನ್ನು ತೊಡಿಸಿರುವಂತೆ ಶಿಲ್ಪಿಸಲಾಗಿದೆ. ಇಲ್ಲಿನ ಕುಬ್ಜರು ಹೆಚ್ಚಾಗಿ 'ತ್ರಿಭಂಗಿ' ಸ್ಥಾನಕದಲ್ಲಿದ್ದಾರೆ.[೬೫] ಬಾದಾಮಿಯ ಮಾಲೆಗಿತ್ತಿ ಶಿವಾಲಯದಲ್ಲಿಯೂ ಹಲವಾರು ಗಣ ಶಿಲ್ಪಗಳನ್ನು ಕೆತ್ತಲಾಗಿದೆ. ರಚನೆಯಲ್ಲಿ ಈ ಶಿಲ್ಪಗಳು ಬಾದಾಮಿಯ ಗುಹಾಲಯದ ಶಿಲ್ಪಗಳಿಗಿಂತ ಭಿನ್ನವಾಗಿಲ್ಲದಿದ್ದರೂ ಗಮನಸೆಳೆಯುವಂತಹ ರಚನೆಯನ್ನು ಕಾಣಬಹುದು.

ಈ ಶಿಲ್ಪಗಳು ಗುಹಾಲಯದ ರಚನೆಗಿಂತ ಸ್ವಲ್ಪ ದೊಡ್ಡಗಾತ್ರದವು. ಇಲ್ಲಿನ ಒಂದು ಶಿಲ್ಪದಲ್ಲಿ ಗಣ ಒಬ್ಬ ನಾಗಸ್ವರದಂತಹ ವಾದ್ಯವೊಂದನ್ನು ಊದುತ್ತಿದ್ದಾನೆ. ಆತನ ಕೂದಲು ಉದ್ದವಾಗಿದ್ದು ಎರಡು ಹೆಗಲುಗಳ ಮೇಲೆ ಇಳಿಬಿದ್ದಿದೆ. ಕುಳಿತುಕೊಂಡು ವಾದ್ಯ ಊದುವುದರಲ್ಲಿ ಆತನು ತಲ್ಲೀನನಾಗಿದ್ದಾನೆ. ಹೊಟ್ಟೆಯು ದೊಡ್ಡದಾಗಿದ್ದು ಆತನು ಕುಕ್ಕುರುಗಾಲಿನಲ್ಲಿ ಕುಳಿತಿರುವಂತೆ ಕಂಡುಬರುತ್ತದೆ. ಕೆಲವು ಗಣಗಳು ನೃತ್ಯ ಮಾಡುತ್ತಿವೆ. ಇನ್ನೊಬ್ಬ ತಲೆಯ ಮೇಲೆ ತಟ್ಟೆಯನ್ನು ಹೊತ್ತುಕೊಂಡಿದ್ದಾನೆ. ಕೆಲವು ಗಣಗಳು ಗಂಭೀರವಾಗಿ ಗಹನ ಚರ್ಚೆಯಲ್ಲಿ ತೊಡಗಿವೆ. ಇಂತಹ ಹಲವಾರು ಕ್ರಿಯೇಯಲ್ಲಿ ತೊಡಗಿರುವ ಶಿಲ್ಪಗಳು ಇಲ್ಲಿ ಕಾಣಸಿಗುತ್ತವೆ.

ಇವೆಲ್ಲವೂ ಮಾನವನ ಪ್ರಾಪಂಚಿಕ ಕ್ರಿಯೆಗಳಿಗೆ ಲಘು ಹಾಸ್ಯದ ಒತ್ತು ನೀಡಿ ರಚಿಸಲಾಗಿರುವ ಶಿಲ್ಪಗಳು. ಇದೇ ರೀತಿಯ ಶಿಲ್ಪಗಳನ್ನು ಮೇಗಣ ಶಿವಾಲಯಗಳಲ್ಲಿಯೂ ನೋಡಬಹುದಾಗಿದೆ. ಸಾಮಾನ್ಯವಾಗಿ ಈ ಶಿಲ್ಪಗಳ ರಚನೆ ಒಂದೇ ರೀತಿಯಲ್ಲಿದ್ದು ಅವುಗಳ ಕ್ರಿಯೆ ಮತ್ತು ಭಂಗಿಗಳು ಬೇರೆ ಇರುತ್ತವೆ. ಅದಕ್ಕೆ ಪೂರಕವಾಗಿ ಅವುಗಳ ಕೈಯಲ್ಲಿನ ಪರಿಕರಗಳು ಬೇರೆಯಾಗಿರುತ್ತವೆ. ದೊಡ್ಡದಾದ ಹೊಟ್ಟೆ, ಸಣ್ಣ ಕೈಕಾಲುಗಳು, ಸೊಂಟದ ಮೇಲೊಂದು ಬಟ್ಟೆ, ಅದಕ್ಕೆ ಬಿಗಿಯಲಾದ ಸೊಂಟಪಟ್ಟಿ, ಮುಂಗೈಯಲ್ಲಿ ಒಂದು ಬಳೆ(ಕಡಗ), ಕೊರಳಲ್ಲಿ ಒಂದು ಸಾಮಾನ್ಯವಾದ ಹಾರ ಇತ್ಯಾದಿಗಳಿರುತ್ತವೆ.

---

೬೫. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ, ಸಂ-೧೭, ಪುಟ - ೧೨೫



ತಲೆತುಂಬ ಕೂದಲಿದ್ದು ಅದನ್ನು ಭುಜದವರೆಗೆ ಎರಡೂ ಬದಿಗಳಲ್ಲಿ ಇಳಿಬಿಡಲಾಗಿರುತ್ತದೆ. ಕೆಲವೆಡೆ ಗುಂಗುರು ಕೂದಲನ್ನು ತೋರಿಸಿದ್ದರೆ, ಕೆಲವೆಡೆ ನಯವಾಗಿ ಬಾಚಿದಂತೆ ಕೆತ್ತಲಾಗಿರುತ್ತದೆ. ಮುಖವು ಮಂದಹಾಸವಾಗಿ ಕೆನ್ನೆ ತುಂಬಿಕೊಂಡಿರುವುದು, ದೇಹವು ಸ್ಥೂಲವಾಗಿರುವಂತೆ ಕೆತ್ತಲಾಗಿರುವುದು ಈ ಶಿಲ್ಪಗಳ ವೈಶಿಷ್ಟ್ಯ. ಬಾದಾಮಿಯ ಎಲ್ಲ ಗುಹಾಲಯ ಮತ್ತು ರಾಚನಿಕ ಮಂದಿರಗಳಲ್ಲಿ ಅವುಗಳ ಅಧಿಷ್ಠಾನದ ಪಟ್ಟಿಕೆಯಲ್ಲಿ ಮತ್ತು ಶಿಲ್ಪಗಳ ಕೆಳಭಾಗದಲ್ಲಿ ಹಾಗೂ ಸ್ಥಳಾವಕಾಶವಿರುವೆಡೆಯಲ್ಲಿ ಖಾಲಿ ಜಾಗೆಯಲ್ಲಿ ಇಂತಹ ಶಿಲ್ಪಗಳನ್ನು ಕೆತ್ತಲಾಗಿದೆ. ಮೇಗಣ ಶಿವಾಲಯದ ಸುತ್ತಲೂ ಕುಬ್ಜಗಣಗಳ ಪಟ್ಟಿಕೆಯನ್ನು ನೋಡಬಹುದು. ಈ ಹಿಂದೆ ನೋಡಿದ ಶಿಲ್ಪಗಳಿಗಿಂತ ಭಿನ್ನವಾಗಿ ನೃತ್ಯ ಮಾಡುತ್ತಿವೆ. ಗಣಗಳು ಸಂಗೀತದ ಪರಿಕರಗಳನ್ನು ಹಿಡಿದು ನುಡಿಸುತ್ತಿರುವ ಶಿಲ್ಪಗಳು ಹಾಗೂ ವಿಶೇಷವಾಗಿ ಇಲ್ಲಿ ಆನೆಯ ಶಿಲ್ಪಗಳಿರುವುದನ್ನು ನೋಡಬಹುದು. ಬೆತ್ತಲೆ ಇರುವ ಕುಬ್ಜಗಣಗಳನ್ನು ಕೆತ್ತಲಾಗಿದೆ. ಈ ತರಹದ ಗಣಗಳನ್ನು ಪಾಪನಾಥ ದೇವಾಲಯಗಳಲ್ಲಿಯೂ ನೋಡಬಹುದು.

ಶಿಲ್ಪ –೪

ಮಹಾಕೂಟದ ಪರಿಸರದಲ್ಲಿರುವ ದೇವಾಲಯಗಳಲ್ಲಿಯೂ ಗಣಶಿಲ್ಪಗಳ ಕೆತ್ತನೆಯನ್ನು ಕಾಣುತ್ತೇವೆ. ಆದರೆ ಇಲ್ಲಿನ ಗಣಗಳ ರಚನೆ ಬಾದಾಮಿಯ ಶಿಲ್ಪಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಇಲ್ಲಿನ ಗಣಗಳು ವಯಸ್ಕ ವ್ಯಕ್ತಿಗಳಂತೆ ಕಂಡುಬರುತ್ತಾರೆ. ಅಲ್ಲದೆ ಗಂಡು–ಹೆಣ್ಣುಗಳು ಇಲ್ಲಿ ಜೊತೆಯಾಗಿ ಕೆಲವೆಡೆ ಕಾಣಿಸಿಕೊಳ್ಳುತ್ತಾರೆ. ಕುಬ್ಜತೆಯಿದ್ದರೂ ಕೆಲವೆಡೆ ಅವು ಸ್ಥೂಲವಾಗಿರುವಂತೆ ಕೆತ್ತಲಾಗಿದೆ. ಬಾದಾಮಿಯ ಶಿಲ್ಪಗಳಲ್ಲಿ ಮುಗ್ಧತೆ ಇದ್ದರೆ ಇಲ್ಲಿ ಆ ಮುಗ್ಧತನ ಕಂಡುಬರುವುದಿಲ್ಲ. ಇಲ್ಲಿನ ಒಂದು ಸಂಗೀತಗಾರ ಶಿಲ್ಪಗಳ ಪಟ್ಟಿಕೆಯಲ್ಲಿ ವೀಣೆ, ತಂಬೂರಿಯಂತಹ ಳಳವಾದ್ಯಗಳನ್ನು ನುಡಿಸುತ್ತಿರುವ ಶಿಲ್ಪಗಳಿವೆ. ತಲೆಯನ್ನು ಬಾಚಿ ಮುಡಿ ಕಟ್ಟಿಕೊಂಡಿರುವುದು, ಕಿವಿಗಳಲ್ಲಿ ದೊಡ್ಡದಾದ ಕುಂಡಲಗಳು, ವಾದ್ಯದಲ್ಲಿ ತನ್ಮಯವಾದ ಮುಖಭಾವ ಇತ್ಯಾದಿಗಳನ್ನು ಗಮನಿಸಬಹುದು. ಒಬ್ಬನು ಕೈಗಳಲ್ಲಿ ತಾಳ ಹಾಕುತ್ತಿದ್ದರೆ, ಇನ್ನೊಬ್ಬನು ಕೊಳಲೂದುತ್ತಿದ್ದಾನೆ. ಇಲ್ಲಿ ಕೆಲಗಣಗಳ ತಲೆಯ ಕೂದಲ ಗಂಟು ಮುಖಕ್ಕಿಂತಲೂ ದೊಡ್ಡದಾಗಿದೆ. ಶಿಲ್ಪದಲ್ಲಿ ಲೌಕಿಕ ಜೀವನದ ಚಿತ್ರಣವನ್ನು ತೋರಿಸಲಾಗಿದೆ.

ಶಿಲ್ಪ –೫

ಐಹೊಳೆ ಮತ್ತು ಪಟ್ಟದಕಲ್ಲಿನ ದೇವಾಲಯಗಳಲ್ಲಿಯೂ ಗಣಶಿಲ್ಪಗಳ ಕೆತ್ತನೆಯು ಕಂಡುಬರುತ್ತದೆಯಾದರೂ ಬಾದಾಮಿಯ ಶಿಲ್ಪಗಳಂತಿಲ್ಲ. ಆ ಹೊತ್ತಿಗಾಗಲೇ ಶಿಲ್ಪದ ಕೆಳಗಿನ ಪಟ್ಟಿಕೆಗಳಲ್ಲಿ ವಿವಿಧ ಕಥಾನಕಗಳ ಸರಣಿಗಳು, ದಂಪತಿ ಶಿಲ್ಪಗಳು, ಹೂಬಳ್ಳಿಗಳ ರಚನೆಗಳು ಹೆಚ್ಚಾಗಿ ರಚನೆಯಾಗಲು ಪ್ರಾರಂಭವಾಗಿರಬೇಕು. ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ



ಗಣಶಿಲ್ಪಗಳು ಇಂತಹ ಶಿಲ್ಪಗಳಿಗೆ ತಮ್ಮ ಜಾಗೆಯನ್ನು ಬಿಟ್ಟುಕೊಟ್ಟಿರಬಹುದು. ಹಾಗಾಗಿ ಇಲ್ಲಿನ ರಾಚನಿಕ ಮಂದಿರಗಳಲ್ಲಿ ಗಣಶಿಲ್ಪಗಳು ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತವೆ. ಐಹೊಳೆಯ ಲಾಡ್‌ಖಾನ್ ದೇವಾಲಯದ ಕಂಬಗಳಲ್ಲಿ ಸಣ್ಣಗಾತ್ರದಲ್ಲಿ ತೆಳು ಉಬ್ಬುಶಿಲ್ಪಗಳಲ್ಲಿ ಕೆಲವೆಡೆ ಗಣಶಿಲ್ಪಗಳ ಕೆತ್ತನೆ ಕಂಡುಬರುತ್ತದೆ. ಒಂಟಿಯಾಗಿರುವ, ಎರಡು ಶಿಲ್ಪಗಳ ಜೋಡಿ, ನೃತ್ಯದಲ್ಲಿ ತೊಡಗಿರುವುದು. ಇಲ್ಲಿ ಶಿಲ್ಪಿಗೆ ಅವಕಾಶಗಳು ಕಡಿಮೆ. ಶಿಲ್ಪಕಲೆಯ ಕಲಾತ್ಮಕತೆಯ ದೃಷ್ಟಿಯಿಂದ ವಿಶೇಷ ಮಹತ್ವದ್ದೆನಿಸುವುದಿಲ್ಲ. ಇಲ್ಲಿನ ಪ್ರಮುಖ ಶಿಲ್ಪಗಳ ಕೆಳಗಿನ ಪಟ್ಟಿಕೆಯಲ್ಲಿ ವಿವಿಧ ಗಣಗಳ ಚಿತ್ರ–ವಿಚಿತ್ರ ಭಂಗಿಯ ಗಣಶಿಲ್ಪಗಳು ಗಮನ ಸೆಳೆಯುತ್ತವೆ.

ಇವು ಬಾದಾಮಿಯ ಶಿಲ್ಪಗಳನ್ನೇ ಹೋಲುತ್ತವೆ. ಹಲವಾರು ಸುಂದರವಾದ ಕೆತ್ತನೆಯ ಗಣಗಳನ್ನು ಇಲ್ಲಿ ನೋಡಬಹುದಾಗಿದೆ. ಸಾಮಾನ್ಯವಾಗಿ ಸಂಗೀತಗಾರರ ಗುಂಪು, ವಿವಿಧ ಪಕ್ಕವಾದ್ಯಗಳನ್ನು ನುಡಿಸುತ್ತಿರುವ ಗಣಗಳು ಇಲ್ಲಿನ ಚಿತ್ರದ ವಸ್ತು. ಶಿಲ್ಪರಚನೆಯಲ್ಲಿ ವಿಶೇಷವಾಗಿ ಉಲ್ಲೇಖಿಸುವಂತಹ ಕೆತ್ತನೆಗಳು ಕಂಡುಬರದಿದ್ದರೂ ಸ್ಥಳಾವಕಾಶವನ್ನು ಸದುಪಯೋಗಿಸಿಕೊಂಡು ಜನರ ದೈನಂದಿನ ಬದುಕಿನ ಚಿತ್ರಣಕ್ಕೆ ಕಲಾವಿದರು ಗಣಗಳ ರೂಪ ಕೊಟ್ಟು ಬಳಸಿಕೊಂಡಿರುವ ರೀತಿ ಗಮನ ಸೆಳೆಯುತ್ತದೆ.

ಶಿಲ್ಪ –೬

ಐಹೊಳೆಯ ದುರ್ಗಾಗುಡಿಯಲ್ಲಿಯೂ ಕೆಲವು ಗಣಶಿಲ್ಪಗಳಿವೆ. ಇಲ್ಲಿನ ದೇವಾಲಯದ ಕಂಬಗಳ ಪಟ್ಟಿಗಳಲ್ಲಿ ಸಣ್ಣಗಾತ್ರದ ಹಲವಾರು ಕುಬ್ಜ ಶಿಲ್ಪಗಳು ಕೆತ್ತಲ್ಪಟ್ಟಿವೆ. ಇವುಗಳ ಸುತ್ತಲೂ ಚೌಕಟ್ಟನ್ನು ಕೂಡಾ ಕೆತ್ತಲಾಗಿದೆ. ಕಲಾತ್ಮಕವಾಗಿ ಈ ಶಿಲ್ಪಗಳು ಬಾದಾಮಿಯ ಶಿಲ್ಪಗಳನ್ನು ಸರಿಗಟ್ಟುವುದಿಲ್ಲ. ವಿವಿಧ ಚಟುವಟಿಕೆಯಲ್ಲಿ ತೊಡಗಿರುವ ಗಣಗಳನ್ನು ಇಲ್ಲಿ ಕಾಣಬಹುದು. ಇಲ್ಲಿನ ಒಂದು ಪಟ್ಟಿಕೆಯಲ್ಲಿ ಗಣಗಳು ಯಾವುದೇ ವಾದ್ಯಗಳನ್ನು ಹೊಂದಿಲ್ಲದಿದ್ದರೂ ಅಂಗಚಲನೆಗಳನ್ನು ತೋರಿಸುತ್ತಿವೆ. ಪ್ರತಿಯೊಬ್ಬನ ಮುಖವು ಭಿನ್ನ ದಿಕ್ಕಿಗಿದೆ, ಕೈಗಳು ಕೆಲಸದಲ್ಲಿ ತೊಡಗಿರುವುದನ್ನು ಸೂಚಿಸುತ್ತವೆ. ಇಬ್ಬರು ಗಂಭೀರವಾಗಿ ಗಹನವಾದ ಚರ್ಚೆಯಲ್ಲಿ ತೊಡಗಿರುವಂತೆ, ಇಬ್ಬರು ನೃತ್ಯ ಮಾಡುತ್ತಿರುವಂತೆ, ಇನ್ನೊಬ್ಬ ತನ್ನ ಪಕ್ಕೆಯನ್ನು ತುರಿಸಿಕೊಳ್ಳುತ್ತಿರುವಂತೆ ಕೆತ್ತಲಾಗಿದೆ. ಶಿಲ್ಪದಲ್ಲಿ ಹಾಸ್ಯದ ಭಾವವನ್ನು ಎತ್ತಿ ತೋರಿಸಲಾಗಿದೆ. ಶಿಲ್ಪವು ರಚನೆಯಲ್ಲಿ ಒರಟುತನವನ್ನು ಹೊಂದಿದೆ. ದೊಡ್ಡದಾದ ಹೊಟ್ಟೆ, ಗುಂಗುರು ಕೂದಲು, ಕೆಲವೇ ಕೆಲವು ಆಭರಣಗಳು, ಸೊಂಟದ ಸುತ್ತ ಬಿಗಿಯಲಾದ ಪಟ್ಟಿ, ಗಿಡ್ಡ ಕೈಕಾಲುಗಳು ಗಮನ ಸೆಳೆಯುತ್ತವೆ.

ಇಲ್ಲಿ ಎಲ್ಲೆಡೆ ಕಂಡುಬರುವುದು ಮುಖಭಾವ, ಸಾಮಾನ್ಯವಾಗಿ ಕಾಣಿಸುವ ನಗು ಮುಖ, ದೊಡ್ಡದಾಗಿ ತೆರೆದ ಬಾಯಿ, ಸಣ್ಣದಾದ ಕಣ್ಣುಗಳು ಎಂತಹವರಲ್ಲೂ ನಗು ಉಕ್ಕಿಸುತ್ತವೆ.

ಕುಬ್ಜಗಣ ಶಿಲ್ಪಗಳು



ಶಿಲ್ಪ-೧. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಮಾಲೆಗಿತ್ತಿ ಶಿವಾಲಯ, ಬಾದಾಮಿ

ಕುಬ್ಜಗಣ ಶಿಲ್ಪಗಳು



ಶಿಲ್ಪ–೪. ಮಹಾಕೂಟೇಶ್ವರ ದೇವಾಲಯ, ಮಹಾಕೂಟ



ಶಿಲ್ಪ–೫. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ–೬. ದುರ್ಗಾ ದೇವಾಲಯ, ಐಹೊಳೆ

ಈ ಗಣಶಿಲ್ಪಗಳ ಮೂಲಕ ಜನರ ಲೌಕಿಕ ಬದುಕಿನ ಚಿತ್ರಣದ ಜೊತೆಗೆ ನಮ್ಮನ್ನು ನಾವು ನೋಡಿಕೊಳ್ಳುವಂತೆ ಈ ಶಿಲ್ಪಗಳು ಪ್ರೇರೇಪಿಸುತ್ತವೆ. ಬಹುಶಃ ಅಂದಿನ ಶಿಲ್ಪಿಗಳ ಉದ್ದೇಶವು ಇದೇ ಆಗಿದ್ದಿರಬೇಕು, ಹಾಗಾಗಿ ಗಣಶಿಲ್ಪಗಳಲ್ಲಿ ವಿವಿಧ ಚಲನೆಗಳ ಚಿತ್ರಣ, ಚಟುವಟಿಕೆಗಳಿಂದ ಕೂಡಿದ ಭಂಗಿ, ಹಾಸ್ಯಭಾವ, ಸರಳತೆ ಮುಂತಾದ ಅಂಶಗಳನ್ನು ಇಲ್ಲಿ ಕೆತ್ತಲಾಗಿದೆ ಎಂದು ಊಹಿಸಬಹುದು.

ರಾಜ-ರಾಣಿಯರ ಶಿಲ್ಪಗಳು

ದೇವಾಲಯಗಳ ನಿರ್ಮಾಣ ಸಂದರ್ಭದಲ್ಲಿ ಅಂಥ ರಚನೆಗಳಿಗೆ ಕಾರಣರಾದವರ ಕುರಿತಾಗಿ ಶಿಲಾಶಾಸನಗಳನ್ನು ಕೆತ್ತುವುದಾಗಲಿ, ಅವರ ಹೆಸರುಗಳನ್ನು ಉಲ್ಲೇಖಿಸುವುದಾಗಲಿ, ಅಥವಾ ಅವರ ಶಿಲ್ಪಗಳನ್ನು ಕಂಡರಿಸುವುದಾಗಲಿ ಸಾಮಾನ್ಯವಾಗಿ ಕಂಡುಬರುವ ಸಂಗತಿ. ಚಾಲುಕ್ಯರಿಗಿಂತ ಎಷ್ಟೋ ಮೊದಲಿನ ರಚನೇಗಳಲ್ಲಿ ಇಂತಹವುಗಳು ಕಂಡುಬಂದಿವೆ. ಹಾಗಿರುವಾಗ ಚಾಲುಕ್ಯ ಅರಸರ ಕಾಲದ ರಚನೆಗಳಲ್ಲಿ ಈ ರೀತಿಯ ದಾನಿಗಳ ಶಿಲ್ಪಗಳು ಕಂಡುಬರುವುದು ಸಹಜ. ಬಾದಾಮಿಯ ಚಾಲುಕ್ಯ ಅರಸರ ಶಿಲ್ಪಗಳು ನಮಗೆ ಕೆಲವೆಡೆಗಳಲ್ಲಿ ಕಂಡುಬರುವುದು ಸಹಜ. ಚಾಲುಕ್ಯ ಅರಸರು ಕಲೆ ಮತ್ತು ಸಂಸ್ಕೃತಿಗೆ ಬಹಳಷ್ಟು ಪ್ರೋತ್ಸಾಹಗಳನ್ನು ನೀಡಿ ಬೆಳೆಸಿದವರು.

ಇಂತಹ ಸಂದರ್ಭದಲ್ಲಿ ತಮಗೆ ಮತ್ತು ತಮ್ಮ ಕಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ ತಮ್ಮ ದೊರೆಗಳನ್ನು ಚಿತ್ರಿಸಿರುವುದು ಇಲ್ಲಿ ಕಂಡುಬರುತ್ತದೆ. ತಮಗೆ ರಾಜಾಶ್ರಯ ನೀಡಿದ ರಾಜನ ಬಗ್ಗೆ ತಾವು ತಾಳಿದ ಗೌರವ ಮತ್ತು ಕೃತಜ್ಞತಾ ಭಾವನೆಗಳನ್ನು ತೋರಿಸುವ ಪ್ರಯತ್ನದಲ್ಲಿ ತಮ್ಮ ಅರಸ-ಅರಸಿಯರ ಶಿಲ್ಪಗಳನ್ನು ಕಂಬಗಳ ಮೇಲೆ, ಬೋಧಿಗೆಗಳ ಮೇಲೆ ಕೊರೆದಿರಬಹುದು. ಇಂತಹ ಹಲವಾರು ಶಿಲ್ಪಗಳನ್ನು ಬಾದಾಮಿಯ ಪರಿಸರದ ಶಿಲ್ಪಗಳಲ್ಲಿ ಕಾಣಬಹುದು. 'ಮಹಾವಿಷ್ಣು ಗೃಹದ' ಮತ್ತು ಪಟ್ಟದಕಲ್ಲಿನಲ್ಲಿ ಕಂಡುಬರುವ ಕಿರೀಟಧಾರಿ ದಂಪತಿಗಳು ರಾಜದಂಪತಿಗಳೇ ಇರಬಹುದು. ಆದರೆ ಈ ಶಿಲ್ಪವನ್ನು ಇಂತಹ ರಾಜನದೇ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ.'[೬೬]

ಶಿಲ್ಪ -೧

ಬಾದಾಮಿಯ ಮೂರನೆಯ ವೈಷ್ಣವ ಗುಹೆಯಲ್ಲಿ ಕಂಬವೊಂದರ ಮೇಲೆ ಕುಳಿತಿರುವ ರಾಜನ ಶಿಲ್ಪವಿದೆ. ಗೋಲಾಕಾರದ ಪೀಠದಲ್ಲಿ ಮಹಾರಾಜನ ಲೀಲಾವಿನೋದ ಭಂಗಿಯಲ್ಲಿ ಕುಳಿತ ಶಿಲ್ಪವನ್ನು ಇಲ್ಲಿ ನೋಡಬಹುದು. ಭಿತ್ತಿಯಲ್ಲಿ ವೃತ್ತಾಕಾರದ ಮಧ್ಯದಲ್ಲಿ ಉಬ್ಬುಶಿಲ್ಪವಾಗಿದೆ. ಇದು ಬಹುಶಃ ಪುಲಿಕೇಶಿಯ ಶಿಲ್ಪವಾಗಿರಬಹುದು ಎಂದು ಊಹಿಸಬಹುದು.

೬೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೨೨೦



ಶಿಲ್ಪ –೨

ಮೊದಲನೆಯ ಶೈವಗುಹೆಯ ಕಂಬದ ಮೇಲೆ ಕೆತ್ತಲಾಗಿರುವ ಶಿಲ್ಪವೂ ರಾಜ–ರಾಣಿಯರ ಶಿಲ್ಪದಂತೆ ಕಂಡುಬರುತ್ತದೆ. ಸಣ್ಣ ಗಾತ್ರದ ಈ ಶಿಲ್ಪದಲ್ಲಿ ರಾಜನು ರಾಜಠೀವಿಯಲ್ಲಿ ಕುಳಿತಿದ್ದಾನೆ, ಆತನ ಪಕ್ಕದಲ್ಲಿ ಆತನ ತೊಡೆಯ ಮೇಲೆ ಕೈ ಇರಿಸಿ ಕುಳಿತ ಸ್ತ್ರೀ ಶಿಲ್ಪವಿದೆ. ಹಿಂಭಾಗದಲ್ಲಿ ಬಲಬದಿಯಲ್ಲಿ ಇನ್ನೊಂದು ಸ್ತ್ರೀ ಶಿಲ್ಪವಿದ್ದು, ಇದು ದಾಸಿಯ ಶಿಲ್ಪವಾಗಿದೆ. ದೇಹದಲ್ಲಿ ಹಲವಾರು ಆಭರಣಗಳಿದ್ದು, ದೇಹದ ಮೇಲು ಭಾಗದಲ್ಲಿ ಯಾವುದೇ ಬಟ್ಟೆಗಳಿಲ್ಲ. ತೆರೆದೆದೆಯ ಈ ಶಿಲ್ಪದಲ್ಲಿ ಯಜ್ಞೋಪವೀತವಾಗಲೀ, ಉತ್ತರೀಯವಾಗಲೀ, ಇಲ್ಲ. ರಾಣಿಯು ಎಡಗೈ ಮೇಲೆತ್ತಿ ಗಹನ ವಿಚಾರವನ್ನು ಚರ್ಚಿಸುವಂತಿದೆ. ಸುತ್ತಲೂ ಬೇರಾವುದೇ ಕೆತ್ತನೆಗಳಿಲ್ಲ.

ಶಿಲ್ಪ –೩

ಒಂದನೆಯ ಗುಹಾಲಯದ ಕಂಬದಲ್ಲಿ ರಾಜ–ರಾಣಿಯ ಸುತ್ತ ಪರಿಚಾರಕರಿದ್ದಾರೆ. ಮೊದಲಿನ ಶಿಲ್ಪಕ್ಕಿಂತ ಇಲ್ಲಿ ಶಿಲ್ಪವು ಸಂಕೀರ್ಣವಾಗಿದೆ. ಮೂರನೆಯ ಗುಹಾಲಯದ ಕಂಬದಲ್ಲಿ ಇಲ್ಲಿ ರಾಜ–ರಾಣಿಯರು ಪಟ್ಟದ ಮೇಲೆ ಕುಳಿತಿರುವಂತಿದ್ದು ಇಬ್ಬರೂ ಕಿರೀಟಧಾರಿಗಳಾಗಿದ್ದಾರೆ. ಗಹನವಾದ ಸಮಾಲೋಚನೆಯಲ್ಲಿ ತೊಡಗಿದ್ದಾರೆ. ಸುತ್ತಲೂ ಸೇವಕಿಯರಿದ್ದಾರೆ. ಆದುದರಿಂದ ಇದನ್ನು ಅರಮನೆಯ ದೃಶ್ಯದ ಒಂದು ಅಂಗವೆಂಬಂತೆ ಚಿತ್ರಿಸಲಾಗಿದೆ ಎಂದು ಊಹಿಸಬಹುದು.

ಶಿಲ್ಪ –೪

ಮೂರನೆಯ ವೈಷ್ಣವ ಗುಹಾಲಯದ ಕಂಬದ ಮೇಲೆ ಒಂದು ಶಿಲ್ಪವಿದ್ದು ಈ ಶಿಲ್ಪವು ಈಹಿಂದೆ ನೋಡಿದ ಶಿಲ್ಪಕ್ಕೆ ಸಾಮ್ಯವನ್ನು ಹೊಂದಿದೆ. ಸಣ್ಣದಾದ ಈ ಶಿಲ್ಪವನ್ನು ಅರಸದಂಪತಿಗಳು ಲೀಲಾವಿನೋದದಲ್ಲಿ ಮಗ್ನರಾಗಿರುವಂತೆ ಕೆತ್ತಲಾಗಿದೆ. ಕಂಬವೊಂದರ ಭಾಗದಲ್ಲಿ ಸಣ್ಣದಾಗಿ ಕೆತ್ತಲಾಗಿರುವ ಈ ಶಿಲ್ಪವು ಮನೋಹರವಾಗಿದೆ. ಹಿಂದೆ ಸಣ್ಣ ಗಾತ್ರದಲ್ಲಿ ಕೆತ್ತಲಾಗಿರುವ ಸೇವಕಿಯನ್ನು ಕೂಡಾ ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಇದು ಮೇಲುನೋಟಕ್ಕೆ ಸಾಮಾನ್ಯ ದಂಪತಿ ಶಿಲ್ಪದಂತೆ ಗೋಚರಿಸಿದರೂ ಸೂಕ್ಷ್ಮವಾಗಿ ಗಮನಿಸಿದಾಗ ಇದು ಅರಸ–ಅರಸಿಯ ಶಿಲ್ಪವೆಂದು ಕಂಡುಬರುತ್ತದೆ.

ಶಿಲ್ಪ –೫

ಮೂರನೆಯ ವಿಷ್ಣು ಗುಹೆಯಲ್ಲಿ ರಾಜ–ರಾಣಿಯರ ಶಿಲ್ಪಕೆತ್ತನೆ ಗಮನಸೆಳೆಯುತ್ತದೆ. ಹದಿನೈದನೆಯ ಕಂಬದ ಮೇಲೆ ಉತ್ತರ ಬದಿಯಲ್ಲಿ ಚೌಕಾಕಾರದ ಉಬ್ಬು ಶಿಲ್ಪದಲ್ಲಿ ಮಹಾರಾಜನು ಲೀಲಾಭಂಗಿಯಲ್ಲಿ ಕುಳಿತ ಪುಟ್ಟ ಶಿಲ್ಪವಿದೆ. ಇದು ಮೊದಲನೆಯ ಕೀರ್ತಿವರ್ಮನ ಶಿಲ್ಪವಾಗಿರಬಹುದೆಂದು ಶಂಕಿಸಲು ಅವಕಾಶವಿದೆ.'[೬೭]

೬೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೦



ಶಿಲ್ಪ –೬

ಮೂರನೇ ಗುಹಾಲಯದ ಕೆಲ ಶಿಲ್ಪಗಳು ಇದೇ ರೀತಿಯಲ್ಲಿದ್ದು ರಾಜದಂಪತಿಗಳ ಶಿಲ್ಪಗಳೇ ಆಗಿರಬಹುದು. ಕುಳಿತಿರುವ ಭಂಗಿ, ಹಿನ್ನೆಲೆಯಲ್ಲಿ ಸೇವಕರು, ಸಿಂಹಾಸನದಲ್ಲಿ ಕುಳಿತುಕೊಂಡಿರುವ ರೀತಿ, ಯಾವುದೇ ಆಯುಧಗಳಿಲ್ಲದಿರುವುದನ್ನು ಗಮನಿಸಬೇಕಾಗುತ್ತದೆ. ಸಾಮಾನ್ಯ ದಂಪತಿ ಶಿಲ್ಪಗಳಿಗಿಂತ ಇವು ಪ್ರತ್ಯೇಕವಾಗಿ ನಿಲ್ಲುತ್ತವೆ. ಇವುಗಳು ಗಾತ್ರದಲ್ಲಿ ಸಣ್ಣದಾಗಿದ್ದು ತೆಳುವಾದ ಉಬ್ಬುಶಿಲ್ಪಗಳನ್ನು ಕಂಬಗಳ ಮೇಲೆ ಮತ್ತು ತೊಲೆಯ ಭಾಗದಲ್ಲಿ ಕೆತ್ತಲಾಗಿದೆ. ಅರ್ಧವೃತ್ತಾಕಾರದ ಕಮಾನುಪಟ್ಟಿಕೆಗಳ ಮೇಲೆ ಇಂತಹ ಕೆಲ ಶಿಲ್ಪಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಗಂಡುಶಿಲ್ಪವು ಹೆಣ್ಣಿನ ಹೆಗಲ ಮೇಲೆ ಕೈಯಿರಿಸಿದಂತೆ ಮತ್ತು ಬಲಗೈಯನ್ನು ಆರಾಮವಾಗಿ ತೊಡೆಯ ಮೇಲಿಟ್ಟುಕೊಂಡಿರುವಂತ್ತಿದ್ದು, ಈ ಶಿಲ್ಪಗಳು ಲೋಕಾಭಿರಾಮವಾಗಿ ಹರಟುತ್ತಿರುವಂತೆ ತೋರಿಸಲಾಗಿದೆ. ಇಲ್ಲಿನ ಶಿಲ್ಪಗಳ ಮುಖ ಮತ್ತು ದೇಹದ ರಚನೆ ಹಾಗೂ ತೊಟ್ಟ ಆಭರಣಗಳು, ವಸ್ತ್ರ ಇತ್ಯಾದಿಗಳನ್ನು ಗಮನಿಸಿದರೆ ಇವು ಒಂದೇ ರಾಜನ ಶಿಲ್ಪಗಳಂತೆ ಕಂಡುಬರುತ್ತವೆ.

ಒಂದು ಶಿಲ್ಪದಲ್ಲಿ ರಾಜನ ಕೆತ್ತನೆಯು ಅಲ್ಲಿನ ಮುಖ್ಯ ಶಿಲ್ಪವಾದ ಮಹಾವಿಷ್ಣುವಿನ ಭಂಗಿಯಲ್ಲಿಯೇ ಇರುವುದು ವಿಶೇಷ. ಬಹುಶಃ ಇದು ರಾಜನನ್ನು ಪ್ರಾತಿನಿಧಿಕವಾಗಿ 'ರಾಜಾ ಪ್ರತ್ಯಕ್ಷ ದೇವತಾ' ಎಂಬಂತೆ ಕೆತ್ತಿರಬಹುದು. ಅದೇನೇ ಇದ್ದರೂ ಈ ಶಿಲ್ಪಗಳ ರಚನೆ ಕುತೂಹಲಕಾರಿಯಾಗಿ ಕಂಡುಬರುತ್ತದೆ. ಶಿಲ್ಪದ ಸುತ್ತ ಅಲಂಕಾರಿಕವಾದ ಕಮಲದ ಹೂವಿನ ಚಿತ್ತಾರದ ಚೌಕಟ್ಟು ರಚಿಸಲಾಗಿದ್ದು, ಇವು ಅರ್ಧವೃತ್ತಾಕಾರವಾಗಿ ಮತ್ತು ಕೆಲವೆಡೆ ಕಂಬಗಳ ಶಿಲ್ಪದಲ್ಲಿ ಪೂರ್ಣ ವೃತ್ತವಾಗಿ ರಚಿಸಲಾಗಿದ್ದು ಅಲಂಕೃತ ತಟ್ಟೆಗಳಂತೆ ಕಂಡುಬರುತ್ತವೆ.

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಮಂಟಪದಲ್ಲಿ ಒಂದು ಕುತೂಹಲಕಾರಿಯಾಗಿರುವ ಶಿಲ್ಪವಿದೆ. ರಾಜನು ಒಡ್ಡೋಲಗದಲ್ಲಿ ಕುಳಿತಿರುವಂತೆ, ಆತನ ಪಕ್ಕದಲ್ಲಿ ಸ್ತ್ರೀಯರಿಬ್ಬರೂ ಆತನ ಎಡ–ಬಲಗಳಲ್ಲಿರುವಂತೆ ಕೆತ್ತಲಾಗಿರುವ ಶಿಲ್ಪವೊಂದು ಗಮನಸೆಳೆಯುತ್ತದೆ. ಕಲಾತ್ಮಕವಾಗಿ ಗಮನಸೆಳೆಯದಿದ್ದರೂ ಈ ಶಿಲ್ಪವು ರಚನೆಯ ದೃಷ್ಟಿಯಿಂದ ಗಮನಸೆಳೆಯುತ್ತದೆ. ಡಾ. ಶೀಲಾಕಾಂತ ಪತ್ತಾರರು ಇದನ್ನು ಇಮ್ಮಡಿ ವಿಕ್ರಮಾದಿತ್ಯನ ಶಿಲ್ಪವೆಂದು ಗುರುತಿಸಿದ್ದಾರೆ. 'ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಮಂಟಪದ ಮೊದಲನೆಯ ಅಡ್ಡ ತೊಲೆಯ ಮೇಲೆ ಬಾಗಿಲಿಗೆ ಎದುರಾಗಿರುವ ಒಡ್ಡೋಲಗದ ಶಿಲ್ಪವನ್ನು ಇಮ್ಮಡಿ ವಿಕ್ರಮಾದಿತ್ಯನದೆಂದು ಗುರುತಿಸಲಾಗಿದೆ. ಅರಸನು ಲೋಕಮಹಾದೇವಿ ಮತ್ತು ತ್ರೈಲೋಕ್ಯಮಹಾದೇವಿಯರ ಜೊತೆಗೆ ಸಭಾಸದರೊಂದಿಗೆ ಕುಳಿತಿರುವಂತೆ ಈ ಶಿಲ್ಪವನ್ನು ರೂಪಿಸಲಾಗಿದೆ.'[೬೮]

---

೬೮. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೦



ಶಿಲ್ಪ –೭

ವಿರೂಪಾಕ್ಷ ದೇವಾಲಯದಲ್ಲಿನ ಒಂದು ಶಿಲ್ಪವನ್ನು ರಾಜದಂಪತಿಗಳ ಶಿಲ್ಪವೆಂದು ಊಹಿಸಬಹುದು. ಇಲ್ಲಿ ಅರಸನು ಪತ್ನಿಯೊಂದಿಗೆ ಪೀಠದ ಮಣೆಯ ಮೇಲೆ ಕುಳಿತಿದ್ದು ಬಲಗಡೆಗೆ ಸ್ತ್ರೀ ಶಿಲ್ಪವಿದೆ. ಸಣ್ಣ ಗಾತ್ರದ ಈ ಶಿಲ್ಪವನ್ನು ಕಂಬದ ಮೇಲೆ ಅರ್ಧ ವೃತ್ತಾಕಾರದಲ್ಲಿ ತೆಳು ಉಬ್ಬು ಶಿಲ್ಪದಲ್ಲಿ ಕೆತ್ತಲಾಗಿದ್ದು ಕಲಾಪ್ರದರ್ಶನಕ್ಕೆ ಯಾವುದೇ ಅವಕಾಶವಿಲ್ಲ. ಇಂತಹ ಹಲವಾರು ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆಯಾದರೂ ಎಲ್ಲ ಶಿಲ್ಪಗಳು ರಾಜದಂಪತಿಗಳ ಶಿಲ್ಪಗಳಲ್ಲ. ಕೆಲವೆಡೆಗಳಲ್ಲಿ ಮಾತ್ರ ಸ್ಪಷ್ಟವಾಗಿ ರಚಿಸಿರುವುದು ಕಂಡುಬರುತ್ತದೆ.

ಗಂಧರ್ವ ದಂಪತಿ ಶಿಲ್ಪಗಳು

ದೇವಾಲಯಗಳು ದೇವತೆಗಳ ಆಲಯಗಳು, ದೇವಾಧಿದೇವತೆಗಳು ನೇರವಾಗಿ ಇಲ್ಲಿ ಬಂದು ನೆಲೆಸುವಾಗ ತಮ್ಮ ಪರಿವಾರಲೋಕದ ಸಂಗೀತಗಾರರಾದ ಗಂಧರ್ವ, ಕಿನ್ನರರನ್ನು ಕರೆದುಕೊಂಡು ಬಂದು ನೆಲೆಸುತ್ತಾರೆ ಎಂಬ ಭಾವನೆ ದೇವಾಲಯಪರಿಕಲ್ಪನೆಯಲ್ಲಿ ಹಾಸುಹೊಕ್ಕಾಗಿದೆ. ಬಾದಾಮಿಯ ಮತ್ತು ಎಲ್ಲೋರಾ ಗುಹಾಂತರ ದೇವಾಲಯದ ಗಂಧರ್ವ ದಂಪತಿಶಿಲ್ಪಗಳು ಅದ್ವಿತೀಯ ಕಲಾಪ್ರೌಢಿಮೆಯ ವರ್ಗಕ್ಕೆ ಸೇರುವಂತಹವು. ಕುಂಠಿತ ಕರಣಗಳಲ್ಲಿ, ಆಕಾಶದಲ್ಲಿ ತೇಲಿ ಹೋಗುವ ಚಲನೆಯು ಶಿಲ್ಪಿಯ ಅಲೌಕಿಕ ಪ್ರತಿಭೆಗೆ ಸಾಕ್ಷಿಯಾಗಿದೆ.

ಶಿಲ್ಪಕಲೆಯಲ್ಲಿ ಮಲಗಿರುವ ಮತ್ತು ತೇಲುವ ಭಾವನೆಯನ್ನು ತರುವ ಶಿಲ್ಪರಚನೆ ಕಷ್ಟಸಾಧ್ಯ, ಮಲಗುವ ಶಿಲ್ಪ ಶವವಾಗಿ ಪರಿಣಮಿಸುವ ಸಾಧ್ಯತೆಯೇ ಹೆಚ್ಚು. ಹಾಗೆಯೇ ಆಕಾಶದಲ್ಲಿ ಹಾರುತ್ತಿರುವ ಸೂಕ್ಷ್ಮ ಚಲನೆಯ ಗತಿಯನ್ನು ತರುವುದು ಬಹಳ ಕಷ್ಟ. ಯಾವುದೇ ಕಲಾವಿದ ಈ ಸ್ಪಂದನವನ್ನು ನೋಡುಗನಲ್ಲಿ ಶಿಲಾಕೃತಿಯ ಮೂಲಕ ಮೂಡಿಸಲು ಶಕ್ತನಾದರೆ ಅವನು ಅದ್ವಿತೀಯನಾಗುತ್ತಾನೆ.[೬೯] ಈ ಶಿಲ್ಪಗಳನ್ನು ಸೃಜನಾತ್ಮಕ ಗುಣಗಳಿಂದ ರಚಿಸಿರುವ ಶಿಲ್ಪಿ ನಿಜಕ್ಕೂ ಒಬ್ಬ ಮಹಾನ್ ಕಲಾವಿದನಾಗುತ್ತಾನೆ.

ಬಾದಾಮಿಯ ಗುಹಾಲಯಗಳಲ್ಲಿ ಮತ್ತು ಐಹೊಳೆ ಹಾಗೂ ಪಟ್ಟದಕಲ್ಲಿನಲ್ಲಿಯೂ ನಾವು ಗಮನಿಸಬಹುದಾದ ಶಿಲ್ಪಗಳಲ್ಲಿ ಗಂಧರ್ವ ಶಿಲ್ಪಗಳೂ ಮುಖ್ಯವಾಗುತ್ತವೆ. ಈ ಶಿಲ್ಪಗಳ ರಚನೆಯ ಹಿಂದೆ ಯಾವುದೇ ಆಚರಣೆಯ ಉದ್ದೇಶವಿಲ್ಲದೆ ಕೇವಲ ಅಲಂಕರಣ ಮತ್ತು ಸ್ಥಳಾವಕಾಶದ ಸದ್ಬಳಕೆಯ ದೃಷ್ಟಿಯಿಂದ ರಚಿಸಲಾದ ಶಿಲ್ಪಗಳು. ಆಕಾಶದಲ್ಲಿ ಹಾರಾಡುತ್ತಿರುವ ಗಂಧರ್ವ ದಂಪತಿಗಳ ಶಿಲ್ಪಗಳನ್ನು ಕೆತ್ತುವುದರಲ್ಲಿ ಚಾಲುಕ್ಯ ಶಿಲ್ಪಕಲಾವಿದರಿಗೆ ಬಹಳೇ ಖುಷಿ ಇದ್ದಂತೆ ಕಂಡುಬರುತ್ತದೆ. ಇದರಿಂದಾಗಿ ಹಲವಾರು ರೀತಿಯ ಆಕರ್ಷಕ ಭಂಗಿಯ ಲಾವಣ್ಯಯುಕ್ತವಾದ ಗಂಧರ್ವಶಿಲ್ಪಗಳನ್ನು ಎಲ್ಲೆಡೆ ಕೆತ್ತಿರುವುದು ಕಂಡುಬರುತ್ತದೆ.

---

೬೯. ಡಾ. ಚೂಡಾಮಣಿ ನಂದಗೋಪಾಲ : ಶಿಲೆ–ಕಲೆ, ಪುಟ – ೧೮೫



ಶಿಲ್ಪ –೧

ಬಾದಾಮಿಯ ಮೊದಲನೆಯ ಗುಹೆಯ ಉಪ ಗುಹೆಯ ಭಿತ್ತಿಯಲ್ಲಿ, ಬೋಧಿಗೆಗಳಲ್ಲಿ ಗಂಧರ್ವ ಶಿಲ್ಪಗಳಿರುವುದನ್ನು ಗಮನಿಸಬಹುದು. ಮುಖ್ಯವಾಗಿ ಇಲ್ಲಿ ಗಂಧರ್ವ ಶಿಲ್ಪಗಳನ್ನು ಮುಖ್ಯ ದೇವತೆಗಳ ಶಿಲ್ಪಗಳಿಗೆ ಪೂರಕವಾಗಿ ರಚಿತವಾಗಿದ್ದು ಶಿವ–ಪಾರ್ವತಿಯರ ಕಲ್ಯಾಣಕ್ಕೆ ಹೂಹಾರವನ್ನು ಹೊತ್ತು ತರುತ್ತಿರುವಂತೆ, ಶುಭ ಹಾರೈಸುತ್ತಿರುವಂತೆ ದ್ವಿಮಾನದಲ್ಲಿ ರಚಿಸಲಾಗಿರುವುದನ್ನು ಕಾಣಬಹುದು.

ಶಿಲ್ಪ –೨

ಬಾದಾಮಿಯ ಮೊದಲನೆಯ ಗುಹೆಯ ಉಪ ಗುಹೆಯ ಬೋಧಿಗೆಯಲ್ಲಿನ ಒಂದು ಶಿಲ್ಪದಲ್ಲಿ ಗಂಧರ್ವದಂಪತಿಗಳು ಆಕಾಶದಲ್ಲಿ ಹಾರಾಡುತ್ತಿದ್ದಾರೆ. ಸುತ್ತಲೂ ಮೋಡಗಳ ಕೆತ್ತನೆಯಿದೆ. ಗಂಧರ್ವನು ಎಡಬದಿಯಲ್ಲಿ ತನ ಮಡದಿಯನ್ನು ಹಿಡಿದಿದ್ದಾನೆ. ಸುಂದರವಾದ ಆಭರಣಗಳ ಕೆತ್ತನೆ ಗಮನ ಸೆಳೆಯುತ್ತದೆ. ತಲೆಯಲ್ಲಿ ಕಿರೀಟವಿದೆ. ತಲೆಯ ಹಿಂಭಾಗದಲ್ಲಿ ವಿಶಿಷ್ಟ ಅಲಂಕರಣದ ಕೆತ್ತನೆಯುಳ್ಳ ಪ್ರಭಾಮಂಡಲದ ರಚನೆಯಿದೆ. ಕಾಲುಗಳು ಮಡಚಿದ ಭಂಗಿಯಲ್ಲಿದ್ದು ಸ್ತ್ರೀಯು ತನ್ನ ಪುರುಷನ ಸೊಂಟವನ್ನು ಬಳಸಿಕೊಂಡಿದ್ದಾಳೆ. ಶಿಲ್ಪದ ಕೆತ್ತನೆ ಸುಂದರವಾಗಿದ್ದು, ಈ ಶಿಲ್ಪವನ್ನು ಬೋಧಿಗೆಯಲ್ಲಿ ಕೆತ್ತಲಾಗಿದೆ.

ಶಿಲ್ಪ –೩

ಬಾದಾಮಿಯ ಮೊದಲನೆಯ ಗುಹೆಯ ಇನ್ನೊಂದು ಭಿತ್ತಿಯಲ್ಲಿ ಇನ್ನೊಂದು ಇದೇ ರೀತಿಯ ಗಂಧರ್ವಶಿಲ್ಪವನ್ನು ಅಲಂಕಾರಯುಕ್ತವಾಗಿ ಕೆತ್ತಲಾಗಿದೆ. ಇಲ್ಲಿ ಆಕಾಶದಲ್ಲಿನ ಮೋಡಗಳ ರಚನೆಯಿದೆ. ಶಿಲ್ಪದ ಸುತ್ತಲಿನ ಅವಕಾಶವನ್ನು ಖಾಲಿ ಬಿಡಲಾಗಿದೆ. ಶಿಲ್ಪದಲ್ಲಿ ಸ್ತ್ರೀಯು ಗಂಧರ್ವನನ್ನು ಬಳಸಿ ಹಿಡಿದೊಕೊಂಡಿದ್ದರೂ ಇಬ್ಬರದೂ ಮುಖವು ಎದುರುಬದುರಾಗಿದೆ. ಇಲ್ಲಿ ಆಭರಣಗಳ ಕೆತ್ತನೆ ಕಡಿಮೆಯಿದೆ. ದೇಹರಚನೆಯು ಮೊದಲಿನ ಶಿಲ್ಪಕ್ಕಿಂತ ಭಿನ್ನವಾಗಿದ್ದು ದೇಹವು ಹೆಚ್ಚು ದಪ್ಪವಾಗಿದೆ. ಗಂಧರ್ವನ ಕಿರೀಟದ ರಚನೆಯೂ ಭಿನ್ನವಾಗಿದೆ. ಅಲಂಕರಣವು ಕಡಿಮೆಯಿದ್ದು ತೊಟ್ಟಿರುವ ಉಡುಗೆಯೂ ವಿಭಿನ್ನ ರೀತಿಯ ಕೆತ್ತನೆಯಾಗಿ ಕಂಡುಬರುತ್ತದೆ.

ಶಿಲ್ಪದ ಸುತ್ತಲೂ ಅಲಂಕಾರಿಕವಾದ ಚಿತ್ತಾರಗಳುಳ್ಳ ಕೆತ್ತನೆಯಿದೆ. ಶಿಲ್ಪವು ಗಾಳಿಯಲ್ಲಿ ಹಾರುವಂತಿದ್ದು ಹದವಾದ ಉಬ್ಬುಶಿಲ್ಪದಿಂದ ಕೆತ್ತಲಾಗಿದೆ. ಇನ್ನೊಂದು ಗಮನಾರ್ಹ ಅಂಶವೆಂದರೆ ಶಿಲ್ಪದ ಉಳಿದೆಡೆಯಲ್ಲಿ ಯಾವುದೇ ಕೆತ್ತನೆಗಳಿಲ್ಲದಿರುವುದರಿಂದ ಶಿಲ್ಪಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಇನ್ನೊಂದು ಶಿಲ್ಪದಲ್ಲಿ ಮುಖವು ಸಣ್ಣದಾಗಿದ್ದು ದೇಹದಳತೆಗೆ ಹೊಂದಿಕೆಯಾಗುವುದಿಲ್ಲ. ಗಂಧರ್ವನು ಕೈಯಲ್ಲಿ ಹಿಡಿದಿರುವ ಕತ್ತಿಯನ್ನು ಅಡ್ಡಕ್ಕೆ ಹಿಡಿಯಲಾಗಿದೆ. ಇನ್ನೊಂದು ಬದಲಾವಣೆಯೆಂದರೆ, ಇಲ್ಲಿ ಗಂಧರ್ವನು ತೊಟ್ಟಿರುವ ಹಾರವು ಗಾಳಿಯಲ್ಲಿ



ಹಾರಾಡುತ್ತಿರುವಂತಿದೆ. ಶಿಲ್ಪದಲ್ಲಿ ಜೀವಕಳೆ ಎದ್ದು ಕಾಣುವಂತಿದೆ. ಇಲ್ಲಿ ಶಿಲ್ಪವನ್ನು ವೃತ್ತಾಕಾರದ ಚೌಕಟ್ಟಿನಲ್ಲಿ ಕೆತ್ತಲಾಗಿದ್ದು ಹೆಚ್ಚು ಆಳವಾಗಿ ಕೆತ್ತಲಾಗಿದೆ. ಸುತ್ತಲೂ ಬೇರಾವುದೇ ಕೆತ್ತನೆಯಿಲ್ಲ. ಗಂಧರ್ವನು ತಲೆಯನ್ನು ಎಡಕ್ಕೆ ಬಾಗಿಸಿದ್ದು ಸ್ಥಳಾವಕಾಶದಲ್ಲಿ ಕೆತ್ತುವ ಅನಿವಾರ್ಯತೆಯನ್ನು ಇಲ್ಲಿ ಶಿಲ್ಪಿಗಳು ಬಳಸಿಕೊಂಡಿರುವುದನ್ನು ಗಮನಿಸಬಹುದು. ಇದೇ ರೀತಿಯ ಗಂಧರ್ವ ದಂಪತಿಗಳ ಶಿಲ್ಪವು ಇನ್ನೂ ಹಲವಾರು ಕಂಡುಬರುತ್ತಿದ್ದು ಅವುಗಳನ್ನು ಕಂಬಗಳ ನಿಯಮಿತ ಅವಕಾಶದಲ್ಲಿ ಕೆತ್ತಲಾಗಿದ್ದು ಒಟ್ಟು ನೋಟಕ್ಕೆ ಪೂರಕವಾಗಿ ಅಲಂಕಾರದ ಉದ್ದೇಶದಿಂದ ಕೆತ್ತಿರುವುದನ್ನು ಕಾಣುತ್ತೇವೆ. ಎರಡನೆಯ ಮತ್ತು ಮೂರನೆಯ ಗುಹಾಲಯದಲ್ಲಿ ಕೆಲವೇ ಗಂಧರ್ವ ಶಿಲ್ಪಗಳಿದ್ದು ಕಲಾತ್ಮಕವಾಗಿ ವಿಶೇಷ ಮಹತ್ವ ಪಡೆಯುವುದಿಲ್ಲ.

ಶಿಲ್ಪ –೪

ಪಟ್ಟದಕಲ್ಲಿನ ಸ್ವಲ್ಪ ಅಂತರದಲ್ಲಿ ಒಂದು ಜೈನ ದೇವಾಲಯವಿದೆ. ಇಲ್ಲಿ ದೇವಾಲಯದ ಗೋಡೆಯಲ್ಲಿ ಎರಡು ಗಂಧರ್ವದಂಪತಿ ಶಿಲ್ಪಗಳನ್ನು ಒಂದೇ ಚೌಕಟ್ಟಿನಲ್ಲಿ ಕೆತ್ತಲಾಗಿದೆ. ಹಿನ್ನೆಲೆಯಲ್ಲಿ ಮೋಡಗಳ ಕೆತ್ತನೆಯಿದೆ. ಹಿನ್ನೆಲೆಯಲ್ಲಿ ಬೇರಾವುದೇ ಶಿಲ್ಪಗಳಿಲ್ಲ. ಈ ಶಿಲ್ಪದ ಮುಖವು ಭಗ್ನಗೊಂಡಿದೆ. ಶಿಲ್ಪವನ್ನು ಸರಳವಾಗಿ ಕೆತ್ತಲಾಗಿದ್ದು ಹೆಚ್ಚು ಉಬ್ಬಿದ ಕೆತ್ತನೆಯನ್ನು ಹೊಂದಿದ್ದು ದೇಹವು ದುಂಡಗಾಗಿದ್ದು ಉಬ್ಬಿದ ಸ್ತನಗಳ, ದಪ್ಪನಾದ ತೊಡೆಗಳ ರಚನೆಯನ್ನು ಹೊಂದಿದೆ. ಗಂಧರ್ವರು ಆಕಾಶದಲ್ಲಿ ತೇಲಾಡುವಂತೆ ಕಾಲುಗಳನ್ನು ಮಡಚಿ ಹಾರಾಡುತ್ತಿದ್ದಾರೆ. ಶಿಲ್ಪವು ಸಾಕಷ್ಟು ಆಭರಣಗಳ ರಚನೆಯನ್ನು ಹೊಂದಿದೆ. ಆದರೂ ಈ ಶಿಲ್ಪದ ರಚನೆಯಲ್ಲಿ ಕಾಣಿಸುವ ಅಂಶವೆಂದರೆ, ಶಿಲ್ಪದ ರಚನೆಯಲ್ಲಿ ಬಾದಾಮಿಯ ಶಿಲ್ಪಗಳಲ್ಲಿ ನೋಡಿದಂತಹ ಲಾವಣ್ಯ ಕಂಡುಬರುವುದಿಲ್ಲ. ಆದರೂ ಶಿಲ್ಪವು ಸುಂದರವಾದ ಕೆತ್ತನೆಯೆನ್ನಬಹುದು.

ಶಿಲ್ಪ –೫

ಪಟ್ಟದಕಲ್ಲು ಕಾಡಸಿದ್ಧೇಶ್ವರ ದೇವಾಲಯದ ಗೋಡೆಯೊಂದರಲ್ಲಿ ಗಂಧರ್ವ ದಂಪತಿಗಳ ಶಿಲ್ಪವೊಂದಿದ್ದು ಕಲಾತ್ಮಕವಾಗಿ ಗಮನಸೆಳೆಯುವುದಿಲ್ಲ. ಅಭ್ಯಾಸಕಾಲದ ರಚನೆಯಂತೆ ಕಂಡುಬರುತ್ತದೆ. ಶಿಲ್ಪವು ಆಕಾಶದಲ್ಲಿ ಹಾರಾಡುವಂತಿದ್ದರೂ ಗಂಧರ್ವರ ಕೆಳಗೆ ಸ್ಥಳಾವಕಾಶವಿಲ್ಲ ಮತ್ತು ಒರಟಾದ ಅಲಂಕರಣವನ್ನು ಹೊಂದಿದ್ದು, ಶಿಲ್ಪದ ದೇಹಕ್ಕಿಂತ ತಲೆಯು ದೊಡ್ಡದಾಗಿದೆ. ಒಟ್ಟು ನೋಟದಲ್ಲಿ ಈ ಶಿಲ್ಪವು ಪಳಗಿದ ಕೈಯ ಕೃತಿಯಂತೆ ಕಂಡುಬರುವುದಿಲ್ಲ. ಬಹುಶಃ ಮುಂದಿನ ದಿನಗಳಲ್ಲಿ ಗಂಧರ್ವದಂಪತಿಗಳ ಶಿಲ್ಪಗಳ ಸ್ಥಳಾವಕಾಶವನ್ನು ದಂಪತಿ ಶಿಲ್ಪಗಳು ಆಕ್ರಮಿಸಿಕೊಂಡಿರಬಹುದು. ಇದರಿಂದಾಗಿ ನಂತರದ ದಿನಗಳಲ್ಲಿ ರಚನೆಯಾದ ಗಂಧರ್ವ ಶಿಲ್ಪಗಳು ಕಡಿಮೆ. ದಂಪತಿ ಮತ್ತು ಮಿಥುನಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ನಂತರದ ದಿನಗಳಲ್ಲಿ ರಚನೆಯಾದವು.

ರಾಜ ರಾಣಿಯರ ಶಿಲ್ಪಗಳು



ಶಿಲ್ಪ-೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೩ ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ




ಶಿಲ್ಪ-೪ ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೫. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೬. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೭. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಗಂಧರ್ವ ಶಿಲ್ಪಗಳು



ಶಿಲ್ಪ-೧. ಮೊದಲನೆಯ ಶೈವ ಗುಹಾಲಯದ ಉಪ ಗುಹೆ, ಬಾದಾಮಿ



ಶಿಲ್ಪ-೨. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೩. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೪. ಜೈನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೫. ಕಾಡಸಿದ್ದೇಶ್ವರ ದೇವಾಲಯ, ಪಟ್ಟದಕಲ್ಲು



ಮಿಥುನ ಶಿಲ್ಪಗಳು

ಚಾಲುಕ್ಯರ ಕಾಲದ ಬಾದಾಮಿ ಗುಹಾಂತರ ದೇವಾಲಯಗಳು ಹಾಗೂ ಐಹೊಳೆ, ಪಟ್ಟದಕಲ್ಲಿನ ದೇವಾಲಯಗಳಲ್ಲಿ ಕಂಡುಬರುವ ಶೃಂಗಾರ ಶಿಲ್ಪಗಳು ತಾಂತ್ರಿಕವಾಗಿಯೂ, ಪ್ರಮಾಣಬದ್ಧವಾಗಿಯೂ ಮತ್ತು ಸೃಜನಾತ್ಮಕವಾಗಿಯೂ ಕೆತ್ತಲ್ಪಟ್ಟಿವೆ. ಬಾದಾಮಿಯ ಗುಹಾಂತರ ದೇವಾಲಯಗಳಲ್ಲಿ ಮಿಥುನ ಶೃಂಗಾರ ಶಿಲ್ಪಗಳು ಮತ್ತು ವಿವಿಧ ಭಂಗಿಗಳಲ್ಲಿರುವ ಅಪ್ಸರಾ (ನಾಯಿಕಾ), ಶೃಂಗಾರ ಶಿಲ್ಪಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ.[೨೦](೨೦೭) ದೇವಾಲಯ ಛಾವಣಿ, ಕಂಬದ ಮೇಲೆ ವೃತ್ತಾಕಾರದ ಮಧ್ಯದಲ್ಲಿ ಅಲಂಕಾರಿಕವಾಗಿ ರಚಿತವಾದ ಮಿಥುನ ಹಾಗೂ ದಂಪತಿ ಶಿಲ್ಪಗಳ ವೃತ್ತಾಕಾರವು. ಬಹುಶಃ ಸಾಂಕೇತಿಕವಾಗಿ ಜೀವನಚಕ್ರವನ್ನು ಪ್ರತಿನಿಧಿಸುತ್ತದೆ. ಬಾದಾಮಿಯ ಮಿಥುನ ಶಿಲ್ಪಗಳಲ್ಲಿ ಕಂಡುಬರುವ ವಿಶೇಷತೆಯೆಂದರೆ, ಮಿಥುನ ದಂಪತಿಗಳ ಜೊತೆಗೆ ಸೇವಕರಿರುವುದನ್ನು ಗಮನಿಸಬಹುದು.

ಮಿಥುನ ಶಿಲ್ಪಗಳು ಕ್ರಿಸ್ತಶಕೆಯ ಆರಂಭ ಕಾಲದಿಂದಲೂ ರಚನೆಯಾಗಿವೆ. ಸಾಂಚಿ ಮತ್ತು ಅಮರಾವತಿಯ ಸ್ತೂಪಗಳಲ್ಲಿಯೂ ದಂಪತಿ ಶಿಲ್ಪಗಳ ರಚನೆಗಳು ಹೇರಳವಾಗಿ ಕಂಡುಬರುತ್ತವೆ. ಆದರೆ ಕರ್ನಾಟಕದಲ್ಲಿ ಈ ಪರಂಪರೆ ಆರಂಭವಾದುದು ತಡವಾಗಿ. ಬಾದಾಮಿಯ ಚಾಲುಕ್ಯರ ಕಾಲಕ್ಕೆ ಕರ್ನಾಟಕದಲ್ಲಿಯೂ ದೇವಾಲಯದ ಆವರಣದಲ್ಲಿ ಮಿಥುನ ಶಿಲ್ಪಗಳ ರಚನೆ ಪ್ರಾರಂಭವಾಯಿತು. 'ಕರ್ನಾಟಕದಲ್ಲಿ ಮೊದಲಬಾರಿಗೆ ಈ ಶಿಲ್ಪ ಪ್ರಕಾರವನ್ನು ಬಳಸಿ ಜನಪ್ರಿಯಗೊಳಿಸಿದ ಖ್ಯಾತಿ ಚಾಲುಕ್ಯ ರೂವಾರಿಗಳದ್ದಾಗಿದೆ'.[೨೧] ಬಾದಾಮಿಯ ಗುಹಾಲಯಗಳು ರಾಚನಿಕ ದೇವಾಲಯಗಳು, ಐಹೊಳೆಯ ಗುಡಿಗಳು ಮತ್ತು ಪಟ್ಟದಕಲ್ಲಿನ ದೇವಾಲಯಗಳಲ್ಲಿಯೂ ಮಿಥುನ ಶಿಲ್ಪಗಳನ್ನು ಕೆತ್ತಿದ ಕೀರ್ತಿ ಚಾಲುಕ್ಯ ಶಿಲ್ಪಿಗಳಿಗೆ ಸಲ್ಲಬೇಕು. ಅದರಲ್ಲಿಯೂ ಮಹಾಕೂಟದ ದೇವಾಲಯದ ಆವರಣದಲ್ಲಿರುವ ಮಿಥುನ ಶಿಲ್ಪಗಳು ಕರ್ನಾಟಕದ ಮಿಥುನ ಶಿಲ್ಪ ರಚನೆಯ ಪರಂಪರೆಗೇ ಹೊಸ ವ್ಯಾಖ್ಯಾನವನ್ನು ನೀಡಿತೆನ್ನಬಹುದು. ದೇವಾಲಯದ ಕಂಬಗಳಲ್ಲಿ, ಅರ್ಧ ಕಂಬಗಳಲ್ಲಿ, ಅಧಿಷ್ಠಾನದಲ್ಲಿ, ತೊಲೆಗಳಲ್ಲಿ, ಜಂತಿಗಳಲ್ಲಿ, ಛತ್ತಿನಲ್ಲಿ ಮತ್ತು ಬಾಗಿಲುವಾಡಗಳಲ್ಲಿ ಕೂಡಾ ಮಿಥುನ ಶಿಲ್ಪಗಳನ್ನು ಕೆತ್ತಿರುವುದನ್ನು ನಾವಿಲ್ಲಿ ಕಾಣಬಹುದು.

ಇಲ್ಲಿನ ಶಿಲ್ಪಗಳಲ್ಲಿ ಶೃಂಗಾರ ಮಿಥುನ ಶಿಲ್ಪಗಳಿವೆ, 'ಗಂಡು ಹೆಣ್ಣು ಪ್ರೀತಿಯ ಆಲಿಂಗನದ 'ಲಾವಣ್ಯ ಮಿಥುನ' ಶಿಲ್ಪಗಳಿವೆ, ಕಾಮದ ಆಲಿಂಗನದ 'ಆಸಕ್ತ ಮಿಥುನ' ಶಿಲ್ಪಗಳಿವೆ. ಮೈಥುನ ಶಿಲ್ಪಗಳು ಕಡಿಮೆ ಸಂಖ್ಯೆಯಲ್ಲಿವೆ.'[೨೨] ವಿಭಿನ್ನ ರೀತಿಯಲ್ಲಿ ಕೆತ್ತಲಾದ ಈ ಶಿಲ್ಪಗಳು ವಿಶಿಷ್ಟ ರಚನೆಗಳನ್ನು ಹೊಂದಿದ್ದು, ನೋಡುಗರಲ್ಲಿ ಕುತೂಹಲದ ಜೊತೆಗೆ ಕಾಮಪ್ರಚೋದಕವಾಗಿರುವ

---

೨೦. ಡಾ. ಎಂ.ಜಿ. ನಾಗರಾಜ್, ಡಾ. ಪಿ.ವಿ.ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ, ಸಂ.೨೪, ಪುಟ – ೨೦೭

೨೧: ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೪

೨೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೪



ಶಿಲ್ಪಗಳಿರುವುದನ್ನೂ ಕೂಡಾ ಕಾಣುತ್ತೇವೆ. ಪ್ರತಿ ಶಿಲ್ಪದಲ್ಲಿಯೂ ಪ್ರತ್ಯೇಕತೆ ಇದೆ. ಕೆಲ ಶಿಲ್ಪಗಳಲ್ಲಿ ಗಂಡು-ಹೆಣ್ಣು ಸುರತದಲ್ಲಿ ತೊಡಗಿದ್ದು, ಅವರ ಸೇವಕಿಯರು ಹಿನ್ನೆಲೆಯಲ್ಲಿ ನಿಂತಿದ್ದು ಮುಖವನ್ನು ಬೇರೆಡೆಗೆ ತಿರುಗಿಸಿ ನಿಂತಂತಿರುವ ಶಿಲ್ಪಗಳನ್ನೂ ಕಾಣಬಹುದು. ಬಾದಾಮಿಯ ಶೈವ ಗುಹಾಲಯದ ಪ್ರವೇಶದ್ವಾರದ ಕಂಬಗಳ ಮೇಲೆ ಮತ್ತು ತೊಲೆಗಳಲ್ಲಿ ಹಲವಾರು ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದು. ವಿವಿಧ ಭಂಗಿಯಲ್ಲಿರುವ, ಸರಸ ಮತ್ತು ಶೃಂಗಾರದಲ್ಲಿ ತೊಡಗಿರುವ ದಂಪತಿಶಿಲ್ಪಗಳು ಇಲ್ಲಿವೆ. ಆದರೆ ಇವು ಕಾಮ ಪ್ರಚೋದಕವಾದ ಉತ್ತುಂಗ ಸುರತದ ಶಿಲ್ಪಗಳಲ್ಲ.

ಶಿಲ್ಪ -೧

ಕಂಬದ ಮೇಲಿನ ಶಿಲ್ಪವೊಂದರಲ್ಲಿ ದಂಪತಿಗಳು ಕುಳಿತಿರುವ ಭಂಗಿಯಲ್ಲಿದೆ. ಶೃಂಗಾರದ ಉತ್ಕಟಾವಸ್ಥೆಯಲ್ಲಿ ನಿರತರಾಗಿರುವ ಈ ಶಿಲ್ಪದ ಹಿನ್ನೆಲೆಯಲ್ಲಿ ಸೇವಕಿಯೊಬ್ಬಳು ನಿಂತಿದ್ದಾಳೆ. ಚೌಕಟ್ಟಿನಲ್ಲಿ ಕೆತ್ತಲಾಗಿರುವ ಈ ಶಿಲ್ಪದ ಸುತ್ತಲೂ ಅಲಂಕರಿಕವಾದ ಚಿತ್ತಾರಗಳಿವೆ. ಗಂಡು ಮತ್ತು ಹೆಣ್ಣಿನ ಈ ಶಿಲ್ಪದಲ್ಲಿ ಗಂಡು ಹೆಣ್ಣಿನ ತೊಡೆಗಳ ನಡುವೆ ಕೈಯಿರಿಸಿಕೊಂಡು ರಮಿಸುತ್ತಿರುವ ಇದು ಉಬ್ಬುಶಿಲ್ಪವಾಗಿದೆ.

ಶಿಲ್ಪ -೨

ಇನ್ನೊಂದು ಶಿಲ್ಪದಲ್ಲಿ ಗಂಡು ಹೆಣ್ಣುಗಳಿಬ್ಬರೂ ಅಂಗಾತವಾಗಿ ಕುಳಿತುಕೊಂಡು ಶೃಂಗಾರದಲ್ಲಿ ತೊಡಗಿರುವಂತಿದೆ. ಕುಳಿತ ಭಂಗಿಯು ಭಿನ್ನವಾಗಿದೆ. ಅಲ್ಲೆ ಮೇಲಿನ ಚೌಕದಲ್ಲಿ ಇನ್ನೊಂದು ಶಿಲ್ಪವಿದೆ. ಇನ್ನೊಂದರಲ್ಲಿ ಹೆಣ್ಣು ಅಂಗಾತವಾಗಿ ಗಂಡಿನ ತೊಡೆಯ ಮೇಲೆ ಮಲಗಿಕೊಂಡಿದ್ದು, ಗಂಡು ಹೆಣ್ಣನ್ನು ರಮಿಸುತ್ತಿರುವಂತಿದೆ. ಹೆಚ್ಚಿನ ಶಿಲ್ಪಗಳು ದೇವಾಲಯದ ಕಂಬದ ಮೇಲೆ ಕೆತ್ತಲ್ಪಟ್ಟಿದ್ದು ಕೆಲವು ಇದಕ್ಕಿಂತಲೂ ಸಣ್ಣ ಗಾತ್ರದ ಶಿಲ್ಪಗಳನ್ನು ತೊಲೆಯ ಮೇಲೆ ಕೆತ್ತಲಾಗಿದೆ. ಇವೆಲ್ಲವೂ ಶೃಂಗಾರದ ವಿವಿಧ ಭಾವವನ್ನು ವ್ಯಕ್ತಪಡಿಸುವ ಶಿಲ್ಪಗಳು. ಇವು ಭಾವೋದ್ರೇಕದ ಶಿಲ್ಪಗಳಲ್ಲ. ದೇವಾಲಯದ ಉಳಿದ ಶಿಲ್ಪಗಳಂತೆ ರೌದ್ರ ಭೀಕರ ಶಿಲ್ಪಗಳಲ್ಲದೆ ನವರಸದ ಮುಖ್ಯ ರಸಗಳಲ್ಲಿ ಒಂದಾದ ಶೃಂಗಾರ ಭಾವವನ್ನು ವ್ಯಕ್ತಪಡಿಸುವ ಶಿಲ್ಪಗಳಾಗಿವೆ. ಇಲ್ಲಿನ ಶಿಲ್ಪಗಳು ಮಹಾಕೂಟ ದೇವಾಲಯದ ಮೈಥುನ ಶಿಲ್ಪಗಳಂತೆ ಕಾಮ ಪ್ರಚೋದಕ ಶಿಲ್ಪಗಳಲ್ಲ.

ಎರಡನೆಯ ವೈಷ್ಣವ ಗುಹೆಯಲ್ಲಿಯೂ ಹಲವಾರು ಮಿಥುನ ಶಿಲ್ಪಗಳಿವೆ. ಇವುಗಳು ಕೂಡಾ ಕಂಬಗಳ ಮತ್ತು ತೊಲೆಗಳ ಮೇಲೆ ಕೆತ್ತಲಾಗಿರುವ ಸಣ್ಣ ಗಾತ್ರದ ಉಬ್ಬು ಶಿಲ್ಪಗಳು. ಕಂಬಗಳ ಅಲಂಕರಣಕ್ಕಾಗಿ ಕೆತ್ತಲಾಗಿರುವ ಕಲಾತ್ಮಕತೆಯೇ ಪ್ರಮುಖ ಉದ್ದೇಶವಾಗಿರುವ ಇಲ್ಲಿನ ಈ ಶಿಲ್ಪಗಳಲ್ಲಿ ಶೃಂಗಾರ ಭಾವವಿದೆ. ತಲ್ಲೀನತೆಯಿದೆ. ಕೆತ್ತನೆಯಲ್ಲಿ ಪರಿಪೂರ್ಣತೆಯಿದೆ.



ಒಂದು ಶಿಲ್ಪದಲ್ಲಿ ಹೆಣ್ಣು ಅಂಗಾತವಾಗಿ ಗಂಡಿನ ತೊಡೆಯ ಮೇಲೆ ಮಲಗಿದ್ದು ಗಂಡು ಆಕೆಯನ್ನು ಲಲ್ಲೆಗರೆಯುತ್ತಿದ್ದಾನೆ. ಹಿನ್ನೆಲೆಯಲ್ಲಿ ಸೇವಕಿಯಿದ್ದಾಳೆ. ಆಕೆಯು ಅರೆನಗ್ನಳಾಗಿದ್ದಾಳೆ. ಮೈಮೇಲೆ ಹಾಕಿದ ಆಭರಣ ಆಕೆಯ ವಸ್ತ್ರದಂತೆ ಭಾಸವಾಗುತ್ತದೆ.

ಪುರುಷನ ಮುಖವು ನೇರಕ್ಕೆ ಇದ್ದರೆ ಹೆಣ್ಣು ತನ್ನ ಮುಖವನ್ನು ಪಕ್ಕಕ್ಕೆ ವಾಲಿಸಿದ್ದಾಳೆ. ಆಕೆಯ ಮುಖದಲ್ಲಿ ನಾಚಿಕೆಯ ಭಾವವೇನೂ ಕಾಣಿಸದು. ಇದು ಆಯತಾಕಾರದ ಚೌಕಟ್ಟಿನಲ್ಲಿದೆ. ಅದರ ಕೆಳಗಿನ ಶಿಲ್ಪವು ಅರ್ಧವೃತ್ತಾಕಾರದಲ್ಲಿದ್ದು ಮೊದಲಿನ ಶಿಲ್ಪಕ್ಕಿಂತ ಭಿನ್ನವಾಗಿದೆ. ಇಲ್ಲಿ ಇಬ್ಬರೂ ಕುಳಿತುಕೊಂಡು ಶೃಂಗಾರದಲ್ಲಿ ಮುಳುಗಿದ್ದಾರೆ. ಇಂತಹ ಹಲವಾರು ಶಿಲ್ಪಗಳನ್ನಿಲ್ಲಿ ಕಾಣಬಹುದು. ಹೆಚ್ಚಿನ ಮಿಥುನ ಶಿಲ್ಪಗಳು ನಮಗೆ ಮೂರನೆಯ ಮಹಾವಿಷ್ಣು ಗುಹೆಯಲ್ಲಿ ಕಂಡುಬರುತ್ತವೆ.

ಶಿಲ್ಪ –೩

ಈ ಗುಹೆಯ ಬೋಧಿಗೆಯ ಶಿಲ್ಪವೊಂದರ ರಚನೆ ಗಮನ ಸೆಳೆಯುತ್ತದೆ. ಇಲ್ಲಿ ಸ್ತ್ರೀಯು ವೃಕ್ಷಾರೋಹಣ ಭಂಗಿಯಲ್ಲಿ ಪತಿಯನ್ನು ಸಮೀಪಿಸುತ್ತಿದ್ದಾಳೆ. ವೃಕ್ಷಾಧಿರೋಹಣವು ಕಾಮಶಾಸ್ತ್ರವು ಸೂಚಿಸುವ ಆಲಿಂಗನಗಳಲ್ಲಿ ಒಂದಾಗಿದೆ'.[೭೩] ಇಲ್ಲಿನ ಶಿಲ್ಪಗಳು ಮೊದಲೆರಡು ಗುಹಾಲಯಗಳ ಶಿಲ್ಪಗಳಿಗಿಂತ ಹೆಚ್ಚಿನ ಪರಿಪೂರ್ಣತೆಯನ್ನು ಹೊಂದಿವೆ. ಕೆತ್ತನೆಗಳು ಉತ್ಕೃಷ್ಟವಾಗಿವೆ. ಇಲ್ಲಿಯೂ ಕಂಬಗಳಲ್ಲಿ ಮತ್ತು ತೊಲೆಗಳಲ್ಲಿ ಅರ್ಧವೃತ್ತ ಮತ್ತು ವೃತ್ತಾಕಾರದ ಚೌಕಟ್ಟಿನೊಳಗೆ ಕೆತ್ತಿದ್ದಾರೆ. ಆದರೆ ಶಿಲ್ಪದಲ್ಲಿ ಹೆಚ್ಚಿನ ಉಬ್ಬಿದಂತಹ ಪೂರ್ಣತೆ ಮತ್ತು ನಾಜೂಕುತನವು ಕಂಡುಬರುತ್ತದೆ.

ಶಿಲ್ಪಗಳು ಸರಳವಾಗಿದ್ದು ಕೆತ್ತನೆಯಲ್ಲಿ ಸೊಗಸಿದೆ. ಭಾವ ಪ್ರಚೋದಕವಾಗಿದ್ದು ಶೃಂಗಾರದ ಪರಾಕಾಷ್ಠೆಯಿಲ್ಲಿಲ್ಲದಿದ್ದರೂ ಸಭ್ಯವಾಗಿದ್ದು ನೋಡುಗನಲ್ಲಿ ಶೃಂಗಾರದ ಅನುಭವವನ್ನು ನೀಡುವಂತಿವೆ. ಮಹಾಕೂಟದ ದೇವಾಲಯದ ಆವರಣದಲ್ಲಿರುವ ಮಿಥುನ ಶಿಲ್ಪಗಳು ಹೆಚ್ಚಿನ ಪ್ರಸಿದ್ಧಿ ಪಡೆದಿರುವ ಶಿಲ್ಪಗಳು. ಇಲ್ಲಿ ದೇವಾಲಯದ ಸುತ್ತಲೂ ಗೋಡೆಗಳಲ್ಲಿ ಅಧಿಷ್ಠಾನದಲ್ಲಿ ಕಂಬಗಳಲ್ಲಿ ಹೀಗೆ ಹಲವಾರು ಜಾಗಗಳಲ್ಲಿ ಮಿಥುನ ಶಿಲ್ಪಗಳು ಕಂಡುಬರುತ್ತವೆ. ಮತ್ತು ನಂದಿ ಮಂಟಪದ ಕಂಬಗಳಲ್ಲಿ ಮಿಥುನ ಶಿಲ್ಪಗಳನ್ನು ನೋಡಬಹುದು. ಇಲ್ಲಿನ ಶಿಲ್ಪಗಳ ವಿಶೇಷತೆಯೆಂದರೆ ಈ ಶಿಲ್ಪಗಳು ಬಾದಾಮಿಯ ಶಿಲ್ಪಗಳಂತೆ ಕೇವಲ ಶೃಂಗಾರಕ್ಕಾಗಿಯೇ ಸೀಮಿತವಾಗಿ ರಚನೆಯಾದ ಶಿಲ್ಪಗಳಲ್ಲ. ಇದರ ಹಿಂದೆ ಬೇರೆ ಉದ್ದೇಶವಿದ್ದಂತೆ ಕಂಡುಬರುತ್ತದೆ. ಇಲ್ಲಿನ ಶಿಲ್ಪಗಳು ಮೈಥುನವೆ ಪ್ರಧಾನವಾಗುಳ್ಳ ಕೆತ್ತನೆಯನ್ನು ಹೊಂದಿರುವಂತಹ ಶಿಲ್ಪಗಳು. ಬಹುಶಃ ವಾತ್ಸ್ಯಾಯನನ ಕಾಮಸೂತ್ರದಲ್ಲಿ ಉಲ್ಲೇಖಿಸಿರುವ ವಿವಿಧ ಭಂಗಿಗಳನ್ನು, ಆಸನಗಳನ್ನು

೭೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೫



ತೋರಿಸುವ ಉದ್ದೇಶದಿಂದ ರಚಿಸಲಾದ ಶಿಲ್ಪಗಳಿರಬಹುದು. 'ಪ್ರಾಯಶಃ ವಾತ್ಸ್ಯಾಯನನು ತಿಳಿಸುವ ಇಂಥ ಭಂಗಿಗಳನ್ನು ಶಿಲ್ಪಗಳಲ್ಲಿ ಮೊದಲ ಬಾರಿಗೆ ಕಂಡರಿಸಿದವರು ಚಾಲುಕ್ಯ ಶಿಲ್ಪಿಗಳು'.[೭೪] ಇಲ್ಲಿನ ಹೆಚ್ಚಿನ ಶಿಲ್ಪಗಳು ವಿವಿಧ ಭಂಗಿಗಳಲ್ಲಿ ನಿಂತುಕೊಂಡು, ಕುಳಿತುಕೊಂಡು, ಅಥವಾ ಇನ್ನೂ ಹಲವಾರು ಚಕ್ರಭಂಗಿಗಳಲ್ಲಿ ಮೈಥುನದಲ್ಲಿ ತೊಡಗಿಕೊಂಡಿರುವಂತೆ ರಚಿಸಲಾಗಿರುವ ಶಿಲ್ಪಗಳು, (ಇಂತಹ ಶಿಲ್ಪಗಳು ಖಜುರಾಹೋ ಮತ್ತು ಇತರ ಉತ್ತರ ಭಾರತೀಯ ದೇವಾಲಯಗಳಲ್ಲಿ ಹೆಚ್ಚಾಗಿ ರಚಿತವಾಗಿವೆ) ಶಿಲ್ಪಗಳು ಗಾತ್ರದಲ್ಲಿ ಸಣ್ಣವಾಗಿದ್ದರೂ ಕೆತ್ತನೆಯಲ್ಲಿ ಪರಿಪೂರ್ಣತೆಯಿದೆ. ಶಿಲ್ಪದ ಉದ್ದೇಶವು ಕಾಮಪ್ರಚೋದನೆಯಾಗಿದೆ. ಇಲ್ಲಿ ಶೃಂಗಾರಕ್ಕಿಂತಲೂ ಕಾಮಕ್ಕೆ ಹೆಚ್ಚಿನ ಒತ್ತು ನೀಡಲಾಗಿರುವುದನ್ನು ಗಮನಿಸಬೇಕಾಗಿದೆ.

ಶಿಲ್ಪ –೪

ನಾಗರಾಳದ ನಾಗನಾಥ ದೇವಾಲಯದ ಮುಖಮಂಟಪದ ಕಂಬಗಳ ಮೇಲೆ ಹಲವಾರು ಮಿಥುನ ಶಿಲ್ಪಗಳಿವೆ. ಹೆಚ್ಚಾಗಿ ಆಲಿಂಗನ ಶಿಲ್ಪಗಳಾಗಿರುವ ಇವು ಮೈಥುನದ ವಿವಿಧ ಭಂಗಿಗಳಲ್ಲಿವೆ. ಕೆಲವು ಶಿಲ್ಪಗಳು ಅಪೂರ್ಣವಾಗಿವೆ. ಈ ದೇವಾಲಯವು ಹಿಂದಿನಿಂದಲೂ ತಾಂತ್ರಿಕ ಆರಾಧನೆಯ ಕೇಂದ್ರವಾಗಿತ್ತು. ಇಲ್ಲಿ ನಾಗಪಂಥದ ಆಚರಣೆ ರೂಢಿಯಲ್ಲಿತ್ತು.[೭೫]

ಇಲ್ಲಿ ಇನ್ನೊಂದು ಊಹಾತ್ಮಕವಾದ ವಿಚಾರವೇನೆಂದರೆ, ಲೈಂಗಿಕತೆಯು ಮಡಿವಂತಿಕೆಯಿಂದ ಹೊರಬಂದು ಪುರುಷಾರ್ಥಗಳಲ್ಲಿ ಒಂದಾಗಿದ್ದು, ಕಾಮವು ನೈಸರ್ಗಿಕ ಕ್ರಿಯೆ, ಮನುಷ್ಯರು ಇದರಿಂದ ಹೊರತಾಗಿರಬಾರದು ಎಂಬ ಉದ್ದೇಶದಿಂದ ಲೈಂಗಿಕ ಪಾಠವನ್ನು ಹೇಳುವ ಉದ್ದೇಶದಿಂದಲೂ ರಚನೆಯಾಗಿರಬಹುದು. ಅಥವಾ ತಾಂತ್ರಿಕ ಆರಾಧನೆಯ ಒಂದು ಅಂಗವಾಗಿ ಈ ಶಿಲ್ಪಗಳು ರಚನೆಯಾಗಿರಬಹುದೆಂದು ತರ್ಕಿಸಬಹುದಾಗಿದೆ. ಅದೇನೇ ಇದ್ದರೂ ಈ ಶಿಲ್ಪಗಳನ್ನು ಬಾದಾಮಿಯ ಗುಹಾಲಯಗಳ ಶಿಲ್ಪಗಳಿಗೆ ಹೋಲಿಸಿದರೆ ಹೆಚ್ಚು ಕಾಮಪ್ರಚೋದಕ ಶಿಲ್ಪಗಳಾಗಿ ಕಂಡುಬರುತ್ತವೆ. ಬಾದಾಮಿಯ ಶಿಲ್ಪಗಳಲ್ಲಿ ಕಾಮವು ಶೃಂಗಾರಭಾವವನ್ನು ವ್ಯಕ್ತಪಡಿಸಿದರೆ ಇಲ್ಲಿನವು ಕಾಮವು ಅದರ ಮುಖ್ಯ ಅಂಗವೆಂಬಂತೆ ಚಿತ್ರಿಸಿರುವುದು ಕಂಡುಬರುತ್ತದೆ. ಇನ್ನೊಂದು ಗಮನಾರ್ಹ ಅಂಶವೆಂದರೆ, ಬಾದಾಮಿಯ ಶಿಲ್ಪಗಳು ಕಲಾತ್ಮಕವಾಗಿ ಸುಂದರವಾದ ಕೆತ್ತನೆಗಳು. ಇಲ್ಲಿ ಅಲಂಕರಣವಿದೆ. ಶಿಲ್ಪದಲ್ಲಿ ಸಂಯೋಜನೆಯಿದೆ, ಸರಳತೆ ಇದೆ, ಅತಿಯಾಗಿ ಯಾವುದನ್ನೂ ತೋರಿಸಲಾಗಿಲ್ಲ, ಇದೆಲ್ಲಕ್ಕಿಂತ ಮುಖ್ಯವಾಗಿ ಲಾವಣ್ಯವು ಕಂಡುಬರುತ್ತದೆ. ಮಹಾಕೂಟದ ಶಿಲ್ಪಗಳಲ್ಲಿ ಒರಟುತನವಿದೆ. ಶಿಲ್ಪದ ಉದ್ದೇಶವು ಇಲ್ಲಿ ಅಲಂಕರಣವಲ್ಲ, ಬದಲಾಗಿ ವಸ್ತು ಚಿತ್ರಣ, ಹಾಗಾಗಿ ಅದನ್ನೇ ಕೇಂದ್ರೀಕರಿಸಿ ಶಿಲ್ಪಗಳನ್ನು ರಚಿಸಲಾಗಿದೆ. ಇಲ್ಲಿ ಕಲಾತ್ಮಕ ಅಂಶಗಳಾಗಲೀ, ಅಲಂಕರಣಗಳಾಗಲೀ ಕಡಿಮೆ.

೭೪. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೫

೭೫. ಅದೇ., ಪುಟ – ೨೨೫


ಮಿಥುನ ಶಿಲ್ಪಗಳು



ಶಿಲ್ಪ–೧. ಮೊದಲನೆಯ ಶೈವ ಗುಹಾಲಯ, ಬಾದಾಮಿ




ಶಿಲ್ಪ–೨. ಮೊದಲನೆಯ ಶೈವ ಗುಹಾಲಯ, ಬಾದಾಮಿ



ನಂದಿ ಮಂಟಪ, ಮಹಾಕೂಟ




ಶಿಲ್ಪ–೩. ಮೊದಲನೆಯ ಶೈವ ಗುಹಾಲಯ, ಬಾದಾಮಿ



ನಂದಿ ಮಂಟಪ, ಮಹಾಕೂಟ



ನಂದಿ ಮಂಟಪ, ಮಹಾಕೂಟ



ಶಿಲ್ಪ–೪. ನಾಗನಾಥನಕೊಳ್ಳ, ನಾಗರಾಳ

ಮಿಥುನ ಶಿಲ್ಪಗಳು



ಶಿಲ್ಪ–೫೫. ಪಟ್ಟದಕಲ್ಲು ಮತ್ತು ಐಹೊಳೆ ದೇವಾಲಯಗಳು

ಶಿಲ್ಪಗಳು ಲಯಬದ್ಧವಾದ ಸಂಯೋಜನೆಯಲ್ಲಿಲ್ಲದೆ ನೇರ ಹೇಳುವಂತಿವೆ. ಇದರಿಂದಾಗಿ ಕಲಾತ್ಮಕವಾದ ಅಂಶಗಳು ಕಡಿಮೆ.

ಶಿಲ್ಪ –೫

ಐಹೊಳೆ ದೇವಾಲಯಗಳಲ್ಲಿ ಮಿಥುನ ಶಿಲ್ಪಗಳ ರಚನೆ ಕಂಡುಬರುತ್ತದೆ. ಇಲ್ಲಿನ ದೇವಾಲಯದ ಕಂಬಗಳಲ್ಲಿ ಮತ್ತು ಗೋಡೆಗಳಲ್ಲಿ ಸಣ್ಣ ಗಾತ್ರದ ಮಿಥುನ ಶಿಲ್ಪಗಳ ರಚನೆ ಕಾಣಿಸುತ್ತದೆ. ಐಹೊಳೆಯ ಲಾಡ್‌ಖಾನ್ ದೇವಾಲಯದ ಕಂಬಗಳಲ್ಲಿ ಕೆಲವು ಪುಟ್ಟ ಗಾತ್ರದ ಶಿಲ್ಪಗಳಿದ್ದು ಕಂಬದ ಜಾಗೆಯನ್ನು ಖಾಲಿಬಿಡದಂತೆ ಅಲಂಕರಣಕ್ಕಾಗಿ ಕೆತ್ತಿರಬಹುದೆನ್ನಿಸುತ್ತದೆ. ತೆಳು ಉಬ್ಬು ಶಿಲ್ಪಗಳಲ್ಲಿ ಅರ್ಧವೃತ್ತಾಕಾರದಲ್ಲಿ ಕಂಡುಬರುವ ಕೆತ್ತನೆಯು ಬಾದಾಮಿ ಗುಹಾಲಯದ ಕೆತ್ತನೆಯ ಪುನರಾವರ್ತನೆಯಂತಿದೆ. ಮುಖ್ಯವಾಗಿ ಐಹೊಳೆ ಮತ್ತು ಪಟ್ಟದಕಲ್ಲಿನ ದೇವಾಲಯಗಳು ಮಿಥುನ ಶಿಲ್ಪಗಳಿಗಿಂತಲೂ ದಂಪತಿಶಿಲ್ಪಗಳಿಂದಾಗಿ ಗಮನ ಸೆಳೆಯುತ್ತವೆ. ಆದುದರಿಂದ ಇಲ್ಲಿ ಮಿಥುನ ಶಿಲ್ಪಗಳ ಕೆತ್ತನೆ ಕಡಿಮೆ. ಕೆಲವೊಂದು ಶಿಲ್ಪಗಳು ನಮಗೆ ಕೆಲವೆಡೆ ಕಂಡುಬರುತ್ತವಾದರೂ ಕಲಾತ್ಮಕ ಅಂಶಗಳು ಕಡಿಮೆ. ಹೆಚ್ಚಿನ ಶಿಲ್ಪಗಳು ವಿನ್ಯಾಸದಲ್ಲಿ ಬಾದಾಮಿಯ ಗುಹಾಲಯದ ಶಿಲ್ಪಗಳನ್ನು ಹೋಲುತ್ತವೆ.

ದಂಪತಿ ಶಿಲ್ಪಗಳು

ಗಂಧರ್ವ ದಂಪತಿ ಶಿಲ್ಪಗಳು ಮತ್ತು ಮಿಥುನ ಶಿಲ್ಪಗಳು, ಬಾದಾಮಿ ಚಾಲುಕ್ಯರ ಶಿಲ್ಪಗಳಲ್ಲಿ ಕಂಡುಬರುವಂತೆ ಅಂತಹದೆ ಆದ ಮತ್ತು ಅದಕ್ಕಿಂತ ಭಿನ್ನವಾಗಿ ಕಂಡುಬರುವ ಶಿಲ್ಪಗಳಿವೆ. ಅವುಗಳೇ 'ದಂಪತಿ ಶಿಲ್ಪಗಳು'. ಇವು ಶೃಂಗಾರ ಶಿಲ್ಪಗಳಲ್ಲ, ಗಂಧರ್ವ ದಂಪತಿಗಳಂತೆ ಆಕಾಶದಲ್ಲಿ ಹಾರಾಡುವ ಶಿಲ್ಪಗಳೂ ಅಲ್ಲ, ಬದಲಾಗಿ ನಮ್ಮಂತೆ ಇರುವ ಗಂಡು–ಹೆಣ್ಣುಗಳಿಬ್ಬರೂ ಜೊತೆಯಾಗಿರುವ ನಿಂತಿರುವ ಭಂಗಿಯ ಮಧ್ಯಮ ಗಾತ್ರದ ಶಿಲ್ಪಗಳು. ಐಹೊಳೆ ಮತ್ತು ಪಟ್ಟದಕಲ್ಲುಗಳ ದೇವಾಲಯಗಳಲ್ಲಿ ಮತ್ತು ಜೈನ ಹಾಗೂ ಬೌದ್ಧ ಆಲಯಗಳಲ್ಲಿಯೂ ಕಂಡುಬರುವ ಈ ಶಿಲ್ಪಗಳು ಸಾಮಾನ್ಯ ಲೌಕಿಕ ಶಿಲ್ಪಗಳು.

ಮಿಥುನ ಅಥವಾ ದಂಪತಿ ಶಿಲ್ಪಗಳ ಬೆಳವಣಿಗೆಯಲ್ಲಿ ಪಕ್ವತೆ ಕಾಣುವುದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಬಾದಾಮಿ ಚಾಲುಕ್ಯರ ಕಾಲದ ಗುಹಾಲಯಗಳಲ್ಲಿ ಹಾಗೂ ದೇವಾಲಯಗಳಲ್ಲಿ ಬಹಳ ಪ್ರೌಢವಾದ ಮಿಥುನ ಶಿಲ್ಪಗಳು ಕಂಡುಬರುತ್ತವೆ. ಪೌರಾಣಿಕ ಗ್ರಂಥಗಳ ಬೆಳವಣಿಗೆ, ಸಾಹಿತ್ಯ ಕೃತಿಗಳ ಪ್ರಭಾವ ಇಲ್ಲಿ ಸಮಾಗಮಗೊಂಡು ದಂಪತಿ ಶಿಲ್ಪಗಳ ಬೆಳವಣಿಗೆಯಲ್ಲಿ ಪರ್ಯವಸಾನಗೊಂಡಂತೆ ಕಾಣುತ್ತದೆ.[೭೬] ಇವುಗಳಲ್ಲಿ ಕೆಲವು ದೇವಾಲಯಗಳ ರಚನೆಗೆ ಕಾರಣರಾದ ದಾನಿಗಳ ಶಿಲ್ಪಗಳಾಗಿರಬಹುದೆಂದು ತಜ್ಞರು ಊಹಿಸಿದ್ದಾರೆ. ಕೆಲವೊಂದು

೭೬. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ, ಸಂ–೨೫, ಪು –೧೦೮–೧೦೯



ಶಿಲ್ಪಗಳು ಕುತೂಹಲವನ್ನುಂಟು ಮಾಡುವಂತಿವೆ. ಸಾಮಾನ್ಯವಾಗಿ ದೇವಾಲಯದ ಕಂಬಗಳಲ್ಲಿ, ಗೋಡೆಗಳಲ್ಲಿ ಇಂತಹ ಹಲವಾರು ಶಿಲ್ಪಗಳಿವೆ. ಬಾದಾಮಿಯ ಎರಡನೆಯ ವೈಷ್ಣವ ಗುಹೆಯ ಗೋಡೆಯಲ್ಲಿ ದಂಪತಿ ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದು. ಗಂಧರ್ವ ಶಿಲ್ಪಗಳಿಗಿಂತ ವಿಭಿನ್ನವಾದ ರೀತಿಯಲ್ಲಿ ಕೆತ್ತಲಾಗಿರುವ ಈ ಶಿಲ್ಪಗಳು ಮಧ್ಯಮ ಗಾತ್ರದಲ್ಲಿದ್ದು ನಿಂತಿರುವ ಭಂಗಿಯಲ್ಲಿರುವ ಶಿಲ್ಪಗಳು. ಯಾವುದೆ ವಿಶೇಷ ಅಲಂಕಾರ ಅಥವಾ ದೈವಿಕ ಮಹತ್ವವಿಲ್ಲದ ಈ ಶಿಲ್ಪಗಳು ಯಾವುದೇ ಸ್ಥಳವನ್ನು ಖಾಲಿ ಬಿಡಬಾರದೆಂಬ ಉದ್ದೇಶದಿಂದ ರಚಿತವಾಗಿರಬಹುದು ಅಥವಾ ದಾನಿಗಳ ಶಿಲ್ಪಗಳಿರಬಹುದೆ ಎಂದು ಊಹಿಸಬೇಕಾಗುತ್ತದೆ.

ಶಿಲ್ಪ –೧

ಬಾದಾಮಿಯ ಮೂರನೆಯ ಗುಹಾಲಯದಲ್ಲಿ ಶಿವ–ಪಾರ್ವತಿಯರನ್ನೇ ಅತ್ಯಂತ ವಿಶಿಷ್ಟವಾಗಿ ಹಾಗೂ ಶೃಂಗಾರಯುತವಾಗಿ ಬಿಂಬಿಸಿದ್ದಾರೆ. ಸೋಮರಸವನ್ನು ಸೇವಿಸಿರುವ ಪಾರ್ವತಿ ನಿಶೆಯುಳ್ಳವಳಾಗಿ ಶಿವನ ಭುಜದ ಮೇಲೆ ಕೈ ಹಾಕಿ ತನ್ನ ದೇಹದ ಭಾರವನ್ನು ಅವನ ಮೇಲೆ ಇಳಿ ಬಿಟ್ಟಿದ್ದಾಳೆ. ಅವಳನ್ನು ಎತ್ತಿಕೊಂಡು ಹೋಗುವಂತೆ ಈ ನಿರೂಪಣೆ ಇದೆ. ಮಿಥುನದಲ್ಲಿ ಮಾದಕ ಪೇಯವೂ ಕೂಡ ಒಂದು ಎಂಬ ಪರಿಕಲ್ಪನೆಯನ್ನು ನೀಡುವಂತೆ ಬಿಂಬಿತವಾಗಿದೆ.[೨೨] ಇಲ್ಲಿ ಪಾರ್ವತಿಯ ಶಿಲ್ಪ ಅತ್ಯಂತ ಆಕರ್ಷಕ ಭಂಗಿಯಲ್ಲಿ ತ್ರಿಮಾನದಲ್ಲಿ ಇರುವಂತೆ ಕಾಣುತ್ತದೆ.

ಶಿಲ್ಪ –೨

ಬಾದಾಮಿಯ ಎರಡನೇ ಗುಹಾಲಯದ ಈ ಶಿಲ್ಪದ ಎಡಭಾಗದಲ್ಲಿ ಗಂಡು ಮತ್ತು ಅವನ ಬಲಭಾಗದಲ್ಲಿ ಹೆಣ್ಣಿನ ಶಿಲ್ಪವಿದ್ದು ಪುರುಷನು ಸ್ತ್ರೀಯ ಹೆಗಲಿನ ಮೇಲೆ ಕೈಯಿರಿಸಿ ನಿಂತುಕೊಂಡಿದ್ದಾನೆ. ಸ್ತ್ರೀ–ಪುರುಷರಿಬ್ಬರ ದೇಹದಲ್ಲಿಯೂ ವಿಶೇಷ ಆಭರಣಗಳೇನಿಲ್ಲ. ಪುರುಷನು ಅಧೋವಸ್ತ್ರವನ್ನು ಸೊಂಟಕ್ಕೆ ಬಿಗಿದುಕೊಂಡಿದ್ದರೆ, ಸ್ತ್ರೀಶಿಲ್ಪದಲ್ಲಿ ವೈಕಕ್ಷಕವಿದೆ, ಸೊಂಟದ ಕೆಳಭಾಗಕ್ಕೆ ಬಟ್ಟೆಯಿದ್ದು ಇವು ಆಗಿನ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಕಾಣಿಸುವ ಅಂಶಗಳು. ಪುರುಷನ ಶಿಲ್ಪದಲ್ಲಿ ತಲೆಯ ಮೇಲೆ ಸಣ್ಣದಾದ ಕಿರೀಟದಂತಹ ರಚನೆ ಕಂಡುಬಂದರೆ ಸ್ತ್ರೀ ಶಿಲ್ಪದಲ್ಲಿ ತಲೆಯ ಮೇಲುಭಾಗದಲ್ಲಿ ಕೂದಲನ್ನು ಬಾಚಿ ಮುಡಿಕಟ್ಟಿದಂತೆ ಕಂಡುಬರುತ್ತದೆ. ಸಣ್ಣ ಗೂಡುಗಳ ರೀತಿಯ ಚೌಕಟ್ಟಿನೊಳಗೆ ಕೆತ್ತಲಾಗಿರುವ ಈ ಶಿಲ್ಪದ ಕೆತ್ತನೆಯಲ್ಲಿ ವಿಶೇಷ ಮಹತ್ವವನ್ನು ಪಡೆಯದಿದ್ದರೂ ವಸ್ತುವಿಷಯದ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಶಿಲ್ಪ –೩

ಬಾದಾಮಿಯ ಎರಡನೆಯ ಗುಹಾಲಯದಲ್ಲಿರುವ ಈ ಶಿಲ್ಪದಲ್ಲಿ ಪುರುಷನು

೨೨. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ.) : ಇತಿಹಾಸ ದರ್ಶನ, ಸಂ–೨೫, ಪು –೧೦೯



ಬಲಭಾಗದಲ್ಲಿದ್ದು ಸ್ತ್ರೀಯನ್ನು ಎಡಭಾಗದಲ್ಲಿ ಕೆತ್ತಲಾಗಿದೆ. ಪುರುಷನ ಬಲ ಕೆಳಭಾಗದಲ್ಲಿ ಸಣ್ಣ ಕೆತ್ತನೆಯಿದ್ದು ಮಗುವಿನ ಶಿಲ್ಪವಾಗಿದೆ. ಇದು ಕೂಡಾ ಸಾಮಾನ್ಯ ದಂಪತಿಗಳ ಶಿಲ್ಪವಾಗಿದ್ದು ಪುರುಷ ಶಿಲ್ಪದ ತಲೆಯ ಮೇಲೆ ಸಣ್ಣ ಕಿರೀಟವಿದೆ, ಸ್ತ್ರೀ ಶಿಲ್ಪವನ್ನು ಬಳಸಿ ನಿಂತುಕೊಂಡಿದ್ದಾನೆ, ಎರಡೂ ಶಿಲ್ಪಗಳ ಹೆಚ್ಚಿನ ಭಾಗಗಳು ಮಾಸಿ ಹೋಗಿರುವುದರಿಂದ ಹೆಚ್ಚಿನ ವಿವರಗಳು ಕಾಣಿಸದೇ ಹೋದರೂ ಮೇಲುನೋಟಕ್ಕೆ ಈ ಶಿಲ್ಪವು ಮೊದಲಿನ ಶಿಲ್ಪದಂತೆ ಕಂಡುಬರುತ್ತದೆ.

ನಿಜವಾದ ದಂಪತಿ ಶಿಲ್ಪಗಳ ಕೆತ್ತನೆಯ ಸೌಂದರ್ಯವು ಕಂಡುಬರುವುದು ಮೂರನೆಯ ಗುಹಾಲಯದಲ್ಲಿ. ಸುಂದರವಾದ ವಿಭಿನ್ನವಾದ ಮತ್ತು ಮೊದಲಬಾರಿಗೆ ಗುಹಾಲಯದ ಬೋಧಿಗೆಗಳಲ್ಲಿ ಕೆತ್ತಲಾಗಿರುವ ಆಕರ್ಷಕವಾದ ಶಿಲ್ಪಗಳು ಇಲ್ಲಿನ ಗುಹಾಲಯದಲ್ಲಿ ಕಂಡುಬರುತ್ತವೆ. ಗುಹಾಲಯದ ಕಂಬವು ಛಾವಣಿಯನ್ನು ಸೇರುವಲ್ಲಿ ಮದನಿಕೆಗಳನ್ನು ರಚಿಸಲಾಗಿದ್ದು ಅಲ್ಲಿನ ಸ್ಥಳಾವಕಾಶದಲ್ಲಿ ನಿರ್ಮಿಸಲಾದ ಈ ಶಿಲ್ಪಗಳನ್ನು ಮದನಿಕೆ ಶಿಲ್ಪಗಳೆಂದು ಹೇಳಲಾಗುತ್ತದೆ.

'ಮೂರನೆಯ ಗುಹೆಯ ಸ್ತಂಭರಾಜಿಗಳ ಮೇಲೆ ಮದನಿಕೆ ವಿಗ್ರಹಗಳಿವೆ. ಅವು ಒಂಟಿ ವಿಗ್ರಹಗಳಲ್ಲ. ದೇವ–ದೇವಿಯರನ್ನು ಜೊತೆಯಾಗಿ ನಿಲ್ಲಿಸಿ ತೋರಿಸಿದ, ಸುಮಾರು ಮೂರಡಿ ಎತ್ತರದ ಶಿಲ್ಪಗಳು. ಒಂದೊಂದು ಕಂಬದ ಕಡೆಯಲ್ಲೂ ಅಂಥ ಎರಡು ಮೂರು ಮದನಿಕೆ ಗೊಂಬೆಗಳು ಸ್ತಂಭದಿಂದ ಮುಚ್ಚಿಗೆಗೆ ಆನಿಸಿ ನಿಂತಿವೆ.[೭೮] ಇಲ್ಲಿನ ದಂಪತಿ ಶಿಲ್ಪಗಳ ಕುರಿತಾಗಿ ಹೇಳುವುದಾದರೆ ಸುಂದರವಾದ ಶೃಂಗಾರ ಮತ್ತು ಲಾಲಿತ್ಯಪೂರ್ಣವಾದ ಕೆತ್ತನೆಯನ್ನು ಹೊಂದಿರುವ ಈ ಶಿಲ್ಪಗಳ ವಸ್ತು ವಿಭಿನ್ನ.

ಇಲ್ಲಿ ದೇವ–ದೇವತೆಯರಿದ್ದಾರೆ. ದಂಪತಿಗಳ ಶಿಲ್ಪದಲ್ಲಿ ಗಂಡು ಮತ್ತು ಹೆಣ್ಣು ಪರಸ್ಪರ ಹೆಗಲಿನ ಮೇಲೆ ಅಥವಾ ಸೊಂಟದ ಮೇಲೆ ಕೈಯಿಟ್ಟುಕೊಂಡು ಒಂದು ಕೈಯಿಂದ ಪ್ರಿಯಕರನ ಅಥವಾ ಪ್ರೇಯಸಿಯ ಸೊಂಟವನ್ನು ಬಳಸಿ ನಿಂತಿರುವ ಶಿಲ್ಪಗಳು. ಕೆಲವೆಡೆ ಒಂಟಿ ಶಿಲ್ಪಗಳನ್ನು ಕೆತ್ತಲಾಗಿದ್ದರೂ ದಂಪತಿ ಶಿಲ್ಪಗಳು ನಮ್ಮನ್ನು ಹೆಚ್ಚು ಆಕರ್ಷಿಸುತ್ತವೆ. ಇಲ್ಲಿನ ದಂಪತಿ ಶಿಲ್ಪಗಳ ಕೆತ್ತನೆಯಲ್ಲಿ ಲಾಲಿತ್ಯವಿದೆ, ಸಂಯೋಜನೆಯ ತಿಳುವಳಿಕೆಯಿದೆ. ಶೃಂಗಾರದ ಕಲ್ಪನೆಯಿದೆ. ಅದೆಲ್ಲಕ್ಕಿಂತ ಮುಖ್ಯವಾಗಿ ಸೌಂದರ್ಯವನ್ನು ರೇಖೆಗಳ ಲಾಲಿತ್ಯದ ಮೇಲೆ ಮತ್ತು ಉಬ್ಬುತಗ್ಗುಗಳ ಮೇಲೆ ಬೀಳುವ ನೆರಳುಬೆಳಕುಗಳ ಮುಖಾಂತರ ತೋರಿಸುವ ಕಲಾವಿದರ ಕಲ್ಪನೆಯಿದೆ. ಇದರಿಂದಾಗಿ ಈ ಶಿಲ್ಪಗಳು ಚಾಲುಕ್ಯ ಶಿಲ್ಪಕಲೆಯ ಹೆಗ್ಗುರುತುಗಳಾಗಿ ಉಳಿದುಬಿಡುತ್ತವೆ.

ಶಿಲ್ಪ –೪

ಮೂರನೆಯ ವೈಷ್ಣವ ಗುಹಾಲಯದಲ್ಲಿ ದಂಪತಿಗಳಿಬ್ಬರೂ ಮರದಡಿಯಲ್ಲಿ ನಿಂತಿದ್ದಾರೆ. ಇಲ್ಲಿ ಪುರುಷ ಮತ್ತು ಸ್ತ್ರೀಯರಿಬ್ಬರೂ ಕೈ ಹಿಡಿದುಕೊಂಡಿದ್ದಾರೆ. ಇಬ್ಬರೂ ಕಿರೀಟ

೭೮. ಮಾಲಿನಿ ಮಲ್ಯ (ಸಂ.) : ಡಾ. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ. ಪುಟ. ೧೫೮



ಮುಕುಟರಾಗಿದ್ದಾರೆ. ಹೆಣ್ಣಿನ ಕೈತುಂಬ ಬಳೆಗಳಿವೆ. ಆಕೆಯ ಅಗಲವಾದ ನಿತಂಬ, ಸಪೂರವಾದ ಕಟಿಪ್ರದೇಶ, ನೇರ ನಿಲುವು, ದಪ್ಪನಾದ ಸುಪುಷ್ಟ ತೊಡೆಗಳು, ದೊಡ್ಡ ಮುಖ, ಪುರುಷನ ನೇರ ನಿಲುವು, ದೃಢವಾದ ದೇಹಭಾಗಗಳು ಗಮನಾರ್ಹವಾಗಿವೆ.

ಸ್ತ್ರೀಪುರುಷರಿಬ್ಬರೂ ಮೈ ತುಂಬ ಆಭರಣಗಳನ್ನು ಹೊಂದಿದ್ದಾರೆ. ಸ್ತ್ರೀಯ ಎಡಗೈಯಲ್ಲಿ ಹೂಗೊಂಚಲಿದೆ. ಅಗಲವಾದ ಭುಜಗಳು, ತೆರೆದ ಎದೆ, ಉಬ್ಬಿದ ಸ್ತನ ಗಮನಸೆಳೆಯುತ್ತದೆ. ಸುಂದರವಾದ ಈ ಶಿಲ್ಪದಲ್ಲಿ ಶಿಲ್ಪಿಯು ಸಮತೋಲನವನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದಾನೆ. ಶಿಲ್ಪದ ಸೌಂದರ್ಯವನ್ನು ಇವರಿಬ್ಬರ ದೇಹ ಮತ್ತು ಮುಖಭಾವದ ಮೂಲಕ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ಶಿಲ್ಪ –೫

ಈ ಶಿಲ್ಪದಲ್ಲಿ ಸ್ತ್ರೀ–ಪುರುಷರ ಜೊತೆಯಲ್ಲಿ ಕೆಳಭಾಗದಲ್ಲಿ ಗಣಶಿಲ್ಪವೊಂದನ್ನು ಕೆತ್ತಲಾಗಿದೆ. ಪುರುಷನ ಕಾಲು ಗಣ ಶಿಲ್ಪದ ತಲೆಯ ಮೇಲಿದೆ, ಪುರುಷನ ತೊಡೆಯ ಮೇಲೆ ಸ್ತ್ರೀಯು ಕೈಯಾನಿಸಿ ಆಧರಿಸಿ ನಿಂತಿರುವುದು ಕುತೂಹಲಕಾರಿಯಾಗಿದೆ. ಆಕೆಯ ತೆಳ್ಳನೆಯ ದೇಹದ ಭಾರವನ್ನು ಪೂರ್ಣವಾಗಿ ಪುರುಷನ ಕಾಲಮೇಲೆ ಹಾಕಿರುವುದು ಕಂಡುಬರುತ್ತದೆ. ಪುರುಷ ಮತ್ತು ಸ್ತ್ರೀಯ ಮಧ್ಯದಲ್ಲಿ ತೆಳ್ಳನೆಯ ರೇಖೆಯೊಂದನ್ನು ಒಳ್ಳೆಯ ರೀತಿಯಲ್ಲಿ ಕೆತ್ತಲಾಗಿದ್ದು ಇದು ಪುರುಷನ ಮೈಮೇಲಿನ ಹೂವಿನ ಹಾರದಂತೆ ಕಾಣಿಸುತ್ತದೆ. ಈ ರೇಖೆಯು ಶಿಲ್ಪದಲ್ಲಿ ಸಮತೋಲನ ಸಾಧಿಸುವಲ್ಲಿ ಪರಿಣಾಮಕಾರಿಯಾಗಿದೆ.

ಶಿಲ್ಪ –೬

ಈ ಶಿಲ್ಪವು ಮೂರನೆಯ ವೈಷ್ಣವ ಗುಹಾಲಯದ ವೃಕ್ಷದ ನೆರಳಲ್ಲಿ ರಚಿಸಿದಂತೆ ನಿಂತಿರುವ ಈ ಶಿಲ್ಪದ ದೇಹವು ತೆಳ್ಳನೆಯದಾಗಿದ್ದು, ಮೊದಲೆರಡು ಶಿಲ್ಪಗಳಿಗಿಂತ ಭಿನ್ನವಾಗಿದೆ. ಬಹುಶಃ ಈ ಶಿಲ್ಪವನ್ನು ಕೆತ್ತಿದ ಶಿಲ್ಪಿಯು ಇಲ್ಲಿ ಪ್ರತ್ಯೇಕತೆಯನ್ನು ಕಾಯ್ದುಕೊಂಡಿರಬಹುದು. ಇಬ್ಬರೂ ಹಸನ್ಮುಖರಾಗಿದ್ದು ಸಮಾಲೋಚನೆಯಲ್ಲಿ ತೊಡಗಿರುವಂತೆ ಕೆತ್ತಲಾಗಿದೆ.

ಇಲ್ಲಿನ ಶಿಲ್ಪದಲ್ಲಿ ಸ್ತ್ರೀಯು ತನ್ನ ಕಾಲನ್ನು ಪುರುಷನ ಕಾಲುಗಳ ಮಧ್ಯದಲ್ಲಿ ತುರುಕಿದ್ದು ಅವನನ್ನು ಆಧರಿಸಿ ನಿಂತಿದ್ದಾಳೆ. ಪುರುಷನ ಬಲಭಾಗದಲ್ಲಿ ಕೆಳಗಿನ ಮೂಲೆಯಲ್ಲಿ ಕುಬ್ಜ (ಕತ್ತೆಯ ಮುಖ) ಶಿಲ್ಪವೊಂದು ಕುತೂಹಲದಿಂದ ನೋಡುತ್ತಿದೆ. ಸ್ತ್ರೀಯು ತನ್ನ ಮುಖವನ್ನು ಪುರುಷನ ವಕ್ಷಸ್ಥಲದತ್ತ ನೆಟ್ಟಿದ್ದಾಳೆ. ಆತನು ಶಾಂತವಾಗಿ ಆಕೆಯನ್ನು ತನ್ನ ಬಲಗೈಯಿಂದ ಆಧರಿಸಿದ್ದಾನೆ. ತೆಳ್ಳನೆಯ ದೇಹ ರಚನೆಯಲ್ಲಿ ಕೋಮಲತೆಯಿದೆ. ಹಿನ್ನೆಲೆಯಲ್ಲಿ ಅಲಂಕೃತವಾದ ಹೂಬಳ್ಳಿಗಳ ಕೆತ್ತನೆಯಿದೆ. ಮೊದಲು ನೋಡಿದ ಶಿಲ್ಪಗಳಿಗಿಂತ ಈ ಶಿಲ್ಪವು ಭಿನ್ನವಾಗಿದೆ.



ಶಿಲ್ಪ –೭

ಈ ಶಿಲ್ಪದಲ್ಲಿ ಸ್ತ್ರೀಯು ತನ್ನ ಒಂದು ಬಲಗೈಯನ್ನು ಸ್ತನವನ್ನು ಆಧರಿಸಿದ್ದಾಳೆ. ಪುರುಷನ ಕೈಯು ಆಕೆಯ ಸೊಂಟವನ್ನು ತಬ್ಬಿ ಹಿಡಿದಿದೆ. ಇಲ್ಲಿ ಶೃಂಗಾರದ ಲಾಲಿತ್ಯವನ್ನು ಕಾಣಬಹುದು. ಇಲ್ಲಿನ ಕೆತ್ತನೆಯಲ್ಲಿ ಆಭರಣಗಳ ಕೆತ್ತನೆ ಕಡಿಮೆಯಿದ್ದು ದೇಹದ ಮೈಮಾಟಕ್ಕೆ ಒತ್ತು ನೀಡಲಾಗಿದೆ. ಬಾದಾಮಿಯ ಮೂರನೆಯ ಗುಹಾಲಯದಲ್ಲಿ ಇಂತಹ ಹಲವಾರು ದಂಪತಿ ಶಿಲ್ಪಗಳಿದ್ದು ಪ್ರತಿಯೊಂದು ಶಿಲ್ಪವೂ ಇನ್ನೊಂದಕ್ಕಿಂತ ಭಿನ್ನವಾಗಿದೆ. ಕೆಲವೆಡೆ ಹಿನ್ನೆಲೆಯಲ್ಲಿ ಕುಬ್ಜಶಿಲ್ಪಗಳಿದ್ದರೆ ಕೆಲವೆಡೆ ಸಣ್ಣ ಗಾತ್ರದ ಸ್ತ್ರೀ ಶಿಲ್ಪಗಳಿವೆ. ಆದರೆ ಮುಖ್ಯ ಅಂಶವೆಂದರೆ, ಸ್ತ್ರೀ ಪುರುಷರ ದೇಹಸೌಂದರ್ಯದ ಕೆತ್ತನೆಗೆ ಮತ್ತು ಶೃಂಗಾರಸೌಂದರ್ಯದ ಅಭಿವ್ಯಕ್ತಿಗೆ ಗಮನ ನೀಡಲಾಗಿದೆ. ಹೆಚ್ಚಿನ ಎಲ್ಲ ಶಿಲ್ಪಗಳೂ ಆಭರಣಗಳಿಂದ ತುಂಬಿದ ದೇಹಸಿರಿಯಲ್ಲಿ ಕಂಗೊಳಿಸುತ್ತವೆ. ಇಲ್ಲಿ ಎಲ್ಲ ಕಡೆಯೂ ಒಂದು ಅಂಶವನ್ನು ಗಮನಿಸಬೇಕು.

ಎಲ್ಲಿಯೂ ಅತಿಯಾದ ಕೆತ್ತನೆಯಿಲ್ಲ. ಉದ್ರೇಕಕಾರಿ ರಚನೆಯಿಲ್ಲ. ದೇಹದ ರಚನೆಯಲ್ಲಿ ಪ್ರಮಾಣಬದ್ಧತೆಯಿದೆ. ಅಂಗಾಂಗಗಳ ಕೆತ್ತನೆಯಲ್ಲಿ ಸಮತೋಲನವಿದೆ. ಮುಖಭಾವನೆಯಲ್ಲಿ ಶಾಂತತೆಯಿದೆ. ಇದರಿಂದಾಗಿ ಈ ಶಿಲ್ಪಗಳು ಮಾದರಿ ದಂಪತಿ ಶಿಲ್ಪಗಳಾಗಿ ಮೂಡಿಬಂದಿವೆ. ಕೆಲವೆಡೆಗಳಲ್ಲಿ ಒಂಟಿ ಶಿಲ್ಪಗಳು ರಚಿತವಾಗಿದ್ದು ಇವು ಸಾಮಾನ್ಯವಾಗಿ ಸ್ತ್ರೀ ಶಿಲ್ಪಗಳು, ಇವುಗಳನ್ನು ಮದನಿಕೆಯರೆಂದು ಕರೆಯಲಾಗಿದ್ದು ಈ ಶಿಲ್ಪಗಳಲ್ಲಿ ಸ್ತ್ರೀದೇಹದ ಸೌಂದರ್ಯವನ್ನು, ಕೋಮಲತೆಯನ್ನು ವ್ಯಕ್ತಪಡಿಸಲಾಗಿದೆ. ಐಹೊಳೆಯ ದುರ್ಗಾ ದೇವಾಲಯದಲ್ಲಿ ಹಲವಾರು ದಂಪತಿ ಶಿಲ್ಪಗಳನ್ನು ಕಾಣಬಹುದು. ಆದರೆ ಇಲ್ಲಿ ಮದನಿಕೆಗಳನ್ನು ಕೆತ್ತಲಾಗಿಲ್ಲ, ಬದಲಾಗಿ ದೇವಾಲಯದ ಗೋಡೆಯ ಭಿತ್ತಿಯಲ್ಲಿ ಮತ್ತು ಕಂಬಗಳಲ್ಲಿ ಕೆತ್ತಲಾಗಿದೆ. ಇಲ್ಲಿನ ಶಿಲ್ಪಗಳ ರಚನೆಯು ಬಾದಾಮಿಯ ಗುಹಾಲಯದ ರಚನೆಗಳಿಗಿಂತ ಭಿನ್ನ. ಇಲ್ಲಿನ ಶಿಲ್ಪಗಳು ಹೆಚ್ಚು ಸರಳವೂ ನೇರವೂ ಆಗಿದ್ದು ದೇಹದ ಲಾಲಿತ್ಯ ಕಡಿಮೆ. ಆ ಕೊರತೆಯನ್ನು ದೇಹಸಿರಿಯ ಕೆತ್ತನೆಯಲ್ಲಿ ಅಭಿವ್ಯಕ್ತಿಸಲಾಗಿದೆ.

ಶಿಲ್ಪ –೮

ಐಹೊಳೆ ದುರ್ಗಾ ದೇವಾಲಯ ಕಂಬದ ಮೇಲಿರುವ ದಂಪತಿ ಶಿಲ್ಪವೊಂದರಲ್ಲಿ ಸ್ತ್ರೀ–ಪುರುಷ ಶಿಲ್ಪಗಳ ಕೆತ್ತನೆಯಿದೆ. ಸ್ತ್ರೀಯು ತನ್ನ ಬಲಗಾಲನ್ನು ಹಿಂದಕ್ಕಿಟ್ಟು ಎಡಗಾಲಿನ ಮೇಲೆ ಬಲ ಹಾಕಿ ತನ್ನ ಕೈಗಳಿಂದ ಪುರುಷನ ಕುತ್ತಿಗೆಯನ್ನು ಆಧರಿಸಿದ್ದಾಳೆ. ಪುರುಷನು ತನ್ನನ್ನು ಆಕೆಗೆ ಸಮರ್ಪಿಸಿಕೊಂಡಂತೆ ನಿಂತಿದ್ದಾನೆ. ದೇಹದ ಮೇಲೆ ತೆಳುವಾದ ಬಟ್ಟೆ ಇದ್ದಂತೆ ಕಾಣುತ್ತದೆ. ಬಹುಶಃ ಪಾರದರ್ಶಕವಾದ ಉಡುಗೆಯನ್ನು ತೊಟ್ಟಿರಬಹುದು. ಇಬ್ಬರೂ ಕಿರೀಟಧಾರಿಗಳು. ಮೈಯಲ್ಲಿ ಆಭರಣಗಳ ಕೆತ್ತನೆ ಕಡಿಮೆ ಇದ್ದು ದೇಹಸಿರಿಯ ಸೊಗಸನ್ನು



ಇಲ್ಲಿ ತೋರಿಸಲಾಗಿದೆ. ಉನ್ಮಾದಕತೆಗೆ ಒತ್ತು ನೀಡಿ ಈ ಶಿಲ್ಪವನ್ನು ರಚಿಸಿದಂತೆ ಕಂಡುಬರುತ್ತದೆ. ಹಿನ್ನೆಲೆಯಲ್ಲಿ ಮರದ ಬಾಗಿದ ಚಿತ್ರಣವಿದೆ. ಸುರುಳಿ ಸುರುಳಿಯಾಗಿ ಕೆತ್ತಲಾದ ಹೂವುಗಳು ಮತ್ತು ಎಲೆಗಳ ಚಿತ್ರಣ ಗಮನ ಸೆಳೆಯುವಂತಿದೆ. ರೇಖಾಲಾಲಿತ್ಯದ ಸೊಬಗು ಇಲ್ಲಿ ಮೂಡಿಬಂದಿದೆ. ಇಲ್ಲಿನ ದಂಪತಿಗಳ ಶಿಲ್ಪದಲ್ಲಿನ ಮುಖಗಳಲ್ಲಿ ಮಾದಕತೆ ಕಂಡುಬರುತ್ತದೆ.

ಶಿಲ್ಪ –೯

ದುರ್ಗಾ ದೇವಾಲಯದ ಈ ಶಿಲ್ಪದಲ್ಲಿ ದಂಪತಿಗಳು ವೃಕ್ಷದ ನೆರಳನ್ನು ಆಶ್ರಯಿಸಿದ್ದಾರೆ. ಪುರುಷನು ಸ್ತ್ರೀ ದೇಹವನ್ನು ತೋಳಿನಲ್ಲಿ ಬಳಸಿ ಹಿಡಿದಿದ್ದಾನೆ. ಆತನ ಕೈಯಲ್ಲಿ ಫಲವೊಂದಿದೆ. ಆಕೆಯ ಉಬ್ಬಿದ ಎದೆ, ಬಾಗಿದ ದೇಹ, ಕಾಲುಗಳು, ಪಾರದರ್ಶಕವಾದ ಉಡುಗೆ, ಮಿತವಾದ ಆಭರಣಗಳು, ತಲೆಯಲ್ಲಿ ಅಲಂಕಾರಿಕ ಹಾರಗಳಿಂದ ಭದ್ರಪಡಿಸಿದ ಆಕೆಯ ಮುಡಿ ಇತ್ಯಾದಿಗಳು ಸುಂದರವಾಗಿ ಮೂಡಿಬಂದಿವೆ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ ಸ್ತ್ರೀ–ಪುರುಷರ ಮುಖಭಾವ; ಇಲ್ಲಿ ಪುರುಷನ ಮುಖದಲ್ಲಿ ಯಾವುದೇ ಭಾವನೆಗಳು ಕಂಡುಬರುವುದಿಲ್ಲ, ಸ್ತ್ರೀಯು ಅನ್ಯಮನಸ್ಕಳಾಗಿರುವಂತೆ ಕಂಡುಬರುತ್ತದೆ. ಅದಕ್ಕೆ ಪೂರಕವಾಗಿ ಆಕೆಯು ತನ್ನ ಎಡಗೈಯಿಂದ ತನ್ನ ತಲೆಕೂದಲನ್ನು ಹಿಡಿದಿರುವಂತೆ ಕೆತ್ತಿದ್ದು ಆಕೆಯ ನಿಂತ ಭಂಗಿ ಇದಕ್ಕೆ ಪೂರಕವಾಗಿ ಮೂಡಿಬಂದಿದೆ.

ಶಿಲ್ಪ –೧೦

ದುರ್ಗಾದೇವಾಲಯದ ಮುಖಮಂಟಪದ ಎಡಭಾಗದ ಕಂಬದಲ್ಲಿ ರಚಿತವಾದ ಶಿಲ್ಪ ವೃಕ್ಷಗಳ ಕೆಳಗೆ ನಿಂತಿರುವಂತಿದ್ದು, ಇಂತಹ ಹಲವಾರು ಶಿಲ್ಪಗಳು ಇಲ್ಲಿದ್ದು, ಪ್ರತಿಯೊಂದು ಶಿಲ್ಪವೂ ವಿಭಿನ್ನ ರೀತಿಯ ಅಭಿವ್ಯಕ್ತಿಯನ್ನು ಹೊಂದಿದೆ. ಹೆಚ್ಚಿನ ಶಿಲ್ಪಗಳು ಭಗ್ನ ಶಿಲ್ಪಗಳಾಗಿದ್ದು ಮುಖದ ಭಾಗವು ಭಾಗಶಃ ಭಗ್ನ ಶಿಲ್ಪಗಳು. ಆದರೂ ಇಲ್ಲಿನ ಶಿಲ್ಪಗಳಲ್ಲಿ ಕೆತ್ತನೆಯ ಸೊಬಗನ್ನು, ದೇಹಸೌಂದರ್ಯದ ಮಾಟವನ್ನು, ಉದ್ರಿಕ್ತ, ಉನ್ಮಾದ ಭಾವುಕತೆಯನ್ನು, ಶೃಂಗಾರದ ಸವಿಯನ್ನು ಸವಿಯುವುದಕ್ಕೆ ತೊಂದರೆಯಾಗುವುದಿಲ್ಲ. ಕುತೂಹಲವನ್ನುಂಟುಮಾಡುವ ಈ ಶಿಲ್ಪಗಳು ಇಲ್ಲಿನ ದೇವಾಲಯದ ದೇವತೆಗಳ ಶಿಲ್ಪಗಳ ಜೊತೆಗೆ ನೋಡುಗರಲ್ಲಿ ಕಲೆಯ ಆನಂದವನ್ನು ನೀಡುವಲ್ಲಿ ಯಶಸ್ವಿಯಾಗಿವೆ.

ಐಹೊಳೆ ಲಾಡ್‌ಖಾನ್ ದೇವಾಲಯದಲ್ಲಿ ಹೇರಳವಾಗಿ ದಂಪತಿ ಶಿಲ್ಪಗಳು ಕೆತ್ತಲ್ಪಟ್ಟಿವೆ. ಇವುಗಳಲ್ಲಿ ಕೆಲವೊಂದು ಶಿಲ್ಪಗಳು ಕುತೂಹಲವನ್ನುಂಟು ಮಾಡುತ್ತವೆ. ಇಲ್ಲಿನ ಶಿಲ್ಪಗಳು ದುರ್ಗಾದೇವಾಲಯದ ಶಿಲ್ಪಗಳಿಗಿಂತ ಭಿನ್ನ. ಇಲ್ಲಿನ ಶಿಲ್ಪಗಳು ಬಹಳಷ್ಟು ಭಗ್ನಗೊಂಡಿದ್ದರೂ ಕೆಲವು ಶಿಲ್ಪಗಳು ತಮ್ಮ ಕುತೂಹಲವನ್ನು ಕಾಯ್ದುಕೊಂಡಿವೆ. ಇಲ್ಲಿನ ಕಂಬದಲ್ಲಿ ಕೆತ್ತಲಾಗಿರುವ ಒಂದು ಶಿಲ್ಪದಲ್ಲಿ ದಂಪತಿಗಳು ತಮ್ಮ ವಿಶಿಷ್ಟ ಮುಖದಿಂದ ಗಮನಸೆಳೆಯುತ್ತಾರೆ.

ಶಿಲ್ಪ –೧೧

'ಲಾಡ್‌ಖಾನ್ ದೇವಾಲಯ ಮುಖಮಂಟಪದ ಒಂದು ಮಿಥುನ ಶಿಲ್ಪದಲ್ಲಿ ಕಾಣಿಸುವ ಪ್ರಣಯಿನಿಯಾದವಳು ಕತ್ತೆಯ ಮುಖವಾದ ಸ್ತ್ರೀ. ಇದನ್ನು ಕಾಣುವಾಗ ಈ ಮಿಥುನ ಶಿಲ್ಪಗಳಿಗೂ ಕೂಡಾ ಏನಾದರೊಂದು ಪೌರಾಣಿಕ ಹಿನ್ನೆಲೆ ಇದ್ದಿರಬಹುದೇನು ಎಂಬ ಸಂಶಯ ಕಾಡುತ್ತದೆ.[೭೯] ಈ ಶಿಲ್ಪದಲ್ಲಿ ದಂಪತಿಗಳು ವೃಕ್ಷವೊಂದರ ಕೆಳಗೆ ನಿಂತಿದ್ದಾರೆ. ಸ್ತ್ರೀಯ ಮುಖವು ಕತ್ತೆಯದು (ಗಾರ್ದಭ) ದೇಹವು ಸ್ತ್ರೀಯದು. ಸುಪುಷ್ಟವಾದ ದೇಹ ಸಿರಿಯನ್ನು ಪ್ರದರ್ಶಿಸುತ್ತಿರುವ ಆಕೆಯ ಪಕ್ಕದಲ್ಲಿ ಪುರುಷನೊಬ್ಬನಿದ್ದಾನೆ. ಅವನು ತನ್ನ ಎಡಗೈಯನ್ನು ಗಿಡದ ಮೇಲಿನತ್ತ ಎತ್ತಿದ್ದಾನೆ, ಬಲಗೈಯು ಸೊಂಟದ ಭಾಗದಲ್ಲಿದ್ದು ಮುಂಗೈಯು ನಾಶವಾಗಿದೆ. ಸ್ತ್ರೀ–ಪುರುಷರಿಬ್ಬರೂ ಇಲ್ಲಿ ನಗ್ನರಿದ್ದಂತೆ ಕಂಡುಬರುತ್ತದೆ.

ಇಲ್ಲಿ ಪುರುಷನ ತಲೆಯ ಕೂದಲನ್ನು ನೀಟಾಗಿ ಬಾಚಿ ಹಿಂದಕ್ಕೆ ಕಟ್ಟಲಾಗಿದೆ. ಸ್ತ್ರೀ ಶಿಲ್ಪದ ಒಂದು ಸ್ತನವು ಭಗ್ನಗೊಂಡಿದೆ. ಸ್ತ್ರೀ ಶಿಲ್ಪದ ಸೊಂಟದ ಮೇಲಿನ ದಪ್ಪನಾದ ಪಟ್ಟಿಯನ್ನು ಗಮನಿಸಿದರೆ ಈ ಶಿಲ್ಪವು ತೆಳುವಾದ ಪಾರದರ್ಶಕವಾದ ಬಟ್ಟೆಯನ್ನು ಹೊಂದಿದ್ದಿರಬಹುದೆನ್ನಿಸುತ್ತದೆ. ಇಲ್ಲಿನ ಶಿಲ್ಪದಲ್ಲಿ ಶೃಂಗಾರವಾಗಲಿ, ದೇಹದಲ್ಲಿ ಲಾಲಿತ್ಯವಾಗಲಿ ಇಲ್ಲ, ಪುರುಷನ ಶಿಲ್ಪವು ದೇಹರಚನೆಯಲ್ಲಿ ಸ್ತ್ರೀ ಶಿಲ್ಪಕ್ಕಿಂತ ಸಣ್ಣಾಗಿದ್ದು ಕಂಡುಬರುತ್ತದೆ. ಆಕೆಯ ಅಗಲವಾದ ಕಟಿ ಕೆಳಗಿನ ಪ್ರದೇಶ, ದಪ್ಪನಾದ ತೊಡೆಗಳು, ಸಪೂರವಾದ ಸೊಂಟ ಇತ್ಯಾದಿಗಳು ಗಮನಸೆಳೆದಂತೆ ಆಕೆಯ ಕತ್ತೆಯ ಮುಖದ ತಲೆಯಲ್ಲಿನ ಕೂದಲನ್ನು ಒರಟಾಗಿ ಬೆನ್ನ ಹಿಂದೆ ಇಳಿಬಿಟ್ಟಿದ್ದು ಆಶ್ಚರ್ಯವನ್ನುಂಟುಮಾಡುತ್ತದೆ.

ಶಿಲ್ಪ –೧೨

ಐಹೊಳೆಯ ದುರ್ಗಾ ದೇವಾಲಯದ ಎಡಭಾಗದ ಬಲಬದಿಯ ಶಿಲ್ಪದಲ್ಲಿ ಸ್ತ್ರೀಯು ಪುರುಷನನ್ನು ತಬ್ಬಿ ಹಿಡಿದಿದ್ದು ನಮ್ಮೆಡೆಗೆ ಬೆನ್ನು ಮಾಡುವಂತೆ ಮುಕ್ಕಾಲು ಭಾಗ ಬದಿಗೆ ತಿರುಗಿಕೊಂಡಿದ್ದಾಳೆ. ಗಂಡು ಆಕೆಯ ಸೊಂಟವನ್ನು ಎಡಗೈಯಿಂದ ಬಳಸಿ ತಬ್ಬಿ ಹಿಡಿದಿದ್ದಾನೆ. ಆಕೆಯು ಆತನಿಗೆ ಜೋತುಬಿದ್ದಿದ್ದು ಆಕೆಯ ಸ್ತನಗಳು ಅವನ ವಕ್ಷಸ್ಥಲವನ್ನು ಒತ್ತುತ್ತಿವೆ ಎಂಬಂತೆ ಕೆತ್ತಲಾಗಿದೆ. ಪುರುಷನ ಮುಖದಲ್ಲಿ ತುಂಟತನವಿದ್ದರೆ ಅವಳ ಮುಖದಲ್ಲಿ ಲಜ್ಜೆ ತುಂಬಿಕೊಂಡಿದೆ. ಅವಳ ಬೆನ್ನಿನ ಭಾಗ ನಗ್ನವಾಗಿರುವುದನ್ನು ಗಮನಿಸಬಹುದು. ಬಟ್ಟೆಯು ಸೊಂಟದಿಂದ ಕೆಳಜಾರುತ್ತಿರುವಂತೆ ಇಲ್ಲಿ ತೋರಿಸಲಾಗಿದೆ. ಶಿಲ್ಪದ ಕೆಳಗಿನ ಅರ್ಧಭಾಗ ಭಗ್ನಗೊಂಡಿದ್ದರೂ ಮೇಲಿನ ಅರ್ಧಭಾಗದಲ್ಲಿ ಶಿಲ್ಪದ ಎಲ್ಲ ಸೂಕ್ಷ್ಮತೆಗಳನ್ನೂ ನೋಡಬಹುದಾಗಿದೆ. ಆಕೆಯ ಕಿವಿಯಲ್ಲಿ ದೊಡ್ಡಗಾತ್ರದ ಗಾಲಿಯಂತಹ ಎರಡು ಸುತ್ತಿನ ಕಿವಿಯೋಲೆಗಳು, ಬೆನ್ನಿನ

೭೯. ಮಾಲಿನಿ ಮಲ್ಯ (ಸಂ.) : ಡಾ. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ. ಪುಟ. ೧೫೮


ಮೇಲೆ ಇಳಿಬಿದ್ದಿರುವ ಕೂದಲುಗಳ ಕೆತ್ತನೆಯನ್ನು ಗಮನಿಸಬಹುದು. ಸುಂದರವಾಗಿ ಆಕರ್ಷಕವಾಗಿ ಕೆತ್ತಲಾಗಿರುವ ಈ ಶಿಲ್ಪದಲ್ಲಿ ಶೃಂಗಾರದ ಪರಿಕಲ್ಪನೆಯನ್ನು ಚೆನ್ನಾಗಿ ಅಭಿವ್ಯಕ್ತಿಸಲಾಗಿದೆ.

ಶಿಲ್ಪ –೧೩

ಐಹೊಳೆ ಲಾಡ್‌ಖಾನ್ ದೇವಾಲಯ ಕಂಬದ ಶಿಲ್ಪದಲ್ಲಿ ಸ್ತ್ರೀ–ಪುರುಷರಿಬ್ಬರೂ ವೃಕ್ಷದ ನೆರಳಿನಲ್ಲಿ ನಿಂತಿದ್ದು ತಮ್ಮ ಪ್ರೀತಿಯನ್ನು ನೋಡುಗರಿಗೆ ತೋರಿಸುತ್ತಿದ್ದಾರೆಂಬಂತೆ ಚಿತ್ರಿಸಲಾಗಿದೆ. ಛಾಯಾಚಿತ್ರಗ್ರಹಣಕ್ಕೆ ನಿಂತಿರುವಂತೆ ಇವರಿಬ್ಬರೂ ಹೆಮ್ಮೆಯಿಂದ ನಿಂತಿರುವಂತೆ ಕಂಡುಬರುತ್ತದೆ. ಆಕೆಯ ಉಬ್ಬಿದ ಸ್ತನಗಳು, ಅಗಲವಾದ ಎದೆಭಾಗ, ದಪ್ಪನಾದ ನಿತಂಬಗಳು, ಪುರುಷನ ಅಗಲ ತೋಳುಗಳು, ದೃಢನಿಲುವು, ನೇರ ನೋಟ ಗಮನಸೆಳೆಯುವಂತಿವೆ. ಹಿಂದೆ ಇರುವ ಮರದ ಕೆತ್ತನೆಯಲ್ಲಿ ಸುರುಳಿ ವಿನ್ಯಾಸದ ಬದಲಾಗಿ ನೈಜ ಕೆತ್ತನೆಯ ಕಲಾತ್ಮಕತೆ ಕಂಡುಬರುತ್ತದೆ. ಕೆಲಭಾಗವು ಭಗ್ನಗೊಂಡಿದ್ದು ಶಿಲ್ಪದ ಒಟ್ಟು ನೋಟಕ್ಕೆ ಕೊರತೆಯೆನ್ನಿಸಿದರೂ ಸೌಂದರ್ಯದ ಸಮತೋಲನವನ್ನು ಇಲ್ಲಿ ತೋರಿಸಲಾಗಿದೆ. ಈ ಶಿಲ್ಪದ ಹಿಂದೆ ಎರಡು ವೃಕ್ಷಗಳನ್ನು ಕೆತ್ತಲಾಗಿರುವುದು ಗಮನಾರ್ಹ.

ಶಿಲ್ಪ –೧೪

ಐಹೊಳೆ ಹುಚ್ಚಪ್ಪಯ್ಯನ ಮಠದ ಗುಡಿಯಲ್ಲಿ ಕೆಲವು ದಂಪತಿ ಶಿಲ್ಪಗಳಿವೆ. ಇಲ್ಲಿಯ ಕೆತ್ತನೆಗಳು ದುರ್ಗಾಗುಡಿಯ ಕೆತ್ತನೆಗಳ ಪುನರಾವರ್ತನೆಯಂತಿವೆ. ಆದರೆ ಕೆತ್ತನೆಯಲ್ಲಿ ವೈವಿಧ್ಯಮಯವಾಗಿವೆ. ಅಲ್ಲದೆ ಇಲ್ಲಿನ ಕೆತ್ತನೆಯಲ್ಲಿ ದುರ್ಗದ ಗುಡಿಯ ಕೆತ್ತನೆಯಲ್ಲಿ ಕಂಡುಬರುವ ಲಾಲಿತ್ಯ ಮತ್ತು ದೇಹದ ಸೌಂದರ್ಯದ ಕೆತ್ತನೆಯ ನಾಜೂಕುತನ ಕಂಡುಬರುವುದಿಲ್ಲ. ಇಲ್ಲಿನ ಒಂದು ಶಿಲ್ಪದಲ್ಲಿ ಪುರುಷನು ಸ್ತ್ರೀಯ ಎಡಗೈ ಹಿಡಿದು ಬಳೆಯನ್ನು ಹಾಕುತ್ತಿರುವುದನ್ನು ಗಮನಿಸಬಹುದು. ಆಕೆಯು ತನ್ನ ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಮುಖದಲ್ಲಿ ಲಜ್ಜೆಗೆಟ್ಟ ಮತ್ತು ನೋಡುಗರನ್ನು ಕೆಣಕುವ ಭಾವನೆಯಿದೆ. ಮಂಗವೊಂದನ್ನು ಹಿನ್ನೆಲೆಯಲ್ಲಿ ಕೆತ್ತಲಾಗಿದ್ದು ಶಿಲ್ಪದ ಕೆಳಗಿನ ಭಾಗದಲ್ಲಿದ್ದು ಇದು ಇವರಿಂದ ಏನೊ ಕಿತ್ತುಕೊಂಡು ಓಡುತ್ತಿರುವಂತೆ ತೋರಿಸಲಾಗಿದೆ. ಹಿನ್ನೆಲೆಯಲ್ಲಿ ವೃಕ್ಷದ ಚಿತ್ರಣವಿಲ್ಲದೆ ಖಾಲಿಯಾಗಿದೆ. ಇಬ್ಬರೂ ನಿಂತ ನಿಲುವಿನಲ್ಲಿ ಗಾಂಭೀರ್ಯವಿಲ್ಲ. ತೆಳುವಾದ ದೇಹರಚನೆಯ ಈ ಶಿಲ್ಪದಲ್ಲಿ ಆಭರಣಗಳ ಕೆತ್ತನೆಯೂ ಕಡಿಮೆ ಇದೆ, ನಗ್ನತೆಯ ಪ್ರದರ್ಶನ ಈ ಶಿಲ್ಪದ ಉದ್ದೇಶವಿರಬಹುದು. ಇನ್ನೊಂದು ಶಿಲ್ಪದಲ್ಲಿ ಸ್ತ್ರೀಯ ಮುಖವು ಕತ್ತೆಯದಾಗಿದ್ದು ದೇಹ ಸ್ತ್ರೀಯದು. ಪುರುಷನ ಮುಖದಲ್ಲಿಯೂ ವಿಕಾರತೆಯಿದೆ. ಪುರುಷನ ಬಲಗೈಯು ಆತನ ತೊಡೆಭಾಗದಲ್ಲಿದ್ದು ಸ್ತ್ರೀಯು ಆತನ ಕೈಯನ್ನು ಹಿಡಿದು ಜಗ್ಗುತ್ತಿರುವಂತೆ ತೋರಿಸಲಾಗಿದೆ. ಸ್ತ್ರೀಯು ತನ್ನ ಎಡಗೈಯನ್ನು ಪುರುಷನ ಕತ್ತಿನ



ಹಿಂಭಾಗದಲ್ಲಿ ಎಡತೋಳಿನಲ್ಲಿ ಹಾಕಿ ಬಲಗೈಯಿಂದ ಆತನನ್ನು ಜಗ್ಗುತ್ತಿರುವಂತೆ ಸ್ಪಷ್ಟವಾಗಿ ತೋರಿಸಲಾಗಿದೆ. ಸ್ತ್ರೀ ಶಿಲ್ಪದ ಸ್ತನಗಳು ಅಗತ್ಯಕ್ಕಿಂತ ಹೆಚ್ಚಾಗಿ ದೊಡ್ಡದಾಗಿದ್ದು, ದೇಹವು ತೆಳ್ಳಗಾಗಿದೆ. ಆಕೆಯು ಸ್ತನಭಾರದಿಂದ ತೂಗುತ್ತಿದ್ದಾಳೆನ್ನಿಸುವಂತಿದೆ. ಶಿಲ್ಪದಲ್ಲಿ ಕಲಾತ್ಮಕ ಅಂಶಗಳು ಕಡಿಮೆ. ಹಿನ್ನೆಲೆಯಲ್ಲಿ ಮರದ ಚಿತ್ರಣವಿದೆ. ಅನ್ಯ ಗ್ರಹದ ಜೀವಿಗಳಂತೆ ಕಂಡುಬರುವ ಈ ದಂಪತಿಗಳ ಕೆತ್ತನೆ ಕುತೂಹಲಕಾರಿಯಾಗಿದೆ.

ಶಿಲ್ಪ –೧೫

ಐಹೊಳೆ ಲಾಡ್‌ಖಾನ್ ದೇವಾಲಯದ ಈ ಶಿಲ್ಪದಲ್ಲಿ ಪುರುಷನು ಸ್ತ್ರೀಯ ಎಡಗಾಲನ್ನು ತನ್ನತ್ತ ಎಳೆಯುತ್ತಿದ್ದಾನೆ. ಪುರುಷನು ಅವಳನ್ನು ಆಧರಿಸಿ ತಬ್ಬಿ ಹಿಡಿದಿದ್ದಾನೆ. ಆಕೆಯ ಸ್ತನಗಳು ಜೋತುಬಿದ್ದಿವೆ. ಉನ್ಮಾದದ ಪರಾಕಾಷ್ಠೆಯಲ್ಲಿರುವಂತೆ ಕೆತ್ತಲಾಗಿದೆ. ಬಾದಾಮಿಯ ಮೂರನೆಯ ಗುಹೆಯಲ್ಲಿಯೂ ಇಂತಹ ಕೆತ್ತನೆಯಿದ್ದರೂ ಅಲ್ಲಿ ಶೃಂಗಾರದ ಅಭಿವ್ಯಕ್ತಿ ಇದ್ದರೆ ಇಲ್ಲಿ ಮೈಥುನ ಚಿತ್ರಣವಿದೆ. ಆಕೆಯ ಸೊಂಟದಲ್ಲಿನ ಬಟ್ಟೆಯ ಚುಂಗು ನಿತಂಬಗಳ ಮಧ್ಯದಿಂದ ಇಳಿಬಿದ್ದಿದೆ. ಹಿನ್ನೆಲೆಯಲ್ಲಿ ಸಣ್ಣ ಸ್ತ್ರೀ ಶಿಲ್ಪವೊಂದಿದ್ದು ಸೇವಕಿಯು ಇವರಿಬ್ಬರ ಕಾಮದಾಟವನ್ನು ನೋಡುತ್ತಿದ್ದಾಳೆ. ಈಕೆಯು ಮುಖಕ್ಕೆ ಏನನ್ನೋ ಅಡ್ಡ ಹಿಡಿದಿರುವಂತೆ ಕಂಡುಬರುತ್ತಿದ್ದು ನಾಚಿಕೆಯಿಂದ ಮುಖ ಮರೆ ಮಾಡುವಂತೆ ತೋರಿಸಿರುವುದು ಶಿಲ್ಪಿಯ ಜಾಣ್ಮೆ ಇರಬಹುದು.

ಶಿಲ್ಪ –೧೬

ಐಹೊಳೆ ಹುಚ್ಚಪ್ಪಯ್ಯನ ಮಠದಲ್ಲಿ ಮೇಲಿನವುಗಳಿಗಿಂತ ಭಿನ್ನವಾದ ಶಿಲ್ಪವೊಂದು ಅಲ್ಲಿನ ಕಂಬದಲ್ಲಿ ಕಂಡುಬರುತ್ತಿದ್ದು, ಇಲ್ಲಿ ಸ್ತ್ರೀಯು ತೆಳುವಾದ ಬಟ್ಟೆ ತೊಟ್ಟಿದ್ದಾಳೆ. ಅವಳ ತೆಳುವಾದ ದಾವಣಿಯಂತಹ ಬಟ್ಟೆಯ ನೆರಿಗೆಗಳು ಆಕೆಯ ಎಡಪಕ್ಕಕ್ಕೆ ಜಾರಿದ್ದು ತೊಡೆಭಾಗದ ಉಬ್ಬುಗಳ ದರ್ಶನಕ್ಕೆ ಅವಕಾಶವಿದೆ. ಆಕೆಯು ತನ್ನ ಎಡಗೈಯನ್ನು ಸೊಂಟದ ಮೇಲಿರಿಸಿಕೊಂಡರೆ ಬಲಗೈಯನ್ನು ಪುರುಷನು ತನ್ನ ಬಲಗೈಯಿಂದ ಹಿಡಿದಿದ್ದು ಎಡಗೈಯಿಂದ ಆಕೆಯ ತೋಳನ್ನು ಬಳಸಿದ್ದಾನೆ. ಇಲ್ಲಿ ಇನ್ನೊಂದು ಗಮನ ಸೆಳೆಯುವುದು ಪುರುಷನು ತಲೆಕೂದಲನ್ನು ಇಳಿಬಿಟ್ಟಿದ್ದು ಅದು ಹೆಗಲ ಮೇಲೆ ಹರಿದಾಡಿದೆ. ಸ್ತ್ರೀಯು ತನ್ನ ಕೂದಲನ್ನು ನಯವಾಗಿ ಬಾಚಿಕೊಂಡಿದ್ದಾಳೆ. ಆಕೆಯ ಕೂದಲೂ ಹಿಂಭಾಗದಲ್ಲಿ ಇಳಿಬಿದ್ದಿದೆ. ಇಲ್ಲಿ ಸ್ತ್ರೀದೇಹದ ಕಲಾತ್ಮಕವಾದ ಕೆತ್ತನೆಗೆ ಹೆಚ್ಚು ಗಮನ ನೀಡಿರುವುದು ಕಂಡುಬರುತ್ತದೆ.

ಆಕೆಯ ಹೊಟ್ಟೆ ಮತ್ತು ಹೊಕ್ಕುಳ ಭಾಗದಲ್ಲಿನ ಉಬ್ಬು, ತೆರೆದ ಎದೆ, ಉಬ್ಬಿದ ಸ್ತನಗಳು, ಹದವಾದ ಕಟಿಪ್ರದೇಶ, ನೀಳ ತೊಡೆಗಳು ಆಕರ್ಷಕವಾಗಿವೆ. ದ್ವಿಮಾನದಲ್ಲಿರುವ ಈ ಶಿಲ್ಪವು ತ್ರಿಮಾನದ ಭಾವನೆಯನ್ನು ನೀಡುತ್ತಿದೆ. ಇಲ್ಲಿ ಇಂತಹ ಇನ್ನೂ ಹಲವಾರು ಶಿಲ್ಪಗಳಿದ್ದು, ಅವು ಒಂದಕ್ಕಿಂತ ಒಂದು ಭಿನ್ನವಾಗಿರುವುದು ಕಂಡುಬರುತ್ತದೆ.

ಶಿಲ್ಪ -೧೭

ಐಹೊಳೆಯ ವಿರೂಪಾಕ್ಷ ಗುಡಿಯಲ್ಲಿಯೂ ಕೆಲವಾರು ದಂಪತಿ ಶಿಲ್ಪಗಳಿವೆ. ಈ ಶಿಲ್ಪಗಳು ಕಂಬಗಳಲ್ಲಿ ಕೆತ್ತಲಾಗಿರುವ ಶಿಲ್ಪಗಳಾಗಿದ್ದು ಸುಮಾರು ನಾಲ್ಕಡಿ ಅಳತೆಯ ಶಿಲ್ಪಗಳು. ಇಲ್ಲಿನ ಕಂಬವೊಂದರ ದಂಪತಿ ಶಿಲ್ಪದಲ್ಲಿ ಪುರುಷನು ಸ್ತ್ರೀಯ ಸೊಂಟಬಳಸಿ ಹಿಡಿದಿರುವ ಕೆತ್ತನೆಯಿದ್ದು ಇದು ಮೊದಲು ನೋಡಿದ ಶಿಲ್ಪಗಳಿಗಿಂತ ಭಿನ್ನವಾದ ಕೆತ್ತನೆ, ಗಾಂಭೀರ್ಯವನ್ನು ತೋರುತ್ತದೆ.

ಪುರುಷನು ತಲೆಗೆ ಕಿರೀಟದ ಬದಲಾಗಿ ಪೇಟವೊಂದನ್ನು ಸುತ್ತಿಕೊಂಡಂತಿದೆ. ಆತನ ಸೊಂಟದ ಸುತ್ತ ದಪ್ಪನಾದ ಉಡುಗೆಯಿದೆ. ದೇಹದಲ್ಲಿ ಎಲ್ಲಿಯೂ ಆಭರಣಗಳಿಲ್ಲ, ಅವನ ಎದೆ ವಿಶಾಲವಾಗಿದ್ದು ಹದವಾದ ಮೈಕಟ್ಟಿನಿಂದ ಕೂಡಿದೆ. ಇವನ ಬಲಗೈಯಲ್ಲಿ ಹಣ್ಣಿನ ಪಾತ್ರೆ ಹಿಡಿದಂತೆ ಕಾಣಬಹುದು. ಸ್ತ್ರೀಯು ಆತನನ್ನು ಬಳಸಿ ನಿಂತಿದ್ದರೂ ನಾಚಿಕೆಯಿಂದ ಇರುವಂತಿದೆ. ಅವಳು ಎಡಗೈಯನ್ನು ನೇರ ಇಳಿಬಿಟ್ಟಿದ್ದು ಬಲಗೈಯನ್ನು ಅವನ ಹೆಗಲನ್ನು ಬಳಸಿಕೊಂಡಿದ್ದಾಳೆ.

ಇಲ್ಲಿನ ಸ್ತ್ರೀ ಶಿಲ್ಪದ ಕೆತ್ತನೆಯಲ್ಲಿ ಸ್ತನಗಳ ಕೆತ್ತನೆಯು ಸಹಜವೆಂಬಂತೆ ಮೂಡಿಬಂದಿರುವುದು ವಿಶೇಷ. ಆಕೆಯ ತಲೆಯ ಹಿಂಭಾಗದಲ್ಲಿ ಕೂದಲಿನ ಮುಡಿಯನ್ನು ದೊಡ್ಡ ವೃತ್ತಾಕಾರದಲ್ಲಿ ಕೆತ್ತಲಾಗಿದ್ದು ಆಕರ್ಷಕವಾಗಿದೆ. ಇನ್ನೊಂದು ಗಮನಾರ್ಹ ಅಂಶವೆಂದರೆ, ಇಲ್ಲಿ ಆಕೆಯ ಅಧೋವಸ್ತ್ರದ ಕೆತ್ತನೆ, ಇದು ಆಕರ್ಷಕ ಕಚ್ಚೆ ನೆರಿಗೆಯಿಂದ ಕೂಡಿದ್ದು ಚುಂಗು ಮಧ್ಯದಲ್ಲಿ ಇಳಿಬಿದ್ದಿದೆ. ಕೆತ್ತನೆಯಲ್ಲಿ ಸರಳತೆ ಇದೆ. ಈ ಶಿಲ್ಪವು ಸಾಮಾನ್ಯ ಲೌಕಿಕ ದಂಪತಿಗಳ ಶಿಲ್ಪದಂತಿದ್ದು ಮಿಥುನ ಶಿಲ್ಪಗಳ ಸಾಲಿನಲ್ಲಿ ಸೇರುವುದಿಲ್ಲ.

ಶಿಲ್ಪ -೧೮

ಐಹೊಳೆಯ ವಿರೂಪಾಕ್ಷ ದೇವಾಲಯದ ಕಂಬದಲ್ಲಿರುವ ಈ ಶಿಲ್ಪವು ದಂಪತಿ ಶಿಲ್ಪದಲ್ಲಿ ಸ್ತ್ರೀಯ ಮುಖವು ಕತ್ತೆಯದು ಮತ್ತು ಆಕೆಯನ್ನು ಬಳಸಿಕೊಂಡು ನಿಂತಿರುವ ವಿಚಿತ್ರ ಮನುಷ್ಯನಿದ್ದಾನೆ. ಈತನ ಮುಖವು ವಿಕಾರವಾಗಿದ್ದು ತೆಳ್ಳನೆಯ ಗಡ್ಡವಿದೆ. ತಲೆಯು ದೊಡ್ಡದಾಗಿದ್ದು ಕೂದಲನ್ನು ಬಾಚಿ ಸುರುಳಿಯಾಗಿ ಹೆಗಲಿನ ಮೇಲೆ ಇಳಿಬಿಟ್ಟಿದ್ದಾನೆ. ವಿಕಾರವಾಗಿ ನಗುತ್ತಿರುವಂತೆ ಆತನ ಮುಖವಿದೆ. ಇಲ್ಲಿ ಆತನ ದೇಹವು ದೈತ್ಯಾಕಾರವಾಗಿದ್ದು ಸ್ಥೂಲವಾಗಿದೆ. ಕಾಲಿನವರೆಗೆ ಬಟ್ಟೆ ತೊಟ್ಟುಕೊಂಡಿದ್ದಾನೆ. ಸೊಂಟದ ಸುತ್ತ ಪಟ್ಟಿ ಕಟ್ಟಿಕೊಂಡಿದ್ದಾನೆ. ಸ್ತ್ರೀಯು ಆತನ ಹೆಗಲು ಬಳಸಿ ನಿಂತುಕೊಂಡಿದ್ದು ಆಕೆಯ ಎಡಗೈ ಕೆಳಗೆ ಇಳಿಬಿಟ್ಟಿದ್ದಾಳೆ. ಹಿನ್ನೆಲೆಯಲ್ಲಿ ಸುರುಳಿವಿನ್ಯಾಸದ ಕೆತ್ತನೆಯಿದೆ. ಈ ತರಹದ ದಂಪತಿ ಶಿಲ್ಪವನ್ನು ಈ ಮೊದಲೇ ನೋಡಿದ್ದೇವಾದರೂ ಈ ಶಿಲ್ಪವು ಅವುಗಳಿಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ.



ಈ ಶಿಲ್ಪದ ರಚನೆಯ ಹಿನ್ನೆಲೆಯಲ್ಲಿ ಯಾವುದೇ ಪೌರಾಣಿಕ ಆಧಾರಗಳು ಕಂಡುಬರುವುದಿಲ್ಲವಾದರೂ ಈ ಶಿಲ್ಪದ ಪುನರಾವರ್ತನೆ ಕುತೂಹಲವನ್ನುಂಟು ಮಾಡುತ್ತದೆ. ಇಲ್ಲಿ ಇನ್ನೂ ಹಲವಾರು ದಂಪತಿ ಶಿಲ್ಪಗಳಿದ್ದು ಕಲಾತ್ಮಕವಾಗಿ ವಿಶೇಷ ಪರಿಣಾಮವನ್ನುಂಟು ಮಾಡುವುದಿಲ್ಲ. ದೇವಾಲಯದ ಅಲಂಕರಣದ ದೃಷ್ಟಿಯಿಂದ ರಚಿಸಲಾಗಿರುವ ಈ ಶಿಲ್ಪಗಳು ಪ್ರತಿಯೊಂದೂ ವಿಭಿನ್ನವಾಗಿ ಕಂಡುಬರುತ್ತವೆಯಾದರೂ ಎಲ್ಲ ಶಿಲ್ಪಗಳ ವಸ್ತುವು ಅದೇ ಆಗಿದ್ದು ಅಂಗಭಂಗಿ ಮಾತ್ರ ಬೇರೆಯಾಗಿದೆ. ಉಳಿದಂತೆ ಶಿಲ್ಪದ ರಚನೆ ಸಾಮಾನ್ಯವಾಗಿ ಪುನರಾವರ್ತನೆಯಾದಂತೆ ಕಂಡುಬರುತ್ತದೆ.

ಪಟ್ಟದಕಲ್ಲಿನ ದೇವಾಲಯದ ಆವರಣದಲ್ಲಿಯೂ ಹಲವಾರು ದಂಪತಿ ಶಿಲ್ಪಗಳನ್ನು ಕೆತ್ತಿರುವುದನ್ನು ಗಮನಿಸಬಹುದು. ಇಲ್ಲಿನ ಶಿಲ್ಪಗಳಲ್ಲಿನ ರಚನೆಯಲ್ಲಿ ಕಂಡುಬರುವುದು ಕೆತ್ತನೆಯಲ್ಲಿ ವೈವಿಧ್ಯ ಮತ್ತು ಅಲಂಕರಣದಲ್ಲಿ ಕಂಡುಬರುವ ಗಮನ. ಇಲ್ಲಿನ ಶಿಲ್ಪಗಳಲ್ಲಿನ ಸ್ತ್ರೀಶಿಲ್ಪಗಳಲ್ಲಿ ಕಲಾತ್ಮಕತೆಯಲ್ಲಿ ಸಹಜತೆಯಿದೆ. ಸ್ತ್ರೀಯ ತಲೆಯ ಕೂದಲರಚನೆಯಲ್ಲಿ ವೈವಿಧ್ಯವಿದೆ. ವಿವಿಧ ನಮೂನೆಯ ಕೂದಲ ರಚನೆಗಳು ಕಂಡುಬರುತ್ತವೆ. ಉಳಿದಂತೆ ಶಿಲ್ಪದಲ್ಲಿ ಹೆಚ್ಚಿನ ವಿಶೇಷತೆ ಇರದೆ ಮೊದಲು ನೋಡಿದ ಶಿಲ್ಪಗಳ ಪುನರಾವರ್ತನೆಯಿದೆ. ಇದರಿಂದಾಗಿ ಗಮನ ಸೆಳೆಯುವುದಿಲ್ಲ.

ಸಾಲಭಂಜಿಕೆ ಶಿಲ್ಪಗಳು

ಸಾಲಭಂಜಿಕೆ ಶಿಲ್ಪಗಳು ಕರ್ನಾಟಕ ಶಿಲ್ಪ ಪರಂಪರೆಗೆ ಚಾಲುಕ್ಯರು ನೀಡಿದ ವಿಶೇಷ ಕೊಡುಗೆಯಾಗಿವೆ. ಪ್ರಾಚೀನ ಕರ್ನಾಟಕ ದೇವಾಲಯಗಳಲ್ಲಿ ಸಾಲಭಂಜಿಕೆ ಶಿಲ್ಪಗಳು ಎಲ್ಲೂ ಕಂಡುಬರುವುದಿಲ್ಲ. ಇವುಗಳನ್ನು ಮದನಿಕಾ ಶಿಲ್ಪಗಳೆಂದೂ ಕರೆಯಲಾಗುತ್ತದೆ. ಇದಕ್ಕೆ ಕಾರಣ ಬಾದಾಮಿಯ ಮೂರನೆಯ ವೈಷ್ಣವ ಗುಹಾಲಯಗಳ ಮದನಿಕೆಗಳಲ್ಲಿ ಈ ಶಿಲ್ಪವು ಮೊದಲಾಗಿ ಕಂಡುಬಂದಿರುವುದೇ ಆಗಿದೆ.

ಬಾದಾಮಿಯ ಗುಹಾಲಯಗಳಲ್ಲಿ ಕಂಬವು ಛಾವಣಿಯನ್ನು ಸೇರುವೆಡೆಯಲ್ಲಿ ಚಾಚಿದ ತೋಳುಗಳ ಕೆತ್ತನೆಯಿದೆ. ಅವುಗಳು ಖಾಲಿಯಾಗಿ ಕಂಡುಬರದಂತೆ ಇರಲು ಕಂಡುಕೊಂಡ ಶಿಲ್ಪಗಳೇ ಈ ಮದನಿಕೆ ಶಿಲ್ಪಗಳು ಅಥವಾ ಸಾಲಭಂಜಿಕೆಗಳು. ಇಲ್ಲಿ ಕೆತ್ತಲಾಗಿರುವ ದಂಪತಿಶಿಲ್ಪಗಳನ್ನು ಈ ಮೊದಲೆ ನೋಡಿದ್ದೇವಾದರೂ ಇಲ್ಲಿ ಬಿಡಿ ಸ್ತ್ರೀ ಶಿಲ್ಪಗಳವೆ. ಒಂಟಿಯಾಗಿ ನಿಂತಿರುವ ಈ ಶಿಲ್ಪಗಳು ತೋಳುಗಳಿಂದ ದೇಗುಲವನ್ನು ಆಧರಿಸಿ ನಿಂತಂತೆ ಕಂಡುಬರುತ್ತವೆ. ಇವೇ ಸಾಲಭಂಜಿಕೆ ಶಿಲ್ಪಗಳು. ಕರ್ನಾಟಕ್ಕೆ ಈ ಶಿಲ್ಪಗಳು ಹೊಸತಾದರೂ ದೇಶದ ಶಿಲ್ಪಕಲೆಯಲ್ಲಿ ಇವು ಹೊಸತಲ್ಲ. ಸಾಂಚಿಯ ಮತ್ತು ಬಾರ್ಹೂತ್ ಸ್ತೂಪಗಳಲ್ಲಿ ಇಂತಹ ರಚನೆಗಳು ಕಂಡುಬಂದಿವೆ. 'ಕರ್ನಾಟಕದ ಅತಿ ಪ್ರಾಚೀನ ಸಾಲಭಂಜಿಕೆ ಶಿಲ್ಪಗಳು ಕಾಣಸಿಗುವುದು

ಬಾದಾಮಿಯಲ್ಲಿ. ಸಾಲಭಂಜಿಕೆ ಶಿಲ್ಪದ ಕಲ್ಪನೆ ತುಂಬಾ ಪ್ರಾಚೀನವಾದುದು. ಈ ಶಿಲ್ಪಗಳಲ್ಲಿ ರಚಿಸಿರುವ ಗಿಡಗಳನ್ನು ಅವಲೋಕಿಸಿದಾಗ ಗಿಡ ಮತ್ತು ಹೆಣ್ಣು ಪರಸ್ಪರ ಫಲಪ್ರದಾಯಕ[೮೦] ಎಂಬುದು ಮನದಟ್ಟಾಗುತ್ತದೆ.

ಸಾಂಚಿಯ ಸ್ತೂಪದಲ್ಲಿ ತೋರಣವನ್ನು ಆಧರಿಸಿ ನಿಲ್ಲಿಸಲಾದ ತೋಳುಗಳಲ್ಲಿ ಸ್ತ್ರೀ ಶಿಲ್ಪಗಳನ್ನು ಕೆತ್ತಲಾಗಿದ್ದು ಅವು ವೃಕ್ಷವನ್ನು ಆಧರಿಸಿ ನಿಂತಿರುವಂತೆ, ಒಂದು ಕೈಯಲ್ಲಿ ಮರದ ಟೊಂಗೆ ಹಿಡಿದು ನಿಂತಿರುವಂತೆ ಶಿಲ್ಪಗಳನ್ನು ಕೆತ್ತಲಾಗಿದೆ. ಇವುಗಳನ್ನು ಯಕ್ಷಿಣಿಯರೆಂದು ಕರೆಯಲಾಗಿದೆ. ಅಲ್ಲಿನ ಶಿಲ್ಪಗಳು ಬಹುಶಃ ಇಲ್ಲಿನ ಶಿಲ್ಪಗಳಿಗೆ ಪ್ರೇರಣೆಯಾಗಿರಬಹುದಾದ ಸಾಧ್ಯತೆಯಿದೆ. 'ಸಾಂಚಿತೋರಣಗಳಲ್ಲಿ ಒಂಟಿಯಾದ ಸಾಲಭಂಜಿಕೆಯರನ್ನೂ, ಯಕ್ಷ ಕನ್ನಿಕೆಯರನ್ನೂ ಇಂಥದೆ ಸ್ಥಾನಗಳಲ್ಲಿ ನಿಲ್ಲಿಸಿ ತೋರಿಸಿದ್ದಾರೆ.'[೮೧] ಸ್ತ್ರೀಯರಿಗೂ ವೃಕ್ಷಗಳಿಗೂ ನಿರಂತರ ಹೋಲಿಕೆಯಿದೆ. ಸ್ತ್ರೀ ಮತ್ತು ಹೂಗಿಡ ಅಥವಾ ಮರ ಎರಡೂ ಫಲದಾಯಕವೆಂಬ ನಂಬುಗೆ ಪ್ರಾಚೀನವಾದುದು. ಸ್ತ್ರೀಯ ಸ್ಪರ್ಶದಿಂದ ಗಿಡವು ಫಲ ನೀಡುತ್ತದೆಂಬುದೂ ಪ್ರಾಚೀನ ನಂಬಿಕೆ. ಇಂದಿಗೂ ಸ್ತ್ರೀಯರು ಮಕ್ಕಳಾಗುವ ಬಯಕೆಯಿಂದ ಅಶ್ವತ್ಥ ಮರಕ್ಕೆ ಪ್ರದಕ್ಷಿಣೆ ಬರುವುದು ಇಂಥ ನಂಬಿಕೆಯಿಂದಲೆ. ಆದುದರಿಂದ ಸ್ತ್ರೀ ಮತ್ತು ವೃಕ್ಷವನ್ನು ಸಂಯೋಜಿಸಿ ಶಿಲ್ಪಗಳನ್ನು ರಚಿಸುವ ಪರಿಪಾಠ ನಡೆದು ಬಂದಿರಬಹುದು.

'ತರುಣಿಯ ಸ್ಪರ್ಶದಿಂದ ಗಿಡವು ಹೂವುಗಳನ್ನು ಅರಳಿಸುತ್ತದೆಂದು ನಂಬಲಾಗಿದೆ. ಗರ್ಭಿಣಿಗೆ 'ಬಯಕೆ'ಗಳಿರುವಂತೆ ಗಿಡಗಳಿಗೂ ವಿಶಿಷ್ಟ ಬಯಕೆಗಳಿರುತ್ತವೆಂಬ ನಂಬಿಕೆ. ಈ ಬಯಕೆಗೆ ಸಂಸ್ಕೃತದಲ್ಲಿ 'ದೋಹದ' ಎಂದು ಹೇಳಲಾಗುತ್ತದೆ. ದೋಹದ ಎಂಬ ಶಬ್ದಕ್ಕೆ ಗರ್ಭಿಣಿಯ ಬಯಕೆ ಮತ್ತು ಹೂ ಬಿಡುವಾಗ ಗಿಡಗಳ ಬಯಕೆ ಎಂದು ಎರಡು ಅರ್ಥಗಳಿವೆ.'[೮೨] ಇಂತಹ ನಂಬಿಕೆಗಳ ಹಿನ್ನೆಲೆಯಲ್ಲಿ ಸ್ತ್ರೀ ಶಿಲ್ಪವನ್ನು ಅದರಲ್ಲಿಯೂ ಒಂಟಿ ಹೆಣ್ಣನ್ನು ಮರದ ಜೊತೆಗೆ ಅಥವಾ ಮರದ ಹಿನ್ನೆಲೆಯಲ್ಲಿ ಸಂಯೋಜಿಸಿ ಶಿಲ್ಪ ರಚಿಸಿರಬಹುದು. ಇನ್ನೊಂದು ಊಹೆ ಎಂದರೆ ಹೆಣ್ಣನ್ನು ಬಳ್ಳಿಗೆ ಹೋಲಿಸಲಾಗುತ್ತದೆ. ಗಂಡನ್ನು ಮರಕ್ಕೆ ಹೋಲಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಮರದ ನೆರಳನ್ನು ಹೆಣ್ಣು ಆಶ್ರಯಿಸುವ ಕಲ್ಪನೆಯಲ್ಲಿ ಶಿಲ್ಪಗಳನ್ನು ರಚಿಸಿರಬಹುದು. ಅದೇನೇ ಇದ್ದರೂ ಶಿಲ್ಪದ ಸಂಯೋಜನೆ ಮತ್ತು ಕೆತ್ತನೆಯ ದೃಷ್ಟಿಯಿಂದ ಈ ಸಾಲಭಂಜಿಕೆ ಶಿಲ್ಪಗಳು ಗಮನ ಸೆಳೆಯುತ್ತವೆ.

ಶಿಲ್ಪ –೧

ಬಾದಾಮಿಯ ಮೂರನೆಯ ವೈಷ್ಣವ ಗುಹಾಲಯವು ಸಾಲಭಂಜಿಕೆ ಶಿಲ್ಪಗಳಿಂದಾಗಿ

---

೮೦. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೨

೮೧. ಮಾಲಿನಿ ಮಲ್ಯ (ಸಂ.) : ಡಾ. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ. ಪುಟ. ೧೫೮

೮೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೨

ಹೆಚ್ಚಿನ ಮೆರುಗನ್ನು ಪಡೆದುಕೊಂಡಿದೆ. ಇಲ್ಲಿನ ದಂಪತಿ ಶಿಲ್ಪಗಳಂತೆ ಇಲ್ಲಿ ಕೆತ್ತಲಾಗಿರುವ ಮದನಿಕೆ ಶಿಲ್ಪಗಳು ನೋಡುಗರಲ್ಲಿ ಆನಂದಾನುಭವವನ್ನುಂಟುಮಾಡುತ್ತವೆ. ಒಂದೊಂದು ಕಂಬದ ಎರಡು ಮೂರು ಬದಿಗಳಲ್ಲಿ ಕೆತ್ತಲಾಗಿರುವ ಈ ಸ್ತ್ರೀಶಿಲ್ಪಗಳು ಅಧ್ಯಯನಕ್ಕೆ ಉತ್ತಮ ಸಾಮಗ್ರಿ. 'ಮೊಗಸಾಲೆಯ ಆರು ಕಂಬಗಳ ದಕ್ಷಿಣಬದಿಯ ಬೋಧಿಗೆಯ ಶಿಲ್ಪಗಳಲ್ಲಿ ಗಿಡದ ಕೆಳಗೆ ನಿಂತಿರುವ ಚೆಲುವೆಯರ ಮೂರ್ತಿಗಳಿವೆ. ಎಡಬಲದ ಅರೆಗಂಬಗಳ ಮೇಲೆ ಎರಡು ಸಾಲಭಂಜಿಕೆಗಳಿವೆ.[೮೩] ಈ ಎಲ್ಲ ಸಾಲಭಂಜಿಕೆ ಶಿಲ್ಪಗಳು ತ್ರಿಮಾನದ ಬಾವನೆ ಬರುವಂತೆ ರಚಿಸಲಾಗಿದೆ.

ಇಲ್ಲಿನ ಶಿಲ್ಪವೊಂದರಲ್ಲಿ ತರುಣಿಯು ಮರವೊಂದರ ನೆರಳಿನಲ್ಲಿ ನಿಂತಿದ್ದಾಳೆ. ಆಕೆಯ ಬಲಗೈಯಲ್ಲಿ ಹೂವಿನ ಮಗ್ಗೊಂದಿದೆ. ಎಡಗೈ ಹೂವಿನ ಕಾಂಡ ಹಿಡಿದಿದ್ದಾಳೆ ಯನ್ನು ಇಳಿಬಿಟ್ಟಿದ್ದಾಳೆ. ಮುಖದಲ್ಲಿ ನಸುನಗುವಿದೆ. ತಲೆಯಲ್ಲಿ ಸಣ್ಣದಾದ ಕಿರೀಟವಿದೆ. ಕೂದಲನ್ನು ನೀಟಾಗಿ ಬಾಚಿಕೊಂಡಿದ್ದಾಳೆ. ಎಡಗಾಲಿನ ಮೇಲೆ ಭಾರ ಹಾಕಿ ದ್ವಿಭಂಗಿಯಲ್ಲಿ ನಿಂತಿದ್ದಾಳೆ. ನೀಳವಾದ ದೇಹ, ನೇರವಾದ ತೊಡೆಭಾಗ, ಸಪೂರವಾದ ಸೊಂಟ, ಉಬ್ಬಿದ ದುಂಡನೆಯ ಸ್ತನಗಳು, ಸಪೂರವಾದ ಕುತ್ತಿಗೆ, ಹೀಗೆ ದೇಹದ ಪ್ರತಿಯೊಂದು ಅಂಗವನ್ನು ಸುಂದರವಾಗಿ ಕೆತ್ತಲಾಗಿದೆ. ಆಕೆಯ ಉಡುಗೆ ದೇಹಕ್ಕೆ ಅಂಟಿಕೊಂಡಿದೆ. ಇದರಿಂದಾಗಿ ದೇಹದ ಉಬ್ಬು ತಗ್ಗುಗಳ ಪ್ರದರ್ಶನವಾಗಿದೆ. ಆಕೆಯ ಮುಖದಲ್ಲಿನ ಮಂದಹಾಸ ನೋಡುಗನಲ್ಲಿಯೂ ಅದೇ ಭಾವನೆಯನ್ನುಂಟುಮಾಡುತ್ತದೆ. ಇನ್ನು ಅವಳು ತೊಟ್ಟಿರುವ ಆಭರಣಗಳೂ ಅದಕ್ಕೆ ಪೂರಕವಾಗಿವೆ. ತೋಳಿನಲ್ಲಿ ಮೂರು ಸುತ್ತುಗಳ ತೋಳುಬಂಧಿ, ಮುಂಗೈಯಲ್ಲಿ ಎರಡು ಮುತ್ತಿನ ಬಳೆಗಳು, ಕಂಠಹಾರ, ಎದೆಹಾರ, ಸೊಂಟದಲ್ಲಿ ಒಡ್ಯಾಣ, ವೈಕಕ್ಷಕ, ಸೊಂಟಪಟ್ಟಿ ಇತ್ಯಾದಿಗಳನ್ನು ಹೊಂದಿದ್ದಾಳೆ. ಪ್ರತಿಯೊಂದು ಆಭರಣ ಮುತ್ತಿನ ಹರಳುಗಳ ಕೆತ್ತನೆಯನ್ನು ಹೊಂದಿದೆ.

ಉಟ್ಟಿರುವ ಬಟ್ಟೆಯಲ್ಲಿ ತೆಳ್ಳನೆಯ ಚಿತ್ತಾರಗಳಿದ್ದು ವೃತ್ತಾಕಾರದ ಅಡ್ಡಗೆರೆಗಳನ್ನು ಹೊಂದಿದೆ. ಕಾಲಲ್ಲಿ ಕಾಲ್ಬಳೆಯಿದೆ. ಮಾಟವಾದ ದೇಹಸಿರಿಯ ಈ ಶಿಲ್ಪದಲ್ಲಿ ಅಂದದ ಹೆಣ್ಣೊಬ್ಬಳ ಮಾದರಿಯಿದೆ. ಕಲಾವಿದನ ಸುತ್ತಿಗೆಯ ಹೊಡೆತದಿಂದ ನಯವಾದ ಮೈವಳಿಕೆಯ ಚಿತ್ರಣ ಸಿದ್ಧವಾಗಿದೆ. ಮೋಹಕವಾದ ಅಂಗಭಂಗಿ, ಮೋಹಕವಾದ ಮೈಮಣಿತ, ಸುಂದರವಾದ ಮುಖ, ಕಿವಿಯಲ್ಲಿನ ಎರಡು ಸುತ್ತಿನ ಭಾರವಾದ ವಾಲೆಗಳಿಂದಾಗಿ ಸ್ತ್ರೀಯು ತನ್ನ ತಲೆಯ ಸಮತೋಲನವನ್ನು ಕಾಯ್ದುಕೊಂಡಂತೆ ಭಾಸವಾಗುವ, ಆಕರ್ಷಕವಾದ ನಿಲುವಿನಿಂದಾಗಿ ಈ ಶಿಲ್ಪವು ನಿಜವಾದ ಅರ್ಥದಲ್ಲಿ ಶೃಂಗಾರಗೀತೆಯಂತೆ ಮೂಡಿಬಂದಿದೆಯೆನ್ನಬಹುದು.

ಶಿಲ್ಪ –೨

ಈ ಶಿಲ್ಪದಲ್ಲಿ ಹೆಣ್ಣು ದ್ವಿಭಂಗಿಯಲ್ಲಿ ನಿಂತಿದ್ದಾಳೆ. ಪಕ್ಕದಲ್ಲಿ ಸೇವಕನೊಬ್ಬನಿದ್ದಾನೆ.

೮೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೩



ಅವನ ತಲೆಯ ಮೇಲೆ ಆಕೆ ತನ್ನ ಭಾರವನ್ನು ಹಾಕಿದ್ದಾಳೆ. ಎಡಗೈಯಲ್ಲಿ ಹೂವಿನ ಮೊಗ್ಗನ್ನು ಭುಜಮಟ್ಟಕ್ಕೆ ಎತ್ತಿ ಹಿಡಿದುಕೊಂಡಿದ್ದಾಳೆ. ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡಿದ್ದಾಳೆ. ತೀರ ತೆಳ್ಳಗಿನ ಸೊಂಟ ಮತ್ತು ಭಾರವಾದ ನಿತಂಬ, ಉಬ್ಬಿದ ಸ್ತನಗಳು, ಶಾಂತ ಮತ್ತು ನೇರವಾದ ಮುಖ, ಈ ಶಿಲ್ಪವನ್ನು ಮೊದಲಿನ ಶಿಲ್ಪಕ್ಕಿಂತ ಭಿನ್ನವಾಗಿಸುತ್ತದೆ. ಇಲ್ಲಿಯೂ ಆಭರಣಗಳ ಕೆತ್ತನೆ ಹದವಾಗಿದೆ. ನಿಂತ ನಿಲುವಿನಲ್ಲಿ ಗಾಂಭೀರ್ಯವಿದೆ. ಸೊಗಸಾದ ಮೈಮಾಟವಿದೆ. ದೇಹದ ಬಾಗುಬಳುಕುಗಳನ್ನು ಆಕರ್ಷಕವಾಗಿ ತೋರಿಸಲಾಗಿದೆ.

ಶಿಲ್ಪ –೩

ಈ ಶಿಲ್ಪದಲ್ಲಿ ಇದರ ಪುನರಾವರ್ತನೆಯಂತೆ ಕಂಡರೂ ಭಿನ್ನವಾಗಿದೆ. ಇಲ್ಲಿಯೂ ಸೇವಕನಿದ್ದಾನೆ. ಎಡಗೈಯಲ್ಲಿ ಇಲ್ಲಿ ಹೂಮೊಗ್ಗಿನ ಬದಲಾಗಿ ತನ್ನ ಬಟ್ಟೆಯ ಚುಂಗನ್ನು ಎತ್ತಿ ಹಿಡಿದಿದ್ದಾಳೆ. ಇದು ಸ್ತ್ರೀ ಸಹಜ ನಡವಳಿಕೆಯಂತೆ ಕಾಣಿಸುವುದರಿಂದ ಅರ್ಥಗರ್ಭಿತವಾಗಿದೆ. ತನ್ನ ಮುಖವನ್ನು ಪಕ್ಕಕ್ಕೆ ತಿರುಗಿಸಿ ಎತ್ತಲೋ ನೋಡುತ್ತಿದ್ದಾಳೆ. ತಲೆಯ ಕೂದಲನ್ನು ಬಾಚಿ ಹೆಣೆದ ರೀತಿ ಮನೋಹರವಾಗಿದೆ. ಕಿವಿಯಲ್ಲಿನ ವಾಲೆಯ ತೂಕವು ಭಾರವಾಗಿದೆಯೇನೋ ಎಂಬಷ್ಟು ದೊಡ್ಡದಾಗಿದ್ದು ಆಕರ್ಷಣೀಯವಾಗಿದೆ. ತೆಳ್ಳನೆಯ ಸೊಂಟ ಮತ್ತು ಅಗಲವಾದ ನೀಳತೊಡೆಗಳು, ಉಬ್ಬು ದೇಹಸೌಂದರ್ಯದ ಸೊಬಗನ್ನು ಹೆಚ್ಚಿಸಿದೆ. ಸ್ತ್ರೀ ಸಹಜ ಸುಂದರತೆಯನ್ನು ಈ ಶಿಲ್ಪದಲ್ಲಿ ಕಾಣಬಹುದು.

ಶಿಲ್ಪ –೪

ಈ ಶಿಲ್ಪದಲ್ಲಿ (೧೯ನೆಯ ಕಂಬದ ಬೋಧಿಗೆಯಲ್ಲಿ) 'ದರ್ಪಣ ಸುಂದರಿಯೊಬ್ಬಳು ಚಿತ್ರಿತಳಾಗಿದ್ದಾಳೆ. ಅವಳು ಎಡಗೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡಿದ್ದಾಳೆ. ಬಲಗೈಯಿಂದ ಕೇಶಾಲಂಕಾರವನ್ನು ಮಾಡಿಕೊಳ್ಳುತ್ತಿದ್ದಾಳೆ. ಚೆಲುವೆಯು ಗಿಡಕ್ಕೆ ಆತು ನಿಲ್ಲುತ್ತ ತನ್ನ ಬಲಗಾಲನ್ನು ಗಿಡಕ್ಕೆ ಆಸರೆಯಾಗಿ ಇಟ್ಟಿದ್ದಾಳೆ. ಈಕೆಯ ಬಲಕ್ಕೆ ನಿಂತಿರುವ ಸೇವಕಿ ತನಗಿಂತಲೂ ಎತ್ತರವಾದ ದಂಡವನ್ನು ಹಿಡಿದುಕೊಂಡು ನಾಯಕಿಯ ಅಂಗರಕ್ಷಣೆಗೆ ನಿಂತಂತೆ ತೋರುತ್ತದೆ'.[೮೪] ಸೇವಕಿಯು ಹಿಡಿದುಕೊಂಡಿರುವ ದಂಡ ಕಬ್ಬಿನಂತೆ ಕಂಡುಬರುತ್ತದೆ.

ಅದರಲ್ಲಿನ ವಿಶಿಷ್ಟ ಅಡ್ಡ ಕೆತ್ತನೆಯ ವೃತ್ತ ಗೆರೆಗಳನ್ನು, ಕೆತ್ತಿರುವ ರೀತಿ ಗಮನಸೆಳೆಯುತ್ತದೆ. ಇಲ್ಲಿನ ನಾಯಿಕೆಯ ದೇಹದ ಬಾಗು, ನಿಂತ ನಿಲುವು, ಕನ್ನಡಿಯನ್ನು ನೋಡಿಕೊಂಡು ತಲೆ ಬಾಚಿಕೊಳ್ಳುತ್ತಿರುವಲ್ಲಿ ಮಗ್ನವಾಗಿರುವ ಭಂಗಿ ಆಕರ್ಷಕವಾಗಿ ಕೆತ್ತಲ್ಪಟ್ಟಿದೆ. ಇಲ್ಲಿ ಕಲಾವಿದನು ಯಾವುದನ್ನು ಕೂಡ ಅತಿಯಾಗಿ ಬಿಂಬಿಸಲು ಹೋಗಿಲ್ಲ. ಸರಳ ಮತ್ತು ಮುಗ್ಧತೆ ಈ ಶಿಲ್ಪಗಳ ಜೀವಾಳ.

೮೪. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೩



ಶಿಲ್ಪ –೫

ಈ ಶಿಲ್ಪದಲ್ಲಿ ತರುಣಿಯು ಉದ್ದನೆಯ ಓಲೆಯೊಂದನ್ನು ಹಿಡಿದು ನಿಂತಿದ್ದಾಳೆ. ಇಲ್ಲಿನ ಶಿಲ್ಪದಲ್ಲಿ ಮಾವಿನ ಮರದ ಚಿತ್ರಣವಿದೆ. ಮರವು ಮಾವಿನಕಾಯಿಗಳಿಂದ ತುಂಬಿಕೊಂಡಿದೆ. ಬಹುಶಃ ಈ ಶಿಲ್ಪದಲ್ಲಿ ಸ್ತ್ರೀಯು ಫಲವತ್ತಾಗಿರುವ ಮಾವಿನ ಮರದಡಿಯಲ್ಲಿ ನಿಂತಿರುವುದು ಮತ್ತು ಕೈಯಲ್ಲಿ ಓಲೆಯನ್ನು ಹಿಡಿದುಕೊಂಡಿರುವುದು, ಇದು ವಸಂತಕಾಲವಾಗಿದ್ದು ಗೆಳತಿಯು ತನ್ನ ಇನಿಯನ ಪತ್ರವನ್ನು ಹಿಡಿದು ಅವನ ಬರುವಿಕೆಗಾಗಿ ಕಾಯುತ್ತಿರಬಹುದೇನೋ? ಇಲ್ಲಿ ತರುಣಿಯು ಕಾತರದಿಂದ ಕಾಯುತ್ತಿರುವುದನ್ನು ತೋರಿಸಲಾಗಿದ್ದು ಶಿಲ್ಪದ ಹಿನ್ನೆಲೆಯಲ್ಲಿ ಎರಡು ಮಂಗಗಳ ಕೆತ್ತನೆ ಇರುವುದನ್ನು ಗಮನಿಸಬಹುದು.

ಇಲ್ಲಿ ಹೆಣ್ಣಿನ ಚಂಚಲತೆಯನ್ನು ಶಿಲ್ಪಿಯು ಮಂಗಗಳ ಮೂಲಕ ತೋರಿಸಲು ಪ್ರಯತ್ನಿಸಿರಬಹುದು. ಅವಳ ಉಬ್ಬಿದ ಸ್ತನಗಳು, ನೀಳವಾದ ದೇಹಸಿರಿ, ಆಕರ್ಷಕ ನಿಲುವು ಶಿಲ್ಪದಲ್ಲಿ ಗಮನ ಸೆಳೆಯುವ ಅಂಶಗಳಾಗಿವೆ. ಇನ್ನೊಂದು ಶಿಲ್ಪದಲ್ಲಿ ತರುಣಿಯ ವಿರಹವೇದನೆಯ ಚಿತ್ರಣವಿದೆ. ಹಿನ್ನೆಲೆಯಲ್ಲಿ ಎರಡು ನವಿಲುಗಳ ಚಿತ್ರಣವಿದ್ದು ಅವುಗಳ ದೇಹವು ಒಂದೇ ಇರುವುದು ಕುತೂಹಲಕಾರಿಯಾಗಿದೆ. ಆಕೆಯು ಗಿಡದ ಟೊಂಗೆಯೊಂದನ್ನು ಕೈಯಲ್ಲಿ ಹಿಡಿದುಕೊಂಡಿದ್ದಾಳೆ. ಇಲ್ಲಿನ ಶಿಲ್ಪದಲ್ಲಿ ಹೆಣ್ಣಿನ ವಿರಹವೇದನೆಯನ್ನು ಸುಂದರವಾಗಿ ಕೆತ್ತಿದ್ದಾರೆ. ಅವಳ ಹಿಂಭಾಗದಲ್ಲಿ ಸೇವಕನು ಆಕೆಯ ನಡೆಯನ್ನು ಕುತೂಹಲದಿಂದ ಗಮನಿಸುತ್ತಿರುವಂತೆ ಚಿತ್ರಿಸಿರುವುದು ಗಮನ ಸೆಳೆಯುತ್ತದೆ.

ಇಲ್ಲಿನ ಸಾಲಭಂಜಿಕೆ ಶಿಲ್ಪಗಳು ಎತ್ತರದಲ್ಲಿರುವುದರಿಂದ ಈ ಶಿಲ್ಪಗಳು ತಮ್ಮ ನೈಜ ಅಳತೆಯಲ್ಲಿ ಇರುವಂತೆನ್ನಿಸುತ್ತವೆ. ಸ್ವಲ್ಪ ಎತ್ತರದ ನೀಳ ಮೈಕಟ್ಟಿನ ವಿಗ್ರಹಗಳು ಇಲ್ಲಿ ಕಂಡುಬರುತ್ತವೆ. ಸಾಮಾನ್ಯವಾಗಿ ಕಂಬಗಳ ಪೂರ್ವ, ಪಶ್ಚಿಮ ಪಾರ್ಶ್ವಗಳಲ್ಲಿ ಮಿಥುನ ಶಿಲ್ಪಗಳು ಶಿಲ್ಪಿತವಾಗಿವೆ. ದಕ್ಷಿಣ ಪಾರ್ಶ್ವದಲ್ಲಿ ಅಪೂರ್ಣ ಮಿಥುನ ಶಿಲ್ಪಗಳು, ಪ್ರಿಯಕರನಿಗಾಗಿ ಹಾತೊರೆಯುತ್ತ ನಿಂತಿರುವ ನಾಯಿಕೆಯರು ರೂಪಿತರಾಗಿದ್ದಾರೆ. ಶಿಲ್ಪಗಳಲ್ಲಿ ಧರಿಸಿರುವ ಕಲಾತ್ಮಕವಾದ ಬಟ್ಟೆ, ಬಟ್ಟೆಯ ಮೇಲಿನ ಕಸೂತಿ, ಬಿಸಿಲಿನ ತಾಪಕ್ಕೆ ಮೈಮೇಲಿರುವ ತಿಳು ಬಟ್ಟೆಗಳು ಶಿಲ್ಪಿಯ ವಾಸ್ತವ ಜೀವನದ ನೈಜ ರಚನೆಗಳಾಗಿವೆ. ಸ್ತ್ರೀಯು ಬಿಸಿಲಿನ ತಾಪ ತಾಳಲಾಗದೆ ನೆರಳನ್ನು ಅಪೇಕ್ಷಿಸಿ ಮಾವಿನ ಮರದ ಕೆಳಗೆ ಆಶ್ರಯ ಪಡೆದ ಚಿತ್ರ, ಮಾವಿನ ಮರದಲ್ಲಿ ಮಂಗಗಳು ಹಣ್ಣುಗಳನ್ನು ತಿನ್ನುವ ಚಿತ್ರಣ, ಈ ಸ್ತ್ರೀಯ ಸೇವೆಗೆ ಸೇವಕಿಯೊಬ್ಬಳು ಕುಳಿತಿರುವಂತಿದೆ. ಇವೆಲ್ಲವೂ ಸಮಕಾಲೀನ ಸೌಂದರ್ಯಪ್ರಜ್ಞೆಯ ಪ್ರತೀಕದಂತಿವೆ.

ಶಿಲ್ಪ –೬

ಈ ಶಿಲ್ಪವೂ ಕೂಡ ದ್ವಿಭಂಗಿಯಲ್ಲಿ ನಿಂತಿದ್ದು, ಬಲಗೈಯಲ್ಲಿ ಹಣ್ಣು ಹಿಡಿದಿರಬಹುದು,

ವೃಕ್ಷದ ಕೆಳಗೆ ನಿಂತಿರುವ ಬಲಪಕ್ಕದಲ್ಲಿ ಸ್ತ್ರೀ ಶಿಲ್ಪವನ್ನು ಗಮನಿಸಬಹುದು. ಕೊರಳ ಹಾರವು ಮುತ್ತಿನಿಂದ ಕೂಡಿದ್ದು, ಕೈಯಲ್ಲಿ ಕಡಗಗಳನ್ನು ಧರಿಸಿದ್ದಾಳೆ. ಸೊಂಟದಿಂದ ಕಾಲಿನವರೆಗೆ ತೆಳುವಾದ ಬಟ್ಟೆಯನ್ನು ಧರಿಸಲಾಗಿದೆ. ಉಬ್ಬಿದ ಸ್ತನಗಳು, ನಡುಪಟ್ಟಿ ಸೂಕ್ಷ್ಮ ಕೆತ್ತನೆಗಳೊಂದಿಗೆ ಆಕರ್ಷಣೆಯಾಗಿದ್ದು, ಈ ಶಿಲ್ಪವು ಅತ್ಯಂತ ಪರಿಪೂರ್ಣ ಕಲಾಕೃತಿಯಾಗಿದೆ. ಬಾದಾಮಿಯ ಮೂರನೆಯ ವೈಷ್ಣವ ಗುಹಾಲಯವು ಶಿಲ್ಪಕಲೆಯ ಕಾಶಿ. ಇಲ್ಲಿನ ಶಿಲ್ಪಗಳು ಶಿಲ್ಪಕಲೆಯ ಆರಾಧಕರಿಗೆ ಅಧ್ಯಯನಕಾರರಿಗೆ ಸ್ವರ್ಗವಿದು. ಇಲ್ಲಿನ ಪ್ರತಿಯೊಂದು ಶಿಲ್ಪವೂ ಇನ್ನೊಂದಕ್ಕಿಂತ ಭಿನ್ನ. ಇಲ್ಲಿನ ಮದನಿಕೆಯರು ಮತ್ತು ಮಿಥುನ ಶಿಲ್ಪಗಳು ನೋಡುಗರಿಗೆ ವಿಶೇಷ ಅನುಭವವನ್ನು ನೀಡುತ್ತವೆ.

ಇಲ್ಲಿನ ಹಲವಾರು ಸ್ತ್ರೀ ಶಿಲ್ಪಗಳು ಸೌಂದರ್ಯದ ಖಣಿಗಳು. ವಿವಿಧ ಕೋನಗಳಿಂದ ಸ್ತ್ರೀ ಸೌಂದರ್ಯವನ್ನು ಸೆರೆಹಿಡಿದಿರುವುದು ಇಲ್ಲಿನ ಶಿಲ್ಪಗಳ ವಿಶೇಷ. ಇಲ್ಲಿನ ಸ್ತ್ರೀಶಿಲ್ಪಗಳ ದೇಹದಲ್ಲಿ ಲಾಲಿತ್ಯವಿದೆ. ದೇಹದ ಮೈಮಾಟಗಳ, ಬಾಗುಗಳ ಸಹಜ ಕೆತ್ತನೆಯಿದೆ. ಒಟ್ಟಿನಲ್ಲಿ ಇಲ್ಲಿನ ತರುಣಿಯರ ಶಿಲ್ಪಗಳನ್ನು, ಸಾಲಭಂಜಿಕೆಯರನ್ನು ನೋಡಿದರೆ ಆನಂದವನ್ನು ನೀಡುವಂತಿವೆ. ಸಾಲಭಂಜಿಕೆಯ ಶಿಲ್ಪಗಳು ಬಾದಾಮಿ ಚಾಲುಕ್ಯರ ಕಾಲದ ಐಹೊಳೆ ಮತ್ತು ಪಟ್ಟದಕಲ್ಲಿನ ದೇವಾಲಯಗಳಲ್ಲಿ ಕೂಡಾ ಚಿತ್ರಿತವಾಗಿವೆ. ಅಲ್ಲಿನ ಶಿಲ್ಪಗಳ ಸೊಗಸೆ ಬೇರೆ. ಅಲ್ಲಿನ ಕೆತ್ತನೆ ಇಲ್ಲಿನದಕ್ಕಿಂತ ಭಿನ್ನ. ಆದರೆ ಅಲ್ಲಿನ ಶಿಲ್ಪಗಳ ಚೆಲುವು ಈ ಶಿಲ್ಪಗಳಿಗೆ ಸರಿಗಟ್ಟುವುದಿಲ್ಲ. ಮುಂದಿನ ಹೊಯ್ಸಳರ ಕಾಲದ ಬೇಲೂರು ಮತ್ತು ಹಳೇಬೀಡುಗಳಲ್ಲಿನ ಕೆತ್ತನೆಗಳಿಗೆ ಬಾದಾಮಿ ಚಾಲುಕ್ಯರ ಶಿಲ್ಪಗಳೇ ಸ್ಫೂರ್ತಿಯಾಗಿದ್ದರೂ ಅಲ್ಲಿನ ಅತಿಯಾದ ಅಲಂಕರಣದಿಂದ ಕೂಡಿದ ನಾಟಕೀಯ ಕೆತ್ತನೆಗಳಿಗಿಂತ ಈ ಶಿಲ್ಪಗಳು ಸರಳವಾಗಿ ಸುಂದರವಾಗಿರುವುದರಿಂದ ಹೆಚ್ಚು ಪರಿಣಾಮವನ್ನುಂಟುಮಾಡುತ್ತವೆ.

ಶಿಲ್ಪಗಳ ಕೇಶವಿನ್ಯಾಸ

ರಾಮಾಯಣವು ಸುಂದರವಾದ ಕೂದಲನ್ನು ಸುಕೇಶ ಎಂದು ಕರೆದಿದೆ. ಗುಂಗುರು ಕೂದಲನ್ನು ಸೌಂದರ್ಯದ ಸಂಕೇತವೆಂದು ಆ ಕಾಲದಲ್ಲಿ ಭಾವಿಸಲಾಗಿತ್ತು. ಸ್ತ್ರೀಯರು ಬೈತಲೆ ತೆಗೆದು ತಲೆಯನ್ನು ಬಾಚುತ್ತಿದ್ದರು. ಹಣಿಗೆಗೆ ಕಂಕತ ಎಂಬ ಹೆಸರಿತ್ತು. ಕೂದಲಿಗೆ ಬಳಸುವ ಕುಂಚಕನ್ನು 'ಕುಚಕ'ವೆನ್ನುತ್ತಿದ್ದರು. ಜಡೆಯನ್ನು ಕಟ್ಟಲು 'ವೇಣೀಗ್ರಥನ'ವನ್ನು ಬಳಸುತ್ತಿದ್ದರು.[೮೫] ಹೀಗೆ ಭಾರತವಲ್ಲದೇ ಕರ್ನಾಟಕದಲ್ಲಿನ ಮಹಿಳೆಯರು ಕೇಶಾಲಂಕಾರದಲ್ಲಿ ನಿಪುಣರಿದ್ದರೆಂದು ಸಾರಲು ನಮ್ಮ ಕನ್ನಡ ಕಾವ್ಯಗಳಲ್ಲಿನ ವರ್ಣನೆ ದೇವಾಲಯಗಳಲ್ಲಿನ ಶಿಲ್ಪಗಳೂ ಇಂದಿಗೂ ಸಾಕ್ಷಿಯಾಗಿ ನಿಂತಿವೆ. ಚಾಲುಕ್ಯರ ರಾಜಧಾನಿಗಳಾದ ಐಹೊಳೆ, ಪಟ್ಟದಕಲ್ಲುಗಳಲ್ಲಿ ಶಿಲ್ಪಾಲಂಕೃತ ದೇವಾಲಯಗಳು ಪ್ರಾಚೀನ ದೇವಾಲಯಗಳಾಗಿವೆಯಷ್ಟೆ.

---

೮೫. ಡಾ. ಉಷಾ ಘಾಟಕ್ : ವೇಷ ಭೂಷಣ ಪ್ರಸಾಧನ, ಪುಟ – ೩೮೮

ಪಟ್ಟದಕಲ್ಲಿನ ವಿರೂಪಾಕ್ಷ ಮಲ್ಲಿಕಾರ್ಜುನ ದೇವಾಲಯಗಳ ಮೂರ್ತಿ, ಅನೇಕ ವಿಗ್ರಹಗಳ ಜಡೆ, ಮುಡಿಗಳು ಸುಂದರವಾಗಿವೆ. ಐಹೊಳೆಯ ದುರ್ಗಾ ದೇವಾಲಯಗಳು, ನಂದಿಮಂಟಪ, ಪಾಪನಾಥ ದೇವಾಲಯ ಮೊದಲಾದ ದೇವಾಲಯಗಳ ಕೇಶಾಲಂಕಾರ ವೈವಿಧ್ಯಮಯವಾಗಿದೆ. ಅವುಗಳಲ್ಲಿ ಬಿಡಿಮುಡಿ, ಸೋಗೆದುರುಂಬು, ಮುತ್ತಿನ ಮುಡಿ, ಎಳಲ್ಮುಡಿ, ಬಳಲ್ಮುಡಿ, ಗೋಡಂಬಿಮುಡಿ, ತೆಕ್ಕೆದುರುಬು[೮೬] ಇವು ಆ ಕಾಲದ ಕೇಶಾಲಂಕಾರಗಳನ್ನು ಎತ್ತಿ ತೋರುತ್ತವೆ.

"ಧರ್ಮಾಮೃ"ದ ವಿದ್ಯಾಧರ ವಾರನಾರಿಯರು ಬಳಲ್ಮುಡಿ, ಸೋರ್ಮುಡಿ, ಪೊರ್ಮುಡಿ ಮುಂತಾದ ವಿನ್ಯಾಸಗಳಿಂದ ಕೂಡಿರುತ್ತಾರೆ. ನೇಮಿಸಂಯ ದ್ರೌಪದಿಯ ಸಖಿಯರು ಇವುಗಳ ಜೊತೆ ಸೋಗೆಮುಡಿ, ಮುಗುಳ್ಮುಡಿ, ಜಡೆಮುಡಿ, ತೋರುಮುಡಿ, ಸಿರಿಮುಡಿಗಳನ್ನು ಪ್ರದರ್ಶಿಸುತ್ತವೆ.[೮೭] ಪಟ್ಟದಕಲ್ಲಿನ ನಂದಿಮಂಟಪದಲ್ಲಿ ಮತ್ತು ಪಾಪನಾಥ ದೇವಾಲಯಗಳಲ್ಲಿ ಸ್ತ್ರೀಯರ ಕೆಲವು ಕೇಶವಿನ್ಯಾಸವನ್ನು ಗಮನಿಸಬಹುದು.

ವೈದಿಕ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ವಿವಿಧ ರೀತಿಯ ಕೇಶವಿನ್ಯಾಸಗಳನ್ನು ಕೃಷ್ಣಮೂರ್ತಿಯವರು ವಿವರಿಸಿದ್ದಾರೆ. ಅವುಗಳೆಂದರೆ; ಬಪಶ, ಕಪರ್ದ, ಕುಂಭ, ಕುರೀರ, ಕೇಶ, ಶಿಖಂಡ, ಶಿಖಾ, ಸೀಮನ್, ಪುಲಸ್ತಿ, ಸ್ತುರಾ ಮುಂತಾದವು. ಇವುಗಳಲ್ಲಿ ಬಪಶ, ಕುಂಭ, ಕುರೀರಗಳನ್ನು ಶಿರೋಭೂಷಣಗಳೆಂದು ವಿದ್ವಾಂಸರು ಗುರುತಿಸಿದ್ದಾರೆ.[೮೮] ಚಾಲುಕ್ಯ ವಿಕ್ರಮಾದಿತ್ಯನ ರಾಣಿಯರಾದ ಲೋಕಮಹಾದೇವಿ ತ್ರೈಲೋಕ್ಯ ಮಹಾದೇವಿಯರು ಪಟ್ಟದಕಲ್ಲಿನಲ್ಲಿ ಕಟ್ಟಿಸಿದ ದೇವಾಲಯಗಳು ಲೋಕೇಶ್ವರ, ತ್ರೈಲೋಕೇಶ್ವರ ದೇವಾಲಯಗಳೆಂದು ಪ್ರಸಿದ್ಧವಾಗಿವೆ. ಈಗ ಆ ದೇವಾಲಯಗಳಿಗೆ ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯಗಳೆನ್ನುವರು. ಶಿಲ್ಪಕಲೆಯ ಆಗರವಾಗಿರುವ ಆ ದೇವಾಲಯಗಳಲ್ಲಿ ಶಿಲಾಬಾಲಿಕೆಯರು ಕಟ್ಟಿದ ಬಿಡಿಮುಡಿಯನ್ನು ಕಾಣಬಹುದು.[೮೯] ಚಾಲುಕ್ಯರ ಕಾಲದಲ್ಲಿ ರಚನೆಯಾದ ಶಿಲ್ಪಗಳು ವಿವಿದಾಕಾರದ ಕೇಶವಿನ್ಯಾಸಗಳು ಮೂಡಿಬಂದಿವೆ.

ಶಿಲ್ಪ –೧

ಈ ಶಿಲ್ಪವು ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಕಂಬದಲ್ಲಿದ್ದು, ದಂಪತಿ ಸಮೇತವಾಗಿ ನಿಂತಿರುವ ಈ ಶಿಲ್ಪದಲ್ಲಿ ಅತೀ ಸೂಕ್ಷ್ಮವಾದ ರೇಖೆಗಳು ಪ್ರಧಾನವಾಗಿ ಗೋಚರಿಸುತ್ತವೆ. ಧಮ್ಮಿಲ್ಲ ಅಭಿಧಾನ ವಸ್ತು ಕೋಶದಲ್ಲಿ "ಕಬರಿ ಧಮ್ಮಿಲ್ಲ ಕಚೋದ್ಬಂಧನಂ" ಎಂಬ ಅರ್ಥಗಳಿವೆ. ಕೃಷ್ಣಮೂರ್ತಿಯವರು ಇದನ್ನು ಅಲಂಕೃತವಾದ ತುರುಬೆಂದು ವಿವರಿಸಿದ್ದಾರೆ.

---

೮೬. ಡಾ. ವಿಜಯಾ, ಎಂ.ಬಿ.ಸಿಂಗ್, ವಿ.ಎನ್. ಸುಬ್ಬರಾವ್ (ಸಂ.) ಕನ್ನಡ ಚಲನಚಿತ್ರ ಇತಿಹಾಸ, ಭಾಗ–೨, ಪುಟ – ೨೪೩

೮೭. ಡಾ. ಉಷಾ ಘಾಟಕ್ : ವೇಷ ಭೂಷಣ ಪ್ರಸಾಧನ, ಪುಟ – ೩೭೬

೮೮. ಅದೇ., ಪುಟ – ೩೫೭

೮೯. ಡಾ. ಅರವಿಂದ ಮಾಲಗತ್ತಿ (ಪ್ರಸಂ.) : ಕನ್ನಡ ವಿಶ್ವಕೋಶ, ಕರ್ನಾಟಕ ಸಂ–೧, ಪುಟ – ೬೩೧



ಆದಿಪು,ವು, ಧಮ್ಮಿಲ್ಲವನ್ನು ನವಿಲಿನ ಗರಿಗೆ ಹೋಲಿಸಿವೆ. "ಮೊಗಮಂ ತಾವರೆ ಕಣ್ಣ ನುತ್ಪಳದಳಂ. ಧಮ್ಮಿಲ್ಲಮಂ ಸೋಗೆ ಸೆಳ್ಳುಗುರುಂ ಕೇದಿಗೆ....., ಪೋಲ್ತವೆನ್ನದೆ ...., ನಿಸ್ಸಾರ ವಸ್ತುಗಳೊಳ ಪೋಲಿಸುವಂತುಟೇಮ್ಮರುಳನೇಮ......., ಚಂದ್ರಪ್ರಭ ಜಿನಜನ್ಮೋತ್ಸವದ ಸಮಯದಲ್ಲಿನ ವರ್ಣನೆಯಂತೆ ದೇವಲೋಕದ ವಾರಸ್ತ್ರೀಯರ ಧಮ್ಮಿಲ್ಲಗಳೆಂಬ ನವಿಲುಗಳು,[೯೦] ನವಿಲಿನ ಗರಿಯಂತೆಯ ಕೇಶವನ್ನು ಕಟ್ಟಿಕೊಂಡಿರುವುದು. ಈ ವಿನ್ಯಾಸವು ಹಣೆಪಟ್ಟಿಯಿಂದ ರಚಿತವಾಗಿದೆ. ಮುತ್ತಿನಂತಹ ಹಣೆಪಟ್ಟಿಯು ಸ್ಪಷ್ಟವಾಗಿ ಬಿಂಬಿತವಾಗಿದೆ. ಸೋಗೆದುರುಂಬು ಎಂದು ಕರೆಯುವ ಈ ಕೇಶ ಶೈಲಿಯ ಶಿಲ್ಪದ ಮುಖದಲ್ಲಿ ಮೀನಿನಾಕಾರದ ಕಣ್ಣುಗಳು, ನೇರವಾಗಿ ಎಳೆಯಲಾದ ಹುಬ್ಬುಗಳು ಮಸುಕಾಗಿ ಕಂಡುಬರುತ್ತವೆ.

ಶಿಲ್ಪ –೨

ಪಟ್ಟದಕಲ್ಲಿನ ದೇವಾಲಯ ಸಮೂಹದಲ್ಲಿ ವಿರೂಪಾಕ್ಷ ದೇವಾಲಯದ ಎದುರಿಗೆ ನಂದಿ ಮಂಟಪದ ಕಂಬಗಳಲ್ಲಿ ಹಲವಾರು ಮದನಿಕೆಯರ ಶಿಲ್ಪಗಳು ಮತ್ತು ದಂಪತಿ ಶಿಲ್ಪಗಳಿದ್ದು ಈ ನಂದಿಮಂಟಪದಲ್ಲಿ ಒಳಭಾಗದ ಎಡಬದಿಯಲ್ಲಿ ಅರೆಗಂಬದಲ್ಲಿ ರಚಿಸಲಾದ ಈ ಶಿಲ್ಪದ ಕೇಶರಾಶಿಯು ಗೋಡಂಬಿಮುಡಿ[೯೧] ಎಂದು ಕರೆಯುವ ವಿನ್ಯಾಸವು ತಲೆಯ ಮೇಲೆ ಗೋಪುರದ ಹಾಗೆ ತಲೆಯ ಮೇಲೆ ಎತ್ತಿಕಟ್ಟಿ ರೇಖೆಗಳಿಂದ ಅಲಂಕೃತಗೊಂಡಿದೆ. ಮಧ್ಯದಲ್ಲಿ ಚಿಕ್ಕ ವೃತ್ತಾಕಾರದ ಒಂದು ಗಂಟನ್ನು ರಚಿಸಿ ಹಾಗೆ ಬಿಡಲಾಗಿದೆ. ಕೆಳಗಡೆ ಒಂದು ದೊಡ್ಡದಾದ ಹಣೆಪಟ್ಟಿಯಿದೆ.

ಶಿಲ್ಪ –೩

ಪಟ್ಟದಕಲ್ಲಿನ (ಮುತ್ತಿನಮುಡಿ) ನಂದಿಮಂಟಪದಲ್ಲಿ ಪೂರ್ವಾಭಿಮುಖವಾಗಿ ನಿಂತಿರುವ ಸ್ತ್ರೀ ಕೇಶವಿನ್ಯಾಸ ವಿಶಿಷ್ಟವಾಗಿದೆ. ಇಲ್ಲಿ ಹಣೆಯ ಮೇಲೆ ಒಂದು ಮುತ್ತಿನ ಸರವಿದ್ದು, ಕೂದಲನ್ನು ಮೇಲಕ್ಕೆ ಸರಿಸಿ, ಮಧ್ಯ ದೊಡ್ಡದಾದ ಚಂಡಿನಾಕಾರದಲ್ಲಿ ರೂಪಿಸಿ ಅದರ ಮಧ್ಯ ಮುತ್ತುಗಳನ್ನು ವೃತ್ತಾಕಾರದಲ್ಲಿ ವಿನ್ಯಾಸಗೊಳಿಸಲಾಗಿದೆ.

ಶಿಲ್ಪ –೪

ನಂದಿಮಂಟಪದ ಈ ಸ್ತ್ರೀ ಶಿಲ್ಪವು ಪೂರ್ವಾಭಿಮುಖವಾಗಿದ್ದು, ಬಲಗಡೆಯ ಎಡಗಂಬದ ಮೇಲೆ ಕಂಡು ಬರುತ್ತದೆ. ಇಲ್ಲಿ ಸೊಗದುರುಂಬಿದ (ಎಳಲ್ಮುಡಿ) ಕೇಶವಿನ್ಯಾಸವನ್ನು ಹೊಂದಿದ ಸ್ತ್ರೀಯ ಹಣೆಯ ಸುತ್ತಲೂ ಮುತ್ತಿನ ಆಭರಣಗಳನ್ನು ರಚನೆ ಮಾಡಲಾಗಿದೆ. ಕಿವಿಗಳಲ್ಲಿ ಕರ್ಣಕುಂಡಲಗಳಿದ್ದು, ಕೊರಳಲ್ಲಿ ಚೌಕಾಕಾರದ ಸರದ ರಚನೆಯಿದ್ದು, ಮಧ್ಯದಲ್ಲಿ ವೃತ್ತಾಕಾರದ ಪದಕವಿದೆ. ಎಡಭುಜದಿಂದ ಕಟಿಯ ಕೆಳಭಾಗದವರೆಗೆ ಉಪವೀತವಿದೆ. ಸೊಂಟದಿಂದ ಕೆಳಭಾಗಕ್ಕೆ

---

೯೦. ಡಾ. ಉಷಾ ಫಾಟಕ್ : ವೇಷ ಭೂಷಣ ಪ್ರಸಾಧನ, ಪುಟ – ೩೮೧

೯೧. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೦೦



ಕಟಿಬಂಧವಿದ್ದು, ಊರುಧಾಮದ ರಚನೆಯಲ್ಲಿ ಸರಪಳಿಯಂತಿರುವ ಆಭರಣಗಳ ಜೋಡಿಕೆ ಕಂಡುಬರುತ್ತದೆ. ನಂದಿ ಮಂಟಪದಲ್ಲಿರುವ ಶಿಲ್ಪದಂತೆ ಈ ಶಿಲ್ಪವು ಒಂದೇ ರೀತಿಯಲ್ಲಿದೆ.

ಶಿಲ್ಪ –೫

ನಂದಿಮಂಟಪದ ಬಲಭಾಗದ ಗೋಡೆಯ ಮೇಲೆ ರಚನೆಯಾದ ಈ ಶಿಲ್ಪವು ಸ್ತ್ರೀಯ ತೋರುಮುಡಿ ವಿನ್ಯಾಸವನ್ನು ಹೊಂದಿದ್ದು, ಕಿವಿಗಳಲ್ಲಿ ಕರ್ಣಕುಂಡಲಗಳಿವೆ ಹಾಗೂ ಕೊರಳಲ್ಲಿ ಅರ್ಧಚಂದ್ರಾಕೃತಿಯಂತಿರುವ ಮುತ್ತಿನ ಸರವಿದೆ. ಉಪವೀತವನ್ನು ಧರಿಸಿದ್ದಾಳೆ. ತೋಳುಗಳಲ್ಲಿ ತೋಳುಬಂಧವನ್ನು ಹಾಗೂ ಕೈಗಳಲ್ಲಿ ಬಳೆಗಳನ್ನು ಹೊಂದಿದ್ದು, ಈ ಸ್ತ್ರೀ ಶಿಲ್ಪದ ಕೇಶರಾಶಿಯು ಹಿಂದೆ ನೋಡಿದಕ್ಕಿಂತಲೂ ವಿಶೇಷವಾಗಿದೆ. ಮುಖದ ಒಂದು ಪಟ್ಟು ಎತ್ತರವಾಗಿ ಕೇಶವನ್ನು ವೃತ್ತಾಕಾರವಾಗಿ ಕಟ್ಟಿ, ಅದರ ಮಧ್ಯದಲ್ಲಿ ಸಣ್ಣದೊಂದು ವೃತ್ತಾಕಾರದ ಮುತ್ತಿನ ಅಲಂಕರಣವನ್ನು ರಚನೆ ಮಾಡಿದ್ದಾರೆ. ಈ ಕೇಶದ ರೇಖೆಗಳು ವಕ್ರರೇಖೆಯಾಗಿದ್ದು ಅದರ ಮಧ್ಯ ಒಂದೊಂದು ಮುತ್ತುಗಳಿಂದ ಅಲಂಕೃತಗೊಂಡಿವೆ.

ಶಿಲ್ಪ –೬

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಅರೆಗಂಭಗಳಲ್ಲಿ ಕಂಡುಬರುವ ಶಿಲ್ಪವು ಜಡೆಯ ರೀತಿಯಲ್ಲಿದೆ. ಉದ್ದನೆಯ ಕೇಶವನ್ನು ತನ್ನ ಎಡಗೈಯಿಂದ ಹಿಡಿದುಕೊಂಡಿದ್ದಾಳೆ. ಹಸನ್ಮುಖವಾಗಿರುವ ಈ ಶಿಲ್ಪವು ನೋಡಲು ಆಕರ್ಷಣೀಯವಾಗಿದೆ. ಸೋರ್ಮುಡಿಯು ಬೆನ್ನಿನ ಮೇಲೆ ನೀಳವಾಗಿ ಇಳಿಬಿಳುತ್ತಿದ್ದ ಕೇಶವಿನ್ಯಾಸವೆಂಬುದು ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ. ಅದನ್ನು ಹಾವಿಗೆ, ನದಿಗೆ ಹೋಲಿಸಿರುವುದರಿಂದ ಬೆನ್ನ ಮೇಲೆ ಅಂಕುಡೊಂಕಾಗಿ ಇಳಿಬಿದ್ದಿರುವ ಕೇಶರಾಶಿಯನ್ನು ಕಲ್ಪಿಸಬಹುದು. ಇದು ಸರಳವಾದ ವಿನ್ಯಾಸವೇ ಆಗಿದ್ದರೂ ಬಹುಶಃ ಸುಂದರವಾಗಿ ಕಾಣುತ್ತಿತ್ತು. ಆದ್ದರಿಂದಲೆ ಕಾವ್ಯಗಳು ಸೋರ್ಮುಡಿಯು ಬೆಡಗನ್ನು ವಿಶೇಷವಾಗಿ ಪ್ರಸ್ತಾಪಿಸಿ ವರ್ಣಿಸಿವೆ. ಯಾವುದೇ ಸಂದರ್ಭಕ್ಕೂ ಹೊಂದುವಂತಹ ಕೇಶವಿನ್ಯಾಸವಾಗಿದ್ದರಿಂದ ಎಲ್ಲ ವರ್ಗದ ಸ್ತ್ರೀಯರೂ ಇದನ್ನು ಬಯಸುತ್ತಿದ್ದರು.[೯೨] ಇಂದಿಗೂ ಈ ಕೇಶವಿನ್ಯಾಸದ ಹೆಣಲನ್ನು ಜನಸಾಮಾನ್ಯರಲ್ಲಿ ನೋಡಬಹುದಾಗಿದೆ.

ಶಿಲ್ಪ –೭

ಬಳಲು ಎಂಬುದಕ್ಕೆ ಜೋತಾಡುವುದು ಎಂಬರ್ಥವಿದೆ. ಆದ್ದರಿಂದ ಬಳಲ್ಮುಡಿ ಎಂಬುದನ್ನು ಸಡಿಲವಾಗಿ ಹಾಕಿದ, ಬೆನ್ನ ಮೇಲೆ ಜೋತಾಡುವ ಕೂದಲಿನ ಗಂಟು ಎಂದು ತಿಳಿಬಹುದು.[೯೩] ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಎದುರಿಗಿರುವ ನಂದಿಮಂಟಪದ ಒಳಭಾಗದ

---

೯೨. ಡಾ. ಉಷಾ ಫಾಟಕ್ : ವೇಷ ಭೂಷಣ ಪ್ರಸಾಧನ, ಪುಟ – ೩೮೨

೯೩. ಅದೇ. ಪುಟ – ೩೮೧



ಕಂಬದ ಎಡಭಾಗದಲ್ಲಿರುವ ಈ ಶಿಲ್ಪ ತುರುಬನ್ನು ಹೊಂದಿದೆ. ಈ ಕೇಶವಿನ್ಯಾಸವನ್ನು ಒಂದುಗೂಡಿಸಿ ದುಂಡಾಗಿರುವ ಕೇಶವು ಹೂವಿನ ಮಾಲೆ ಸುತ್ತಿರುವ ಹಾಗೆ ಇದೆ. ತಲೆಯ ಮಧ್ಯದಲ್ಲಿ ಉದ್ದವಾದ ರೇಖೆಗಳಿಂದ ಸುರುಳಿಯಾಗಿ ಅಲಂಕೃತಗೊಂಡಿದೆ.

ಶಿಲ್ಪ –೮

ಪಟ್ಟದಕಲ್ಲಿನ ಪಾಪನಾಥ ದೇವಾಲಯದಲ್ಲಿರುವ ಈ ಶಿಲ್ಪವು ಪ್ರವೇಣಿ ಕೂದಲನ್ನು ಹಿಂದಕ್ಕೆ ಬಾಚಿಕೊಂಡು ಹೆಳಲನ್ನು ಹೆಣೆಯಲಾಗಿರುತ್ತದೆ. ಕಾಳಿದಾಸನು ಋತುಸಂಹಾರದಲ್ಲಿ ಏಕವೇಣಿಯ ಪ್ರಸ್ತಾಪವನ್ನು ಮಾಡುತ್ತಾನೆ. ಈ ಬಗೆಯ ಕೇಶಬಂಧವು ಈಗಲೂ ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿದೆ. ಒಮ್ಮೊಮ್ಮೆ ಹೀಗೆ ಇಳಿಬಿಡಲಾದ ಹೆಳಲಿಗೆ ಲಾಡಿ ಇಲ್ಲವೇ ಗೊಂಡೆಯ ಅಲಂಕಾರವಿರುತ್ತದೆ. ಇಗಲೂ ಹಳ್ಳಿಗಳಲ್ಲಿ ಲಾಡಿ ಕಟ್ಟಿರುವುದನ್ನು ಕಾಣುತ್ತೇವೆ.

ಶಿಲ್ಪ –೯

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಒಳಭಾಗದ ಬಲಭಾಗದಲ್ಲಿರುವ ಈ ದಂಪತಿ ಶಿಲ್ಪವು ದ್ವಿಭಂಗಿಯಲ್ಲಿದ್ದು, ಈ ಶಿಲ್ಪದ ಕೇಶವಿನ್ಯಾಸ ಇಂದಿನ ಮಹಿಳೆಯರಲ್ಲಿ ಕಂಡುಬರುವ ರೀತಿಯಲ್ಲಿದೆ. ಇಲ್ಲಿ ಸ್ತ್ರೀಯ ಕೇಶವನ್ನು ಪುರುಷ ತನ್ನ ಎಡಗೈಯಿಂದ ಸ್ತ್ರೀಯ ಕೂದಲನ್ನು ಹಿಡಿದಿದ್ದಾನೆ. (ಬಿಡಿ ಮುಡಿ) ಕೇಶಗಳು ಕೆಳಬಾಗಿವೆ, ಹಾಗೆ ಪುರುಷನ ಕೈಯಲ್ಲಿ ಅಲಂಕೃತವಾದ ಕೇಶಬಂಧವನ್ನು ಹಿಡಿದು ಪತ್ನಿಗೆ ಹೆರಳು ಹಾಕುವ ಸನ್ನಿವೇಶ ಕಂಡುಬಂದಿದೆ. ಹಾಗೆ ಪುರುಷನ ಕೇಶಗಳನ್ನು ಕಿರೀಟದ ಹಾಗೆ ಮೇಲಕ್ಕೆ ಎತ್ತಿ ಕಟ್ಟಲಾಗಿದೆ.

ಶಿಲ್ಪ –೧೦

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಬಲಗೋಡೆಯಲ್ಲಿ ರಚನೆಯಾದ ಈ ಶಿಲ್ಪವೊಂದನ್ನು ಒಂದು ಬೃಹತ್ತಾದ ಕಂಬದ ಮೇಲೆ ಕೆತ್ತಲಾಗಿದೆ (ತೋರುಮುಡಿ ತಲೆಗಿಂತ ಎತ್ತರದಲ್ಲಿ ಕಟ್ಟಿರುವುದು).[೯೪] ಈ ಶಿಲ್ಪವು ವಿನ್ಯಾಸದ ದೃಷ್ಟಿಯಿಂದ ಇಲ್ಲಿ ಮುಖ್ಯವಾಗಿ ಕೇಶವಿನ್ಯಾಸವನ್ನೇ ಹೆಚ್ಚು ವರ್ಣಿಸಲಾಗಿದೆ. ಇಲ್ಲಿಯು ಸಹ ಸರಳವಾದ ರೇಖೆಯಿಂದ ಚಿತ್ರಿಸಲಾಗಿದೆ. ಮಧ್ಯದಲ್ಲಿ ವೃತ್ತಾಕಾರದ ಚೆಂಡು ಹೂವಿನ ಕಲ್ಪನೆ ನೋಡುಗರಿಗೆ ಕಾಣುವಂತೆ ಹಲವಾರು ಬಿಡಿ ಮುತ್ತುಗಳಿಂದ ಸುಂದರವಾಗಿ ಮೂಡಿಬಂದಿದೆ. ಹೀಗೆ ಹಲವಾರು ರೀತಿಯ ಶೈಲಿಯನ್ನೊಳಗೊಂಡ ಶಿಲ್ಪಗಳನ್ನು ಚಾಲುಕ್ಯರ ಕಾಲದಲ್ಲಿ ಇನ್ನೂ ಹಲವಾರು ಕಾಣಬಹುದಾಗಿದೆ.


ಶಿಲ್ಪ –೧೧

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯ ಮುಂದಿರುವ ನಂದಿಮಂಟಪದ ಈ ಶಿಲ್ಪದಲ್ಲಿ ಕೇಶಗಳು ಸಿಂಬಿ (ಗೋಪುರ) ಆಕಾರದಲ್ಲಿ ತಲೆಯ ಮೇಲೆ ಒಂದರ ಮೇಲೊಂದರಂತೆ

---

೯೪. ಡಾ. ಅರವಿಂದ ಮಾಲಗತ್ತಿ (ಪ್ರ.ಸಂ.) : ಕನ್ನಡ ವಿಶ್ವಕೋಶ, ಕರ್ನಾಟಕ ಸಂ–೧, ಪುಟ – ೬೩೨

ದಂಪತಿ ಶಿಲ್ಪಗಳು



ಶಿಲ್ಪ-೧ ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೨. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೪. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ

ದಂಪತಿ ಶಿಲ್ಪಗಳು



ಶಿಲ್ಪ-೫. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೬. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೭. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೮. ದುರ್ಗಾ ದೇವಾಲಯ, ಐಹೊಳೆ

ದಂಪತಿ ಶಿಲ್ಪಗಳು



ಶಿಲ್ಪ-೯. ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೧೦. ದುರ್ಗಾ ದೇವಾಲಯ, ಐಹೊಳೆ



ಶಿಲ್ಪ-೧೧. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೧೨. ದುರ್ಗಾ ದೇವಾಲಯ, ಐಹೊಳೆ

ದಂಪತಿ ಶಿಲ್ಪಗಳು



ಶಿಲ್ಪ-೧೩. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೧೪. ಹುಚ್ಚಪ್ಪಯ್ಯನ (ಮಠ) ದೇವಾಲಯ, ಐಹೊಳೆ



ಶಿಲ್ಪ-೧೫. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೧೬. ಹುಚ್ಚಪ್ಪಯ್ಯನ (ಮಠ) ದೇವಾಲಯ, ಐಹೊಳೆ

ದಂಪತಿ ಶಿಲ್ಪಗಳು



ಶಿಲ್ಪ-೧೭. ವಿರೂಪಾಕ್ಷ ದೇವಾಲಯ, ಐಹೊಳೆ




ಶಿಲ್ಪ-೧೮. ವಿರೂಪಾಕ್ಷ ದೇವಾಲಯ, ಐಹೊಳೆ

ಸಾಲಭಂಜಿಕೆ ಶಿಲ್ಪಗಳು



ಶಿಲ್ಪ-೧




ಶಿಲ್ಪ-೨



ಶಿಲ್ಪ-೩

ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ


ಸಾಲಭಂಜಿಕೆ ಶಿಲ್ಪಗಳು



ಶಿಲ್ಪ–೪



ಶಿಲ್ಪ–೫




ಶಿಲ್ಪ–೬

ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ

ಶಿಲ್ಪಗಳ ಕೇಶವಿನ್ಯಾಸ




ಶಿಲ್ಪ–೧. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ–೨. ನಂದಿ ಮಂಟಪ, ಪಟ್ಟದಕಲ್ಲು


ಶಿಲ್ಪಗಳ ಕೇಶವಿನ್ಯಾಸ




ಶಿಲ್ಪ-೩. ನಂದಿ ಮಂಟಪ, ಪಟ್ಟದಕಲ್ಲು



ಶಿಲ್ಪ-೪. ನಂದಿ ಮಂಟಪ, ಪಟ್ಟದಕಲ್ಲು



ಶಿಲ್ಪ-೫. ನಂದಿ ಮಂಟಪ, ಪಟ್ಟದಕಲ್ಲು



ಶಿಲ್ಪ-೬. ಪಾಪನಾಥ ದೇವಾಲಯ, ಪಟ್ಟದಕಲ್ಲು

ಶಿಲ್ಪಗಳ ಕೇಶವಿನ್ಯಾಸ




ಶಿಲ್ಪ-೭. ನಂದಿ ಮಂಟಪ, ಪಟ್ಟದಕಲ್ಲು




ಶಿಲ್ಪ-೮. ಪಾಪನಾಥ ದೇವಾಲಯ, ಪಟ್ಟದಕಲ್ಲು




ಶಿಲ್ಪ-೯. ಪಾಪನಾಥ ದೇವಾಲಯ. ಪಟ್ಟದಕಲ್ಲು



ಶಿಲ್ಪ-೧೦. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೧. ನಂದಿ ಮಂಟಪ, ಪಟ್ಟದಕಲ್ಲು



ಶಿಲ್ಪ-೧೨. ನಂದಿ ಮಂಟಪ, ಪಟ್ಟದಕಲ್ಲು



ಸುರುಳಿಯಾಗಿ ಜೋಡಿಸಿದ್ದು, ಎತ್ತರವಾಗಿ, ಮುರುಗಿಯಂತೆ ಕಾಣುತ್ತದೆ. ಈ ಶಿಲ್ಪದಲ್ಲಿ ಕೇಶದ ಜೊತೆಗೆ ಒಂದು ಮುತ್ತಿನ ಸಾಲುಮಣಿ ಇರುವುದನ್ನು ಗಮನಿಸಬಹುದು.

ಶಿಲ್ಪ –೧೨

ಪಟ್ಟದಕಲ್ಲಿನ ನಂದಿಮಂಪಟದ ಈ ಶಿಲ್ಪದ ಕೇಶವು ಹಣೆಯಿಂದ ರೇಖೆಗಳಾಗಿ ನೆತ್ತಿಯವರೆಗೆ ಬಾಚಿದ್ದು, ಮಧ್ಯದಲ್ಲಿ ಸಿಂಬಿಯಂತೆ ಸುತ್ತಲಾಗಿದೆ. ಮತ್ತೆ ಚಪ್ಪಟೆಯಾಗಿದೆ. ಕೇಶದ ಜೊತೆಗೆ ಅಲಂಕಾರಿಕವಾಗಿ ಹೆಣೆಯಲಾಗಿದೆ. ಮೂರು ಸುರುಳಿಯಾಗಿದ್ದು, ನೋಡಲು ಮೆತ್ತನೆಯ ದಿಂಬಿನಂತೆ ಕಾಣುತ್ತದೆ. ಇಂತಹ ಹಲವಾರು ವಿವಿಧಾಕಾರದ ವಿನ್ಯಾಸಗಳನ್ನು ಹೊಂದಿರುವ ಶಿಲ್ಪಗಳು ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚಿತಗೊಂಡಿವೆ.

ದ್ವಾರಪಾಲಕ ಶಿಲ್ಪಗಳು

ದೇವಾಲಯಗಳಲ್ಲಿ ಗಮನ ಸೆಳೆಯುವ ಇನ್ನೊಂದು ವರ್ಗದ ಶಿಲ್ಪಗಳೆಂದರೆ ದ್ವಾರಪಾಲಕ ಶಿಲ್ಪಗಳು. ಶೈವ, ವೈಷ್ಣವ ದೇವಾಲಯ ದ್ವಾರಗಳೇ ಅಲ್ಲದೇ ಜೈನ ದೇವಾಲಯಗಳ ದ್ವಾರಗಳಲ್ಲಿಯೂ ಪ್ರಮಾಣಬದ್ಧ ಸುಂದರ ದ್ವಾರಪಾಲಕ ಶಿಲ್ಪಗಳು ಭಕ್ತರನ್ನು ಆಕರ್ಷಿಸುತ್ತವೆ. ದೇವಾಲಯದ ಪ್ರವೇಶ, ಮಂಟಪ, ನವರಂಗದ್ವಾರ ಮತ್ತು ಗರ್ಭಗೃಹದ ದ್ವಾರಗಳ ಇಕ್ಕೆಲಗಳಲ್ಲಿ ದ್ವಾರಪಾಲಕ ಶಿಲ್ಪಗಳನ್ನು ಸ್ಥಾಪಿಸಿರುತ್ತಾರೆ.[೯೫] ಕೆಲವೊಮ್ಮೆ ಗರ್ಭಗೃಹದಲ್ಲಿರುವ ಪ್ರತಿಮೆಯ ಎತ್ತರದಷ್ಟೇ ಈ ದ್ವಾರಪಾಲಕರನ್ನು ಕೆತ್ತಿರುತ್ತಾರೆ. ರಾವಳಫಡಿಯ ಗುಹಾಲಯದಲ್ಲಿ ದ್ವಾರಪಾಲಕರನ್ನು ನೋಡಬಹುದು.

ಶಿಲ್ಪ –೧

ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಎಡಗಂಬದ ಮೇಲಿನ ದ್ವಾರಪಾಲಕನು ಉದ್ದಾದ ಕೋಟನ್ನು ಧರಿಸಿದ್ದಾನೆ. ಅದು ಮೊಣಕಾಲಿನವರೆಗೆ ಚಾಚಿದೆ. ಅದರ ಮೇಲೆಯೇ ಬಿಗಿಯಾದ ಪಟ್ಟಿಯೊಂದನ್ನು ಟೊಂಕಕ್ಕೆ ಬಿಗಿದಿದ್ದಾನೆ. ಕೋಟು ಧರಿಸಿದ ಇಬ್ಬರು ದ್ವಾರಪಾಲಕರನ್ನು ಐಹೊಳೆಯ ರಾವಳಫಡಿಯಲ್ಲಿ ಕಾಣುತ್ತೇವೆ. ವಿದೇಶಿಯರ ಈ ಉಡುಪನ್ನು ವೈವಿಧ್ಯಕ್ಕಾಗಿ ಶಿಲ್ಪಿಯು ಆಯ್ಕೆ ಮಾಡಿರಬಹುದು. ಇವು ಯವನರ ಶಿಲ್ಪಗಳೆಂದು ಜೆ. ಸಿ. ಹಾರ್ಲೆ ಎಂಬುವವರು ಗುರುತಿಸಿದ್ದಾರೆ. ವಿದೇಶೀಯರ ಈ ಉಡುಪುಗಳು ದ್ವಾರಪಾಲಕರಲ್ಲಿ ಕಂಡುಬರುವ ಸಂಗತಿ ಕುತೂಹಲಕಾರಿಯಾಗಿದೆ.[೯೬] ಈ ಶಿಲ್ಪವು ನೈಜತೆಯಿಂದ ಕೂಡಿದ್ದು ದ್ವಿಮಾನದಲ್ಲಿ ರಚಿಸಿದ್ದಾರೆ.

೯೫. ಡಾ. ಚೂಡಾಮಣಿ ನಂದಗೋಪಾಲ : ಶಿಲೆ–ಕಲೆ, ಪುಟ – ೧೮೩

೯೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೯೬



ಶಿಲ್ಪ –೨

ಮಹಾಕೂಟದ ದಕ್ಷಿಣ ದ್ವಾರದ ಎಡಬಲಗಳಲ್ಲಿ ಎರಡು ಶಿಲ್ಪಗಳು ವಿಚಿತ್ರ ಶಿಲ್ಪಕಲಾಕೃತಿಗಳಾಗಿ ಕಂಡುಬರುತ್ತವೆ. ಬಲ ಭಾಗದಲ್ಲಿ ಪುರುಷ–ಕಾಲಾ ಎಂದು ಎಡಭಾಗದಲ್ಲಿ ಸ್ತ್ರೀ–ಕಾಲಿ ಎಂದು ಹೆಸರಿಸಿದ್ದಾರೆ. ಅಸ್ಥಿಪಂಜರವೇ ಎದ್ದುಕಾಣುವ ಈ ಮೂರ್ತಿಗಳು ಭಯಾನಕವಾಗಿ ಮೂಡಿಬಂದಿವೆ. ಶಿವನು ಸ್ಮಶಾನವಾಸಿ–ಭೂತಗಣಗಳಿಗಿರುವ ಹಾಗೆ ಆದುದರಿಂದ ಈ ಮೂರ್ತಿಗಳಿಗೆ ಕಾಲಾ–ಕಾಲಿ ಎಂದಿದ್ದಾರೆ. ವಾತಾಪಿ–ಇಲ್ವಲ, ರಾಕ್ಷಸರು ಎಂದು ಕೆಲವರ ಅಭಿಪ್ರಾಯ.[೯೭] ಯಮನ ಅಧಿಪತಿ ಶಿವನಾದರಿಂದ ಈ ದಕ್ಷಿಣ ದಿಕ್ಕಿಗೆ ಭೂತಗಣವನ್ನು ದ್ವಾರಪಾಲಕರಾಗಿ ನಿರ್ಮಿಸಿದ್ದು ನಿಯಮಬದ್ಧ ಎಂದು ಶಾಸ್ತ್ರಕಾರರು ಹೇಳುತ್ತಾರೆ.

ಶಿಲ್ಪ –೩

ಐಹೊಳೆಯ ರಾವಳಫಡಿ ಗುಹೆಯ ಈಶಾನ್ಯ ಭಾಗದಲ್ಲಿ ಚತುರ್ಭುಜ ಶೈವ ದ್ವಾರಪಾಲಕನ ಶಿಲ್ಪವಿದೆ. ಇವನು ಬಲಗೈಯಲ್ಲಿ ಸರ್ಪವನ್ನು ಹಿಡಿದು, ಎಡಗೈಯನ್ನು ಕಟ್ಯವಲಂಬಿತ ರೀತಿಯಲ್ಲಿ ಇರಿಸಿದ್ದಾನೆ. ಹಿನ್ನೆಲೆಯಲ್ಲಿ ಬಲಬದಿಗೆ ತ್ರಿಶೂಲವನ್ನೂ ಎಡಬದಿಗೆ ಪರಶುವನ್ನೂ ತೋರಿಸಲಾಗಿದೆ. ಇದೇ ರೀತಿಯಾಗಿ ಆಗ್ನೇಯ ಬದಿಯಲ್ಲಿಯೂ ದ್ವಿಭುಜ ಶೈವ ದ್ವಾರಪಾಲಕ ನಿಂತಿದ್ದಾನೆ. ಇವನ ಬಲಗೈಯಲ್ಲಿ ಖಟ್ವಾಂಗವಿದೆ. ಎಡಗೈಯನ್ನು ಕಟ್ಯವಲಂಬಿತ ರೀತಿಯಲ್ಲಿರಿಸಿದ್ದಾನೆ. ಹಿನ್ನೆಲೆಯಲ್ಲಿ ಎಡಗಡೆ ಸರ್ಪ ಸುತ್ತಿಕೊಂಡಿರುವ ಆಯುಧವಿದೆ.[೯೮] ಇಲ್ಲಿ ಗಮನಿಸಬಹುದಾದ ವಿಷಯವೆಂದರೆ ಮುಖ್ಯ ಶಿಲ್ಪಕ್ಕೆ ನೀಡಿದಂತಹ ಮಹತ್ವವನ್ನು ಈ ದ್ವಾರಪಾಲಕರಿಗೂ ಚಾಲುಕ್ಯ ಶಿಲ್ಪಿಗಳು ಮಹತ್ವ ನೀಡಿದ್ದಾರೆ.

ಚಿತ್ರ –೪

ಬಾದಾಮಿ ೧ನೇ ಶೈವ ಗುಹಾಲಯದ ಮುಮ್ಮುಖದ ಪೂರ್ವಪಾರ್ಶ್ವದ ಗೋಡೆಯಲ್ಲಿ ದ್ವಿಭಂಗಿಯಲ್ಲಿ ಹಸನ್ಮುಖನಾಗಿ, ಕಿರೀಟಧಾರಿಯಾಗಿ ನಿಂತಿರುವ ಈ ದ್ವಿಭುಜ ದ್ವಾರಪಾಲಕನ ಬಲಗೈ ತ್ರಿಶೂಲವನ್ನು ಹಿಡಿದಿದೆ. ಎಡಗೈ ಕಟ್ಯವಲಂಬಿತ ರೀತಿಯಲ್ಲಿದೆ.[೯೯] ಶಿರದ ಹಿಂದೆ ಪ್ರಭಾಮಂಡಲ ವೃತ್ತಾಕಾರದಲ್ಲಿದ್ದು, ಈ ಶಿಲ್ಪಕ್ಕೆ ಮೆರುಗು ತಂದಿದೆ. ದ್ವಾರಪಾಲಕನ ಕೆಳಗಿನ ಪಟ್ಟಿಕೆಯಲ್ಲಿ ಆನೆ ಮತ್ತು ನಂದಿಯು ಕೂಡಿದ ಶಿಲ್ಪವಿದೆ. ಇದು ಚಾಲುಕ್ಯರ ಕಾಲದ ಅಂದಿನ ಆಧುನಿಕ ಶಿಲ್ಪವೆಂದರೆ ಅತಿಶಯೋಕ್ತಿಯೇನಲ್ಲ. ಕೆಲವು ಕಡೆ ಚಾಲುಕ್ಯರು ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಬಾದಾಮಿಯ ಗುಹಾಲಯದಲ್ಲಿ ಮೂರು ದೇಹ, ನಾಲ್ಕು

---

೯೭. ಎನ್. ಶಿವಾನಂದ ಸಾತಿಹಾಳ : ಬಾದಾಮಿ ಪರಿಸರದ ಮಹಾಕೂಟ, ಒಂದು ಅಧ್ಯಯನ, (ಬಿ.ವಿ.ವಿ. ಕಿ.ಯೋ.ವ), ಪುಟ – ೧೮

೯೮. ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ : ಬಾದಾಮಿ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ – ೭೦

೯೯. ಅದೇ., ಪುಟ – ೫೮


ದ್ವಾರಪಾಲಕರು



ಶಿಲ್ಪ-೧. ಮಲ್ಲಿಕಾರ್ಜುನ ದೇವಾಲಯ, ಮಹಾಕೂಟ



ಶಿಲ್ಪ-೨. ದಕ್ಷಿಣ ದ್ವಾರಬಾಗಿಲು, ಮಹಾಕೂಟ



ಶಿಲ್ಪ-೩. ರಾವಳಫಡಿ ಗುಹಾಲಯ, ಐಹೊಳೆ



ಶಿಲ್ಪ-೪. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಕಾಲುಗಳನ್ನು ಮಾಡಿರುವುದು ಅಂದಿನ ಕಾಲದಲ್ಲಿಯೂ ಆಧುನಿಕತೆಯಿತ್ತೆಂಬುದನ್ನು ಈ ಶಿಲ್ಪವು ತಿಳಿಸಿಕೊಡುತ್ತದೆ.

ಪದ್ಮನಿಧಿ-ಶಂಖನಿಧಿ ಶಿಲ್ಪಗಳು

ಶಿಲ್ಪ -೧

ರಾವಳಫಡಿ ಗುಹಾಲಯದ ಮುಮ್ಮುಖದ ಇಕ್ಕೆಲಗಳಲ್ಲಿರುವ ಪದ್ಮನಿಧಿ, ಶಂಖನಿಧಿ ಶಿಲ್ಪಗಳು ಬಹಳಷ್ಟು ಸವೆದಿವೆ. ಇಷ್ಟು ದೊಡ್ಡ 'ನಿಧಿ'ಗಳ ಶಿಲ್ಪ ಬೇರಾವ ಗುಹಾಲಯದಲ್ಲೂ ಇಲ್ಲವೆಂಬುದು ಗಮನೀಯ. ಕುಬೇರನ ನವನಿಧಿಗಳಲ್ಲಿ ಸೇರಿರುವ ಶಂಖ ಮತ್ತು ಪದ್ಮವನ್ನು ಇವರು ಪ್ರತಿನಿಧಿಸುತ್ತಾರೆ. ಡೊಳ್ಳು ಹೊಟ್ಟೆಯ ವ್ಯಕ್ತಿಗಳಾಗಿ ಇವರನ್ನು ಕುಳ್ಳಿರಿಸಲಾಗಿದೆ.[೧೦೦] ಶಿಲ್ಪವು ದ್ವಿಮಾನದಲ್ಲಿದ್ದು ಪ್ರಕೃತಿವಿಕೋಪದಿಂದ ಸವೆದು ಹೋಗಿವೆ.

ಶಿಲ್ಪ -೨

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ದ್ವಾರಬಾಗಿಲದ ಇಬ್ಬದಿಗಳ ಕೋಷ್ಟಕಗಳಲ್ಲಿ ಪದ್ಮನಿಧಿ-ಶಂಖನಿಧಿಗಳನ್ನು ಕೆತ್ತಲಾಗಿದೆ. ಕೊರಳಲ್ಲಿ ವಿನ್ಯಾಸವುಳ್ಳ ಸರವಿದ್ದು, ಉದರಬಂಧವನ್ನು ಧರಿಸಿದೆ. ತಲೆಯ ಹಿಂಭಾಗದಲ್ಲಿ ದಪ್ಪನಾದ ಉದ್ದನೆಯ ವೃತ್ತಾಕಾರದಲ್ಲಿ ಮುತ್ತಿನ ಮಣಿಯೊಂದಿಗೆ ಅಲಂಕೃತಗೊಳಿಸಲಾಗಿದೆ. ಕುಳಿತಿರುವ ಪೀಠದ ಕೆಳಗೆ ಮೂರು ಸಿಂಹಗಳಿದ್ದು, ಅತ್ಯಾಕರ್ಷಕವಾಗಿ ಮೂಡಿಬಂದಿವೆ.

ಶಿಲ್ಪ -೩

ಐಹೊಳೆಯಲ್ಲಿ ವಿರೂಪಾಕ್ಷದೇವಾಲಯದ ಅಧಿಷ್ಠಾನದಲ್ಲಿ ಪೂರ್ವಾಭಿಮುಖವಾಗಿ ಪದ್ಮನಿಧಿ-ಶಂಖನಿಧಿಯನ್ನು ಕೆತ್ತಲಾಗಿದೆ. ಕಿರೀಟಮುಕುಟವಿದ್ದು, ಕಿವಿಯಲ್ಲಿ ಮುತ್ತಿನ ಓಲೆಯನ್ನು ಧರಿಸಿದ್ದು, ತಲೆಯ ಹಿಂದುಗಡೆ ಅಲಂಕಾರವುಳ್ಳ ಪದ್ಮಚಕ್ರವಿದೆ. ಕೊರಳಲ್ಲಿ ಅಲಂಕಾರವುಳ್ಳ ಸರವನ್ನು ಧರಿಸಿದ್ದಾನೆ. ಕೈಗಳಲ್ಲಿ ಕಡಗವನ್ನು ಧರಿಸಿದ್ದಾನೆ. ಎದೆಯ ಭಾಗದಲ್ಲಿ ಎರಡು ಶಿಲ್ಪಗಳು ಬಿರುಕುಬಿಟ್ಟಿವೆ.

ಕಂಬಗಳು ಮತ್ತು ಜ್ಯಾಮಿತಿಕ ವಿನ್ಯಾಸಗಳು

ಜ್ಯಾಮಿತಿಯ ಸರಳ ವಿನ್ಯಾಸಗಳನ್ನು ಅಲಂಕರಣದ ಭಾಗವಾಗಿ ಖಾಲಿ ಸ್ಥಳಗಳನ್ನು ಮತ್ತು ಛತ್ತಿನ ಭಾಗವನ್ನು ಹಾಗೂ ಕಂಬಗಳಲ್ಲಿನ ಭಾಗವನ್ನು ತುಂಬಿಸುವುದಕ್ಕಾಗಿ ಉಪಯೋಗಿಸಿಕೊಂಡಿರುವ ಮೊದಲ ಪ್ರಯತ್ನವನ್ನು ಚಾಲುಕ್ಯ ಶಿಲ್ಪಗಳು ಮಾಡಿದಂತೆ ಕಂಡುಬರುತ್ತದೆ. ಸರಳವಾಗಿದ್ದರೂ ಚಿತ್ತಾರದ ರೀತಿಯಲ್ಲಿ ಅವುಗಳನ್ನು ಬಳಸಿಕೊಂಡಿರುವ

---

೧೦೦. ಪ್ರೊ. ಶ್ರೀನಿವಾಸ ಎಂ. ಪಾಡಿಗಾರ, ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪುಟ - ೭೦

ಪದ್ಮನಿಧಿ ಶಂಖನಿಧಿ ಶಿಲ್ಪಗಳು



ಶಿಲ್ಪ-೧. ರಾವಳಫಡಿ ಗುಹಾಲಯ, ಪಟ್ಟದಕಲ್ಲು



ಶಿಲ್ಪ-೨. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೩. ವಿರೂಪಾಕ್ಷ ದೇವಾಲಯ, ಐಹೊಳೆ



ಶಿಲ್ಪಿಗಳ ಜಾಣ್ಮೆಯನ್ನು ಮೆಚ್ಚಬೇಕಾಗುತ್ತದೆ. ಇನ್ನು ಜಾಲಂಧ್ರಗಳ ರಚನೆಯನ್ನು ನೋಡಿದರೆ ಅಲ್ಲಿಯೂ ಇದೇ ವಿನ್ಯಾಸಗಳನ್ನು ಬಳಸಿಕೊಂಡಿರುವುದು ಕಾಣಿಸುತ್ತದೆ. ದೇವಾಲಯದ ಒಳಗಡೆಗೆ ಗಾಳಿ, ಬೆಳಕುಗಳನ್ನು ಒದಗಿಸುವ ಅನುಕೂಲಕ್ಕಾಗಿ ಕೆತ್ತಲಾಗಿರುವ ಜಾಲಂಧ್ರಗಳಲ್ಲಿ ಅಲಂಕಾರಿಕ ವಿನ್ಯಾಸದ ಕೆತ್ತನೆಗಳನ್ನು ಗುರುತಿಸಬಹುದು.

ಮೊದಲಿಗೆ ಕಂಬಗಳ ಮೇಲಿನ ಕೆತ್ತನೆಗಳನ್ನು ನೋಡೋಣ. ಚಾಲುಕ್ಯರ ಗುಹಾಲಯಗಳಲ್ಲಿ ದೊಡ್ಡ ಗಾತ್ರದ ಕಂಬಗಳು ದೇವಾಲಯವನ್ನು ಆಧರಿಸಿ ನಿಂತಂತೆ ಕೆತ್ತಲಾಗಿವೆ. ಚೌಕಾಕಾರದ ಬೃಹತ್ ಕಂಬಗಳ ಕೆಳಗಿನ ಭಾಗದಲ್ಲಿ ಖಾಲಿಯಿದ್ದು ಮೇಲಿನ ಅರ್ಧಬಾಗದಲ್ಲಿ ಕೆತ್ತನೆಗಳನ್ನು ಒಳಗೊಂಡಿವೆ. 'ಗುಹಾಲಯಗಳ ಕಂಬಗಳು ವೈವಿಧ್ಯಮಯವಾಗಿದ್ದು ಗಮನಾರ್ಹವಾಗಿವೆ. ಇಲ್ಲಿನ ಮೊಗಸಾಲೆಯ ಮುಂದಿನ ಸಾಲಿನ ಕಂಬಗಳು ಮತ್ತು ಮಂಟಪಗಳು ಬೃಹತ್ ಗಾತ್ರದವು. ಇವು ಚೌಕಾಕಾರವಾಗಿವೆ. ಚಾಲುಕ್ಯ ಕಟ್ಟಡಗಳಲ್ಲಿ ಇಂಥ ಕಂಬಗಳದ್ದೇ ಸಿಂಹಪಾಲು. ಈ ಕಂಬಗಳ ಕೆಳ ಅರ್ಧಭಾಗವು ಯಾವ ಅಂಕಣವೂ ಇಲ್ಲದೆ ಸಪಾಟಾದ ನಾಲ್ಕು ಬದಿಗಳನ್ನು ಒಳಗೊಂಡಿದೆ. ಮೇಲರ್ಧದಲ್ಲಿ ವೃತ್ತಾಕಾರದ ಉಬ್ಬು ಶಿಲ್ಪ ಹಾಗೂ ಅಲಂಕಾರಗಳಿಂದ ಕೂಡಿದ ಪಟ್ಟಿಕೆಗಳಿವೆ. ಅಲಂಕರಣದಲ್ಲಿ ಕೀರ್ತಿಮುಖಗಳು, ಮುತ್ತಿನ ಮಾಲೆಗಳು, ಪ್ರಾಣಿ ಪುಷ್ಪಗಳ ನಕ್ಷೆಗಳು, ಜ್ಯಾಮಿತಿ ನಕ್ಷೆಗಳು ಕೆತ್ತನೆಗೊಂಡಿರುತ್ತವೆ.'[೧೧೧] ದೇವಾಲಯವನ್ನು ಆಧರಿಸಿ ನಿಂತಿರುವ ಈ ಕಂಬಗಳು ಖಾಲಿಯಾಗಿದ್ದರೆ ನೋಡುವುದಕ್ಕೆ ಚೆನ್ನಾಗಿರುವುದಿಲ್ಲ ಎಂಬ ಉದ್ದೇಶದಿಂದ ಮೊದಲಿನ ಗುಹಾಲಯದ ರಚನೆಯ ಕಾಲಕ್ಕೆ ವಿನ್ಯಾಸಗಳ ಮೂಲಕ ಭರ್ತಿ ಮಾಡಿರಬಹುದು.

ಮುಂದಿನ ದಿನಗಳ ಕೆತ್ತನೆಯಲ್ಲಿ ಬೆಳವಣಿಗೆಗಳು ಕಂಡುಬಂದು ಒಂದು ನಿರ್ದಿಷ್ಟ ವಿನ್ಯಾಸದ ಉದ್ದೇಶದ ಕೆತ್ತನೆಗಳನ್ನು ಮಾಡಲು ತೊಡಗಿದ್ದು ನಂತರವೇ ಎಂದು ಯೋಚಿಸಬಹುದಾಗಿದೆ. ಇಲ್ಲಿನ ಪ್ರಾರಂಭ ಕಾಲದಕಂಬದ ಮೇಲಿನ ಕೆತ್ತನೆಗಳು ಸಾಮಾನ್ಯ ರೀತಿಯ ವಿನ್ಯಾಸವನ್ನು ಹೊಂದಿರುವಂತಹದ್ದನ್ನು ಗಮನಿಸಬಹುದು. ಈ ವಿನ್ಯಾಸಗಳು ಹೆಚ್ಚುಪಾಲು ಮುತ್ತಿನ ಹಾರದ ರೀತಿಯ ಮಾಲೆಗಳನ್ನು ಕಮಾನಿನ ರೀತಿಯಲ್ಲಿ ಎತ್ತಿ ತೂಗುಹಾಕಿದಂತೆ ಕೆತ್ತನೆಗಳನ್ನು ಹೊಂದಿದೆ. ಇಲ್ಲಿ ಹರಳುಗಳ ಆಕಾರ ಭಿನ್ನವಾಗಿವೆ. ವಿವಿಧ ಅಳತೆಯ ದೊಡ್ಡ ಮತ್ತು ಸಣ್ಣ ಹರಳುಗಳ ಹಾರಗಳನ್ನು ತೂಗುಹಾಕಿ ಮಧ್ಯದಲ್ಲಿ ಗೊಂಡೆಯನ್ನು ಇಳಿಬಿಟ್ಟಂತೆ ಈ ಹಾರಗಳ ಕೆತ್ತನೆಯಿದೆ. ಈ ಹಾರಗಳ ತುದಿಯಲ್ಲಿ ಕೀರ್ತಿಮುಖವಿದೆ. ಉಳಿದ ಸ್ಥಳಾವಕಾಶವನ್ನು ಸುರುಳಿ ವಿನ್ಯಾಸಗಳಿಂದ ಭರ್ತಿ ಮಾಡಲಾಗಿದೆ. ಯಾವುದೇ ಜಾಗವನ್ನು ಖಾಲಿಬಿಡದಂತೆ ತುಂಬಿಸುವುದೇ ಇವರ ಉದ್ದೇಶವಾಗಿತ್ತು. ಮಧ್ಯದ ಸಾಲಿನಲ್ಲಿ ವೃತ್ತಾಕಾರದ ಚೌಕಟ್ಟುಗಳನ್ನು ರಚಿಸಿದ್ದು ಅವುಗಳಲ್ಲಿ ಮೀನು, ಪಕ್ಷಿ ಅಥವಾ ಪ್ರಾಣಿಯ

೧೧೧. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೨೦



ಕೆತ್ತನೆಗಳಿವೆ. ಮುತ್ತಿನ ಹಾರಗಳ ಸಾಲು ಮತ್ತು ಈ ಪ್ರಾಣಿ-ಪಕ್ಷಿಯ ಕೆತ್ತನೆಗಳ ನಡುವೆ ಒಂದು ಸಾಲು ಕಮಲದಳಗಳ ವಿನ್ಯಾಸದ ಕೆತ್ತನೆಯನ್ನು ಹೊಂದಿರುತ್ತದೆ. ಅದರ ಮೇಲಿನ ಭಾಗದಲ್ಲಿ ನೇರ ಗೆರೆಗಳ ಕಂಬದ ಕೆತ್ತನೆಯನ್ನು ಉಳಿಸಿಕೊಂಡು, ಮೇಲಿನ ಭಾಗದಲ್ಲಿ ಇನ್ನೊಂದು ವೃತ್ತದ ರಚನೆ. ಅಲ್ಲಿಯೂ ಇದರ ಪುನರಾವೃತ್ತಿ ಅಥವಾ ಅರ್ಧವೃತ್ತ ಮತ್ತು ವೃತ್ತದಲ್ಲಿ ವಿನ್ಯಾಸಗಳ ಕೆತ್ತನೆ ಇರುತ್ತದೆ. ಮುಂದಿನ ಹಂತದಲ್ಲಿ ಈ ಜಾಗದಲ್ಲಿ ಮಿಥುನ ಶಿಲ್ಪಗಳು, ದಂಪತಿಗಳು ಅಥವಾ ಸ್ತ್ರೀ ಶಿಲ್ಪದ ಕೆತ್ತನೆಗಳು ರಚನೆಯಾಗಿರುವುದನ್ನು ಗಮನಿಸಬಹುದು.

ಮೊದಲನೆಯ ಶೈವ ಗುಹಾಲಯದ ಹೆಚ್ಚಿನ ಕಂಬಗಳಲ್ಲಿನ ಕೆತ್ತನೆಗಳು ಪುನರಾವರ್ತನೆಯಾದಂತೆ ಕಂಡುಬರುತ್ತವೆ. ಇಲ್ಲಿನ ವಿನ್ಯಾಸಗಳಲ್ಲಿ ಸುರುಳಿ ಉಬ್ಬು ಶಿಲ್ಪಗಳು ಅಧಿಕ. ಆದರೂ ಈ ಸುರುಳಿ ಶಿಲ್ಪಗಳಲ್ಲಿ ವಿಶೇಷತೆ ಇದೆ. ಇಲ್ಲಿ ಕೇವಲ ವಿನ್ಯಾಸಗಳಿಲ್ಲ, ಬದಲಾಗಿ ಹೂಬಳ್ಳಿಗಳನ್ನು, ಎಲೆಗಳನ್ನು, ನವಿಲು, ಮೀನು, ಮಕರ ಇತ್ಯಾದಿಗಳನ್ನು ತಿರುಚಿ, ಬಾಗಿಸಿ, ಅಲಂಕಾರಿಕ ವೃತ್ತಗಳಲ್ಲಿ, ಮತ್ತು ಬಾಗಿದ ನಯವಾದ ಲಯಬದ್ಧವಾದ ರೇಖೆಗಳಲ್ಲಿ ಚಿತ್ರಿಸಿದ್ದಾರೆ, ಇಲ್ಲಿ ವಿನ್ಯಾಸಗಳ ರಚನೆಯಲ್ಲಿ ಸಮತೋಲನವಿದೆ, ರೇಖಾಲಾಲಿತ್ಯವಿದೆ, ನೆರಳು-ಬೆಳಕುಗಳ ಕುರಿತಾದ ಚಿಂತನೆಯಿದೆ. ಈ ದೃಷ್ಟಿಯಿಂದ ಈ ಕೆತ್ತನೆಗಳು ಗಮನ ಸೆಳೆಯುತ್ತವೆ.

ಈ ವಿನ್ಯಾಸಗಳ ಕೆತ್ತನೆಯ ನಡುವೆ ವೃತ್ತ ಅಥವಾ ಅರ್ಧವೃತ್ತಗಳಲ್ಲಿ ಮಿಥುನ ಶಿಲ್ಪಗಳನ್ನು ಕೆತ್ತಿದ್ದಾರೆ. ಈ ಮಿಥುನ ಶಿಲ್ಪಗಳ ಸುತ್ತಲೂ ಮತ್ತೆ ಅದೇ ಹೂಬಳ್ಳಿಗಳ ಅಥವಾ ಕಮಲದ ದಳಗಳ ವಿನ್ಯಾಸದ ಚೌಕಟ್ಟನ್ನು ರಚಿಸಿ ಮೆರುಗು ನೀಡಿದ್ದಾರೆ. ಇದರಿಂದಾಗಿ ಇಡಿಯ ಕಂಬವು ಒಂದೇ ವಿನ್ಯಾಸದ ಪುನರಾವರ್ತನೆಯಂತೆ ಕಂಡುಬರುತ್ತದೆ. ಆದರೆ ಹತ್ತಿರದಿಂದ ಗಮನಿಸಿದಾಗ ಪ್ರತಿಯೊಂದು ವಿನ್ಯಾಸವೂ ಇನ್ನೊಂದಕ್ಕಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ಇಲ್ಲಿ ಎಲ್ಲೆಡೆಯೂ ಜಾಳಿಗೆಯಂತೆ ಹದವಾದ ಕೆತ್ತನೆಯ ಮೂಲಕ ಒಂದು ಅದ್ಭುತವಾದ ನೆರಳು-ಬೆಳಕುಗಳ ಚಿತ್ತಾರವನ್ನು ಈ ವಿನ್ಯಾಸದ ಕಂಬಗಳು ತೋರಿಸುತ್ತವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಬಾದಾಮಿಯ ಮೊದಲನೆಯ ಶೈವ ಗುಹಾಲಯದ ಕಂಬವೊಂದರಲ್ಲಿನ ಚಿತ್ತಾರದ ಕೆತ್ತನೆಯನ್ನು ಗಮನಿಸಬಹುದು. ಇಲ್ಲಿನ ಕಂಬದ ಕೆತ್ತನೆಯಲ್ಲಿನ ಮೊದಲ ಸಾಲಿನಲ್ಲಿ ಮುತ್ತಿನ ಮಾಲೆಗಳ ವಿನ್ಯಾಸವಿದೆ, ಇವುಗಳನ್ನು ಮಾವಿನ ಚಿಗುರೆಲೆಗಳ ಹುಸಿ ಕಂಬದ ತುದಿಗೆ ಬಿಗಿಯಲಾಗಿದೆ. ಅದರ ಮೇಲುಭಾಗದಲ್ಲಿ ಅರ್ಧವೃತ್ತಾಕಾರದ ಚೌಕಟ್ಟಿನೊಳಗೆ ಎರಡು ಹಂಸಗಳು ಓಡಾಡುತ್ತಿರುವಂತೆ ಮುಖಗಳನ್ನು ವಿರುದ್ಧ ದಿಕ್ಕಿನಲ್ಲಿ ಕಾಣುವಂತೆ ಕೆತ್ತಲಾಗಿದೆ. ಇವುಗಳ ರೆಕ್ಕೆಗಳು ವೃತ್ತಗಳ ಕೆತ್ತನೆಯನ್ನು ಒಳಗೊಂಡಿವೆ. ಮಧ್ಯ ಸ್ವಲ್ಪ ಖಾಲಿ ಜಾಗದಲ್ಲಿ ಹೂವಿನ ಪಕಳೆಗಳ ಕೆತ್ತನೆಯಿದೆ. ಮಧ್ಯದಲ್ಲಿ ಮತ್ತೊಂದು ಪುಷ್ಪ ಸಾಲು, ಅದರ ಮೇಲುಭಾಗದಲ್ಲಿ

ಮತ್ತೆ ಹಂಸಗಳ ಸಾಲು, ಈ ಹಂಸಗಳು ಕುಣಿಯುತ್ತಿರುವಂತೆ, ಕೊಕ್ಕನ್ನು ನೆಲಕ್ಕೆ ತಾಗಿಸಿ ಕಾಲು ಕುಕ್ಕುವಂತೆ ಕೆತ್ತಲಾಗಿದೆ, ಈ ರೀತಿಯ ಎಂಟು ಹಕ್ಕಿಗಳನ್ನು ಒಂದೇ ಸಾಲಿನಲ್ಲಿ ಕೆತ್ತಲಾಗಿದೆ. ಅದರ ಮೇಲಿನ ಹಂತದಲ್ಲಿ ಚುಕ್ಕಿಗಳ ಚಿತ್ರಣ, ಅದರ ಮೇಲೆ ಮತ್ತೆ ಹೂಗಳ ಚಿತ್ರಣವಿದೆ. ಅದರ ಮೇಲಿನ ಸಾಲಿನಲ್ಲಿ ಅರಳಿದ ಕಮಲವನ್ನು ವೃತ್ತದೊಳಗೆ ಅರ್ಧಮಾತ್ರ ಕಾಣಿಸುವಂತೆ ಕೆತ್ತಲಾಗಿದೆ. ಸುತ್ತಲೂ ವೃತ್ತದ ಚೌಕಟ್ಟಿದೆ. ಉಳಿದ ಸ್ವಲ್ಪ ಜಾಗೆಯನ್ನು ಮತ್ತೆ ಹೂಗಳ ಸುರುಳಿಚಿತ್ರಗಳು ಆವರಿಸಿವೆ. ಅದರ ಮೇಲೆ ನೇರ ರೇಖೆಗಳ ಮೂಲೆಗಳುಳ್ಳ ಕೆತ್ತನೆ, ಮೇಲೆ ವೃತ್ತಾಕಾರದ ಚೌಕಟ್ಟಿನೊಳಗೆ ಸುರುಳಿ ಚಿತ್ರಣದ ಅಲಂಕಾರಿಕ ವಿನ್ಯಾಸವಿದೆ. ಈ ಕೆತ್ತನೆಯ ರೀತಿಯು ಗಮನ ಸೆಳೆಯುತ್ತದೆ. ಇಲ್ಲಿ ಕಂಬದ ಪೂರ್ಣ ಜಾಗೆಯನ್ನು ಅಲಂಕರಣಕ್ಕಾಗಿ ಬಳಸಿಕೊಳ್ಳುತ್ತ ವಿನ್ಯಾಸವು ಎಲ್ಲಿಯೂ ಸಮತೋಲನ ತಪ್ಪದಂತೆ ಕೆತ್ತಲಾಗಿರುವುದು ಗಮನ ಸೆಳೆಯುತ್ತದೆ.

ಶಿಲ್ಪ –೧

ಶೈವ ಗುಹಾಲಯದ ಕಂಬದಲ್ಲಿನ ಕೆತ್ತನೆಯಲ್ಲಿ ಚೌಕಾಕಾರದ ಪಟ್ಟಿಕೆಯೊಳಗಡೆ ವೃತ್ತವಿದೆ. ಅದರೊಳಗೆ ಮತ್ಸ್ಯವೊಂದನ್ನು ಪುರುಷನ ತಲೆಯ ಮೀನಿನ ದೇಹದ ವ್ಯಕ್ತಿಯೊಬ್ಬನು ಹಿಡಿದುಕೊಂಡಿದ್ದಾನೆ. ಇಲ್ಲಿ ಮತ್ಸ್ಯದ ಚಿತ್ರಣವು ಚೆನ್ನಾಗಿ ಚಿತ್ರಿತವಾಗಿದ್ದು ದಪ್ಪನೆಯ ಮಾಂಸದಿಂದ ತುಂಬಿಕೊಂಡಂತೆ ಕೆತ್ತಲಾಗಿದೆ. ಸುತ್ತಲೂ ಸುರುಳಿಚಿತ್ರಗಳ ಸುಂದರ ವಿನ್ಯಾಸವಿದೆ. ವೃತ್ತದ ಹೊರಭಾಗದಲ್ಲಿ ಮೇಲಿನಿಂದ ಕೆಳಗೆ ಹರಿದು ಬರುತ್ತಿರುವ ಹೂಬಳ್ಳಿಯ ಮತ್ತು ಎಲೆಗಳ ಕೆತ್ತನೆಯನ್ನು ಗಮನಿಸಬಹುದು. ಇಲ್ಲಿಯೂ ರೇಖಾವಿನ್ಯಾಸದಲ್ಲಿ, ಗೆರೆಗಳಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲಾಗಿದೆ. ಸುಂದರವಾಗಿ ಮೂಡಿಬಂದಿರುವ ಈ ಚಿತ್ರವನ್ನು ಕಾಲ್ಪನಿಕತೆಗೆ ಚಿತ್ತಾರದ ಹೊದಿಕೆ ನೀಡಿದಂತೆ ಕೆತ್ತಲಾಗಿರುವುದು ಗಮನಾರ್ಹವಾಗಿದೆ. ಈ ರೀತಿಯಲ್ಲಿ ಕಂಬದ ನಾಲ್ಕೂ ಬದಿಯಲ್ಲಿ ವಿಭಿನ್ನ ವಿನ್ಯಾಸಗಳನ್ನು ರೇಖಾವಿನ್ಯಾಸಗಳ ಮೂಲಕ ತೋರಿಸುತ್ತ ಕಂಬದ ಸ್ಥಳಾವಕಾಶವನ್ನು ತಮ್ಮ ಕಲಾಕೌಶಲ್ಯದ ಪ್ರದರ್ಶನಕ್ಕೆ ಬಳಸಿಕೊಂಡಿರುವುದು ವಿಶೇಷ.

ಶಿಲ್ಪ –೨

ಎರಡನೆಯ ವೈಷ್ಣವ ಗುಹೆಯಲ್ಲಿಯೂ ಇದೇ ರೀತಿಯ ಕೆತ್ತನೆಗಳನ್ನು ಕಾಣಬಹುದು. ಇಲ್ಲಿನ ಕೆತ್ತನೆಗಳಲ್ಲಿ ಮೊದಲನೆಯ ಗುಹೆಯ ಕೆತ್ತನೆಯಲ್ಲಿ ಕಂಡುಬರುವ ರೇಖಾಲಾವಣ್ಯದ ಸೊಗಸು ಹೆಚ್ಚಾಗಿ ಕಂಡುಬರುವುದಿಲ್ಲ. ಇಲ್ಲಿನ ಕೆಲವು ಕಂಬಗಳಲ್ಲಿನ ಕೆತ್ತನೆಗಳು ಬಹಳ ಸಂಕೀರ್ಣವಾಗಿರುವಂತೆ ಕಂಡುಬರುತ್ತವೆ. ಇಲ್ಲಿ ಪ್ರಯೋಗಶೀಲತೆಯ ಕೊರತೆ ಇದ್ದಂತೆ ಕಾಣಿಸುತ್ತದೆ. ಹೆಚ್ಚಿನ ಕೆತ್ತನೆಗಳು ಮೊದಲ ಗುಹಾಲಯದ ಕೆತ್ತನೆಯ ಪುನರಾವರ್ತನೆಯೆನ್ನಿಸಿ

ಬಿಡುತ್ತದೆ. ಆದರೂ ದೊರಕಿದ ಸ್ಥಳಾವಕಾಶವನ್ನು ಇಲ್ಲಿ ಅಲಂಕಾರಿಕ ಕೆತ್ತನೆಗೆ ಉಪಯೋಗಿಸಿಕೊಂಡು ತೆಳು ಉಬ್ಬಿನಲ್ಲಿ ವಿನ್ಯಾಸಗಳನ್ನು ರಚಿಸಿದ್ದಾರೆನ್ನಬಹುದು.

ಶಿಲ್ಪ –೩

ಮೂರನೆಯ ವೈಷ್ಣವ ಗುಹಾಲಯದಲ್ಲಿ ಹಲವಾರು ವಿಶಿಷ್ಟ ವಿನ್ಯಾಸದ ಕೆತ್ತನೆಗಳು ಕಂಡುಬರುತ್ತವೆ. ಆದರೆ ಇಲ್ಲಿನ ಕೆತ್ತನೆಯಲ್ಲಿ ವ್ಯಕ್ತಿ ಶಿಲ್ಪಗಳ ಕೆತ್ತನೆಗೆ ಹೆಚ್ಚಿನ ಮಹತ್ವ ದೊರೆತುದರಿಂದ ಕಂಬಗಳಲ್ಲಿಯೂ ವ್ಯಕ್ತಿ ಶಿಲ್ಪಗಳನ್ನು ಹೆಚ್ಚಾಗಿ ಕೆತ್ತಲಾಗಿದೆ. ಇಲ್ಲಿ ವ್ಯಕ್ತಿ ಶಿಲ್ಪಗಳಿಗೆ ಪೂರಕವಾಗಿ ಅದರ ಸುತ್ತಲಿನ ಅವಕಾಶದಲ್ಲಿ ವಿನ್ಯಾಸಗಳನ್ನು ಕೆತ್ತಲಾಗಿದೆ. ಇಲ್ಲಿ ವೃತ್ತಾಕಾರದ ಸುರುಳಿ ವಿನ್ಯಾಸಗಳ ಬದಲಾಗಿ ಅಡ್ಡಪಟ್ಟಿಗಳಲ್ಲಿ ಅಡ್ಡಕ್ಕೆ ಹರಿಯುವ ರೇಖೆಗಳಂತೆ ಲತಾ–ಪುಷ್ಪಗಳ ಕೆತ್ತನೆಯಿರುವುದನ್ನು ಗಮನಿಸಬಹುದು.

ಇಲ್ಲಿ ಕಂಬಗಳ ಖಾಲಿ ಜಾಗವನ್ನು ಹಲವೆಡೆ ಹಾಗೆಯೇ ಉಳಿಸಿಕೊಳ್ಳಲಾಗಿದೆ. ವ್ಯಕ್ತಿ ಚಿತ್ರಣಗಳ ಹೊರಬದಿಯಲ್ಲಿ ಸುರುಳಿ ವಿನ್ಯಾಸಗಳ ಕೆತ್ತನೆ ಕಡಿಮೆ. ಬಹುಶಃ ಈ ಅಲಂಕರಣಗಳ ಕೆತ್ತನೆಯಿಂದ ಉದ್ದೇಶಿತ ವ್ಯಕ್ತಿಶಿಲ್ಪಗಳ ಬೆಲೆ ಕಡಿಮೆಯಾಗಬಹುದೆಂಬ ಚಿಂತನೆ ಇರಬಹುದೇನೋ. ಇದರಿಂದಾಗುವ ಒಂದು ಅನುಕೂಲವೆಂದರೆ ಇಲ್ಲಿನ ವ್ಯಕ್ತಿಶಿಲ್ಪಗಳು ಹೆಚ್ಚು ಮನಮುಟ್ಟುತ್ತವೆ, ವಿನ್ಯಾಸದ ಅಲಂಕರಣವು ಅತಿಯಾಗಿದ್ದಲ್ಲಿ ಅದರೆಡೆಗೆ ಹೆಚ್ಚಿನ ಗಮನಹರಿದು ವ್ಯಕ್ತಿಶಿಲ್ಪಗಳ ನೋಟಕ್ಕೆ ಭಂಗವಾಗುವ ತೊಂದರೆ ಇಲ್ಲಿ ತಪ್ಪಿದೆ. ಆದರೂ ಇಲ್ಲಿನ ವಿನ್ಯಾಸಗಳು ಗಮನ ಸೆಳೆಯುತ್ತವೆ. ಇಲ್ಲಿನ ಲತಾ–ಪುಷ್ಪಗಳ ಕೆತ್ತನೆಯಲ್ಲಿ ಹೆಚ್ಚಿನ ಸಹಜತೆ ಕಂಡುಬರುತ್ತದೆ. ಮೊದಲನೆಯ ಗುಹಾಲಯದಲ್ಲಿನ ಸುರುಳಿ ಚಿತ್ರಣಗಳಲ್ಲಿ ಮಾನವದೇಹಗಳನ್ನು ಸುರುಳಿ ವಿನ್ಯಾಸದೊಂದಿಗೆ ಸಂಯೋಗಗೊಳಿಸಿ ಚಿತ್ರಿಸಿರುವ ರೀತಿ ಇಲ್ಲಿ ಕಂಡುಬರುವುದಿಲ್ಲ.

ಶಿಲ್ಪ –೪

ಐಹೊಳೆಯ ಲಾಡ್‌ಖಾನ್ ದೇವಾಲಯದ ಕಂಬಗಳಲ್ಲಿನ ಒಂದರಲ್ಲಿ ಚಾಲುಕ್ಯರ ಲಾಂಛನ ವರಾಹವನ್ನು ನೋಡಬಹುದು. ಕಂಬಗಳ ವಿನ್ಯಾಸವು ಬಾದಾಮಿಯ ಕೆತ್ತನೆಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಇಲ್ಲಿ ಮೊದಲನೆ ಗುಹಾಲಯದ ಕಂಬಗಳಲ್ಲಿ ನೋಡಿದಂತೆ ಮುತ್ತಿನ ಮಾಲೆಗಳ ಕೆತ್ತನೆಯಿದೆ. ಆದರೆ ಮಧ್ಯದಲ್ಲಿ ವೃತ್ತಾಕಾರದ ಸುರುಳಿ ವಿನ್ಯಾಸಗಳ ಬದಲು ಇಲ್ಲಿ ಅರ್ಧ ವೃತ್ತಗಳಿದ್ದು ಅದರೊಳಗೆ ಸಣ್ಣ ಗಾತ್ರದ ಗಣಗಳ, ವ್ಯಕ್ತಿಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಆಟವಾಡುತ್ತಿರುವಂತೆ, ಅಥವಾ ಇನ್ನಾವುದೋ ಕೆಲಸದಲ್ಲಿ ತೊಡಗಿರುವಂತೆ ಕಂಡುಬರುವ ಚಪ್ಪಟೆ, ಉಬ್ಬು ಶಿಲ್ಪಗಳನ್ನು ಇಲ್ಲಿ ಕೆತ್ತಲಾಗಿದೆ. ಇದರಿಂದಾಗಿ ಕಂಬವು ಅಲಂಕರಣಯುಕ್ತವಾಗಿ ಕಾಣಿಸಿದರೂ ಸಮತೋಲನದಲ್ಲಿ ಕೊರತೆಯುಂಟಾಗುತ್ತದೆ. ಕೆತ್ತನೆಯ ವಿನ್ಯಾಸವು ಲಯಬದ್ಧವಾಗಿದ್ದರೂ ಉದ್ದೇಶವು ಅಸ್ಪಷ್ಟವಾಗುತ್ತದೆ. ಇಲ್ಲಿನ ಕೆತ್ತನೆಗಳಲ್ಲಿ ಉಬ್ಬುತನ



ಕಡಿಮೆ. ಕೆಲ ಕಂಬಗಳಲ್ಲಿನ ವಿನ್ಯಾಸಗಳು ಬಾದಾಮಿಯ ಮೊದಲ ಗುಹಾಲಯದ ಕೆತ್ತನೆಗಳ ಅನುಕರಣೆಯಂತೆ ಕಂಡುಬಂದರೂ ಅಲ್ಲಿನ ಕೆತ್ತನೆಯ ಸೊಬಗು ಇಲ್ಲಿ ಕಂಡುಬರುವುದಿಲ್ಲ.

ದುರ್ಗಾ ದೇವಾಲಯದ ಕೆತ್ತನೆಯಲ್ಲಿಯೂ ಇದೇ ತಂತ್ರವು ಮುಂದುವರಿದಂತೆ ಕಂಡುಬರುವುದು. ಕಂಬಗಳಲ್ಲಿನ ಲತಾ-ಪುಷ್ಪಗಳು, ನೀರಿನ ಅಲೆಗಳು, ಮತ್ತು ಇತರೆ ಪ್ರಾಣಿ, ಪಕ್ಷಿ ಮತ್ತು ಜಲಚರಗಳನ್ನು ಚಿತ್ರದ ಕೆತ್ತನೆಯ ವಿನ್ಯಾಸಕ್ಕಾಗಿ ಬಳಸಿಕೊಂಡ ರೀತಿಯಲ್ಲಿ ಮೊದಲನೆಯ ಗುಹಾಲಯದ ಶಿಲ್ಪಗಳು ಗಮನಾರ್ಹವಾಗುತ್ತವೆ. ಮೂರನೆಯ ಗುಹಾಲಯದಲ್ಲಿ ಇವುಗಳ ನಡುವಿನಲ್ಲಿ ವ್ಯಕ್ತಿ ಚಿತ್ರಣಗಳು, ದಂಪತಿ ಶಿಲ್ಪಗಳು, ಇತರ ಮಿಥುನ ಶಿಲ್ಪಗಳು ಸೇರಿಕೊಂಡಿದ್ದರೆ ಐಹೊಳೆಯ ರಾಚನಿಕ ಮಂದಿರಗಳ ಕಂಬಗಳ ಕೆತ್ತನೆಯಲ್ಲಿ ತೆಳು ಉಬ್ಬುಶಿಲ್ಪದ ಜೊತೆಗೆ ಮಾನವ ಶಿಲ್ಪಗಳು ಮೂಡಿಬಂದಿವೆ.

ಆದರೆ ಬಾದಾಮಿಯ ಮೊದಲ ಗುಹಾಲಯದ ಕಂಬಗಳ ಕೆತ್ತನೆಯ ಸೊಬಗು ಮತ್ತು ಲಾಲಿತ್ಯಪೂರ್ಣವಾದ ಸಮತೋಲನ, ರೇಖಾವೈವಿಧ್ಯ ಮುಂದಿನ ಯಾವುದೇ ರಚನೆಗಳಲ್ಲಿ ಕಂಡುಬರದೆ ಇರುವುದು ಗಮನಾರ್ಹ. ಸುರುಳಿ ಚಿತ್ರಗಳ ವಿನ್ಯಾಸವು ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಿಗಳ ಕೆತ್ತನೆಯಲ್ಲಿ ವಿಶೇಷ ಅರ್ಥವನ್ನು ಪಡೆದುಕೊಂಡಿದೆ. ಇವು ಕೇವಲ ಅಲಂಕರಣಕ್ಕಾಗಿ ರಚಿತವಾಗಿದ್ದರೂ ಸೌಂದರ್ಯಯುಕ್ತವಾಗಿ ಇವುಗಳನ್ನು ಬಳಸಿಕೊಂಡ ರೀತಿಗೆ ಮೆಚ್ಚಬೇಕಾಗುತ್ತದೆ.

ಇದಲ್ಲದೆ ದೇವಾಲಯಗಳ ಛತ್ತುಗಳಲ್ಲಿ ಸ್ಥಳಾವಕಾಶವನ್ನು ತುಂಬಿಸುವುದಕ್ಕಾಗಿ ಪುಷ್ಪದಳಗಳನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಮಂಟಪದ ಮೇಲುಭಾಗದ ಛತ್ತಿನಲ್ಲಿ ಮುಖ್ಯವಾಗಿ ಕಮಲದ ಹೂವಿನ ಕೆತ್ತನೆಗಳು ಕಂಡುಬರುತ್ತವೆ. ಇಲ್ಲಿ ವೃತ್ತಾಕಾರದ ಚೌಕಟ್ಟಿನೊಳಗೆ ಅರಳಿದ ಕಮಲವನ್ನು ಎರಡು ಹಂತಗಳ ದಳಗಳ ಕೆತ್ತನೆಗಳೊಂದಿಗೆ ಮತ್ತು ಮಧ್ಯದಲ್ಲಿ ಕುಸುಮಪಾತ್ರೆಯೊಂದಿಗೆ ಅರಳಿರುವ ಕಮಲದ ಹೂವಿನ ಕೆತ್ತನೆಗಳು ಕೆಲವೆಡೆ ಕಂಡುಬರುತ್ತವೆ.

ಇದರ ಸುತ್ತಲೂ ಮತ್ತೆ ಚೌಕಾಕಾರದ ಪಟ್ಟಿಕೆಯಿರುತ್ತದೆ. ಕಮಲದ ಹೂವನ್ನು ಸುಂದರವಾಗಿ ಕೆತ್ತಲಾಗಿರುವ ಶಿಲ್ಪವೊಂದನ್ನು ಲಾಡ್‌ಖಾನ್ ಗುಡಿಯ ಮುಚ್ಚಿಗೆಯಲ್ಲಿ ನೋಡಬಹುದು. ಇಲ್ಲಿನ ಆರು ವಿಭಿನ್ನ ಕೆತ್ತನೆಗಳಲ್ಲಿ ಎರಡು ಕಮಲದ ಹೂವಿನ ಕೆತ್ತನೆಗಳಾಗಿವೆ, ಮತ್ತೊಂದು ಹೂವಿನ ಕೆತ್ತನೆ ಮೂರು ವಿವಿಧ ಹಂತಗಳ, ನಾಲ್ಕು ದಳಗಳ ಕೆತ್ತನೆಯಾಗಿದ್ದು ಇದು ಪದ್ಮಪುಷ್ಪವಲ್ಲ. ಅಲಂಕರಣಕ್ಕಾಗಿ ವಿವಿಧ ವಿನ್ಯಾಸಗಳನ್ನು ಬಳಸಿಕೊಂಡ ಚಾಲುಕ್ಯ ಶಿಲ್ಪಿಗಳು ಮುಂದಿನ ದಿನಗಳಲ್ಲಿ ಅಲಂಕರಣದ ಬದಲಾಗಿ ವ್ಯಕ್ತಿಶಿಲ್ಪಗಳನ್ನು ಹೆಚ್ಚು ಕೆತ್ತಿ, ಉಳಿದಿರುವ ಅವಕಾಶದಲ್ಲಿ ಲತಾ, ಪುಷ್ಪಗಳ ವಿನ್ಯಾಸಗಳನ್ನು ರಚನೆ ಮಾಡಲಾರಂಭಿಸಿರುವುದು ಚಾಲುಕ್ಯರ ಎರಡನೆಯ ಹಂತದ ಕಾಲದಲ್ಲಿ ಆದ ಬೆಳವಣಿಗೆ ಎನ್ನಬಹುದು.

ಶಿಲ್ಪ –೫

ಚಾಲುಕ್ಯ ಶಿಲ್ಪಿಗಳು ಮುಖ್ಯವಾಗಿ ದೇವಾಲಯ ಛತ್ತುಗಳಲ್ಲಿ, ಕಂಬಗಳ ಕೆಲವೆಡೆಯ ಜಾಗಗಳಲ್ಲಿ ಜ್ಯಾಮಿತಿವಿನ್ಯಾಸಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಬಾದಾಮಿಯ ಎರಡನೆಯ ಗುಹಾಲಯದ ಛತ್ತಿನಲ್ಲಿರುವ ಕೆತ್ತನೆಯು ಗಮನ ಸೆಳೆಯುತ್ತದೆ. ಇಲ್ಲಿ ಮೀನುಗಳ ಕೆತ್ತನೆಯ ವಿಶಿಷ್ಟ ವಿನ್ಯಾಸದ ಕೆತ್ತನೆಯು ಗಮನ ಸೆಳೆಯುತ್ತದೆ. ಚಕ್ರದ ರೀತಿಯಲ್ಲಿ ಕೆತ್ತಲಾಗಿರುವ ಈ ಶಿಲ್ಪದಲ್ಲಿ ಹದಿನಾರು ಮೀನುಗಳ ಸಂಯೋಜನೆಯಿದೆ. 'ಮಧ್ಯದ ಅಂಕಣದ ಛತ್ತಿನಲ್ಲಿ ಸುದರ್ಶನಚಕ್ರವಿದೆ. ಈ ಚಕ್ರದಲ್ಲಿ ಹದಿನಾರು ಮೀನಿನ ಆಕಾರದ ಚಿತ್ರಗಳಿವೆ.'[೧೦೨] ಈ ಮೀನುಗಳು ಕೇಂದ್ರಬಿಂದುವಿನತ್ತ ಮುಖ ಮಾಡಿವೆ. ಈ ಕೇಂದ್ರದ ಮಧ್ಯಭಾಗದಲ್ಲಿ ಕಮಲದ ಕೆತ್ತನೆಯಿದೆ. ಸ್ವಲ್ಪ ಅರಳಿದಂತೆ ಕಂಡುಬರುವ ಈ ಹೂವು ಮೇಲುನೋಟಕ್ಕೆ ವೃತ್ತಾಕಾರದ ಸಾಮಾನ್ಯವಾದ ಕೆತ್ತನೆಯಂತೆ ಕಂಡರೂ ಸೂಕ್ಷ್ಮವಾಗಿ ಗಮನಿಸಿದಾಗ ಅದರ ಪಕಳೆಗಳು ಗೋಚರಿಸುತ್ತವೆ. ಹೊರಗೆ ವೃತ್ತವನ್ನು ದಪ್ಪನಾದ ಪಟ್ಟಿಯಲ್ಲಿ ಕೆತ್ತಿದ್ದು ಇದರಿಂದಾಗಿ ಈ ಶಿಲ್ಪವು ಗಾಡಿಯ ಚಕ್ರದಂತೆ ಕಂಡುಬರುತ್ತದೆ.

ಮೀನುಗಳನ್ನು ಅಲಂಕಾರಿಕವಾಗಿ ಕೆತ್ತಿದಂತೆ ಹೊರಗಿನ ವೃತ್ತಪಟ್ಟಿಯನ್ನು ಕೂಡಾ ಹೂವಿನ ವಿನ್ಯಾಸಗಳಿಂದ ಅಲಂಕರಿಸಲಾಗಿದೆ. ಇದರಿಂದಾಗಿ ಈ ಶಿಲ್ಪವು ಸುಂದರವಾಗಿ ಮೂಡಿಬಂದಿದೆ. ಈ ವೃತ್ತದ ಹೊರಗೆ ಚೌಕಪಟ್ಟಿಯಿದ್ದು ವೃತ್ತ ಮತ್ತು ಚೌಕಗಳ ಮಧ್ಯದ ಮೂಲೆಗಳಲ್ಲಿ ಪುಷ್ಪವಿನ್ಯಾಸಗಳಿವೆ. ಚೌಕಪಟ್ಟಿಯ ಹೊರಗೆ ನಾಲ್ಕೂ ಸುತ್ತಲಿನಲ್ಲಿ ಸಣ್ಣ ಗಾತ್ರದ ಕೂರ್ಮಗಳ ಕೆತ್ತನೆಯಿದ್ದು, ಅಲಂಕಾರಿಕವಾಗಿ ಮೂಡಿಬಂದಿದ್ದು ಸೌಂದರ್ಯದ ದೃಷ್ಟಿಯಿಂದ ಇದೊಂದು ಪರಿಪೂರ್ಣ ಶಿಲ್ಪದಂತೆ ಕಂಡುಬರುತ್ತದೆ.

ಶಿಲ್ಪ –೬

ಎರಡನೆಯ ಗುಹಾಲಯದ ಸಬಾಮಂಟಪದ ಛತ್ತಿನಲ್ಲಿ ಸ್ವಸ್ತಿಕದ ವಿನ್ಯಾಸವುಳ್ಳ ಚೌಕಟ್ಟಿದೆ. ಈ ಚೌಕಟ್ಟಿನಲ್ಲಿ ನಾಲ್ಕು ಸ್ವಸ್ತಿಕಗಳಿದ್ದು ಮಧ್ಯದ ಸ್ಥಳದಲ್ಲಿ ಪದ್ಮಪುಷ್ಪದ ಕೆತ್ತನೆಯಿದೆ. ಸ್ವಸ್ತಿಕದ ನಾಲ್ಕೂ ಗೆರೆಗಳು ನಾಲ್ಕು ದಿಕ್ಕಿಗೆ ಚಲಿಸುತ್ತಿದ್ದು ಒಂದಕ್ಕೊಂದು ಬೆಸೆದುಕೊಳ್ಳುತ್ತವೆ. ಮಧ್ಯದಲ್ಲಿನ ಕಮಲವು ಈ ನಾಲ್ಕು ಸ್ವಸ್ತಿಕಗಳ ಚಲನೆಗೆ ಸಾಕ್ಷಿಯಂತೆ ಕೆತ್ತಲ್ಪಟ್ಟಿದೆ. ಕಮಲದ ಹೂವಿಗೆ ಪ್ರತ್ಯೇಕವಾದ ಚೌಕವಿದೆ. ಹೀಗೆ ಸುತ್ತುವ ಸ್ವಸ್ತಿಕ ಗೆರೆಗಳು ತಮ್ಮ ನಾಲ್ಕು ಚೌಕಗಳ ಪರಿಮಿತಿಯಲ್ಲಿ ಸುತ್ತುವುದರಿಂದುಂಟಾಗುವ ಮೂಲೆಗಳು ಖಾಲಿಯಾಗಿರಬಾರದೆಂಬ ಉದ್ದೇಶದಿಂದ ಇಲ್ಲಿ ನಾಲ್ಕು ಗಂಧರ್ವ ಶಿಲ್ಪಗಳು ಆಕಾಶದಲ್ಲಿ ಹಾರುತ್ತಿರುವಂತೆ ಕೆತ್ತಲಾಗಿದೆ. ಚಲನೆಯ ದೃಷ್ಟಿಯಿಂದ ಈ ಚೌಕಟ್ಟು ಅತ್ಯುತ್ತಮ ವಿನ್ಯಾಸಗಳಲ್ಲೊಂದಾಗಿದೆ.

---

೧೦೨. ಆನಂದ ಕೆ. ಪೂಜಾರ : ಐತಿಹಾಸಿಕ ಬಾದಾಮಿ ಪರಿಚಯ, ಪುಟ – ೪೩

ಶಿಲ್ಪ –೭

ಎರಡನೆಯ ಗುಹಾಲಯದಲ್ಲಿರುವ ವಿನ್ಯಾಸವು ಮೇಲಿನ ಶಿಲ್ಪಕ್ಕಿಂತ ಭಿನ್ನವಾಗಿದೆ. ಸಭಾಮಂಟಪದ ಛತ್ತಿನಲ್ಲಿ ಕೆತ್ತಲಾಗಿರುವ ಸ್ವಸ್ತಿಕದ ನಾಲ್ಕು ಗೆರೆಗಳು ನಾಲ್ಕು ಮೂಲೆಗಳಲ್ಲಿವೆ. ಪ್ರತಿಯೊಂದು ಗೆರೆಯೂ ಪ್ರತಿಮೂಲೆಯಲ್ಲಿಯೂ ಇನ್ನೊಂದು ಗೆರೆಯೊಡನೆ ಕೂಡಿಕೊಳ್ಳುತ್ತ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಸ್ವಸ್ತಿಕಗಳನ್ನು ರಚನೆ ಮಾಡಿವೆ. ಇಲ್ಲಿಯೂ ನಾಲ್ಕು ಸ್ವಸ್ತಿಕಗಳಿರುವಂತೆ ಕಂಡುಬಂದರೂ ಒಂದೇ ಬಿಂದುವಿನಿಂದ ಹೊರಟ ನಾಲ್ಕು ಗೆರೆಗಳು ಸ್ವಸ್ತಿಕದ ನಾಲ್ಕು ವಿನ್ಯಾಸಗಳನ್ನು ರಚಿಸಿವೆ. ಮಧ್ಯದಲ್ಲಿ ಪದ್ಮಪುಷ್ಪವಿದೆ. ಅದನ್ನು ಚೌಕದ ಮೇಲೆ ವೃತ್ತಾಕಾರವಾಗಿ ಕೆತ್ತಲಾಗಿದೆ.

ಮೊದಲಿನ ಶಿಲ್ಪದಲ್ಲಿ ಮಧ್ಯದಿಂದ ರೇಖೆಗಳು ಹೊರಟಂತೆ ಕಂಡುಬರುವುದರಿಂದ ಮೂಲೆಯ ಜಾಗೆ ಖಾಲಿಯಾಗದಂತೆ ಗಂಧರ್ವಶಿಲ್ಪಗಳಿದ್ದರೆ, ಇಲ್ಲಿ ಮೂಲೆಗಳಲ್ಲಿ ಸ್ವಸ್ತಿಕ ಕೆತ್ತನೆಯಿರುವುದರಿಂದಾಗಿ ಮಧ್ಯದಲ್ಲಿ ಖಾಲಿಯಾದ ಜಾಗೆ ಸೃಷ್ಟಿಯಾಗಿದ್ದು ಇಲ್ಲಿ ಯಾವುದೇ ಕೆತ್ತನೆಯಿಲ್ಲದ ಬೋಳಾದಂತೆನ್ನಿಸುತ್ತದೆ. ಇಲ್ಲಿ ಶಿಲ್ಪದ ಹೊರಭಾಗಕ್ಕೆ ಒಂದೇ ಚೌಕಾಕಾರದ ಚೌಕಟ್ಟಿದ್ದು ಮೊದಲಿನ ಶಿಲ್ಪದಷ್ಟು ಪ್ರಭಾವಶಾಲಿಯಾಗಿಲ್ಲ. ಇಲ್ಲಿಯೂ ಪಟ್ಟಿಕೆಯ ಗೆರೆಗಳ ಮೇಲೆ ಪುಷ್ಪವಿನ್ಯಾಸಗಳನ್ನು ಕೆತ್ತಲಾಗಿದೆ. ಇಂತಹ ಕೆತ್ತನೆಗಳು ಚಾಲುಕ್ಯ ಶಿಲ್ಪಿಗಳ ಪ್ರಯೋಗಶೀಲತೆಯನ್ನು ತೋರಿಸಿಕೊಡುತ್ತವೆ.

ಶಿಲ್ಪ –೮

ಐಹೊಳೆಯ ದುರ್ಗಾ ದೇವಾಲಯದ ಸಭಾಮಂಟಪದ ಛತ್ತಿನಲ್ಲಿ ಮತ್ಸ್ಯಚಕ್ರ ಶಿಲ್ಪವನ್ನು ಕಾಣಬಹುದು. ಈ ಹಿಂದೆ ನೋಡಿದ ಎರಡನೆಯ ವೈಷ್ಣವ ಗುಹಾಲಯಕ್ಕಿಂತಲೂ ಗಾತ್ರದಲ್ಲಿ ಈ ಶಿಲ್ಪವು ದೊಡ್ಡದಾಗಿದೆ. ಮತ್ತು ವೃತ್ತಾಕಾರದ ಹೂವಿನ ವಿನ್ಯಾಸದ ವೃತ್ತದಲ್ಲಿ ಇನ್ನೊಂದು ವೃತ್ತವಿದ್ದು, ಅದರ ಮಧ್ಯ ೧೬ ಮೀನಿನ ಜೋಡಣೆಯ ಜೊತೆಗೆ ಮಧ್ಯದಲ್ಲಿ ಪುಷ್ಪದಳವಿದ್ದು, ನೋಡಲು ಕುತೂಹಲವೆನಿಸುತ್ತದೆ. ಈ ಶಿಲ್ಪದಲ್ಲಿ ಕೆಲವು ಮತ್ಸ್ಯಗಳು ಸವೆದು ಹೋಗಿದ್ದರೂ ನೈಜತೆಯನ್ನು ಕಾಣಬಹುದು.

ಕಥಾನಕ ಭಿತ್ತಿಶಿಲ್ಪಗಳು

ಭಾರತದಲ್ಲಿ ಮೊದಲ ಬಾರಿಗೆ ಕಥಾನಕ ಶಿಲ್ಪಗಳನ್ನು ನಿರ್ಮಿಸಿದ ಖ್ಯಾತಿ ಬೌದ್ಧರಿಗೆ ಸಲ್ಲುತ್ತದೆ. ಕಲ್ಲುಗಳಲ್ಲಿ ರಾಮಾಯಣ, ಮಹಾಭಾರತ ಹಾಗೂ ಹಿಂದೂ ಪುರಾಣ ಕಥೆಗಳನ್ನು ಕಂಡರಿಸಿದವರಲ್ಲಿ ಬಾದಾಮಿ ಚಾಲುಕ್ಯ ಶಿಲ್ಪಿಗಳೇ ಮೊದಲಿಗರು.[೧೦೩] ಗುಹಾಲಯಗಳು ಮತ್ತು ರಾಚನಿಕ ದೇವಾಲಯಗಳಲ್ಲಿ ಮಹಾಕೂಟ ಪಾಪನಾಥ ದೇವಾಲಯ, ವಿರೂಪಾಕ್ಷ ದೇವಾಲಯದ

---

೧೦೩. ಡಾ. ಎ. ಮುರಿಗೆಪ್ಪ (ಪ್ರಸಂ.) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೩೭

ಕಂಬಗಳು



ಮೊದಲನೆಯ ಶೈವ ಗುಹಾಲಯ, ಬಾದಾಮಿ



ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ

ಕಂಬಗಳು



ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ



ನಾಲ್ಕನೆಯ ಜೈನ ಗುಹಾಲಯ, ಬಾದಾಮಿ

ಜ್ಯಾಮಿತಿಕ ವಿನ್ಯಾಸಗಳು



ಶಿಲ್ಪ-೧. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೨. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೩. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ

ಜ್ಯಾಮಿತಿಕ ವಿನ್ಯಾಸಗಳು



ಶಿಲ್ಪ-೪. ಲಾಡ್‌ಖಾನ್ ದೇವಾಲಯ, ಐಹೊಳೆ



ಶಿಲ್ಪ-೫. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೬. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೭. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ



ಶಿಲ್ಪ-೮. ದುರ್ಗಾ ದೇವಾಲಯ, ಐಹೊಳೆ



ಕಂಬಗಳಲ್ಲಿ ಮತ್ತು ಭಿತ್ತಿಗಳಲ್ಲಿ ಕಥಾನಕ ಶಿಲ್ಪಗಳನ್ನು ನೋಡಬಹುದು. ಚಾಲುಕ್ಯರ ಶಿಲ್ಪಿಗಳ ಕಾಲದಲ್ಲಿ ದೇವತೆಗಳ ಶಿಲ್ಪಗಳ ಮತ್ತು ದಂಪತಿ ಶಿಲ್ಪಗಳ ಮತ್ತು ಅಲಂಕಾರಿಕ ಚಿತ್ರಣಗಳ ಕೆತ್ತನೆಯಾಗಿರುವಂತೆ ಕಥಾನಕಗಳನ್ನು ಕುರಿತಾದ ದೊಡ್ಡ ಗಾತ್ರದ ಶಿಲ್ಪಗಳ ಕೆತ್ತನೆಗಳು ಹೇರಳವಾಗಿ ರಚನೆಯಾಗಿವೆ. ಮುಖ್ಯವಾಗಿ ರಾಮಾಯಣ, ಮಹಾಭಾರತ, ಶ್ರೀಕೃಷ್ಣನ ಬಾಲಲೀಲೆಗಳ ಕುರಿತಾದ ಚಿತ್ರಗಳು, ಯುದ್ಧದ ಚಿತ್ರಣಗಳನ್ನು ದೇವಾಲಯದ ಗೋಡೆಗಳಲ್ಲಿ, ಅಧಿಷ್ಠಾನಗಳಲ್ಲಿ ಕೆತ್ತಿದ್ದಾರೆ. ಇವೆಲ್ಲ ಸಣ್ಣಗಾತ್ರದ ಉದ್ದನೆಯ ಗುಂಪು ಶಿಲ್ಪಗಳು. ಕಥೆಗಳನ್ನಾಧರಿಸಿ ರಚಿಸಲಾದ ಶಿಲ್ಪಗಳು. ಮುಖ್ಯವಾಗಿ ರಾಮಾಯಣ ಮತ್ತು ಮಹಾಭಾರತ ಈ ಶಿಲ್ಪಗಳ ಕಥಾವಸ್ತು. ಅಪರೂಪವಾಗಿ ಕೆಲವೆಡೆ (ಒಂದನೆಯ ಗುಹಾಲಯ) ಪಾರ್ವತಿ ಕಲ್ಯಾಣದಂತಹ ಕಥೆಗಳ ಶಿಲ್ಪಗಳನ್ನು ರಚಿಸಿದ್ದಾರೆ. ಇಲ್ಲಿ ಕಲಾಭಿವ್ಯಕ್ತಿಗೆ ಅವಕಾಶವಿಲ್ಲ. ಸಣ್ಣಗಾತ್ರದ ಶಿಲ್ಪಗಳಾಗಿದ್ದು ಪ್ರಾತಿನಿಧಿಕವಾಗಿರುತ್ತವೆ. ಅಂತಹ ಕೆಲವು ಶಿಲ್ಪಗಳನ್ನಿಲ್ಲಿ ಗಮನಿಸಲಾಗಿದೆ.

ಶಿಲ್ಪ –೧

ಬಾದಾಮಿ ತಾಲ್ಲೂಕಿನ ಮಹಾಕೂಟ, ಬಾದಾಮಿ ಚಾಲುಕ್ಯರ ಒಂದು ಪ್ರಮುಖ ವಾಸ್ತು ಕಲಾ ಹಾಗೂ ಧಾರ್ಮಿಕ ಕೇಂದ್ರವಾಗಿರುತ್ತದೆ. ಮಂಗಳೇಶನ ಧರ್ಮವಿಜಯ ಸ್ತಂಭ ಶಾಸನದ ಪ್ರಕಾರ ಕ್ರಿ.ಶ. ೫೯೬ರಿಂದಲೇ ಮಹಾಕೂಟೇಶ್ವರನಾಥ ದೇವಾಲಯವು ಇದ್ದದ್ದು ತಿಳಿದುಬರುತ್ತದೆ. ಮಹಾಕೂಟೇಶ್ವರ ದೇವಾಲಯದ ನಿರ್ಮಾಣ ಕಾಲದ ಬಗ್ಗೆ ಹಲವಾರು ವಿದ್ವಾಂಸರು ತಮ್ಮದೇಯಾದ ಕಾಲಘಟ್ಟವನ್ನು ನಿಗದಿಪಡಿಸಿದ್ದಾರೆ. ಮಹಾಭಾರತದ ದ್ರೋಣಪರ್ವದಲ್ಲಿ ಬರುವಂತಹ ಚಕ್ರವ್ಯೂಹ ಕಥನ ಹಾಗೂ ಅಭಿಮನ್ಯು ವಧೆ ಈ ವಿಷಯಕ್ಕೆ ಸಂಬಂಧಿಸಿದಂತಹ ಒಂದು ಅಪರೂಪದ ದೃಶ್ಯ ನಿರೂಪಣೆಯ ದೃಶ್ಯ ಕಥಾನಕ ಶಿಲ್ಪಗಳ ಪಟ್ಟಿಕೆಯಲ್ಲಿ ದೇವಾಲಯದ ಉತ್ತರ ಗೋಡೆಯಲ್ಲಿದೆ.

ಶಿಲ್ಪದಲ್ಲಿ ನಿರೂಪಿಸಿರುವಂತೆ ಗಜಬಲ, ರಥಬಲದೊಂದಿಗೆ ಯುದ್ಧ ನಡೆಯುತ್ತದೆ. ಯುದ್ಧದ ಮಧ್ಯದಲ್ಲಿ ಸಿಲುಕಿರುವ ಬಾಲಕ ಅಭಿಮನ್ಯು, ಯುದ್ಧದ ಕೊನೆಯ ಘಟ್ಟವಾಗಿ ರಥದ ಗಾಲಿಯನ್ನು ಎತ್ತಿಹಿಡಿದು ಯುದ್ಧ ಮಾಡುತ್ತಿದ್ದಾನೆ. ಈ ಸನ್ನಿವೇಶದ ನಿರೂಪಣೆಯಲ್ಲಿ ಧನುರ್ಧಾರಿಗಳಾದ ಕುರುಸೇನೆಯ ದ್ರೋಣ, ಅಶ್ವತ್ಥಾಮ, ಕರ್ಣ, ದುರ್ಯೋಧನ, ದುಶ್ಯಾಸನ ಮೊದಲಾದವರು ಅಭಿಮನ್ಯುವನ್ನು ಸುತ್ತುವರೆದು ಬಾಣಗಳ ಮಳೆಗೈಯುತ್ತಿದ್ದಾರೆ. ಇದ್ಯಾವುದಕ್ಕೂ ಜಗ್ಗದ ಅಭಿಮನ್ಯು ರಥದ ಗಾಲಿಯನ್ನೇ ಎತ್ತಿ ವೀರಾವೇಶದಿಂದ ಯುದ್ಧ ಮಾಡುತ್ತಿರುವ ದೃಶ್ಯ ಅತ್ಯಂತ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ.[೧೦೪] ಇದಲ್ಲದೇ ಈ ದೇವಾಲಯದಲ್ಲಿ ಹಲವಾರು ಕಥಾನಕ ಶಿಲ್ಪಗಳ ಜೊತೆಗೆ ಶಿವನಿಗೆ ಸಂಬಂಧಿಸಿದ ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದು.

೧೦೪. ಡಾ. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ, ಇತಿಹಾಸ ದರ್ಶನ, –೨೫, ಪುಟ – ೯೬



ಶಿಲ್ಪ –೨

ಬಾದಾಮಿಯ ಮೊದಲನೆಯ ಗುಹಾಲಯ(ಶೈವ ಗುಹಾಲಯ)ದಲ್ಲಿ ಪಾರ್ವತಿಯ ಕಲ್ಯಾಣದ ಚಿತ್ರಣವನ್ನು ಉದ್ದನೆಯ ಪಟ್ಟಿಕೆಯಲ್ಲಿ ಕೆತ್ತಲಾಗಿದೆ. ಇವು ಕಿರು ಶಿಲ್ಪಗಳು. 'ಇಲ್ಲಿ ಪಾರ್ವತಿಯು ಒಂಟಿಗಾಲಿನಲ್ಲಿ ನಿಂತು ತಪಸ್ಸು ಮಾಡುತ್ತಿರುವುದು, ಬ್ರಹ್ಮಚಾರಿ ವೇಷಧಾರಿ ಶಿವನು ಛತ್ರಿ ಹಿಡಿದು ಅವಳಲ್ಲಿ ಬಿಕ್ಷಾಟನೆ ಮಾಡುತ್ತಿರುವುದು; ಸ್ನಾನಕ್ಕೆಂದು ಹೋದ ಬ್ರಹ್ಮಚಾರಿ ಶಿವನ ಕಾಲನ್ನು ಮೊಸಳೆ ಹಿಡಿದಿರುವುದು; ಅವನನ್ನು ರಕ್ಷಿಸಲೆಂದು ಪಾರ್ವತಿಯು ಅವನ ಕೈ ಹಿಡಿದಿರುವುದು ಹಾಗೂ ಶಿವನೊಂದಿಗೆ ಪಾರ್ವತಿಯ ಮದುವೆಯ ದೃಶ್ಯ;'[೧೦೫] ಮುಂತಾದವುಗಳು ಈ ಗುಹಾಲಯದಲ್ಲಿ ಉಬ್ಬುಶಿಲ್ಪಗಳಂತೆ ಕಂಡುಬಂದಿವೆ.

ಶಿಲ್ಪ –೩

ಎರಡನೆಯ ವೈಷ್ಣವ ಗುಹಾಲಯದಲ್ಲಿ ಸಮುದ್ರಮಂಥನದ ಸುಂದರವಾದ ಶಿಲ್ಪಪಟ್ಟಿಕೆಯನ್ನು ಕೆತ್ತಿದ್ದಾರೆ. ದೇವಾಸುರರು ಅಮೃತಕ್ಕಾಗಿ ಯುದ್ಧಮಾಡುವ ಸನ್ನಿವೇಶವನ್ನು ಸುಂದರವಾಗಿ ತೋರಿಸಿದ್ದಾರೆ. ಇನ್ನೊಂದು ದೃಶ್ಯದಲ್ಲಿ ಶ್ರೀ ಕೃಷ್ಣನ ಬಾಲಲೀಲೆಗಳ ಕೆತ್ತನೆಯಿದೆ. ಇದು ಸುಂದರವಾದ ಶಿಲ್ಪವಾಗಿದ್ದು ಇಲ್ಲಿ ಆತನ ಜನನ, ಗೋಕುಲದಲ್ಲಿನ ಆತನ ಲೀಲೆಗಳು, ಪೂತನಿಯ ವಧೆ, ಗೋವರ್ಧನಗಿರಿಯನ್ನು ಎತ್ತುವುದು ಇತ್ಯಾದಿಯಾಗಿ ಆತನ ಲೀಲೆಗಳನ್ನು ಸುಂದರವಾಗಿ ಕೆತ್ತಲಾಗಿದೆ. 'ಎರಡನೆಯ ಗುಹಾಲಯದ ತೊಲೆಯ ಮೇಲಿನ ಮೂರು ಶಿಲ್ಪ ಪಟ್ಟಿಕೆಗಳು ಕೃಷ್ಣನ ಜನನ ಮತ್ತು ಕಂಸನ ಮರಣದ ಕುರಿತಾಗಿವೆ'.[೧೦೬] ಇವು ಉಬ್ಬುಶಿಲ್ಪಗಳಾಗಿವೆ.

ಶಿಲ್ಪ –೪

ಮೂರನೆಯ ವೈಷ್ಣವ ಗುಹಾಲಯದಲ್ಲಿಯೂ ಹಲವಾರು ಸಣ್ಣ ಗಾತ್ರದ ಶಿಲ್ಪಗಳ ಕಥಾನಕಗಳ ಪಟ್ಟಿಕೆಯಿದ್ದು ರಾಮಾಯಣ, ಮಹಾಭಾರತ ಮತ್ತು ಕೃಷ್ಣನ ಬಾಲ್ಯಲೀಲೆಗಳ ಕಥೆಗಳನ್ನು ಹೇಳುತ್ತವೆ. ಇಲ್ಲಿನ ಒಟ್ಟು ಹದಿನಾರು ಪಟ್ಟಿಕೆಗಳಲ್ಲಿ ಏಳು ಪಟ್ಟಿಕೆಗಳು ಕೃಷ್ಣನ ಜೀವನಕಥೆಯನ್ನು ಹೇಳುತ್ತವೆ. 'ಈ ಶಿಲ್ಪಗಳಲ್ಲಿ ಬಿಂಬಿಸಲಾದ ಸನ್ನಿವೇಶಗಳು ಕಾಲಾನುಕ್ರಮದಲ್ಲಿಲ್ಲ'.[೧೦೭] ಇಲ್ಲಿನ ಶಿಲ್ಪಗಳಲ್ಲಿ ಪ್ರಾಣಿಗಳ ಕೆತ್ತನೆ ಸುಂದರವಾಗಿ ಮೂಡಿಬಂದಿರುವುದನ್ನು ಗಮನಿಸಬಹುದು. ಇಲ್ಲಿ ಸಮುದ್ರ ಮಥನ, ಗರುಡನ ಜೀವನಚಿತ್ರಣ, ಮಹಾಭಾರತದಂತಹ ಕಥಾನಕಗಳ ಚಿತ್ರಣ ಚೆನ್ನಾಗಿ ಮೂಡಿಬಂದಿದೆ. ಶಿಲ್ಪಗಳು ಸಣ್ಣ ಗಾತ್ರದ್ದಾಗಿದ್ದು ಪುಟ್ಟ ಶಿಲ್ಪಗಳಲ್ಲಿ ವಿವರಣೆಗಳನ್ನು ತೋರಿಸುವುದು ಕಷ್ಟದ ಕೆಲಸ. ಅಂತಹದ್ದರಲ್ಲಿಯೂ ಪ್ರತಿಯೊಂದು ಸನ್ನಿವೇಶವನ್ನು, ಪ್ರಾಣಿಗಳನ್ನು, ಮಾನವಾಕೃತಿಗಳನ್ನು

---

೧೦೫. ಆನಂದ ಕೆ. ಪೂಜಾರ : ಐತಿಹಾಸಿಕ ಬಾದಾಮಿ ಪರಿಚಯ, ಪುಟ – ೩೧

೧೦೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೨೦೭

೧೦೭. ಅದೇ., ಪುಟ – ೨೦೭



ತೋರಿಸಿರುವುದು ಮೆಚ್ಚತಕ್ಕ ಅಂಶವಾಗಿದೆ. ಬಾದಾಮಿಯ ಪರಿಸರದ ಮೇಗಣ ಶಿವಾಲಯಗಳಲ್ಲಿಯೂ ಹಲವಾರು ಶಿಲ್ಪಪಟ್ಟಿಕೆಗಳಿವೆ. ಗುಹಾಲಯಗಳಿಗಿಂತ ದೊಡ್ಡ ಗಾತ್ರದ ಇಲ್ಲಿನ ಶಿಲ್ಪಪಟ್ಟಿಕೆಗಳಲ್ಲಿ ರಾಮಾಯಣ ಮತ್ತು ಮಹಾಭಾರತಯುದ್ಧದ ಚಿತ್ರಣಗಳಿವೆ. ಮಹಾಭಾರತದ ಕಥಾನಕವನ್ನು ಸುಂದರವಾಗಿ ಮತ್ತು ವಿವರವಾಗಿ ರಚಿಸಿದ್ದಾರೆ. ಇಲ್ಲಿ ಬಿಲ್ಲು-ಬಾಣಗಳೊಂದಿಗೆ ಹೋರಾಡುವ ರಾಜರು ಮತ್ತು ಸೈನಿಕರ ಕೆತ್ತನೆಗಳು ಸುಂದರವಾಗಿವೆ. ರಾಮಾಯಣದ ವಿವಿಧ ಸನ್ನಿವೇಶಗಳನ್ನು, ರಾಮ-ಲಕ್ಷ್ಮಣರ ಸಂಭಾಷಣೆಯ ದೃಶ್ಯವನ್ನು ತೋರಿಸಲಾಗಿದೆ. ಇಲ್ಲಿ ಪ್ರತಿಯೊಂದು ಸನ್ನಿವೇಶವನ್ನು ಕಥೆಗೆ ತಕ್ಕಂತೆ ತೋರಿಸಿರುವುದು ಗಮನ ಸೆಳೆಯುತ್ತದೆ.

ಪಟ್ಟದಕಲ್ಲು ಕಾಶೀವಿಶ್ವೇಶ್ವರ ದೇವಾಲಯದಲ್ಲಿನ ಪಾರ್ವತಿ ಕಲ್ಯಾಣದ ಕೆತ್ತನೆ ಸುಂದರವಾಗಿ ಮೂಡಿಬಂದಿದ್ದು ಗಮನ ಸೆಳೆಯುತ್ತದೆ. ಇಲ್ಲಿ ಶಿವನು ಪಾರ್ವತಿಯನ್ನು ಲಗ್ನವಾಗುವ ಚಿತ್ರಣವಿದ್ದು, ಅವರ ಹಿಂದೆ ಬ್ರಹ್ಮ ಮತ್ತು ವಿಷ್ಣು ಆಶೀರ್ವದಿಸುತ್ತಿರುವ ಹಿನ್ನೆಲೆಯಲ್ಲಿ ಪರ್ವತರಾಜನು ತನ್ನ ಪತ್ನಿಯೊಡನೆ ನಿಂತಿರುವ ಚಿತ್ರಣವು ಚೆನ್ನಾಗಿ ಮೂಡಿಬಂದಿದೆ. ಇನ್ನೂ ಕೆಲವು ಪಟ್ಟಿಕೆಗಳಲ್ಲಿ ದೇವದಾನವ ಯುದ್ಧ, ಮಹಾಭಾರತದ ಸನ್ನೆವೇಶಗಳನ್ನು ಕೆತ್ತಲಾಗಿದ್ದು ಗಮನ ಸೆಳೆಯುತ್ತವೆ. ಇವೆಲ್ಲ ದೊಡ್ಡಗಾತ್ರದ ಪಟ್ಟಿಕೆಗಳಾಗಿದ್ದು ಕೆತ್ತನೆಗಳು ವಿವರವಾಗಿ ಮೂಡಿಬಂದಿವೆ. ಪಾಪನಾಥ ದೇವಾಲಯದ ಹೊರ ಭಿತ್ತಿಯಲ್ಲಿ ರಾಮಾಯಣದ ಸನ್ನಿವೇಶಗಳು ಸುಂದರವಾಗಿ ಮೂಡಿಬಂದಿವೆ. ಇಲ್ಲಿನ ಕೆತ್ತನೆಯಲ್ಲಿ ವಾಲಿ-ಸುಗ್ರೀವರ ಕಾಳಗ, ಸೇತುಬಂಧನದ ಚಿತ್ರಣಗಳು ಚೆನ್ನಾಗಿವೆ. ಇಂತಹ ಹಲವಾರು ಭಿತ್ತಿಶಿಲ್ಪಗಳು ಇಲ್ಲಿ ರಚನೆಯಾಗಿದ್ದು ಶಿಲ್ಪಕಲೆಯ ಅಧ್ಯಯನ ಮಾಡುವವರಿಗೆ ಮತ್ತು ರಾಮಾಯಣ ಮತ್ತು ಮಹಾಭಾರತ ಕಥೆಯನ್ನು ತಿಳಿದುಕೊಳ್ಳಲು ಆಸಕ್ತರಾದವರಿಗೆ ಉತ್ತಮ ಚಿತ್ರಣವನ್ನು ಒದಗಿಸಿಕೊಡುತ್ತವೆ.

ಶಿಲ್ಪ –೫

ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಎಡಭಾಗದ ಕಂಬದಲ್ಲಿ ಮಂಗ ಮತ್ತು ಮೊಸಳೆಯ ಶಿಲ್ಪವಿದೆ. ಮಿತ್ರರಾದ ಮಂಗ ಮತ್ತು ಮೊಸಳೆಗಳು ನೇರಳೆ ಹಣ್ಣುಗಳನ್ನು ತಿನ್ನುತ್ತ ಅನ್ಯೋನ್ಯವಾಗಿರಲು, ಮೊಸಳೆಯ ಮಡದಿಗೆ ಸ್ವಾಭಾವಿಕವಾಗಿ ಮಂಗನ ಹೃದಯವನ್ನು ತಿನ್ನುವ ಮನಸ್ಸಾಗುತ್ತದೆ. ಕಾಡಿ ಬೇಡಿ ಪತಿಯನ್ನು ಒಪ್ಪಿಸಿ ಮಂಗನನ್ನು ಕರೆತರಲು ತಿಳಿಸುತ್ತದೆ. ಪತಿರಾಯ ಮೊಸಳೆಯು ಈಜಲು ಬಾರದ ಗೆಳೆಯ ಮಂಗನನ್ನು ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ಮಡದಿಯತ್ತ ಬರುತ್ತದೆ. ದಾರಿಯಲ್ಲಿ ಮಾತನಾಡುತ್ತ ಮೊಸಳೆಯು, ತನ್ನ ಮಡದಿಯ ಇಂಗಿತವನ್ನು ತಿಳಿಸುತ್ತದೆ. ಚತುರವಾದ ಮಂಗನು ತನ್ನ ಹೃದಯವನ್ನು ಗಿಡದಲ್ಲಿಯೇ ಬಿಟ್ಟು ಬಂದಿರುವುದಾಗಿ ಹೇಳುತ್ತದೆ. ಮೊಸಳೆಗೆ ಗಿಡದತ್ತ ಒಯ್ಯಲು ತಿಳಿಸುತ್ತದೆ. ಮೂರ್ಖ



ಮೊಸಳೆಯು ಈ ಮಾತನ್ನು ನಂಬಿ ತಿರುಗಿ ದಡಕ್ಕೆ ಬರಲು ಮಂಗನು ಚಂಗನೆ ನೆಗೆದು ಗಿಡವೇರುತ್ತದೆ. ಇದರಿಂದ ತಿಳಿದುಬರುವ ನೀತಿ ಏನೆಂದರೆ, ಬುದ್ಧಿಶಾಲಿಯು ಎಂತಹದೇ ಸಂಕಷ್ಟದ ಸಂದರ್ಭದಲ್ಲಿಯೂ ಯುಕ್ತಿಯಿಂದ ಪಾರಾಗಬಲ್ಲನು.

ಇದೇ ಕಂಬದ ಅರ್ಧವರ್ತುಲದ ಕೆಳಗಿನ ಪಟ್ಟಿಕೆಯಲ್ಲಿ ಪಂಚತಂತ್ರದ ಇನ್ನೊಂದು ಕಥೆಯಿದೆ. ತೊಟ್ಟಿಲಲ್ಲಿ ಮಗು ಮಲಗಿದೆ. ಪಕ್ಕದಲ್ಲಿ ಮುಂಗುಸಿ ಮತ್ತು ಹಾವು ಕಾದಾಡುತ್ತಿದೆ, ಮಹಿಳೆಯೊಬ್ಬಳು ಕೈಯಲ್ಲಿ ಬಡಿಗೆ ಹಿಡಿದು ನಿಂತಿದ್ದಾಳೆ, ಅಂಚಿನಲ್ಲಿ ಅಗ್ನಿಯ ಮುಂದೆ ಒಬ್ಬ ಬ್ರಾಹ್ಮಣನ ಶಿಲ್ಪವಿದೆ. ಇದು ಬ್ರಾಹ್ಮಣ, ಮಡದಿ ಮತ್ತು ಮುಂಗುಸಿಯ ಕತೆ. ಬ್ರಾಹ್ಮಣನು ಒಂದು ಮುಂಗುಸಿಯನ್ನು ಸಾಕಿರುತ್ತಾನೆ. ಒಂದು ದಿನ ಬ್ರಾಹ್ಮಣನ ಹೆಂಡತಿಯು ಮಗುವನ್ನು ತೊಟ್ಟಿಲಲ್ಲಿ ಹಾಕಿ ನೀರು ತರಲು ಕೊಡ ಹಿಡಿದು ಹೊರಗೆ ಹೋಗಿರುತ್ತಾಳೆ. ಬ್ರಾಹ್ಮಣನು ಮಗುವನ್ನು ನೋಡಿಕೊಳ್ಳಲು ಮುಂಗುಸಿಗೆ ಒಪ್ಪಿಸಿ ಯಜ್ಞಕಾರ್ಯಕ್ಕೆ ಹೊರಗೆ ಹೋಗುತ್ತಾನೆ. ಆಗ ಸರ್ಪವೊಂದು ತೊಟ್ಟಿಲ ಬಳಿಗೆ ಬರಲು ಮುಂಗುಸಿಯು ತಡೆಯುತ್ತದೆ. ಹಾವು ಮತ್ತು ಮುಂಗುಸಿ ಭಯಂಕರವಾಗಿ ಹೋರಾಡುತ್ತವೆ. ಕೊನೆಗೆ ಮುಂಗುಸಿಯು ಹಾವನ್ನು ತುಂಡರಿಸಿ ಬೀಸಾಕುತ್ತದೆ. ಬ್ರಾಹ್ಮನ ಹೆಂಡತಿ ನೀರಿನ ಕೊಡದೊಂದಿಗೆ ಹಿಂದಿರುಗುತ್ತಾಳೆ. ಬಾಗಿಲಲ್ಲಿ ನಿಂತ ಮುಂಗುಸಿಯ ಬಾಯಿ ರಕ್ತಮಯವಾಗಿರುವುದನ್ನು ಕಂಡು ಅದು ತನ್ನ ಮಗುವನ್ನು ಸಾಯಿಸಿರಬಹುದೆಂದು ಭಾವಿಸಿ, ಮುಂಗುಸಿಯನ್ನು ಹೊಡೆದು ಕೊಂದು ಹಾಕುತ್ತಾಳೆ. ನಂತರ ತನ್ನ ಮಗುವನ್ನು ನೋಡಲು ಒಳಗೆ ಹೋಗುತ್ತಾಳೆ. ಮಗು ನಲಿದಾಡುತ್ತಿತ್ತು. ಪಕ್ಕದಲ್ಲಿ ಸರ್ಪ ಬಿದ್ದಿತ್ತು. ಅವಳಿಗೆ ತನ್ನ ತಪ್ಪಿನ ಅರಿವಾಗಿ ಕೊರಗುತ್ತಾಳೆ. ಈ ಕಥೆಯಿಂದ ತಿಳಿಯುವ ನೀತಿ ಏನೆಂದರೆ "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು".

ಶಿಲ್ಪ –೬

ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಎಡಭಾಗದ ಕಂಬ ಒಂದರಲ್ಲಿ ಪಶ್ಚಿಮ ಮುಖದ ಮೇಲಿನ ಅರ್ಧ ವರ್ತುಲದಲ್ಲಿ ಪಂಚತಂತ್ರದ ಬೆಣೆಕಿತ್ತಿದ ವಾನರನ ಕಥೆಯನ್ನು ಕೆತ್ತಲಾಗಿದೆ.[೧೦೮] ಮರದಲ್ಲಿ ಸಿಲುಕಿದ ಕೀಲನ್ನು(ಬೆಣೆ) ಕಿಡಿಗೇಡಿಯಾದ ಮಂಗವು ಕಿತ್ತುತ್ತದೆ. ಕೀಲು ಹೊರಗೆ ಬಂದಾಗ ಮಂಗನ ಬಾಲ ಮರದ ಸಂದಿನಲ್ಲಿ ಸಿಲುಕಿಕೊಂಡು ಹೊರಗೆ ಬರದೆ ಮಂಗವು ಒದ್ದಾಡಿ ಮರಣಕ್ಕೀಡಾಗುತ್ತದೆ. ಅತಿಯಾದ ಹುಡುಗಾಟದಿಂದ ಏನೆಲ್ಲಾ ಅನಾಹುತವಾಗುತ್ತವೆ ಎಂಬ ನೀತಿ ಈ ಕಥೆಯದಾಗಿದೆ.

ಶಿಲ್ಪ –೭

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬವೊಂದರಲ್ಲಿ ಉತ್ತರ ಮುಖದಲ್ಲಿ ಸಮುದ್ರ ಮಂಥನದ ಕಥೆಯು ನಿರೂಪಿತವಾಗಿದೆ. ಅಮೃತನನ್ನು ಪಡೆಯಲು ದೇವದಾನವರು ಕೂಡಿ

೧೦೮. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೭೦



ಸಮಾಲೋಚನೆ ಮಂದರ ಪರ್ವತ ಮತ್ತು ಆದಿಶೇಷನ ಸಹಾಯದಿಂದ ಸಮುದ್ರ ಮಂಥನದಲ್ಲಿ ತೊಡಗುತ್ತಾರೆ. ಮಂದರ ಪರ್ವತವು ನೀರಿನಲ್ಲಿ ಮುಳುಗುತ್ತಿರಲು ವಿಷ್ಣು ಕೂರ್ಮನಾಗಿ ಎತ್ತಿ ಹಿಡಿಯುತ್ತಾನೆ. ಮಂಥನ ಕಾರ್ಯ ಮತ್ತೆ ಸುಗಮವಾಗಿ ಸಾಗುತ್ತದೆ. ಮಂಥನದ ಕಾಲದಲ್ಲಿ ಸಮುದ್ರದಿಂದ ಅನೇಕ ವಸ್ತುಗಳು ಹೊರಬರುತ್ತವೆ. ಕಾಮಧೇನು, ಐರಾವತ, ಕುದುರೆ, ಲಕ್ಷ್ಮೀ, ಸುರೆ(ಮದ್ಯ), ಅಮೃತ ಹೀಗೆ ಅನೇಕ ವಸ್ತುಗಳು ಬರುತ್ತವೆ. ಈ ಕಥೆಯನ್ನು ಶಿಲ್ಪಿಯು ಸುಂದರವಾಗಿ ಬಿಂಬಿಸಿದ್ದಾನೆ.

ಶಿಲ್ಪ –೮

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬ ಒಂದರಲ್ಲಿ ರಾಮಾಯಣದ ಕೆಲವು ಶಿಲ್ಪಗಳು ಶೂರ್ಪನಖಿ, ವಾನರರು, ಆಸನದ ಮೇಲೆ ರಾವಣ ಕುಳಿತಿದ್ದಾನೆ. ಹನುಮಂತನು ತನ್ನ ಬಾಲವನ್ನೇ ಸುರುಳಿಯಾಗಿಸಿ ಸಿಂಹಾಸನದಂತೆ ಮಾಡಿಕೊಂಡು ರಾವಣನಿಗಿಂತ ಎತ್ತರದಲ್ಲಿ ಕುಳಿತಿದ್ದಾನೆ. ಮತ್ತೊಂದೆಡೆ ವಾನರ ಸೈನ್ಯವನ್ನು ಕಂಡರಿಸಲಾಗಿದೆ. ಇಬ್ಬರು ರಾಕ್ಷಸರು ಸೀತಾದೇವಿಯ ಜೊತೆ ಅಶೋಕ ವನದಲ್ಲಿ ಕುಳಿತಿರುವುದನ್ನು ತೋರಿಸಿದ್ದಾರೆ. ಮತ್ತೊಂದು ಪಟ್ಟಿಕೆಯಲ್ಲಿ ಮಂಚದ ಮೇಲೆ ಕುಳಿತ ದಂಪತಿಗಳಿದ್ದಾರೆ. ಬಹುಶಃ ರಾವಣ ಮಂಡೋದರಿಯರಿರಬಹುದು. ಇನ್ನೊಂದು ಪಟ್ಟಿಕೆಯಲ್ಲಿ ವಾನರಸೇನೆಯು ಸಮುದ್ರಕ್ಕೆ ಸೇತುವೆ ಕಟ್ಟುವ ದೃಶ್ಯವಿದೆ. ಕೆಳಗಿನ ಪಟ್ಟಿಕೆಯಲ್ಲಿ ಅಶೋಕವನ ಹಾಳುಮಾಡುತ್ತಿರುವ ಹನುಮಂತನಿದ್ದಾನೆ.

ಶಿಲ್ಪ –೯

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬಗಳಲ್ಲಿ ಬಹಳಷ್ಟು ಕಥಾನಕ ಶಿಲ್ಪಗಳಿದ್ದು, ಅವುಗಳಲ್ಲಿ ಮಹಾಭಾರತದ ಯುದ್ಧದ ದೃಶ್ಯವಿರುತ್ತಿದ್ದು, ರಥಗಳನ್ನು ಓಡಿಸುತ್ತಿರುವುದನ್ನು ಕಾಣಬಹುದು. ಇಲ್ಲಿ ಗೋಗ್ರಹಣಕ್ಕೆ ಸಂಬಂಧಿಸಿದಂತೆ ಶಿಲ್ಪವಿದೆ. ಅಡ್ಡ ಪಟ್ಟಿಕೆಗಳಲ್ಲಿ ಭೀಷ್ಮನು ಶರಪಂಜರದಲ್ಲಿ ಮಲಗಿರುವುದು, ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿ ಕುಳಿತಿರುವುದನ್ನು, ಭೀಮ ದುರ್ಯೋಧನರು ಗಧಾಯುದ್ಧ ಮಾಡುತ್ತಿರುವುದನ್ನು ಸುಂದರವಾಗಿ ಬಿಂಬಿಸುತ್ತಿವೆ. ಸರೋವರವನ್ನು ಶಿಲ್ಪಿಯು ಜಲಪ್ರಾಣಿ ಮೀನು ಜಲಸಸ್ಯ ಕಮಲದಿಂದ ಸೂಚಿಸಿರುವುದು ಅತನ ಕಲಾಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಅಡ್ಡಪಟ್ಟಿಕೆಯಲ್ಲಿ ಯೋಧರು ನಿಂತು ಬಿಲ್ಲುಗಳಿಂದ ಬಾಣ ಹೂಡುವ ದೃಶ್ಯವನ್ನು ಬಿಡಿಸಲಾಗಿದೆ. ಮತ್ತು ಗೋಗ್ರಹಣದ ಸನ್ನಿವೇಶವನ್ನು ಕೆತ್ತಲಾಗಿದೆ. ಅರ್ಜುನ ಉತ್ತರೆ ದುರ್ಯೋಧನರ ಮೂರ್ತಿಗಳ ಕೆಳಗೆ ಅವರ ಹೆಸರುಗಳನ್ನು ರೂವಾರಿ ಬರೆದಿರುವುದರಿಂದ ಸಂದರ್ಭವು ಸ್ಪಷ್ಟವಾಗುತ್ತದೆ. ಯುದ್ಧವನ್ನು ಪ್ರಾರಂಭಿಸುವ ಮುನ್ನ ಭೀಷ್ಮನು ಶ್ರೀಕೃಷ್ಣನಿಗೆ ನಮಸ್ಕರಿಸುವ ಅಪರೂಪದ ದೃಶ್ಯ ಇಲ್ಲಿದೆ. ಕರ್ಣ ಶಲ್ಯರು

---

೧೦೯. ಡಾ. ಶೀಲಾಕಾಂತ ಪತ್ತಾರ : ಪಟ್ಟದಕಲ್ಲು ದರ್ಶನ, ಪುಟ – ೪೩

ಅರ್ಜುನನೊಡನೆ ಯುದ್ಧಮಾಡುವ ಚಿತ್ರಣವೂ ಇದೆ.[೧೦೯]

ಶಿಲ್ಪ –೧೦

ಪಾಪನಾಥ ದೇವಾಲಯ ಬಲಭಾಗದ ಹೊರಭಿತ್ತಿಯಲ್ಲಿ ರಾಮಾಯಣದ ಅನೇಕ ಪ್ರಸಂಗಗಳನ್ನು ಶಿಲ್ಪಿಸಲಾಗಿದೆ. ವಿಶ್ವಾಮಿತ್ರರು, ರಾಮ–ಲಕ್ಷ್ಮಣರನ್ನು ವಿದ್ಯಾಭ್ಯಾಸಕ್ಕೆ ಕರೆದೊಯ್ಯುವುದು, ರಾಮನು ತಾಟಕಿಯನ್ನು ಸಂಹರಿಸುವುದು, ದಶರಥ ಪುತ್ರಕಾಮೇಷ್ಟಿ ಯಾಗ ಮಾಡುವುದು, ಅಗ್ನಿದೇವರು ನೀಡಿದ ಪಾಯಸವನ್ನು ದಶರಥನು ಕೌಸಲ್ಯೆಗೆ ಕೊಡುವುದು, ಶ್ರೀರಾಮನ ಜನನ, ವಿಶ್ವಾಮಿತ್ರರೊಡನೆ ಸೀತಾ ಸ್ವಯಂವರಕ್ಕೆ ಹೊರಡುವುದು, ವನವಾಸಕ್ಕೆ ಹೊರಟಿರುವುದು, ಲಕ್ಷ್ಮಣನು ಶೂರ್ಪನಖಿಯ ಮೂಗು ಕೊಯ್ಯುವುದು, ಖರ–ದೂಷಣರ ವಧೆ, ರಾವಣನಲ್ಲಿ ಶೂರ್ಪನಖಿಯ ದೂರು, ರಾವಣನು ಸೀತೆಯನ್ನು ಕರೆದೊಯ್ಯುವುದು, ರಾವಣನಿಂದ ಜಟಾಯುವಿನ ವಧೆ, ರಾಮ–ಲಕ್ಷ್ಮಣರು ವಾನರ ಸೇನೆಯನ್ನು ಭೇಟಿ ಮಾಡಿದುದು, ವಾಲಿ–ಸುಗ್ರೀವರ ಯುದ್ಧ, ರಾಮ–ಸುಗ್ರೀವರ ಒಪ್ಪಂದ, ರಾಮನು ವಾಲಿಯನ್ನು ಕೊಲ್ಲುವುದು, ಸೇತುಬಂಧ ಇವೇ ಮೊದಲಾದ ಸನ್ನಿವೇಶಗಳ ಕೆತ್ತನೆಗಳುಳ್ಳ ಸಮಗ್ರ ರಾಮಾಯಣವನ್ನು[೧೧೦] ಒಂದೇ ಗೋಡೆಯಲ್ಲಿ ಬಿಂಬಿಸಿರುವುದು ಅಪರೂಪದ ಸಂಗತಿಯಾಗಿದೆ.

ಐಹೊಳೆಯ ದುರ್ಗಾಗುಡಿಯಲ್ಲಿ ಒಂದು ಕಥಾನಕ ಶಿಲ್ಪವಿದೆ. ಆ ಕಥೆ ಹೀಗಿದೆ. ಸರೋವರದಲ್ಲಿ ಆಮೆಯೊಂದು ವಾಸವಾಗಿತ್ತು. ಹಂಸಪಕ್ಷಿಗಳು ಅದರ ಗೆಳೆಯರು. ಒಮ್ಮೆ ಸರೋವರ ಬತ್ತಿಹೋಯಿತು. ಹಂಸ ಪಕ್ಷಿಗಳು ಬೇರೆ ಸರೋವರಕ್ಕೆ ಹೋಗುವುದಾಗಿ ಆಮೆಗೆ ತಿಳಿಸಿದವು. ತನ್ನನ್ನು ಕರೆದೊಯ್ಯಬೇಕೆಂದು ಆಮೆ ವಿನಂತಿಸಿತು. ಸಣ್ಣ ಕೋಲನ್ನು ತಾನು ಬಾಯಿಯಿಂದ ಹಿಡಿಯುವುದಾಗಿ ಮತ್ತು ಎಡಬಲದ ತುದಿಗಳನ್ನು ಹಂಸಪಕ್ಷಿಗಳು ತಮ್ಮ ಚುಂಚುಗಳಲ್ಲಿ ಹಿಡಿದು ಹಾರುತ್ತ ಹೋಗಬೇಕೆಂದು ವಿನಂತಿಸಿತು. ಹಾಗೆ ಹೋಗುತ್ತಿರುವಾಗ ಮೌನವಾಗಿರಬೇಕೆಂದು ಪಕ್ಷಿಗಳು ಎಚ್ಚರಿಸಿದವು. ಮಾತನಾಡಿದರೆ ಕೆಳಗೆ ಬಿದ್ದು ಸಾಯಬೇಕಾಗುತ್ತದೆ. ಎಂದು ಹೇಳಿದವು. ಆಮೆ ಒಪ್ಪಿತು. ನಗರದ ಮೇಲೆ ಅವು ಹಾರಿ ಹೊಗುತ್ತಿರುವಾಗ ಜನರು ಅಚ್ಚರಿಗೊಂಡು ಆ ಬಗ್ಗೆ ಚರ್ಚಿಸಿದರು. ಆಗ ಆಮೆ ಆ ಜನರು ಏನು ಮಾತನಾಡುತ್ತಿರುವರೆಂದು ಕೇಳಲು ಬಾಯಿ ತೆರೆಯಿತು. ಆ ಕ್ಷಣವೇ ಕೆಳಗೆ ಬಿದ್ದು ಸತ್ತು ಹೋಯಿತು. ಹಿತಚಿಂತಕರ ನುಡಿಗಳನ್ನು ಪಾಲಿಸದಿದ್ದರೆ ಇದೇ ಎಂಬ ನೀತಿ ಈ ಕತೆಯಲ್ಲಿದೆ.


ಶಿಲ್ಪ –೧೧

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಕಂಬದಲ್ಲಿ ವಿಷ್ಣುಶರ್ಮ ವಿರಚಿತ ಪಂಚತಂತ್ರದಲ್ಲಿ ಬೇರುಂಡ ಪಕ್ಷಿಗಳ ಕಥೆಯೊಂದಿದೆ. ಎರಡು ಮುಖಗಳುಳ್ಳ ಈ ಪಕ್ಷಿಗಳಿಗೆ ಒಂದೇ ದೇಹ.

---

೧೧೦. ಮಲ್ಲಿಕಾರ್ಜುನ ಹಿರೇಮಠ (ಪ್ರಸಂ) : ಸತ್ಯಾಶ್ರಯ, ಪುಟ – ೧೪–೧೫

ಕಥಾನಕ ಭಿತ್ತಿಶಿಲ್ಪಗಳು



ಶಿಲ್ಪ-೧. ಮಹಾಕೂಟೇಶ್ವರ ದೇವಾಲಯ, ಮಹಾಕೂಟ



ಶಿಲ್ಪ-೨. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ-೩+೧. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ

ಕಥಾನಕ ಭಿತ್ತಿಶಿಲ್ಪಗಳು



ಶಿಲ್ಪ-೩+೨. ಎರಡನೆಯ ವೈಷ್ಣವ ಗುಹಾಲಯ, ಬಾದಾಮಿ

ಕಥಾನಕ ಭಿತ್ತಿಶಿಲ್ಪಗಳು



ಶಿಲ್ಪ-೮+೧. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ

ಕಥಾನಕ ಭಿತ್ತಿಶಿಲ್ಪಗಳು



ಶಿಲ್ಪ-೪+೨. ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ

ಕಥಾನಕ ಭಿತ್ತಿಶಿಲ್ಪಗಳು



ಶಿಲ್ಪ-೫. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೬. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು




ಶಿಲ್ಪ-೭. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೮. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೯. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೧೦+೧೧. ಪಾಪನಾಥ ದೇವಾಲಯ, ಪಟ್ಟದಕಲ್ಲು


ಕಥಾನಕ ಭಿತ್ತಿಶಿಲ್ಪಗಳು




ಶಿಲ್ಪ-೧೦+೨. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೧. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೨. ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು



ಶಿಲ್ಪ-೧೩. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಒಮ್ಮೆ ಒಂದು ಮುಖಕ್ಕೆ ಅಮೃತದಂತಹ ಹಣ್ಣು ದೊರೆಯಿತು. ಅದರ ರುಚಿಯನ್ನು ಬಾಯಿತುಂಬಾ ಬಣ್ಣಿಸಿತು. ಇನ್ನೊಂದು ಮುಖವು ತನಗೂ ಒಂದಿಷ್ಟು ಹಣ್ಣು ಕೊಡಲು ಕೇಳಿತು, ಮೊದಲನೆಯ ಮುಖವು ತಮ್ಮಿಬ್ಬರಿಗೂ ಒಂದೇ ಹೊಟ್ಟೆಯಿದ್ದ ಕಾರಣ, ಬೇರೆ ಬೇರೆಯಾಗಿ ತಿನ್ನುವುದೇಕೆ ಎಂದು ನಗುತ್ತಾ ನಿರಾಕರಿಸಿತು. ಎರಡನೆಯ ಮುಖಕ್ಕೆ ಅವಮಾನವಾಯಿತು. ಮರುದಿನ ಎರಡನೆಯ ಮುಖಕ್ಕೆ ವಿಷದ ಹಣ್ಣು ಸಿಕ್ಕಿತು. ತಾನು ಆ ಹಣ್ಣು ತಿನ್ನುವುದಾಗಿ ಮೊದಲನೆಯ ಮುಖಕ್ಕೆ ಹೇಳಿತು. ಆ ಹಣ್ಣು ತಿಂದರೆ ಇಬ್ಬರೂ ಸಾಯುವುದರಿಂದ ಅದನ್ನು ತಿನ್ನಬೇಡವೆಂದು ಅದು ವಿನಂತಿಸಿತು. ಹಿಂದೆ ಅವಮಾನಿತವಾಗಿದ್ದರಿಂದ ಎರಡನೆಯ ಮುಖವು ವಿಷದ ಹಣ್ಣನ್ನು ತಿಂದಿತು. ಎರಡೂ ಮರಣಕ್ಕೀಡಾದವು. ಅಸಹಕಾರ ಗುಣದಿಂದ ಮೃತ್ಯು ಎಂಬುದು ಈ ಕತೆಯ ನೀತಿಯಾಗಿದೆ.[೧೧೧]

ಶಿಲ್ಪ –೧೨

ಈ ಶಿಲ್ಪವು ಮಲ್ಲಿಕಾರ್ಜುನ ದೇವಾಲಯದ ಸಭಾಮಂಟಪದ ಕಂಬದ ಮೇಲೆ ಕೆತ್ತಲಾಗಿದೆ. ವೈದಿಕ ಯುಗದಲ್ಲಿ ಗುರುವಿನ ಮನೆಯೇ ಪಾಠಶಾಲೆಯಾಗಿತ್ತು. ಉಪನಿಷತ್ತುಗಳಲ್ಲಿ ಗುರುಗಳು ಶಿಷ್ಯರನ್ನು, ಶಿಷ್ಯರು ಗುರುಗಳನ್ನು ಆಯ್ಕೆ ಮಾಡುತ್ತಿದ್ದರೆಂದು ಹೇಳಲಾಗಿದೆ. ಗುರುಗಳ ಪರೀಕ್ಷೆಯಲ್ಲಿ ಉತ್ತೀರ್ಣನಾದವನಿಗೆ ಗುರುಕುಲದಲ್ಲಿ ಪ್ರವೇಶ ದೊರೆಯುತ್ತಿತ್ತು. ಗುರುಕುಲ ಪದ್ಧತಿಯ ಬಗ್ಗೆ ಬರೆಯುತ್ತ ಹುಯೆನ್‌ತ್ಸಾಂಗನು ವಿದ್ಯಾರ್ತಿಗಳು ಗುರುಗಳ ಮನೆಯಲ್ಲಿದ್ದುಕೊಂಡು ಅಭ್ಯಸಿಸುತ್ತಾರೆ, ಅವರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ಮಾಡುವ ಮೊದಲ ಕಾರ್ಯವೆಂದರೆ ಗುರುಗಳಿಗೆ ಗುರುದಕ್ಷಿಣೆಯನ್ನು ನೀಡುವುದು ಎಂದು ತಿಳಿಸಿದ್ದಾನೆ.[೧೧೨] ಚಾಲುಕ್ಯರ ದೇವಾಲಯಗಳಲ್ಲಿ ಗುರುಕುಲ ಶಿಲ್ಪಗಳು ಕಾಣಿಸುತ್ತವೆ. ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ಸಭಾಮಂಟಪದ ಕಂಬದ ಮೇಲೆ ಗುರು ಜಟಾಧಾರಿಯಾಗಿ ಎತ್ತರದ ಮಣೆಯಮೇಲೆ ಕುಳಿತ್ತಿದ್ದಾನೆ. ವಿದ್ಯಾರ್ಥಿಗಳು ತಾಳೆಗರಿಗಳನ್ನು ಹಿಡಿದುಕೊಂಡು ಕುಳಿತ್ತಿದ್ದಾರೆ. ಹಿನ್ನೆಲೆಯಲ್ಲಿ ಗುರುಗಳ ಆಶ್ರಮವಿದ್ದು, ಇಬ್ಬದಿಗಳಲ್ಲಿ ಸಸ್ಯ ಮತ್ತು ಪ್ರಾಣಿಯಿರುವುದು ಅಂದಿನ ಗುರುಕುಲ ಪದ್ಧತಿಯನ್ನು ಸೂಚಿಸುತ್ತದೆ. ಈ ಶಿಲ್ಪವು ಅರ್ಧವೃತ್ತಾಕಾರದಲ್ಲಿ ಉಬ್ಬು ಕೆತ್ತನೆಯಿಂದ ಕೂಡಿದೆ.

ರಾವಣನ ಶಿಲ್ಪಗಳು

ಶಿಲ್ಪ –೧

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಸಭಾಮಂಟಪದ ದಕ್ಷಿಣ ದ್ವಾರದ ಮುಖ ಮಂಟಪದ ಬಲಭಾಗದ ರಂಬದಲ್ಲಿ ಪೂರ್ವಾಭಿಮುಖವಾಗಿರುವ ದಶಾವತಾರದ ರಾವಣನು

೧೧೧. ಮಲ್ಲಿಕಾರ್ಜುನ ಹಿರೇಮಠ (ಪ್ರಸಂ) : ಸತ್ಯಾಶ್ರಯ, ಪುಟ – ೧೭

೧೧೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೬೮



ಕೈಲಾಸ ಪರ್ವತವನ್ನು ತನ್ನ ಇಪ್ಪತ್ತು ಭುಜಗಳಿಂದ ಎತ್ತುತ್ತಿರುವ ಶಿಲ್ಪವು ಶಿಲ್ಪಿಯ ಕಲಾಕೌಶಲ್ಯಕ್ಕೆ ಹಿಡಿದ ಕನ್ನಡಿಯಂತಿದೆ. ರಾವಣನನ್ನು ಆಲಿಂಡ ಭಂಗಿಯಲ್ಲಿ[೧೧೩] ಕುಳಿತಂತೆ ಶಿಲ್ಪಿಯು ತೋರಿಸಿದ್ದಾನೆ. ಕೈಲಾಸ ಪರ್ವತದ ಮೇಲಿರುವ ಪಾರ್ವತಿಯು ಗಾಬರಿಯಿಂದ ಶಿವನ ತೋಳನ್ನು ಹಿಡಿದಿದ್ದಾಳೆ. ಶಿವನು ಹಸನ್ಮುಖನಾಗಿದ್ದಾನೆ. ಪ್ರಾಣಿ ಪಕ್ಷಿಗಳೆಲ್ಲ ಭಯದಿಂದ ವಿಚಲಿತವಾಗಿವೆ. ಶಿವಗಣಗಳು ಕೋಪದಿಂದ ಬಂಡೆಗಲ್ಲುಗಳನ್ನು ಎತ್ತಿ ರಾವಣನ ಮೇಲೆ ಹೊಗೆಯಲು ಎತ್ತಿ ಹಿಡಿದಿದ್ದಾರೆ. ಒಬ್ಬಗಣ ಧನಸ್ಸನ್ನು ಹಿಡಿದು ನಿಂತಿದ್ದಾನೆ. ನಂದಿಯು ಶಿವನ ಹಿಂದೆ ಅವಿತುಗೊಂಡಂತೆ ಬಿಂಬಿಸಲಾಗಿದೆ. ಈ ಶಿಲ್ಪ ರಚನೆಯಲ್ಲಿ ಶಿಲ್ಪಿಯು ಕಲ್ಪನಾ ಚಾತುರ್ಯವು ಅಮೋಘವಾದದ್ದು.

ಶಿಲ್ಪ –೨

ಪಟ್ಟದಕಲ್ಲಿನ ಪಾಪನಾಥ ದೇವಾಲಂಯ ಬಲಭಾಗದ ಹೊರಭಿತ್ತಿಂಯಲ್ಲಿ ದಕ್ಷಿಣಾಭಿಮುಖವಾಗಿರುವ ಈ ಶಿಲ್ಪವು ಕೈಲಾಸ ಪರ್ವತವನ್ನು ಎತ್ತುತ್ತಿರುವ ಶಿಲ್ಪವು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ರಾವಣ ಶಿಲ್ಪವನ್ನು ಹೋಲುತ್ತದೆ. ಆಲಿಂಡ ಭಂಗಿಯಲ್ಲಿರುವ ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿದ್ದಾನೆ. ಮೇಲಿರುವ ಶಿವನು ಭಗ್ನವಾಗಿದ್ದು, ಪಾರ್ವತಿಯ ಶಿರಭಾಗವು ತುಂಡಾಗಿದೆ. ಶಿವನ ಬಲಭಾಗದಲ್ಲಿ ನಂದಿ ಇದ್ದಾನೆ. ಶಿವಗಣಗಳು ಕೋಪದಿಂದ ರಾವಣನ ಮೇಲೆ ಏರಿಬರುತ್ತಿರುವಂತೆ ಕಂಡರಿಸಲಾಗಿದೆ.


ಶಿಲ್ಪ –೩

ಪಟ್ಟದಕಲ್ಲಿನ ಪಾಪನಾಥ ದೇವಾಲಯದ ನವರಂಗ ಬಲಭಾಗದ ಹೊರ ಭಿತ್ತಿಯಲ್ಲಿ ದಕ್ಷಿಣಾಭಿಮುಖವಾಗಿರುವ ಶಿಲ್ಪದಲ್ಲಿ ರಾವಣಾಸುರನು ಇಪ್ಪತ್ತು ಬಾಹುಗಳು ಮತ್ತು ಹತ್ತು ತಲೆಗಳಿಂದ ಕೂಡಿದ್ದು, ಗಂಭೀರನಾಗಿ ಕುಳಿತಿದ್ದಾನೆ. ಸಿಂಹಾರೂಢನಾಗಿರುವ ರಾವಣನ ಬಲಪಕ್ಕದಲ್ಲಿ ಅವನ ತಂಗಿಯಾದ ಶುರ್ಪನಖಿಯು ಅಣ್ಣನಿಗೆ ತನಗಾದ ಅವಮಾನವನ್ನು ಹೇಳಿಕೊಳ್ಳುತ್ತಿದ್ದಾಳೆ. ಶುರ್ಪನಖಿಯನ್ನು ವಿಕಾರವಾಗಿ ಕಂಡರಿಸಿದ್ದು, ರಾವಣನ ಮುಖಭಾವದಲ್ಲಿ ಕ್ರೋಧವನ್ನು ಗುರುತಿಸಬಹುದಾಗಿದೆ.

ಶಿಲ್ಪ –೪

ಪಟ್ಟದಕಲ್ಲಿನ ಪಾಪನಾಥ ದೇವಾಲಯ ನವರಂಗದ ಬಲಭಾಗದ ಹೊರಭಿತ್ತಿಯಲ್ಲಿ ದಕ್ಷಿಣಾಭಿಮುಖವಾಗಿರುವ ರಾವಣನು ಜಟಾಯುದ್ಧದ ಸನ್ನಿವೇಶ ಹೊಂದಿರುವಂತೆ ಕೆತ್ತಲಾಗಿದೆ. ಈ ಶಿಲ್ಪವು ಅಲ್ಲಲ್ಲಿ ಭಗ್ನಗೊಂಡಿದ್ದು, ರಾವಣಾಸುರನ ಹತ್ತು ಭುಜಗಳನ್ನು ಮಾತ್ರ ತೋರಿಸಲಾಗಿದ್ದು, ಮೂರು ಶಿರಗಳನ್ನು ಹೊಂದಿದ್ದಾನೆ. ಕೈಗಳಲ್ಲಿ ನಾನಾ ರೀತಿಯ ಆಯುಧಗಳನ್ನು

೧೧೩. ಡಾ. ಅಂಬಳಿಕೆ ಹಿರಿಯಣ್ಣ (ಸಂ.) : ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ – ೩೯೦



ಹಿಡಿದಿದ್ದಾನೆ. ಜಟಾಯುವು ಸೀತಾಪಹರಣ ತಡೆಯುವ ತನ್ನ ಪ್ರಯತ್ನವನ್ನು ಮುಂದುವರೆಸಿದೆ. ಒಂದು ಕಾಲಿನಿಂದ ರಾಮಯಣ ಕೈಯಲ್ಲಿರುವ ಖಡ್ಗವನ್ನು ತಡೆಯುತ್ತಿದ್ದಂತೆ ತೋರುತ್ತದೆ.

ಶಿಲ್ಪ –೫

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಸಭಾಮಂಟಪದ ದಕ್ಷಿಣದ್ವಾರದ ಬಲಗಡೆಯ ಹೊರಭಿತ್ತಿಯಲ್ಲಿ ಇರುವ ಸೀತಾಪಹರಣದ ಶಿಲ್ಪವು ದಕ್ಷಿಣಾಭಿಮುಖವಾಗಿದ್ದು, ನಯನಮನೋಹರವಾದ ಈ ಶಿಲ್ಪದಲ್ಲಿ ರಾವಣನು ಅತಿಭಂಗಿಯಲ್ಲಿದ್ದು, ಬಲಗೈಯಲ್ಲಿ ಖಡ್ಗ ಹಿಡಿದಿದ್ದು, ಎಡಗೈಯಲ್ಲಿ ಗುರಾಣಿಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಜಟಾಯು ಪಕ್ಷಿಯು ಅವನ ಕಣ್ಣಿಗೆ ಕುಕ್ಕುತ್ತಿರುವಂತೆ ಶಿಲ್ಪಿಯು ತನ್ನ ಶಿಲ್ಪ ಚಾತುರ್ಯವನ್ನು ತೋರಿದ್ದಾನೆ. ಮೇಲಕ್ಕೆ ನೆಗೆಯುತ್ತಿರುವ ರಾವಣಾಸುರನ ಬಲಗಾಲನ್ನು ಜಟಾಯು ತನ್ನ ಕಾಲಿನಿಂದ ಹಿಡಿದಿದ್ದು, ಸೀತಾದೇವಿಯನ್ನು ರಾವಣನಿಂದ ಬಿಡಿಸಿಯೇ ತೀರಬೇಕೆಂದು ದಿಟ್ಟತನದಿಂದ ಹೋರಾಡುತ್ತಿದೆ. ರಾವಣನು ಎಡಗಾಲು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಅಂತರಿಕ್ಷದಲ್ಲಿ ರಥವಿದ್ದು, ಅದರಲ್ಲಿ ಸೀತಾದೇವಿಯು ಶೋಕಿಸುತ್ತಿರುವಂತೆ ಶಿಲ್ಪಿಯು ಕಲಾಚಾತುರ್ಯವನ್ನು ಮೆರೆದಿದ್ದಾನೆ.

ಒಟ್ಟಾರೆ ಇವರ ಕಾಲದ ಶಿಲ್ಪಗಳಲ್ಲಿ ವೈವಿಧ್ಯಮಯವಾದ ಚಮತ್ಕಾರಿಕ ಶಿಲ್ಪಗಳು ರಚನೆಗೊಂಡಿವೆ. ಆನೆ ಮತ್ತು ವೃಷಭ ಪ್ರಾಣಿಗಳು, ನಾಟ್ಯಭಂಗಿಯ ಮೂರು ದೇಹಕ್ಕೆ ನಾಲ್ಕು ಕಾಲಗಳು ಹೀಗೆ ಶಿಲ್ಪಿಯ ಕಲ್ಪನಾ ಚಾತುರ್ಯ ಪ್ರಕಟಗೊಂಡಿವುದು ವೈಶಿಷ್ಟ್ಯವಾಗಿದೆ.


ರಾವಣರ ಶಿಲ್ಪಗಳು




ಶಿಲ್ಪ-೧. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ-೨. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೩. ಪಾಪನಾಥ ದೇವಾಲಯ, ಪಟ್ಟದಕಲ್ಲು



ಶಿಲ್ಪ-೪. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು




ಶಿಲ್ಪ-೫. ಪಾಪನಾಥ ದೇವಾಲಯ, ಪಟ್ಟದಕಲ್ಲು

ಸೃಜನಶೀಲ (ಚಮತ್ಕಾರಿಕ) ಶಿಲ್ಪಗಳು





ಶಿಲ್ಪ. ಮೊದಲನೆಯ ಶೈವ ಗುಹಾಲಯ, ಬಾದಾಮಿ



ಶಿಲ್ಪ. ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು



ಶಿಲ್ಪ. ಮೊದಲನೆಯ ಶೈವ ಗುಹಾಲಯ, ಬಾದಾಮಿ

ವರ್ಣಚಿತ್ರಗಳು











ಮೂರನೆಯ ವೈಷ್ಣವ ಗುಹಾಲಯ, ಬಾದಾಮಿ

ಹಸ್ತಗಳು



ಅಭಯಹಸ್ತ
ವರದಹಸ್ತ
ಕಟಕಹಸ್ತ
ತ್ರಿಪತಾಕಹಸ್ತ
ತ್ರಿಶೂಲಹಸ್ತ
ಸೂಚಿಹಸ್ತ
ಗಜಹಸ್ತ
ಶಿಖರಹಸ್ತ
ಮುಷ್ಟಿಹಸ್ತ
ಭೂಸ್ಪರ್ಶಹಸ್ತ
ತಾಡನಹಸ್ತ
ಪ್ರಸಾರಿತಹಸ್ತ
ಆಲಿಂಗನಹಸ್ತ
ಗಜಶುಂಡಹಸ್ತ
ಧರ್ಮಚಕ್ರಹಸ್ತ
ಡೋಃಲಹಸ್ತ
ಅರ್ಧಚಂದ್ರ ಹಸ್ತ
ಧ್ಯಾನಮುದ್ರೆಹಸ್ತ
ಪಾಶ
ಗದೆ


ಹಸ್ತಗಳು


ವಿಸ್ಮಯಹಸ್ತ
ಮೃಗ
ಶುಕ
ನಾಗ
ತ್ರಿಶೂಲ
ಪಲ್ಲವಹಸ್ತ
ಪುಷ್ಪಪುಟ ಹಸ್ತ
ಡಮರು
ಪರಶು
ನಿದ್ರಾಹಸ್ತ
ಕಟಿಹಸ್ತ
ಬಿಲ್ಲು
ಗಜಹಸ್ತ
ನಮಸ್ಕಾರ ಹಸ್ತ
ಕಮಂಡಲ
ಅಂಕುಶ
ಘಂಟೆ
ಶಕ್ತಿ
ಪುಸ್ತಕ
ಕಪಾಲ
ಪದ್ಮ
ದರ್ಪಣ

1

ಕಿರೀಟ, ಉದರ ಬಂಧ, ಕಟಿವಸ್ತ್ರ






















ಅಧ್ಯಾಯ : ಏಳು

ಬಾದಾಮಿ ಚಾಲುಕ್ಯರ ಕಾಲದ ಶಿಲ್ಪದ ಲಕ್ಷಣಗಳು, ಪ್ರಭಾವ, ಪ್ರೇರಣೆ ಮತ್ತು ಶೈಲಿ

ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಕಲೆಯ ಹರವು ವಿಶಾಲವಾದುದು. ಇವರು ದೇವತೆಗಳಿಗೆ ಸಂಬಂಧಿಸಿದಂತೆ ಮತ್ತು ವಿವಿಧ ಧರ್ಮಗಳಿಗೆ ಸಂಬಂಧಿಸಿದಂತೆ ನೂರಾರು ಶಿಲ್ಪಗಳನ್ನು ಗುಹಾಲಯಗಳಲ್ಲಿ ಹಾಗೂ ರಾಚನಿಕ ದೇವಾಲಯಗಳಲ್ಲಿ ರಚಿಸಿದ್ದಾರೆ. ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಲೌಕಿಕ ಶಿಲ್ಪಗಳನ್ನು ಕೂಡಾ ರಚಿಸಿದ್ದಾರೆ. ಹಾಗಿದ್ದರೆ ಇವರ ಈ ಶಿಲ್ಪಕಲಾ ಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವುವು? ಇವರ ಶಿಲ್ಪಗಳ ವೈವಿಧ್ಯಗಳೇನು? ಇವರ ಮೇಲೆ ವಿಶೇಷ ಪ್ರಭಾವ ಬೀರಿದ ಶಿಲ್ಪಪರಂಪರೆ ಯಾವುದು? ಮುಂತಾದ ಹಲವು ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಇಷ್ಟೊಂದು ಅಗಾಧ ಸಂಖ್ಯೆಯಲ್ಲಿ ಶಿಲ್ಪಗಳನ್ನು ರಚಿಸಿದ ಇವರ ಶಿಲ್ಪಗಳಲ್ಲಿ ವೈವಿಧ್ಯವಿದೆ. ಈ ವೈವಿಧ್ಯದ ಹಿನ್ನೆಲೆ ಏನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಬಾದಾಮಿ ಚಾಲುಕ್ಯರ ಶಿಲ್ಪಗಳ ಬೆಳವಣಿಗೆಯನ್ನು ಕುರಿತು ತಿಳಿದುಕೊಳ್ಳಬೇಕಾದರೆ ಅದಕ್ಕೆ ಮೊದಲು ಭಾರತದ ಪ್ರಾಚೀನ ಶಿಲ್ಪಕಲೆಯ ಕುರಿತು ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ. ಭಾರತದಲ್ಲಿ ಇತಿಹಾಸ ಪೂರ್ವಕಾಲದಲ್ಲಿ ಶಿಲ್ಪಕಲೆಯ ಕುರಿತಾದ ಕಲ್ಪನೆಗಳಿದ್ದವು. ವೇದಗಳ ಕಾಲದಲ್ಲಿ ಭಾರತದಲ್ಲಿ ಶಿಲ್ಪಕಲೆಯ ಕುರಿತು ತಿಳುವಳಿಕೆಗಳಿದ್ದುದು ತಿಳಿದುಬರುತ್ತದೆ. ಹಾಗೆಯೇ ಋಗ್ವೇದದಲ್ಲಿಯೂ ಶಿಲ್ಪ ರಚನೆಯ ಹಾಗೂ ದೇವತೆಗಳ ಕುರಿತಾದ ಮಾಹಿತಿ ಕಂಡುಬರುತ್ತದೆ. ಪ್ರಾಚೀನ ಭಾರತದ ಶಿಲ್ಪಕಲೆಯ ಆಧಾರಸ್ತಂಭವೇ ವೇದಗಳು. ವೇದಗಳಲ್ಲಿ ಉಲ್ಲೇಖಿಸಿದ ರೀತಿಯಲ್ಲಿಯೇ ಶಿಲ್ಪಗಳು ರಚನೆಯಾದವು. ಸಿಂಧೂ ನದಿ ಪ್ರದೇಶದ ತಟದ ನಾಗರಿಕತೆಯಲ್ಲಿ



ನಮಗೆ ಶಿಲ್ಪಗಳು ಕಂಡುಬಂದರೂ ಅವು ದೇವತಾಶಿಲ್ಪಗಳಾಗಿರದೆ ಗೊಂಬೆಗಳು, ಮುದ್ರೆಗಳು, ಇತ್ಯಾದಿಗಳು ಮತ್ತು ನೃತ್ಯಗಾರ್ತಿಯರ ಶಿಲ್ಪಗಳು ದೊರೆತವು. ವೇದಕಾಲದಲ್ಲಿ ಶಿಲ್ಪಗಳ ರಚನೆ ಇದ್ದಿರಬಹುದು, ಆದರೆ ಅವುಗಳ ಕುರುಹುಗಳು ಕಂಡುಬಂದಿಲ್ಲ. ಕ್ರಿಸ್ತಶಕಕ್ಕೆ ಮೊದಲು ಮೌರ್ಯರ ಆಡಳಿತ ಕಾಲದಲ್ಲಿ ಶಿಲ್ಪಗಳ ರಚನೆಯಾಗಿದ್ದಿರಬಹುದು ಎಂಬ ವಿಷಯ ತಿಳಿದಿದ್ದು, ಆದರೆ ಮೌರ್ಯರು ರಚಿಸಿದಂತಹ ಶಿಲ್ಪಗಳು ದೊರೆತದ್ದು ಕಡಿಮೆಯೇ.

ಆರ್ಯರ ಕಾಲದಲ್ಲಿ ಮೂರ್ತಿಪೂಜೆ ರೂಢಿಯಲ್ಲಿತ್ತು ಎಂದು ಹೇಳಬಹುದಾದ ಯಾವುದೇ ಕುರುಹುಗಳು ನಮಗೆ ಸಿಗುವುದಿಲ್ಲವಾದರೂ ವೇದಗಳಲ್ಲಿ ಉಲ್ಲೇಖವಿದೆ. ಆ ಕಾಲದ ಗ್ರಂಥಗಳಲ್ಲಿ ಮೂರ್ತಿ ಪೂಜೆಯ ವಿಷಯವಾಗಿ ಸಾಕಷ್ಟು ಮಾಹಿತಿಗಳು ಸಿಗುತ್ತವೆ. 'ವೇದದಲ್ಲಿ ಅಗ್ನಿ ಪುರುಷನನ್ನು ವರ್ಣಿಸಿದ್ದು, ಇದರಂತೆ ಇಂದ್ರ, ವಾಯು, ಇತ್ಯಾದಿ ದೇವತೆಗಳ ವರ್ಣನೆಯೂ ಇದೆ. ಶತಪಥ ಬ್ರಾಹ್ಮಣದಲ್ಲಿಯೂ ಐತರೇಯ ಆರಣ್ಯಕದಲ್ಲಿಯೂ ಮೂರ್ತಿಪೂಜೆಯ ವಿಷಯಕವಾದ ವಾಕ್ಯಗಳು ದೊರೆಯುತ್ತವೆ.

ಗೌತಮ ಧರ್ಮಸೂತ್ರದಲ್ಲಿ ದೇವಾಲಯಗಳ ಮತ್ತು ದೇವತಾ ಪೂಜೆಯ ವಿಷಯಗಳು ಬರುತ್ತವೆ. ಬೋಧಾಯನ ಗೃಹ್ಯಸೂತ್ರದಲ್ಲಿ ಮೂರ್ತಿಪೂಜೆಯ ವಿಷಯ ಹೆಚ್ಚು ಮಹತ್ವದ್ದಾಗಿ ವಿವರಿಸಿದೆ. ಮಹಾಭಾರತದಲ್ಲಿ ಅನೇಕ ದೇವತೆಗಳ ವರ್ಣನೆ ಕಂಡುಬಂದಿದೆ. ಲಂಕೆಯಲ್ಲಿ ದೇವಾಲಯಗಳಿದ್ದುವೆಂದು ರಾಮಾಯಣದಿಂದ ತಿಳಿದು ಬಂದಿದೆ. ಪಾಣಿನಿಯ ಕಾಲದಲ್ಲಿ ಮೂರ್ತಿಪೂಜೆ ಇದ್ದಿರಬೇಕೆಂದು ಆತನ ಗ್ರಂಥದ ಆಧಾರದಿಂದ ಊಹಿಸಲಾಗಿದೆ.'[೧೧] ಇವೆಲ್ಲವುಗಳನ್ನು ಗಮನಿಸಿದಾಗ ಭಾರತದಲ್ಲಿ ಮೂರ್ತಿಪೂಜೆ ಹಿಂದೆಯೇ ಇದ್ದಿರಬಹುದೆಂದು ತರ್ಕ ಮಾಡಬೇಕಾಗುತ್ತದೆ. ಆದರೆ ಇಂದು ಇವೆಲ್ಲ ಕೇವಲ ಊಹೆಗಳಾಗಿ ಉಳಿದಿರುವುದು ದುಃಖಕರ ಸಂಗತಿಯಾಗಿದೆ.

ವೇದಗಳ ಕಾಲಾನಂತರದ ಸುಮಾರು ಒಂದು ಸಹಸ್ರಮಾನದ ಅವಧಿಯ ಯಾವುದೇ ದಾಖಲೆಗಳು ಅಥವಾ ಕನಿಷ್ಠ ಕುರುಹುಗಳು ನಮಗೆ ಸಿಗದಿರುವುದರಿಂದ ಈ ಮಧ್ಯದ ಅವಧಿಯು ಖಾಲಿಯಾಗಿಯೇ ಉಳಿದುಬಿಡುತ್ತದೆ. ಕ್ರಿ.ಪೂ. ೬ ಮತ್ತು ೭ನೆಯ ಶತಮಾನದ ನಂತರದ ವಿಚಾರವನ್ನಷ್ಟೇ ಗಮನಿಸಲು ಸಾಧ್ಯವಾಗುತ್ತದೆ. ಭಾರತದಲ್ಲಿ ಶಿಲ್ಪಗಳ ರಚನೆ ಯಾವಾಗ ಪ್ರಾರಂಭವಾಯಿತೆಂದು ಹೇಳಲು ಸಾಧ್ಯವಿಲ್ಲವಾದರೂ ಪ್ರಾಚೀನ ಕಾಲದಲ್ಲಿಯೇ ಶಿಲ್ಪಗಳ ರಚನೆ ಮತ್ತು ವಿಗ್ರಹಗಳ ಆರಾಧನೆಯಿತ್ತೆಂದು ಊಹಿಸಲು ಸಾಧ್ಯವಿದೆ.

'ವಿಗ್ರಹಾರಾಧನೆಯು ವೇದಗಳಿಗಿಂತ ಈಚಿನದೆಂದೂ ಗೌತಮಬುದ್ಧನ ಕಾಲದಲ್ಲಿ ಇರಲಿಲ್ಲವೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಈಚೆಗೆ ಸಿಂಧೂನದಿಯ ಪ್ರಾಂತದಲ್ಲಿರುವ ಮೊಹೆಂಜೋದಾರೋ ಮತ್ತು ಹರಪ್ಪ ಸ್ಥಳಗಳಲ್ಲಿ ನಡೆಸಿರುವ ಸಂಶೋಧನೆಗಳಿಂದ

---

೧೧. ಪಿ.ಆರ್. ತಿಪ್ಪೇಸ್ವಾಮಿ (ಪ್ರಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೪೩



ಈಗಿನ ದ್ರಾವಿಡ ಸಂಸ್ಕೃತಿ ಎಂದು ನಾವು ಕರೆಯುತ್ತಿರುವುದಕ್ಕೆ ಮೂಲವೆಂದು ಹೇಳಬಹುದಾದ ನಾಗರಿಕತೆಯು ಆರ್ಯರು ಭಾರತಕ್ಕೆ ಬರುವದಕ್ಕೆ ಎಷ್ಟೋ ವರ್ಷಗಳ ಹಿಂದೆ ಇಲ್ಲಿ ನೆಲೆಸಿತ್ತೆಂದು ಹೇಳಲು ಸಾಕಷ್ಟು ಅವಶೇಷಗಳು ದೊರೆತಿವೆ.’[೨] ನಮ್ಮ ದೇಶಕ್ಕೆ ಬಹಳ ಹಿಂದಿನಿದಲೂ ಜನರು ವಲಸೆ ಬಂದು, ಇಲ್ಲಿ ನೆಲೆಸಿ ತಮ್ಮ ಸಂಸ್ಕೃತಿಯನ್ನು ಇಲ್ಲಿ ಸ್ಥಾಪಿಸಿದರು. ಅವರು ತಮ್ಮೊಂದಿಗೆ ತಮ್ಮ ಸಂಸ್ಕೃತಿ ಮತ್ತು ದೇವತೆಗಳನ್ನೂ ಹೊತ್ತು ತಂದರು. ಇದರಿಂದಾಗಿ ಭಾರತದಲ್ಲಿ ಶಿಲ್ಪಗಳು, ವಾಸ್ತುಶಿಲ್ಪಗಳು ಹಾಗೂ ಚಿತ್ರಕಲೆಗಳು ಸ್ಫೂರ್ತಿ ಪಡೆದು ಬೆಳವಣಿಗೆ ಹೊಂದಿದವು ಮತ್ತು ವೈವಿಧ್ಯಗಳನ್ನು ಪಡೆದವು. ಇದರಿಂದಾಗಿ ಭಾರತದಲ್ಲಿ ಕ್ರಿಸ್ತಶಕೆಯ ಆರಂಭದ ಹೊತ್ತಿಗೆ ಸಾಕಷ್ಟು ಶಿಲ್ಪಗಳು ಮತ್ತು ವಾಸ್ತುಶಿಲ್ಪಗಳು ರಚನೆಯಾಗಲು ಮತ-ಧರ್ಮಗಳು ಕಾರಣವಾದವು.

ಇದರಿಂದಾಗಿ ಇಲ್ಲಿನ ಶಿಲ್ಪಕಲೆಗೆ ಭದ್ರ ಬುನಾದಿಯಾಯಿತು. ಮತ-ಧರ್ಮಗಳಲ್ಲಿ ಬರುವ ದೇವಾನುದೇವತೆಗಳ ಕಥಾನಕಗಳು ಇವರಿಗೆ ಪ್ರೇರಣೆ ನೀಡಿದವು. ಇವುಗಳ ಹಿನ್ನೆಲೆಯಲ್ಲಿ ವಾಸ್ತು ಮತ್ತು ಶಿಲ್ಪಗಳು ಇನ್ನಷ್ಟು ರಚನೆಯಾದವು.

ಮತ-ಧರ್ಮಗಳ ಪ್ರೇರಣೆ

ಭಾರತದ ಶಿಲ್ಪಕಲೆಯ ಇತಿಹಾಸವನ್ನು ತಿಳಿಯಬೇಕಾದರೆ ಇಲ್ಲಿನ ಮತ-ಧರ್ಮಗಳನ್ನು ಕುರಿತು ಗಮನಿಸಬೇಕಾಗುತ್ತದೆ. ಭಾರತದಲ್ಲಿ ಮೊದಲು ಕಾಣಿಸಿಕೊಳ್ಳುವುದು ಬ್ರಾಹ್ಮಣ ಪಂಥ. ಇದಕ್ಕೆ ವೇದಗಳು ಆಧಾರ, ಇದನ್ನು ವೈದಿಕ ಪಂಥವೆಂದೂ ಹೇಳಲಾಗುತ್ತದೆ. ಇದುವೇ ನಮ್ಮ ದೇಶದ ಪುರಾತನ ಪಂಥವೂ ಹೌದು, ವೈದಿಕ ಪಂಥದ ಮೂಲ ಪಂಚಭೂತಗಳು, ಶಿವ ಮತ್ತು ಶಕ್ತಿ. ಕ್ರಿ.ಪೂ ೧೭೫೦ ರಿಂದೀಚೆಗೆ ಹಿಂದೂ ಧರ್ಮವು ಬೆಳೆದುಬರಲು ಹಾಗೂ ಸೃಷ್ಟಿಯ ಅಗೋಚರ ಶಕ್ತಿಯಾದ ದೇವರ ಕುರಿತಾದ ಚಿಂತನೆಯೇ ಕಾರಣವಾಯಿತೆಂದರೆ ತಪ್ಪಾಗಲಾರದು.

ಈ ದೇವತೆಗಳ ಕಲ್ಪನೆಯ ಹಿನ್ನೆಲೆಯಲ್ಲಿ ಹಲವಾರು ಕಥೆಗಳು ಹುಟ್ಟಿಬಂದವು. ಕಥೆಗಳ ಹಿಂದೆಯೇ ಅವುಗಳಿಗೆ ರೂಪಗಳು ಬರಲೇಬೇಕು. ಹೀಗೆ ಕಥೆಯ ವ್ಯಕ್ತಿಗಳಿಗೆ ರೂಪಕೊಟ್ಟು ಅವುಗಳನ್ನು ಪೂಜಿಸುವ, ತಮ್ಮ ಮುಂದಿನ ಪೀಳಿಗೆಗೆ ಅವನ್ನು ತಿಳಿಸುವ ಕ್ರಿಯೆಯಲ್ಲಿ ಚಿತ್ರಗಳನ್ನು, ಶಿಲ್ಪಗಳನ್ನು ರಚಿಸುವ ಪ್ರಕ್ರಿಯೆಯೂ ಬೆಳೆದುಬಂತು. ಹೀಗೆ ವೇದಗಳಲ್ಲಿ ಹೇಳಲಾದ ದೇವದೇವತೆಗಳಿಗೆ ರೂಪಕೊಟ್ಟು ಅವನ್ನು ಪೂಜಿಸುವ ಪದ್ಧತಿಯಲ್ಲಿ ಶಿಲ್ಪಗಳು ತಯಾರಾದವು. ಮುಂದೆ ಇವುಗಳಿಗೆ ಶಾಸ್ತ್ರಗಳು, ಕಟ್ಟುಪಾಡುಗಳು ರಚನೆಯಾದವು.

ಇಂದು ನಾವು ನೋಡುವ ಈ ಶಿಲ್ಪಗಳು ಶಿಲ್ಪಶಾಸ್ತ್ರದ ಕಟ್ಟುಪಾಡಿಗೆ ಒಳಪಟ್ಟು ರಚನೆಯಾದ ಶಿಲ್ಪಗಳು. ಇವುಗಳನ್ನು ವೈದಿಕ ಶಿಲ್ಪಗಳು ಎಂದು ಕರೆಯಲಾಯಿತು. ಕಾರಣವೇನೆಂದರೆ ಈ

೦೨. ಪಿ.ಆರ್. ತಿಪ್ಪೇಸ್ವಾಮಿ (ಪ್ರಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೪೨



ಶಿಲ್ಪಗಳು ವೇದಗಳ ಆಧಾರದಲ್ಲಿ, ಅವುಗಳಲ್ಲಿ ಉಲ್ಲೇಖಿಸಿದಂತೆ ರಚನೆಯಾದ ಶಿಲ್ಪಗಳು. ಇವು ಹಿಂದೂ ಧರ್ಮಕ್ಕೆ ಸಂಬಂಧಪಟ್ಟಂತೆ ರಚನೆಯಾದ ಶಿಲ್ಪಗಳಾಗಿರುವುದರಿಂದ ಒಟ್ಟಾಗಿ ಹಿಂದೂ ದೇವತಾ ಶಿಲ್ಪಗಳೆಂದು ಕರೆಯುವುದು ರೂಢಿಯಾಯಿತು.

ಸಿಂಧೂ ನದಿಯ ದಂಡೆಯ ಮೇಲೆ ಬೆಳೆದುಬಂದ ಸಂಸ್ಕೃತಿ ಹಿಂದೂ ಸಂಸ್ಕೃತಿಯಾದಂತೆ ಹಿಂದೂ ಧರ್ಮವು ಬೆಳೆದುಬಂತು. ಕಾಲಕ್ರಮೇಣ ಹಿಂದೂ ಧರ್ಮದಲ್ಲಿ ವಿಷ್ಣು, ಶಿವ, ಶಕ್ತಿ ಅಥವಾ ದುರ್ಗೆ, ಗಣಪತಿ, ಕಾರ್ತಿಕೇಯ ಹೀಗೆ ಹಲವಾರು ಮತಪ್ರಭೇದಗಳು ಕಾಣಿಸಿಕೊಂಡವು. ಪ್ರತಿಯೊಂದು ಪ್ರಭೇದಕ್ಕೂ ಅವರವರ ನಂಬಿಕೆಯೇ ಆಧಾರವಾಯಿತು. ತಮ್ಮ ನಂಬಿಕೆಯೇ ದೇವರ ಶಿಲ್ಪಗಳ ರಚನೆಗೆ ಪ್ರೇರಣೆಯಾಯಿತು.

ಮೊದಲು ಹುಟ್ಟಿಬಂದ ವೈದಿಕ ಧರ್ಮದಲ್ಲಿ ಕೆಲವರಿಗೆ ಗೊಂದಲಗಳು, ಸಮಸ್ಯೆಗಳು ಕಾಣಿಸಿಕೊಂಡವು. ಇದರಿಂದಾಗಿ ಈ ಧರ್ಮವನ್ನು ವಿರೋಧಿಸುವ, ಹಿಂದೂಧರ್ಮದ ತತ್ವವನ್ನು ಒಪ್ಪಲಾರದ ಜನರೂ ಹುಟ್ಟಿಕೊಂಡರು. ಹೀಗೆ ಹುಟ್ಟಿಕೊಂಡ ಭಿನ್ನಾಭಿಪ್ರಾಯಗಳಿಂದಾಗಿ ಹೊಸದಾದ ಎರಡು ಧರ್ಮಗಳು ಹುಟ್ಟಿಕೊಂಡವು. ಅವುಗಳೇ ಬೌದ್ಧ ಮತ್ತು ಜೈನ ಧರ್ಮಗಳು. ಶಾಕ್ಯ ಕುಲದ ಸಿದ್ಧಾರ್ಥನೆಂಬುವವನು ಇಂತಹ ಒಂದು ಪ್ರತ್ಯೇಕ ಧರ್ಮದ ಹುಟ್ಟಿಗೆ ಕಾರಣನಾದ. ಸಿದ್ಧಾರ್ಥನು ಸತ್ಯಶೋಧನೆಗೆ ಹೊರಟು ಜ್ಞಾನೋದಯವಾಗಿ ಬುದ್ಧನಾದ. ಇವನು ಸ್ಥಾಪಿಸಿದ ಧರ್ಮವೇ ಬೌದ್ಧ ಧರ್ಮವಾಯಿತು.

ಇದೇ ಶಾಕ್ಯಕುಲದ ಇನ್ನೊಬ್ಬ ತರುಣ ಮಹಾವೀರನು ಜೈನಮತದ ಹುಟ್ಟಿಗೆ ಕಾರಣನಾದನು. ಇಬ್ಬರೂ ಹಿಂದೂಧರ್ಮದ ಮೂಲದಿಂದ ಬಂದವರೇ ಆದರೂ ಹಿಂದೂ ಧರ್ಮದ ತತ್ವ, ಸಿದ್ಧಾಂತಗಳಿಗೆ ವಿರೋಧಿಗಳಾಗಿ ಭಾರತದಲ್ಲಿ ಈ ಎರಡು ಧರ್ಮಗಳ ಹುಟ್ಟಿಗೆ ಕಾರಣರಾದರು. ಇವು ಮುಂದಿನ ದಿನಗಳಲ್ಲಿ ಹಿಂದೂಧರ್ಮಕ್ಕೆ ಪ್ರತಿಯಾಗಿ ಬೆಳೆದುಬಂದವು. ಇದರಿಂದಾಗಿ ಶಿಲ್ಪಕಲಾ ಪ್ರಪಂಚ ಮತ್ತು ವಾಸ್ತುಶಿಲ್ಪಗಳ ಜಗತ್ತು ಶ್ರೀಮಂತವಾಯಿತು. ಜೈನ ಮತ್ತು ಬೌದ್ಧ ಧರ್ಮಗಳು ಮುಂದಿನ ಹಲವಾರು ಶತಮಾನಗಳ ಕಾಲ ಭಾರತದಲ್ಲಿ ವಾಸ್ತು ಮತ್ತು ಶಿಲ್ಪಕಲೆಯ ದೃಷ್ಟಿಯಿಂದ ಬಹು ಮುಖ್ಯವಾದ ಪಾತ್ರ ವಹಿಸಿದವು.

ಕ್ರಿ.ಪೂ ಕಾಲದಲ್ಲಿಯೂ ಜೈನ ಮತ್ತು ಬೌದ್ಧ ಧರ್ಮಗಳು ಹುಟ್ಟಿದ ಮಾತ್ರಕ್ಕೆ, ಹಿಂದೂ ಧರ್ಮವೂ ಚಲಾವಣೆಯಲ್ಲಿದ್ದ ಮಾತ್ರಕ್ಕೆ ಇಲ್ಲಿ ಮೂರ್ತಿಶಿಲ್ಪಗಳ ಬಳಕೆ ಇತ್ತು ಎಂದು ಹೇಳಲು ಯಾವುದೇ ಪುರಾವೆಗಳು ದೊರೆಯಲಿಲ್ಲ. ವೇದಗಳ ಕಾಲದ ನಂತರದ ಸುಮಾರು ಸಾವಿರ ವರ್ಷಗಳ ಕಾಲ ಭಾರತದಲ್ಲಿ ಏನು ನಡೆಯಿತು? ಯಾವ ಸಂಸ್ಕೃತಿ ಇತ್ತು? ಯಾರು ಆಳಿದರು? ಇತ್ಯಾದಿಗಳ ಕುರಿತು ಯಾವುದೇ ಮಾಹಿತಿಗಳು ಸಿಗುವುದಿಲ್ಲ. ಆದರೆ ಯಾವುದೋ ಒಂದು ಸಂಸ್ಕೃತಿ ಇದ್ದಿರಬೇಕು, ಯಾರಾದರೂ ಆಡಳಿತ ನಡೆಸಿರಬಹುದು ಎಂದು ಕಲ್ಪಿಸಿಕೊಳ್ಳಬಹುದು. ಏಕೆಂದರೆ ಮುಂದೆ ಸುಮಾರು ಸಾವಿರ ವರ್ಷದ ನಂತರ ಬಂದ ಜೈನ,



ಬೌದ್ಧರು ಮೂರ್ತಿಪೂಜೆ ಮತ್ತು ದೇವತಾರಾಧನೆಗಳ ವಿಚಾರದಲ್ಲಿ ಭಿನ್ನ ನಿಲುವಿನವರಾಗಿದ್ದರು ಎಂಬುದು ತಿಳಿದುಬರಬೇಕೆಂದರೆ ಅಸ್ತಿತ್ವ ಇದ್ದುದರಿಂದ ಮಾತ್ರ ಸಾಧ್ಯ. ಇನ್ನು ಧರ್ಮಗಳ ವಿಚಾರ ಇತಿಹಾಸದಲ್ಲಿ ಕಂಡುಬರುವ ವಿಚಾರ. ಮೂರ್ತಿಶಿಲ್ಪಗಳ ಕುರಿತು ಇಲ್ಲೇನೂ ಕಂಡುಬರುವುದಿಲ್ಲ. ಮೂರ್ತಿಗಳ ಉಗಮದ ಕುರಿತು ಭಿನ್ನಾಭಿಪ್ರಾಯಗಳು ಹಾಗೆಯೇ ಮುಂದುವರಿದಿವೆ. ಬುದ್ಧನ ಜನನದ ನಂತರ ಬೌದ್ಧಧರ್ಮವು ಬೆಳೆದುಬಂದರೂ ಅವರಲ್ಲಿ ಬುದ್ಧನನ್ನು ಮೂರ್ತಿಯ ರೂಪದಲ್ಲಿ ಪೂಜಿಸುವ ಪದ್ಧತಿ ಇರಲಿಲ್ಲ. ಜೈನರಲ್ಲಿ ಇರುವುದೂ ಕಂಡುಬರುವುದಿಲ್ಲ.

ಹಿಂದೂ ಅಥವಾ ವೈದಿಕ ದೇವತೆಗಳ ಪೂಜೆ ಯಜ್ಞ-ಯಾಗಗಳ ಮೂಲಕ ನಡೆಯುತ್ತಿತ್ತು. ಹೀಗಾಗಿ ಯಜ್ಞ ವೇದಿಕೆಗಳು, ಅವುಗಳ ನಿರ್ಮಾಣ ರೀತಿ, ಸಲಕರಣೆಗಳ ರಚನೆ ಇತ್ಯಾದಿಗಳ ಕುರಿತ ಉಲ್ಲೇಖಗಳು ಹಿಂದೂಧರ್ಮದಲ್ಲಿ ದೊರಕುತ್ತವೆ. ಆದರೆ ಶಿಲ್ಪಗಳ ಕುರಿತಾದ ಪ್ರಥಮ ಮಾಹಿತಿಗಳು ಸಿಗುವುದು ನಮಗೆ ಇತ್ತೀಚಿನ ಸಂಶೋಧನೆಗಳಿಂದ ದೊರೆತ ಶಿಲ್ಪಗಳ ಆಧಾರದ ಮೇಲೆಯೇ. ಇವುಗಳ ಕುರಿತು ಕೂಡಾ ಭಿನ್ನಾಭಿಪ್ರಾಯಗಳಿವೆ. 'ಮೌರ್ಯರ ಕಾಲಕ್ಕೆ ಸೇರಿದ ಜಿನಮೂರ್ತಿಯೊಂದು ಉತ್ತರ ಹಿಂದುಸ್ಥಾನದಲ್ಲಿ ಸಿಕ್ಕಿದೆ. ಕ್ರಿ.ಪೂ. ೨ನೆಯ ಶತಮಾನಕ್ಕೆ ಸಂಬಂಧಪಟ್ಟ ಖಾರವೇಲನ ಹಾಥಿಗುಂಫಾ ಶಾಸನದಲ್ಲಿ ನಂದರು ತೆಗೆದುಕೊಂಡು ಹೋಗಿದ್ದ ಜಿನವಿಗ್ರಹವೊಂದನ್ನು ಪುನಃ ಪ್ರತಿಷ್ಠೆ ಮಾಡಲಾಯಿತೆಂದು ಹೇಳಿದೆ. ದಕ್ಷಿಣ ಹಿಂದುಸ್ಥಾನದಲ್ಲಿ ಗುಡಿಮಲ್ಲಂನಲ್ಲಿರುವ ಲಿಂಗವೊಂದನ್ನು ಕ್ರಿ.ಪೂ ೨ನೆಯ ಶತಮಾನಕ್ಕೆ ಸೇರಿದ್ದೆಂದು ನಿರ್ಧರಿಸಲಾಗಿದೆ'.[೧೩]

ಗುಡಿಮಲ್ಲಂನಲ್ಲಿರುವ ಶಿವಲಿಂಗವು ಅತ್ಯಂತ ಪ್ರಾಚೀನ 'ಶಿವಲಿಂಗ'ವೆಂಬುದು ನಿರ್ವಿವಾದ. ಆದರೆ ಬೇರೆ ಧರ್ಮದ ವಿಗ್ರಹಗಳೂ ಇದ್ದಿರಬೇಕು. ಆಯಾ ಧರ್ಮಗಳಿಗೆ ಸಂಬಂಧಿಸಿದ ಶಿಲ್ಪಗಳು ಕೂಡ ದೊರತಿವೆ. 'ಇತಿಹಾಸಮಹೋದಧಿ ಸ್ವರ್ಗೀಯ ಕಾಶೀಪ್ರಸಾದರ ಕಥಾನುಸಾರ ಇದುವರೆಗೆ ದೊರತಿರುವ ದೇವಮೂರ್ತಿಗಳಲ್ಲಿ ಸನ್ ೧೯೩೭ರಲ್ಲಿ ಪಾಟ್ಣಾನಗರದ ಲೋನಿಪುರ (ಲೋಹನಿಪುರ) ಎಂಬಲ್ಲಿ ಸಿಕ್ಕಿರುವ ಎರಡು ದಿಗಂಬರ ಜೈನಮೂರ್ತಿಗಳೇ ಸರ್ವಪ್ರಾಚೀನವಾಗಿವೆ'[೧೪] ಎಂದು ಹೇಳಲಾಗಿದೆ. ಆದರೆ ದೇವಾಲಯಗಳ ಉಲ್ಲೇಖ ಮತ್ತು ಮೂರ್ತಿಗಳ ಶಿಲ್ಪಕ್ಕೆ ಸಂಬಂಧಿಸಿದಂತೆ ಕ್ರಿ.ಪೂ. ೨೦೦ರ ನಗರಿಯ ಶಿಲಾಶಾಸನ ಮಹತ್ವದ ಮಾಹಿತಿಯನ್ನು ನೀಡುತ್ತದೆ. 'ಸರ್ವಪ್ರಥಮ ಕ್ರಿ.ಪೂ ೨೦೦ನೆಯ ನಗರಿಯ ಶಿಲಾಲೇಖದಲ್ಲಿ ಸಂಕರ್ಷಣ ಮತ್ತು ವಾಸುದೇವನ ಮೂರ್ತಿ ಪೂಜೆಗೋಸ್ಕರ ದೇವಾಲಯವನ್ನು ನಿರ್ಮಿಸಿದ ಉಲ್ಲೇಖವು ಸಿಗುವುದು, ಇದು ಮೂರ್ತಿಯ ಪೂಜೆಗೆ ಸರ್ವ ಪ್ರಾಚೀನ ಲಿಖಿತ ಪ್ರಮಾಣವಾಗಿದೆ'.[೧೫]

---

೧೩. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೪೩

೧೪. ಅದೇ., ಪುಟ – ೫೫

೧೫. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೫೫



ದೇವಾಲಯಗಳ ರಚನೆ ಆಗಿನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎನ್ನುವುದಕ್ಕೆ ಇನ್ನಷ್ಟು ಸಾಕ್ಷ್ಯಗಳು ನಮಗೆ ದೇವಾಲಯಗಳ ಇತಿಹಾಸವನ್ನು ಕೆದಕಿದರೆ ತಿಳಿದುಬರುತ್ತದೆ. ಶ್ರೀಯುತ ಎಸ್. ಕೆ. ರಾಮಚಂದ್ರರಾವ್ ಅವರು ಹೇಳುವಂತೆ, ಬೇಸನ್ ನಗರದಲ್ಲಿನ ಗರುಡಸ್ತಂಭದ ಮೇಲೆ ದೊರೆತ ಶಾಸನದಲ್ಲಿ (ಕ್ರಿ.ಪೂ. ೧೭೫–೧೩೫) ಹೀಲಿಯೋಡೋರೋಸ್ ಎಂಬಾತನು ವಿಷ್ಣು ದೇವಾಲಯದ ಮುಂದೆ ಗರುಡಸ್ತಂಭವನ್ನು ನೆಡಿಸಿದನೆಂದಿದೆ, ಎಂದಮೇಲೆ ವಿಷ್ಣುವಿಗ್ರಹ ಪೂಜೆಯೂ ಕ್ರಿ.ಪೂ ೨ನೇ ಶತಮಾನಕ್ಕಿಂತ ಹಿಂದೆ ಇದ್ದಂತೆಯೇ ಆಯಿತು'.[೬] ಇಂತಹ ತಜ್ಞರ ಮಾತುಗಳ ಮೂಲಕ ಭಾರತದಲ್ಲಿ ದೇವಾಲಯಗಳ ನಿರ್ಮಾಣವು ಹಿಂದಿನಿಂದಲೇ ರೂಢಿಯಲ್ಲಿತ್ತೆಂದು ಒಪ್ಪಬಹುದು.

ದೇವಾಲಯಗಳಿದ್ದ ಮೇಲೆ ದೇವತಾಮೂರ್ತಿಗಳಿರಲೇಬೇಕು. ಇದರಿಂದಾಗಿ ಭಾರತದಲ್ಲಿ ಮೂರ್ತಿಶಿಲ್ಪಗಳು ಪ್ರಾಚೀನ ಕಾಲದಲ್ಲಿಯೇ ರೂಢಿಯಲ್ಲಿದ್ದವೆಂದು ಒಪ್ಪಿಕೊಳ್ಳಬಹುದು. ಹೀಗೆ ರಚನೆಯಾದ ಮೂರ್ತಿಗಳು ಇಂದು ನಮಗೆ ಲಭ್ಯವಿಲ್ಲದಿರುವುದರಿಂದ ಇಂದು ನಮಗೆ ದೊರಕುವ ಶಿಲ್ಪಗಳ ಮೂಲಕ ಹಿಂದಿನ ದೇವಶಿಲ್ಪಗಳ ಕುರಿತಾದ ವಿಚಾರಗಳನ್ನು ಅಭ್ಯಸಿಸಬೇಕು. ಅದೇನೇ ಇದ್ದರೂ ಹಿಂದಿನ ಕಾಲದಲ್ಲಿ ಮೂರ್ತಿಶಿಲ್ಪಗಳ ರಚನೆ ಇದ್ದಿರುವುದನ್ನು ಒಪ್ಪಿಕೊಂಡಂತಾಯಿತು. ಹೀಗೆ ಹಲವಾರು ಕಾರಣಗಳಿಂದ ಪ್ರಾಚೀನ ಭಾರತದಲ್ಲಿ ಮೂರ್ತಿಶಿಲ್ಪವು ಬೆಳೆದು ಬರಲು ಕಾರಣವಾದವು.

ಕ್ರಮೇಣ ಬೆಳೆಯುತ್ತಾ ಬಂದ ದೇವತಾಗಣಗಳು ಒಂದು, ಜಾತಿ ಮತಗಳ ವೈವಿಧ್ಯ ಮತ್ತೊಂದು. ಜೊತೆಗೆ ಇರಾನ್ ಮತ್ತು ಗ್ರೀಸ್ ದೇಶಗಳಿಂದ ನಮ್ಮ ದೇಶದ ಶಿಲ್ಪಗಳ ಮೇಲೆ ಬೀರಿಬಂದ ಬೆಂಬಲ. ಇವಲ್ಲದೆ ಗಾಂಧಾರ, ಮಥುರಾ ಮತ್ತು ಅಮರಾವತಿಗಳಲ್ಲಿ ಪ್ರತಿಮಾ ನಿರ್ಮಾಣ ಬಾಹುಳ್ಯವಾಗಿ ಪ್ರತಿಮೆಗಳನ್ನು ಶ್ಲಾಘಿಸಿ, ದೇಶದ ಇತರರು ಅವುಗಳನ್ನು ಕ್ರಯಕ್ಕೆ ಕೊಳ್ಳುವ ಪದ್ಧತಿ'.[೭] ಇದರಿಂದ ಅವುಗಳನ್ನು ರಚಿಸಿ ವಿಕ್ರಯಿಸುವ ಪದ್ಧತಿ ಕೂಡ ಬಳಕೆಯಲ್ಲಿತ್ತೆಂಬುದು ತಿಳಿದುಬರುತ್ತದೆ. ಕುಶಾನರ ಕಾಲದಲ್ಲಿ ಗಾಂಧಾರ ಮತ್ತು ಮಥುರಾಗಳಲ್ಲಿ ಶಿಲ್ಪಕಲಾಕೃತಿಗಳ ಕಾರ್ಯಾಗಾರಗಳಿದ್ದುವೆಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಮೇಲೆ ಹೇಳಿದ ವಿಚಾರಗಳು ಭಾರತದಲ್ಲಿ ಶಿಲ್ಪ ಮತ್ತು ವಾಸ್ತುಶಿಲ್ಪಗಳ ರಚನೆ ಪ್ರಾರಂಭವಾದುದು ಮತ್ತು ಅದರ ಹಿನ್ನೆಲೆಯೇನು ಎಂಬುದರ ಕುರಿತಾಗಿದೆಯಷ್ಟೇ. ಚಾಲುಕ್ಯರಿಗಿಂತ ಮೊದಲು ಭಾರತವನ್ನು ಆಳಿದವರು ಹಲವಾರು ರಾಜವಂಶಗಳು. ಸಿಂಧೂ ನದಿದಂಡೆಯಿಂದ ಪ್ರಾರಂಭವಾಗಿ ಭಾರತ ದೇಶಕ್ಕೆ ಕಾಲಿಟ್ಟು ಇಲ್ಲಿ ಹೊಸ ರಾಜ್ಯಗಳನ್ನು ಸ್ಥಾಪಿಸಿ ತಮ್ಮ ಅಧಿಕಾರದ ಅವಧಿಯಲ್ಲಿ ಹಲವಾರು ಜನೋಪಯೋಗಿ ಕೆಲಸಗಳನ್ನು ಮಾಡುವ ಮುಖಾಂತರ ಕಲೆ

೦೬. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೮೦–೮೧

೦೭. ಅದೇ., ಪುಟ – ೮೧

ಮತ್ತು ಸಂಸ್ಕೃತಿಗೆ ಪ್ರೋತ್ಸಾಹವನ್ನು ನೀಡುವ ಮೂಲಕ ಇತಿಹಾಸದಲ್ಲಿ ತಮ್ಮ ಹೆಸರನ್ನು ಶಾಶ್ವತಪಡಿಸಿ ಮುಂದಿನ ಹಲವಾರು ಶತಮಾನಗಳ ಕಾಲ ಜನರು ನೆನಪಿಟ್ಟುಕೊಳ್ಳುವಂತಹ ಕೆಲಸ ಮಾಡಿದ ರಾಜವಂಶಗಳು ಇಂದು ಶಿಲ್ಪ ಮತ್ತು ವಾಸ್ತುಶಿಲ್ಪಗಳ ಮೂಲಕವಷ್ಟೇ ದಾಖಲಾಗಿ ನಿಂತಿವೆ. ಆದುದರಿಂದ ಈ ರಾಜವಂಶಗಳ ಕಾಲದಲ್ಲಿ ರಚಿತವಾದ ಶಿಲ್ಪ ಮತ್ತು ವಾಸ್ತುಗಳನ್ನು ತಿಳಿದುಕೊಂಡರೆ ಚಾಲುಕ್ಯರಿಗಿಂತ ಮೊದಲು ಆಳಿದ ರಾಜವಂಶಗಳು ನಿರ್ಮಿಸಿದ ವಾಸ್ತು ಮತ್ತು ಶಿಲ್ಪಗಳನ್ನು ಚಾಲುಕ್ಯರು ಮುಂದುವರಿಸಿದ ಬಗ್ಗೆ ತಿಳಿಯಲು ಅನುಕೂಲವಾಗುತ್ತದೆ.

ಯಾವುದೇ ರಾಜ್ಯವು ಅಥವಾ ಕಟ್ಟಡವು ತನ್ನ ಹಿಂದಿನವರು ಹಾಕಿದ ಭದ್ರವಾದ ಬುನಾದಿಯ ಮೇಲೆಯೇ ನಿಂತಿದೆ. ಇದರಿಂದಾಗಿ ಅವರಿಗೆ ಹೊಸ ಸಾಧನೆಗಳನ್ನು ಮಾಡಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಚಾಲುಕ್ಯ ಅರಸರ ಕಾಲದ ಶಿಲ್ಪಗಳಿಗೆ ಮೊದಲು ಯಾವ ಪರಿಸ್ಥಿತಿ ಇತ್ತು ಮತ್ತು ಇದು ಚಾಲುಕ್ಯ ಅರಸರಿಗೆ ಯಾವ ರೀತಿ ಪ್ರೇರಣೆಯಾಯಿತು ಎಂದು ತಿಳಿಯಲು ಸಾಧ್ಯವಾಗುತ್ತದೆ.

ಮೌರ್ಯರ ಕಾಲದಿಂದ

ಕ್ರಿ.ಪೂ ೩ನೆಯ ಶತಮಾನದಿಂದೀಚೆಗಿನ ಇತಿಹಾಸವನ್ನು ನಾವು ಅವಲೋಕಿಸಿದಾಗ ಭಾರತದ ಶಿಲ್ಪಕಲೆಯಲ್ಲಿ ಆದ ಬೆಳವಣಿಗೆಗಳು ತಿಳಿಯುತ್ತವೆ. ಹಿಂದೂ, ಜೈನ ಮತ್ತು ಬೌದ್ಧ ಧರ್ಮಗಳ ನಡುವಿನ ತಿಕ್ಕಾಟದಲ್ಲಿ ಮೊದಲಿಗೆ ಬೌದ್ಧರ ಕೈಯೇ ಮೇಲಾಯಿತು. ಮೌರ್ಯರ ಕಾಲದಲ್ಲಿ ಹಿಂದೂ ಅಥವಾ ವೈದಿಕ ಧರ್ಮವೇ ಇದ್ದಿತ್ತಾದರೂ ನಂತರದ ದಿನಗಳಲ್ಲಿ ಅಂದರೆ ಚಕ್ರವರ್ತಿ ಅಶೋಕನ ಕಾಲಕ್ಕೆ ಬೌದ್ಧಧರ್ಮವು ಹೆಚ್ಚಿನೆಲ್ಲೆಡೆ ವ್ಯಾಪಿಸಿತು. ಸ್ವತಃ ಅಶೋಕನೇ ಕಳಿಂಗ ಯುದ್ಧದ ನಂತರ ಬೌದ್ಧಧರ್ಮ ಸ್ವೀಕಾರ ಮಾಡಿ, ಆ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದ ನಂತರ ಬೌದ್ಧ ಧರ್ಮವು ಎಲ್ಲೆಡೆ ಹರಡಲು ಅನುಕೂಲವಾಯಿತು. ಆದರೆ ಆಗಿನ ಕಾಲದಲ್ಲಿ ಬುದ್ಧನನ್ನು ಮೂರ್ತಿರೂಪದಲ್ಲಿ ಪೂಜೆ ಮಾಡುವ ಪದ್ಧತಿ ಇಲ್ಲದಿದ್ದುದರಿಂದ ಅಂದಿನ ಕಾಲದ ಬೌದ್ಧ ಶಿಲ್ಪಗಳು ನಮಗೆ ಕಾಣಿಸವು.

ಅಶೋಕನ ಕಾಲದಲ್ಲಿ ಆತನು ತನ್ನ ಸಾಮ್ರಾಜ್ಯದ ಕುರುಹಾಗಿ ಹಲವೆಡೆ ಸ್ತಂಭಗಳನ್ನು ನೆಡಿಸಿದ್ದಾನೆ. ಇದರಲ್ಲಿ ಬೌದ್ಧ ಧರ್ಮದ ಚಿಹ್ನೆಗಳಾದ ಸಿಂಹ, ಚಕ್ರ, ಆನೆ, ಕುದುರೆ ಇತ್ಯಾದಿಗಳ ಕೆತ್ತನೆಗಳಿವೆ. ಇವುಗಳ ರಚನೆಯಲ್ಲಿ ಶಿಲ್ಪಕಲೆಯ ಅಂದಿನ ಚಿತ್ರಣವು ತಿಳಿದುಬರುತ್ತದೆ. ಇದುವೇ ನಮಗೆ ಮೌರ್ಯರ ಕಾಲದ ಶಿಲ್ಪಕಲೆಯ ಮಾಹಿತಿಯಾಗಿದೆ. ಆ ಸಮಯದಲ್ಲಿ ಹಿಂದೂ ದೇವಾಲಯ ನಿರ್ಮಾಣ ಮತ್ತು ಪೂಜಾಪದ್ಧತಿಯಿದ್ದರೂ ಮೂರ್ತಿಶಿಲ್ಪಗಳ ಕುರಿತು ತಿಳಿದುಬರುವುದಿಲ್ಲ. ಅಶೋಕನ ಕಾಲಕ್ಕೆ ಆತ ಸ್ಥಾಪಿಸಿದ ಸ್ತಂಭಗಳಂತೆ ಹಿಂದೂ ದೇವಾಲಯಗಳ ಮುಂದೆಯೂ ಸ್ತಂಭಗಳನ್ನು ನಿಲ್ಲಿಸುವ ಪದ್ಧತಿ ರೂಢಿಯಲ್ಲಿತ್ತು. 'like the buddhists,

the Hindus too had columns. The most famous of these is the Garuda pillar at besnagar, erected by Heliodorus, an envoy from the Bactrian king.[೦೮] ಇದರಿಂದಾಗಿ ಆಗಿನ ಕಾಲದಲ್ಲಿ ಹಿಂದೂ ಧರ್ಮದಲ್ಲಿಯೂ ಸ್ತಂಭಗಳ ನಿರ್ಮಾಣವಿದ್ದ ಬಗ್ಗೆ ತಿಳಿದುಬರುತ್ತದೆ.

ಮೌರ್ಯರ ಕಾಲದ ಶಿಲ್ಪಗಳು ನಮಗೆ ಕಾಣಸಿಗುವುದು ಕಡಿಮೆಯೇ. ಸಿಕ್ಕಿರುವ ಶಿಲ್ಪಗಳೆಂದರೆ ಚಕ್ರವರ್ತಿ ಅಶೋಕನ ಕಾಲದಲ್ಲಿ ರಚನೆಯಾದ ಸ್ತಂಭಗಳು. ಇವುಗಳಲ್ಲಿ ಆನೆ, ಗೂಳಿ, ಸಿಂಹಗಳ ಕೆತ್ತನೆಯ ಸ್ತಂಭಗಳು ಮುಖ್ಯವಾಗಿವೆ. 'The most important sculptural remains of mauryan period are capitals and the crowning animal figures on the ashokan pillars. Some of the Ashokan adicts were carved on already existing pillars, as for example the Basara-bakhira (ancient Vaisali) lion pillar were the workmanship is crude and rough.'[೦೯] ಇವುಗಳಲ್ಲದೆ ಕೆಲವು ಭಾವಶಿಲ್ಪಗಳೂ ಮೌರ್ಯರ ಕಾಲದಲ್ಲಿ ರಚನೆಯಾಗಿದ್ದು, ಅವು ಸಿಕ್ಕಿವೆ. ಆದರೆ ಇವುಗಳು ಮುಂದಿನ ಶಿಲ್ಪಕಲೆಯ ಬೆಳವಣಿಗೆಗೆ ಅವು ಕೂಡ ಪ್ರಸ್ತುತ ಚಾಲುಕ್ಯರ ಶಿಲ್ಪಗಳ ಅಧ್ಯಯನದ ದೃಷ್ಟಿಯಿಂದ ಪ್ರಮುಖ ಪಾತ್ರವಹಿಸುತ್ತವೆಂದು ಹೇಳಲುಬರುವುದಿಲ್ಲ.

ಸ್ತೂಪಗಳು

ಶಿಲ್ಪಗಳ ಕುರಿತು ಹೇಳುವುದಾದರೆ ಮೊದಲು ನಮಗೆ ಕಾಣಿಸುವುದು 'ಸ್ತೂಪಗಳು'. ಈ ಸ್ತೂಪಗಳೆಂಬುದು ಮೊದಲು ಸರಳವಾಗಿ ನಿರ್ಮಿಸಲಾದ ವಾಸ್ತುಗಳು. ಇಲ್ಲಿ ಬುದ್ಧನ ಮತ್ತು ಆತನ ಶಿಷ್ಯರ ಅಸ್ಥಿಯನ್ನು (ಶವ) ಹೂಳುತ್ತಿದ್ದ ಸ್ಥಳ. ಇದರ ಮೇಲೆ ಅಂಡಾಕಾರದ ದೊಡ್ಡ ಗೋಲದ ಮೇಲೆ ಒಂದು ಛತ್ರಿಯನ್ನು ರಚಿಸಲಾಗುತ್ತದೆ. ಇದರ ಸುತ್ತ ಪ್ರದಕ್ಷಿಣೆ ಬರಲು ಒಂದು ಕಟಾಂಜನ ಇದ್ದೂ ಸುತ್ತಲೂ ಬೇಲಿಯ ರೀತಿಯ ರಕ್ಷಣಾಗೋಡೆ ಇರುತ್ತದೆ. ಇದರ ಪ್ರವೇಶ ದ್ವಾರದಲ್ಲಿ ತೋರಣಗಳನ್ನು ನಿರ್ಮಿಸಲಾಗುತ್ತಿತ್ತು. ಈ ತೋರಣದಲ್ಲಿ ಬೌದ್ಧ ಜಾತಕ ಕಥೆಗಳನ್ನು ಕೆತ್ತಲಾಗುತ್ತಿತ್ತು. ಮತ್ತು ಈ ತೋರಣವನ್ನು ಹಿಡಿದುಕೊಂಡಂತೆ ತೋಳಿನಲ್ಲಿ ಯಕ್ಷಿ ಶಿಲ್ಪಗಳನ್ನು ನಿರ್ಮಿಸಲಾಗುತ್ತಿತ್ತು. ಈ ಶಿಲ್ಪಗಳೇ ನಮಗೆ ಮೊದಲುಕಾಣಿಸುವ ಗುಂಪು ಶಿಲ್ಪಗಳು. ಇಲ್ಲಿ ಬುದ್ಧನ ಜಾತಕದ ಕಥೆಗಳು, ಆತನ ಜೀವನ ಘಟನೆಗಳು, ಅಲಂಕರಣ ಶಿಲ್ಪಗಳು, ಹೂಬಳ್ಳಿಗಳು, ಯಕ್ಷ ಮತ್ತು ಯಕ್ಷಿಣಿಯರ ಶಿಲ್ಪಗಳು, ವಿವಿಧ ಪ್ರಾಣಿ–ಪಕ್ಷಿಗಳ ಶಿಲ್ಪಗಳು ಕಂಡುಬರುತ್ತವೆ.

ಸ್ತೂಪಗಳಲ್ಲಿ ಸಾಂಚಿ, ಬಾರ್ಹೂತ್, ಅಮರಾವತಿ ಹೀಗೆ ಕೆಲವು ಸ್ತೂಪಗಳು ಪ್ರಸಿದ್ಧವಾಗಿವೆ. ಸ್ತೂಪಗಳು ರಚನೆಯಾದ ಕಾಲ ಸುಮಾರು ಕ್ರಿ.ಪೂ ೨ನೆಯ ಶತಮಾನದಿಂದ ಮೊದಲನೆಯ

೦೮. Tomory (Edt) : A History of Fine Arts in India and the West, P.No. 20

೦೯. ಅದೇ., ಪುಟ – ೧೬೫

ಶತಮಾನದವರೆಗೆ. ಇದು ಪ್ರಾರಂಭವಾದುದು ಮೌರ್ಯರ ಕಾಲದ ಕೊನೆಯ ಹಂತದಲ್ಲಿ ಅಂದರೆ ಅಶೋಕನ ಮಂತ್ರಿಯಾಗಿದ್ದ ಪುಷ್ಯಮಿತ್ರ ಶುಂಗನೆಂಬಾತನ ಕಾಲದಿಂದ. ಈತ ಅಶೋಕನ ನಂತರ ಮೌರ್ಯರನ್ನು ಸೋಲಿಸಿ, ಹೊಸ ರಾಜವಂಶದ ಆಳ್ವಿಕೆ ಪ್ರಾರಂಭ ಮಾಡಿದವನು. ಇವನ ಕಾಲದಲ್ಲಿ ಸ್ತೂಪಗಳ ರಚನೆ ಹೆಚ್ಚಿನ ವೇಗದಲ್ಲಿ ನಡೆಯಿತು. ಮೊದಲಿಗೆ ಸ್ತೂಪಗಳು ಸರಳವಾಗಿ ರಚನೆಯಾಗಿದ್ದು ಮಣ್ಣಿನ ಇಟ್ಟಿಗೆಗಳನ್ನು ಬಳಸಿ ರಚಿಸಲಾಗಿದ್ದ ಮಣ್ಣಿನ ದಿಬ್ಬಗಳಾಗಿದ್ದವು. ನಂತರ ಅವುಗಳ ಸುತ್ತಲಿನ ಕಟಾಂಜನ, ತೋರಣ ಇತ್ಯಾದಿಗಳು ಸೇರಿಕೊಂಡವು. ಇವುಗಳಲ್ಲಿ ಬುದ್ಧನ ಜಾತಕ ಕಥೆಗಳ ಚಿತ್ರಣಗಳು ರಚನೆಯಾದವು.

ಈ ರೀತಿಯ ಕಥಾನಕಗಳ ಚಿತ್ರಣ ಮುಂದಿನ ಗುಪ್ತರ ಕಾಲಕ್ಕೆ ವೈದಿಕಧರ್ಮದಲ್ಲಿ ಕಾಣಿಸಿಕೊಳ್ಳಲು ಪ್ರೇರಣೆಯಾದವು. ಇದೇ ಸಮಯದಲ್ಲಿ ಪಶ್ಚಿಮ ಭಾರತದಲ್ಲಿ ಮುಖ್ಯವಾಗಿ ಅಂದಿನ ಕಳಿಂಗರಾಜ್ಯದಲ್ಲಿ ಬೌದ್ಧ, ಜೈನ ಮತ್ತು ವೈದಿಕ ಧರ್ಮಕ್ಕೆ ಸಂಬಂಧಿಸಿದಂತೆ ರಚನೆಯಾದ ಗುಹಾಲಯಗಳು ಮತ್ತು ಅವುಗಳಲ್ಲಿ ಮೂರೂ ಧರ್ಮಕ್ಕೆ ಸಂಬಂಧಿಸಿದಂತೆ ಶಿಲ್ಪಕೃತಿಗಳು ರಚನೆಯಾಗಿವೆ. ಅಲ್ಲಿನ ಉದಯಗಿರಿ ಮತ್ತು ಖಾಂದಗಿರಿಯ ಬೆಟ್ಟಗಳಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ಗುಹಾಲಯಗಳಿದ್ದು ಅವುಗಳಲ್ಲಿ ವಿವಿಧ ಧರ್ಮಗಳಿಗೆ ಸಂಬಂಧಿಸಿದ ಶಿಲ್ಪಗಳ ಕೆತ್ತನೆ ಇದ್ದದ್ದು ತಿಳಿದುಬರುತ್ತದೆ.

‘ಇಲ್ಲಿನ ಭಿತ್ತಿಗಳಲ್ಲಿ ನಾವು ಜೈನ ಕತೆಗಳ ಚಿತ್ರಣಗಳನ್ನು ಕಾಣುತ್ತೇವೆ; ಬುದ್ಧನ ಜಾತಕದ ಕಥೆಗಳನ್ನೂ ಕಾಣುತ್ತೇವೆ; ಹಾಗೆಯೇ ಬ್ರಾಹ್ಮಣಧರ್ಮದ ಕಥಾನಕಗಳನ್ನೂ ಕಾಣಬಹುದು. ಈ ಕಾಲದಲ್ಲಿ ಈ ಮೂರು ಮತಗಳಿಗೂ ಕೆಲವೊಂದು ಧಾರ್ಮಿಕ ಕಲ್ಪನೆಗಳು ಸಮಾನವಾಗಿದ್ದವು.’[೧೦] ಉದಯಪುರದ ಗುಹಾಲಯದಲ್ಲಿ ವಿಷ್ಣುವಿನ ದಶಾವತಾರದ ಕೆತ್ತನೆಯ ಶಿಲ್ಪಗಳು ಮತ್ತು ಇನ್ನೊಂದು ಕಡೆ ಜೈನ ಗುಹಾಲಯವೂ ಇದ್ದದ್ದು ಕಂಡುಬಂದಿದೆ. ಇವುಗಳಲ್ಲಿ ಹಲವು ಶಿಲ್ಪಗಳು ಮುಂದೆ ಗುಪ್ತರ ಕಾಲದಲ್ಲಿ ವೈಷ್ಣವ ಶಿಲ್ಪಗಳ ರಚನೆಗೆ ಪ್ರೇರಣೆಯಾಗಿರುವ ಸಾಧ್ಯತೆಯಿದೆ.

ಗಾಂಧಾರ ಮತ್ತು ಮಥುರಾ ಶಿಲ್ಪಶೈಲಿಗಳು

ಭಾರತದ ಶಿಲ್ಪಶೈಲಿಯಲ್ಲಿ ಕಂಡುಬರುವ ಎರಡು ಪ್ರಮುಖ ಶೈಲಿಗಳೆಂದರೆ ಗಾಂಧಾರ ಮತ್ತು ಮಥುರಾ ಎಂಬ ಎರಡು ಶೈಲಿಗಳು. ಇವೆರಡೂ ಶೈಲಿಗಳು ಭಾರತದ ಮುಂದಿನ ಶಿಲ್ಪಕಲೆಯ ದಿಕ್ಕನ್ನೇ ಬದಲಿಸುವಂತಹ ರೀತಿಯಲ್ಲಿ ಬೀರಿದ ಪ್ರಭಾವ ಗಮನಾರ್ಹವಾಗಿದೆ. ಇವುಗಳಲ್ಲಿ ಗಾಂಧಾರವು ಗ್ರೀಕ್ ಮತ್ತು ರೋಮನ್ ಶೈಲಿಯಿಂದ ಕೂಡಿದೆ. ಇದಕ್ಕೆ ಕಾರಣ ಕೂಡಾ ಇದೆ, ಅದೇನೆಂದರೆ ಭಾರತಕ್ಕೆ ಹೆಚ್ಚಿನ ಜನ ವಲಸೆ ಬಂದುದು ಅದೇ ಪ್ರದೇಶಗಳಿಂದ,

೧೦. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೩೮



ಸಿಂಧೂ ನದಿ ಕಣಿವೆಯ ಮುಖಾಂತರ, ಅಲೆಕ್ಸಾಂಡರ್ ಕೂಡಾ ಇಲ್ಲಿ ಕಾರಣನಾಗುತ್ತಾನೆ. ಹೀಗೆ ವಲಸೆ ಬಂದ ಜನರು ಇಲ್ಲಿಯೇ ನೆಲೆ ನಿಂತರೂ ತಾವು ಬಂದ ಮೂಲ ಪ್ರದೇಶದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡರು, ತಮಗೆ ಬೇಕಾದ ರೀತಿಯಲ್ಲಿ ಶಿಲ್ಪಗಳನ್ನು, ವಾಸ್ತುಶಿಲ್ಪಗಳನ್ನು ರಚಿಸುವ ಕಲಾವಿದರನ್ನು ಕೂಡಾ ತಮ್ಮ ಜತೆಯಲ್ಲಿ ಕರೆತಂದರು. ಇದರಿಂದಾಗಿ ಆ ಕಲಾವಿದರು ಇಲ್ಲಿನ ಕಥಾವಸ್ತುವಿಗೆ ತಕ್ಕ ಚಿತ್ರಗಳನ್ನು ರಚಿಸಿದರೂ ಶೈಲಿ ಮಾತ್ರ ಗ್ರೀಕ್ ಅಥವಾ ಅತ್ತಣಭಾಗದಿಂದ ಬಂದುದಾಗಿತ್ತು. ಹಾಗಾಗಿ ಈ ಜನರು ನೆಲೆ ನಿಂತ ಪ್ರದೇಶದಲ್ಲಿ ತಮ್ಮದೇ ಆದ ಶಿಲ್ಪಕಲಾ ಶಾಲೆಗಳನ್ನು ಪ್ರತಿಷ್ಠಾಪಿಸಿದರು. ಇದು ಇಂದಿನ ಪಾಕಿಸ್ಥಾನದ ಭಾಗವಾಗಿರುವ ಪೇಶಾವರದ ಸಮೀಪವಿದೆ.

ಇಲ್ಲಿ ಅಂದಿನ ಕಾಲದಲ್ಲಿ ಬೌದ್ಧ ಧರ್ಮದ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ರಚನೆಯಾದುದನ್ನು ಕಾಣುತ್ತೇವೆ. ಇಲ್ಲಿ ರಚನೆಯಾದ ಶಿಲ್ಪಗಳು ಹೆಚ್ಚಾಗಿ ಗ್ರೀಕ್ ಶೈಲಿಯನ್ನು ಹೊಂದಿದ ಭಾರತೀಯ ಶಿಲ್ಪಗಳಾಗಿದ್ದವು. ಕುಶಾನರ ಕಾಲದಲ್ಲಿ ಭಾರತದ ಪಶ್ಚಿಮ ಭಾಗದಲ್ಲಿ ಹೆಚ್ಚಾಗಿ ಗಾಂಧಾರ ಶೈಲಿಯಲ್ಲಿ ಶಿಲ್ಪಗಳ ರಚನೆಯಾಗಿರುವುದು ಕಂಡುಬರುತ್ತದೆ. ಕುಶಾನರ ಪ್ರಸಿದ್ಧ ರಾಜನಾದ ಕನಿಷ್ಕನ ಕಾಲದಲ್ಲಿ ಶಿಲ್ಪಕಲೆಗೆ ಸಾಕಷ್ಟು ಪ್ರೋತ್ಸಾಹ ದೊರೆತುದರಿಂದಾಗಿ ಆ ಕಾಲದಲ್ಲಿ ಗಾಂಧಾರ ಶೈಲಿಯ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ.

ಗಾಂಧಾರ ಶೈಲಿಯಲ್ಲಿ ಶಿಲ್ಪಗಳು ಹೆಚ್ಚಾಗಿ ಗ್ರೀಕ್ ಶೈಲಿಯಲ್ಲಿ ರಚನೆಯಾಗಿದ್ದರೂ ಭಾರತದ ಶಿಲ್ಪಕಲೆಗೆ ಅದರ ಕೊಡುಗೆ ಮಹತ್ವದ್ದಾಗಿಯೇ ಇದೆ. ಮುಂದಿನ ಹಂತದ ಶಿಲ್ಪ ರಚನೆಯಲ್ಲಿ ಈ ಶೈಲಿಯು ಕೆಲವು ಪ್ರಾಂತಗಳಲ್ಲಿ ತನ್ನ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಮುಖ್ಯವಾಗಿ ಬುದ್ಧನ ಶರೀರ ರಚನೆಯಲ್ಲಿ, ಮಹಾಯಾನ ಬೌದ್ಧ ಧರ್ಮದ ಬೆಳವಣಿಗೆಯಲ್ಲಿ ಇದರ ಕೊಡುಗೆ ಮಹತ್ವವಾದುದು. 'The most important contribution of the Gandhara school was the creation of the Buddha image, with the change from the Hinayana to the Mahayana Buddhism, in compliance with the common dimand, the Buddha image appeared simultaneously in Gandhara and Mathura; but while the Mathura artist drew his inspiration from the yaksha figures of the earlier centuries, the Gandhara artist turned to the Hellenistic world for a model.'[೧೧] ಗಾಂಧಾರ ಶಿಲ್ಪಿಗಳು ಬುದ್ಧನನ್ನು ವಿವಿಧ ಭಂಗಿಗಳಲ್ಲಿ ನಿಂತಿರುವ ಮತ್ತು ಕುಳಿತಿರುವ ಶಿಲ್ಪವನ್ನು ಕೆತ್ತಿರುವುದು ಇಲ್ಲಿ ಆದ ಪ್ರಮುಖ ಬೆಳವಣಿಗೆ ಎನ್ನಬಹುದು.

ಭಾರತದ ಮುಂದಿನ ಶಿಲ್ಪಗಳಲ್ಲಿ ಕಂಡುಬರುವ ಅಲಂಕರಣಯುಕ್ತ ಕೆತ್ತನೆಗಳಲ್ಲಿ ಗಾಂಧಾರ ಶೈಲಿಯು ಪ್ರಮುಖ ಪಾತ್ರವಹಿಸಿದೆ ಎಂದರೆ ತಪ್ಪಾಗದು. ಸುಮಾರು ಮೂರು ಶತಮಾನಗಳ

೧೧. Tomory (Edt) : A History of Fine Arts in India and the West, P.No. 181



ಕಾಲ ಭಾರತದ ಉತ್ತರದ ಹೆಚ್ಚಿನ ಭಾಗವನ್ನು ಆಳಿದ ಕುಶಾನರ ಕಾಲದಲ್ಲಿ ಬೌದ್ಧ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹವಿದ್ದರೂ ಉಳಿದ ಧರ್ಮಗಳೂ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿರಲಿಲ್ಲ. ಈ ಸಮಯದಲ್ಲಿ ರಚನೆಯಾದ ಶಿಲ್ಪಗಳು ಹೆಚ್ಚಾಗಿ ಪೇಶಾವರ, ಬೇಗ್ರಾಮ್, ಬಾಮಿಯಾ ಮುಂತಾದೆಡೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. 'ಈ ಕಾಲದಲ್ಲಿ ಅಪ್ಘಾನಿಸ್ಥಾನ ಮತ್ತು ಅದರ ಸುತ್ತಮುತ್ತ ನಿರ್ಮಾಣಗೊಂಡ ಶಿಲ್ಪಗಳಲ್ಲಿ ನಾವು ಗ್ರೀಕ್, ರೋಮನ್ ಶಿಲ್ಪ ಶೈಲಿಗಳ ಪ್ರಭಾವಗಳನ್ನು ಅಧಿಕವಾಗಿ ಕಾಣುತ್ತೇವೆ.'[೧೨] ಆದರೆ ಭಾರತದ ಶಿಲ್ಪಕಲೆಯಲ್ಲಿ ಮಹತ್ತರವಾದ ಪ್ರಗತಿ ಸಾಧ್ಯವಾದುದು ಮಥುರಾ ಶಿಲ್ಪ ಶೈಲಿಯ ಆಧಾರದಲ್ಲಿಯೇ.

ಮಥುರಾ ಶೈಲಿ

ಒಂದೆಡೆಯಲ್ಲಿ ಗಾಂಧಾರ ಪ್ರದೇಶದ ಶಿಲ್ಪಕಲಾ ಕಾರ್ಯಾಗಾರಗಳಲ್ಲಿ ದೊಡ್ಡ ಮಟ್ಟದಲ್ಲಿ ಶಿಲ್ಪಕಲೆ ರಚನೆಯಾಗುತ್ತಿದ್ದರೆ ಅಲ್ಲಿಂದ ಸ್ವಲ್ಪ ದೂರದಲ್ಲಿ ಮಥುರಾ ಕಲಾಶಾಲೆಗಳು ತಮ್ಮ ಕ್ರಿಯಾತ್ಮಕ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದವು. ದೆಹಲಿಗೆ ಸ್ವಲ್ಪವೇ ದೂರದಲ್ಲಿ ಯಮುನಾ ನದಿಯ ದಂಡೆಯ ಮೇಲಿನ ಊರಾದ ಮಥುರಾದಲ್ಲಿ ಶಿಲ್ಪ ಚಟುವಟಿಕೆ ಜೋರಾಗಿ ನಡೆದಿತ್ತು. ಕ್ರಿಸ್ತಶಕೆಯ ಆದಿ ಭಾಗದಲ್ಲಿ ಇಲ್ಲಿ ಶಿಲ್ಪಕಲಾಕೃತಿಗಳ ರಚನೆ ಹೆಚ್ಚಾಗಿ ನಡೆಯುತ್ತಿದ್ದುದು ತಿಳಿದುಬರುತ್ತದೆ. ಮುಖ್ಯವಾಗಿ ಇಲ್ಲಿನ ಶಿಲ್ಪಿಗಳು ಬಾರ್ಹುತ್ ಮತ್ತು ಸಾಂಚಿಯ ಸ್ತೂಪಗಳಲ್ಲಿನ ಶಿಲ್ಪಗಳಿಂದ ಪ್ರೇರೇಪಿತರಾಗಿದ್ದರು.

ಇದಲ್ಲದೆ ವೈದಿಕ ಗ್ರಂಥಗಳ ಆಧಾರದಲ್ಲಿ, ಪ್ರತಿಮಾಶಾಸ್ತ್ರದ ಮಾರ್ಗದರ್ಶನದಲ್ಲಿ ಇಲ್ಲಿ ಬೌದ್ಧ, ಜೈನ ಮತ್ತು ಹಿಂದೂ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳ ರಚನೆ ಸಾಮಾನ್ಯವಾಗಿತ್ತು.'The art of Mathura carried on the early tradition found at barhut and Sanchi. The few remaining fragments from early period show a close connection with the art of these places. The middle period, during the first centuries A.D., coincides with the rule of the Kushans. The later period, under the guptas, belongs to that school of art.'[೧೩]

ಇಲ್ಲಿನ ಶಿಲ್ಪಗಳಲ್ಲಿ ಭಾರತೀಯ ಶೈಲಿ, ಸಂಸ್ಕೃತಿಯ ಕುರಿತಾದ ತಿಳಿವಳಿಕೆ ಉತ್ತಮ ರೀತಿಯಲ್ಲಿ ಬೆಳೆದಿದ್ದುದು ಕಂಡುಬರುತ್ತದೆ. ಕುಶಾನರ ಕಾಲದಲ್ಲಿಯೇ ಮಥುರಾ ಶಿಲ್ಪ ಶೈಲಿಯು ಬೆಳವಣಿಗೆ ಹೊಂದಿದರೂ ಅದಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತುದು ಗುಪ್ತರು ಆಡಳಿತಕ್ಕೆ ಬಂದಾಗಿನಿಂದಲೇ. ಗುಪ್ತರು ಶಿಲ್ಪಕಲೆಗೆ ನೀಡಿದ ಪ್ರೋತ್ಸಾಹ ಮತ್ತು ಬೆಂಬಲದಿಂದಾಗಿ ಶಿಲ್ಪಕಲೆಯು ಅದರಲ್ಲೂ ಮಥುರಾ ಶೈಲಿಯ ಶಿಲ್ಪಗಳು ಧಾರಾಳವಾಗಿ ಎಲ್ಲೆಡೆ ಕಂಡುಬಂದವು.

೧೨. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೮೫
೧೩. Tomory (Edt) : A History of Fine Arts in India and the West, P.No. 181

ಗುಪ್ತರ ಕಾಲ

ಗುಪ್ತರ ಕಾಲವನ್ನು ಭಾರತೀಯ ಕಲೆ ಮತ್ತು ಸಂಸ್ಕೃತಿಯ 'ಸುವರ್ಣಯುಗ' ಎಂದು ಕರೆಯಲಾಗಿದೆ. ಈ ಕಾಲದಲ್ಲಿ ಉತ್ತರಭಾರತದಾದ್ಯಂತ ಶಿಲ್ಪ ಕಲಾಕೃತಿಗಳ ರಚನೆ ಹೇರಳವಾಗಿ ನಡೆಯಿತು. ಈ ಕಾಲದಲ್ಲಿ ಬೌದ್ಧ ಧರ್ಮವು ಅಸ್ತಿತ್ವದಲ್ಲಿದ್ದರೂ ಹಿಂದೂ ಧರ್ಮವೂ ಅಸ್ತಿತ್ವದಲ್ಲಿತ್ತು. ಆದರೆ ಹಿಂದಣ ಕುಶಾನರ ಆಡಳಿತದಲ್ಲಿ ಬೌದ್ಧಧರ್ಮಕ್ಕೆ ಹೆಚ್ಚಿನ ಮಹತ್ವವಿದ್ದುದರಿಂದ ವೈದಿಕ ಧರ್ಮ ಹಿನ್ನೆಲೆಗೆ ಸರಿದಿದ್ದರೆ ಆಶ್ಚರ್ಯವಿಲ್ಲ. ಆದರೆ ಗುಪ್ತರ ಕಾಲದಲ್ಲಿ ಹಿಂದೂ ಧರ್ಮವು ಮತ್ತೆ ತಲೆಯೆತ್ತಿ ನಿಂತಿದ್ದರೆ ಅದಕ್ಕೆ ಕಾರಣ ಗುಪ್ತರು ಹಿಂದೂ ಧರ್ಮಕ್ಕೆ ನೀಡಿದ ಮಹತ್ವ. ಗುಪ್ತರ ಮೊದಲ ದೊರೆ ಚಂದ್ರಗುಪ್ತ. ಈತನ ಕಾಲ ಆಡಳಿತದ ಕಾಲ ಕ್ರಿ.ಶ. ೩೨೦–೩೩೫'[೧೪] ಅವನ ಮಗನಾದ ಸಮುದ್ರಗುಪ್ತನು ರಾಜ್ಯ ವಿಸ್ತಾರಕ್ಕೆ ಹೆಚ್ಚಿನ ಗಮನ ನೀಡಿದನು. ಇವನ ಮಗನಾದ ಎರಡನೆಯ ಚಂದ್ರಗುಪ್ತನ ಆಡಳಿತವು ಭಾರತೀಯ ಶಿಲ್ಪಕಲೆಯ ಸುವರ್ಣಕಾಲವಾಗಿತ್ತು.

ಇವನಿಗೆ 'ವಿಕ್ರಮಾದಿತ್ಯ'ನೆಂಬ ಹೆಸರೂ ಇತ್ತು. 'ಆತನ ಕಾಲದಲ್ಲಿ ವಿಜ್ಞಾನ, ಸಾಹಿತ್ಯ, ಚಿತ್ರ, ಶಿಲ್ಪ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಇನ್ನಿಲ್ಲದಷ್ಟು ಬೆಳವಣಿಗೆ ಉಂಟಾಯಿತು.'[೧೫] ಗುಪ್ತರ ಕಾಲದ ಶಿಲ್ಪಗಳಲ್ಲಿ ಹೆಚ್ಚಾಗಿ ನಮಗೆ ಹಿಂದೂ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳು ಕಂಡುಬರುತ್ತವೆ. ವಿವಿಧ ಕಥಾನಕಗಳ ಚಿತ್ರಣಗಳು, ದೇವತಾ ಶಿಲ್ಪಗಳು, ಜೈನ ಮತ್ತು ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳನ್ನಿಲ್ಲಿ ಕಾಣಬಹುದು.

ಮುಂದಿನ ಎಲ್ಲ ಶಿಲ್ಪಕಲೆಯ ಬೆಳವಣಿಗೆಯಲ್ಲಿ ಗುಪ್ತರ ಕಾಲದ ಕೊಡುಗೆಯು ಮಹತ್ವ ಪಡೆಯುತ್ತದೆ. 'ಆ ಕಾಲದಲ್ಲಿ ಬ್ರಾಹ್ಮಣ ಧರ್ಮವು ಹೊಸ ಚೇತನವನ್ನು ಗಳಿಸಿದ್ದಲ್ಲದೆ, ವಿಷ್ಣು ಮತ್ತು ಶಿವನ ಸಂಬಂಧವಾದ ಧಾರ್ಮಿಕ ಪಂಥಗಳನ್ನು ವಿಶೇಷ ಪ್ರಚಾರಕ್ಕೆ ತಂದಿತ್ತು. ಆ ಕಾಲದಲ್ಲಿ ಅನೇಕ ಬ್ರಾಹ್ಮಣ ದೇವಾಲಯಗಳನ್ನು ಕಟ್ಟಿದರಲ್ಲದೆ, ಈ ಧರ್ಮದ ಅಂಗವಾಗಿ ಮೂರ್ತಿಪೂಜೆಯ ಆರಾಧನಾ ಕ್ರಮ ಬಲು ಜನಪ್ರಿಯವಾಗುತ್ತ ಸರಿಯಿತು. ಶಿಲ್ಪಿಗಳು– ಆವೆಮಣ್ಣಿನಲ್ಲಿ, ಕಲ್ಲಿನಲ್ಲಿ, ಕಂಚಿನಲ್ಲಿ ನಾನಾ ಬಗೆಯ ದೇವತಾ ಮೂರ್ತಿಗಳನ್ನು ನಿರ್ಮಿಸುವುದರಲ್ಲಿ ನಿಷ್ಣಾತರಾದರು. ಹಿಂದೆ ಅವರ ಪೂರ್ವಜರು ಯಾವ ರೀತಿ ಜಾತಕದ ಕಥೆಗಳ ಚಿತ್ರಣದಲ್ಲೂ, ಬುದ್ಧ, ಬೋಧಿಸತ್ವರ ಮೂರ್ತಿಗಳ ನಿರ್ಮಾಣದಲ್ಲೂ ಎಷ್ಟೊಂದು ಉತ್ಸಾಹವನ್ನು ತೋರಿಸಿದ್ದರೋ, ಅದೇ ಬಗೆಯ ಉತ್ಸಾಹವನ್ನು, ಕೌಶಲ್ಯವನ್ನು ಮತ್ತಷ್ಟು ಹೆಚ್ಚಿನ ಶ್ರದ್ಧೆಯಿಂದ ಹೊಸ ಯುಗದ ಬ್ರಾಹ್ಮಣದೇವತೆಗಳ ಚಿತ್ರಣದಲ್ಲೂ ಸಾಧಿಸಿದರು.[೧೬] ಗುಪ್ತರ ಕಾಲದಲ್ಲಿ

೧೪. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೯೩

೧೫. ಅದೇ., ಪುಟ – ೯೩

೧೬. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೯೩



ಯಾವುದೇ ಹೊಸತನ್ನು ಪ್ರದರ್ಶಿಸಲು ಹೋಗಿಲ್ಲದೇ ಇದ್ದರೂ ಹಿಂದಿನ ಪರಂಪರೆಯನ್ನು ಮುಂದುವರಿಸಿದರೂ ಅದಕ್ಕೆ ಹೆಚ್ಚಿನ ಹೊಳಪನ್ನು ಕೊಟ್ಟು ಸಂಸ್ಕರಿಸಿ ಇನ್ನಷ್ಟು ಸರಳ ಮತ್ತು ಕಲಾಪೂರ್ಣವಾಗಿ ಮಾಡುವುದರತ್ತ ಹೆಚ್ಚಿನ ಗಮನಹರಿಸಿದರು. ಇದರಿಂದಾಗಿ ಶಿಲ್ಪಕಲೆಯು ಹೆಚ್ಚು ಪ್ರಬುದ್ಧವಾಗಿ ಹೊಸತನದೊಂದಿಗೆ ರಚನೆಯಾದವು. ಇವರ ಕಾಲದಲ್ಲಿ ಮಥುರಾ ಶೈಲಿಯು ಹೆಚ್ಚು ಜನಪ್ರಿಯವಾದ ಶೈಲಿಯಾಗಿತ್ತು.

ಅಜಂತಾ ಮತ್ತು ಶಾತವಾಹನರ ಕಲೆ


ಚಾಲುಕ್ಯರ ಶಿಲ್ಪ ಮತ್ತು ವಾಸ್ತುಕಲೆಯ ಕುರಿತು ನೋಡುತ್ತ ಹೋದಂತೆಲ್ಲ ಅವರಿಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿದ ಹಿಂದಿನ ಕಲೆಯ ಇತಿಹಾಸವನ್ನು ಕೆದಕುತ್ತ ಹೋದಂತೆ ಹಲವಾರು ಕಲಾಶೈಲಿ ಮತ್ತು ರಾಜಮನೆತನಗಳ ಕಲಾಸಕ್ತಿಯ ಪುಟಗಳು ತೆರೆದುಕೊಳ್ಳುತ್ತ ಹೋಗುತ್ತವೆ. ಒಂದೆಡೆ ಗುಪ್ತರ ಕಾಲದ ಶಿಲ್ಪಕಲೆಯ ಪ್ರಭಾವ ಚಾಲುಕ್ಯ ಶಿಲ್ಪಗಳಲ್ಲಿ ಕಂಡುಬಂದರೆ ಇನ್ನೊಂದೆಡೆ ಅಜಂತಾದ ವಾಸ್ತುಶಿಲ್ಪ ಮತ್ತು ಶಿಲ್ಪಗಳ ಪ್ರಭಾವವನ್ನು ಕೂಡಾ ಕಾಣಬಹುದು. ಒಂದೆಡೆಯಲ್ಲಿ ಗುಪ್ತರು ಉತ್ತರಭಾರತದ ಹೆಚ್ಚಿನ ಭಾಗಗಳಲ್ಲಿ ಆಡಳಿತ ನಡೆಸುತ್ತಿದ್ದರೆ ಇತ್ತ ಕೊಂಕಣ ಭಾಗದಲ್ಲಿ ಶಾತವಾಹನರು ಆಡಳಿತ ನಡೆಸುತ್ತಿದ್ದರು.

'ಭಾರತ ಮಧ್ಯಭಾಗದಲ್ಲಿ ಮತ್ತು ದಕ್ಖನ್ ಪೀಠಭೂಮಿಯ ಉತ್ತರ ಭಾಗದಲ್ಲಿ ಶಾತವಾಹನರು'[೧೭] ಆಳುತ್ತಿದ್ದರು. ಸುಮಾರು ನಾಲ್ಕು ಶತಮಾನಗಳ ಕಾಲ ಆಡಳಿತ ನಡೆಸಿದ ಇವರ ಕಾಲದಲ್ಲಿ ಶಿಲ್ಪಕಲೆಯ ಹಲವಾರು ಬೆಳವಣಿಗೆಗಳು ಅಜಂತಾ ಮತ್ತು ಮಹಾರಾಷ್ಟ್ರದ ಮತ್ತು ಮಧ್ಯಪ್ರದೇಶದ ಕೆಳಗಣ ಪ್ರದೇಶಗಳಲ್ಲಿ ನಡೆದುಬಂದವು. ಇವರು ಆಂಧ್ರಪ್ರದೇಶದ ಬಹುಭಾಗವನ್ನು ಕೂಡಾ ಆಳಿದರು. ಮಧ್ಯಪ್ರದೇಶದ ಸಾಂಚಿಯಿಂದ ಹಿಡಿದು ಆಂಧ್ರದ ಅಮರಾವತಿಯ ತನಕವೂ ಇವರ ಕಲಾಸಾಮ್ರಾಜ್ಯ ವಿಸ್ತರಿಸಿತ್ತು.

ಇವರ ಕಾಲದಲ್ಲಿ ಸಾಂಚಿಯ ಸ್ತೂಪದ ಪುನರುತ್ಥಾನವಾದರೆ ಅಮರಾವತಿಯಲ್ಲಿ ಕೂಡಾ ಸ್ತೂಪ ನಿರ್ಮಾಣಮಾಡಿದ್ದರು. 'ಶಾತವಾಹನ ರಾಜಧಾನಿ ಇದ್ದುದು ದಕ್ಖನ್‌ದ ವಾಯುವ್ಯ ಮೂಲೆಯ ಪ್ರತಿಷ್ಠಾನ ಇಲ್ಲವೆ ಪೈಠಣದಲ್ಲಿ. ಈ ದೊರೆಗಳಿಗೆ 'ಆಂಧ್ರಭೃತ್ಯ'ರೆಂಬ ಇನ್ನೊಂದು ಹೆಸರೂ ಇದ್ದಿತ್ತು. ತಮ್ಮ ಕಾಲದಲ್ಲಿ ಅವರು ವಿಶಾಲ ಆಂಧ್ರದ ಒಡೆಯರೂ ಆಗಿದ್ದರು. ಅವರ ರಾಜ್ಯದ ಉತ್ತರ ಮೇರೆಯಲ್ಲಿ ಸಾಂಚಿಯಂತಹ ಸ್ತೂಪಸಮೂಹ ಕಾಣಿಸಿಕೊಳ್ಳಬೇಕಾದರೆ, ಆ ಕಾಲದ ಬೌದ್ಧಧರ್ಮದ ಪ್ರಭಾವವನ್ನು ಊಹಿಸಿಕೊಳ್ಳಬಹುದು. ಅಲ್ಲಿಂದ ಬಲು ದೂರದ ಈಗಣ ಬೆಜವಾಡಕ್ಕೆ ಸಮೀಪದಲ್ಲಿ ಕೃಷ್ಣಾನದಿಯ ದಂಡೆಯಲ್ಲಿನ ಅಮರಾವತಿಯಲ್ಲೂ ಒಂದು ಸ್ತೂಪ ನಿರ್ಮಾಣಗೊಂಡಿತು. ಇಂತಹದ್ದೇ ಸ್ತೂಪಗಳು ನಾಗಾರ್ಜುನಕೊಂಡ ಮತ್ತು ಜಗ್ಗಯ್ಯಪೇಟಗಳಲ್ಲಿ ಕೂಡಾ ನಿರ್ಮಾಣಗೊಂಡವು'[೧೮] ಕಾರ್ಲಾ ಮತ್ತು ಭಾಜಾಗಳಲ್ಲಿ

೧೭. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ– ೧೩೭

೧೮. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೧೩೭



ನಿರ್ಮಾಣಗೊಂಡ ಸ್ತೂಪಗಳ ಮುಂದುವರಿದ ಹಂತವು ಇದಾಗಿತ್ತು. ಇಲ್ಲೆಲ್ಲ ಅದ್ಭುತವೆನ್ನಿಸುವ ಶಿಲ್ಪಗಳು ರಚನೆಯಾದವು. ಅಜಂತಾದಲ್ಲಿ ಅಥವಾ ನಾಗಾರ್ಜುನ ಅಥವಾ ಅಮರಾವತಿಯಲ್ಲಿ ನಿರ್ಮಾಣಗೊಂಡವು ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳೇ ಆಗಿದ್ದರೂ ಮುಂದಣ ಹಿಂದೂಧರ್ಮದ ಗುಹಾಲಯಗಳ ರಚನೆಗೆ ಇವು ಪ್ರೇರಣೆಯಾದವು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದೆಲ್ಲದರ ಪರಿಣಾಮವು ಚಾಲುಕ್ಯ ಶಿಲ್ಪಗಳ ಮೇಲೆ ಚೆನ್ನಾಗಿಯೇ ಆಯಿತು. ಅಜಂತಾವು ಸುಮಾರು ಆರು ಶತಮಾನಗಳ ಕಾಲ ಕಲಾ ಚಟುವಟಿಕೆಯ ಕೇಂದ್ರವಾಗಿದ್ದಿತ್ತು. ಇಲ್ಲಿ ಶಿಲ್ಪ, ವಾಸ್ತುಶಿಲ್ಪ ಮತ್ತು ಚಿತ್ರಕಲೆಯ ಕ್ರಾಂತಿಯೇ ಈ ಸಮಯದಲ್ಲಿ ನಡೆದುದು ಕಂಡುಬರುತ್ತದೆ.

ಶಿಲ್ಪ ಕಲೆಯ ವಿವಿಧ ಪ್ರಯೋಗಗಳು ಇಲ್ಲಿಂದಲೇ ಆರಂಭವಾಯಿತೆಂದರೂ ಹೆಚ್ಚಲ್ಲ. ಅಜಂತಾದಲ್ಲಿ ಶಿಲ್ಪಗಳ ರಚನೆ ಕಡಿಮೆಯಾಗಿದ್ದರೂ ರಚನೆಯಾದ ಶಿಲ್ಪಗಳು ಅದ್ಭುತವಾದ ಪ್ರಯೋಗಗಳು. ಬುದ್ಧನ 'ಮಹಾಪರಿನಿರ್ವಾಣ'ದ ಶಿಲ್ಪವೇ ಇದಕ್ಕೆ ಉದಾಹರಣೆಯಾಗಿದೆ. ಇದೆಲ್ಲದರ ಪ್ರಭಾವ ಮುಂದಿನ ಹಂತದ ಶಿಲ್ಪಗಳಲ್ಲಿ ಕಾಣಬಹುದು. ಚಾಲುಕ್ಯರ ಶಿಲ್ಪಗಳಲ್ಲಿ ಗುಪ್ತರ ಪ್ರಭಾವ ಕಂಡುಬರುವಂತೆ ಶಾತವಾಹನರ ಶಿಲ್ಪಗಳ ಪ್ರಭಾವವೂ ಕಾಣಸಿಗುತ್ತದೆ.

ಮೇಲೆ ಹೇಳಲಾದ ವಿಚಾರಗಳು ಚಾಲುಕ್ಯರ ಆಡಳಿತಕ್ಕೆ ಮೊದಲು ಭಾರತದಲ್ಲಿ ನಡೆದುಬಂದಂತಹ ಕಲೆಯ ಮತ್ತು ವಾಸ್ತುಶಿಲ್ಪದ ಬೆಳವಣಿಗೆಗಳು. ತಮ್ಮ ಪೂರ್ವಜರಿಂದ ನಡೆದುಬಂದಂತಹ ಕಲಾಪರಂಪರೆಯನ್ನು ಮತ್ತಷ್ಟು ಮುಂದಕ್ಕೆ ಒಯ್ಯಲು ಕಾರಣವಾದ ವಿಚಾರಗಳನ್ನು ಕುರಿತಾಗಿ ಈ ಚಿಂತನೆಯು ಅಗತ್ಯವಾಗಿದೆ. ಚಾಲುಕ್ಯರು ಶಿಲ್ಪದಲ್ಲಿ ಹೊಸತೇನನ್ನು ಸಾಧಿಸಿಲ್ಲವಾದರೂ ಇದ್ದುದನ್ನು ಇನ್ನಷ್ಟು ಉತ್ತಮಪಡಿಸಿ ತಮ್ಮತನವನ್ನು ತಮ್ಮ ಶಿಲ್ಪಗಳಲ್ಲಿ ತೋರಿಸಿದ್ದಾರೆ. ಹಿಂದಿನ ಬೌದ್ಧ ಧರ್ಮದ ಶಿಲ್ಪಗಳನ್ನು ಹಿಂದೂ ಶಿಲ್ಪಗಳ ರಚನೆಗೆ ಹಿನ್ನೆಲೆಯಾಗಿ ಬಳಸಿಕೊಂಡಿದ್ದಾರೆ. ಆದರೆ ವಾಸ್ತುಶಿಲ್ಪದಲ್ಲಿ ಅದ್ಭುತವಾದ ಪ್ರಯೋಗಗಳನ್ನು ಮಾಡಿ ತೋರಿಸಿದ್ದಾರೆ.

ಚಾಲುಕ್ಯರ ಮೂಲದ ಕುರಿತಾಗಿ ಹಲವಾರು ಸಂಶಯಗಳಿವೆ. ಕೆಲವರು ಚಾಲುಕ್ಯರು ಗುಜರಾತಿನ ಕಡೆಯಿಂದ ಬಂದವರೆಂದು ಹೇಳಿದರೆ ಕೆಲವರು ಇವರು ಅಜಂತಾದ ಕಡೆಯಿಂದ ಬಂದು ಕರ್ನಾಟಕದ ಉತ್ತರಭಾಗವಾದ ಐಹೊಳೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸ್ವತಂತ್ರ ರಾಜರಾದರೆಂದು ಹೇಳುತ್ತಾರೆ. ಇನ್ನೂ ಕೆಲವರು ಇವರ ಮೂಲ ಕರ್ನಾಟಕವೇ ಎಂದು ಹೇಳುತ್ತಾರೆ. ಇವಾವುದಕ್ಕೂ ಸ್ಪಷ್ಟವಾದ ದಾಖಲೆಗಳಿಲ್ಲ. ಚಾಲುಕ್ಯರು ಮೊದಲು ಕದಂಬರ ಸಾಮಂತರಾಗಿದ್ದರೆಂಬುದು ಕೆಲವರ ಅಂಬೋಣವಿದೆ. ಕೆಲವರ ಪ್ರಕಾರ ಇವರು ಶಾತವಾಹನ ಅರಸರ ಮಾಂಡಲಿಕರಾಗಿದ್ದರೆಂದೂ ಹೇಳಲಾಗಿದೆ. ಅವರ ಮೂಲದ ಕುರಿತಾದ ವಿಚಾರಗಳನ್ನಿಲ್ಲಿ ಬದಿಗಿಟ್ಟು ಅವರು ಸಾಧಿಸಿದ ಶಿಲ್ಪ ಮತ್ತು ವಾಸ್ತುಶಿಲ್ಪದ ಪ್ರಗತಿಯನ್ನಷ್ಟೆ ಇಲ್ಲಿ ನೋಡೋಣ.



ಕುಬೇರ ಶಿಲ್ಪ

ಚಾಲುಕ್ಯರ ಕಾಲದ ಶಿಲ್ಪಗಳನ್ನಿಲ್ಲಿ ನೋಡುವ ಮೊದಲು ಐಹೊಳೆಯ ಲಾಡ್‌ಖಾನ್ ದೇವಾಲಯುದ ಸ್ಥಳದಲ್ಲಿ ಉತ್ಖನನದ ಸಮಯದಲ್ಲಿ ದೊರಕಿದ ಶಿಲ್ಪವೊಂದನ್ನಿಲ್ಲಿ ಗಮನಿಸಬೇಕಾಗುತ್ತದೆ. ಐಹೊಳೆಯು ಕ್ರಿಸ್ತಶಕೆಯ ಪ್ರಾರಂಭ ಕಾಲದಲ್ಲಿಯೇ ಒಂದು ಪ್ರಮುಖ ವಾಣಿಜ್ಯ ನಗರಿಯಾಗಿತ್ತೆಂಬುದನ್ನು ಮರೆಯಬಾರದು. ಇಲ್ಲಿ ಪುರಾತನ ಕಾಲದಲ್ಲಿಯೇ ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದ ಬಗ್ಗೆ ಮಾಹಿತಿ ಸಿಗುತ್ತದೆ. ಆ ಪ್ರದೇಶದಲ್ಲಿ ಲಾಡ್‌ಖಾನ್ ದೇವಾಲಯಕ್ಕಿಂತಲೂ ಮೊದಲು ದೇವಾಲಯಗಳು ರಚನೆಯಾಗಿದ್ದ ಕುರುಹುಗಳು, ದೇವಾಲಯದ ಅಡಿಪಾಯಗಳು ಕಂಡುಬಂದಿವೆ.

'ಮೊನ್ನೆಯ ತನಕವೂ ಇಲ್ಲಿನ(ಐಹೊಳೆ) ಗುಡಿಗಳಲ್ಲಿ– ಲಾಡ್‌ಖಾನ್ ದೇಗುಲ ಅತಿ ಪ್ರಾಚೀನವಾದುದು ಎಂಬ ಭಾವನೆ ಉಳಿದಿತ್ತು. ಪ್ರಾಚ್ಯ ಇಲಾಖೆಯವರು ಮೂರು ನಾಲ್ಕು ವರ್ಷಗಳ ಹಿಂದೆ ಇಲ್ಲಿ ಅಗೆತ ನಡೆಸಿದ್ದಾರೆ. ಲಾಡ್‌ಖಾನ್ ಗುಡಿಯ ಮುಂಭಾಗದ ನೆಲವನ್ನು ಅಗೆದಾಗ, ಇನ್ನೂ ನಾಲ್ಕಾರು ಅಡಿ ಆಳಕ್ಕೆ ಮತ್ತೂ ಪೂರ್ವದ ಗುಡಿಯೊಂದರ ಪಾಯ ಕಾಣಸಿಕ್ಕಿತು.'[೧೯] ಇದರಿಂದಾಗಿ ಇಲ್ಲಿ ಇನ್ನೂ ಹಳೆಯ ದೇವಾಲಯಗಳು ಮಣ್ಣಿನ ಅಡಿಯಲ್ಲಿ ಹುದುಗಿ ಹೋಗಿರುವ ಸಾಧ್ಯತೆಗಳು ಕಂಡುಬಂದವು. ಲಾಡ್‌ಖಾನ್ ದೇವಾಲಯದ ಕಾಲ ಸುಮಾರು ಕ್ರಿ.ಶ.೪೫೦ರ ಕಾಲದ್ದು'.[೨೦] ಇದು ಶೈವ ಧರ್ಮಕ್ಕೆ ಸಂಬಂಧಿಸಿದ್ದು. ಆದರೆ ಇದರ ಗರ್ಭಗೃಹದ 'ಬಾಗಿಲಿನ ಮೇಲಿನ ಲಲಾಟದಲ್ಲಿ ಗರುಡನ ಶಿಲ್ಪ'[೨೧] ವಿರುವುದನ್ನು ಮರೆಯಬಾರದು, ಗರುಡನು ವಿಷ್ಣುವಿನ ದೇವಾಲಯಗಳಲ್ಲಿ ಕಾಣುವ ಶಿಲ್ಪ.

ದೇವಾಲಯದ ರಚನೆಯನ್ನು ಗಮನಿಸಿದರೂ ಇಲ್ಲಿ ಎರಡು ಹಂತಗಳ ಗರ್ಭಗುಡಿಯ ರಚನೆಯಿರುವುದು, ಇಲ್ಲಿನ 'ಮಿಥುನ ಶಿಲ್ಪಗಳು ಮತ್ತು ಯಮುನೆಯ ಶಿಲ್ಪ'[೨೨]ವು ವಿಶಿಷ್ಟ ಕೆತ್ತನೆಯಾಗಿದ್ದು ಚಾಲುಕ್ಯರ ಮೊದಲೇ ಇಲ್ಲಿ ವೈದಿಕ ಧರ್ಮದ ಶಿಲ್ಪಗಳು ರಚನೆಯಾಗಿರುವುದನ್ನು ನೋಡಬಹುದು. ಇದರಿಂದಾಗಿ ಇಲ್ಲಿ ದೇವಾಲಯದ ಕಾಲಮಾನ ಮತ್ತು ಧರ್ಮಗಳ ಕಾಲದ ಕುರಿತಂತೆ ಸಂಶಯ ಬಲವಾಗುತ್ತದೆ. ಅದೇನೇ ಇದ್ದರೂ ಇಲ್ಲಿ ದೇವಾಲಯಗಳು ಚಾಲುಕ್ಯರ ಪೂರ್ವದಲ್ಲಿಯೇ ಇದ್ದ ಗುರುತು ಊಹಿಸಬಹುದು. ಆದರೆ ಇವುಗಳಿಗಿಂತ ಪ್ರಮುಖವಾದುದು ಇಲ್ಲಿನ ದೇವಾಲಯದ ಸಮೀಪ ಉತ್ಖನನದಲ್ಲಿ ದೊರೆತ ಕುಬೇರನ ಶಿಲ್ಪ, ಇದು ಚಾಲುಕ್ಯರ ಕಾಲಕ್ಕಿಂತ ಮೊದಲೇ ರಚಿತವಾದುದು.

ಮರಳುಗಲ್ಲಿನ ಈ ಶಿಲ್ಪವು ಇಂದು ದೆಹಲಿಯ ಮ್ಯೂಸಿಯಮ್ಮಿನಲ್ಲಿದೆ. ಸುಮಾರು

---

೧೯. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೧೫೫

೨೦. ಜಯದೇವಪ್ಪ ಜೈನಕೇರಿ : ಕರ್ನಾಟಕ ಶಿಲ್ಪ–ಸಂಸ್ಕೃತಿ, ಪುಟ – ೨೧೯

೨೧. ಕೆ. ಎಲ್. ಎನ್. ಮೂರ್ತಿ : ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ, ಪುಟ– ೩೭

೨೨. ಅದೇ., ಪುಟ – ೩೭

ಒಂದಡಿ ಎತ್ತರವಿರುವ ಈ ಶಿಲ್ಪವು ಸುಂದರವಾದ ಶಿಲ್ಪ. ಕುಬೇರನ ಶಿಲ್ಪವು ಉತ್ತರಭಾರತದ ದೇಗುಲಗಳಲ್ಲಿ ಅಂದಿನ ಕಾಲದಲ್ಲಿ ಹೆಚ್ಚಾಗಿ ರಚನೆಯಾಗುತ್ತಿದ್ದವು. 'ಅಗೆತದಲ್ಲಿ ಮರಳುಗಲ್ಲಿನ ಮೂರಡಿ ಉನ್ನತವಾದ ಒಂದು ವಿಗ್ರಹವೂ ದೊರೆಯಿತು. ಇದು ಆಸೀನ ಕುಬೇರನ ವಿಗ್ರಹ. ಕಾಲಮಾನದ ದೃಷ್ಟಿಯಿಂದ, ಈ ವಿಗ್ರಹ ಲಾಡ್‌ಖಾನ್ ದೇವಾಲಯಕ್ಕಿಂತ ಒಂದು ಶತಮಾನ ಹಿಂದಿನದೆಂದು ಉಹಿಸಬಹುದು. ಹಾಗಿದ್ದರೆ, ಐಹೊಳೆಯಲ್ಲಿ ಕ್ರಿಸ್ತಶಕ ನಾಲ್ಕನೆಯ ಶತಮಾನದಿಂದಲೇ ದೇವಾಲಯಗಳಿದ್ದವು ಎಂದು ಊಹಿಸಬೇಕಾಗುತ್ತದೆ.

ಉತ್ತರ ಹಿಂದುಸ್ಥಾನದ ಆದಿ ಶಿಲ್ಪಗಳಲ್ಲೂ ಕುಬೇರ ಸಿಗುತ್ತಾನೆ.'[೨೩] ಇನ್ನು ಈ ಶಿಲ್ಪವನ್ನು ಕುರಿತು ಹೇಳುವುದಾದರೆ ಇದು ಕುಬೇರನ ಕುಳಿತಿರುವ ಶಿಲ್ಪ. ದೊಡ್ಡ ಹೊಟ್ಟೆಯ ಕುಬೇರನ ಎಡಗೈ ಎಡತೊಡೆಯ ಮೇಲಿದೆ. ಕೈಯಲ್ಲಿ ಸಣ್ಣ ಗಂಟಿದೆ. ಕೈಕಾಲುಗಳು ಸಣ್ಣದಾಗಿವೆ. ತಲೆಯ ಹಿಂದೆ ಪ್ರಭಾಚಕ್ರ ಇದೆ. ಅಲಂಕಾರಿಕವಾದ ಕೆತ್ತನೆಯ ಕಿರೀಟವಿದೆ, ಕರ್ಣ-ಕುಂಡಲಗಳು ದೊಡ್ಡದಾಗಿದ್ದು ಮುತ್ತಿನ ಕೆತ್ತನೆಯಿದೆ. ಆಭರಣಗಳನ್ನು ಅಲಂಕೃತವಾಗಿ ಕೆತ್ತಲಾಗಿದ್ದು ಗುಪ್ತರ ಕಾಲದ ಶಿಲ್ಪವನ್ನು ಹೋಲುತ್ತದೆ. ದೆಹಲಿಯ ಸಂಗ್ರಹಾಲಯದಲ್ಲಿರುವ ವಿಷ್ಣುವಿನ ನಿಂತ ಶಿಲ್ಪದ ಕೆತ್ತನೆಯಲ್ಲಿಯೂ ಇದೇ ರೀತಿಯ ಚಿತ್ರಣವಿದ್ದು ಇಲ್ಲಿನ ಕುಬೇರನ ಶಿಲ್ಪದ ಕೆತ್ತನೆಯಲ್ಲಿ ಸಾಮ್ಯವಿದೆ.

ಕುಬೇರನ ಶಿಲ್ಪಗಳು ಚಾಲುಕ್ಯರ ಕಾಲದಲ್ಲಿ ಹೇರಳವಾಗಿ ಕಂಡುಬಂದಿದ್ದು, ಇವುಗಳು ಹಿಂದಿನ ಶಿಲ್ಪ ಸಂಪ್ರದಾಯ ಮತ್ತು ಪ್ರತಿಮಾಶಾಸ್ತ್ರವನ್ನು ಮುಂದುವರಿಸಿರುವ ಸಾಧ್ಯತೆಯಿದೆ. ಇದರಿಂದಾಗಿ ಗುಪ್ತರ ಶೈಲಿಯ ಕೆತ್ತನೆ ಐಹೊಳೆಯಲ್ಲಿಯೂ ಇತ್ತೆಂಬುದನ್ನು ಗಮನಿಸಬೇಕಾಗುತ್ತದೆ. ಇವುಗಳ ಆಧಾರದಿಂದ ನೋಡಿದಾಗ ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಿಗಳು ಹಿಂದಿನ ಸಂಪ್ರದಾಯವನ್ನು ಮುಂದುವರಿಸಿರುವುದನ್ನು ನಂಬಬಹುದು.

ಇನ್ನು ದೇವಾಲಯಗಳ ವಿಚಾರವನ್ನು ಗಮನಿಸಿದರೆ ಇಲ್ಲಿಯೂ ಹಲವು ಬೆಳವಣಿಗೆಗಳು ನಡೆದಿವೆ. ಹಲವಾರು ಶೈಲಿಗಳು ಮತ್ತು ಪ್ರಯೋಗಗಳು ಇಲ್ಲಿ ಕಾಣಿಸುತ್ತವೆ. ಆದರೆ ಸ್ವಂತಿಕೆಯನ್ನು ತೋರಿಸುವ ಪ್ರಯತ್ನವನ್ನು ಅಂದಿನ ಶಿಲ್ಪಿಗಳು ಮಾಡಿದ್ದಾರೆ. ಮುಖ್ಯವಾಗಿ ವಾಸ್ತುಶಿಲ್ಪಗಳ ರಚನೆಯಲ್ಲಿ ಇವು ಗಮನಾರ್ಹವಾಗಿ ಕಾಣಸಿಗುತ್ತವೆ. ಚಾಲುಕ್ಯರ ಕಾಲದ ಶಿಲ್ಪಿಗಳು ಮೊದಲೇ ಹೇಳಿದಂತೆ ವೇದಗಳು ಮತ್ತು ಉಪನಿಷತ್ತುಗಳ ಆಧಾರದಲ್ಲಿ ಕೃತಿ ರಚನೆಯನ್ನು ಪ್ರಾರಂಭಿಸಿದವರು. ಆದರೆ ಇದು ಕಥಾನಕಗಳ ವಸ್ತುವಿನ ವಿಚಾರ. ಆದರೆ ಕೆತ್ತನೆಯ ವಿಷಯಕ್ಕೆ ಬಂದರೆ ಇವರು ಯಾವ ಶೈಲಿಯನ್ನು ಅನುಕರಿಸಿದರು, ಯಾವ ರೀತಿ ಶಿಲ್ಪ ರಚಿಸಿದರು, ಇವರಿಗೆ ಪ್ರಭಾವ ಬೀರಿದ ಅಂಶಗಳಾವುವು, ಪ್ರೇರಣೆಯಾದ ಕಾರಣವೇನು ಇತ್ಯಾದಿಗಳನ್ನು ಕುರಿತು ವಿಚಾರ ಮಾಡುತ್ತಿದ್ದಂತೆ ಮೇಲೆ ಹೇಳಿದ ಅಂಶಗಳು ಕಂಡುಬರುತ್ತವೆ. ಆದರೆ ಇವರು ಹಿಂದಿನ

೨೩. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೧೫೫

ಸಂಪ್ರದಾಯವನ್ನು ಕರುಡಾಗಿ ಅನುಕರಿಸಿಲ್ಲ, ತಮ್ಮ ಸ್ವಂತಿಕೆಯನ್ನೂ ಮೆರೆದಿದ್ದಾರೆ. ಅದಕ್ಕೆ ಅವರಿಗೆ ಯಾವ ಅಂಶಗಳು ಸಹಾಯಕವಾದವು ಇತ್ಯಾದಿಗಳನ್ನು ಕುರಿತು ಚಿಂತಿಸುವುದು ಅಗತ್ಯವಾಗಿದೆ.

ಸುಮಾರು ಇನ್ನೂರೈವತ್ತು ವರ್ಷಗಳ ಕಾಲ ಮಧ್ಯ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳನ್ನು ಸೇರಿಸಿ ಇವರ ರಾಜ್ಯಕ್ಕೆ ಮಹಾರಾಷ್ಟ್ರಕತ್ರಯ ಎಂಬ ಹೆಸರಿತ್ತು. ಆಡಳಿತ ನಡೆಸಿದ ಚಾಲುಕ್ಯರ ಕಾಲದಲ್ಲಿ ಹಲವಾರು ಶೈಲಿಗಳು ಕಂಡುಬಂದಿವೆ. ವಾಸ್ತುಶಿಲ್ಪದಲ್ಲಿಯಂತೂ ಚಾಲುಕ್ಯ ಶೈಲಿ ಅಥವಾ ದ್ರಾವಿಡ ಶೈಲಿ ಎಂಬ ಪ್ರತ್ಯೇಕವಾದೊಂದು ಶೈಲಿಯೇ ಮೂಡಿಬಂದಿದೆ. ನಾಗರ, ವೇಸರ ಮತ್ತು ದ್ರಾವಿಡ ಶೈಲಿಗಳ ದೇವಾಲಯಗಳಲ್ಲಿ ಅವಕ್ಕೆ ಸಂಬಂಧಿಸಿದಂತೆ ಶಿಲ್ಪಗಳು ರಚನೆಯಾಗಿದ್ದು ಕಾಲಕಾಲಕ್ಕೆ ಬೆಳವಣಿಗೆಯನ್ನು ಹೊಂದಿದ್ದವು.

ಚಾಲುಕ್ಯರು ಮೊದಲು ಕದಂಬರ ಸಾಮಂತರಾಗಿದ್ದವರು ಆನಂತರ ಸ್ವತಂತ್ರ ರಾಜರಾದವರು. ಆದರೂ ಇವರು ಮುಂದೆಯೂ ದಕ್ಷಿಣದಲ್ಲಿ ಕದಂಬರೊಂದಿಗೆ, ಈ ಕಡೆ ಗಂಗ, ನೊಳಂಬರೊಂದಿಗೆ, ಆ ಕಡೆಯಲ್ಲಿ ಪಲ್ಲವರೊಂದಿಗೆ ಗಡಿಗಳನ್ನು ಹಂಚಿಕೊಂಡಿದ್ದರು. ಇವರೊಂದಿಗೆ ಹಗೆತನವೂ ಇತ್ತು. ಆದರೂ ಅಲ್ಲಿನ ಆಡಳಿತದಲ್ಲಿ ಇದ್ದ ಕಲೆ ಮತ್ತು ಸಂಸ್ಕೃತಿ ಹಾಗೂ ವಾಸ್ತುಶಿಲ್ಪಗಳ ಪ್ರಭಾವವನ್ನು ಚಾಲುಕ್ಯರೂ ಮನಗಂಡಿದ್ದರು. ಅವರಲ್ಲಿನ ಉತ್ತಮ ಅಂಶಗಳನ್ನು ತಮ್ಮ ರಾಜ್ಯದಲ್ಲಿಯೂ ಅಳವಡಿಸಿಕೊಂಡಿದ್ದರು.

ಈ ಕಾಲಕ್ಕಾಗಲೇ ಬೌದ್ಧ ಧರ್ಮವು ಹಿನ್ನೆಲೆಗೆ ಸರಿಯತೊಡಗಿತ್ತು. ವೈದಿಕ ಸಂಸ್ಕೃತಿಯು ಬೆಳವಣಿಗೆ ಹೊಂದಿತ್ತು. ಕದಂಬರು ಬ್ರಾಹ್ಮಣರಾಗಿದ್ದುದರಿಂದ ಶೈವ ಧರ್ಮವನ್ನು ಬೆಳಿಸಿದ್ದರು. ಉತ್ತಮವಾದ ದೇವಾಲಯಗಳ ನಿರ್ಮಾಣ ಮಾಡಿದ್ದರು. ಈ ಕಾಲದಲ್ಲಿ ಕದಂಬರ ಕಾಲದ ಶಿಲ್ಪಗಳು ನಮಗೆ ಹೆಚ್ಚಾಗಿ ಕಂಡುಬರದಿದ್ದರೂ ಇತ್ತೆಂಬುದಕ್ಕೆ ಬಲವಾದ ಆಧಾರಗಳು ದೊರೆತಿವೆ. ಚಾಲುಕ್ಯರು ಇವನ್ನು ಮುಂದುವರಿಸಿಕೊಂಡು ಹೋಗಲು ಆಗಿನ ಸಂಸ್ಕೃತಿಯು ಇದಕ್ಕೆ ಕಾರಣವಾಗಿತ್ತು. ಜನರಿಗೆ ದೇವರ ಮೇಲಿನ ನಂಬಿಕೆ ಬಲವಾಗಿದ್ದುದರಿಂದ ತಮ್ಮ ರಾಜ್ಯದಲ್ಲಿಯೂ ದೇವಾಲಯಗಳು ಮತ್ತು ದೇವತಾಮೂರ್ತಿಗಳ ನಿರ್ಮಾಣ ಆಗಬೇಕಾಗಿದ್ದಿತು.

ಈ ರೀತಿಯ ದೇಗುಲಗಳ ನಿರ್ಮಾಣಕ್ಕೆ, ತಮ್ಮ ಹಿಂದಿನವರು ರಚಿಸಿದ್ದಂತಹ ದೇವತೆಗಳ ಕುರಿತಾದ ಶಿಲ್ಪಗಳು, ಕಥಾನಕಗಳು, ಇವರ ಶಿಲ್ಪಗಳಿಗೆ ಪ್ರೇರಣೆ ನೀಡಿದವು. ಇದರ ಜೊತೆಗೆ ಆ ಕಾಲಕ್ಕಾಗಲೇ ರಚಿತವಾಗಿದ್ದ ಶಿಲ್ಪಶಾಸ್ತ್ರಗಳು, ಪ್ರತಿಮಾಶಾಸ್ತ್ರಗಳು, ದೇವಾಲಯಗಳ ನಿರ್ಮಾಣದ ಕುರಿತಾದ ತಿಳಿವಳಿಕೆಗಳು ಇವರ ಕೌಶಲ್ಯದ ಜೊತೆಗೆ ಕೈಪಿಡಿಯಾಗಿ ಕೆಲಸ ಮಾಡಿದವು. ಇದರಿಂದಾಗಿ ಹೊಸ ಹೊಸ ಪ್ರಯೋಗಗಳನ್ನು ನಡೆಸಲು ಸಾಧ್ಯವಾಯಿತು. ಚಾಲುಕ್ಯರು ಕರ್ನಾಟಕವನ್ನು ಆಳುತ್ತಿದ್ದ ಕಾಲದಲ್ಲಿ ಗಂಗರು, ಕದಂಬರು, ಪಲ್ಲವರು ಆಡಳಿತ ನಡೆಸುತ್ತಿದ್ದರಷ್ಟೇ. ಅಲ್ಲಿನ ಶಿಲ್ಪಗಳು ಚಾಲುಕ್ಯರಿಗೆ ಪ್ರೇರಣೆ ನೀಡಿವೆ, ಅಂತೆಯೇ ಚಾಲುಕ್ಯರ ಕಲೆಯು ಇವರಿಗೆ



ಪ್ರೇರಣೆಯಾಗಿದೆ. ಗಂಗರ ಕಾಲದಲ್ಲಿ ಅವರ ಆಡಳಿತದ ಪ್ರದೇಶಗಳಲ್ಲಿ ದೊರೆತ ಶಿಲ್ಪಗಳಲ್ಲಿ ಚಾಲುಕ್ಯರ ಪ್ರಭಾವವು ಕಂಡುಬಂದಿರುವುದನ್ನು ಮರೆಯಲಾಗದು'.[೨೪] ಈ ರಾಜ್ಯಗಳು ಶಿಲ್ಪದ ವಿಚಾರದಲ್ಲಿ ನೋಡಿದಾಗ ಹೆಚ್ಚುಪಾಲು ಒಂದೇ ಧರ್ಮವನ್ನು ಅನುಸರಿಸುತ್ತಿದ್ದವುಗಳಾಗಿದ್ದುದರಿಂದ ಪರಸ್ಪರ ಪೂರಕವಾಗಿ ಕೆಲಸ ಮಾಡಿರಬಹುದು. 'ಬಾದಾಮಿಯ ಚಾಲುಕ್ಯರು ವೈಷ್ಣವ ಧರ್ಮವನ್ನು ಅನುಸರಿಸುತ್ತಿದ್ದಾಗ ಗಂಗರೂ ಬಹುಶಃ ಅದೇ ಧರ್ಮದ ಅನುಯಾಯಿಗಳಾಗಿದ್ದರು'.[೨೫] ಇವುಗಳನ್ನೆಲ್ಲ ಗಮನಿಸಿದಾಗ ಬಾದಾಮಿಯ ಚಾಲುಕ್ಯರು ಅಂದು ದಕ್ಷಿಣ ಪ್ರದೇಶದಲ್ಲಿ ರೂಢಿಯಲ್ಲಿದ್ದ ಧಾರ್ಮಿಕ ನಂಬಿಕೆಯನ್ನು ಮುಂದುವರಿಸಿಕೊಂಡು ಹೋದರೆಂದು ಹೇಳಬಹುದಾಗಿದೆ.

ಬಾದಾಮಿಯ ಮೊದಲನೆಯ ಗುಹೆಯ ವಿಚಾರವನ್ನು ನೋಡಿದಾಗ ಇದು ಶೈವ ಗುಹಾಲಯ, ಚಾಲುಕ್ಯರು ವೈಷ್ಣವರು, ಆದರೆ ಇವರು ಶೈವ ಬ್ರಾಹ್ಮಣರಾಗಿದ್ದ ಬನವಾಸಿಯ ಕದಂಬರ ಸಾಮಂತರಾಗಿದ್ದವರು, ನಂತರ ಸ್ವತಂತ್ರರಾದಾಗ ಕದಂಬರು ಇವರ ಸಾಮಂತರಾದರು. ಐಹೊಳೆಯ ರಾವಳಫಡಿ ಗುಹಾಲಯವು ಬಹುಶಃ ಇದಕ್ಕಿಂತ ಮೊದಲು ರಚನೆಯಾಗಿರಬೇಕು, ಇದು ಸಣ್ಣ ಗುಹಾಲಯವಾಗಿದ್ದು ಬಾದಾಮಿಯ ಗುಹಾಲಯದ ಕೆತ್ತನೆಗಿಂತ ಭಿನ್ನವಾದುದು, ಇಲ್ಲಿನ ಶಿಲ್ಪಗಳು ಪರಿಪೂರ್ಣತೆಯಲ್ಲಿ, ಅಂಗರಚನೆಯ ಪರಿಮಾಣದ ಕೆತ್ತುವಿಕೆಯಲ್ಲಿ ಬಾದಾಮಿಯ ಕೆತ್ತನೆಗೆ ಸಮವಾಗುವುದಿಲ್ಲ. ಆದರೆ ಕೆತ್ತನೆಯ ರೀತಿಯನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಇಡಿಯ ಗುಹಾಲಯವೇ ಒಂದು ಪರಿಪೂರ್ಣ ಕಲಾಕೃತಿಯಂತೆ ಕಂಡುಬರುತ್ತದೆ.

ಬಹುಶಃ ಇದಕ್ಕೆ ಪ್ರೇರಣೆಯಾದುದು ಅವರಿಗಿಂತ ಮೊದಲಿದ್ದ ಬೌದ್ಧ ಧರ್ಮದ ಗುಹಾಲಯಗಳು. ನಾಸಿಕ್, ಬೇಡ್ಸ, ಕಾರ್ಲದ ಗುಹೆಗಳ ಕೆತ್ತನೆಗಳು ಪ್ರೇರಣೆಯಾಗಿರಬಹುದು. ಡಾ. ಶಿವರಾಮ ಕಾರಂತರು ಹೇಳುವಂತೆ ಬ್ರಾಹ್ಮಣ ಧರ್ಮಕ್ಕೆ ಮೊದಲು ಅಸ್ತಿತ್ವದಲ್ಲಿದ್ದ ಬೌದ್ಧ ಧರ್ಮದ ಕೆತ್ತನೆಗಳು ಕಾರಣವಾಗಿರಬಹುದು. ಇದಕ್ಕೆ ಅವರು ಉದಾಹರಣೆ ನೀಡುತ್ತಾರೆ. 'ಇಲ್ಲಿನ (ಬಾದಾಮಿಯ) ಗುಹಾಲಯಗಳ ಮಧ್ಯದಲ್ಲಿ ನೈಸರ್ಗಿಕ ಗುಹೆಯೊಂದಿದೆ. ಸುಮಾರು ೩೦ಅಡಿ ಎತ್ತರ, ೩೦ ಅಡಿ ಹಿಂಜರಿಕೆಯುಳ್ಳ ಈ ಗುಹೆಯ ಗೋಡೆಯೊಂದರಲ್ಲಿ, ಪದ್ಮಪಾಣಿ ಬುದ್ಧನ ಆಕೃತಿಯನ್ನು ಕೆತ್ತಿದ್ದಾರೆ. ಅದಿಂದು ಭಗ್ನಾವಸ್ಥೆಯಲ್ಲಿ ಇದ್ದರೂ, ಇಲ್ಲಿನ ಗುಹಾಲಯ ನಿರ್ಮಾಣದ ಚಟುವಟಿಕೆಗೆ ಅದೊಂದು ಪ್ರೇರಣೆಯಾಗಿರಬೇಕೆಂದು ತರ್ಕಿಸಬಹುದು. ಅದರಿಂದ ಸ್ಫೂರ್ತಿ ಪಡೆದಿರಬಹುದಾದ ಮೊದಲನೆಯ ಗುಹೆ ಐಹೊಳೆಯ 'ರಾವಣ ಪಹಾಡಿ ಗುಹೆ' ಇರಬೇಕು.'[೨೬] ಹಲವಾರು ಇತಿಹಾಸ ತಜ್ಞರ ಅಭಿಪ್ರಾಯದಂತೆ ಐಹೊಳೆಯ ರಾವಳಫಡಿ

---

೨೪. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಶಿಲ್ಪಕಲಾ ಪ್ರಪಂಚ, ಪುಟ – ೧೭೨

೨೫. ಅದೇ., ಪುಟ – ೧೭೩

೨೬. ಡಾ. ಶಿವರಾಮ ಕಾರಂತ : ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪುಟ – ೧೦

[illegible]

ಗುಹಾಲಯವು ಬಾದಾಮಿಯ ಗುಹಾಲಯಗಳಿಗಿಂತ ಮೊದಲು ರಚಿತವಾದುದು ಎಂಬುದನ್ನು ಒಪ್ಪುವುದಾದರೆ ಮೇಲಿನ ಅಂಶಗಳಿಗೆ ಪುಷ್ಟಿ ದೊರೆಯುತ್ತದೆ.

ಇಲ್ಲಿನ ಶಿಲ್ಪಗಳ ಕೆತ್ತನೆಯಲ್ಲಿ ಗುಪ್ತರ ಶಿಲ್ಪಗಳಲ್ಲಿನ ಪ್ರಭಾವ ಕಂಡುಬರುತ್ತದೆ. ಇಲ್ಲಿನ ಶಿಲ್ಪಗಳ ಬಟ್ಟೆಯ ನೆರಿಗೆ ಕುತೂಹಲಕಾರಿಯಾದ ರಚನೆ. ಸರಳವಾಗಿ ವಾರೆ ಗೆರೆಗಳಿಂದ ತೋರಿಸಲಾಗಿರುವ ಈ ಶಿಲ್ಪಗಳ ಬಟ್ಟೆಯ ಕೆತ್ತನೆಯನ್ನು ಗುಪ್ತರ ಕಾಲದಲ್ಲಿ ರಚಿಸಲಾದ ವಿಷ್ಣು ಮತ್ತು ಅಹಿಚ್ಛತ್ರದ ಸುಡಾವೆಮಣ್ಣಿನ ಗಂಗಾಮಾತೆಯ ಶಿಲ್ಪ (ದೆಹಲಿಯ ರಾಷ್ಟ್ರೀಯ ಮ್ಯೂಸಿಯಂ)[೨೭]ದಲ್ಲಿನ ಕೆತ್ತನೆಯನ್ನು ಹೋಲುತ್ತದೆ. ಶಿಲ್ಪಗಳ ಮುಖಭಾವವೂ ಹಾಗೆಯೇ ಇದೆ. ಆದರೆ ಮುಖದ ಆಕಾರವು ದುಂಡಗಿದ್ದು, ಸ್ವಲ್ಪ ಅಂಡಾಕಾರದತ್ತ ತಿರುಗಿದ್ದು ಕುತ್ತಿಗೆಯ ಭಾಗದಲ್ಲಿ ಹೆಚ್ಚು ಉದ್ದವನ್ನು ಪಡೆದುಕೊಂಡಿದೆ. ಆದರೆ ಕಿರೀಟಗಳ ರಚನೆಯಲ್ಲಿ ವಿಶೇಷತೆಯನ್ನು ಗಮನಿಸಬಹುದು. ಇಲ್ಲಿನ ಶಿಲ್ಪಗಳಲ್ಲಿ ಕಿರೀಟಗಳನ್ನು ಹೆಚ್ಚು ಎತ್ತರವಾಗಿ ಕೆತ್ತಲಾಗಿದೆ. ದೇಹದ ರಚನೆಯೂ ತೆಳ್ಳನೆಯ(elongated figure) ರಚನೆ. ಶಿಲ್ಪದ ಅಲಂಕರಣ ಕುರಿತಾಗಿಯೂ ಇದೇ ಮಾತನ್ನು ಹೇಳಬಹುದು.

ಆದರೆ ಬಾದಾಮಿಯ ಗುಹಾಲಯದಲ್ಲಿ ಈ ರೀತಿಯ ರಚನೆ ಇಲ್ಲ, ಇಲ್ಲಿನ ಶಿಲ್ಪಗಳಲ್ಲಿ ಬಟ್ಟೆಯ ನೆರಿಗೆ ಇಲ್ಲ, ಕಿರೀಟವೂ ಸಣ್ಣದಾಗಿದೆ. ಆದರೆ ಹೆಚ್ಚು ಸಮತೋಲನವನ್ನು ಪಡೆದಿದೆ. ಶಿಲ್ಪವು ಸಂಕೀರ್ಣತೆಯಿಂದ ಸರಳತೆಯತ್ತ ಹೊರಳಿದೆ. ಇದು ಇಲ್ಲಿ ಕಂಡುಬರುವ ಗಮನಾರ್ಹವಾದ ಬೆಳವಣಿಗೆ. ಶಿಲ್ಪದಲ್ಲಿ ಅಲಂಕರಣವು ಹೆಚ್ಚಾದಷ್ಟು ಶಿಲ್ಪದಲ್ಲಿ ಜೀವಂತಿಕೆ ಕಡಿಮೆಯಾಗಿ ಶಿಲ್ಪಿಯ ಕೌಶಲ್ಯಕ್ಕೆ ಪ್ರಾಧಾನ್ಯ ದೊರಕುತ್ತದೆ. ಇದರಿಂದಾಗಿ ಬಹುಶಃ ಮೊದಲ ಗುಹಾಲಯದ ಶಿಲ್ಪಿಗಳು ಸರಳತೆಯತ್ತ ಗಮನ ಹರಿಸಿರಬಹುದು.

ಶಿಲ್ಪಿಗಳ ರಚನೆಯಲ್ಲಿ ನೈಜತೆಯತ್ತ ಹೆಚ್ಚು ಒತ್ತು ನೀಡಿರುವುದನ್ನು ಇಲ್ಲಿ ಗಮನಿಸಬಹುದು. ಇಲ್ಲಿನ ಗಂಧರ್ವದಂಪತಿಗಳ ಶಿಲ್ಪಗಳು ಸಾಂಚಿಯ ಸ್ತೂಪದಲ್ಲಿಯ ಯಕ್ಷ-ಯಕ್ಷಿಣಿಯರ ಶಿಲ್ಪಗಳನ್ನು ನೆನಪಿಸುತ್ತವೆ. ಆದರೆ ಶಿಲ್ಪದ ರಚನೆಯಲ್ಲಿ ಉತ್ತರ ಭಾರತದ ಶೈಲಿಗಿಂತ ಹೆಚ್ಚಾಗಿ ದಾಕ್ಷಿಣಾತ್ಯ ದೇಹರಚನೆ ಕಾಣಿಸುತ್ತದೆ. ಆದರೆ ದೇಹದ ಬಾಗು-ಬಳುಕುಗಳು ಮತ್ತು ಭಂಗಿಯನ್ನು ಆಕರ್ಷಕವಾಗಿ ಕೆತ್ತಲಾಗಿದ್ದು ಸಾಂಚಿಯ ಶಿಲ್ಪಗಳ ಜೊತೆಗೆ ತಾಳೆಯಾಗುವಂತಿದೆ.

ಇಲ್ಲಿ ಗಮನಿಸಬೇಕಾಗಿರುವ ಇನ್ನೊಂದು ಪ್ರಮುಖ ವಿಚಾರವೆಂದರೆ, ಸಾಂಚಿಯೇ ಇರಲಿ, ಅಜಂತಾವೇ ಇರಲಿ, ಇಲ್ಲಿ ರಚನೆಯಾಗಿರುವುದು ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳು. ಇಲ್ಲಿನ ಪ್ರಮುಖ ಶಿಲ್ಪಗಳು ಬುದ್ಧ ಮತ್ತು ಇತರ ಬೌದ್ಧ ಧರ್ಮೀಯ ಶಿಲ್ಪಗಳು. ವೈದಿಕ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳು ಆ ಕಾಲದಲ್ಲಿ ದೊಡ್ಡ ಮಟ್ಟದಲ್ಲಿ ನಿರ್ಮಾಣವಾಗಿಲ್ಲ. ಗುಪ್ತರ ಕಾಲದ ಶಿಲ್ಪಗಳು ಮಧ್ಯಮ ಗಾತ್ರದವುಗಳು, ಸ್ಥಾಪನಾಶಿಲ್ಪಗಳು. ಬಿಡುಗಲ್ಲಿನಲ್ಲಿ ಮತ್ತು

೨೭. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ - ೨, ಸಂ-೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ - ೧೫೫



ಸುಡಾವೆಮಣ್ಣಿನ ಶಿಲ್ಪಗಳು. ಆದರೆ ಬಾದಾಮಿ ಮತ್ತು ಐಹೊಳೆಯಲ್ಲಿ ರಚಿತವಾದವು ಗಾತ್ರದಲ್ಲಿ ದೊಡ್ಡವು. ಹಿಂದೂ ದೇವತಾಶಿಲ್ಪಗಳು. ಬೌದ್ಧಧರ್ಮದಿಂದ ವೈದಿಕಧರ್ಮಕ್ಕೆ ಹೊರಳುವ ಸಂದರ್ಭದಲ್ಲಿ ಅವರು ರಚಿಸಬೇಕಾಗಿರುವ ಶಿಲ್ಪಗಳ ಕುರಿತು ಗೊಂದಲಗಳಿದ್ದಿರಬಹುದು. ಅಜಂತಾದಲ್ಲಿಯ ಗುಹಾಲಯಗಳು ದೊಡ್ಡ ಗಾತ್ರದವಾಗಿದ್ದು ಬೌದ್ಧಧರ್ಮಕ್ಕೆ ಸಂಬಂಧಿಸಿದ್ದವು. ಹಿಂದೂ ದೇವತೆಗಳಿಗಾಗಿ ಗುಹಾಲಯಗಳನ್ನು ರಚಿಸಿದ್ದು ಎಲ್ಲಿಯೂ ಪತ್ತೆಯಾಗಿಲ್ಲ. ಉದಯಗಿರಿಯ ಗುಹಾಲಯದಲ್ಲಿ ದಶಾವತಾರದ ಶಿಲ್ಪಗಳಿದ್ದರೂ ಅವುಗಳು ಜೈನಧರ್ಮದ ಗುಹಾಲಯಗಳಾಗಿದ್ದವು. ಇದರಿಂದಾಗಿ ಚಾಲುಕ್ಯ ಶಿಲ್ಪಿಗಳು ಅಜಂತಾದ ವಾಸ್ತುಶಿಲ್ಪ ಮತ್ತು ಹಿಂದಿನ ಶಿಲ್ಪಗಳಲ್ಲಿನ ಹಿಂದೂ ಶಿಲ್ಪಗಳ ಮಾದರಿಯನ್ನು ಬಳಸಿಕೊಂಡಿದ್ದಾರೆ ಅಥವಾ ಪ್ರೇರಣೆಯನ್ನು ಪಡೆದಿದ್ದಾರೆ. ಈ ಉದ್ದೇಶದಿಂದ ರಾವಣಫಡಿಯಲ್ಲಿ ಪ್ರಾಯೋಗಿಕವಾಗಿ ಶಿಲ್ಪಗಳ ಮತ್ತು ಗುಹಾಲಯದ ರಚನೆ ಮಾಡಿರಬಹುದು. ಇದರಿಂದ ಸ್ಫೂರ್ತಿಪಡೆದು ಬಾದಾಮಿಯಲ್ಲಿ ದೊಡ್ಡಮಟ್ಟದಲ್ಲಿ ತೊಡಗಿರಬಹುದು.

ಬಾದಾಮಿಗಿಂತ ಮೊದಲು ಶಿಲ್ಪಗಳು ಹಿಂದೂ ಗುಹಾಲಯಗಳಲ್ಲಿ ದೊಡ್ಡ ರೀತಿಯಲ್ಲಿ ರಚನೆಯಾಗಿಲ್ಲ. ಐಹೊಳೆಯ ರಾವಣಫಡಿ ಗುಹಾಲಯದಿಂದ ಆರಂಭವಾಯಿತೆಂದು ಈ ಮೊದಲೇ ಹೇಳಲಾಯಿತು. ಹಾಗಿದ್ದರೆ ಬಾದಾಮಿಯ ದೊಡ್ಡ ದೊಡ್ಡ ದೇವತಾ ಶಿಲ್ಪಗಳು ಯಾವ ಶಿಲ್ಪಗಳ ಪ್ರೇರಣೆಯಿಂದ ರಚಿತವಾದವು ಎಂದು ಹೇಳುವುದು ಕಷ್ಟ. ಆದರೆ ಶಿಲ್ಪಗಳ ಕೆತ್ತನೆಯಲ್ಲಿ ಬಳಸಲಾದ ಆಭರಣ, ವಸ್ತ್ರವಿನ್ಯಾಸ, ಇವುಗಳನ್ನು ಗಮನಿಸಿದರೆ ಅಜಂತಾದ ಚಿತ್ರಗಳು ಮತ್ತು ಗುಪ್ತರ ಶಿಲ್ಪಗಳು ಪ್ರೇರಣೆಯಾಗಿರಬಹುದು ಎಂದು ಹೇಳಬಹುದು.

ಬಾದಾಮಿಯ ಗುಹಾಲಯದ ಶಿಲ್ಪಗಳು ದೇಹರಚನೆ, ಅಂಗವಿನ್ಯಾಸ, ಭಂಗಿ ಮತ್ತು ಸಂಯೋಜನೆಗಳಲ್ಲಿ ಸ್ವಂತಿಕೆಯನ್ನು ಹೊಂದಿವೆ. ಹೆಚ್ಚಾಗಿ ಇಲ್ಲಿನ ಶಿಲ್ಪಗಳು ದೇಹರಚನೆಯ ವಿನ್ಯಾಸಕ್ಕೆ ಬಂದರೆ ಉತ್ತರಭಾರತದ ಶಿಲ್ಪಗಳಂತಿಲ್ಲ. ಹೆಚ್ಚು ನೈಜತೆ ಮತ್ತು ದೃಢವಾದ ದೇಹವನ್ನು ಹೊಂದಿರುವುದನ್ನು ಗಮನಿಸಬಹುದು. ಇಲ್ಲಿನ ಶಿಲ್ಪಗಳು ಹೆಚ್ಚು ಶಕ್ತಿಯುತವಾಗಿವೆ. ಸರಳವಾದ ದೇಹರಚನೆ ಹೊಂದಿದ್ದು ತಮ್ಮ ಕೆತ್ತನೆಯಲ್ಲಿ ಸ್ವಂತಿಕೆಯಿದೆ. ರಾವಣಫಡಿ ಗುಹಾಲಯದ ಶಿಲ್ಪಗಳಿಗೂ ಇಲ್ಲಿನ ಶಿಲ್ಪಗಳಿಗೂ ವ್ಯತ್ಯಾಸವಿದೆ. 'Badami caves more elemental, eartha-born figures emarge from dark, deep recesses, with powerful, massive bodies, heaviy impersonal features completely self-absorbed, ready to burst with dynamic energy. The simple, generalised modelling of the huge principal figures, which cover the entire relief panels from wall to wall, adds to their mejestic strength'.[೨೮] ದೊಡ್ಡ ಗಾತ್ರದ ದೇವತಾಶಿಲ್ಪಗಳ

೨೮. Tomory (Edt) : A History of Fine Arts in India and the West, P.No. 209



ರಚನೆಗೆ ತೋರಿದ ಮಹತ್ವವನ್ನೇ ಸಣ್ಣ ಶಿಲ್ಪಗಳಲ್ಲಿಯೂ ಗಣ ಶಿಲ್ಪಗಳ ರಚನೆಯಲ್ಲಿಯೂ ತೋರಿರುವುದು ಇವರ ಕಲಾನೈಪುಣ್ಯಕ್ಕೆ ಸಾಕ್ಷಿಯಾಗಿದೆ.

ಸಣ್ಣ ಶಿಲ್ಪಗಳ ಕೆತ್ತನೆಯಲ್ಲಿ, ಇವು ಪ್ರಮುಖ ದೇವತಾ ಶಿಲ್ಪಗಳಿಗೆ ಪೂರಕವಾಗಿರುವುದರ ಜೊತೆಗೆ ಸ್ಥಳಾವಕಾಶದ ಬಳಕೆಗೆ ಮಹತ್ವವನ್ನು ನೀಡಿ ಕೆತ್ತಲಾಗಿದ್ದರೂ ಇವು ಮುಖ್ಯ ಉದ್ದೇಶಿಕ ಶಿಲ್ಪಗಳಿಂದ ದೂರ ಸರಿಯುವುದಿಲ್ಲ. ಬೌದ್ಧ ಶಿಲ್ಪಗಳಲ್ಲಿ ಜಾತಕ ಕಥೆಗಳನ್ನು ತೋರಿಸಿದಂತೆ ಇಲ್ಲಿ ಹಿಂದೂ ಪುರಾಣ ಕಥೆಗಳ ಚಿತ್ರಣವಿದೆ –ಮೊದಲ ಗುಹಾಲಯದ ಪಾರ್ವತಿ ಕಲ್ಯಾಣದ ಶಿಲ್ಪವನ್ನಿಲ್ಲಿ ನೋಡಬಹುದು. ಇಲ್ಲಿನ ಶಿಲ್ಪದ ವಿವರಗಳು ಸಣ್ಣ ಪಟ್ಟಿಕೆಯಲ್ಲಿಯೂ ವಿವರವಾಗಿ ಮೂಡಿಬಂದಿರುವುದನ್ನು ನೋಡಬಹುದು.

ಇಲ್ಲಿ ಅವರ ಕಥಾಜ್ಞಾನ ಮತ್ತು ಕಲಾಕೌಶಲ್ಯ ವ್ಯಕ್ತವಾಗಿದೆ. ಅದೇ ರೀತಿ ಉಳಿದ ಗುಹಾಲಯಗಳಲ್ಲಿಯೂ ಕೃಷ್ಣನ ಬಾಲಲೀಲೆ, ರಾಮಾಯಣ, ಮಹಾಭಾರತದ ಚಿತ್ರಣಗಳು ವಿವರಣೆಯಿಂದ ಕೂಡಿದ್ದು ಕಥೆ ಹೇಳುವ ರೀತಿಯನ್ನು ತೋರಿಸುತ್ತವೆ. ಸಾಂಚಿಯ ಸ್ತೂಪದಲ್ಲಿಯೂ ಅಜಂತಾ ಹಾಗೂ ಅಮರಾವತಿಯ ಶಿಲ್ಪಗಳಲ್ಲಿ ಇವು ಕಂಡುಬರುತ್ತವೆ.

ಪ್ರಧಾನ ಶಿಲ್ಪಗಳಷ್ಟೇ ಇತರ ಶಿಲ್ಪಗಳೂ ಇಲ್ಲಿ ರೂಪ ಪಡೆದಿದ್ದು ಮುಖ್ಯ ಶಿಲ್ಪಗಳಿಗೆ ಪೂರಕವಾಗಿ ಕೆತ್ತಲಾಗಿರುವುದು ಗಮನಾರ್ಹ. ಇದಕ್ಕೆ ಹಿಂದಿನ ಬೌದ್ಧ ಶಿಲ್ಪಗಳೇ ಪ್ರೇರಣೆಯಾಗಿದ್ದರೆ ಆಶ್ಚರ್ಯವಿಲ್ಲ. ಇಲ್ಲಿ ಇವರು ತೋರಿಸಿರುವುದು ಸ್ವತಂತ್ರ ಶೈಲಿ. ಶಿಲ್ಪಗಳ ಕೆತ್ತನೆಯಲ್ಲಿ ಪೂರ್ವಜರ ಅನುಕರಣೆ ಇಲ್ಲ. ಬದಲಾಗಿ ತಮ್ಮ ಕಾಲಕ್ಕೆ, ಮತ್ತು ತಮ್ಮ ಶೈಲಿಗೆ ಒಪ್ಪುವಂತೆ ಕೆತ್ತಿದ್ದಾರೆ. ಇದರಿಂದಾಗಿ ನೈಜತೆ ವ್ಯಕ್ತವಾಗಿದೆ. ಗಣ ಶಿಲ್ಪಗಳು ತಮ್ಮ ಅಂಗಭಾಷೆ, ಲೌಕಿಕ ವಿಚಾರಗಳನ್ನು ಹೇಳಲು ಬಳಸಿಕೊಂಡ ಶಿಲ್ಪಶೈಲಿ–ಕುಬ್ಜಶಿಲ್ಪ– ಇದರಿಂದಾಗಿ ಪರಿಣಾಮಕಾರಿಯಾಗಿದೆ. ಅವರ ನಂತರದ ಕಾಲದಲ್ಲಿ ಅಂದರೆ ಏಳು ಮತ್ತು ಎಂಟನೆಯ ಶತಮಾನದಲ್ಲಿ ರಚಿಸಲಾದ ರಾಚನಿಕ ದೇವಾಲಯಗಳ –ಐಹೊಳೆ ಮತ್ತು ಪಟ್ಟದಕಲ್ಲಿನ ಶಿಲ್ಪಗಳ ಜೊತೆಗೆ ಹೋಲಿಸಿದರೆ ಇಲ್ಲಿ ಕಾಣಿಸುವುದು ಸ್ವಂತ ಶೈಲಿಯ ಶಿಲ್ಪ ರಚನೆಯೇ. ಬಹುಶಃ ಒಂದೇ ಕಲಾಶಾಲೆಯ ಪಳಗಿದ ಕೈಗಳು ಇಲ್ಲಿ ಕೆಲಸ ಮಾಡಿವೆ. ಜೈನ ಗುಹಾಲಯದ ಶಿಲ್ಪಗಳ ಕೆತ್ತನೆಯಲ್ಲಿಯೂ ಇದನ್ನು ಗಮನಿಸಬಹುದು. ಶಿಲ್ಪದ ಕೆತ್ತನೆಯ ರೀತಿಯಲ್ಲಿಯಾಗಲೀ ದೇಹ ರಚನೆ ಅಥವಾ ಮೈವಳಿಕೆಗಳ ಪ್ರದರ್ಶನದಲ್ಲಿಯಾಗಲೀ ಎಲ್ಲಿಯೂ ವಿಭಿನ್ನತೆ ಇಲ್ಲ. ಶಿಲ್ಪಶಾಸ್ತ್ರದ ಆಧಾರದ ದೇಹರಚನೆ ಎಲ್ಲೆಡೆ ವ್ಯಕ್ತವಾಗಿದೆ. ಐಹೊಳೆಯ ಶಿಲ್ಪಗಳು ಬಾದಾಮಿಯ ರಚನೆಗಳಿಗಿಂತ ಭಿನ್ನವಾಗಿವೆ. ಇಲ್ಲಿ ಪ್ರತಿಯೊಂದು ದೇವಾಲಯದಲ್ಲಿಯೂ ಎರಡು–ಮೂರು ವಿಭಿನ್ನ ಶೈಲಿಗಳ ಪ್ರಯೋಗವಾಗಿರುವುದು ಕಂಡುಬರುತ್ತದೆ. ಐಹೊಳೆಯ ಲಾಡ್‌ಖಾನ್ ಮತ್ತು ರಾವಣ ಫಡಿಯ ರಚನೆಗಳನ್ನು ಹೊರತುಪಡಿಸಿ ನೋಡಿದಾಗ– ಶಿಲ್ಪಗಳ ರಚನೆಯಲ್ಲಿ, ವಿನ್ಯಾಸ ಮತ್ತು ಸಂಯೋಜನೆಯಲ್ಲಿ ವೈವಿಧ್ಯ ಇರುವುದು ಕಂಡುಬರುತ್ತದೆ.





'ಐಹೊಳೆಯ ದುರ್ಗಾ ಗುಡಿಯೊಂದರಲ್ಲಿಯೇ ಮೂರು ವಿಭಿನ್ನ ಶೈಲಿಗಳ ಶಿಲ್ಪಗಳನ್ನು ನಾವು ಕಾಣಬಹುದು'.[೨೯] ಲಾಡ್‌ಖಾನ್ ದೇವಾಲಯ ಶಿಲ್ಪಗಳಲ್ಲಿಯೂ ಪ್ರಯೋಗ ನಡೆದಿರುವುದು ಕಂಡುಬರುತ್ತದೆಯಾದರೂ ಇದು ವಸ್ತುವಿನ ದೃಷ್ಟಿಯಿಂದ. ಆದರೆ ದುರ್ಗಾ ಗುಡಿಯ ಶಿಲ್ಪಗಳಲ್ಲಿ ವಿವಿಧ ಶೈಲಿಗಳು ಕಂಡುಬರುತ್ತವೆ. ಇಲ್ಲಿನ ದಂಪತಿ ಶಿಲ್ಪಗಳು ಮತ್ತು ಮಿಥುನ ಶಿಲ್ಪಗಳ ಕೆತ್ತನೆಯಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು. ಕೆಲವು ಶಿಲ್ಪಗಳು ಸೌಂದರ್ಯದಲ್ಲಿ ಮತ್ತು ದೇಹರಚನೆಯ ರೀತಿಯಲ್ಲಿ ಪಕ್ವತೆಯನ್ನು ಹೊಂದಿಲ್ಲದಿರುವುದು ಗಮನಾರ್ಹ. ಇಲ್ಲಿನ ಶಿಲ್ಪಿಗಳಿಗೆ ಅಮರಾವತಿ ಶಿಲ್ಪಗಳು ಪ್ರಭಾವ ಬೀರಿರಬಹುದು ಎಂದು ನಂಬಬಹುದು.

ಐಹೊಳೆಯ ದೇವಾಲಯಗಳ ನಿರ್ಮಾಣ ಸಂದರ್ಭದಲ್ಲಿ ಎರಡು ವಿಭಿನ್ನ ಶೈಲಿಗಳ ಪ್ರಯೋಗಗಳು ನಡೆದಿರುವಂತೆಯೇ ಶಿಲ್ಪಗಳಲ್ಲಿಯೂ ಅವುಗಳು ಪ್ರತಿಫಲಿಸಿರಬಹುದು. 'An artistic effusion swept over the Deccan in the seventh and eighth centuries, with experimental structural temples and sculptures where in two different streams began to mingle. The carvings on the structural temples at Aihole differ very much from the contemporary rock-cut sculptures at Badami. This new stream, with tall, slender figures precisely modelled, may be traced to the Krishna-Godavari basin near Amaravati which the Chalukyas had conquered. But they retain the strangth of the Badami rock-cut images. Gradually the sculptures bacame more and more refined and varied.[೩೦]' ಶಿಲ್ಪಕಲೆಯ ಪ್ರಯೋಗಗಳು ಬಹುಶಃ ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ನಡೆದಷ್ಟು ಬಹುಶಃ ಇನ್ನೆಲ್ಲಿಯೂ ನಡೆದಿರಲಾರವು.

ಒಂದೇ ದೇವಾಲಯದಲ್ಲಿ ಹಲವಾರು ಪ್ರಯೋಗಗಳು ಇಲ್ಲಿ ಕಾಣಬರುವುದು ವಿಶೇಷ. ಐಹೊಳೆಯ ದೇವಾಲಯಗಳ ಭಿತ್ತಿಶಿಲ್ಪಗಳು ವಿಭಿನ್ನತೆಯನ್ನು ಹೊಂದಿರುವುದನ್ನು ಗಮನಿಸಬಹುದು. ಇಲ್ಲಿನ ದುರ್ಗಾಗುಡಿಯಲ್ಲಿನ ಶಿಲ್ಪಗಳ ಜೊತೆಗೆ ಕೊಂತಿಗುಡಿಯ ಭಿತ್ತಿ ಶಿಲ್ಪವನ್ನು ತುಲನೆ ಮಾಡಿದಾಗ ಇದು ಬೇರಾವುದೋ ಶೈಲಿಯೆಂದು ಕಂಡುಬರುತ್ತದೆ. ಮೊದಲಿನ ಗುಡಿಯ ಶಿಲ್ಪಕ್ಕೂ ಇದಕ್ಕೂ ಯಾವುದೇ ಸಾಮ್ಯವಿಲ್ಲ.

ವಸ್ತು ಅದೇ ಆಗಿದ್ದರೂ ಎರಡೂ ಸರಿಸುಮಾರು ಸಮಕಾಲೀನ ಶಿಲ್ಪಗಳಾಗಿದ್ದರೂ ವ್ಯತ್ಯಾಸವು ಸ್ಪಷ್ಟವಾಗಿದೆ. ಬಹುಶಃ ಐಹೊಳೆಯ ದುರ್ಗಾದೇವಾಲಯದ ಶಿಲ್ಪಗಳು ಮುಂದೆ ಮಧ್ಯಪ್ರದೇಶದ ಚಂದೇಲ ರಾಜವಂಶದ ಕಾಲದ ಖಜುರಾಹೋ ದೇವಾಲಯಗಳ ಮಿಥುನ

೨೯. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೧೫೮

೩೦. Tomory (Edt) : A History of Fine Arts in India and the West, P.No. 209

ಶಿಲ್ಪಗಳ ಕೆತ್ತನೆಗೆ ಪ್ರೇರಣೆಯಾಗಿರಬಹುದೆನ್ನಿಸುತ್ತದೆ. ಇಲ್ಲಿನ ಮಧ್ಯಮಗಾತ್ರದ ವಿವಿಧ ಭಂಗಿಯ ಪ್ರಣಯ ಶಿಲ್ಪಗಳು ವಿಶಿಷ್ಟ ಪ್ರಯೋಗಕ್ಕೆ ಸಾಕ್ಷಿಯಾಗಿವೆ.

ಇಲ್ಲಿ ಗಾರ್ದಭಮುಖಿ (ಕತ್ತೆ) ಅಥವಾ ಇನ್ನಿತರ ರೂಪಗಳ ಕೆತ್ತನೆಯಿದ್ದು, ಇಂತಹ ಶಿಲ್ಪಗಳು ಲಾಡ್‌ಖಾನ್ ಗುಡಿಯಲ್ಲಿ ಕಂಡುಬಂದರೂ ಇಲ್ಲಿ ಹೆಚ್ಚು ಸ್ಪಷ್ಟ ರೂಪುತಳೆದಿವೆ. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಇಲ್ಲಿನ ದೇವಾಲಯಗಳ ಕಂಬಗಳಲ್ಲಿ ಅಲಂಕರಣ ಕೆತ್ತನೆಗಳು ಹಿನ್ನೆಲೆಗೆ ಸರಿದು ಹೆಚ್ಚಿನ ಸ್ಥಳಾವಕಾಶವನ್ನು ಖಾಲಿಯಾಗಿಡಲು ಪ್ರಯತ್ನಿಸಿದ್ದಾರೆ. ಕೆಲವೆಡೆ ಅಲಂಕಾರಿಕ ವಿನ್ಯಾಸಗಳಿದ್ದರೂ ಅವು ಹಿಂದಿನ ಶಿಲ್ಪಗಳಲ್ಲಿಯಂತೆ ವೈವಿಧ್ಯ ಪೂರ್ಣವಾಗಿಲ್ಲ.

ಐಹೊಳೆಯ ದೇವಾಲಯಗಳ ನಿರ್ಮಾಣದ ಸಂದರ್ಭದಲ್ಲಿ ಕಂಡುಬರುವ ಇನ್ನೊಂದು ಪ್ರಮುಖ ಅಂಶವೆಂದರೆ ಜಾಲಂಧ್ರಗಳ ರಚನೆ. ದೇವಾಲಯದ ಒಳಭಾಗದಲ್ಲಿ ಗಾಳಿ–ಬೆಳಕುಗಳಿಗೆ ಅವಕಾಶ ಒದಗಿಸುವ ನಿಟ್ಟಿನಲ್ಲಿ ಕೆತ್ತಲಾಗಿರುವ ಈ ರಚನೆಗಳು ಕಲಾಪೂರ್ಣವಾಗಿದ್ದು ಜ್ಯಾಮಿತಿಕ ವಿನ್ಯಾಸಗಳಿಂದ ಕೂಡಿವೆ. ಇದು ವಾಸ್ತು ಮತ್ತು ಶಿಲ್ಪಕಲೆಗೆ ಚಾಲುಕ್ಯರು ನೀಡಿರುವ ಪ್ರಮುಖ ಕೊಡುಗೆಯೂ ಹೌದು.

'Scroll work is used more aesthetically in the perforated stone windows. Thus the energy ready to burst out of the Badami sculptures was channeled into a novel artistic style which opened new vistas to Indian art.[೩೧]' ದುರ್ಗಾದೇವಾಲಯದ ಶಿಲ್ಪ ಮತ್ತು ವಾಸ್ತುಶಿಲ್ಪಗಳು ಒಂದಕ್ಕೊಂದು ಬೆರೆತಿದ್ದು ಇದು ಒಂದು ಅದ್ಭುತವಾದ ಪ್ರಯೋಗವೇ ಆಗಿದೆ. ಇಲ್ಲಿನ ದೇವಾಲಯಗಳ ರಚನೆಯ ಕಾಲಕ್ಕೆ ಬಹುಶಃ ಚಾಲುಕ್ಯರು ಹಿಂದಿನ ಪ್ರಭಾವಗಳನ್ನು ಬದಿಗೆ ಸರಿಸಿ ಸ್ವತಂತ್ರವಾದ ದೇಸೀಯವಾದ ಶೈಲಿಯೊಂದರ ಹುಡುಕಾಟದಲ್ಲಿ ಯಶಸ್ವಿಯಾದರೆನ್ನಬಹುದು.

ಇಲ್ಲಿ ರಚಿಸಲಾದ ಮಹಿಷಾಸುರಮರ್ದಿನಿ, ನರಸಿಂಹ, ವರಾಹಾವಾತಾರದ ಶಿಲ್ಪಗಳು, ಅರ್ಧನಾರೀಶ್ವರ ಶಿಲ್ಪಗಳು ಕಲಾಪೂರ್ಣವಾಗಿದ್ದು ಚೈತನ್ಯದಿಂದ ಕೂಡಿವೆ. ಬಾದಾಮಿಯ ಗುಹಾಲಯಗಳಿಗಿಂತ ಇಲ್ಲಿನ ಶಿಲ್ಪಗಳು ವೈವಿಧ್ಯವನ್ನು ಹೊಂದಿದ್ದು ವಿಭಿನ್ನ ಭಾವ ಮತ್ತು ಸ್ವಂತಿಕೆಯಿಂದ ಕೂಡಿರುವುದು ಕಂಡುಬರುತ್ತದೆ. ಐಹೊಳೆಯ ಶಿಲ್ಪಗಳ ವಿಚಾರದಲ್ಲಿ ಹೇಳಬಹುದಾದ ಇನ್ನೊಂದು ವಿಚಾರವೆಂದರೆ, ಬಾದಾಮಿಯ ಕಾಲಕ್ಕೆ ಶಿಲ್ಪಗಳ ರಚನೆಯಲ್ಲಿ ಇದ್ದಂತಹ ದೇಹರಚನೆ, ಮುಖಗಳ ಕೆತ್ತನೆ, ಆಭರಣಗಳ ರಚನೆಯಲ್ಲಿ ಹಿಂದಿನ ಶಿಲ್ಪಿಗಳ ಪ್ರಭಾವ ಕಾಣಸಿಗುತ್ತದೆ. ಐಹೊಳೆಯ ಶಿಲ್ಪಗಳಲ್ಲಿ ಮುಖವು ಅಂಡಾಕಾರವನ್ನು ಹೊಂದುತ್ತ, ದೇಹ ಮತ್ತು ಮುಖಗಳ ರಚನೆಯಲ್ಲಿ ಸಮತೋಲನವನ್ನು ಸಾಧಿಸುತ್ತ, ಗುಪ್ತರ ಕಾಲದ

೩೧. Tomory (Edt) : A History of Fine Arts in India and the West, P.No. 209



ಶೈಲಿಯಿಂದ ಸಂಪೂರ್ಣ ಹೊರಬಂದು ತಮ್ಮದೇ ಛಾಪನ್ನು ಮೂಡಿಸಿರುವುದು. ಇಲ್ಲಿನ ಶಿಲ್ಪಗಳ ರಚನೆಯಲ್ಲಿ ಸಂಪೂರ್ಣ ಸ್ವಂತಿಕೆಯಿದೆ. ಲಾಲಿತ್ಯವಿದೆ, ಅಲಂಕರಣದಲ್ಲಿ ಹಿತಮಿತವಾದ ಕೆತ್ತನೆಯಿದೆ. ದೇಹದ ಉಬ್ಬುತಗ್ಗುಗಳ ಸ್ಪಷ್ಟ ಕಲ್ಪನೆಯು ಕಾಣಿಸುತ್ತದೆ. 'The figures reveal the typical Chalukyan face-oval, with short pointed nose and full smiling lip.'[೩೨] ಮುಖದಲ್ಲಿನ ನಸುನಗು ಶಿಲ್ಪಕ್ಕೆ ಭಾವಪೂರ್ಣತೆಯನ್ನು ನೀಡುತ್ತದೆ. ಇದರಿಂದಾಗಿ ಇಲ್ಲಿನ ಶಿಲ್ಪಗಳು ದೇಸೀಯವಾಗಿ ಬಿಡುತ್ತವೆ.

ಪಟ್ಟದಕಲ್ಲು ಚಾಲುಕ್ಯರ ಇನ್ನೊಂದು ನೆಲೆ. ಇಲ್ಲಿ ಚಾಲುಕ್ಯರ ಪಟ್ಟಾಭಿಷೇಕ ನಡೆಯುತ್ತಿದ್ದಿತು. ಇಲ್ಲಿ ಹಲವಾರು ದೇವಾಲಯಗಳು ನಿರ್ಮಾಣವಾಗಿದ್ದು ವಿಭಿನ್ನ ಶೈಲಿಗಳನ್ನು ಹೊಂದಿವೆ. ಆದರೆ ಇಲ್ಲಿ ದೇಗುಲಗಳ ನಿರ್ಮಾಣ ಹೆಚ್ಚಾಗಿ ತೊಡಗಿದ್ದು ಚಾಲುಕ್ಯರ ಎರಡನೆಯ ಹಂತದಲ್ಲಿ. ಅಂದರೆ ಚಾಲುಕ್ಯರು ಪಲ್ಲವರಿಗೆ ಸೋತು, ಕೆಲವರ್ಷಗಳ ನಂತರ ಮತ್ತೆ ಪಲ್ಲವರನ್ನು ಸೋಲಿಸಿ ಅವರಿಂದ ರಾಜ್ಯವನು ಕಿತ್ತುಕೊಂಡ ಕುರುಹಾಗಿ ಇಲ್ಲಿ ದೇವಾಲಯಗಳ ನಿರ್ಮಾಣ ಮತ್ತು ಪಟ್ಟಾಭಿಷೇಕ ಮಹೋತ್ಸವವನ್ನು ಮಾಡಲು ಪ್ರಾರಂಭಿಸಿದಾಗಿನಿಂದ. ಅದರ ಜೊತೆಗೆ ಇಲ್ಲಿ ಶೈವ ದೇವಾಲಯಗಳು ಹೆಚ್ಚಾಗಿ ರಚನೆಯಾಗಿವೆ.

ಇದಕ್ಕೆ ಕಾರಣ ಚಾಲುಕ್ಯರ ರಾಜ ವಿಕ್ರಮಾದಿತ್ಯನು ಸುದರ್ಶನಾಚಾರ್ಯರಿಂದ ಶಿವಮಂಡಲ ದೀಕ್ಷೆಯನ್ನು ಪಡೆದುದು. ಇದರಿಂದ ಮುಂದಿನ ಚಾಲುಕ್ಯರು ಶೈವ ಮತಾವಲಂಬಿಗಳಾಗಿ ಶೈವ ಧರ್ಮಕ್ಕೆ ಹೆಚ್ಚು ಒತ್ತು ಕೊಟ್ಟು, ದೇವಾಲಯಗಳ ರಚನೆಯನ್ನು ಮಾಡಿದರು. ಹೀಗಾಗಿ ಮಹಾಕೂಟ ಮತ್ತು ಪಟ್ಟದಕಲ್ಲುಗಳು ಶೈವ ಕೇಂದ್ರಗಳಾಗಿ ಬೆಳೆದವು'.[೩೩] ಇಲ್ಲಿನ ರಚನೆಗಳ ಕಾಲಕ್ಕೆ ಪಲ್ಲವರ ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳು ಇವರ ಮೇಲೆ ಪ್ರಭಾವ ಬೀರಿದ್ದನ್ನು ಗಮನಿಸಬಹುದು.

ಐಹೊಳೆ ಮತ್ತು ಪಟ್ಟದಕಲ್ಲುಗಳ ದೇವಾಲಯಗಳು ಹೆಚ್ಚುಕಡಿಮೆ ಒಂದೇ ಕಾಲಮಾನಕ್ಕೆ ಸೇರಿದರೂ ಎರಡೂ ಕಡೆಯ ದೇವಾಲಯಗಳ ಶಿಲ್ಪಗಳಲ್ಲಿ ವೈವಿಧ್ಯವಿರುವುದನ್ನು ಗಮನಿಸಬಹುದು. ಈ ಸಮಯಕ್ಕಾಗಲೇ ಚಾಲುಕ್ಯರು ಗುಪ್ತರ ಶೈಲಿಯಿಂದ ಸಂಪೂರ್ಣ ಹೊರಬಂದಿದ್ದರೂ ಪಲ್ಲವ ಶಿಲ್ಪಗಳು ಇವರ ಮೇಲೆ ವಿಶೇಷ ಪ್ರಭಾವ ಬೀರಿದವು. ಪಟ್ಟದಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ಇದಕ್ಕೆ ಸಾಕ್ಷಿಯಾಗಿವೆ. ಪಲ್ಲವರ ಕಾಲದ ಏಕಶಿಲಾ ಕೆತ್ತನೆಯ ದೇಗುಲಗಳು (ಗುಡಿಗಳು) ಕೈಲಾಸನಾಥ ದೇವಾಲಯದ ಕೆತ್ತನೆಗಳು ಇವರ ಮೇಲೆ ಪರಿಣಾಮವನ್ನುಂಟು ಮಾಡಿದವು. ಆದರೂ ಶಿಲ್ಪಿಗಳು ತಮ್ಮತನವನ್ನು ಉಳಿಸಿಕೊಂಡೇ ಪಲ್ಲವರ ಉತ್ತಮಾಂಶಗಳನ್ನು ಬಳಸಿಕೊಂಡು ಕೃತಿರಚನೆ ಮಾಡಿರುವುದು ಗಮನಾರ್ಹ.

---

೩೨. Tomory (Edt) : A History of Fine Arts in India and the West, P.No. 209

೩೩. ಡಾ. ಎಚ್. ಎಸ್. ಗೋಪಾಲರಾವ್ (ಸಂ.) : ಬಾದಾಮಿ ಚಲುಕ್ಯ ಶಿಲ್ಪಕಲೆ, ಪುಟ – ೧೪



'The temples of Pattadakal, especially the Virupaksha and Mallikarjuna, not only show the highest development of Early Chalukyan art but they are also the most richly adorned monuments of their time in India. Southern influence appears in these temples as well as in the Samgameshwara temple, built half a century before the Virupaksha and Mallikarjuna temples.'[೩೪] ಇಲ್ಲಿನ ಶಿಲ್ಪಗಳು ಐಹೊಳೆಯ ದೇವಾಲಯ ಶಿಲ್ಪಗಳಿಗಿಂತ ಭಿನ್ನವಾಗಿದ್ದು ಗಮನ ಸೆಳೆಯುತ್ತವೆ.

ಕಾಶೀವಿಶ್ವೇಶ್ವರ ದೇವಾಲಯದ ಶಿಲ್ಪಗಳು ಮತ್ತು ಮಲ್ಲಿಕಾರ್ಜುನ ದೇವಾಲಯದ ಶಿಲ್ಪಗಳು ವಿಭಿನ್ನ ರೀತಿಯಲ್ಲಿರುವುದನ್ನು ಕೂಡಾ ಇಲ್ಲಿ ಗಮನಿಸಬಹುದು. ಮಲ್ಲಿಕಾರ್ಜುನ ದೇವಾಲಯದ ಶಿಲ್ಪಗಳು ತ್ರಿಮಾನಕ್ಕೆ ಹತ್ತಿರವಾಗಿದ್ದರೆ ವಿಶ್ವೇಶ್ವರ ದೇಗುಲದ ಶಿಲ್ಪಗಳು ಚಪ್ಪಟೆಯಾಗಿದ್ದು ಕಲಾತ್ಮಕ ದೃಷ್ಟಿಯಿಂದ ಪ್ರಭಾವಶಾಲಿಯಾಗಿಲ್ಲ. ಮಲ್ಲಿಕಾರ್ಜುನ ದೇವಾಲಯದ ಶಿಲ್ಪಗಳು ನಾಜೂಕುತನದಿಂದ ಕೂಡಿದ್ದು, ದೇಹರಚನೆಯಲ್ಲಿ ಸ್ವಂತಿಕೆಯಿದ್ದು ತಲೆಕೂದಲ ರಚನೆ ಮತ್ತು ಕಿರೀಟ ಹಾಗೂ ದೇಹದ ಕೆತ್ತನೆಯಲ್ಲಿ ಪಲ್ಲವರ ಪ್ರಭಾವವನ್ನು ಕಾಣಬಹುದು.

ದೇಹದ ಭಂಗಿ ಮತ್ತು ಬಟ್ಟೆಯ ರಚನೆಯಲ್ಲಿ ಇದನ್ನು ಗುರುತಿಸಬಹುದು. ಇಲ್ಲಿನ ಶಿಲ್ಪಗಳ ಕೆತ್ತನೆಯಲ್ಲಿ ಸೂಕ್ಷ್ಮತೆಯನ್ನು ಕಾಣಬಹುದು. ಮಲ್ಲಿಕಾರ್ಜುನ ದೇವಾಲಯದ ರಚನೆಯೇ ಸುಂದರವಾಗಿದ್ದು ಒಂದು ಪರಿಪೂರ್ಣ ಶಿಲ್ಪಕಲಾಕೃತಿಯಂತಿದೆ. ರಾಮಾಯಣ, ಮಹಾಭಾರತ ಶಿಲ್ಪಕೃತಿಗಳಲ್ಲದೆ ಮಿಥುನ ಶಿಲ್ಪಗಳು ಮತ್ತು ಸುಂದರವಾದ ಸಾಲಭಂಜಿಕೆಗಳು ಶಿಲ್ಪಗಳಲ್ಲಿನ ಪರಿಪೂರ್ಣ ತಂತ್ರಜ್ಞತೆಯನ್ನು ಸೂಚಿಸುತ್ತವೆ. ಇದಲ್ಲದೆ ಇಲ್ಲಿನ ಜಾಲಂಧ್ರಗಳು ಮತ್ತು ಅಂತರಾಳ ಕಲಾತ್ಮಕತೆಯ ನಿದರ್ಶನ. ಇಲ್ಲಿ ಚಾಲುಕ್ಯ ಶಿಲ್ಪಿಗಳು ಹಿಂದಿನ ಸಂಪ್ರದಾಯಗಳಿಂದ ಹೊರಬಂದು ತಮ್ಮತನವನ್ನು ತೋರಿಸಿರುವುದು ಕಂಡುಬರುತ್ತದೆ.

'The exquisitely carved windows and interior sculptures of the Mallikaarjuna temple reveal stylistic progress over the Virupaksha temple.The dwarapals on the porch, the reliefs on the columns, the carved beams and ceiling panels show the versatility, energy and the highest achievement of early Western Chalukyan sculpture'.[೩೫] ಆದರೆ ಇಲ್ಲಿಗೆ ಸಮೀಪದ ಪಾಪನಾಥ ದೇವಾಲಯವು ಇದೇ ಕಾಲದ ರಚನೆಯಾಗಿದ್ದರೂ ಉತ್ತರ ಭಾರತೀಯ ಪದ್ಧತಿಯದಾಗಿದೆ. ಆದರೆ ಶಿಲ್ಪಗಳ ರಚನೆಯಲ್ಲಿ ಸ್ವಂತಿಕೆಯಿದೆ.

---

೩೪. Tomory (Edt) : A History of Fine Arts in India and the West, P.No. 210

೩೫. Tomory (Edt) : A History of Fine Arts in India and the West, P.No. 209



ಇಲ್ಲಿನ ರಾಮಾಯಣದ ಕೆತ್ತನೆಗಳಲ್ಲಿ, ತಾಂಡವ ನೃತ್ಯದ ಶಿವನ ಶಿಲ್ಪದಲ್ಲಿ ಚಾಲುಕ್ಯರ ಶೈಲಿಯಿದೆ. ಬಟ್ಟೆಗಳ ಮತ್ತು ತಲೆಯ ಕೂದಲ ರಚನೆಯಲ್ಲಿ ವೈವಿಧ್ಯವಿದೆ. ಮಿಥುನ ಶಿಲ್ಪಗಳು ಸುಂದರವಾಗಿದ್ದು ಸರಳತೆಯಿಂದ ಕೂಡಿವೆ. ಆದರೆ ಶಿಲ್ಪಗಳು ದೇಹರಚನೆಯ ದೃಷ್ಟಿಯಿಂದ ಹೆಚ್ಚು ಎಳೆಯಲ್ಪಟ್ಟಂತಿವೆ(elongated figures). ಇದು ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ದೇವಾಲಯಗಳಲ್ಲಿನ ಶಿಲ್ಪಗಳಿಗಿಂತ ಭಿನ್ನವಾಗಿದೆ. ಮಲ್ಲಿಕಾರ್ಜುನ ದೇವಾಲಯದ ಶಿಲ್ಪಗಳಲ್ಲಿ ಎರಡು ಮೂರು ವಿಭಿನ್ನ ಶೈಲಿಗಳನ್ನು ಕಾಣಬಹುದಾಗಿದೆ. ಕೆಲವು ಶಿಲ್ಪಗಳು ಚಪ್ಪಟೆಯಾಗಿದ್ದು ಕೆತ್ತನೆಯಲ್ಲಿ ಕಲಾತ್ಮಕತೆಯಿಲ್ಲ, ಮಾತ್ರವಲ್ಲದೆ ಶಿಲ್ಪವು ಹೆಚ್ಚು ಎಳೆದಂತಿದ್ದು ಉಳಿದ ಶಿಲ್ಪಗಳಿಗೆ ತಾಳೆಯಾಗುವುದಿಲ್ಲ. ವಿರೂಪಾಕ್ಷ ದೇವಾಲಯದ ಶಿಲ್ಪಗಳು ಹೆಚ್ಚು ಪಕ್ವತೆಯಿಂದ ಕೂಡಿದಂತೆ ಕಂಡುಬರುತ್ತವೆ

ಪಾಪನಾಥ ದೇವಾಲಯದ ಶಿಲ್ಪಗಳು ಮತ್ತು ವಿರೂಪಾಕ್ಷ ದೇವಾಲಯದ ಶಿಲ್ಪಗಳ ಮಧ್ಯೆ ಭಿನ್ನತೆ ಕಾಣಿಸುತ್ತದೆ. ಇವೆರಡರ ಕಾಲಮಾನ ಮತ್ತು ವಿಭಿನ್ನ ಕಲಾಶಾಲೆಯ ಶಿಲ್ಪಿಗಳ ಕೈಯಲ್ಲಿ ಇವು ನಿರ್ಮಾಣಗೊಂಡಿರುವ ಸಾಧ್ಯತೆಯಿದೆ. ವಿರೂಪಾಕ್ಷ ದೇವಾಲಯದ ಕುಬೇರನ ಶಿಲ್ಪವನ್ನು ಐಹೊಳೆಯಲ್ಲಿ ಚಾಲುಕ್ಯರಿಗಿಂತಲೂ ಮೊದಲ ರಚನೆಯಾದ ಕುಬೇರನ ಶಿಲ್ಪದ ಜೊತೆ ತುಲನೆ ಮಾಡಬಹುದು. ಎರಡೂ ಶಿಲ್ಪಗಳ ರಚನೆಯಲ್ಲಿ ವ್ಯತ್ಯಾಸವು ಕಂಡುಬರುತ್ತದೆ. ಶಿಲ್ಪದ ಅಂಗಪ್ರಮಾಣ, ತಾಳ ಸಂಯೋಜನೆಗಳಲ್ಲಿ ಬೆಳವಣಿಗೆಗಳಾಗಿರುವುದನ್ನು ಗುರುತಿಸಬಹುದು.

ಚಾಲುಕ್ಯರ ಶಿಲ್ಪಗಳ ಒಂದು ಪ್ರಮುಖ ವಿಶೇಷಣವೆಂದರೆ ಪ್ರತಿ ಶಿಲ್ಪವೂ ಇನ್ನೊಂದು ಶಿಲ್ಪಕ್ಕಿಂತ ಭಿನ್ನವಾಗಿರುವುದು ವೈಶಿಷ್ಟ್ಯಪೂರ್ಣವಾಗಿ ಕಂಡುಬರುತ್ತದೆ. ಮುಖಭಾವದ ಕೆತ್ತನೆಯಲ್ಲಾಗಲೀ, ದೇಹದ ಬಾಗುಗಳಲ್ಲಾಗಲೀ, ಉಡುಗೆ-ತೊಡುಗೆಗಳಲ್ಲಾಗಲೀ ಅಥವಾ ಕೇಶವಿನ್ಯಾಸದಲ್ಲಾಗಲೀ ಇದನ್ನು ಗುರುತಿಸಬಹುದು.

ಯಾವುದೇ ಶಿಲ್ಪದ ವಸ್ತುವನ್ನು ನೋಡಿದರೂ ಆ ಶಿಲ್ಪಗಳು ಒಂದಕ್ಕಿಂತ ಹೆಚ್ಚು ಬಾರಿ ಮರುಕಳಿಸಿವೆ. ಆದರೆ ಪ್ರತಿ ಶಿಲ್ಪವನ್ನೂ ಸೂಕ್ಷ್ಮವಾಗಿ ಗಮನಿಸಿದಾಗ ಮೊದಲ ಶಿಲ್ಪವನ್ನು ಹೋಲದೆ ವಿಭಿನ್ನವಾಗಿರುತ್ತದೆ. ಉದಾಹರಣೆಗೆ ಹೇಳುವುದಾದರೆ ವಿಷ್ಣುವಿನ ವರಾಹ, ಮತ್ತು ತ್ರಿವಿಕ್ರಮ ಶಿಲ್ಪಗಳು ಎರಡು ಮತ್ತು ಮೂರನೆಯ ಗುಹೆಗಳೆರಡರಲ್ಲೂ ಇದೆ, ಐಹೊಳೆಯಲ್ಲಿಯೂ ಇದೆ, ಆದರೆ ರಚನೆ ಭಿನ್ನವಾಗಿದೆ, ಹರಿಹರ ಅಥವಾ ಅರ್ಧನಾರೀಶ್ವರ ಶಿಲ್ಪಗಳನ್ನು ನೋಡಿದರೂ ಇದು ಸ್ಪಷ್ಟ. ಇದಲ್ಲದೆ ಮಹಿಷಾಸುರಮರ್ದಿನಿಯ ಶಿಲ್ಪವನ್ನು ಇಲ್ಲಿ ಗಮನಿಸಬಹುದು.

ಬಾದಾಮಿಯ ಮೊದಲ ಗುಹಾಲಯದ ಮಹಿಷಾಸುರಮರ್ದಿನಿ, ಐಹೊಳೆಯ ರಾವಣಫಡಿ ಮಹಿಷಮರ್ದಿನಿ ಮತ್ತು ದುರ್ಗಾಗುಡಿಯ ಮಹಿಷಮರ್ದಿನಿ ಶಿಲ್ಪಗಳನ್ನು ತುಲನೆಮಾಡಿ ನೋಡಬಹುದು. ಈ ಮೂರೂ ಶಿಲ್ಪಗಳು ಪ್ರಮುಖ ಶಿಲ್ಪಗಳು, ಹಾಗೆಯೇ ಒಂದೇ ವಸ್ತುವಿನ ವಿಭಿನ್ನ ರಚನೆಗಳು. ಇವುಗಳನ್ನು ಗಮನಿಸಿದಾಗ ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಿಗಳ



ಕೌಶಲ್ಯವು ಮನದಟ್ಟಾಗುತ್ತದೆ. ಪ್ರತಿ ಶಿಲ್ಪದಲ್ಲಿಯೂ ತಮ್ಮ ಸ್ವಂತಿಕೆಯನ್ನು ತೋರಿಸುವುದು ಚಾಲುಕ್ಯ ಶಿಲ್ಪಿಗಳ ವೈಶಿಷ್ಟ್ಯವಾಗಿದೆ. 'ಶೈವ ಗುಹೆಯ ಶಿಲ್ಪಗಳ ಮುಖಲಕ್ಷಣಗಳು ಮತ್ತು ಎರಡನೆಯ ಗುಹಾಲಯದ ಶಿಲ್ಪಗಳ ಮುಖಲಕ್ಷಣಗಳು ಭಿನ್ನ ಭಿನ್ನವಾಗಿರುವುದನ್ನು ಗಮನಿಸಬೇಕು. ವಿಭಿನ್ನ ಶೈಲಿಗಳನ್ನು ಅಳವಡಿಸುವುದೇ ಚಾಲುಕ್ಯ ರೂವಾರಿಗಳ ಮತ್ತು ಸ್ಥಪತಿಗಳ ಗುಣವಿಶೇಷವೆಂಬುದನ್ನು ಮರೆಯಲಾಗದು'.[೩೬] ಎರಡನೆಯ ಮತ್ತು ಮೂರನೆಯ ಗುಹಾಲಯದ ಶಿಲ್ಪಗಳ ದೇಹರಚನೆ ಮತ್ತು ಮುಖಗಳ ಕೆತ್ತನೆ ವಿಭಿನ್ನವಾಗಿದೆ. ಇಲ್ಲಿನ ಶಿಲ್ಪಿಗಳು ಅಲಂಕರಣಕ್ಕೆ ಕಡಿಮೆ ಮಹತ್ವ ನೀಡಿ ದೇಹದ ಬಾಗುಬಳುಕುಗಳು, ಆಕಾರಗಳ ರಚನೆಗೆ ಪ್ರಾಮುಖ್ಯವನ್ನು ನೀಡಿದ್ದಾರೆ. ಇದಲ್ಲದೆ ಇಲ್ಲಿನ ಒಂದೇ ಗುಹಾಲಯದಲ್ಲಿ ಎರಡು-ಮೂರು ವಿಭಿನ್ನ ರೀತಿಯ ಕೆತ್ತನೆಗಳನ್ನು ಗಮನಿಸಬಹುದು. ಇದು ಶಿಲ್ಪಿಗಳ ಸ್ವಂತಿಕೆಯನ್ನು ವ್ಯಕ್ತಮಾಡುತ್ತದೆ.

ಆಭರಣ, ಉಡುಗೆ-ತೊಡುಗೆಗಳು ಮತ್ತು ಕೇಶಾಲಂಕಾರಗಳು

ಶಿಲ್ಪಗಳ ಅಧ್ಯಯನ ಮತ್ತು ಅವುಗಳ ಅಂಗವಾದ ಶಿಲ್ಪಗಳ ರಚನೆಯಲ್ಲಿ ಕಂಡುಬರುವ ವೈಶಿಷ್ಟ್ಯಗಳು, ರಚನಾವಿಧಾನ, ಉಡುಗೆತೊಡುಗೆ ಆಭರಣಗಳ ಕೆತ್ತನೆ ಇತ್ಯಾದಿ ವಿಚಾರಗಳ ಕುರಿತ ಮಾಹಿತಿಗಳು ಗಮನಸೆಳೆಯುತ್ತವೆ, ಕುತೂಹಲವನ್ನುಂಟುಮಾಡುತ್ತವೆ. ಶಿಲ್ಪಗಳ ಉಡುಗೆತೊಡುಗೆ ಮತ್ತು ಆಭರಣಗಳ ರಚನೆಯ ಅಧ್ಯಯನದಿಂದ ಸಾಮಾಜಿಕ ಜೀವನದ ಬೆಳವಣಿಗೆಗಳ ಕುರಿತಾದ ಮಾಹಿತಿ ಸಿಗುತ್ತದೆ. ಮೊಧಲಿನ ಮನುಷ್ಯನು ಪ್ರಕೃತಿಯ ಮಳೆ, ಚಳಿ, ಬಿಸಿಲುಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಪ್ರಾಣಿಯ ಚರ್ಮವನ್ನು ಅಥವಾ ಎಲೆಗಳನ್ನು ಕಟ್ಟಿಕೊಳ್ಳುತ್ತಿದ್ದನು. ಇದು ಬೆಳವಣಿಗೆಯಾಗಿ ಮನುಷ್ಯನ ಮಾನರಕ್ಷಣೆಯ ಸಾಧನವಾಗಿ ಬಳಕೆಯಾಗಲು ಪ್ರಾರಂಭವಾದುದು ಇತಿಹಾಸಕಾಲದಲ್ಲಿ. ಶಿಲಾಯುಗದಿಂದ ಪ್ರಾರಂಭವಾಗಿ ಇಂದಿನವರೆಗೆ ಮಾನವನ ಉಡುಗೆ-ತೊಡುಗೆಗಳ ಪರಿಜ್ಞಾನ ಬದಲಾಗಿದೆ. ಆದರೆ ಪ್ರಾಮುಖ್ಯ ಕಡಿಮೆಯಾಗಿಲ್ಲ.

ಭಾರತದ ಇತಿಹಾಸದ ಪ್ರಾರಂಭದ ದಿನಗಳ ಶಿಲ್ಪಗಳಲ್ಲಿ ಕಂಡುಬರುವ ಕೆತ್ತನೆಗೂ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಕಂಡುಬರುವ ಕೆತ್ತನೆಗೂ ಬಹಳ ವ್ಯತ್ಯಾಸವಾಗಿಲ್ಲವಾದರೂ ಕೆಲವೊಂದು ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಭಾರತೀಯ ಸಾಂಸ್ಕೃತಿಕ ಪರಂಪರೆಯ ಮೂಲಾಧಾರಗಳಲ್ಲಿ ಅನೇಕಸದೃಷ್ಟಾಂತಗಳು ನಮ್ಮ ವಸ್ತ್ರ ನೇಯುವ, ತಯಾರಿಸುವ, ವಿನ್ಯಾಸಗೊಳಿಸುವ ಪೋಷಾಕುಗಳ ಬಗ್ಗೆ ಸಾಕಷ್ಟು ಮಾಹಿತಿಗಳು ಕಾಲದಿಂದ ಕಾಲಕ್ಕೆ ದೊರೆಯುತ್ತವೆ. ನಮ್ಮ ಪೂರ್ವಜರಿಗೆ ಬಟ್ಟೆಯ ತಯಾರಿಕೆ, ಹೊಲಿದ ಪೋಷಾಕುಗಳ ಬಗ್ಗೆ

೩೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ - ೨೦೩



ಸಾಕಷ್ಟು ಪರಿಶ್ರಮ ಹಾಗೂ ಜ್ಞಾನ ಇತ್ತೆಂಬುದರ ಬಗ್ಗೆ ವೇದ ಮತ್ತು ನಂತರದ ಸಾಹಿತ್ಯಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ಭರತನ ಪ್ರಕಾರ ಪೋಷಾಕುಗಳನ್ನು ಮೂರು ವಿಧಗಳಲ್ಲಿ ನೇಯ್ದು ವಸ್ತ್ರಗಳಿಂದ ತಯಾರಿಸಲಾಗುತ್ತಿತ್ತು.[೩೭] ಪ್ರಾಚೀನ ಭಾರತದ ಶಿಲ್ಪಗಳಲ್ಲಿ ಇದೇ ರೀತಿಯ ಕೆತ್ತನೆಯ ಶಿಲ್ಪಗಳನ್ನು ನೋಡಬಹುದು.

ಸಾಂಚಿಯ ಯಕ್ಷಿಯ ಶಿಲ್ಪಗಳು, ದಿದಾರ್‌ಗಂಜ್ ಯಕ್ಷಿಯ ಶಿಲ್ಪಗಳನ್ನು ನೋಡಿದರೆ ಮನದಟ್ಟಾಗುತ್ತದೆ. ಮುಂದಿನ ಶಿಲ್ಪಗಳಲ್ಲಿಯೂ ಇದೇ ರೀತಿಯ ರಚನೆಗಳೇ ಮುಂದುವರಿದಿವೆ. ಬಾದಾಮಿಯ ಶಿಲ್ಪಗಳಲ್ಲಿನ ವಸ್ತ್ರಗಳ ಅಧ್ಯಯನವು ಕುತೂಹಲಕಾರಿಯಾಗಿದೆ. ಇಲ್ಲಿ ವಿವಿಧ ವಿನ್ಯಾಸಗಳು ನೋಡಲು ಸಿಗುತ್ತವೆ. ಪುರುಷರ ವಸ್ತ್ರಗಳ ರಚನೆಯಲ್ಲಿ ಬಹಳ ವ್ಯತ್ಯಾಸಗಳೇನಿಲ್ಲದಿದ್ದರೂ ಸ್ತ್ರೀವಸ್ತ್ರವಿನ್ಯಾಸದಲ್ಲಿ ವೈವಿಧ್ಯವಿದೆ. ಜನರು ತೊಡುವ ಬಟ್ಟೆಯು ಮತ್ತು ಆಭರಣವು ಅವರ ಸಾಮಾಜಿಕ ಸ್ಥಾನಮಾನದ ಸಂಕೇತವಾಗಿರುತ್ತಿದ್ದವು.

ಸಾಮಾನ್ಯವಾಗಿ ಚಾಲುಕ್ಯ ಸ್ತ್ರೀಶಿಲ್ಪಗಳು ಪುರುಷಶಿಲ್ಪಗಳಂತೆಯೇ ಸ್ತನೋತ್ತರೀಯ ಧರಿಸುತ್ತಿದ್ದುದು ಕಂಡುಬರುವುದಿಲ್ಲ, ಬದಲಾಗಿ ತೆರೆದ ಎದೆಯ ಶಿಲ್ಪಗಳು ಇಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಅಮರಾವತಿಯ ಶಿಲ್ಪಗಳ ರಚನೆಯೂ ಇದೇ ರೀತಿಯಲ್ಲಿಯೇ ಇದೆ. ಸಾಮಾನ್ಯವಾಗಿ ಬಾದಾಮಿಯ ಶಿಲ್ಪಗಳ ವಸ್ತ್ರಗಳನ್ನು ಈ ರೀತಿ ಪಟ್ಟಿ ಮಾಡಬಹುದು:

'ಉಷ್ಣೀಷ, ಕುಲಹ, ಅರ್ಧೋರುಕ(ಅಧೋವಸ್ತ್ರ) ದ್ವಿಪದಿ(ಚಲ್ಲಣ), ಉತ್ತರೀಯ, ಸ್ತನೋತ್ತರೀಯ, ಅಂತರೀಯ, ಲಂಗೋಟಿ, ಜಂಘೀಯ, ಕೌಪೀನ, ಸೀರೆ ಮತ್ತು ಧೋತರ'[೩೮]. ಆದರೆ ಇವುಗಳಲ್ಲಿ ಎಲ್ಲವನ್ನೂ ಎಲ್ಲೆಡೆ ಬಳಸಿಲ್ಲ. ಸಾಮಾನ್ಯವಾಗಿ ಬಾದಾಮಿಯ ಶಿಲ್ಪಗಳು ತೆರೆದೆದೆಯ ಶಿಲ್ಪಗಳೇ ಆಗಿವೆ. ಇದು ಸ್ತ್ರೀ–ಪುರುಷ ಶಿಲ್ಪಗಳೆರಡರಲ್ಲಿಯೂ ಸಾಮಾನ್ಯವಾಗಿದೆ. 'ಅಧೋವಸ್ತ್ರವು ಸ್ತ್ರೀ-ಪುರುಷರಿಬ್ಬರಿಗೂ ಪ್ರಧಾನ ಉಡುಪಾಗಿತ್ತು.

ಸೊಂಟದ ಸುತ್ತ ಬಟ್ಟೆಯೊಂದನ್ನು ಸುತ್ತಿ ಅದರ ನಿರಿಗೆಗಳು ಕಾಲುಗಳ ಇಲ್ಲವೆ ಪಕ್ಕದಲ್ಲಿ ನೇತಾಡುವಂತೆ ಉಡಲಾಗುತ್ತಿತ್ತು.'[೩೯] ಸ್ತ್ರೀಯರ ಮೇಲಿನ ದೇಹದ ಭಾಗವನ್ನು ಮುಟ್ಟುವಂತೆ ಉಪಯೋಗಿಸುತ್ತಿದ್ದ ಹೊಲಿದ ರವಿಕೆ ಮತ್ತು ಕುಚವಸ್ತ್ರಗಳ ಬಗ್ಗೆ ಸಾಹಿತ್ಯಗಳಲ್ಲಿ ಮಾಹಿತಿ ಸಿಗುತ್ತವೆ. ಆದರೆ ಶಿಲ್ಪಗಳು ಈ ವಿಷಯದಲ್ಲಿ ಅಷ್ಟಾಗಿ ಬೆಳಕು ಚೆಲ್ಲುವುದಿಲ್ಲ. ಹಲವು ಶಿಲ್ಪಗಳಲ್ಲಿ ಕುಚವಸ್ತ್ರಗಳನ್ನು ಒಂದು ಪಟ್ಟಿಯಂತೆ ಬಿಗಿಯಲಾಗಿರುತ್ತದೆ. ಆದರೆ ಐಹೊಳೆಯ ರಾವಣಫಡಿಯ ಶಿಲ್ಪಗಳಲ್ಲಿ ಮೇಲಿನ ಭಾಗವನ್ನು ಮುಟ್ಟಿ ಸೊಂಟದವರೆಗೂ ಹೊಲಿದಿರುವ ರವಿಕೆಯನ್ನು ಸ್ಪಷ್ಟವಾಗಿ ಗುರುತಿಸಬಹುದು.

೩೭. ಡಾ. ಚೂಡಾಮಣಿ ನಂದಗೋಪಾಲ : ಶಿಲೆ–ಕಲೆ, ಪುಟ – ೩೩೧

೩೮. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೯೦

೩೯. ಅದೇ., ಪುಟ – ೯೧



ಕೆಲವು ಕುಚವಸ್ತ್ರಗಳನ್ನು ಹಿಂದಕ್ಕೆ ನೆರಿಗೆಗಳ ಮೂಲಕ ಕಟ್ಟಿ ಬಿಗಿಪಡಿಸಿರುವುದನ್ನು ಶಿಲ್ಪಗಳಲ್ಲಿ ನೋಡಬಹುದು.[೪೦] ಸೀರೆಯಲ್ಲಿ ವಿವಿಧ ವಿನ್ಯಾಸಗಳು ಮತ್ತು ಪಾರದರ್ಶಕವಾದ ರಚನೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. 'ಬಾದಾಮಿಯ ಶಿಲ್ಪಗಳಲ್ಲಿ ಸ್ತನೋತ್ತರೀಯಗಳು ಕಂಡುಬಾರದಿರುವುದು ಮತ್ತು ಪಟ್ಟದಕಲ್ಲಿನಲ್ಲಿ ವಿರಳವಾಗಿ ಕಂಡುಬರುವುದು ಪ್ರಾಯಶಃ ಚಾಲುಕ್ಯರ ಕಾಲದ ಉತ್ತರಾರ್ಧದಲ್ಲಿ ಸ್ತನೋತ್ತರೀಯಗಳು ಬಳಕೆಯಾಗತೊಡಗಿದವೆಂದು ತಿಳಿಯಬಹುದು.'[೪೧]

ಇನ್ನು ಪುರುಷರ ವಸ್ತ್ರವು ಸರಳವಾಗಿದ್ದು ಧೋತರವನ್ನು ಹೋಲುವ ಬಟ್ಟೆಯನ್ನು ಉಡುತ್ತಿದ್ದರು. ಇದನ್ನು ಮೇಖಲೆಯ ಮೂಲಕ ಸೊಂಟದ ಸುತ್ತಲೂ ಭದ್ರಪಡಿಸುತ್ತಿದ್ದರು. ಉತ್ತರೀಯವು ಚಾಲುಕ್ಯರ ಶಿಲ್ಪಗಳಲ್ಲಿ ಕಡಿಮೆ ಕಂಡುಬರುತ್ತದೆ. ಇದರ ಜೊತೆಗೆ ಕಟಿವಸ್ತ್ರವನ್ನು ಬಳಸುತ್ತಿದ್ದರು. ಧೋತರದ ನೆರಿಗೆಗಳನ್ನು ಕಾಲುಗಳ ನಡುವೆ ಇಳಿಬಿಡಲಾಗುತ್ತಿತ್ತು. ಮೇಗಣ ಶಿವಾಲಯದ ಗೋವರ್ಧನಗಿರಿಧಾರಿ, ಮೂರನೆಯ ಗುಹಾಲಯದ ಶುಕ್ರಾಚಾರ್ಯ ಮುಂತಾದ ಶಿಲ್ಪಗಳನ್ನಿಲ್ಲಿ ನೋಡಬಹುದು. ಸಾಮಾನ್ಯವಾಗಿ ಸಾಮಾನ್ಯ ವ್ಯಕ್ತಿಗಳು ಅಥವಾ ಲೌಕಿಕ ಶಿಲ್ಪಗಳಲ್ಲಿ ಪುರುಷ ಶಿಲ್ಪಗಳಲ್ಲಿ ಅಧೋವಸ್ತ್ರವು ಮೊಣಕಾಲಿನವರೆಗೆ ಮಾತ್ರ ಇರುತ್ತಿತ್ತು. ಕೆಲವೆಡೆ ವಿಶಿಷ್ಟ ಶೈಲಿಯ ರಚನೆಗಳೂ ಕಂಡುಬರುತ್ತವೆ.

'ಕೋಟು ಧರಿಸಿದ ಇಬ್ಬರು ದ್ವಾರಪಾಲಕರನ್ನು ಐಹೊಳೆಯ ರಾವಣಫಡಿಯಲ್ಲಿ ಕಾಣುತ್ತೇವೆ. ವಿದೇಶೀಯರ ಈ ಉಡುಪನ್ನು ವೈವಿಧ್ಯಕ್ಕಾಗಿ ಶಿಲ್ಪಿಯು ಆಯ್ಕೆಮಾಡಿರಬಹುದು. ಇವು ಯವನರ ಶಿಲ್ಪಗಳೆಂದು ಜೆ.ಸಿ. ಹಾರ್ಲೆ ಎಂಬವರು ಗುರುತಿಸಿದ್ದಾರೆ'.[೪೨] ಐಹೊಳೆಯ ರಾವಣಫಡಿ ಗುಹಾಲಯವು ಮೊದಲ ರಚನೆಯಾಗಿದ್ದು ಇಲ್ಲಿ ಗುಪ್ತರ ಕಾಲದ ಶೈಲಿಯು ಕಂಡುಬರುವುದರ ಜೊತೆಗೆ ಶಿಲ್ಪಗಳ ರಚನೆಯಲ್ಲಿಯೂ ಉತ್ತರಭಾರತದ ಶೈಲಿಯನ್ನು ಕಾಣುತ್ತೇವೆ. ಇದರಿಂದಾಗಿ ಇಲ್ಲಿನ ರಚನೆಯಲ್ಲಿ ಈ ರೀತಿ ಕಂಡುಬರುತ್ತಿದ್ದು, ಮುಂದಿನ ಹಂತದಲ್ಲಿ ಶಿಲ್ಪಿಗಳು ಸ್ವಂತಿಕೆಯಿಂದ ಕೃತಿರಚನೆ ಮಾಡುವ ಸಂದರ್ಭದಲ್ಲಿ ಇವುಗಳು ಕಣ್ಮರೆಯಾಗಿವೆ.

ಆಭರಣಗಳು

ಬಾದಾಮಿಯ ಶಿಲ್ಪಗಳಲ್ಲಿ ಆಭರಣಗಳ ಕೆತ್ತನೆ ಪ್ರಾಮುಖ್ಯವನ್ನು ಪಡೆದಿವೆ. ಜನರು ತಮ್ಮ ಸ್ಥಾನಮಾನಕ್ಕನುಗುಣವಾಗಿ ಆಭರಣಗಳನ್ನು ಧರಿಸುತ್ತಿದ್ದರು. ಆಭರಣಗಳು ದೇಹದ ಅಲಂಕರಣ ಸಾಮಗ್ರಿಗಳು. ನಾಗರಿಕತೆಯು ಹೆಚ್ಚಾದಂತೆ ತಮ್ಮ ಪ್ರತಿಷ್ಠೆಗಾಗಿ ಹಲವಾರು ವಿಧದ ಆಭರಣಗಳನ್ನು ಧರಿಸುವುದು ಸಾಮಾನ್ಯವಾಗಿತ್ತು.

---

೪೦. ಡಾ. ಚೂಡಾಮಣಿ ನಂದಗೋಪಾಲ : ಶಿಲೆ-ಕಲೆ, ಪುಟ – ೩೩೪

೪೧. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೬೩

೪೨. ಅದೇ., ಪುಟ – ೬೭



ಇಲ್ಲಿ ಕಂಡುಬರುವ 'ಆಭರಣಗಳನ್ನು ಹೀಗೆ ವರ್ಗೀಕರಿಸಬಹುದು:

೧. ತಲೆಯುಡುಗೆಗಳು
೨. ನೊಸಲೊಡವೆಗಳು
೩. ಕಿವಿಯುಡುಗೆಗಳು
೪. ಮೂಗಿನ ಒಡವೆಗಳು
೫. ಕೊರಳೊಡವೆಗಳು
೬. ಭುಜದ ಆಭರಣಗಳು
೭. ಬಾಹು ಭೂಷಣಗಳು
೮. ಉದರಬಂಧ
೯. ಒಡ್ಯಾಣಗಳು
೧೦. ಕಾಲ್ ತೊಡುವುಗಳು.'[೪೩]

ಇವುಗಳನ್ನು ದೇಹದ ಆಯಾ ಭಾಗಕ್ಕೆ ತಕ್ಕಂತೆ ಧರಿಸುತ್ತಿದ್ದರು. ಕಿರೀಟಗಳಲ್ಲಿ ಸಾಮಾನ್ಯವಾಗಿ ಕಿರೀಟಮುಕುಟ, ಜಟಾಮುಕುಟ, ಕರಂಡಮುಕುಟಗಳೆಂದು ವರ್ಗೀಕರಿಸಬಹುದು. ಸಾಮಾನ್ಯವಾಗಿ ವಿಷ್ಣು, ಬಲಿ, ಕೃಷ್ಣ, ರಾಜರು ಕಿರೀಟ ಮುಕುಟಗಳನ್ನು ಧರಿಸುತ್ತಿದ್ದರು. ಶಿವನು ಸಾಮಾನ್ಯವಾಗಿ ಜಟಾಮುಕುಟಧಾರಿಯಾಗಿ ಕಾಣಿಸುತ್ತಾನೆ. ಈ ಮುಕುಟಗಳ ರಚನೆಯಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಯಾದುದು ಕಂಡುಬರುತ್ತದೆ. ಐಹೊಳೆಯ ರಾವಣಫಡಿ ಗುಹಾಲಯದಲ್ಲಿನ ಕೆತ್ತನೆಯಲ್ಲಿ ಕಿರೀಟಗಳು ಬಲು ಎತ್ತರವಾಗಿದ್ದು ನಂತರದ ರಚನೆಗಳಲ್ಲಿ ಕಿರೀಟಗಳು ಸಣ್ಣಗಾಗಿವೆ. ಅಲಂಕರಣದಲ್ಲಿ ವೈಶಿಷ್ಟ್ಯವನ್ನು ಕಾಣುತ್ತೇವೆ. ಕೆಲವೆಡೆ ಕಿರೀಟಗಳು ತುದಿಗೆ ಹೋಗುತ್ತಿದ್ದಂತೆ ಶಂಖುವಿನ ಆಕಾರದಂತೆ ಚೂಪಾಗಿ ಕೆತ್ತಿರುವುದು ಕಂಡುಬರುತ್ತದೆ. ಕಿರೀಟ ಮುಕುಟವು ಬಾದಾಮಿಯ ಚಾಲುಕ್ಯರ ಕಾಲದ ಸಾಮಾನ್ಯವಾದ ತಲೆಯುಡುಗೆಯಾಗಿದ್ದಂತೆ ಕಂಡುಬರುತ್ತದೆ. ಸಾಮಾಜಿಕ ಭೇದವಿಲ್ಲದೆ ಎಲ್ಲ ವರ್ಗದವರು ಇದನ್ನು ಬಳಸುತ್ತಿದ್ದಂತೆ ಕಂಡುಬರುತ್ತದೆ. ಇದಲ್ಲದೆ ಕೆಲವೆಡೆ ಮುಂಡಾಸಿನ ರೀತಿಯ ಕೆತ್ತನೆಗಳು (ತಲೆಯುಡುಗೆಗಳು) ಕಂಡುಬರುತ್ತವೆ. ಪಟ್ಟದಕಲ್ಲಿನ ದಂಪತಿ ಶಿಲ್ಪಗಳನ್ನಿಲ್ಲಿ ನೋಡಬಹುದು.

ಕೆಲವೆಡೆಗಳಲ್ಲಿ ಟೊಪ್ಪಿಗೆಯ ರೀತಿಯ ರಚನೆಗಳು ಕೂಡಾ ಕಂಡುಬರುತ್ತವೆ. ಸ್ತ್ರೀಯರ ಶಿಲ್ಪಗಳಲ್ಲಿ ಕೆಲವೆಡೆ ಕೇಶಾಲಂಕಾರಕ್ಕೆ ಮಹತ್ವ ನೀಡಲಾಗಿದೆ. ವಿವಿಧ ರೀತಿಯ ತುರುಬುಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಮುಖ್ಯವಾಗಿ ಪಟ್ಟದಕಲ್ಲಿನ ಸಾಲಭಂಜಿಕೆ ಶಿಲ್ಪಗಳಲ್ಲಿ ವಿವಿಧ ರೀತಿಯ ಅಲಂಕಾರ ತುರುಬುಗಳು ಹೆಚ್ಚಾಗಿ ಕಾಣಿಸುತ್ತವೆ. ಕೆಲವೆಡೆಯಲ್ಲಿ ತಲೆಗಿಂತ ದೊಡ್ಡದಾದ ತುರುಬುಗಳ ರಚನೆಯಿದೆ. ಇದು ಚಾಲುಕ್ಯ ಶಿಲ್ಪಿಗಳು ತಮ್ಮ ಕಲಾ ಕೌಶಲ್ಯದ ಪ್ರದರ್ಶನಕ್ಕೆ ಬಳಸಿಕೊಂಡ ಮಾಧ್ಯಮವೆನ್ನಿಸುತ್ತದೆ.

ಕಿವಿಯುಡಿಗೆಗಳು

ಬಾದಾಮಿಯ ಶಿಲ್ಪಗಳಲ್ಲಿ ಕಿವಿಯುಡುಗೆಗಳನ್ನು ವೈಶಿಷ್ಟ್ಯಪೂರ್ಣವಾಗಿ ಕೆತ್ತಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ವೃತ್ತಾಕಾರದ ದೊಡ್ಡದಾದ ಉಂಗುರದಂತಿರುವ ರಚನೆಗಳಿದ್ದು ಕಿವಿಯಲ್ಲಿ ಭುಜದವರೆಗೆ ನೇತಾಡುತ್ತಿರುವಂತೆ ರಚಿಸಿರುವುದು ಕಂಡುಬರುತ್ತದೆ. ಕೆಲವೆಡೆ

೪೩. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೯೬



ದೊಡ್ಡ ಪತ್ರದಂತಿರುವ ರಚನೆಯಿದೆ. ಅಪರೂಪವಾಗಿ ಕೆಲವು ಶಿಲ್ಪಗಳಲ್ಲಿ ಘಂಟೆಯಂತಹ ರಚನೆಗಳು ಕಾಣಿಸುತ್ತವೆ. ಏಕಕಾಲಕ್ಕೆ ಎರಡು ಕಿವಿಗಳಲ್ಲಿ ಪ್ರತ್ಯೇಕ ರಚನೆಗಳಿರುವ ಕಿವಿಯುಡುಗೆಗಳನ್ನು ಧರಿಸುತ್ತಿದ್ದುದು ಚಾಲುಕ್ಯರ ಶಿಲ್ಪದ ವಿಶೇಷತೆಯಾಗಿದೆ. ಮೊದಲನೆಯ ಗುಹಾಲಯದ ಅರ್ಧನಾರೀಶ್ವರ ಶಿಲ್ಪದ ಪಟ್ಟಿಕೆಯಲ್ಲಿನ ಪಾರ್ವತಿ ಶಿಲ್ಪದಲ್ಲಿ ಅಪರೂಪದ ಕಿವಿಯುಡುಗೆ ಕಂಡುಬರುತ್ತದೆ, ಇಲ್ಲಿ ಪಾರ್ವತಿಯ ಕಿವಿಯ ಮೇಲಿನ ತುದಿಯಿಂದ ಭುಜದವರೆಗೆ ಜೋತುಬಿದ್ದ ಜೋಡು ಸರಪಳಿಯ ನಡು ನಡುವೆ ಪುಟ್ಟ ಪದಕಗಳಿವೆ. ಇಂತಹ ಕೆತ್ತನೆಗಳು ಇಲ್ಲಿ ಅಪರೂಪ.

ಕೊರಳ ಉಡುಗೆಗಳು

ದೇಹಕ್ಕೆ ಸೌಂದರ್ಯವನ್ನು ಕೊಡುವುದಕ್ಕಾಗಿ ಕೊರಳಲ್ಲಿ ಹಾರ ಧರಿಸುವುದು ಮೊದಲಿನಿಂದಲೂ ರೂಢಿಯಲ್ಲಿದೆ. ಇದು ತೆರೆದ ಎದೆಯ ಮೇಲೆ ಲಕ್ಷಣವಾಗಿ ಕಾಣಿಸುತ್ತದೆ. ಪ್ರಾಚೀನ ಕಾಲದಿಂದಲೂ ಕೊರಳುಡುಗೆಗಳು ರೂಢಿಯಲ್ಲಿದ್ದವು. ಭರತನ ನಾಟ್ಯಶಾಸ್ತ್ರದಲ್ಲಿಯೂ ಇದರ ಕುರಿತು ಉಲ್ಲೇಖಗಳಿವೆ. ಸ್ತ್ರೀ–ಪುರುಷರಿಬ್ಬರಿಗೂ ಕೊರಳುಡುಗೆ ಸಾಮಾನ್ಯವಾಗಿತ್ತು. ಮುಕ್ತಾವಲಿ, ಹರ್ಷಕ, ಹೇಮಸೂತ್ರ, ಎಂಬ ಹಾರಗಳು ಪುರುಷರಿಗೆ, ಮುತ್ತಿನಹಾರ, ವ್ಯಾಲಪಂಕ್ತಿ, ಮಂಜರಿ, ರತ್ನಹಾರಗಳು ಕಂಠಾಭರಣಗಳು ಸ್ತ್ರೀಯರಿಗೆಂದು ಉಲ್ಲೇಖಿತವಾಗಿದೆ.

ಬಾದಾಮಿಯ ಶಿಲ್ಪಗಳಲ್ಲಿ ಒಂದೇ ಕಾಲಕ್ಕೆ ವಿವಿಧ ಬಗೆಯ ಹಾರಗಳನ್ನು ಧರಿಸಿರುವುದು ಕಂಡುಬರುತ್ತವೆ. ಕೆಲವು ಶಿಲ್ಪಗಳಲ್ಲಿ ಒಂದೇ ಹಾರ (ಏಕಾವಳಿ) ಇದ್ದರೆ ಕೆಲವೆಡೆ ನಾಲ್ಕಕ್ಕಿಂತಲೂ ಹೆಚ್ಚು ಹಾರಗಳನ್ನು ಧರಿಸಿರುವುದು ಕಂಡುಬರುತ್ತದೆ. ಕೆಲವೆಡೆಯ ಶಿಲ್ಪಗಳಲ್ಲಿ ಹಾರದ ಜೊತೆಗೆ ಪದಕಗಳ ರಚನೆ ಇರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಮುತ್ತಿನಹಾರವು ಕಂಡುಬರುತ್ತದೆ, ಇವುಗಳಲ್ಲಿ ಕೆಲವು ಒಂದು ಸಾಲಿನ ರಚನೆಯಾಗಿದ್ದರೆ ಕೆಲವು ಎರಡು ಸಾಲುಗಳ ರಚನೆಯಾಗಿವೆ. ಕೆಲವು ಹಾರಗಳು ಒಂದೇ ಆಕಾರದ ಮುತ್ತುಗಳ ರಚನೆಯಾದರೆ ಕೆಲವೆಡೆ ದೊಡ್ಡ ಹರಳುಗಳು ಕ್ರಮೇಣ ಸಣ್ಣದಾಗುತ್ತಿರುವಂತಹ ರಚನೆಗಳು. 'ಮಧ್ಯದಲ್ಲಿ ಅತಿದೊಡ್ಡ ಮತ್ತು ಕ್ರಮೇಣ ಎಡಬಲಗಳಲ್ಲಿ ಚಿಕ್ಕದಾಗುತ್ತ ಹೋಗುವ ಮುತ್ತಿನ ಸರವು ಪ್ರಕಾಂಡಕವೆನಿಸಿತ್ತು'.[೪೪] ಚನ್ನವೀರವೆಂಬ ಆಭರಣವು ಅಜಂತೆಯ ಚಿತ್ರಗಳಲ್ಲಿ ಕಂಡುಬರುತ್ತವೆಯಾದರೂ ಇಲ್ಲಿನ ಶಿಲ್ಪಗಳಲ್ಲಿ ಅವು ಕಂಡುಬರುವುದಿಲ್ಲ. ಆದರೆ ಅದನ್ನೇ ಹೋಲುವ, ಆದರೆ ಅದಕ್ಕಿಂತ ತುಸು ಭಿನ್ನವಾದ ವೈಕಕ್ಷಕ ಎಂಬ ಆಭರಣವು ಚಾಲುಕ್ಯ ಶಿಲ್ಪಗಳಲ್ಲಿ ಕಂಡುಬರುತ್ತದೆ.

'ಇದು ಕೇವಲ ಸ್ತ್ರೀಯರು ಧರಿಸುವ ಕೊರಳ ಹಾರ. ಈ ಒಡವೆಯು ಚಾಲುಕ್ಯರ ವಿಶೇಷತೆಯಾಗಿದೆ.'[೪೫] ಕೊರಳ ಹಿಂಬದಿಯಿಂದ ಬಂದು ಎರಡೂ ಭುಜಗಳ ಮೇಲೆ ಇಳಿಬಿದ್ದ

೪೪. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೦೭

೪೫. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೦೯



ಇದನ್ನು ಜನಿವಾರದಂತೆ ಧರಿಸಲಾಗುತ್ತದೆ. ಎರಡೂ ಸರಗಳು ಕೂಡುವಲ್ಲಿ, ಸ್ತನದ ಕೆಳಭಾಗದಲ್ಲಿ ಒಂದು ಪದಕದ ಮೂಲಕ ಇದನ್ನು ಜೋಡಿಸಲಾಗುತ್ತದೆ. ಅಲ್ಲಿಂದ ಮುಂದುವರಿದು ಇದು ಎರಡೂ ಪಕ್ಕಗಳಲ್ಲಿ ಹಾದು ತೊಡೆಗಳವರೆಗೆ ಇಳಿಬಿದ್ದಿರುತ್ತದೆ. ಬೆನ್ನಿನ ಭಾಗದಲ್ಲಿ ಇದನ್ನು ಇನ್ನೊಂದು ಪದಕದ ಮೂಲಕ ಜೋಡಿಸಲಾಗುತ್ತದೆ.

ಬಾದಾಮಿಯ ಗುಹಾಲಯದ ಶಿಲ್ಪಗಳಲ್ಲಿ ಮತ್ತು ಐಹೊಳೆಯ ಶಿಲ್ಪಗಳಲ್ಲಿ ಹೆಚ್ಚಾಗಿ ಕಂಡುಬರುವ ಈ ರಚನೆಯು ಪಟ್ಟದಕಲ್ಲಿನ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ. ಬಹುಶಃ ಈ ಕಾಲಕ್ಕಾಗಲೇ ಇದರ ರಚನೆಯು ನಿಂತುಹೋಗಿರಬಹುದು. ಪಟ್ಟದಕಲ್ಲಿನ ಕೆಲವು ಶಿಲ್ಪಗಳಲ್ಲಿ ವೈಕಕ್ಷಕದ ಬದಲಾಗಿ ಒಂದೇ ಹಾರವು ಜನಿವಾರದಂತೆ ಇಳಿಬಿದ್ದಿದ್ದರೂ ಇದು ವೈಕಕ್ಷದಂತಿಲ್ಲ. ಸ್ತನಹಾರವು ಕೆಲವು ಶಿಲ್ಪಗಳಲ್ಲಿ ಕಂಡುಬರುತ್ತದೆ. ಉದ್ದನೆಯ ಕೊರಳಹಾರವಾಗಿರುವ ಇದು ಸ್ತನಗಳ ಮಧ್ಯೆ ಹಾದು ಹೊಕ್ಕಳ ತನಕ ಇಳಿಬಿದ್ದಿರುತ್ತದೆ. ಅಲ್ಲಿ ಒಂದು ಪದಕವನ್ನು ಜೋಡಿಸಲಾಗಿರುತ್ತದೆ. ಕೆಲವೆಡೆ ಸ್ತನಹಾರ ಮತ್ತು ವೈಕಕ್ಷಕವನ್ನು ಸೇರಿಸಿ ಸಂಯುಕ್ತವಾಗಿ ರಚನೆ ಮಾಡಿರುವುದು ಕಂಡುಬಂದಿದೆ. ಇದಲ್ಲದೆ ಕೆಲವೆಡೆ ಕಂಠಿಕೆಯೆಂಬ ಇನ್ನೊಂದು ಆಭರಣದ ರಚನೆ ಕಂಡುಬಂದಿದೆ. ಇದು ಕುತ್ತಿಗೆಯ ಸುತ್ತ ಅಂಟಿಕೊಂಡಂತೆ ಕಾಣಿಸುವ ರಚನೆ, ಇಂದಿನ (Necklace) ನೆಕ್‌ಲೇಸ್‌ನಂತಹ ರಚನೆ. ಅಪರೂಪವಾಗಿ ಕೆಲವು ಶಿಲ್ಪಗಳಲ್ಲಿ ಇಂತಹ ರಚನೆಗಳಿವೆ.

ಭುಜದ ಆಭರಣಗಳು

ಚಾಲುಕ್ಯ ಶಿಲ್ಪಗಳಲ್ಲಿ ಭುಜದ ಆಭರಣಗಳ ಕೆತ್ತನೆ ಕಡಿಮೆ. ತೋಳುಬಂಧಿಗಳು ಎಲ್ಲ ಶಿಲ್ಪಗಳಲ್ಲಿ ಕಂಡುಬರುತ್ತವೆ. ಸಾಮಾನ್ಯವಾಗಿ ನಾಗನಹೆಡೆಯ ತುದಿಯನ್ನು ಹೊಂದಿರುವ ತೋಳುಬಂಧನದ ಆಭರಣಗಳು ಸ್ತ್ರೀ–ಪುರುಷ ಶಿಲ್ಪಗಳೆರಡರಲ್ಲಿಯೂ ಸಾಮಾನ್ಯವಾಗಿವೆ. ಇವು ಮೂರು ಅಥವಾ ಐದು ಸುತ್ತುಗಳಿಂದ ಕೂಡಿರುತ್ತವೆ. 'ಹಾವಿನಂತೆ ತೋಳಿಗೆ ಸುತ್ತಿಕೊಂಡ ಒಡವೆಗಳನ್ನು ನಾಗಮುರಿಗೆ ಅಥವಾ ಸರ್ಪಕೇಯೂರ ಎನ್ನುತ್ತಾರೆ. ಇದನ್ನು ಅಂಗದ ಎಂದೂ ಕರೆಯುತ್ತಾರೆ'.[೪೬] ಇಂತಹ ಕೆತ್ತನೆಗಳು ಸಾಮಾನ್ಯವಾಗಿವೆ. ಅಪರೂಪದ ಕೆಲವು ಬಾಹುಕೆತ್ತನೆಗಳು ಕೆಲವೆಡೆ ಕಾಣಿಸುತ್ತವೆ. ಮೂರನೆಯ ಗುಹೆಯ ನರಸಿಂಹ ಮತ್ತು ತ್ರಿವಿಕ್ರಮ ಶಿಲ್ಪಗಳ ಕೆತ್ತನೆಯಲ್ಲಿ ಇದನ್ನು ಕಾಣಬಹುದು. ಅಪರೂಪದ ಕೆಲ ತೋಳಬಂಧಿಗಳಲ್ಲಿ ಮುತ್ತಿನ ಹರಳುಗಳ ರೀತಿಯ ಕೆತ್ತನೆಯನ್ನು ಕಾಣಬಹುದು.

ಮುಂಗೈಯಲ್ಲಿ ಬಳೆಗಳು ಅಥವಾ ಕಂಕಣಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಕೆಲವೆಡೆ ಎರಡು, ಮೂರು ಬಳೆಗಳು ಕಂಡುಬರುತ್ತವೆ. ಮೊದಲ ಶಿಲ್ಪಗಳಲ್ಲಿ ಇವು ಖಾಲಿಯಾದ ಸುತ್ತಿನ ಬಳೆಗಳಾದರೆ ಸ್ತ್ರೀಶಿಲ್ಪಗಳಲ್ಲಿ ಸಾಮಾನ್ಯವಾಗಿ ಮುತ್ತಿನ ಕೆತ್ತನೆಯ ಬಳೆಗಳನ್ನು ಕಾಣಬಹುದು.

೪೬. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೧೧



ದೇವತೆಗಳ ಮತ್ತು ಅರಸಿಯರ ಕೈಯಲ್ಲಿ ಮುತ್ತಿನ ಕೆತ್ತನೆಯ ಆಭರಣಗಳಿವೆ. ಪುರುಷರ ಮುಂಗೈ ಬಳೆಗಳನ್ನು ಕಡಗಗಳೆಂದು ಕರೆಯುತ್ತಾರೆ. ಇವು 'ಗಾತ್ರದಲ್ಲಿ ಮತ್ತು ವ್ಯಾಸದಲ್ಲಿ ಬಳೆಗಳಿಗಿಂತ ದೊಡ್ಡವು'.[೪೭] ಸಾಮಾನ್ಯವಾಗಿ ಎರಡು ಅಥವಾ ಮೂರು ಕಡಗಗಳು ಸಾಮಾನ್ಯ. ಬೆರಳುಗಳಲ್ಲಿ ಉಂಗುರಗಳೂ ಕಂಡುಬರುತ್ತವೆ. ಮೂರನೆಯ ಗುಹೆಯ ತ್ರಿವಿಕ್ರಮನ ಶಿಲ್ಪದಲ್ಲಿ ಕಿರುಬೆರಳಿಗೆ ಮಣಿಖಚಿತವಾದ ಉಂಗುರವಿದೆ.

ಉದರಬಂಧಗಳು ಸಾಮಾನ್ಯವಾಗಿ ಪುರುಷ ಶಿಲ್ಪಗಳಲ್ಲಿ ಕಂಡುಬರುತ್ತವೆ. ಇವು ಕೆಲವೆಡೆ ಕೇವಲ ಪಟ್ಟಿಯ ರೀತಿಯಲ್ಲಿದ್ದರೆ ದೇವತಾಶಿಲ್ಪಗಳಲ್ಲಿ ಇವು ಅಲಂಕೃತ ಕೆತ್ತನೆಯನ್ನು ಹೊಂದಿವೆ. ಮಧ್ಯದಲ್ಲಿ ಪುಷ್ಪ ಕೆತ್ತನೆಯಿರುತ್ತದೆ, ಕೆಲವು ಶಿಲ್ಪಗಳಲ್ಲಿ ಮಧ್ಯದಲ್ಲಿ ತುದಿಯಲ್ಲಿ ತ್ರಿಕೋನಾಕಾರದ ರಚನೆಯಿರುತ್ತದೆ. ಇದರ ಕೆಳಗೆ ಒಡ್ಯಾಣದ ಕೆತ್ತನೆಯಿರುತ್ತದೆ. ಇದು ಸ್ತ್ರಿ-ಪುರುಷರಿಬ್ಬರಿಗೂ ಸಾಮಾನ್ಯವಾಗಿರುತ್ತದೆ. ಇವು ನಡುಪಟ್ಟಿಗಳು. ಉಟ್ಟಿರುವ ಧೋತರವನ್ನು ಬಿಗಿಯಾಗಿ ಹಿಡಿದಿಡಲು ಒಡ್ಯಾಣದ ಅಗತ್ಯವಿದೆ. ಇದು ಇಂದಿನ ಕಾಲದ ಬೆಲ್ಟ್‌ನ ರೀತಿಯ ರಚನೆ. ಇವನ್ನು ಅಲಂಕೃತವಾಗಿ ಕೆತ್ತಲಾಗಿರುತ್ತದೆ. ಇದರಿಂದಾಗಿ ಶಿಲ್ಪಗಳ ಚೆಲುವಿಗೆ ಹೆಚ್ಚಿನ ಬಲ ಬರುತ್ತದೆ.

ಕೆಲ ಶಿಲ್ಪಗಳಲ್ಲಿ ಇದು ಹಲವಾರು ಸುತ್ತುಗಳಿದ್ದರೆ ಕೆಲವೆಡೆ ಅಗಲವಾದ ಪಟ್ಟಿಕೆಯಂತಿರುತ್ತದೆ. ಹಿಂದಿನ ಸಾಂಚಿ ಅಥವಾ ಅಮರಾವತಿಯ ಶಿಲ್ಪಗಳಿಗಿಂತ ಇವುಗಳ ರಚನೆ ಭಿನ್ನವಾಗಿರುತ್ತದೆ. ಇದರ ಕೆಳಭಾಗದಲ್ಲಿ ಎರಡು ಸುತ್ತುಗಳ ಸರಪಳಿಯ ರೀತಿಯ ರಚನೆಯಿದ್ದು ಇದನ್ನು ಇಂಗ್ಲಿಷ್‌ನ 'ಗ' ರೀತಿಯಲ್ಲಿ ಕೆತ್ತಲಾಗಿರುತ್ತದೆ.ಇದನ್ನು ಉರುಧಾಮವೆಂದು ಕರೆಯಲಾಗುತ್ತದೆ. ಅದರ ಕೆಳಗೆ ಒಂದು ಪದಕ ಅಥವಾ ಲೋಲಕದ ರಚನೆಯಿರುತ್ತದೆ. ಸಾಮಾನ್ಯವಾಗಿ ಇಂತಹ ಒಡ್ಯಾಣಗಳಲ್ಲಿ ಮುತ್ತಿನ ಹರಳುಗಳಂತಹ ಕೆತ್ತನೆಯಿದ್ದು ಇವು ಕಲಾತ್ಮಕವಾಗಿ ಕೆತ್ತಲ್ಪಟ್ಟಿರುತ್ತವೆ. ಬಾದಾಮಿಯ ಸ್ತ್ರೀಶಿಲ್ಪಗಳಲ್ಲಿ ಹಲವಾರು ಕಡೆ ಅಲಂಕಾರಿಕವಾದ ಒಡ್ಯಾಣದ ಕೆತ್ತನೆ ಕಂಡುಬಂದಿದೆ. ಇನ್ನು ಕಾಲಿನಲ್ಲಿ ಕಾಲ್‌ತೊಡುಗೆಗಳು ಎಲ್ಲೆಡೆ ಸ್ತ್ರೀಶಿಲ್ಪಗಳಲ್ಲಿ ಸಾಮಾನ್ಯವಾಗಿರುತ್ತವೆ. ಚಾಲುಕ್ಯರ ಪ್ರಾರಂಭದ ಶಿಲ್ಪಗಳಲ್ಲಿ ಇವು ಕೇವಲ ಸ್ತ್ರೀಶಿಲ್ಪಗಳಲ್ಲಿ ಮಾತ್ರ ಕಂಡುಬರುತ್ತವೆ. ಪುರುಷ ಶಿಲ್ಪಗಳಲ್ಲಿ ಕಾಲ ಬಳೆಗಳಿಲ್ಲ. ಪುರುಷ ಶಿಲ್ಪಗಳಲ್ಲಿ ಕಾಲಕಡಗಗಳ ಕೆತ್ತನೆ ನಂತರದ ಬೆಳವಣಿಗೆಯಾಗಿದ್ದು ಪಟ್ಟದಕಲ್ಲಿನ ಶಿಲ್ಪಗಳಲ್ಲಿ ಕಂಡುಬರುವುದು ನಂತರದ ಬೆಳವಣಿಗೆ. ಸ್ತ್ರೀಶಿಲ್ಪಗಳಲ್ಲಿ ಕಾಲ್ ಕಡಗಗಳು ಅಲಂಕೃತವಾಗಿ ಕೆತ್ತಲ್ಪಟ್ಟಿರುತ್ತವೆ. ಇದರ ಜೊತೆಗೆ ಕಾಲುಂಗುರಗಳನ್ನು ಕೂಡಾ ಕೆತ್ತಿರುವುದು ಕಂಡುಬರುತ್ತದೆ.

ಮೇಲೆ ಹೇಳಿದ ವಿಚಾರಗಳು ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಕಂಡುಬರುವ ಆಭರಣ ಮತ್ತು ಉಡುಗೆ ತೊಡುಗೆಗಳ ಬೆಳವಣಿಗೆಯ ವಿವಿಧ ಹಂತಗಳನ್ನು ಸೂಚಿಸುತ್ತವೆ. ಚಾಲುಕ್ಯರ ಮೊದಲ ಹಂತದ ಶಿಲ್ಪಗಳ ರಚನೆಯಲ್ಲಿ ಮುಖ್ಯವಾಗಿ ದೇಹದ ಮತ್ತು ಆಭರಣಗಳ ರಚನೆಯಲ್ಲಿ

೪೭. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪುಟ – ೧೧೩




ಅಮರಾವತಿ ಶಿಲ್ಪಗಳು ಮತ್ತು ಅಜಂತಾದ ಚಿತ್ರಗಳಿಂದ ಸ್ಫೂರ್ತಿ ಪಡೆದಿರುವುದು ಗೊತ್ತಾಗುತ್ತದೆ. ಮುಂದಿನ ಹಂತದಲ್ಲಿ ಶಿಲ್ಪಿಗಳು ಸ್ವಂತಿಕೆಯನ್ನು ಕಂಡುಕೊಂಡು ಹಲವಾರು ಪ್ರಯೋಗಗಳನ್ನು ನಡೆಸಿರುವುದು ಕಂಡುಬರುತ್ತದೆ. ಕೆಲವೆಡೆ ಶಿಲ್ಪಿಗಳು ತಾವು ಕೆತ್ತಬೇಕಾಗಿರುವ ಶಿಲ್ಪದ ಖಚಿತತೆಗಾಗಿ ರೇಖಾಚಿತ್ರಗಳನ್ನು ರಚಿಸಿರುವುದನ್ನು ಕಾಣಬಹುದು. ಬಾದಾಮಿಯ ಮೊದಲನೆಯ ಗುಹೆಯ ಉಪ ಗುಹೆಯ ಗೋಡೆಯಲ್ಲಿ ನವಿಲಿನ ರೇಖಾಚಿತ್ರದ ಕೆತ್ತನೆಯನ್ನು ಗಮನಿಸಬಹುದು, ಇದು ರೇಖಾಚಿತ್ರವಾಗಿದ್ದು ಇದರ ಫಲಿತಾಂಶವನ್ನು ನವಿಲಿನ(ಕಾರ್ತಿಕೇಯ ಶಿಲ್ಪ) ಕೆತ್ತನೆಯಲ್ಲಿ ಕಾಣಬಹುದು. ಇಂತಹ ಕೆಲ ರಚನೆಗಳನ್ನು ಅಲ್ಲಲ್ಲಿ ಬಂಡೆಗಳಲ್ಲಿ ಅಥವಾ ಗೋಡೆಗಳ ಖಾಲಿ ಸ್ಥಳಗಳಲ್ಲಿ ಕಾಣಬಹುದು.

ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಿಗಳಿಗೆ ಬೆಂಬಲ ನೀಡಿದ್ದು ಆಗಿನ ಕಾಲದಲ್ಲಿ ಆಡಳಿತದಲ್ಲಿದ್ದ ಅರಸರಾದರೂ ಅಷ್ಟೇ ಪ್ರೋತ್ಸಾಹವನ್ನು ಅಂದಿನ ಶ್ರೀಮಂತ ವರ್ತಕರು, ಮಂತ್ರಿಗಳು, ಮತ್ತು ಇತರ ಜನಸಾಮಾನ್ಯರು ಕೂಡಾ ನೀಡಿದ್ದಾರೆ. ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಆತನ ಆಸ್ಥಾನ ಕವಿಯಾಗಿದ್ದ ರವಿಕೀರ್ತಿಯು ಐಹೊಳೆಯಲ್ಲಿ ಜಿನ ಮಂದಿರವನ್ನು ನಿರ್ಮಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಅದೇ ರೀತಿ ಇನ್ನೂ ಹಲವಾರು ದೇಗುಲಗಳ ರಚನೆಯಾಗಿರುವುದು ಅಲ್ಲಿ ಕೆತ್ತಲಾಗಿರುವ ಕೆಲ ಧನಿಕ ದಂಪತಿಶಿಲ್ಪಗಳ ಕೆತ್ತನೆಯಿಂದ ತಿಳಿಯುತ್ತದೆ. ದೇಗುಲಗಳ ರಚನೆಗೆ ಕಾರಣರಾದ ದಾನಿಗಳ ಶಿಲ್ಪವನ್ನು ರಚಿಸುವುದು ಅಂದಿನ ಕಾಲದಲ್ಲಿ ರೂಢಿಯಲ್ಲಿದ್ದಿತು. ಆ ಮೂಲಕ ಅಂತಹ ದಾನಿಗಳ ಹೆಸರನ್ನು ಅಮರಗೊಳಿಸುತ್ತಿದ್ದರು. ಇಂತಹ ಶಿಲ್ಪಗಳು ಬಾದಾಮಿಯ ಕಾಲದಲ್ಲಿ ಹಲವೆಡೆ ಕಂಡುಬಂದಿವೆ.

ದೊಡ್ಡ ದೇಗುಲಗಳ ರಚನೆ ಮತ್ತು ಶಿಲ್ಪಗಳ ಕೆತ್ತನೆ ಎಂದರೆ ಸುಲಭದ ವಿಷಯವಲ್ಲ. ನೂರಾರು ಜನ ಸ್ಥಪತಿಗಳು, ರೂವಾರಿಗಳು, ವಾಸ್ತುಶಿಲ್ಪಿಗಳು, ಕಲ್ಲುಕುಟಿಗರು ಹೀಗೆ ಪ್ರತಿಯೊಬ್ಬರೂ ಬಿಡುವಿಲ್ಲದಂತೆ ತೊಡಗಿಸಿಕೊಂಡಿದ್ದರಿಂದ ಅಂಥ ಅದ್ಭುತವಾದ ಕೆತ್ತನೆ ಸಾಧ್ಯವಾಗಿದೆ. ಅಂದಿನ ರಾಜರು ಮತ್ತು ಧನಿಕ ವರ್ತಕರು ಆರ್ಥಿಕ ಸಹಾಯ ನೀಡಿದ್ದರೆ ಇವರ ಶಿಲ್ಪಗಳ ರಚನೆಗೆ ಸ್ಫೂರ್ತಿಯಾಗಿದ್ದು ಇವರ ಹಿಂದಿನ ತಲೆಮಾರುಗಳ ಶಿಲ್ಪಿಗಳು. ಇದಲ್ಲದೆ ವೇದಗಳು, ಆಗಮಗಳು, ಪುರಾಣಗಳು. ಇಲ್ಲಿನ ಕಥೆಗಳನ್ನು, ದೇವತೆಗಳ ಸಾಧನೆ ಸಾಹಸಗಳನ್ನು, ಮತ್ತು ಭಕ್ತಜನರಿಗೆ ಅಭಯ ನೀಡುವ ದೇವತೆಗಳ ಮೂರ್ತಿರೂಪವನ್ನು ಜನರಿಗೆ ತೋರಿಸುವುದಕ್ಕಾಗಿ ಅಂದಿನ ಕಾಲದಲ್ಲಿಯೇ ರೂಢಿಗತವಾಗಿದ್ದ ಪ್ರತಿಮಾ ಶಾಸ್ತ್ರದ ಆಧಾರದ ಮೇಲೆ ಶಿಲ್ಪ ರಚನೆಮಾಡಿದ್ದಾರೆ.

ಶಿಲ್ಪಶಾಸ್ತ್ರಗಳು ಮತ್ತು ಪ್ರತಿಮಾಶಾಸ್ತ್ರಗಳು ಇವರಿಗೆ ಮಾರ್ಗದರ್ಶಕಗಳಷ್ಟೆ. ಬರಿಯ ಇದರಿಂದಲೇ ಶಿಲ್ಪರಚನೆ ಸಾಧ್ಯವಿಲ್ಲ. ಕೆತ್ತನೆಯ ಅನುಭವ ಮತ್ತು ಪೂರ್ವ ತಯಾರಿಯ ಅಗತ್ಯವೂ ಇದೆ. ಕೆಲವೆಡೆ ಬಂಡೆಗಳ ಮೇಲೆ ರೇಖಾಚಿತ್ರಗಳನ್ನು ರಚಿಸಿರುವುದು ಮತ್ತು ಅಂತಹ ರೇಖಾಚಿತ್ರದ ಪೂರ್ಣ ಶಿಲ್ಪಗಳನ್ನು ಗೋಡೆಯ ಮೇಲೆ ಕೆತ್ತಿರುವುದನ್ನು ಗಮನಿಸಿದರೆ





ಇವರ ಪೂರ್ವತಯಾರಿ ಯಾವ ಮಟ್ಟದಲ್ಲಿತ್ತೆಂದು ತಿಳಿಯುತ್ತದೆ. ಕೆಲವೆಡೆಗಳಲ್ಲಿ ಅರ್ಧರಚಿಸಿ ಬಿಟ್ಟಿರುವ ಕೆತ್ತನೆಗಳಿಂದ ಇವರ ಶಿಲ್ಪ ಕೆತ್ತನೆಯ ರೀತಿ ತಿಳಿಯುತ್ತದೆ. ಇವೆಲ್ಲವುಗಳ ಆಧಾರದಿಂದ ಚಾಲುಕ್ಯರ ಕಾಲದ ಶಿಲ್ಪಿಗಳ ಶಿಲ್ಪರಚನೆಯ ತಂತ್ರವೂ ತಿಳಿಯುತ್ತದೆ.

ಮುಖ್ಯವಾಗಿ ಚಾಲುಕ್ಯ ಶಿಲ್ಪಿಗಳಿಗೆ ಪ್ರೇರಣೆಯಾಗಿದ್ದು ಬೌದ್ಧ ಧರ್ಮದ ಗುಹಾಲಯಗಳು ಮತ್ತು ಚೈತ್ಯ ಹಾಗೂ ಸ್ತೂಪಗಳಲ್ಲಿನ ಕೆತ್ತನೆಗಳು. ಅಲ್ಲಿನ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳನ್ನೇ ಆಧಾರವಾಗಿಟ್ಟುಕೊಂಡು ಇವರು ಹಿಂದೂ ಧಾರ್ಮಿಕ ಶಿಲ್ಪಗಳನ್ನು ರಚಿಸಿದ್ದಾರೆ. ಅಜಂತಾದ ಚಿತ್ರಗಳು ಮತ್ತು ಶಿಲ್ಪಗಳು ಹಾಗೂ ಗುಹಾಲಯದ ವಾಸ್ತುಶಿಲ್ಪಗಳು ಇವರಿಗೆ ಒಂದು ಪ್ರೇರಣೆಯಾದರೆ ಇನ್ನೊಂದು ಮೂಲ ಅಮರಾವತಿಯ ಸ್ತೂಪದ ಶಿಲ್ಪಗಳು. ಅಮರಾವತಿಯ ಶಿಲ್ಪಗಳ ಪ್ರಭಾವ ಇವರ ಶಿಲ್ಪಗಳಲ್ಲಿ ಸಾಕಷ್ಟು ಕಂಡುಬರುತ್ತದೆ.

ಅದೇ ರೀತಿ ಅಜಂತಾದ ಚಿತ್ರಗಳ ಪ್ರಭಾವವೂ. ಶಿಲ್ಪಗಳ ರಚನೆಯಲ್ಲಿ ಅಮರಾವತಿಯ ಹಲವಾರು ಅಂಶಗಳನ್ನು ಇವರು ಬಳಸಿಕೊಂಡಿರುವುದನ್ನು ಗಮನಿಸಬಹುದು. ಅಜಂತಾವು ಅಂದಿನ ಕಾಲದ ಕಲಾ ಚಟುವಟಿಕೆಗಳ ಕೇಂದ್ರವಾಗಿದ್ದಿತು. ಇದಲ್ಲದೆ ಚಾಲುಕ್ಯರ ಕಾಲದಲ್ಲಿಯೂ ಅಜಂತೆಯಲ್ಲಿ ಚಿತ್ರಗಳ ರಚನೆಯಾಗಿದ್ದು ಮತ್ತು ಚಾಲುಕ್ಯರ ಗುಹಾಲಯಗಳಲ್ಲಿಯೂ ಅಜಂತಾದ ಮಾದರಿಯಲ್ಲಿಯೇ ಭಿತ್ತಿಚಿತ್ರಗಳ ರಚನೆಯಾಗಿದ್ದುದನ್ನು ಇಲ್ಲಿ ಸ್ಮರಿಸಬಹುದು. (ಇಂದು ಈ ಚಿತ್ರಗಳು ಮಾಸಿಹೋಗಿದ್ದರೂ ಅದರ ಕುರುಹುಗಳಿವೆ. ಮಾತ್ರವಲ್ಲದೆ ಶ್ರೀಮತಿ ಸ್ಟೆಲ್ಲಾಕ್ರಾಮಿಶ್ ಈ ಚಿತ್ರಗಳನ್ನು ಮೊದಲ ಬಾರಿಗೆ ಗುರುತಿಸಿ ದಾಖಲಿಸಿದ್ದನ್ನಿಲ್ಲಿ ನೋಡಬಹುದು).

ಬಾದಾಮಿಯ ಶಿಲ್ಪಿಗಳು ಮೊದಲಿಗೆ ಗುಪ್ತ, ಶಾತವಾಹನ, ವಾಕಾಟಕ, ಗಂಗ, ಪಲ್ಲವ, ಹೀಗೆ ತಮಗಿಂತ ಮೊದಲು ಆಡಳಿತ ನಡೆಸಿದ ವಿವಿಧ ರಾಜವಂಶಗಳ ಕಾಲದಲ್ಲಿ ನಿರ್ಮಾಣಗೊಂಡ ನಾಗಾರ್ಜುನಕೊಂಡ, ಅಮರಾವತಿ, ಸಾಂಚಿ, ಅಜಂತಾ ಹೀಗೆ ಎಲ್ಲೆಡೆಯ ರಚನೆಗಳಿಂದ ಪ್ರಭಾವಿತರಾದರೂ ತಮ್ಮತನವನ್ನು ಮರೆಯಲಿಲ್ಲ. ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು ಮತ್ತು ಅದರಲ್ಲಿ ಯಶಸ್ವಿಯೂ ಆದರು.

ಮೊದಮೊದಲ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ವಿವಿಧ ಶೈಲಿಗಳ ಪ್ರಭಾವವು ಕಾಣಿಸಿದರೂ ಅವುಗಳಿಂದ ಹೊರಬಂದರು ಮತ್ತು ತಮ್ಮದೇ ಶೈಲಿಯಲ್ಲಿ ಕೃತಿ ರಚನೆ ಮಾಡಿದರು. ಸಾಕಷ್ಟು ಪ್ರಯೋಗಗಳನ್ನು ಮಾಡಿದರು. ಇದರಿಂದಾಗಿ ಇವರ ಶಿಲ್ಪಗಳಲ್ಲಿ ವೈವಿಧ್ಯವಿದೆ. ಬೃಹತ್ ಗಾತ್ರದ ಶಿಲ್ಪಗಳನ್ನು ರಚಿಸುವಾಗಲೂ ಶಿಲ್ಪದ ಸೌಂದರ್ಯಕ್ಕೆ, ಲಾಲಿತ್ಯಕ್ಕೆ ಕುಂದುಂಟಾಗದಂತೆ ಶಿಲ್ಪಗಳನ್ನು ಸಂಯೋಜಿಸಿದ್ದಾರೆ. ಮುಖ್ಯವಾಗಿ ನೋಡುಗನು ಶಿಲ್ಪವನ್ನು ನೋಡುತ್ತ ಒಂದೆಡೆ ಸ್ತಬ್ಧನಾಗದಂತೆ ಶಿಲ್ಪಕ್ಕೆ ಚಲನೆಯ ಭಾವವನ್ನು ನೀಡಿದ್ದು ಚಾಲುಕ್ಯ ಶಿಲ್ಪಿಗಳು. ವಿವಿಧ ಅಂಗವಿನ್ಯಾಸಗಳಲ್ಲಿ, ಭಾವಭಂಗಿಗಳಲ್ಲಿ ಶಿಲ್ಪಗಳನ್ನು ರಚಿಸಿದ ಶಿಲ್ಪಿಗಳು ಶಿಲ್ಪಗಳು ಏಕತಾನತೆಯಿಂದ ಕೂಡಿರದಂತೆ ಎಚ್ಚರಿಕೆ ವಹಿಸಿದ್ದಾರೆ. ಅದಕ್ಕೆ ಪೂರಕವಾಗಿ ನೆರಳುಬೆಳಕುಗಳ ಸಹಯೋಗವನ್ನು

[illegible]



ಒದಗಿಸಿದ್ದಾರೆ. ಶಿಲ್ಪದಲ್ಲಿ ಅತಿಯಾದ ಅಲಂಕರಣಗಳಿದ್ದರೆ ಶಿಲ್ಪದ ನೈಜ ಸೌಂದರ್ಯಕ್ಕೆ ತೊಡಕುಂಟಾಗುವ ಅಪಾಯವಿದೆ ಎಂದು ತಿಳಿದಿದ್ದ ಶಿಲ್ಪಿಗಳು ಎಲ್ಲಿಯೂ ಅಲಂಕರಣಕ್ಕೆ ಮಹತ್ವ ನೀಡಿಲ್ಲ. ಶಿಲ್ಪಕ್ಕೆ ಅಗತ್ಯವಾದಷ್ಟು ಅಲಂಕಾರಿಕ ಆಭರಣಗಳನ್ನು ತೊಡಿಸಿದ್ದಾರೆ. ದೇಹದ ಬಾಗುಗಳು ಕೂಡಾ ಎಲ್ಲಿಯೂ ನಾಟಕೀಯತೆಯನ್ನುಂಟುಮಾಡುವುದಿಲ್ಲ. ಮುಂದಿನ ಹೊಯ್ಸಳರ ಕಾಲದ ಶಿಲ್ಪಗಳನ್ನು ಮತ್ತು ಅವರದೇ ಮುಂದಿನ ತಲೆಮಾರಿನ ಕಲ್ಯಾಣ ಚಾಲುಕ್ಯರ ಶಿಲ್ಪಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಬಾದಾಮಿಯ ಚಾಲುಕ್ಯರ ಶಿಲ್ಪಗಳನ್ನೇ ಮುಂದುವರಿಸಿದ ರಾಷ್ಟ್ರಕೂಟರ ಕಾಲದ ಶಿಲ್ಪಗಳು ಹಾಗೂ ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಗಳು ಮುಂದೆ ಅಲಂಕರಣದ ಅತಿಯಾದ ಮಹತ್ವದಿಂದಾಗಿ ತಮ್ಮ ನೈಜ ಸೌಂದರ್ಯವನ್ನು ಕಳೆದುಕೊಂಡು ಕುಶಲಕಲೆಯಾಗಿ ಮಾರ್ಪಟ್ಟುದನ್ನು ನೋಡಬಹುದು. ಚಾಲುಕ್ಯರ ಕಾಲದ ಶಿಲ್ಪಗಳು ತಮ್ಮ ಆಕಾರ, ಸಹಜತೆ, ಬಿನ್ನಾಣ ಮತ್ತು ಮುಖ್ಯವಾಗಿ ತಮ್ಮ ಸರಳತೆಯಿಂದ ಗಮನ ಸೆಳೆಯುತ್ತವೆ. ಇವರ ಅಭಿರುಚಿಗೆ ಪೂರಕವಾಗಿ ಹದವಾದ ಹರಳುಗಳ, ಅತಿ ಗಡುಸೂ ಅಥವಾ ಮೃದುವೂ ಆಗಿರದ, ಬೆಳಕನ್ನು ಸ್ವಲ್ಪವೇ ಪ್ರತಿಫಲಿಸುವ ಮರಳುಗಲ್ಲಿನಿಂದ ಕೆತ್ತಿರುವುದರಿಂದ ಶಿಲ್ಪಕಲಾಕೃತಿಗಳಲ್ಲಿ ಸೌಂದರ್ಯವನ್ನು, ಕಲಾಸೊಬಗನ್ನು ಸೃಷ್ಟಿಸಲು ಸಾಧ್ಯವಾಗಿದೆ.

ಚಾಲುಕ್ಯರ ಕಾಲದ ಶಿಲ್ಪಗಳು ಸರಳವೂ ಶಕ್ತಿಯುತವೂ ಆಗಿದ್ದು ವೈವಿಧ್ಯದಿಂದ ಕೂಡಿದ್ದು ಮುಂದಿನ ದಕ್ಷಿಣಭಾರತದ ಎಲ್ಲ ರಚನೆಗಳಿಗೆ, ಮುಖ್ಯವಾಗಿ ಕರ್ನಾಟಕದ ಶಿಲ್ಪ ಮತ್ತು ವಾಸ್ತುಶಿಲ್ಪಗಳ ಬೆಳವಣಿಗೆಗೆ ನಾಂದಿಯಾಯಿತು. ಡಾ. ಶಿವರಾಮ ಕಾರಂತರು ಹೇಳುವಂತೆ, ಮುಂದೆ ಮುಂದೆ ಇದೇ ಚಾಲುಕ್ಯ ವಾಸ್ತುಶಿಲ್ಪ ಶೈಲಿಯು ಕಲಾಸೃಷ್ಟಿ ನಿಪುಣರಾದಂಥ ವ್ಯಕ್ತಿಗಳ ಕೈಗೆ ಸಿಗುವ ಬದಲು ಕೇವಲ ಕಸಬುದಾರರ ಕೈಗೆ ಹೋಯಿತು.'[೪೮] ಚಾಲುಕ್ಯರ ನಂತರವೂ ಕರ್ನಾಟಕದಲ್ಲಿ ಹಲವಾರು ರಾಜವಂಶಗಳ ಕಾಲದಲ್ಲಿ, ವಿವಿಧೆಡೆ ಬಹಳ ದೊಡ್ಡ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣವಾದವು.

ರಾಷ್ಟ್ರಕೂಟರ ಕಾಲದ ಎಲ್ಲೋರಾ ಏಕಶಿಲಾ ದೇವಾಲಯ ಮತ್ತು ಗುಹಾಲಯಗಳು ಕೂಡ ರಚನೆಯಾದವು. ಇಲ್ಲಿಯೂ ಕಲೆಯ ಮತ್ತು ಸೌಂದರ್ಯದ ಅದ್ಭುತ ಅನುಭವವಾಗುತ್ತದೆ. ಬಾದಾಮಿಯ ಚಾಲುಕ್ಯ ಶಿಲ್ಪಶೈಲಿಯಲ್ಲಿಯೇ ರಚನೆಯಾದ ಈ ದೇವಾಲಯವು ಒಂದು ಅದ್ಭುತ. ಆದರೂ ಕಲೆಯಲ್ಲಿ ನೈಜ ಸರಳತೆಯ ಜಾಗದಲ್ಲಿ ವಿಶೇಷವಾದ ಅಲಂಕರಣಗಳು ಸೇರಿಕೊಳ್ಳಲು ಪ್ರಾರಂಭವಾದವು. ಕಲ್ಯಾಣಚಾಲುಕ್ಯರ ಕಾಲದಲ್ಲಿಯೂ ಇದು ಮುಂದುವರೆಯಿತು. ಇದರಿಂದಾಗಿ ಬಾದಾಮಿಯ ಗುಹಾಲಯದ ಶಿಲ್ಪಗಳಂತಹ ರಚನೆ ಸಾಧ್ಯವಾಗಲಿಲ್ಲ. ಕರ್ನಾಟಕದ ದಕ್ಷಿಣಭಾಗದಲ್ಲಿ ಮುಂದೆ ಆಡಳಿತಕ್ಕೆ ಬಂದ ಮತ್ತು ಒಂದೊಮ್ಮೆ ಚಾಲುಕ್ಯರ ಮಾಂಡಲಿಕರಾಗಿದ್ದು

೪೮. ಮಾಲಿನಿ ಮಲ್ಯ (ಸಂ.): ಶಿವರಾಮ ಕಾರಂತರ ಕ. ಪ್ರ – ೨, ಸಂ–೩೦, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ – ೧೫೯

ನಂತರ ಸ್ವತಂತ್ರವಾಗಿ ಆಡಳಿತಕ್ಕೆ ಬಂದ ಹೊಯ್ಸಳರು ಬಾದಾಮಿಯ ಪರಂಪರೆಯನ್ನು ಮುಂದುವರಿಸಿದರಾದರೂ ಚಾಲುಕ್ಯರ ಕಾಲದ ವಿಶೇಷತೆಯಾದ ಸರಳತೆ ಮತ್ತು ನೈಜತೆಯಲ್ಲಿನ ಸೌಂದರ್ಯವು ಕಡಿಮೆಯಾಯಿತು. ಹೊಯ್ಸಳ ಶಿಲ್ಪಗಳು ವಾಸ್ತುಶಿಲ್ಪಗಳ ಒಂದು ಭಾಗವಾಗಿ ಅಲಂಕರಣದ ವಸ್ತುವಾಗಿ ಕಾಣಿಸಿಕೊಂಡವು.



ಅಧ್ಯಾಯ : ಎಂಟು

ಸಮಾರೋಪ

ಪ್ರಸ್ತುತ ಅಧ್ಯಯನವು ಒಟ್ಟು ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅವುಗಳ ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳ ಅಧ್ಯಯನಕ್ಕೆ ಕಾರಣವಾದ ಅಂಶಗಳ ಹಿನ್ನೆಲೆ, ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ಅಧ್ಯಯನ ವಿಧಾನವನ್ನು ಕುರಿತು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚಾಲುಕ್ಯ ರಾಜರು, ಅವರ ಆಡಳಿತ ಕಾಲದಲ್ಲಿ ಕಲೆ, ಸಂಸ್ಕೃತಿ ಮತ್ತು ವಾಸ್ತುಶಿಲ್ಪಗಳಿಗೆ ಅವರು ನೀಡಿರುವ ಮಹತ್ವ, ಆಗಿನ ಕಾಲದ ಸಾಂಸ್ಕೃತಿಕ ಪರಿಸರ, ರಚನೆಯಾದ ಶಿಲ್ಪಗಳ ವರ್ಗೀಕರಣದೊಂದಿಗೆ ಅಧ್ಯಯನ ರೂಪಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚನೆಯಾದ ಶೈವ ಧರ್ಮಕ್ಕೆ ಸಂಬಂಧಪಟ್ಟಂತಹ ಶಿಲ್ಪಗಳು, ಅವುಗಳ ವಿಶೇಷತೆ, ಅಲ್ಲಿನ ದೊಡ್ಡ ಮತ್ತು ಸಣ್ಣ ಗಾತ್ರದ ಶಿಲ್ಪಗಳು, ಬಾದಾಮಿ, ಮಹಾಕೂಟ ಐಹೊಳೆ ಮತ್ತು ಪಟ್ಟದಕಲ್ಲಿನ ಪರಿಸರದಲ್ಲಿ ಕಂಡುಬರುವ ಪ್ರಮುಖ ಶೈವಶಿಲ್ಪಗಳ ಕುರಿತಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದ ವೈಷ್ಣವ ಶಿಲ್ಪಗಳು, ಮುಖ್ಯವಾಗಿ ಬಾದಾಮಿಯ ಎರಡನೆಯ ಮತ್ತು ಮೂರನೆಯ ಗುಹೆಯ ವರಾಹ, ನರಸಿಂಹ ಮತ್ತು ಮಹಾವಿಷ್ಣುವಿನ ಶಿಲ್ಪಗಳಲ್ಲದೆ ಇತರ ಹಲವಾರು ಸಣ್ಣ ಮತ್ತು ಮಧ್ಯಮ ಗಾತ್ರದ ಶಿಲ್ಪಗಳು, ಪಟ್ಟದಕಲ್ಲು ಮತ್ತು ಐಹೊಳೆಯ ಪರಿಸರದಲ್ಲಿ ಕಂಡುಬರುವ ವಿಷ್ಣುವಿನ ಶಿಲ್ಪಗಳನ್ನು ಗಮನಿಸಿ

ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಜೈನ ಮತ್ತು ಬೌದ್ಧ ಧರ್ಮಕ್ಕೆ ಸಂಬಂಧಪಟ್ಟಂತೆ ರಚನೆಯಾದ ಶಿಲ್ಪಗಳು, ಬಾದಾಮಿಯ ನಾಲ್ಕನೆಯ ಜೈನ ಗುಹೆಯ ಶಿಲ್ಪಗಳು, ಐಹೊಳೆಯ ಮೀನಬಸದಿಯ(ಇಂದಿನ ಮೇಣಬಸದಿ) ಶಿಲ್ಪಗಳು, ಮೇಗುತಿ ಗುಡಿ, ಇತ್ಯಾದಿ ಪ್ರದೇಶಗಳಲ್ಲಿ ಕಂಡುಬರುವ ಶಿಲ್ಪಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚನೆಯಾದ ಸಂಕೀರ್ಣ ಶಿಲ್ಪಗಳು, ಮಹಿಷಾಸುರಮರ್ದಿನಿ, ದುರ್ಗೆ, ಗಣಪತಿ, ಲಕುಲೀಶ, ಕೋಷ್ಠರಾಯ, ದಂಪತಿ ಶಿಲ್ಪಗಳು, ಮಿಥುನ ಶಿಲ್ಪಗಳು, ಲಜ್ಜಾಗೌರಿ, ಇತ್ಯಾದಿ ಶಿಲ್ಪಗಳಲ್ಲದೆ, ವಿವಿಧ ಹೂಬಳ್ಳಿಗಳು, ವ್ಯಾಳಿ, ಮಕರ, ಜಾಲಂಧ್ರಗಳಲ್ಲಿ ರಚಿಸಲಾದ ಅಲಂಕರಣ ಶಿಲ್ಪಗಳು, ರಾಮಾಯಣ, ಮಹಾಭಾರತ, ಶ್ರೀಕೃಷ್ಣನ ಬಾಲಲೀಲೆಗಳನ್ನು ಕುರಿತಾಗಿ ರಚಿಸಿದ ಪಟ್ಟಿಕೆಗಳು, ಇತ್ಯಾದಿ ಶಿಲ್ಪಗಳನ್ನು ಕುರಿತಾಗಿ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾದ ವಿವಿಧ ಶಿಲ್ಪಗಳು, ಅವುಗಳ ರಚನೆಗೆ ಪ್ರೇರಣೆಯಾದ ಅಂಶಗಳು, ಅವುಗಳ ಹಿನ್ನೆಲೆ, ಪ್ರಭಾವಗಳು, ಬಾದಾಮಿಯ ಶಿಲ್ಪಗಳ ವಿಶೇಷ ಲಕ್ಷಣಗಳು, ಮುಂದಿನ ಶಿಲ್ಪಕಲಾಪರಂಪರೆಗೆ ಬಾದಾಮಿಯ ಶಿಲ್ಪಕಲೆ ಪ್ರೇರಣೆಯಾದ ಅಂಶಗಳನ್ನು ಕುರಿತಾಗಿ ಇಲ್ಲಿ ವಿವೇಚಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಮೇಲಿನ ಏಳು ಅಧ್ಯಾಯಗಳಲ್ಲಿ ಕಂಡುಕೊಂಡ ಫಲಿತಗಳನ್ನು ಉಪಸಂಹಾರಾತ್ಮಕವಾಗಿ ಸಮೀಕ್ಷಿಸಲಾಗಿದೆ.

ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಗಳ ಕುರಿತಾಗಿ ಅವುಗಳು ರಚನೆಯಾದ ಕಾಲ, ಶೈಲಿ, ಅವುಗಳಲ್ಲಿನ ವಿಶೇಷತೆ, ರಚನಾರೀತಿ ಇತ್ಯಾದಿಗಳನ್ನು ಕುರಿತಾಗಿ ಈ ಮೊದಲಿನ ಅಧ್ಯಾಯಗಳಲ್ಲಿ ಚರ್ಚಿಸಲಾಯಿತು. ಇತಿಹಾಸದ ಆರಂಭದಿಂದ ಭಾರತದಲ್ಲಿ ಶಿಲ್ಪಕಲೆಯು ಬೆಳೆದುಬಂದ ರೀತಿ, ಕ್ರಿಸ್ತಪೂರ್ವದಲ್ಲಿ ಅದರಲ್ಲಿಯೂ ಮುಖ್ಯವಾಗಿ ವೇದಕಾಲದಲ್ಲಿ ಶಿಲ್ಪಗಳ ರಚನೆ ಇತ್ತೇ? ಇದ್ದರೆ ಯಾವ ರೀತಿಯಲ್ಲಿತ್ತು? ಅಂದಿನ ಶಿಲ್ಪಗಳು ಹೇಗಿದ್ದವು? ಇತ್ಯಾದಿಗಳ ಕುರಿತು ಚಿಂತಿಸುತ್ತ ಮುಂದೆ ಚಕ್ರವರ್ತಿ ಅಶೋಕನ ಕಾಲದಿಂದ ಪ್ರಾರಂಭವಾಗಿ ಗುಪ್ತ, ಶಾತವಾಹನ, ವಾಕಾಟಕ, ಕದಂಬ, ಗಂಗ, ಪಲ್ಲವ ಹೀಗೆ ವಿವಿಧ ರಾಜವಂಶಗಳ ಕಾಲದಲ್ಲಿ ಶಿಲ್ಪ ಮತ್ತು ವಾಸ್ತುಶಿಲ್ಪಗಳ ರಚನೆ ಯಾವ ರೀತಿ ನಡೆಯಿತು? ಹೀಗೆ ಹಲವಾರು ವಿಚಾರಗಳನ್ನು ಚರ್ಚಿಸುತ್ತ ಅಧ್ಯಯನ ನಡೆಸಲಾಯಿತು. ಹೀಗೆ ಅಧ್ಯಯನ ನಡೆಸಿದ ಸಂದರ್ಭದಲ್ಲಿ ಭೇಟಿ ನೀಡಿದ ವಿವಿಧ ಪ್ರದೇಶಗಳಲ್ಲಿ ಕಂಡುಬಂದ ಶಿಲ್ಪಗಳು, ಶಾಸನಗಳು, ವಾಸ್ತುಗಳು ಇತ್ಯಾದಿಗಳ ಕುರಿತಾಗಿ ಸೂಕ್ಷ್ಮವಾಗಿ ಗಮನಿಸಲಾಯಿತು. ಹೀಗೆ ಮೂಲ ಆಕರ ಮತ್ತು ಪೂರಕ ಆಕರಗಳ ಅಧ್ಯಯನದಿಂದ ಕಂಡುಬಂದ ಫಲಿತಾಂಶವನ್ನು ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ.



ಬಾದಾಮಿಯ ಚಾಲುಕ್ಯರು ಆಡಳಿತಕ್ಕೆ ತೊಡಗುವ ಕಾಲದಿಂದ ಅವರ ಕೊನೆಯ ರಾಜನಾದ ಇಮ್ಮಡಿ ಕೀರ್ತಿವರ್ಮನ ವರೆಗಿನ ಆಡಳಿತದ ಕಾಲದವರೆಗೆ ನಡೆದಿರುವ ಶಿಲ್ಪ ಮತ್ತು ವಾಸ್ತುಶಿಲ್ಪದ ಪ್ರಯೋಗ ಮತ್ತು ರಚನೆಗಳು ನೂರಾರು ಸಂಖ್ಯೆಯಲ್ಲಿವೆ. ಬಾದಾಮಿ, ಐಹೊಳೆ, ಮಹಾಕೂಟ ಮತ್ತು ಪಟ್ಟದಕಲ್ಲುಗಳಲ್ಲದೆ ಇನ್ನೂ ಹಲವಾರು ಕಡೆಗಳಲ್ಲಿ ದೇವಾಲಯಗಳನ್ನು ರಚಿಸಿದ್ದಾರೆ. ಮುಖ್ಯವಾಗಿ ಆಂಧ್ರದ ಅನಂತಪುರ ಜಿಲ್ಲೆಯ ಆಲಂಪುರದಲ್ಲಿನ ಇವರ ರಚನೆ 'ನವಬ್ರಹ್ಮೇಶ್ವರ ದೇವಾಲಯ'ವೂ ಇಲ್ಲಿ ಉಲ್ಲೇಖನೀಯ. ಇಲ್ಲಿ ಚಾಲುಕ್ಯರ ಕಾಲದ ಸುಂದರವಾದ ದೇವಾಲಯದ ರಚನೆಯಾಗಿದ್ದು ಬಾದಾಮಿಯ ಚಾಲುಕ್ಯರ ಕಾಲದ ಶಿವಾಲಯ ಮತ್ತು ವಿವಿಧ ಶಿಲ್ಪಗಳಿವೆ.

ಮುಖ್ಯವಾಗಿ 'ಲಜ್ಜಾಗೌರಿ'ಯ ಶಿಲ್ಪವು ಎಲ್ಲೆಡೆ ಉಲ್ಲೇಖವಾಗಿದೆ. ಆದರೆ ಶಿಲ್ಪಗಳ ಒಟ್ಟು ನಿರ್ಮಾಣ ಮತ್ತು ಶೈಲಿಯ ಅಧ್ಯಯನದಿಂದ ಬಾದಾಮಿ ಮತ್ತು ಅದರ ಸುತ್ತಲಿನ ಪ್ರದೇಶಗಳನ್ನು ಮಾತ್ರ ಇಲ್ಲಿ ಆಯ್ದುಕೊಳ್ಳಲಾಗಿದೆ. ಉಳಿದೆಡೆಯ ಶಿಲ್ಪಗಳೂ ಪ್ರಾಮುಖ್ಯವನ್ನು ಪಡೆದಿವೆ. ಆದರೆ ಚಾಲುಕ್ಯರ ಗುರುತಿಸಬಹುದಾದ ಶೈಲಿ ಮತ್ತು ವಿಶೇಷತೆಗಳ ಆಧಾರದ ಮೇಲೆ ಇವರ ಕಾಲದ ಶಿಲ್ಪಗಳನ್ನು ಮುಖ್ಯವಾಗಿ ಬಾದಾಮಿಯ ಗುಹಾಲಯಗಳು, ಐಹೊಳೆಯ ಗುಹಾಲಯಗಳು ಮತ್ತು ದೇವಾಲಯಗಳು ಹಾಗೂ ಪಟ್ಟದಕಲ್ಲಿನಲ್ಲಿನ ಶಿಲ್ಪಗಳ ವಿಶೇಷತೆ, ಅವರ ಶಿಲ್ಪಗಳ ಮೇಲೆ ಪ್ರಭಾವ ಬೀರಿದ ಅವರ ಪೂರ್ವಜರ ಶಿಲ್ಪಗಳು ಇತ್ಯಾದಿಗಳನ್ನು ಗಮನಿಸುತ್ತ ಶಿಲ್ಪಗಳನ್ನಿಲ್ಲಿ ಅಧ್ಯಯನ ಮಾಡಲಾಯಿತು.

ಬಾದಾಮಿಯ ಚಾಲುಕ್ಯರ ಕಾಲದ ಶಿಲ್ಪಗಳನ್ನು ಅಧ್ಯಯನ ಮಾಡುವಾಗ ಅದಕ್ಕೆ ಮೊದಲು ಚಾಲುಕ್ಯರ ರಾಜಕೀಯ ಇತಿಹಾಸ, ಸಂಸ್ಕೃತಿ, ಜೀವನ ಇತ್ಯಾದಿಗಳ ಕುರಿತಾಗಿಯೂ ಸ್ವಲ್ಪಮಟ್ಟಿಗಿನ ತಿಳಿವಳಿಕೆ ಅಗತ್ಯವಾಗಿರುತ್ತದೆ. ಅವರ ಕಾಲದ ಜೀವನಪದ್ಧತಿ, ಧಾರ್ಮಿಕ ಪರಿಸರ ಮತ್ತು ನಂಬಿಕೆಗಳು ಇತ್ಯಾದಿಗಳ ಕುರಿತಾಗಿಯೂ ನೋಡಬೇಕಾಗಿತ್ತು. ಇದರಿಂದ ಅಲ್ಲಿ ರಚನೆಯಾದ ಶಿಲ್ಪಗಳ ಅಧ್ಯಯನಕ್ಕೆ ಸಹಾಯಕವಾಗುತ್ತದೆ. ಆದುದರಿಂದ ಆ ಕುರಿತಾದ ಕೆಲವು ವಿಚಾರಗಳನ್ನು ಎರಡನೆಯ ಮತ್ತು ಮೂರನೆಯ ಅಧ್ಯಾಯದಲ್ಲಿ ಹೇಳಲಾಗಿದೆ.

ಬಾದಾಮಿಯ ಚಾಲುಕ್ಯರ ಕಾಲದ ಕಲೆ, ಸಂಸ್ಕೃತಿ, ಇತಿಹಾಸ ಇತ್ಯಾದಿಗಳ ಕುರಿತು ನೂರಾರು ಸಂಶೋಧನೆಗಳು, ಪ್ರಬಂಧಗಳು, ಲೇಖನಗಳು ಪ್ರಕಟವಾಗಿವೆ, ಆಗುತ್ತಲೇ ಇವೆ. ಹಲವಾರು ದಶಕಗಳಿಂದಲೂ ದೇಶೀ ಮತ್ತು ವಿದೇಶೀ ವಿದ್ವಾಂಸರು, ಸಂಶೋಧಕರು ಸಂಶೋಧನೆಗಳನ್ನು ನಡೆಸುತ್ತಲೇ ಇದ್ದಾರೆ. ಪ್ರಕಟವಾಗಿರುವ ಪುಸ್ತಕಗಳೂ ನೂರಾರು ಸಂಖ್ಯೆಯಲ್ಲಿವೆ. ವಿವಿಧ ಭಾಷೆಗಳಲ್ಲಿ ಪ್ರಕಟವಾಗಿರುವ ಗ್ರಂಥಗಳು, ಪ್ರಬಂಧಗಳು, ಲೇಖನಗಳನ್ನು ನೋಡುತ್ತಿದ್ದರೆ ಆಶ್ಚರ್ಯವಾಗುತ್ತದೆ. ನಾವು ಮಾಡಲು ಸಾಧ್ಯವೇ, ಅಗತ್ಯವೇ ಎಂಬ ಪ್ರಶ್ನೆ ಏಳುತ್ತದೆ. ಆದರೂ ನಮ್ಮದೂ ಒಂದು ಮಾಡಿದರೆ ತಪ್ಪೇನು ಎಂಬಂತೆ ಇಲ್ಲಿನ ಶಿಲ್ಪಕಲೆಯ



ರಾಶಿಯನ್ನು ನನಗೆ ತಿಳಿದಂತೆ ನೋಡಿದ್ದೇನೆ. ಪ್ರಶ್ನೆ ಬಂದಾಗ ಅಥವಾ ಗೊಂದಲವಾದಾಗಲೆಲ್ಲ ಪ್ರಕಟಿತ ಗ್ರಂಥಗಳ, ವಿದ್ವಾಂಸರ ಅಭಿಪ್ರಾಯಗಳ ಮೊರೆಹೊಕ್ಕಿದ್ದೇನೆ. ಸಮಸ್ಯೆಗಳನ್ನು ಸುಮಾರಾಗಿ ಅಥವಾ ಸಮಾಧಾನಕರವಾಗಿ ಬಗೆಹರಿಸಿಕೊಂಡಿದ್ದೇನೆ. ಹಾಗಿದ್ದರೂ ಕೆಲವು ಸಮಸ್ಯೆಗಳು–ಪ್ರಶ್ನೆಗಳು ಪೂರ್ಣವಾಗಿ ಬಗೆಹರಿದಿದೆ ಎಂಬ ನಂಬಿಕೆ ನನಗಿಲ್ಲ. ನನಗೆ ಹೀಗೆ ಅನ್ನಿಸಿದೆ ಎಂಬುದನ್ನಷ್ಟೇ ಇಲ್ಲಿ ಹೇಳಿದ್ದೇನೆ, ಇದೇ ಸರಿ ಎಂದು ನಾನು ಹೇಳುವುದಿಲ್ಲ. ಮೇಲಾಗಿ ನಾನು ಶಿಲ್ಪಕಲೆಯ ವಿದ್ಯಾರ್ಥಿ, ಶಿಲ್ಪಗಳೇ ನನ್ನ ಆಕರ್ಷಣೆ, ಹೀಗಾಗಿ ಇವುಗಳ ಕುರಿತೇ ನನ್ನ ಅಧ್ಯಯನವನ್ನು ಸೀಮಿತಗೊಳಿಸಿ ವಾಸ್ತುಶಿಲ್ಪಗಳು, ಶಾಸನಗಳು, ಇತರ ಕೆತ್ತನೆಗಳ ಕಡೆಗೆ ಕಡಿಮೆ ಗಮನ ನೀಡಿದ್ದೇನೆ. ಶಾಸನಗಳ ಗ್ರಾಂಥಿಕ ಲಿಪಿಯನ್ನು ಓದಲು ಪ್ರಯತ್ನಿಸಿದ್ದೇನೆ. ಇದರಲ್ಲಿ ಹಲವಾರು ತೊಡಕುಗಳಿದ್ದುದರಿಂದ ಬಹಳ ಕಷ್ಟವಾಗಿದೆ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೂ ಸ್ವಲ್ಪವಾದರೂ ಅಧ್ಯಯನ ನಡೆಸಲು ಸಾಧ್ಯವಾಗಿದೆ. ಇದರಿಂದ ಶಿಲ್ಪಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ.

ವಾಸ್ತುಶಿಲ್ಪಗಳು ಮತ್ತು ಶಿಲಾಶಾಸನಗಳು ನನ್ನ ಅಧ್ಯಯನದ ಮಿತಿಯ ಆಚೆಗಿನವುಗಳಾದುದರಿಂದ ಅವುಗಳ ಕುರಿತಾಗಿ ಇಲ್ಲಿ ಹೆಚ್ಚಿನ ವಿಶ್ಲೇಷಣೆ ಮಾಡಿಲ್ಲ. ಇದು ಉದ್ದೇಶಪೂರ್ವಕವಾಗಿ ಸಮಯ ಮತ್ತು ಅಧ್ಯಯನದ ಮಿತಿಯಲ್ಲಿ ನಾನು ಹಾಕಿಕೊಂಡ ಮಿತಿಯಾಗಿರುವುದರಿಂದ ಶಿಲ್ಪಗಳಿಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗಿದೆ.

ಚಾಲುಕ್ಯರ ಶಿಲ್ಪಗಳ ವಿಚಾರದಲ್ಲಿ ಹಲವಾರು ವಿದ್ವಾಂಸರ ಅಭಿಪ್ರಾಯಗಳಿವೆ. ಅವುಗಳ ಕಾಲಮಾನದ ನಿಖರವಾದ ಚಿತ್ರಣ ಸಿಗುವುದಿಲ್ಲ. ಯಾವುದು ಮೊದಲು, ಯಾವುದು ನಂತರ, ಯಾವ ಶಿಲ್ಪದ ಪ್ರಭಾವ ಎಲ್ಲಿ, ಎಷ್ಟಾಗಿದೆ ಇತ್ಯಾದಿ ಪ್ರಶ್ನೆಗಳಿವೆ. ಇವುಗಳು ಬಹುಶಃ ಬಗೆಹರಿಯದ, ಊಹಾತ್ಮಕವಾದ ವಿಚಾರಗಳಾಗಿಬಿಡುತ್ತವೆ. ಇನ್ನೊಂದು ಪ್ರಮುಖ ಸಂಗತಿಯೆಂದರೆ ಕೆಲವು ದೇವಾಲಯಗಳು ಮೂಲತಃ ಅದೇ ದೇವರ ಹೆಸರಿನ ಗುಡಿಗಳಲ್ಲ, ಶೈವ ದೇವಾಲಯವು ವಿಷ್ಣು ದೇವಾಲಯವಾಗಿಯೋ, ಅಥವಾ ವೈಷ್ಣವ ದೇವಾಲಯವು ಶೈವ ದೇವಾಲಯವಾಗಿಯೋ ಪರಿವರ್ತನೆ ಹೊಂದಿರುವ ಸಾಧ್ಯತೆಗಳಿವೆ. ಉದಾಹರಣೆಗೆ, ಲಾಡಖಾನ್ ದೇವಾಲಯ, ಇಲ್ಲಿ ಶಿವನ ಲಿಂಗ ಮತ್ತು ನಂದಿಯ ಶಿಲ್ಪಗಳಿವೆ, ಆದರೆ ಬಾಗಿಲ ಮೇಲೆ ಲಲಾಟದಲ್ಲಿ ಗರುಡನ ಕೆತ್ತನೆಯಿದೆ.

ಗರುಡನ ಕೆತ್ತನೆ ವಿಷ್ಣುವಿನ ದೇವಾಲಯಗಳಲ್ಲಿರುವಂತಹವು. ಅದೇ ರೀತಿ ಮೇಗಣ ಶಿವಾಲಯವು ವಿಷ್ಣುವಿನ ದೇವಾಲಯವಾಗಿತ್ತು, ಮಾಲೆಗಿತ್ತಿ ಶಿವಾಲಯವು ಸೂರ್ಯ ದೇವಾಲಯವಾಗಿತ್ತು ಎಂದು ತಜ್ಞರು ಹೇಳಿದ್ದಾರೆ. ಇಂತಹ ವಿಚಾರಗಳೆಲ್ಲ ನನ್ನ ಅಧ್ಯಯನದ ದೃಷ್ಟಿಯಿಂದ ಮಹತ್ವ ಪಡೆದಿಲ್ಲ, ಅದರ ಬದಲಾಗಿ ಅಲ್ಲಿನ ಶಿಲ್ಪಗಳ ಕೆತ್ತನೆ ಹೇಗಿದೆ, ರಚನೆ ಹೇಗಿದೆ, ಕಥಾವಸ್ತು ಅಥವಾ ಚಿತ್ರಿತ ವಸ್ತು ಯಾವ ರೀತಿಯಲ್ಲಿದೆ ಇತ್ಯಾದಿಗಳು ನನಗೆ ಹೆಚ್ಚು

[illegible]



ಪ್ರಸ್ತುತವಾದುದರಿಂದ ಇತರ ವಿಚಾರಗಳತ್ತ ಹೆಚ್ಚಿನ ಗಮನ ನೀಡಿಲ್ಲ. ಶಿಲ್ಪಗಳು ನಮ್ಮ ಕಣ್ಣ ಮುಂದಿರುವುದರಿಂದ ಅವುಗಳೇ ನಮಗೆ ಸತ್ಯವಾಗುತ್ತವೆ. ಅವುಗಳ ಸೌಂದರ್ಯ, ಸಂಯೋಜನೆ, ಶಿಲ್ಪದಲ್ಲಿ ಕಾಣಿಸುವ ವಿಶೇಷತೆಗಳು, ಶಿಲ್ಪಿಯು ಬಳಸಿಕೊಂಡ ಸಂಯೋಜನಾ ತಂತ್ರ ಇತ್ಯಾದಿಗಳತ್ತ ನೋಟ ಹರಿಸಿದ್ದೇನೆ. ಆದುದರಿಂದ ಶಿಲ್ಪಕಲೆಯ ಇತಿಹಾಸವಾಗಲೀ, ಸಂಶೋಧನೆಯ ಕುರಿತಾದ ವಿದ್ವಾಂಸರ ಚರ್ಚೆಗಳನ್ನಾಗಲೀ ಇಲ್ಲಿ ಉಲ್ಲೇಖಿಸಿಲ್ಲ. ಅಗತ್ಯ ಕಂಡ ವಿಚಾರಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸಿದ್ದೇನೆ. ಬಾದಾಮಿಯ ಪರಿಸರದ ಶಿಲ್ಪಗಳನ್ನು ಗಮನಿಸಿದಾಗ ಕೆಲವೊಂದು ಆಶ್ಚರ್ಯಕರವಾದ ಹಾಗೂ ಕುತೂಹಲ ಉಂಟುಮಾಡುವ ಸಂಗತಿಗಳು ಕಾಣಿಸುತ್ತವೆ. ಇಲ್ಲಿ ಹಲವಾರು ದೇವಾಲಯಗಳು ನಿರ್ಮಾಣವಾಗಿವೆ. ಇವುಗಳು ಚಾಲುಕ್ಯರ ಪ್ರಾರಂಭದ ಕಾಲದಲ್ಲಿ ರಚನೆಯಾದ ದೇವಾಲಯಗಳು. ಗುಹಾಲಯಗಳ ಸಮಕಾಲೀನವಾದ ಈ ರಚನೆಗಳಲ್ಲಿನ ಕೆತ್ತನೆಗಳು ಕೆಲವು ವಿಚಾರಗಳಲ್ಲಿ ಬಾದಾಮಿಯ ಗುಹಾಲಯದ ಶಿಲ್ಪಗಳಿಗಿಂತ ಭಿನ್ನವಾಗಿವೆ. ಅವುಗಳಲ್ಲಿ ಗಣ ಶಿಲ್ಪಗಳು ಕೂಡಾ ಒಂದು.

ಸಾಮಾನ್ಯವಾಗಿ ಚಾಲುಕ್ಯರ ಕಲೆ ಮತ್ತು ಇತಿಹಾಸವನ್ನು ಅಧ್ಯಯನ ಮಾಡಿದವರೆಲ್ಲರೂ ಇವುಗಳ ಸೂಕ್ಷ್ಮ ಕೆತ್ತನೆಯ ವಿಶ್ಲೇಷಣೆ ಮಾಡಿರುವುದು ಕಡಿಮೆಯೆಂದೆನ್ನಿಸುತ್ತದೆ. ಇದಕ್ಕೆ ಕಾರಣ ದೇವತಾಶಿಲ್ಪಗಳು ಮತ್ತು ಇತರ ಬೃಹತ್ ಗಾತ್ರದ ಶಿಲ್ಪಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿರುವುದು. ಗಣ ಶಿಲ್ಪಗಳು ಕುಬ್ಜ ಶಿಲ್ಪಗಳಾಗಿದ್ದು ಮೇಲುನೋಟಕ್ಕೆ ಒಂದೇ ರೀತಿಯಲ್ಲಿವೆ. ಆದರೆ ಹತ್ತಿರದಿಂದ ಸೂಕ್ಷ್ಮವಾಗಿ ಗಮನಿಸಿದರೆ ವ್ಯತ್ಯಾಸ ಕಾಣಿಸುತ್ತದೆ. ಮೇಲಿನ ಶಿವಾಲಯದಲ್ಲಿ ಕೆತ್ತಲಾಗಿರುವ ಗಣ ಶಿಲ್ಪಗಳು ಆಕಾರದಲ್ಲಿ ಕುಬ್ಜವಾಗಿದ್ದರೂ ಮುಖಭಾವ ಮತ್ತು ದೇಹದ ರಚನೆಯಲ್ಲಿ ವಯಸ್ಕರ ಲಕ್ಷಣವಿದೆ.

ದೇಹದ ಬಾಹುಗಳು ಹೆಚ್ಚು ವಕ್ರತೆಯನ್ನು ಹೊಂದಿವೆ. ತಲೆಯಲ್ಲಿನ ಕೇಶರಾಶಿಯ ಕೆತ್ತನೆಯಲ್ಲಿ ವೈವಿಧ್ಯವಿದೆ. ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಕುಬ್ಜಶಿಲ್ಪಗಳಲ್ಲಿ ಲೌಕಿಕ ಜೀವನದ ಚಿತ್ರಣವಿದೆ, ಪ್ರತಿಯೊಂದು ಶಿಲ್ಪದ ಮುಖವೂ ಇನ್ನೊಂದಕ್ಕಿಂತ ಭಿನ್ನವಾಗಿದೆ. ಭಾವನೆಯ ಪ್ರದರ್ಶನದಲ್ಲಿ ವ್ಯತ್ಯಾಸವಿದೆ. ಮೊದಲ ಗುಹಾಲಯದ ಶಿಲ್ಪಗಳಲ್ಲಿ ಇವು ಕಂಡುಬರುವುದಿಲ್ಲ. ಇವು ಸಾಮಾನ್ಯವಾಗಿ ಒಂದೇ ರೀತಿಯಲ್ಲಿ ಕೆತ್ತಿದಂತೆ ಕಂಡುಬರುತ್ತದೆ. ಎರಡನೆಯ ಗುಹಾಲಯದ ಗಣಶಿಲ್ಪಗಳು ಒತ್ತೊತ್ತಾಗಿ ಕೆತ್ತಿದಂತಿದ್ದು ಹೆಚ್ಚು ಆಳವಿಲ್ಲ. ದೇಹದ ಬಾಗುಗಳು ಕಡಿಮೆ. ಜಡತ್ವವಿದೆ. ಮುಖದಲ್ಲಿ ವಯಸ್ಕ ಕಳೆಯಿಲ್ಲ, ಬದಲಾಗಿ ಮಕ್ಕಳ ಮುಖಭಾವವಿದೆ.

ಇದು ಶಿಲ್ಪಿಗಳ ಸ್ವಂತಿಕೆಯಾಗಿದೆ. ಕಲಾವಿದರು ತಮ್ಮ ವೈಯಕ್ತಿಕ ಕೌಶಲ್ಯದ ಅನುಭವದ ಹಿನ್ನೆಲೆಯಲ್ಲಿ ಕೃತಿ ರಚನೆ ಮಾಡಿರುವುದು ಇದಕ್ಕೆ ಕಾರಣವಿರಬಹುದು. ಪ್ರತಿಯೊಂದು ಗಣ ಶಿಲ್ಪದಲ್ಲಿಯೂ ವಿಭಿನ್ನವಾದ ಕೇಶ ಶೈಲಿ, ವಸ್ತ್ರವಿನ್ಯಾಸ, ದೇಹರಚನೆ, ಆಭರಣಗಳ ರಚನೆಯಲ್ಲಿ



ವೈವಿಧ್ಯವಿದೆ. ಈ ರೀತಿಯ ರಚನೆ ದೇವತಾಶಿಲ್ಪಗಳಲ್ಲಿ ಕಾಣಿಸದು. ದೇವತಾಶಿಲ್ಪಗಳ ರಚನೆಯಲ್ಲಿ ಪ್ರತಿಮಾಶಾಸ್ತ್ರದ ರೀತಿಯಲ್ಲಿಯೇ ಪ್ರತಿಯೊಂದು ಅಂಗ, ಭಾವ ಮತ್ತು ಉಡುಗೆ–ತೊಡುಗೆಗಳನ್ನು ರಚಿಸಿರುವುದರಿಂದ ಇಲ್ಲಿ ಕಲಾವಿದರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಮಿತಿಯಿರುತ್ತದೆ. ಆದರೆ ಲೌಕಿಕ ಶಿಲ್ಪಗಳ ರಚನೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯವಿರುವುದರಿಂದ ತಮಗೆ ಖುಶಿ ಎನ್ನಿಸಿದ ರೀತಿಯಲ್ಲಿ ಶಿಲ್ಪ ಕೆತ್ತನೆ ಮಾಡಿದಂತೆ ತೋರುತ್ತದೆ. ಬರಿಯ ದೇವಾಲಯದ ಗೋಡೆಯ ಸ್ಥಳಾವಕಾಶವನ್ನು ಭರ್ತಿಮಾಡುವುದರ ಜೊತೆಯಲ್ಲಿ ಅಂದಿನ ಜೀವನ ರೀತಿ ಮತ್ತು ಸಾಮಾಜಿಕ ಚಿತ್ರಣವನ್ನು ನೀಡುವುದು ಶಿಲ್ಪಿಗಳ ಉದ್ದೇಶವಾಗಿರುವಂತಿದೆ. ಇಲ್ಲಿನ ಶಿಲ್ಪಗಳನ್ನು ಗಮನಿಸಿದರೆ ಕೆಲ ಶಿಲ್ಪಗಳಲ್ಲಿ ಸಾಮಾಜಿಕ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇಲ್ಲಿದ್ದಾರೆನ್ನಿಸುತ್ತದೆ. ಮೇಗಣ ಶಿವಾಲಯದ ಪಟ್ಟಿಕೆಯಲ್ಲಿರುವ ಗಣ ಶಿಲ್ಪಗಳಲ್ಲಿ ಕೆಲವು ಶಿಲ್ಪಗಳಲ್ಲಿ, ಅಲಂಕೃತವಾದ ಕೇಶಶೈಲಿ, ತಲೆಯ ಮೇಲೆ ಪಟ್ಟಿ(ಮುಂಡಾಸು), ದಪ್ಪನೆಯ ಹಾರಗಳು, ತುಂಬಿದ ಹೊಟ್ಟೆ, ದೃಢಕಾಯದ ಕೆತ್ತನೆ ಕಂಡುಬರುತ್ತದೆ. ಮೂರನೆಯ ಗುಹಾಲಯದ ಗಣಶಿಲ್ಪಗಳು ಏಕತಾನತೆಯಿಂದ ಕೂಡಿವೆ. ಇಲ್ಲಿ ಸ್ಥಳಾವಕಾಶದ ಭರ್ತಿಗಾಗಿ ಗಣ ಶಿಲ್ಪಗಳ ರಚನೆಯಾದಂತಿದೆ.

ಮೂರನೆಯ ಗುಹಾಲಯವು ರಚನೆಯಲ್ಲಿ ಅತಿ ಸುಂದರವಾದ ಮತ್ತು ದೊಡ್ಡದಾದ ಗುಹಾಲಯ. ಇಲ್ಲಿನ ಕೆತ್ತನೆಗಳು ವೈವಿಧ್ಯವನ್ನು ಹೊಂದಿವೆ. ಶಿಲ್ಪಗಳನ್ನು ಹೆಚ್ಚು ಕಲಾತ್ಮಕವಾಗಿ ವಿವರವಾಗಿ ಕೆತ್ತಲಾಗಿದೆ. ಇಲ್ಲಿ ಬಿಡಿ ಶಿಲ್ಪಗಳಿಗಿಂತ ಗುಂಪು ಶಿಲ್ಪಗಳು ಮತ್ತು ಕಥಾನಕಗಳಿಗೆ ಹೆಚ್ಚಿನ ಅವಕಾಶ ದೊರೆತಿದೆ. ಅದಲ್ಲದೆ ಸಾಲಭಂಜಿಕೆ ಶಿಲ್ಪಗಳು ಇಲ್ಲಿನ ಪ್ರಮುಖ ಆಕರ್ಷಣೆಯಾಗಿವೆ. ಇದಲ್ಲದೆ ಬೃಹದಾಕಾರದ ಮಹಾವಿಷ್ಣು, ತ್ರಿವಿಕ್ರಮ, ವರಾಹ ಶಿಲ್ಪಗಳು, ಹರಿಹರ, ಅರ್ಧನಾರೀಶ್ವರ ಇತ್ಯಾದಿ ಶಿಲ್ಪಗಳು ಪ್ರಮುಖ ಆಕರ್ಷಣೆಗಳು. ಹಾಗಿದ್ದರೂ ಲೌಕಿಕ ಶಿಲ್ಪಗಳಿಗೂ ಮಿಥುನ ಶಿಲ್ಪಗಳಿಗೂ ಇಲ್ಲಿ ಅವಕಾಶವಿದೆ.

ಶಿಲ್ಪದ ಪ್ರತಿಯೊಂದು ಚದರವನ್ನು ಕಲಾತ್ಮಕವಾಗಿ ತೋರಿಸುವಲ್ಲಿ ಹೆಚ್ಚು ಗಮನ ನೀಡಲಾಗಿದೆ. ಆದರೆ ಕಥಾನಕಗಳ ಕೆತ್ತನೆಯ ಪಟ್ಟಿಕೆಗಳ ಶಿಲ್ಪಗಳ ಕೆತ್ತನೆಯಲ್ಲಿ ಮಾಲೆಗಿತ್ತಿ ಶಿವಾಲಯ ಮತ್ತು ಮೇಗಣ ಶಿವಾಲಯದ ಕೆತ್ತನೆಗಳೇ ಹೆಚ್ಚು ಪರಿಪೂರ್ಣವಾಗಿರುವಂತೆ ಕಂಡುಬರುತ್ತದೆ. ಮಾಲೆಗಿತ್ತಿ ದೇವಾಲಯದ ಶಿಲ್ಪಗಳು ಗಾತ್ರದಲ್ಲಿ ಸಣ್ಣವಾದರೂ ಸುಂದರವಾದ ಶಿಲ್ಪಗಳು. ಆದರೆ ಇಲ್ಲಿನ ಶಿಲ್ಪಗಳಲ್ಲಿನ ದೇಹರಚನೆಯಲ್ಲಿ ಮತ್ತು ಆಕಾರದಲ್ಲಿ ಗುಪ್ತರ ಕಾಲದ ಶಿಲ್ಪಗಳಲ್ಲಿನಂತೆ ತಲೆ ದೇಹಾಕಾರಕ್ಕೆ ಹೋಲಿಸಿದರೆ ತುಸು ಸಣ್ಣದು ಮತ್ತು ಅಂಡಾಕಾರದಲ್ಲಿವೆ. ಮೂರನೆಯ ಗುಹೆಯ ಬೃಹತ್ ಶಿಲ್ಪಗಳಲ್ಲಿ ತಲೆಯು ಚೌಕ ಅಥವಾ ದೊಡ್ಡ ವೃತ್ತವಾಗಿವೆ.

ಇಲ್ಲಿನ ಶಿಲ್ಪಗಳು ಹೆಚ್ಚು ಆಳವನ್ನು ಹೊಂದಿದ್ದು ತ್ರಿಮಾನದ ಪರಿಣಾಮವನ್ನುಂಟು ಮಾಡುತ್ತವೆ. ಆದರೆ ಜೈನ ಗುಹಾಲಯದ ಶಿಲ್ಪಗಳು ಇವಕ್ಕಿಂತ ಭಿನ್ನ. ಇದು ನಂತರದ ರಚನೆಯಾಗಿದೆ. ಇಲ್ಲಿ ಕಲಾವಿದರಿಗೆ ಸ್ವಾತಂತ್ರ್ಯ ಕಡಿಮೆ. ಇಲ್ಲಿನ ಎಲ್ಲ ಶಿಲ್ಪಗಳು ಹೆಚ್ಚುಕಡಿಮೆ

ಏಕತಾನತೆಯ ಶಿಲ್ಪಗಳು. ತೀರ್ಥಂಕರ ಶಿಲ್ಪಗಳನ್ನು ಬಿಟ್ಟು ಉಳಿದ ಶಿಲ್ಪಗಳ ರಚನೆಯಲ್ಲಿಯೂ ಕಲಾತ್ಮಕ ಕೆತ್ತನೆ ಮತ್ತು ಅಲಂಕರಣಗಳಿಗೆ ಮಹತ್ವ ನೀಡಿಲ್ಲ. ಹಾಗಿದ್ದರೂ ಒಟ್ಟು ಶಿಲ್ಪಗಳನ್ನು ಗಮನಿಸಿದರೆ ಶೈವ, ವೈಷ್ಣವ ಹಾಗೂ ಜೈನ ಧರ್ಮಗಳ ಶಿಲ್ಪ ರಚನೆಯಲ್ಲಿ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ ಶಿಲ್ಪ ರಚನೆ ಮಾಡಿರುವುದು ಕಂಡುಬರುತ್ತದೆ. ಐಹೊಳೆಯ ಶಿಲ್ಪಕಲೆಯ ಅಧ್ಯಯನ ಮಾಡುವವರಿಗೆ ನಿಜವಾಗಿಯೂ ಸವಾಲಿನ ಕೆಲಸವೇ ಸರಿ. ಇಲ್ಲಿನ ಪ್ರತಿಯೊಂದು ಗುಡಿಯೂ ವಿಭಿನ್ನ, ಶಿಲ್ಪಗಳ ರಚನೆಯಲ್ಲಿಯೂ ವೈವಿಧ್ಯವಿದೆ. ದುರ್ಗಾ ದೇವಾಲಯವೊಂದರಲ್ಲಿಯೇ ಮೂರು ನಾಲ್ಕು ವಿಭಿನ್ನ ರೀತಿಯ ಕೆತ್ತನೆಗಳು ಕಾಣಿಸುತ್ತವೆ. ರಾವಳಫಡಿಯ ಗುಹಾಲಯದ ಶಿಲ್ಪಗಳೂ ಉಳಿದ ಗುಡಿಯ ಶಿಲ್ಪಗಳಂತಿಲ್ಲ. ಇಲ್ಲಿನ ಕೆತ್ತನೆಯಲ್ಲಿ ವ್ಯತ್ಯಾಸವಿದೆ.

ಇಲ್ಲಿನ ಶಿಲ್ಪಗಳಲ್ಲಿನ ಉದ್ದನೆಯ ಕಿರೀಟಗಳ ರಚನೆ ಮುಂದಿನ ಬಾದಾಮಿಯ ಯಾವುದೇ ಗುಹಾಲಯದ ಶಿಲ್ಪಗಳಲ್ಲಾಗಲೀ, ಅಥವಾ ರಾಚನಿಕ ಮಂದಿರಗಳ ಶಿಲ್ಪಗಳಲ್ಲಾಗಲೀ ಕಂಡುಬರದಿರುವುದು ಆಶ್ಚರ್ಯ. ಈ ರೀತಿಯ ಉದ್ದನೆಯ ದೊಡ್ಡ ಕಿರೀಟಗಳು ಮುಂದೆ ಹಲವು ಶತಮಾನಗಳ ನಂತರದ ಚೋಳರ ಮತ್ತು ವಿಜಯನಗರದ ಅರಸರ ಕಾಲದ ಶಿಲ್ಪಗಳಲ್ಲಿ ಕಾಣಿಸುತ್ತವೆ. ಹಾಗಿದ್ದರೆ ಈ ರೀತಿಯ ದೇಹವಿನ್ಯಾಸ ಮತ್ತು ಶಿರೋಭೂಷಣಗಳ ರಚನೆಗೆ ಕಾರಣವೇನು, ಸ್ಫೂರ್ತಿಯೇನೆಂಬುದು ತಿಳಿಯುವುದಿಲ್ಲ. ಅದೇ ರೀತಿ ಉಡುಗೆ ತೊಡುಗೆಗಳ ವಿಚಾರವನ್ನೂ ನೋಡಬಹುದು.

ಬಟ್ಟೆಯ ನೆರಿಗೆಗಳು, ಅಲಂಕರಣ, ದೇಹದ ಬಾಗು-ಬಳುಕುಗಳು, ಶಿಲ್ಪದ ಒಟ್ಟು ಆಕಾರ ಅದೇ ಪರಿಸರದ ಇತರ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ. ಇದಕ್ಕೆ ಕಾರಣ ದುರ್ಗಾ ದೇವಾಲಯದ ರಚನೆಗಿಂತ ಸರಿಸುಮಾರು ನೂರು ವರ್ಷಗಳಿಗಿಂತಲೂ ಮೊದಲೇ ಈ ಗುಹಾಲಯದ ರಚನೆಯಾಗಿರಬಹುದಾದ ಸಾಧ್ಯತೆಯಿದ್ದು. ಇಲ್ಲಿನ ಶಿಲ್ಪಗಳಲ್ಲಿ ಗುಪ್ತರ ಶೈಲಿ ಮತ್ತು ಅಜಂತಾದ ಶೈಲಿಗಳು ಪ್ರಭಾವ ಬೀರಿರುವುದು ಸಾಧ್ಯವಿದೆ. ಬಾದಾಮಿಯ ಮೊದಲ ಗುಹಾಲಯ ಮತ್ತು ರಾವಣಫಡಿ ಗುಹಾಲಯದ ವಸ್ತು ಮೇಲುನೋಟಕ್ಕೆ ಒಂದೇ ಇದ್ದರೂ ಕೆತ್ತನೆಯ ರೀತಿಯಲ್ಲಿ ವ್ಯತ್ಯಾಸವಿದೆ. ಬಾದಾಮಿಯ ಮೂರನೆಯ ಗುಹಾಲಯದ ವಿಷ್ಣು, ವರಾಹ, ತ್ರಿವಿಕ್ರಮ ಶಿಲ್ಪಗಳು ಮತ್ತು ದುರ್ಗಾಗುಡಿಯ ಅದೇ ವಸ್ತುವಿನ ಶಿಲ್ಪಗಳು ಒಂದೇ ರಾಜವಂಶದ ರಚನೆಯಾದರೂ ಶಿಲ್ಪ ರಚನೆಯಲ್ಲಿ ಅಗಾಧ ವ್ಯತ್ಯಾಸವಿದೆ.

ದುರ್ಗಾದೇವಾಲಯದ ಶಿಲ್ಪಗಳು ಬಾದಾಮಿಯ ಚಾಲುಕ್ಯರ ಕಾಲದ ಪರಿಪೂರ್ಣ ಮತ್ತು ಸ್ವತಂತ್ರ ಶೈಲಿಯಾಗಿರಬಹುದೆನ್ನಿಸುತ್ತದೆ. ಶಿಲ್ಪಗಳು ಅಲಂಕರಣದಿಂದ ಹೊರಬಂದು ನೈಜತೆಯತ್ತ ಹೊರಳಿದಂತಿವೆ. ಗುಹಾಲಯದ ಕೆತ್ತನೆಗಿಂತಲೂ ಬೇರೆಡೆಯಲ್ಲಿ ಕೆತ್ತಿ ಗೋಡೆಯಲ್ಲಿ ಪ್ರತಿಷ್ಠಾಪಿಸುವಾಗಿನ ಅನುಕೂಲವನ್ನು ಶಿಲ್ಪಿಯು ಬಳಸಿಕೊಂಡಿರಬಹುದು. ಇಲ್ಲಿ ಶಿಲ್ಪಿಗೆ ಹೆಚ್ಚಿನ

ಸ್ವಾತಂತ್ರ್ಯವಿದೆ. ಇದು ಕೆತ್ತನೆಯಲ್ಲಿ ವ್ಯಕ್ತವಾಗಿದೆ. ಹುಚ್ಚಮಲ್ಲಿ ಗುಡಿಯಲ್ಲಿನ ಕಾರ್ತಿಕೇಯನ ಶಿಲ್ಪಭಿತ್ತಿಯನ್ನಿಲ್ಲಿ ಉಲ್ಲೇಖಿಸಬಹುದು. ಇದೊಂದು ವಿಭಿನ್ನವಾದ ರಚನೆ. ಬಾದಾಮಿಯ ಮೊದಲನೆಯ ಗುಹೆಯ ಕಾರ್ತಿಕೇಯನಿಗೂ ಇಲ್ಲಿನದಕ್ಕೂ ಸಾಕಷ್ಟು ವೈವಿಧ್ಯವಿದೆ. ಇಲ್ಲಿನ ಕಾರ್ತಿಕೇಯ ಬಾಲಕ, ಶಿಲ್ಪದ ಮುಖ್ಯಭಾಗವನ್ನು ಆತನು ಕುಳಿತಿರುವ ನವಿಲು ಆಕ್ರಮಿಸಿಕೊಂಡಿದೆ. ಆತನು ಕುಳಿತಿರುವ ಭಂಗಿ, ಕತ್ತಿ ಹಿಡಿದಿರುವ ರೀತಿ, ಹಿನ್ನೆಲೆಯಲ್ಲಿ ದೇವತೆಗಳು ಹೂವಿನ ಹಾರವನ್ನು ಹಿಡಿದು ಕೆತ್ತಿರುವ ರೀತಿಯಾಗಲೀ, ಹಾರಗಳ ಕೆತ್ತನೆಯಾಗಲೀ ಉಳಿದೆಡೆಯ ಶಿಲ್ಪಗಳಿಗಿಂತ ಭಿನ್ನವಾಗಿದೆ. ಅದೇ ರೀತಿಯಲ್ಲಿ ಹೇಳುವುದಾದರೆ ಕೊಂತಿಗುಡಿಯ ತ್ರಿವಿಕ್ರಮ ಶಿಲ್ಪಗಳು ಸಮಕಾಲೀನ ಶಿಲ್ಪಗಳಾದರೂ ಚಾಲುಕ್ಯ ಶೈಲಿಯ ಶಿಲ್ಪಗಳನ್ನು ಹೋಲುವುದಿಲ್ಲ. ಅವೇ ಪ್ರತ್ಯೇಕವಾದ ಶಿಲ್ಪಗಳಂತೆ ಕಂಡುಬರುತ್ತವೆ. ಇದಕ್ಕೆ ಕಾರಣಗಳೇನಿರಬಹುದು ಎಂದು ತಿಳಿಯುವುದಿಲ್ಲ. ಬಹುಶಃ ಹೊರಗಿನ ಪರಂಪರೆಯ ಶಿಲ್ಪಿಗಳು ಕೆತ್ತಿರಬಹುದೆನ್ನಿಸುತ್ತದೆ.

ಶಿಲ್ಪಿಗಳು

ಇನ್ನೊಂದು ವಿಚಾರವನ್ನಿಲ್ಲಿ ಹೇಳಬಹುದು. ಕೆಲವು ಕಡೆಗಳಲ್ಲಿ ಮುಖ್ಯವಾಗಿ ಪಟ್ಟದಕಲ್ಲಿನಲ್ಲಿ, ಮತ್ತು ಐಹೊಳೆಯಲ್ಲಿ ದೇವಾಲಯದ ರೂವಾರಿಗಳ ಹೆಸರು ಕೆತ್ತಿರುವುದು ಕಂಡುಬಂದಿದೆ. ಬಾದಾಮಿಯ ಗುಹಾಲಯದ ಆವರಣದಲ್ಲಿಯೂ ಕೆಲವೆಡೆಗಳಲ್ಲಿ ಎತ್ತರದ ಸ್ಥಳಗಳಲ್ಲಿ ಕೆಲವು ಹೆಸರುಗಳ ಕೆತ್ತನೆಗಳಿವೆ. ಆಯ್ಚಸ್ವಾಮಿ ಕಲ್ಕುಟ್ಟಿ, ದುರ್ಟ್ವೋಜ, ವಿಜಯ ಓವಜ, ಆರ್ಯಮಂಚಿ ಇತ್ಯಾದಿ ಹೆಸರುಗಳಿವೆ. ಇವೆಲ್ಲ ಅಲ್ಲಿ ಶಿಲ್ಪಗಳನ್ನು ಕೆತ್ತಿದ ಶಿಲ್ಪಿಗಳ ಅಥವಾ ರೂವಾರಿಗಳ ಹೆಸರಾಗಿರಬಹುದು.

ಇದಲ್ಲದೆ ಆರ್ಯಮಂಚಿ ಎಂಬ ಶಿಲ್ಪಿಯ ಹೆಸರು ಕೆಲವೆಡೆ ಕಂಡುಬಂದಿರುವುದು ಆತ ಅಂದಿನ ಕಾಲದ ಪ್ರಸಿದ್ಧ ಶಿಲ್ಪಿಯಾಗಿರಬಹುದು. ಇದಲ್ಲದೆ ಕೋಳಿ ಮಂಚಿ, ಪೆಲಮಂಚಿ, ಅಣತ್ತಮಂಚಿ, ಸಿಂಗಮಂಚಿ ಮುಂತಾದ ಹೆಸರುಗಳಿವೆ. ಇವೆಲ್ಲ ಹೆಸರುಗಳು ಶಿಲ್ಪಿಗಳದೇ ಇರಬಹುದು. ಕೋಳಿಮಂಚಿಯ ಹೆಸರು ಗುಹಾಲಯದ ಸಮೀಪ ಹಾಗೂ ಕೋಟೆಯ ಬಂಡೆಯಲ್ಲಿಯೂ ಕಂಡುಬಂದಿದೆ. ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯದ ಕಂಬಗಳು ಪಾಕ ಎಂಬ ರೂವಾರಿಯ ರಚನೆಯಾಗಿರಬಹುದು.

ವಿರೂಪಾಕ್ಷ ದೇವಾಲಯದಲ್ಲಿಯೂ ಕೆಲ ಹೆಸರುಗಳು ಕಂಡುಬರುತ್ತವೆ. ಅಲ್ಲಿನ ಗೋಡೆಯ ಮೇಲಿರುವ ಶಿಲ್ಪವನ್ನು ಪುಲ್ಲಪ್ಪ ಎಂಬವನು ನಿರ್ಮಿಸಿರುವುದು ಕಂಡುಬರುತ್ತದೆ. ಕೆಲವೆಡೆ ಬಂಡೆಗಳ ಮೇಲೆ ಶಿಲ್ಪಗಳ ಸಮೀಪ ಚಾಣದಲ್ಲಿ ಕೆತ್ತಲಾದ ಗೆರೆಗಳಿವೆ. ಇವನ್ನು ಯಾವ ಉದ್ದೇಶದಿಂದ ಕೆತ್ತಲಾಗಿವೆಯೋ ತಿಳಿಯುವುದಿಲ್ಲ. ಬಹುಶಃ ಶಿಲ್ಪಿಗಳು ಕೆತ್ತಲು ಬಳಸಿಕೊಳ್ಳಲಾದ ದಿನಗಳ ಗುರುತಿಗಾಗಿರಬಹುದು. ಕಲ್ಕುಟ್ಟಿ ಎಂಬ ಹೆಸರಿನಲ್ಲಿಯೇ ಆತ ಕಲ್ಲು ಕುಟ್ಟುವುದರಲ್ಲಿ

ಪರಿಣತ ಎಂದು ಸೂಚಿಸುತ್ತದೆ. ಬಾದಾಮಿಯ ಎರಡನೆಯ ಗುಹಾಲಯದಲ್ಲಿ ಕೆಲವಾರು ಹೆಸರುಗಳ ಉಲ್ಲೇಖವಿದೆ. ಕೆಲವೆಡೆ ಹೆಸರುಗಳು ಒಟ್ಟಾಗಿ ಕಾಣಿಸಿಕೊಂಡಿವೆ. ಬಹುಶಃ ಒಂದೇ ಶಿಲ್ಪವನ್ನು ಒಂದಕ್ಕಿಂತ ಹೆಚ್ಚಿನ ಶಿಲ್ಪಿಗಳು ಸೇರಿ ಕೆತ್ತಿರಬಹುದು. ಅಯ್ಯಾಸಾಮಿ, ಕಲ್ಲುಕಟ್ಟಿ, ದೋಣಾಸ್ವಾಮಿ, ಶಾನ್ತಿಮೂರ್ತಿ, ದುಟ್ಟಜ, ಗೊಟ್ಟೆಮೂರ್ಕ, ನೆದ್ದೆಗ, ಕೇಸವ, ಭಾರತಚಂದ್ರ, ಸರಣಚಂದ್ರ, ಗಂಗೋಸಾಮಿ ಮುಂತಾದ ಹೆಸರುಗಳಿವೆ. ಇವರೆಲ್ಲರೂ ಶಿಲ್ಪಕಲೆಯಲ್ಲಿ ಪರಿಣತರಾಗಿದ್ದು ಇಲ್ಲಿನ ಶಿಲ್ಪಗಳನ್ನು ಕೆತ್ತಿದವರಾಗಿರಬಹುದು. ಮಹಾವಿಷ್ಣು ಗುಹೆಯಲ್ಲಿಯೂ ಕೆಲವು ಹೆಸರುಗಳಿವೆ.

ಕೊಂಡಿಮಂಚ, ವಸುದೇವ, ಶಕುಲಯ್ಯ, ಪಂಚಣ, ಚೋಳದೇವರೆಯ, ಪೊಲಮಂಚ, ರೂಪಶೇಖರ, ಆರ್ಯ ಚೆಟ್ಟ, ಕೋಳೀಮಂಚ, ದೋಣ, ಕಂತಿಮಂಚ, ಬಿಜಯ ಓವಜ ಇತ್ಯಾದಿ ಹೆಸರುಗಳಿವೆ. ಇವುಗಳಲ್ಲಿ ಕೆಲವು ಹೆಸರುಗಳು ಎರಡನೆಯ ಗುಹೆಯಲ್ಲಿಯೂ ಕಾಣಿಸುತ್ತವೆ. ಇದರಲ್ಲಿಯ ಕೆಲವು ಹೆಸರುಗಳು ಆ ಪ್ರದೇಶದ ಹೊರಗಿನ ಹೆಸರುಗಳಂತೆ ಕಂಡುಬರುವುದರಿಂದ ಹೊರಗಿನ ಶಿಲ್ಪಿಗಳೂ ಇಲ್ಲಿ ಶಿಲ್ಪಗಳನ್ನು ರಚಿಸಿರಬಹುದೆನ್ನಿಸುತ್ತದೆ. ಕೆಲವು ಹೆಸರುಗಳನ್ನು ಓದಲು ಸಾಧ್ಯವಾಗುವುದಿಲ್ಲ. ಆದರೂ ಇಲ್ಲಿನ ಶಿಲ್ಪಿಗಳ ಹೆಸರುಗಳನ್ನು ಗಮನಿಸಿದರೆ ಇಲ್ಲಿ ಹಲವಾರು ಪ್ರಸಿದ್ಧ ಶಿಲ್ಪಿಗಳು ಕೆಲಸ ನಿರ್ವಹಿಸಿದ್ದರೆನ್ನಬಹುದು.

ಬಾದಾಮಿಯ ಶಿಲ್ಪಗಳ ರಾಶಿ ಬಲು ದೊಡ್ಡದು. ಇಲ್ಲಿನ ಶಿಲ್ಪಗಳ ಅಧ್ಯಯನವನ್ನು ಪೂರ್ಣವಾಗಿ ನಡೆಸುವುದೆಂದರೆ ಸವಾಲಿನ ಕೆಲಸ. ಪ್ರತಿಯೊಂದು ಶಿಲ್ಪವನ್ನೂ ಪ್ರತ್ಯೇಕವಾಗಿ ನೋಡಿದಾಗ ಒಂದು ರೀತಿ, ಗುಂಪಾಗಿ ನೋಡಿದಾಗ ಒಂದು ರೀತಿ, ಪ್ರತಿಯೊಂದು ಸಲ ನೋಡಿದಾಗಲೂ ವಿಭಿನ್ನ ಅನುಭವವಾಗುತ್ತದೆ. ಶಿಲ್ಪಿಗಳ ಹಲವು ವರ್ಷಗಳ ಸಾಧನೆ ಇಲ್ಲಿ ಕಂಡುಬರುತ್ತದೆ. ತಮ್ಮ ಬೃಹದಾಕಾರ, ನೇರ ನಿಲುವು, ವಿಭಿನ್ನ ಭಾವಭಂಗಿಗಳು, ಸಂಯೋಜನೆ ಇವುಗಳಿಂದಾಗಿ ಪ್ರತಿಯೊಂದು ಶಿಲ್ಪವೂ ಅನನ್ಯವಾಗಿದೆ. ಶಿಲ್ಪಿಗಳು ಸಂಯೋಜನೆಯಲ್ಲಿ ತೋರಿಸಿದ ಕಲಾತ್ಮಕತೆ, ಕೌಶಲಗಳು, ರೇಖಾಪ್ರಾಧಾನ್ಯ ಮೈವಳಿಕೆಗಳ ಕೆತ್ತನೆಯಲ್ಲಿ ತೋರಿದ ವಿಶೇಷ ಕಾಳಜಿ ಗಮನ ಸೆಳೆಯುತ್ತದೆ.

ಮುಂದಿನ ಯಾವುದೇ ಕೆತ್ತನೆಗಳಲ್ಲಿ ಇಲ್ಲಿನ ಬೃಹದಾಕಾರದ ಸಂಯೋಜನೆಗಳಾಗಲೀ, ಕೆತ್ತನೆಯಲ್ಲಿ ವೈಶಿಷ್ಟ್ಯವಾಗಲೀ ಕಂಡುಬರುವುದಿಲ್ಲ. ಚಾಲುಕ್ಯರನ್ನು ಸೋಲಿಸಿ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಚಾಲುಕ್ಯ ಪರಂಪರೆಯನ್ನೇ ಮುಂದುವರಿಸಿದರೂ, ಅವರ ಕಾಲದಲ್ಲಿ ಅದ್ಭುತವಾದ ಕೆತ್ತನೆಯ ಕೆಲಸಗಳು ನಡೆದಿವೆಯಾದರೂ ಅವುಗಳು ಇಲ್ಲಿನ ಶಿಲ್ಪಗಳಿಗೆ ಸಾಟಿಯಾಗುವುದಿಲ್ಲ. ಇದಕ್ಕೆ ಕಾರಣ ಬಾದಾಮಿಯ ಕಾಲದ ಶಿಲ್ಪಗಳ ಸರಳತೆ ಮತ್ತು ನೈಜತೆಯ ಕೆತ್ತನೆ ಮಾಯವಾಗಿ ಶಿಲ್ಪಿಗಳು ಅಲಂಕರಣದತ್ತ ವಾಲಿರುವುದು, ಅಗತ್ಯಕ್ಕಿಂತ ಹೆಚ್ಚಾದ ಬಾಗುಬಳುಕು ಮತ್ತು ಆಭರಣಗಳ ಪ್ರದರ್ಶನ, ಸಂಕೀರ್ಣತೆಯತ್ತ ಹೆಚ್ಚಾಗಿ ವಾಲಿದ್ದು

ಕಾರಣವಾಗಿದೆ. ಇವರ ನಂತರದ ಕಾಲದ ಶಿಲ್ಪಗಳು ಅತಿಯಾದ ಅಲಂಕಾರಿಕ ಕೌಶಲ್ಯದ ಪ್ರದರ್ಶನಕ್ಕೆ ತೊಡಗಿದ್ದರಿಂದ ಸಹಜ ಚೆಲುವು ಮಾಯವಾಯಿತು. ಪಟ್ಟದಕಲ್ಲಿನ ಶಿಲ್ಪಗಳಲ್ಲಿಯೇ ಇವುಗಳ ಮೊದಲ ಕುರುಹುಗಳು ಕಂಡುಬಂದರೂ ಇಲ್ಲಿ ಅವು ಗಮನಾರ್ಹ ಬದಲಾವಣೆಯಾಗಿ ಕಂಡುಬರುವುದಿಲ್ಲ. ನಿಧಾನವಾಗಿ ತಮ್ಮ ನೈಜ ಕೌಶಲವನ್ನು ಕಲಾವಿದರು ಕಳೆದುಕೊಳ್ಳ ತೊಡಗಿದರೆನ್ನಿಸುತ್ತದೆ. ಆದುದರಿಂದಾಗಿಯೇ ಬಾದಾಮಿಯ ಶಿಲ್ಪಗಳು ತಮ್ಮ ಸರಳತೆಗಾಗಿ ಇಂದಿಗೂ ಪ್ರಸ್ತುತವಾಗಿ ನಿಲ್ಲುತ್ತವೆ.

ಅಧ್ಯಯನದ ಪ್ರಮುಖ ಫಲಿತಗಳು

೧. ಇಲ್ಲಿಯವರೆಗೆ ಬಾದಾಮಿ ಚಾಲುಕ್ಯರ ಆಯ್ದ ಪ್ರಧಾನ ಶಿಲ್ಪಕಲಾಕೃತಿಗಳ ಕುರಿತು ಹೆಚ್ಚಾಗಿ ಅಲ್ಪಸ್ವಲ್ಪ ಅಧ್ಯಯನಗಳು ನಡೆದಿದ್ದು, ಪ್ರಸ್ತುತ ಅಧ್ಯಯನದಿಂದ ಬಾದಾಮಿ ಚಾಲುಕ್ಯರ ಕಾಲದಲ್ಲಿ ರಚಿಸಿದ ಸಮಗ್ರ ಶಿಲ್ಪಕಲಾಕೃತಿಗಳು ಈ ಅಧ್ಯಯನದ ಮೂಲಕ ಬೆಳಕಿಗೆ ಬಂದಿವೆ.

೨. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳನ್ನು ಉಬ್ಬುಶಿಲ್ಪ ಮತ್ತು ದುಂಡು ಶಿಲ್ಪ (೨ಡಿ ಮತ್ತು ೩ಡಿ) ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ನಡೆಸಲಾಗಿದೆ.

೩. ಬಾದಾಮಿ ಚಾಲುಕ್ಯರ ಕಾಲದ ಪ್ರಧಾನ ಮತ್ತು ಗೌಣ ಶಿಲ್ಪಗಳನ್ನು ಸಹ ವ್ಯವಸ್ಥಿತವಾಗಿ ವರ್ಗೀಕರಿಸಿ ಆ ಪರಂಪರೆಯ ಶಿಲ್ಪಗಳನ್ನು ಸಮಗ್ರವಾಗಿ ಗಮನಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೪. ಚಾಲುಕ್ಯ ಶಿಲ್ಪಗಳಲ್ಲಿ ಕಿರುರೂಪ ಶಿಲ್ಪಗಳು ಅಥವಾ ಚಿಕಣಿ ಶಿಲ್ಪಗಳು ವಿಶೇಷವಾಗಿ ಈ ಪ್ರದೇಶದಲ್ಲಿ ರಚನೆಯಾಗಿವೆ.

೫. ಚಾಲುಕ್ಯ ಶಿಲ್ಪಗಳ ಶೈಲಿ ಕಾಲದಿಂದ ಕಾಲಕ್ಕೆ ಬದಲಾವಣೆಯಾಗುತ್ತ ಬೆಳವಣಿಗೆ ಆಗಿರುವುದನ್ನು ಗುರುತಿಸಲಾಗಿದೆ. ಇದಕ್ಕೆ ಕಾರಣ ಹಲವಾರು ಜನ ಶಿಲ್ಪಿಗಳು ಇಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿರುವುದು ಕಾಣಬಹುದಾಗಿದೆ.

೬. ಚಾಲುಕ್ಯ ಶಿಲ್ಪಗಳಲ್ಲಿ ಸಂಯೋಜನೆ(composition) ಹಿತಮಿತವಾಗಿ ರೂಪಗೊಂಡಿದೆ. ಪ್ರಧಾನ ಶಿಲ್ಪಗಳಿಗೆ ಮೊದಲ ಆದ್ಯತೆ ನೀಡಿದಂತೆ ಪೂರಕ ಶಿಲ್ಪಗಳಿಗೂ ಅಷ್ಟೇ ಮಹತ್ವದ ಅವಕಾಶವನ್ನು ಸಂಯೋಜನೆಯಲ್ಲಿ ಕಲ್ಪಿಸಿಕೊಡಲಾಗಿದೆ.

೭. ದ್ವಿ ಆಯಾಮ ಶಿಲ್ಪಗಳಲ್ಲಿ ಸ್ಥಳಾವಕಾಶ(space) ಮತ್ತು ಸಮೀಪ ದೂರದ ಪರಿಕಲ್ಪನೆಯ ಯಥಾದರ್ಶನ (perspective), ಅಂಗರಚನಾ ಶಾಸ್ತ್ರದ ವಿನ್ಯಾಸ(Body anatomy)ಗಳಿಗೆ ಅನುಗುಣವಾಗಿ ಶಿಲ್ಪಗಳು ರಚನೆಗೊಂಡಿವೆ.

೮. ಚಾಲುಕ್ಯ ಶಿಲ್ಪಗಳಲ್ಲಿ ಚಿಕಣಿ ಶಿಲ್ಪಗಳು, ಮಧ್ಯಮಾಕಾರದ ಶಿಲ್ಪಗಳು, ಮಾನವ ಗಾತ್ರದ

ಶಿಲ್ಪಗಳು ಇನ್ನೂ ಕೆಲವು ಬಾರಿ ದೊಡ್ಡ ಪ್ರಮಾಣದ ಶಿಲ್ಪಗಳು ಗುಹಾನಿರ್ಮಿತಿ ದೇವಾಲಯಗಳಲ್ಲಿ ಹಾಗೂ ರಾಚನಿಕ ಮಂದಿರಗಳಲ್ಲಿ ರಚನೆಗೊಂಡಿರುವುದು ಕಂಡುಬರುತ್ತದೆ.

೯. ಶಿವ ಮತ್ತು ಪಾರ್ವತಿಯನ್ನು ಅರ್ಧನಾರೀಶ್ವರ ಶಿಲ್ಪದಲ್ಲಿ ಶಿವ ಮತ್ತು ವಿಷ್ಣುವನ್ನು ಹರಿಹರ ಶಿಲ್ಪದಲ್ಲಿ ಸಂಯೋಜಿಸಿರುವುದು ವಿಶೇಷವಾಗಿ ಕಂಡುಬರುತ್ತದೆ. ಇವುಗಳಲ್ಲಿ ದೇವತಾ ಶಿಲ್ಪಗಳು ಮಾತ್ರ ಬೃಹತ್ ಗಾತ್ರದಲ್ಲಿ ನಿರ್ಮಾಣಗೊಂಡಿವೆ.

೧೦. ಸಪ್ತಮಾತೃಕೆಯ ಶಿಲ್ಪಗಳು ಮಾನವ ಗಾತ್ರದಲ್ಲಿ ಮತ್ತು ಸಣ್ಣ ಪ್ರಮಾಣದಲ್ಲಿಯೂ ರಚನೆಗೊಂಡಿವೆ. ಅಲ್ಲದೆ ದ್ವಾರಪಾಲಕರ ಶಿಲ್ಪಗಳು ಆಳೆತ್ತರದಲ್ಲಿ ರಚನೆಗೊಂಡಿವೆ. ಇವುಗಳಲ್ಲಿ ವಿಶೇಷವೆಂದರೆ ಬೃಹತ್ ಪ್ರಮಾಣದ ಮೂರ್ತಿಗಳು ಗುಹಾನಿರ್ಮಿತ ದೇವಾಲಯಗಳಲ್ಲಿ ಮಾತ್ರ ರಚಿಸಿರುವುದು ಕಂಡುಬರುತ್ತದೆ.

೧೧. ನಾಟ್ಯಶಾಸ್ತ್ರ, ಪ್ರತಿಮಾಶಾಸ್ತ್ರ, ವಾಸ್ತುಶಾಸ್ತ್ರ, ಸಂಗೀತ, ಚಿತ್ರಕಲೆ ಮುಂತಾದ ಶಾಸ್ತ್ರಗಳ ಅನುಭವದ ಹಿನ್ನೆಲೆಯಲ್ಲಿ ಇಲ್ಲಿ ಶಿಲ್ಪಗಳು ರಚನೆಗೊಂಡಿವೆ.

೧೨. ಈ ಪ್ರದೇಶದಲ್ಲಿ ಲಜ್ಜಾಗೌರಿ ಶಿಲ್ಪಗಳು, ಬನಶಂಕರಿ, ಕಾಳಿದೇವತೆ, ಸಪ್ತಮಾತೃಕೆಯರು, ಮಹಿಷಾಸುರ ಮರ್ದಿನಿ ಶಿಲ್ಪಗಳು, ಮಿಥುನ ಶಿಲ್ಪಗಳು, ದಂಪತಿ ಶಿಲ್ಪಗಳು ವಿಶೇಷವಾಗಿ ಕಂಡುಬರುತ್ತವೆ. ಹೀಗಾಗಿ ಈ ಪ್ರದೇಶವು ಸ್ತ್ರೀ ಪ್ರಧಾನವಾದ ಶಕ್ತಿಕೇಂದ್ರವಾಗಿರುವುದನ್ನು ಸ್ಪಷ್ಟೀಕರಿಸಬಹುದು.

೧೩. ಈ ಪ್ರದೇಶದ ಶಿಲ್ಪಗಳಲ್ಲಿ ಶೈವ, ವೈಷ್ಣವ, ಬೌದ್ಧ, ಜೈನ ಮುಂತಾದ ಧರ್ಮಗಳ ಸಮನ್ವಯವನ್ನು ಕಾಣುತ್ತೇವೆ.

೧೪. ಬಾದಾಮಿ ಚಾಲುಕ್ಯರ ಕಾಲದ ಅನೇಕ ಜನ ಶಿಲ್ಪಿಗಳ ಹೆಸರುಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ.

೧೫. ಇವರ ಕಾಲದ ಶಿಲ್ಪಗಳಲ್ಲಿ ವೈವಿಧ್ಯಮಯವಾದ ಚಮತ್ಕಾರಿಕ ಶಿಲ್ಪಗಳು ರಚನೆಗೊಂಡಿವೆ. ಆನೆ ಮತ್ತು ವೃಷಭ ಪ್ರಾಣಿಗಳು, ನಾಟ್ಯಭಂಗಿಯ ಮೂರು ದೇಹಕ್ಕೆ ನಾಲ್ಕು ಕಾಲಗಳು ಹೀಗೆ ಶಿಲ್ಪಿಯ ಕಲ್ಪನಾ ಚಾತುರ್ಯ ಪ್ರಕಟಗೊಂಡಿವುದು ವೈಶಿಷ್ಟ್ಯವಾಗಿದೆ.

೧೬. ಆ ಕಾಲದ ಕ್ರೀಡೆಗಳಾದ ಟಗರಿನ ಕಾಳಗ, ಹಾವಾಡಿಗರಾಟ ಶಿಲ್ಪಗಳು ರಚನೆಗೊಂಡಿದ್ದು, ಈಗಲೂ ಜನಪದರಲ್ಲಿ ಇಂತಹ ಕ್ರೀಡೆಗಳು ಮುಂದುವರೆಯುತ್ತ ಬಂದಿರುವುದನ್ನು ಗುರುತಿಸಬಹುದಾಗಿದೆ.

೧೭. ಚಾಲುಕ್ಯರ ಕಾಲದ ಶಿಲ್ಪಿಗಳು ಗುಹಾಂತರ ದೇವಾಲಯಗಳಲ್ಲಿ ಶಿಲ್ಪಕಲಾಕೃತಿಗಳ ಮೇಲೆ ವರ್ಣಚಿತ್ರಗಳನ್ನು ರಚಿಸಿರುವುದು ಕಂಡುಬರುತ್ತದೆ. ಅಲ್ಲದೆ ಪಂಚತಂತ್ರದ ಕಥಾನಕ ಶಿಲ್ಪಗಳು ಹೇರಳವಾಗಿ ರಚನೆಯಾಗಿರುವುದು ಕಂಡುಬರುತ್ತದೆ.

ಅನುಬಂಧ – ೧

ಸಂಕ್ಷೇಪಗಳು

೦೧.	ಸಂ	–	ಸಂಪಾದಕರು
೦೨.	ಪ್ರ.ಸಂ	–	ಪ್ರಧಾನ ಸಂಪಾದಕರು
೦೩.	ಪು.ಸಂ	–	ಪುಟ ಸಂಖ್ಯೆ
೦೪.	ಕಿ.ಪ್ರ.	–	ಕಿರುಪ್ರಬಂಧ
೦೫.	ಸಂ.ಪ್ರ	–	ಸಂಪ್ರಬಂಧ
೦೬.	ಮ.ಪ್ರ	–	ಮಹಾಪ್ರಬಂಧ
೦೭.	ಚಿ.ಸಂ.	–	ಚಿತ್ರಸಂಖ್ಯೆ
೦೮.	ಬೆಂ.ವಿ.ವಿ.	–	ಬೆಂಗಳೂರು ವಿಶ್ವವಿದ್ಯಾಲಯ
೦೯.	ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೧೦.	ಕ.ವಿ.ವಿ.ಹಂ.	–	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೧.	ಕ.ವಿ.ವಿ	–	ಕರ್ನಾಟಕ ವಿಶ್ವವಿದ್ಯಾಲಯ
೧೨.	ಕ.ಲ.ಅ.ಬೆಂ	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೩.	ಅ.ಪ್ರ	–	ಅಪ್ರಕಟಿತ
೧೪.	ಪ್ರ	–	ಪ್ರಕಟಿತ
೧೫.	ಯೋ.ವ	–	ಯೋಜನಾ ವರದಿ
೧೬.	ಕ.ಶಿ.ಅ.ಬೆಂ.	–	ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
೧೭.	ಕ್ರಿ.ಪೂ	–	ಕ್ರಿಸ್ತ ಪೂರ್ವ
೧೮.	ಕ್ರಿ.ಶ.	–	ಕ್ರಿಸ್ತಶಕ
೧೯.	ಅನು	–	ಅನುವಾದ
೨೦.	ಪ್ರೊ.	–	ಪ್ರೊಫೇಸರ್
೨೧.	ಅ.ಗ್ರ	–	ಅಭಿನಂದನಾ ಗ್ರಂಥ

ಅನುಬಂಧ – ೨
ಗ್ರಂಥಋಣ

೧. ಕನ್ನಡ ಗ್ರಂಥಗಳು

೦೧. **ಅವಲೋಕನ** — ಸಂ. ಎಚ್ಚೆಸ್ಕೆ
ವಿಶ್ವಕನ್ನಡ ಸಮ್ಮೇಳನ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು. ೧೯೮೫

೦೨. **ಇತಿಹಾಸ ದರ್ಶನ (ಸಂ–೭)** — ಸಂ. ಡಾ. ಸೂರ್ಯನಾಥ ಕಾಮತ್
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು

೦೩. **ಇತಿಹಾಸ ದರ್ಶನ (ಸಂ–೧೦)** — ಸಂ. ಡಾ. ಸೂರ್ಯನಾಥ ಕಾಮತ್
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು
೧೯೯೫


೦೪. **ಇತಿಹಾಸ ದರ್ಶನ (ಸಂ–೧೭)** — ಸಂ. ಡಾ. ಸೂರ್ಯನಾಥ ಕಾಮತ್
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು
೨೦೦೨

೦೫. **ಇತಿಹಾಸ ದರ್ಶನ (ಸಂ–೧೯)** — ಸಂ. ಡಾ. ಎಂ.ಜಿ. ನಾಗರಾಜ್
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು
೨೦೦೪

೦೬. **ಇತಿಹಾಸ ದರ್ಶನ (ಸಂ–೨೪)** — ಸಂ. ಡಾ. ಎಂ.ಜಿ. ನಾಗರಾಜ್
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು
೨೦೦೯

೦೭. **ಇತಿಹಾಸ ದರ್ಶನ (ಸಂ–೨೭)** — ಸಂ. ಡಾ. ಪಿ.ವಿ. ಕೃಷ್ಣಮೂರ್ತಿ
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು
೨೦೧೨

೦೮. **ಐಹೊಳೆ ಶಿಲ್ಪ ದರ್ಪಣ** — ವಿರೂಪಾಕ್ಷ ಬಡಿಗೇರ
ಕಾಳಿಕಾ ಪ್ರಕಾಶನ, ಐಹೊಳೆ
೧೯೮೪



೦೯. **ಐತಿಹಾಸಿಕ ಬಾದಾಮಿ** — ಆನಂದ ಕೆ. ಪೂಜಾರ
ಶಾಂಭವಿ ಪ್ರಕಾಶನ, ಬಾದಾಮಿ
೨೦೦೦

೧೦. **ಕನ್ನಡ ಸಾಹಿತ್ಯ ಚರಿತ್ರೆ** — ಡಾ. ರಂ. ಶ್ರೀ ಮುಗಳಿ
ಸಮಾಜ ಪುಸ್ತಕಾಲಯ, ಧಾರವಾಡ
೨೦೦೨

೧೧. **ಕನ್ನಡ ವಿಶ್ವಕೋಶ – ಕರ್ನಾಟಕ (ಸಂ–೧)** — ಪ್ರಸಂ. ಡಾ. ಅರವಿಂದ ಮಾಲಗತ್ತಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೨೦೦೫

೧೨. **ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ (ಸಂ–೩)**
ಧರ್ಮ — ಸಂ. ರಹಮತ್ ತರೀಕೆರೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೦

೧೩. **ಕನ್ನಡ ವಿಶ್ವಕೋಶ (ಸಂ–೪)**
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೯೭೨

೧೪. **ಕನ್ನಡ ವಿಷಯ ವಿಶ್ವಕೋಶ** — ಪ್ರಸಂ. ಡಾ. ಅಂಬಳಿಕೆ ಹಿರಿಯಣ್ಣ
ಇತಿಹಾಸ ಮತ್ತು ಪುರಾತತ್ವ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೨೦೦೫

೧೫. **ಕನ್ನಡ ವಿಶ್ವಕೋಶ (ಸಂ–೧೩)** — ಪ್ರಸಂ. ಪ್ರೊ. ಡಿ. ಕೆ. ರಾಜೇಂದ್ರ
ಇತಿಹಾಸ ಮತ್ತು ಪುರಾತತ್ವ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೯೯೮

೧೬. **ಕನ್ನಡ ವಿಶ್ವಕೋಶ (ಸಂ–೧೪)** — ಪ್ರಸಂ. ಡಾ. ಅರವಿಂದ ಮಾಲಗತ್ತಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೨೦೦೪

೧೭. **ಕನ್ನಡ ಚಲನಚಿತ್ರ ಇತಿಹಾಸ (ಭಾಗ–೨)** — ಡಾ. ವಿಜಯ, ಎಂ.ವಿ. ಸಿಂಗ್ ಮತ್ತು ವಿ.ಎನ್. ಸುಬ್ಬಾರಾವ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೧



೧೮. **ಕರ್ನಾಟಕ ಶಿಲ್ಪ–ಸಂಸ್ಕೃತಿ(ನಾ ಕಂಡ ದೇಗುಲಗಳು)** — **ಜಯದೇವಪ್ಪ ಜೈನಕೇರಿ**
ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ,
ಬೆಂಗಳೂರು. ೨೦೦೯

೧೯. **ಕರ್ನಾಟಕದ ಪರಂಪರೆ ಸಂಪುಟ–೧** — **ಮೈಸೂರು ರಾಜ್ಯ ಸರಕಾರ**
ಮೈಸೂರು ರಾಜ್ಯ ಸರಕಾರ
೧೯೭೦

೨೦. **ಕರ್ನಾಟಕದ ಕಲೆಗಳು ವಾಸ್ತು (ಸಂ–೪)** — **ಡಾ. ಬಾ. ರಾ. ಗೋಪಾಲ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೨೦೧೧

೨೧. **ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ** — **ಬಿ. ಎಂ. ಚಂದ್ರಶೇಖರಯ್ಯ**
ಸಿ.ವಿ.ಜಿ. ಪ್ರಕಾಶನ, ಬೆಂಗಳೂರು
೨೦೦೫

೨೨. **ಕರ್ನಾಟಕದ ಕಲಾದರ್ಶನ (ಸಂ–೧)** — **ಪ್ರೊ. ಎಂ. ಎಚ್. ಕೃಷ್ಣಯ್ಯ, ಡಾ. ವಿಜಯ, ಶ್ರೀ ಸಿ.ಆರ್.ಕೃಷ್ಣರಾವ್**
ನವಕರ್ನಾಟಕ ಪ್ರಕಾಶನ, ಬೆಂಗಳೂರು
೨೦೧೧

೨೩. **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು** — **ಮಹಾಂತೇಶ ಎಂ. ಪಲದಿನ್ನಿ**
ಒಂದು ದೃಶ್ಯಾತ್ಮಕ ಅಧ್ಯಯನ
ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮

೨೪. **ಕರ್ನಾಟಕ ಜನಪದ ಶಿಲ್ಪಕಲೆ–ಒಂದು ಅಧ್ಯಯನ** — **ಶಿವಾನಂದ ಹೆಚ್. ಬಂಟನೂರು**
(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೨

೨೫. **ಕರ್ನಾಟಕದ ಸಂಸ್ಕೃತಿ ಸಮೀಕ್ಷೆ)** — **ಡಾ. ಎಚ್. ತಿಪ್ಪೇರುದ್ರಸ್ವಾಮಿ**
ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು
೧೯೯೨

೨೬. **ಕರ್ನಾಟಕದ ಕರಕುಶಲ ಕಲೆಗಳು** — **ಬಿ. ಎಂ. ಚಂದ್ರಶೇಖರಯ್ಯ**
ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು
೧೯೮೩

೨೭. **ಕರ್ನಾಟಕ ಸಂಸ್ಕೃತಿ** — **ಡಾ. ಎಂ. ಚಿದಾನಂದ ಮೂರ್ತಿ**
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು. ೧೯೮೪

೨೮. **ಕರ್ನಾಟಕ ದೇವಾಲಯ ಸಿರಿವಂತಿಕೆ (ಸಂ-೩) ರಥಗಳು** — ಸಂ.ಡಾ. ಚೂಡಾಮಣಿ ನಂದಗೋಪಾಲ
ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ,
ಬೆಂಗಳೂರು. ೨೦೦೭

೨೯. **ಕರ್ನಾಟಕದ ಇತಿಹಾಸ (ಸಂ-೧)** — ವಿದ್ಯಾರತ್ನ ವಿದ್ಯಾಭೂಷಣ
ಕರ್ನಾಟಕ ಇತಿಹಾಸ ಸಂಶೋಧನ ಮಂಡಲ
ಧಾರವಾಡ ೨೦೦೭-೦೮

೩೦. **ಕರ್ನಾಟಕ ನೃತ್ಯ ರಂಗ ನೃತ್ಯ ಶಿಲ್ಪಗಳು** — ಪ್ರ.ಸಂ. ಡಾ. ಎಂ. ಸೂರ್ಯಪ್ರಸಾದ್
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ,
ಬೆಂಗಳೂರು. ೧೯೯೪

೩೧. **ಕರ್ನಾಟಕದಲ್ಲಿ ನವಶಿಲಾಯುಗ** — ಡಾ. ಬಿ. ಆರ್. ಗೋಪಾಲ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೧

೩೨. **ಕಲಾಪ್ರಪಂಚ** — ಡಾ. ಶಿವರಾಮ ಕಾರಂತ
ಎಸ್. ಬಿ. ಎಸ್. ಪ್ರಕಾಶನ, ಬೆಂಗಳೂರು
೨೦೦೮

೩೩. **ಕಲಾಕೋಶ** — ಪ್ರ.ಸಂ. ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೯೪

೩೪. **ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ** — ಎಚ್. ಎಸ್. ಗೋಪಾಲರಾವ್
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಮೈಸೂರು
೧೯೯೩

೩೫. **ಕಲೆ ಮತ್ತು ರಸಸ್ವಾದನೆ** — ಸಂ. ಪ್ರೊ. ಎಂ.ಎಚ್. ಕೃಷ್ಣಯ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೦೮

೩೬. **ಚಾಲುಕ್ಯರ ಇತಿಹಾಸ** — ಎ. ಎಸ್. ನಂಜುಂಡಸ್ವಾಮಿ
ಸಮಾಜ ಪುಸ್ತಕಾಲಯ, ಧಾರವಾಡ
೨೦೦೯

೩೭. **ಚಾಲುಕ್ಯ ವಾಸ್ತು ಶಿಲ್ಪ ಪರಿಚಯ** — ಡಾ. ಎ.ವಿ. ನರಸಿಂಹಮೂರ್ತಿ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು. ೧೯೮೪



೩೮. **ಚಾಲುಕ್ಯ ವಾಸ್ತು ಮತ್ತು ಶಿಲ್ಪ** — ಡಾ. ಶಿವರಾಮ ಕಾರಾಂತ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೬೯

೩೯. **ಚಾಲುಕ್ಯ ಸಿರಿ ಪಟ್ಟದಕಲ್ಲು-ಐಹೊಳೆ ಉತ್ಸವ (ಸ್ಮರಣ ಸಂಚಿಕೆ)** — ಸಂ. ಬಾಳಾಸಾಹೇಬ ಲೋಕಾಪುರ
ಮಾ ಪ್ರಿಂಟರ್ಸ್, ಬೆಂಗಳೂರು.
೨೦೦೦

೪೦. **ಚಿತ್ರಗಳಲ್ಲಿ ಚರಿತ್ರೆ**
ಗಾಯತ್ರಿ ಎಂಟರ್‌ಪ್ರೈಸಸ್, ಮೈಸೂರು.
೨೦೦೫

೪೧. **ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ (ಸಂ-೫) ಕಲೆ ಸಾಹಿತ್ಯ** — ಪ್ರ.ಸಂ. ನಿರಂಜನ
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ,
ಬೆಂಗಳೂರು. ೧೯೭೩

೪೨. **ಡಾ. ಶಿವರಾಮ ಕಾರಂತ ಕಲಾ ಪ್ರಬಂಧಗಳು – ೨ (ಸಂ-೩೦ ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ)** — ಮಾಲಿನಿ ಮಲ್ಯ
ಕರ್ನಾಟಕ ಸರ್ಕಾರ, ಬೆಂಗಳೂರು.
೨೦೦೭

೪೩. **ದೃಶ್ಯಕಲಾ ಪ್ರಪಂಚ** — ಎನ್. ಮರಿಶಾಮಾಚಾರ್
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು.
೨೦೦೭

೪೪. **ದೇವಾಲಯ ವಾಸ್ತು ಶಿಲ್ಪ ಪರಿಚಯ** — ಕೂ. ಸ. ಅಪರ್ಣ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ.

೪೫. **ದೇವಾಲಯ ವಾಸ್ತು** — ಎಂ. ಎನ್. ಪ್ರಭಾಕರ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೧

೪೬. ನಿಜದ ನೆಲೆ **(ಡಾ.ಬಿ.ಕೆ.ಹಿರೇಮಠರ ಅಭಿನಂದನಾ ಗ್ರಂಥ)** — ಸಂ. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ
ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟ
೨೦೦೩

೪೭. **ಪಟ್ಟದಕಲ್ಲು ದರ್ಶನ** — ಡಾ. ಶೀಲಾಕಾಂತ ಪತ್ತಾರ
ಕರ್ನಾಟಕ ಇತಿಹಾಸ ಸಂಶೋಧನ ಮಂಡಲ
ಧಾರವಾಡ. ೨೦೦೭-೦೮

೪೮. **ಪ್ರಾಚೀನ ಭಾರತದ ಇತಿಹಾಸ** — **ಡಾ. ಕೆ. ಸದಾಶಿವ**
ಪ್ರಿಯದರ್ಶಿನಿ ಪ್ರಕಾಶನ, ಮೈಸೂರು
೨೦೦೪

೪೯. **ಬಾದಾಮಿ ಚಾಲುಕ್ಯರ ಲೇಖನ ಸಂಪುಟ** — **ಪ್ರಸಂ. ಡಾ. ಎ. ಮುರಿಗೆಪ್ಪ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೯

೫೦. **ಬಾದಾಮಿ ಚಾಲುಕ್ಯ ಶಿಲ್ಪಕಲೆ** — **ಸಂ. ಡಾ. ಎಚ್. ಎಸ್. ಗೋಪಾಲರಾವ್**
ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಬೆಂಗಳೂರು

೫೧. **ಬಾದಾಮಿ ಪರಿಸರದ ಮಹಾಕೂಟ ಒಂದು ಅಧ್ಯಯನ** — **ಎನ್. ಶಿವಾನಂದ ಪಾತಿಹಾಳ**
ಅಪ್ರಕಟಿತ ಬಿ.ವಿ.ಎ. ಕಿರುಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೭

೫೨. **ಬಾದಾಮಿ ಚಾಲುಕ್ಯ ಸಂಪದ** — **ಸಂ. ಡಾ. ಶೀಲಾಕಾಂತ ಪತ್ತಾರ**
ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆ,
ಬಾದಾಮಿ. ೨೦೦೮

೫೩. **ಬಾದಾಮಿ ಚಲುಕ್ಯರ ಶಾಸನಗಳು ವಾಸ್ತು ಮತ್ತು ಶಿಲ್ಪಕಲೆ** — **ಪ್ರೊ. ಶ್ರೀನಿವಾಸ ವೆಂ. ಪಾಡಿಗಾರ**
ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ,
ಧಾರವಾಡ ೨೦೦೭-೦೮

೫೪. **ಬಾದಾಮಿ ಸಾಂಸ್ಕೃತಿಕ ಅಧ್ಯಯನ** — **ಡಾ. ಶೀಲಾಕಾಂತ ಪತ್ತಾರ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೫೫. **ಭಾರತೀಯ ಕಲೆ** — **ಎನ್. ಮರಿಶಾಮಾಚಾರ್**
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು
೨೦೦೧

೫೬. **ಭಾರತೀಯ ಕಲೆ** — **ಎನ್. ಮರಿಶಾಮಾಚಾರ್**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
೨೦೦೧

೫೭. **ಭಾರತೀಯ ಕಲಾದರ್ಶನ** — **ಡಾ. ಅ.ನ. ಕೃಷ್ಣರಾಯ**
ಸಾಗರ ಪ್ರಕಾಶನ, ಬೆಂಗಳೂರು
೨೦೦೯



೫೮. **ಭಾರತೀಯ ಸಂಸ್ಕೃತಿ ದರ್ಶನ** — ಸಂ. ಡಾ. ಅ.ನ.ಕೃಷ್ಣರಾಯ
ಸಾಗರ ಪ್ರಕಾಶನ, ಬೆಂಗಳೂರು
೨೦೦೯

೫೯. **ಭೂಪಟಗಳ ಮೂಲಕ ಭಾರತದ ಇತಿಹಾಸ** — ಲಿಂಗಣ್ಣ ಗುಂಡಳ್ಳಿ
ವಾಸವಿ ಪ್ರಕಾಶನ,
೨೦೦೬

೬೦. **ಮಹಾಮಾರ್ಗ** — ಸಂ. ಡಾ. ಎಂ. ಎಂ. ಕಲಬುರ್ಗಿ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಮಠ,
ಗದಗ. ೧೯೯೮

೬೧. **ಮಾರ್ಗ – ಭಾಗ –೨** — ಡಾ. ಎಂ. ಎಂ. ಕಲಬುರ್ಗಿ
ನರೇಶ ಮತ್ತು ಬೆಂಗಳೂರು ಕಂಪನಿ
೧೯೯೮

೬೨. **ಮಹಿಳೆ ಒಂದು ಅಧ್ಯಯನ** — ಡಾ. ಜ್ಯೋತ್ಸ್ನಾ ಕಾಮತ್
ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು
೧೯೯೯

೬೩. **ಮಾತೃದೇವತಾರಾಧನೆ ಉಗಮ ಮತ್ತು ವಿಕಾಸ** — ಕಲವೀರ ಮನ್ವಾಚಾರ್
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೨

೬೪. **ಲಜ್ಜಾಗೌರಿ** — ಡಾ. ವಿಠ್ಠಲರಾವ್ ಗಾಯಕ್ವಾಡ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೩

೬೫. **ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ** — ಡಾ. ಪಿ.ವಿ. ನಾರಾಯಣ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು
ತೋಂಟದಾರ್ಯ ಸಂಸ್ಥಾನ ಮಠ, ಗದಗ
೧೯೮೩

೬೬. **ವಿಚಾರ ಕರ್ನಾಟಕ** — ಲೆ. ತಾ. ಶರ್ಮ
ಪುರೋಗಾಮಿ ಸಾಹಿತ್ಯ ಸಂಘ,
ಬೆಂಗಳೂರು. ೧೯೭೦

೬೭. **ವೇಷಭೂಷಣ ಪ್ರಸಾಧನ** — ಡಾ. ಉಷಾ ಘಾಟಕ್
ಉದಯರವಿ ಆಫ್‌ಸೆಟ್ ಪ್ರಿಂಟರ್ಸ್,
ಮೈಸೂರು.



೬೮. **ಶಂಭಾಜೋಶಿ ಅಭಿನಂದನ ಗ್ರಂಥ ಅಧ್ಯಯನ** — **ಸಂ. ಡಾ. ಎಂ. ಚಿದಾನಂದ ಮೂರ್ತಿ**
ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ, ಕನ್ನಡ ಭವನ, ಬೆಂಗಳೂರು.
೧೯೮೦

೬೯. **ಶಿಲ್ಪಕಲಾ ಪ್ರಪಂಚ** — **ಪ್ರಸಂ. ಪಿ. ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಾ ಅಕಾಡೆಮಿ
ಬೆಂಗಳೂರು. ೧೯೯೪

೨೦. **ಶಿಲೆ-ಕಲೆ** — **ಡಾ. ಚೂಡಾಮಣಿ ನಂದಗೋಪಾಲ**
ಅಲ್ಟ್ರಾ ಪ್ರಕಾಶನ, ಬೆಂಗಳೂರು
೨೦೧೧

೨೧. **ಶಿವರಾಮ ಕಾರಂತರ ಲೇಖನಗಳು (ಸಂ -೩) ಕಲಾಜಗತ್ತು** — **ಸಂ. ಮಾಲಿನಿ ಮಲ್ಯ**
ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ,
ಮಂಗಳ ಗಂಗೋತ್ರಿ
೧೯೯೪

೨೨. ಶ್ರೀಕ್ಷೇತ್ರ ಮಹಾಕೂ(ಟ ಶ್ರೀ ಸಂಗಮೇಶ್ವರ — ಶ್ರೀ ಶಂಕರರಯ್ಯ ಶಾಸ್ತ್ರಿತಗಳು ಮತ್ತು
ಆಫ್‌ಸೆಟ್ ಪ್ರಿಂಟ್ಸ್, ಗುಳೇದಗುಡ.
೧೯೮೪

೨೩. **ಸಂಸ್ಕೃತಿ ಪ್ರೊ. ಸದಾನಂದ ಕನವಳ್ಳಿ ಅಭಿನಂದನ ಸಂಪುಟ** — **ಸಂ. ಡಾ. ವೀರಣ್ಣ ರಾಜೂರ**
ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು
ತೋಂಟದಾರ್ಯ ಮಠ, ಗದಗ. ೧೯೮೩

೨೪. **ಸತ್ಯಾಶ್ರಯ** — **ಪ್ರಸಂ. ಮಲ್ಲಿಕಾರ್ಜುನ ಹಿರೇಮಠ**
ಚಾಲುಕ್ಯ ಉತ್ಸವ ಸಮಿತಿ, ಬಾಗಲಕೋಟೆ
೨೦೦೩

೨೫. **ಸೂರ್ಯಕೀರ್ತಿ (ಡಾ. ಸೂರ್ಯನಾಥ ಕಾಮತ್‌ರ ಅಭೀನಂದನ ಗ್ರಂಥ)** — **ಸಂ. ಪಿ. ವಿ. ಕೃಷ್ಣಮೂರ್ತಿ**
ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು
೨೦೦೦

೨೬. ಹರತಿಸಿರಿ — ಸಂ. ಲಕ್ಷ್ಮಣ ತೆಲಗಾವಿ
ವಾಲ್ಮೀಕಿ ಸಾಹಿತ್ಯ ಸಂಪದ,
ಚಿತ್ರದುರ್ಗ. ೧೯೮೨

೨. ಇಂಗ್ಲೀಷ್ ಗ್ರಂಥಗಳು

೦೧. **Abhilashitartaha Chintamani** - **Edt. R Shama Sastri**
Mysore Sanskrit Series, Mysore,
1926

೦೨. **Ajanta** - **G. Yazdani**
OXFORD University Press
1930-1958

೦೩. **Arts and the Man** - **Irwin Edman**
The New American Library,
New York. 1949

೦೪. **Badami Aihole Pattadakal** - **George Michell**
Picture publisher, New Delhi
2011

೦೫. **Buddist Cave Painting at Tun - Hung** - **Basil Gray**
Faber and Faber, London. 1959

೦೬. **Buddhist Art Form and Meaning** - **Pratapaditya Pel**
Marg Publication, New Delhi
www.margart.org

೦೭. **Buddhism in Karnataka** - **R C Hiremath**
D. K. Print world, (p) Ltd

೦೮. **Early Chalukyan Temple : Art, Architecture and Iconography (with special reference to aihole)** - **J Soundararajan**
Sharada Publishing house, New Delhi
2009

೦೯. **Encyclopedia of Art and Culture** - **G T Bettang**
Victory books International
Delhi - 110 006

೧೦. **Indian Art** - **Royc Craven**
World of Art, Thames and Hudson INC
500, 5th Avenue, New York - 10110



೧೧. **Khajuraho Sculpture and Their Significance** - **Urmila Agarwal**
S Chand and Company Ltd,
New Delhi.

೧೨. **Lakulisha in Indian Art and Culture** - **M C Choubey**
Sharada Publishing House, New Delhi
1997

೧೩ **Masterpices of Indian Sculpture** - **Rustam J Mehta**
D B Taraporevel sons and Co.
Private ltd, Sion East,
Bombay - 400 022
1976

೧೪.. **Pattadakal** - **George Michell**
OXFORD University, Press,
2003

೧೫. **Pattadakal** - **Edt. Jesse Russell**
Book on Demand Ltd,
2012

೧೬. **The Durga Temple at Aihole - A Historiographical study** - **Gary Michael Tartakov**
OXFORD University, Press
U S A. 1997

೩. ಪತ್ರಿಕಾ ಪ್ರಕಟಣೆ

೧. ವಿಶ್ವಪರಂಪರೆಯ ಈ ತಾಣಗಳು – ಡಾ. ಎಸ್. ಜೋಶಿ
ಸಂಯುಕ್ತ ಕರ್ನಾಟಕ.
೧೫.೪.೨೦೧೨

೨. ಭಕ್ತರಿಗೊಲಿಸುವ ಬನಶಂಕರಿ – ಎಸ್. ಎಂ. ಹಿರೇಮಠ
ಪ್ರಜಾವಾಣಿ
೧೬.೧.೨೦೧೧

೩. ಪ್ರಾಚೀನ ಸಂಸ್ಕೃತಿಯ ಬನಶಂಕರಿ – ಎಸ್. ಎಂ. ಹಿರೇಮಠ
ಪ್ರಜಾವಾಣಿ.
೮.೧.೨೦೧೨



೪. ಬದಾಮಿಯ ಬನಶಂಕರಿ – ದ.ರಾ.ಪು
ಸಂಯುಕ್ತ ಕರ್ನಾಟಕ
೮.೧.೨೦೧೨

೫. ಇಲ್ಲಿ ಆರಾಧನೆ ಕಲಾವಿದನಿಗೆ ದೇವರಿಗೆ ದೇವರಿಗಿಲ್ಲ – ದಿಲಾವರ್. ರಾಮದುರ್ಗ
ಸುದಾ ಮಾಸ ಪತ್ರಿಕೆ
೨೧.೧೦.೨೦೧೦

೬. ಭಾಗ್ಯದೇವತೆ ಬಾದಾಮಿ ಬನಶಂಕರಿ – ಕೆ.ಆರ್.ಪ್ರಕಾಶಬಾಬು.
ಕರ್ಮವೀರ
೨೦.೧೧.೨೦೧೧

೭. ಮಹಾಕೂಟದ ಮಹಾ ಪುಷ್ಕರಿಣಿ. – ಎ.ಎಸ್.ಹೊಲಗೇರಿ
ಕರ್ಮವೀರ.
೩೦.೧೦.೨೦೧೧

೮. ಧರ್ಮಸಂಸ್ಕೃತಿ ಮತ್ತು ಲಲಿತಕಲೆ – ಹಳದಿಪುರ ವಾಸುದೇವರಾವ್
ಕಸ್ತೂರಿ. ೮.೨೦೧೨



ಚಾಲುಕ್ಯ ಅರಸರ ವಂಶಾವಳಿ

- ಜಯಸಿಂಹ
  - ರಣರಾಗ
    - ೧ನೇಯ ಪುಲಿಕೇಶಿ (ಕ್ರಿ.ಶ. ೫೪೩–೫೬೬)
      - ೧ನೆಯ ಕೀರ್ತಿವರ್ಮ (ಕ್ರಿ.ಶ. ೫೬೬–೫೯೬)
        - ಇಮ್ಮಡಿ ಪುಲಿಕೇಶಿ (ಕ್ರಿ.ಶ. ೬೧೦–೬೪೨)
          - ಆದಿತ್ಯವರ್ಮ
          - ಚಂದ್ರಾದಿತ್ಯ
          - ೧ನೆಯ ವಿಕ್ರಮಾದಿತ್ಯ
            - ವಿಕ್ರಮಾದಿತ್ಯ (ಕ್ರಿ.ಶ. ೬೫೫–೬೮೧)
              - ವಿನಯಾದಿತ್ಯ (ಕ್ರಿ.ಶ. ೬೮೧–೬೯೬)
                - ವಿಜಯಾದಿತ್ಯ (ಕ್ರಿ.ಶ. ೬೯೬–೭೩೩)
                  - ಇಮ್ಮಡಿ ವಿಕ್ರಮಾದಿತ್ಯ (ಕ್ರಿ.ಶ. ೭೩೩–೭೪೪)
                    - ಇಮ್ಮಡಿ ಕೀರ್ತಿವರ್ಮ (ಕ್ರಿ.ಶ. ೭೪೪ – ೭೫೭)
          - ಧರಾಶ್ರಯ ಜಯಸಿಂಹ
        - ವಿಷ್ಣುವರ್ಧನ
        - ಧರಾಶ್ರಯ
        - ಜಯಸಿಂಹ ಬುಧವರ್ಷ
      - ಮಂಗಲೀಶ (೫೯೬–೬೧೦)

ಬಾದಾಮಿ ನಕ್ಷೆ



ಸೋಲಾಪೂರ ಮಾರ್ಗ
ಗುಳೇದಗುಡ್ಡ ಮಾರ್ಗ
ಪಟ್ಟದಕಲ್ಲ ಮಾರ್ಗ
ರೇಲ್ವೆ ನಿಲ್ದಾಣ
ಬಸ್ ನಿಲ್ದಾಣ
ವಸ್ತು ಸಂಗ್ರಹಾಲಯಕ್ಕೆ ದಾರಿ
ಬಾದಾಮಿ
ಬೆಳಗಾವಿ ಮಾರ್ಗ
ಯರಗೊಪ್ಪ ನಿಲ್ದಾಣ
ಗುಹಾ ದೇವಾಲಯಕ್ಕೆ ದಾರಿ
ಶಿವಯೋಗ ಮಂದಿರಕ್ಕೆ ದಾರಿ
ಗದಗ ಮಾರ್ಗ
ಅಗಸ್ತ್ಯ ತೀರ್ಥ
ಭೂತನಾಥ ದೇವಾಲಯ
ಗುಹಾ ದೇವಾಲಯಗಳು
ಪಟ್ಟದಕಲ್ಲ ಮಾರ್ಗ
ಮಲಪ್ರಭಾ ನದಿ
N
೧. ಗುಹಾ ದೇವಾಲಯಗಳು
೨. ವಸ್ತು ಸಂಗ್ರಹಾಲಯ
೩. ಉತ್ತರದ ಭೂತನಾಥ ದೇವಾಲಯ
೪. ಪೂರ್ವದ ಭೂತನಾಥ ದೇವಾಲಯ
೫. ಮಂಟಪ
೬. ಕೆಳಗಿನ ಶಿವಾಲಯ
೭. ಮಾಲಗಿತ್ತಿ ಶಿವಾಲಯ
೮. ಮೇಲಿನ ಶಿವಾಲಯ
೯. ಟಿಪ್ಪುನ ಖಜಾನೆ
೧೦. ಮಹಾಕೂಟ
೧೧. ಶಿವಯೋಗ ಮಂದಿರ
೧೨. ಪಟ್ಟದಕಲ್ಲ
೧೩. ಐಹೊಳೆ
೧೪. ಬನಶಂಕರಿ



